ಪಣತಿ

ಜುಲೈ ೧೯೮೪

[illegible]

೧. [illegible]

[illegible]

೨. [illegible]

[illegible]

೩. [illegible]

[illegible]

[illegible]

ಈ ಸಂಚಿಕೆಯಲ್ಲಿ :

ಕನ್ನಡ ನಾಡಿನ ಎರಡು ಬಾನುಲಿಕಟ್ಟೆಗಳು (ಸಂಪಾದಕೀಯ)
ಸಂಪಾದಕರು ೪೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೪೩

ಜೋಡುಗೋರಿ (ಸಣ್ಣ ಕತೆ)
ಶ್ರೀ ಗೋವಿಂದಮೂರ್ತಿ ದೇಸಾಯಿ, ಧಾರವಾಡ ೪೫

ಸುಂದರ ಕಾಶ್ಮೀರಕ್ಕೆ ಅನುಕೂಲ ಮಾರ್ಗ (ಪರಿಚಯ)
ಭಾರತ ಸರಕಾರದ ವಾರ್ತಾಶಾಖೆಯಿಂದ ೪೯

ಇವನಿಂದಲೇ ನಮಗೆ ಬೈಗು-ಬೆಳಗು ! (ಕವನ)
ಶ್ರೀ ಚೆನ್ನವೀರ ಕಣವಿ, ಎಂ. ಎ. ಧಾರವಾಡ ೫೧

ಮಂದಾರಕುಸುಮ, ಯೌವನ (ಕವನಗಳು)
ಶ್ರೀ. ರಾ. ಸು. ಸೈಲಾಯ, ಉಡುಪಿ ೫೨

ಸಣ್ಣ ಕತೆಗಳ ಮೇಲಾಟದ ವರದಿ
ಸಂಪಾದಕ ಮಂಡಲಿಯಿಂದ ೫೩

ಕನಸಿನ ಕನ್ನಡಿ (೧ನೆಯ ಬಹುಮಾನದ ಕಥೆ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೫೫

ಕೋಗಿಲೆ-ಕಕ್ಕಿಗಳ ಕಥೆ (ಮಕ್ಕಳ ಕಥೆ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೬೦

ಸರ್ವಂ ಖಲ್ವಿದಂ ಬ್ರಹ್ಮ (ನವ್ಯಕವನ)
ಶ್ರೀ ಖಾಸನೀಸ ರಾಘವೇಂದ್ರ, ಬಿ. ಎ. (ಆನರ್ಸ್) ಮುಂಬೈ ೬೧

ಆನಂದ (೨ನೆಯ ಬಹುಮಾನದ ಕಥೆ)
ಕುಮಾರಿ ಮಾಲತಿ, ಧಾರವಾಡ ೬೨

ಸಾವಿಂಸ್ಯ (ಕವನ)
ಶ್ರೀ. ಎಸ್. ಎಸ್ ಬಸುಪಟ್ಟದ, ಎಂ.ಎ. ಗುಳೇದಗುಡ್ಡ ೬೮

ಸವಿನೆನಪು (ಕವನ)
ಶ್ರೀ. ಬಿ ಎಸ್. ಕಡಕೋಳ, ಹಾವೇರಿ ೬೮

ವಿಮೋಚನೆ (೩ನೆಯ ಬಹುಮಾನದ ಕಥೆ)
ಶ್ರೀ. ಜಿ. ಶಂಕರಭಟ್ಟ, ಬಿ. ಎ. ಬಿ. ಟಿ. ಗೋಳಿತಟ್ಟು

ಹಿರಿಯಣ್ಣನ ಹಾಳಾಯ್ತು (ನಾಟ್ಯಛಟಾ)
ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ., ಬಿ ಟಿ. ಧಾರವಾಡ ೭೪

ಸಾಹಿತ್ಯವಿಹಾರ (೩ ಪತ್ರಗಳು)
ಜಯಂತಿಯ ಓದುಗರಿಂದ ೭೭

[illegible] ಅಮೇರಿಕೆಯ ಶಿಕ್ಷಣರಂಗ (ಪ್ರತ್ಯವತಿ)
ಶ್ರೀ. ಎಚ್. ಎಲ್. ಎನ್. ಶಾಸ್ತ್ರಿ, ಬಿ. ಎ., ಬಿ. ಎಸ್‌ಸಿ., ಬಿ. ಟಿ. ೭೮

ಸಾದರ ಸ್ವೀಕಾರ ಹೊದಿಕೆಯ ೨ನೆಯ ಪುಟದಲ್ಲಿ

ಶ್ರೀಗಳವರ ಆಶೀರ್ವಾದ

ಉಡುಪಿಯ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮೊದಲಿನಿಂದಲೂ ಜಯಂತಿಯ ಸಾಹಿತ್ಯ-ಸಂಸ್ಕೃತಿಗಳ ಕಾರ್ಯವನ್ನು ಮೆಚ್ಚಿಕೆಯಿಂದ ಕಾಣುತ್ತ ಬಂದವರು. ಅವರು ಧಾರವಾಡಕ್ಕೆ ಬಂದಾಗ ಜಯಂತಿಯ ಆರ್ಥಿಕ ಆಪತ್ತಿಯನ್ನು ಆತ್ಮೀಯಭಾವದಿಂದ ವಿಚಾರಿಸಿದರು. ಕೇಳಿ ವಿಷಾದವನ್ನೂ ವ್ಯಕ್ತಪಡಿಸಿದರು. ಶ್ರೀಪಾದಂಗಳವರು ಜಯಂತಿಯ ಯೋಗಕ್ಷೇಮವನ್ನು ಕಾಲಕಾಲಕ್ಕೆ ತಾವು ವಿಚಾರಿಸುವುದಾಗಿ ಧೈರ್ಯ ಕೊಟ್ಟರಲ್ಲದೆ, ೨೫ ರೂಪಾಯಿಗಳನ್ನು ಆಶೀರ್ವಾದರೂಪವಾಗಿ ಕೂಡಲೇ ಕೊಡುವುದಾಗಿ ಆಶ್ವಾಸನವಿತ್ತರು. ಶ್ರೀಗಳವರ ಮೆಚ್ಚಿಕೆ–ಹಾರೈಕೆಗಳೆಂದರೆ ಜಯಂತಿಯ ಕತ್ತಲೆಯ ದಾರಿಯಲ್ಲಿ ಒಂದು ದಿವ್ಯದೀಪವಿದ್ದಂತೆ.

ಸಾದರ ಸ್ವೀಕಾರ

೧೦ **ವಿರೂಪಾಕ್ಷ ವಸಂತೋತ್ಸವ ಚಂಪೂ** (ಸಂಸ್ಕೃತ ಕಾವ್ಯ) ಮೂಲ ಕವಿ 'ಅಹೋಬಲ' ಸಂಪಾದಕರು 'ವಿದ್ಯಾರತ್ನ' ಶ್ರೀಮಾನ್ ಆರ್. ಎಸ್. ಪಂಚಮುಖಿ, ಎಂ. ಎ. ನಿವೃತ್ತ ಕನ್ನಡ ಸಂಶೋಧನ ಸಂಸ್ಥೆಯ ಅಧಿಕಾರಿಗಳು. ಪ್ರಕಾಶಕರು ಸದ್ಯದ ಅಧಿಕಾರಿಗಳಾದ ಶ್ರೀಮಾನ್ ಎಸ್. ಎಸ್. ಮಾಳವಾಡ ಎಂ. ಎ ಧಾರವಾಡ ಅವರು. ಡೆ. ೮. ೧೬+೧೧೨+೨೬ ಪುಟಗಳು. ಬೆಲೆ ೨–೮–೦.

೧೧ **ಕರ್ನಾಟಕದ ಜಾನಪದ ಗೀತಗಳು** (ಹಳ್ಳಿಯ ಹಾಡುಗಳ ಸಂಕಲನ). ಸಂಪಾದಕರು 'ವಿದ್ಯಾರತ್ನ' ಶ್ರೀ ಆರ್. ಎಸ್. ಪಂಚಮುಖಿ, ಎಂ ಎ. ಅವರು ಪ್ರಕಾಶಕರು ಶ್ರೀ ಎಸ್. ಎಸ್. ಮಾಳವಾಡ, ಎಂ. ಎ. ಕನ್ನಡ ಸಂಶೋಧನ ಸಂಸ್ಥೆಯ ಮುಖ್ಯಾಧಿಕಾರಿಗಳು. ಕ್ರೌ. ೮. ೨೪೮ ಪುಟಗಳು. ಬೆಲೆ ೩–೮–೦.

೧೨ ಜಂತ್ರಿ (ಇಂಡಿಯನ್ ಕ್ರೊನೊಲಾಜಿಕಲ್ ಟೇಬಲ್ಸ್) ಸಂಪಾದಕರು ಶ್ರೀ ಆರ್. ಎಸ್. ಪಂಚಮುಖಿ ಎಂ. ಎ. ಅವರು. ಪ್ರಕಾಶಕರು ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯ ಡೈರೆಕ್ಟರ್ ಶ್ರೀ ಎಸ್. ಎಸ್. ಮಾಳವಾಡ ಅವರು. ಕ್ರೌ ೧/೮ದ ೬೮ ಪುಟಗಳು.

೧೩ Progress of Kannada Research in Bombay State (ಕನ್ನಡ ಸಂಶೋಧನ ಸಂಸ್ಥೆಯ ೧೯೪೭ರಿಂದ ೧೯೫೨ರ ವರೆಗಿನ ಐದು ವರ್ಷಗಳ ಕಾರ್ಯದ ವರದಿ) ಪ್ರಕಾಶಕರು 'ವಿದ್ಯಾರತ್ನ' ಶ್ರೀ ಆರ್. ಎಸ್. ಪಂಚಮುಖಿ, ಕನ್ನಡ ಸಂಶೋಧನ ಸಂಸ್ಥೆಯ ನಿವೃತ್ತಾಧಿಕಾರಿಗಳು ಧಾರವಾಡ ಕ್ರೌ. ೧/೮ದ ೪೮ ಪುಟಗಳು.

ಜಯಂತಿ

ಸಂಪುಟ ೧೭ ಸಂಚಿಕೆ ೧

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಡಾ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು :
ಡಾ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ನಮ್ಮ ನಾಡಿನ ಎರಡು ಬಾನುಲಿಕಟ್ಟೆಗಳು

ಭಾರತದ ಪ್ರತಿಯೊಂದು ರಾಜ್ಯದಲ್ಲಿಯೂ, ಆ ಆ ರಾಜ್ಯದ ವೈಶಾಲ್ಯಕ್ಕನುಗಣವಾಗಿ, ಸರಕಾರದವರು ಒಂದೋ ಎರಡೋ ಬಾನುಲಿಕಟ್ಟೆಗಳನ್ನು ನಿರ್ಮಿಸಿರುವರು. ಬ್ರಿಟಿಷರ ಆಡಳಿತದ ಕಾಲದಲ್ಲಿ ಕನ್ನಡಿಗರಿಗಾಗಿ ಅವರು ಬಾನುಲಿಕಟ್ಟೆಯನ್ನು ನಿರ್ಮಿಸಿಕೊಡಲಿಲ್ಲವಷ್ಟೇ ಅಲ್ಲ; ಕನ್ನಡಭಾಷೆಗೆ ಯೋಗ್ಯವಾದ ಸ್ಥಾನವನ್ನೂ ಕಲ್ಪಿಸಿಕೊಡಲಿಲ್ಲ ಸ್ವಾತಂತ್ರ್ಯದ ತರುವಾಯ, ಕನ್ನಡಿಗರೇ ಆದ ಮಾನ್ಯ ದಿವಾಕರರು ಬಾನುಲಿ ಮಂತ್ರಿಗಳಾದಾಗ, ಕನ್ನಡಿಗರಿಗಾಗಿ ಧಾರವಾಡದಲ್ಲೊಂದು ಬಾನುಲಿಕಟ್ಟೆ ಪ್ರಸ್ಥಾಪಿತವಾಯಿತು. ಆದರೆ ಐದು ವರ್ಷಗಳಾಗಿ ಹೋದರೂ ಈ ಬಾನುಲಿಕಟ್ಟೆಯ ಬಿತ್ತರಣೆಯ ಬಲವು ಬೆಳೆಯಲಿಲ್ಲ. ಮುಂಬರುವ ಕಾಲದಲ್ಲಿಯೂ ಬೇಗನೆ ಬೆಳೆಯುವ ಸಂಭವವು ಕಾಣುತ್ತಿಲ್ಲ. ಬಿತ್ತರಣೆಯ ಬಲವು ಸಾಕಷ್ಟು ಇಲ್ಲದುದರಿಂದ, ಈ ಬಾನುಲಿಕಟ್ಟೆಯು ಅಖಿಲಕರ್ನಾಟಕದ ದೃಷ್ಟಿಯಲ್ಲಿ ಇದ್ದೂ ಇಲ್ಲದಂತಾಗಿದೆ.

ಮೈಸೂರು ಮಹಾರಾಜರ ಸರಕಾರದವರು ಮೊದಲಿನಿಂದಲೂ ಮೈಸೂರಲ್ಲಿ ನಡೆಯಿಸಿಕೊಂಡು ಬರುತ್ತಲಿದ್ದ ಮೈಸೂರು ಆಕಾಶವಾಣಿಯು, ಭಾರತದ ಹೊಸರಾಜ್ಯಘಟನೆಗನುಸಾರವಾಗಿ, ಈಗ ಅಖಿಲಭಾರತದ ಆಕಾಶವಾಣಿ ಶಾಖೆಯ ಆಧಿಪತ್ಯಕ್ಕೆ ಒಳಪಟ್ಟಿದೆ. ಆದರೆ ಈ ಮೈಸೂರಿನ ಬಾನುಲಿಕಟ್ಟೆಯೂ ಬಿತ್ತರಣೆಯ ಬಲವು ಸಾಲದೆ, ಅಖಿಲ ಕರ್ನಾಟಕಸ್ಥರ ಪ್ರಯೋಜನಕ್ಕೆ ಬಾರದಂತಾಗಿದೆ. ಅದೇನೇ ಇರಲಿ, ಸದ್ಯ ಕನ್ನಡಿಗರಿಗಾಗಿ ಎರಡು ಪ್ರಾದೇಶಿಕ ಬಾನುಲಿಕಟ್ಟೆಗಳು ಕಾರ್ಯಮಾಡುತ್ತಿರುವುದು ಸತ್ಯಸಂಗತಿ; ಇದ್ದುದರಲ್ಲಿಯೇ ಸಮಾಧಾನಪಡಬೇಕಾದ ಸಂಗತಿ.

ಅಖಿಲ ಭಾರತ ಆಕಾಶವಾಣಿಯ ಪದ್ಧತಿಯಂತೆ, ಕರ್ನಾಟಕದಲ್ಲಿಯ ಕೆಲವು ಪ್ರದೇಶವನ್ನು ಧಾರವಾಡಕ್ಕೂ ಕೆಲವು ಪ್ರದೇಶವನ್ನು ಮೈಸೂರಿಗೂ ಹಂಚಿಹಾಕಲಾಗಿದೆ. ಸಾಮಾನ್ಯವಾಗಿ ತುಂಗಭದ್ರೆಯ ಉತ್ತರದ ಭಾಗವೆಲ್ಲ ಧಾರವಾಡದ ಬಾನುಲಿಕಟ್ಟೆಯ ಆಡಳಿತದ ಪ್ರದೇಶವಾಗಿರುವುದು. ದಕ್ಷಿಣದ ಭಾಗವೆಲ್ಲ ಮೈಸೂರು ಆಕಾಶವಾಣಿಯ ಆಡಳಿತದ ಪ್ರದೇಶವಾಗಿರುವುದು. ಆದುದರಿಂದ ಉತ್ತರಕರ್ನಾಟಕದ ಸಂಗೀತಕಾರರು, ಭಾಷಣಕಾರರು, ಕವಿಗಳು, ನಾಟಕಕಾರರು, ಪಂಡಿತರು— ಇವರೆಲ್ಲ ಧಾರವಾಡದ ಬಾನುಲಿಕಟ್ಟೆಗೆ ಸಂಬಂಧಿಸಿದವರು; ಅದರಂತೆಯೆ ದಕ್ಷಿಣಕರ್ನಾಟಕದ ಕಲಾವಿದರು-ವಿದ್ವಾಂಸರುಗಳೆಲ್ಲ ಮೈಸೂರು ಬಾನುಲಿಕಟ್ಟೆಗೆ ಸಂಬಂಧಿಸಿದವರು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಲಾವಿದರನ್ನಾಗಲಿ, ವಿದ್ವಾಂಸರನ್ನಾಗಲಿ ಕರೆಯಿಸಿಕೊಳ್ಳಬೇಕಾದರೆ, ಅಲ್ಲಿಯ ಪ್ರಾದೇಶಿಕ ಬಾನುಲಿಕಟ್ಟೆಯ ಅಧಿಕಾರಿಗಳ ಒಪ್ಪಿಗೆಪಡೆದು, ಅವರ ಮುಖಾಂತರವಾಗಿಯೆ ಕರೆಯಿಸಿಕೊಳ್ಳಬೇಕೆಂದು ಅಖಿಲಭಾರತ ಆಕಾಶವಾಣಿಯ ನಿಯಮವಾಗಿದೆ. ಈ ನಿಯಮಕ್ಕನುಸಾರವಾಗಿ ಒಂದೇ ಭಾಷೆಯಲ್ಲಿ ಕಾರ್ಯಮಾಡುವ ಎರಡು ಪ್ರಾದೇಶಿಕ ಬಾನುಲಿಕಟ್ಟೆಗಳು, ಪರಸ್ಪರ ಪ್ರದೇಶಗಳಿಂದ ವಿದ್ವಾಂಸರನ್ನೂ ಕಲಾವಿದರನ್ನೂ ಕರೆಯಿಸಿಕೊಂಡು, ತಮ್ಮ ತಮ್ಮ ಕೇಂದ್ರದಿಂದ ಅವರವರ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಲಿದ್ದರೆ ಎಲ್ಲರಿಗೂ ಒಳ್ಳೆಯದೇ. ಇದೇ ದೃಷ್ಟಿಯನ್ನಿರಿಸಿಕೊಂಡೇ ಇರಬೇಕು: ಧಾರವಾಡದ ಬಾನುಲಿಕಟ್ಟೆಯು ಹುಟ್ಟಿದ ದಿನದಿಂದಲೂ ಇಂದಿನವರೆಗೆ, ಮೈಸೂರು ಪ್ರದೇಶದ ಕಲಾವಿದರನ್ನು ವಿದ್ವಾಂಸರನ್ನು ದಿನದಿನವೂ ಬರಮಾಡಿಕೊಳ್ಳುತ್ತಲಿದೆ. ಧಾರವಾಡದ ಬಾನುಲಿಕಟ್ಟೆಯ ಅಧಿಕಾರಿಗಳ ಈ ವಿಶಾಲದೃಷ್ಟಿಗಾಗಿ ಅಭಿನಂದಿಸಬೇಕೇನೋ ಎಂಬ ವಿಚಾರ ಕೆಲವರ ಮನದಲ್ಲಿ ಬಂದರೆ ಅದು ತಪ್ಪೇನೂ ಅಲ್ಲ.

ಆದರೆ ಮೈಸೂರು ಆಕಾಶವಾಣಿಯ ಅಧಿಕಾರಿಗಳದೊಂದು ವಿಶೇಷ: ಅವರು ಧಾರವಾಡ ಬಾನುಲಿಕಟ್ಟೆಯ ಪ್ರದೇಶದ ಕಲಾವಿದರನ್ನೂ ವಿದ್ವಾಂಸರನ್ನೂ ಎಂದೂ ತನ್ನಲ್ಲಿ ಬರಮಾಡಿಕೊಳ್ಳುವುದಿಲ್ಲ. ಕುತೂಹಲಿಗಳು, ಮೈಸೂರು ಆಕಾಶವಾಣಿಯ ಕಾರ್ಯಕ್ರಮ ಪಟ್ಟಿಯನ್ನು ಅಂದಿನಿಂದ ಇಂದಿನವರೆಗೂ ಬೇಕಾದರೆ ತೆಗೆದು ನೋಡಲಿ! ಅಲ್ಲಿ ಉತ್ತರ ಕರ್ನಾಟಕದ ಸಂಗೀತಗಾರರಿಗೆ ಸ್ಥಾನವಿಲ್ಲ. ಉತ್ತರ ಕರ್ನಾಟಕದ ಭಾಷಣಕಾರರೂ ಸಾಹಿತ್ಯಕಾರರೂ ಅಲ್ಲಿ ಆಮಂತ್ರಿತರಾಗುವುದಿಲ್ಲ. ಉತ್ತರ ಕರ್ನಾಟಕದ ನಾಟಕಕಾರರ ನಾಟಕಗಳೂ ಅಲ್ಲಿ ಬಿತ್ತರಗೊಳ್ಳುತ್ತಿಲ್ಲ.

ಇದಕ್ಕೆ ತೀರ ವಿಪರೀತವಾದುದು ಧಾರವಾಡದ ಬಾನುಲಿಕಟ್ಟೆಯ ಪರಿಸ್ಥಿತಿ. ಇಲ್ಲಿಯ ಕಾರ್ಯಕ್ರಮಕ್ಕಾಗಿ ಮೈಸೂರು ಪ್ರದೇಶದಿಂದ ಬೇರೆ ಬೇರೆ ಜನರು ಹಿಂಡು-ಹಿಂಡಾಗಿ ಬರುತ್ತಾರೆ. ಇತ್ತೀಚೆಗಂತೂ ಹೆಚ್ಚಾಗಿ ಮೈಸೂರು ಪ್ರಾದೇಶಿಕ ನಾಟಕಕಾರರ ನಾಟಕಗಳೇ ಬಿತ್ತರಗೊಳ್ಳುತ್ತಲಿವೆ. ಉತ್ತರ ಕರ್ನಾಟಕದಲ್ಲಿ ಹೆಸರು ಹೇಳಲು ಕೂಡ ಸಿಕ್ಕದ ಕರ್ನಾಟಕೀ ಸಂಗೀತ ಧಾರವಾಡದಿಂದ ಬಿತ್ತರಗೊಳ್ಳಬೇಕಾದರೆ, ಅದಕ್ಕಾಗಿ ಮೈಸೂರು ಪ್ರದೇಶದಿಂದಲೇ ಸಂಗೀತಗಾರರನ್ನು ಕರೆಯಿಸಿಕೊಳ್ಳಬೇಕಾಗುತ್ತದೆ. ಅನೇಕ ಸಲ ನಾಟಕವನ್ನು ಆಡುವ ನಟವರ್ಗವೂ ಧಾರವಾಡದ ಬಾನುಲಿಕಟ್ಟೆಗೆ ಬರುವುದುಂಟು; ಬಂದುದುಂಟು.

ಈಗ ನಾವು ಧಾರವಾಡದ ಬಾನುಲಿಕಟ್ಟೆಯವರ ರೀತಿಯನ್ನು ಸರಿಯೆನ್ನಬೇಕೋ, ಮೈಸೂರಿನವರ ರೀತಿಯನ್ನು ಸರಿಯೆನ್ನಬೇಕೋ? ಮೈಸೂರಿನವರ ರೀತಿ ಅಖಿಲಭಾರತ ಆಕಾಶವಾಣಿಯ ನಿಯಮದ ದೃಷ್ಟಿಯಿಂದಲೂ ಪ್ರಾದೇಶಿಕ ಕಲಾವಿದರ ದೃಷ್ಟಿಯಿಂದಲೂ ಅಕ್ರಮವೆನಿಸುವಂತಹದೇನೂ ಅಲ್ಲ; ಅನ್ಯಾಯವೆನಿಸುವಂತಹದೂ ಅಲ್ಲ; ಆದರೆ ಧಾರವಾಡ ಬಾನುಲಿಕಟ್ಟೆಯವರ ಅಖಿಲ ಕರ್ನಾಟಕ ಬುದ್ಧಿಯ ಕ್ರಮವು, ಅ. ಭಾ. ಆಕಾಶವಾಣಿಯ ದೃಷ್ಟಿಯಲ್ಲಿ ಅಕ್ರಮವೆನಿಸದಿರಬಹುದಾದರೂ, ಪ್ರಾದೇಶಿಕ ಕಲಾವಿದರ ದೃಷ್ಟಿಯಿಂದ ಅಕ್ರಮವೂ ಅನ್ಯಾಯಕಾರಿಯೂ ಎನಿಸುವಂತಹದಾಗಿದೆ. ಅದು ಹೇಗೆಂಬುದನ್ನು ನೋಡೋಣ.

ಭಾರತ ಸರಕಾರವು ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಿಗಾಗಿ ಬೇರೆ ಬೇರೆ ಹಣವನ್ನು ಹಂಚಿಕೊಟ್ಟಿರುವುದು. ಆ ಆ ಕೇಂದ್ರದ ಹಣವು ಹೆಚ್ಚಾಗಿ ಆ ಆ ಪ್ರದೇಶದ ಕಲಾವಿದ-ವಿದ್ವಾಂಸರ ಪ್ರೋತ್ಸಾಹಕ್ಕೆಂದೇ ವೆಚ್ಚವಾಗಬೇಕೆಂದು ಸರಕಾರದ ಅಪೇಕ್ಷೆ. ಮೈಸೂರಿನ ಆಕಾಶವಾಣಿಯವರು ಕಟ್ಟುನಿಟ್ಟಾಗಿ ಸರಕಾರದ ಈ ಅಪೇಕ್ಷೆಯನ್ನು ಪೂರೈಸುತ್ತಿದ್ದಾರೆ; ಧಾರವಾಡದ ಬಾನುಲಿಕಟ್ಟೆಯವರು ಮಾತ್ರ ಯಾವ ಧೋರಣೆಯನ್ನು ಇರಿಸಿಕೊಂಡಿರುವರೋ ಏನೋ: ಸರಕಾರದ ಈ ಅಪೇಕ್ಷೆಯನ್ನು ಪೂರೈಸುತ್ತಿಲ್ಲ. ಇದರಿಂದ ಉತ್ತರ ಕರ್ನಾಟಕದ ಕಲಾವಿದರೂ ವಿದ್ವಾಂಸರೂ ಹಾನಿಗೆ ಗುರಿಯಾಗಬೇಕಾಗಿದೆ; ಮೈಸೂರು ಪ್ರದೇಶದ ವಿದ್ವಾಂಸರೂ ಕಲಾವಿದರೂ ಇಮ್ಮಡಿ ಲಾಭ ಹೊಂದುವಂತಾಗಿದೆ.

ಎರಡೂ ಕೇಂದ್ರಗಳು ಪರಸ್ಪರ ಕೇಂದ್ರದ ಕಲಾವಿದರನ್ನು ಪರಸ್ಪರವಾಗಿ ಕರೆಯಿಸಿಕೊಂಡರೆ ಯಾರಿಗೂ ಹಾನಿಯಾಗದಿರಬಹುದು. ಇಷ್ಟೇ ಅಲ್ಲ, ಎರಡೂ ಕೇಂದ್ರಗಳ ಕಾರ್ಯಕ್ರಮಗಳಲ್ಲಿ ವೈವಿಧ್ಯವೂ ಪ್ರಯೋಜನವೂ ದೊರೆಯಬಹುದು. ಆದುದರಿಂದ ಮೈಸೂರಿನ ಆಕಾಶವಾಣಿಯವರೂ ಧಾರವಾಡದ ಬಾನುಲಿಕಟ್ಟೆಯವರ ರೀತಿಯನ್ನು ಅನುಸರಿಸುವುದು ಉಚಿತವಾದ ರೀತಿ. ಇದಕ್ಕೆ ಮೈಸೂರಿನವರು ಸಿದ್ಧರಿಲ್ಲವಾದರೆ, ಧಾರವಾಡದವರೂ ಮೈಸೂರಿನವರ ರೀತಿಯನ್ನೇ ಅನುಸರಿಸುವುದು ಒಳ್ಳೆಯದು.

ಯಾವ ಪೂರ್ವಗ್ರಹ ದೂಷಿತ ದೃಷ್ಟಿಯಿಂದಲೂ ನಾವಿದನ್ನು ಬರೆದಿಲ್ಲ. ಬಹಳ ಜನ ಕಲಾವಿದರಿಂದಲೂ ವಿದ್ವಾಂಸರಿಂದಲೂ ನಮ್ಮ ಕಡೆಗೆ ದೂರುಗಳು ಬಂದುದರಿಂದ, ಆ ದೂರುಗಳಲ್ಲಿಯ ಔಚಿತ್ಯವನ್ನು ಒಂದು ತಾತ್ತ್ವಿಕ ರೀತಿಯಿಂದ ನೋಡಿ ಇಲ್ಲಿ ವಿವೇಚಿಸಲಾಗಿದೆ. ಮುಖ್ಯವಾಗಿ ಯಾರ ಹಕ್ಕು-ಬಾಧ್ಯತೆಗಳ ಮೇಲೂ ಆಘಾತವಾಗಬಾರದು; ಯಾರ ಮೇಲೂ ಅನ್ಯಾಯ ನಡೆಯಕೂಡದು. ಈ ಸಾಮಾಜಿಕ ಬುದ್ಧಿಯಿಂದ ನಾವಿದನ್ನು ಬರೆದಿದ್ದೇವೆ ಧಾರವಾಡದ ಬಾನುಲಿಯ ಅಧಿಕಾರಿಗಳೂ, ಮೈಸೂರು ಆಕಾಶವಾಣಿಯ ಅಧಿಕಾರಿಗಳೂ ಈ ಮಾತಿನ ಬಗೆಗೆ ಕೂಲಂಕಷ ವಿಚಾರವನ್ನು ಮಾಡಿ, ಯಾರಿಗೂ ಅತೃಪ್ತಿಯುಂಟಾಗದಂತಹ ಯೋಗ್ಯ ಕ್ರಮವನ್ನು ಅನುಸರಿಸಬೇಕೆಂಬುದೇ ನಮ್ಮ ಹಾರಯಿಕೆ.

— **ಸಂಪಾದಕರು**

ಜಯಂತಿಗೆ ಸಹಾಯಧನ

ಸುರಪುರದ ಬಳಿಯ ರಂಗಪೇಟೆಯ ಶ್ರೀಮಾನ್ ಎಂ. ಆರ್. ಬುದ್ಧಿವಂತ ಶೆಟ್ಟಿಯವರು ನಮಗೆ ಹೀಗೊಂದು ಕಾಗದ ಬರೆದಿದ್ದಾರೆ:

"ವಂದನೆಗಳು.

ಜಯಂತಿಯಂಥ ಶ್ರೇಷ್ಠ ಮಾಸಿಕವು ಆರ್ಥಿಕತೊಂದರೆಯಿಂದ ಬಳಲುತ್ತಿರುವದನ್ನು ಕಂಡು, ೨೫ ರೂಪಾಯಿಗಳ ಅಲ್ಪ ಸಹಾಯವನ್ನು M. O. ಮೂಲಕ ಕಳಿಸಿದ್ದೇನೆ. ಸ್ವೀಕರಿಸಬೇಕಾಗಿ ಬಿನ್ನಹ. ತಮ್ಮ ಪತ್ರಿಕೆಯು ಚಿರಕಾಲ ಬಾಳಿ, ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿಯನ್ನು ಬೆಳಗಲಿ— ಎಂದು ಹಾರಯಿಸುತ್ತೇನೆ."

ಶ್ರೀಮಾನ್ ಶೆಟ್ಟಿಯವರು ಕಳುಹಿಸಿದ ೨೫ ರೂ.ಗಳು ತಲ್ಪಿವೆ. ಜಯಂತಿಯ ವಿಷಯದಲ್ಲಿ ತಳೆದ ಶ್ರೀಮಾನ್ ಶೆಟ್ಟಿಯವರ ಪ್ರೀತಿ-ಸಹಾನುಭೂತಿಗಳು ನಮಗೆ ಹುರುಪನ್ನು ಹುಟ್ಟಿಸುವಂತಾಗಿವೆ. ಹೀಗೆಯೆ ಬೇರೆ ಅಭಿಮಾನಿಗಳೂ ಸಹಾಯ ಮಾಡಲು ಮುಂದೆಬಂದು ಜಯಂತಿಯ ಬಲವನ್ನು ಬೆಳೆಸಬೇಕು. ಶ್ರೀಮಾನ್ ಬುದ್ಧಿವಂತ ಶೆಟ್ಟಿಯವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ನಾಡನಡೆ

ಉತ್ತರದ ಕನ್ನಡಿಗರ ಕಾರ್ಯದಕ್ಷತೆ

ರಾಜ್ಯಪುನರ್ಘಟನಾ ಆಯೋಗದ ಸದಸ್ಯರು ಉತ್ತರ ಕರ್ನಾಟಕವನ್ನೆಲ್ಲ ಸುತ್ತಿ ಜನತೆಯ ಅಭಿಪ್ರಾಯವನ್ನು ಪಡೆದುಕೊಂಡು ಹೋದರು. ಉತ್ತರ ಕರ್ನಾಟಕದಲ್ಲಿಯ ಎಲ್ಲ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಸಂಸ್ಥೆಗಳೂ ಪ್ರಮುಖ ವ್ಯಕ್ತಿಗಳೂ, ಕರ್ನಾಟಕ ಪ್ರಾಂತರಚನೆಯ ವಿಚಾರದಲ್ಲಿ ವಿದಿತಪಡಿಸಿದ ಮನವಿಗಳನ್ನೂ ಹೇಳಿಕೆಗಳನ್ನೂ ನೋಡಿದಲ್ಲಿ, ಉತ್ತರಕರ್ನಾಟಕದಲ್ಲೆಲ್ಲ ಪ್ರಾಂತೀಕರಣದ ವಿಚಾರದಲ್ಲಿ ಒಂದೇ ಬಗೆಯ ಅಭಿಪ್ರಾಯವಿದೆಯೆಂಬುದು ಆಯೋಗದವರಿಗೆ ಮನವರಿಕೆಯಾಗಿರಬಹುದು ಹಾಗೆ ಮನವರಿಕೆಯಾದುವನ್ನು ಸರದಾರ್ ಕೆ. ಎಂ. ಪಣಿಕ್ಕರ್ ಅವರು ಅಲ್ಲಲ್ಲಿ ಆಡಿತೋರಿಸಿದುದೂ ಉಂಟು.

ಬೆಳಗಾಂವಿ ಜಿಲ್ಲೆ-ಉ. ಕನ್ನಡ ಜಿಲ್ಲೆಗಳ ಮಹಾರಾಷ್ಟ್ರೀಯರು ಆಯೋಗದೆದುರು ತಮ್ಮ ಬೇಡಿಕೆ ಮಂಡಿಸುವುದನ್ನು ಬಿಡಲಿಲ್ಲ. ಆದರೆ,ಅವರ ಮಾತುಗಳು ಸ್ವಲ್ಪವೂ ಹುರುಳಿಲ್ಲದುವು— ಎನಿಸುವಷ್ಟು ಪ್ರಭಾವಿಯಾಗಿ ಆ ಜಿಲ್ಲೆಗಳ ಕರ್ನಾಟಕ ಪಕ್ಷದವರು ತಮ್ಮ ಬೇಡಿಕೆಯನ್ನು, ಅಂಕಿ-ಸಂಖ್ಯೆಗಳ ಪ್ರತ್ಯಕ್ಷ ಪ್ರಮಾಣದೊಂದಿಗೆ ಮಂಡಿಸಿರುವುದು ಸಂತೋಷದ ಸಂಗತಿಯಾಗಿದೆ. ಬೆಳಗಾಂವಿಯ ಮಹಾರಾಷ್ಟ್ರೀಯರಲ್ಲಿಯ ಕೆಲವು ಸದಸದ್ವಿವೇಕ ಬುದ್ಧಿಯ ಜನರು, ಬೆಳಗಾಂವಿ ನಗರ ಕರ್ನಾಟಕದವರದೇ ಎಂದು ಒಪ್ಪುವರಾದರೂ, ಕೆಲವು ಜನ ಉಗ್ರಮರಾಟಿಗರು ಬೆಳಗಾಂವಿ ನಗರ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿಕೊಂಡಿದ್ದಾರೆ. ಆದರೆ, ಬೆಳಗಾಂವಿ ನಗರದ ಮುಸಲ್ಮಾನರು, ಕ್ರೈಸ್ತರು. ಬೇರೆ ಬೇರೆ ಉಪಪಂಗಡದವರು ಸಲ್ಲಿಸಿದ ಮನವಿಗಳನ್ನು ನೋಡಿದರೆ, ಬೆಳಗಾಂವಿ ನಗರದ ಕರ್ನಾಟಕತ್ವದ ವಿಚಾರದಲ್ಲಿ ಯಾರೂ ಸಂದೇಹಗೊಳ್ಳುವ ಕಾರಣವಿಲ್ಲ.

ಇದುವರೆಗೂ ಕೊಲ್ಹಾಪುರ, ಇಚ್ಚಲಕರಂಜಿ ಮೊದಲಾದ ಸಂಸ್ಥಾನಗಳ ಆಡಳಿತಗಳಿಗೆ ಒಳಗಾಗಿದ್ದ ಗಡಹಿಂಗ್ಲಜ, ಹತ್ತಿಕಣಗಲಿ ಮೊದಲಾದ ಕನ್ನಡ ಪ್ರದೇಶಗಳ ಜನರೂ ಜಾಗೃತರಾಗಿ, ಆಯೋಗದೆದುರು ತಮ್ಮ ಕರ್ನಾಟಕತ್ವವನ್ನು ಸಿದ್ಧಗೊಳಿಸಿ ತೋರಿಸಿದ್ದುದು ಇನ್ನೂ ಸಂತೋಷದ ಸಂಗತಿಯಾಗಿದೆ. ಸೊಲ್ಲಾಪುರ, ಜತ್ತಿ, ಅಕ್ಕಲಕೋಟೆಗಳ ಜನತಾಪ್ರತಿನಿಧಿಗಳೂ ತಂತಮ್ಮ ಪ್ರದೇಶಗಳ ಕನ್ನಡತ್ವವನ್ನು ಕುರಿತು, ಸಪ್ರಮಾಣವಾಗಿ— ಸಬಲವಾಗಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಒಟ್ಟಿನ ಮೇಲೆ ಉತ್ತರ ಕರ್ನಾಟಕದ ಕನ್ನಡಿಗರು, ಸದ್ಯದ ಸಂದರ್ಭದಲ್ಲಿ ಮಾಡಬೇಕಾದ ಕಾರ್ಯವನ್ನು ಅಪೂರ್ವ ರೀತಿಯಲ್ಲಿ ಮಾಡಿಮುಗಿಸಿರುವರೆಂದು ಹೇಳಬಹುದು.

'ಪ್ರತ್ಯೇಕ ಮೈಸೂರು'ವಾದಿಗಳ ಸ್ವಾರ್ಥಸಾಧಕ ಧೋರಣೆ !

ಉತ್ತರದ ಕನ್ನಡಿಗರು ಅಖಂಡಕರ್ನಾಟಕ ನಿರ್ಮಿತಿಯ ಬಗ್ಗೆ ಆತುರರಾಗಿದ್ದು, ಅದಕ್ಕಾಗಿ ಮಾಡಬೇಕಾಗಿದ್ದ ಸದ್ಯದ ಕರ್ತವ್ಯವನ್ನು ಪ್ರಶಂಸನೀಯವಾಗಿ ನೆರವೇರಿಸಿರುವರಾದರೂ, ಮೈಸೂರು ಕನ್ನಡಿಗರು ನೇಗೆಯ ಲಾಳಿಯಂತೆ ಅತ್ತಿತ್ತ ಹೊಯ್ದಾಡುತ್ತಲಿದ್ದಾರೆ. ಮೈಸೂರು ಸರಕಾರ ಎಲ್ಲ ಸಂಗತಿಯ ವಿಚಾರಣೆ ಮಾಡುವುದಕ್ಕಾಗಿ ಸಮಿತಿಯನ್ನು ನಿಯಮಿಸುವ ದೀರ್ಘಸೂತ್ರವೃತ್ತಿಯನ್ನು ತಾಳಿದೆ. ಕಾಂಗ್ರೆಸ್ ಮುಖಂಡರಲ್ಲಿಯ ಕೆಲವರು ಅಖಂಡ ಕರ್ನಾಟಕವೆನ್ನುತ್ತಿದ್ದರೆ, ಇನ್ನು ಕೆಲವರು 'ಮೈಸೂರು ಪ್ರತ್ಯೇಕ' ಎನ್ನುತ್ತಿದ್ದಾರೆ. ಶ್ರೀಮಾನ್ ಡಿ. ವಿ. ಗುಂಡಪ್ಪನವರಂತಹ ರಾಜಕಾರ್ಯ ಪಿತಾಮಹರು ಕೂಡ, ಅಖಂಡಕರ್ನಾಟಕದ ವಿಚಾರಕ್ಕೆ ವಿರುದ್ಧವಾಗಿ ಮನವಿಯನ್ನು ಸಲ್ಲಿಸಿದ್ದಾರೆ ಆಯೋಗಕ್ಕೆ. ಮೈಸೂರ ಮಂತ್ರಿಮಂಡಲದಲ್ಲಿಯೂ ಉಚ್ಚ ಅಧಿಕಾರ ವರ್ಗದಲ್ಲಿಯೂ ಮೈಸೂರು ಪ್ರತ್ಯೇಕವಾಗಿ ಉಳಿಯಬೇಕೆಂಬ ವಿಚಾರದ ಪರಡಿಯ ತೂಕವೇ ಹೆಚ್ಚಾಗಿರುವಂತೆ ಕಂಡುಬರುತ್ತಲಿದೆ.

'ಪ್ರತ್ಯೇಕ ಮೈಸೂರು' ಎಂದು ಹೇಳುತ್ತಿರುವ ಮುಂದಾಳುಗಳೆಲ್ಲ ಒಂದು ಬಗೆಯ ಸಂಧಿಸಾಧಕರಾಗಿರುವರೆಂಬುದನ್ನು ಇಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇವರೆಲ್ಲ ಸ್ವಾತಂತ್ರ್ಯವೂ ಅಧಿಕಾರಗಳೂ ಇಲ್ಲದಿರುವಾಗ, ಅಖಂಡ ಕರ್ನಾಟಕದ ಬುರುಡೆಗಳನ್ನು ಒಂದೆಸವನೆ ಉರುಳಿಸುತ್ತಿದ್ದರು. ಈಗ ಯಾರದೋ ಪುಣ್ಯದಿಂದ ಮೈಸೂರಿಗರಿಗೆ ಸ್ವಾತಂತ್ರ್ಯ ದೊರೆತಿದೆ. ಕೆಲವೊಂದು ವ್ಯಕ್ತಿಗಳಿಗೆ ಎಂದೂ ಕಾಣದಿದ್ದಂತಹ ಅಧಿಕಾರಸ್ಥಾನಗಳು ದೊರೆತಿವೆ. ಈ ಅಧಿಕಾರಲುಬ್ಧ ವ್ಯಕ್ತಿಗಳೇ ಇಂದು ಸ್ವಾರ್ಥಸಾಧಕತನದಿಂದ ಮೈಸೂರ ಜನತೆಯಲ್ಲಿಯ ಅಖಂಡ ಕರ್ನಾಟಕದ ಆಶೆಯ ಬೇರಿಗೆ ಬಿಸ್ನೀರನ್ನೆರೆಯುತ್ತಲಿವೆ. ಜನತೆಗೆ ಅಲ್ಲದ ಸಲ್ಲದ ತತ್ತ್ವಾಭ್ಯಾಸದ ಮಾತುಗಳನ್ನು ಹೇಳಿ ಬುದ್ಧಿಭೇದವನ್ನುಂಟು ಮಾಡುತ್ತಲಿವೆ.

ಮೈಸೂರಿನ ಜನತೆ ದೂರದೃಷ್ಟಿಯಿಂದ ವಿಚಾರಮಾಡಬೇಕು. ಒಂದೆ ದಿನದ ಹೆಚ್ಚಿನ ಲಾಭದ ದುರಾಶೆಯಿಂದ ಎಮ್ಮೆಯ ಕೆಚ್ಚಲನ್ನು ಕೊಯ್ಯುವುದಕ್ಕೆ ಸಿದ್ಧರಾಗಿರುವ ಅಖಂಡಕರ್ನಾಟಕ ವಿರೋಧಿಗಳ ವೈಯಕ್ತಿಕ ಸ್ವಾರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕು. ಕನ್ನಡ ಜನತೆ ಶಾಶ್ವತವಾದುದು! ಕನ್ನಡ ನಾಡಿನ ಅಸ್ತಿತ್ವ ಅನಂತಕಾಲದವರೆಗೆ ಇರಬೇಕಾದುದು ! ಅಧಿಕಾರದುರಾಶೆಯ ಇಂದಿನ ಮುಂದಾಳುಗಳು ಮೂರೆ ಮೂರು ದಿನದವರು ! ಈ ಮೂರು ದಿನಗಳಲ್ಲಿ ಅವರು ಕೈ ಸಾಧಿಸಿಕೊಂಡು ಬೇಕಾದಷ್ಟು ವೈಯಕ್ತಿಕ ಲಾಭಗಳನ್ನು ಸಂಪಾದಿಸಿ ಕೊಳ್ಳಬಹುದು. ಆದರೆ ಇವರು ಕನ್ನಡನಾಡಿಗೆ ಬರಲಿರುವ ಸುಂದರ ಭವಿಷ್ಯವನ್ನು ಶಾಶ್ವತವಾಗಿ ಹದಗೆಡಿಸಿಬಿಡುತ್ತಲಿದ್ದಾರೆಂಬುದನ್ನು ಮೈಸೂರಿನ ಪ್ರಜಾಕೋಟಿ ಅರಿತುಕೊಂಡು ಮುಂಜಾಗ್ರತೆ ವಹಿಸಬೇಕು.

ಆಚಾರ-ಸಂಸ್ಕೃತಿ ಭೇದದ ಪೊಳ್ಳು ಕಾರಣ

ಸಾಂಸ್ಕೃತಿಕ ದೃಷ್ಟಿಯಿಂದ ಉತ್ತರ ಕರ್ನಾಟಕವೂ ಮೈಸೂರು ಕರ್ನಾಟಕವೂ ತೀರ ಭಿನ್ನವಾಗಿವೆಯೆಂದು ಹೇಳುವ ಹಿರಿಯರೂ ಮೈಸೂರು ದೇಶದಲ್ಲಿ ಆಕಸ್ಮಿಕವಾಗಿ— ಧೂಮಕೇತುವಿನಂತೆ— ಮೂಡಿನಿಂತುದು ಅನೇಕರಲ್ಲಿ ಆಶ್ಚರ್ಯವನ್ನೂ ವಿಷಾದವನ್ನೂ ಉಂಟು ಮಾಡಿದೆ. ಇವರು ಸಂಸ್ಕೃತಿಯೆಂದು ಯಾವುದಕ್ಕೆ ಹೇಳುವರು? ವಿಸ್ತಾರವಾದ ಕರ್ನಾಟಕ ಪ್ರದೇಶದಲ್ಲಿ ಬೆಳುವಲದ ಬಯಲುನಾಡಿದೆ. ಪರ್ವತಪ್ರದೇಶದಲ್ಲಿ ಹುದುಗಿದ ಕೊಂಕಣಭಾಗವಿದೆ. ಮಳೆ ಹೆಚ್ಚು ಬೀಳುವ ಮಲೆನಾಡು ಇದೆ. ಮಲೆನಾಡು-ಬೆಳುವಲಗಳ ಸಂಧಿಪ್ರದೇಶವೂ ಇವೆ. ಅಲ್ಲಲ್ಲಿಯ ನೈಸರ್ಗಿಕ ಪರಿಸ್ಥಿತಿಯನ್ನನುಸರಿಸಿ ಉಡಿಗೆ–ತೊಡಿಗೆಗಳಲ್ಲಿ ಸ್ವಲ್ಪ ಭೇದ ಕಂಡುಬರಬಹುದು. ಊಟ–ಉಪಾಹಾರಗಳಲ್ಲಿ ಕೂಡ ಸ್ವಲ್ಪ ಹೆಚ್ಚು-ಕಡಿಮೆಯೆನಿಸುವುದು ಸ್ವಾಭಾವಿಕ. ಇಂತಹ ಕೆಲವು ಸ್ವಾಭಾವಿಕ ಕಾರಣಗಳಿಗಾಗಿ ದೇಶವನ್ನು ವಿಭಾಗಿಸುವುದು ಹುಚ್ಚುತನವೆನಿಸೀತು.

ಒಂದೇ ಮೈಸೂರು ರಾಜ್ಯದಲ್ಲಿಯೇ ಜೋಳದ ರೊಟ್ಟಿಯನ್ನು ಬಳಸುವ ಚಿತ್ರದುರ್ಗ--ಶಿವಮೊಗ್ಗಾ ಜಿಲ್ಲೆಗಳು ಇರುವವು. ರಾಗಿಯ ಮುದ್ದೆಯನ್ನು ಉಪಯೋಗಿಸುವ ಕೋಲಾರ ಜಿಲ್ಲೆಯೂ ಇರುವುದು. ಹೆಚ್ಚಾಗಿ ಅಕ್ಕಿಯನ್ನು ಬಳಸುವ ಮಲೆನಾಡು ಜಿಲ್ಲೆಗಳೂ ಇರುವುವು ಇವರೆಲ್ಲರ ಉಡಿಗೆ–ತೊಡಿಗೆಗಳಲ್ಲಿಯೂ ವೈವಿಧ್ಯವಿಲ್ಲದೆ ಇಲ್ಲ. ಆದರೂ ಮೈಸೂರುರಾಜ್ಯ ಒಂದಾಗಿ ಇಲ್ಲವೆ?

ಮೈಸೂರುದೇಶದ ನಾಗರಿಕ ಸಮಾಜದ ವೇಷಭೂಷಣಗಳು, ರಾಜಕೀಯ ಕಾರಣದ ಮೂಲಕ ಪ್ರತ್ಯೇಕ ರೀತಿಯವಾಗಿರಬಹುದು. ಉತ್ತರಕರ್ನಾಟಕದ ಜಿಲ್ಲೆಗಳೂ ಒಂದು ವೇಳೆ ಮೈಸೂರು ರಾಜ್ಯಕ್ಕೇ ಮೊದಲಿನಿಂದಲೂ ಸೇರಿಕೊಂಡಿದ್ದರೆ, ಇಲ್ಲಿಯವರೂ ಅಲ್ಲಿಯವರಂತೆ ಮುಚ್ಚುಕೊರಳಿನ ಕೋಟು ತೊಟ್ಟು, ಜರಿಯ ಪೇಟಗಳನ್ನೇ ತಲೆಗಿರಿಸಿಕೊಳ್ಳಬಹುದಾಗಿತ್ತು, ಈಗ ಈ ಕೋಟು ಪೇಟಗಳನ್ನು ಬಿಟ್ಟು ಅನೇಕ ಜನರು, ಕ್ರಾಪಿನ ತಲೆಯವರೂ ಬುಶ್‌ಕೋಟ್‌ಧಾರಿಗಳೂ,ಮೈಸೂರು ರಾಜ್ಯದಲ್ಲಿಯೂ ಹೆಚ್ಚಾಗುತ್ತಿದ್ದಾರೆ. ಅವರನ್ನು ಮೈಸೂರಿಗರಲ್ಲವೆಂದು ಈ ಸಂಸ್ಕೃತಿ–ಆಚಾರದ ಹಿರಿಯರು ಹೊರಗೆ ಹಾಕುವರೋ? ಮನೆ-ಮನೆಯಲ್ಲಿಯೂ ವ್ಯಕ್ತಿ-ವ್ಯಕ್ತಿಗಳಲ್ಲಿಯೂ ರುಚಿಭಿನ್ನತೆಗಳು ಕಾಣುತ್ತಿರುವಾಗ, ಇವರ ಅಭಿಪ್ರಾಯದಂತೆ ಸಮಾಜದ ಇಲ್ಲವೆ ಜನತೆಯ ಐಕ್ಯಕ್ಕೆ ಮಾರ್ಗವೆಲ್ಲಿ? ಅಖಂಡಕರ್ನಾಟಕ ಬೇಡವಾದವರು ವಾಸ್ತವ ಕಾರಣವಾದ ಸ್ವಾರ್ಥಕ್ಕೆ ಹೊದಿಸಬೇಕೆಂದಿರುವ ತತ್ತ್ವಾಭಾಸದ ಹಚ್ಚಡವಿದು. ಈ ಹುಚ್ಚುತತ್ತ್ವದ ತರ್ಕವನ್ನು ಹೂಡುವುದಕ್ಕಿಂತ, ವಾಸ್ತವ ಕಾರಣವನ್ನು ಹೇಳಿ, 'ನಮಗೆ ಅಖಂಡ ಕರ್ನಾಟಕ ಬೇಕಾಗಿಲ್ಲ'ವೆಂದು ಹೇಳುವುದೂ ಹೆಚ್ಚು ಪ್ರಾಮಾಣಿಕತೆಯೆನಿಸೀತು. ಅದರೆ ರಾಜಕಾರಣಿಗಳಿಗೂ ಪ್ರಾಮಾಣಿಕತನಕ್ಕೂ ಹೆಚ್ಚು ಸಮೀಪಸಂಬಂಧವೆಂದಾದರೂ ಇರುವುದೆ? ಮೈಸೂರಿನ ಮುಂದಾಳುಗಳಂತೆಯೆ ಕೊಡಗರೂ ಪ್ರತ್ಯೇಕತೆಗಾಗಿ ಕುಣಿಯುತ್ತಿದ್ದಾರೆ. ಅವರು ಮೈಸೂರಿಗೆ ಸೇರಲೂ ಸಿದ್ಧರಿಲ್ಲ; ಕರ್ನಾಟಕದಲ್ಲಿ ಒಂದುಗೂಡಲೂ ಸಿದ್ಧರಿಲ್ಲ.

ಬಂಧುಗಳಾಗಿರಬೇಕೇ? ದಾಯಾದಿಗಳಾಗಬೇಕೆ?

ಕನ್ನಡಿಗರೆಲ್ಲ ಒಂದೆ ನಾಡಿನಲ್ಲಿ ಒಂದುಗೂಡಿದರೆ, ಅವರಲ್ಲಿ ಬಂಧುಭಾವ ಬೆಳೆದೀತು. ಬಂಧುಭಾವ ಒಂದುತನದ ಬಲವನ್ನು ಬೆಳೆಸುವುದು ಇದರಿಂದ ಇಡಿಯ ನಾಡು ಶ್ರೇಯಸ್ಸನ್ನು ಪಡೆಯುವುದು. ಇದನ್ನು ಬಿಟ್ಟು ಎರಡೋ ಮೂರೋ ಭಾಗಗಳಾಗಿ ಒಡೆದು ನಿಂತರೆ, ಒಂದೆ ಕನ್ನಡ ಜನಾಂಗದಲ್ಲಿ ದಾಯಾದ ದ್ವೇಷ ತಲೆಯೆತ್ತಿ ನಿಂತೀತು. ಈ ದ್ವೇಷ ನಾಡಿಗರ ಬಲವನ್ನು ಕಳೆದೀತು. ಅದರಿಂದ ಕನ್ನಡ ಜನತೆಯೆಲ್ಲ ಅವನತಿಯ ಪಾತಾಳಖಾತಕ್ಕೆ ಇಳಿದೀತು.

ಈಗ ಎಲ್ಲರೂ, ಒಟ್ಟುಗೂಡಿ ಬಾಳಬೇಕೆನ್ನುವವರ ಅಪೇಕ್ಷೆಯನ್ನು ಕಡೆಗಣಿಸಿ, ಪ್ರತ್ಯೇಕವಾಗಿರುವೆವೆಂಬ ಹಟಕ್ಕೆ ಬಿದ್ದು ಪ್ರತ್ಯೇಕವಾಗಿಯೆ ಉಳಿದುಬಿಟ್ಟರೆ, ಇದರಿಂದ ಪರಸ್ಪರ ಸೌಹಾರ್ದ ಭಾವ ಉಳಿಯಬಲ್ಲದೆ? ಇಂದಿನ ತಲೆಮಾರಿನವರ ಅತೃಪ್ತಿ–ಅಸಮಾಧಾನಗಳು, ಕಾಲವು ಮುಂದುವರಿದಂತೆ ಎಂತೆಂತಹ ವಿಕೃತ ಭಾವಗಳನ್ನು ಪಡೆಯಬಹುದೆಂಬುದನ್ನು ಹೇಳಲಿಕ್ಕೆ ಬಂದೀತೆ?

ಸಂಸ್ಕೃತಿಯನ್ನು ನಿರ್ಮಿಸುವುವು ನೈಸರ್ಗಿಕ ಕಾರಣದಿಂದುಂಟಾಗುವ ಆಹಾರ–ಆಚಾರಗಳಲ್ಲ. ಒಂದು ಸಾಮಾನ್ಯವಾದ ಭಾಷೆಯು, ಆ ಭಾಷೆಯ ಜನದ ಬುದ್ಧಿ–ಹೃದಯ–ಮನಸ್ಸುಗಳ ನೆರವಿನಿಂದ ಸಂಸ್ಕೃತಿಯನ್ನು ನಿರ್ಮಿಸುವುದು. ಸಂಸ್ಕೃತಿಯೆಂಬುದು ಜನತೆಯ ಆಂತರಿಕ ಜೀವನವನ್ನು ಪ್ರತಿಫಲಿಸಿ ತೋರಿಸುವಂತಹದು. ಭಾರತಕ್ಕೆಲ್ಲ ಒಂದೆ ಒಂದು ಸಂಸ್ಕೃತಿಯೆಂಬ ಮಾತನ್ನು ಸಾರಿ ಸಿದ್ಧಮಾಡುವವರು ಹಲವು ಜನರು ಇರುವಾಗ, ಕನ್ನಡ ಜನತೆಯ ಸಂಸ್ಕೃತಿಯಲ್ಲಿ ವಿಭಿನ್ನತೆಯನ್ನು ಕಲ್ಪಿಸಿ, ಜನಾಂಗವನ್ನೊಡೆಯಬೇಕೆನ್ನುವ ಮಹಾವಿದ್ವಾಂಸರ ಮನೋಭಾವನೆಗೆ ಏನು ಹೇಳಬೇಕು?

ಜನಜೀವನದ ವೈವಿಧ್ಯವನ್ನು ಒಂದುತನದ ಸೂತ್ರದಲ್ಲಿ ಪವಣಿಸುವ ಮುಖ್ಯ ಸಾಧನವೆಂದರೆ, ಅಲ್ಲಿಯ ಪ್ರಾದೇಶಿಕ ಭಾಷೆಯೊಂದೇ ಒಂದು! ಎಲ್ಲಬಗೆಯ ತತ್ತ್ವ, ಮತ, ಪಂಥಗಳ ವಿಚಾರಗಳನ್ನೆಲ್ಲ ಪ್ರಾದೇಶಿಕ ಭಾಷೆ ಎಲ್ಲರದನ್ನೂ ಆಗಿಸುವುದೆಂಬುದಕ್ಕೆ,ನಮ್ಮ ನಾಡಿನ ಪ್ರಾಚೀನಸಾಹಿತ್ಯವು ಪ್ರತ್ಯಕ್ಷ ಪ್ರಮಾಣವಾಗಿ ನಿಂತಿದೆ. ಇದು ಬರೀ ಜೈನರದಲ್ಲ; ಕೇವಲ ವೀರಶೈವರದಲ್ಲ; ಬರಿಯ ಬ್ರಾಹ್ಮಣರದಲ್ಲ. ಕನ್ನಡಿಗರೆಲ್ಲರದೂ ಆಗಿದೆ.

ಉತ್ತರ ಕರ್ನಾಟಕದ ಶಿವಶರಣರು, ದಾಸರು, ಕುಮಾರವ್ಯಾಸ, ರನ್ನ ಇವರೆಲ್ಲ ಮೈಸೂರಿನ ಕನ್ನಡಿಗರ ಹೃದಯವನ್ನೂ ಅರಳಿಸುವರು. ಅದರಂತೆಯೆ ದಕ್ಷಿಣದ ಲಕ್ಷ್ಮೀಶ, ಹೊನ್ನಮ್ಮ, ರತ್ನಾಕರ, ಪೊನ್ನ ಮೊದಲಾದವರು ಉತ್ತರ ಕರ್ನಾಟಕದವರ ಹೃದಯವನ್ನೂ ಅರಳಿಸುವರು. ಸಾಹಿತ್ಯ ಸಾಮ್ರಾಜ್ಯದಲ್ಲಿ ಭಿನ್ನಭೇದಗಳಿಲ್ಲದಿರುವಾಗ, ರಾಜಕೀಯ ಆಡಳಿತದ ವಿಚಾರದಲ್ಲಿ ಕನ್ನಡಿಗರಲ್ಲಿ ಭಿನ್ನ–ಭೇದಗಳೇಕೆ ತಲೆದೋರಬೇಕು? ಎಲ್ಲ ಕನ್ನಡ ಜನತೆಯೂ ಆಡಳಿತದಿಂದ ಅಪೇಕ್ಷಿಸುವುದು ಅನ್ನ, ವಸತಿ, ಅಭಯ, ಜ್ಞಾನ, ಭೇಷಜಗಳ ಸೌಕರ್ಯಗಳನ್ನು! ಈ ಸೌಕರ್ಯಗಳನ್ನು ಎಲ್ಲ ಕನ್ನಡಿಗರಿಗೂ ಒದಗಿಸಿಕೊಡಬೇಕಲ್ಲವೆ? ಹಾಗಿದ್ದರೆ ಅದಕ್ಕಾಗಿ ಆಡಳಿತಗಳಲ್ಲಿ ಭಿನ್ನತೆಯೇಕೆ ಬೇಕು? ಪ್ರಾಮಾಣಿಕ ಬುದ್ಧಿಯ ಪ್ರಜಾಹಿತಚಿಂತಕನಾವನೂ ಇಂತಹ ಭಿನ್ನತೆಯನ್ನು ಬಯಸಲಾರನು!

ಜೋಡುಗೋರಿ

(ಸಣ್ಣ ಕತೆ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ

ರಾಜನಾಗುವುದು ಅಧಿಕಾರದ ಮೋಹಕ್ಕಲ್ಲ—ಎಂಬುದನ್ನು ಸಿದ್ಧಮಾಡಿ ತೋರಿಸಿದ ರಾಜರುಗಳು, ನಮ್ಮ ಭರತಖಂಡದ ಚರಿತ್ರೆಯಲ್ಲಿ ಬೇಕಾದಷ್ಟು ಜನರು ಸಿಕ್ಕುತ್ತಾರೆ. ಆ ರಾಜರುಗಳಲ್ಲಿ ವಾಸಿಸುತ್ತಿರುವ ಪ್ರಜಾಕಲ್ಯಾಣ ಬುದ್ಧಿ, ಇಂದಿನ ರಾಜ್ಯಸೂತ್ರಚಾಲಕರಲ್ಲಿ ತಲೆದೋರಿದರೆ, ಇಂದಿನ ಕಷ್ಟದ ಕಾಲ ತಾನೇ ಮರೆಯಾಗುವುದು.

ಸುವರ್ಣಪುರದಲ್ಲಿ ಅಥವಾ ಸವಣೂರಲ್ಲಿ ಪೂರ್ವದ ಬಾದಶಹರ ಗೋರಿಯೊಂದಿದೆ. ಬಹು ಸುಂದರವಾಗಿ ಕಲ್ಲಿನಲ್ಲಿ ಕಟ್ಟಿದ್ದಾರೆ. ಅದರ ಬದಿಯಲ್ಲಿಯೇ ಅಷ್ಟೇ ಸುಂದರವಾದ ಹಿಂದೂ ಸಂನ್ಯಾಸಿಯೊಬ್ಬರ ಸಮಾಧಿಯಿದೆ. ಸಮಾಧಿಯ ಮುಂದೆ ದೀಪವನ್ನು ಹಚ್ಚಿದರೆ, ಗೋರಿಯ ಎದುರು ಧೂಪವನ್ನು ಹಾಕುತ್ತಾರೆ. ಆ ಗೋರಿಯ ಆರಾಧಕರು ಯವನರಾದರೂ, ಆ ಸಮಾಧಿಗೆ ಗೋರಿಗಿತ್ತಷ್ಟೇ ಮಾನವನ್ನೀಯುತ್ತಾರೆ. ಒಂದೇ ಮಾರಿನಂತರದಲ್ಲಿ, ಒಂದೆ ಕಟ್ಟಡದ ಕೆಳಕ್ಕೆ ಮುಸಲ್ಮಾನ್ ಬಾದಶಹರ ಗೋರಿಯ ಬಳಿ, ಹಿಂದೂ ಸಂನ್ಯಾಸಿಯೊಬ್ಬನ ಸಮಾಧಿಯಿದ್ದುದು ಕೇವಲ ಸವಣೂರೊಂದರಲ್ಲಿ ಮಾತ್ರ ! ದೊರೆಯ ಪ್ರೀತ್ಯರ್ಥವಾಗಿ ಪ್ರತಿ ವರುಷವೂ ಆ ಗೋರಿಯ ಬಳಿ ಜಾತ್ರೆ ನೆರೆಯುತ್ತದೆ. ಅಂದು ಆ ಗೋರಿಗೆ ಸಿಕ್ಕಷ್ಟೇ ಪ್ರಾಧಾನ್ಯವು ಆ ಸಮಾಧಿಗೂ ದೊರೆಯುತ್ತದೆ. ಶಿಲಾಶಾಸನಗಳ ಮೇಲಿಂದ ಸವಣೂರಲ್ಲಿ ಜೈನರ ಬಸದಿಗಳಿರಬೇಕೆಂಬ ಕಲ್ಪನೆಯು ಬಹುಜನರಿಗೆ ಆಗಿದೆ. ಅಲ್ಲಿ ಯಾವ ಜೈನರ ಕುರುಹುಗಳೂ ಇಲ್ಲ. ಪೂರ್ವದಿಂದಲೂ ಅದು ಮುಸಲ್ಮಾನರ ರಾಜ್ಯ. ರಾಜ್ಯದ ತುಂಬ ಮಸೀದಿಗಳಿವೆ. ಮಸೀದಿಗಳಷ್ಟೇ ದೇಗುಲಗಳಿವೆ. ಅಲ್ಲಲ್ಲಿ ಧರ್ಮಶಾಲೆ, ಅನ್ನಛತ್ರ, ಜಲಾಶಯಗಳು ಇದ್ದುವಂತೆ. ಇಂದು ಅವುಗಳ ಕುರುಹುಗಳನ್ನು ಮಾತ್ರ ಕಾಣಬಹುದು. ಸವಣೂರ ನಗರದ ಬಳಿ ದೇಗುಳವೊಂದಿದೆ. ಅದು ಹೊರಗಿನಿಂದ ಮುಸಲ್ಮಾನರ ಮಸೀದೆಯಂತೆ ಕಂಗೊಳಿಸುತ್ತದೆ; ಆದರೆ ಒಳಗೆ ಹಿಂದೂದೇವತೆಯು ನಿಂತಿದ್ದಾಳೆ. ಸವಣೂರಿನಲ್ಲಿ ಇಂತಹ ಇನ್ನೂ ಕೆಲವು ವೈಚಿತ್ರ್ಯಗಳನ್ನು ನಾವು ಕಾಣಬಹುದು. ಪುರಾತನಕಾಲದಿಂದ ರಾಜ್ಯವು ಯವನರ ಕೈಯಲ್ಲಿದ್ದರೂ, ಅನ್ಯಮತೀಯರು ಅಲ್ಲಿ ಸುಖದಿಂದಲೇ ಬಾಳಿದ್ದಾರೆ. ಬಾದಶಹರ ಗೋರಿಯ ಬಳಿ ಸಾಮಾನ್ಯ ಹಿಂದುವಿನ ಸಮಾಧಿ ಏಕೆ ನಿಂತಿದೆ ? ಮುಸಲ್ಮಾನ ರಾಜ್ಯದಲ್ಲಿ ಹಿಂದೂ ದೇಗುಲಗಳು ಹೆಚ್ಚಾಗಿ ನಿಂತಿವೆ ಏಕೆ ? ಹೊರಗಿನ ರಚನೆ ಯವನರ ಸಂಸ್ಕೃತಿಯಂತಿದ್ದರೂ ದೇಗುಲದೊಳಗೆ ಶುದ್ಧ ಭಾರತೀಯ ದೇವತೆ ಏಕೆ ? ಸವಣೂರನ್ನು ಸುವರ್ಣಪುರವೆಂದೇಕೆ ಕರೆಯುವರು ? ಇವುಗಳ ಬಗ್ಗೆ ನಾವು ಇತಿಹಾಸದಲ್ಲಾಗಲಿ ಅಥವಾ ಶಿಲಾಶಾಸನಗಳ ಮುಖಾಂತರವಾಗಿಯಾಗಲಿ ಏನನ್ನೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಅಲ್ಲಿಯ ಜನರ ಸ್ಮೃತಿಯಲ್ಲಿ ತಲತಲಾಂತರದಿಂದ ಬಂದ ಕಥೆಯನ್ನು ಕಲೆಹಾಕಿದರೆ, ಅವರ ಮಾತಿನ ಸತ್ಯಾಂಶವು ತಿಳಿಯುತ್ತದೆ.

ಬಹುದಿವಸ ಭಾರತವನ್ನಾಳಿ ಅದರ ಸತ್ತ್ವವನ್ನು ಹೀರಿದವರು ಯವನರು. ಅವರಲ್ಲಿ ಅಕಬರನಂತಹ ಒಬ್ಬಿಬ್ಬರು ಉತ್ತಮ ರಾಜರಾಗಿ ಹೋದವರೂ ಉಂಟು. ದಿಲ್ಲಿಯಲ್ಲಿ ಮುಸಲ್ಮಾನ ಬಾದಶಹರ ಚಕ್ರಾಧಿಪತ್ಯವು ನಡೆಯುತ್ತಿರುವಾಗ, ಸವಣೂರು ಒಂದು ಪಾಳೆಯ. ಸವಣೂರಿನ ಬಾದಶಹರು ದಿಲ್ಲಿಯ ಚಕ್ರವರ್ತಿಗಳ ಸಂಬಂಧಿಕರಾದುದರಿಂದ, ಇಲ್ಲಿಯ ಪಾಳೆಯಗಾರರಿಗೂ ಬಾದಶಹರೆಂಬ ಬಿರುದನ್ನು ಹಚ್ಚಿಕೊಳ್ಳಲು ಅನುಮತಿಯನ್ನಿತ್ತಿದ್ದರು. ಸವಣೂರು ಆ ಪ್ರಾಂತಗಳ ರಾಜಧಾನಿಯಿತ್ತು. ಸವಣೂರಿನ ನವಾಬ್ ಬಾದಶಹರಿಗೆ ಸ್ವತಂತ್ರತೆಯಿತ್ತು. ಅಂದು ಆಳುತ್ತಿದ್ದವರು ಸುಸ್ವಭಾವಿ ದಿಲೇರಜಂಗ್ ನವಾಬರು. ಅವರು ತುಂಬಾ ವಿನಯಿಗಳು, ಕ್ಷಮಾಶೀಲರು, ಪರಧರ್ಮಸಹಿಷ್ಣುಗಳು, ಉದಾರಿಗಳು—ಹೆಚ್ಚಾಗಿ ದಾನಿಗಳಿದ್ದರು. ಮೊನ್ನೆಯ ವರೆಗೂ ಸವಣೂರ ರಾಜ್ಯವು ನಡೆಯಲು ಅವರದೇ ಪುಣ್ಯವೆಂದು ಅಲ್ಲಿಯ ಪ್ರಜೆಗಳು ಆಡಿಕೊಳ್ಳುತ್ತಿದ್ದರು. ಬಾದಶಹರು ಸಾರ್ವಜನಿಕ ಹಿತ-ಸೇವೆಗಳಿಗಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಮಾಡಲು ಯಾವ ಕಾರ್ಯವಿಲ್ಲವೆಂದು ಯಾವ ಪ್ರಜೆಯೂ ನಿರುದ್ಯೋಗಿಯಾಗುವಂತಿಲ್ಲ. ಬೀದಿಯಲ್ಲಿ ಅಲೆದಾಡಿ ಯಾರೂ ಭಿಕ್ಷೆಯನ್ನು ಬೇಡುವಂತಿಲ್ಲ. ಹಸಿವೆಯಿಂದ ಯಾವ ವ್ಯಕ್ತಿಯೂ ಮರಣವನ್ನು ಹೊಂದುವಂತಿಲ್ಲ. ಆ ರಾಜ್ಯದ ರಾಜಧಾನಿಯಾದ ಸವಣೂರಲ್ಲಿ ಒಂದು ಧರ್ಮಸಂಸ್ಥೆಯಿತ್ತು. ಬಾದಶಹರು ಅದರ ಸಂಸ್ಥಾಪಕರು. ನಗರದ ಗಣ್ಯರು ಅದರ ಪ್ರದಾತೃಗಳು. ಅಲ್ಲಿ ಯಾರಾದರೂ ಭಿಕ್ಷೆ ಬೇಡಿದರೆ, ಭಿಕ್ಷುಕರನ್ನು ರಾಜದೂತರು ಕರೆದುಕೊಂಡು ಹೋಗಿ, ಆ ಧರ್ಮಸಂಸ್ಥೆಗೆ ಕಳುಹುತ್ತಿದ್ದರು. ಆ ಸಂಸ್ಥೆಯ ಸಂಚಾಲಕರಾದ ಧರ್ಮದರ್ಶಿಗಳು, ಹಸಿದವರಿಗೆ ಮೊದಲು ಹೊಟ್ಟೆತುಂಬ ಅನ್ನವನ್ನು ಹಾಕಿ, ಅನಂತರ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು. ಬಳಿಕ ಅವರವರ ಮನೋಧರ್ಮಗಳನ್ನು ಅವಲೋಕಿಸಿ, ಅವರಿಗೆ ಯೋಗ್ಯ ವೃತ್ತಿಗಳನ್ನು ದಯಪಾಲಿಸಲಾಗುತ್ತಿತ್ತು. ಅಂಗಹೀನರನ್ನೂ

ನಿತ್ಯವೂ [illegible] ಸಂಸ್ಥೆಯೇ ಪೂರೈಸುತ್ತಿತ್ತು. ಅದು ನಿರ್ಗ-
[illegible] ಆ ಧರ್ಮದರ್ಶಿಗಳೆಂದರೆ [illegible]
[illegible] ! [illegible], ನಿತ್ಯವೂ ಆ ಸಂಸ್ಥೆಗೆ ತಮ್ಮ [illegible] [illegible] ಯೋಗಕ್ಷೇಮವನ್ನು [illegible] ಕೇಳಿಸುತ್ತಿರಲಿಲ್ಲ. ಮೊರೆಗಳು [illegible] ಅವರು [illegible] ತುಂಬಾ ಪ್ರೀತಿ. [illegible] ಮೊರೆಗಳು ಎಂದೂ ಯಾವ ಕಾರ್ಯ [illegible] ಧರ್ಮದರ್ಶಿಗಳು [illegible]. [illegible] ಧರ್ಮದರ್ಶಿಗಳಿತ್ತರೆ, ಧರ್ಮದರ್ಶಿಗಳಿಗೆ [illegible] ಸ್ನಾನ-ಸ್ನಾನ [illegible]

[illegible]

" ಒಂದು ಶತ–ಸಹಸ್ರ ಸುವರ್ಣದ ಮೋಹರುಗಳನ್ನವರ ಕೊಟ್ಟಿದ್ದಾರೆ. ಅವರು ತುಂಬಾ ಸಿರಿವಂತರು. ಮನೆಯಲ್ಲಿ ಕಾಳನ್ನು ತುಂಬುವ ಚೀಲದಲ್ಲಿ ಸುವರ್ಣದ ಹಾಗು ರಜತದ ಮೋಹರುಗಳನ್ನು ತುಂಬಿಟ್ಟಿದ್ದಾರೆ. ನಾಯಕರು ಚಿನಿವಾಲರಾದರೂ, ಉದಾರ ಮನಸ್ಸಿನವರು ! ". ಧರ್ಮದರ್ಶಿಗಳು ವಸ್ತುಸ್ಥಿತಿಯನ್ನು ತೆರೆದಿಟ್ಟರು.

[illegible] ಕಣ್ಣುಮುಚ್ಚಿ ಚಣಹೊತ್ತು ಮೌನವನ್ನು ಧರಿಸಿದರು. [illegible] ತಿರಕಪ್ಪನಾಯಕರೆಂದರೆ ಆಗರ್ಭಶ್ರೀಮಂತರು. ಅವರು ಅಷ್ಟು ದಾನ ಮಾಡಿದ್ದಕ್ಕಾಗಿ ಮೊರೆಗಳು ಅನ್ಯಥಾ ಭಾವಿಸಲಿಲ್ಲ. ತಮ್ಮ ಪ್ರಜೆಯೊಬ್ಬನಿಗಿಂತಲೂ ತಾವು ಕಡಿಮೆ ದಾನ ಮಾಡಿದುದನ್ನು [illegible] ಕಣ್ಣನ್ನು ತೆರೆದು ಧರ್ಮದರ್ಶಿಗಳನ್ನು ದೃಷ್ಟಿಸಿ ನೋಡಿದರು. " ಸ್ವಾಮಿನ್, ನಾನು ಈ ಸಂಸ್ಥೆಗೆ ಒಂದು ಕೋಟಿ ಸುವರ್ಣದ ಮೋಹರುಗಳನ್ನು ಕೊಡಬೇಕೆಂದು [illegible]" ಎಂದು ಹೇಳಿದರು. ಧರ್ಮದರ್ಶಿಗಳು [illegible] ಉದಕವನ್ನು [illegible] [illegible] ಮೊರೆಗಳು ಈ [illegible]

[illegible]

ಕಸವನ್ನೇ ರಸವನ್ನಾಗಿ ಪರಿವರ್ತಿಸುವುದು ಉತ್ತಮ ದೊರೆಯ ಲಕ್ಷಣ. ದಾನ, ದಯೆ, ಕ್ಷಮಾ, ಶೀಲ ಹಾಗು ಸತ್ಯಗಳೇ ನಿನ್ನ ತಳಹದಿಯಾಗಬೇಕು. ನಿನ್ನ ತಂದೆಯವರ ಮಾರ್ಗಪಥದಲ್ಲಿ ನಡೆದು ಸವಣೂರು ರಾಜ್ಯದ ಯಶೋಭಿವೃದ್ಧಿಯನ್ನು ಕೋರಬೇಕು. ಬಾದಶಹರ ನೇತೃತ್ವದಲ್ಲಿ ಶಿಕ್ಷಣ ಪಡೆದದ್ದರಿಂದ ನಿನಗೆ ಹೆಚ್ಚು ಹೇಳಲು ನಾನು ಅಶಕ್ತನು." ಎಂದು ಹೇಳಿದರು. ಯುವರಾಜರ ಮುಖವನ್ನು ನಿರೀಕ್ಷಿಸಿ ಧರ್ಮದರ್ಶಿಗಳು ಒಂದು ನಿಟ್ಟುಸಿರನ್ನು ಬಿಟ್ಟರು. ಅದೇಕೋ, ಧರ್ಮದರ್ಶಿಗಳಿಗೆ ದೊರೆಯಲ್ಲಿಯ ಸದ್ಗುಣಗಳು ಯುವರಾಜರಲ್ಲಿ ಇಲ್ಲವೆಂಬ ಸಂಶಯ ಬಂದಿತು. ರಸೀದ್‌ನವಾಬರು ಯುವರಾಜರಾದ ಮೇಲೆ, ರಾಜ್ಯಭಾರದ ಹೊಣೆಗಳು ಒಂದೊಂದೇ ಬರಹತ್ತಿದವು. ಭಾಂಡಾರದ ಬೀಗ ಹಾಗೂ ರಾಜ್ಯದ ಮುದ್ರೆಗಳು ರಸೀದ್‌ನವಾಬರ ಹಸ್ತವನ್ನು ಸೇರಿದವು.

ಬಾದಶಹರ ದಾನವು ಅವ್ಯಾಹತವಾಗಿ ನಡೆದೇ ಇತ್ತು. ರಾಜ್ಯ ಭಾಂಡಾರವೆಲ್ಲಾ ಖಾಲಿಯಾಗಿತ್ತು. ಒಂದು ದಿವಸ ಲೆಕ್ಕವನ್ನೆಲ್ಲಾ ಎಣಿಸಿ ನೋಡಿ, ತಾವು ಇನ್ನು ದಶಲಕ್ಷ ಸುವರ್ಣಮೋಹರುಗಳನ್ನು ಕೊಡಬೇಕಾಗಿದೆಯೆಂದು ಲೆಕ್ಕತೆಗೆದರು. ಇತ್ತಕಡೆ ಯಾರೋ ಕುಹಕಿಗಳು "ಬಾದಶಹರು ಎಲ್ಲ ಹಣವನ್ನು ವ್ಯಯಿಸಿಬಿಟ್ಟಿದ್ದಾರೆ. ಧರ್ಮದರ್ಶಿಗಳ ಮಾತಿನ ಬಲೆಗೆ ಬಿದ್ದು ರಾಜ್ಯವನ್ನೇ ಕಳೆದುಕೊಳ್ಳುತ್ತಾರೆ" ಎಂದು ಯುವರಾಜರ ತಲೆಯಲ್ಲಿ, ನವಾಬ್ ದಿಲೇರಜಂಗರ ವಿಷಯಕ್ಕೆ ತಪ್ಪು ಕಲ್ಪನೆಯನ್ನು ಹಾಕಿದರು. ಈ ರೀತಿ ಬಾದಶಹರು ದಾನವನ್ನು ಮಾಡುತ್ತ ಹೋದರೆ, ಯುವರಾಜರ ಪಾಲಿಗೆ ಬರಿರಾಜ್ಯವೇ ಉಳಿಯುವುದೆಂದು ಅವರ ಮಿತ್ರರು ಹೇಳಹತ್ತಿದರು. ಯುವರಾಜರಿಗೂ ನಿಜವೆನಿಸಿತು. ಕ್ಷಣಹೊತ್ತು ಪರಿಸ್ಥಿತಿಯನ್ನು ತೂಗಿನೋಡಿ, ಒಂದು ನಿರ್ಣಯಕ್ಕೆ ಬಂದರು. ಅಂದಿನಿಂದಲೇ ಭಂಡಾರಿಗರಿಗೆ ತಮ್ಮ ಅಜ್ಞೆಯಿಲ್ಲದೆ ಒಂದು ಕವಡೆಸಹಿತ ಹೊರಕ್ಕೆ ಹೋಗಬಾರದೆಂದು ಹೇಳಿದರು. ರಾಜ್ಯದ ಪ್ರತಿನಿತ್ಯದ ವ್ಯವಹಾರದಲ್ಲಿ ಕಡಿತವು ಪ್ರಾರಂಭವಾಯಿತು. ಸೈನ್ಯದ ಸರದಾರರು, ದರಬಾರದ ಅಧಿಕಾರಿಗಳು, ಅರಮನೆಯ ಪರಿವಾರದವರು ತಮ್ಮ ಪಾಲಿನ ಹಣದಲ್ಲಿ ಕಡಿತದ ತೊಂದರೆಯನ್ನು ಅನುಭವಿಸಬೇಕಾಯಿತು. ಅಲ್ಲಲ್ಲಿ ಇದರ ಪ್ರತಿಕ್ರಿಯೆಯು ಸೂಕ್ಷ್ಮರೀತಿಯಲ್ಲಿ ಕಂಡುಬರಹತ್ತಿತು. ದೊಡ್ಡ ಬಾದಶಹರ ಕಾಲಕ್ಕೆ ಸುಖವನ್ನುಂಡು, ಅವರು ಜೀವಿಸಿರುವಾಗ ಯಾರೂ ಅವರ ವಿರೋಧಿಯಾಗಿ ವರ್ತಿಸಲು ಇಚ್ಛೆಪಡಲಿಲ್ಲ. ನಿತ್ಯದ ವ್ಯವಹಾರದ ಸೂತ್ರಚಾಲಕರು ಯುವರಾಜರಿದ್ದುದರಿಂದ, ಅವರಿಗೂ ರಾಜ್ಯಕಾರಭಾರದ ಸೂಕ್ಷ್ಮ ಬದಲಾವಣೆಗಳು ತಿಳಿಯುತ್ತಿರಲಿಲ್ಲ. ದರಬಾರವು ನೆರೆದಾಗ ಬಾದಶಹರು ಬರುತ್ತಿದ್ದರು. ಅವರಿಗೇಕೋ ಒಂದು ಚಿಂತೆ ತಗುಲಿತ್ತು. ತಮ್ಮ ದಾನದ ಗುಂಗಿನಲ್ಲಿ ರಾಜ್ಯವನ್ನೇ ಮರೆತಂತೆ ಕಾಣುತ್ತಿದ್ದರು. ರಾಜ್ಯದ ತುಂಬಾ ಯುವರಾಜರ ಗುಪ್ತಚಾರರು ಅಲೆದಾಡುತ್ತಿದ್ದರು. ಯಾರಾದರೂ ಯುವರಾಜರ ವಿಷಯಕ್ಕೆ ಅನ್ಯಥಾ ಮಾತನಾಡಿದರೆ, ಅವರಿಗೆ ರಾಜದಂಡವು ಕಾದಿರುತ್ತಿತ್ತು. ಇತ್ತಿತ್ತಲಾಗಿ ಬಾದಶಹರಿಗೆ ಸೂಕ್ಷ್ಮವಾಗಿ ಅದರ ಅರಿವಾಗಹತ್ತಿತು. ಅದನ್ನು ಎದುರಿಸುವ ಧೈರ್ಯವಿಲ್ಲದಾಯಿತು. ರಾಜ್ಯದ ತುಂಬಾ ತಂದೆ-ಮಕ್ಕಳಿಗೆ ವ್ಯಾಜ್ಯವೆಂದು ಯಾರಾದರೂ ಕೇಳಿದರೆ, ತಮ್ಮ ಶುಭ್ರಕೀರ್ತಿಗೆ ಕಳಂಕ ತಗಲುವುದೆಂದು ಮೌನವನ್ನೇ ಧರಿಸಿದರು. ಮತ್ತೆ ತಮ್ಮ ಲೋಕದಾನದ ಬಗ್ಗೆ ವಿಚಾರಮಾಡಹತ್ತಿದರು. ಭಂಡಾರದಿಂದ ಒಂದು ಚಿಕ್ಕಕಾಸೂ ದೊರೆಯದಾಯಿತು. ಮಗನಿಗೆ ಹೇಳಿ ಸಂಪತ್ತನ್ನು ಬೇಡುವ ಪ್ರವೃತ್ತಿಯು ಬಾದಶಹರ ಮನಸ್ಸಿಗೆ ಸಮಂಜಸವೆನಿಸಲಿಲ್ಲ.

ಚಿಂತೆಯ ಭಾರದಿಂದ ಬಾದಶಹರು ಹಾಸಿಗೆಯನ್ನು ಹಿಡಿದರು. ಅವರ ಅಸ್ವಾಸ್ಥ್ಯದ ವಾರ್ತೆಯು ರಾಜ್ಯದ ತುಂಬಾ ಹರಡಿತು. ಜನರು ತೀರ ವಿವಂಚನೆಗೊಳಗಾದರು. ರಾಜ್ಯಕಾರಭಾರವು ದೊರೆಗಳ ಹೆಸರಿನಲ್ಲಿ ಸಾಗಿದರೂ, ಯುವರಾಜರದೇ ಪ್ರಮುಖ ಪಾತ್ರವಾಯಿತು. ಭೋಜನಶಾಲೆಗೆ ಹೋಗುವ ತ್ರಾಣವಿರದ್ದಕ್ಕೆ, ಭೋಜನವು ಅಲ್ಲಿಗೇ ಬರಹತ್ತಿತು. ಸೇವಕನು ನಿತ್ಯದ ಪರಿಪಾಠದಂತೆ ಕನಕದ ಪಾತ್ರೆಗಳಲ್ಲಿ ಭೋಜನವನ್ನು ಸಿದ್ಧಪಡಿಸಿಕೊಂಡು ಬಂದಿಟ್ಟನು. ಬಾದಶಹರು ಯಾವುದೋ ಚಿಂತೆಯಲ್ಲಿ ಲೀನರಾಗಿದ್ದರಿಂದ, ಭೋಜನ ಬಂದದ್ದನ್ನೇ ನೋಡಲಿಲ್ಲ. ಸೇವಕನು ಮುಕ್ಕಾಲು ಘಂಟೆ ನಿಂತರೂ ಬಾದಶಹರು ಹಾಗೆಯೇ ಮಲಗಿದ್ದರು. ಕನಕದ ಹೂಜೆಯಿಂದ ಪರಿಚಾರಕನು ಮದಿರೆಯನ್ನು ಸುವರ್ಣಪಾತ್ರೆಗೆ ಹಾಕಿ ಸಪ್ಪಳವನ್ನು ಮಾಡಿದರೂ, ಬಾದಶಹರು ಕಣ್ಣನ್ನು ತೆರೆಯಲಿಲ್ಲ. ಶೂನ್ಯಮನಸ್ಕರಾಗಿ ಯಾವುದೋ ವಸ್ತುವಿನಲ್ಲಿ ದೃಷ್ಟಿಯನ್ನು ಹೊರಳಿಸಿ, ಸುಪ್ಪತ್ತಿಗೆಯ ಮೇಲೆ ಪವಡಿಸಿದ್ದರು. ಸೇವಕನು ನಿಂತು ನಿಂತು ಹೋಗಿಬಿಟ್ಟನು. ಅರ್ಧರಾತ್ರಿ ಸರಿದಾಗ ಬಾದಶಹರು ಕಂಗಳನ್ನು ತೆರೆದು ನೋಡಿದರೆ, ಎದುರಿಗೆ ಭೋಜನವಿತ್ತು. ಅರೆಮನಸ್ಸಿನಿಂದ ಇದ್ದುದನ್ನು ತಿಂದರು. ತಮಗೆ ಬೇಕಾದ ಪದಾರ್ಥವನ್ನು ಹೇಳಿ ಮಾಡಿಸಿಕೊಳ್ಳುವ ಸ್ವಾತಂತ್ರ್ಯವಿದ್ದರೂ, ತಾವೇ ಎಂದಿಗೂ ಅಂತಹ ಭೋಗಕ್ಕೆ ಆಶೆಪಡಲಿಲ್ಲ. ಭೋಜನ ಮುಗಿದಮೇಲೆ, ಅವರ ತಲೆಯಲ್ಲಿ ವಿಚಾರವೊಂದು ಸುಳಿಯಿತು. ತಮ್ಮ ಅರಮನೆಯಲ್ಲಿ ಸಹಸ್ರಾರು ಕನಕದ ಪಾತ್ರೆಗಳಿವೆ. ಅವುಗಳನ್ನು ಧರ್ಮಸಂಸ್ಥೆಗೆ ಕೊಟ್ಟರೆ ತಮ್ಮ ವಚನದಲ್ಲಿ ಕೆಲವನ್ನಾದರೂ ಕೊಟ್ಟಂತಾಗುವುದೆಂದು ಭಾವಿಸಿದರು. ಮರುದಿವಸ ತಮ್ಮ ಗುಪ್ತಚಾರನೊರ್ವನನ್ನು ಕರೆದು, ಆ ಎಲ್ಲ ಪಾತ್ರೆಗಳನ್ನು ಧರ್ಮಸಂಸ್ಥೆಗೆ ಕಳಿಸಿದರು. ಇದೇ ರೀತಿ ಎರಡು ಮೂರು ದಿವಸಗಳು ಕಳೆದ ಮೇಲೆ, ಯುವರಾಜರ ಕಿವಿಗಳಿಗೆ ಈ ವಾರ್ತೆ ತಲುಪಿತು. ಅಂದಿನಿಂದ ಭೋಜನವು ರಜತಪಾತ್ರೆಗಳಲ್ಲಿ ಬರಲು ಪ್ರಾರಂಭವಾಯಿತು. ಅದೂ ಸಾಮಾನ್ಯವಾಗುವ ವಾರ್ತೆ ಬರಲು, ಭೋಜನವು ಮಣ್ಣಿನ ಪಾತ್ರೆಯಲ್ಲಿ ಬರಹತ್ತಿತು. ಅಂದು ಬಾದಶಹರು ಭೋಜನವನ್ನೇ ಮಾಡಲಿಲ್ಲ. ಇಪ್ಪತ್ತೆರಡು ಪ್ರಾಂತಗಳ ದೊರೆಗಳು ಮಣ್ಣಿನ ಪಾತ್ರೆಯಲ್ಲಿ, ತೀರ ದರಿದ್ರರಂತೆ ಭೋಜನವನ್ನು ಸ್ವೀಕರಿಸುವರೆಂಬುದನ್ನು ಕೇಳಿ ಜನರೆಲ್ಲರೂ ಮರುಗಿದರು.

ಅದೊಂದು ರಾತ್ರಿ ವಿಚಾರಿಸಿದರು; ಮರುದಿವಸವೇ ಬಾದಶಹರು, ತಮಗೆ ವಿಹಾರಕ್ಕೆ ಹೋಗುವ ಆಶೆಯಾಗಿದೆಯೆಂದು ಹೇಳಿದರು.

‘ತಂದೆಯುವರು ರಾಜಧಾನಿಯನ್ನು ಬಿಟ್ಟುಹೋದರೆ, ಧರ್ಮಸಂಸ್ಥೆಗೆ ಕೊಡುವುದು ತಪ್ಪುವುದಲ್ಲಾ!’ ಎಂಬ ಸಂತೋಷದಿಂದ ರಶೀದ್ ನವಾಬರು ಒಮ್ಮೆಲೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಟ್ಟರು. ಬಾದಶಹರು, ತಮ್ಮ ಆಪ್ತಕಾರ್ಯದರ್ಶಿ ಹಾಗು ಪರಿಚಾರಕರನ್ನು ಬಿಟ್ಟು ಬೇರೆ ಯಾವ ಅರಮನೆಯ ಅಧಿಕಾರಿಗಳನ್ನೂ ಕರೆದುಕೊಂಡು ಹೋಗಲು ಸಮ್ಮತಿಸಲಿಲ್ಲ. ಸರಿ, ಪ್ರಯಾಣದ ಸಿದ್ಧತೆಗಳಾದ ಮೇಲೆ ಬಾದಶಹರು ಯುವರಾಜರನ್ನು ತಾವೇ ಮಾತನಾಡಿಸಿ ಹೊರಟರು. ಮೂರು ತಿಂಗಳ ಪರ್ಯಂತರವಾಗಿ ಸುತ್ತಾಡಿ, ಪುನಃ ಸವಣೂರಿಗೆ ಬಂದರು. ಬಂದಿಳಿದಾಗ ಬಾದಶಹರು ಪ್ರಸನ್ನಚಿತ್ತರಿದ್ದರು. ಬಂದವರೇ ಧರ್ಮಸಂಸ್ಥೆಗೆ ಹೋಗಿಬಂದರು. ಆಪ್ತಕಾರ್ಯದರ್ಶಿಗೆ ಏನನ್ನೋ ಹೇಳಿದರು. ಅರಮನೆಯನ್ನೆಲ್ಲಾ ಸುತ್ತಾಡಿ ಬಂದರು. ಪರಿವಾರದವರನ್ನೆಲ್ಲಾ ತಾವೇ ಮಾತನಾಡಿಸಲು ಪ್ರಾರಂಭಿಸಿದರು. ಯುವರಾಜರ ಬಳಿ ತೆರಳಿ, ರಾಜ್ಯದ ಎಲ್ಲ ವಾರ್ತೆಗಳನ್ನು ಕೇಳಿ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕೆಲವರಿಗೆ, ಪ್ರಯಾಣದಿಂದ ಕಳೆದುಹೋದ ಬಾದಶಹರ ಸಂತಸವು ಮರಳಿ ಬಂದಿದೆ ಎಂಬ ಅರಿವಾಯಿತು. ಅಂದು ಎಲ್ಲರೊಡನೆಯೂ ಪಚ್ಚು ಭೋಜನವನ್ನು ಸ್ವೀಕರಿಸಿದರು. ಮಸೀದೆಗೆ ತೆರಳಿ ಅಲ್ಲಾನಿಗೆ ಪ್ರಾರ್ಥನೆಯನ್ನು ಸಲ್ಲಿಸಿ ಬಂದರು. ಅವರು ತಮ್ಮ ಆಯುಷ್ಯದಲ್ಲಿಯೇ ಮಾಡಲಾರದಷ್ಟು ಕಾರ್ಯಗಳನ್ನು ಅಂದು ಪೂರಯಿಸಿದರು.

ಮರುದಿವಸ, ಭಟ್ಟಂಗಿಗಳು ಬಾದಶಹರ ಸ್ತುತಿ ಮಾಡಿ ಅರ್ಧ ಘಂಟೆಯಾದರೂ ಬಾದಶಹರು ಹೊರಬರಲಿಲ್ಲ. ಪರಿಚಾರಕರು ಪ್ರಾತಃಕಾಲದ ವಿಧಿಗಾಗಿ ಎಲ್ಲಸಿದ್ಧತೆ ಮಾಡಿನಿಂತರೂ, ದೊರೆಗಳ ಆಗಮನವೇ ಇಲ್ಲ. ಸೂರ್ಯನು ಒಂದು ಮಾರು ಏರಿ ನೆತ್ತಿಯ ಮೇಲೆ ಬಂದಾಗ, ಯುವರಾಜರಿಗೆ ಈ ವಾರ್ತೆ ತಿಳಿಯಿತು. ಬಾದಶಹರ ಕೋಣೆಯಲ್ಲಿ ಹೋಗಿ ನೋಡುತ್ತಾರೆ. ಏನಿದೆ? ವಿಷಪ್ರಾಶನ ಮಾಡಿ ಅವರು ಜೀವನಯಾತ್ರೆಯನ್ನು ಪೂರಯಿಸಿಬಿಟ್ಟಿದ್ದಾರೆ. ಜನವೆಲ್ಲವೂ ಸೇರಿತು. ಬಳಿಯಲ್ಲಿ ಅವರದೇ ಹಸ್ತಲಿಖಿತ ಚೀಟಿಯೊಂದಿತ್ತು: “ನಾನು ಧರ್ಮಸಂಸ್ಥೆಗೆ ಒಂದು ಕೋಟಿ ಸುವರ್ಣದ ಮೋಹರುಗಳನ್ನು ಕೊಡುವ ವಾಗ್ದಾನವನ್ನು ಮಾಡಿದ್ದೆ. ಆದರೆ ನನ್ನ ಮಗನು ಯುವರಾಜನಾದ ಮೇಲೆ, ನನಗೆ ಒಂದು ಕವಡೆಕೂಡ ದೊರೆಯದಾಯಿತು. ನನ್ನ ವಚನವನ್ನು ಪೂರಯಿಸದೆ ಹೋಗಿದ್ದರೆ ನಾನು ನರಕಕ್ಕೆ ಹೋಗಬೇಕಿತ್ತು. ಆದಕ್ಕೆ ನನ್ನ ರಾಜ್ಯವನ್ನು ದಿಲ್ಲಿಯ ಸಮ್ರಾಟರಿಗೆ ಅಡವು ಹಾಕಿ, ಹಣವನ್ನು ದಾನಕ್ಕಾಗಿ ಕೊಟ್ಟಿದ್ದೇನೆ. ನನ್ನ ದಾನದ ವಚನವು ಪೂರ್ತಿಯಾದ ಮೇಲೆ ನನಗೆ ಮರಣವು ಅಷ್ಟೊಂದು ಭೀತಿಯದಾಗಿ ತೋರಲಿಲ್ಲ. ನನ್ನ ಸಾವಿಗೆ ನಾನೇ ಹೊಣೆ. —ಬಾದಶಹ” ಯುವರಾಜರು ಇದನ್ನೋದಿ ತಪ್ತರಾದರು. ಇದೆಲ್ಲದಕ್ಕೂ ದರ್ಮದರ್ಶಿಗಳೇ ಕಾರಣರೆಂದು ಅವರ ಮೇಲೆ ಕೋಪಗೊಂಡರು. ಯಥೋಚಿತವಾಗಿ ಬಾದಶಹರ ಕೊನೆಯ ಯಾತ್ರಾಸಮಾರಂಭವನ್ನು ನೆರವೇರಿಸಿದರು. ಮುಂದೆ ನಾಲ್ಕೇ ದಿನಗಳಲ್ಲಿ ದಿಲ್ಲಿಯ ಅಧಿಕಾರಿಗಳು ಬಂದು, ರಾಜಧಾನಿಯನ್ನು ಹೊಕ್ಕು, ಎಲ್ಲ ಸೂತ್ರಗಳನ್ನೂ ವಶಪಡಿಸಿಕೊಂಡರು. ಧರ್ಮದರ್ಶಿಗಳು ಯುವರಾಜರನ್ನು ಕರೆಯಿಸಿಕೊಂಡು ಸಾಂತ್ವನಗೊಳಿಸಿದರು. ಅವರಿಗೂ ನಿಜಕ್ಕೂ ಬಾದಶಹರು ಮಾಡಿದ ಕಾರ್ಯದ ಅರಿವಿರಲಿಲ್ಲ. ಆದರೆ ಯುವರಾಜರು ಹಾಗೂ ಅವರ ಅನುಯಾಯಿಗಳು ಈ ಕಾರಸ್ಥಾನದ ಹೊಣೆಯನ್ನು ಧರ್ಮದರ್ಶಿಗಳ ಮೇಲೆ ಹೊರಸಿದ್ದರು. ಬಾದಶಹರ ರಾಜ್ಯವನ್ನು ಕಳೆದ ಧರ್ಮದರ್ಶಿಗಳನ್ನು ಕೊಂದಾದರೂ ಸೇಡನ್ನು ತೀರಿಸಿಕೊಳ್ಳಬೇಕೆಂದು ಯುವರಾಜರು ಬಯಸಿದರು.

ಅತ್ತ ಧರ್ಮದರ್ಶಿಗಳು ತಮ್ಮ ಸಂಸ್ಥೆಯ ಸಂಪತ್ತನ್ನೆಲ್ಲಾ ಕಲೆಹಾಕಿ, ತಮ್ಮ ಕಾರ್ಯದರ್ಶಿಯನ್ನು ಅಧಿಕಾರಿಗಳ ಬಳಿ ಕಳಿಸಿದರು. ಅಧಿಕಾರಿಗಳು ಧರ್ಮದರ್ಶಿಗಳನ್ನು ಕರೆದು ವಸ್ತುಸ್ಥಿತಿಯನ್ನು ವಿವರಿಸಿದರು. ಬಾದಶಹರು ಅಪಾರ ಸಂಪತ್ತನ್ನು ಇಸಿದುಕೊಂಡಿದ್ದರಂತೆ. ಯುವರಾಜರು ಸಮಯಸಾಧಿಸಿ ಧರ್ಮದರ್ಶಿಗಳ ಭೋಜನದಲ್ಲಿ ವಿಷವನ್ನು ಬೆರಸಿದರು. ಅಂದು ರಾತ್ರಿಯೆ ಧರ್ಮದರ್ಶಿಗಳು ಸಂಕಟಪಡಹತ್ತಿದರು. ಯುವರಾಜರನ್ನು ಕರೆದು ಏನೋ ಹೇಳಬೇಕೆಂದು ಬಯಸಿದರು. ಬಾಯಿಯೇ ಹೋಯಿತು. ಅಷ್ಟರಲ್ಲಿ ದಿಲ್ಲಿಯ ಅಧಿಕಾರಿಗಳ ಸೇವಕನೊಬ್ಬನು

(೫೦ನೆಯ ಪುಟ ನೋಡಿರಿ)

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ ಪಿ. ವೆಂಕೋಬಾಚಾರ್ಯ ಬಿ ಎ., ಬಿ. ಟಿ.)

ಬೆಲೆ ಬಾಳುವ ಪುಸ್ತಗಳು ಕಡಿಮೆ ಬೆಲೆಗೆ!

(೧೩-೮-೦) (೯-೮-೦)

೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೨	ಮನೋರಾಜ್ಯ (ಮೂರಂಕದ ನಾಟಕ)	೨-೪-೦
೩	ಮೋಪಾಸನ ಓಲೆಗಳು (ಜೀವನ ಚರಿತ್ರೆ)	೨-೪-೦
೪	ರುಕ್ಮಿಣಿ, (ಕಾದಂಬರಿ)	೨-೦-೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧-೮-೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೮-೦
೭	ಪ್ರವಾದಿ (ಗಿಬ್ರಾನರ “ಪ್ರೊಫೆಟ್”)	೨-೦-೦
		೧೩-೮-೦

ಈ ಮೇಲಿನ ಪುಸ್ತಕಗಳು ಕೇವಲ ೯-೮-೦ ಗೆ
ಅಂಚೆ ವೆಚ್ಚ ಸಹಿತ

ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ — ಪಿ. ವಿ. ಆಚಾರ್ಯ & ಕಂ.
ಹುಬ್ಬಳ್ಳಿ — ಸಂಚಾಲಕರು: ಆನಂದ ಗ್ರಂಥಮಾಲಾ

ಸುಂದರ ಕಾಶ್ಮೀರಕ್ಕೆ ಅನುಕೂಲವಾದ ಮಾರ್ಗ

(ಪಂಚಯಾತ್ಮಕ ಲೇಖನ)

ಭಾರತ ಸರಕಾರದ ವಾರ್ತಾಶಾಖೆಯ ಬೆಂಗಳೂರು ಉಪಕಾರ್ಯಾಲಯದಿಂದ

▲

ಬೇಸಗೆಯ ಬಿಸಿಲಿನ ತಾಪಕ್ಕೆ ಮೈದಾನ ಪ್ರದೇಶಗಳೆಲ್ಲಾ ಒಣಗತೊಡಗಿದಾಗ, ಸೆಕೆಯೊಡನೆ ಧೂಳಿನ ಹಾವಳಿಯೂ ಮಿತಿಮೀರುತ್ತದೆ. ಇಂತಹ ನಡುಬೇಸಗೆಯಲ್ಲಿ ಹಿಮಾಚ್ಛಾದಿತವಾದ ಗಿರಿಶಿಖರಗಳನ್ನು ಹಾಗೂ ಗೊಂಡಾರಣ್ಯಗಳನ್ನು ಹಾದು ಸಮಭೂಮಿಗಳಲ್ಲಿ ಹರಿಯುತ್ತಿರುವ ಗಿರಿನದಿಗಳ ಕನಸು ಕಾಣುವುದು, ಅತಿಪುರಾತನ ಕಾಲದಿಂದಲೇ ಇಳಿದು ಬಂದ ಭಾರತೀಯರ ವೈಶಿಷ್ಟ್ಯವೆನ್ನಬಹುದು. ಇದಕ್ಕೆ ಸಂಸ್ಕೃತಸಾಹಿತ್ಯದಲ್ಲಿ ಸಾಕಾದಷ್ಟು ಆಧಾರಗಳನ್ನು ಕಾಣಬಹುದು. ಸಮಭೂಮಿಗಳಲ್ಲಿ ಜನರು ಪಡುವ ಸಂಕಟದಿಂದಲೇ ಪರ್ವತಶಿಖರಗಳು ಪವಿತ್ರ ಸ್ಥಳಗಳೆಂದೂ ದೇವತೆಗಳ ಆವಾಸವೆಂದೂ ಭಾರತೀಯರ ಮನಸ್ಸಿನಲ್ಲಿ ಅಚ್ಚೊತ್ತಲು ಕಾರಣವಾಗಿರಬೇಕು. ದೇವತೆಗಳು ಮಾತ್ರವಲ್ಲ, ಭೂಪಾಲರಿಂದ ಹಿಡಿದು ಗೋಪಾಲರವರೆಗೂ ಭಾರತದಲ್ಲಿ ಬೇಸಗೆಯಲ್ಲಿ ತಂಪಾದ ಪ್ರದೇಶಗಳಿಗೆ ಹೋಗಬೇಕೆಂದು ಬಯಸದವರಿಲ್ಲ.

ಕಾಶ್ಮೀರವು ಬೇಸಗೆಯ ವಾಸಕ್ಕೆ ಅನುಕೂಲವಾದ ಸಕಲ ಸೌಕರ್ಯಗಳಿಂದ ತುಂಬಿತುಳುಕುತ್ತಿದೆ. ಸರ್ವದಾ ಹಿಮ ತುಂಬಿದ ಗಿರಿಶಿಖರಗಳು, ಹಸುರು ಹಸುರಾದ ಸುಂದರ ಕಣಿವೆಗಳು, ಮನಮೋಹಕವಾದ ನೂರಾರು ಸರೋವರಗಳು, ಕಣ್ತಣಿಸುವ ನೀರಿನ ಬುಗ್ಗೆಗಳು, ಮಂಜುಳನಿನಾದದಿಂದ ಹರಿಯುವ ನದಿ-ನದಗಳು, ಸಮಭೂಮಿಯಲ್ಲಿರುವ ಎಂತಹವನ ಹೃದಯವನ್ನಾದರೂ ಮುಗ್ಧಗೊಳಿಸದೆ ಇರಲಾರವು. ಇದುವರೆಗೂ ಈ ಸುಂದರ ಸ್ಥಳಕ್ಕೆ ಪ್ರಯಾಣ ಮಾಡುವುದೆಂದರೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಮಾರ್ಗದ ಕಷ್ಟ ಹಾಗೂ ಮಿತಿಮೀರಿದ ಪ್ರಯಾಣ ವೆಚ್ಚದಿಂದಾಗಿ ಹಿಂದಿನ ಕಾಲದಲ್ಲಿ ಕೆಲವೇ ಮಂದಿ ಕಾಶ್ಮೀರವನ್ನು ನೋಡಿ ಆನಂದಿಸಬಹುದಾಗಿತ್ತು. ರಾಜ-ಮಹಾರಾಜರುಗಳು ಕೆಲವು ವ್ಯಾಪಾರಿಗಳು ಹಾಗೂ ಸಂನ್ಯಾಸಿಗಳು ತಂಡತಂಡವಾಗಿ ಪ್ರಯಾಣ ಮಾಡಿದ ವಿಷಯಗಳನ್ನು ಮಾತ್ರ ಚರಿತ್ರೆಗಳಲ್ಲಿ ನಾವು ಓದುತ್ತಿದ್ದೇವೆ. ಸಾಮಾನ್ಯ ಜನರಿಗೆ ಕಾಶ್ಮೀರದ ಸೌಂದರ್ಯವನ್ನು ಕಾವ್ಯಗಳಲ್ಲಿ ಓದಿ ತಿಳಿದುಕೊಳ್ಳಲು ಮಾತ್ರ ಸಾಧ್ಯವಾಗಿತ್ತಲ್ಲದೆ, ಪ್ರತ್ಯಕ್ಷ ಕಂಡು ಆನಂದಿಸುವ ಭಾಗ್ಯವೇ ಇದ್ದಿಲ್ಲ.

ದೆಹಲಿಯಿಂದ ಶ್ರೀನಗರಕ್ಕೆ ಹೋಗಿ ಬರಬೇಕಾದರೆ ಮೊಗಲ ಚಕ್ರವರ್ತಿಗಳಿಗೆ ಮೂರು ತಿಂಗಳ ಕಾಲ ಬೇಕಾಗುತ್ತಿತ್ತು. ಒಮ್ಮೆ ಚಕ್ರವರ್ತಿ ಜಹಾಂಗೀರನು ತನ್ನ ರಾಣಿಯೊಂದಿಗೆ, ಜನೆವರಿಯಲ್ಲಿ ದೆಹಲಿಯಿಂದ ಹೊರಟು, ಮಾರ್ಚ್ ತಿಂಗಳಲ್ಲಿ ಕಾಶ್ಮೀರವನ್ನು ತಲುಪಿದನು. ಚಕ್ರವರ್ತಿ ಮತ್ತು ರಾಣೀವಾಸದವರನ್ನು ಸಾಗಿಸಲು ನೂರು ಆನೆಗಳೂ ಬೆಂಗಾವಲಿಗೆ ಸಾವಿರಾರು ಮಂದಿ ರಾವುತರೂ ಹೋಗಿದ್ದರು. ಅಲ್ಲದೆ ಅನೇಕ ಮಂದಿ ಕಾಲ್ನಡೆಯಲ್ಲೇ ಹೋಗಿ ರಾತ್ರಿ ದಣಿವಾರಿಸಲು ಯೋಗ್ಯ ವಸತಿಗಳನ್ನೇರ್ಪಡಿಸಿದ್ದರು. ಮೊಗಲರ ಕಾಲದಲ್ಲಿ ಮೂರು ತಿಂಗಳು ಹಿಡಿದ ದಾರಿಗೆ, ಇಂದು ವಿಮಾನದ ಮೂಲಕ ಮೂರುವರೆ ಗಂಟೆಗಳೇ ಸಾಕಾಗುವುದು. ವಿಮಾನ ಮಾರ್ಗದ ವೆಚ್ಚವು ಸಾಮಾನ್ಯ ಜನರಿಗೆ ಅನುಕೂಲವಾಗಿಲ್ಲದಿದ್ದರೂ ರೇಲ್ವೆ ಹಾಗೂ ಉತ್ತಮರಸ್ತೆಗಳ ಮೂಲಕ ೪೦ ಗಂಟೆಗಳಲ್ಲಿ ಪ್ರಯಾಣ ಮಾಡುವ ಸೌಕರ್ಯವಿದೆ. ಈ ಅವಧಿಯಲ್ಲಿ ಒಂದು ರಾತ್ರಿಯ ವಿಶ್ರಾಂತಿಯೂ ಸೇರಿದೆ. ವಿಮಾನ ಪ್ರಯಾಣಕ್ಕಿಂತ ೩/೪ ದಷ್ಟು ಮಾತ್ರ ಕಡಿಮೆ ವೆಚ್ಚವಾಗಬಹುದು.

ದೆಹಲಿಯಿಂದ ಕಾಶ್ಮೀರದ ಮೇಲ್ ಗಾಡಿಯನ್ನೇರಿದರೆ, ಮೊದಲನೆಯ ೩೦೦ ಮೈಲುಗಳ ದೂರವನ್ನು ರಾತ್ರಿ ೧೨ ಗಂಟೆಗಳ ಕಾಲದಲ್ಲಿ ಪ್ರಯಾಣ ಮಾಡಿ, ಪಠಾನ್‌ಕೋಟ ಎಂಬಲ್ಲಿಗೆ ತಲುಪಬಹುದು. ಇಲ್ಲಿಂದ ಶ್ರೀನಗರಕ್ಕೆ ೨೬೭ ಮೈಲುಗಳು. ರೈಲಿಳಿದು ಒಂದು ಗಂಟೆಯೊಳಗೆ ಕಾಶ್ಮೀರ.

ಸರ್ಕಾರದ ಸ್ಟೇಷನ್ ವ್ಯಾಗನ್ ಅಥವಾ ಬಸ್ಸನ್ನು ಹತ್ತಿ ಪ್ರಯಾಣವನ್ನು ಮುಂದುವರಿಸಬಹುದು.

ಪಂಜಾಬಿನ ಸುಂದರವಾದ ನದಿಗಳನ್ನು ದಾಟಿ ಇಲ್ಲವೆ ಸುತ್ತಿಕೊಂಡು ರಸ್ತೆ ಸಾಗುತ್ತದೆ. ಪಠಾನ್‌ಕೋಟದ ಸಮೀಪದಲ್ಲೇ ಬೀಸ್ ನದಿಯಿದೆ. ಇದು ಕುಲು ಕಣಿವೆಯಿಂದ ಹರಿದು ಸಟ್ಲೇಜ್ ನದಿಯೊಡನೆ ಸೇರಿಕೊಳ್ಳುವುದು. ಪಠಾನ್‌ಕೋಟ್‌ನಿಂದ ೬೦ ಮೈಲಿಗಳ ದೂರದಲ್ಲಿ ಜಮ್ಮು ನಗರವಿದೆ. ಇದು ಪುರಾತನ ದೇವಾಲಯಗಳಿಂದ ತುಂಬಿದೆಯಲ್ಲದೆ, ಒತ್ತಿಗೆ ರಾವೀ ನದಿಯೂ ಇಲ್ಲಿ ಹರಿಯುತ್ತದೆ. ಇಲ್ಲಿಯ ಸರ್ಕಾರಿ ಪ್ರಯಾಣಿಕರ ಬಂಗಲೆಯಲ್ಲಿ ಪ್ರಯಾಣಿಕರಿಗೆ ವಸತಿಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಜಮ್ಮುವಿನಿಂದ ರಾವೀನದಿಯ ತೀರದಲ್ಲೇ ರಸ್ತೆ ಸಾಗುತ್ತದೆ. ೪೦ ಮೈಲಿ ದೂರದಲ್ಲಿ ಉದಯಪುರವಿದೆ. ಇಲ್ಲಿಂದ ರಸ್ತೆ ಪರ್ವತದ ಮೇಲೆ ಸಾಗುತ್ತ, ಸಮುದ್ರಮಟ್ಟಕ್ಕಿಂತ ೯೦೦೦ ಅಡಿಗಳಷ್ಟು ಎತ್ತರದಲ್ಲಿ ಮುಂದುವರಿಯುವುದು. ಭಾರತದ ಮಹಾಮಾರ್ಗಗಳಲ್ಲಿ ಇದು ಅತ್ಯಂತ ಉತ್ತರದ ಮಾರ್ಗವಾಗಿದೆ. ಈ ಮಾರ್ಗವು ಅಡಿಯಿಂದ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

1

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಎರೆದು ಧೂಪವ ಹಾಕಿ ಹೊಚ್ಚ ಬೆಚ್ಚಗೆ ತುಂಬುದೊಟ್ಟಿಲನು ತೂಗಿ
ಮೆಲ್ಲನುಲಿಯಲಿ ಇವಳು ಜೋಗಳುವ ಹಾಡುತಿರೆ
ಹೊಮ್ಮಿಬರುವುದು ಇವಗು ಕಾವ್ಯಸ್ಫೂರ್ತಿ !
ಯಾವ ದೈವಿಕಭಾಷೆ, ಯಾವುದೋ ಧಾಟಿ—
ಹಾಡಿಯೇ ಹಾಡುವನು ಕಂಠಪೂರ್ತಿ !
ತೂಗಿದವರಿಗೆ ಬಂತು ತೂಕಡಿಕೆ ಎಂದಾಗ,
ಹಾಡು ಮುಗಿವುದು ಕನಸಿನಲ್ಲಿ ಕರಗಿ.

ಏರಿ ಗಗನಕೆ ಹಾರಿ ತೂರಿ ಬಿನ್ನಾಣದಲಿ
ಬಗೆಬಗೆಯ ಲಾಗಹಾಕಿ
ಗೂಡಿಗಿಳಿವುದು ಪಾರಿವಾಳ ನೆಟ್ಟಗೆ ಬಂದು
ಬಾನಿನಲಿ ಸಂಜೆಯಾಗಿ.

ದಡಸೂಸಿ ಹರಿವ ನದಿ ಮಡುವಾಗಿ ನಿಂತಂತೆ
ಇರುಳಿನಲಿ ಇವನ ನಿದ್ದೆ;
(ನಿದ್ದೆಯಲ್ಲೂ ಮುಖವು ಮುದ್ದು ಮುದ್ದೇ)
ನಡುವೆ ಏನೋ ಕನಸು, ತುಟಿಯಂಚಿನಲಿ
ಮಿಂಚು—
ಮೂಡಿ ಮರೆಯಾಗುವುದು ದಿನದ ಬೆಳಕು !
ಕೊಳದ ತಳದಿಂದ ಮೇಲೆದ್ದು ಮುಳುಗಲು ಮೀನು
ಥಳಥಳಿಸಿ ಹೊಳೆಯುವೊಲು ನೀರಿನಂಚು.
ಎಲ್ಲ ಒಲವಿನ ಸೂತ್ರಹಿಡಿದು ಆಡಿಸುತಿಹನು
ಆನಂದದುಯ್ಯಾಲೆ ಒಳಗು ಹೊರಗು !
ಸೂರ್ಯ-ಚಂದ್ರರು ದಿನವು ಮೂಡಿ ಬೆಳಕಾಡಿದರು
ಇವನಿಂದಲೇ ನಮಗೆ ಬೈಗು-ಬೆಳಗು !

ಮಂದಾರ ಕುಸುಮ

ಶ್ರೀ. ರಾ. ಸು. ವೈಲಾಯ, ಉಡುಪಿ

೧

ಮನಸಿನೊಳಗಿಂದ ಸುರಮಂದಾರ ಸುಮವಾಗಿ
ಓ ಮುಗುದ ಭಾವಗಳೆ ಹುಟ್ಟಿಬನ್ನಿ;
ನೈರ್ಮಲ್ಯದನುರಾಗ ಸತ್ಯಗಂಧವ ಹೀರಿ
ಪ್ರಾಮಾಣಿಕ ಶ್ವೇತವರ್ಣ ತನ್ನಿ !

೨

ಅನುಭವದ ಸಾರದಲಿ ದೃಢತೆ ನೇಗಿಲ ಹರಿಸಿ
ಹೃದಯಭೂಮಿಯನುತ್ತು ಬಿತ್ತಿ
ಕರ್ತವ್ಯದಾ ನೀರ ಕಾಲಕಾಲಕೆ ಸುರಿಸಿ
ಜ್ಞಾನಜ್ಯೋತಿಯ ಬೀಜಬಿತ್ತಿ—

೩

ಯಾವ ದೇವರ ದಯೆಯೊ ಬಳುಕುತಿಹೊಂಬಿಸಿಲೊಡೆದು
ಪ್ರೇಮಾಮೃತದ ಸಂಚಾರವಾಯ್ತು.
ವಿಶ್ವಾಸ, ಗೆಲವು, ಸಂತೋಷ ಚಿಗುರೊಡೆಯುತಿರೆ
ಕಾರುಣ್ಯಮೂರ್ತಿ ಶುಭ ಹರಸಿ ಹೋಯ್ತು !

೪

ಸರಳಸೌಜನ್ಯತೆಯ ಕೇಸರಗಳರಳಿರಲಿ
ಚೆಲುವು ತನ್ನಷ್ಟದಳ ತೆರೆದು ಬರಲಿ,
ತಾಳ್ಮೆ ತಂಪಿನಗಾಳಿ ಹೆದೆಯಾಡಿಸುತ್ತಿರಲಿ
ದಿವ್ಯಶಾಂತಿಯು ವಿಶ್ವ ಮಾಟವಿರಲಿ !

ಯೌವನ

ಶ್ರೀ. ರಾ. ಸು. ವೈಲಾಯ, ಉಡುಪಿ

ಶಾಂತ ಸರಳದ ಅಂತರಾಳದೊಳಗಿಂದೊಂದು
ಮೋನ ಮೊರೆ-ಮೊರೆಯುತಿಹುದು !
ಬಾನಬಯಲೊಳು ನೀಲಮಣಿ ಮುಗಿಲ ಸುಳಿಯೊಂದು
ನಲಿನಲಿದು ಸಾಗುತಿಹುದು.

ಇಳೆವೆಣ್ಣು ಚೆಂಬಣ್ಣದಂಚಿನುಡುಗೆಯನೊಗೆದು
ಹಸಿರುಟ್ಟು ಹಾಸುತಿಹಳು-
ಸರಸಿ ಶೃಂಗಾರದಲಿ ಹರುಷ ತಣ್ಣೀರಿನಲಿ
ಪ್ರೇಮಧುನಿಧುನಿಸುತಿಹಳು !

ಬಾಳ ಬೃಂದಾವನದಿ ಕನಸು ಮಲ್ಲಿಗೆ ಮುಗುಳು
ಮೆಲ್ಲನೆಯ ಕುಸುಮಿಸಿಹುದು-
ತಿಳಿವು ಮರುಭೂಮಿಯಲಿ ಯಾವುದೋ ಕೋಕಿಲೆಯು
ಇರದಿರದೆ ಕುಕಿಲುತಿಹುದು !

ಎನ್ನ ಮನವೇತಕೋ ಅರಳಿ ಅಂಬರವಾಗಿ-
ಚಿತ್ರಚಿನ್ಮಯ ಜಿಂಕೆಮರಿಯು !
ಬಗೆಯು ಮುಕ್ತಾವಳಿಯ ಬಯಕೆ-ಭಾವಗಳಿಂದ
ಹೃದಯ ಸಾವಿರ ತಾನ ಧುನಿಯು !

ಗರ್ಭಿಣಿಯ ತೆರದಿ ಸಂಭ್ರಮದಿ ಚಿಗಿಚಿಗಿಯುತಿದೆ
ಈತನುವಿದಾವ ಅರಕೆ ?
ಅಂತರಂಗದ ಸುಮನಸರಳಿ ಅನುವಾಗುತಿದೆ-
ನೂತನವಿದಾರ ತಿರಕೆ ??

ಸಣ್ಣಕತೆಗಳ ಮೇಲಾಟದ ವರದಿ

(ಸಂಪಾದಕ ಮಂಡಲಿಯಿಂದ)

ಮೊದಲುನುಡಿ

ಜಯಂತಿಯು ೧೬ ವರ್ಷದ ಜೀವನದಲ್ಲಿ ೮ನೆಯ ಸಲ ಏರ್ಪಡಿಸಿದ ಸಣ್ಣಕಥೆಗಳ ಮೇಲಾಟವಿದು. ವಿಷಾದದ ಸಂಗತಿಯೊಂದೆಂದರೆ: ಈ ಸಲದಷ್ಟು ನಿರುತ್ಸಾಹ ಹಿಂದಿನ ಯಾವ ಮೇಲಾಟದಲ್ಲಿಯೂ ಅನುಭವಕ್ಕೆ ಬಂದಿರಲಿಲ್ಲ. ಮೇಲಾಟಕ್ಕೆ ಕಥೆಗಳು ಬರುವ ಗತಿಯು ನಿಧಾನವಾಗಲುತೊಡಗಿದುದರಿಂದಲೇ, ಅವಧಿಯನ್ನು ಮುಂದೆ ಎರಡು ತಿಂಗಳಷ್ಟು ಎಳೆಯಬೇಕಾಯಿತು. ಆದರೂ ಬಂದ ಕಥೆಗಳ ಸಂಖ್ಯೆಯು ತೃಪ್ತಿಕರವೆನಿಸುವಂತೇನೂ ಇಲ್ಲ.

ಒಂದು ಕಾಲ ಹೀಗಿದ್ದಿತು: ಕನ್ನಡದಲ್ಲಿ ಯಾರಾದರೂ ಸಣ್ಣಕತೆಗಳನ್ನು ಬರೆದಾರೆಯೋ?— ಎಂದು. ಅಂದು ಬರೆದವರು ಒಬ್ಬೊಬ್ಬರಾಗಿ ಮುಂದೆಬಂದರೂ, ಕನ್ನಡಿಗರಿಗೆ ಒಳ್ಳೆಯ ಸಣ್ಣಕತೆಗಳನ್ನು ಒದಗಿಸಿಕೊಟ್ಟರು. ಅವರು ಬರೆದು ಒದಗಿಸಿದುವುಗಳಲ್ಲಿ, ಬರಡುಕತೆಗಳು ತೀರ ಕಡಿಮೆಯಾಗಿದ್ದುವು.

ಇಂದು ಸಣ್ಣಕತೆಗಳನ್ನು ಬರೆಯುವ ಕನ್ನಡ ಬರೆಹಗಾರರು ತುಂಬ ಜನರು. ತರುಣ ಲೇಖಕರು ಹೆಚ್ಚಾಗಿ ತಮ್ಮ ಕೃತಿನಿರ್ಮಿತಿಯನ್ನು ಪ್ರಾರಂಭಿಸುವುದು ಸಣ್ಣಕತೆಗಳಿಂದಲೇ ಎಂಬುದನ್ನು ಯಾರೂ ಕಂಡುಕೊಳ್ಳಬಹುದಾಗಿದೆ. ಅದರಂತೆಯೆ ಇಂದು ಪ್ರಕಟವಾಗುತ್ತಿರುವ ಎಲ್ಲ ಬಗೆಯ ನಿಯತಕಾಲಿಕಗಳೂ ಸಣ್ಣಕತೆಗಳ ಪ್ರಕಟನೆಗೆ ಸಾಕಷ್ಟು ಅವಕಾಶವನ್ನು ಕೊಡುತ್ತಲಿವೆ. ಗ್ರಂಥಪ್ರಕಾಶನಸಂಸ್ಥೆಗಳು ಸಣ್ಣಕತೆಗಳ ಸಂಕಲನಗಳನ್ನು ಎಣಿಕೆಗೆ ನಿಲುಕದಷ್ಟು ಪ್ರಕಟಿಸುತ್ತಲಿವೆ.

ಸಾಹಿತ್ಯಪ್ರಪಂಚದಲ್ಲಿ ಸಣ್ಣಕತೆಯ ಸ್ಥಾನವೇನೂ ಕಡಿಮೆಯದಲ್ಲ. ಬಹುಶ್ರುತನಾದ ಸಣ್ಣಕತೆಗಾರ, ತನ್ನ ಕೃತಿಗಳಲ್ಲಿ ರಸಲೋಕಗಳನ್ನೂ ಸೃಷ್ಟಿಸಬಲ್ಲ; ತತ್ತ್ವಜ್ಯೋತಿಗಳನ್ನೂ ಬೆಳಗಿಸಬಲ್ಲ. ಒಳ್ಳೆಯ ಸಣ್ಣಕತೆಗಳು ನಿತ್ಯನಿತ್ಯವೂ ಪ್ರತಿಯೊಂದು ಭಾಷೆಯಲ್ಲಿ ಹುಟ್ಟುತ್ತಿರಲೇಬೇಕು. ಆ ಆ ಭಾಷೆಯಲ್ಲಿಯ ಕತೆಗಾರರ ಕೃತಿಗಳು ರಸಿಕರ ಒರೆಗೆ ಹತ್ತಿನಿಲ್ಲಬೇಕು. ಹೀಗೆ ಒರೆಗೆ ಹತ್ತಿನಿಲ್ಲಬೇಕಾದರೆ, ಆಗಾಗ—ಗಂಭೀರ ರೀತಿಯಲ್ಲಿ—ಮೇಲಾಟಗಳನ್ನು ಏರ್ಪಡಿಸಬೇಕಾಗುವುದು. ಜಯಂತಿ ಇದೇ ಉದ್ದೇಶವನ್ನಿರಿಸಿಕೊಂಡೇ ಆಗಾಗ ಸಣ್ಣಕತೆಗಳ ಮೇಲಾಟಗಳನ್ನು ಏರ್ಪಡಿಸುತ್ತ ಬಂದಿದೆ.

ವಸ್ತುವಿನ ಬಾಹುಲ್ಯವಾದಾಗಲೇ ಅದರಲ್ಲಿಯ ತರ-ತಮಗಳನ್ನು ಪರೀಕ್ಷಿಸಿ ನಿರ್ಣಯಿಸಲು ಅನುಕೂಲವಾಗುವುದು. ಇಂದು ಸಣ್ಣಕತೆಗಳ ಸಂಖ್ಯೆ, ಎಲ್ಲ ದೇಶಗಳಲ್ಲಿಯೂ ವಿಪರೀತವಾಗಿ ಬೆಳೆಯುತ್ತಲಿದೆ. ಆದುದರಿಂದಲೇ ಅವುಗಳಲ್ಲಿಯ ತರ-ತಮಗಳನ್ನು ನಿರ್ಣಯಿಸುವುದಕ್ಕಾಗಿ, ಎರಡು ವರ್ಷಗಳಿಂದಲೂ ಜಾಗತಿಕ ಸಣ್ಣಕತೆಗಳ ಮೇಲಾಟವನ್ನು ನಡೆಯಿಸಲಾಗುತ್ತಿದೆ. ಇದೊಂದು ಶುಭಲಕ್ಷಣವೇ ಸರಿ! ವ್ಯಕ್ತಿಯ ಕಲೆಯ ಮೇಲ್ಮೆಯನ್ನು ವಿಶಾಲ ಜಗತ್ತಿನಲ್ಲೆಲ್ಲ ಮೆರೆಯಿಸಲು ಇದು ಅನುಕೂಲವಾದ ಮಾರ್ಗ. ಕತೆಗಾರನಾದ ವ್ಯಕ್ತಿಗೂ ಒಳ್ಳೆಯದು; ಅವನು ಹುಟ್ಟಿ ಬೆಳೆದ ನಾಡಿಗೂ ಹೆಮ್ಮೆಯನ್ನು ಒದವಿಸುವಂತಹದು.

ಮೇಲಾಟದಲ್ಲಿ ಭಾಗವಹಿಸಿ ತನ್ನ ಕೃತಿಯನ್ನು ಒರೆಗೆ ಹಚ್ಚಿಕೊಳ್ಳುವುದಕ್ಕೆ ಯಾವ ಕಥಾಲೇಖಕನೂ ಸಂಕೋಚಗೊಳ್ಳಕೂಡದು. ಹೆದರಿ ಹಿಂಜರಿಯಕೂಡದು. ಸಂಕೋಚ-ಹೆದರಿಕೆಗಳಿಂದ ಹಿಂದೆ ಸರಿದರೆ, ಲೇಖಕರ ಪ್ರಗತಿಗೆ ಒಂದು ಬಗೆಯ ಹಾನಿಯೇ ಸರಿ! ಒಳ್ಳೆಯದೇ ಆಗಿರುವ ಕೃತಿಯು ವಿಮರ್ಶಕರಿಂದ ಮನ್ನಣೆ ಪಡೆದೇ ಪಡೆಯುವುದು. ಒಳ್ಳೆಯದಲ್ಲದ ಕೃತಿಯಾದರೆ, ಮೇಲಾಟದ ಮೂಲಕ ಅದರ ಸ್ಥಾನ ನಿರ್ಣಯವಾಗಿ, ತನ್ನ ಕೃತಿಯು ಯಾವ ಮಟ್ಟದಲ್ಲಿದೆಯೆಂಬುದು ಚೆನ್ನಾಗಿ ಕಂಡುಬಂದು, ಮಾಡಿಕೊಳ್ಳಬೇಕಾದ ಸುಧಾರಣೆಗಳ ಕಲ್ಪನೆಯುಂಟಾಗಬಹುದು.

ಅನೇಕ ಜನ ತರುಣ ಕತೆಗಾರರು, ಒಳ್ಳೆಯ ಕೃತಿಗಳನ್ನು ನಿರ್ಮಿಸಿದ್ದರೂ, ಮಂದಿಗೆ ತೋರಿಸಲು ಹೆದರಿ ಹಾಗೆಯೆ ಅವುಗಳನ್ನು ಮುಚ್ಚಿ ಮುಚ್ಚಿ ಇರಿಸುವರು. ಅಂತಹರು ಮೇಲಾಟಗಳಲ್ಲಿ ಭಾಗವಹಿಸುವುದರಿಂದ, ವಿಮರ್ಶಕರಿಂದ ಯೋಗ್ಯ ಮನ್ನಣೆ ದೊರೆತು, ಅವರ ಲೇಖನಕಲೆಯು ವಿಕಾಸಗೊಳ್ಳಬಹುದಾಗಿದೆ. ಇದು ನಾಡಿನ ಸಾಹಿತ್ಯಸಂವರ್ಧನೆಗೂ ಯೋಗ್ಯಮಾರ್ಗವನ್ನು ಮಾಡಿಕೊಡುವುದು

ಜಯಂತಿಯ ದೃಷ್ಟಿ ಯಾವಾಗಲೂ ವಿಶಾಲವಾದುದು. ನಾಡಿನ ತರುಣರಲ್ಲಿ ಸಾಹಿತ್ಯನಿರ್ಮಿತಿಯ ಆತ್ಮವಿಶ್ವಾಸವನ್ನು ಹುಟ್ಟಿಸಬೇಕೆಂಬುದು ಅದರ ಆಕಾಂಕ್ಷೆ. ಆದುದರಿಂದಲೇ ಈ ಬಗೆಯ ಮೇಲಾಟಗಳನ್ನು ಆಗಾಗ ಏರ್ಪಡಿಸುವ ಉದ್ದೇಶವನ್ನದು ಇರಿಸಿಕೊಂಡಿದೆ. ಬಹುಮಾನಧನದ ಮೊತ್ತ ಇನ್ನಷ್ಟು ದೊಡ್ಡದಾಗಿ ಆಕರ್ಷಕವಾಗಬೇಕೆಂದು ಜಯಂತಿ ಅಪೇಕ್ಷಿಸುವುದಾದರೂ, ಅದು ಸದ್ಯ ಸಿಕ್ಕಿಕೊಂಡಿರುವ ಆರ್ಥಿಕಶಕ್ತಿ ಆ ಅಪೇಕ್ಷೆಯನ್ನು ತಡೆದು ಹಿಡಿಯುತ್ತದೆ. ಸಾಹಿತ್ಯಪ್ರಿಯರಾದ ಸಿರಿವಂತರು ಯಾರಾದರೂ ಬಹುಮಾನಧನದ ಹೊಣೆಯನ್ನು ಹೊತ್ತರೆ, ಜಯಂತಿಯ ಮೇಲಾಟಗಳು ಇದಕ್ಕಿಂತ ವ್ಯಾಪಕವಾಗಬಹುದು.

ಬಂದಕತೆಗಳ ವಿವರಣೆ:

ಈ ಸಲದ ಮೇಲಾಟದಲ್ಲಿ ೨೮ ಜನ ಕತೆಗಾರರು ಭಾಗವಹಿಸಿದ್ದಾರೆ. ಒಟ್ಟು ಬಂದ ಕತೆಗಳ ಸಂಖ್ಯೆ ೩೦. ಒಬ್ಬರು ಮೂರು ಕತೆಗಳನ್ನು ಕಳುಹಿದ್ದಾರೆ. ಮೇಲಾಟಕ್ಕೆ ಬಂದಿರುವ ಸಣ್ಣಕತೆಗಳ ಅನುಕ್ರಮ ಈ ಬಗೆಯಲ್ಲಿದೆ:

೧ ನಮ್ಮವರು. ೨ **ಕಾರುಣ್ಯಗಂಗಾ.** ೩ ಸಂಸ್ಕಾರಸರ್ಪ. ೪ ದಾರಿಬಿಟ್ಟ ಹೆಣ್ಣು. ೫ ಪರಿತ್ಯಕ್ತೆ. ೬ ಮುಗ್ಧಜಿಂಕೆ. ೭ **ಸಂಗಾತಿ.** ೮ ವರನಿರಾಶಾ. ೯ **ಸಮಸ್ಯೆಯ ಕಳ್ಳ.** ೧೦ ಬಣ್ಣ ಮಣ್ಣುಗೂಡಿತು.

೧೧ ಪ್ರಣಯ ದುರಂತ. ೧೨ ಹಣೆಬರೆಹ. ೧೩ **ಸಮನ್ವಯ.** ೧೪ ಮೋಸ. ೧೫ **ಮಡಿದವಳು ಮರಳಿ ಬಂದಳು.** ೧೬ ಮಂಕೀಭಾವಿ. ೧೭ ದೈವದತ್ತ. ೧೮ ಸಾಹಿತಿಯ ಬಾಳು. ೧೯ ಕ. ಕಾ. ಕೆ. ೨೦ **ಆನಂದು.**

೨೧ ಮದ್ರಾಸಿ ಮಂದಿ. ೨೨ ಪುರುಷಪಿಶಾಚಿ. ೨೩ ೫೦ ರೂ. ದಂಡ. ೨೪ **ವಿಮೋಚನೆ.** ೨೫ ಪ್ರತಿಫಲ. ೨೬ ನಿರ್ದೋಷಿ. ೨೭ **ಮಂಜು** ೨೮ **ಹೀಗೂ ಇದ್ದೀತೆ?** ೨೯ ಯಾರು ಹೊಣೆ? ೩೦ **ಕನಸಿನ ಕನ್ನಡಿ.**

ಮೇಲಾಟಕ್ಕೆ ಬಂದ ಎಲ್ಲ ಕತೆಗಳನ್ನೂ ಮೊದಲು ನಮ್ಮ ಸಂಪಾದಕ ಸಮಿತಿಯವರೇ ನೋಡಿ, ಮೇಲಿನ ಕತೆಗಳ ಪಟ್ಟಿಯಲ್ಲಿ ಸ್ಥೂಲಾಕ್ಷರಗಳಲ್ಲಿ ಅಚ್ಚಾದ ಕ್ರಮಾಂಕ ೨, ೭, ೯, ೧೩, ೧೫, ೨೦, ೨೪, ೨೭, ೨೮, ೩೦ ಹೀಗೆ ಹತ್ತು ಕತೆಗಳನ್ನು ಆಯ್ದು ತೆಗೆದು, ಅವುಗಳನ್ನು ಪರೀಕ್ಷಕರ ಕಡೆಗೆ ಕಳುಹುವುದಾಗಿ ನಿರ್ಣಯಿಸಿದರು. ಸಂಪಾದಕ ಮಂಡಲಿಯ ಮೊದಲನೆಯ ಪರೀಕ್ಷಣದಲ್ಲಿ ಕ್ರಮಾಂಕ ೧, ೩, ೪, ೫, ೬, ೮, ೧೧, ೧೬, ೧೭, ೧೮, ೧೯, ೨೬, ೨೯ ಈ ಹದಿಮೂರು ಕತೆಗಳು, ನೂರರಲ್ಲಿ ಇಪ್ಪತ್ತು ಗುಣಗಳನ್ನು ಕೂಡ ಪಡೆದಿಲ್ಲ. ಮಿಕ್ಕುವೆಲ್ಲ ೨೦ ರಿಂದ ೩೦ರ ವರೆಗೆ ಗುಣಗಳನ್ನು ಪಡೆದ ಕತೆಗಳಾಗಿವೆ.

ಮೇಲಾಟದ ನಿರ್ಣಯ

ನಮ್ಮ ಸಂಪಾದಕರೊಬ್ಬರು ಮೇಲಾಟದ ಪರೀಕ್ಷಕರಾಗಿದ್ದರಲ್ಲದೆ, ಧಾರವಾಡದ 'ಅಂಕುಶ' ವಾರಪತ್ರಿಕೆಯ ಸಂಪಾದಕರೂ ಕತೆಗಾರರೂ ಆದ ಶ್ರೀಮಾನ್ ಜಿ. ಎಸ್. ಹುರಳಿ ಅವರನ್ನೂ, ಸುಪ್ರಸಿದ್ಧ ನಾಟಕಕಾರರೂ ಕತೆಗಾರರೂ ಆದ ಶ್ರೀಮಾನ್ **ಬೇಂದ್ರೆ ಲಕ್ಷ್ಮಣ ರಾಯರನ್ನೂ** ಪರೀಕ್ಷಕರಾಗಿರುವಂತೆ ಬಿನ್ನವಿಸಿಕೊಳ್ಳಲಾಯಿತು. ಅವಧಿ ಕಡಿಮೆಯಿದ್ದರೂ ಅಷ್ಟರಲ್ಲಿಯೇ ಎಲ್ಲ ಪರೀಕ್ಷಕರೂ ತಂತಮ್ಮ ಸೂಕ್ತಅಭಿಪ್ರಾಯಗಳನ್ನು ಸಲ್ಲಿಸಿ, ನಮಗೆ ಸಹಕಾರವನ್ನು ಕೊಟ್ಟರು. ಅದಕ್ಕಾಗಿ ಎಲ್ಲ ಪರೀಕ್ಷಕರಿಗೂ ನಮ್ಮ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ.

ಮೂವರೂ ಪರೀಕ್ಷಕರು, ಸಂಪಾದಕ ಮಂಡಲಿಯು ಆಯ್ದು ಕೊಟ್ಟ ಹತ್ತು ಕತೆಗಳಿಗೆ ಒಂದೊಂದಕ್ಕೂ ನೂರರಲ್ಲಿ ಗುಣಾಂಕಗಳನ್ನು ಕೊಟ್ಟು ನಮಗೆ ಒಪ್ಪಿಸಿದರು. ಮೂವರ ಗುಣಾಂಕಗಳನ್ನೂ ಒಟ್ಟುಗೂಡಿಸಿ, ಗುಣಸಂಖ್ಯಾನುಕ್ರಮದಂತೆ ನೋಡಿದಾಗ:

'ಕನಸಿನ ಕನ್ನಡಿ'

ಎಂಬ ಕತೆಯು ಮೊದಲನೆಯ ಸ್ಥಾನವನ್ನು ಪಡೆಯಿತು.

ಆನಂದು

ಎಂಬ ಕತೆಯು ಎರಡನೆಯ ಸ್ಥಾನವನ್ನು ಪಡೆಯಿತು

ವಿಮೋಚನೆ

ಎಂಬ ಕತೆಯು ಮೂರನೆಯ ಸ್ಥಾನವನ್ನು ಪಡೆಯಿತು.

ಇವುಗಳ ತರುವಾಯ ಅನುಕ್ರಮವನ್ನು ಪಡೆದ ಕತೆಗಳೆಂದರೆ 'ಹೀಗೂ ಇದ್ದೀತೆ?' 'ಸಮನ್ವಯ' 'ಮಂಜು' 'ಸಮಸ್ಯೆಯ ಕಳ್ಳ' ಎಂಬ ಕತೆಗಳು.

ಪರೀಕ್ಷಕರ ಅಭಿಪ್ರಾಯದಂತೆ:

ಈ ಸಲ ಬಂದ ಕತೆಗಳಲ್ಲಿ ಮೊದಲನೆಯ ಬಹುಮಾನಕ್ಕೆ ತಕ್ಕುದಾದ ಕತೆಯು ಒಂದೂ ಇಲ್ಲವೆಂದು ಪರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಸಣ್ಣ ಕತೆಗಾರರ ಸಂಖ್ಯೆ ಇಷ್ಟೊಂದು ಬೆಳೆದಿರುವಾಗ, ಅವರ ಕತೆಗಳಲ್ಲಿಯ ಗುಣಗಳು ಬೆಳೆಯದಿರುವುದು ವಿಷಾದದ ಸಂಗತಿಯಾಗಿದೆ. ಮೊದಲನೆಯ ಬಹುಮಾನಕ್ಕೆ ಅರ್ಹವಾದ ಕತೆಗಳು ಇಲ್ಲವೆಂದು ಪರೀಕ್ಷಕರು ಅಭಿಪ್ರಾಯಪಟ್ಟಿದ್ದರೂ, ಬಹುಮಾನ ಧನದ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ನಾವೇನೂ ಬಯಸುವುದಿಲ್ಲ. ಪ್ರಕಟನೆಯಲ್ಲಿ ಕೊಟ್ಟಿರುವಂತೆ ಮೊದಲ ಸ್ಥಾನಗಳನ್ನು ಪಡೆದ ಮೂರು ಕಥೆಗಳಿಗೆ ಕ್ರಮವಾಗಿ ೨೦, ೧೫, ೧೦ ರೂ. ಗಳನ್ನು ಸಲ್ಲಿಸುವೆವು.

ಬಹುಮಾನ ಪಡೆದ ಕತೆಗಳು

೧ ಕನಸಿನ ಕನ್ನಡಿ

ಈ ಕತೆಯನ್ನು ಬರೆದವರು ಶ್ರೀಮಾನ್ ವೆಂಕಟೇಶ ಮು. ಜೋಶಿ ಅವರು. ಇವರು ತರುಣ ಕತೆಗಾರರಾದರೂ ಕನ್ನಡಿಗರಿಗೆ ಹೊಸಬರಾಗಿಯೇನೂ ಉಳಿದಿಲ್ಲ. ಈಗಾಗಲೇ ಇವರ ಕಥಾಸಂಕಲನಗಳು ೩-೪ ಪ್ರಕಟವಾಗಿದ್ದು, ವಾಚಕರ ಮೆಚ್ಚುಗೆಗೆ ಪಾತ್ರವಾಗಿವೆ. ಮೊದಲು ಸೈನ್ಯಖಾತೆಯಲ್ಲಿ ಸೈನಿಕನಾಗಿ ಕೆಲಸ ಮಾಡುತ್ತ, ಭಾರತವನ್ನೆಲ್ಲ ಸುತ್ತಿದ್ದಾರಲ್ಲದೆ, ಪೂರ್ವದೇಶಗಳಾದ ಬ್ರಹ್ಮದೇಶ, ಮಲಯಾಗಳಲ್ಲಿ ಯುದ್ಧಮುಖದಲ್ಲಿದ್ದು ಅನುಭವವನ್ನೂ ಪಡೆದವರಾಗಿದ್ದಾರೆ. ಸದ್ಯ ಧಾರವಾಡ ಜಿಲ್ಲೆಯ ವಿದ್ಯಾಖಾತೆಯ ಮುಖ್ಯ ಕಚೇರಿಯಲ್ಲಿ ಕಾರಕೂನರಾಗಿದ್ದಾರೆ.

(೬೦ನೆಯ ಪುಟಕ್ಕೆ ಮುಂದುವರಿದಿದೆ.)

ಕನಸಿನ ಕನ್ನಡಿ

(ಸಣ್ಣಕತೆ) *

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಲಲಿತಾ ಕುರೂಪಿ ನಿಜ; ಆದರೆ ಅವಳಲ್ಲಿಯ ಹೆಣ್ಣುತನವು ಸುಳ್ಳೆ? ಬಂದಿರುವ ಹರಯತನವು ಸುಳ್ಳೇ? ಕುರೂಪದ ಪಾತಕ ಆಕೆಯ ಹೆಣ್ಣುಬಾಳಿನ ಹಕ್ಕಿಗೇ ಕೊಡಲಿಯೇಟು ಹಾಕಿತು. ಲಲಿತೆಯಂತೆಯೆ ಕುದಿಬಾಳಿನ ಹೆಣ್ಣುಗಳು ನಮ್ಮ ಸಮಾಜದಲ್ಲಿ ಎಷ್ಟಿವೆಯೊ !

卐

ಹಿತ್ತಲಲ್ಲಿದ್ದ ತುಳಸಿಯ ಕಟ್ಟೆಯ ಮೇಲೆ ಎಳಬಿಸಿಲನ್ನು ಕಾಸಿಕೊಳ್ಳುತ್ತ ಕುಳಿತ ಲಲಿತಾ, ಒಂದು ದೀರ್ಘವಾದ ನಿಟ್ಟುಸಿರನ್ನು ಬಿಟ್ಟಳು.

ಆ ನಿಟ್ಟುಸಿರಿಗೋ ಏನೋ. ಬದಿಯಲ್ಲಿದ್ದ ಮಲ್ಲಿಗೆಯ ಬಳ್ಳಿ ಅಲುಗಾಡಿತು. ಬಹುದಿನಗಳಿಂದಲೂ ಬಳ್ಳಿಯ ಮೇಲೆ ಅರಳಿ ಕುಳಿತ ಹೂವೊಂದು, ಬಳ್ಳಿಯಿಂದ ಕೆಳಗುರುಳಿತು. ನೆಲಕ್ಕೆ ಬಿದ್ದಾಕ್ಷಣ ಹೂವಿನ ಪಕಳೆಗಳು ಅತ್ತಿತ್ತ ಹರಿದಾಡಿ ಬಿದ್ದವು.

ಮುಂಜಾವದಿಂದಲೂ ಅಸ್ವಸ್ಥಳಾದ ಲಲಿತಾ, ಆ ಬಿದ್ದ ಹೂವನ್ನು ಕೈಯಿಂದ ನೇಲಕ್ಕೆತ್ತಿದಳು. ಆದರೆ ಅವಳ ಕೈಗೆ ಬಂದದ್ದು ಆ ಹೂವಿನ ತುಂಬು ಮಾತ್ರ.

"ಹೂಂ!" ಲಲಿತಾ ನಿರಾಶೆಯ ನಗೆಯನ್ನು ನಕ್ಕಳು. ಸಲ್ಲದ ವಿಚಾರಗಳ ಸೆಳವಿಗೆ ಸಿಕ್ಕ ಅವಳ ಮನಸ್ಸು ಈ ಮುದಿಹೂವಿನಿಂದ ಮತ್ತಿಷ್ಟು ಕೆರಳಿತು.

ಬೇಸಗೆಯಲ್ಲಿ ನೀರಿನ ಹನಿಯನ್ನು ಕಾಣದ ಹಳ್ಳ, ಮಳೆಗಾಲದ ಮೊದಲನೆಯ ಸೆಳಕಿಗೇ ಹುಚ್ಚೆದ್ದು ಭೋರಾಡುವಂತೆ, ಅವಳ ಮನಸ್ಸು ತಾನು ಕಲ್ಪಿಸಿದ ಸ್ವಪ್ನಸುಖವನ್ನು ಪ್ರೋತ್ಸಾಹಿಸತೊಡಗಿತು.

ಕೈಯಲ್ಲಿದ್ದ—ಪಕಳೆಗಳು ಉದುರಿಹೋದ—ಹೂವಿನ ತುಂಬಿನತ್ತ ಲಲಿತಾ ತದೇಕ ಚಿತ್ತದಿಂದ ನಿಟ್ಟಿಸತೊಡಗಿದಳು. ತಟ್ಟನೆ ಅವಳ ತಲೆಯಲ್ಲಿ ವಿಚಾರವೊಂದು ಸುಳಿದುಹೋಯಿತು: ಭರಮರಡ್ಡಿಯ ಅಣ್ಣ ಅತ್ತಿಗೆಯ ನತ್ತನ್ನು ಸೂಳೆಗೆ ಕೊಡಮಾಡಿದಾಗಿನ ನೆನಪು ಅವಳ ಕಣ್ಣುಮುಂದೆ ಕಟ್ಟಿತು.

—ಸ್ತ್ರೀಯ ಬೆತ್ತಲೆ ದೇಹ. ಹರಣ ಹಾರಿದ ನಂತರದ ಸ್ಥಿತಿ—ಎಲುವಿನ ಹಂದರ.. ಭಯಾನಕ ಎಲುವಿನ ಹಂದರ! ಸೌಂದರ್ಯದ ಕೊನೆಯ ಅವಸ್ಥೆ—ಎಲುವಿನ ಹಂದರ! ಅವಳ ಕೈಯಲ್ಲಿದ್ದ ಹೂವಿನ ತುಂಬು ಕೆಳಗೆ ಜಾರಿಬಿತ್ತು.—ಆ ಸೂಳೆಯ ನಗ್ನದೇಹದ ಚಿತ್ರ, ಲಲಿತಳ ಕಣ್ಣುಮುಂದಿನಿಂದ ನುಸುಳಿ ಮಾಯವಾಯಿತು.

ಬೆಳಗಿನ ವೇಳೆಯನ್ನು ಕೆಲಸವಿಲ್ಲದೆ ಕಳೆಯುವುದು ಒಳಿತಲ್ಲವೆಂದು, ತುಳಸಿಯ ವೃಂದಾವನಕ್ಕೆ ಬಿಂದಿಗೆಯಿಂದ ನೀರನ್ನು ಹನಿಸಿದಳು. ಆದರೂ ತಲೆಯಲ್ಲಿ ಹೊಕ್ಕ ವಿಚಾರ, ಅವಳನ್ನು ಮುಂದೆ ಕ್ರಿಯಾಶಾಲಿನಿಯನ್ನಾಗಿ ಮಾಡಗೊಡಲಿಲ್ಲ. ವೃಂದಾವನಕ್ಕೆ ಎರಡೂ ಕೈಗಳನ್ನು ಆನಿಸಿ ನಿಂತುಕೊಂಡಳು.

ವೃಂದಾವನದಲ್ಲಿ ಹನಿಸಿದ ನೀರು ಕೆಲ ವೇಳೆಯಲ್ಲಿಯೆ ನಿಶ್ಚಲವಾಯಿತು. ಬೆಳಗಿನ ಸೂರ್ಯನ ಕೋಮಲ ಕಿರಣಗಳ ಬೆಳಕಿನಿಂದ, ಆ ನೀರು ಪಾರದರ್ಶಕವಾಗಿ ಪರಿವರ್ತಿಸುತ್ತಿತ್ತು.

ಒಂದರ್ಧ ಕ್ಷಣ ಲಲಿತಾ, ಆ ನಿಂತ ನೀರಿನತ್ತ ದಿಟ್ಟಿ ಹಾಯಿಸಿದಳು. ಮುಖ ಕಾಣುತ್ತಿರಲಿಲ್ಲ ಅದು ಕಾಣುವುದೂ ಬೇಕಿರಲಿಲ್ಲ. ಆದರೆ ಅಲ್ಲಿ ಕಂಡುದೆಂದರೆ ಅವಳ ಪುಷ್ಟವಾದ ಎದೆ.

ಬಲಿಷ್ಠವಾಗಿ ಬೆಳೆದ ಎದೆ—ಆ ಪ್ರತಿಬಿಂಬ ಅವಳ ಮನಸ್ಸನ್ನು ನೋಯಿಸಿತು. ಲಲಿತಾ ಅಜ್ಞಾನಿಯಲ್ಲ. ಅಶಿಕ್ಷಿತೆಯಲ್ಲ. ಕಾಲೇಜಿನ ಉಚ್ಚ ಶಿಕ್ಷಣ ಮುಗಿಸಿ ಮೂರು ವರುಷಗಳಾಗಿವೆ. ಸೌಂದರ್ಯದ ಸಂಪೂರ್ಣ ಕಲ್ಪನೆ ಅವಳಿಗಿದೆ.

ಎಂತಲೇ ತನ್ನ ಪುಷ್ಟ ಎದೆಯನ್ನು ನೋಡಿ ನೊಂದುಕೊಂಡಳು. ಆ ಸೌಂದರ್ಯವನ್ನು ತಾನೊಬ್ಬಳೇ ಅರ್ಥಮಾಡಿಕೊಂಡಿರುವೆನಲ್ಲಾ—ಎಂಬುದೇ ಅವಳ ವ್ಯಥೆ. ಆ ಸೌಂದರ್ಯವನ್ನು ಬೇರಾರಾದರೂ ಅರ್ಥಮಾಡಿಕೊಂಡಿದ್ದರೆ, ತನ್ನ ಮದುವೆ ಆಗದೆ ಇರುತ್ತಿತ್ತೆ?......

—ಮೈಮೇಲಿನ ಕೇವಲ ಬಿಳಿಯ ಬಣ್ಣವನ್ನೇ ಸೌಂದರ್ಯವೆಂದು ಕಂಡುಕೊಂಡ ಈ ಸಮಾಜದಲ್ಲಿ ತನಗೆ ಸುಖ ಸಿಕ್ಕಲಾರದು—ಎಂದು ವಿಚಾರಿಸುತ್ತಲೇ, ಲಲಿತಾ ವೃಂದಾವನದ ಕಟ್ಟೆಯಿಂದ ದೂರಕ್ಕೆ ಸರಿದಳು. ಹಾಗೆ ದೂರ ಸರಿಯುತ್ತಿರುವಾಗ, ಆಕಸ್ಮಿಕವಾಗಿ ಅವಳ ಮುಖದ ಪ್ರತಿಬಿಂಬ ಆ ನಿಶ್ಚಲ ನೀರಲ್ಲಿ ಮೂಡಿತು. ಆ ನೀರಲ್ಲಿಯ ತನ್ನ ಮುಖದ ಪ್ರತಿಬಿಂಬವನ್ನು ಕಂಡು, ಲಲಿತಾ ಮೈತುಂಬ ಬೆವತುಹೋದಳು.

— ಆ ಹೂ ಬಿದ್ದು ವಿಚಿತ್ರವಾಗಿ ಕಾಣುವ ಒಂದು ಕಣ್ಣು. ಹರಿದ ತುಟಿ—ಮುಂದೆ ಹಾಯ್ದು ಬಂದ ಹಲ್ಲು. ಮೈಲಿಯ ಕಲೆಗಳಿಂದ ಮುಚ್ಚಿದ ಮುಖಚರ್ಮ, ಇದೆಲ್ಲಕ್ಕೂ ಕಿರೀಟವಿಟ್ಟಂತೆ ಕಪ್ಪು ಮೈಬಣ್ಣ.

ಮುಖಕ್ಕೆ ಬಂದ ಬೆವರನ್ನು ಕೈಯಿಂದ ಒರಸಿಕೊಳ್ಳುತ್ತ, ಲಲಿತಾ ಒಂದು ದೀರ್ಘ ನಿಟ್ಟುಸಿರನ್ನು ಬಿಟ್ಟಳು. "ನನ್ನ ಮದುವೆಯಾಗದೆ ಇರುವುದಕ್ಕೆ ಸಮಾಜದಲ್ಲಿಯ ಗಂಡುಸರನ್ನು ಬೈದೇನು ಅರ್ಥ?"

---

* ಜಯಂತಿಯ ಸಣ್ಣಕತೆಗಳ ಮೇಲಾಟದಲ್ಲಿ ಮೊದಲನೆಯ ಬಹುಮಾನವನ್ನು ಪಡೆದ ಕತೆಯಿದು.

ಸಂ. ಜ.

ಎಂದು ಮನಸ್ಸಿನಲ್ಲಿಯೇ ವಿಚಾರಿಸುತ್ತ, ತುಳಸಿಯ ಕಟ್ಟೆಯಿಂದ ಹಿಂದಿರುಗಿದಳು.

ಹಾಗೆ ಹಿಂದಿರುಗುತ್ತಿರುವಂತೆ, ಅವಳ ತಲೆಯಲ್ಲಿ ಸೇರಿನಿಂತ ಸಲ್ಲದ ವಿಚಾರ ಮತ್ತೆ ಕ್ರಾಂತಿಯನ್ನೆಬ್ಬಿಸಿತು:

" ಸುಖ.... ಸುಖ ! "

" ನಾನಾವ ಅಪರಾಧ ಮಾಡಿದೆ ಎಂದು ಸುಖದಿಂದ ದೂರ-ವಾಗಬೇಕು ? "

" ಹಕ್ಕು. ಅದು ನನ್ನ ಜನ್ಮಸಿದ್ಧ ಹಕ್ಕು ! "

" ಮಾನ ಮರ್ಯಾದೆ? ಹೂಂ, ಆ ಬೇಲಿಗೆ ಅಂಜಲಾರೆ ! "

" ಆದರೆ ತಾಯಿ ತಂದೆ - ತಂಗಿ.... ..."

ತಂಗಿಯ ನೆನಪು ಬಂದಾಕ್ಷಣ ಲಲಿತೆ ಮತ್ತೆ ಅಂಜಿದಳು.

ಬನಿಗಿದ್ದ ಪೇರಲ ಗಿಡದ ಬೊಡ್ಡೆಗೆ ಆತು ನಿಂತು, ಕಣ್ಣು ಮುಚ್ಚಿಕೊಂಡಳು. ಕಣ್ಣುಮುಚ್ಚುವ ಕಾರ್ಯದ ಜತೆಯಲ್ಲಿ, ಅವಳ ಮನಸ್ಸು ವಿಚಾರಗಳ ಸುಳಿಗೆ ಸಿಕ್ಕುಹೋಯಿತು :

......ತನ್ನ ತಂಗಿ ಕಮಲು, ತನಗಿಂತ ಎರಡು ವರುಷಕ್ಕೆ ಕಿರಿಯಳು. ಸ್ವರೂಪಸುಂದರಿಯಲ್ಲವೇನೋ ನಿಜ; ಆದರೂ ಕುರೂಪಿ ಯಲ್ಲ: ನನ್ನ ಮ್ಯಾಟ್ರಿಕ್ ಮುಗಿದಾಕ್ಷಣ. ನನ್ನನ್ನು ನೋಡಲು ಪರವೂರಿಂದ ಆ ಜನ ಬಂದಿತ್ತು. ಆ ಹುಡುಗನ ಫೋಟೊ ನನಗೆ ಮೊದಲೇ ನೋಡಲು ಸಿಕ್ಕಿತ್ತು. ಮನ್ಮಥನ ಮೂರ್ತಿ. ಫೋಟೊ ನೋಡಿದಾಕ್ಷಣ ನಾನೇನೋ ' ಧನ್ಯೆ ' ಎಂದು ತಿಳಿದುಕೊಂಡೆ.

ಆದರೆ ಘಟಿಸಿದ್ದು ಬೇರೆಯೆ. ನನ್ನ ತಂಗಿಯೇ ನನಗೆ ವಿಷ-ಪ್ರಾಯಳಾದಳು. ನನ್ನ ತುತ್ತನ್ನು ಕಸಿದುಕೊಂಡಳು. ಅದು ಅವಳ ತಪ್ಪೆ ?—ಛೆ! ಆದರೂ.

ನೋಡಲು ಬಂದಾಗ, ಬಂದವರಿಗೆಲ್ಲ ಚಹಾಪಾನವಾದ ನಂತರ " ಕನ್ಯೆಯನ್ನು ಹೊರಗೆ ಕರೆದುಕೊಂಡು ಬನ್ನಿ " ಎಂದು ಹೇಳ ಲಾಯಿತು. ನಾನೊಬ್ಬಳೇ ಅಲ್ಲಿ— ಆ ಗಂಡಸರ ಎದುರಿನಲ್ಲಿ ಕುಳಿತುಕೊಳ್ಳಲು ನಾಚಿಕೆಯಿಂದ ಹೆದರಿದೆ. ಆ ಸುಟ್ಟುನಾಚಿಕೆ. ಆ ನಾಚಿಕೆಯೇ ನನ್ನ ಭವಿಷ್ಯವನ್ನು ನುಂಗಿತು. ಕಮಲಳನ್ನೂ ಜೊತೆಗೆ ಬರುವಂತೆ ನಾನೇ ಆಗ್ರಹಪಡಿಸಿದೆ. ಅವಳೂ ಒಂದು ಹೊಸ ಜಾರ್ಜೆಟ್ ಪತ್ತಲ ಉಟ್ಟುಕೊಂಡು ಬಂದು, ನನ್ನ ಬಳಿಯಲ್ಲಿಯೇ ಕುಳಿತಳು.

ಎರಡು ಚಿತ್ರಗಳನ್ನು ಸ್ಪರ್ಧೆಗೆ ಇಟ್ಟಂತಾಯಿತೇನೋ ! ಮೊದಲಿನ ಚಿತ್ರ ಮುಸಿಯ ಗೊಣ್ಣೆಯಿಂದ ವಿಕೃತವಾಗಿತ್ತು. ಎರಡ-ನೆಯದು ?

—ಊರಿಗೆ ಹೋದ ಜನ, ಖಡಾಖಂಡಿತವಾಗಿ ಪತ್ರ ಬರೆದರು:

" ನೀವು ಹೇಳಿದ ವರದಕ್ಷಿಣೆ ನಮಗೆ ಸಮ್ಮತಿ ಇದೆ. ಆದರೆ ಹಿರಿಯ ಮಗಳು ಇಷ್ಟವಿಲ್ಲ. ಚಿಕ್ಕವಳನ್ನು ಮದುವೆ ಮಾಡಿಕೊಳ್ಳು ತ್ತೇವೆ. ಇಚ್ಛೆ ಇದ್ದರೆ ಪುನಃ ಬರೆಯಿರಿ ! "

ಇದೇ ತುಳಸಿಯ ಕಟ್ಟೆಯ ಮೇಲೆ ಕುಳಿತು ಅಂದು ಲಲಿತಾ ಅತ್ತಿದ್ದಳು. ಆದರೆ ಮುಂದಿನ ಬಾಗಿಲಲ್ಲಿ ಕುಳಿತುಕೊಳುತ್ತಿದ್ದ ಅವಳ ತಂದೆಗೆ, ಅವಳ ಅಳು ಕೇಳಿಸುವುದು ಅಸಾಧ್ಯವಿತ್ತು. ಮನೆಗೆ ಬಂದ ವರ ಸಿರಿವಂತ ಮನೆತನದವನು; ಯಾವ ಮಗಳಿಗೇನು ?

ಬಾಯಿಗೆ ಬಂದ ತುತ್ತನ್ನು ಬಲದವಡೆ ನೋಯಿಸುತ್ತದೆಂದು ಒಗೆಯುತ್ತಾರೆಯೇ ? ಬಲವಿಲ್ಲದಾಗ ಎಡದವಡೆ ತುತ್ತನ್ನು ಕಸಿದು ಕೊಳ್ಳುತ್ತದೆ.

ಪೇರಲ ಗಿಡದ ಬೊಡ್ಡೆಯಿಂದ ತಲೆ ಕೊಡಹಿಕೊಂಡು ಲಲಿತಾ, ಎಚ್ಚರಾಗಿ ನಿಂತಳು. ಮತ್ತೇನನ್ನೋ ವಿಚಾರಿಸುವ ಆಶೆ ಇದ್ದಿತೇನೋ; ಆದರೆ ಅಡುಗೆಯಮನೆಯಲ್ಲಿ ಯಾರದೋ ಬಾಯಿ ಕೇಳಿಸಿದುದರಿಂದ, ಬೆಕ್ಕುಹೆಜ್ಜೆ ಹಾಕುತ್ತ ಅಡುಗೆಯಮನೆಯ ಕಿಟಕಿಯ ಹತ್ತಿರ ಬಂದು ನಿಂತಳು.

ಒಲೆಯ ಮುಂದೆ ಚಪಾತಿಯನ್ನು ಲಟ್ಟಿಸುತ್ತ ಕುಳಿತ ತಾಯಿ, ಸಕ್ಕರೆಗಾಗಿ ಬಂದ ನೆರೆಮನೆಯ ಅಂಬಕ್ಕನ ಜತೆಯಲ್ಲಿ ಮಾತಾಡು ತ್ತಿದ್ದರು :

"ಏನು ಅಂಬಕ್ಕಾ. ಮುಖ್ಯಹುಡಿಗಿಯ ಜಾತಕದಾಗ, ಮದಿವಿಯ ಯೋಗ ಅದನೋ ಇಲ್ಲೊ ! "

" ನೀವು ಮಂದಿಗೆ ಭಾಳ ಉಪಕಾರಾ ಮಾಡ್ತೀರಿ. ದೇವರು ಅದರ ಫಲ ಒಂದಿಲ್ಲಾ ಒಂದು ದಿವಸ ಕೊಟ್ಟೇ ಕೊಡ್ತಾನ. ಮುಂದಿನ ಆಗು-ಹೋಗು ದಾವಾತ ಕಂಡಾನ ? " ಕಡ ತೆಗೆದುಕೊಂಡ ಸಕ್ಕರೆ, ಅಂಬಕ್ಕನ ಬಾಯಲ್ಲಿಯ ಕಟುತೆ ಇಲ್ಲದಂತೆ ಮಾಡಿತ್ತೇನೋ! ಮತ್ತೆ ಅವಳ ತಾಯಿಯೇ ಹೇಳಿದಳು :

" ಅಂಬಕ್ಕಾ, ಲಲಿತಾನ ಮದಿವಿ ಆಗಬೇಕಿದ್ದರ ಯಾವಾಗೋ ಆಗಬೇಕಿತ್ತು. ಕಮಲೂನ ಮದಿವಿ ಆಗಿ. ಎಂಟು ವರುಷ ಆತು ಈಗ. ಇನ್ನೂ ಬಾಸಿಂಗಬಲಾ ಬರಬಾರದೂ ಅಂದರ! ಯಾಲ್ಯಾದರೂ ತೋರಿಸಿದರ ' ತಂಗೀದು ಆತು; ಅಕ್ಕಂದು ಆಗುವೊಲ್ಲನಂದರ ಏನಾ ದರೂ—'ಅಂತ ಮಂದಿ ಮೂಗು ಮುರೀತಾರ. "

ಅಂಬಕ್ಕ ದೇಶಾವರಿಯ ನಗೆ ನಗುತ್ತ ಉತ್ತರಿಸುತ್ತಿದ್ದಳು " ದಾವ ಕೆಲಸಕ್ಕೂ ವ್ಯಾಳ್ಯಾ ಬರಬೇಕು. ಇಲ್ಲೇ ನಿಮ್ಮ ಕಮಲೂಂದೇ ನೋಡಿದಿರಿಲ್ಲೋ ? ಲಗ್ನ ಆಗಿ ಎಂಟು ವರ್ಷಾತು. ಚೊಚ್ಚಿಲು ಬಾಣಂತನ ಈಗ ಆಗಬೇಕಂದರ ! "

" ದೇವರ ಮನಸ್ಸಿನಾಗ ಏನೇನು ಅದನೋ ಆಗಲಿ ! ಮದಿವಿ ಆಗಲಿಲ್ಲ ಅಂತ ಹೇಳಿ, ಆಕೀಗೂ ಮುಂದ ಕಲಿಸೇವಿ ಹ್ಯಾಂಗಾದರೂ ಬಿ ಎ ಆಗ್ಯಾಳ....ಕರ್ಮ-ಧರ್ಮ ಸಂಯೋಗದಿಂದ ಮದಿವಿ ಆತು ... ಚೆಲೋನೇ ಆತು. ಇಲ್ಲಾ—ಎಲ್ಲ್ಯಾದರೂ ಮಾಸ್ತರ್ಕೀ ಮಾಡ್ತಾಳ. ಯಾರಿಗೂ ಭಾರ ಆಗಿ ಇರಾಕಿ ಅಲ್ಲ ನನ್ನ ಲಲ್ಲೂ ! "

" ಇರಲಿ ದೇವರಿದ್ದಾನ. ಮತ್ತೇನು, ಅಳಿಯದೇವರು ಬಂದಾ ರಂತ ? "

" ಹೌದು, ಇವ್ರೊತ್ತೇ ನಸಿಕಿನ ಗಾಡಿಗೇ ಬಂದಾರ ! "

ತಂಗಿಯ ಗಂಡನ ವಿಷಯಕ ಮಾತುಗಳನ್ನು ಕೇಳಿದಾಕ್ಷಣ, ಲಲಿತಳಿಗೆ ಅಲ್ಲಿ ನಿಲ್ಲಲಿಕ್ಕಾಗಲಿಲ್ಲ. ನೇರವಾಗಿ ನಡುಮನೆಗೇ ಬಂದಳು. ಬದಿಯ ಕೋಣೆಯಲ್ಲಿ ಕಮಲು ತನ್ನ ಐದುತಿಂಗಳ ಕೂಸಿಗೆ ಮೊಲೆಯುಣ್ಣಿಸುತ್ತ ಕುಳಿತ ದೃಶ್ಯವನ್ನು ಅವಳಿಂದ ನೋಡಲಾಗಲಿಲ್ಲ. ಹಾಗೆಯೆ ತನ್ನ ರೂಮಿಗೆ ಬಂದು, ಬಾಗಿಲ ಒಳಚಿಲಕ ಹಾಕಿಕೊಂಡು, ಮಂಚದ ಮೇಲೆ ಬಿದ್ದಳು.

ತಲೆದಿಂಬಿನ ಮೇಲೆ ಮುಖ ಮುಚ್ಚಿಕೊಂಡಳು, ಕಣ್ಣುಮುಂದೆ ಕಟ್ಟಿದ ಆ ಕತ್ತಲೆಯಲ್ಲಿ, ಕಮಲೂನ ಲಗ್ನದ ದಿನದಿಂದ ಇಂದಿನ ವರೆಗೆ ನಡೆದು ಹೋದ ಘಟನೆಗಳ ಚಿತ್ರಗಳು ಒಂದೊಂದಾಗಿ ಸುಳಿಯ-ತೊಡಗಿದುವು.

ಆದು ಕಮಲೂನ ಲಗ್ನ - ಮನೆಯ ಮುಂದೆ ವಿಶಾಲವಾದ ಹಂದರವಿತ್ತು. ಆದರೆ ತಾನು ಮಾತ್ರ—ಕಳವು ಮಾಡಿದ ಅಪರಾಧಿ ಪೋಲಿಸನ ಕಣ್ಣು ತಪ್ಪಿಸುವಂತೆ—ಲಗ್ನಕ್ಕೆ ಬಂದ ಜನರ ದೃಷ್ಟಿ-ಯನ್ನೂ ತಪ್ಪಿಸಿಕೊಳ್ಳುತ್ತಿದ್ದೆ.

ತಾನು ಅಪರಾಧಿಯೇ ? ಛೇ ಅಲ್ಲ. ಹಾಗೆ ಕೇಳಿದರೆ ತನ್ನ ತುತ್ತನ್ನು ಕಸಿದುಕೊಂಡ ಕಮಲುವೇ ನಿಜವಾಗಿ ಅಪರಾಧಿ. ಆದರೆ ಅವಳು ನಿರ್ಭಯಳಾಗಿ ಹಂದರದಲ್ಲಿ ಲಗ್ನಮಂಟಪದಲ್ಲಿ ಸಾಲಂಕೃತ-ಳಾಗಿ ಕುಳಿತಿದ್ದಳು.

ಆದರೆ ಕೂಡಿದ ಜನ, ನನ್ನತ್ತ ನೋಡುತ್ತಿದ್ದರು. ಅವರ ದೃಷ್ಟಿ ನನ್ನ ಎದೆಯಲ್ಲಿ ಶಲ್ಯದಂತೆ ನೆಡುತ್ತಿದ್ದುವು.

ಜನರ ಪಿಸುಮಾತು :

" ಮದಿವೀ ಬಾಬತಿನಾಗ ಅಕ್ಕ ಹಿಂದುಳಿದಳು ! "

" ಆಕೀದೇನಾದೀತಃ ! ಸುಟ್ಟ ಮುಸಡೀದು ! "

ಈ ಶಬ್ದಗಳು ತನ್ನ ಮನಸ್ಸನ್ನು ಸುಡುತ್ತಿದ್ದುವು. ಹೀಗೆ ಹೋಗಿ ಮಂಟಪದಲ್ಲಿದ್ದ ಕಮಲುವಿನ ಕತ್ತನ್ನು... ....ಎಂದು ವಿಚಾರ ಮಾಡಿದ್ದಳು.

ಆದರೆ ಅದು ಕೇವಲ ಕಾರ್ಯರಂಗಕ್ಕಿಳಿಯದ ಒಳವೈರ !

ಮುಂದೆ ಮೂರನೆಯ ದಿನ—ಅಂದು ಉರುಟಣೆಯ ದಿನ. ಮುಂಜಾನೆ ಓಕಳಿಯಾಯಿತು. ಜನಸಮೂಹದ ಹಿಂದೆ ನಿಂತು ತಾನು ಆ ದೃಶ್ಯ ನೋಡುತ್ತಿದ್ದಳು. ಅರ್ಧ ಬರಿಮೈಯಲ್ಲಿದ್ದ ಕಮಲೂನ ಗಂಡ...............ಅಯ್ಯೋ, ನಾನೇ ಅವನೆದುರು ಕೂಡುವವಳಿದ್ದೆ. ಆದರೆ ತಂಗಿ ಕಮಲು—ಅಡ್ಡ ಬಂದಳು ! ಕಮಲುವಿನ ಕೈ ಅವನ ಕೈಯನ್ನು ತಾಗುತ್ತಿತ್ತು. ಆ ದೃಶ್ಯ ತನ್ನಿಂದ ನೋಡಲಾಯಿತೆ ? ಸಂಜೆ ಉರುಟಣೆಯಲ್ಲಿ ಚೆಂಡಿನಾಟ ಆಡಿದರು. ಕಮಲು ಹುಟ್ಟಿರದಿದ್ದರೆ? ಅಥವಾ ಅವಳ ಸೌಂದರ್ಯ ತನಗಿದ್ದಿದ್ದರೆ? ತಾನೇ ಅವನೆದುರು ಚೆಂಡಿನಾಟಕ್ಕೆ ಕೂಡುತ್ತಿದ್ದಳು.

ಇದೆಲ್ಲವನ್ನೂ ಸಹಿಸಿಕೊಂಡರೂ ಮರುದಿನದ ದೃಶ್ಯ—ಅಚ್ಚಳಿಯದೆ ತನ್ನಲ್ಲಿ ನಿಂತಿತು. ಅಂದು ಶೋಭನಪ್ರಸ್ಥದ ದಿನ.

ಜೋಡು ಗಾದಿಯಮೇಲೆ ಇಬ್ಬರನ್ನೂ ಕೂಡಿಸಿ ಆರತಿ ಮಾಡಿ ಬಂದು, ಬಾಗಿಲನ್ನು ಹಾಕಿದರು. ಕೂಡಿದ ಹೆಣ್ಣುಮಕ್ಕಳೆಲ್ಲ ಬಾಗಿಲ ಸಂದಿಯಿಂದ..........

ಅಸಮಾಧಾನ, ಅತೃಪ್ತಿಯ ಭೂತಕ್ಕೆ ಬಲಿಯಾದ ತಾನೂ ಒಮ್ಮೆ ಬಾಗಿಲ ಸಂದಿಯಿಂದ ಇಣುಕಿ ನೋಡಿದ್ದಳು.

ಅತೃಪ್ತಿಯ ಜ್ವಾಲಾಮುಖಿ ಸ್ಫೋಟವಾಯಿತು. ಸಂದಿಯಲ್ಲಿ ಕಂಡದ್ದೇನು ? ಕಮಲೂ, ಅವನ—' ಛೀ. '

ತನ್ನ ಸ್ಥಳ ಅದು—ಅದು ತನ್ನ ಸ್ಥಳ—

" ನನ್ನ ಸ್ಥಳ " ಎಂದು ಚೀರಿ ಲಲಿತಾ ಮಂಚದಿಂದೆದ್ದಳು.

ಅವಳ ಚೀರುವಿಕೆಗೆ ಬದಿಯ ಕೋಣೆಯಿಂದ ಕಮಲೂ ಕೂಸನ್ನು ಬಗಲಲ್ಲಿ ಕರೆದುಕೊಂಡೇ ಬಂದಳು. ಅಡುಗೆಯ ಮನೆಯಿಂದ ತಾಯಿ ಬಂದಳು. ಮುಂದಿನ ಬಾಗಿಲಲ್ಲಿ ಕುಳಿತ ತಂದೆ ಬಂದರು. ತಂದೆಯ ಹಿಂದಿನಿಂದ, ಕಮಲುವಿನ ಗಂಡ ರಾಮರಾಯರೂ ಬಂದರು.

ಎಲ್ಲರೂ ಅಂಜಿದರು, ನಡುಗಿದರು. ಲಲಿತಾ ಮುಖ ಮುಚ್ಚಿ-ಕೊಂಡು ಪುನಃ ಮಂಚದ ಮೇಲೆ ಬಿದ್ದಳು.

" ಲಲ್ಲೂ, ಏನಾಯ್ತು ? " ತಾಯಿ ಮೃದುವಾಗಿ ಕೇಳಿದರು.

ಜನರೆಲ್ಲ ಗಾಬರಿಪಟ್ಟುಕೊಂಡದ್ದನ್ನು ನೋಡಿ, ತಾನು ನಡೆದ ಪ್ರಸಂಗಕ್ಕೆ ಸುಳ್ಳಿನ ಕವಚ ತೊಡಿಸಿ ಹೇಳಿದಳು :

" ಅವ್ವಾ ಏನಿಲ್ಲ! ಮಲಗಿದ್ದೆ. ಸ್ವಲ್ಪ ಜಂಪು ಹತ್ತಿತ್ತು. ಸ್ವಪ್ನದ ಕೂಗು, ಇಂಟರವ್ಯೂಗೆ ಹೋಗಿದ್ದೆ. ಆದರೆ ಅಲ್ಲಿ ವಶೀಲಿ-ಯಿಂದ ನನ್ನ ನಂಬರು ಹಾರಿಸಿ ಬೇರೆಯ ಹುಡಿಗೀಗೆ ನೌಕರಿ ಕೊಟ್ಟರು. ಅದಕ್ಕೆ ಅವರ ಮೇಲೆ ಸಿಟ್ಟಾಗಿ, ' ನನ್ನ ಸ್ಥಳ .. ಏನು ಮಾಡಿದಿರಿ ' ಎಂದು ಚೀರಿದೆ. ಅದು ಮಾತ್ರ ಖರೇನಃ ಚೀರಿದೆ ! "

" ಹುಶ್ " ಎಲ್ಲರೂ ನಿಶ್ಚಿಂತೆಯ ನಿಟ್ಟುಸಿರನ್ನು ಬಿಟ್ಟರು.

" ಯಾವಾಗಲೂ ನನ್ನ ಲಲ್ಲೂಗ ಕಾಲೇಜು ಶಿಕ್ಷಣ, ನೌಕರೀ ಇದರ ವಿಚಾರನಃ ವಿಚಾರ! " ಎಂದು ಕೊಳ್ಳುತ್ತ ತಾಯಿ ಅಡುಗೆಯ ಮನೆಗೆ ಹೋದರು. ತಂದೆ, ಅಳಿಯ ಮೌನಿಗಳಾಗಿ ಹೊರಗೆ ನಡೆದರು. ಕಮಲೂ ಮಾತ್ರ ಅಕ್ಕನ ಬಳಿಯಲ್ಲಿ ಕುಳಿತು, ಅವಳ ಯೋಗ-ಕ್ಷೇಮವನ್ನೂ ವಿಚಾರಿಸತೊಡಗಿದಳು.

" ಅಕ್ಕಾ, ಹೀಂಗ್ಯಾಕ ಮಾಡಲಿಕ್ಕೆ ಹತ್ತಿದೀಯೆ ? ಎರಡು ಮೂರು ದಿವಸ ಆತು. ಬರೇ ಕಾಲೇಜು .... ನೌಕರಿ .... ಇಲ್ಲದ್ದಾ ವಿಚಾರ ಮಾಡಬ್ಯಾಡ ! "

"................... .. ...."

ನಿರುತ್ತರಳಾಗಿ ಲಲಿತಾ ಸೌಮ್ಯ ನಸುನಕ್ಕಳು. ಆದರೆ ಆ ನಗೆಯ ಹಿಂದೆ, ಅಸೂಯೆ ಅಡಗಿತ್ತು. ಸೇಡು ಕಾಡುತ್ತಿತ್ತು.

ಕಪಟವರಿಯದ ಕಮಲು, ಸಹಜವಾಗಿ ಹೇಳಿದಳು :

" ಅಕ್ಕಾ, ಎರಡು ನಿಮಿಷ ಈ ಮಗೂನ್ನ ಆಡಿಸು. ನೆರೆಮನೆಯ ಅಂಬಕ್ಕನ ಮಗಳು ಅತ್ತೆಯ ಮನಿಂದ ಬಂದಾಳಂತ. ಭೆಟ್ಟೀನೇ ಆಗಿಲ್ಲ. ಈಗ ಹೋಗಿ ಬರ್ತೀನಿ ! "

“ಈಗ ಹ್ಯಾಂಗ ಹೋಗ್ತೀಯು? ಹೊರಬಾಗಿಲೊಳಗ ನಿಮ್ಮ ಯಜಮಾನರು ಕುಳಿತಾರಲ್ಲ!”

“ನಾನು ಹಿತ್ತಲ ಬಾಗಿಲಿನಿಂದಾನಃ ಹೋಗಿ ಬರ್ತೀನಿ!”

“ಸರಿ, ಹೋಗಿ ಬಾ!”

ಕಮಲು ಕೂಸನ್ನು ಲಲಿತಳ ಕೈಗಿರಿಸಿ, ಹಿತ್ತಲ ಬಾಗಿಲ ಕಡೆ ನಡೆದಳು.

ಲಲಿತಾ ಒಂದು ಸಲ ಕೂಸಿನತ್ತ ನೋಡಿದಳು. ಅತೃಪ್ತ ವಾಸನೆ ಪ್ರತಿ ರೋಮರೋಮವನ್ನು ಅಲುಗಾಡಿಸ ತೊಡಗಿತು. ತೊಡೆಯ ಮೇಲಿದ್ದ ಮಗು ಅತ್ತಿತ್ತ ಹೊರಳಾಡುತ್ತಿತ್ತು. ಹಾಗೆ ಹೊರಳಾಡುವಾಗ, ಅದರ ಬಾಯಿ ಒಂದು ಸಲ ಲಲಿತಳ ಎದೆಗೆ ಸೋಂಕಿತು.

ಆ ಸ್ಪರ್ಶಕ್ಕೆ ಲಲಿತಾ ಹುಚ್ಚಾದಳು. ಬೆಳಗಿನಿಂದಲೂ ತಲೆಯಲ್ಲಿ ಹೊಕ್ಕು ನಿಂತ ಸಲ್ಲದ ವಿಚಾರ ಮತ್ತೆ ಕೋಲಾಹಲ ಎಬ್ಬಿಸಿತು. ಅವಳಿಗೆ ತಿಳಿಯದ ಹಾಗೆ ಅವಳ ಬಲಗೈ, ಎಡಎದೆಯ ಬ್ಲೌಜಿನ ಕೊನೆಯ ಚುಂಗಿಗೆ ಬಂದಿತು. ಮರುಕ್ಷಣದಲ್ಲಿ ಎಡಎದೆಯ ಬ್ಲೌಜಿನ ಕೆಳಭಾಗ ಮೇಲಕ್ಕೆ ಹೋಯಿತು. ಕೂಸಿನ ಮುಖವನ್ನು ಅತ್ತ ಸರಿಸುವುದರಲ್ಲಿದ್ದಳು. ಆದರೆ.... ಆದರೆ.... ತಲೆಯಲ್ಲಿ ಹೊಕ್ಕು ನಿಂತ ವಿಚಾರ ಅವಳನ್ನು ಅಷ್ಟಕ್ಕೇ ಬಿಡಲಿಲ್ಲ. ಮತ್ತೆ ಬ್ಲೌಜನ್ನು ಸರಿಪಡಿಸಿಕೊಂಡು ಕೂಸನ್ನೆತ್ತಿಕೊಂಡು, ಕಳ್ಳ ಹೆಜ್ಜೆಯಿಂದ ಬಾಣಂತಿಯ ಕೋಣೆಗೆ ಬಂದಳು.

ಬಾಣಂತಿಯ ಕೋಣೆಯಲ್ಲಿ ಗಾಢ ಕತ್ತಲೆ ಪಸರಿಸಿತ್ತು. ಬಾಗಿಲನ್ನು ಮುಂದೂಡಿ ಲಲಿತಾ ಹೊರಸಿನ ಮೇಲೆ ಕೂಸನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ತಾನೂ ಮಲಗಿದಳು.

ಕೂಸಿಗೆ ಅದರ ಅರಿವೆಲ್ಲಿ? ಅವಳ ಎದೆಗೆ ಮುಖ ಹಾಕಿತು. ಒಂದು ಸಮಾಧಾನದ ಉಸಿರನ್ನು ಎಳೆದು ಲಲಿತಾ ಕೋಣೆಯ ತುಂಬ ದೃಷ್ಟಿಯನ್ನು ಚೆಲ್ಲಿ ವಿಚಾರಿಸತೊಡಗಿದಳು:

—ಇದೇ ಕೋಣೆ. ಎಂಟು ವರುಷಗಳ ಹಿಂದೆ. ಇದೇ ಪ್ರಸ್ಥದ ಕೋಣೆ. ಇದೇ ಬಾಗಿಲ ಸಂದಿಯಿಂದ ನಾನು ಇಣುಕಿ ನೋಡಿದ್ದೆ. ಅಬ್ಬಾ ಆ ದೃಶ್ಯ! ಅದನ್ನನುಭವಿಸುವ ಭಾಗ್ಯ ನನಗಿಲ್ಲವೆ?

ಮತ್ತೊಂದು ಮನಸ್ಸು ಅದಕ್ಕುತ್ತರ ಹೇಳುತ್ತಿತ್ತು:

“ಏಕಿಲ್ಲ? ತಡೆ, ಕಮಲೂವಿನ ಗಂಡ ಈಗ ಕೋಣೆಗೆ—ಬರುತ್ತಿದ್ದಾನೆ. ಕೋಣೆಯಲ್ಲಿ ಕತ್ತಲು ತುಂಬಿದೆ. ನಿನ್ನ ಮುಖ ಅವನಿಗೆ ಕಾಣಿಸದು. ನೀನು ಮೌನಳಾಗಿರು!”

ಈ ಸಲ್ಲದ ವಿಚಾರದಿಂದ ಲಲಿತಾ ಉತ್ತೇಜಿತಳಾದಳು. ಎಂಟು ವರುಷದಿಂದಲೂ ಕೂಡಿಟ್ಟ ಅತೃಪ್ತಿ ಅವಳಲ್ಲಿಯ ವಿಕೃತಕಾಮವನ್ನು ಕೆರಳಿಸತೊಡಗಿತ್ತು.

ಒಂದೊಂದು ಕ್ಷಣವೆಂದರೆ ಒಂದೊಂದು ಯುಗವಾಗಿ ಅವಳಿಗೆ ತೋರುತ್ತಿತ್ತು. “ಇನ್ನೂ ಏಕೆ ಬರಲಿಲ್ಲ?” ಎಂದು ತನ್ನಷ್ಟಕ್ಕೆ ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು.

“ಚರ್ ಚರ್ರ್ರs”

ಬಾಗಿಲನ್ನು ದೂಡಿದ ಸಪ್ಪಳವಾಯಿತು. ಹೌದು, ಬಂದವರು ಅವರೇ, ಕಮಲೂನ ಗಂಡ! ಅವನು ಒಳಗೆ ಬಂದವನೇ ಮತ್ತೆ ಬಾಗಿಲನ್ನು ಮುಂದೂಡಿದ. ಮತ್ತೆ ಕತ್ತಲು ಪಸರಿಸಿತು. ಹೊರಸಿನ ಬದಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಮೆಲ್ಲಗೆ ಪ್ರಶ್ನಿಸಿದ.

“ಕಮಲೂ, ನಿನ್ನನ್ನು ಏಕಾಂತದಲ್ಲಿ ಕಾಣಬೇಕೂ ಅಂದರೆ, ಮುಂಜಾನೆಯಿಂದಲೂ ಸಾಧಿಸಲೇ ಇಲ್ಲ ನೋಡು!”

“....” ಲಲಿತಾ ಮುಂಬರುವ ಸುಖನಿಮಿಷವನ್ನು ಕಾಯುತ್ತ ಪ್ರತ್ಯುತ್ತರ ಕೊಡಲಿಲ್ಲ. ಮತ್ತೆ ಅವನೇ ಮಾತನ್ನು ಮುಂದುವರಿಸಿದ!

“ನೋಡು,” ಜೊಚ್ಚಲು ಬಸಿರು ಎಂದು ಮೂರು ತಿಂಗಳಲ್ಲಿಯೆ ನಿನ್ನ ತಂದೆ ಕರೆದುಕೊಂಡು ಬಂದರು. ಆ ಆರು ತಿಂಗಳು, ಈ ೫

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ
ವಿ. ಎಸ್. ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. ಹಸಿವೆ; ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಕಂಜಾಬಮಿಶ್ರಿ ವಜಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭-೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರ ಪೇಟ
ಮು. ಪೋ. ಮಿರಜ

ತಿಂಗಳು; ಒಟ್ಟು ಹನ್ನೊಂದು ತಿಂಗಳು! ನಿನ್ನ ಸ್ಪರ್ಶವಿಲ್ಲದೆ ಹನ್ನೊಂದು ತಿಂಗಳು ಎಂದರೆ! ಏನು?

ಏಕೆ ಮಾತೇ ಆಡಲೊಲ್ಲೆಯಲ್ಲ? ಕಮೂ, ಯಾರೂ ಈಗ ಇಲ್ಲಿ ಬರುವಂತಿಲ್ಲ. ತಂದೆ ಪೇಟೆಗೆ ಹೋದರು; ತಾಯಿ ಅಡುಗೆಮನೆಯಲ್ಲಿ......ಯಾರೂ ಇಲ್ಲಿ ಹಾಯುವುದಿಲ್ಲ! ನೀನು ಒಪ್ಪಿದರೆ....!"

ಲಲಿತಳ ಮೌನವನ್ನು ಸಮ್ಮತಿಯೆಂದು ಅರ್ಥಮಾಡಿಕೊಂಡ ಅವನು, ಹೊರಸಿನ ಹತ್ತಿರ ಲಲಿತಳ ಬದಿಯಲ್ಲಿಯೆ ಬಂದು ಕುಳಿತ.

ಈ ಮೊದಲು ಉತ್ಸಾಹಿತಳಾದ ಲಲಿತಾ ಈಗ ನಡುಗಿದಳು. ಮೈತುಂಬ ಬೆವತಳು. ಕಣ್ಣಿಗೆ ಕತ್ತಲೆ ಕಟ್ಟಿತು. ಎದುರಿನಲ್ಲಿ ಕಮಲೆಯ ಚಿತ್ರ ಕಾಣಿಸತೊಡಗಿತು: ಅವಳ ತಲೆಗೂದಲು ಹರಡಿವೆ, ಕುಂಕುಮ ಅರ್ಧ ಅಳಿಸಿದೆ, ತನ್ನ ಕಡೆಗೆ ಬೆರಳು ಮಾಡಿ "ಘಾತಕಿ ನೀನು!" ಎಂದು ಚೀರುತ್ತಿರುವಂತೆ ಭಾಸವಾಯಿತು. ಮನೆತನದಲ್ಲಿ ತಲ-ತಲಾಂತರಗಳಿಂದ ನಡೆದುಬಂದ ಸಂಸ್ಕೃತಿಯು ಅವಳಲ್ಲಿ ಹೊಕ್ಕಿದ್ದ ಅಸಭ್ಯ ವಿಚಾರಗಳನ್ನು ಹೊರದೂಡತೊಡಗಿತ್ತು. ಕೋಣೆಯಲ್ಲಿ ಪಸರಿಸಿದ ಕತ್ತಲೆಯಲ್ಲಿ ಅವಳು ನಡುಗುತ್ತಿದ್ದಳು. 'ತಾನಾಗಿಯೆ ನಡೆದು ಬಂದ ಸುಖವನ್ನು ಬಿಡಬೇಕೆ?' ಎಂದು ವಿಚಾರಿಸ ಹತ್ತಿದಳು. ಆದರೆ....ಆದರೆ....ಮತ್ತೆ ವಿಚಾರಿಸಿದಳು. ತಲೆ ಅಲ್ಲಾಡಿಸಿದಳು.—ಕೇವಲ ೫ ನಿಮಿಷ. ತನ್ನ ಕುರೂಪತೆಗೆ ಮತ್ತೆ ಈ ಅಕೃತ್ಯ ಮತ್ತಿಷ್ಟು ಕರಿಯ ಬಣ್ಣ ಬಳಿಯಬಹುದು "ಛೆ" ಎಂದು ತಲೆಯನ್ನು ಕೊಡಹಿಕೊಂಡಳು.

ನಿದ್ದೆಯಿಂದ ಎಚ್ಚತ್ತವಳಂತೆ ಆಕಳಿಸುತ್ತ ಹೊರಸಿನಿಂದ ಮೇಲೆದ್ದಳು.

ಕೈಯಿಂದ ಮುಖವನ್ನು ಉಜ್ಜಿಕೊಳ್ಳುತ್ತ ಒಮ್ಮೆಲೆ:

"ಅಯ್ಯೋ ನೀವೇ? ಕ್ಷಮಿಸಿ!" ಎಂದು ಹೊರಸಿನಿಂದ ಚಂಗನೆ ನೆಲಕ್ಕೆ ಜಿಗಿದಳು. ಕಮಲೂನ ಗಂಡನೂ ಗಾಬರಿಯಾಗಿ ಎದ್ದು ನಿಂತನು.

ಲಲಿತೆಯು ನಗುಮುಖದಿಂದ ಹೇಳಿದಳು: ಕಮೂ ಒಳಗೆ ಹೋಗಿದ್ದಾಳೆ. ಇಬ್ಬರೂ ಇಲ್ಲೇ ಕುಳಿತಿದ್ದೆವು. ನನಗೆ ಜೊಂಪು ಹತ್ತಿತ್ತು!"

ಈ ಮಾತಿನ ಕೊನೆಯೊಂದಿಗೇ ಅವಳು ತನ್ನ ಕೋಣೆಗೆ ನಡೆದು, ಬಾಗಿಲನ್ನು ಮುಂದೆ ಮಾಡಿ, ಮಂಚದ ಮೇಲೆ ಬಿದ್ದಳು.

ಅವಳಲ್ಲಿ ಜಾಗೃತವಾದ ಮಾನವತೆ ಈಗ ತನ್ನ ಕೆಲಸ ಮಾಡಿತ್ತು. ಆದರೆ ಪುನಃ ಅದು ಮರೆಯಾಗತೊಡಗಿತ್ತು. ಅತೃಪ್ತ ಸುಖದ ಸೆಳವಿಗೆ ಸಿಕ್ಕ ಮನಸ್ಸು ಅವಳನ್ನು ಹೀಯಾಳಿಸತೊಡಗಿತ್ತು.

"ಕೈಗೆ ಬಂದ ತುತ್ತನ್ನು........"

ಅವಳು ಮತ್ತೆ ತಲೆ ಕೊಡಹಿಕೊಂಡಳು. ಅಸ್ಪಷ್ಟವಾಗಿ ಗಾದೆಯ ತುಂಬ ಹೊರಳಾಡಿದಳು. ಕಣ್ಣು ಮುಚ್ಚಿಕೊಂಡು, ಕತ್ತಲೆಯ ಕೋಣೆಯಲ್ಲಿ ತಾನಿನ್ನೂ ಮೌನಳಾಗಿದ್ದರೆ. ನಡೆಯಬಹುದಾಗಿದ್ದ ಘಟನೆಯನ್ನು ರೂಪಿಸತೊಡಗಿದಳು—

ಅಂದು ಪ್ರಸ್ಥದ ದಿನ ಬಾಗಿಲುಸಂದಿಯಲ್ಲಿ ನೋಡಿದಂತಹದೇ ದೃಶ್ಯ.

ಅಸಮಾಧಾನದ ಅತ್ಯುನ್ನತ ಶಿಖರವನ್ನು ಮುಟ್ಟಿದ ಅವಳ ಮನಸ್ಸು, ಪುನಃ ಕೆಳಗಿಳಿಯಿತು. ತನ್ನ ಅಸ್ತಿತ್ವ ಅವಳಿಗೆ ಅರಿವಾಯಿತು. ತಾನು ಸುಶಿಕ್ಷಿತೆ. ಇಂತಹ ವಿಚಾರಗಳು ತನ್ನಲ್ಲಿ ಹೊಳೆಯಬೇಕೆ? ತನ್ನನ್ನು ತಾನೇ ನಿಂದಿಸಿಕೊಂಡಳು. ಅವಳ ಬಾಯಿಂದ ಮೆಲ್ಲಗೆ ಶಬ್ದಗಳು ಹೊರಬಿದ್ದುವು:

"ಮಾನಸಿಕ ವ್ಯಭಿಚಾರ!"

"ಮಾನಸಿಕ ವ್ಯಭಿಚಾರ" ಎಂದಾಕ್ಷಣ, ಅವಳ ಮನಸ್ಸು ಒಂದು ಪೌರಾಣಿಕ ಕಥೆಯ ಸುತ್ತಲೂ ಸುಳಿದಾಡತೊಡಗಿತು. ಕಾಲೇಜಿನಲ್ಲಿ ಸಂಸ್ಕೃತ ಪ್ರೊಫೆಸರರು ಆ ಕತೆಯನ್ನು ಹೇಳಿದ್ದರು:—

ಗಿಡದಿಂದ ಕಿತ್ತ ನೀರಲಹಣ್ಣನ್ನು ಪುನಃ ಗಿಡಕ್ಕೆ ಅಂಟಿಸಲು, ಪಾಂಡವರು ಪಟ್ಟ ಪ್ರಯತ್ನ. ಯಾರಿಂದಲೂ ಸಾಧ್ಯವಾಗದಾಗ, ದ್ರೌಪದಿ "ನಾನು ಪತಿವ್ರತೆ ಇದ್ದದ್ದೇ ಆದರೆ, ಈ ಹಣ್ಣು ಗಿಡಕ್ಕೆ ಅಂಟಿಕೊಳ್ಳಲಿ" ಎಂದು ಹೇಳುತ್ತಾಳೆ. ಆಗ ಕೆಳಗಿದ್ದ ನೀರಲ ಹಣ್ಣು ಒಮ್ಮೆಲೇ ಮೇಲೆ ಹೋಗಿ ಮತ್ತೆ ಕೆಳಗುರುಳುತ್ತದೆ.—

ಲಲಿತಾ ಪುನಃ ವಿಚಾರಿಸಿದಳು:— ನಾನು ಮಾಡಿದ್ದು ತಪ್ಪೇ? ತಪ್ಪು! ಆದರೆ, ಈಗೇನು ಮಾಡುವುದು? ಈಗ ನಾನಾಗಿ ಹೋಗುವುದು ಸಾಧ್ಯವಿಲ್ಲ. ಅವರಾಗಿ ಬರಬೇಕು. ಬರಬೇಕು, ಬರಲೇಬೇಕು. ನನ್ನ ಮೈಯನ್ನು ಮುಟ್ಟಿದ್ದಾರೆ. ಮೇಲಾಗಿ ಹನ್ನೊಂದು ತಿಂಗಳು............ಅವರು ನನ್ನ ಕೋಣೆಗೆ ಬಂದೇ ಬರುತ್ತಾರೆ. ಬರಲೇಬೇಕು!

ಬಂದರೆ ನಾನು ಚೀರಲಾರೆ, ಏಳಲಾರೆ, ಪ್ರತಿಕಾರ ಮಾಡಲಾರೆ. ಬರಲಿ, ಬೇಗನೇ ಬರಲಿ!

"ಚರ್ ಚರ್" ಬಾಗಿಲ ಸಪ್ಪಳವಾಯಿತು. ಲಲಿತಾ ಮಲಗಿದಲ್ಲಿಯೇ ಎದೆಯ ಮೇಲಿನ ಸೆರಗನ್ನು ಬೇಸಾಟಿ ಒಗೆದಳು. ಮೆಲ್ಲಗೆ ಬಾಗಿ ಬಾಗಿಲ ಕಡೆಗೆ ನೋಡಿದಳು....

ಗಾಳಿಯ ಸೆಳಕಿಗೆ ಬಾಗಿಲು ಅರ್ಧ ತೆರೆದಿತ್ತು. ಯಾರೂ ಒಳಗೆ ಬರಲಿಲ್ಲ. ಲಲಿತಾ ವಿಚಾರಿಸಿದಳು. 'ಈಗ ಬರಬಹುದು' ಎಂದು; ಆದರೆ ಯಾರೂ ಬರಲಿಲ್ಲ. ಲಲಿತಾ ಮನಸ್ಸಿನಲ್ಲಿಯೇ ಅವನನ್ನು ಹೀಗಳೆಯತೊಡಗಿದಳು: "ನಿರ್ದಯ ಕಠೋರ, ಕಟುಕ! ಏಕೆ ತಡ ಮಾಡುತ್ತಿದ್ದಾನೆ?"

ಮತ್ತೆ ಬಾಗಿಲು ಸಪ್ಪಳ ಮಾಡಿತು.

ಮೈತುಂಬ ಕಣ್ಣನ್ನು ಮಾಡಿಕೊಂಡು ಲಲಿತಾ ಬಾಗಿಲತ್ತ ನೋಡಿದಳು.

"ತಂಪುಗಾಳಿಯ ಸೆಳಕಷ್ಟೇ ಅಲ್ಲಿ ಬಂದದ್ದು" ಲಲಿತಾ ನಿರಾಶಳಾದಳು. ಆ ತಂಗಾಳಿಯ ಸೆಳಕು ಆವರಣವಿಲ್ಲದ ಅವಳ ಎದೆಗೆ ತಾಗತೊಡಗಿತ್ತು. ಲಲಿತಾ ಬಲಗೈಯಿಂದ ಸೆರಗನ್ನು ಸರಿಪಡಿಸಿಕೊಂಡಳು. ತುಂಬುವಿಚಾರಗಳ ಸೆಳವಿನಲ್ಲಿ ದಣಿದು ಹೋಗಿದ್ದಳು. ಆ ತಂಗಾಳಿಗೆ ಲಲಿತೆಯ ಕಣ್ಣು ಮುಚ್ಚಿದುವು ಅರೆ ನಿಮಿಷದಲ್ಲಿಯೇ.

ನಿದ್ರೆ ಅವಳನ್ನಾವರಿಸಿತು. ಆ ನಿದ್ರೆಯಲ್ಲಿ ಅವಳ ಕನಸಿನ ಕನ್ನಡಿ ಒಡೆದು ಪುಡಿಪುಡಿಯಾಗಿತ್ತು.

ಕೋಗಿಲೆ-ಕತ್ತೆಗಳ ಕಥೆ

(ಮಕ್ಕಳಿಗಾಗಿ ಚಿಕ್ಕಕಥೆ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ವಸಂತಕಾಲವು ಬಂದಿತ್ತು. ಚಿಗಿತು ನಳನಳಿಸುವ ಮರಗಳಲ್ಲಿ ಕುಳಿತುಕೊಂಡು ಕೋಗಿಲೆಗಳು ಸವಿಯಾದ ಸ್ವರದಿಂದ 'ಕೂವೂ ಕೂವೂ' ಎಂದು ಕೂಗುತ್ತಲಿದ್ದುವು. ಕೋಗಿಲೆಯ ಕೂಗನ್ನು ಜನರೆಲ್ಲರೂ ನಿಂತು ನಿಂತು ಕೇಳುತ್ತಿದ್ದರು. ಸಂತೋಷಪಟ್ಟು ಕೋಗಿಲೆಯ ಇಂಚರವನ್ನು ಹೊಗಳಿ ಹಾಡುತ್ತಿದ್ದರು.

ಅಗಸರ ಮರಿಯಪ್ಪನ ಮನೆಯ ಬೂದುಬಣ್ಣದ ಕತ್ತೆ, ಕೋಗಿಲೆಯ ಕೂಗನ್ನು ಕಿವಿಗೊಟ್ಟು ಕೇಳಿತು. ಹಾಗೇ ಜನರೆಲ್ಲ ಮೆಚ್ಚಿ ಕೋಗಿಲೆಯನ್ನು ಕೊಂಡಾಡುತ್ತಿರುವುದನ್ನೂ ಕಂಡಿತು. ಆಗ ಆ ಕತ್ತೆಯ ಮನಸ್ಸಿನಲ್ಲಿ, ಕೋಗಿಲೆಯ ಹಾಗೆ ತಾನೂ ಕೂಗಿ ಜನರ ಮೆಚ್ಚಿಕೆಗೆ ಪಾತ್ರವಾಗಬೇಕು—ಎಂಬ ವಿಚಾರ ಮೂಡಿತು

ತನ್ನ ಸುಸ್ವರವು ಎಂತಹದೆಂಬುದು ಕತ್ತೆಗೆ ಚೆನ್ನಾಗಿ ಗೊತ್ತು. ತನ್ನ ಧ್ವನಿಯು ಅಂವಗೇಡಿಯಾಗಿದೆ—ಎಂದು ಕತ್ತೆಗೆ ಎಂದೂ ಎನಿಸುತ್ತಿರಲಿಲ್ಲ. ಆದರೂ, ತಾನು ಕೂಗಿದರೆ ಈ ಮೂರ್ಖ ಮನುಷ್ಯರು ತಿರಸ್ಕಾರದಿಂದ ನಗುತ್ತಾರಲ್ಲಾ—ಎಂದು ಮೊದಲಿನಿಂದಲೂ ಕಳವಳಗೊಳ್ಳುತ್ತಿತ್ತು. ಈಗ ಕೋಗಿಲೆಯ ಸ್ವರವನ್ನು ಜನರು ಮೆಚ್ಚುತ್ತಿರುವುದನ್ನು ಕಂಡು, ತಾನೂ ಹಾಗೆಯೇ ಕೂಗಬೇಕೆಂದು ಮನಸ್ಸಿನಲ್ಲಿ ವಿಚಾರ ಮಾಡಿತು.

ಸರಿ, ವಿಚಾರವನ್ನೇನೋ ಮಾಡಿತು; ಆದರೆ ಕೋಗಿಲೆಯ ಹಾಗೆ ಕೂಗಲಿಕ್ಕೆ ಕತ್ತೆಗೆ ಬರಬೇಕಲ್ಲ! ಅದಕ್ಕಾಗಿ ಏನು ಮಾಡಬೇಕೆಂಬುದು ತಿಳಿಯದಂತಾಗಿ, ಅಲ್ಲಿಯೆ ಪಡಸಾಲೆಯಲ್ಲಿರುವ ಪಂಜರದ ಗಿಳಿಯನ್ನು ಕೇಳಿತು :

"ಗಿಳಿರಾಮಾ, ಗಿಳಿರಾಮಾ, ನನಗೂ ಕೋಗಿಲೆಯ ಹಾಗೆ ಕೂಗಬೇಕೆಂದು ಅಪೇಕ್ಷೆಯಾಗಿದೆ! ಅದಕ್ಕಾಗಿ ನಾನೇನು ಮಾಡಬೇಕು?"

ಗಿಳಿಯು ತನ್ನ ಕೆಂಪುಚುಂಚಿನ ಬಾಯನ್ನು ತೆರೆದು ಹೀಗೆ ಹೇಳಿತು :

"ಏನು ಕತ್ತೆರಾಯಾ, ನೀನು ಕೋಗಿಲೆಯಂತೆ ಕೂಗಬೇಕೆನ್ನುವೆಯಾ? ಸರಿಹೋಯಿತು! ಯಾವುದಕ್ಕಾದರೂ ಹುಟ್ಟುಗುಣ ಬೇಕು; ಇಲ್ಲವೆ ಚೆನ್ನಾಗಿ ಅಭ್ಯಾಸ ಮಾಡಬೇಕು. ನಾನು ಮನುಷ್ಯರಂತೆ ಮಾತನಾಡಬೇಕಾದರೆ ಎಷ್ಟೊಂದು ಅಭ್ಯಾಸ ಮಾಡಬೇಕಾಯಿತು ಗೊತ್ತೆ? ಯಜಮಾನರು ಹೇಳಿದುದನ್ನು ಮತ್ತೆ ಮತ್ತೆ ಹೇಳಿ, ಅವರಂತೆ ಮಾತನಾಡಲಿಕ್ಕೆ ಕಲಿತೆ. ಕೋಗಿಲೆಯ ಕೂಗನ್ನು ನೀನೂ ಮತ್ತೆ ಮತ್ತೆ ಕೂಗಿ ಅಭ್ಯಾಸ ಮಾಡು! ಅಂದರೆ ಅದರಂತೆಯೆ ಕೂಗಲಿಕ್ಕೆ ಬಂದೀತು!"

ಕತ್ತೆ ಗಿಳಿರಾಮನ ಮಾತನ್ನು ಕೇಳಿತು ಕೋಗಿಲೆಯಂತೆ ಕೂಗಲು ಅಭ್ಯಾಸ ಮಾಡಬೇಕೆಂದು ನಿರ್ಣಯಿಸಿಕೊಂಡಿತು.

ಹತ್ತಿರದ ಮರದಲ್ಲಿಯ ಕೋಗಿಲೆಯೊಂದು ಕೂಗಿತು : 'ಕೂವೂ' 'ಕೂವೂ'

ಅದರಂತೆಯೆ ಅಭ್ಯಾಸ ಮಾಡಬೇಕೆಂದು ಕತ್ತೆ ಮುಖವನ್ನು ಮೇಲಕ್ಕೆತ್ತಿ ಬಾಯಿತೆರೆಯಿತು : ಅದರ ಬಾಯಿಂದ ಹೊರಟ ಸ್ವರ 'ಹೊಂ ಆ ... ಹೋಂ ಆ!'

ಕೋಗಿಲೆ ಕೂಗಿದ ಸಲಕ್ಕೊಮ್ಮೆ ಕತ್ತೆಯ ಅಭ್ಯಾಸ ಪ್ರಾರಂಭವಾಗುತ್ತಿತ್ತು. ಪಂಜರದ ಗಿಳಿ ಕಿಲಕಿಲನೆ ನಗುತ್ತಿತ್ತು.

ಕ್ಷಣಕ್ಷಣಕ್ಕೆ ಕೂಗುವ ಕತ್ತೆಯ ಧ್ವನಿಯು ಮನೆಯವರಿಗೆಲ್ಲ ಬೇಸರವನ್ನುಂಟುಮಾಡಿತು. ಮರಿಯಪ್ಪನಿಗಂತೂ ತುಂಬ ಕೋಪವು ಬಂದಿತು. 'ಸುಮ್ಮಸುಮ್ಮನೆ ಕ್ಷಣಕ್ಷಣಕ್ಕೂ ಕಿರಿಚಲಿಕ್ಕೆ ನಿನಗೇನು ಬಂದಿದೆಯೋ ಕತ್ತೆಮುಂಡೇದೇ!' ಎಂದು ಬೈಯುತ್ತಿರುವಾಗಲೆ, ಮರದ ಕೋಗಿಲೆ ಕೂಗಿತು : 'ಕೂವೂ ಕೂವೂ'

ಕೂಡಲೆ ಕತ್ತೆ ಕಿರುಚಿತು : 'ಹೊಂಆ— ಹೋಂ ಆ!'

'ಕೋಗಿಲೆಗೆ ಅಣಗಿಸ ಬಯಸುತ್ತೀಯಾ ಬುದ್ಧಿಗೇಡಿ!' ಎಂದು ಮರಿಯಪ್ಪ, ಒಂದು ದೊಣ್ಣೆ ತೆಗೆದುಕೊಂಡು ಕತ್ತೆಗೆ ಚೆನ್ನಾಗಿ ನಾಲ್ಕಾರು ಏಟುಗಳನ್ನು ಹಾಕಿದ:

ನೋವನ್ನು ತಾಳದೆ ಕತ್ತೆ ಒದ್ದಾಡಿ ಕಣ್ಣೀರಿಟ್ಟಿತು. ಪಂಜರದ ಗಿಳಿ ಕಿಲಕಿಲನೆ ನಗುತ್ತಿತ್ತು.

(೫೯ನೆಯ ಪುಟದಿಂದ ಬಂದುದು)

೨ ಆನಂದು

ಇದನ್ನು ಬರೆದವರು **ಕುಮಾರಿ ಮಾಲತಿ** ಎಂಬ ತರುಣ ಕತೆಗಾತಿ. ಹೆಸರು ಕಥಾಪ್ರಪಂಚದಲ್ಲಿ ತೀರ ಹೊಸತು. ಕತೆಯನ್ನು, ಧಾರವಾಡದಿಂದಲೇ ಕಳುಹಿದ್ದಾರಾದರೂ, ಕತೆಗಾತಿ ಬೆಂಗಳೂರವರೆಂದು ತೋರುವುದು. ಹೊಸತಾಗಿಯೆ **ಕಥಾಲೇಖನ** ಪ್ರಾರಂಭಿಸಿದ್ದರೂ, **ಲೇಖನದ** ರೀತಿಯಲ್ಲಿ ಒಂದು **ಸಂಯಮವಿದೆ.** ಕುಮಾರಿ ಮಾಲತಿಯವರು ಹೆಚ್ಚು ಹೆಚ್ಚಾಗಿ ಕತೆಗಳನ್ನು ಬರೆದು, ಒಳ್ಳೆಯ ಕನ್ನಡ ಕತೆಗಾತಿ—ಎಂಬ ಹೆಮ್ಮೆಯ ಹೆಸರನ್ನು ಗಳಿಸಲಿ.

೩ ವಿಮೋಚನೆ

ಈ ಕತೆಯನ್ನು ಬರೆದ ಶ್ರೀಮಾನ್ ಜಿ. ಶಂಕರಭಟ್ಟ ಬಿ. ಎ., ಬಿ. ಟಿ. ಅವರು ದಕ್ಷಿಣಕನ್ನಡ ಜಿಲ್ಲೆಯ ಗೋಳಿತಡ್ಕ ಎಂಬ ಗ್ರಾಮದವರು. ಇವರ ಜೀವನಪರಿಚಯದ ವಿಷಯ ನಮಗೆ ಅರಿಯದುದು. ಬರೆದು ತರಿಸಿಕೊಳ್ಳಲಿಕ್ಕೆ ಅವಕಾಶವೂ ಇರಲಿಲ್ಲ. ಅದಕ್ಕಾಗಿ ವಿಷಾದವೆನಿಸುತ್ತದೆ. ಒಳ್ಳೆಯ ಪಳಗಿದ ಶೈಲಿಯಲ್ಲಿ ಯಂತ್ರರಕ್ಕಸನ ಮಾನವ ಸಂಹಾರಲೀಲೆಯನ್ನು ಬಣ್ಣಿಸಿದ್ದಾರೆ

ಮುಂದಿನ ಕ್ರಮಾಂಕದ ಕತೆಗಳಲ್ಲಿ '**ಹೀಗೂ ಇದ್ದೀತೇ?**' ಎಂಬುದನ್ನು ಬರೆದವರು ಶ್ರೀಮಾನ್ ಎಸ್. ವಿ. ನಾವದಗಿ, ಮುದ್ದೇಬಿಹಾಳ ಅವರು. '**ಸಮನ್ವಯ**' ಎಂಬ ಕತೆಯನ್ನು ಬರೆದವರು ಶ್ರೀಮಾನ್ ಬಳ್ಕೂರ ಸುಬ್ರಾಯ ಅಡಿಗ, ಶಿಕ್ಷಕ ಎಸ್. ವಿ. ಹೈಸ್ಕೂಲ್ ಗಂಗೊಳ್ಳಿ ಅವರು. '**ಮಂಜು**' ಎಂಬುದನ್ನು ಬರೆದವರು ಶ್ರೀ. ಅನಂತರಾವ್ ಭೋಸಗೆ, ಸೇಡಬಾಳ ಅವರು.

ಅಭಿನಂದನೆಗಳು

ಬಹುಮಾನ ಪಡೆದ ಮೂವರು ಕತೆಗಾರರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಮೇಲಾಟದಲ್ಲಿ ಭಾಗವಹಿಸಿದ ಇನ್ನಿತರ ಕತೆಗಾರರಿಗೂ ನಾವು ಅಭಿನಂದನೆಗಳನ್ನು ಸಲ್ಲಿಸಲೇಬೇಕು.

‘ಸರ್ವಂ ಖಲ್ವಿದಂ ಬ್ರಹ್ಮ!!’

ಶ್ರೀ. ಖಾಸನೀಸ ರಾಘವೇಂದ್ರ, ಬಿ. ಎ. (ಆನರ್ಸ್) ಮುಂಬೈ

“ಸರ್ವಂ ಖಲ್ವಿದಂ ಬ್ರಹ್ಮ! ಖಲ್ವಿದಂ ಬ್ರಹ್ಮ!”
ಶೆಕ್ಸಪೀಯರ–ಭವಭೂತಿ-ಕಾಲಿದಾಸರನೆಲ್ಲ ಉರುಹಾಕಿ
ಕಾರ್ಲಮಾರ್ಕ್ಸ, ಮಾಲ್‌ಥಸ್, ರಿಕಾರ್ಡೋ
ಮಹಾವಾಗರ್ಥಿಗಳ
ಅರ್ಥವಿಲ್ಲದ ಅರ್ಥಶಾಸ್ತ್ರತತ್ತ್ವಗಳ ತಿಳಿದೊ ತಿಳಿಯದೆಯೊ
ಓದಿ, ತಿಳಿದುದನೆ ತಿಳಿಯದರ ಜತೆ ಸರಿಗರ್ಥಸಮನಿಸುತೆ
ದೊಡ್ಡ ಪದವಿಯಪಡೆದ ಗ್ರ್ಯಾಜುಯೇಟ್ ಹೃದಯಾಂತರಾಳದಲಿ
ಸ್ಪಂದಿಸುತ್ತಿಹ ನಿತ್ಯ ನಿರ್ವೀರ್ಯ ನಿಶ್ಶಕ್ತ ಎದೆಬಡಿತ ಮಿಡಿಯುತಿದೆ
ಗತಶಾಸ್ತ್ರಕರ ತತ್ತ್ವತಂತಿಯ ಮೀಟಿ.
ಬಾಳಲೇಬೇಕೆಂಬ ಜೀವಸತ್ತ್ವದ ಛಲವು ಪುಟನೆಗೆದು
ಬಾನಿನೆತ್ತರಕು ಬೆಳೆದು ನಿಂತಿದೆ.
ಬಾಳ್ವುದೆಂತು?
ಆನರ್ಸ ಗ್ರ್ಯಾಜುಯೇಟು
ಆದರೇನಾಯ್ತು?
ಶಾಲೆ-ಕಾಲೇಜಿನಲಿ, ಕೋರ್ಟು-ರೇಲ್ವೆ-ಎಸ್. ಟಿ ವರ್ಕಶಾಪು
ಫರ್ಮು (ಟೇಲರಿಂಗ್‌ಫರ್ಮಾದರೂ ಸರಿಯೆ!)
ಎಲ್ಲಿ ನೋಡಿದರಲ್ಲಿ, ಎಲ್ಲಿ ಹೋದರೂ ಅಲ್ಲಿ ತಿವಿಯುತಿದೆ ಮುಖಕೆ
ವೇಣ್‌ಗಹಗಹಿಸಿ ನಕ್ಕು ಅಣಕಿಸುತ್ತಿದೆ ‘No vacancy’
ಬೋರ್ಡು,
ಜಾತ್ಯತೀತರಾಷ್ಟ್ರದಲಿ, ಕ್ಲಾಸ್‌ರಹಿತ ಸಮಾಜದಲಿ
ಫಸ್ಟ್‌ಕ್ಲಾಸ್ ಆನರ್ಸಿಗೆಲ್ಲಿಯ ಸ್ಥಾನ?
ಅಂತೆಯೇ “ಏನು ಸುಖಿಯೋ ತಾನು ಥರ್ಡ್‌ಕ್ಲಾಸ್
ಗ್ರ್ಯಾಜುಯೇಟು!”
ಜನಸಮಸ್ತದ ನಿತ್ಯಪ್ರತಿನಿಧಿಯಾತ!
ಅವಗೆ ಸಲ್ಲಲಿ ಬೇಕು ಯೋಗ್ಯಸ್ಥಾನ.
ಇಂಟಲೆಕ್ಚ್ಯುಅಲ ಬೂರ್ಜ್ವಜಾತಿಗಿಲ್ಲವೋ ಇನ್ನು ಮುಂಚಿದ್ದ
ಸ್ಥಾನಮಾನ!
ಬೂರ್ಜ್ವ ಪ್ರೊಲೆಟರಿಯೇಟು,
ಕಮ್ಯುನಿಸ್ಟು, ಸೋಶಲಿಸ್ಟು, ಮಾರ್ಕ್ಸಿಝಂ, ನಾಝಿಝಂ....
ಯಾವ ‘ಇಸ್ಟ’ಉದಿಸಿದರೂ ಯಾವಿಝಂ ಬಂದರೂ
ಬಿಡಿಸಲಾಗದೆ ಉಳಿದು ಜಟಿಲತರವಾಗತೊಡಗಿದೆ ಬಾಳಪ್ರಶ್ನೆ!
To be or not to be—that is the question—
ವಿಶ್ವರಂಗವೆ ಒಂದು ಹಿರಿಯಸ್ಟೇಜು,
ಜೀವಿಜೀವಿಯೂ ಒಬ್ಬ ಹೆಮ್ಲೆಟ್ಟು.
ಇರಲೊ ಬೇಡವೊ’ ಎಂಬ ಹೆಮ್ಲೆಟ್‌ಮನೋವೃತ್ತಿ
ಬೆಳೆದು ಭೀಕರವಾಗಿ
ಬಾನುಬಯಲನೆ ತುಂಬಿ ದೇಶದೇಶದ ಅರಿವನಲುಗಿಸಿದೆ.
ಧಾತೃವಿಗೆ ಧಾತೃವೆನಿಸುತೆ ಮನುಜ ವಿಶ್ವಾಮಿತ್ರನೊಲು
ಏನೆಲ್ಲ ಸೃಜಿಸಿದರೂ
ಸುಖಮಾತ್ರ, ಬಿಸಿಲುಗುದುರೆಯ ತೆರದಿ,
ಮಾನವನ ಕಪಿಮುಷ್ಟಿಯಿಂ ನುಣುಚಿ ನೆಗೆದು ನಿಂತಿದೆ ನಾಲ್ಕು
ಅಂಗುಲದಾಚೆ.
ರೇಡಿಯೊಗ್ರ್ಯಾಮ್, ಇಲೆಕ್ಟ್ರಿಕ್‌ಹೀಟರ್,
ಟ್ರ್ಯಾಮು, ಜೆಟ್, ಅಣುಬಾಂಬು, ಎಚ್. ಬಾಂಬು,
ಕ್ರೀಮು, ಪೌಡರು, ಶಾಂಪು ಟಿಪ್ಟಾಪು
ಏನೆಲ್ಲ ಬಂದರೂ ಸುಖದ ಸೊಲ್ಲೇ ಇಲ್ಲ.
.... !
.... !!
ಖಲ್ವಿದಂ ಬ್ರಹ್ಮ!’
ಮತ್ತೆ ಮರಕಳಿಸುತಿದೆ ‘ಬಾಳೆ ಸುಳ್ಳೆಂಬ’ ನಿರಾಶಾವಾದದುಸಿರು
ತತ್ತ್ವಮಸಿ ಎಂಬ ಕೈಲಾಗದವನ ಅಗಾಧತತ್ತ್ವಪ್ರಣಾಲಿ—
ಬಾಳೆಲ್ಲ ಅಹಮಹಮಿಕೆ, vanity of vanities
ಎನ್ನುವ ಶೊಪೆನ್‌ಹಾವರುಗಳ ಅರ್ಥವಿಲ್ಲದ ವ್ಯರ್ಥಹಾವಳಿ.
ತಾನು ನೆಯ್ದಿಹ ಬಲೆಗೆ ತಾನೆ ಸಿಕ್ಕಿಹ ನರನು.
ಅವನು ರಚಿಸಿಹ ಯಂತ್ರ, ಅದರಲಡಗಿಹ ತಂತ್ರ
(ಗುರುವಿಗೇ ತಿರುಮಂತ್ರ!)
ಅವನನ್ನೆ ಆಳುತಿವೆ. ತನ್ನ ಊಳಿಗಕೆಂದು ನಿರ್ಮಿಸಿಹ ಕೌತುಕಕೆ
ತಾನೆ ಊಳಿಗದಾಳನಂತಾಗಿ ನಿಂತಿಹನು.
ಸುಖದ ಸೋಪಾನಗಳ ರಚಿಸಿರುವ ಮೆದುಳು, ಬರಿದಾಗಿ,
ಯಂತ್ರಭೂತದ ಪೆರ್ಮೆಯನ್ನೊಪ್ಪಿ
ಮತ್ತೆ ಯಂತ್ರದಾಳಿಗೆ ಮಣಿದು ಆಳಾಗಿದೆ.
ಸುಖಸಮೃದ್ಧಿಯ ನೀಡಲೆಂದು ಹುಟ್ಟಿಹ ಯಂತ್ರ
ದುಃಖ–ವೈರಾಗ್ಯ–ಅವಿವೇಕಗಳ ಹುಟ್ಟಿಸಿದೆ.
ಯಂತ್ರಲೋಕದ ಜೀವಿ, ಅಂತೆಯೇ, ನಿರ್ಜೀವಿಯಾಗಿ
ಬಾಳು ನೀರಸವೆನಿಸಿ
ಬಾಳೆಲ್ಲ ಸುಳ್ಳೆಂಬ ನಿರಾಶಾವಾದದ ಕಾರಿರುಳ ಛಾಯೆ ಪಸರಿಸಿದೆ
ಪ್ರತಿವ್ಯಕ್ತಿ ಜೀವನದಿ.
ಭೋರ್ಗರೆದು ಮೊರೆಯುತ್ತ ತುಯ್ಯುತಿಹ ಕಡಲಿನಬ್ಬರದ ಬೊಬೆ
ಬೀದಿಯುದ್ದಕು ಹರಿದು, ಮನೆಯ ಹಂಚಿನ ಮೇಲೆ
ತಟಪಟಿಸುತಿಹ ವರ್ಷಧಾರೆ,
ಮುಗಿಲಿನಂಚಿನಲಿ ಮಿಂಚಿ ಮರುಕ್ಷಣವೆ ಸರಿವ ಮಿಂಚು,
ಭೋರೆಂದು ಬೀಸುತಿಹ ಬಿರುಗಾಳಿಯ ಹೊಯ್ಲಿಗೆ ಸಿಲ್ಕಿ
ಎಲೆಎಲೆಯಾಗಿ ಉದುರುತಿಹ ಮುದಿವೃಕ್ಷ—
ಎಲ್ಲೆಡೆಗು ಅದೇ ಆರ್ತ ನಿಷಣ್ಣಧ್ವನಿಯೇ ಧ್ವನಿತವಾಗುತಿದೆ.
“ಸರ್ವಂ ಖಲ್ವಿದಂ ಬ್ರಹ್ಮ!—”

ಆನಂದು*

(ಸಣ್ಣ ಕತೆ)

ಕುಮಾರಿ ಮಾಲತಿ, ಧಾರವಾಡ

卐

ಸೌಂದರ್ಯ—ಪ್ರೀತಿ—ಪ್ರೇಮಗಳು, ಜೀವನದಲ್ಲಿ ಆನಂದ-
ವನ್ನು ತುಂಬುವ ಸಾಧನಗಳು. ಆದರೆ ನಿಸರ್ಗವು
ಇವುಗಳಿಗೆ ಅಸ್ಥಿರತೆಯನ್ನುಂಟುಮಾಡಿರುವುದು.
ಆನಂದುವಿನ ಜೀವದ ಹೂ ಅರಳಿರುವ
ವರೆಗೂ ಅನೇಕರಿಗೆ ಆನಂದಕೊಟ್ಟಿತು
ನಿಸರ್ಗದ ಸೂತ್ರಗೊಂಬೆ! ಬಾಡಿ
ಬಿದ್ದು ಬಳಿಯಲ್ಲಿದ್ದವರಿಗೆ
ದುಃಖಕೊಟ್ಟಿತು.

卐

ಎಚ್ಚರವಾದಾಗ ನಾನು ಮೆತ್ತನೆಯ ಹಾಸಿಗೆಯ ಮೇಲೆ ಮಲಗಿದ್ದೆ. ಕಿವಿಯ ಹಿಂದಿನಿಂದ ಒಂದು ಪಟ್ಟಿಕಟ್ಟಿತ್ತು. ನರ್ಸೊಬ್ಬಳು ದಿಂಬನ್ನು ಸರಿಪಡಿಸುತ್ತಿದ್ದಳು. ನಾನು ಕಣ್ಣು-ಬಿಟ್ಟುದನ್ನು ನೋಡಿದ ಮೇಲೆ, ಹತ್ತಿರದ್ದ ಮೇಜಿನಿಂದ ಥರ್ಮಾಮಿಟರನ್ನು ತೆಗೆದು ಬಾಯೊಳ ಗಿಟ್ಟು, ಆನಂತರ ತೆಗೆದುನೋಡಿ, ತಲೆದಿಸೆಯಲ್ಲಿದ್ದ ರಟ್ಟಿನಲ್ಲಿ ಏನೋ ಗುರುತಿಸಿ ಹೊರಟು ಹೋದಳು. ಅವಳು ಆ ಕಡೆ ಹೋದ ಕೂಡಲೆ "ನರ್ಸ್, ನರ್ಸ್" ಎಂದೆ. ಜೋರಾಗಿ ಕರೆಯಲು ಹೆದರಿಕೆ. ನರ್ಸಿಗೂ ಕೂಗಿದಂತಾಗಿರಬೇಕು. ತಿರುಗಿ ನೋಡಿ, ನಾನು ಸುಮ್ಮನೆ ಇದ್ದುದನ್ನು ನೋಡಿ ಹೊರಟುಹೋದಳು.

ಹಾಗೇ ಮಲಗಿದ್ದೆ. ಅರ್ಧಘರ್ಧ ಮಂಪರ. "ಮನೆಯಲ್ಲಿ ತಾಯಿ ಯಲ್ಲದೆ ಬೇರಾರೂ ಇಲ್ಲ. ಬಹಳ ದೂರ ಬೇರೆ. ನಾನಾರಿಗೂ ಬೇಡ ವಾಗಿ ಈ ಆಸ್ಪತ್ರೆಗೆ ಬಂದೆನೇ? ಹೀಗೇ ಕಿವಿಯ ನೋವು ಹೆಚ್ಚುತ್ತ ಹೋದರೆ ನಾನೇನೋ ಬದುಕುವುದಿಲ್ಲ. ತಾಯಿಗಾರು ಸುದ್ದಿ ಮುಟ್ಟಿ ಸುವವರು? ಆಯ್ದು ತಿನ್ನುವ ಕೋಳಿಗೆ ಕಾಲು ಮುರಿದಂತಾಯಿ ತಲ್ಲಾ! ಒಂದು ವೇಳೆ ನಾನು ಸತ್ತೇಹೋದರೆ?"

ಅಷ್ಟರಲ್ಲಿ ಥಟ್ಟನೆ ಎಚ್ಚರವಾಯಿತು. ನರ್ಸ್ ಪುನಃ ಬಂದು ನನ್ನನ್ನು ಎಬ್ಬಿಸಿ, ಔಷಧಿ ಸೀಸೆಯನ್ನು ಹಿಡಿದು ನಿಂತಿದ್ದಳು. ನಾನು ಕನಲಿ ಎದ್ದುದನ್ನು ನೋಡಿ, ನಕ್ಕು "ಏನು ಕನಸಿನ ಪ್ರಪಂಚದಲ್ಲಿ ಇದ್ದಿರಾ?" ಎಂದಳು. ನಾನು ಇದೇ ಸಮಯವೆಂದು "ಇಲ್ಲ ನರ್ಸ್, ನೋಡಿ ನನಗೇಕೋ ಕಿವಿನೋವು ಬಹಳ ಜಾಸ್ತಿಯಾಗುತ್ತಿದೆ. ಇದು ಹೀಗೇ ಹೆಚ್ಚುತ್ತ ಹೋದರೆ ನಾನೇನೋ ಬದುಕುವುದಿಲ್ಲ. ನಮ್ಮ ಮನೆ ಬಹಳ ದೂರ. ಬೇಕಾದರೆ ನನ್ನ ವಿಳಾಸವನ್ನು ಈಗಲೇ ತೆಗೆದು-ಕೊಳ್ಳಿ. ನಮ್ಮ ತಾಯಿ ಒಬ್ಬೊಂಟಿಗಳು. ಸಹಾಯಕ್ಕೆ ಕೂಡ ಯಾರೂ ಇಲ್ಲ." ಎಂದೆ.

ನರ್ಸ್ ನಕ್ಕು, "ಏನಮ್ಮಾ! ತಿಳಿದವರೇ ಹೀಗೆ ಹೆದರುತ್ತೀ-ರಲ್ಲಾ! ನಮ್ಮ ಡಾಕ್ಟರಂತೂ ದಿನಕ್ಕೆ ಇಂತಹ ನೂರಾರು ಕಿವಿನೋವು ಗಳಿಗೆ ಚಿಕಿತ್ಸೆ ಮಾಡುತ್ತಾರೆ. ಇದೇನೂ ಅಂತಹ ದೊಡ್ಡದಲ್ಲವಮ್ಮಾ. ನಿಮಗೆ ಸದಾ ಅಲ್ಲಿ ಮುಟ್ಟಿಮುಟ್ಟಿಯೇ ನೋವು ಬಂದಿದೆಯೇ ಹೊರತು ಅದು ಚಿಕಿತ್ಸೆಗಾಗಿಯಲ್ಲ." ಅಂದಳು.

ನನಗೇನೋ—ಅವಳೇನೇ ಹೇಳಲಿ—ನಂಬಿಕೆಯಾಗದು. ಆ ಕ್ಷಣಕ್ಕೆ ಸುಮ್ಮನಾದೆ. ಅವಳೂ ಔಷಧಿಯನ್ನು ಅವಸರದಲ್ಲಿ ಬಾಯಲ್ಲಿ ಸುರಿದು ಹೊರಟು ಹೋದಳು. ಅವಳಿದ್ದಷ್ಟು ಹೊತ್ತು ನನಗೆ ಕಿವಿಯ ಕಡೆಗೆ ಯೋಚನೆಯೇ ಇರಲಿಲ್ಲ. ಪುನಃ ನನ್ನ ಗಿಲಿಯೇ ನನಗೆ. ಹೀಗೆ ಹಾಗೆ ಹೊರಳಾಡಿದೆ. ಕೊಠಡಿಯಲ್ಲಿದ್ದ ಒಂದೆರಡು ಚಿತ್ರಪಟಗಳನ್ನು ನೋಡಿದೆ. ಎದುರಿಗಿದ್ದ ಕಿಟಕಿಯಿಂದಾಚೆ ಆಕಾಶವನ್ನು ನೋಡುತ್ತ ಮಲಗಿದ್ದೆ. ಹೊತ್ತು ಮುಳುಗಲು ಇನ್ನೂ ಐದಾರು ಗಂಟೆಗಳ ಕಾಲ ವಿತ್ತು. ಪುಟ್ಟ ಪುಟ್ಟ ಬಿಳಿಯ ಮೋಡಗಳು ಅಲ್ಲಿ ಇಲ್ಲಿ ಚೆದರಿ ಆಟ ವಾಡುತ್ತ ಮುಂದುವರಿಯುತ್ತಿದ್ದುವು. ನೀಲಿ ಆಕಾಶವು ತನ್ನದೇ ಆದ ಒಂದು ಸೊಬಗಿನಿಂದ ಕಂಗೊಳಿಸುತ್ತಿತ್ತು. ನೋಟ ಬಹಳ ಚೆನ್ನಾಗಿತ್ತು ನನಗೆ ಆ ಕಡೆ ಮನಸ್ಸಿಲ್ಲ. ಹೊರಗೆ ಕೆಲಸಕ್ಕಾಗಿ ಹೋಗಿದ್ದ ನರ್ಸಿನ ಮೆಲ್ಲನೆಯ ಸಪ್ಪಳ ಕೇಳಿದ ಕೂಡಲೆ, ಪುನಃ ಕರೆಯಲೇ ಎನ್ನಿಸಿತು. "ಪುನಃ ಪುನಃ ಹೇಗೆ ಕರೆಯಲಿ?" ಎಂದುಕೊಂಡೆ. ಕೊನೆಗೆ ಧೈರ್ಯ ಮಾಡಿ "ನರ್ಸ್" ಎಂದೆ. ಆವಳು ಹತ್ತಿರ ಬಂದಳು.

"ನೋಡಿ ನರ್ಸ್, ನನಗೇಕೋ ಬಹಳ ಬೇಸರವಾಗಿದೆ. ಎಷ್ಟು ಬೇರೆ ಕಡೆ ತಿರುಗಿಸಿದರೂ, ನನಗೇನೋ ನೋವು ನಿಮಿಷ ನಿಮಿಷಕ್ಕೆ ಹೆಚ್ಚುತ್ತಿರುವಂತೆಯೇ ಇದೆ. ಒಂದೊಂದು ನೋಡವು ನನ್ನನ್ನು ಕರೆದುಕೊಂಡು ಹೋಗುವುದಕ್ಕೆಂದೇ ಬಂದಂತೆ ತೋರುತ್ತೆ. ನರ್ಸ್! ದಯವಿಟ್ಟು ನಮ್ಮ ತಾಯಿಗೆ ಸಮಾಚಾರ ತಿಳಿಸಿಬಿಡಿ. ನನ್ನ ಮಾತನ್ನು ನಿರಾಕರಿಸಬೇಡಿ!" ಎಂದು ಹೇಳಿದೆ; ಕಣ್ಣಲ್ಲಿ ನೀರು ಉಕ್ಕಿ ಬಂತು.

ನರ್ಸ್ ಅದನ್ನು ನೋಡಿ ತಕ್ಷಣ ತನ್ನ ಬಿಳಿಯ ಕರವಸ್ತ್ರದಿಂದ ಕಣ್ಣೊರಸಿ, "ಅಳಬೇಡಿ, ನೋಡಿ, ನಿಮಗೆ ಕಿವಿಬೇನೆಗಿಂತಲೂ ಮನಸ್ಸಿನ ಕಳವಳ ಹೆಚ್ಚು. ಇನ್ನೂ ಚಿಕಿತ್ಸೆಯಾಗಿ ಎರಡು ಗಂಟೆ-ಗಳಾಗಿಲ್ಲ. ಇದುವರೆಗೂ ಡಾಕ್ಟರು ನಾಲ್ಕು ಸಲ ಬಂದು ನೋಡಿದರು. ಬೇಗನೆ ಗುಣವಾಗಬಹುದೆಂಬ ಭರವಸೆಯನ್ನಿಟ್ಟುಕೊಂಡಿದ್ದಾರೆ. ಅಂಥದರಲ್ಲಿ ಇಷ್ಟು ಅಳಿದು ಹೋದರೆ ಹೇಗಮ್ಮಾ? ಇನ್ನೆರಡು ದಿನ ವಾದರೂ ಕೊನೆಯ ಪಕ್ಷ ಇರಬೇಕಾಗುವುದು. ಮನಸ್ಸಿಗೆ ಹೆಚ್ಚು ಹಚ್ಚಿಕೊಳ್ಳಬೇಡಿ. ಇದಕ್ಕೆಲ್ಲಾ ಸಿದ್ಧೌಷಧಿಯೊಂದು ನಮ್ಮಲ್ಲಿದೆ ತಾಳಿ, ಅದನ್ನು ಕಳುಹುತ್ತೇನೆ." ಎಂದೆಂದು ಗಂಭೀರವಾಗಿ ಹೊರಟು ಹೋದಳು. ನನಗೆ ಈಗಾಗಲೇ ಕಿವಿನೋವು ಕಡಿಮೆಯಾದಂತೆಯೇ

* ಜಯಂತಿಯ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ೨ನೆಯ ಬಹುಮಾನ ಪಡೆದ ಕತೆಯಿದು.

—ಸಂ. ಜ.

ಭಾಸವಾಯಿತು. ಸುಮ್ಮನೆ ಕಣ್ಣುಮುಚ್ಚಿ ಹತ್ತು ನಿಮಿಷ ಮಲಗಿದ್ದೆ. ನನ್ನ ಮನಸ್ಸಮಾಧಾನಕ್ಕೆಂದು ಈ ರೀತಿ ಹೇಳಿದ್ದಾಳೆ. ಡಾಕ್ಟರಾದರೂ ಬಂದರೆ ನನ್ನ ದುಃಖವನ್ನು ಅವರಲ್ಲಿ ಹೇಳಿಕೊಳ್ಳಬಹುದು!" ಎನ್ನಿಸಿತು.

ಬಾಗಿಲಿಗೆ ಅಗುಳಿ ಹಾಕಿರಲಿಲ್ಲ. ಸ್ವಲ್ಪ ಹೊತ್ತಿಗೆ ನಿಧಾನವಾಗಿ ಬಾಗಿಲು ತೆರೆದಂತೆ ತೋರಿತು. ನಿಧಾನವಾಗಿ ಸದ್ದಿಲ್ಲದೆ ಯಾರೋ ಹೆಜ್ಜೆ ಇಡುತ್ತ ನನ್ನ ಬಳಿಗೇ ಬರುತ್ತಿರುವಂತೆ ತೋರಿತು. 'ಯಾರಾದರೂ ಸರಿ, ಬಂದು ಎಬ್ಬಿಸಲಿ', ಎಂದು ಹಾಗೇ ಮಲಗಿದ್ದೆ. ಹೆಜ್ಜೆಯ ಸದ್ದು ಬರುಬರುತ್ತಾ ಹತ್ತಿರ ಬಂದು, ಮಂಚದ ಪಕ್ಕದಲ್ಲಿದ್ದ ಕುರ್ಚಿಯ ಹತ್ತಿರ ನಿಂತಿತು. 'ಯಾರಿರಬಹುದು?' ಎಂದು ಕುತೂಹಲದಿಂದ ನೋಡುತ್ತೇನೆ: ಪುಟ್ಟದೊಂದು ದಂತದ ವಿಗ್ರಹದಂತಹ ಹುಡುಗ! ಆಕಾಶಬಣ್ಣದ ಪಾಯಿಜಮೆಯನ್ನೂ ಬಿಳಿಯ ಷರ್ಟನ್ನೂ ತೊಟ್ಟಿದ್ದಾನೆ. ತುಂಬಿಯಂತಿರುವ ಕಣ್ಣುಗಳು. ಜೇಷ್ಟೆಯೂ ತುಂಟತನವೂ ತುಂಬಿಬರುತ್ತಿದೆ ಆ ಕಣ್ಣುಗಳಲ್ಲಿ. ತಲೆಯ ಕ್ರಾಪು ಗಾಳಿಗೆ ಚೆದರಿ, ಮುಖದ ಮೇಲೆ ಪುಟ್ಟ ಪುಟ್ಟ ಕೂದಲುಗಳು ನಲಿದಾಡುತ್ತಿವೆ. ಮಗು ಕುರ್ಚಿಯಲ್ಲಿ ಕೂತರೆ ನಾನೇನೆನ್ನುವೆನೋ ಎಂದು, ನನ್ನ ಕಡೆಗೊಂದು ಸಲ, ಕುರ್ಚಿಯನ್ನೊಂದು ಸಲ ನೋಡುತ್ತಿದ್ದ. "ಇವನೇಕೆ ಇಲ್ಲಿ ಬಂದ? ನರ್ಸ್ ಔಷಧಿ ತರುವಷ್ಟರಲ್ಲಿ ಇವನೊಂದಿಗೆ ಮಾತಾಡಿ ಕಿವಿನೋವು ಮರೆಯೋಣ" ಎಂದು, "ಬಾ, ಕುರ್ಚಿಯಲ್ಲಿ ಕೂತುಕೋ" ಎಂದೆ. ಹೇಳಿದ್ದೇ ಸಾಕು ಎಂದು, ಅವನು ತನ್ನ ಆಟದ ಮೋಟರನ್ನು ಪಕ್ಕದಲ್ಲಿಟ್ಟುಕೊಂಡು ಕುರ್ಚಿಯಲ್ಲಿ ಕೂತು ನನ್ನನ್ನೇ ನೋಡಲಾರಂಭಿಸಿದ. ಈ ಪುಟ್ಟ ಮಗುವಿನೊಂದಿಗೆ ಏನು ಮಾತನಾಡುವುದೆಂದು ತೋರದೆ ಸುಮ್ಮನಿದ್ದೆ. ಐದು ನಿಮಿಷವಾಯಿತು. ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾ ಇದ್ದೇವೆ. ನಾನು ಕಣ್ಣು ಮುಚ್ಚಿದ್ದಾಗ ನನ್ನನ್ನೇ ನೋಡುವುದು; ಕಣ್ಣು ತೆರೆದೆನೋ ಇಲ್ಲವೋ, ಕೆಳಗೆ ತನ್ನ ಮೋಟರನ್ನು ತಿರುಗಿಸುವುದು. ಹೀಗೇ ಐದು ನಿಮಿಷ ಕಳೆಯಿತು. ಅನಂತರ ನಾನೇ ಅವನ ಕೈಯನ್ನು ನನ್ನ ಕೈಯಲ್ಲಿ ತೆಗೆದುಕೊಂಡು "ನಿನ್ನ ಹೆಸರೇನು?" ಎಂದೆ. ಸ್ವಲ್ಪವೂ ಹಿಂಜರಿಯದೆ "ನನ್ನ ಹೆಸರು ಆನಂದು" ಎಂದ. "ಓ! ಆನಂದುವೇ? ನೀನು ಇಲ್ಲಿ ಏಕೆ ಬಂದೆ?" "ನನ್ನ ಶೀಲಾ, 'ಇಲ್ಲಿ ಹೋಗು, ಅಕ್ಕನಿಗೆ ತುಂಬ ಬೇಸರವಂತೆ; ನೀನು ಹೋದರೆ ಕಡಿಮೆಯಾಗುತ್ತದಂತೆ' ಎಂದಳು. ನಾನು ಬಂದೆ. ಲೀಲೂಅಕ್ಕ ನೀವೇ ಅಲ್ಲವೇ?"

"ಇಲ್ಲಿದ್ದಾರಲ್ಲಾ, ಕೆಂಪು ಪಟ್ಟಿ ಕೊರಳಿಗೆ ಹಾಕಿಕೊಂಡು ಓಡಾಡುತ್ತಾರಲ್ಲಾ, ಅವರೇ ನರ್ಸ್ ಶೀಲು? ಅವರು ನಿನ್ನನ್ನು ಇಲ್ಲಿಗೆ ಕಳುಹಿಸಿದರೇ? ಓ! ಈಗ ತಿಳಿಯಿತು. ಅವರು ಹೇಳಿದ ಸಿವ್ಹೌಷಧಿ ನೀನೇನು?" ಎಂದೆ. ಅವನೇನೂ ತಿಳಿಯದೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದ. ನೋವು ನಿಜವಾಗಿಯೂ ಕಡಿಮೆಯಾಗಿತ್ತು. ಪುನಃ "ಆನಂದು, ನಿಜವಾಗಿಯೂ, ನೀನು ಬಂದುದರಿಂದ ನನಗೆ ಬೇಸರು ಹೋಯಿತು. ಆಸ್ಪತ್ರೆಯಲ್ಲಿ ನೀನೇನು ಮಾಡುತ್ತೀ?" ಎಂದೆ

"ನಾನು ಇಲ್ಲಿಯೇ ಮಹಡಿಯ ಮೇಲೆ ಮಲಗುತ್ತೇನೆ. ಶೀಲಾ ನನಗೆ ಬೆಳಿಗ್ಗೆ ಕಾಫಿ ತಿಂಡಿ ಎಲ್ಲಾ ಕೊಡುತ್ತಾರೆ. ಡಾಕ್ಟರ್ ಪರಮೇಶ್ವರನ್ ಪುಟ್ಟ ಹುಡುಗರಿಗೆ ಔಷಧಿ ಹಾಕಬೇಕಾದರೆ, ನನ್ನ ಕರೆದು ಹತ್ತಿರ ನಿಂತುಕೊಳ್ಳಹೇಳುತ್ತಾರೆ. ಅವರಿಗೆಲ್ಲಾ ನಾನಿಲ್ಲದಿರುವಾಗ, ಕಣ್ಣುಮುಚ್ಚಿಕೊಂಡರೆ ಹುಲಿ, ಸಿಂಹ, ಎಲ್ಲಾ ಕಾಣುತ್ತಂತೆ. ನಾನು ಹತ್ತಿರ ಇದ್ದರೆ, ರೇಲು, ಏರೋಪ್ಲೇನ್ ಎಲ್ಲಾ ಕಾಣುತ್ತಂತೆ. ಅದಕ್ಕೇ ನಾನು ಯಾವಾಗಲೂ ಇಲ್ಲಿರುತ್ತೇನೆ." ಎಂದ. ನನಗೆ ಇದನ್ನೆಲ್ಲಾ ಕೇಳಿ ಬಹಳ ಆಶ್ಚರ್ಯವಾಯಿತು. 'ತೀರ ಐದಾರು ವರ್ಷ ಕೂಡ ಇಲ್ಲ, ಎಷ್ಟು ಚೆನ್ನಾಗಿ ಮಾತಾಡುತ್ತಾನೆ. ಹೇಗೆ ನಡೆದುಕೊಳ್ಳುತ್ತಾನೆ!" ಎಂದುಕೊಂಡೆ. "ಇನ್ನೂ ಏನೇನು ಮಾಡುತ್ತೀ ಹೇಳು" ಎಂದೆ.

"ನಾನು ರೈಲು, ಬಸ್ಸು, ಕುದುರೆ, ಆನೆ, ಶಿಪಾಯಿ ಎಲ್ಲಾ ಇಟ್ಟುಕೊಂಡು ಎಷ್ಟು ಆಟ ಆಡುತ್ತೇನೆ ಗೊತ್ತೇ? ಬಸ್ಸಿನಲ್ಲಿ ಸ್ಟೇಶನ್‌ಗೆ ಹೋಗಿ, ಅಲ್ಲಿಂದ ಬೊಂಬಾಯಿಗೆ ರೈಲಿಗೆ ಹೋಗಿ. ಸಮುದ್ರ ತೋರಿಸಿಕೊಂಡು, ಶಿಪಾಯಿಗಳನ್ನೆಲ್ಲಾ ವಾಪಸು ಕರೆದುಕೊಂಡು ಬರುತ್ತೇನೆ ಅಷ್ಟರಲ್ಲಿ ಶೀಲು ನನಗೆ ರೊಟ್ಟಿ–ಹಾಲು ತಂದು ಕೊಡುತ್ತಾಳೆ. ಅದನ್ನು ತಿನ್ನುತ್ತಾ ಇದ್ದರೆ ಗುಬ್ಬಚ್ಚಿಗಳು ತಮಗೂ ಬೇಕೆಂದು "ಚಿಚಿ.ಪಿಚಿ" ಎನ್ನುತ್ತವೆ. ನಾನು ಚೂರೇ ಚೂರು ಹಾಕಿದರೆ ಎಲ್ಲಾ ಭರ್ ಎಂದು ಹಾರಿ ಹೋಗುತ್ತವೆ. ತಿನ್ನೋದೇ ಇಲ್ಲ."

ಅಷ್ಟರಲ್ಲಿ ನರ್ಸ್ ಶೀಲು ಬಂದು, "ಏಳು ಆನಂದು, ಹೊತ್ತಾಯಿತು: ಡಾಕ್ಟರ್ ನೋಡಿದರೆ ಆಮೇಲೆ ಆಯಿತು ನನಗೆ," ಎಂದು ಕೈಹಿಡಿದು ಮಗುವನ್ನು ನಡೆಸಿಕೊಂಡು ಹೋಗುತ್ತ "ಇವನು ಬಹಳ ತುಂಟ" ಎಂದು ನನಗೆ ಹೇಳಿದಳು.

ಸಂಜೆ ಎಂಟು ಗಂಟೆಯಾದ ಮೇಲೆ ಅವಳು ಪುನಃ ಬಂದಳು. ಅದುವರೆಗೂ ನನಗೆ "ಆ ಮಗು ಯಾರಿರಬಹುದು? ಏಕೆ ಈ ಆಸ್ಪತ್ರೆಯಲ್ಲಿದೆ? ಅದನ್ನು ಯಾರು ನೋಡಿಕೊಳ್ಳುತ್ತಾರೆ? ಶೀಲುಗೇಕೆ ಆ ಮಗುವನ್ನು ಕಂಡರೆ ಅಷ್ಟು ಕನಿಕರ? ಅದರ ತಾಯಿ ತಂದೆ ಯಾರೂ ಇಲ್ಲಿಲ್ಲವೇ?" ಎಂದು ನಾನಾವಿಧವಾಗಿ ವಿಚಾರತರಂಗಗಳೇಳುತ್ತಿದ್ದುವು. ಶೀಲು ಬಂದ ಕೂಡಲೆ ಕುತೂಹಲವನ್ನು ತಡೆಯಲಾರದೆ "ಕ್ಷಮಿಸಬೇಕು ಶೀಲು, ನಾನು ನಿಮ್ಮನ್ನು ಇನ್ನು ಮೇಲೆ ಶೀಲು ಎಂದೇ ಕರೆಯುತ್ತೇನೆ. ಆನಂದು ಹೇಳಿದ, ನಿಮ್ಮ ಹೆಸರು ಅದೇ ಎಂದು. ನಾನೊಂದು ಮಾತು ಕೇಳುತ್ತೇನೆ, ನೀವೇನೂ ತಪ್ಪು ತಿಳಿದುಕೊಳ್ಳದಿದ್ದರೆ" ಎಂದೆ.

"ಅದೇನೂ ಇಲ್ಲ ಹೇಳಿ. ನನ್ನ ಹೆಸರು "ಸುಶೀಲು" ಇಲ್ಲಿ ಬಂದು ಶೀಲು ಆಗಿದೆ. ನೀವು ಹಾಗೆ ಕರೆದರೇ ನನಗೆ ಬಹಳ ಸಂತೋಷ! ಆನಂದುವನ್ನು ಊಟ ಹಾಕಿ ಮಲಗಿಸುವ ವೇಳೆಗೆ ಇಷ್ಟು ಹೊತ್ತಾಯಿತು. ಈಗ ಹೇಗಿದೆ ಕಿವಿ?" ಎಂದಳು.

"ನೀವು ಕಳುಹಿಸಿದ ಔಷಧಿ ಬಹಳ ಒಳ್ಳೆಯದು ಶೀಲು! ನಿಜವಾಗಿಯೂ ನೋವು ಬಹಳ ಮಟ್ಟಿಗೆ ವಾಸಿ. ದಿನವೂ ನಾನಿಲ್ಲಿರುವ

ತನಕ ಆನಂದುವನ್ನು ನನ್ನ ಹತ್ತಿರ ಕಳುಹುವಿರಾ? ಎಂದು ದೈನ್ಯ-ದಿಂದ ಕೇಳಿದೆ.

“ಅವಶ್ಯಕವೇನು, ಅಗತ್ಯವಾಗಿ! ಇಷ್ಟೋ ಇವನ್ನಿನ್ನೊಂದೆರಡು ಸಲ ತೆಗೆದುಕೊಂಡರೆ ಇನ್ನೂ ಇಳಿಯುತ್ತದೆ ನೋವು. ಎಲ್ಲಿ” ಎಂದು ನನ್ನ ಬಾಯಲ್ಲಿ ಔಷಧಿ ಹಾಕಿದಳು. ಹಾಲುರೊಟ್ಟಿ ತೆಗೆದುಕೊಂಡ ಮೇಲೆ, ಮುದುರಿದ್ದ ಹಾಸಿಗೆಯನ್ನು ನೆಟ್ಟಗೆ ಮಾಡಿ, ಕಂಬಳಿಯನ್ನು ಮಂಚದ ತಂತಿಗೆ ಬಿಗಿದು, ಕಿವಿ ಮುಟ್ಟಬೇಡವೆಂದು ಹುಷಾರು ಹೇಳಿ ಸುಶೀಲಾ, ದೀಪವಾರಿಸಿ ಹೋದಳು. ಪುನಃ ದೀಪ ಹಚ್ಚಿದರು. ಇನ್ನೂ ನಿದ್ದೆ ಹಿಡಿದಿರಲಿಲ್ಲ. ಕಣ್ಣು ತೆರೆದೆ. ಡಾಕ್ಟರು! ಬಂದು ನೋಡಿ, “ಪರವಾಯಿಲ್ಲ ಇನ್ನು ಎರಡು ಮೂರು ದಿನಗಳಲ್ಲಿ ಮನೆಗೆ ಹೋಗಬಹುದು!” ಎಂದು ಹೇಳಿದರು. ನನಗೆ ರಾತ್ರಿ ನಿದ್ದೆ ಬಂದಿ-ತ್ತಲ್ಲವೆ, ಸವಿಗನಸುಗಳಂತೂ ಕೊನೆಮೊದಲೇ ಇಲ್ಲ. ಕನಸಿನಲ್ಲೆಲ್ಲಾ ಆನಂದುವಿನೊಡನೆ ಎಲ್ಲೆಲ್ಲೂ ಆಟವಾಡಿದ್ದೂ ಆಡಿದ್ದೇ. ಮಾರನೆಯ ಬೆಳಗ್ಗೆ ನನಗೆ ಆಸ್ಪತ್ರೆಯಲ್ಲಿರುವೆನೋ ಅರಮನೆಯಲ್ಲಿರುವೆನೋ ಎನ್ನುವಷ್ಟು ಹಾಯೆಂತಿತ್ತು.

ಆರು ಘಂಟೆಗೆಲ್ಲಾ ಮುಖ ತೊಳೆದು ಕಾಫಿ, ರೊಟ್ಟಿ ಆಯ್ತು. ಅರ್ಧಗಂಟೆಯ ನಂತರ ದಿನದಂತೆ ಜ್ವರ ನೋಡಿ, ಔಷಧಿ ಕುಡಿಸಿ, ನರ್ಸ್ ಹೊರಟು ಹೋದಳು. ನನಗೆ “ಇವತ್ತು ಕೂಡ ಆನಂದು ಬಂದರೆ ಚೆನ್ನಾಗಿತ್ತು. ನರ್ಸನ್ನ ಕೇಳೋಣವೆಂದರೆ ಬೆಳಗ್ಗೆ ನಿಲ್ಲಲು ಸಹ ಪುರುಸೊತ್ತಿರಲಿಲ್ಲ. ನಿನ್ನೆಯೇ ದಿನವೂ ಕಳಿಸು ಎಂದಿದ್ದೆ, ಆದರೆ ಆವಳಿಗೆ ಜ್ಞಾಪಕವಿದೆಯೋ ಇಲ್ಲವೋ” ಎಂದು ನಾನಾ ಯೋಚನೆ. ಹೀಗೆ ಕಣ್ಣು ಮುಚ್ಚಿ ಮಲಗಿದ್ದೆ. ಬಾಗಿಲು ಸದ್ದಿಲ್ಲ-ದಂತೆ ತೆಗೆದಂತೆ ಭಾಸವಾಯಿತು. ಆನಂದುವೇ ಎಂದುಕೊಂಡು, ಅವನೇ ಹತ್ತಿರ ಬರಲಿ ಎಂದು ಸುಮ್ಮನಿದ್ದೆ. ಆದರೆ, ಆಸ್ಪತ್ರೆಯ ಹಿರಿಯ ಡಾಕ್ಟರ್-ಡಾಕ್ಟರ್ ಪರಮೇಶ್ವರನ್ ಬಂದುದು. ನೋಡಿದರು. ಶೀಟುಗಳನ್ನು ಪಟ್ಟಿಯಲ್ಲಿ ಸಿಕ್ಕಿಸಿ ನರ್ಸಿಗೆ ಕೆಲವು ಸಲಹೆಗಳನ್ನು ಕೊಟ್ಟು, “ಹೊರಡುವುದರಲ್ಲೇ ಇದ್ದಿರಂತೆ; ಆದರೂ ಬಹಳ ಆಶ್ಚರ್ಯ. ನಿನ್ನೆಗೂ ಇಂದಿಗೂ ನೋಡಿದ ಹಾಗೇ ಗುಣ ಕಂಡಿದೆ. ಮುಖ್ಯ ಮನಸ್ಸಿನ ಯೋಚನೆ ಕಡಿಮೆಯಾದರೆ ನೋವೂ ಕಡಿಮೆ” ಎಂದರು. ಇದಾದ ಇರಬಹುದು ಅರ್ಧ ಗಂಟೆಯಾದ ಮೇಲೆ, ರೆಸಿಡೆಂಟ್ ಮೆಡಿಕಲ್ ಆಫೀಸರು ಬಂದು ನೋಡಿ, ವಿಶೇಷ ಗುಣ ಕಂಡಿದೆಯೆಂದು ಹೇಳಿಹೋದರು.

ಇಷ್ಟು ಹೊತ್ತು ಆನಂದುವಿನ ಬರವನ್ನು ನೋಡಿ ನೋಡಿ ಸಾಕಾಯಿತು. ಬರುವುದೇ ಇಲ್ಲ—ಎಂದು ಗೋಡೆಗೆ ಮುಖಮಾಡಿ ಕೊಂಡು ಮಲಗಿಕೊಂಡೆ. ಒಂದು ನಿದ್ದೆಯಾಗಿ ಎಚ್ಚರವಾಗುವ ಹೊತ್ತಿಗೆ ಹನ್ನೊಂದು ಗಂಟೆ ಆಗಿತ್ತು. ಹಿಂದಿನ ದಿನದಂತೆಯೇ ಮೆಲ್ಲಗೆ ಬಾಗಿಲು ತೆಗೆದಂತಾಯಿತು. ಪುಟ್ಟ ಪುಟ್ಟ ಹೆಜ್ಜೆಯ ಸದ್ದು ಕೇಳಿಸಿತು. ಏನು ಮಾಡುವನೋ—ಎಂದು ಹಾಗೇ ಮಲಗಿದ್ದೆ. ಹತ್ತಿರ ಹತ್ತಿರ ಸದ್ದಿಲ್ಲದೆ ಬಂದು, ನಾನು ಹೊದೆದಿದ್ದ ಕಂಬಳಿಯನ್ನು ಮೆಲ್ಲಗೆ ಜರುಗಿಸಿ “ಏಯ್, ನಿದ್ದೆ ಮಾಡುವಂತೆ ವೇಷ ಹಾಕ್ತೀಯಾ” ಅಂದ. ನನಗೆ ನಗು ತಡೆಯಲಾರದೆ ಬಂತು. ಜೋರಾಗಿ ನಕ್ಕು ಆನಂದುವನ್ನು ಹತ್ತಿರ ಎಳೆದುಕೊಂಡು ಮುತ್ತಿಟ್ಟೆ. ಅವನಿಗೆ ಬಹಳ ಸಂತೋಷವಾಗಿರಬೇಕು. “ನಾನು ಅಳದೆ ತಿಂಡಿ ತೆಗೆದುಕೊಂಡರೆ, ಶೀಲು, ಎಮಿಲಿ, ವಿಮೂ ಎಲ್ಲರೂ ನನಗೆ ಹೀಗೇ ಮುತ್ತು ಕೊಡುತ್ತಾರೆ” ಎಂದ. ನಾನು “ಶೀಲುವೇನೋ ಗೊತ್ತು. ಮಿಕ್ಕ ಇಬ್ಬರು ಯಾರು?” ಎಂದೆ. “ಅವರೂ ಶೀಲು ಹಾಗೇ ಇದ್ದಾರೆ. ಎಮಿಲಿ ಮೂರನೇ ವಾರ್ಡಿನಲ್ಲಿದ್ದಾಳೆ. ವಿಮೂ ಒಂದನೇ ವಾರ್ಡಿನಲ್ಲಿದ್ದಾಳೆ. ಆಗಾಗ ಆಪರೇಷನ್ ಕೊಠಡಿಗೂ ಬರುತ್ತಾಳೆ” ಎಂದ. “ಓ! ನೀನು ಕಾಫಿ, ತಿಂಡಿ ಎಲ್ಲಾ ತೆಗೆದುಕೊಂಡಾಯಿತೆ? ಇವತ್ತೇಕೆ ಇಷ್ಟು ಹೊತ್ತಾದರೂ ಬರಲಿಲ್ಲ? ನೀನು ಬರುವುದೇ ಇಲ್ಲವೆಂದಿದ್ದೆ.”

“ನಿನಗೆ ಕಥೆ ಬರುತ್ತೆ ತಾನೇ?” ಎಂದು ಮರುಪ್ರಶ್ನೆ ಹಾಕಿದ. “ಬೇಕಾದಷ್ಟು ಬರುತ್ತೆ, ಕಾಗೆ ನರಿ ಕತೆ, ಗುಬ್ಬಚ್ಚಿ ಕತೆ, ಸಿಂಹ ಇಲಿ ಕತೆ, ಇನ್ನೂ ಯಾವ್ಯಾವುದೋ ಬರುತ್ತೆ.” “ಮತ್ತೆ ಈಗ ನನಗೆ ಹೇಳು” ಎಂದ. ನಾನು ಕುರ್ಚಿಯಲ್ಲಿ ಕೂತಿದ್ದವನ ಕೈ ಹಿಡಿದು ನನ್ನ ಕೈಯಲ್ಲಿ ತೆಗೆದುಕೊಂಡೆ. ಒಂದೊಂದಾಗಿ ಕತೆ ಹೇಳತೊಡಗಿದೆ. ಎರಡು ಮೂರು ಹೇಳಿದರೂ ಬೇಡವೆನಲೇ ಇಲ್ಲ. ನಾನೇ “ಇನ್ನು ಸಾಕು. ಮಿಕ್ಕ ಕತೆಗಳು ನಾಳೆಗಿರಲಿ. ನೀನಿಷ್ಟು ಹೊತ್ತು ಏನು ಮಾಡುತ್ತಿದ್ದೆ ಹೇಳು” ಎಂದೆ. “ಓ! ನನಗೆಷ್ಟು ಕೆಲಸ ಇತ್ತು! ಮೂರನೇ ವಾರ್ಡಿನಲ್ಲಿ ರಾಜುಗೆ, ಪಾಪ, ಕಣ್ಣು ನೋವು ಹೆಚ್ಚಾಗಿತ್ತು. ಒಂದು ಕಣ್ಣಿಗೆ ಬ್ಯಾಂಡೇಜ್ ಕಟ್ಟಿದ್ದಾರೆ. ನಾನು ಹೋಗಿ ರೈಲು, ಗಾರ್ಡ್, ಕೆಂಪು ಬಾವುಟ, ಹಸಿರು ಬಾವುಟ ಎಲ್ಲಾ ತೋರಿಸಿದೆ. ಅವನಿಗೆ ಈಗ ಕಣ್ಣು ಎಷ್ಟೋ ವಾಸಿ ಇಲ್ಲದಿದ್ದರೆ ಅವನು ಅಳುತ್ತಲೇ ಇರುತ್ತಾನೆ.”

“ಎಷ್ಟು ಹೊತ್ತಿದ್ದೆ? ರಾಜುವೂ ನಿನ್ನ ಕೂಡ ಆಡಿದನೇ? ಯಾರೂ ಅವನನ್ನು ಬೈಯಲಿಲ್ಲವೇ?” “ಸ್ವಲ್ಪವೇ ಸ್ವಲ್ಪ ಹೊತ್ತು ಅಲ್ಲಿದ್ದೆ. ಆಮೇಲೆ ಕುಸುಂ ಹತ್ತಿರ ಹೋಗೋಣವೆಂದು ಎರಡನೇ ವಾರ್ಡಿಗೆ ಹೋದೆ. ಅಲ್ಲಿ ಅವರಮ್ಮ ಅಳುತ್ತಿದ್ದಳು. ಕುಸುಂಗೆ ಇಲ್ಲಿ ಕಾಯಿಲೆ ಹೋಗಲಿಲ್ಲವಂತೆ. ಅದಕ್ಕೆ ದೇವರ ಹತ್ತಿರ ಹೋದಳಂತೆ. ಶೀಲು ಹೇಳಿದಳು.”

“ಅಬ್ಬ! ಇವನು ಮಾತಾಡುತ್ತ ಕುಳಿತರೆ ಹೊತ್ತು ಗೊತ್ತು ಏನೂ ಇಲ್ಲ ಎಲ್ಲಿ? ಏಳು ಆನಂದು, ಊಟಕ್ಕೆ ಹೊತ್ತಾಯಿತು. ಆಮೇಲೆ ಡಾಕ್ಟರು ಚೆನ್ನಾಗಿ ಔಷಧಿ ಕುಡಿಸುತ್ತಾರೆ.” ಎನ್ನುತ್ತ ಬಂದು, ಶೀಲು ಅವನನ್ನು ಎತ್ತಿಕೊಂಡು ಮುದ್ದಾಡಿಸುತ್ತ ಹೋದಳು. ಪುನಃ ಬಂದು ನನಗೆ ಊಟ ಕೊಟ್ಟು, ಕಿವಿಗೆ ಔಷಧಿ ಹಾಕಿ, ಹೆಚ್ಚು ಮಾತಾಡಕೂಡದೆಂದು ಹೇಳಿದಳು. ನಾನು ಸುಮ್ಮನಿರದೆ “ಶೀಲು, ನಿಮ್ಮ ಔಷಧಿ ನಿಜವಾಗಿಯೂ ಫಲಕಾರಿಯಾದುದು. ಎಲ್ಲಿಂದ ಸಂಪಾದಿಸಿದಿರಿ ಇಷ್ಟು ಒಳ್ಳೆಯ ಮದ್ದನ್ನು?” ಎಂದೆ.

“ಅದೊಂದು ದೊಡ್ಡ ಕತೆ. ಪಾಪ! ಅವರ ತಾಯಿ ಎಳೆಯ

ದಾಗಿರುವಾಗಲೇ ಅದನ್ನು ಬಿಟ್ಟು ಕ್ಷಯದಲ್ಲಿ ಹೋದಳು. ಚಿಕ್ಕಮ್ಮ ಇದ್ದಾರೆ. ಆದರೆ ಮನೆಯ ತುಂಬ ಮಕ್ಕಳು; ಬರುವುದು ಅವರಿಗೇ ಸಾಲದು. ತಕ್ಕಂತೆಯೇ ಈ ಮಗುವಿಗೂ ಮೈ ಸರಿಯಿಲ್ಲ ಏನೋ ಒಂದು ತರಹ. ಇಲ್ಲಿ ದೊಡ್ಡ ಡಾಕ್ಟರು ಏನೇನೋ ಔಷಧಿಗಳನ್ನೆಲ್ಲಾ ತಿನ್ನಿಸಿ, ಈಗ ಇಷ್ಟರ ಮಟ್ಟಿಗಾಗಿದ್ದಾನೆ. 'ಇರುವಷ್ಟು ದಿನ ಬೇಕಾದ್ದನ್ನೆಲ್ಲಾ ಅನುಭವಿಸು,' ಎಂದು ಅವನಿಗೆ ಬೇಕಾದ್ದನ್ನೆಲ್ಲಾ ತೆಗೆದು ಕೊಡುತ್ತಾರೆ. ನನಗಂತೂ ನಮ್ಮ ಮಗುವಿನಂತೆಯೇ ಆಗಿದ್ದಾನೆ" ಎಂದು ಕಣ್ಣಲ್ಲಿ ನೀರು ತಂದುಕೊಂಡಳು. ನನಗೂ ಬಹಳ ದುಃಖವಾಯಿತು. ಹೆಚ್ಚು ಹೊತ್ತು ಅಲ್ಲಿ ನಿಲ್ಲಲಾರದೆ, ಕೆಲಸದ ನೆವಹೇಳಿ ಹೊರಟುಹೋದಳು. ಆ ದಿನವೆಲ್ಲಾ ಅವನ ಆಟವನ್ನು ನೆನೆಯುತ್ತ ಕಳೆದೆ.

ಯಥಾಪ್ರಕಾರ ಮಾರನೆಯ ಬೆಳಗ್ಗೆ ಆನಂದು ಹಾಜರ್ "ಲೀಲಕ್ಕ, ಪಕ್ಕದ ವಾರ್ಡಿನವರು ಇವತ್ತು ಮೂರು ಘಂಟೆಗೆ ಹೋಗುತ್ತಾರಂತೆ; ನೀವು ಯಾವಾಗ ಹೋಗುತ್ತೀರಿ?" ಎಂದ.

"ಹಾಗೇನು? ಯಾರದು?'' ಎಂದೆ. "ಅವರು ಬಂದು ಈಗಾಗಲೇ ತುಂಬ ದಿನವಾಯಿತು. ಪಾಪ! ಅವರಿಗೂ ನಿನ್ನಾಗೆ ಕಿವಿನೋವು. ಅವರ ಹತ್ತಿರ ಗ್ರಾಮೊಫೋನಿದೆ. ಹಾಕು ಎನ್ನಲಾ?"

"ಬೇಡಪ್ಪಾ, ಅವರು ಹೊರಡುವ ಗಲಾಟೆಯಲ್ಲಿದ್ದಾರೆ. ನೀನೇ ಒಂದು ಪುಟ್ಟ ಹಾಡು ಹೇಳು.'' ತಕ್ಷಣವೇ "ಚಂದಕ್ಕಿಮಾಮ" ಎಂಬ ತೀರ ಪುಟ್ಟ ಪದ್ಯ ಹೇಳಿದ. "ಇಂಗ್ಲಿಷ್ ಪದ್ಯ ಒಂದು ಹೇಳು ನೋಡೋಣ" ಎಂದೆ. 'Pus-y cat' ಹೇಳಿದ. ಹತ್ತಿರ ಬರಸೆಳೆದು ಒಂದು ಮುತ್ತಿಟ್ಟೆ. ಅವನು ಅಳುತ್ತ ಇದ್ದ. "ಏಕೆ ಅಳುತ್ತೀ" ಎಂದೆ "ಊ, ನೀನೂ ಅವರ ಹಾಗೇ ನನ್ನ ಬಿಟ್ಟು ಹೊರಟು ಹೋಗುತ್ತೀ. ಆ ಮೇಲೆ ನನಗೆ ಕತೆ ಯಾರು ಹೇಳುತ್ತಾರೆ?" "ಜಾಣ ಹುಡುಗರು ಅಳಲೇಬಾರದು. ನಿನಗೆ ಏನು ಬೇಕು ಹೇಳು. ಕೊಡುತ್ತೇನೆ.'' ಎಂದೆ. "ನನ್ನ ಝೂಗೆ ಕರಕೊಂಡು ಹೋಗು. ಅಲ್ಲಿ ಮೊಸಳೆ, ಕೋತಿ, ಸಿಂಹ, ಹುಲಿ ಎಲ್ಲಾ ತೋರಿಸುತ್ತೀಯಾ? ಬಣ್ಣದ ಮೀನುಗಳನ್ನೆಲ್ಲಾ ತೋರಿಸ್ಬೇಕು. ಕೋತಿಗೆ ಕಡಲೆಕಾಯಿ ಕೊಡುತ್ತೇನೆ. ನನ್ನ ಬೋಟಿನಲ್ಲಿ ಕೂರಿಸ್ತೀಯಾ?''

"ಹಾಗೇ ಆಗಲಿ! ಎಲ್ಲಿ ನಗು ಮತ್ತೆ ಈಗ" ದೊಡ್ಡನಾಗಿ ನಗಲಾರಂಭಿಸಿದ. ಅವನ ನಗು ಕೇಳಿ ಶೀಲು ಬಂದಳು. ನನ್ನ ಕಡೆ ತಿರುಗಿ "ಏನಂತೆ? ಇಷ್ಟು ನಗುತ್ತಿದ್ದಾನೆ?'' ಎಂದು, ಅವನನ್ನು "ಅಕ್ಕ ಏನು ಕತೆ ಹೇಳಿದಳೋ ನಿನಗೆ ಅಷ್ಟು ನಗು ಬರುವಂತೆ!" ಎಂದಳು. ಅದಕ್ಕೆ ಆನಂದು "ಕತೇನೂ ಅಲ್ಲ ಗಿತೇನೂ ಅಲ್ಲ. ನನ್ನ ಝೂಗೆ ಕರ್ಕೊಂಡು ಹೋಗ್ತಾಳಂತೆ. ಬೋಟ್‌ನಲ್ಲಿ ರೌಂಡ್ ಹಾಕಿಸ್ತಾಳಂತೆ" ಎಂದು, ನನ್ನ ಮುಖ ನೋಡಿದ. ನಾನು "ಹೌದು ಶೀಲು, ಡಾಕ್ಟರನ್ನ ಕೇಳೋಣಾಂತ ಇದ್ದೀನಿ. ನಾಳೆ ಮನೆಗೆ ಹೋದ ಮೇಲೆ, ಇನ್ನು ಎರಡು ಮೂರು ದಿನ ಆಗೂದಿಲ್ಲ ಆಮೇಲೇನು? ಅಂದ ಹಾಗೆ ಇವತ್ತು ಯಾವ ವಾರ?'' ಎಂದೆ.

"ಇವನಿಗೆ ಅಂದಿನಿಂದಲೂ ಝೂದ್ದೊಂದು, ಬೋಟಿನದೊಂದು— ಎರಡು ಹುಚ್ಚು. ಯಾರು ಬಂದರೂ ಕೇಳುತ್ತಾನೆ. ಮೈ ಹುಷಾರಿಲ್ಲವಾದ್ದರಿಂದ ಡಾಕ್ಟರ್ ಬೇಡವೆನ್ನುತ್ತಾರೆ. ಈಗಲೂ ಅಷ್ಟೇ. ಏನು ಹೇಳುತ್ತಾರೋ ಏನೋ?'' "ಎಲ್ಲಾ ಕಳಿಸ್ತಾರೆ ಶೀಲು! ನಾನಂತೂ ಅವರನ್ನು ಹೇಗಾದರೂ ಒಪ್ಪಿಸುತ್ತೇನೆ. ಅವತ್ತು ಕೂಡ ಅವನಿಗೆ ಈ ಅಂಗಿಯನ್ನೆ ತೊಡಿಸಬೇಕು. ಆದಿದ್ದರೆ ಇವನು ಪುಟ್ಟ ಕೃಷ್ಣನೇ!"

ನಾವು ಮಾತಾಡುತ್ತಿರುವಷ್ಟು ಹೊತ್ತೂ, ಇಬ್ಬರ ಮುಖವನ್ನೂ ತಿರ್‍ಮ್ಮೆ ನೋಡುತಾ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ. ಈಗ ನಾವು ಇಷ್ಟೊಂದು ತೀರ್ಮಾನಕ್ಕೆ ಬಂದ ಮೇಲೆ "ನೀನು ಯಾವತ್ತು ಹೋಗ್ತೀ?" ಅಂದ. "ಏ! ಅಕ್ಕನ್ನ 'ನೀನು, ನಾನು' ಎನ್ನುತ್ತೀಯೇನು? ಡಾಕ್ಟರ್ ಏನು ಹೇಳಿದ್ದಾರೆ? ಹೂಂ. ಹೇಳಲಾ?" ಎಂದು ಬಾಯಿಯ ಮೇಲೆ ಬೊಟ್ಟಿಟ್ಟುಕೊಂಡಳು. ಅವನು ಬಿಕ್ಕುತ್ತಾ "ಊ, ಏನೂ ಇಲ್ಲ. ಅಕ್ಕನೇ ತನ್ನ 'ಬಾ, ಹೋಗು' ಎಂದೇ ಅನ್ನು ಎಂದಿದ್ದಾಳೆ ನನಗೆ!" "ಇಲ್ಲಪ್ಪಾ, ಸುಮ್ಮನಿರು. ನಾನೇ ಹೇಳಿದೆ ಶೀಲು. ಅವನೆಲ್ಲಾ 'ನೀವು' ಎಂದೇ ಹೇಳುತ್ತಿದ್ದ. ಇವ್ನಕೂಡ ಅಕ್ಕನಿಗೇನು ಅಷ್ಟು ಮರ್ಯಾದೆ! ಡಾಕ್ಟರಿಗೆ ಹೇಳಬೇಡ" ಎಂದೆ.

"ನೋಡು ಲೀಲೂ, ಇವನು ಇಲ್ಲಿಗೆ ಬಂದಾಗಂತೂ ಅಷ್ಟು ವಕ್ರವಾಗಿ ಮಾತಾಡುತ್ತಿದ್ದ. ಡಾಕ್ಟರು ಹೇಳಿ ಹೇಳಿ ಈಗೆಷ್ಟೋ ವಾಸಿ. ಪುನಃ ಅದನ್ನೇ ಪ್ರಾರಂಭಿಸಿದರೆ ನಮಗೆ ಆಕ್ಷೇಪಣೆ!" ಎಂದಳು. ಅದೂ ನಿಜವೇ. ಯಾರದೋ ಮಗುವನ್ನು ತಂದು, ನಾಗರಿಕತೆಗೆ ತಕ್ಕಂತೆ ಅವನ್ನು ಅಣಿಮಾಡಿದ್ದರೆ, ಒಂದೆರಡು ದಿನಗಳ ಚಿಕಿತ್ಸೆಗೆಂದು ಬಂದು ನಾನೇಕೆ ಅದಕ್ಕೆ ಅಡ್ಡಿಯಾಗಬೇಕು? ನನಗೂ ಅದೇ ಸರಿ ಎನ್ನಿಸಿತು. "ಅಕ್ಕಾ, ನೀವು ಯಾವತ್ತು ಹೋಗ್ತೀರಿ?" ಎಂದು ಗಲ್ಲದ ಮೇಲೆ ಕೈ ಇಟ್ಟುಕೊಂಡು ಕೇಳಿದ. "ನಾನು ನಾಳೆ ಹೋಗುತ್ತೇನೆ." "ನನ್ನ ಯಾವತ್ತು ಕರ್ಕೊಂಡು ಹೋಗ್ತೀರಿ?" "ಇರು. ಡಾಕ್ಟರ್ ಬರಲಿ; ಕೇಳಿದ ಮೇಲೆ ಹೇಳ್ತೇನೆ.'' ಎನ್ನುತ್ತಿದ್ದಂತೆಯೇ ಮೆಲ್ಲಗೆ ಬಾಗಿಲು ತೆರೆದ ಶಬ್ದವಾಯಿತು. ಡಾಕ್ಟರು ಒಳಗೆ ಬಂದರು: "ಇವನದು ಗಲಾಟೆ! ಅದೇ ಹಳೆಯ ಕತೆ ತಾನೆ! ಝೂ ನೋಡಬೇಕು ಎನ್ನುವುದು." ಎಂದರು. ಅದೆಷ್ಟು ಹೊತ್ತಿಂದ ಅಲ್ಲೇ ನಿಂತು ನಮ್ಮ ಮಾತನ್ನು ಕೇಳುತ್ತಿದ್ದರೋ—ಎನ್ನಿಸಿತು ನನಗೆ. ಪುನಃ ಅವರೇ "ಕರೆದುಕೊಂಡೇನೋ ಹೋಗಬಹುದು; ಆದರೆ ಅವನಿಗೆ ಆ ಗಾಳಿ, ಬಿಸಿಲು ತಡೆಯುವಷ್ಟು ಶಕ್ತಿ ಇಲ್ಲ. ಈಗೊಂದೆರಡು ತಿಂಗಳ ಕೆಳಗಾಗಿದ್ದರೆ ಬೇಡವೇ ಬೇಡ ಎನ್ನುತ್ತಿದ್ದೆ. ಈಗ ಪರವಾಯಿಲ್ಲ, ಬೆಳಗ್ಗೆ ಹೋಗಿ ಸಂಜೆ ಬರುವಂತಿದ್ದರೆ" ಎಂದರು. ನಾನು "ಈಹೊತ್ತು ಮಂಗಳವಾರ; ನಾಳೆ ಮನೆಗೆ ಹೋಗುವ ಗಲಾಟೆಯಲ್ಲಿ ಆಗುವುದಿಲ್ಲ. ಶನಿವಾರ ಬೆಳಗ್ಗೆ ಒಂಭತ್ತು ಗಂಟೆಗೆ ಬರುತ್ತೇನೆ ಟ್ಯಾಕ್ಸಿ ಮಾಡಿಕೊಂಡು. ಇವನನ್ನು ಅವೊತ್ತೆಲ್ಲಾ ನನಗೇ ಕೊಡಬೇಕು'' ಎಂದೆ.

"ಓಹೋ! ಅವತ್ತೆಲ್ಲಾ ನಿಮಗೇ. ಶೀಲಾಗೆ ಒಂದು ದಿನ ಪೂರ್ತಿ ರಜ ದೊರೆತಂತಾಗುತ್ತದೆ. ಅಲ್ಲವೇ ನರ್ಸ್?" ಎಂದು

ನಗುತ್ತಾ ಅವಳನ್ನು ನೋಡಿದರು. ಪುನಃ ತಿವಿಯಬೇಡ ಎಂಬರ್ಥ ಬರುವಂತೆ ಹೇಳಿ, ಯಾಗಲಾರದೆಂದೂ, ಏಳೆಂಟು ದಿನ ಸ್ವಲ್ಪ ಹುಷಾರಾಗಿ ಶಾಂತವಾಗಿ ಇಟ್ಟಿರಬೇಕೆಂದೂ ಹೇಳಿ, ಆನಂದುವನ್ನು "ಕೊನೆಗೂ ನಿನ್ನ ಹಟ ಸಾಧಿಸಿಬಿಟ್ಟೆ," ಎಂದು ಬೆನ್ನು ಚಪ್ಪರಿಸಿ, "ನಮಸ್ಕಾರ, ಬೆಳಗ್ಗೆ ಬಂದು ನೋಡುತ್ತೇನೆ" ಎಂದು ಹೇಳಿ, ಹೊರಟು ಹೋದರು.

ಇನ್ನು ಆನಂದುವಿನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಕುಣಿಯಲಾರಂಭಿಸಿದ. ನರ್ಸ್ ಎಷ್ಟು ಹೇಳಿದರೂ ಕೇಳಲೊಲ್ಲ. ಕೊನೆಗೆ ಅವನನ್ನು ಸ್ವಲ್ಪ ಗದರಿಸಿ, "ನಡಿ, ಹಾಗಾದರೆ ಹೇಳಿದ ಮಾತು ಕೇಳದಿದ್ದವರನ್ನು ಅಕ್ಕ ಕರಕೊಂಡು ಹೋಗೋಲ್ಲಂತೆ" ಎಂದಳು. ಪಾಪ! ಎಲ್ಲಿ ಬಿಟ್ಟು ಹೋಗುವೆನೋ ಎಂದು ಹೆದರಿ ಸುಮ್ಮನಾದ. ಅವಳಿಗೂ ಅಯ್ಯೋ ಎನಿಸಿರಬೇಕು. ಅವನನ್ನು ಎತ್ತಿಕೊಂಡು ಮುದ್ದಾಡುತ್ತಾ, "ಅಕ್ಕನಿಗೆ ನಮಸ್ಕಾರ ಹೇಳು. ಜಾಣನಾಗಿರುತ್ತೇನೆಂದು ಹೇಳು" ಎಂದಳು. "ಊ! ಊ! ನಮಸ್ಕಾರ" ಎಂದು ಅರ್ಧ ನನ್ನ ಕಡೆ ನೋಡುತ್ತಾ ಹೇಳಿದ.

ದಿನವೂ ನರ್ಸ್ ಬಂದು ಎಬ್ಬಿಸಿದರೇ ಏಳಲು ಕಷ್ಟವಾಗುತ್ತಿದ್ದ ನನಗೆ, ಇಂದು ಐದು ಗಂಟೆಗೇ ಎಚ್ಚರವಾಯಿತು. ಎದುರಿಗೇ ಕಿಟಕಿ. ಅದ್ದರಿಂದ ಆಕಾಶವು ಅರಿಶಿ ಚೆಲ್ಲಿದಂತೆ ಕೆಂಪಾಗಿ, ಬರುಬರುತ್ತ ಬೆಳ್ಳಾಪಿಳ್ಳಿಯಾಗಿ, ಆಕಾಶವೆಲ್ಲಾ ಹರಡಿರುವ ಮೋಡಗಳು. ಕೋಗಿಲೆಯು ತನ್ನ ಪಂಚಮಸ್ವರದಲ್ಲಿ ಎಲ್ಲರಿಗೂ ಉದಯರಾಗ ಹಾಡುತ್ತಿತ್ತು. ಸೂರ್ಯನ ಬರವನ್ನೇ ಎದುರು ನೋಡುತ್ತಿದ್ದ ಹಕ್ಕಿಗಳು ಎಲ್ಲ ಎದ್ದು, ತಮ್ಮ ನಿತ್ಯಕರ್ಮಗಳಿಗೆ ತೊಡಗಿದ್ದುವು. ಆರುಗಂಟೆಗೆ ನರ್ಸ್ ಬಂದು "ಏನು, ಇವತ್ತು ಮನೆಯ ಯೋಚನೆಯಲ್ಲಿ ಬೇಗ ಎಚ್ಚರವಾಯಿತೆ? ಹೋಗಲಿ, ಮನೆಗೆ ಹೋದ ಮೇಲೆ ನನ್ನ ಜ್ಞಾಪಕ ಇರುತ್ತೋ ಇಲ್ಲವೋ?" ಎಂದಳು. "ಹಾಗೆಲ್ಲಾ ಏನೂ ಇಲ್ಲ ನರ್ಸ್ ನಿಮಗೆ ರಜ ಇರುವಾಗ ಒಂದು ದಿನ ಪೂರ್ತಿ ನಮ್ಮ ಮನೆಗೇ ಬಂದು ಬಿಡಿ—ಆನಂದು ಜೊತೆಗೆ" ಎಂದೆ. "ಎಲ್ಲಾ ಈಗಲೇ. ಮನೆಗೆ ಹೋದರೆ ನನ್ನ ನೆನಪು ಕೂಡ ಇರುವುದಿಲ್ಲ. 'ಝೂ'ಗೆ ಹೋದರೆ ಮಾತ್ರ ಹುಷಾರಾಗಿರಿ. ಅವನ ಪ್ರಕೃತಿ ಬಹಳ ಸೂಕ್ಷ್ಮ. ಏನೂ ತಿಳಿದುಕೊಳ್ಳಬೇಡಿ. ಅವನನ್ನು ಮೊದಲಿಂದ ನೋಡಿಕೊಳ್ಳುತ್ತಿದ್ದವಳಾಗಲ್ಲದೆ, ಇನ್ನಾರಿಗೂ ಅವನ ಸ್ಥಿತಿ ತಿಳಿಯುವುದು ಕಷ್ಟ" ಎಂದಳು.

ನಿತ್ಯದ ಕಾಫಿ-ತಿಂಡಿಯಾಯಿತು. ನರ್ಸ್ ತಲೆ ಬಾಚಿ ಜೊಂಬಾಯಿ ಗಂಟನ್ನು ಹಾಕಿದಳು. ನಾನೂ ನನ್ನ ನೀಲಿಯ ರೇಷ್ಮೆ ಸೀರೆಯನ್ನುಟ್ಟು, ಆಸ್ಪತ್ರೆಯ ಉಡಿಗೆಯಿಂದ ಪಾರಾದೆ. ಡಾಕ್ಟರು "ಆಗಲೇ ಸಿದ್ಧವಾಗಿದ್ದೀರಿ. ಕಿವಿಯದೇನೂ ತೊಂದರೆ ಇಲ್ಲ. ನೀವು ಮನಸಿಗೆ ಹಚ್ಚಿಕೊಳ್ಳುವುದನ್ನು ಬಿಡಬೇಕು. ಅದರಿಂದಲೇ ಯಾವ ಕಾಹಿಲೆಯೂ ಇಷ್ಟಿದ್ದರೆ ಅಷ್ಟಾಗುತ್ತದೆ. ಸ್ವಲ್ಪ ಟಾನಿಕ್ಕುಗಳನ್ನು ಮಾತ್ರ ತಪ್ಪದೆ ಸೇವಿಸುತ್ತಿರಬೇಕು. ನರ್ಸ್, ಟ್ಯಾಕ್ಸಿಗೆ ಹೇಳಿದ್ದೀರಿ ತಾನೆ?" ಎಂದರು.

ಆಗಲೇ ಮಾಡಿಯ ಮೆಟ್ಟಿಲನ್ನು ಧಡಧಡನೆಂದು ಸದ್ದು ಮಾಡುತ್ತ ಆನಂದು ಓಡಿ ಬಂದು, ನನ್ನನ್ನು ತಬ್ಬಿಕೊಂಡು "ಅಕ್ಕಾ, ಇವತ್ತು ರಾತ್ರಿ, ನಾಳೆ, ಆ ಮೇಲೆ ಇನ್ನೊಂದು, ಇಷ್ಟೇ ರಾತ್ರಿಗಳು ನಾನು ನಿದ್ರೆ ಮಾಡಿದರೆ, ನನ್ನನ್ನು ಕರಕೊಂಡು ಹೋಗ್ತೀರಿ ತಾನೆ? ಇಲ್ಲದಿದ್ದರೆ ಊ ಬಿಡುತ್ತೇನೆ. ಡಾಕ್ಟರ್ ಮಾಮ ಹೇಳಿದ್ದಾರೆ!" ಎನ್ನುತ್ತಿರುವಾಗಲೇ ಕಾರು ಬಂದಿತು. ಎಲ್ಲರಿಗೂ ವಂದಿಸಿ, ಗಾಡಿಯಲ್ಲಿ ಕುಳಿತೆ. ಆನಂದು ಓಡಿ ಬಂದು "ಅಕ್ಕ, ಒಂದೇ ಒಂದು ಪುಟ್ಟ ಮುತ್ತು. ಮರೀಬೇಡ, ಬರ್ತೀಯಾ?" ಎಂದ. ಮನೆಗೆ ಹೋಗುವುದಕ್ಕೆ ಇಷ್ಟವಾದರೂ, ಮೂರು ದಿನ ಆನಂದುವನ್ನು ಬಿಡಬೇಕಲ್ಲಪ್ಪಾ—ಎನ್ನಿಸಿತು.

ಮನೆಯಲ್ಲಿ ಅಮ್ಮನ ಸಂಭ್ರಮವೇ ಸಂಭ್ರಮ. ಮುಂದಿನ ಕೊಠಡಿಯಲ್ಲಿ ಹಾಸಿಗೆ ಹಾಸಿ, ಎಲ್ಲ ಶುಚಿತ್ವದಲ್ಲಿ ಆಸ್ಪತ್ರೆಗಿಂತ ನೂರ್ಮಡಿ ರೀತಿಯಲ್ಲಿತ್ತು. ಎಷ್ಟು ಹೊತ್ತಿಂದ ಕಾದಿದ್ದರೋ; ಕಾರು ನಿಂತೊಡನೆ ಓಡಿಬಂದರು. ಸಾಮಾನನ್ನು ಒಳಗಿರಿಸ ಹೇಳಿ, ನಾನು ಅಮ್ಮನೊಡನೆ ಒಳಗೆ ಬಂದೆ. ಡ್ರೈವರಿಗೆ ತೆಂಗಿನಕಾಯಿ, ಎಲೆಯಡಿಕೆ, ದಕ್ಷಿಣೆ, ಬಾಡಿಗೆ ಎಲ್ಲವನ್ನೂ ಕೊಟ್ಟು ಕಳುಹಿದಳು. ಅಮ್ಮ ಎಷ್ಟು ಹೇಳಿದರೂ ಕೇಳದೆ "ಮೋಟಾರಾದರೇನು, ರೈಲಾದರೇನು, ಆಯಾಸ ಇದ್ದೇ ಇರುತ್ತೆ. ಮಲಗಿರು. ಬಿಸಿ ಬಿಸಿ ಕಾಫಿ ತರುತ್ತೇನೆ" ಎಂದರು.

ಏನಾದರೂ ನನಗೆ ಆನಂದುವಿನ ಯೋಚನೆ ಬಿಡದು. ಆಗಲೇ ಹತ್ತಾಯಿತು. ಇನ್ನು ಎರಡು ದಿನ ಕಳೆದರೆ ಮಗುವನ್ನು ಮನೆಗೆ ಕರೆತರಬಹುದು?–ಎಂದುಕೊಂಡೆ. ಅಮ್ಮ ಕೊಟ್ಟ ಕಾಫಿ ಕುಡಿಯುತ್ತ ಆನಂದುವಿನ ಕಥೆ ಸಾಂಗವಾಗಿ ಹೇಳಿದೆ. ಕೇಳಿ ಅಮ್ಮನಿಗೂ ಕಣ್ಣೀರು ಬಂದು "ಎಳೆಯ ಮಗು, ತನಗೇ ತಿಳಿಯದೆ ಎಷ್ಟುಪಕಾರಿಯಾಗಿದೆ ನೋಡು ಲೋಕಕ್ಕೆ. ನಾವೆಲ್ಲಾ ಏನು, ಭೂಮಿಗೆ ಭಾರ!" ಎಂದರು.

ಎಷ್ಟು ಹೊತ್ತಿಗೂ ಬೆಳಗಾಗಲಿಲ್ಲವಲ್ಲಾ ಎನ್ನುತ್ತಿದ್ದ–ಕಳೆಯಲು ಬೇಸರವಾಗುತ್ತಿದ್ದ—ದಿನಗಳು, ಮನೆಯಲ್ಲಿ ಎರಡು ಕ್ಷಣದಂತೆ ಕಳೆದು ಹೋದುವು. ಮೂರನೆಯ ದಿನ ಎಂಟುಗಂಟೆಗೆ ಬಾಡಿಗೆಗೆ ಒಂದು ಮೋಟಾರು ತೆಗೆದುಕೊಂಡು, ಒಣಗಿದ ಅಂಜೂರು, ಮಿಠಾಯಿ, ಚಿಕ್ಕದೋಣಿ ತೆಗೆದು ಹೊರಟೆ. ಅಮ್ಮನಿಗೆ ಬೇಗ ಹುಗ್ಗಿ ಮಾಡೆಂದು ಹೇಳಿದ್ದೆ. ದಾರಿಯಲ್ಲಿ ಹಣ್ಣು ತೆಗೆದುಕೊಂಡು ಆಸ್ಪತ್ರೆ ಸೇರುವ ವೇಳೆಗೆ ಒಂಭತ್ತಾಗಿತ್ತು. ಗೇಟಿನೊಳಗೆ ಕಾರು ಹೋಯಿತೋ ಇಲ್ಲವೋ, ಆನಂದು ಹಾಜರ್! ಅದೇ ನೀಲಿ ಷರಾಯಿ, ಬಿಳೀ ಷರಟು. ತಲೆ ಬಾಚಿತ್ತು. ದಂತದ ವಿಗ್ರಹದಂತಿದ್ದ. ಹತ್ತಿರ ಹೋಗಿ, ಕಾರು ನಿಲ್ಲಿಸಿ, ಡಾಕ್ಟರಿಗೆ ಹೇಳಿ, ಅವನನ್ನು ಒಳಗೆ ಕೂರಿಸಿದೆ. ಹತ್ತುವ ಮುನ್ನ ಡಾಕ್ಟರು ಬಂದು "ಅವನು ಬಹಳ ಸೂಕ್ಷ್ಮ; ಹೀಗಿರುವುದೇ ಎಷ್ಟೋ ಪ್ರಯಾಸ. ಸಂಭ್ರಮದಲ್ಲಿ ಅವನಿಗೆ ಆಯಾಸವೇ ತೋರುವುದಿಲ್ಲ. ಹುಷಾರು!" ಎಂದುಸುರಿ ಹೋದರು.

ಕಾರು ಹೊರಟಿತು. ಸ್ವಲ್ಪ ಹೊತ್ತು ಸುಮ್ಮನಿದ್ದ. ಆಮೇಲೆ ಶುರು ಮಾತು: "ಸ್ಟೀರಿಂಗ್‌ವೀಲ್ ತಿರುಗಿಸಿದರೆ ಗಾಡಿ ಹೀಗೆ ಹೇಗೆ ಹೋಗುತ್ತೆ? ಏಕೆ ಹಾರ್ನ್ ಮಾಡುತ್ತಾನೆ? ಯಾಕೆ ಅಲ್ಲಿ

ಗಡಿಯಾರ ಕನ್ನಡಿ ಎಲ್ಲಾ ಇದೆ? ಹೀಗೆ ನೂರಾರು ಪ್ರಶ್ನೆಗಳು. ನನಗೆ ಉತ್ತರ ಹೇಳಿ ಹೇಳಿ ಸಾಕಾಗಿ, ಕೊನೆಗೆ ಹೂಂಗುಟ್ಟಲಾರಂಭಿಸಿದೆ. "ಈಗೆಲ್ಲಿಗ್ಹೋಗೋದು ?" ಎಂದ. "ಝೂಗೆ. ಎಷ್ಟು ಹೊತ್ತು ಬೇಕಾದರೂ ನೋಡು. ಐದು ಗಂಟೆಗೆ ವಾಪಸು ಆಸ್ಪತ್ರೆಗೆ" ಎಂದೆ. ಬಹಳ ತಿಳಿದಂತೆ ಎಲ್ಲವನ್ನೂ ಕೇಳುತ್ತ "ಬೋಟ್‌ನಲ್ಲಿ ಕೂರಿಸ್ತೀತಾನೆ? ಆಮೇಲೆ ನೀರು, ಗಾಳಿ, ಏನ್ನ ಬಾರದು ನೋಡಿಕೋ" ಎಂದ. "ಹಾಗೇ ಆಗಲಿ. ದೋಣೀಲಿ ಮೂರು ಸುತ್ತು ಹೊಡೆಸುತ್ತೇನೆ. ಪುನಃ ಕೇಳಬಾರದು!" ಎಂದೆ. ಟಿಕೇಟ್ ಕೊಂಡು ಒಳಗೆ ಹೋದೆವು ಹೋದರೆ ಎಲ್ಲರೂ ನಮ್ಮ ಕಡೆಗೆ ನೋಡುವವರೇ. ಆತನಿಗೆ ಹಣ್ಣು ಹಂಪಲು ಕೊಟ್ಟು ಮುದ್ದಾಡಿಸುವವರೇ. ಹುಲಿ, ಸಿಂಹ ಎಲ್ಲ ನೋಡಿ, ದೋಣಿ ಪ್ರವಾಸದಲ್ಲಿ ತಿಂಡಿ ಎಂದುಕೊಂಡು ಕೆರೆಯ ಬಳಿಗೆ ಬಂದೆವು. ದೋಣಿಯಲ್ಲಿ ಕೂತು ಎರಡು ಸುತ್ತು ಆಯಿತು "ಇನ್ನೊಂದೇ ಸುತ್ತು ಉಳಿದಿರುವುದು. ಆಮೇಲೆ, ಮನೆಗೆ. ಅಮ್ಮ ಹುಗ್ಗಿ ಕೊಡುತ್ತಾರೆ" ಎಂದೆ. ಆಮೇಲೆ ಶುರು ಅವನ ಮಾತು. ಎಲ್ಲಾ ನೋಡಿ ಆಯಿತು. ಇನ್ನೂ ಹೊತ್ತಾಗಿರಲಿಲ್ಲ ಅಂಗಡಿಗೆ ಹೊರಟು, ನನಗೆ ನಾಲ್ಕು ಪುಸ್ತಕ, ಒಂದು ಜೊತೆ ಚಪ್ಪಲಿ ಎಲ್ಲಾ ತೆಗೆದುಕೊಂಡೆ. ನಾಲ್ಕು ಗಂಟೆಯಾಯಿತು. ಹೊತ್ತು ಹೋದದ್ದೇ ತಿಳಿಯಲಿಲ್ಲ. ಮನೆಗೆ ಹೊರಟೆವು.

ಹುಗ್ಗಿಯ ವಾಸನೆ ನಮಗೆ ಮೋಟಾರು ಇಳಿಯುವುದಕ್ಕೆ ಮುಂಚೆಯೇ ಬಂದಿತು. ಆನಂದುವಿಗೆ ಆಗಲೇ ಬಾಯಲ್ಲಿ ನೀರೂರುವುದಕ್ಕೆ ಪ್ರಾರಂಭ. ಕೇಳಿದಷ್ಟು ಕೊಡಲು ನಮಗೆ ಭಯ. ಕಾಫಿ, ತಿಂಡಿ ಆದಮೇಲೆ "ಅರ್ಧ ಗಂಟೆ ಹಾಗೇ ಮಲಗು. ಐದು ಗಂಟೆಗೆ ಆಸ್ಪತ್ರೆಗೆ ಹೋಗೋಣ" ಎಂದೆ. ಅಲೆದಾಟದಿಂದ ಸೋತಿದ್ದ ಮಗು ಚೆನ್ನಾಗಿ ನಿದ್ದೆ ಮಾಡಿದ. ಐದು ಹೊಡೆಯುತ್ತಿರುವಾಗಲೇ ಎಬ್ಬಿಸಿ ತಲೆಬಾಚಿದೆ. ಅಮ್ಮನಿಗೆ ಹೇಳಿ ಹೊರಟೆವು. ದಾರಿಯುದ್ದಕ್ಕೂ ಆ ದೋಣಿಯನ್ನು ಕೈ ಕೊಟ್ಟು ನಡೆಸಿ, ಕೇಕೆಹಾಕುತ್ತಾ, ದಾರಿ ಸವೆದುದೇ ತಿಳಿಯದಂತೆ ಕಾರಿನಲ್ಲಿ ಇವನ ಆಟ. ಡಾಕ್ಟರಿಗೂ ನರ್ಸಿಗೂ ಅವನನ್ನು ಒಪ್ಪಿಸಿ, ನಮಸ್ಕಾರ ಹೇಳಿ ಗಾಡಿ ಹತ್ತಿದೆ. "ಅಕ್ಕ, ನಮಸ್ಕಾರ" ಎಂದಿತು ಮಗು ಎರಡೂ ಕೈಯನ್ನು ಮುಗಿದು. ಅಂದೆಲ್ಲಾ ಅವನ ನಗುಮುಖವೇ ಕಣ್ಣಿಗೆ ಕಟ್ಟಿದಂತಿತ್ತು. ಅವೇ ತುಂಟ ಕಣ್ಣುಗಳು.

ದೀಪಾವಳಿ ಬಂದಿತು. ಆನಂದುವಿಗೂ ನರ್ಸ್‌ಗೂ ಉಡುಗೊರೆ ಕಳುಹಿದೆ. ಸೇರಿದ್ದಕ್ಕೆ ಜವಾಬೂ ನನಗೆ ಉಡುಗೊರೆಯೂ ಬಂದುವು. ಕಾಗದದಲ್ಲಿ ಎಲ್ಲಾ ಆನಂದುವಿನದೆ. ದೋಣಿ, ಝೂ, ಎರಡೇ ಅವನ ಆಟ ಎಂದು ಬರೆದಿದ್ದಳು ನನಗೆ ಅವನನ್ನು ನೋಡೋಣ ಎನ್ನಿಸುತ್ತಿತ್ತು. ರಾತ್ರಿ ಊಟಮಾಡುತ್ತಾ "ಹೋಗಿ ಮಗುವನ್ನು ನೋಡಿ ಬರಬೇಕಮ್ಮಾ" ಎಂದೆ. "ನೀನು ಹೋದರೆ ನಾನೂ ಬರುತ್ತೇನೆ. ನನಗೂ ಏನೋ, ಅದನ್ನು ನೋಡಿದರೆ ಕನಿಕರ" ಎಂದರು ಅಮ್ಮ.

ರಾತ್ರಿಯೆಲ್ಲಾ ಅವನದೇ ಕನಸು: ಅಮ್ಮ ನಾನು ಹೋಗಿದ್ದೇವೆ. ಅವನು ನಮ್ಮ ಜೊತೆಯಲ್ಲಿಯೇ ಬರುತ್ತೇನೆಂದು ಹಟ ಹಿಡಿದು, ಕೊನೆಗೆ ಅಮ್ಮನ ಶಿಫಾರಸಿನ ಮೇಲೆ ನಮ್ಮ ಮನೆಗೆ ಬಂದಿದ್ದಾನೆ ಕೆಲವು ದಿನ ಕಳೆದ ನಂತರ, ನರ್ಸ್ ಕರೆದುಕೊಂಡು ಹೋಗುವುದಕ್ಕೆ ಬಂದಿದ್ದಾರೆ. ಇವನದು ಹಟ. ಪಾಪ! ತಾಯಿ ಪ್ರೀತಿ ಎಂತಹುದೆಂದು ಕಂಡರಿಯದ ಮಗು! ಅಮ್ಮ ಬಾದಾಮಿ, ಕಲ್ಲುಸಕ್ಕರೆ ಕೊಟ್ಟು, ಅವನನ್ನು ಕಾರಿನಲ್ಲಿ ಕೂರಿಸಿದ್ದಾಳೆ. ನಾನು ಥ್ಯಾಂಕ್ಸ್ ಹೇಳಿದ್ದೇನೆ. ಬಾಗಿಲು ತಟ್ಟಿದ ಸದ್ದು. ಇದೆಲ್ಲಾ ಕನಸು ಎಂಬಂತೆಯೇ ಇಲ್ಲದೆ ಬಾಗಿಲು ತೆಗೆದೆ. ಪಕ್ಕದ ಮನೆಯ ಜವಾನ ಬಂದಿದ್ದಾನೆ. ಫೋನ್‌ನಲ್ಲಿ ಯಾರೋ ಕೂಗುತ್ತಿದ್ದಾರೆಂದು ಹೇಳಿದ. ಏಕೋ ಕೈ ನಡುಗುತ್ತಿತ್ತು. ಮೆಲ್ಲಗೆ "ಹಲೋ" ಎಂದೆ. ಗಂಟಲು ಶೀಲಾನದು. "ಲೀಲೂ, ನಿನ್ನ ಆನಂದುವು ಇನ್ನಿಲ್ಲ. ನಿನಗೆ ತಿಳಿಸೋಣವೆಂದು ಹೇಳಿದೆ. ತೊಂದರೆಗೆ ಕ್ಷಮೆಯಿರಲಿ!" ಎಂದು ನಡುಗುಧ್ವನಿಯಲ್ಲಿ ಹೇಳಿದಳು. ಮುಂದೆ ಯಾರಿಗೂ ಮಾತು ಬೇಕಿರಲಿಲ್ಲ. ಮನೆಗೆ ಬಂದು ಅಮ್ಮನಿಗೆ ಹೇಳಿದೆ. ಗಾಡಿಕರೆಸಿಕೊಂಡೆ. ಅಮ್ಮನಿಗೆ ಬರುವ ಮನಸ್ಸಿಲ್ಲ. ನಾನೇ ಹೋದೆ. ಆಸ್ಪತ್ರೆಯಲ್ಲೆಲ್ಲೂ ನಿಶ್ಶಬ್ದ. ನರ್ಸ್ ಬಂದಳು. ನನ್ನನ್ನು ಕರೆದುಕೊಂಡು ಹೋದಳು. ಅವನ ರೂಮಿಗೆ ಹೋದೆವು. ಬಾಗಿಲು ತೆಗೆದು ಒಳಗೆ ಹೋದೆ. ಪಕ್ಕದ ಕಪಾಟಿನಲ್ಲಿ ಅವನ ಸಾಮಾನು-ಶಿಪಾಯಿಗಳು ಮೇಜಿನ ಮೇಲೆ. ಮಧ್ಯೆ ಆಡಿ ಸೋತ ಮಗುವಿನ ನಿದ್ದೆಯಂತೆ ಆನಂದುವಿನ ಶಾಂತನಿದ್ರೆ. ಹಾಸಿಗೆಯಲ್ಲಿ ದೋಣಿ, ನಾನು ಕೊಟ್ಟಿದ್ದ ಉಡುಗೊರೆ ಹಾಕಿಕೊಂಡಿದ್ದ. ದುಃಖ ಒತ್ತರಿಸಿ ಬಂದು ಗೋಡೆಗೆ ಮುಖಮಾಡಿ ಕಣ್ಣೀರು ಸುರಿಸಿಕೊಂಡೆ. "ನೆನ್ನೆಯೆಲ್ಲಾ ನಿನ್ನ ನೆನಪೇ. ನಿಮ್ಮ ತಾಯಿಯವರ ಆದರದ ಮಾತುಗಳೇ ಅವನ ಬಾಯಲ್ಲಿ!" ಎಂದು ನರ್ಸ್ ಕಣ್ಣೀರಿಟ್ಟಳು.

ಮೆಲ್ಲನೆ ಮಂಚದ ಬಳಿಗೆ ಹೋಗಿ, ಪುಟ್ಟ ಕೈಯನ್ನು ಮುತ್ತಿಟ್ಟು "ಆನಂದು, ನಿನ್ನಂತಹ ಪುಟ್ಟ ದೇವರಿಗೆ ಈ ಪ್ರಪಂಚ ಸ್ಥಳವಲ್ಲ. ಕುಸುಮ ಹತ್ತಿರ ಹೋದೆಯಾ ?" ಎಂದೆ.

ದಿನವೂ ಅವನೊಡನೆ ತಿನ್ನುತ್ತಿದ್ದ ಗುಬ್ಬಚ್ಚಿಗಳು ಇಂದು ಕಿಟಕಿಗಾಜೆ ಕಟ ಮಾಡುತ್ತಿದ್ದುವು ಆದರೆ ಅವಕ್ಕೆಲ್ಲಿ ಗೊತ್ತು ? ಹೋಗೋಣವೆಂದು ತಿರುಗಿದೆ. ನರ್ಸ್ ಅಲ್ಲಿರಲಿಲ್ಲ. ಪಾಪ, ಯಾವಾಗಲೋ ಹೊರಟು ಹೋಗಿದ್ದಳು. ನಾನು ಎದ್ದು, ಅವನ ಹಣೆಗೆ ಮತ್ತೊಂದು ಮುತ್ತಿಟ್ಟು, ಹಾಗೆಯೇ ಬಾಗಿಲು ಮುಚ್ಚಿ ಆಚೆ ಬಂದೆ.

— —

ನಾವೀನ್ಯ

ಶ್ರೀ. ಎಸ್. ಎಸ್. ಬಸುಪಟ್ಟದ ಎಮ್. ಎ. ಗುಳೇದಗುಡ್ಡ

ನಾಡಿಗೆ ಕಾಡಿಗೆ ಬೆಳಕೀಯುತಲಿ
ಹೊಸಬಗೆಯಿಂದಲಿ ನೀನುದಿಸು;
ಇಂದಿನ ವಿಶ್ವಕೆ ಇಂದಿನ ಬದುಕಿಗೆ
ಹೊಸತಿನ ವಸನವ ನೀ ತೊದಿಸು. ೧

ಮಾನವ-ಜೀವಕೆ ಚೇತನವಿತ್ತು,
ವನುವನುಷಕೆ ನೀ ಮಾಡುತಿರು;
ಮಾನವ ಕುಲದಲಿ ಅನುನಯ ಮಮತೆಯನು
ಅನುದಿನ ತಪ್ಪದೆ ತೀಡುತಿರು. ೨

ಜೀವನ ಬೆಳಗುತ ಪಾವನಗೊಳಿಸುತ
ಮಾನವ ಜಗವನು ನೀ ಪೊರೆತ್ತು;
ಲೋಕದ ಮಕ್ಕಳ ಮನದಲಿ ಇಂದು
ಪುಣ್ಯದ ಬೆಳಸನು ನೀ ಬಿತ್ತು. ೩

ನಿನ್ನಾಗಮನದ ವಸಂತಮಾಸಕೆ
ಶಾಂತಿಯ ಕೋಗಿಲೆ ಕೂಜಿಸಲಿ;
ಶಾಂತಿಯ ಬರವಿಗೆ ಹೊಸತಿನ ಕುರುಹಿಗೆ
ಜಗವನು ನಿನ್ನನು ಪೂಜಿಸಲಿ. ೪

ಅಜ್ಞಾನದ ತಮ ತರಿದಟ್ಟುತಲಿ
ಜ್ಞಾನದ ಪ್ರಭೆಯನು ನೀ ಹರಡು;
ನಿನ್ನಯ ನೆರವಿಂ ಲೋಕದ ಜನವದು
ಅರಿಯಲಿ ಬಾಳಿನ ನಿಜ ಹುರುಡ; ೫

ನಿನ್ನಾಗಮನದ ಅಮೃತಸ್ಪರ್ಶಕೆ
ಮಾನವ ಜೀವನ ತಾ ಕೊನರಿ
ದಿಕ್-ದಿಗಂತದಲಿ ಪಾಂಗುಡಿಯಿಟ್ಟು
ಸೌರಭ ಸೂಸಲಿ ಹೊಗರೇರಿ ೬

ಒಲುಮೆಯ ತೋರುತ ನಲುಮೆಯ ತೂರುತ
ಬಗೆಬಗೆ ಬಿನದವ ನೀ ಬೀರು;
ನವೀನ ಜಗದಲಿ ನವೀನ ಭಾವದ
ನಾವೀನ್ಯವೆ ನೀ ತಲೆದೋರು ! ೭

ಸವಿನೆನಪು

ಶ್ರೀ. ಬಿ. ಎಸ್. ಕಡಕೋಳ, ಹಾವೇರಿ

ಬಹಳ ದಿನಗಳ ಮೇಲೆ ಅವಳ ಊರಿಗೆ ಹೋದೆ,
ಕಳೆಗುಂದಿದಾ ಮೊಗವು ಬೆಳಗಿದ್ದಿತು.
ದಿನಕರನ ಉದಯದಲಿ, ಅರಳುವಾ ತಾವರೆಯು.
ನೆನಹನ್ನು ಮನದಲ್ಲಿ ಮೂಡಿದ್ದಿತು ೧

ಕಾರ್ಯಭಾರದಿ ಹೆಚ್ಚು ಬಿಡುವು ನನಗಿಲ್ಲೆಂಬ
ಸುದ್ದಿಯದು ಹುಸಿಯೆಂದು ತಿಳಿದಿದ್ದಿತು.
ಇರುಳಿನಲಿ, ಕೋಣೆಯಲಿ ಇಬ್ಬರೇ ಇದ್ದಾಗ
ಕಣ್ಣೀರ ಕೋಡಿಯನು ಹರಿದಿದ್ದಿತು. ೨

ನಾಳಿನೆಯ ದಿನ ನಾನು, ಮರಳಿ ಹೋಗುವೆನೆಂಬ
ಬಲವಾದ ನಿಶ್ಚಯವು ಸಡಿಲಿದ್ದಿತು.
ಕಣ್ಣೊರಸಿ ತಲೆಸವರಿ 'ಅಳು ನುಂಗಿ ನಗು ಒಮ್ಮೆ'
ನಿನ್ನೊಡನೆ ಎರಡು ದಿನ ಎಂದಿದ್ದೆನು. ೩

ಮಳೆಯಲ್ಲಿ "ಮಳೆಬಿಲ್ಲ" ಕಂಡಂತೆ ಮೊಗದಲ್ಲಿ
ತೃಪ್ತಿಯಾ ಕಿರುನಗೆಯು ಸೂಸಿದ್ದಿತು
ಹರುಷದಾ ಹೊನಲನ್ನು ಕೊರಸೂಸಲೆಂಬಂತೆ
ಆನಂದಭಾರಿಯದು ಹರಿದಿದ್ದಿತು. ೪

ಬಿರಿದ ಮೊಗ್ಗಿಗೆ ಅಳಿಯು ಭರದಿಂದ ಬಂದಂತೆ
ಮಧುರಚುಂಬನ ಅಧರ ಸವಿದಿದ್ದವು.
ಬಾಹ್ಯಲೋಕವ ಮರೆತು ಆನಂದಸಾಗರದಿ
ಮನ ಕಲ್ಪನೆಯ ನೌಕೆಯಲಿ ತೇಲಿದ್ದವು. ೫

ಅಂದಿನಾ ಸವಿನೆನಪು ಸ್ಮೃತಿಯಲ್ಲಿ ಸುಳಿದಿರಲು
ಎಲ್ಲ ದುಗುಡವು ಬಯಲು- ಬಯಲಪ್ಪುದು.
ಅಂದಿನಾ ಆ ಮೊಗವು. ಮನದಲ್ಲಿ ಮೂಡಿರಲು
ಕಾರುಣ್ಯ ಹೊಳೆಯಾಗಿ ತಾ ಹರಿವುದು. ೬

ವಿಮೋಚನೆ !

(ಸಣ್ಣ ಕತೆ)*

ಶ್ರೀ. ಜಿ. ಶಂಕರಭಟ್ಟ, ಬಿ. ಎ., ಬಿ. ಟಿ.
ಗೋಳಿಕಟ್ಟೆ (ದ. ಕ.)

ಸಾವಿರ ಸಾವಿರ ಜನರ ಕಾರ್ಯಶಕ್ತಿಯನ್ನು ಯಂತ್ರ ವಹಿಸುತ್ತದೆ. ಅದರ ಕಾರ್ಯಶಕ್ತಿ
ಸಾವಿರ ಸಾವಿರ ಜನರನ್ನು ಕೆಲಸಗೇಡಿಗಳನ್ನಾಗಿ ಮಾಡಿ ಉಪವಾಸ ಕೆಡಹುತ್ತದೆ.
ನಮಗೆ ಯಾವುದು ಬೇಕು? ನಿರ್ಜೀವ ಯಂತ್ರದ ಕಾರ್ಯಶಕ್ತಿಯೋ?
ಸಜೀವ ಮಾನವರ ಜೀವನಶಕ್ತಿಯೋ?

"......ನಿನಗೆ ಬುದ್ಧಿಯಿಲ್ಲ! ನೀನು ಪಶು! ಗೈದು ತಿನ್ನುವುದಕ್ಕೂ ನಿನ್ನ ಹಣೆಯಲ್ಲಿ ಬರೆದಿಲ್ಲ!.......ಹೋಗು .. ಹೋಗು ..... ನಿನಗೆ ಇಲ್ಲಿ ಇನ್ನು ಆಶ್ರಯ ಸಿಗಲಾರದು.......ನಿನ್ನಿಂದ ಏನು ಸಾಗೀತು?.......ಒಂದು ಹುಲ್ಲುಕಡ್ಡಿ ಎತ್ತುವುದಕ್ಕೂ ನಿನಗೆ ತ್ರಾಣವಿಲ್ಲ.......ನೀನು ಕೆಲಸ ಮಾಡುವುದೇ? ಈ ಗುಡ್ಡೆಯನ್ನು ಕಡಿದು, ಮಣ್ಣನ್ನು ಹರವಿ ತಟ್ಟಿಮಾಡಿ— ಮರುಭೂಮಿಯಲ್ಲಿ ನಂದನವನವನ್ನು ಕಟ್ಟಿನಿಲ್ಲಿಸುವ— ಸಾಮರ್ಥ್ಯ ನಿನ್ನ ರಟ್ಟೆಯಲ್ಲಿ ಇಲ್ಲ ......ನನ್ನೆದುರು ನಿನ್ನ ಸಾಮರ್ಥ್ಯವೇ?.......ವ್ಯರ್ಥ....... ವ್ಯರ್ಥ.......ಆನೆಯ ಮುಂದೆ ಆಡೇ?.......ಬಿರುಗಾಳಿಯೆದುರು ಹುಲ್ಲುಕಡ್ಡಿಯೇ?.......ಸಿಂಹಕ್ಕೆ ಹುಲಿಯೊಂದು ಇದಿರೇ?....... ಕೋಟಿಸೂರ್ಯಪ್ರಭರ ಪ್ರಕಾಶದೊಡನೆ ಮಿಂಚಿನ ಹುಳುವಿಗೆ ಪಂಥವೇ ? ಛೆ! ಛೆ!....... ಬಿಡು.......ಬಿಡು.......ನನ್ನೆದುರು ಎದ್ದು ನಿಲ್ಲಬೇಡ.......ನನ್ನ ಗುಲಾಮನಾಗಿ ಬಾಳು ಎಂಬುದು ನಿನ್ನ ವಂಶಕ್ಕೆ ನಾನು ಕೊಟ್ಟ ಶಾಪ.......! ಅದರಿಂದ ವಿಮೋಚನೆ ನಿನಗೆ ಸಾಧ್ಯವೇ ?.......ಸಾಧ್ಯವೇ ?.......ನಿನಗೆ ! ನಿನಗೆ— ಕಳೆಗಟ್ಟಿ ಕಣ್ಣು, ಎಣ್ಣೆ ಕಾಣದ ಕೆದರಿದ ಕೂದಲು, ನೆತ್ತರಿಲ್ಲದ ಮೈ, ಚಪ್ಪಟೆ ಹೊಟ್ಟೆ, ಎಲುಬಿನ ಹಂದರ, ಸುಕ್ಕುಗಟ್ಟಿದ ಒಣಗಿಟ್ಟ ರೋಮ ತುಂಬಿದ ಚರ್ಮದ ಹೊದಿಕೆ, ಯಂತ್ರ ಜಗತ್ತಿನ ಗಾಣದ ಗೂಳಿ !— ಥೂ, ತೊಲಗಾಚೆ !......."

ಆ ಕೆಂಪುಗಣ್ಣಿನ, ಕೋರೆ ಹಲ್ಲಿನ, ತಾಳೆಮರಗಾತ್ರದ ರಕ್ಕಸ, ಆತನ ಕೊರಳಿಗೆ ಕೈಹಾಕಿ ತಳ್ಳಿದನಾಚೆಗೆ. ಆಚೆಗೆ.......ದೂರ....... ಬಹುದೂರದ ಪ್ರಪಾತಕ್ಕೆ— ದೃಷ್ಟಿ ನಿಲುಕದ, ಬೆಳ್ಳರೆ ಬೆಳಗಾಗದ ನಿರಾಶೆಯ ಪಾತಾಳಕ್ಕೆ— ಉರುಳಿದನಾತ, ಪುಡಿಪುಡಿಯಾಗಿ, ಚೂರುಚೂರಾಗಿ !

ಆ ದೂಡುವಿಕೆಯ ಅಬ್ಬರಕ್ಕೆ ಲಿಂಗಣ್ಣ ಪೂಜಾರಿ ಎಚ್ಚತ್ತು ನೋಡುತ್ತಾನೆ— ಎಷ್ಟು ಹೊತ್ತು ! ಯಾವಾಗಲೂ ಆತನ ಮನೆಯ ಹುಂಜದ ಕೊರಳ ಕರೆಗೆ ಎಚ್ಚತ್ತು, ಬೆಳ್ಳಿಯ ಮುಂಬೆಳಗು ಕಾಣುವ ಆತನಿಗೆ ಎಂಥ ನಿದ್ರೆ ಈ ದಿನ! ಕಾರಣ ಇದ್ದೇ ಇದೆ: ಆಗ ಮಳೆಗಾಲ; ಮೊ[illegible]ದ ದಿನ [illegible] ಆತನಿಗೆ [illegible] ತನಗಿಂತ ಹೆಚ್ಚು [illegible]ಗೆಟ್ಟಿತ್ತು. ಹೊರಗೆ [illegible] ಮಳೆ ಹನಿಗರೆಯುತ್ತಿತ್ತು. ಹೀಗೆ ಮಳೆ ಬಂದರೆ ಯಾರಿಗೆ ತಾನೆ ಬೇಗನೆ ಏಳುವುದುಂಟು ? ದುರ್ದಿನ !

ಲಿಂಗಣ್ಣ ಬಾಯಿ ಆಕಳಿಸಿಕೊಂಡು ಎದ್ದು, ಹರುಕು ಕಂಬಳಿಯನ್ನು ಹಾಗೆ ಹೊದೆದುಕೊಂಡು, ಮುಚ್ಚಿ ಉಳಿದ [illegible] ಜಾಗೆಯನ್ನು [illegible] ಅಡಿಕೆಮರದ ಸಲಿಕೆಯ ಅಟ್ಟದ ಮೇಲೆ ಇರಿಸಿದ. [illegible] ಬಾಯಲ್ಲಿ ಇರಿಸಿದ್ದ ತನ್ನ [illegible] ತೆಗೆದು ಹಿಂದಿನ ದಿನ ಸಂಜೆ ಕೆಲಸ ಬಿಟ್ಟು ಬರುವಾಗ ತನ್ನ ಧನಿಗಳ ಮನೆಯಿಂದ ತಂದ ಹೊಗೆ ಸೊಪ್ಪಿನ ತುಂಡನ್ನು ತೆಗೆದ. ಅಲ್ಲೇ [illegible] ಮುದ್ದೆ ಮಾಡಿ ಇಟ್ಟಿದ್ದ [illegible] ಒಣಗಿದ [illegible] ತುಂಡನ್ನು ತೆಗೆದು, ಅದರಲ್ಲಿ ಹೊಗೆಸೊಪ್ಪನ್ನು ಸುತ್ತುತ್ತಾ ಬಾಯಿ [illegible]ಕ್ಕೆ ಹೋದ. ಆದರೆ ಆತನ [illegible]ವನ್ನು [illegible] ಆ ದಿನ [illegible] ಇರಲಿಲ್ಲ !

"ನಿ, ಇಷ್ಟು ಹೊತ್ತಾದರೂ ಒಲೆಗೆ ಬೆಂಕಿ ಹಚ್ಚುವುದಕ್ಕೆ ನಿನಗೆ ಧಾಡಿಯೇ? ಇನ್ನು ಬೆಂಕಿಮಾಡಿ, ಗಂಜಿ ಬೇಯಿಸಿ, ಉಂಡು ಧನಿಗಳಲ್ಲಿಗೆ ನಾನು ಕೆಲಸಕ್ಕೆ ಹೋಗುವುದು ಯಾವಾಗ?" ಎಂದು ಆತ ಲಚ್ಚಿಯನ್ನು ಕರೆದು ಕೇಳಿದ.

"ಒಲೆಗೆ ಬೆಂಕಿ ಹಚ್ಚಿ ಬೇಯಿಸುವುದು ಮಣ್ಣನ್ನೇ? ನಿಮಗೆ ಹೊಗೆಸೊಪ್ಪಿನ ತುಂಡು ಉಂಟಲ್ಲ ! ಅದರ ಹೊಗೆ ಕುಡಿದು ನೀವು ಬದುಕುತ್ತೀರಿ. ನನಗೆ ಅಡಿಗೆಯ ಕೆಲಸವೂ ಉಳಿಯಿತು !" ಲಚ್ಚಿ ಹೇಳಿದಳು.

"ಎಲ್ಲಿ ಉಳಿಯುತ್ತದೆ ಜೀವ ಒಂದು ಚಿಟ್ಟಿ......."

"ನಿಮ್ಮದು ಮಾತ್ರವಲ್ಲ, ಮಕ್ಕಳದೂ ನನ್ನದೂ ಕೂಡ......."

"ಸತ್ತರೆ ಹಾಗೆ ಸಾಯಬೇಕು. ಒಟ್ಟೊಟ್ಟಿಗಾಗಿ ಸತ್ತರಲ್ಲವೇ ದುಃಖ? ಎಲ್ಲರೂ ಹೋದರೆ —'ಪಾಪ' ಹೋದಂತೆ — ಸಂತೋಷ.!"

ಸಂತೋಷ (?) !!

* ಜಯಂತಿ ಸಣ್ಣಕತೆಗಳ ಸ್ಪರ್ಧೆಯಲ್ಲಿ, ೩ನೆಯ ಬಹುಮಾನ ಪಡೆದ ಕತೆಯಿದು. —ಸಂ. ಜ.

ಲಿಂಗಣ್ಣ, ಒಲೆಯ ತಿಟ್ಟೆಯ ಮೇಲೆ ಲಜ್ಜೆಯ ಹಳೆಯ ಹರುಕು ಸೀರೆಯ ಒಂದು ಸಣ್ಣ ತುಂಡನ್ನು ಸುತ್ತಿ ಬೆಚ್ಚಗೆ ಇರಿಸಿದ ಬೆಂಕಿಯ ಪೊಟ್ಟಣವನ್ನು ತೆಗೆದ. ಒಲೆಯಲ್ಲಿ ಬೆಂಕಿ ಹಾಕದೆ ಶೀತ ಹಿಡಿದ, ನಾಲ್ಕಾರು ಕಡ್ಡಿಗಳನ್ನು ಆತ ಗೀರಿದ್ದೆ ಬಂತು! ಕಡ್ಡಿ ಉರಿಯಲಿಲ್ಲ. ಬೆಂಕಿಪೆಟ್ಟಿಗೆಯನ್ನು ಅಲ್ಲೆ "ಇಕೋ" ಎಂದು ಹೆಂಡತಿಯ ಕಡೆಗೆ ಎಸೆದು, "ಐತ್ತು, ಐತ್ತು" ಎಂದು ತನ್ನ ಮಗನನ್ನು ಕರೆದು, ನೆರೆಮನೆಯ ತ್ಯಾಂಪಣ್ಣನಲ್ಲಿಗೆ ಹೋಗಿ ಹೊಗೆಸೊಪ್ಪಿನ "ಚುಟ್ಟ"ವನ್ನು ಹೊತ್ತಿಸಿಕೊಂಡು ಬರುವಂತೆ ಹೇಳಿ, ಜಗುಲಿಯ ಮಣ್ಣಾತಿಟ್ಟೆಯಲ್ಲಿ ಬಂದು ಕುಳಿತುಕೊಂಡ. ಐತ್ತು ನೆರೆಮನೆಗೆ ಹೋಗಿ ಹೊಗೆಸೊಪ್ಪನ್ನು ಹೊತ್ತಿಸಿಕೊಂಡು, ಅರ್ಧ ದಾರಿಯಲ್ಲಿ ಅದು ನಂದುವುದಕ್ಕಾದಾಗ ಅದನ್ನು ತುಟಿಯ ಮಧ್ಯದಲ್ಲಿರಿಸಿ ಎಳೆದು, ಬೆಂಕಿಯನ್ನು ಕಾಯ್ದುಕೊಂಡನು. ಹೊಗೆ ದಾರಿ ತಪ್ಪಿ ಗಂಟಲಿಗೆ ಹೋಗಿ ಕೆಮ್ಮುತ್ತ ಮನೆಗೆ ಬಂದನು. ಆತನು ಎಷ್ಟು ತಡೆಹಿಡಿದರೂ ಕೇಳದೆ ಕೆಮ್ಮು ಹೊರಗೆ ಬಂತೇ ಬಂತು. "ಏ, ನಾಯಿ, ಆ ಇರುವ ಒಂದು ತುಂಡನ್ನು ನೀನು ಮುಕ್ಕು!" ಎಂದು ಮಗನನ್ನು ಬೈದುಕೊಂಡು, ಹೊಗೆಸೊಪ್ಪಿನ ತುಂಡನ್ನು ಬಾಯಿಗಿರಿಸಿದನು. ಕಂಬಳಿಯನ್ನು ಸರಿಯಾಗಿ ಹೊದ್ದುಕೊಂಡು, ಎಡಗೈಯಿಂದ— ಮಡಚಿ ಮೇಲೇರಿಸಿದ— ಕಾಲುಗಳನ್ನು ಸುತ್ತಿಕೊಂಡು, ಬಲಗೈಯ ನಡುಬೆರಳು ತೋರುಬೆರಳುಗಳ ಮಧ್ಯದಲ್ಲಿ ಹೊಗೆಸೊಪ್ಪಿನ 'ಚುಟ್ಟಾ'ವನ್ನು ಇಟ್ಟು, ಕೈ ಮುಷ್ಟಿಮಾಡಿ ಬಾಯಿಗಿಟ್ಟು ಬಲನಾಗಿ ಎಳೆಯುತ್ತ ಸುರುಳಿ ಸುರುಳಿಯಾಗಿ, ಒಮ್ಮೊಮ್ಮೆ ಚಕ್ರಾಕಾರವಾಗಿ, ಒಮ್ಮೊಮ್ಮೆ ದೂರಕ್ಕೆ ಸಪೂರವಾಗಿ ನೇರಾಗಿ, ಒಮ್ಮೊಮ್ಮೆ ಬಾಯಿಯಲ್ಲೇ ತುಂಬಿಸಿಟ್ಟು ಉಗಿಬಂಡಿಯ ಕೊಳವೆಯಿಂದ ಬುಸ್ ಬುಸ್ ಎಂದು ಬರುವ ಹೊಗೆಯಂತೆ, ಬಾಯಿಯಿಂದಲೂ, ಮೂಗಿನಿಂದಲೂ, ಹೊಗೆ ಉಗುಳುತ್ತ ಸುಮ್ಮನೆ ಕುಳಿತುಕೊಂಡನು.



ನಿನ್ನೆ ರಾತ್ರಿಗೇ ಗಂಜಿ ಕಡಿಮೆಯಾಗಿತ್ತು. ಮತ್ತೆ ಬೆಳಗ್ಗೆ ತಂಗುಳನ್ನ ಎಲ್ಲಿ ಉಳಿಯಬೇಕು? ಕೆಲಸಕ್ಕೆ ಹೋಗುವ ಲಿಂಗಣ್ಣನಿಗೇ ಗಂಜಿಯಿಲ್ಲ. ಮತ್ತೆ ಮಕ್ಕಳ ಮಾತು ಹಾಗೇ ಉಳಿಯಿತು. ಅವನ ಮಕ್ಕಳು— ಪಾರು, ಐತ್ತು, ಫಕೀರ, ಕೊರಗ, ತಿಮ್ಮಿ— ಬೆಳಗಿನ ಜಾವಕ್ಕೇ ಒಂದೊಂದಾಗಿ ಎದ್ದು, ಇನ್ನೂ ಮೊಲೆ ಚೀಪುವ ತಿಮ್ಮಿಯೊಂದನ್ನು ಬಿಟ್ಟು ಉಳಿದುವೆಲ್ಲ 'ಗಂಜಿ, ಗಂಜಿ' ಎಂದು ತಾಯಿಗೆ ತೊಂದರೆ ಕೊಟ್ಟು, ಆಕೆಯಿಂದ ಸಿಕ್ಕಿದ ಬೈಗುಳಿನಲ್ಲೆ ಹೊಟ್ಟೆತುಂಬಿಸಿಕೊಂಡು, ತಮ್ಮಷ್ಟಕ್ಕೆ ತಾವೇ ಆಡುವುದಕ್ಕೋ, ಪುನಃ ನಿದ್ರಿಸುವುದಕ್ಕೋ ಹೋದುವು.

ತನ್ನ ಬತ್ತಿ ಮುಗಿದಾಗ ಲಿಂಗಣ್ಣ ಮಣ್ಣಾತಿಟ್ಟೆಯಿಂದೆದ್ದನು. ಸೊಂಟದ ನೂಲಿನ ಉಡಿದಾರವನ್ನು ಸರಿಮಾಡಿ, ತಲೆಗೆ ಮುಟ್ಟಾಳೆಯಿಟ್ಟು, ಹಳೆಯ ಎಲೆವಸ್ತ್ರದ ತುಂಡನ್ನು ಅದರ ಮೇಲೆ ಸುತ್ತಿಕೊಂಡು, ಕೈಯಲ್ಲಿ ಕತ್ತಿಹಿಡಿದು ಧನಿಗಳಲ್ಲಿಗೆ ಕೆಲಸಕ್ಕೆ ಹೊರಟನು.

ಅದೇ ಧನಿಗಳಲ್ಲಿಗೆ ಕೆಲಸಕ್ಕೆ ಹೋಗಲಿರುವ ಹತ್ತುಹದಿನೆರಡು ಜನ ಆಳುಗಳು ಒಬ್ಬರಿಗೊಬ್ಬರು: "ರಾಮಣ್ಣಾ, ಚೋಮಣ್ಣಾ, ಕೂss." ಎಂದು ಕೂಗಿಕೊಂಡು, ಒಟ್ಟಾಗಿ ಧನಿಗಳಲ್ಲಿಗೆ ಹೋದರು. ಹೋಗಿ ಎಂದಿನಂತೆ ವೀಳೆಯ ತಿನ್ನುವುದಕ್ಕೆ ತೆಗೆದುಕೊಂಡು, ಅವರ ತೋಟದ ಅಜೆಯ ಬದಿಗೆ ಮಣ್ಣಿನ ಕೆಲಸ ಮಾಡುವ ಜಾಗಕ್ಕೆ ಹೋದರು.

ಪ್ರತಿ ವರುಷವೂ ಕಾರ್ತಿಂಗಳಲ್ಲಿ ಬೇಸಾಯ ಮುಗಿದ ಬಳಿಕ, ಆಟಿ ಶೋಣ ಮಾಸಗಳಲ್ಲಿ ಸೂರಪ್ಪಶೆಟ್ಟರಲ್ಲಿ ಮಣ್ಣುಕೆಲಸ ಇದ್ದೇ ಇರುತ್ತದೆ. ಕಳೆದ ವರ್ಷ ಸುಮಾರು ಒಂದು ಮುಡಿ ಬೀಜಹೋಗುವಷ್ಟು ಸ್ಥಳ ಗದ್ದೆ ಮಾಡಿಸಿದ್ದರು. ಆ ಮೇಲೆ ಬೇಸಗೆಯಲ್ಲಿ ಈಗ ಇರುವ ಅವರ ಅಡಿಕೆಯ ತೋಟಕ್ಕೆ ಒತ್ತಾಗಿ, ಆ ಎರಡು ಗುಡ್ಡಗಳು ಕೂಡುವ ತೊಟ್ಟೆಯ ಬುಡದಲ್ಲಿ ಒಂದು ಕೆರೆಯನ್ನು ತೋಡಿಸಿದ್ದರು; ಅದರಲ್ಲಿ ಧಾರಾಳ ನೀರು ಇತ್ತು. ಎಂಥ ಬೇಸಗೆಯಲ್ಲಿಯೂ ಒಂದು ಗಜ ನೀರು ತಪ್ಪುತ್ತಿರಲಿಲ್ಲ. ಇದು ಅವರಿಗೆ ಒಂದು ಹೊಸ ಯೋಜನೆಯನ್ನೇ ಹೊಳೆಯಿಸಿದೆ. ಆ ಕೆರೆಗೆ ಪಂಪು ಹಾಕಿದಲ್ಲಿ, ಮೇಲಿನ ಗುಡ್ಡವನ್ನು ತಟ್ಟುಮಾಡಿ ಅಲ್ಲಿ ಅಡಿಕೆಯ ತೋಟವನ್ನು ಹಾಕಬಹುದು. ಕಡಿಮೆಯೆಂದರೆ ಸುಮಾರು ಇಪ್ಪತ್ತು ಖಂಡಿ ಗೇಣಿ

ಬರುವ ತೋಟ ಏಳಿಸಬಹುದು. ಮೊದಲಿನ ಇಪ್ಪತ್ತಕ್ಕೆ ಈ ಇಪ್ಪತ್ತು ಸೇರಿದರೆ ನಲುವತ್ತು. ತಂದೆಯಿಂದ ಪಾಲು ತೆಗೆದುಕೊಂಡು ಅವರು ಕೊಕ್ಕಡಕ್ಕೆ ಬಂದಾಗ ಏನು ಇತ್ತು? ಬರೇ ನಾಲ್ಕು ಮುಡಿಯಗದ್ದೆ, ಐದಾರು ಖಂಡಿ ಅಡಿಕೆ. ಈಗ ಅದರ ನಾಲ್ಕರಷ್ಟು ಆಗಿದೆ. ಈ ಹೊಸ ತೋಟವೂ ಆದರೆ ಮತ್ತೆ ಎಂಟರಷ್ಟು ಆಗಬಹುದು. ಆದರೆ ಕೊಕ್ಕಡದಂತಹ ಮೂಡುಪ್ರಾಂತದಲ್ಲಿ ಕೆಲಸಕ್ಕೆ ಜನಸಿಗದೆ ಅವರು ಸೋತಿದ್ದಾರೆ. ಬರುವಾಗ ತಮ್ಮೂರಿನಿಂದ ನಾಲ್ಕೈದು ಒಕ್ಕಲು. ಗಳನ್ನು ತಂದಿದ್ದರು. ಅವರಿಗೆ ಕೆಲಸಕ್ಕೆ ಬಂದ ಸಂಬಳವಲ್ಲದೆ ಸಾಲ ಕೊಡಬೇಕು. ಕೆಲಸವೂ ಸಾಕಷ್ಟು ಜರೂರಿನಲ್ಲಿ ಸಾಗುವುದಿಲ್ಲ. ಅಷ್ಟೇ ಜನದಲ್ಲಿ ಅದಕ್ಕಿಂತ ಹೆಚ್ಚು ಕೆಲಸ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಮಳೆಗಾಲದಲ್ಲೋ ಬೇಸಗೆಯಲ್ಲೋ ಸಮಯ ಸಿಕ್ಕಿದಾಗ ಈ ಸಣ್ಣ ಕೆಲಸವನ್ನು ಮಾಡಿಸುತ್ತಾರೆ ಶೆಟ್ಟರು.

ಅಂತೆಯೇ ಕೆಲಸಕ್ಕೆ ಬಂದ ಆಳುಗಳು ವೀಳ್ಯ ಜಗಿದು, ತಮ್ಮ ತಮ್ಮ ಕೆಲಸದಲ್ಲಿ ತೊಡಗಿದರು— ಲಿಂಗಣ್ಣ ಕೂಡಾ.

ಹೊತ್ತಿಗೆ ಸರಿಯಾಗಿ ಎಂಟುಗಂಟೆಗೆ ಎದ್ದು, ಒಂಬತ್ತಕ್ಕೆ ಧಾರಾಳ ಕಾಫಿ ತೀರಿಸಿ, ಎಲೆವಸ್ತ್ರ ಉಟ್ಟುಕೊಂಡು, ಗಂಜಿಫ್ರಾಕು ಹಾಕಿ, ತಲೆಯ ಜುಟ್ಟು ಹೊರಗೆ ಹಾಕಿ ಇನ್ನೊಂದು ಎಲೆವಸ್ತ್ರದ ಮುಂಡಾಸು ಕಟ್ಟಿ, ಒಂದು ಕೈಯಲ್ಲಿ ಬೆಳ್ಳಿಯ ಕಟ್ಟವಿರುವ ಬೆತ್ತ, ಇನ್ನೊಂದು ಕೈಯಲ್ಲಿ ಕೊಡೆಹಿಡಿದುಕೊಂಡು, ಸೊಂಟಕ್ಕೆ ನಸ್ಯದ ಡಬ್ಬಿ ಸಿಕ್ಕಿಸಿಕೊಂಡು ಆಳುಗಳಿದ್ದಲ್ಲಿಗೆ ಬಂದರು— ಸೂರಪ್ಪಶೆಟ್ಟರು. ಆ ದಿನ ಕೆಲಸಕ್ಕೆ ಬಾರದಿದ್ದ ಆಳುಗಳು ಏಕೆ ಬರಲಿಲ್ಲವೆಂದು ಉಳಿದವರೊಡನೆ ವಿಚಾರಿಸಿ, ನಿನ್ನೆ ಬಾರದಿದ್ದವರು ಇಂದು ಬಂದಾಗ ಬೈದು, ಎಲ್ಲೋ ಎತ್ತರವಾದೊಂದು ಕಲ್ಲಿನ ಮೇಲೆ ಬೆತ್ತಊರಿಕೊಂಡು ಕುಳಿತರು. ಸೊಂಟದಿಂದ ನಸ್ಯದ ಡಬ್ಬಿ ತೆಗೆದು ಮೂಗಿನ ರಂಧ್ರಕ್ಕೆ ಏರಿಸಿದರು.

ಮತ್ತೆ ಸ್ವಲ್ಪ ಹೊತ್ತಾಗಿತ್ತಷ್ಟೆ! ಟಪ್ಪಾಲು ಪೇದೆಯೊಬ್ಬ ಶೆಟ್ಟರನ್ನು ಹುಡುಕಿಕೊಂಡು ಬಂದು, ಅವರ ಕೈಗೊಂದು ಕಾಗದವನ್ನು ಕೊಟ್ಟನು. ಶೆಟ್ಟರು ಲಕ್ಕೋಟೆಯನ್ನು ಒಡೆದು ಕಾಗದವನ್ನು ಬಿಡಿಸಿಹಿಡಿದು, ಅಕ್ಷರಗಳು 'ವಿರಳ'ವಾಗಿ ಕಾಣುವುದಿಲ್ಲವೆಂದು, ಮನೆಗೆ ಒಬ್ಬ ಆಳನ್ನು ಕಳಿಸಿ ಕನ್ನಡಕವನ್ನು ತರಿಸಿಕೊಂಡು, ಕಾಗದವನ್ನೋದಿದರು. ಕಾಗದವನ್ನು ಎರಡೆರಡು ಬಾರಿ ಓದಿ, ಪುನಃ ಮಡಚಿ, ಲಕ್ಕೋಟೆಯೊಳಗೆ ಹಾಕಿ ಗಂಜಿಫ್ರಾಕಿನ ಕಿಸೆಯಲ್ಲಿ ಹಾಕಿದರು. ಮತ್ತೆ ಕನ್ನಡಕವನ್ನು ತೆಗೆಯುತ್ತಾ ಆಳುಗಳನ್ನುದ್ದೇಶಿಸಿ, "ಬರುವ ಸೋಮವಾರದಿಂದ ನೀವೊಂದು ಆಶ್ಚರ್ಯವನ್ನು ಕಾಣಲಿಕ್ಕುಂಟು. ನೋಡಿ, ಇಲ್ಲೇ ಇನ್ನು ಹದಿನೈದು ದಿನಗಳಲ್ಲಿ ಅಡಿಕೆ ಸಸಿಹಾಕಿ ತೋಟ ಏಳಿಸುತ್ತೇನೆ ನಿಮ್ಮ ಕಣ್ಣ ಮುಂದೆ........!" ಎಂದರು.

ಅವರ ಸ್ವರ ಕೇಳಿದೊಡನೆ ತಲೆಯೆತ್ತಿ ಆಳುಗಳೆಲ್ಲ ನೋಡುತ್ತ ನಿಂತರು. ರಾಮಣ್ಣ ಕೇಳಿದ : "ಏನು? ಎಲ್ಲಿಂದ ಅಷ್ಟು ಜನ ತರಿಸುತ್ತೀರಿ? ಈ ಮಳೆಗಾಲದಲ್ಲಿ......."

"ಜನ-ಗಿನಾ ಒಂದೂ ಬೇಡ. ಅದಕ್ಕೆ ಒಂದು ಯಂತ್ರ ಉಂಟು. ಬುಲ್‌ಡೋಜರ್ ಅಂತ........"

"ಬೂಲುಡೋಜ.......! ಹಾಗೇಂದ್ರೇನು ಸ್ವಾಮೀ?"

"ಏನು ಎಂದರೇ.... ನಿಮಗೆ ಹೇಳಿದರೆ ಅರ್ಥವಾಗಲಿಕ್ಕಿಲ್ಲ. ಅದು ಒಂದು ಗಂಟೆಯಲ್ಲಿ ಮಾಡುವ ಕೆಲಸವನ್ನು ನೀವು ನೂರು ಜನ ಇಡೀ ದಿನ ಮಾಡಬೇಕು...."

"ಅದು ಗುಡ್ಡೆಯನ್ನೂ ಕಡಿಯುತ್ತದೋ? ಹೇಗಪ್ಪಾ?"

"ನೀವೇ ನೋಡುವಿರಂತೆ. ಈ ಗುಡ್ಡೆಯನ್ನು ಕಡಿದು ತಟ್ಟು ಮಾಡುವುದಕ್ಕೆ ಅದಕ್ಕೆ ನಾಲ್ಕು ದಿವಸ ಹಿಡಿದೀತು ನೀವಾದರೆ ಆರು ತಿಂಗಳು ಕೆಲಸ ಮಾಡಬೇಕು. ಓ, ಆ ತೇಗಿನಮರ ಉಂಟಲ್ಲ! ಆ ಗಾತ್ರದ್ದೆಲ್ಲ ಅದಕ್ಕೆ ಒಂದು ಲಕ್ಷ್ಯವೇ ಅಲ್ಲ. ಕ್ಷಣದೊಳಗೆ ಉರುಳಿಸಿ ಬಿಡುತ್ತದೆ. ನೀವು ಬಯಲಾಟದಲ್ಲಿ ಬಕಾಸುರ ಮೊದಲಾದವರ ಶಕ್ತಿ ಕೇಳಲಿಲ್ಲವೇ? ಅಂತಹ ಶಕ್ತಿ ಅದಕ್ಕೆ!"

"ಹಾಂಽಽ"

"ಹಾಂ, ಏನು? ಅದರಲ್ಲಿ ಒಂದಕ್ಕೆರಡು ಆದಾಯವೂ ಉಂಟು. ನಿಮಗೆ ಕೊಡುವ ಕೂಲಿಯ ಅರ್ಧದಲ್ಲಿ ನಾನು ಈ ತೋಟದ ಕೆಲಸ ಮುಗಿಸಿಯೇನು. ಈ ವರ್ಷವೇ ತೋಟ ಏಳಿಸಿದರೆ ಇನ್ನು ಐದು ವರ್ಷದಲ್ಲಿ ಅಡಿಕೆಯ ಸಸಿಗಳು ಸಿಂಗಾರ ಬಿಟ್ಟಾವು. ನಾನು ಇಷ್ಟರ ತನಕ ನಿಮ್ಮೊಡನೆ ಪೇಚಾಡಿದ್ದು ಬಂತು. ಮೊದಲೇ ಈ ಬುಲ್‌ಡೋಜರ್ ತರಿಸದೆ ನಾನು ಸೋತುಹೋದೆ. ನಿಮಗಾಗಿ ಒಂದಕ್ಕೆರಡು ನಷ್ಟಹಾಕಬೇಕಾಗಿ ಬಂತು. ಕಡೆಗೆ ಕಳೆದ ತಿಂಗಳಾದರೂ ಸರಕಾರಕ್ಕೆ ಅರ್ಜಿ ಹಾಕಿದೆ. ಸಿಗುತ್ತದೋ ಇಲ್ಲವೋ ಎಂದು ಸಂಶಯವಿತ್ತು. ನಾಡದು ಸೋಮವಾರ ಕಳುಹಿಸುತ್ತೇವೆಂದು ಆಫೀಸಿನಿಂದ ಬರೆದಿದ್ದಾರೆ. ಬಚಾವು........"

"ಹಾಗಾದ್ರೆ ನಾಳೆಯಿಂದ ನಮಗೆ ಬೇರೆ ಕೆಲಸವೋ?"

"ಬೇರೆ ಈಗ ಮಳೆಗಾಲದಲ್ಲಿ ಎಂತಹ ಕೆಲಸ? ನೀವು ನಾಳೆಯಿಂದ ಮನೆಯಲ್ಲಿ 'ಗಮ್ಮತ್ತು' ಕೂತುಕೊಳ್ಳಬಹುದು. ಒಂದು ಚಾಪೆಯೋ ತಲೆದಿಂಬೋ ತಕ್ಕೊಳ್ಳಿ! ಮಳೆಗಾಲ ಅಲ್ಲವೇ? ಚಳಿಗೆ ಸುಮ್ಮಗೆ ನಿದ್ರೆಮಾಡಬಹುದು........!"

"ಹಾಗಾದರೆ ಊಟಕ್ಕೆ? ಹೊಟ್ಟೆ ಕೇಳಬೇಕಲ್ಲ!" ಒಬ್ಬ ಧೈರ್ಯ ಮಾಡಿ ಹೇಳಿದ.

"ಹೊಟ್ಟೆಗೇನು! ಬೇಸಾಯದ ಸಮಯದಲ್ಲಿ ಸಿಕ್ಕಿದ ಭತ್ತ ಇಲ್ಲವೆ 'ಸ್ಟೋಕು'? ಮತ್ತೆ ಬೇರೆಲ್ಲಿಗಾದರೂ ಕೆಲಸಕ್ಕೆ ಹೋಗಿ!"

"ಬೇಸಾಯದ್ದು ಅಂದೇ ಉಂಡು ಮುಗಿದಿದೆ. ಈಗ ಎಲ್ಲಿಂದ ಸ್ವಾಮೀ ಅದು! ಈಗ ಊಟಕ್ಕೇ ಗತಿಯಿಲ್ಲ. ಈ ದಿನ ಬೆಳಿಗ್ಗೆ ಗಂಜಿಯಿರಲಿಲ್ಲ........ ನಿಮ್ಮನ್ನೇ ನಂಬಿದ್ದೇವೆ. ಬೇರೆ ಈ ಊರಿನಲ್ಲಿ ಈ ಮಳೆಗಾಲದಲ್ಲಿ ಕೆಲಸಕ್ಕೆನುವ 'ತ್ರಾಣ' ಯಾರಿಗುಂಟು, ನಿಮ್ಮ ಹೊರತು?........"

"ಅಲ್ಲಾಽಽ, ಬುಲ್‌ಡೋಜರ್ ಬಂದಮೇಲೆ, ನಾನು ನಿಮ್ಮನ್ನು ಇಟ್ಟುಕೊಂಡು ಏನು ಮಾಡುವುದು? ಕೈಯಿಂದ ದಂಡ ಹಾಕು

ವುದೇ ? ಕೆಲಸ ಬೇರೆ ಸಿಗುತ್ತದೋ ನೋಡಿ. ಸಿಗದೆ ಏನು ?........ ಕೆಲಸ ಮಾಡುವವರಿಗೆ ಎಲ್ಲಿ ಬೇಕಾದರೂ ಇದೆ. ಇಲ್ಲಿ ಅಲ್ಲದಿದ್ದರೆ ಇನ್ನೊಂದು ಕಡೆ........ನಿಮಗೆಲ್ಲ ಏನೆ ಉಂಟು ಇಷ್ಟು ಆಗಲ...."

"ಹಾಗಲ್ಲ ಸ್ವಾಮಿ, ನಿಮ್ಮನ್ನು ನಂಬಿ ನಾವು ಈ ಮೂಡು-ರಾಜ್ಯಕ್ಕೆ ಬಂದೆವು. ಈಗ ಕೆಲಸ ಇಲ್ಲ—ಅಂತ ಹೇಳಿದರೆ ಹೇಗೆ ?"

"ಏನು, ನಿಮಗೆ ಯಾವಾಗಲೂ ಕೆಲಸ ಕೊಡ್ತೇನು ಅಂತ ನಾನು ಮಾಡಿಕೊಟ್ಟ ಕರಾರು ಏನಾದರೂ ಉಂಟೋ ?"

'ಕರಾರು' ಇಲ್ಲ ಎಂಬುದು ಅವನಿಗೆ ಗೊತ್ತು. ಆದರೆ ಈಗ ನಡುನೀರಿನಲ್ಲಿ ಕೈಬಿಡುವುದು ನ್ಯಾಯವಲ್ಲವೆಂದು ಅವನ ಅಂತರಾತ್ಮ ಹೇಳುತ್ತಿತ್ತು. ಆದರೆ ಅದನ್ನು ಬಾಯಿಬಿಟ್ಟು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ.

"ಈ ದಿನ ಸಂಜೆವರೆಗೆ ಬೇಕಾದರೆ ಕೆಲಸ ಮಾಡಿ. ಈ ದಿನದ ಸಂಬಳವನ್ನೂ ತೆಗೆದುಕೊಂಡು ಹೋಗಿ. ಮತ್ತೆ ನಾಳೆಯಿಂದ ಮಾತ್ರ ಇಲ್ಲಿ ಬಂದರೆ ನಾನೆಲ್ಲಿಂದ ಕೆಲಸ ಕೊಡುವುದು ? ನಿಮ್ಮ ದಾರಿ ಆಲೋಚನೆ ಮಾಡಿ......' ಎಂದು ಹೇಳಿ, ಒಮ್ಮೆ ನಕ್ಕು ಎದ್ದು ತಮ್ಮ ಮನೆಗೆ ಹೋದರು.

ಆಳುಗಳ ಉತ್ಸಾಹ ತಗ್ಗಿತು. ಅವರಿಗೆ ಬೇರೆ ಶಕ್ತಿಯೇ ಉಡುಗಿ ಹೋದಂತಿತ್ತು. ಅವರು ತಮ್ಮತಮ್ಮೊಳಗೇ 'ಗುಜುಗುಜು' ಮಾತನಾಡತೊಡಗಿದರು. ಲಿಂಗಣ್ಣನಿಗೆ ಮಾತನಾಡುವಷ್ಟು ಶಕ್ತಿಯೂ ಇರಲಿಲ್ಲ. 'ಇದಕ್ಕೇನು ದಾರಿ ?' ಎಂಬ ಪ್ರಶ್ನೆ ಅವನೆದುರು ನಿಂತಿತ್ತು.

ಆದರೆ ಅವನಿಗೆ ಉತ್ತರ ಸಿಗಲಿಲ್ಲ.

ಹೇಗಾದರೂ ಸಂಜೆಯ ತನಕ ಕೆಲಸ ಮಾಡಿದ 'ಶಾಸ್ತ್ರ' ಸಲ್ಲಿಸಿ, ಸಂಜೆ ಧನಿಗಳಲ್ಲಿಗೆ ಬಂದವರು ತಮ್ಮ ಕಷ್ಟಗಳನ್ನು ಹೇಳಿಕೊಂಡರು.

"ಇಷ್ಟರವರೆಗೆ, ನನ್ನ ಕೆಲಸವಾಗಬೇಕಾದರೆ ನಿಮಗೆ ದಮ್ಮಯ್ಯ ಹಾಕಿ ಸಾಕಾಯ್ತು. ಈಗ ನನಗೆ ಸುಲಭದಲ್ಲಿ ಕೆಲಸ ಆಗುತ್ತದೆಂದು ಇರುವಾಗ, ನಾನು ಅದನ್ನು ಬಿಡುವುದು ಹೇಗೆ ?"—ಧನಿಗಳು ಹೇಳಿದರು.

"ಸ್ವಾಮಿ, ನಾನು ನಿಮ್ಮನ್ನೇ ನಂಬಿ ಬಂದವ, ಎಲ್ಲಿಗೆ ಹೋಗಲಿ ? ಏನಾದರೂ ಕೆಲಸ ಕೊಡಿ........ಇಲ್ಲದೆ ಹೋದರೆ ನನ್ನ ಮಕ್ಕಳಿಗೇನು ಗತಿ ?........ಅವುಗಳನ್ನು ನೋಡಿಯಾದರೂ........" ಲಿಂಗಣ್ಣ ಮಾತು ಮುಗಿಸಲಿಲ್ಲ.

"ಏನು ಅಂತ ಮಾತಾಡುತ್ತೀ, ಲಿಂಗ ? ನೀನು ಹುಟ್ಟಿಸಿದ ಮಕ್ಕಳಿಗೆ ಅನ್ನ ಕೊಡುತ್ತೇನೆಂದು ನಾನೇನು ಹರಕೆ ಹೊತ್ತಿದ್ದೆನೋ ? "—ಎಂಬ ಉತ್ತರ ಬಂತು ಧನಿಗಳ ಬಾಯಿಂದ.

"ಛೆ, ಛೆ, ನೀವೇಕೆ ಹರಕೆ ಹೊರುತ್ತೀರಿ ! ನನ್ನ ಹೊಟ್ಟೆಯ ಪಾಡಿಗೆ ನಾನು ಹೇಳಿಕೊಂಡೆ, ತಪ್ಪಾಯ್ತು."

— ಲಿಂಗಣ್ಣನ ಉದ್ವೇಗವನ್ನು ಮೀರಿ ದುಃಖ ಬಂದು, ಆತನ ಕಣ್ಣಿನಿಂದ ನೀರು ಇಳಿಸಿತು.

ಆದರೆ ಆ ನೀರು ಬಿದ್ದುದು ಗೋರ್ಕಲ್ಲ ಮೇಲೆ !

ಆ ದಿನದ ಸಂಬಳ ಬಟವಾಡೆಯಾಯಿತು. ತನ್ನ ಕೆಲಸ ಕಡಿಮೆ ಖರ್ಚಿನಲ್ಲಿ ಆಗುವುದಕ್ಕೆ, ಆಳುಗಳಿಗೆ ಬಹುಮಾನವಾಗಿ ನಾಲ್ಕು-ನಾಲ್ಕಾಣೆ 'ಕಾಫಿ ಕುಡಿದುಕೊಳ್ಳಿ' ಎಂದು ಕೊಟ್ಟರು. ಎಲ್ಲರೂ ತಮ್ಮ ಭಾರವಾದ ಶರೀರವನ್ನು ಎಳೆದುಕೊಂಡು ಮನೆ (!) ಯನ್ನು ಸೇರಿದರು.

ಕೈಯಲ್ಲಿ ಒಂದು ರೂಪಾಯಿ ಕೂಡಿಸು ನಾಲ್ಕಾಣೆ—ಇಷ್ಟನ್ನು ಹಿಡಿದುಕೊಂಡು, ಲಿಂಗಣ್ಣನು ಕೂಡಾ. ಆತನು ಅಂಗಡಿಗೆ ಹೋಗಿ ನಾಲ್ಕು ಸೇರು ಗೆಣಸು, ಒಂದು ಸೇರು ಹುರುಳಿ ತಂದು, ರಾತ್ರಿ ಬೇಯಿಸಿ, ಮಕ್ಕಳಿಗೆ ಸ್ವಲ್ಪ ಸ್ವಲ್ಪ ಕೊಟ್ಟು ತಾನೂ ಸ್ವಲ್ಪ ತಿಂದು ಮಲಗಿದನು.

ಬದುಕೆಂಬುದು ಕುದುರೆಮುಖದ ತುದಿಯಲ್ಲಿ ಹುಟ್ಟಿ, ಉಳ್ಳಾಲದಲ್ಲಿ ಕಡಲನ್ನು ಸೇರುವ ನೇತ್ರಾವತಿಯ ಹಾಗೆ. ಯಾವಾಗಲೋ ಒಂದು ಕಡೆಯಲ್ಲಿ ಹುಟ್ಟಿ, ಎಲ್ಲೆಲ್ಲೋ ಓರೆ ಕೋರೆಯಾಗಿ ಹರಿದು ಇಷ್ಟು ಭೂಮಿಯನ್ನು ಹಸನು ಮಾಡಿ, ಇಷ್ಟು ಭೂಮಿಯನ್ನು ಕೊಚ್ಚಿಕೊಂಡು, ಇಳಿಯುತ್ತ ಇಳಿಯುತ್ತ ಕೊನೆಗೆ ಕಡಲಿನೊಡನೆ ಮಿಲನವಾಗುವುದು. ಒಮ್ಮೊಮ್ಮೆ—ಹಸಿರಾದ, ಚೆಲುವಾದ ದಡಗಳ ನಡುವೆ ತಿಳಿಯಾಗಿ ಕುಣಿಕುಣಿದು ಕಲ್ಲಿಂದ ಕಲ್ಲಿಗೆ ನರ್ತಕಿಯ ಹೆಜ್ಜೆಯಂತೆ ಜಿಗಿದು, ಆಕೆಯ ಮುಗುಳ್ನಗೆಯಂತೆ ನೊರೆನೊರೆಯಾಗಿ ನಲಿಯುತ್ತ ಹೋಗುವುದು—ಜೀವನನಿರ್ಝರ ! ಒಮ್ಮೊಮ್ಮೆ ಮಳೆಗಾಲದ 'ಬೊಳ್ಳ'ದ ಅಬ್ಬರಕ್ಕೆ ಆವೇಶಗೊಂಡು ದಡಮೀರಿ ಸಿಕ್ಕಿದ ಪೈರುಪಚ್ಚೆಗಳನ್ನೂ ಮರಗಳನ್ನೂ ಹತ್ತಿಕ್ಕಿ ಕತ್ತರಿಸಿ, ತನ್ನ ಡೊಳ್ಳಿ



ನಲ್ಲಿ ತುಂಬಿಸಿಕೊಂಡು ಹೋಗುವುದು—ಬದುಕಿನ ಹೊನಲು! ಒಮ್ಮೊಮ್ಮೆ—ಬೇಸಗೆಯಲ್ಲಿ ನೀರು ಬತ್ತಿ ತಳ ಒಣಗಿ, ಸತ್ತೂ ಸಾಯದ—ಬೀದಿಯಲ್ಲಿ ಬಿದ್ದ ರೋಗಿಯ ಬತ್ತಲೆ ಮೈಯ ಕೊಳೆತ ಹುಣ್ಣುಗಳಂತೆ ಮರಳು ಕಲ್ಲುಗಳನ್ನು ಬಿಸಿಲಿಗೊಡ್ಡಿ ಬಡವಾಗಿ, ಬಡಕಲಾಗಿ, ತೆವಳುತ್ತ ಹರಿಯುವುದು—ಬಾಳ ಹೊಳೆ!

ಲಿಂಗಣ್ಣನ ಜೀವನಪ್ರವಾಹಕ್ಕೆ ಹೊಸತೆರಡು ತೊರೆಗಳು ಕೂಡಿಕೊಂಡುವು—ನಿರುದ್ಯೋಗ; ಉಪವಾಸ.

ಒಂದೂ ಕಾಲು ರೂಪಾಯಿಯಲ್ಲಿ ಏಳು ಜೀವಗಳು ಎಷ್ಟು ದಿನ ಬದುಕಬಲ್ಲುವು? ಗೆಣಸು, ಹುರುಳಿ, ಎಂದು ಎರಡು ಮೂರು ದಿನ ತಳ್ಳಿದರು. ಮತ್ತೆ ಅದಕ್ಕೂ ಗತಿಯಿಲ್ಲ. ಸಾಲ ಕೇಳಿದರೆ ಯಾರು ಕೊಡಬೇಕು—ನಿರ್ಗತಿಕನಿಗೆ? ಕೈಯಲ್ಲಿಯ ಕಾಸೂ ಕರಗಿತು; ಅದರೊಂದಿಗೆ ಮನೆಯ ಮಂದಿಯ ಮೈಯೂ!

ಲಿಂಗಣ್ಣನಿಗೆ ಎಲ್ಲಿಯೂ ಕೆಲಸ ಸಿಗಲಿಲ್ಲ. ಅವನಂತೆ ಇತರ ಆಳುಗಳಿಗೆ ಕೂಡಾ!

ದಿನಗಳು ಕಳೆದುವು. ಲಿಂಗಣ್ಣನ ಮನೆಯಲ್ಲಿ ಎರಡು ದಿನದಿಂದ ಉಪವಾಸ. ಹೀಗಾದರೆ ಇನ್ನು ಮರಣದ ಸಹವಾಸ! ಮಕ್ಕಳು ಅತ್ತು ಅತ್ತು, ಅಳುವ ಶಕ್ತಿಯನ್ನು ಕಳಕೊಂಡಿದ್ದುವು ಹೆಂಡತಿ ಏನು ಮಾಡುವುದೆಂದು ತಿಳಿಯದೆ, ಮೂಕಿಯಾಗಿ ಮೂಲೆ ಹಿಡಿದಿದ್ದಳು. ಲಿಂಗಣ್ಣನೊಬ್ಬನೇ ಆ ರಾತ್ರಿ ಮಣ್ಣ ತಿಟ್ಟೆಯ ಮೇಲೆ ಕುಳಿತಿದ್ದನು. ಆತನ ಅಂಗಡಿಯ ಗೆಳೆಯ ಕೊಟ್ಟ ಹೊಗೆಸೊಪ್ಪನ್ನು ಬತ್ತಿಮಾಡಿ ಬಾಯಿಗಿಟ್ಟು ಬೆಂಕಿಹಚ್ಚಿ ಎಳೆಯತೊಡಗಿದನು. ಎಳೆದು ಎಳೆದು ಹೊಗೆ ಉಗುಳುತ್ತಿದ್ದನು. ಹೊಗೆಯ ಸುರುಳಿ ಸುತ್ತಿದಂತೆ, ಆತನ ತಲೆಯಲ್ಲಿ ಆಲೋಚನೆ ಸುರುಳಿ-ಸುರುಳಿಯಾಗಿ ಸುತ್ತುತ್ತಿತ್ತು:

ಆ ದಿನ ಬೆಳಗ್ಗೆ ಲಿಂಗಣ್ಣ ಎದ್ದು ಹೊಗೆಬತ್ತಿ ಸೇದುತ್ತಿದ್ದಾಗ, ದೂರದಿಂದ ಬುಲ್‌ಡೋಜರಿನ ‘ಘುಡ್, ಘುಡ್’ ಸದ್ದು ಕೇಳಿಸಿತು. ಅದು ಎಂತಹ ಯಂತ್ರವೋ?— ನೋಡಬೇಕೆನ್ನಿಸಿತು ಆತನಿಗೆ. ತೋಟದ ಆಚೆಯ ಬದಿಗೆ ಹೋಗಿದ್ದನು: ದೊಡ್ಡದೊಂದು ಕೆಂಪು ಯಂತ್ರ. ಅದರ ಕೆಲಸ ಅದ್ಭುತ. ಮದ ಬಂದ ಆನೆ ಮರಕ್ಕೆ ತಲೆಯನ್ನು ಢಿಕ್ಕಿ ಹೊಡೆಯುವ ಹಾಗೆ ಮರಕ್ಕೆ ಢಿಕ್ಕಿ ಹೊಡೆದು, ಅದು ಮರವನ್ನು ಉರುಳಿಸುವ ರೀತಿಯೇನು? ಅದರ ಎದುರುಭಾಗದಲ್ಲಿರುವ—ನಡುಭಾಗ ಹಿಂದಕ್ಕೆ ಬಾಗಿದ—ಹತ್ತಡಿ ಉದ್ದದ ಹಾರಿ ನೆಲವನ್ನೆ ಮುಕ್ಕಿ ಮುಂದೂಡಿ ಮಣ್ಣನ್ನು ಹರವಿ ಹಾಕುವ ದೃಶ್ಯ ಎಂಥದು! ಚಪ್ಪಟೆಯಾಗಿ ಗೊಣಸುಗೊಣಸಾಗಿ ನೆಲವನ್ನೆ ಕಚ್ಚಿ ಹಿಡಿದು, ಬಸವನ ಹುಳದ ಕಾಲಿನಂತೆ ನಿಧಾನವಾಗಿ ಇಡೀ ಯಂತ್ರವನ್ನೆ ಹಿಂದೆ ಮುಂದೆ ಎಳೆಯುವ ಅದರ ಗಾಲಿಗಳ ವೈಖರಿಯೇನು? ಮಲೆನಾಡಿನ ಕಾಡಿನಲ್ಲಿ ಹಸಿದ ಹುಲಿಯ ಹಾಗೆ ಅದು ಮಾಡುವ ಗರ್ಜನೆ ಸಾಮಾನ್ಯವೇ?

ಸಿಂಹದ ಕಿವಿಗಳನ್ನು ಹಿಡಿದು ಅದರ ಬೆನ್ನಮೇಲೆ ಸವಾರಿ ಮಾಡುವವನಂತೆ ಕುಳಿತು, ಆ ಯಂತ್ರವನ್ನು ನಡೆಸುವವನ ಸಾಹಸ-ಚಾತುರ್ಯಗಳೇನು? ನಿಜವಾಗಿಯೂ ನೂರು ಜನ ಮಾಡಬಲ್ಲ ಕೆಲಸವನ್ನು ಅದು ಒಂದು ಗಂಟೆಯಲ್ಲಿ ಮಾಡಬಲ್ಲುದು. ಮನುಷ್ಯನ ನೈಮೆಯ ಅರೆವಾಸಿ ಖರ್ಚು ಬೇಡ, ಆ ಯಂತ್ರದ ಕೆಲಸಕ್ಕೆ.

ಆ ಯಂತ್ರದಿಂದ ಸ್ವಲ್ಪ ದೂರದಲ್ಲಿ ಸೂರಪ್ಪ ಶೆಟ್ಟರು ಕುಳಿತು, ಅದು ಗುಡ್ಡೆ ಅಗೆಯುವುದನ್ನು ನೋಡುತ್ತಿದ್ದರು. ತನ್ನ ಕೆಲಸವು ಎಷ್ಟು ಸುಲಭದಲ್ಲಿ ಆಯಿತೆಂದು ಅವರಿಗೆ ಸಂತೋಷ. ತನ್ನ ಸಾಮರ್ಥ್ಯಕ್ಕೆ ತನಗೆ ಹೆಮ್ಮೆ. ಹೆಮ್ಮೆ ಸಂತೋಷಗಳಿಗೆ ಕನ್ನಡಿ ಹಿಡಿದ ಠೀವಿಯ ಠೇಂಕಾರದಿಂದ ಅರಳಿದ ಮುಖ.

ಅದನ್ನೆಲ್ಲ ನೋಡುತ್ತ ನೋಡುತ್ತ ಅಸಹಾಯತೆಯಿಂದ ನಿಂತ, ಬಾಡಿದ ಮುಖದ, ಚಪ್ಪಟೆ ಹೊಟ್ಟೆಯ, ಅರೆ ಜೀವದ ಮೈಯ—ಜನ. ಅಷ್ಟೆಲ್ಲ ಜನರ ಹೊಟ್ಟೆಗೆ, ಅವರ ಹೆಂಡತಿ ಮಕ್ಕಳ ಹೊಟ್ಟೆಗೆ ಕಾಲೂರಿ ಮೆರೆವ ಯಂತ್ರರಕ್ಕಸ—ಮೆರೆಸುವ ಮಾನವಯಂತ್ರ!

ಕೆಲವು ದಿನಗಳ ಹಿಂದೆ ತಾನು ಕಂಡ ಕನಸಿನ ನೆನಪಾಯ್ತು ಆತನಿಗೆ: “ನಿನಗೆ ಬುದ್ಧಿಯಿಲ್ಲ....ನೀನು ಪಶು. ಮೈದು ತಿನ್ನುವುದಕ್ಕೂ ನಿನ್ನ ಹಣೆಯಲ್ಲಿ ಬರೆದಿಲ್ಲ........ನಿನ್ನಿಂದ ಏನು ಸಾಗೀತು?........ ನೀನು ಹುಲ್ಲುಕಡ್ಡಿ........ನನ್ನ ಗುಲಾಮನಾಗಿ ಬಾಳು ಎಂದು ನಿನ್ನ ವಂಶಕ್ಕೆ ನಾನು ಕೊಟ್ಟ ಶಾಪ........! ಆದರಿಂದ ವಿಮೋಚನೆ ನಿನಗೆ ಸಾಧ್ಯವೇ? ವಿಮೋಚನೆ ನಿನಗೆ ಸಾಧ್ಯವೇ? ನಿನಗೆ! ನಿನಗೆ!! ಯಂತ್ರಜಗತ್ತಿನ ಗಾಣದ ಗೂಳಿಗೆ!!”

ಲಿಂಗಣ್ಣ ಕೈಯಲ್ಲಿ ಹಿಡಿದಿದ್ದ ಹೊಗೆಸೊಪ್ಪಿನ ಬತ್ತಿ ಸುಟ್ಟು ಸುಟ್ಟು ಇನ್ನೇನೂ ಸಿಕ್ಕದಿರುವಾಗ ಆತನ ಕೈಯನ್ನೇ ಸುಟ್ಟಿತು! ಬೆಂಕಿಗೆ ಸುಡುವ ಸಾಮರ್ಥ್ಯವಿದೆ! ಬೆಂಕಿಗೆ ಸುಡುವ ಸಾಮರ್ಥ್ಯವಿದೆ ಎಂದು ಹೊಸತಾಗಿ ತಾನು ಕಂಡುಹಿಡಿದಂತೆ ಎನಿಸಿತು ಲಿಂಗಣ್ಣನಿಗೆ........ “ನನ್ನ ಗುಲಾಮನಾಗಿ ಬಾಳು ಎಂದು ನಿನ್ನ ವಂಶಕ್ಕೆ ನಾನು ಕೊಟ್ಟ ಶಾಪ! ನಿನಗೆ ವಿಮೋಚನೆ ಸಾಧ್ಯವೇ? ಸಾಧ್ಯವೆ?........”

ಸಾಧ್ಯ; ಖಂಡಿತವಾಗಿಯೂ ಸಾಧ್ಯ—ಎನಿಸಿತು ಲಿಂಗಣ್ಣನಿಗೆ.

ತಾನು ಬತ್ತಿಹೊತ್ತಿಸಿ ಕೆಳಗಿರಿಸಿದ್ದ ಬೆಂಕಿಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಬಿದ್ದನು. ಕತ್ತಲೆಯನ್ನು ಹಾಯ್ದು ತೋಟವನ್ನು ದಾಟಿ, ಆ ಯಂತ್ರದ ಬಳಿಗೆ ನಡೆದನು. ಅದರ ‘ಮಾಳ’ದಲ್ಲಿ ಅದು ನಿರ್ಜೀವವಾಗಿ ನಿಂತಿತ್ತು. ಅದರ ಬದಿಯಲ್ಲೆ ಇರಿಸಿದ್ದ ಎಣ್ಣೆಯ ಡಬ್ಬಿಗೆ ಕೈಹಾಕಿದನು. ಅಲ್ಲಿದ್ದ ಹನ್ನೆರಡು ಡಬ್ಬಿ ಎಣ್ಣೆಯನ್ನು ಅದರ ಮೇಲೆ ಸುರಿದು, ಕೈಯಲ್ಲಿದ್ದ ಬೆಂಕಿಪೆಟ್ಟಿಗೆಯ ಕಡ್ಡಿಯನ್ನು ಗೀರಿ ಯಂತ್ರದ ಮೇಲಿಟ್ಟನು. ಒಂದೇ ಸವನೆ ಅಲ್ಲಿಂದ ಓಡಿಬಂದು, ತನ್ನ ಮನೆಯ ಬಾಗಿಲಿನಲ್ಲಿ ನಿಂತು ಎವೆಯಿಕ್ಕದೆ ನೋಡಿದನು:

— ದೂರ...ಬಹುದೂರದಲ್ಲಿ ಕಂಡ ಆ ಬೆಂಬೆಳಕನ್ನು;

— ಆತನ ಬದುಕಿನ ಹೊಸ ಅಧ್ಯಾಯದ ಹೊಂಬೆಳಕನ್ನು!

ಹಿರಿಯತನ ಹಾಳಾಯ್ತು!

(ಮನೆತನ ಮಾತು)

ಬರೆದವರು: ಪ್ರೊ. ಬಿ. ಆರ್. ವಾಡಪ್ಪಿ, ಎಂ. ಎ., ಬಿ. ಟಿ., ಧಾರವಾಡ

◆

[ಸೀತಾರಾಮರಾಯರು ತಂದೆ ಗಳಿಸಿಟ್ಟಿದ್ದ ಆಸ್ತಿಯ ಮೇಲೆ ತಮ್ಮ ಜೀವನ ನಡೆಸಿ— ಸಂತಾನ ಲಕ್ಷ್ಮಿ (ಅವರ ಹೆಂಡತಿ)ಯ ಕೈಗೊಂಬೆಯಾಗಿ ಕುಳಿತ ಮಹಾಧೀರರು! ಅವರಿಗಿರುವ, ಪ್ರಪಂಚ ಪರಿಚಯವೆಂದರೆ— ತಾವು, ತಮ್ಮ ವೈಭವವನ್ನು ಹೊಗಳುವ ಜನರು— ಎಂದರೆ ಮುಸುರಿ ತಿಕ್ಕುವವಳು, ಹಾಲು ಕೊಡುವವಳು! ರಾಯರು ಅನ್ಯರ ಅಭಿಪ್ರಾಯಕ್ಕೆ ಬೆಲೆ ಕೊಡುವವರಲ್ಲ. ತಾವು ಹಿರಿಯರೆಂಬ ಹೆಮ್ಮೆಯ ನಂಜು ಬೇರೆ ಈಗ ಅವರನ್ನು ಹಿಡಿದಿದೆ. ಮುಂಜಾವ, ಮನೆಯ ಪಡಸಾಲೆಯಲ್ಲಿ ಕುರ್ಚಿಯೊಂದರಲ್ಲಿ ಮಂಡಿಸಿ, ತಮ್ಮ ಮಗನನ್ನು (ಇಂಟರ್ ಎಂಟು ವರುಷ ಲಾಗ ಹೊಡೆದವ) ಕೂಗುವರು.]

........ಏ ರಂಗಾ.... ಏನು ಮಾಡತೀ ಒಳಗ ಸೇರಿಕೊಂಡು? ಹಾಂ.... ಯಾಕ, ನಾ ಒದರಿದರ ಓ ಅನಬಾರದೂ ಅಂತ ಶಪಥ ಮಾಡಿದೀಯೇನು? ಹುಂ.... ಇರಲಿ, ಆಕೀಗಂತೂ ತನ್ನ ವೈಭವ ಕೊಚ್ಚಿಕೊಳ್ಳುವದರೊಳಗs ಹೊತ್ತು ಹೋಗ್ತsದ. ಆ ಮುಸುರೀ ತೊಳೆಯುವ ನಿಂಗೀ ಮುಂದ ಈಕಿ, ಪಾಟ್ಲ ಕೈ ತಿರುವಿಕೋತ ನಿಂತ ಬಿಟ್ಟಳೂ ಅಂದರ.... ನಮ್ಮ ದರ್ಕಾರ್ ಮಾಡೋರು ಯಾರು? ಏ ರಂಗಾ, ಓ ಅಂದೂ ಹೊರಗ ಬರವಲ್ಲಿ.... ಯಾಕ? ನೀನರೆ ಹೋಗಿ ಒಂದು 'Seven O'clock' ಬ್ಲೇಡು ತೊಗೊಂಡು ಬಾರೋ.... ಅಂದರ, 'ಅವ್ವ 'Seven O'clock' ಬ್ಲೇಡು ಇಟ್ಟ-ಕೊಂಡಿರತಾಳೇನು?'.... ಅಂತ ಕೇಳತೀಯಾ?.... ಬಿಡು ಇಂಥಾದನ್ನ! ನಿನ್ನ ಮೈಯಾಗಿನ ಎಲಬು ಮುರಿವೆನು!.... ನಾಲಗೀ ಕಿತ್ತೇನು! ಹುಚ್ಚು ಮುಂ.... ಮಗನ.... ನಿಮಗ ಹಿರೇರೂ ಅಂದರs ಎಚ್ಚರಿಕೀ ಇರೂದಿಲ್ಲಾ! ಯಾಕ? ಇಂಟರಿನಾಗ ಎಂಟುಸಾರೆ ಲಗಾಟ ಹೊಡೆ-ದರೂ, ಇನ್ನೂ ನಿನಗ ಬುದ್ಧೀ ಬಂದಿಲ್ಲಾ! ಮತ್ತ 'ನಾಯೇನು ಮಾಡ್ಲೀ?' ಅಲಲಲ.... ದಿನಕ್ಕೊಂದು ತರಹದ್ದು ಪ್ಯಾಂಟು.... ಮಾರಿ ನೋಡಿದರ.... ಅಪ್ಪನ್ನ ಜವಾನೀ ಟಾರು.... ಪೌಡರು ಬ್ಯಾರೆ ಬಡಕೋತಾನ.... ಹೋಗು ಸಾಕು.... ಆ ನಮ್ಮ ವೆಂಕನ ಅಂಗಡ್ಯಾಗ ಒಂದು ಬ್ಲೇಡು ತಗೊಂಡು ಬಾ! ಇವತ್ತ ನನಗ ಇನ್ವಿಟೇಶನ್ ಬಂದsದ ಲಕ್ಚೇರಿಗೆ (ಎಂದೂ ಬರದ್ದು)! ಅದಕ್ಕ ಇಷ್ಟು ದಾಡೀ ಮಾಡಿಕೋತೀನಿ!

ಛೇ ಛೇ! ಏನು ದಿವಸ ಕೆಟ್ಟ ಬರಲಿಕ್ಕೇ ಹತ್ತಿದವೂ ಅಂತೀನಿ ನಾ. ನಮ್ಮ ಅಪ್ಪಗ ನಾ ಎಂದೂ ಹೀಂಗ ಉತ್ತರಾ ಕೊಟ್ಟದ್ದಿಲ್ಲ. ನಮ್ಮ ಅಪ್ಪಾದರೂ ನಮಗ ಏನು ಕಡಿಮಿಮಾಡಿದ್ದ? ...ಬಡ್ಡೀ ವ್ಯವ-ಹಾರ ಏನು ಬೆಳಸಿದ್ದ.... ಈ ಓಣ್ಯಾಗಿನ ಮನಿಯಲ್ಲಾ ಬರೇ ಬಡ್ಡ್ಯಾಗ ಬಂದವ್ವೊ ವs! ಹಾಂಗ ನೋಡಿದರ ನಾನs ದಡ್ಡ! ....ಏ ರಂಗ್ಯಾ, ಹೋದ್ಯ್ಯೋ ಇಲ್ಲೊ?.... ಹಾಂ ಹೋದ ಕಾಣಸ್ತsದ. (ಮೋರೆಯ ಮೇಲೆ ಕೈಯಾಡಿಸಿ) 'ಗಂಡಸರಿಗೊಂದು ದಾಡೀ ಕಾಟಾ, ಹೆಂಗ ಸರಿಗೊಂದು ಮಕ್ಕಳ ಕಾಟಾ' ಅಂತಾರಲ್ಲಾ, ಖರೇನs ಅದ! ವರುಷ ಕ್ಕೊಂದು ಬಾಣಂತನಾ ನಡಿಯೋದs ಮನಿಯಾಗ.... ಮೊದಲು ಈಕೀದಾತು.... ಈಗ ಮಕ್ಕಳದು ನಡದsದ!.... ಅಂತೂ ಮನಿ ಯೆಲ್ಲಾ ಹಾಳಾತು. ಬಡ್ಡೀ ವ್ಯವಹಾರ ಮಂದೀ ಆಗಿ.... ನಾವೇ ಈಗ ಮಂದಿನ್ನ ಸಾಲಾ ಕೇಳೋ ಪ್ರಸಂಗ ಬಂತು! ವರ್ಷಾ ಒಂದೊಂದು ಮನೀ ಖರೀದಿ ಕೊಟ್ಟು, ನಾನೂ ಹೀಂಗs ನಡಿಸೀನಿ ಸಂಸಾರ!.... ಆದರ ಈಗಿನ ಮಂದಿ ಬಹಳ ಕೆಟ್ಟರೀ......... 'ಏನು ರೀ?' ಹೇ— ಹೇ— ನೀನs ಗೋವಿಂದ?.... ಹಿಂಗ್ಯಾಕ ಒದರಿದೀ? ನಾನೊಬ್ಬನs ಮಾತಾಡತಿದ್ನೀ?.... ಆಹುದೋ, ತಲೀಕೆಟ್ಟು ಹೋಗೇದ ನೋಡು!.... ಮಕ್ಕಳು ಮಾತs ಕೇಳೂ-ದಿಲ್ಲಾ! ಹುಂ, ಇದು ಸಂಸಾರ!.... ಇರಲಿ ಇವತ್ತ ನಿನಗ ಇನ್ವಿಟೇಶನ್ ಅದನೋ ಇಲ್ಲೋ? ಅವರದು ಯಾರದೋ ಲೆಕ್ಚೆರ್ ಅದ ಅಂತ. ನನಗs ಹ್ಯಾಂಗ ಇನ್ವಿಟೇಶನ್ ಬಂತೂ ಅಂತ ನಿನಗ ಆಶ್ಚರ್ಯಾತೇನು? ನೋಡು ಗೋವಿಂದಾ, ಎಷ್ಟಂದ್ರೂ ನಮ್ಮದು ಹೆಸರುವಾಸಿ ಮನೆತನಾ;.... ಹಿಂದಿನ ಲಿಸ್ಟಿನ್ಯಾಗ ನಮ್ಮ ಅಪ್ಪನ ಹೆಸರು ಇತ್ತು ಕಾಣಸ್ತsದ.... ಒಂದು ಒಗದಾರ ತೀರಿತು! ಅಪ್ಪೇನು, ಮಗಾ ಏನು? ಯಾಕೋ ಗೋವಿಂದರಾಯಾ, ನಗಲಿಕ್ಕೆ ಹತ್ತಿದಿ? ಇರಲಿ ಬಿಡು, ನಿಮ್ಮ ಮನ್ಯಾಗ ಹ್ಯಾಂಗ ನಡದದಪಾ? ಹಿಂಗsನs? ಛೇ ನಿನ... ಎಲ್ಲಾ ಕಡೇನೂ ಹಿರೇರ ಮಾತ ಕೇಳುದಿಲ್ಲೋ! ಈಗ ನೋಡು.... ಚೋಟು ಚೋಟು ಹುಡುಗೂರು ಲಕ್ಚೇರಿನಾಗ ಮುಂದಿನ ಖುರ್ಚೀದ ಮ್ಯಾಲೆ ಕೂತಿರತಾವ!.... ನಾವು ಹಿಂದs ನಿಂದರಬೇಕಾಗ್ತsದ.... ಒಟ್ಟು ಹೇಳಬೇಕಂದರ, ನಾವು ಇದ್ದದ್ದು ಕೆಟ್ಟ ದಿವಸದಾಗ. ಅಲ್ಲಾ ಗೋವಿಂದರಾಯಾ! ನೀನು ನನ್ನ ಮೊದಲನೇ ಲಗ್ನಕ್ಕ ಬಂದಿದ್ದಿಲ್ಲಾ? ಏನು ಭರ್ಜರೀ ಮದಿವೀ

ಏನ ತಾನು! ನೀನs ನಿನ್ನ ಕಣ್ಣಿನಿಂದ ನೋಡಿದ್ದಿಲ್ಲಾ! ಪಹಪ...... ಬೀಗರನ್ನ ನಮ್ಮ ಅಪ್ಪಾ ಹ್ಯಾಂಗ ಫಜೀತಿ ಮಾಡಿದಾ.... 'ನಮ್ಮ ಮನೀ ಹಿರೇರಿಗೆ ನೀವು ಮಾನಾ ಕೊಡ್ಲಿಲ್ಲಾ' ಅಂತ ಹಂದರದಾಗ ನಿಂತು ಒದರಾಡಿದರ.... ಎಲ್ಲಾರೂ ಬಂದು ಅಪ್ಪನ ಪಾದಕ್ಕ ಬಿದ್ದು ಹೋದ್ರು. ಒಟ್ಟs ಹೇಳಬೇಕಂದರ, ಆಗಿನ ಕಾಲಾನs ನೆಟ್ಟಗ! ಈಗ್ಯಾಕ ಮತ್ತ ಅಂತಾ ಕಾಲ ಬರಬಾರದೂ ಅಂತೀಯಾ? ಹೌದು ಗೋವಿಂದರಾಯಾ, ನೀ ಹೇಳಿದ್ಹಾಂಗ, ಹಿಂದಿನ ದಿನಾ ನೆನಿಸಿಕೋತs ಕೂಡೋದು ನಡದದ. ನಿಮ್ಮ ಮನ್ಯಾಗೂ ನಿನ್ನದೂ ಏನೂ ನಡೆಯೂದಿಲ್ಲ? ನೋಡು ಗೋವಿಂದರಾಯಾ, ನೀ ಏನು ನನಗ ಹೊರಗಿನವ ಅಲ್ಲಾ ಅಂತ ಹೇಳತೇನಿ ನಾ: ನಾ ಅಂತೂ ಎಲ್ಲಾ ಆಕೀ ಕೈಯಾಗ ಕೊಟ್ಟುಬಿಟ್ಟೇನಿ. ಅಲ್ಲಲ್ಲಾ, ತೊಗೊಂಡಾಳ ಆಕಿನೇ ಎಲ್ಲಾ ಹಿರೇತನಾ! ನಾನೂ ಮುದಕಾಪೇ; ಮಕ್ಕಳು ನೋಡಿದರ.... ಮಾತು ಕೇಳೋದಿಲ್ಲ.... ಹಾಂಗ್ಯಾಂಗ್ರೀ ಅಂತ ನೀ ಕೇಳಬ್ಯಾಡ. ಈಗಿನ ದಿನಾನs ಹಾಂಗ ಬಂದುಬಿಟ್ಟಾವ! ಓಣ್ಯಾಗ ನಾ ಮೊದಲ ಹಾಯ್ದು ಹೋದ್ರ.... ಎಲ್ಲಾರೂ 'ನಮಸ್ಕಾರ ರಾಯರ!' ಅಂತ ನಮಸ್ಕಾರ ಮಾಡಿ, ದೂರ ಸರಿದು ನಿಂದರತಿದ್ರು. ಈಗ ಕೇಳತೀಯಾ.... ನಮ್ಮನ್ನ ಹಾಯ್ದು ಮತ್ತ ಕೆಟ್ಟಗಣ್ಣಿಲೆ ನೋಡಿಕೋತs ಹೋಗತಾರ. ಮರ್ಯಾದಿ ಅನ್ನೋದು ಮಾರಿ ಹೋತು! ಒಟ್ಟು ಕೆಟ್ಟಕಾಲ ಬಂದದ ಅನ್ನು! ಮಳೀ ಆಗೋದಿಲ್ಲಾ.... ಹಿಂದಿನ ಹಾಂಗ ಬೆಳಿನೂ ಬರೂದಿಲ್ಲಾ.... ಈಗ, ಯಾಕ ತಿಳೀತೆನು ಗೋವಿಂದರಾಯಾ? ಜನರು ಧರ್ಮಾಬಿಟ್ಟರೂ.... (ಎಳೆದು ಎಳೆದು) ಹಿರೇರಿಗೆ ಅಪಮಾನ ಮಾಡ್ಲಿಕ್ಕೆ ಹತ್ತಿದರೂ.... ಜ್ಯಾತಿ-ನೀತಿ ಹೋಗಿಬಿಟ್ಟಿತೂ.... ಅದಕ್ಕs ದೇವರು ಹೀಂಗಿಟ್ಟಾನ.... ತಿಳಿತಿಲ್ಲೊ? ಹಾಂ.... ಏನದು ನಡುಮನ್ಯಾಗ ಸಪ್ಪಳ? (ಬಾಗಿಲ ಹತ್ತರ ಹೋಗಿ) ಹಾ ನೀನs? ಏನು ಬೇಕಾಗಿತ್ತು? 'ನಿಮ್ಮ ಮಾತು ಮುಗೀತಿಲ್ಲೊ?' ಅಂತ ಒದರಾಡ್ಲಿಕ್ಕೇ ಸುರು ಮಾಡಿದ್ಯಾ! ನಾ ಎರಡು ಸಾರೆ ಒಳಗ ಬಂದು ಹೋದ್ರೂ ನನ್ನ ಮಾತs ಮುಗಿದಿದ್ದಿಲ್ಲಾ!.... ಆ ಮುಸರೀ ತಿಕ್ಕೋ ನಿಂಗಿ ಮುಂದ ನಡಿಸಿಬಿಟ್ಟಿದ್ದಿ.... ನಿನ್ನ ವೈಭವಾ!! ಮುಂಜಾನೆದ್ದು ನನಗ ಝುಗಳ ಸಿಕ್ಕಿಲ್ಲs? ನೋಡಪಾ, ಗೋವಿಂದರಾಯಾ, ಮಾತು ಕೇಳಿದ್ಯಾ? ಯಾಕೋ ಮಹಾರಾಯಾ, ಎದ್ದs ಬಿಟ್ಟಿಲ್ಲಾ? ನಾನೂ ಹೊರಗ ಬರತೇನಿ ನಿಂದ್ರು....!

[ತೆರೆ]

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ

ಬರೆಯಿರಿ :

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ಸಾಹಿತ್ಯ ವಿಹಾರ

[ಜಯಂತಿಯ ಸಾಹಿತ್ಯಿಕ ಕಾರ್ಯವನ್ನು ಮೆಚ್ಚಿದ ವಾಚಕವರ್ಗ ಎಂತಹ ಅಭಿಪ್ರಾಯಪಡುತ್ತಿದೆಯೆಂಬುವಕ್ಕೆ ಮಾದರಿಯ ಎರಡು ಪತ್ರಗಳಿವು. —ಸಂ. ಜ.]

೧ನೆಯ ಓಲೆ

ಜಯಂತಿಯ ಕಳೆದ ವರ್ಷ

ಲೇ:— ಶ್ರೀ. ಎಂ. ಎಸ್. ಜೋಶಿ,
ಉಪಾವಿದ್ಯಾಲಯ, ಲಕ್ಷ್ಮೇಶ್ವರ

'ಜಯಂತಿ' ಈಗಿನ ಕನ್ನಡ ಮಾಸಪತ್ರಿಕೆಗಳಲ್ಲಿ ಉಚ್ಚ ವರ್ಗದ್ದಾಗಿದೆಯೆಂದು ಧೈರ್ಯದಿಂದ ಹೇಳಬಹುದು. ಹೆಚ್ಚಾಗಿ ಸಾಹಿತ್ಯಿಕ ಹಿನ್ನೆಲೆಯನ್ನಿಟ್ಟುಕೊಂಡು ಒಳ್ಳೆಯ ಸಾಹಿತ್ಯದ ಜ್ಞಾನದ ಪ್ರಭೆಯನ್ನು ಹರಡುತ್ತಿರುವ, ಹರಹಬಲ್ಲ ಕೆಲವೇ ಮಾಸಿಕಗಳಲ್ಲಿ ಇದೂ ಒಂದು. 'ಜಯಂತಿ'ಯ ಈ ವರುಷದ ಸಂಚಿಕೆಯಲ್ಲಿ ದೋಷಗಳನ್ನು ಕೆದಕುವದೆಂದರೆ, ಅರಬರ ನಾಡಿನಲ್ಲಿ ಓಯಾಸಿಸ್ಸು-ಗಳನ್ನು ಅರಸಿದಂತೆಯೇ ಸರಿ. ದೋಷಗಳು ತೀರ ವಿರಳ— ಅವೂ ಗಮನಾರ್ಹವಲ್ಲ. ಸರ್ವಾಂಗಸುಂದರವಾಗಿಯೇ ಈ ವರುಷದ ಸಂಚಿಕೆಗಳು ಪ್ರಕಟಿತವಾಗಿವೆ.

ರಸಿಕರ ಸಾಹಿತ್ಯಾಭಿಮಾನಿಗಳ ನಿರ್ದುಷ್ಟ ದಾಹವನ್ನು ಜ್ಞಾನ ಪಿಪಾಸೆಯನ್ನು ಒಂದು ದೃಷ್ಟಿಯಲ್ಲಿ ತಣಿಸಿದೆ; ಇನ್ನೊಂದು ದೃಷ್ಟಿಯಲ್ಲಿ ಪ್ರಚೋದಿಸಿದೆ.

ಹೆಚ್ಚಾಗಿ ಮನಸ್ಸನ್ನು ಮುಗ್ಧಗೊಳಿಸಬಲ್ಲ ಮೋಹಕತೆ, ಓದುಗನ ಹೃದಯದಾಳದಲ್ಲಿ ಲೋಲಕಲ್ಲೋಲವನ್ನೇಳಿಸುವ ಭೀಕರತೆ, ನೊಂದ ಪಾಠಕನಿಗೆ ಸಮಾಧಾನವನ್ನೀಯುವ ಅಂತಃಕರಣಪೂರ್ಣ ಮಾನವೀಯತೆ— ಮುಂತಾದ ಪರಿಣಾಮವನ್ನುಂಟು ಮಾಡಬಲ್ಲ ಗುಣವಿಶೇಷಗಳನ್ನು ಹೊತ್ತು, ಅನೇಕರ ಕಣ್ಮನಗಳಿಗೆ ಅಭೂತಪೂರ್ವ ಕಾಣಿಕೆಯಾಗಿ ಸಂದಿದೆ.

'ಜಯಂತಿ' ನೀಡುವ ಸಾಹಿತ್ಯದಲ್ಲಿ ಸತ್ತ್ವವಿದೆ. ಈಗಿನ ಬೇರೆ ಪತ್ರಿಕೆಗಳನ್ನು ನೋಡಿ, ಸಾಹಿತ್ಯದ ವಿಷಯ ನಿಜವಾದ ವಾತ್ಸಲ್ಯವಿದ್ದವನು ಕನ್ನಡನುಡಿಯ ವಿಷಯ ನಿಜವಾದ ಹೆಮ್ಮೆಯಿದ್ದವನು, ಸಹಿಸಲಾರ. ಅವನಿಗೆ ಹೇಸಿಕೆ ಬರುತ್ತದೆ. ಸಾಹಿತ್ಯ ಇಷ್ಟೊಂದು ಅಗ್ಗನಾಯಿತೆ ? ಎಂದು ಕೊರಗುವನು.

ಪ್ರಾಸವಿಲ್ಲದ, ಅಸಂಬದ್ಧ ಶಬ್ದಗಳ ಸಂಯೋಜನೆ ಒಂದು ಕವಿತೆಯಾಗಬಲ್ಲುದೇ ? ಯಾವುದೋ ಒಂದರ ವಿಷಯ ಇಲ್ಲದ ಸಲ್ಲದುದನ್ನೆಲ್ಲ ಊಹಿಸಿ, ಇದ್ದ ಬಿದ್ದ ಸಂಗತಿಗಳನ್ನೆಲ್ಲ ಅಟ್ಟಿಕೊಂಡು ಬಂದು, ಅವುಗಳನ್ನು ಪಂಜರದಲ್ಲಿ ಹಿಡಿದಿಡುವಂತೆ ಹಿಡಿದಿಟ್ಟು ಬರೆದ ಲೇಖನಗಳು ಉದಾತ್ತ ಸಾಹಿತ್ಯಭಾಂಡಾರಕ್ಕೆ ಮೌಲಿಕ ಸಾಮಗ್ರಿಯಾಗಬಲ್ಲವೇ ? ಇಂಥ ಲೇಖನಗಳೇ ಈಗ ಹೇರಳವಾಗಿ ಮುದ್ರಿತವಾಗುತ್ತವೆ; ಆದರೆ ಜಯಂತಿಯ ವಿಷಯ ಹಾಗಲ್ಲ. ಈ ವರುಷದ ಕೊನೆಯ ಸಂಚಿಕೆಯಲ್ಲಿಯ ತಮ್ಮ ಸಂಪಾದಕೀಯದಲ್ಲಿ ಸಂಪಾದಕರು ತಮ್ಮ ಧೋರಣೆಯನ್ನು ವಿಶದಪಡಿಸಿದ್ದಾರೆ. ಅವರ ಧೋರಣೆ ನಿಜಕ್ಕೂ ಶ್ಲಾಘನೀಯ. ಮಿಡಿ ತಾನು ಪಣ್ಣಾಗಬಲ್ಲೆನೆಂಬ ಲಕ್ಷಣವನ್ನು ತೋರಿಸಬೇಕು. ಅಂತಹ ಕಾಂತಿ ಮಿಡಿಯ ಮೊಗದಮೇಲೆ ನಲಿಯಬೇಕು. ಜೋಲುಮೋರೆಯ ಮೆತ್ತನೆಯ ಜಿಗುಟಿಲ್ಲದ ಮಿಡಿ ಪಣ್ಣಾಗದೆ ನೆಲದ ಮಣ್ಣನ್ನುಂಡು ಮರೆಯಾಗುವ ಸಂಭವವೇ ಹೆಚ್ಚು. ತನ್ನ ಗೋರಿಗೂ ನೇರವಾದ ಪ್ರತಿಬಿಂಬವನ್ನು ತನ್ನ ಮೈಯಲ್ಲಿಯೇ ಕಾಣಿಸುವ ಮಿಡಿಯನ್ನು ಯಾರು ಹರಿಸುವರು ?

ಅಂತೆಯೇ 'ಜಯಂತಿ' ಸಾಕಷ್ಟು ಪ್ರಕಟನಾರ್ಹವಾಗಿದ್ದ ಲೇಖನಗಳನ್ನು ಪ್ರಕಟಿಸುತ್ತ ಬಂದಿರುವುದು ಅತ್ಯಂತ ಸ್ತುತ್ಯವಾಗಿದೆ; ಅಂತೆಯೇ 'ಜಯಂತಿ'ಗೆ 'ಜಯ'ವು ಮನೆಮಾತಾಗಿದೆ.

'ಜಯಂತಿ' ತನ್ನ ವೈಶಿಷ್ಟ್ಯಗಳನ್ನು ಕಾಯ್ದುಕೊಂಡು ಬಂದಿದೆ. ಅದೇ ಸಂತೋಷ ಸಂಪಾದಕರು ಆಗಾಗ ಪ್ರಸ್ತಾಪಿಸುತ್ತಿರುವಂತೆ, ಆರ್ಥಿಕ ಮುಗ್ಗಟ್ಟುಗಳಲ್ಲಿಯೂ ತನ್ನ ಸ್ಥಿರತೆಯನ್ನು ಧೀರಗಂಭೀರ ಮನಃಪ್ರವೃತ್ತಿಯಿಂದ ರಕ್ಷಿಸಿದ ಶ್ರೇಯಸ್ಸು 'ಜಯಂತಿ'ಗೆ ಸಲ್ಲಬೇಕು. ಅರ್ಥಾತ್ 'ಜಯಂತಿ'ಯ ಸಂಪಾದಕರಿಗೆ ಸಲ್ಲಬೇಕು— ಸಲ್ಲುತ್ತದೆ. ಕನ್ನಡ ನಾಡಿನ ಕಣ್-ಕಿವಿಯಾಗಿ 'ಜಯಂತಿ' ಈ ವರುಷವೂ ತುಂಬ ಅಚ್ಚುಮೆಚ್ಚಿನದಾಗಿದೆಯೆಂದು ನನ್ನ ಭಾವನೆ. ನನ್ನ ಭಾವನೆ ಸತ್ಯಪೂರ್ಣವಾಗಿದೆಯೆಂದು ನನ್ನ ತಿಳಿವಳಿಕೆ.

ಹನಿಗತೆ, ಕಿರುಗತೆಗಳು ತುಂಬ ಮನೋಗ್ರಾಹಿಯಾಗಿದ್ದು ಸಣ್ಣಕತೆಗಳೂ 'ಸಣ್ಣ'ವೇನಾಗಿಲ್ಲ. ಅವುಗಳ 'ಹಿರಿ'ತನವನ್ನು ಮೆಚ್ಚಲೇಬೇಕು. ಜೀವನಪರಿಚಯಗಳನ್ನು ಪ್ರಕಟಿಸಲು ಮರೆತಿಲ್ಲ. ಈ ವರುಷದ ಜಯಂತಿ ಭಾವಪೂರ್ಣವಾದ ಕವಿತೆಗಳನ್ನೇ ಪ್ರಕಟಿಸಿದೆ. ಜಾನಪದ ಸಾಹಿತ್ಯಕ್ಕೂ ಉತ್ತೇಜನವನ್ನು ಕೊಟ್ಟಿದೆ. ಏಕಾಂಕಗಳಿಗೂ ತುಂಬ ಆಶ್ರಯವನ್ನು ಕೊಟ್ಟು ಅವುಗಳನ್ನು ನೀಡಿವೆ. ಇವೆಲ್ಲವುಗಳಿಗಿಂತಲೂ ಮಿಗಿಲಾಗಿ 'ಸಾಹಿತ್ಯವಿಮರ್ಶೆಯ ಶಿಕ್ಷಣರಂಗ'ದ ಮಾರ್ಗವಾಗಿ ವಿಮರ್ಶೆಯ ರಂಗದಲ್ಲಿ ನುರಿಯದಿದ್ದ ವಿಮರ್ಶಕರಿಗೆ ನುರಿತವರಿಂದ ಶಿಕ್ಷಣವನ್ನು ಕೊಡುವ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿವೆ. ಹಲಕೆಲವು ಸಂಚಿಕೆಗಳಲ್ಲಿ ದೃಷ್ಟಿ-ದೋಷದಿಂದ ಅಪರಿಪಕ್ವ ಲೇಖನಗಳೊಂದೆರಡು ನುಸುಳಿರಬಹುದು. ಒಟ್ಟಿನಲ್ಲಿ ಈ ವರುಷದ 'ಜಯಂತಿ' ಚೇತೋಹಾರಿಯಾಗಿದೆ. ಜ್ಞಾನದಾಯಕವಾಗಿದೆ. ಎಲ್ಲಕ್ಕೂ ಮಿಗಿಲಾಗಿ ತನ್ನ ಸಾರ್ಥಕತೆಯನ್ನು ಸಾಧಿಸಿದೆ. ಇಷ್ಟೊಂದನ್ನು ಸ್ಥೂಲವಾಗಿ ಈ ವರುಷದ 'ಜಯಂತಿ'ಯ ವಿಷಯವಾಗಿ ಹೇಳಬಹುದಾಗಿದೆ.

(ಕವ್ಹರ್ ೩ನೆಯ ಪುಟ ನೋಡಿರಿ)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, 'ಪುತ್ರವತಿ' ಕತೆಯನ್ನು ವಿಮರ್ಶಿಸಿ ೧೧ ಜನರಿಂದ ಲೇಖನಗಳು ಬಂದಿವೆ. ಈ ಸಲ ಸಾಕಷ್ಟು ವಿಮರ್ಶಕರು ಈ ಕಡೆಗೆ ಲಕ್ಷ್ಯಹಾಕಿದುದು ಸಂತೋಷದ ಸಂಗತಿ. ವಿಮರ್ಶೆಗಳನ್ನು ಕಳುಹಿದವರ ಅನುಕ್ರಮವು ಈ ರೀತಿಯಲ್ಲಿದೆ :

೧ ಶ್ರೀ. ಎಂ. ಎಸ್. ಜೋಶಿ, ಉಮಾವಿದ್ಯಾಲಯ ಹೈಸ್ಕೂಲ್, ಲಕ್ಷ್ಮೇಶ್ವರ. ೨ ಶ್ರೀ. ರಾ. ಸು. ವೈಲಾಯ, ಎಂ. ಜಿ. ಎಂ. ಕಾಲೇಜ್, ಉಡುಪಿ. ೩ ಶ್ರೀ. ಶಂಕರ ಪಾಣಾಜೆ (ದ. ಕ.) ೪ ಶ್ರೀ. ಎಂ. ಎಸ್. ಆಚಾರ್, ಕುಲಾಯಿ-ಸುರತ್ಕಲ್ಲ. ೫ ಶ್ರೀ. ಎಚ್. ಎನ್. ಎಲ್. ಶಾಸ್ತ್ರಿ ಬಿ. ಎ, ಬಿ. ಎಸ್‌ಸಿ. ಬಿ. ಟಿ. ಗುಲ್‌ಬುರ್ಗಾ. ೬ ಶ್ರೀ. ಪಿ. ಗೋಪಾಲಕೃಷ್ಣ ಪೈ, 'ಸಾಹಿತ್ಯಾಲಂಕಾರ' ಕಾಸರಗೋಡು. ೭ ಶ್ರೀ. 'ಸೀರಾ' ಮಲ್ಲೇಶ್ವರಂ. ೮ ಶ್ರೀ. ಕೆ. ಎಸ್. ರಮಾನಂದ, ಮೈಸೂರು. ೯ ಶ್ರೀ. ಲಕ್ಷ್ಮೀಕಾಂತ, ಶ್ರೀಕೃಷ್ಣಭವನ, ಲ್ಯಾಮಿಂಗ್ಟನ್ ರೋಡು, ಹುಬ್ಬಳ್ಳಿ. ೧೦. ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರಂ' ಕಾಸರಗೋಡು. ೧೧ ಶ್ರೀ. ಯಂ. ಕೇಶವಭಟ್ಟ 'ವಿದ್ವಾನ್' ವಸಂತವಿಹಾರ ಕಾಸರಗೋಡು.

ಬಂದಿರುವ ಎಲ್ಲ ವಿಮರ್ಶೆಗಳನ್ನೂ ಸಂಪಾದಕಮಂಡಲಿಯವರೇ ಓದಿ, ಪರೀಕ್ಷಿಸಿ ತೀರ್ಮಾನವನ್ನು ಕೊಟ್ಟಿದ್ದಾರೆ. ಶ್ರೀ. ಎಚ್. ಎನ್. ಎಲ್. ಶಾಸ್ತ್ರಿ, ಶ್ರೀ. ಕೆ. ಎಸ್. ಶರ್ಮಾ, ಶ್ರೀ. ರಾ. ಸು. ವೈತಾಯ ಮತ್ತು ಶ್ರೀ. ಪಿ ಗೋಪಾಲಕೃಷ್ಣ ಪೈ ಇವರ ವಿಮರ್ಶೆಗಳು ಅತ್ಯುತ್ತಮವಾದುವುಗಳಾಗಿವೆ. ಎಲ್ಲ ವಿಮರ್ಶೆಗಳನ್ನೂ ಒಂದೆ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕೆ ಸಾಧ್ಯವಿಲ್ಲದೆ ಶ್ರೀ. ಎಚ್. ಎನ್. ಎಲ್ ಶಾಸ್ತ್ರಿಯವರದೊಂದನ್ನೆ ಪ್ರಕಟಿಸಲಾಗಿದೆ.

ಶ್ರೀ. ಯಂ. ಕೇಶವಭಟ್ಟರು, ಶ್ರೀ. ಶಂಕರ ಪಾಣಾಜೆಯವರು, ಶ್ರೀ. ಎಸ್. ಎಂ. ಜೋಶಿಯವರು—ಇವರ ವಿಮರ್ಶೆಗಳೂ ಉತ್ತಮ ತರಗತಿಯವಾಗಿವೆ. ಮಿಕ್ಕವು ಕೂಡ ಒಳ್ಳೆಯ ವಿಮರ್ಶೆಗಳೆ.

ಬಹುಸಂಖ್ಯೆಯ ವಿಮರ್ಶೆಗಳು ಒಳ್ಳೆಯವಿದ್ದುದರಿಂದ, ನಿರ್ಣಾಯಕರು ಈ ಸಲ ತುಂಬ ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ತೀರ ಚಿಕ್ಕದಾಗಿ ವಿಮರ್ಶೆಯನ್ನು ಬರೆದ ಶ್ರೀ. 'ಸೀರಾ' ಅವರು: "ಭಾವಕ್ಕೆ ತಕ್ಕ ಭಾಷೆ, ಸರಳ ಶೈಲಿ, ಹಾಗೂ ಕುತೂಹಲವನ್ನು ಕೆರಳಿಸುತ್ತಾ ಸಾಗುವ ಕತೆಯ ಓಟ—ವಾಚಕನನ್ನು ಮತ್ತೆ ಮತ್ತೆ ಓದಲುತೊಡಗಿಸುತ್ತದೆ ......ತುಂಬುಗಾಂಭೀರ್ಯದ 'ಪುತ್ರವತಿ'ಯನ್ನು 'ಬಹಳ ಚೆನ್ನಾಗಿದೆ,' ಎಂದಷ್ಟೇ ಹೇಳಬಲ್ಲೆನಾಗಲಿ, ವಿವರವಾಗಿ ವಿಮರ್ಶಿಸಲು ನಾನು ಅಸಮರ್ಥ" ಎಂದು ಸಂಪೂರ್ಣ ಮೆಚ್ಚಿಕೆಯ ಮಾತುಗಳನ್ನು ಬರೆದಿದ್ದಾರೆ. ಈ ಸಲದ ವಿಮರ್ಶೆಯ ಮೇಲಾಟದಲ್ಲಿ ಭಾಗವಹಿಸಿದ ವಿಮರ್ಶಕರಿಗೆಲ್ಲ ಅಭಿನಂದನೆಗಳು.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ—ಬಹುಮಾನ ಪಡೆದ—ಮೂರು ಕತೆಗಳಲ್ಲಿ, ತಮಗೆ ಮೆಚ್ಚಿಕೆಯಾದ ಒಂದು ಕತೆಯನ್ನು ಕುರಿತು ವಿಮರ್ಶೆಯನ್ನು ಬರೆದು ಕಳುಹಬೇಕು. 'ನಾನು ಮೆಚ್ಚಿದ ಸಣ್ಣ ಕಥೆ' ಎಂಬುದಾಗಿ ಬರೆಹದ ಶೀರ್ಷಿಕೆಯಿರಲಿ. ಮೆಚ್ಚುವುದಕ್ಕೆ ಯಾವ ಯಾವ ಗುಣಗಳು ಕಾರಣಗಳೆಂಬುದರ ವಿವರಣೆಯಿರಲಿ. ಕೊರತೆಗಳೆನಿಸಿದುವುಗಳನ್ನೂ ಅವಶ್ಯವಾಗಿ ತೋರಿಸಬೇಕು.

—ಸಂಪಾದಕರು

ಪುತ್ರವತಿ

(ಕತೆಯ ವಿಮರ್ಶೆ)

ಬರೆದವರು : **ಶ್ರೀ. ಎಚ್. ಎನ್. ಲಕ್ಷ್ಮೀನರಸಿಂಹಶಾಸ್ತ್ರಿ.**
ಬಿ. ಎ., ಬಿ. ಎಸ್‌ಸಿ., ಬಿ. ಟಿ., ಕಲಬುರ್ಗಿ

ಒಂದು ಸುಂದರವಾದ ಸಂಸಾರ ಪತಿ, ಪತ್ನಿ ಹದಿನೈದು ವರ್ಷ ಕಾಲ ದಾಂಪತ್ಯಜೀವನ ನಡೆಸುತ್ತಾರೆ. ಆದರೂ ಹೆಣ್ಣು ಇಂತಹವಳು-ಎಂದು ಗಂಡು ಖಚಿತವಾಗಿ ಹೇಳಲಾರ. ಆಕೆಯ ಸ್ವಭಾವದ ಹೊರ. ಮುಖ, ಆಕೆಯ ಸುಪ್ತಚೇತನದಲ್ಲಿ ಹೊಯ್ದಾಡುವ ಸುಳಿಗಾಳಿಗಳ ನಿಕಟನೃತ್ಯದ ಸೂಚನೆಯನ್ನೇನೂ ಕೊಡದೆ, ಅರಿಯಲಶಕ್ಯವಾದ ಒಂದು ಗಭೀರತೆಯನ್ನು ಮಾತ್ರ ಪ್ರಕಟಿಸುತ್ತದೆ. ಹೆಣ್ಣಿನ ಮನಸ್ಸು ಅಭೇದ್ಯವಾದ ವಿಸ್ತಾರವಾದ ಸಾಗರ. ಅದರ ಹೊರಶಾಂತಿ, ಅಂತರಾಳದ ವಿವಿಧ ಜೀವನದ ಭೀಕರ ಮತ್ತು ಮನೋಹರ ತಾಂಡವಕ್ಕೆ ಸೂಚಕವಲ್ಲ. ಆದುದರಿಂದಲೇ ಹೆಣ್ಣು ರಹಸ್ಯಮಯಿ. ಅಂತೆಯೇ ಸಾಹಿತ್ಯಕ್ಕೆ ನಿತ್ಯನೂತನ ವಸ್ತು. ಶ್ರಮಿಯಾದ ಶೋಧಕನು ವಿಫಲನಾಗಿ ಮಾತ್ರ ಹಿಂದಿರುಗನು. ರತ್ನವನ್ನೋ ಕ್ರೂರನಕ್ರವನ್ನೋ ಹಿಡಿದೇ ತರುವನು.

ಇಷ್ಟು ದೀರ್ಘಕಾಲದ ಚಿತ್ರಗಳು,—ಆಕೆಯ ಮನಸ್ಸಿನ ಗತಿಯನ್ನು ಹಿಡಿಯಲು ಮಾಡಿದ ಪ್ರಯತ್ನಗಳು—ಆಕೆಯ ಮನಸ್ಸಿನ ಆಳವನ್ನು ಇನ್ನಿಷ್ಟು ಗಹನ ಮಾಡುವುದರಲ್ಲಿ ಮಾತ್ರ ಸಹಾಯಕ-

ವಾಗುತ್ತನೆ. ಒಂದು ಇಚ್ಛೆ ಮಾತ್ರ ಆ ಅಸ್ಪಷ್ಟತೆಯಿಂದ ಕಳಚಿಕೊಂಡು ರೂಪವನ್ನು ತಳೆಯುತ್ತದೆ. ಸಂತಾನಾಪೇಕ್ಷೆಯಿಂದ ಆಕೆ ಗಾಣಗಾಪುರಕ್ಕೆ ಹೋಗಿ ದತ್ತರಾಜನನ್ನು ಆರಾಧಿಸುತ್ತಾಳೆ. ಉಗ್ರವಾಗಿ ದೇಹವನ್ನು ದಂಡಿಸಿ, ದೇವದೇವನನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ ದತ್ತರಾಜನು ಪ್ರಸನ್ನನಾಗಿ ಪುತ್ರರಾಜನನ್ನು ಅನುಗ್ರಹಿಸುತ್ತಾನೆ ಇಡೀ ಜೀವಮಾನದ ಕಾಲವೆಲ್ಲ ಮಾಡಿದ ತಪಸ್ಸಿನ ಫಲವನ್ನು ಪಡೆದು ಪತಿಗೆ ಒಪ್ಪಿಸಿ ಚರಿತಾರ್ಥಳಾಗುವ ವೇಳೆಗೆ ಆಕೆಯ ಪಾರ್ಥಿವದೇಹ ಮುರಿದು ಬೀಳುತ್ತದೆ.

ಇದು ಕಥಾವಸ್ತು. ಇಲ್ಲಿಗೆ ಕಥೆ ಸಮಾಪ್ತವಾಗುತ್ತದೆ ಆದರೆ ಕಥೆ ನಿಜವಾಗಿ ಇಲ್ಲಿಂದ ಪ್ರಾರಂಭವಾಗುತ್ತದೆ. ಪ್ರಾರಂಭವಾಗಿ ಹಿಂದು ಹಿಂದಕ್ಕೆ ಹೋಗುತ್ತದೆ. ಹಿಂದಿನ ಚಿತ್ರಗಳನ್ನೆಲ್ಲ ನೆನಪಿನ ಮಧುರವರ್ಣದಲ್ಲಿ ಅದ್ದಿ, ಅದ್ದಿ, ಮಧುರತಮವಾಗಿ ಮಾಡಿ, ಒಂದು ಸುಂದರ ಕಲಾಕೃತಿಯನ್ನು ಹೊರಚೆಲ್ಲುತ್ತದೆ. ಈ ತಂತ್ರ ಈ ಕಥೆಗೆ ಅಗತ್ಯ. ಕಥೆಯಲ್ಲಿಯ ಪ್ರಧಾನ ಘಟನೆಗಳು. ಅದೇ ಕಥೆಯಲ್ಲಿಯ ಒಂದು ಪ್ರಮುಖ ಪಾತ್ರದ ಬಾಯಿಂದ ಹೊರಬೀಳುವಾಗ, ಆ ಪಾತ್ರದ ಮಾನಸಿಕ ವರ್ಣವನ್ನು ತಳೆದು ಹೊರಬೀಳುತ್ತದೆ. ಇದರಿಂದ ಹೆಣ್ಣು ರಹಸ್ಯಮಯಿಯಾಗಿಯೇ ಉಳಿಯುತ್ತಾಳೆ. ಆಕೆಯ ವಿಷಯವಾಗಿ ನಮಗೆ ತಿಳಿಯುವುದೆಲ್ಲ ವಾಸ್ತವಸತ್ಯವಲ್ಲ; ಆ ವ್ಯಕ್ತಿ ನೋಡುವ ನಿಲುವಿನಿಂದ ಗೋಚರವಾಗುವ ದೃಶ್ಯ. ಒಂದು ವೇಳೆ ಆಕೆಯ ಕತೆಯನ್ನು ಕತೆಗಾರನೇ ಹೇಳಿದ್ದರೆ, ಅಥವಾ ಆಕೆಯೇ ಹೇಳಿದ್ದರೆ, ಕತೆ ಯಾವ ರೂಪವನ್ನು ಪಡೆಯುತ್ತಿತ್ತು? ಇನ್ನೂ ಕಾಂತಿಯುಕ್ತವಾಗಿರುತ್ತಿತ್ತೇ, ಇಲ್ಲವೇ ?–ಎಂಬೀ ಪ್ರಶ್ನೆಗಳು ಗಂಭೀರವಾದ ಓದುಗನ ಮನಸ್ಸನ್ನು ಕಲಕದೆ ಇರದು. ಕತೆಯನ್ನು ಹೇಳಿರುವ ಈ ತಂತ್ರ, ನಮ್ಮ ಕೌತುಕವನ್ನು ಕೆರಳಿಸಿ, ಅದರ ಮುಖ್ಯ ಉದ್ದೇಶವನ್ನು ಸಾಧಿಸುತ್ತದೆ. ಆ ಹೆಣ್ಣಿನ ಸುಪ್ತಜೀವನದ ಅರಿವು ಪೂರ್ಣವಾಗಿ ರಹಸ್ಯದಲ್ಲಿಯೇ ಮುಳುಗಿರುತ್ತದೆ. ಓದುಗನು ಕುತೂಹಲ, ವಿಸ್ಮಯಗಳಿಂದ ಈಕ್ಷಿಸುತ್ತಾನೆ. ಕಾಣುವುದು ಅವನ ಮನಸ್ಸಿನ ಕಣ್ಣುಗಳ ಶಕ್ತಿಗೆ ಅನುಸಾರವಾಗಿ ಮಾತ್ರ

ತಂದೆ, ಈ ಕತೆಯನ್ನು ತನ್ನ ನವಜಾತ ಶಿಶುವಿಗೆ, ಹೇಳುತ್ತಾನೆ. ಕತೆಗಾರ ಪ್ರಾರಂಭಿಸಿದಾಗ, ಶಿಶು ತಾಯಿಯಿಂದ ಕತೆ ಕೇಳುತ್ತಿದೆ, ಎಂದು ಭಾಸವಾಗುತ್ತದೆ. "ಆದರೆ ನನ್ನದೂ ನಿನ್ನದೂ ಒಂದೇ ಜಾತಿ........ಪುರುಷ ಜಾತಿ," ಎಂದಾಗ, ಈ ಶಿಶು ನಿರ್ಭಾಗ್ಯನೆಂತಲೂ, ಮಾತೃಹೀನನೆಂತಲೂ ಹೊಳೆದು, ನಮ್ಮ ಮನಸ್ಸಿನಲ್ಲಿ ಒಂದು ಕುತೂಹಲವಂತೂ ಸಂಪೂರ್ಣವಾಗಿ ಅಡಗಿಹೋಗುತ್ತದೆ. ಕತೆಯಲ್ಲಿ ಪತಿ–ಪತ್ನಿಯರ ದಾಂಪತ್ಯಜೀವನದ ಸುಂದರಚಿತ್ರಗಳು ಬಂದಾಗ, ಆ ಸುಂದರ ಗೀತೆಯ ಶ್ರುತಿಯಾಗಿ ಒಂದು ಸ್ವರ ನಮ್ಮ ಹೃದಯವೀಣೆಯಿಂದ ಮಿಡಿಯುತ್ತಲೇ ಇರುತ್ತದೆ: "ಈ ಕತೆ ಮುಗಿಯುವುದರೊಳಗಾಗಿ ಎಲ್ಲೋ ಒಂದು ಕಡೆ ಈ ಹೆಣ್ಣು ಸಾಯುತ್ತಾಳೆ." ಇದರಿಂದ ನಮ್ಮ ಹೃದಯದಲ್ಲಿ ಅನುಕಂಪ, ಸಹಾನುಭೂತಿಗಳ ಮಂದಾನಿಲದ ಆವಿರ್ಭಾವವಾಗುತ್ತದೆ! ಮುಂದಿನ ಕತೆಯ ಒಂದು ಭಾಗವನ್ನು ಹೀಗೆ ಮೊದಲೇ ತಿಳಿಸುವುದರ ಮೂಲಕ ನಮ್ಮ ಕುತೂಹಲ ಅಡಗಿಹೋದದ್ದು, ಕತೆಗಾರನು ಬೇಕೆಂದು ಅನುಭವಿಸುವ ನಷ್ಟ. ಆದರೆ ಇಷ್ಟು ಸ್ವಲ್ಪ ನಷ್ಟವನ್ನು ಹೊಂದುವುದು, ಅದರ ನೂರ್ಮಡಿ ಲಾಭ ಪಡೆಯುವುದಕ್ಕಾಗಿ. ಕತೆಯು ಮುಗಿಯುವವರೆಗೂ ಆಕೆಯ ಮೇಲೆ ನಮ್ಮ ದೃಷ್ಟಿ ಸದಾ ಕೇಂದ್ರೀಕೃತವಾಗಿರುತ್ತದೆ; ಸದಾ ನಮ್ಮ ಹೃದಯ ಮರುಕದಿಂದ ಆಕೆಯ ಶುಭವನ್ನು ಕೋರುತ್ತದೆ. ಸಂತಾನಕ್ಕಾಗಿ ಆಕೆ ಖಿನ್ನಳಾಗುವುದು, ಗಾಣಗಾಪುರದಲ್ಲಿ ಕಠೋರವಾದ ಸಾಧನೆಗಳನ್ನು ಮಾಡುವುದು, ಇವೆಲ್ಲವನ್ನೂ ಓದುವಾಗ ನಮ್ಮ ಮನಸ್ಸಿನಲ್ಲಿ, "ಅಯ್ಯೋ, ಹೆಣ್ಣೇ, ನೀನೆಷ್ಟು ಕಾತರಳಾಗಿರುವೆ? ನಿನ್ನ ಆಶೆ ಸ್ತ್ರೀ ಜಾತಿಗೆ ಸಹಜವಾದುದು, ಮಹತ್ತರವಾದುದು, ಆದರೆ ನೀನೇ ನಶ್ವರವಲ್ಲ! ಪ್ರಾಯಶಃ ನಿನ್ನ ಆಶೆ ಕೈಗೂಡದು. ಮಗುವಾಗಬಹುದು. ಆದರೂ ಏನೋ ಆಗಿ ನೀನು ಎದೆಯೊಡೆದು ಸಾಯುವೆ," ಎಂಬ ತರಂಗಗಳು ಏಳುತ್ತವೆ. ಆಕೆಯ ಭವಿಷ್ಯಕ್ಕಾಗಿ ಕಂಪಿಸುತ್ತ ನಾವು ಮುಂದುವರೆಯುತ್ತೇವೆ.

ಆದರೆ ಆಶಾಕಿರಣ ಮೂಡುತ್ತದೆ. ಆಕೆ ಗರ್ಭಿಣಿಯಾಗುತ್ತಾಳೆ. ಅದು ಆಕೆಯ ಜೀವಮಾನದಲ್ಲೆಲ್ಲ ಅತ್ಯಂತ ಮಧುರವಾದ ಸಮಯ. ಆಕೆಯ ಪ್ರಸನ್ನವದನ, ಮಂದಸ್ಮಿತ, ಹೊಸ ಹುರುಪುಗಳು ನಮ್ಮ ಮುಂದೆ ಸುಳಿದಾಡುತ್ತವೆ. ಎರಡು ಮನೋಹರ ವಾಕ್ಯವೃಂದಗಳಲ್ಲಿ ಹರಿಯುವ ವಾಕ್ಯಗಳು, ಕವಿತೆಯ ಸಾಲುಗಳಿಗಿಂತ ಹೆಚ್ಚು ಪರಿಣಾಮಕಾರಿಯಾದ, ದಿವ್ಯವಾದ ಚಿತ್ರವನ್ನು ಸೃಷ್ಟಿಸುತ್ತವೆ. ಹದಿನೈದು ವರ್ಷಗಳ ರಹಸ್ಯಮಯ ವೇದನೆ ನಮ್ಮ ಮನಸ್ಸಿನ ಹಿಂದೆ ಸ್ಥಿರವಾಗಿರುತ್ತದೆ. ಮುಂದಿನ ಮೃತ್ಯು ಮುಂದೆ ಮಿಂಚುತ್ತಿರುತ್ತದೆ. ಇಂದು ಆಕೆ ಅನುಭವಿಸುವ, ನಶ್ವರವಾದರೂ ಭವ್ಯವಾದ ಆನಂದ, ಕಾಳರಾತ್ರಿಯ ಕಾರ್ಮೋಡಗಳಲ್ಲಿ ಸಂಚರಿಸುವ ಮಿಂಚಿನ ಮಾಲೆಯಂತೆ ತನ್ನ ಅಮಾನುಷ ಪ್ರಭೆಯಿಂದ ಪ್ರಜ್ವಲಿತವಾಗುತ್ತದೆ. ಆಕೆಯ ಆನಂದದಲ್ಲಿ ನಾವು ಭಾಗಿಗಳಾಗುತ್ತೇವೆ. 'ಹೇ ವಿಧಾತಾ ಈಕೆಯನ್ನು ಕೊಲ್ಲಬೇಡ, ಉಳಿಸು!' ಎಂದು ಕೇಳಿಕೊಳ್ಳುತ್ತೇವೆ. ಇದು ಸಾಧ್ಯವಿಲ್ಲವೆಂದೂ ನಮಗೆ ಆಗಲೇ ಗೋಚರವಾಗುತ್ತದೆ. ಆದರೂ ಒಂದು ವಿಚಿತ್ರರೀತಿಯಿಂದ ಇಂದಿನ ಆನಂದವೇ ಮನಮೋಹನವೆರಚುತ್ತ ನಲಿಯುತ್ತದೆ.

ನಿರ್ಭಾಗ್ಯನಾದ ಶಿಶುವಿಗೆ ತಂದೆ ಈ ಕರುಣಕತೆಯನ್ನು ಹೇಳುತ್ತಾನೆ–ಎಂಬುದನ್ನು ಕತೆಗಾರರು ಪದೇ ಪದೇ ನಮ್ಮ ಮನಸ್ಸಿನ ಮೇಲೆ ಒತ್ತುತ್ತಲೇ ಇರುತ್ತಾರೆ. ಇದು ಕತೆಯಲ್ಲಿಯ ಕರುಣರಸವನ್ನು ಅಲ್ಲಲ್ಲಿ ಘನೀಭೂತ ಮಾಡುತ್ತದೆ. ನಮ್ಮ ಮನಸ್ಸು ಸಹೃದಯತೆಯಿಂದ ಕರಗಿ ನೀರಾಗುತ್ತದೆ. "ಒಂಬತ್ತುವರೆ ತಿಂಗಳುಗಳ ಕಾಲ ಅವಳನ್ನು ಕಷ್ಟಪಡಿಸಿ, ಮಗೂ, ಈ ವಿಶ್ವದಲ್ಲಿ ನೀನು ಕಾಲಿಡಲು ವಿಚಾರಮಾಡಿದೆ!" ಎನ್ನುವ ಮಾತು ಹೊರಬೀಳುತ್ತಿದ್ದಂತೆ, ನಮ್ಮ ಮನಸ್ಸು ಅಸ್ಥಿರವಾಗುತ್ತದೆ. ಏನಾಗುತ್ತದೆ, ಎಂದು ತಿಳಿಯಲು

ನಿಲ್ಲುತ್ತೇವೆ. ಸ್ಥಿತಪ್ರಜ್ಞಳಾದ ನರ್ಸ್‌ಬಾಯಿ, ಶಸ್ತ್ರಚಿಕಿತ್ಸೆ, ಡಾಕ್ಟರ್ ಎಲ್ಲ ನಮ್ಮ ಮುಂದೆ ಹಾಯ್ದುಹೋಗುತ್ತಾರೆ.

ಕತೆ ಈ ಭಾಗದಲ್ಲಿ ನಮ್ಮನ್ನೇನೂ ನಿರಾಶೆಗೊಳಿಸುವುದಿಲ್ಲ; ಅದೇ ದಿಕ್ಕಿನಲ್ಲಿಯೇ ಹರಿಯುತ್ತದೆ. ಪ್ರಸವ ಅತ್ಯಂತ ಕಠಿಣವಾದ ಘಟ್ಟವನ್ನು ಮುಟ್ಟುತ್ತದೆ. ಇಲ್ಲಿ ಕತೆಯ ಹೃದಯಪ್ರಾಯವೂ ಅತ್ಯಂತ ನಾಟಕೀಯವೂ ಆದ ಘಟನೆ ನಡೆಯುತ್ತದೆ. ಡಾಕ್ಟರು ಕೇಳುತ್ತಾರೆ: " ಮಗು ಬೇಕೇ ? ಮಡದಿ ಬೇಕೇ ? " ಡಾಕ್ಟರು ಕಾಲವನ್ನು ಕೊಡುವುದಿಲ್ಲ—''ಬೇಗ ಹೇಳು. ಇಬ್ಬರಲ್ಲಿ ಒಬ್ಬರನ್ನು ಬದುಕಿಸಬಲ್ಲೆ! ಇಬ್ಬರನ್ನೂ ಬದುಕಿಸಲು ಸಾಧ್ಯವಿಲ್ಲ! ಯಾರು ಬೇಕು ಹೇಳು! " ಎಂದು. 'ನಿನ್ನ ಪತಿಯ ಜೀವವೊಂದನ್ನು ಬಿಟ್ಟು ಬೇಕಾದುದನ್ನು ಕೊಡುವೆ, ಕೇಳಿಕೋ ' ಎಂದು ಉದಾರಹೃದಯದಿಂದ ಯಮಧರ್ಮ ಸಾವಿತ್ರಿಯನ್ನು ಕೇಳಿದ ಹಾಗೆ ಡಾಕ್ಟರು ಕೇಳುತ್ತಾರೆ. ಈ ಡಾಕ್ಟರಿಗೆ ದೃಢವಾದ ನಂಬಿಕೆ: ಮಗು ಸಾಯಬೇಕು, ಇಲ್ಲವೇ ಆಕೆ ಸಾಯಬೇಕು—ಎಂದು. " ಇಬ್ಬರನ್ನೂ ಬದುಕಿಸಲು ಪ್ರಯತ್ನ ಮಾಡುವೆ, ಆದರೂ ಒಬ್ಬರು ಸಾಯುತ್ತಾರೆ, " ಎಂದು ಆತನ ವಿಶ್ವಾಸ. ಮೂರ್ಖ ಡಾಕ್ಟರ್—ಎಂದು ಕತೆಗಾರ ಒಳಗೇ ನಗುತ್ತಾನೆ.

ಓದುಗರಿಗೂ ಈ ಡಾಕ್ಟರರ ಮಾತಿನಲ್ಲಿಯೇ ನಂಬಿಕೆ. ಮಗುವಂತೂ ಸಾಯುವುದಿಲ್ಲ, ಎಂದು ದೃಢವಾಗಿದೆ; ಏಕೆಂದರೆ 'ಟ್ಯಾಂಆಆಆ' ಎಂದು ಅಳುತ್ತಾ ಕತೆಯನ್ನು ಕೇಳುತ್ತಿದ್ದಾನೆ. ಮಾತೃವಿಹೀನ ಎಂದಂತೂ ತಿಳಿದೇ ಇದೆ ಇಬ್ಬರನ್ನೂ ಉಳಿಸಲು ಡಾಕ್ಟರಿಗೆ ಸಾಧ್ಯವಿಲ್ಲವಾದರೂ ಕತೆಗಾರನಿಗೆ ಸಾಧ್ಯ. ಆತ ಆಕೆಯನ್ನು ಉಳಿಸುತ್ತಾನೆ; ಆದರೆ ಉಳಿಸುವ ಮುನ್ನ ಗಂಡನನ್ನು ಮಾತ್ರ ಅಗ್ನಿಪರೀಕ್ಷೆಗೆ ಗುರಿಮಾಡುತ್ತಾನೆ. ಗಂಡನಿದ್ದ ನೆಲ ಕುಸಿದು ಬೀಳುತ್ತದೆ. ಕತ್ತಲು ಕವಿಯುತ್ತದೆ; ಆಕಾಶ ಕಳಚಿ ಬೀಳುತ್ತದೆ. ದಿಕ್ಕೇ ತೋರದು. ಇಂತಹ ಭೀಕರ ವಿಕಟಹಾಸ್ಯದ ನಡುವೆ ಕಾಡುಪ್ರಾಣಿಯಂತೆ ಕ್ರೂರಿಯಾದ ಆ ಡಾಕ್ಟರ್, " ಕರ್ಕಶವಾದ ಸತ್ಯವನ್ನು ಕಾರು, ಈಗಲೇ ಕಾರು, " ಎಂದು ಕಾಡುತ್ತಾನೆ. ಆ ಪ್ರಾಣಿ ಸ್ವಲ್ಪ ವೇಳೆಯನ್ನೂ ಕೊಡುವುದಿಲ್ಲ. " ಹೇಳು, ಈಗಲೇ ಹೇಳು, ಈ ಕ್ಷಣದಲ್ಲಿ ಹೇಳು; ಇಲ್ಲದಿದ್ದರೆ ಇಬ್ಬರೂ ಹೋದಾರು! " ಎಂದು ಹೆದರಿಸುತ್ತಾನೆ.

ಇದು ಎಂತಹ ಪ್ರಶ್ನೆ ! ಎಷ್ಟು ಘೋರವಾದುದು !! ನಮ್ಮ ಜೀವನದ ಹುರಿಯಲ್ಲಿ ಎಳೆಯಾಗಿ ಬೆರೆತಿರುವ ಪ್ರೇಯಸಿಯನ್ನು ತುಂಡರಿಸಲು ಯಾರಿಗೆ ಮನಸ್ಸು ಬರುತ್ತದೆ? ಇನ್ನೂ ಜೀವನವನ್ನು ಕಾಣದ, ಅಗೋಚರವಾದ, ವ್ಯಕ್ತಿತ್ವಹೀನವಾದ, ಚಿಕ್ಕ ಮಗುವಿಗಾಗಿ ಆಧಾರಭೂತ ವೃಕ್ಷದಂತಿರುವ ತಾಯಿಯನ್ನೇ ಕತ್ತರಿಸಿಹಾಕು ಎಂದು ಹೇಳುವ ಧೈರ್ಯ ಬಹಳ ಸ್ವಲ್ಪ ಜನಕ್ಕೆ ಬರುತ್ತದೆ. ಕತೆಯ ಹಿನ್ನೆಲೆಯನ್ನು ನೋಡಿದ ನಮಗೆ, ಈ ಗಂಡ ಅವ್ಯಕ್ತಶಿಶುವಿಗಿಂತ ವ್ಯಕ್ತ ಮಡದಿಯನ್ನೇ ಆರಿಸಿಯಾನು—ಎಂಬ ಆಶೆ ಅಸ್ಪಷ್ಟವಾಗಿರುತ್ತದೆ. 'ಮಗು ಬೇಕು' ಎಂದು ಆತನೇನು ಆಕೆಯಂತೆ ಕೊರಗಿದ ಚಿಹ್ನೆ ಹಿಂದೆ ಎಂದೂ ಕಾಣಿಸಿಲ್ಲ. ಆದರೂ, "ಡಾಕ್ಟರೇ, ಮಗುವನ್ನು ಬದುಕಿಸಿರಿ! " ಎಂಬ ಉದ್ಗಾರ ಆತನ ಬಾಯಿಂದ ಹೊರಬೀಳುತ್ತದೆ. ಏಕೆ? ವಂಶವನ್ನು ಬೆಳೆಸಬೇಕೆಂಬ ಆಕಾಂಕ್ಷೆ ಸುಪ್ತಚೇತನದಲ್ಲಿ ಹರಿಯುತ್ತಿತ್ತೆ? ಬುಗ್ಗೆಯಂತೆ ಚಿಮ್ಮಿ ಹೊರಕ್ಕೆ ಧಾವಿಸಿ ಬಂತೆ ? ಬರ್ನಾರ್ಡ್ ಷಾ ಹೇಳಿದಂತೆ (we are in the grip of life force) ಆತ ಒಂದು ಜೀವಶಕ್ತಿಯ ಹಿಡಿತಕ್ಕೆ ಸಿಕ್ಕಿದ್ದನೆ ? ಇರಬಹುದು ಎಂದುಕೊಂಡು ನಾವು ಆತನ ಮಾತನ್ನು ಸಮರ್ಥಿಸಬೇಕಾಗುತ್ತದೆ. ಆದರೂ ಇದು ಕತೆಯಲ್ಲಿಯ ಸರಪಳಿಯಲ್ಲಿ ಅತ್ಯಂತ ದುರ್ಬಲವಾದ ಕೊಂಡಿ. ಆದರೆ ಅದನ್ನು ಹೇಳದಿದ್ದರೆ ಕತೆಗೆ ಜೀವವೇ ಇಲ್ಲ. ಈ ಮಾತೇ ಕತೆಗೆ ಹೃದಯ. 'ಸಂತಾನ ಸೌಖ್ಯ ಸ್ತ್ರೀಗೆ ಎಷ್ಟು ಪ್ರಿಯವೋ ಪುರುಷನ ಪ್ರೇಮ ಅಷ್ಟೇ ಪ್ರಿಯ,' ಎಂಬ ಸತ್ಯದ ಮಹಲಿಗೆ ಹಾಲು ಈ ಲಂಘನ ಆವಶ್ಯಕ. ಆದರೆ ಇದನ್ನು ಇನ್ನಷ್ಟು ಸಹಜವಾಗಿ ತೋರಿಸಿದ್ದಿದ್ದರೆ ಚೆನ್ನಾಗಿತ್ತು—ಎನಿಸುತ್ತದೆ. ಕತೆಗಾರ ಕತೆಯ ನಾಯಕಿಗಾಗಿ ಸಂಪಾದಿಸಿಕೊಂಡಿದ್ದ ಅನುಕಂಪ—ಸಹಾನುಭೂತಿಗಳಲ್ಲಿ ತನಗಾಗಿ ಸ್ವಲ್ಪವನ್ನು ಯಾಚಿಸುತ್ತಾನೆ. ಸಹೃದಯರಾದ ಓದುಗರು ಇಲ್ಲವೆನ್ನಲಾಗುವುದಿಲ್ಲ.

ಅದಿರಲಿ! ಕತೆಗಾರರಂತೂ ಇಬ್ಬರನ್ನೂ ಬದುಕಿಸಿದರು. ಮತ್ತೆ ನಮ್ಮ ಆಶಾದೀಪ ಪ್ರಜ್ವಲಿತವಾಗುತ್ತದೆ, ಆರಿಹೋಗುವ ಮುನ್ನ ಪ್ರಜ್ವಲಿಸುವ ನಿತ್ಯದ ದೀಪದಂತೆ. ಆಕೆ ಬದುಕಿದಳು. ಆದರೆ ಆಕೆಯ ಪ್ರಕೃತಿ ಕೆಡುತ್ತದೆ. ನಮ್ಮ ಆಶಾದೀಪ ನಂದಿಹೋಗುತ್ತದೆ. ಆಕೆಯ ಜೀವಜ್ಯೋತಿಯೂ ಅದೇ ದಾರಿಯನ್ನು ಹಿಡಿಯುತ್ತದೆ. ಆದರೆ ಸಾವಿನ ಮುನ್ನ ಒಂದು ಪ್ರಚಂಡ ಸಂವಾದ ಗಂಡ–ಹೆಂಡತಿಗೆ ಜರಗುತ್ತದೆ. ಅದು ಮೇಲೆ ಹೇಳಿದ ಪ್ರಶ್ನೆಯನ್ನು ಕುರಿತು:— ' ಪುರುಷರಿಗೆ ಸಂತಾನ ಹೆಚ್ಚೋ, ಸಹಧರ್ಮಿಣಿ ಹೆಚ್ಚೋ ? '

ಈ ಪ್ರಶ್ನೆ, ಅದಕ್ಕೆ ಗಂಡನಿತ್ತ ಉತ್ತರ, ಇವೆರಡನ್ನೂ ಆಕೆ ಕೇಳುತ್ತಾಳೆ, ಶಸ್ತ್ರಚಿಕಿತ್ಸೆಯ ಮೇಜಿನ ಮೇಲಿಂದ. ಮಗುವೇ ತನ್ನ ಜೀವನಸರ್ವಸ್ವವಾಗಿದ್ದರೂ, ಗಂಡನು ಆ ಮಗುವನ್ನೇ ಆರಿಸಿಕೊಂಡಾಗ ಮಾತ್ರ ಆತನ ಮಾನಸ ಸಿಂಹಾಸನದ ಮೇಲೆ ರಾರಾಜಿಸುತ್ತಿದ್ದ ರಾಣಿ ತಾನು ಕೆಳಕ್ಕುರುಳಿ ಧೂಳಿನಲ್ಲಿ ಲೀನವಾದಳೆಂದು ಆಕೆ ತಿಳಿಯುತ್ತಾಳೆ. ಗಂಡ ತನ್ನನ್ನು ಇಷ್ಟು ಕ್ಷುದ್ರವಾಗಿ ಎಣಿಸಿದನಲ್ಲ, ತಾನು ಇಷ್ಟೊಂದು ನಿರುಪಯೋಗಿ ಜೀವಿ ಎಂದು ಆತನು ತಿಳಿದನಲ್ಲ, ಎಂದು ನಾರಿ ಹಲುಬಿ ನಾಗಿಣಿಯಾಗುತ್ತಾಳೆ. ಆದರೆ ಅದು ಸತ್ಯ, ಕರ್ಕಶವಾದ ಸತ್ಯ ! ನಯ, ನಾಜೂಕನ್ನು ಅರಿಯದ ಡಾಕ್ಟರ್ ಕಾರಿಸಿದ ಕಾಡು ಸತ್ಯ! ಬರ್ನಾರ್ಡ್ ಷಾ ಹೇಳಿದ Life force ಅವನ ಬಾಯಿಂದ ಈ ಮಾತನ್ನು ಆಡಿಸಿತು ಎಂದು, ಬರ್ನಾರ್ಡ್ ಷಾವನ್ನು ಓದದ ಸ್ಥೂಲಬುದ್ಧಿಯ ಆ ಗೃಹಿಣಿಗೆ ಅರ್ಥವಾಗಲಿಲ್ಲ. ತನ್ನ ಪ್ರೇಮಕ್ಕೆ ಎಂತಹ ಆಘಾತ?–ಎಂದು ನರಳುತ್ತಾಳೆ. ಆ ನೋವಿನಿಂದ ಒರಲುತ್ತಾಳೆ. ಇಲ್ಲಿ ಪತಿ ಪೂರ್ತಿಯಾಗಿ ನಮ್ಮ ಸಹಾನುಭೂತಿಗೆ ಪಾತ್ರ ! ಮೃತ್ಯುಶಯ್ಯೆಯ ಮೇಲೆ ನಡೆಯುವ ಆ ಮಾತುಕತೆ ನಮ್ಮಲ್ಲಿ ರೋಮಾಂಚವನ್ನೆಬ್ಬಿಸುತ್ತದೆ. ಪತಿ ತನ್ನ ನಿಲುವನ್ನು

ಸಮರ್ಥಿಸಿಕೊಳ್ಳಲು ಸರ್ವಪ್ರಯತ್ನವನ್ನೂ ಮಾಡುತ್ತಾನೆ. ಅವನ ವಾದವೆಲ್ಲ ಬುದ್ಧಿಪ್ರಧಾನವಾದದು. ಆದರೂ ಅದರಲ್ಲಿ ಆತನ ಅಂತರ್ವೇದನೆಯ ಆಳ ಎಷ್ಟು ಕಾಣಿಸುತ್ತದೆ. ಆತನ ವಾದದ ಬಲಕ್ಕೆ ಆಕೆ ಸೋತಳೋ ಇಲ್ಲವೋ ಹೇಳುವುದು ಕಷ್ಟ! ಆದರೆ ಆತನ ಹೃದಯದಲ್ಲಿ ಎದ್ದ ವ್ಯಥೆಯ ಬೃಹತ್-ತರಂಗಗಳನ್ನು ಆಕೆಯ ಹೃದಯ ಮೌನವಾಗಿ ಗ್ರಹಿಸುತ್ತದೆ. ಆತನಿಗೆ ನಿಜವಾಗಿ ತನ್ನಲ್ಲಿ ಪ್ರೇಮ ಇದೆಯೆಂದು ಆಕೆ ತಿಳಿದುಕೊಂಡಳು. ತನಗೆ ಬೇಕಾದ ಪ್ರಿಯವಸ್ತುವಿಗಾಗಿಯೇ (ಮಗ) ತನ್ನನ್ನೂ ಸಹ ಬೇಡವೆಂದು ಹೇಳುವಷ್ಟು ಅಪ್ರಿಯವಾದ ದುಃಖಪೂರಿತವಾದ ನಿರ್ಧಾರಕ್ಕೆ ಪತಿ ಬರಬೇಕಾಯಿತೆಂದು ಆಕೆ ತಿಳಿದುಕೊಳ್ಳುತ್ತಾಳೆ. ಆಕೆಯ ನೊಂದ ಹೃದಯ ಶಾಂತಿಯನ್ನು ಪಡೆಯುತ್ತದೆ. ಅನೇ ನೆಳಿತದಲ್ಲಿ ಸಿಕ್ಕಿದ ಹೃದಯ ಕರಗಿ ನೀರಾಗುತ್ತದೆ ದಾಂಪತ್ಯ ಜೀವನದ ಪರಮಸೌಖ್ಯವನ್ನು ಆಕೆ ಕಾಣುತ್ತಾಳೆ. ಆದರೆ ಒಂದೇ ಒಂದು ಕ್ಷಣಕಾಲ. ಮರುಕ್ಷಣದಲ್ಲಿ.... "ಆದರೆ.... ಆದರೆ ನೀವು ಹೇಗೆ ಹೀಗೆ ಮಾತಾಡಿದಿರಿ?" ಎಂದು ಪುನಃ ಆಕೆಯ ಹೃದಯ ಹಿಂದಿನ ಗಾಯವನ್ನು ಕೆರೆದುಕೊಳ್ಳುತ್ತದೆ. ಆದರೂ ಆಕೆಯ ಸಾವಿನಲ್ಲಿ ಕ್ಷಣಕಾಲವಾದರೂ ಸಮಾಧಾನದ ಮಿಂಚು ಸುಳಿದುದು ಓದುಗರಿಗೆ ತೃಪ್ತಿಯನ್ನೀಯುತ್ತದೆ.

ಕತೆಯನ್ನು ಹೇಳಿಕೊಂಡು ಹೋಗಿರುವ ಧಾಟಿ ಚೆನ್ನಾಗಿದೆ; ಹೃದಯಸ್ಪರ್ಶಿಯಾಗಿದೆ. ಮನೆಯಲ್ಲಿನ ಪ್ರತಿ ವಸ್ತುವೂ ಒಡತಿಗಾಗಿ ಹಾತೊರೆಯುತ್ತಿದ್ದುವೆಂಬ ಕಲ್ಪನೆ, ಗೃಹಿಣಿಯ ಬೇರೂರಿದ ಅಧಿಕಾರದ ಆಳವನ್ನು ತೋರಿಸುತ್ತದೆ. ಡಾಕ್ಟರು ಕೇಳಿದ ಪ್ರಶ್ನೆ, ಪತಿ ಕೊಟ್ಟ ಉತ್ತರ, ಆಕೆಗೆ ಹೇಗೆ ಕೇಳಿಸಿತೋ ತಿಳಿಯದು. ಈ ಮಾತು-ಕತೆ ನಡೆದುದು ಆಕೆಯ ಎದುರಿನಲ್ಲೇನಲ್ಲ! ಪ್ರಾಯಶಃ ಹೊರಗಿನ ಕೋಣೆಯಲ್ಲಿ. ಇಷ್ಟು ಗಂಭೀರವಾದ ಮಾತುಕತೆಗಳನ್ನು—ಜೀವನ ಮರಣದ ಪ್ರಶ್ನೆಗಳನ್ನು—ಗಟ್ಟಿಯಾಗಿ ನಾಲ್ಕು ಬೀದಿಗಳಿಗೆ ಕೇಳಿಸುವಂತೆ ಮಾತನಾಡಿರಲಾರರು. ಡಾಕ್ಟರಂತೂ ಉದ್ವೇಗಗೊಂಡು ಮಾತನಾಡುವವರಲ್ಲ. ಆಕೆಯ ದುಸ್ಸಾಧ್ಯ ವೇದನೆಯಲ್ಲಿ ಇವೆಲ್ಲವನ್ನೂ ಕೇಳುವಂತೆ ಗಮನವನ್ನು ಕೇಂದ್ರೀಕೃತ ಮಾಡುವ ಶಕ್ತಿಯಂತೂ ಪ್ರಾಯಶಃ ಉಳಿದಿರಲಿಲ್ಲವೆಂದು ಕಾಣುತ್ತದೆ. ಇಲ್ಲಿ ಕತೆಗಾರರೊಡನೆ ನಾವು ಮತ್ತೆ ಸಹಾನುಭೂತಿ ತೋರಿಸಬೇಕು. ಮೂಲದಲ್ಲಿಯ ಒಂದೆರಡು ವಾಕ್ಯಗಳು ಅನುವಾದದಲ್ಲಿ ಬಿಟ್ಟು ಹೋಗಿರಬಹುದೇನೋ—ಎಂಬ ಅನುಮಾನ ಬರುವುದೂ ಸಹಜ. ಅಂತೂ ಇಲ್ಲಿ ಹೊಂದಿಕೆ ಸರಿಯಾಗಿಲ್ಲ. *

ಈ ಉತ್ತರದ ಮೇಲೆ ಸಿಟ್ಟಾಗಿ ಪುತ್ರವತಿ, ತನ್ನ ಪತಿಯ ಮೇಲೆ ಕಾರಿದ ಹಾಲಾಹಲವನ್ನು ನಿವಾರಿಸಿಕೊಳ್ಳಲು, ಆತನು ಮಾಡಿದ ಆವೇಶಪೂರ್ಣವಾದ ಭಾಷಣ ಕೊನೆಕೊನೆಗೆ ಹಿರಿಯ ದರ್ಶನದ ಛಾಯೆಯನ್ನು ತಾಳುತ್ತದೆ. ಜೀವನದ ಅಂತಿಮ ಕಠೋರಸಮಸ್ಯೆಗಳನ್ನು, ಹಿರಿಯಾಶೆಗಳನ್ನು ಎದುರಿಸುವಾಗ, ಪ್ರಾಯಶಃ ಮಾಡಲೇಬೇಕಾದ ಅಷ್ಟೇ ಹಿರಿಯ ತ್ಯಾಗಗಳ ಕಡೆಗೆ ಮನಸ್ಸನ್ನು ಒಯ್ಯುತ್ತದೆ. ಗೃಹಿಣಿ ಆ ಸತ್ಯದ ಅಂತರಾರ್ಥವನ್ನು ಗ್ರಹಿಸುತ್ತಾಳೆ. ಬುದ್ಧಿ ತೃಪ್ತವಾಗುತ್ತದೆ. ಆದರೆ ಆಕೆಯ ಮನಸ್ಸು ಭಾವನಾಮಯ ನೆಲೆಯಿಂದ ತಪ್ಪಿಸಿಕೊಳ್ಳಲಿಲ್ಲ. ಇವೆಲ್ಲ ಸತ್ಯವಾದರೂ, ಸತ್ಯವೆಂದು ಆಕೆ ಗ್ರಹಿಸಿದರೂ, ಗಂಡನು ಹೀಗೆ ಹೇಳದೆ ಇದ್ದಿದ್ದರೆ ಚೆನ್ನಾಗಿತ್ತು ಎಂಬ ಭಾವನೆ ಆಕೆಯನ್ನು ಕೊರೆದು ತಿನ್ನುತ್ತದೆ. ಎಷ್ಟೇ ಉನ್ನತವಾದ ಆದರ್ಶವಿರಲಿ, ಪತಿಯ ಪ್ರೇಮದಿಂದ ವಂಚಿತಳಾದೆನೆಂಬ ಭಾವನೆ ಆಕೆಯ ಮನಸ್ಸಿನ ಮೇಲೆ ಆದ ಆಘಾತವನ್ನು ಮಾಯಿಸಲಾರದೆ ಹೋಯಿತು. ಸ್ತ್ರೀಗೆ ಸಂತಾನ ಸೌಖ್ಯ ಎಷ್ಟು ಶ್ರೇಷ್ಠವಾದ ಪವಿತ್ರವಾದ ಆದರ್ಶವೋ, ಪತಿಯ ಪ್ರೇಮವೂ ಅಷ್ಟೇ ಶ್ರೇಷ್ಠವೂ ಪವಿತ್ರವೂ ಆದುದು.

ಈ ಹಿರಿಯ ಸತ್ಯದ ಉಸಿರಿನಿಂದ ತುಂಬಿ, ಅದಕ್ಕೆ ವಿಧೇಯವಾಗಿ ಬೆಳೆದುಕೊಂಡು ಹೋಗಿರುವುದರಿಂದಲೇ, ಕತೆ ಜೀವಂತವಾಗಿದೆ. ಅದರ ಪರಿಣಾಮ ಓದುಗನ ಮನಸ್ಸನ್ನು ಕದಡಿ, ಹೊಸದೊಂದು ದರ್ಶನ ಮಾಡಿಸಿಕೊಡುವುದರಲ್ಲಿ ಯಶಸ್ವಿಯಾಗಿದೆ. ಮಗುವನ್ನು ಎದುರಿಗೆ ನಿಲ್ಲಿಸಿಕೊಂಡು, ಪತ್ನೀಪ್ರೇಮದ ಆವೇಶದಿಂದ ತುಂಬಿ ವ್ಯಥಿತನಾದ ಪತಿ ಕತೆ ಹೇಳುವ ಕಲ್ಪನೆಯೇ ಸುಂದರವಾಗಿದೆ. ಅಲ್ಲಲ್ಲಿ ಶುದ್ಧಕವಿತೆಯಂತೆ ಕತೆಯ ಭಾವನೆಗಳು ಉಕ್ಕಿ ಉಕ್ಕಿ ಹರಿಯುತ್ತವೆ. ಅಂತಹ ಕಡೆ ಭಾಷೆ ಮೃದು-ಮಧುರವಾಗಿ, ಹದವಾಗಿ ಬಂದಿದ್ದರೆ ಕಥೆಯ ಸೌಂದರ್ಯ ಮತ್ತಿಷ್ಟು ಹೆಚ್ಚುತ್ತಿತ್ತು. ಆದರೂ ಅನುವಾದ ಮೂಲಕಥೆಯ ಆಶಯಗಳನ್ನು ಬಹುಮಟ್ಟಿಗೆ ಕನ್ನಡಕ್ಕೆ ತಂದಿದೆಯೆಂದು ಸ್ಪಷ್ಟವಾಗಿ ಕಾಣಿಸುತ್ತದೆ. ಈ ಬಗೆಯ ಉತ್ತಮ ಕಥೆಗಳನ್ನು ಪ್ರಕಟಿಸಿ, ಜಯಂತಿ, ಸಾಹಿತ್ಯಪ್ರಪಂಚದಲ್ಲಿ ತಾನು ಗಳಿಸಿರುವ ಹಿರಿಯ ಸ್ಥಾನವನ್ನು ಸದಾ ಉಜ್ವಲವಾಗಿಟ್ಟಿರಲೆಂದು ಹಾರಯಿಸುತ್ತೇನೆ.

---

* ಇಷ್ಟೆಲ್ಲ ವಿಶದ ವಿಮರ್ಶೆ ಬರೆದ ಇವರಿಗೆ, ಡಾಕ್ಟರೊಂದಿಗೆ ಅಂದು ಆಡಿದ ಪತಿಯ ಮಾತನ್ನು ನರ್ಸೊಬ್ಬಳು ಅವಳಿಗೆ ಹೇಳಿದಳೆಂಬ ಸಂಗತಿಯು ಲಕ್ಷ್ಯಕ್ಕೆ ಬಂದಿಲ್ಲವೆಂದು ತೋರುವುದು. ಅದು ನೆನಪಿದ್ದರೆ, ಹೀಗೆ ಬರೆಯುತ್ತಿರಲಿಲ್ಲವೆನ್ನಬಹುದು.

—ಸಂ. ಜ.

(೭೬ನೆಯ ಪುಟದಿಂದ)

೩ನೆಯ ಓಲೆ

ಜಯಂತಿಯ ಸಂಪಾದಕರ ಸ|| ಕ್ಕೆ ಸ|| ಗಳು.

ಬಹಳ ವರ್ಷಗಳಿಂದಲೂ ಜಯಂತಿ ಆರ್ಥಿಕ ಸಮಸ್ಯೆಯನ್ನು ಎದುರಿಸಲಾರದೆ ಕಷ್ಟಪಡುತ್ತಿರುವುದು ಪ್ರತಿಯೊಬ್ಬ ಕನ್ನಡಿಗನೂ ಅರಿತ ವಿಷಯ. ಆದರೂ ಸಹ ತನ್ನ ಆರ್ಥಿಕ ಹದಗೇಡನ್ನೂ ಲೆಕ್ಕಿಸದೆ ಕನ್ನುಡಿಯ ಕನ್ನಾಡ ಸೇವೆಯ ಹಿತದೃಷ್ಟಿಯಲ್ಲಿ ತನ್ನ ಪಟ್ಟವನ್ನು ಬಿಡದೆ, ಸಲ್ಲಿಸುತ್ತಿರುವ ಸೇವೆಯು ಪ್ರಶಂಸನೀಯ.

ಜಯಂತಿಯು ನವರಸದ ಕಡಲೆಂದರೆ ಅತಿಶಯೋಕ್ತಿಯಾಗಲಾರದು. ಓದುಗರು ತಮತಮಗೆ ಬೇಕಾದ ರಸರುಚಿಯನ್ನು ಸೇವಿಸಬಹುದು. ಶೃಂಗಾರರಸದ ಪ್ರಿಯರಿಗೂ ಒಳಿತೆತಣವಿರುವುದನ್ನು ಅರಿಯಲಾರರು. ಜನಸಾಮಾನ್ಯರು ಜಯಂತಿಯಲ್ಲಿ ಪ್ರಣಯಂಗಳ ಪ್ರೇಮ ಚಿತ್ರಕ್ಕೆ ಕಾಯುವ ಓದುಗರಿಗೆ. ಇದು ಕಾಣದ ಕಾರಣ ಆ ಜಯಂತಿಯ ಬೆಲೆಯು ಜನರಿಗೆ ಗೊತ್ತಾಗಲಾರದು. ಗಂಡುಕೈಲಿಯಲ್ಲಿ ಪ್ರಾರಂಭಿಸಿ ಗಂಡುಶೈಲಿಯಲ್ಲಿ ಮುಗಿಸುವ ಲೇಖಕರ ಸಾರ್ಥಕತೆಯನ್ನು ಕಾಣಬಹುದು ಜಯಂತಿಯಲ್ಲಿ.

ಸ್ವತಂತ್ರ ಭಾರತದಲ್ಲಿ, ಸ್ವಾತಂತ್ರ್ಯಕ್ಕೆ ಹೋರಾಡುವ ಕನ್ನಡ ಜನತೆಯ ಕನ್ನುಡಿಯ ಅಭಿಮಾನಸರೂಪ ತಾಳದಿರುವುದೇ ಜಯಂತಿಯಂತಹ ಉತ್ತಮ ವಾರಪತ್ರಿಕೆಯು ತೊಳಲುತ್ತಿರುವುದಕ್ಕೆ ಕಾರಣ. ಇನ್ನಾದರೂ ಕನ್ನಡ ಜನತೆ ಎಚ್ಚೆತ್ತಲ್ಲಿ, ಜಯಂತಿಯಂತಹ ಕನ್ನಡ ಪತ್ರಿಕೆಯನ್ನು ಉಳಿಸಿಕೊಳ್ಳಬಹುದು. ಆದರೆ ಜನತೆ ಎಚ್ಚತ್ತೀತೆ?

H. S Nagaraj Rao
Humchadakatte

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧– ೮-೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನಸಂಗ್ರಹ) ೦–೮–೦
ಶ್ರೀ. ಬಾಳ. ಬಿ. ಉಪಾಧ್ಯೆ

ಮೂಲ ಶಿಕ್ಷಣದ ಮೌಲ್ಯಮಾಪಣ ೦–೧೨–೦
ಶ್ರೀ. ಮಿರ್ಜಿ ಅಣ್ಣಾರಾಯ

ಭರತೇಶನ ನಾಲ್ಕು ಚಿತ್ರಗಳು ೧– ೪–೦
ಶ್ರೀ. ಮಿರ್ಜಿ ಅಣ್ಣಾರಾಯ

ಶ್ರೀ ಶಾಂತಿಸಾಗರ ೦– ೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. **ಉಗಾರ ಬದ್ರುಕ್** (ಜಿಲ್ಲಾ ಬೆಳಗಾಂವಿ)

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಪ್ಸನ್ಸ ಗ್ರಾಯಿಪ್" ಹೀಲರ್

ಜಂತು ಆಪರೆ

"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies &
Pharmaceuticals Ltd., Dharwar

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ ಪೇಂಟಿಂಗ ವರ್ಕ್ಸ
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:

ಶ್ರೀ. ಎನ್. ಬಿ. ಮಂತಕರ

೪೨ ರವಿವಾರಪೇಠ, ಪುಣೆ ೨

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರೈಯಿಸಲಾಗುವುದು.

"ಆನಂದಕಂದ"ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ, ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮ ಗ ಳ ಮ ದು ವೆ

ಗಾಂಧೀಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ	ಕಾರಹುಣ್ಣಿವೆ	ಬೆಂದ ಹೃದಯ
([illegible] ಸಂಕಲನ)	(ಕವನಸಂಕಲನ)	(ಕಥಾಸಂಕಲನ)
ಕ್ರೌ. ಅ. ಪುಟ. ೧೦೩ ಬೆಲೆ ೧-೮-೦	ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦ ಸುಂದರ ೨-೮-೦	ಕ್ರೌ. ಅ. ೧೧೩ ಪುಟ ಬೆಲೆ ೧-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ. ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಜಾಡಿಯ ಚಾಣಕ್ಯನ '**ಜಾತೀಯ ಸಮಸ್ಯೆ**' '**ಕರ್ನಾಟಕ ಏಕೀಕರಣ**' ಈ ಕಿರುಹೊತ್ತಿಗೆಗಳೂ ದೊರೆಯುವವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by S. G. Kulkarni at the Sadhana Press, Dharwar. and pulished for the Proprietors Jayanti publications, by S. D Dharmatti, at the Jayanti Office, Dharwar.

ಜಯಂತಿ

ಆಗಸ್ಟ್ ೧೯೪೮

ಈ ಸಂಚಿಕೆಯಲ್ಲಿ:

ಗುದ್ದಿ ಪಿಕೊಂಡು ಗಂಟು ಹೊರುವರು ?	(ಸಂಪಾದಕೀಯ)	ಸಂಪಾದಕರು	೮೧
ನಾಡನಡೆ	(ಪ್ರಾಸಂಗಿಕ ಟಿಪ್ಪಣಿ)	'ಕಾಲಭೈರವ,	೮೩
ಹೀಗೂ ಇದ್ದಿತೇ?	(ಸಣ್ಣ ಕತೆ)	ಶ್ರೀ. ಸಂಗಣ್ಣ ನಾವದಗಿ, ಮುದ್ದೇಬಿಹಾಳ	೮೫
ಸಗ್ಗವನು ಬುವಿಗೆಳೆದು ತಾ	(ಕವನ)	ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು.	೮೮
ಶ್ರೀ. ವಿರೇಶಲಿಂಗಂ ಪಂತುಲು	(ವ್ಯಕ್ತಿಪರಿಚಯ)	ಶ್ರೀ. ಪಿ. ವೆಂಕೋಬಾಚಾರ್ಯ ಬಿ ಎ; ಬಿ. ಟಿ	೮೯
ಪೂರ್ವದೇಶದವರ ನಾವು !	(ಕವನ)	ಶ್ರೀ. ಎಚ್. ಜೆ ಉಪಾಧ್ಯಾಯ ಎಂ. ಎ.	೯೨
ಸುಮದ ಸೊಲ್ಲು	(ಕವನ)	ಶ್ರೀ ಎಂ. ಗೋಪಾಲಕೃಷ್ಣಭಟ್ಟ. ಸೀಚಾರ್ಲ	೯೨
ಸಮಸ್ಯೆಯು	(ಸಣ್ಣ ಕಥೆ)	ಶ್ರೀ. ಬಳ್ಳೂರ ಸುಬ್ಬರಾಯ ಅಗಡಿ, ಗಂಗೊಳ್ಳಿ	೯೩
'ಪಾರೀ'ಯ ದರ್ಶನ	(ಪರಿಚಯಾತ್ಮಕ)	ಶ್ರೀ. ಎಂ. ಕೆ. ವರಾಹಮೂರ್ತಿ. ಬಿ. ಎಸ್‌ಸಿ. (ಟೆಕ್). ಎಂ. ಎಸ್. ಸಿ. ಪ. ಜರ್ಮನಿ	೧೦೩
ಚಂದ್ರಬಿಂಬ	(ಕವನ)	ಶ್ರೀ. ಯಮುರ್ನಾಜ ರಾಮಚಂದ್ರ. ಪೆರಡಾಲ	೧೦೫
ಮಾಂಸಾಪರಾಜಯ	(ತರಂಗರೂಪಕ)	ಶ್ರೀ. ಕ. ವೆಂ. ರಾಜಗೋಪಾಲ ಬಿ. ಎ. (ಆನರ್ಸ್)	೧೦೬
ಮಾನವನ ಎತ್ತರ.	(ಆಸನಗಳು)	ಶ್ರೀ. ಎಲ್. ವಿ. ಜೋಶಿ ಬಿ. ., ಬಿ. ಇಡಿ	೧೧೩
ಒಂದು ರೂಪಕಕಥೆ.			೧೧೬
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ		ಶ್ರೀ. ಮಾ. ಕಸ್ತೂರಿ. ಸುರಪುರ	೧೧೬
ಸಾಹಿತ್ಯವಿಹಾರ	(ಒಂದು ಪತ್ರವಿಚಾರ)	ಸಂಪಾದಕರು	೧೨೦
ಪುಸ್ತಕ ವಿಮರ್ಶೆ	....	ಬೇರೆ ಬೇರೆ ವಿಮರ್ಶಕರು ಹೊದಿಕೆ	೩
ಸಾದರ ಸ್ವೀಕಾರ		ಹೊದಿಕೆ	೨

ಪುಟ ೧೭

ಸಂಚಿಕೆ ೨

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಏನೇ ಆದರೂ ಫ್ರಾನ್ಸು ಪ್ರಜಾಪ್ರಭುತ್ವವನ್ನು ಒಪ್ಪಿದ ರಾಷ್ಟ್ರ. ಎಂತಲೇ ಬಹುಜನರ ಅಭಿಪ್ರಾಯವನ್ನರಿತುಕೊಂಡು ಚಂದ್ರ-ನಾಗೊರು, ಮಾಹಿಗಳನ್ನು ಅಲ್ಲಿಯ ಪ್ರಜೆಗಳ ಕಡೆಗೆ ಒಪ್ಪಿಸಿ ಕೊಟ್ಟಿತು. ಆದರೂ ಪಾಂಡಿಚೇರಿಯ ಭಾಗವನ್ನು ಸಹಜವಾಗಿ ಒಪ್ಪಿಸಿಕೊಡುವುದಕ್ಕೆ ಸಿದ್ಧವಾಗಲೊಲ್ಲದಾಗಿದೆ. ಅದನ್ನು ಕೊಟ್ಟು ಮುಕ್ತವಾಗಬೇಕೆಂದು ಫ್ರಾನ್ಸು ಬಯಸುತ್ತಿರಬಹುದಾದರೂ, ಹಿಂಬದಿಯಲ್ಲಿ ನಿಂತು ಅದರ ಕಡಿವಾಣವನ್ನು ಬಿಗಿಹಿಡಿಯುವ ವಿಘ್ನಸಂತೋಷಿ ರಾಷ್ಟ್ರಗಳೂ ಇವೆ.

ಫ್ರಾನ್ಸು ಇತ್ತೀಚೆಗೆ ಸಮಂಜಸ ಧೋರಣೆಯನ್ನು ವಹಿಸಿದಂತಿದೆ. ಜಿನೇವಾ ಪರಿಷತ್ತಿನಲ್ಲಿ ಇಂಡೋಚಾಯನಾದ ವಿಷಯದಲ್ಲಿ ಸಂಧಾನವೃತ್ತಿಯಿಂದಲೇ ನಡೆದುಕೊಂಡ ಮೆಂಡೆಸ್ ಫ್ರಾನ್ಸ್ ಅವರು, ಭಾರತದ ವಿಷಯದಲ್ಲಿ ತಪ್ಪುಮಾರ್ಗದಿಂದ ನಡೆಯಲಿಕ್ಕಿಲ್ಲವೆಂದು ಯಾರೂ ಭಾವಿಸುವಂತಿದೆ. ಇದನ್ನು ಮೀರಿ, ಇನ್ನೊಬ್ಬರ ಮಾತಿನಂತೆ ನಡೆದು, ಭಾರತದಲ್ಲಿಯ ತುಂಡುಪ್ರದೇಶಗಳನ್ನು ಬಿಡದೆ ಹೋದರೆ, ಅವರು ಗುದ್ದಿಸಿಕೊಂಡೇ ಗಂಟುಗದರಿ ಕಟ್ಟಿಕೊಳ್ಳುವರೆಂಬುದು ಸಿದ್ಧವಾಗುವುದು. ಫ್ರೆಂಚ್ ಭಾರತಪ್ರದೇಶದಲ್ಲಿಯ ಪ್ರಜರು ಅದಕ್ಕೆ ಸಿದ್ಧರಾಗಿಯೆ ನಿಂತಿದ್ದಾರೆ.

ಇನ್ನು ಪೋರ್ತುಗೀಜರ ವಿಚಾರ: ತಾವೀಗ ಮಹಾಯುದ್ಧೋತ್ತರದ ಸ್ವತಂತ್ರ ವಾತಾವರಣದ ಜಗತ್ತಿನಲ್ಲಿ ಇದ್ದೇವೆಂಬ ಕಲ್ಪನೆಯೆ ಇವರಿಗಿಲ್ಲ. ಭಾರತವನ್ನು ಬಿಟ್ಟುಹೋಗಿರೆಂದರೆ ಬಾಯಿಗೆ ಬಂದಂತೆ ಹುಂಬತನದ ಮಾತುಗಳನ್ನು ಆಡುತ್ತಿದ್ದಾರೆ: ಗೋವೆಯು ಪೋರ್ತುಗಾಲಿನ ಅವಿಭಾಜ್ಯವಾದ ವಿಭಾಗವಂತೆ: ತಾವದನ್ನು ಎಂದೂ ಬಿಡಲಾರರಂತೆ. ಮಾತಿನಂತೆಯೆ ಕೃತಿಯನ್ನೂ ಅವರು ನಡೆಯಿಸಿದ್ದಾರೆ. ಭಾರತರಾಷ್ಟ್ರದ ಬೆಂಬಲದಿಂದಲೇ ಗೋವೆಗೆ ಬಹುಶಃ—ಎಂಬ ಮಾತನ್ನೆ ಅವರು ಮರೆತುಬಿಟ್ಟು, ಭಾರತರಾಷ್ಟ್ರದೊಂದಿಗೆ ಯುದ್ಧ-ಹೂಡಿ ಗೋವೆಯನ್ನು ಉಳುಹಿಕೊಳ್ಳಬೇಕೆಂಬ ಮೂಢಸಾಹಸಕ್ಕೆ ಕೈಹಾಕಿದ್ದಾರೆ. ದೂರ ನಿಂತು ಕಣ್ಣುಸನ್ನೆ ಮಾಡುವ ಭಾರತ ವಿರೋಧಿ-ವಿಘ್ನಸಂತೋಷಿಗಳ ಪ್ರಚೋದನೆಯು ಪೋರ್ತುಗೀಜರ ಈ ಮೂಢಸಾಹಸಕ್ಕೆ ಹೆಚ್ಚಿನ ಕಾರಣವಾಗಿರಲೂ ಬಹುದು. ಆದರೆ ಕೊರಿಯಾ, ಇಂಡೋಚಾಯನಾ ಯುದ್ಧಗಳಿಂದ ಪೋರ್ತುಗೀಜರೂ ಬುದ್ಧಿಯನ್ನು ಕಲಿಯಬೇಕಾಗಿತ್ತು. ದೂರನಿಂತು ಕಣ್ಣುಸನ್ನೆಮಾಡಿ ಪ್ರಚೋದಿಸುವವರಾರೂ, ಪ್ರಸಂಗ ಬಂದಾಗ ಪ್ರತ್ಯಕ್ಷಸಹಾಯವನ್ನು ಕೊಡಲು ಮುಂದೆಬರಲಾರರೆಂಬುದನ್ನು ಪೋರ್ತುಗೀಜರು ಗೊತ್ತುಮಾಡಿಕೊಳ್ಳಬೇಕಾಗಿತ್ತು.

ಸರಿ! ಪೋರ್ತುಗೀಜರು ಈಗ ಯುದ್ಧವನ್ನು ಯಾರೊಡನೆ ಮಾಡಬೇಕು? ತಮ್ಮದೆನಿಸಿಕೊಳ್ಳುವ ಪ್ರದೇಶದ ಪ್ರಜೆಗಳೊಡನೆ ಅಲ್ಲವೆ? ಪ್ರತಿಯೊಬ್ಬ ಪ್ರಜೆಯೂ ಇವರ ದುರಾಡಳಿತಕ್ಕೆ ಬೇಸತ್ತು ಸ್ವತಂತ್ರಭಾರತದ ಪ್ರಜೆಯಾಗಲು ಬಯಸುತ್ತಿದ್ದಾನೆ. ಹೀಗೆ ಬಯಸುವುದು ಆತನ ಜನ್ಮಸಿದ್ಧ ಹಕ್ಕು. ಏಕೆಂದರೆ, ಪೋರ್ತುಗೀಜ್ ಭಾರತದ ಪ್ರದೇಶವು ಭಾರತದ ಅವಿಭಾಜ್ಯವಿಭಾಗವಲ್ಲದೆ, ಪೋರ್ತುಗಾಲಿನದಲ್ಲ. ಈಗ ಅಲ್ಲಿಯ ಪ್ರಜೆಗಳ ಶ್ರದ್ಧೆ-ವಿಶ್ವಾಸಗಳು ಜಾಗೃತವಾಗಿ ಭಾರತದ ಕಡೆಗೆ ಹರಿಯುತ್ತಲಿವೆ. ಈ ನೈಸರ್ಗಿಕವಾದ ಭಾವಪ್ರವಾಹವನ್ನು ತಡೆಗಟ್ಟುವೆನೆಂದರೆ, ಅದು ಯಾರಿಗೂ ಸಾಧ್ಯವಿಲ್ಲ.

ಗೋವೆಯ ಪ್ರಜಾಜನವೆಂದರೆ ಭಾರತೀಯ ಪ್ರಜಾಕೋಟಿ-ಯಿಂದ ಅಭಿನ್ನರು. ಗೋವೆಯವರ ಕಷ್ಟ-ಕೋಟಲೆಗಳೆಂದರೆ ಭಾರತೀಯರ ಕಷ್ಟ-ಕೋಟಲೆಗಳೇ ಆಗಿವೆ. ಗೋವೆಯ ಜನತೆಗೆ ಪೋರ್ತುಗೀಜರಿಂದ ತೊಂದರೆಯೇನಾದರೂ ಉಂಟಾದಲ್ಲಿ, ಭಾರತದ ಜನತೆ ಅದನ್ನು ಎಂದೂ ಸಹಿಸದು. ತಮ್ಮ ಬಾಂಧವರಿಗೆ ಬೇಕಾದ ನೆರವನ್ನು ಕೊಟ್ಟು, ಅವರನ್ನು ಕಷ್ಟ-ಕೋಟಲೆಗಳಿಂದ ದೂರಮಾಡುವುದು ಭಾರತದ ಜನತೆಯ ಕರ್ತವ್ಯವೆ ಆಗಿದೆ. ಸ್ವತಂತ್ರ ಭಾರತದ ಬಲಿಷ್ಠ ಜನಶಕ್ತಿಯ ಮುಂದೆ, ಪೋರ್ತುಗೀಜರ ಮದ್ದು-ಗುಂಡಿನ ಆಟ ಎಷ್ಟು ದಿನ ನಡೆದೀತು?

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧ ಪಾಕ—ಮಿರಜೆಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೪೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭-೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರ ಪೇಟ

ಮು. ಪೋ. ಮಿರಜ

ನಾಡ ನಡೆ

*

ನೂತನ ಉಪಕುಲಪತಿಗಳು

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನೂತನ ಉಪಕುಲಪತಿಗಳ ಆಯ್ಕೆಯಾಯಿತು. ಶ್ರೀಮಾನ್ ಡಿ. ಸಿ. ಪಾವಟೆಯವರು ಬಹುಮತದಿಂದ ಆಯ್ಕೆಪಡೆದುಬಂದರು. ಶ್ರೀಮಾನ್ ಪಾವಟೆಯವರ ವ್ಯಕ್ತಿಮತ್ವವನ್ನೂ ಕರ್ನಾಟಕದ ಪ್ರೀತಿಯನ್ನೂ ಅರಿತ ನಮಗೆ, ಅವರು ಆಯ್ಕೆಪಡೆದುಬಂದುದು ತುಂಬ ಸಂತೋಷವನ್ನುಂಟು ಮಾಡಿದೆ.

ಉಪಕುಲಪತಿಸ್ಥಾನಕ್ಕಾಗಿ ಮೇಲಾಟವಿರುವುದು ಅಸ್ವಾಭಾವಿಕವೂ ಅಲ್ಲ; ಅನುಚಿತವೂ ಅಲ್ಲ. ಬಹುಮತದಿಂದ ಆಯ್ಕೆಪಡೆದು ಬಂದ ಮೇಲೆ, ಮೊದಲಿನ ಮೇಲಾಟದ ಮನೋಭಾವವನ್ನು ಮರೆತು, ಎಲ್ಲರೂ ಹೃತ್ಪೂರ್ವಕವಾಗಿ ಸಹಕರಿಸುವುದು ಮಹತ್ತ್ವದ ಸಂಗತಿಯಾಗಿದೆ. ಯಾವುದಾದರೊಂದು ಚುನಾವಣೆಯೊಂದಿಗೆ ಪಕ್ಷ-ಪಂಗಡಗಳು ತಲೆಯೆತ್ತಿನಿಂತು, ನಡೆಯಬೇಕಾದ ಕಾರ್ಯಗಳು ಸರಿಯಾಗಿ ನಡೆಯದಂತಹ ಪರಿಸ್ಥಿತಿಯುಂಟಾಗುವುದು, ನಮ್ಮ ನಾಡಿನಲ್ಲಿ ಒಂದು ರೂಢಿಯೆ ಬಿದ್ದಂತಾಗಿದೆ. ಆದರೆ ವಿಶ್ವವಿದ್ಯಾಲಯದಂತಹ ಸುಶಿಕ್ಷಿತರ ಸಂಬಂಧನೇ ಬರುವ ಚುನಾವಣೆಯು, ಅಂತಹ ಪರಿಸ್ಥಿತಿಯನ್ನು ಉಂಟುಮಾಡಬಾರದೆಂದು ನಮ್ಮ ಆಶೆ.

ಆರಿಸುವ ಮುಂದೆ ಯೋಗ್ಯವ್ಯಕ್ತಿಯೆಂದು ಆರಿಸುತ್ತೇವೆ; ಆದರೆ ಮುಂದೆ ಅವರಿಗೆ, ಜನತೆಯ ಔದಾಸೀನ್ಯ-ವಿರೋಧಗಳನ್ನು ಎದುರಿಸುವುದರಲ್ಲಿಯೆ ಸಮಯವನ್ನು ವ್ಯಯಮಾಡಬೇಕಾದ ಸಂದರ್ಭವಿದ್ದರೆ, ಯಾವ ಕರ್ತೃತ್ವಶಾಲಿ ವ್ಯಕ್ತಿಯ ಕೈಯಿಂದಲೂ ಯಾವ ಕೆಲಸವಾದೀತು?

ಕರ್ನಾಟಕ ವಿಶ್ವವಿದ್ಯಾಲಯವನ್ನು ಬೆಳಸಿ ಉಳಿಸುವುದು ಮಹತ್ತ್ವದ ಕಾರ್ಯ; ದೇಶಕ್ಕೆ ಅವಶ್ಯಕವಾದ ಕಾರ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕೀರ್ತಿ ಹೆಚ್ಚಿದರೆ, ಅಲ್ಲಿಂದ ಹೊರಬಿದ್ದ ಕನ್ನಡಿಗ ಪದವೀಧರರಿಗೆ ಭಾರತದಲ್ಲೆಲ್ಲ ಮಾನ-ಮರ್ಯಾದೆಯ ಸ್ಥಾನಗಳು ಸಿಕ್ಕಬಹುದು; ಅದು ರೋಗದ ಕೂಸಿನಂತೆ ರಿಣರಿಣಿಯೆನ್ನತೊಡಗಿದರೆ, ಆದರ ಪದವೀಧರರನ್ನು ಯಾರೂ ಕೇಳಲಾರರು. ಆದುದರಿಂದ, ಕನ್ನಡಿಗರೆಲ್ಲರೂ ಆತ್ಮೀಯತೆಯ ಅಭಿಮಾನದಿಂದ ಕರ್ನಾಟಕ ವಿಶ್ವವಿದ್ಯಾಲಯವನ್ನು ಪರಿಪುಷ್ಟಗೊಳಿಸಬೇಕು.

ಶಿಕ್ಷಣಕ್ಷೇತ್ರದಲ್ಲಿ ಯಶಸ್ವಿಯಾಗಿ ಕಾರ್ಯಮಾಡಿ ಹೆಸರುಗಳಿಸಿದ ಅನುಭವಿಕ ವಿದ್ಯಾವಂತರು, ಈಗ ಉಪಕುಲಪತಿಗಳಾಗಿ ಆಯ್ಕೆಪಡೆದಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಉನ್ನತಿಯ ಬಗೆಗೆ ತುಂಬ ಆಶೆಯಿಟ್ಟುಕೊಂಡವರು ಶ್ರೀಮಾನ್ ಪಾವಟೆಯವರು. ಕಾರ್ಯಮಾಡುವ ಉತ್ಸಾಹವೂ ಸಾಮರ್ಥ್ಯವೂ ಇವರಲ್ಲಿ ಸಾಕಷ್ಟಿವೆ. ಇವರ ಅಧಿಕಾರದ ಕಾಲ, ಕರ್ನಾಟಕ ವಿಶ್ವವಿದ್ಯಾಲಯದ ಸರ್ವತೋಮುಖ ಪ್ರಗತಿಗೆ ಸಾಧಕವಾಗಲೆಂದು ನಮ್ಮ ಹಾರಯಿಕೆ.

ಭಾರತದ ಸಮಂಜಸಧೋರಣ

ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಈಗ ಬೇಕಾಗಿರುವುದು ಶಾಂತಿ-ಸಮಾಧಾನಗಳ ಜೀವನವು. ಆದರೆ ಭಾರತವನ್ನುಳಿದು ಮಿಕ್ಕ ರಾಷ್ಟ್ರಗಳೆಲ್ಲವೂ ಅದರ ನೆಲೆಯನ್ನೇ ಕಾಣದೆ ಇವೆ. ದ್ವೇಷ, ಮತ್ಸರ, ಸ್ಪರ್ಧೆ, ಆಕ್ರಮಣವೃತ್ತಿ, ಸ್ವಾರ್ಥಸಾಧನೆ—ಇವುಗಳಿಂದಲೇ ಅವು ಶಾಂತಿಸಮಾಧಾನಗಳನ್ನು ಹುಡುಕುತ್ತಿವೆ; ಇವುಗಳಿಗೆ ಸಾಧನವಾಗಿ ಸೈನ್ಯ-ಶಸ್ತ್ರಾಸ್ತ್ರ ಮೊದಲಾದ ಹಿಂಸಾಶಕ್ತಿಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿವೆ. ಇಂತಹ ಹಿಂಸಾಶಕ್ತಿಯೆ ಕೊರಿಯಾ-ಇಂಡೋಚೀನಾಗಳಲ್ಲಿ ಕೈಚಳಕವನ್ನು ನಡೆಯಿಸಿ, ಆ ದೇಶಗಳ ಜನತೆಯ ಜೀವನವನ್ನೆಲ್ಲ ಹಾಳು ಮಾಡಿದೆಯಷ್ಟೇ ಅಲ್ಲ; ತನ್ನ ಪುರಸ್ಕರ್ತೃಗಳ ಮನೆಯನ್ನೂ ಮುರಿದುಬಿಟ್ಟಿದೆ.

ಭಾರತವು ಇದನ್ನು ತಡೆಯುವುದಕ್ಕಾಗಿ ಮೊದಲಿನಿಂದಲೂ ಎಚ್ಚರಿಕೆಕೊಡುತ್ತ ಬಂದಿತಾದರೂ, ಹಿಂಸಾಶಕ್ತಿಯ ಮದದಿಂದ ಅಂಧರಾದ ಯುದ್ಧಾಸಕ್ತ ಜನರು, ಇದರ ಮಾತನ್ನು ಕೇಳಲಿಲ್ಲ. ಕೊರಿಯಾ-ಇಂಡೋಚೀನಾಗಳ ನಿಷ್ಪಾಪಿಗಳಾದ ಜನಸಾಮಾನ್ಯರ ಬಾಳನ್ನು ಹಾಳು ಮಾಡಿದರು. ಇದರಿಂದ ಯಾರಿಗೂ ಸುಖ-ಸಮಾಧಾನಗಳು ಸಿಕ್ಕಲಿಲ್ಲವಷ್ಟೇ ಅಲ್ಲ; ಅಶಾಂತಿಯ ಅಗ್ನಿಯೇ ಪ್ರಜ್ವಲಿಸಿತು.

ಕೊರಿಯಾ ಯುದ್ಧವು ನಿಲ್ಲಲೂ ಭಾರತದ ಸಮಂಜಸ ರಾಜನೀತಿ ಕಾರಣವಾಯಿತು; ಈಗ ಇಂಡೋಚೀನಾದ ಯುದ್ಧಾಗ್ನಿ ತಣ್ಣಗೆ ಆಗುವುದಕ್ಕೂ ಭಾರತದ ಶಾಂತಿಪ್ರಯತ್ನದ ಅಮೃತ-ಸೇಚನವೇ ಕಾರಣವಾಯಿತು. ಇವೆರಡೂ ಪ್ರಯತ್ನಸಂದರ್ಭಗಳಿಂದ ಹೊರಬಿದ್ದ ಪರಿಣಾಮವನ್ನು ನೋಡಿದರೆ, ಜಗತ್ತಿನ ಬಹುಜನರಿಗೆ ಭಾರತದ ಮಾನವಧರ್ಮಪ್ರಧಾನವಾದ ಶಾಂತಿಮಯ ರಾಜಕಾರಣವೇ ರುಚಿಸುತ್ತದೆಂಬುದು ಗೊತ್ತಾಗುವುದು.

ಕೊರಿಯಾ ಯುದ್ಧವನ್ನು ಮುಗಿಸುವಾಗ, ತನ್ನ ತಲೆಯ ಮೇಲೆ ಹೊರಿಸಿದ ಹೊಣೆಯನ್ನು ಭಾರತವು ಯಶಸ್ವಿಯಾಗಿ ನಿರ್ವಹಿಸಿ, ರಾಷ್ಟ್ರ-ರಾಷ್ಟ್ರಗಳ ರಾಜಕಾರ್ಯವಿದರಿಂದ ಪ್ರಶಂಸೆಯನ್ನು ಪಡೆಯಿತು. ಈಗ ಇಂಡೋಚೀನದ ಯುದ್ಧಸಮಸ್ಯೆಗಳನ್ನೆಲ್ಲ ವಿಚಾರಿಸಿ ಬಿಡಿಸುವ ಹಿರಿಯತನದ ಹೊಣೆಗಾರಿಕೆಯೂ ಭಾರತದ ತಲೆಯಮೇಲೆ ಬಂದಿದೆ. ಇದನ್ನೂ ನಮ್ಮ ಹಿರಿಯ ನಾಯಕರು ಯಶಸ್ವಿಯಾಗಿ ನಿರ್ವಹಿಸುವರೆಂಬುದರಲ್ಲಿ ಸಂಶಯವಿಲ್ಲ.

ಪುರಾತನ ಮಹರ್ಷಿಗಳ ಕಾಲದಿಂದಲೂ ಭಾರತದ ಆದರ್ಶವು, ಲೋಕದಲ್ಲೆಲ್ಲ ಶಾಂತಿ-ಸಮಾಧಾನಗಳನ್ನು ಉಳಿಸಿ-ಬೆಳೆಸಬೇಕೆಂಬುದೇ ಆಗಿದೆ. ಮಹಾತ್ಮಾಜಿಯವರು ಈ ಆದರ್ಶವನ್ನೇ ಬೋಧಿಸಿ ಕಣ್ಮರೆಯಾದರು. ಭಾರತದ ಇಂದಿನ ನಾಯಕಮಣಿಗಳೂ ಅದೇ ಆದರ್ಶವನ್ನಿರಿಸಿಕೊಂಡು ತಮ್ಮ ರಾಜಕಾರ್ಯವನ್ನು ರೂಪಿಸುತ್ತ ಹೊರಟುದು, ಲೋಕಕಲ್ಯಾಣವನ್ನು ಸಾಧಿಸುವ ಸಮಂಜಸಸಾಧನವಾಗಿದೆಯೆಂಬುದನ್ನು ಯಾರೂ ಒಪ್ಪಬಹುದು.

ಪಾಕಿಸ್ತಾನದ ಅಸಮಂಜಸಧೋರಣ

ಲೋಕದಲ್ಲೆಲ್ಲ ಶಾಂತಿಯನ್ನು ಪ್ರಸ್ಥಾಪಿಸುವುದು ಭಾರತದ ನಾಯಕಮಣಿಗಳ ಗುರಿಯಾಗಿದ್ದರೆ, ಭಾರತಕ್ಕೆ ಹೇಗಾದರೂ ಮಾಡಿ ಅಡ್ಡಗಾಲು ಹಾಕಬೇಕೆಂಬುದು ಪಾಕಿಸ್ತಾನದ ನಾಯಕಮಣಿಗಳ ಗುರಿಯಾಗಿದೆ. ಪಾಕಿಸ್ತಾನದ ಸುಖ-ಸ್ವಾಸ್ಥ್ಯಗಳಿಗಿಂತ, ಅವರು ಭಾರತಕ್ಕೆ ವಿರೋಧವನ್ನು ಒಡ್ಡುವ ವಿಧ್ವಂಸಕ ವಿಚಾರವನ್ನೇ ಹೆಚ್ಚಾಗಿ ನಡೆಯಿಸಿದ್ದಾರೆ. ಇದಕ್ಕೆ ಹೊಸತಾದ ಉದಾಹರಣೆಯೆಂದರೆ, ಪೋರ್ತುಗೀಜರೊಡನೆ ಈಗ ಪಾಕಿಸ್ತಾನಿಗಳು ಇರಿಸಿಕೊಂಡಿರುವ ಸಹಕಾರಸಂಬಂಧ.

ನಿಜವಾಗಿ ನೋಡಿದರೆ, ಬ್ರಹ್ಮದೇಶವು ಭಾರತಕ್ಕೆ ಪಾಕಿಸ್ತಾನಕ್ಕಿಂತಲೂ ದೂರದ ಸಂಬಂಧಿ. ಅಲ್ಲಿಯ ಪತ್ರಿಕೆಗಳು ಭಾರತದಲ್ಲಿ ಇರುವ ಪೋರ್ತುಗೀಜರ ಆಡಳಿತವನ್ನು ಉಗ್ರವಾಗಿ ಖಂಡಿಸುತ್ತಲಿವೆ; ಇಷ್ಟೇ ಅಲ್ಲ, ಭಾರತಸರಕಾರಕ್ಕೆ—ಒತ್ತಾಯದಿಂದ ಪೋರ್ತುಗೀಜರನ್ನು ಹೊರಕ್ಕಟ್ಟಲು—ಸೂಚನೆ ಕೊಡುತ್ತಲಿವೆ. ಅದೇ–ಪಾಕಿಸ್ತಾನದ ಕೃತಿಯನ್ನು ನೋಡಬೇಕು; ಪೋರ್ತುಗೀಜ್ ಸೈನ್ಯ–ಸಾಮಗ್ರಿಯ ಹಡಗುಗಳಿಗೆ, ಕರಾಚಿಯ ಬಂದರದಲ್ಲಿ ನಿಂತು ಬೇಕಾದ ಸೌಕರ್ಯಗಳನ್ನೆಲ್ಲ ಪಡೆಯಲು ಅದು ಅವಕಾಶ ಕಲ್ಪಿಸಿಕೊಟ್ಟಿದೆ. ಪಾಕಿಸ್ತಾನಿಗಳ ಬೆನ್ನಹಿಂದೆ ನಿಂತ ಅಮೇರಿಕನ್ ರಾಜಕಾರಣಿಗಳೇ ಅದಕ್ಕೆ ಹೀಗೆ ಮಾಡಲು ಹೇಳಿರುವ ಸಂಭವವೂ ಇದೆ. ಅವರು ಹೇಳಿರದಿದ್ದರೂ ಪಾಕಿಸ್ತಾನಿಗಳಿಗಿದು ಬೇಕಾದ ಮಾತೇ ಆಗಿದೆ. ಏಕೆಂದರೆ ಭಾರತದ ಮೇಲೆ ಯಾರ ಕೈಯಿಂದಾದರೂ ಆಘಾತಬಿದ್ದರೆ ಸಾಕೆಂಬ ಹೀನ ಮನೋವೃತ್ತಿಯು ಅವರದು!

ಭಾರತವನ್ನು ಹೀಗೆ ಹೊಟ್ಟೆಕಿಚ್ಚಿನ ದೃಷ್ಟಿಯಿಂದ ನೋಡುವುದನ್ನು ಬಿಟ್ಟು, ಅದರೊಂದಿಗೆ ಸ್ನೇಹವನ್ನು ಬೆಳಸುವುದರಲ್ಲಿಯೆ ತಮ್ಮ ರಾಷ್ಟ್ರದ ಹಿತವಿದೆಯೆಂಬುದು, ಪಾಕಿಸ್ತಾನದ ಇಂದಿನ ರಾಜಕೀಯ ಸೂತ್ರಚಾಲಕರಲ್ಲಿ ಒಬ್ಬರಿಗೂ ಗೊತ್ತಾಗದಿದ್ದುದು ಆಶ್ಚರ್ಯದ ಸಂಗತಿ. ಇಂಗ್ಲಂಡಿನಂತಹ ಇಂಗ್ಲಂಡೂ ಇಂದು ಭಾರತದ ರಾಜಕೀಯ ಧೋರಣವನ್ನು ಪ್ರಶಂಸಿಸುತ್ತಲಿದೆ. ಭಾರತದೊಂದಿಗೆ ಮೊದ-ಮೊದಲು ವಿರೋಧಭಾವದಿಂದ ವರ್ತಿಸುತ್ತಿದ್ದ ಸಿಂಹಳದ ರಾಜಕಾರಣಿಗಳೂ, ಭಾರತದೊಂದಿಗೆ ಸ್ನೇಹವನ್ನು ಮಾಡಲು ಮುಂದೆ ಬರುತ್ತಲಿದ್ದಾರೆ. ಚೀನದಂತಹ ತೇಜಸ್ವಿಯಾದ ಮಹಾರಾಷ್ಟ್ರವೂ ಭಾರತದ ಕೂಡ ಸ್ನೇಹದಿಂದಿರಲು ಸಂತೋಷದಿಂದ ಒಪ್ಪಿಗೆ ಕೊಟ್ಟಿದೆ. ಈಗ ಲೋಕವೇ ಭಾರತದ ರಾಜನೀತಿಯ ಸಮಂಜಸತೆಯನ್ನು ಒಪ್ಪಿ ಭಾರತಕ್ಕೆ ಹಿರಿಯತನದ ಪಟ್ಟವನ್ನು ಕಟ್ಟಿದೆ. ಇದನ್ನು ನೋಡುತ್ತಿರುವ ಪಾಕಿಸ್ತಾನಿಗಳು, ತಮ್ಮ ಹೊಟ್ಟೆಕಿಚ್ಚಿನ ಹೀನಧೋರಣೆಯನ್ನು ಬಿಟ್ಟು, ನೆರೆಯ ರಾಷ್ಟ್ರದ ಸಮಂಜಸನೀತಿಯನ್ನು ಅನುಸರಿಸಿದರೆ, ಅವರಿಗೂ ಒಳ್ಳೆಯದು; ಭಾರತಕ್ಕೂ ಒಳ್ಳೆಯದು.

ಘಟಪ್ರಭೆಯು ಅನ್ನಪೂರ್ಣೆಯಾಗುವಳೆ?

ಘಟಪ್ರಭೆಯು ಹರಿದ ಪ್ರದೇಶವೆಲ್ಲ ಕಸುವಿನ ಕರಿಯ ನೆಲದಿಂದ ಕೂಡಿದ ಪ್ರದೇಶವಾಗಿರುವುದು. ನೆಲವು ಎಷ್ಟೇ ಕಸುವಾಗಿದ್ದರೇನು? ಅಲ್ಲಿ ಬೆಳಸು ಬೆಳೆಯಲು ನೀರಿನ ಅನುಕೂಲತೆ ಬೇಕಲ್ಲವೆ? ಕೊಂಕಣದಲ್ಲಿ ಹುಟ್ಟಿ ಹರಿಯುವ ಈ ನದಿಯು, ಮಳೆಗಾಲದಲ್ಲಿ ಸಮೃದ್ಧವಾದ ನೀರನ್ನು ತುಂಬಿಕೊಂಡು ಹೋಗುತ್ತಿದ್ದಿತಾದರೂ, ತೀರಪ್ರದೇಶದವರಿಗೆ ಅದರ ನೀರಿನ ಉಪಯೋಗವು ಸ್ವಲ್ಪವೂ ಆಗುತ್ತಿರಲಿಲ್ಲ. ಗೋಕಾಕದ ಬಳಿಯ ಕಣಿವೆಯೊಂದರಲ್ಲಿ ನೂಲುವ ಗಿರಣಿಯೊಂದನ್ನು ಸ್ಥಾಪಿಸಿದ ಇಂಗ್ಲಂಡಿನ ವ್ಯಾಪಾರಿ ಕಂಪನಿಯೊಂದರ ಉಪಯೋಗಕ್ಕಾಗಿ, ಹಲವು ವರ್ಷಗಳ ಹಿಂದೆಯೆ ಘಟಪ್ರಭೆಗೆ ಅಣೆಕಟ್ಟೊಂದನ್ನು ಕಟ್ಟಲಾಗಿದೆ. ಬ್ರಿಟಿಷರ ಆಡಳಿತದಲ್ಲಿ ಈ ಅಣೆಕಟ್ಟಿನ ಮುಖ್ಯ ಪ್ರಯೋಜನವೆಲ್ಲ ಗೋಕಾಕದ ಗಿರಣಿಗಳಿಗೇ ದೊರೆಯುತ್ತಿದ್ದಿತು. ವ್ಯರ್ಥವಾಗಬಹುದೆನಿಸಿದ ನೀರನ್ನು, ಹತ್ತಿಪ್ಪತ್ತು ಹಳ್ಳಿಗಳ ಭೂಮಿಗೆ ಮಾತ್ರ ಹಂಚುವ ವ್ಯವಸ್ಥೆಯಿತ್ತು. ಆಗಲೇ ಈ ನೀರು ಬಯಲು ಸೀಮೆಯ ಹೊಲಗಳಿಗೆಲ್ಲ ದೊರೆಯುವ ವ್ಯವಸ್ಥೆಯಾಗಿದ್ದರೆ, ಆ ಪ್ರದೇಶವು ಕನ್ನಡ ನಾಡಿನ ಧಾನ್ಯದ ಕಣಜವಾಗಿ ಪರಿಣಮಿಸಬಹುದಾಗಿತ್ತು.

ಇಂದು ಮುಂಬಯಿ ಸರಕಾರವು ಭಾರತ ಸರಕಾರದಿಂದ ಆರ್ಥಿಕ ಸಹಾಯವನ್ನು ಪಡೆದು, ಘಟಪ್ರಭೆಯ ಎಡದಂಡೆಯ ಪ್ರದೇಶದ ಭೂಮಿಗೆ ನೀರುದೊರೆಯುವ ವ್ಯವಸ್ಥೆಯನ್ನು ಮಾಡಲು ತೊಡಗಿದೆ. ಈ ಎಡದಂಡೆಯ ಕಾಲುವೆಯ ಕೆಲಸ ಪೂರ್ಣವಾದರೆ. ಬೆಳಗಾಂವಿ-ವಿಜಾಪುರ ಜಿಲ್ಲೆಗಳಿಗೆ ಸೇರಿದ ಕೃಷ್ಣಾ–ಘಟಪ್ರಭಾ ಮಧ್ಯಪ್ರದೇಶವೆಲ್ಲ ಸುಭಿಕ್ಷಪ್ರದೇಶವಾಗುವುದು

ಎಡದಂಡೆಯಂತೆಯೆ ಘಟಪ್ರಭೆಯ ಬಲದಂಡೆಯ ಭೂಮಿಗಳೂ ಕಸುವಿನವಾಗಿವೆ. ಮಳೆಯು ಸಕಾಲಕ್ಕಾಗದುದರಿಂದ, ಇಂತಹ ಭೂಮಿಯಿದ್ದೂ ಅಲ್ಲಿಯ ಜನರು ಬಡತನವನ್ನು ಅನುಭವಿಸಬೇಕಾಗಿ ಬಂದಿದೆ. ಕರ್ನಾಟಕದ ಜನರು ಈ ಬಲದಂಡೆಯ ಕಾಲುವೆಯ ಸಲುವಾಗಿ ಎಷ್ಟೊಂದು ಬೇಡಿಕೊಳ್ಳುತ್ತಿದ್ದರೂ, ಮುಂಬಯಿ ಸರಕಾರವು ಅವರ ಕೂಗನ್ನು ಲಕ್ಷ್ಯಕ್ಕೆ ತಾರದೆ, ಗುಜರಾತ, ಮಹಾರಾಷ್ಟ್ರಗಳಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಏರ್ಪಡಿಸಿ, ಅದಕ್ಕಾಗಿ ಹಣದ ಹೊಳೆಯನ್ನು ಹರಿಸುತ್ತಲಿದೆ

ಬಲದಂಡೆಯ ಕಾಲುವೆಯ ಯೋಜನೆಯಾಗುವ ವರೆಗೂ ಕನ್ನಡಿಗರು ಸುಮ್ಮನಿರಬಾರದು. ಅದಕ್ಕಾಗಿ ತೀಕ್ಷ್ಣವಾದ ಚಳವಳಿಯನ್ನು ನಡೆಯಿಸಿ ತಮ್ಮ ಬೇಡಿಕೆಯನ್ನು ಮಂಡಿಸಬೇಕು. ವ್ಯರ್ಥವಾಗಿ ಹರಿದುಹೋಗುವ ನೀರನ್ನು ಸದುಪಯೋಗ ಪಡಿಸಿಕೊಂಡು, ಘಟಪ್ರಭೆಗೆ ಅನ್ನಪೂರ್ಣೆಯೆಂಬ ಬಿರುದನ್ನು ತಂದುಕೊಡಬೇಕು.

ಹೀಗೂ ಇದ್ದೀತೇ?

(ಚಿಕ್ಕ ಕಥೆ)

ಶ್ರೀ. ' ಸಂಗಣ್ಣ ' ನಾವದಗಿ, ಮುದ್ದೇಬಿಹಾಳ

●

ಏಕೆ ಇದ್ದಿರಬಾರದು? ಲೋಕದಲ್ಲಿ ಹಾವು-ಚೇಳುಗಳೂ ಇರುವುವು; ಹೂ-ಹಣ್ಣುಗಳೂ ಇರುವುವು. ಲೋಕವೆಲ್ಲ ಹೂ-ಹಣ್ಣುಗಳಿಂದಲೆ ತುಂಬಿದ್ದರೆ, ಜೀವನದ ಹೋರಾಟವೆ ಇರುತ್ತಿರಲಿಲ್ಲ. ಜೀವನದ ಹೋರಾಟವಿಲ್ಲದೆ ಹೋಗಿದ್ದರೆ, ತಮ್ಮೊನಂತಹರ ಬಾಳು ಹೀಗೆ ಆಗುತ್ತಿರಲೂ ಇಲ್ಲ.

●

'ಡ್ಯೂಟಿ'ಯ ಮೇಲೆ ನನಗೆ ಭಟ್ಕಳಕ್ಕೆ ಹೋಗಬೇಕಾಗಿತ್ತು.

\+ \+ \+ \+

ಭಟ್ಕಳವನ್ನು ತಲ್ಪಿದಾಗ ಸಾಯಂಕಾಲ ೬ ಗಂಟೆಯಾಗಿತ್ತು.

ಬಸ್ಸಿನಿಂದಿಳಿದವನೇ ಮ್ಯುನಸಿಪಲ್ ಆಫೀಸಿಗೆ ಹೋದೆ. ಪ್ರೆಸಿಡೆಂಟ್' ಸಾಹೇಬರು ಮನೆಗೆ ಹೋಗುವ ಸಿದ್ಧತೆಯಲ್ಲಿದ್ದರು. ಅವರನ್ನು ಕಂಡು ನಾನು ಕೆಲಸವನ್ನು ವಿವರಿಸಿದೆ.

" ನಾಳೆ ಮಾಡಿಕೊಡುತ್ತೇನೆ " ಎಂದರು.

" ಆಗಲಿ. " ಎಂದೆ.

" ನಿಮ್ಮ ವಸತಿ ಎಲ್ಲಿ? "

" ಹೋಟೆಲಿನಲ್ಲಿ ಇಳಿದುಕೊಳ್ಳುತ್ತೇನೆ. " ಎಂದು ಹೇಳಿದೆ.

ಅವರು ಹೊರಟುಹೋದರು.

ಪೇಟೆಯನ್ನಾದರೂ ನೋಡೋಣವೆಂದು ಪೇಟೆಯ ಕಡೆಗೆ ತಿರುಗಿದೆ. ಎದುರಿಗೆ ಹೋಟೆಲೊಂದು ಕಾಣಿಸಿತು. ಒಳಹೊಕ್ಕೆ.

" ಏನು ಬೇಕ್ರಿ.... .. "

ಎಂದು ಕೊಂಕಣಿಯಲ್ಲಿ ಕೇಳುತ್ತ ಒಬ್ಬ ಹುಡುಗ ಬಂದ. ಚಹಕ್ಕೆ ಆರ್ಡರು ಕೊಟ್ಟು, ಅಲ್ಲಿಯೇ ಇದ್ದ ಪೇಪರನ್ನು ಎಳೆದುಕೊಂಡೆ. ಚಹ ಬಂದಿತು. ಗುಟುಕರಿಸಿದೆ.

ಬಿಲ್ಲು ಕೊಟ್ಟು ಹೊರಬಂದಾಗ ಬೀದಿಯಲ್ಲಿ ದೀಪಹತ್ತಿದ್ದುವು.

" ಇಲ್ಲಿ ಊಟಕ್ಕೆ ಹೋಟೆಲುಗಳು ಸಿಕ್ಕುತ್ತವೆಯೆ? "

ಎಂದು ಬೀದಿಯಲ್ಲಿ ಬೆಟ್ಟಿಯಾದವರನ್ನು ಕೇಳಿದೆ. ಒಬ್ಬರು 'ಈ ಕಡೆ ಹೋಗಿ' ಎಂದು ಕೈ ಮಾಡಿ ತೋರಿಸಿದರು. ಅವರು ಕೈಮಾಡಿ ತೋರಿಸಿದ ಕಡೆಗೆ ಕಾಲೆಳೆದುಕೊಂಡು ಹೊರಟೆ.

ಹೋಟೆಲೊಂದು ಸಿಕ್ಕಿತು.

" ಯಾರಿದ್ದೀರೀಽಽ........"

" ಯಾರು ? ಬರ್ರಿ........"

ಎಂದು ಗಡಿಬಿಡಿಯಿಂದ ಹೊರಗೆ ಓಡಿಬಂದರು—ಅವರೆ ಮನೆಯ ಯಜಮಾನರೆಂದು ಕಾಣುತ್ತದೆ.

" ನನಗೆ ಊಟ ಮಾಡಬೇಕಾಗಿದೆ...."

" ಓಹೋ....ಅವಶ್ಯವಾಗಿ—ಮೇಲೆ ಬನ್ನಿ! "

ಎಂದು ಸ್ವಾಗತಿಸಿದರು. ಮೇಲೆ ಹೋಗಿ ಒಂದು ಖುರ್ಚಿಯ ಮೇಲೆ ಕುಳಿತೆ.

" ನನಗೆ ಇಲ್ಲಿಯ ಊಟ ಸೇರುವುದಿಲ್ಲ. ತಾವು 'ಸ್ಪೇಶಲ್' ತಯಾರಿಸುತ್ತೀರಾ? ಚಾರ್ಜ ಹೆಚ್ಚಾದರೂ ಅಡ್ಡಿಯಿಲ್ಲ. "

" ಅವಶ್ಯವಾಗಿ....ತಾವು ಎಲ್ಲಿಯವರು ? ಈ ಜಿಲ್ಲೆಯವರು ಅಲ್ಲವೆಂದು ಕಾಣುತ್ತದೆ—ತಮ್ಮ ವೇಷಭೂಷಣಗಳ ಮೇಲಿಂದ ಹಾಗೂ ತಾವು ಮಾತನಾಡುವ ಕನ್ನಡಭಾಷೆಯ ಮೇಲಿಂದ! "

" ನಾನು ಬಿಜಾಪೂರ ಜಿಲ್ಲೆಯವನು. ಇಲ್ಲಿಯ ಮ್ಯುನಿಸಿಪಲ್ ಆಫೀಸಿನಲ್ಲಿ ಕೆಲಸವಿತ್ತು; ಅದಕ್ಕಾಗಿ ಬಂದಿದ್ದೆ. "

" ಒಳ್ಳೆಯದಾಯಿತು. ತಾವು ನಮ್ಮ ಜಿಲ್ಲೆಗೆ ಅವಶ್ಯವಾಗಿ ಬರಬೇಕು. ಇಲ್ಲಿಯ ಪ್ರಕೃತಿಸೌಂದರ್ಯವನ್ನು ಸವಿಯಲು ತಮ್ಮ ಎರಡು ಕಣ್ಣುಗಳೂ ಸಾಲವು. ನಮ್ಮ ಜಿಲ್ಲೆ ತಮಗೆ ಹೇಗೆನ್ನಿಸುತ್ತದೆ...."

" ತಾವು ಭಾಗ್ಯಶಾಲಿಗಳು. ಪ್ರಕೃತಿಮಾತೆಯ ಮಡಿಲಲ್ಲಿ ಬೆಳೆಯುತ್ತಿದ್ದೀರಿ. "

" ಏನೋ,........ತಾವು ಬಂದ ಕೆಲಸ ಮುಗಿಯಿತೇ? "

" ಇಲ್ಲ. ನಾಳೆಗೆ ಬಿತ್ತು. "

" ಪೇಪರನ್ನು ಓದುತ್ತಾ ಕುಳಿತಿರ್ರಿಽಽ........ಅರ್ಧ ತಾಸಿನಲ್ಲಿ ಅಡಿಗೆಯಾಗುತ್ತದೆ. "

ಎಂದು ಹೇಳಿ ಅವರು ಒಳಗೆ ಹೋದರು. ನಾನು ಪೇಪರನ್ನು ಓದುತ್ತ ಕುಳಿತೆ.

ಕೆಲವು ನಿಮಿಷಗಳಲ್ಲಿ ಅವರು ಹೊರಬಂದರು.

" ತಾವು ಕೆಲಸದ ಮೇಲಿದ್ದೀರಾಽಽ...."

" ಹೌ;—ಮ್ಯುನಸಿಪಲ್ ಆಫೀಸಿನಲ್ಲಿ ಕ್ಲಾರ್ಕ. "

" ಸಣ್ಣ ವಯಸ್ಸಿನಲ್ಲಿಯೇ ನೌಕರಿಗೆ ಹತ್ತಿದ್ದೀರಿ........

ನಾನು ಮಾತನಾಡಲಿಲ್ಲ. ಪೇಪರನ್ನು ಓದುತ್ತಿದ್ದೆ.

" ನೋಡಿ; ನಿಮ್ಮನ್ನು ನೋಡಿದ ಕೂಡಲೇ ನನ್ನ ಅಳಿಯನ ನೆನಪು ಬರುತ್ತದೆ...."

" ಯಾಕೆ, ನಿಮ್ಮ ಅಳಿಯ ನನ್ನ ಹಾಗೆಯೇ ಇದ್ದಾನೆಯೇ ?"

ಎಂದು ಪೇಪರನ್ನು ಕೆಳಗಿಟ್ಟು ಕೇಳಿದೆ.

" ಇದ್ದ ಸ್ವಾಮೀ ಇದ್ದ,....ಅವನು ಸತ್ತು ಬರುವ ದೀಪಾವಳಿಗೆ ಎರಡು ವರ್ಷಗಳಾಗುತ್ತವೆ. "

" ಪಾಪಽಽ .. ... "

" ಹದಿನಾರು ವಯಸ್ಸಿನ ಮಗಳಿದ್ದಾಳೆ. ಅವಳ ಹಣೆಯ ಬರೆಹ ಒಳ್ಳೆಯದಾಗಲಿಲ್ಲ. " ಎಂದು ಕಣ್ಣೀರು ತಂದರು.

" ವಿಧಿಯ ಲಿಖಿತಕ್ಕೆ ಯಾರೇನು ಮಾಡುತ್ತಾರೆ ಹೇಳಿ "

ಎಂದು ಒಣನಗೆಯನ್ನು ನಕ್ಕೆ. ಅವರು ಸುಮ್ಮನಾದರು. ವೇಳೆ ಸರಿಯುತ್ತಿತ್ತು.

" ಇಲ್ಲಿ ಮಲಗಲು ಸ್ಥಳ ಸಿಕ್ಕುತ್ತದೆಯೇ ? "

" ಇಲ್ಲಿಯೇ ವ್ಯವಸ್ಥೆ ಮಾಡುತ್ತೇನೆ. " ಎಂದರು. ನಾನು ಸುಮ್ಮನಾದೆ.

" ಅಪ್ಪಾ !....ಊಟಕ್ಕೆ ಎಬ್ಬಿಸು...."

ಒಳಗಿನಿಂದ ಧ್ವನಿಯೊಂದು ಬಂದಿತು.

" ಅಡಿಗೆಯಾಗಿದೆಯೇನಮ್ಮಾ?...."

" ಹೂ........"

" ಏಳಿ...." ಎಂದು ನನ್ನ ಕಡೆಗೆ ತಿರುಗಿದರು. ಎದ್ದೆ. ಕೈಕಾಲು ತೊಳೆದುಕೊಂಡು ಮಣೆಯ ಮೇಲೆ ಕುಳಿತೆ.

" ಪೇಟೆಯಲ್ಲಿ ಸ್ವಲ್ಪ ಕೆಲಸವಿದೆ, ಹೋಗಿ ಬರುತ್ತೇನೆ. ನೀವು ಊಟ ಮಾಡಿರಿ.. ...." ಎಂದು ನನಗೆ ಹೇಳಿ, ಹಿಂದಿರುಗಿ. " ಕಮ್ಮೂಽಽ....... ಊಟಕ್ಕೆ ಬಡಿಸು ......" ಎಂದು ಹೇಳಿದವರೇ ಅವರು ಹೊರಟು ಹೋದರು.

ನಾನು ಊಟಕ್ಕೆ ಕುಳಿತೆ.

" ತಾವು ಬಹಳ ಸಂಕೋಚಸ್ವಭಾವದವರೆಂದು ಕಾಣುತ್ತದೆ. ನಿಧಾನವಾಗಿ ಊಟಮಾಡಿರಿ........ "

ಚಪಾತಿ ನನ್ನ ತಾಟಿನಲ್ಲಿ ಬಿತ್ತು. ಮುಖ ಮೇಲಕ್ಕೆತ್ತಿದೆ.

ಹರಯದ ಹೊಸ್ತಿಲಲ್ಲಿ ಕಾಲನ್ನಿಕ್ಕುತ್ತಿರುವ ಹದಿನಾರು ವಯಸ್ಸಿನ ಯುವತಿಯು ನನ್ನ ಕಣ್ಣುಗಳನ್ನು ಕೋರೈಸಿದಳು.

ನನಗರಿಯದಂತೆಯೇ ಚಪಾತಿ ನನ್ನ ಹೊಟ್ಟೆಯೊಳಗೆ ಹೋಗಿತ್ತು.

" ಇನ್ನಷ್ಟು ಬಡಿಸಲೇ ? "

ಪುನಃ ಚಪಾತಿ ತಾಟಿನಲ್ಲಿ ಬಿತ್ತು. ನಾನು ಅವಳ ಕಡೆಗೆ ನೋಡಿದೆ. ನನ್ನನ್ನೇ ಎವೆಯಿಕ್ಕದೇ ನೋಡುತ್ತ ನಿಂತಿದ್ದಳು ಕಮ್ಮೂ.

" ಈ ಕಮ್ಮೂ ಯಾರು ? ಅವರ ಮಗಳಿರಬಹುದೇ ? ಛೇ ಅವರ ಮಗಳಿರಲಿಕ್ಕಿಲ್ಲ. ಅವರ ಮಗಳಿದ್ದರೆ ಹಣೆಯಲ್ಲಿ ಕುಂಕುಮವೇಕೇ ?

" ಈ ಕಮ್ಮೂ ಯಾರು ? ನನ್ನನ್ನು ಹೀಗೇಕೆ ನೋಡುತ್ತಾಳೆ...."

ನನ್ನ ಯೋಚನಾಚಕ್ರ ತಿರುಗುತ್ತಲೇ ಇತ್ತು.

" ತಾಟು ಬರಿಯದಾಗಿದ್ದರೂ ಸುಮ್ಮನೆ ಏಕೆ ಕುಳಿತಿದ್ದೀರಿ?.... ಅನ್ನ ಬಡಿಸಲೇ ? " ಎಂದು ಬಿನ್ನಾಣದಿಂದ ಕೇಳಿದಳು. ಕಮ್ಮೂ ಎಂಬ ಮಾಟಗಾತಿ. ನಾನು ಅವಳಿಗೆ ಮಾರುಹೋಗಿದ್ದೆ....ಅವಳ ಸೌಂದರ್ಯ ನನ್ನನ್ನು ಅಪಹರಿಸಿತ್ತು. ನಾನೊಬ್ಬ ಸಾಮಾನ್ಯ ತರುಣ. ಮನಃಸಂಯಮವನ್ನು ಕಂಡವನಲ್ಲ. ಅನ್ನವನ್ನು ಬಡಿಸಲಾಯಿತು

" ಸಾಕು. " ಎಂದುಸುರಿದೆ.

" ಎಷ್ಟು ದಾಕ್ಷಿಣ್ಯವಿದು !....ತೆಗೆಯಿರಿ ಕೈಯನ್ನು! ಹೋಟೆಲಿನಲ್ಲಿಯೂ ನಾಚುವುದೇ ? " ಎಂದು ನನ್ನ ಕೈಯನ್ನು ತನ್ನ ಎಡಗೈಯಿಂದ ಸರಿಸಿ, ಪುನಃ ಅನ್ನ ಬಡಿಸಿದಳು. ಅವಳ ಸ್ಪರ್ಶವಾದ ಕೂಡಲೆ ನನ್ನ ಶರೀರದಲ್ಲಿ ವಿದ್ಯುತ್ಪ್ರವಾಹ ಹರಿದಂತಾಯಿತು. ನನ್ನನ್ನು ನಾನೇ ಮರೆತೆ. ಒಂದು ಕ್ಷಣ ಅವಳನ್ನೇ ನೋಡಿದೆ. ಒಂದು ಕಿರುನಗೆ ನಕ್ಕು ಓಡಿಹೋದಳು....ನನ್ನ ಮನವನ್ನಪಹರಿಸಿದ್ದ ಹರಿಣಾಕ್ಷಿ.

ಊಟ ಮುಗಿಸಿ ಹೊರಬಂದಾಗ, ಕೈಗಡಿಯಾರದಲ್ಲಿ ರಾತ್ರಿ ೧೦ ಗಂಟೆಯಾಗಿತ್ತು. ಸಿಗರೇಟೊಂದನ್ನು ಹೊತ್ತಿಸಿ ಕುಳಿತೆ.

ಅಷ್ಟರಲ್ಲಿ ಕಮ್ಮೂನ ತಂದೆಯವರು ಬಂದರು.

" ಊಟವಾಯಿತೇ.... ...ಸಣ್ಣ ಹುಡುಗಿ....ಬಹಳ ನಾಚುತ್ತಾಳೆ....ತಾವು ಬೇಡಿ ಹಾಕಿಸಿಕೊಂಡಿರಲ್ಲವೇ ?....ನನಗೆ ಅಗತ್ಯವಾದ ಕೆಲಸ ವಿದ್ದುದರಿಂದ, ಹೋಗಲೇ ಬೇಕಾಯಿತು....ಕ್ಷಮಿಸಿ! "

" ಚೆನ್ನಾಗಿ ಊಟಮಾಡಿದೆ....ನಿಮ್ಮ ಆತಿಥ್ಯಕ್ಕೆ ಋಣಿಯಾಗಿದ್ದೇನೆ ...ನನಗೆ ಇಂದು ಆಯಾಸವಾಗಿದೆ. ಮಲಗಲು ಕೊಠಡಿಯಿದೆಯೇ ? " ಎಂದು ಕೇಳಿದೆ.

" ಈ ಕೊಠಡಿ ತೆರವಾಗಿಯೇ ಇದೆ....ಲೇ ಕಮ್ಮೂಽ....ಹಾಸಿಗೆ ಹಾಸಿದೆಯೇನೇಽಽ......." ಎಂದು ಮಗಳನ್ನು ಕೂಗಿದರು. ಒಳಗಿಂದ 'ಹೂ' ಎಂದು ಉತ್ತರ ಬಂದಿತು.

" ಆಯಾಸ ಪರಿಹರಿಸಿಕೊಳ್ಳಿ, ನಾನೂ ಊಟ ಮಾಡುತ್ತೇನೆ.'

ಎಂದು ಎದ್ದು ಒಳಗೆ ಹೋದರು.

ನಾನು ಕೊಠಡಿಯನ್ನು ಪ್ರವೇಶಿಸಿದೆ.

ಹಾಸಿಗೆಯಲ್ಲುರುಳುವುದೇ ತಡ ನಿದ್ರೆ ಆವರಿಸಿತು ನನ್ನನ್ನು

× × × ×

ನನಗೆ ಥಟ್ಟನೇ ಎಚ್ಚರವಾಯಿತು. ಪಕ್ಕಕ್ಕೆ ಹೊರಳಿದೆ. ನನ್ನ ಹೃದಯನ್ನಪಹರಿಸಿದ್ದ ಕಮ್ಮೂ, ನನ್ನ ಹಾಸಿಗೆಯಲ್ಲಿ. ನನಗೆ ಆಶ್ಚರ್ಯವಾಯಿತು. ಎದ್ದು ದೀಪ ಹತ್ತಿಸಿದೆ.

" ಈ ಕಮ್ಮೂ ಯಾರು ? ಈಗ ನನ್ನ ಹಾಸಿಗೆಯಲ್ಲಿ ಏಕೆ ! ಅವಳೇ ಏಕೆ ಊಟಕ್ಕೆ ಬಡಿಸಿದಳು? ಬಡಿಸುವ ಮುಂದೆ ಎಷ್ಟು ಸಂ ನಕ್ಕಳು? ಈ ಮನೆ ಯಾರದು ? ಇದೊಂದು ಸೂ....ಯ ಮನೆಯೇ ? ನೋಡಿದರೆ ಎಷ್ಟು ಸುಸಂಸ್ಕೃತರೆಂದು ಕಾಣುತ್ತಾ ರಲ್ಲಾ ?........"

ಪ್ರಶ್ನೆಗಳ ಸಿವುಡೊಂದು ಬಂದು ನನ್ನ ಮುಂದೆ ಬಿತ್ತು ಬಾಗಿಲು ಕಡೆ ನೋಡಿದೆ. ಬಾಗಿಲಿಗೆ ಒಳಚಿಲಕ ಹಾಕಿತ್ತು.

" ಇವಳು ಇಲ್ಲಿ ಹೇಗೆ ಬಂದಳು ? "

ಸುತ್ತಲೂ ನೋಡಿದೆ. ಆ ಕೊಠಡಿಗೆ ಒಳಗಿನಿಂದ ಇನ್ನೊಂದ ಬಾಗಿಲವಿತ್ತು.

ಅವಳಿಗೆ ಎಚ್ಚರವಾಯಿತು. ಪಕ್ಕಕ್ಕೆ ಹೊರಳಿ ಅರೆತೆರೆ ನೋಟದಿಂದ ನನ್ನನ್ನೇ ನೋಡಿದಳು.

" ಕಮ್ಮೂಽ.... ನೀನು ಇಲ್ಲಿ ಯಾಕೆ ? "

ಸಿಟ್ಟಿನಲ್ಲಿಯೇ ಕೇಳಿದೆ. ಕಮ್ಮೂನ ಮುಖವನ್ನು ಭಯವು ಆವರಿಸಿತ್ತು.

ಕಮ್ಮೂ ಮೌನವಾಗಿದ್ದಳು.

" ಕಮ್ಮೂ....ಮಾತನಾಡು........"

ಈಗಲೂ ಮೌನ.

" ಮಾತನಾಡುವುದಿಲ್ಲವೇ ? "

ಮತ್ತೂ ಮೌನ.

" ಮಾತನಾಡಲಿಕ್ಕೆ ನಿನಗೇನಾಗಿದೆ? ನೀನು ಯಾರು? ಇದೊಂದು ಸೂ....ಯರ ಮನೆಯೇ?"

ನನಗೆ ಮಿತಿಮೀರಿ ಕೋಪಬಂದಿತ್ತು. ಈ ಸಲವೂ ಅವಳು ಮೌನಿಯಾಗಿದ್ದಳು. ನನ್ನ ಸಿಟ್ಟು ಎಲ್ಲೆ ಮೀರಿತು.

" ಥೂ, ಹೇಸಿ ಜೀವನ...."

ಅವಳನ್ನು ಒದ್ದೆ. ಜೋಲಿ ತಡೆಯಲಾರದೆ ಅವಳು ಬಿದ್ದುಬಿಟ್ಟಳು. ಹಣೆಗೆ ಬಾಗಿಲು ಬಡಿಯಿತು. ರಕ್ತ ಚಿಮ್ಮಿತು. ರಕ್ತ ಚಿಮ್ಮಿದ ಕೂಡಲೇ ನನ್ನಲ್ಲಿದ್ದ ಸಿಟ್ಟು ಎಲ್ಲಿ ಹೋಯಿತೋ ನಾನರಿಯೆ.

ನನ್ನ ಕರವಸ್ತ್ರದಿಂದ ಹಣೆಯನ್ನು ಬಿಗಿದೆ. ಕಮ್ಮೂ ವಿಲಕ್ಷಣ ನೋಟದಿಂದ ನನ್ನ ಕಡೆಗೊಮ್ಮೆ ನೋಡಿದಳು.

" ಪೆಟ್ಟು ಬಹಳ ಹತ್ತಿತೇ?"

" ಇಲ್ಲ.......ನಾನು ಪಾಪಿ, ನನ್ನನ್ನು ಕ್ಷಮಿಸಿರಿ....'' ಎಂದು ಪಾದಗಳ ಮೇಲೆ ಬಿದ್ದಳು.

" ಕಮ್ಮೂ....ನನಗೊಂದೂ ತಿಳಿಯದಲ್ಲಾ! ಬರುಬರುತ್ತ ನೀನು ಸಮಸ್ಯೆಗಳ ಮೂರ್ತಿಯೇ ಆಗುತ್ತಿರುವಿ....ಬಿಡಿಸಿ ಹೇಳ ಬಾರದೇ ನೀನು ಯಾರು—ಎಂದು?" ಕಮ್ಮೂನ ಮುಖವನ್ನು ಮೇಲಕ್ಕೆತ್ತಿದೆ.

" ಈ ಪಾಪಿಯ ಜೀವನವನ್ನು ಏನು ಕೇಳುತ್ತೀರಿ....ಈ ಮನೆಯೊಂದು ನರಕದ ಕುಂಡ......."

ಅವಳು ರೋದಿಸಹತ್ತಿದಳು.

" ಹೇಳು ಕಮ್ಮೂ, ಹೇಳು.......''

ಪುನಃ ನನ್ನ ಕಡೆಗೊಮ್ಮೆ ನೋಡಿದಳು. ಆ ನೋಟದಲ್ಲಿ 'ಕೇಳುತ್ತೀರಾ?' ಎಂಬ ಭಾವವಿತ್ತು.

ಅವಳು ಹೇಳಲು ಮೊದಲು ಮಾಡಿದಳು:

"........ಈ ಮನೆಯೊಂದು ನರಕದ ಕುಂಡವೆಂದು ಹೇಳಿದೆನಲ್ಲವೇ, ಈ ಕುಂಡದ ಸೂತ್ರ ನಾನು. ಈ ಸೂತ್ರದಿಂದ ತಂದೆ ಆಟವಾಡಿಸುತ್ತಲಿದ್ದಾನೆ. ದೇವರು ನನ್ನ ಹಣೆಯಬರಹದಲ್ಲಿ ಒಳ್ಳೆಯದನ್ನು ಬರೆದಿಲ್ಲ. ನಾನು ಇನ್ನೂ ಎಷ್ಟೆಷ್ಟು ಪಾಪಕಾರ್ಯಗಳನ್ನು ಮಾಡಬೇಕಾಗಿದೆಯೋ........"

ಕಮ್ಮೂ ಮುಖ ಚಿಕ್ಕದು ಮಾಡಿದಳು.

" ಕಮ್ಮೂ, ಹೇಳು ...."

ಕಮ್ಮೂ ಹೇಳಹತ್ತಿದಳು:

" ... ತಂದೆ-ತಾಯಿಗಳಿಗೆ ಬಹಳ ಅಚ್ಚುಮೆಚ್ಚಿನ ಮಗಳಾಗಿ ಬೆಳೆದೆ. ನನಗಾಗ ಆರು ವರ್ಷ. ಸ್ಕೂಲಿಗೆ ಹಾಕಿದರು. ಇಂಗ್ಲಿಷು ಆರನೆಯ ಕ್ಲಾಸಿನವರೆಗೂ ನಾನು ಸುಖದಿಂದ ಇದ್ದೆ. ಈಗ ಮೂರು ವರುಷಗಳ ಹಿಂದೆ ನನ್ನನ್ನು ನೋಡಲಿಕ್ಕೆ ಬಂದರು. 'ವರ' ನನ್ನ ಮನಸ್ಸಿಗೆ ಬಂದ. ಅವನನ್ನು ನೋಡಿ ಏನೇನೋ ಕನಸ್ಸುಗಳನ್ನು ಕಟ್ಟಿದ್ದೆ. ಅವನೂ ನನ್ನನ್ನು ಒಪ್ಪಿದ. ಶ್ರೀಮಂತರ ಮಗ. ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲವೆಂದೆನಿಸಿತು. ಮುಂದೆ ಎರಡು ತಿಂಗಳುಗಳಲ್ಲಿಯೇ ನನ್ನ ಲಗ್ನ ಅವರೊಡನೆ ಆಯಿತು. ನಿಮ್ಮನ್ನು ನೋಡಿದರೆ ಅವರ ನೆನಪೇ ಆಗುತ್ತದೆ. ಮೊದಲನೆಯ ಸಲ ಅವರ ಮನೆಗೆ ಹೋಗಿ ಬಂದೆ. ಎರಡು-ಮೂರು ತಿಂಗಳುಗಳಾಗಿರಬಹುದು. ಅವರು ನನ್ನನ್ನು ಕರೆಯಲು ಬಂದರು. ಅವರು ಮನೆಯನ್ನು ಪ್ರವೇಶಿಸಿದ್ದು ಕೆಟ್ಟ ವೇಳೆಯಲ್ಲಿ.

ನಮ್ಮ ಮನೆತನದಲ್ಲಿ ಒಂದು ಸಂಪ್ರದಾಯವಿದೆ. ಮನೆಯ ಅಳಿಯರಿಗೆಲ್ಲ 'ಮದ್ದು' ಹಾಕಿ ಸಾಯಿಸುವುದು; ಅವರ ಆಸ್ತಿಯನ್ನು ಎತ್ತಿ ಹಾಕುವುದು. ಪುನಃ ಯಾರನ್ನಾದರೂ ಮದುವೆ ಮಾಡಿಕೊಳ್ಳುವುದು. ನನ್ನ ತಂದೆ-ತಂದೆಯೆಂದು ಹೇಳಿಕೊಳ್ಳಲೂ ಮನಸ್ಸು ಬರುವುದಿಲ್ಲ. ಈ ವಿಷಯ ನನ್ನೆದುರಿಗೆ ಹೇಳಿದರು. ನಾನು ಪ್ರತಿಭಟಿಸಿದೆ. ನೀವೇ ಹೇಳಿ, ಮದ್ದು ಹಾಕಿ ಕೈಹಿಡಿದ ಗಂಡನನ್ನು ಯಾವ ಸತಿಯು ಕೊಲ್ಲುತ್ತಾಳೆ? ಆದರೆ ತಂದೆ ಕೇಳಲಿಲ್ಲ. ನಾನೂ ಕೇಳಲಿಲ್ಲ. ಆ ದಿನ ನನಗರಿಯದಂತೆ ನನ್ನ ಪತಿಗೆ ಮದ್ದು ಹಾಕಿದರು. ಸಾಯುವ ಮುಂಚೆ ಅವರು ವಿಲಿ ವಿಲಿ ಒದ್ದಾಡಿ ಪ್ರಾಣಬಿಟ್ಟರು. ಅವರು ಪಡುವ ಸಂಕಟವನ್ನು ನನ್ನಿಂದ ನೋಡುವುದಾಗಲಿಲ್ಲ. ತಂದೆಯ ಮುಂದೆ ಅತ್ತೆ; ಕರೆದೆ; ಆದರೆ ಎಲ್ಲವೂ ಕೈಮೀರಿ ಹೋಗಿತ್ತು. ಲಗ್ನವಾದ ವರ್ಷದಲ್ಲಿಯೇ ವಿಧವೆಯಾದೆ. ಅಂದಿನಿಂದ ನನ್ನ ಜೀವನ ಬದಲಾಯಿತು. ನನ್ನ ಆಸ್ತಿಗೆ ನನ್ನ ತಂದೆ ಕೈಹಾಕಿದ. ನ್ಯಾಯ ಹೂಡಿದ. 'ನ್ಯಾಯ' ಇನ್ನೂ ಮುಗಿದಿಲ್ಲ 'ಹಾಯ್‌ಕೋರ್ಟ್'ಗೆ ಹೋಗಿದೆ. ನನಗೆ ಯಾವುದರಲ್ಲಿಯೂ ಆಸಕ್ತಿಯಿಲ್ಲ. ತಂದೆಯ ಕೈಯಲ್ಲಿ ಯಂತ್ರದ ಬೊಂಬೆಯಾಗಿದ್ದೇನೆ. ಅವನು ಕುಣಿಸಿದಂತೆ ಕುಣಿಯುತ್ತೇನೆ. ಈ ಹೋಟಲೊಂದು ನೆಪವಾಗಿದೆ. ಊಟಕ್ಕೆ ಬಂದವರಿಗೆಲ್ಲ ಸೌಮ್ಯ ರೀತಿಯಲ್ಲಿ ಮದ್ದು ಹಾಕಿ ಅವರಲ್ಲಿ ಇದ್ದದ್ದನ್ನೆಲ್ಲಾ ದೋಚಿಕೊಳ್ಳುವುದು. ಈ ದಿನ ನಿಮಗೂ 'ಮದ್ದು' ಹಾಕಲು ಹೇಳಿದರು. ನೀವು ನನ್ನ 'ಅವರಂತೆ' ಯೆ ಇದ್ದುದ್ದರಿಂದ, ಅವರ ನೆನಪಾಗಿ ನಿಮಗೆ ಮದ್ದು ಹಾಕಲಿಲ್ಲ. ತಂದೆಯು ಕೇಳಿದನು. 'ಹಾಕಿದೆ' ಎಂದು ಸುಳ್ಳು ಹೇಳಿದೆ........ನನಗೆ ಇಲ್ಲಿರಲು ಮನಸ್ಸೇ ಇಲ್ಲ. ನಿಮ್ಮಲ್ಲಿಗೆ ಕರೆದುಕೊಂಡು ಹೋಗಿರಿ. ಎಲ್ಲಿಯಾದರೂ ಕೂಲಿಯನ್ನು ಮಾಡಿಕೊಂಡು ಜೀವಿಸುತ್ತೇನೆ. ಈ ಹೇಸಿ ಬಾಳ್ವೆ ಬೇಸರವಾಗಿದೆ ..."

ಅವಳು ರೋದಿಸುತ್ತಿದ್ದಳು. ನಾನು ಮೂಕನಾಗಿದ್ದೆ.

" ನೀವು ಹೇಳಿದಂತೆ ಇದು ಸೂ....ಯರ ಮನೆಯಲ್ಲ, ಮನೆತನಸ್ಥರ ಮನೆ ಇದು. ಮನೆತನಸ್ಥರ ಮನೆಯಲ್ಲಿಯೂ ಇಂಥ ಸಂಪ್ರದಾಯಗಳು ..."

'' ಕಮ್ಮೂ....ಮನಸ್ಸಿಗೆ ಹೆಚ್ಚು ತ್ರಾಸ ಮಾಡಿಕೊಳ್ಳಬೇಡ." ಕಮ್ಮೂನ ತಲೆಯ ಮೇಲೆ ಕೈಯಿಟ್ಟೆ.

" ನನ್ನನ್ನು ಕರೆದುಕೊಂಡು ಹೋಗಿರಿ.........ಎಲ್ಲಿಯಾದರೂ ದಾಸಿಯಾಗಿ ನಿಲ್ಲುತ್ತೇನೆ "

" ಕಮ್ಮೂ.... ...."

ಕಮ್ಮೂ ದುಃಖಿಸುತ್ತಿದ್ದಳು.

× × × ×

ಆ ದಾಸಿಯನ್ನು ಕರೆದುಕೊಂಡು ಬರಲು ಆಗಲೇ ಇಲ್ಲ.

ಸಗ್ಗವನು ಬುವಿಗೆಳೆದು ತಾ!

ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು

ಕಣ್ಣು ಮುಚ್ಚುತಿ ಕನಸು ಕಟ್ಟುವ
ಹೊನ್ನ ಸಗ್ಗವು ಇರಲಿ, ಬಾ!
ಮಣ್ಣ ಮಕ್ಕಳು' ಮಣ್ಣು ಮುಕ್ಕುತ
ಬನ್ನಗೊಂಡಿಹರಿಲ್ಲಿ ಬಾ!
ಕಣ್ಣಿಯನು ಕಡಿದೊಗೆವ ಬಾ!
ನನ್ನಿ ಸೊಗವನು ತೆರೆವ ಬಾ! ೧

ಕನಸಿನಾಚೆಯು, ಬಾಳಿನಾಚೆಯು,
ಸಗ್ಗಮಾಡವು ಇರಲಿ, ಬಾ!
ನನ್ನಿ ಇದ್ದರು ಇರಲಿ;—ಬಿಡುತದ
ತ್ಯಾಗದಲಿ ತೊರೆದೆಲ್ಲ ಬಾ!
ತ್ಯಾಗದಲಿ ಶಿವನಿಹನು ಬಾ!
ತ್ಯಾಗಕೊಲಿವನು ಅವನು ಬಾ! ೨

ನಿನ್ನ ಸೊಗವನು ನೀನು ಗಳಿಸಲು
ಬಾಳಿಗೇನಿದೆ ಸಾರ್ಥಕತೆ?
ತೊಳಲುತಿರೆ ಒಡಹುಟ್ಟಿದವರ್ಗಳು,
ಬಗೆಗೆ ಎತ್ತಣ ಶಾಂತತೆ?
ಕರ್ಮರಂಗಕೆ ಧುಮುಕು ಬಾ!
ಎಲ್ಲರೊಳ್ಪನು ಗೆಲ್ಲು ಬಾ! ೩

ಹಗೆಯು, ಬಡತನ, ದಾಸ್ಯತೆಯು ರಣ,—
ಅಜ್ಞತೆಯು ಎದೆನೆತ್ತರ
ಶೋಷಿಸಿರುವುವು ಎಲ್ಲರೊಡಲೊಳು
ಬಾಳು ಶೂನ್ಯವು ಬಿತ್ತರ!
ಜೀವ-ರಸ'ವನು ತುಂಬು ಬಾ!
ಅಮೃತ ದ್ರವವನು ಸುರಿಸು ಬಾ! ೪

ಪ್ರೇಮ, ಶಾಂತಿ...,
ಜಗವನಾಳಲು ದುಡಿವ ಬಾ!
ಜಗದ ಸೊಗವನು ಗಳಿಸೆ, ಅದರುಪ-
ಫಲವು ನಿನ್ನಯ ಸೊಗವು ಬಾ!
ಅದನು ಗಳಿಸಲು ದುಡಿವ ಬಾ!
ತ್ಯಾಗವೇ ನಿಜ ಸೊಗವು ಬಾ! ೫

ಒಂದೆ ಜೀವಿಯು ತೊಳಲುತಿದ್ದರು,
ಸೊಗವು ಕನಸಿನ ಗಂಟದು;
ಅದರ ಶಾಪದ ಸುಯ್ಲು ತಟ್ಟಲು,
ನೆಮ್ಮದಿಯು ಅದು ಅಂಟದು!
ರಣವ ತಡೆ; ಹಗೆ ಕಳೆವ ಬಾ!
ಜಗದ ದುಃಖವ ಅಳಿವ ಬಾ! ೬

ಪ್ರೇಮ-ಮಂತ್ರವ ಮೊಳಗು, ಜಗದೆದೆ
ಪ್ರೇಮದಾಗರವಾಗಲು;
ಭಕ್ತಿ ಕುಡಿಯಿದೆ; ಸತ್ತ್ವಬೇರಿಡೆ;
ಸಗ್ಗ-ಸುಖ ಬುವಿಗಾಗಲು:
ದುಃಖ ಸಾಗಲು, ಬಾಡಲು;
ಸಮತೆ, ಸುಖ—ಹಿಂದಾಗಲು! ೭

ಸಗ್ಗವಿರುವುದೆ ಎಲ್ಲೊ ದೂರದಿ?
ಇಳೆಯು ಸಗ್ಗವ ಗೈವ ಬಾ!
ನಮ್ಮ ನಾಡೇ ನಮಗೆ ಸಗ್ಗವು;
ಸಗ್ಗಕೂ ಮಿಗಿಲ್ :—ಅರಿಯ ಬಾ!
ಸಗ್ಗದಾಸೆಯ ತೊರೆದು ಬಾ!
ಸಗ್ಗವನು ಬುವಿಗೆಳೆದು ತಾ! ೮

ತೆಲುಗು ಸಾಹಿತ್ಯದಲ್ಲಿ

ಶ್ರೀ. ವೀರೇಶಲಿಂಗಂ ಪಂತುಲು

ಶ್ರೀ ಪಿ. ವೆಂಕೋಬಾಚಾರ್ಯರು ಬಿ. ಎ., ಬಿ. ಟಿ. ಹುಬ್ಬಳ್ಳಿ

●

‘ ಸಾಹಿತ್ತಿಕನ ಲೆಕ್ಕಣಿಕೆಯೆ ನಾಡಿನ ಜನತೆಯಲ್ಲಿ ಜೀವವನ್ನು ತುಂಬುತ್ತದೆ ’ ಎಂಬ ಮಾತಿಗೆ ಪ್ರತ್ಯಕ್ಷ ನಿದರ್ಶನವಾಗಿ ನಿಂತವರೆಂದರೆ ದಿವಂಗತ ವೀರೇಶಲಿಂಗಂ ಪಂತುಲು ಅವರು. ಇಂದಿನ ಆಂಧ್ರಜನತೆಯ ಪೌರುಷಜೀವನಕ್ಕೆ ಪಂತುಲು ಅವರ ಕೃಷಿಯೆ ಕಾರಣವೆನಿಸುವಂತಿದೆ.

●

ದಿವಂಗತ ಕಂದುಕೂರಿ ವಿರೇಶಲಿಂಗಂ ಪಂತುಲು, ಪಂಡಿತರ ಮನೆತನಕ್ಕೆ ಸೇರಿದವರು. ಇವರು ಜನ್ಮ ತಾಳಿದುದು ೧೯ನೆಯ ಶತಮಾನದ ಮಧ್ಯಕಾಲದಲ್ಲಿ. ಜಗದ್ವಿಖ್ಯಾತರಾದ ರಾಜಾರಾಮ ಮೋಹನರಾಯ ಮತ್ತು ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಮುಂತಾದವರ ಹಿರಿಯತನದಲ್ಲಿ ಆರಂಭವಾದ ಸಮಾಜಸುಧಾರಣಾ ಆಂದೋಲನವು, ಬ್ರಹ್ಮಸಮಾಜವೆಂಬ ನೂತನ ತತ್ತ್ವಜ್ಞಾನ ಸಂಸ್ಥೆಯ ಸ್ಥಾಪನೆಯಲ್ಲಿ ಮುಂದಡಿ ಇಡುತ್ತಿತ್ತು. ಉತ್ತರ ಹಿಂದುಸ್ಥಾನದಲ್ಲಿ ಈ ಸಮಾಜವನ್ನು ಅನೇಕರು ಸೇರಿ, ಆತ್ಮೋನ್ನತಿಯನ್ನು ಪಡೆಯುತ್ತಿದ್ದರು. ನೀತಿಮಾರ್ಗವನ್ನನುಸರಿಸಿ, ಜೀವನವನ್ನು ಅತ್ಯಂತ ಪ್ರಾಮಾಣಿಕರೀತಿಯಲ್ಲಿ ಮುಂದುವರಿಸಲು ದಾರಿ ತೋರುತ್ತಿರುವ ಇಂಥ ಸ್ಫೂರ್ತಿದಾಯಕ ಮತ್ತು ನಿರ್ಮಲವಾದ ಬ್ರಹ್ಮಸಮಾಜವನ್ನು, ಇವರು ಮನಮೆಚ್ಚಿ ಸೇರಿದರು. ಸಮಾಜದಲ್ಲಿ ಕಂಡುಬರುವ ಲೋಪ-ದೋಷಗಳನ್ನು ದೂರಮಾಡಲು ಯತ್ನಿಸಿದರು. ಅಜ್ಞಾನದ ಅಂಧಕಾರಗಳಲ್ಲಿ ಮುಳುಗಿದ, ಮೂಢ ಆಚಾರ ವಿಚಾರಗಳಲ್ಲಿ ಸಿಲುಕಿ ನರಳುತ್ತಿದ್ದ ಮುಗ್ಧಜನರನ್ನು ಎಚ್ಚರಿಸಲು ಪಣತೊಟ್ಟರು. ಸಮಾಜದ ಕಟುತರವಾದ ಕಟ್ಟಳೆಗಳಿಗೆ ಸಿಕ್ಕಿ ಬಿದ್ದು ಬಳಲುವ ಬಾಲ ಮತ್ತು ಪ್ರೌಢ ವಿಧವೆಯರಿಗೂ ಮತ್ತು ಇಜ್ಜೋಡು ಜೀವನದಿಂದ ದುಃಖಕ್ಕೆ ಈಡಾದ ಅನೇಕ ಹೆಣ್ಣು-ಗಂಡುಗಳಿಗೂ ದಾರಿಯನ್ನು ತೋರುವ ಸದಿಚ್ಛೆಯಿಂದ ಇವರು, ವಿಧವೆಯರಿಗೆ ಮತ್ತು ಅನಾಥಹೆಣ್ಣುಗಳಿಗೆ ಆಶ್ರಮಗಳನ್ನೂ, ವಿದ್ಯಾ-ಪ್ರಚಾರ ಸಂಸ್ಥೆಗಳನ್ನೂ ಪ್ರಾರ್ಥನಾಸಮಾಜಗಳನ್ನೂ ಅನೇಕ ಸ್ಥಳಗಳಲ್ಲಿ ಆರಂಭಿಸಿ, ಸಮಾಜಸುಧಾರಣೆಯ ಕೆಲಸದಲ್ಲಿ ತನುಮನ ಧನಗಳನ್ನು ಅರ್ಪಿಸಿ, ಇವುಗಳ ಏಳಿಗೆಗೆ ಸತತ ದುಡಿದರು.

ಇಂಥ ಕೆಲಸಗಳಿಗೆ ಬೇಕಾದ ತ್ಯಾಗವು ಇವರದಾಗಿತ್ತು. ಇದರ ಜೊತೆಗೆ ತಮ್ಮ ವಿದ್ಯೆ ಮತ್ತು ಜ್ಞಾನಪ್ರತಿಭೆಯಿಂದಲೂ, ನಿಷ್ಕಾಪಟ ಜೀವನದಿಂದಲೂ, ಸತ್ಯಪರ ವರ್ತನೆಯಿಂದಲೂ, ದೃಢವಾದ ಮನೋನಿಶ್ಚಯದಿಂದಲೂ, ಕೈಕೊಂಡ ಕೆಲಸವನ್ನು ತಡೆಯಿಲ್ಲದೆ ಮುಂದುವರಿಸಿದರು. ಸಮಕಾಲೀನರಾದ ಶ್ರೀ. ಗಿಡುಗು ರಾಮಮೂರ್ತಿ, ಗುರುಜಾಡ ಅಪ್ಪಾರಾಯರಂತೆ, ಜನರ ನೈತಿಕ ಮಟ್ಟವನ್ನು ಎತ್ತರಗೊಳಿಸಿ ಅವರನ್ನು ಪಾಪಕೂಪದಿಂದ ಪಾರುಗಾಣಿಸಿ, ಸುಖಜೀವನದಲ್ಲಿ ನಿರತರಾಗುವಂತೆ ಸಹಕರಿಸುವ ಕಷ್ಟ ಕಾರ್ಯದಲ್ಲಿ ವಿಜಯಿಗಳಾಗಲು ತಮ್ಮ ಲೇಖನಿಯನ್ನುಪಯೋಗಿಸಿದರು. ಸಮಾಜದಲ್ಲಿಯ ಕುಂದು-ಕೊರತೆಗಳನ್ನು ನಿವಾರಿಸಲು ನಿಶ್ಚಯಿಸಿ ನಿಷ್ಠೆಯಿಂದ ಈ ರಂಗಕ್ಕಿಳಿದರು.

ಬರೆವಣಿಗೆಯನ್ನು ಈ ಬಗೆಯ ಉತ್ತಮ ಕೆಲಸಕ್ಕೆ ಉಪಯೋಗಿಸುವುದು ಸಾಹಿತಿಯ ಮುಖ್ಯ ಕೆಲಸವೆಂದು ತಿಳಿದ ಇವರು, ಸಾಹಿತ್ಯ ಮತ್ತು ಸಮಾಜಸಂಸ್ಕರಣಗಳು ಏಕಕಾಲದಲ್ಲಿ ಒಂದಕ್ಕೊಂದು ಹೊಂದಿಕೊಂಡು ಮುಂದುವರಿಯುವುದು ಸಾಧ್ಯವೆಂಬುದು ದುಡಿದು ತೋರಿಸಿದರು. ಸಮಾಜಸಂಸ್ಕರಣ ಜನರ ಜೀವನವನ್ನು ಉತ್ತಮಗೊಳಿಸಿದರೆ, ಸಾಹಿತ್ಯಸಂಸ್ಕರಣ ಇದಕ್ಕೆ ಪೋಷಕವಾಗಿ ನಿಂತು ಅವರ ಜ್ಞಾನಾಭ್ಯುದಯಕ್ಕೆ ಸಹಾಯವಾಗುವುದೆಂಬ ನಿಜ ನಂಬಿಕೆ ಇವರದಾಗಿತ್ತು.

ತೆಲುಗು ಸಾಹಿತ್ಯದ ರಂಗಗಳಲ್ಲಿ ಪುಡಿವಂತಿಕೆಯ ಛಾಯೆಗಳನ್ನು ನಾವು ಇಂದಿಗೂ ಕಾಣಬಹುದು. ಹೀಗಿದ್ದರೂ ಇಪ್ಪತ್ತನೆಯ ಶತಮಾನದ ಆದಿಯಲ್ಲಿಯೇ ಸಾಹಿತ್ಯಸಂಸ್ಕರಣದ ಮಾರ್ಗವನ್ನನುಸರಿಸಿ, ಜನರಿಗೆ ತಿಳಿಯುವ ಕೃತಿಗಳನ್ನು ರಚಿಸುವ ಹೊಸ ಮಾರ್ಗವನ್ನನುಸರಿಸಿದ ಸಾಹಸ ಇವರದಾಗಿದೆ. ಜನರಿಗೆ ಮನದಟ್ಟಾಗುವಂತೆ ತಿಳಿಯುವ ಭಾಷೆ ಮತ್ತು ಸರಳವಾದ ಶೈಲಿಯಲ್ಲಿಯೇ ಬರೆಯುವುದು ಅವಶ್ಯವೆಂದು ಇವರ ಭಾವನೆಯಾಗಿತ್ತು. ಇಂಥ ಕಾರ್ಯಕ್ಕೆ ಸಂಸ್ಕೃತಗ್ರಂಥಗಳ, ಮತ್ತು ಪ್ರಾಚೀನ ಕಾವ್ಯದ

ಅಭ್ಯಾಸ ಅತ್ಯಗತ್ಯವೆಂದು ಇವರು ತಿಳಿದಿದ್ದರಲ್ಲದೆ, ತಾವು ಸಂಸ್ಕೃತ ಮತ್ತು ಹಳೆಯ ತೆಲುಗುಗ್ರಂಥಗಳನ್ನು ಚೆನ್ನಾಗಿ ಅಧ್ಯಯನ ಮಾಡಿಕೊಂಡು, ತಕ್ಕ ಸಂಸ್ಕಾರವನ್ನೂ ಪಾಂಡಿತ್ಯವನ್ನೂ ಪಡೆದಿದ್ದರು. ಜನರು ತಮ್ಮ ಅಭ್ಯಾಸಬಲದಿಂದ ಜ್ಞಾನಾರ್ಜನೆಯನ್ನು ಪಡೆದು, ಎಲ್ಲದರಲ್ಲಿರುವ ಒಳಿತನ್ನು ಗ್ರಹಿಸಿ, ಹೊಸ ಜಗತ್ತು ಪ್ರತಿಪಾದಿಸುವ ನೂತನ ವಿಚಾರಗಳನ್ನು ಅರಿತು, ಈ ಸೌಲಭ್ಯಗಳ ನಿಜ ಉಪಯೋಗವನ್ನು ತಿಳಿದು, ಗೊಡ್ಡು ಆಚಾರ ಮತ್ತು ವಿಚಾರಗಳಲ್ಲಿಯ ನಂಬಿಕೆಯನ್ನು ತೊರೆದು, ಸತತ ಸಾಧಕರಂತೆ ಪರಿಶ್ರಮಿಸುವುದು ಒಳಿತೆಂದು ಇವರು ತಿಳಿದಿದ್ದರು.

ಸಾಹಿತ್ಯ ಸಂಸ್ಕರಣ ಮಾರ್ಗದಲ್ಲಿ ಇವರು ಯಶಸ್ವಿಗಳಾದುದು ಹೊಸ ಶೈಲಿ ಮತ್ತು ಭಾಷೆಯ ವಿಚಾರದಲ್ಲಿ. ತಮ್ಮ ಅಭಿಪ್ರಾಯಗಳನ್ನೂ, ಪ್ರಾಚೀನ ಸಾಹಿತ್ಯಗ್ರಂಥಗಳ ಸಾರವನ್ನೂ, ವೇದ-ಉಪನಿಷತ್ತು ಮುಂತಾದ ಘನಗ್ರಂಥಗಳ ವಿವರಗಳನ್ನೂ, ಮನೆಮಾತಿನ ಶೈಲಿಯಲ್ಲಿ—ಸರಳವಾದ ವಾಕ್ಯಗಳಲ್ಲಿ—ಎಲ್ಲರಿಗೂ ಅರ್ಥವಾಗುವಂತೆ ಬರೆಯುವ ನೂತನಮಾರ್ಗವನ್ನು ಪಂತುಲು ಅನುಸರಿಸಿದರು. ಇವರ ಸಂಪಾದಕತ್ವದಲ್ಲಿ ಪ್ರಕಟವಾದ "ವಿವೇಕವರ್ಧಿನಿ" ಎಂಬ ವಾರಪತ್ರಿಕೆಯ ಮೂಲಕ, ಜನರಿಗೆ ವಿವೇಕವನ್ನು ತಿಳಿಯಪಡಿಸುವುದರ ಜತೆಗೆ ತಮ್ಮ ಹೊಸ ಶೈಲಿಯ ಪ್ರಯೋಗವನ್ನೂ ಮುಂದುವರಿಸಿದರು.

ಈ ವಾರಪತ್ರಿಕೆಯಲ್ಲಿ ಅನೇಕ ಸಾಹಿತ್ಯಿಕ, ಸಾಮಾಜಿಕ ವಿಷಯಗಳ ಬಗ್ಗೆ ಲೇಖನಗಳನ್ನು ಬರೆದರು. ಗದ್ಯಪದ್ಯ ರಚನೆಯಲ್ಲಿ ಈ ಬಗೆಯ ನೂತನ ಶೈಲಿಯನ್ನು ಅಳವಡಿಸಿಕೊಂಡು, ಆಂಧ್ರ ಭಾಷಾಮಾತೆಗೆ ಹೊಸ ಉಡುಪನ್ನು ತೊಡಿಸಿದವರಲ್ಲಿ ಇವರೇ ಪ್ರಪ್ರಥಮರು. ಮದ್ರಾಸ ಪ್ರೆಸಿಡೆನ್ಸೀ ಕಾಲೇಜಿನಲ್ಲಿ ತೆಲುಗು ಪಂಡಿತರ ಕೆಲಸಕ್ಕೆ ನಿಂತು, ಪತ್ನೀವಿಯೋಗದ ದುಃಖದಿಂದಲೂ ಇತರ ತಾಪತ್ರಯಗಳಿಂದಲೂ ಅನೇಕ ಕಷ್ಟನಷ್ಟಗಳಿಗೊಳಗಾಗಿದ್ದರೂ, ಸಾಹಿತ್ಯದ ಮೂಲಕ ಸಮಾಜಸೇವೆಯೇ ತಮ್ಮ ಜೀವನದ ಮುಖ್ಯೋದ್ದೇಶವೆಂದು ತಿಳಿದು, ನಾನಾಬಗೆಯ ಕೃತಿಗಳನ್ನು ರಚಿಸಿ ಸಮಾಜೋದ್ಧಾರಕ್ಕೆ ದುಡಿದರು. ಇವರ ೧೩೦ ಕೃತಿಗಳಲ್ಲಿ ಅನೇಕ ಪುಸ್ತಕಗಳು ಜನಪ್ರಿಯವಾದುವು. ಮದುವೆ-ಉತ್ಸವಗಳಲ್ಲಿ ಇವರ ಗ್ರಂಥಗಳನ್ನು ಕಾಣಿಕೆಯಾಗಿ ಕೊಡುವ ಹೊಸ ವಿಧಾನ ರೂಢಿಯಲ್ಲಿ ಬರಲು ಇವರೇ ಕಾರಣರು. ಇವರು ಸ್ಥಾಪಿಸಿ ಬೆಳಸಿದ ಸಂಸ್ಥೆಗಳ ಮೂಲಕ ಸಮಾಜಸಂಸ್ಕರಣದ ಜತೆಗೆ ಜನತೆಯಲ್ಲಿ ಸಾಹಿತ್ಯಾಭಿರುಚಿಯು ದಿನೇ ದಿನೇ ಬೆಳೆಯತೊಡಗಿತು. ಇವರ ಕೃತಿಗಳನ್ನು—ಕಾದಂಬರಿಗಳು, ಕತೆಗಳು, ಸ್ವತಂತ್ರನಾಟಕಗಳು, ಪ್ರಹಸನಗಳು, ಹಾಸ್ಯಲೇಖನಗಳು, ಟೀಕೆಗಳು, ಜ್ಞಾನಪ್ರಬೋಧ ಲೇಖನಗಳು, ಸಂಸ್ಕೃತ ನಾಟಕ ಮತ್ತು ತತ್ತ್ವಗ್ರಂಥಗಳ ಅನುವಾದಗಳು, ಕವಿತೆಗಳು, ನೀತಿದಾಯಕ ಶತಕಗಳು, ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳು, ವಿಜ್ಞಾನದ ಮೇಲೆ ಬರೆದ ಪ್ರಬಂಧಗಳು,—ಎಂದು ವಿಂಗಡಿಸಬಹುದು.

ಪಂಡಿತರು ಇವರಿಗೆ "ಗದ್ಯತಿಕ್ಕನ" ಎಂಬ ಬಿರುದನ್ನು ಸಲ್ಲಿಸಿರುವುದು, ಇವರು ತೆಲುಗು ಗದ್ಯದಲ್ಲಿ ತಂದಿರುವ ಹೊಸ ಮಾರ್ಗದ ಪರಿಣಾಮವೆಂದು ಹೇಳಬಹುದು. ಆಂಧ್ರ ಮಹಾಭಾರತದ ಕರ್ತೃತ್ರಯಿಯಲ್ಲೊಬ್ಬನಾದ ಕವಿತಿಕ್ಕನನು, ಪ್ರಾಚೀನ ಕಾವ್ಯಮಾರ್ಗದಲ್ಲಿ ಅನುಸರಿಸಿದ ಹೊಸಮಾರ್ಗದಂತೆ, ಶ್ರೀ. ಪಂತುಲು ಅವರು ಗದ್ಯದಲ್ಲಿ ತಂದೊಡ್ಡಿದ ನೂತನ ಶೈಲಿ ಮತ್ತು ನಿರೂಪಣೆಯ ಮಾರ್ಗಕ್ಕೆ ಮೆಚ್ಚಿ ಪಂಡಿತರು ಈ ಬಿರುದನ್ನು ಕೊಟ್ಟಿರುವುದು ಸಮಯೋಚಿತವೇ ಸರಿ. ಗದ್ಯದಲ್ಲಿ ಮನೆಮಾತಿನ ಶೈಲಿಯನ್ನುಪಯೋಗಿಸಿ, ಸ್ಪಷ್ಟವಾದ ವಿಚಾರಗಳನ್ನು ಸರಳ ರೀತಿಯಲ್ಲಿ ವಿವರಿಸಿ ಜನರಿಗೆ ತಿಳಿಯಪಡಿಸಿದರು. ಇದೇ ಸರಣಿಯಲ್ಲಿ ಇವರು ಬರೆದ "ರಾಜಶೇಖರ ಚರಿತೆ" ಎಂಬುದು ವಿಕಾರ್ ಆಫ್ ವೇಕ್‌ಫೀಲ್ಡ್ (Vicar of Wakefield) ಎಂಬ ಆಂಗ್ಲ ಕಾದಂಬರಿಯ ರೂಪಾಂತರವು, ತೆಲುಗಿನ ಆದಿ ಕಾದಂಬರಿಯೆಂದು ಹೆಸರು ಗಳಿಸಿದೆ. ಇದರ ಉತ್ತಮ ಚಿತ್ರಣಕ್ಕೆ ಮತ್ತು ಮಹತ್ತ್ವಕ್ಕೆ ಬೆಲೆ ಕೊಟ್ಟು ೧೮೮೭ ರಲ್ಲಿ ಟಿ. ಎಂ. ಹಚ್ಚಿಸನ್ (T. M. Huchthison) ಎಂಬ ಪಂಡಿತರು, ಇದನ್ನು ತೆಲುಗಿನಿಂದ ಆಂಗ್ಲ ಭಾಷೆಗೆ 'ಅದೃಷ್ಟ ಚಕ್ರ (Fortune's Wheel)', ಎಂಬ ಹೆಸರಿನಲ್ಲಿ ಪರಿವರ್ತಿಸಿದರು. ಆ ಗ್ರಂಥವು ಆಂಗ್ಲಪತ್ರಿಕೆಯಲ್ಲಿ ಚೆನ್ನಾಗಿ ವಿಮರ್ಶಿಸಲ್ಪಟ್ಟಿದೆ.

ಇದರಂತೆ ಇವರು ಬರೆದ "ಸತ್ಯಸಂಜೀವಿನಿ" ಎಂಬ ಪುಟ್ಟ ಕಾದಂಬರಿಯಲ್ಲಿ ತೆಲುಗು ನಾಡಿನ ಕೆಲವು ವಿಶಿಷ್ಟ ಕುಟುಂಬಗಳನ್ನು ಚಿತ್ರಿಸಿರುವರು. ಅತ್ತೆ-ಸೊಸೆಯರ ಜಗಳ, ಮಾವನ ಮಡಿವಂತಿಕೆಯ ವರ್ತನೆ, ಗಂಡನ ಮೂಢಸ್ವಭಾವ, ನಾದಿನಿಯರ ಸೊಕ್ಕು, ಗೊಡ್ಡು ಆಚಾರಗಳಿಂದ ಮನೆಗೆ ಬಂದ ಹೆಣ್ಣಿನ ಮೇಲೆ ಆದ ದುಷ್ಪರಿಣಾಮ—ಮುಂತಾದುವನ್ನು ತಿಳಿಹಾಸ್ಯದಲ್ಲಿ ಚಿತ್ರಿಸಿರುವರು. ಇದರ ಜತೆಗೆ ಸದ್ವರ್ತನೆಯ ಮಾದರಿಯ ಕುಟುಂಬದ ಚಿತ್ರಣವನ್ನೂ ನಾವು ಇಲ್ಲಿ ಕಾಣಬಹುದು. "ಸತ್ಯವತೀ ಚರಿತೆ" ಎಂಬುದು 'ಸುಳ್ಳುಹೇಳಿ ಮೋಸಗೈದವನ ಪಾಡು ಹಾಳು' ಎಂಬ ನಾಣ್ಣುಡಿಯ ನಿದರ್ಶನವನ್ನು ಮುಖ್ಯವಾಗಿಟ್ಟುಕೊಂಡ ಮತ್ತೊಂದು ಕಾದಂಬರಿ. ಇದು ಕೂಡ ಹಾಸ್ಯಶೈಲಿಯಲ್ಲಿಯೇ ಬರೆಯಲ್ಪಟ್ಟಿದೆ. "ಕುರಂಗೇಶ್ವರ ವರ್ತಕಚಕ್ರವರ್ತಿ" ಮತ್ತು "ಚಮತ್ಕಾರ ರತ್ನಾವಳಿ" ಎಂಬ ಸಣ್ಣ ಕತೆಗಳು, ಷೇಕ್ಸಪಿಯರ್‌ನ 'Merchant of Veince' ಮತ್ತು 'Commedy of Errors' ಎಂಬ ನಾಟಕಗಳ ಆಧಾರವನ್ನು ಪಡೆದಿವೆ.

ಇವರ ಪ್ರಹಸನಗಳು ಮತ್ತು ಚಿಕ್ಕ ನಾಟಕಗಳು ಹಾಸ್ಯಮಯವಾಗಿ, ಜನಪ್ರಿಯವಾಗಿವೆ. ಸಮಾಜದ ಕುಂದುಕೊರತೆಗಳನ್ನೂ, ದುರಾಚಾರಗಳನ್ನೂ, ತಿಳಿಹಾಸ್ಯದಲ್ಲಿ ಟೀಕಿಸಿ ಜನರನ್ನು ಸುಧಾರಿಸಲು ಯತ್ನಿಸಿರುವರು. ಇವರ "ಆಚಾರ ಅನ್ನಮ್ಮ" "ಚಾದಸ್ತಿ ಪೆದ್ದಮ್ಮ" ಎಂಬ ಪ್ರಹಸನಗಳು ಈ ಮಾರ್ಗದ ಹೊಸ

ರೀತಿಯ ಕೃತಿಗಳಾಗಿವೆ. "ಶಾಕುಂತಲ" ಮತ್ತು "ಮಾಲವಿಕಾಗ್ನಿಮಿತ್ರ"ಗಳು ಸಂಸ್ಕೃತನಾಟಕಗಳ ಅನುವಾದಗಳು. "ಪ್ರಹ್ಲಾದ" ಮತ್ತು "ಸತ್ಯಹರಿಶ್ಚಂದ್ರ"ಗಳು ಹೊಸ ವಿಧಾನದಲ್ಲಿ ಬರೆದ ಪುರಾಣನಾಟಕಗಳು. ಇವುಗಳಲ್ಲಿ ಜನರಿಗೆ ಬೇಸರವಾಗದಂತೆ, ಅವರವರ ತಪ್ಪು ತಡೆಗಳನ್ನು ಎತ್ತಿ ತೋರಿಸಿದ್ದಾರೆ. ರೂಢಿಯಾಗಿ ನೆಲಸಿದ ಅನೇಕ ಮೂಢ ನಂಬಿಕೆಗಳನ್ನು ದೂರಮಾಡಲು ಯತ್ನಿಸಿದ್ದಾರೆ. ಈ ಕೃತಿಗಳು ಆಂಧ್ರ ನಾಟಕ ಸಾಹಿತ್ಯಕ್ಕೆ ಇವರು ನೀಡಿದ ಮೊದಲ ಕಾಣಿಕೆಗಳಾಗಿವೆ. ಇಪ್ಪತ್ತಕ್ಕೆ ಮೀರಿದ ಇಂಥ ಪುಸ್ತಕಗಳಲ್ಲಿ ಬರುವ ವ್ಯಕ್ತಿ ಮತ್ತು ಪಾತ್ರಗಳ ಮೂಲಕ ಸ್ತ್ರೀಧರ್ಮತತ್ತ್ವ, ಆದರ್ಶಸಂಸಾರಕ್ರಮ, ವಿಧವಾವಿವಾಹದ ಅವಶ್ಯಕತೆ, ಮುಂತಾದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಜನರನ್ನು ಜಾಗೃತಗೊಳಿಸಿದ್ದಾರೆ.

ಶ್ರೀ. ಪಂತುಲು ಖ್ಯಾತಿವೆತ್ತ ಕವಿಗಳು ಇವರು ರಚಿಸಿದ ವಿಪುಲವಾದ ಕವನಗಳು ಅನೇಕ ಸಂಕಲನಗಳ ರೂಪದಲ್ಲಿ ಪ್ರಕಟವಾಗಿವೆ. ವಿಚಾರಪೂರ್ಣವಾದ ವಿಷಯಗಳನ್ನು, ತಿಳಿಯಾದ ಶೈಲಿಯಲ್ಲಿ ಓದುಗರಿಗೆ ತಿಳಿಯುವಂತೆ ಕೃತಿಗಳನ್ನು ರಚಿಸುವುದೇ ಇವರ ಕಾವ್ಯರಚನೆಯ ಮುಖ್ಯೋದ್ದೇಶವಾಗಿತ್ತು.

"ನೀತಿಮಂಜರಿಯ" ಮೂರು ಭಾಗಗಳು, "ಈಶ್ವರೋಪಾಸನಾ, ಮಾನುಷಧರ್ಮ, ಪಥಿಕ್‌ವಿಲಾಪ, ಕುಮಾರದ್ವಯ ವಿಲಾಸ" ಮುಂತಾದ ಕಾವ್ಯಸಂಕಲನಗಳ ಸಂಖ್ಯೆ ಮೂವತ್ತಕ್ಕೆ ಮೀರಿವೆ. ಇವರ ನೀತಿಪದ್ಯಗಳು ಜನರ ನಿತ್ಯ ಮನನದ ನುಡಿಗಳಾಗಿದ್ದುದೇ ಇವರ ಕಾವ್ಯ ಜನಪ್ರಿಯವಾಗಿತ್ತೆಂಬುದಕ್ಕೆ ಸಾಕ್ಷಿ.

ಅಲಂಕಾರ ಶಾಸ್ತ್ರ, ಕಾವ್ಯ ಲಕ್ಷಣ ಸಂಗ್ರಹ, ಸಂಗ್ರಹವ್ಯಾಕರಣ, ವಿಮರ್ಶೆಯ ಬಗ್ಗೆ ಬರೆದ ಲೇಖನ ಸಂಗ್ರಹ, ರಾಜಧರ್ಮ, ದೇಶಪ್ರೇಮ, ದೇಶಭಾಷೆ ಮುಂತಾದ ಗಹನವಾದ ವಿಷಯಗಳ ಬಗ್ಗೆ ಬರೆದ ಪ್ರಬಂಧಗಳ ಸಂಕಲನ ಮುಂತಾದುವು ಇವರ ಪ್ರೌಢ ಸಾಹಿತ್ಯದ ಸಂಪತ್ತು. ಈ ಮಾರ್ಗದಲ್ಲಿಯೇ ರಚಿತವಾದ ಇವರ "ಕವುಲು ಚರಿತ್ರೆ" ಎಂಬುದು ಖ್ಯಾತಿವೆತ್ತ ಸಾಹಿತ್ಯ ಚರಿತ್ರೆಯ ವಿವರಣೆಯ ಗ್ರಂಥವಾಗಿದೆ. ಇದು ಪಾಂಡಿತ್ಯಪೂರ್ಣವೆಂದೂ ಸಾಹಿತ್ಯಾಭ್ಯಾಸಿಗಳಿಗೆ ಕೈಗನ್ನಡಿಯೆಂದೂ, ಆಂಧ್ರ ಸಾಹಿತ್ಯ ಚರಿತ್ರೆಯ ಸಮಸ್ತ ಸಮಸ್ಯೆಗಳ ವಿವರಣೆಗೆ ಮತ್ತು ಪರಿಹಾರಕ್ಕೆ ಅಧಿಕೃತವಾದ ಪ್ರಥಮ ಆಧಾರಗ್ರಂಥವೆಂದೂ ವಿಮರ್ಶಕರು ಒಪ್ಪಿರುವರು.

ಇವರು ಪರಿಶುದ್ಧವಾದಿಗಳು. ಬ್ರಹ್ಮಸಮಾಜದ ಏಕೇಶ್ವರೋಪಾಸನಾ ತತ್ತ್ವಗಳನ್ನು ನಿರೂಪಿಸುವ ಅನೇಕ ಲೇಖನಗಳನ್ನು ಬರೆದು, ಪ್ರಾರ್ಥನಾ ಸಮಾಜಗಳನ್ನು ತೆಲುಗುನಾಡಿನಲ್ಲೆಲ್ಲ ಸ್ಥಾಪಿಸಿರುವರು. ಆಂಧ್ರಭಾಷೆಯಲ್ಲಿ ಬ್ರಹ್ಮಸಮಾಜದ ತತ್ತ್ವಗಳ ಬಗ್ಗೆ ವಿವರಗಳನ್ನು ತಿಳಿಸುವ ಗ್ರಂಥಗಳನ್ನು ಬರೆದವರಲ್ಲಿ ಇವರು ಮೊದಲಿಗರು.

ಆಂಧ್ರಸಾಹಿತ್ಯದಲ್ಲಿ ಮಾನಸಿಕ ಪರಿಶುದ್ಧತೆ, ಅಕಳಂಕ ವರ್ತನೆ, ನಿರ್ಮಲ ಜೀವನ, ಸತ್ಯವೇ ಸೌಂದರ್ಯ—ಎಂಬ ಮುಖ್ಯಾಂಶಗಳನ್ನು ತಮ್ಮ ಕಾವ್ಯ ಮತ್ತು ಗದ್ಯಲೇಖನಗಳ ಮೂಲಕ ತಿಳಿಯಪಡಿಸಿರುವರು. ವಿಜ್ಞಾನಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನು ಬರೆದವರಲ್ಲಿ ಇವರೇ ಪ್ರಥಮರೆಂದು ಒಪ್ಪಬೇಕು. ಹೀಗೆ ಸಾಹಿತ್ಯದ ನಾನಾರಂಗಗಳಲ್ಲಿ ಉತ್ತಮ ಮತ್ತು ಜನೋಪಯುಕ್ತ ಗ್ರಂಥಗಳನ್ನು ರಚಿಸಿ, ಪ್ರಕಟಿಸಿ, ಜನರು ಅವುಗಳ ಉಪಯೋಗವನ್ನು ಪಡೆಯುವಂತೆ ದುಡಿದ ಸಾಹಸಿಗಳು ಇವರು. ಯಾವ ಕಾಲದಲ್ಲಿ ಹಿಂದೂಸಮಾಜವು ಅಧೋಗತಿಯ ಮಾರ್ಗವನ್ನು ಹಿಡಿದಿತ್ತೋ, ಯಾವ ಸಮಯದಲ್ಲಿ ಆಂಧ್ರಜನತೆ ತಪ್ಪುದಾರಿಯನ್ನು ತುಳಿದು ಸಂಕಟದಲ್ಲಿ ತೊಳಲುತ್ತಿತ್ತೋ, ಅಂಥ ವೇಳೆಯಲ್ಲಿ ಸಕಾಲಿಕ ಎಚ್ಚರವನ್ನು ನೀಡಿ, ಜನತೆ ಸುಧಾರಿಸಲು ಸಂಘ—ಸಂಸ್ಥೆಗಳನ್ನು ಸ್ಥಾಪಿಸಿ, ಅವಶ್ಯವಾದ ಸಕಾಲಿಕ ಉಪಯುಕ್ತ ಸಾಹಿತ್ಯವನ್ನು ರಚಿಸಿ, ಜನರಲ್ಲಿ ಹೊಸಜೀವನವನ್ನುಂಟುಮಾಡಿದರು. ತಮ್ಮ ಈ ಕೃಷಿ ಕೆಲಮಟ್ಟಿಗೆ ಫಲದಾಯಕವಾಗಿ ಮುಂದುವರಿಯುತ್ತಿರುವುದನ್ನು ಕಂಡು ಹಿಗ್ಗಿದರು. ಕೆಮ್ಮುದಮ್ಮಿನ ಬೇನೆಯಿಂದ ನರಳುತ್ತಿದ್ದರು. ಸಮಾಜವನ್ನು ಸುಧಾರಿಸುವ ಹೊಣೆ ಹೊತ್ತು, ಹೊಸ ಸಾಹಿತ್ಯವನ್ನು ನಿರ್ಮಿಸುವ ಮನೋನಿಶ್ಚಯದಿಂದ ಎಪ್ಪತ್ತು ವರುಷಗಳ ವರೆಗೆ ಜೀವಿಸಿದ್ದು, ಆತ್ಮಸಂತೋಷದಿಂದ ೧೯೧೯ರಲ್ಲಿ ದಿಗವಂತರಾದ ಇವರನ್ನು ಆಂಧ್ರಲೋಕವು ಸದಾ ನೆನೆಯುತ್ತಿದೆ. ಇವರ ಸಾವಿನ ದಿನವನ್ನು ಪುಣ್ಯದಿನವೆಂದೂ, ಸ್ಫೂರ್ತಿದಾಯಕ ಸಮಯವೆಂದೂ ಭಾವಿಸಿ, ಪ್ರತಿ ವರುಷವು, ಮೇ ೨೭ ನೆಯ ದಿನಾಂಕ ನೆನೆಯುವ ರೂಢಿಯಂತೆ, ಇದೇ ವರುಷ, ಮೇ ೨೭ ನೆಯ ದಿನಾಂಕದಲ್ಲಿ ಅವರ ೫೫ ನೆಯ ವಾರ್ಷಿಕದಿನವೆಂದು ಆಚರಿಸಲ್ಪಟ್ಟಿದೆ. ಆಂಧ್ರ ಜನತೆ ಅವರಿಗೆ ಸಲ್ಲಿಸಿದ ಮರ್ಯಾದೆ ವಿವರಗಳು ಪತ್ರಿಕೆಗಳಲ್ಲಿ ವರದಿಮಾಡಲ್ಪಟ್ಟಿವೆ. ಆಂಧ್ರರಾಜಕೀಯ ಮತ್ತು ಸಾಹಿತ್ಯಿಕ ಚರಿತ್ರೆಯ ಪುಟಗಳಲ್ಲಿ ಇವರ ಹೆಸರು ಸುವರ್ಣಾಕ್ಷರಗಳಿಂದ ಬರೆಯಲ್ಪಡುವಷ್ಟು ಬೆಲೆಯು ದೊರೆಯುವಂಥ ಪ್ರಸಿದ್ಧ ಜೀವನ ಇವರದೆಂದು ನಿಸ್ಸಂದೇಹವಾಗಿ ಹೇಳಬಹುದು.

ಪೂರ್ವದೇಶದವರು ನಾವು

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ. ಎ. ಹೈದರಾಬಾದ್

ಪೂರ್ವದೇಶದವರು ನಾವು ಭಾರತೀಯ-ಚೀಣರು,
ಪೂರ್ವದಿಂದಲಿಂದಿಗೂ ಅಪಾರ ಸ್ನೇಹಪೂರ್ಣರು,
ನೇಹ-ನಯದಿ ನಿಪುಣರು — ಲೋಕತಂತ್ರ ಪ್ರವಣರು!
ಕಳೆದುವೆನಿತೊ ನೂರು ದಶಕ—ಅಳಿದುವೆನಿತೊ ರಾಜ್ಯಶತಕ,
ಸ್ನೇಹವಿದು ನಿರಂತರ — ನಮ್ಮ ಭಾಗ್ಯ ಪೂರ್ವಿಕ.
ಚಂದ್ರಗುಪ್ತ ಸಮ್ರಾಟ ಫಾಹಿಯನಗೆ ಭೆಟ್ಟಿಕೊಟ್ಟ,
ಬರಲು ಚ್ಯೂ ಮಂತ್ರಿಶ್ರೇಷ್ಠ ಭರತ ಬಾಬು ಅಪ್ಪಿಬಿಟ್ಟ.
ನಮಗೆ ಪ್ರಿಯವು ನೇಹದಾಟ — ಸಖ್ಯಸದ್‌ಭಾವ ಕೂಟ,
ಇಲ್ಲ ನಮಗೆ ಬೇರೆ ಬೇಟ — ಸದಾ ಶಾಂತಿ ಮುನ್ನೋಟ.
ಜಗವಿದಿಂದು ಭಯತ್ರಸ್ತ — ಮಾನವತೆಯು ಅಸ್ತವ್ಯಸ್ತ,
ಶಾಂತಿಪಥದಿ ಅನಭ್ಯಸ್ತ — ವಿಶ್ವವಾಯ್ತು ರೋಗಗ್ರಸ್ತ.
ಕೋರಿಯಾದ ಸುಖಾಗಾರ — ಆಯ್ತು ಯುದ್ಧಜ್ವರ ವಿಕಾರ,
ಎಲ್ಲೆಲ್ಲಿಯು ಹಾಹಾಕಾರ — ನಡೆದು ಬಂತು ಭೀಕರ.
ಮಾನವತೆಯ ಶುಶ್ರೂಷೆ — ನಮ್ಮ ನಿತ್ಯದಾಕಾಂಕ್ಷೆ,
ಶಾಂತಿ-ಸ್ನೇಹಕಾಯ್ತು ದೀಕ್ಷೆ— ಅವೇ ನಮ್ಮ ಬೆನ್ನ ರಕ್ಷೆ,
ನಡೆದೆವೈ ಸುದೂರಕೆ — ಶಾಂತಿಪ್ರಸ್ತಾವಕೆ,
ನೊಂದ ಜನರ ಸನಿಹಕೆ — ಲೋಕಹಿತದ ಕೆಲಸಕೆ.
ಆಗೋ ಮತ್ತೆ ಹಿಂದ ಚೀಣ — ಆಯ್ತು ಶಾಂತಿ ರೋಗರುಗ್ಣ,
ನಡೆದು ಬರಲಿ ನಿರ್ವಿಘ್ನ — ಜಿನೆವಾಪರಿಷತ್ತು ಘನ.
ಚರ್ಚಿಲಗೆ ಶ್ರೀ ಐಕ — ಆಗಲೈ ಸಹಾಯಕ,
ಚ್ಯೂನೆ ಅದಕೆ ವೈದ್ಯಕ — ನಡೆದು ಬರಲಿ ಪಥ್ಯಕ.
ನಮ್ಮ ಮತವೆ ಲೋಕಮತವು— ನಮ್ಮ ಹಿತವೆ ಜಗಕೆ ಹಿತವು,
ಎಂಬುದು ಮತಿವಿಭ್ರಮ — ಲೋಕ ನೀತಿಯತಿಕ್ರಮ.
ಇಲ್ಲಿ ಇಹುದು ಒಂದೆ ನಿಯಮ-ಕೈಯ ಐದು ಬೆರಳು ಅಸಮ,
ದೇವಸೃಷ್ಟಿಯಲ್ಲೆ ಇಲ್ಲ — ಮನುಜಯತ್ನ ವಿಫಲವೆಲ್ಲ.
ಪ್ರತಿ ರಾಷ್ಟ್ರದ ಐತಿಹಾಸ — ಅವರಿಗಹುದು ನೀತಿಕೋಶ,
ಅದುವೆ ಪ್ರಗತಿ ಪಥಪ್ರಕಾಶ — ಬೇಡ ಅನ್ಯ ಮತಾದೇಶ.
ಚೆನ್ನಪ್ಪನ ಮನೆಯ ಸುದ್ದಿ — ಅಮರಪ್ಪನಿಗೇಕೆ? ಬುದ್ಧಿ ?
ಅವನೆ ಬಿತ್ತಿ ಬೆಳೆದ ಹೊಲಕೆ — ಪರರ ಸತ್ತೆ-ಸುಲಿಗೆಯೇಕೆ?
ಭೂಮಿ ತಾಯ ಒಡಲಿನಲ್ಲಿ — ಬೆಳೆದ ನಮಗೆ ಭೇದವೆಲ್ಲಿ?
ತಾಯ ಹಿರಿಯ ಮಡಿಲಿನಲ್ಲಿ-ಯಾರಿಗಿಹುದು ಕೊರತೆಯಲ್ಲಿ?
ಅವಳ ಒಲುಮೆ ಅತುಲವು — ಎಲ್ಲರಲ್ಲು ವಿಪುಲವು.
ಜಗದ ರಾಷ್ಟ್ರಗಳೇ ಏಳಿ — ವೈರ-ದ್ವೇಷಗಳನು ಹೂಳಿ,
ಸಮತೆ-ಸ್ನೇಹಭಾವತಾಳಿ — ಕೂಡಿ ಬದುಕಿ ಕೂಡಿ ಬಾಳಿ,
ಇದುವೆ ಯುದ್ಧಮಾರಕ — ವಿಶ್ವಶಾಂತಿ ತಾರಕ,
ಸ್ನೇಹ ಸಖ್ಯಪೂರಕ — ವಿಶ್ವಸೌಖ್ಯಕಾರಕ!

ಸುಮದ ಸೊಲ್ಲು

ಶ್ರೀ. ಎಂ. ಗೋಪಾಲಕೃಷ್ಣಭಟ್ಟ, ನೀರ್ಚಾಲ
(ದ. ಕ.)

೧

ಚಿತ್ತರದ ಸರಸಿಯಲಿ ಶಿರವೆತ್ತಿ ನಗುನಗುತ
ಜಲದೇವಿಯಂತಿಸೆವೆ ಕಮಲ ನೀನು!
ನಾಳೆಯಳಿವಿನ ಚಿಂತೆ ಮನದಿ ಮುಂಚುವುದಿಲ್ಲ?
ಇಂದು ಎನುವುದೆ ಸತ್ಯವೆನುವೆಯೇನು?

೨

ತವ ಮಧುರ ಮಧುವೀಂಟೆ ಮಿದುಗಾತ್ರ ಸೋಂಕಿನಲಿ
ಆತ್ಮಬಿಂಬವ ತುಂಬಿ ಮರೆವುದಂತೆ!
ಈ ಸ್ವರ್ಗ ನಂದನದಿ ಏಸು ದಿನಗಳ ಕಳೆವೆ?
ಸುರಿಯಲಿದೆ ಸುಧೆಯಲ್ಲ; ವಿಪದ ಕಂತೆ.

೩

ತಣ್ಣೆಲರ ಹೆಸರಿಲ್ಲ! ಮತ್ತೇಭ ಗಜಘಟೆಯು
ಆದಕೊ! ಸಾರುವುದಿತ್ತ ಸರದ ಕಡೆಗೆ!
ಹೊಡೆವ ಜಂಝಾವಾತ, ಭೀಮಬಲಕೆದುರುಂಟೆ?
ತವ ರೂಪಸೌಂದರ್ಯ ಬಲಿಯುದರ ಬಲೆಗೆ!

೪

ಸ್ವತಪಸಿನ ಪಂಥದಲಿ ಸಿಡಿಲು ಕಿಡಿ ಕಾರಿದರು
ಆ ಉರಿಯ ಹಠಯೋಗಿ ಸಹಿಸಬಲ್ಲ!
ಅದುವೆ ನಿಶ್ಚಲಭಾವ ಕೆಚ್ಚೆದೆಯ ಸ್ಥೈರ್ಯದಲಿ,
ಸುಮವು ನಗುತೆನುತಿತ್ತು ಮೂಕ ಸೊಲ್ಲ!

೫

ಎನ್ನ ಕೋಮಲ ತನುವು ವಜ್ರಕರ್ಕಶವಾಗಿ
ಕಾಡಾನೆ ಕೆಡೆವಂತೆ ಗುಡುಗಬಲ್ಲೆ.
ಚಣವಾದರೂ ಬಾಳು ಯುಗಗಳನುಭವಿಯಂತೆ,
ಜಲತಡಿದ್ವರ್ಷಗಳ ಸಹಿಸಿ ಬಲ್ಲೆ!

ಸಮನ್ವಯ

ಶ್ರೀ. ಬಳ್ಕೂರು ಸುಬ್ರಾಯ ಅಡಿಗ
ಗಂಗೊಳ್ಳಿ.

ಹೊಸ ಆದರ್ಶ ಹಳೆಯ ಆದರ್ಶಗಳ ತಿಕ್ಕಾಟದ ಮೂಲಕ, ಇಂದು ನಮ್ಮ ನಾಡಿನಲ್ಲಿ ಕೌಟುಂಬಿಕ ಜೀವನವು ವೈಷಮ್ಯ-ವಿರೋಧಗಳಿಗೆ ಆಗರವಾಗಿರುವುದು. ಹೊಸಬರಲ್ಲಿಯೂ ಸರಿಯೆ, ಹಳಬರಲ್ಲಿಯೂ ಸರಿಯೆ, ಒಳ್ಳೆಯದನ್ನು ಕಾಣುವ ಸಮನ್ವಯ ದೃಷ್ಟಿ ಮೂಡಬೇಕು.

ಶ್ರೀನಿವಾಸ ಶಾಸ್ತ್ರಿಗಳು ಪೂಜೆಯನ್ನು ಮುಗಿಸಿ ತೀರ್ಥವನ್ನು ಸ್ವೀಕರಿಸಿ, ರಾಮ ರಾಮ ಎನ್ನುತ್ತ ಮಣೆಯಿಂದ ಏಳುತ್ತಿದ್ದಾಗಲೇ ಪತ್ನಿ ಗಂಗಮ್ಮ—'ಶಿವರಾಮ ಐತಾಳರು ಒಂದು ಗಂಟೆಯಿಂದ ಹೊರಗೆ ಕಾದಿದ್ದಾರೆ' ಎಂದು ತಿಳಿಸಿದಳು. ಶಾಸ್ತ್ರಿಗಳು ಲಗುಬಗೆಯಿಂದ ಬಟ್ಟೆ ಬದಲಾಯಿಸಿ ಹೊರಚಾವಡಿಗೆ ಧಾವಿಸಿದರು.

'ಏನು ಐತಾಳರೆ ! ಮುಂಜಾನೆಯೇ ಹೊರಟುಬಿಟ್ಟಿದ್ದೀರಲ್ಲ, ಇಷ್ಟು ದೂರ! ಏನಾದರೂ ವಿಶೇಷವಿತ್ತೆ? '—ಶಾಸ್ತ್ರಿಗಳು ಜಮಖಾನೆಯ ಮೇಲೆ ಕುಳಿತುಕೊಳ್ಳುತ್ತ ಪ್ರಶ್ನಿಸಿದರು.

ಎಲೆಯಡಿಕೆಯನ್ನು ಮತ್ತೊಮ್ಮೆ ಜಗಿಯುತ್ತ ಐತಾಳರು, ಪೀಠಿಕೆಯಿಲ್ಲದೆ ನೇರವಾಗಿ—'ನೋಡಿ ಶಾಸ್ತ್ರಿಗಳೇ! ಹೆಣ್ಣು ಹೆತ್ತವರ ಕಷ್ಟ ನಿಮಗೇನೂ ಅರಿಯದುದಲ್ಲ. ಆ ಅನುಭವ ನಿಮಗಿಲ್ಲದಿದ್ದರೂ ಹೆಣ್ಣನ ಹೆತ್ತವರು ಪಡುವ ಪಾಡನ್ನು ನೀವು ಕಂಡಿರಬಹುದು. ಏನೋ ದೈವಾನುಕೂಲವಿದ್ದರೆ ಆಗಿಹೋಗಲಿ–ಎಂಬ ಆಸೆಯಿದೆ. ಜಾತಕವೂ ಕೂಡಿಬರುತ್ತಿದೆ ಬೇಕಿದ್ದರೆ ನಿಮ್ಮ ಪುರೋಹಿತರನ್ನು ವಿಚಾರಿಸಿಕೊಳ್ಳಿ. ಇನ್ನು ನಿಮ್ಮಿಷ್ಟ ಹೇಗಿದೆಯೋ ಯಾರು ಬಲ್ಲರು?'—ಎಂದರು.

'ನಿಮ್ಮಂತಹರ ಮನೆಯಿಂದ ಹುಡುಗಿಯನ್ನು ತರುವುದೆಂದರೆ ನಮಗೂ ಹೆಮ್ಮೆಯಲ್ಲವೆ ಐತಾಳರೆ? ಆದರೇನು? ನಮ್ಮನಿಮ್ಮ ಮಾತಿಗೆ ಈ ಕಾಲದಲ್ಲಿ ಮನ್ನಣೆ ಸಿಗುವುದು ಅಷ್ಟರಲ್ಲೇ ಇದೆ, ಮುಖ್ಯವಾಗಿ ಗಂಡು ಮೆಚ್ಚದೆ ಈಗ ಮದುವೆಯಾಗುವಂತೆಯೇ ಇಲ್ಲ.'

'ಹೌದು, ಈಗಿನ ಸಮಾಜವೇ ಹೀಗೆ; ಒಂದು ದೃಷ್ಟಿಯಿಂದ ವಿಚಾರಿಸಿದರೆ, ಅದರಲ್ಲಿ ಯಾವ ದೋಷವೂ ಕಾಣಿಸುವುದಿಲ್ಲ. ಜೀವನವಿಡೀ ಹೊಂದಿಕೊಂಡು ಹೋಗಬೇಕಾದವರು ಅವರೇ ಅಲ್ಲವೇ ? ಅವರ ಅಭಿಪ್ರಾಯ ಕೇಳದೆ, ಮಾತಾಪಿತರೇ ನಿರ್ಧರಿಸುವುದರಲ್ಲಿ ಯಾವ ಹುರುಳಿದೆ ಹೇಳಿ ?'

'ಹಿಂದಿನ ಕಾಲದ ವಿವಾಹಗಳೆಲ್ಲ ವಧೂವರರ ಅಭಿಪ್ರಾಯದಂತೆಯೇ ನಡೆಯುತ್ತಿದ್ದುವೆ? ನನ್ನ ಮದುವೆಯನ್ನು ಅಪ್ಪನೇ ನಿಶ್ಚಯಿಸಿದರು. ನಾವೀಗ ಸುಸೂತ್ರವಾಗಿ ಜೀವನ ಸಾಗಿಸುತ್ತಿಲ್ಲವೆ ? ನೀವೇನೇ ಎನ್ನಿರಿ; ಕಾಲಸ್ಥಿತಿ ಕೆಡುತ್ತಿದೆಯೆನ್ನುವುದರಲ್ಲಿ ಸಂಶಯವಿಲ್ಲ'—ಒಂದು ಚಿಟಿಕೆ ನಶ್ಯವನ್ನು ನಾಸಾರಂಧ್ರದೊಳಗೆ ತುರುಕಿಸುತ್ತ ಶಾಸ್ತ್ರಿಗಳೆಂದರು.

'ಆಗಲಿ ಆ ವಿಚಾರವೇಕೆ ಈಗ ? ನಿಮ್ಮ ಮಗನೂ ಹುಡುಗಿಯನ್ನು ನೋಡಿ ಹೋಗಲಿ; ಯಾವುದರ ಹೆದರಿಕೆಯೂ ನಮಗಿಲ್ಲ. ಆದರೆ ವರದಕ್ಷಿಣೆಯ ಪ್ರಶ್ನೆಯೊಂದು ನಮ್ಮಿಂದ ಬಗೆಹರಿಯುವಂತಿಲ್ಲ. ಅದಕ್ಕಾಗಿಯೆ ಇಷ್ಟು ಒದ್ದಾಟಪಡಬೇಕಾಗಿದೆ. ಹಾಗೆಂದು ಕಂಡ-ಕಂಡವರ ಕೊರಳಿಗೆ ಕಟ್ಟುವುದಕ್ಕೂ ಇಷ್ಟವಿಲ್ಲ. ವಿದ್ಯೆಯೊಂದು ಭೂಷಣವೆಂದು B. A. ವರೆಗೆ ಕಲಿಸಿದೆ. ಅದೇ ಈಗ ತೊಂದರೆಯಾಗಿದೆ. ಅವಿದ್ಯಾವಂತನಿಗೆ ಕೊಡುವ ಇಚ್ಛೆ ಇಲ್ಲ. ವಿದ್ಯಾವಂತರೂ ಹಣದ ಮುಖ ನೋಡುತ್ತಿದ್ದಾರೆ. ಒಟ್ಟಾರೆ ದುರದೃಷ್ಟ'—ಐತಾಳರು ಜೋಲು ಮೋರೆಯಿಂದ ಹೇಳಿದರು.

'ನಿಮ್ಮ ಕಷ್ಟದ ಕಲ್ಪನೆ ನನಗೂ ಆಗುತ್ತಿದೆ. ಆದರೆ ನಾನು ನಿರುಪಾಯನಾಗಿದ್ದೇನೆ. ವರದಕ್ಷಿಣೆಗಾಗಿ ನೀವೇನೂ ಗಾಬರಿಯಾಗಬೇಕಿಲ್ಲ. ನಮಗಾರಿಗೂ ಅದರ ಆಸೆಯಿಲ್ಲ. ಆದರೆ ಹುಡುಗ ಒಪ್ಪುವುದು ಮುಖ್ಯ. ಇಂದು ಒಂದು ಮಾತು ಕೇಳುತ್ತೇನೆ. 'ನೋಡೋಣ' ಎಂದರೆ ನಾಡಿದು ಕರೆದುಕೊಂಡು ಬರುತ್ತೇನೆ. ನಾಲ್ಕೈದು ಮೈಲು ದೂರವಷ್ಟೆ ! ನನ್ನಿಂದಾದಷ್ಟು ಪ್ರಯತ್ನಿಸುತ್ತೇನೆ. ಮತ್ತೆ ದೈವಚಿತ್ತ'—ಎಂದರು ಶಾಸ್ತ್ರಿಗಳು.

ಅಷ್ಟರೊಳಗೆ ಒಳಗಿನಿಂದ ಬಿಸಿಬಿಸಿ ಉಪಾಹಾರ ಬಂತು. ಐತಾಳರು ಅದನ್ನು ಸೇವಿಸಿ, ಮತ್ತೊಮ್ಮೆ ವೀಳ್ಯ ಹಾಕಿ ಹೊರಬಿದ್ದರು. ಇನ್ನು ತಮ್ಮ ಮಗಳ ಮದುವೆ ಆದಂತೆಯೇ—ಎಂಬ ಆತ್ಮವಿಶ್ವಾಸ ಅವರ ಮುಖದ ಮೇಲೆ ಎದ್ದು ಕಾಣಿಸುತ್ತಿತ್ತು.

x x x x x

ಶ್ರೀನಿವಾಸ ಶಾಸ್ತ್ರಿಗಳ ಮನೆತನ ಅನಾದಿಯಿಂದಲೂ ಆಚಾರ-ವಿಚಾರಗಳಿಗೆ ಹೆಸರಾದುದು. ಈ ೨೦ ನೆಯ ಶತಮಾನದಲ್ಲೂ ಅವರ ಮನೆಯ ನೇಮನಿಷ್ಠೆಗಳನ್ನು ಕಂಡರೆ, ಎಂತಹ ಸನಾತನಿಯೂ ಬೆರಗಾಗಬೇಕು. ಅವರ ವಯಸ್ಸೀಗ ೬೦ ರ ಗಡಿಯನ್ನು ದಾಟಿದ್ದರೂ, ನಿತ್ಯಕರ್ಮಗಳಲ್ಲಿ ಯಾವುದಕ್ಕೂ ಲೋಪವುಂಟಾಗಿರಲಿಲ್ಲ. ದಿನಾಲು

[illegible]

[illegible] B. A. [illegible]

[illegible]

[illegible] B. A. [illegible]

[illegible]

[illegible]

[illegible]

[illegible]

[illegible]

[illegible]

[illegible]

ತನ್ನ ಕೆಲಸಕ್ಕೆ ಹೋಗುವಳು. ತಾಯಿಯ ಅಂತಃಕರಣ, ಮಮತೆ—ಇವುಗಳನ್ನು ಅವನೂ ಬಲ್ಲ. ಆದರೆ 'ಈಗ ಶಾರದೆಯೇ ಕಾಫೀ ತಂದು ನಾಲ್ಕು ಮಾತು ಆಡುತ್ತಿದ್ದರೆ ಅದೆಷ್ಟು ಸೊಗಸಾಗುತ್ತಿತ್ತು!' ಎಂದು ಅವನ ಮನಸ್ಸು ಒಡನುಡಿಯುತ್ತಿತ್ತು. ಯೋಚಿಸುತ್ತ ಯೋಚಿಸುತ್ತ ಅವನು ಒಮ್ಮೆಲೇ ಕಲ್ಪನಾಲೋಕಕ್ಕೆ ತಲುಪುತ್ತಿದ್ದ.

'ಮನೆಯಲ್ಲೇ ಕುಳಿತು ಬಿಟ್ಟೆ; ತಿರುಗಾಡಿ ಬರುವುದಿಲ್ಲವೇ?' ಎಂದು ತಾಯಿ ಮತ್ತೊಮ್ಮೆ ಬಂದು ಹೇಳಿದಾಗಲೇ ಅವನು ಭಾವ-ಸಮಾಧಿಯಿಂದ ಎಚ್ಚರಗೊಳ್ಳುವ. ಇನ್ನು ಶಾರದೆಯ ಮಾತು ತೆಗೆಯುವುದಾದರೂ ಹೇಗೆ? ಅವನು ಅಷ್ಟು ನಾಚಿಗೆಗೇಡಿಯೇ? 'ತಾಯಿ ಏನೆಂದುಕೊಳ್ಳುವಳೋ! ಹೋಗಲಿ; ಆ ವಿಚಾರ,' ಎಂದು ನಿರಾಶೆಯಿಂದ ಹಿಂದಿರುಗುತ್ತಿದ್ದ. ಹೀಗೆಯೇ ಆಗಾಗ ನಡೆಯುತ್ತಿದ್ದುವು.

ಒಂದುದಿನ ಅವನು ಎಲ್ಲಿಲ್ಲದ ಉತ್ಸಾಹವನ್ನು ತಂದುಕೊಂಡು ಧೈರ್ಯವಾಗಿ ತಾಯಿಯ ಬಳಿಹೋಗಿ 'ಅಮ್ಮಾ' —ಎಂದ.

'ಏನು ಮಗೂ, ಇಂದು ತಿರುಗಾಡಲು ಹೋಗುವುದಿಲ್ಲವೆ?'

'ಇಲ್ಲಮ್ಮಾ! 'ಜಾತಕಫಲ' ಸಿನೇಮಾ ಬಂದಿದೆ. ಕನ್ನಡಚಿತ್ರ. ಬರುತ್ತೀಯೇನಮ್ಮಾ, ಸಂಜೆಯೇ ಹೋಗಿ ಬರೋಣ!'

'ಸಿನೇಮಾ ಗಿನೇಮಾ ಎಂದರೆ ನನಗಾಗದೆಂದು ನಿನಗೆ ಗೊತ್ತೇ ಇದೆ. ಅಂದು ನಿನ್ನ ಒತ್ತಾಯಕ್ಕೆ ಮೊದಲ ಬಾರಿ ಕಂಡ ಸಿನೇಮವೇ ಸಾಕಾಯಿತು; ಅದೇನು ಹರಿಕಥೆಯೇ; ಪುರಾಣವೇ! ನಮ್ಮಂತಹ ಹಳಬರಿಗೆ ಅವೆಲ್ಲ ಏಕೆ ಮಗೂ! ಅಲ್ಲದೆ ಈಗ ತುಂಬಾ ಕೆಲಸವೂ ಇದೆ.'

'ಅವಳು.......ಅವಳು.......ನೋಡುವಳೋ ಕೇಳು' – ಕಷ್ಟದಿಂದ ತೊದಲುತ್ತಾ ಅವನು ಕೇಳಿದ. ಅವನ ಮೈಯೆಲ್ಲ ಬೆವತು ಹೋಯಿತು.

'ಅದಕ್ಕೇನು; ನೋಡಲಿ ಬೇಕಾದರೆ.... ಆದರೆ ಇಂದು ಮಾತ್ರ ಬೇಡ. ಇಂದು ಸೋಮವಾರ ಅಲ್ಲವೆ? ಮೃತ್ಯುಂಜಯ ದೇವಾಲಯಕ್ಕೆ ಹೋಗಿ ಬರಬೇಕು!'

ಕೇಶವನ ಉತ್ಸಾಹ ಝುರ್ರನೆ ಇಳಿದು ಹೋಯಿತು. 'ದೈವ-ಭಕ್ತಿಗಿಂತ ಮೇಲಾದುದು ಯಾವುದೂ ಇಲ್ಲ' ಎಂದು ತಾಯಿಗೆನಿಸಿದರೆ– 'ಇದೆಲ್ಲಿಯ ಕಾಟ ಬಂತಪ್ಪ; ಹಾಳಾದ ದೇವರೂ ನಮ್ಮ ಕಾರ್ಯಕ್ಕೆ ವಿಘ್ನ ತರಬೇಕೆ?' ಎಂದು ಮಗನೆಣಿಸಿದುದು ತಪ್ಪಲ್ಲ. ಅವನು ನಿರಾಶೆಯಿಂದ ಕಾಲೆಳೆದುಕೊಳ್ಳುತ್ತ ಹೊರನಡೆದ.

ಗಂಗಮ್ಮನಿಗೆ ಪುರಾಣ ಕೇಳುವ ಹಂಬಲ ಹೆಚ್ಚು. ಶಾಸ್ತ್ರಿಗಳು ಯಾವಾಗಲೂ ಶಿಷ್ಯರಿಗೆ ವೇದಪಾಠ ಹೇಳುವುದರಲ್ಲೇ ಕಾಲ ಕಳೆಯುತ್ತಿದ್ದರು. ಮೊದಲಾದರೆ, ಗಂಗಮ್ಮನಿಗೆ ಮನೆಯ ಕೆಲಸಗಳಿಂದ ಎಳ್ಳಷ್ಟೂ ಬಿಡುವು ಸಿಗುತ್ತಿದ್ದಿಲ್ಲ.

ಈಗ ಹಾಗಲ್ಲ; ಸೊಸೆ ಬಂದು ಎಲ್ಲವನ್ನೂ ತಾನೇ ತಾನಾಗಿ ಮಾಡುತ್ತಿದ್ದಾಳೆ. ಹೀಗಾಗಿ ಹೊತ್ತೇ ಹೋಗದು. ಮಧ್ಯಾಹ್ನದ ಊಟದ ಬಳಿಕ ಬೇರೇನೂ ಕೆಲಸವಿರುವುದಿಲ್ಲ. ಆ ಕಾಲವನ್ನು ವ್ಯರ್ಥವಾಗಿ ಕಳೆಯಲು ಮನಸ್ಸಿಲ್ಲದೆ, ಸೊಸೆಯೊಡನೆ ಪುರಾಣವನ್ನೋದಲು ಹೇಳುತ್ತಾಳೆ. ರಾಮಾಯಣ, ಭಾರತ, ಭಾಗವತ ಎಲ್ಲವನ್ನೂ ಕೇಳುವ ಆಸೆ ಗಂಗಮ್ಮನಿಗೆ. ಶಾರದೆಯೂ ತುಂಬ ಉತ್ಸಾಹದಿಂದ ಓದಿ ಹೇಳುತ್ತಾಳೆ; ಅರ್ಥವಾಗದ ವಿಚಾರವನ್ನು ವಿವರಿಸಿ ಹೇಳುತ್ತಾಳೆ; ಆದರೆ ರಜಾದಿನಗಳಲ್ಲಿ ಪುರಾಣವೋದುತ್ತ ಕುಳಿತುಕೊಳ್ಳಲು ಅವಳಿಗೆ ತುಸು ಅಳುಕಾಗುತ್ತದೆ. ಒಂದು ದಿನ ಕೇಶವನು ಇವಳ ಪುರಾಣವಾಚನವನ್ನು ಕಾಲುಗಂಟೆಯ ವರೆಗೆ ಕೇಳಿ 'ಮಾರ್ಮಿಕ'ವಾಗಿ ಮಾತಾಡಿ ಹೋಗಿದ್ದ. ಅದರರ್ಥ ಗಂಗಮ್ಮನಿಗೆ ಆಗದಿದ್ದರೂ ಶಾರದೆಗೆ ಗೊತ್ತಾಗಿತ್ತು. ಪತಿಯು ಧರ್ಮಗ್ರಂಥಗಳನ್ನು ಯಾವ ದೃಷ್ಟಿಯಿಂದ ನೋಡುತ್ತಾರೆಂದೂ ಅವಳಿಗೆ ತಿಳಿದಿತ್ತು. ಹೀಗಾಗಿ ರಜಾದಿನಗಳಲ್ಲಿ– ಅದೂ ಕೇಶವನು ಮನೆಯಲ್ಲೇ ಇದ್ದರೆ– ಮುಕ್ತಮನಸ್ಸಿನಿಂದ ಓದುವುದು ಅವಳಿಗೆ ಕಷ್ಟವಾಗುತ್ತಿತ್ತು.

ಶಾರದೆಗೆ ಓದುವ ಹುಚ್ಚಿದೆಯೆಂದು ಕೇಶವ ಅರಿತುಕೊಂಡಿದ್ದ. ಆದರೆ ಈ ಪುರಾಣಪಠನದಲ್ಲೇ ಅವಳ ಓದು ಮುಕ್ತಾಯವಾಗಬೇಕೆ?—ಎಂದು ಅವನು ಕೊರಗಿದ. ಇಂಗ್ಲಿಷ್ ಸಾಹಿತ್ಯದ ಉದ್ಗ್ರಂಥಗಳನ್ನೋದಿ ತನ್ನ ಜ್ಞಾನಪಿಪಾಸೆಯನ್ನು ತಣಿಸಿಕೊಳಬಾರದೇಕೆ?—ಎಂಬ ಆಸೆಯಿಂದ, ಅವನು ಅವಳನ್ನು ಕೇಳದೆಯೇ ಕಾಲೇಜಿನಿಂದ ಒಂದು ಉತ್ತಮ ಕಾದಂಬರಿಯನ್ನು ತಂದು ಅವಳ ಕೈಗಿತ್ತ; ಅವಳು ಮುಗುಳ್ನಗುತ್ತಾ ತೆಗೆದುಕೊಂಡಳು.

ಒಂದು ವಾರ ಕಳೆದರೂ ಅದನ್ನವಳು ಮುಗಿಸದಾದಳು. ಎಷ್ಟು ಪ್ರಯತ್ನಿಸಿದರೂ ಅವಳ ಓದು ಸಾಗುತ್ತಿದ್ದಿಲ್ಲ. ಯಾವಾಗಲೂ



ಒಂದಲ್ಲದೊಂದು ಕೆಲಸ ಕಾದಿರುತ್ತಿತ್ತು. ಈ ಎಲ್ಲ ಕರ್ತವ್ಯಗಳಿಗಿಂತಲೂ ಅದೇ ಮುಖ್ಯವಾದುದೆಂದು ಅವಳು ಭಾವಿಸಲಿಲ್ಲ.

೧೫ ದಿನಗಳ ಬಳಿಕ ಅವಕಾಶ ಸಿಕ್ಕಾಗ, ಕೇಶವನು ಮೆಲ್ಲನೆ–'ಹೇಗಿದೆ ಕಾದಂಬರಿ?' ಎಂದು ಕೇಳಿದ.

'ನಾನಿನ್ನೂ ಪೂರ್ಣವಾಗಿ ಓದಿಲ್ಲ'— ನಿರ್ವಿಕಾರ ಮುದ್ರೆಯಿಂದ ಅವಳೆಂದಳು.

'ಓದಿಲ್ಲ....? ೧೫ ದಿನ ಕಳೆದರೂ ಮುಗಿದಿಲ್ಲವೆಂದರೆ.... !'

ಅವಳೇನೂ ಹೇಳಲಿಲ್ಲ. ತಲೆತಗ್ಗಿಸಿ ನಿಂತಳು.

'ರಾಮಾಯಣವಾಗಿದ್ದರೆ ಎರಡು ಬಾರಿ ಮುಗಿಸುತ್ತಿದ್ದೆ ಅಲ್ಲವೆ?'

ಅವಳು ಆ ವ್ಯಂಗ್ಯಕ್ಕೂ ಮಾರ್ನುಡಿಯಲಿಲ್ಲ.

'ನಿನ್ನ ವ್ಯವಹಾರ ದಿನದಿನಕ್ಕೆ ಬದಲಾಗುತ್ತಿದೆ. ತಪಸ್ವಿನಿಯಾಗುವೆಯಾ—ಎಂಬ ಸಂದೇಹ ನನಗೆ!'

'ಅದಕ್ಕೇಕೆ ಹೆದರುವಿರಿ ? ನೀವೇನೂ ತಪಸ್ವಿಗಳಾಗಬೇಕಿಲ್ಲವಷ್ಟೇ!'–ಮುಗ್ಧ ಮಂದಹಾಸವನ್ನು ಬೀರುತ್ತಾ ಅವಳು ಹೇಳಿದಳು.

ಈ ಮಂದಹಾಸ– ಸರಳ ಮಂದಹಾಸ–ಕೇಶವನ ಎಲ್ಲ ಕೋಪ ಸಂತಾಪಗಳನ್ನೂ ಕ್ಷಣಕಾಲದಲ್ಲಿ ಮರೆಯಿಸಿ ಬಿಡುತ್ತಿತ್ತು. ವಿವಾಹವಾದಂದಿನಿಂದ ಅವಳ ಮೊಗದ ಮೇಲೆ ನಲಿದಾಡುವ ಆ ಮುಗುಳ್ನಗೆ, ಎಷ್ಟೋ ವಿರಸಪ್ರಸಂಗಗಳಿಂದ ಪಾರುಮಾಡಿಸಿತ್ತು. ಇಲ್ಲದಿದ್ದರೆ ಇಷ್ಟರೊಳಗೆ ಅವನು ಮನೆಯಲ್ಲೊಂದು ಕ್ರಾಂತಿಯನ್ನೇ ಎಬ್ಬಿಸಿ ಬಿಡುತ್ತಿದ್ದನೋ ಏನೋ!

ವಿಶೇಷ ಹಬ್ಬದ ದಿನಗಳಲ್ಲಿ ಶಿವರಾಮ ಐತಾಳರು, ಮಗಳನ್ನೂ ಅಳಿಯನನ್ನೂ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ನಾಲ್ಕಾರು ದಿನ ಅವನು ಬಹು ಉಲ್ಲಾಸದಿಂದ ಕಾಲಕಳೆಯುತ್ತಿದ್ದ. ತವರುಮನೆಯಲ್ಲಿ ಶಾರದೆಯ ರೂಪವೇ ಬೇರಾಗುತ್ತಿತ್ತು. ಪತಿಯೊಡನೆ ಯಾವಾಗಲೂ ಇರುತ್ತಿದ್ದಳು. ಸಂಜೆ ತಪ್ಪದೆ walking ಗೆ ಹೋಗುವುದೂ ಎರಡು ದಿನಗಳಿಗೊಮ್ಮೆ ಸಿನೇಮಾ ನೋಡುವುದೂ ನಿಯಮದಂತಾಗಿತ್ತು; ಕೇಶವನ ಮಾದರಿಯ ಸತಿಯಾಗಿ ಅವನ ಇಂಗಿತದಂತೆ ಅವಳು ನಡೆದುಕೊಳ್ಳುತ್ತಿದ್ದಳು. ತಾನು ಕನಸು ಕಾಣುತ್ತಿರುವೆನೋ ಎಂಬಷ್ಟು ಅವನಿಗೆ ಈ ಪರಿವರ್ತನೆಯಿಂದ ಆಶ್ಚರ್ಯವಾಗುತ್ತಿತ್ತು. ಕನಸಲ್ಲ–ವಾಸ್ತವವೆಂದು ತಿಳಿದಾಗ, ಸ್ವರ್ಗಸುಖವೇ ತನಗೆ ದೊರೆತಿದೆಯೆಂದು ಆನಂದಗೊಳ್ಳುವನು.

ಈ ಸಂತಸದ ಹುಮ್ಮಸ್ಸಿನಲ್ಲಿಯೇ ಕೇಶವ, ಶಾರದೆಗಾಗಿ ಒಂದು ರಿಸ್ಟ್‌ವಾಚ್ ತಂದುಕೊಟ್ಟ. ಅವಳದನ್ನು ನಗುತ್ತಾ ಸ್ವೀಕರಿಸಿದಾಗ-

'ಏನು ಚೆಂದಕಾಣಿಸುವುದಿಲ್ಲವೇ ನಿನಗೆ?' ಎಂದು ಕೇಳಿದ.

'ಕಾಣಿಸುತ್ತದೆ; ಆದರೆ.......'

'ಆದರೆ ಗೀದರೆ ಏನೂ ಇಲ್ಲ; ಮನೆಯಲ್ಲೊಂದು ಗಡಿಯಾರವೂ ಇಲ್ಲ; ಸಮಯ ನೋಡಲು 'ವಾಚ್' ಆದರೂ ಬೇಡವೇ? ಸೌಕರ್ಯ ಪಡೆಯುವ ಅರ್ಹತೆಯಿದ್ದೂ ಅದರಿಂದ ವಂಚಿರಾಗುವುದು ಪಾಪವಲ್ಲವೆ ?

'ಪಾಪ-ಪುಣ್ಯಗಳನ್ನು ವಿವೇಚಿಸುವ ಅಧಿಕಾರ ನಿಮಗಿಲ್ಲ'—ಎಂದು ಹೇಳುವ ಮನಸ್ಸು ಶಾರದೆಗಾಯಿತು. ಆದರೆ ಅವಳದನ್ನು ಬಾಯಿಂದಾಡಲಿಲ್ಲ.

ಮುಂದೊಂದು ದಿನ ಶಾರದೆಯೊಡನೆ ಕೇಶವ ಮನೆಗೆ ಮರಳಲೇ ಬೇಕಾಯಿತು. ಪಡೆದ ರಜೆ ಮುಗಿದಿದ್ದುದರಿಂದ, ಅನಿವಾರ್ಯವಾಗಿ, ಮನಸ್ಸಿಲ್ಲದ ಮನಸ್ಸಿನಿಂದ ಅವನು ಮನೆಗೆ ಬಂದ.

ಆದರೆ ಅದೇನು ಮಾಟವೋ ಮೋಡಿಯೋ ತಿಳಿಯದು ಶಾಸ್ತ್ರಿಗಳ ಮನೆಗೆ ಕಾಲಿಟ್ಟೊಡನೆಯೆ ಅವಳು ಸಂಪೂರ್ಣ ಸನಾತನಿಯಾದಳು. ಸೇವಾಶುಶ್ರೂಷೆ, ಮಡಿ, ಪುರಾಣ–ಇವುಗಳ ಗೊಂದಲದಲ್ಲೇ ಅವಳ ಸಮಯ ಕಳೆಯತೊಡಗಿತು. ಪತಿಯೊಡನೆ ಮಾತಾಡುವುದೂ ಸಂಜೆ ತಿರುಗಾಡುವುದೂ ಪೂರ್ಣವಾಗಿ ನಿಂತುಹೋಯಿತು. ಪ್ರೀತಿಯಿಂದ ಕೇಶವನು ಕೊಟ್ಟಿದ್ದ ರಿಸ್ಟ್‌ವಾಚ್ ಪೆಟ್ಟಿಗೆಯ ಮೂಲೆ ಸೇರಿತು. ಅದರ ಉಪಯೋಗವೇ ಆಗುತ್ತಿಲ್ಲವೆಂದು ತಿಳಿದಾಗ, ಕೇಶವನ ಮನಸ್ಸು ರೋಸಿ ಹೋಯಿತು.

'ಇವಳೇಕೆ ಹೀಗೆ 'ಓತಿಕೇತ' ವಂತೆ ಬಣ್ಣ ಬದಲಾಯಿಸುತ್ತಾಳೆ ? ಅತ್ತೆ-ಮಾವಂದಿರ ಭಯಕ್ಕಾಗಿಯೇ ? ಸ್ವೇಚ್ಛೆಯಿಂದಲೇ ? ಮತ್ತೆ ತವರುಮನೆಯ ಆ ವರ್ತನೆಗೇನು ಅರ್ಥ ? ಇವೆರಡರಲ್ಲಿ ಯಾವುದು ಸತ್ಯ ? ಯಾವುದು ಸೋಗು ? ನಾರಿಯ ಮನಸ್ಸೆಷ್ಟು ಆಳವಾದುದು !'— ಎಂದು ಅವನು ಮೌನವಾಗಿ ಆಲೋಚಿಸುವ. ಆದರೆ ಸಮಸ್ಯೆ ಬಗೆಹರಿಯುವ ಲಕ್ಷಣ ಕಾಣುತ್ತಿದ್ದಿಲ್ಲ.

ತಂದೆ-ತಾಯಂದಿರಿಗೆ ವಿರುದ್ಧವಾಗಿ ಯಾವ ಹೆಜ್ಜೆಯನ್ನೂ ಮುಂದಿಡಲು ಅವನು ಸಿದ್ಧನಿದ್ದಿಲ್ಲ; ಅಲ್ಲದೆ ಸ್ವಭಾವತಃ ಸಂಕೋಚಶೀಲನಾದ ಅವನಿಗೆ, ತನ್ನ ಭಾವನೆಗಳನ್ನು ಹೊರಗೆಡಹುವುದು ಸುಲಭಸಾಧ್ಯವಾಗಿರಲಿಲ್ಲ. ಮನೆಯನ್ನು ಸುಲಕ್ಷಣವಾಗಿಡಬೇಕೆಂದು ಅವನು ಎಷ್ಟೋದಿನಗಳಿಂದ ಹವಣಿಸುತ್ತಿದ್ದರೂ, ದಿನದಿನಕ್ಕೆ ಅನಾಗರಿಕತೆಯ ಕಡೆಗೇ ಭರದಿಂದ ಸಾಗುತ್ತಿದೆಯೆಂದು ಅವನು ಭಾವಿಸಿದ. ' ನಾಗರಕತೆ ' 'ಎಂದರೆ 'ಲೌಕಿಕ ವ್ಯವಹಾರ' ಎಂದೇ ಅವನ ಪರಿಭಾಷೆ.

ಮನುಷ್ಯ ತನ್ನ ಸಂಕಷ್ಟಗಳನ್ನು ಬಾಯಿಬಿಟ್ಟು ಹೇಳಲಾರದೆ ಸಂಕೋಚದಿಂದ ಅದುಮಿಟ್ಟುಕೊಂಡರೆ ಅದು ಮನಸ್ಸನ್ನೇ ಕೊರೆಯತೊಡಗುತ್ತದೆ; ಕೇಶವನ ಸ್ಥಿತಿಯೂ ಹಾಗಾಯಿತು. ತನ್ನ ಇಚ್ಛೆಗೆ ವಿರುದ್ಧವಾಗಿ ಬಂದ ಈ ಮಹಾ ಆತಂಕಗಳನ್ನು ನಿರ್ಮೂಲಿಸುವ ಎದೆಗಾರಿಕೆ ಅವನಿಗಿದ್ದಿಲ್ಲ. ಸ್ಪಷ್ಟವಾಗಿ ಮನದ ಇಂಗಿತವನ್ನು ಹೊರಗೆಡಹಲಾರ. ಹೀಗಾಗಿ ಅವನು ಯಾವಾಗಲೂ ಅಂತರ್ಮುಖಿಯಾಗಿ ಯೋಚಿಸುತ್ತಲೇ ಇರುವ. ಅಮೃತೋಪಮವಾಗಬೇಕಿದ್ದ ಈ ಸಮಯ ಹೀಗೆ ವಿಷಮಯವಾಗಬೇಕಾದರೆ ತಾನೆಂತಹನಿರಬೇಕೆಂದು ಭಾವಿಸುವ.

ತಾಳ್ಮೆಯಿಂದ ವಿಚಾರಮಾಡುತ್ತಿದ್ದರೆ ಇಷ್ಟು ಕ್ಷುಲ್ಲಕ ವಿಷಯಕ್ಕಾಗಿ ಅವನೀ ರೀತಿ ತಲೆಗೆಡಿಸಿಕೊಳ್ಳಬೇಕಿರಲಿಲ್ಲ. ಮುಪ್ಪಿನ ತಂದೆ-ತಾಯಂದಿರ ಸೇವೆ ಮಾಡುವುದು ತನ್ನ ಕರ್ತವ್ಯವೆಂದೂ

ತನ್ನಿಂದಾಗದ ಕೆಲಸವನ್ನು ತನ್ನ ಪತ್ನಿ ಮಾಡುತ್ತಿರುವಳೆಂದೂ ಯೋಚಿಸಿ ಅವನು ಸಂತೋಷಿಸ ಬಹುದಿತ್ತು; ಅಲ್ಲದೆ, ಇಷ್ಟು ವರ್ಷಗಳ ವರೆಗೆ ಸನಾತನ ಪದ್ಧತಿಯಲ್ಲೇ ಇದ್ದ ಮನೆ ಒಮ್ಮಿಂದೊಮ್ಮೆ ಆಧುನಿಕ ವಾತಾವರಣಕ್ಕೆ ಹೊಂದಿಕೊಳ್ಳುವುದು ಶಕ್ಯವಿಲ್ಲವೆಂದೂ, ಹಾಗೆ ಪ್ರಯತ್ನಿಸಿದರೆ ವೃದ್ಧಮಾತಾ-ಪಿತೃಗಳ ಮನನೋಯುವುದೆಂದೂ ಅವನು ಭಾವಿಸಬೇಕಿತ್ತು. ಹಿರಿಯರ ಕುರಿತು ತನ್ನವೂ ಕೆಲವು ಕರ್ತವ್ಯಗಳವೆಯೆಂದು ಅವನು ಸಮಾಧಾನ ತಳೆಯ ಬಹುದಿತ್ತು.

ಇಷ್ಟೇ ಅಲ್ಲವೆ, ಈ ಪ್ರಕರಣದಲ್ಲಿ ದೋಷಿಯಾದರೂ ಯಾರು? 'ತನ್ನ ಮಗ-ಸೊಸೆ ಸುಖವಾಗಿ ಸಂಸಾರ ಮಾಡಿಕೊಂಡು ಹೋಗಲೆಂದು ಮಾತಾ-ಪಿತೃಗಳು ಬಯಸುವುದಿಲ್ಲವೆ? ಶಾಸ್ತ್ರಿಗಳೇನು ಮಗನ ಸುಖಕ್ಕೆ ಕಲ್ಲು ಹಾಕುತ್ತಾರೆಯೇ? ಆದರೆ ಅವರೇನು ಮಾಡಿಯಾರು? ಸುಖದ ಈ ಹೊಸ ರೂಪ ಅವರಿಗೆ ಅರ್ಥವಾಗುವುದು ಹೇಗೆ? ಮಗನು ನಿತ್ಯವೂ ತನ್ನ ಹೆಂಡತಿಯೊಡನೆ 'ಸಂಚಾರ'ಕ್ಕೆ ಹೊರಡುವ ವಿಲಕ್ಷಣ ಕಲ್ಪನೆ, ಅವರ ಸನಾತನೀ ಮೆದುಳಿನಲ್ಲಿ ಒಡಮೂಡದಿದ್ದರೆ ಅವರನ್ನು ದೂರಿ ಫಲವೇನು?

ಇದಕ್ಕೆಲ್ಲ ಅಡ್ಡ ಬರುವುದು ಕೇವಲ ಮೂರಕ್ಷರದ 'ಸಂಕೋಚ'ವೆಂದು ಪಾಪ; ಅವನಿಗೇನು ಗೊತ್ತು? ತನ್ನ ಮನದಾಸೆಯನ್ನು ತಂದೆಗೆ ತಿಳಿಸಲು ಕೇಶವನಿಗೆ ಒಂದು ತೆರನ ಸಂಕೋಚ. ಎದುರೆದುರೇ ಮಾತಾಡಲು ಎಲ್ಲಿಲ್ಲದ ಅಳುಕು; ಅಲ್ಲದೆ ಶಾರದೆಗೂ ಪತಿಯ ಮನೋಭಾವನೆಯನ್ನು ಅತ್ತೆ-ಮಾವಂದಿರಲ್ಲಿ ಹೇಳಲು ಬೇಡದ ಸಂಕೋಚ. ಈ ಸಂಕೋಚದ ಪರಿಣಾಮದಿಂದಾಗಿ ಕೇಶವನು ಮಾತ್ರ ದಿನದಿನಕ್ಕೆ ಸೊರಗುತ್ತ ಹೋದ; ಮೊದಲೇ ಗಂಭೀರವಾಗಿದ್ದ ಮನೆ ಮತ್ತಷ್ಟು ಗಂಭೀರವಾಯಿತು.

ಮಗನ ದೇಹಸ್ಥಿತಿ ದಿನದಿನಕ್ಕೆ ಕೆಡುತ್ತಿದೆಯೆಂದು ಶಾಸ್ತ್ರಿಗಳಿಗೆ ತಿಳಿಯಿತು. ಕಾರಣ ಅರಿವಾಗದಿದ್ದರೂ ಅವನ ಕಂದುಮೊಗವನ್ನು ಕಂಡಾಗಲೆಲ್ಲ ಅವರು ಗಾಬರಿಯಾಗುತ್ತಿದ್ದರು. ಡಾಕ್ಟರರ ಸಲಹೆ ಕೇಳಿ ಕೆಲವು ಸಮಯ ಹವೆ ಬದಲಾವಣೆಯಾಗಬೇಕೆಂಬ ನಿರ್ಧಾರಕ್ಕೆ ಬಂದರು.

ಕೇಶವನೇನೋ ಹೋಗುವನು. ಆ ಬಗ್ಗೆ ರಜೆ ಪಡೆದೂ ಆಯಿತು. ಆದರೆ ಅವನೊಟ್ಟಿಗೆ ಯಾರು ಹೊರಡಬೇಕು? ಶಾಸ್ತ್ರಿಗಳು ಮನೆ ಬಿಟ್ಟು ಹೋಗುವಂತಿಲ್ಲ. ಈ ಸಮಸ್ಯೆಯನ್ನು ಬಿಡಿಸಲಾರದೆ ಅವರು ಮಗನನ್ನೇ ವಿಚಾರಿಸಿದರು:— 'ಎಲ್ಲಿಯ ವರೆಗೆ ಹೋಗಿ ಬರುತ್ತಿ? ಯಾರಾದರೂ ಒಟ್ಟಿಗೆ ಬರುವ ಗೆಳೆಯರಿದ್ದಾರೆಯೆ?'

'ಹೋಗುವುದೆಲ್ಲಿಗೆಂದು ಇನ್ನೂ ನಿರ್ಧಾರ ಮಾಡಿಲ್ಲ. ಆದರೂ ನಾಲ್ಕಾರು ಸ್ಥಳಗಳನ್ನು ನೋಡ ಬಂದರಾದೀತೆಂಬ ವಿಚಾರವಿದೆ. ಮನೆಯಲ್ಲಿ ಕುಳಿತು ಕುಳಿತು ಅದೇಕೋ ತುಂಬಾ ಬೇಸರು ಬಂದಿದೆ.'

'ನೀನೊಬ್ಬನೇ ಹೋಗುವುದು ಸರಿಯಲ್ಲ. ನಿನ್ನ ಸಂಗಾತಿಯಾಗಿ ಯಾರಾದರೂ ಇರಬೇಕಾಗುತ್ತದೆ. ಯಾರನ್ನು ಕರೆದೊಯ್ಯುವೆ?'

'ಅದೇಕೆ? ಶಾರದೆ ಇಲ್ಲವೆ?'

ಶಾಸ್ತ್ರಿಗಳು ಸ್ತಬ್ಧರಾದರು. ಬಿಟ್ಟ ಕಂಗಳಿಂದ ಒಂದು ಕ್ಷಣ ಕಾಲ ಮಗನನ್ನೇ ದಿಟ್ಟಿಸಿ ನೋಡಿದರು. ಮನದ ಬಯಕೆ ಅವನ ಮುಖದ ಮೇಲೆ ಎದ್ದು ಕಾಣುತ್ತಿತ್ತು. ಚಕಿತರಾದರೂ ತಮ್ಮ ಭಾವವನ್ನು ಅವರು ತೋರ್ಪಡಿಸಲಿಲ್ಲ.

ಮರುದಿನವೇ ಶಾರದೆಯೊಡನೆ ಕೇಶವನು ಪ್ರವಾಸ ಕೈಕೊಂಡ. ಗಂಗಮ್ಮನಿಗೆ ಈ ಪರಿ ಹೊಸತೆನಿಸಿದರೂ, ಮಗನ ಅನಾರೋಗ್ಯಸ್ಥಿತಿಯಲ್ಲಿ ಅದೆಲ್ಲವನ್ನೂ ಯೋಚಿಸಲು ಅವಕಾಶವಿದ್ದಿಲ್ಲ. 'ಪತಿಸೇವೆಯನ್ನು ಪತ್ನಿಯಲ್ಲದೆ ಉಳಿದವರು ಅಷ್ಟು ತತ್ಪರತೆಯಿಂದ ಮಾಡಿಯಾರೆ?' ಎಂದು ಸಮಾಧಾನ ತಾಳಿದಳು.

ಶಾಸ್ತ್ರಿಗಳಿಗೆ ಈ ಘಟನೆಯಿಂದ ಹೊಸ ಅರಿವು ಮೂಡಿದಂತಾಯಿತು. ಮಗನ ಅಸ್ವಾಸ್ಥ್ಯಕ್ಕೆ ಇದೂ ಒಂದು ಕಾರಣವಾಗಿರಬಹುದೆಂದು ಅವರ ಜಡಬುದ್ಧಿಗೆ ಹೊಳೆದಿರಲಿಲ್ಲ. ಈಗ ಅವರಿಗೆ ಎಲ್ಲವೂ ನಿಚ್ಚಳವಾದುವು. ಆಧುನಿಕ ಯುವಕರ ಹೃದಯಾಕಾಂಕ್ಷೆ ಏನಿದೆಯೆಂಬುದನ್ನು ಅವರು ತಮ್ಮ ಮನಶ್ಚಕ್ಷುವಿನಿಂದ ಸ್ಪಷ್ಟವಾಗಿ ಕಾಣತೊಡಗಿದರು. ಈ ವಿಚಾರದಲ್ಲಿ ತಾವೇ ಅಪರಾಧಿಗಳೆಂದು ಅವರ ಅಂತರಾತ್ಮ ನುಡಿಯುತ್ತಿತ್ತು.

ದಂಪತಿಗಳ ಸುಖಜೀವನಕ್ಕೆ ತಾವೇ ಕಂಟಕಪ್ರಾಯರಾದೆವೆಂದು ಅವರು ಹಲುಬಿದರು. ಮಗನ ಜೀವನಪ್ರವಾಹವನ್ನು ಬಲಾತ್ಕಾರವಾಗಿ ತಡೆದು ಬೇರೆಡೆಗೆ ಹರಿಸುವ ಶಕ್ತಿ ಅವರಿಗಿದ್ದಿಲ್ಲ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ

ಬರೆಯಿರಿ:

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ತ್ರಮ್ಮಂತೆ ಸನಾತನಿಯಾಗದೆ, ಇಂಗ್ಲೀಷು ಕಲಿತು ಲೌಕಿಕನಾಗುತ್ತಾನೆಂದು ತಿಳಿದಾಗಲೂ, ಅವರು ಹೃದಯವನ್ನು ಕಲ್ಲು ಮಾಡಿ ಸುಮ್ಮನಿದ್ದರು. ಜಪತಪ, ಪೂಜೆ-ಪುನಸ್ಕಾರಗಳತ್ತ ಅವನಿಗಿರುವ ತಿರಸ್ಕಾರ-ಬುದ್ಧಿಯನ್ನರಿತೂ ಅವರು ಮಾತಾಡಲಿಲ್ಲ. ಅವನ ನಾಸ್ತಿಕ ಮನೋ-ವೃತ್ತಿಯಿಂದ ತಮ್ಮ ಹೃದಯಕ್ಕೆ ಎಂತಹ ಬರೆ ಬಿದ್ದಿದೆಯೆಂಬುದನ್ನು ಅವರೊಮ್ಮೆಯೂ ತೋರಗೊಡಲಿಲ್ಲ. 'ಇದೆಲ್ಲ ಹೇಳಿ ಬರುವುದಲ್ಲ; ತಾನಾಗಿಯೇ ಹೊರಹೊಮ್ಮಬೇಕು; ಅವನೇನು ಅರಿಯದ ಹಸುಗೂಸೆ ? ' ಎಂದು ಅವರೆಣಿಸುತ್ತಿದ್ದರು.

ಇಷ್ಟೆಲ್ಲ ಜಾಗ್ರತೆ ವಹಿಸಿದ್ದರೂ, ತಮಗರಿಯದಂತೆಯೇ ಮಹಾಪಾತಕವೊಂದು ಸಂಭವಿಸಿದುದು ಅವರ ಮನಸ್ಸಿಗೆ ವಿಶೇಷ ನೋವನ್ನುಂಟು ಮಾಡಿತು. ಆದರೆ ಗಂಗಮ್ಮನಿಗೆ ಇದನ್ನು ತಿಳಿಸಿ, ವ್ಯರ್ಥವಾಗಿ ಅವಳನ್ನು ದುಃಖಕ್ಕೀಡು ಮಾಡುವ ಮನಸ್ಸಾಗಲಿಲ್ಲ.

೧೫ ದಿವಸಗಳ ಪ್ರವಾಸವೇ ಕೇಶವನ ಮೇಲೆ ವಿಲಕ್ಷಣ ಪ್ರಭಾವ ಬೀರಿತು. ಎಲ್ಲಕ್ಕಿಂತ ಹೆಚ್ಚಾಗಿ ಶಾರದೆಯ ಒಡನಾಟ ಅವನ ಮೇಲೆ ಮಾಟಮಾಡಿದಂತಿತ್ತು. ಪತಿಯ ಮೇಲೆ ತನ್ನ ಅಖಂಡ ವ್ಯಕ್ತಿತ್ವವನ್ನು ಅವಳು ಬೀರಿದ್ದಳು. ಅವಳ ಮಹತ್ತ್ವಿಕೆಯ ಕಲ್ಪನೆಯುಂಟಾದುದೂ ಅವನಿಗೆ ಈ ಪ್ರವಾಸದ ವೇಳೆಯಲ್ಲಿಯೇ. ಅವಳೆದುರಿಗೆ ತಾನು ಏನೂ ಅರಿಯದ ಮೊದ್ದನೆಂದು ಅವನಿಗೊ-ಮ್ಮೊಮ್ಮೆ ಭಾಸವಾಗುತ್ತಿತ್ತು. ಪ್ರತಿಯೊಂದು ಕೆಲಸದಲ್ಲೂ ಅವಳ ದಕ್ಷತೆ ಎದ್ದು ಕಾಣುತ್ತಿತ್ತು. ತನ್ನ ಆರಯಿಕೆಯ ಹೊಣೆಯನ್ನೆಲ್ಲ ಅವಳಿಗೊಪ್ಪಿಸಿ, ಸಣ್ಣ ಮಗುವಿನಂತೆ ನಿಶ್ಚಿಂತನಾಗಿ ಅವಳ ನೇಹದ ನೆಳಲಿನಲ್ಲಿ ಒರಗಿಬಿಡುತ್ತಿದ್ದ.

ಅವನಿಗೆ ಹಿಡಿದಿದ್ದ ಮನೋರೋಗ ಮೆಲ್ಲಮೆಲ್ಲನೆ ದೂರ ಸರಿಯಿತು. ಬಂದ ಉದ್ದೇಶ ಸಾರ್ಥಕವಾಯಿತು. ದೈವಭಕ್ತಿಯಿಲ್ಲದಿದ್ದರೂ ಮನಃಶಾಂತಿಗೆ ಯಾತ್ರಾಸ್ಥಳಗಳೇ ಯೋಗ್ಯವೆಂದು ನಾಲ್ಕಾರು ಪ್ರಸಿದ್ಧ ಕ್ಷೇತ್ರಗಳನ್ನೂ ಸಂದರ್ಶಿಸಿದರು ಹೀಗೆ ಉಲ್ಲಾಸದಿಂದ ಅವರು ಮನೆಗೆ ಬಂದರು.

ಪತಿಯನ್ನು ಮೊದಲಿನಂತೆಯೆ ಉಪೇಕ್ಷಿಸಿದರೆ ಕೆಲಸ ಕೆಡುವುದೆಂದು, ಈ ಘಟನೆಯಿಂದ ಶಾರದೆ ಚೆನ್ನಾಗಿ ಮನಗಂಡಳು. ಅತ್ತೆ-ಮಾವಂದಿರ ಸೇವೆಯಂತೆಯೇ ಪತಿಯ ಆರಯಿಕೆಯೂ ಅಗತ್ಯವೆಂದು ಅವಳಿಗೆ ನಿಶ್ಚಯವಾಯಿತು. ಇದುವರೆಗಿನ ತನ್ನ ಉಪೇಕ್ಷೆಗಾಗಿ ದೇವರು ಕೊಟ್ಟ ಎಚ್ಚರಿಕೆ ಇದೆಂದು ಅವಳು ಹೆದರಿದಳು. ಇದಕ್ಕೆ ಸರಿಯಾಗಿ ಶಾಸ್ತ್ರಿಗಳೂ ಕೇಶವ ಮನೆಯಲ್ಲಿದ್ದಾಗ, ಅವಳನ್ನು ಏನಾದರೊಂದು ನೆಪದಿಂದ ಅವನ ಬಳಿಯೇ ಮಾತಾಡುತ್ತಿರಲು ಕಳುಹಿಸುತ್ತಿದ್ದರು. ಈ ಪರಿವರ್ತನೆ ತಾನಾಗಿಯೇ ಜರುಗಿದುದು ಯೋಗ್ಯವಾಯಿತೆಂದು ಅವಳೆಣಿಕೆ.

x x x x

ಶಾಸ್ತ್ರಿಗಳ ಜೀವನದಷ್ಟೇ ಸರಳವಾಗಿ ಅವರ ಮರಣವೂ ಸಂಭವಿಸಿತು. ಒಂದು ದಿನ ಮಧ್ಯಾಹ್ನ ಶಿಷ್ಯರಿಗೆ ವೇದ ಹೇಳಿಕೊಡುತ್ತಿದ್ದಾಗ, ಅವರಿಗೆ ವಿಪರೀತ ಸಂಕಟವಾಯಿತು. ಗಂಗಮ್ಮ ಗಾಬರಿಯಿಂದ 'ಅಮೃತಪಾನಕ' ಮಾಡಿ ತಂದಳು. ಒಂದು ಗುಟುಕು ಕುಡಿದು ಕೆಳಗಿಟ್ಟಾಗಲೇ ಅವರ ಪ್ರಾಣೋತ್ಕ್ರಮಣವಾರಂಭವಾಯಿತು. ಊರವರೆಲ್ಲ ಸುದ್ದಿ ಕೇಳಿ ಓಡಿ ಬಂದರು; ಆದರೆ ಕಾಲನ ಕರೆಯನ್ನು ಅಲಕ್ಷ್ಯಿಸುವ ಶಕ್ತಿಯಾರಿಗಿದೆ? ಶಾಸ್ತ್ರಿಗಳು ರಾಮನಾಮವನ್ನು ಸ್ಮರಿಸುತ್ತಾ ಇಹಲೀಲೆ ಮುಗಿಸಿದರು.

ಮುಂದಿನ ಕಾರ್ಯವೆಲ್ಲ ಯಾಂತ್ರಿಕವಾಗಿ ಜರುಗಿತು ಶಾಸ್ತ್ರಿಗಳ ಮನೆತನದಲ್ಲೊಂದು ಹೊಸ ಅಧ್ಯಾಯ ಆರಂಭವಾಯಿತು ಜವಾಬ್ದಾರಿಯೆಂದರೇನೆಂಬುದರ ಅರಿವೇ ಇಲ್ಲದ ಕೇಶವ, ಮನೆಯ ಹೊಣೆಗಾರಿಕೆ ಹೊತ್ತುಕೊಳ್ಳಬೇಕಾಯಿತು. ಮೊದಲಿನಂತೆ ಅವನು ಮನೆಯ ವಿಚಾರದಲ್ಲಿ ನಿಷ್ಕ್ರಿಯನಾಗಿ ಕುಳಿತಿರುವಂತಿರಲಿಲ್ಲ.

ಪತಿಯ ಸಾವಿನಿಂದ ಗಂಗಮ್ಮ ಧೃತಿಗುಂದಿದಳು. ಮೊದಲಿನ ಉತ್ಸಾಹವೆಲ್ಲ ಮಾಯವಾಯಿತು. ಯಾವಾಗಲೂ ಒಂದ್ಕಡೆ ಮೂಲೆಯಲ್ಲಿ ಕುಳಿತು ದೇವರ ನಾಮವನ್ನು ಜಪಿಸುವುದೇ ಅವಳ ಕೆಲಸವಾಯಿತು. ಶಾರದೆಯೇ ಎಲ್ಲವನ್ನೂ ಬಲು ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದಳು. ಕೆಲಸಕ್ಕಾಗಿ ಆಳು-ಕಾಳುಗಳ ಪದ್ಧತಿಯಿದ್ದಿಲ್ಲ. ಒಂದೆಡೆ ಅತ್ತೆ—ಇನ್ನೊಂದೆಡೆ ಪತಿ—ಇವರಿಬ್ಬರ ಸೇವೆಯನ್ನು ಮಾಡಿಕೊಂಡು ತನ್ನ ಕೆಲಸವನ್ನು ಸಾಂಗವಾಗಿ ನೆರವೇರಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ಆದರೆ ಅವಳು ಸಹನೆಯ ಮೂರ್ತಿಯಾಗಿ ಎಲ್ಲವನ್ನೂ ನಿರ್ವಹಿಸಿಕೊಂಡು ಹೋಗುತ್ತಿದ್ದಳು.

ಶಾಸ್ತ್ರಿಗಳ ಸಾವಿನೊಂದಿಗೆ ಬೃಹದಾಕಾರವಾಗಿ ಎದುರು ನಿಂತ ಸಮಸ್ಯೆಯೆಂದರೆ ಪೂಜೆಯದು; ಕೇಶವ ಆ ಬಗ್ಗೆ ಉದಾಸೀನನಾಗಿಯೇ ಇದ್ದ. ಗಂಗಮ್ಮನೂ ಮಾತಾಡಲಿಲ್ಲ. ಶಾಸ್ತ್ರಿಗಳು ಸಾಯುವುದಕ್ಕೆ ಎರಡು ದಿನ ಮೊದಲು—'ನೋಡು; ಕೇಶವನ ಇಚ್ಛೆಗೆ ವಿರುದ್ಧವಾಗಿ ವರ್ತಿಸಬೇಡ. ಆದರಿಂದ ನಮ್ಮ ಮನೆತನಕ್ಕೇ ಕೇಡಿದೆ' ಎಂದು ಸೂಚ್ಯವಾಗಿ ಹೇಳಿದ್ದರು. ಆಗ ಅದರ ಅರ್ಥ ಗಂಗಮ್ಮನಿಗೆ ಹೊಳೆಯದಿದ್ದರೂ, ಈಗ ಆ ನೆನಪು ಪುನಃ ಪುನಃ ಉಂಟಾಗುತ್ತಿತ್ತು. ಅಂತೆಯೇ ಅವಳು ಸ್ವಾಮಿಯ ಮನದ ಬಯಕೆಯಂತೆ, ತನ್ನ ಅಭಿ-ಪ್ರಾಯವನ್ನು ಕೊಡಬಯಸಲಿಲ್ಲ. ಕೇಶವನು ಮೊದಲಿನಂತೆಯೇ ಕಾಲೇಜಿಗೆ ಹೋಗುತ್ತಿದ್ದ—ಬರುತ್ತಿದ್ದ. ಈ ಹೊಸ ಚಿಂತೆಯನ್ನು ಅವನು ಹಚ್ಚಿಕೊಳ್ಳಲಿಲ್ಲ. ಶಾರದೆಯೂ ಮಾತಾಡಲಿಲ್ಲ. ಕೊನೆಗೆ ಗಂಗಮ್ಮನೇ ಶಾರದೆಯ ಕೈಯಿಂದ ಹೂವೇರಿಸಿ, ಅತೃಪ್ತ ಆಸೆಯನ್ನು ಸ್ವಲ್ಪಾದರೂ ಈಡೇರಿಸಿಕೊಳ್ಳುತ್ತಿದ್ದಳು.

ಕೇಶವನಿಗೆ ಈಗೀಗ ಮನೆಯೆಂದರೆ ಮಸಣವಾಗಿತ್ತು. ಶಾಸ್ತ್ರಿಗಳಿದ್ದಾಗ ಏನಿರದಿದ್ದರೂ ಸಾಂಸ್ಕೃತಿಕ ವಾತಾವರಣವೊಂದು ತುಂಬಿರುತ್ತಿತ್ತು. ಶಿಷ್ಯರ ತಂಡ, ವೇದಘೋಷ, ಜಪತಪ, ಪುರಾಣ-ಪಠನ ಇವುಗಳಿಂದ ಒಂದು ತೆರದ ಪವಿತ್ರ ಗಾಂಭೀರ್ಯ ಆವರಿಸಿರುತ್ತಿತ್ತು. ಆದರೆ ತಂದೆಯ ಸಾವಿನೊಡನೆ ಅವೆಲ್ಲ ಮಾಯವಾಗಿ ರುದ್ರ ಮೌನ ಮಾತ್ರ ಉಳಿದಿತ್ತು. ಇಂತಹ ಭೀಕರ ಏಕಾಂತದಲ್ಲಿ ಉಲ್ಲಾಸದ ಸುಳಿವಾಗಲಿ, ಉತ್ಸಾಹದ ಚಿಹ್ನೆಯಾಗಲಿ, ಕಾಣಸುತ್ತಿದ್ದಿಲ್ಲ. ಇದ್ದ ಮೂರೇ ವ್ಯಕ್ತಿಗಳು 'ನಿರ್ಜೀವ' ಯಂತ್ರಗಳಂತೆ

ತಂತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಯಾರೂ ಯಾರೊಡನೆಯೂ ಮಾತಾಡುತ್ತಿದ್ದಿಲ್ಲ. ಶಾಸ್ತ್ರಿಗಳ ಭೂತ ಬಡಿದಿದೆಯೋ ಎಂಬಷ್ಟು ಬೆಪ್ಪಾಗಿ ವರ್ತಿಸುತ್ತಿದ್ದರು.

ಇಂತಹ ವಾತಾವರಣದಲ್ಲಿ ಸುಳಿದಾಡುತ್ತಿದ್ದರೆ, ಕೆಲವೇ ದಿನಗಳಲ್ಲಿ ಹುಚ್ಚಾಸ್ಪತ್ರೆಗೆ ಸೇರಬೇಕಾದೀತೆಂದು ಕೇಶವ ಹೆದರಿಬಿಟ್ಟ. ಅವನುಮನೆಯಲ್ಲಿ ಇರುವುದೇ ಬರು-ಬರುತ್ತ ಕಡಿಮೆಯಾಗತೊಡಗಿತು. ಊಟದ ವೇಳೆ ಮಾತ್ರ ಹಾಜರಿದ್ದು—ಉಳಿದ ಸಮಯವನ್ನೆಲ್ಲ. ಗೆಳೆಯರೊಡನೆ ಕಳೆಯುತ್ತಿದ್ದ. ರಾತ್ರಿ ಕ್ಲಬ್ಬಿನಿಂದ ಬಹು ತಡವಾಗಿ ಬರುತ್ತಿದ್ದ. ಅವನ ಎಲ್ಲ ವ್ಯವಹಾರವಲ್ಲೂ ಅಳುಕು ಎದ್ದು ಕಾಣುತ್ತಿತ್ತು.

ಶಾರದೆಯೊಡನೆ ಮಾತಾಡುವ ಸಂಭವವು ಅವನಿಗೆ ಮೊದಲಿನಷ್ಟುಸಿಗುತ್ತಿದ್ದಿಲ್ಲ.ಅವಳ ಮೊಗದ ಮೇಲೆ ನಲಿಯುತ್ತಿದ್ದಮಂದಹಾಸ ಹುಸಿಯಾಗಿ ಆಯಾಸದ ಚಿಹ್ನ ಕಾಣಿಸುತ್ತಿತ್ತು. ಆದರೂ ಅವಳು ಪಿಟ್ಟೆನ್ನದೆ ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಳು. ಅವಳ ಮುಖವನ್ನು ದೃಷ್ಟಿಸುವಾಗ, ಕೇಶವನಿಗೆ ಈಗೀಗ ಆನಂದಕ್ಕಿಂತ ಭಯವೇ ಹೆಚ್ಚಾಗುತ್ತಿತ್ತು.

ಶಾಸ್ತ್ರಿಗಳು ಜೀವಂತ ಇದ್ದಾಗ, ಹಬ್ಬ-ಹರಿದಿನಗಳಲ್ಲಿ ಆ ಮನೆ ವಿಜೃಂಭಣೆಯಿಂದ ಬೆಳಗುತ್ತಿತ್ತು. ಶಿಷ್ಯರಿಗೆಲ್ಲ ತಿಂಡಿ-ತಿನಿಸುಗಳನ್ನಿತ್ತು ಸತ್ಕರಿಸಿ, ಅವರ ಆನಂದದಲ್ಲಿ ಭಾಗಿಯಾಗುವುದು ಗಂಗಮ್ಮನ ಸಂಪ್ರದಾಯ. ಆದರೆ ಅವಕ್ಕೆಲ್ಲ ಒಮ್ಮೆಲೇ ಲೋಪ ಬಂದುದು ಅವಳ ಮನಸ್ಸಿಗೆ ವಿಶೇಷ ಆಘಾತವನ್ನುಂಟುಮಾಡಿತು. ಹೃದಯ ಚೀರಿಟ್ಟಿತು. 'ಸನಾತನಿಯ ಮನೆ' ಒಮ್ಮೆಲೇ 'ನಾಸ್ತಿಕರ ಮನೆ'ಯಾದುದು ಅವಳ ಅಳಿದುಳಿದ ಉತ್ಸಾಹಕ್ಕೂ ತಣ್ಣೀರೆರಚಿತು. ಅವಳು ಧೈರ್ಯವಾಗಿ ಮಗನನ್ನು ಪ್ರಶ್ನಿಸಿದ್ದರೆ, ಇದಕ್ಕೆ ಬೇಕಾದ ವ್ಯವಸ್ಥೆಮಾಡಿಸಬಹುದಿತ್ತು. ಆದರೆ ಪತಿಯ ಆದೇಶ ಅವಳನ್ನು ತಡೆದು ನಿಲ್ಲಿಸಿತು. ಯಾವುದೋ ಒಂದು ಪವಿತ್ರ ಉದ್ದೇಶದಿಂದಲೇ ಅವರಾ ಮಾತು ಹೇಳಿರಬೇಕೆಂದು ಭಾವಿಸಿ, ಗಂಗಮ್ಮ ತನ್ನ ಅಧಿಕಾರವನ್ನು ಉಪಯೋಗಿಸಲಿಲ್ಲ. ಅಲ್ಲದೆ ತನ್ನ ಮನದಿಚ್ಛೆ ಏನಿದೆಯೆಂಬುದನ್ನೂ ತಿಳಿಯಗೊಡಲಿಲ್ಲ.

ಹಬ್ಬದ ದಿನಗಳು ನಿರಾಡಂಬರವಾಗಿ ಸಾಗುತ್ತಿದ್ದುವು. ಊರೆಲ್ಲ ನಲಿಯುತ್ತಿದ್ದಾಗ—ಪೂಜೆ ವೈಭವದಿಂದ ನಡೆಯುತ್ತಿದ್ದಾಗ—ಶಾಸ್ತ್ರಿಗಳ ಮನೆ ನೀರವವಾಗಿ ಕಣ್ಣೀರ್ಗರೆಯುತ್ತಿತ್ತು. ಗಂಗಮ್ಮನ ನಿಟ್ಟುಸಿರು ಗಾಳಿಯೊಡನೆ ಬೆರೆತು ಮನೆಯ ನಿಟ್ಟುಸಿರಾಗಿ ಪರಿಣಮಿಸಿತ್ತು. ಶಾರದೆ ಅತ್ತೆಯ ತೃಪ್ತಿಗಾಗಿ 'ಪೂಜೆಯ ಶಾಸ್ತ್ರ' ಮಾಡುತ್ತಿದ್ದಳು. ಅತ್ತೆಯ ಮನಸ್ಸಿನ ಕಳವಳ ಇದರಿಂದ ದೂರವಾಗದೆಂದೂ ಅವಳಿಗೆ ತಿಳಿದಿತ್ತು. ಆದರೆ ಅವಳು ನಿರುಪಾಯಳಾಗಿದ್ದಳು.

ಗಂಗಮ್ಮನ ಆರೋಗ್ಯ ದಿನದಿನಕ್ಕೆ ಕೆಡುತ್ತಿತ್ತು. ಶಾಸ್ತ್ರಿಗಳ ಸಾವಿನೊಡನೆ ಅವಳ ಚಟುವಟಿಕೆಗಳೂ ಕೊನೆಗೊಂಡಿದ್ದುವು. ಯಾವಾಗಲೂ ಮೂಲೆಯಲ್ಲಿ ಕುಳಿತು ನೀರವವಾಗಿ ಕಣ್ಣೀರು ಸುರಿಸುವುದೂ,ಮಾಸದ ನೆನಪನ್ನು ಮರೆಸಲು ವ್ಯರ್ಥವಾಗಿ ಯತ್ನಿಸುವುದೂ ಅವಳ ಉದ್ಯೋಗವಾಯಿತು. ತಲೆಗೆ ಚಿಟ್ಟುಹಿಡಿಸುವ ಈ ವಾತಾವರಣದಿಂದ ಕೆಲದಿನಗಳ ವರೆಗಾದರೂ ದೂರವಿರಬೇಕೆಂದು ಅವಳೆಣಿಸುತ್ತಿದ್ದಳು. ಅದಕ್ಕೆ ಸರಿಯಾಗಿ ಅಣ್ಣಾಗೋವಿಂದ ಭಟ್ಟರು ಕಾಶೀಯಾತ್ರೆಗೆ ಹೊರಡುವವರಿದ್ದಾರೆಂದು ಅವಳಿಗೆ ಸುದ್ದಿ ಮುಟ್ಟಿತು. ಕಾಗದ ಹಾಕಿ ಅಣ್ಣನನ್ನು ಮನೆಗೆ ಕರೆಯಿಸಿದಳು.

ಗಂಗಮ್ಮ ಕೇಳಿದ ಸುದ್ದಿ ನಿಜವಿತ್ತು. ಗೋವಿಂದಭಟ್ಟರು ನೆರೆಕರೆಯ ಮುದುಕರೊಡನೆ ಕಾಶೀಯಾತ್ರೆಗೆ ಹೊರಡಬೇಕೆಂದು ನಿಶ್ಚಯಿಸಿದ್ದರು. ಗಂಗಮ್ಮ ಹೋಗಬೇಕೆಂದು ಆಶಿಸಿದಳು. ಆದರೆ ಮಗನ ಒಪ್ಪಿಗೆ ಸಿಗುತ್ತದೋ ಇಲ್ಲವೋ ಎಂಬ ಸಂದೇಹ; 'ಕೇಳಿ ವ್ಯರ್ಥವಾದರೆ....!'ಎಂಬ ಸಂಶಯ. ಶಾರದೆಗೆ ಅತ್ತೆಯ ಗೊಂದಲದ ಅರಿವಾಯಿತು. ಅವಳು ತಾನೇ ಕೇಳಬೇಕೆಂದು ನಿರ್ಧರಿಸಿದಳು.

'ಅತ್ತೆಗೆ ಕಾಶೀಯಾತ್ರೆ ಮಾಡಿಬರಬೇಕೆಂಬ ಆಶೆಯಿದೆ'—ಸಾಹಸಗೊಂಡು ಅವಳು ಕೇಳಿದಳು. ಕೇಶವ ಮುಖವೆತ್ತಿ ನೋಡಿದನಷ್ಟೆ!

'ಅವರಣ್ಣ ಬಂದಿದ್ದಾರೆ; ಅವರೂ ಹೋಗುವರಂತೆ; ನೀವು ಒಪ್ಪಿದರೆ, ಅತ್ತೆಯೂ ಹೋಗಿಬರುವರು.'

'ಹೋಗಲಿ, ಬರಲಿ, ನನ್ನನ್ನೇಕೆ ಕೇಳುವುದು? ನಾನೇನು ಬೇಡವೆನ್ನುವೆನೆ?' 'ಹೀಗೆಂದರೆ ಹೇಗೆ? ಅವರು ಎಲ್ಲಿಗಾದರೂ ಹೋದುದುಂಟೆ? ಇಷ್ಟು ಒರಟಾಗಿ ಹೇಳಿದರೆ ಅವರಾದರೂ ಹೇಗೆ ಹೊರಟಾರು?'

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧-೮-೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನಸಂಗ್ರಹ) ೦-೮-೦
ಶ್ರೀ. ಬಾಳು ಬಿ. ಉಪಾಧ್ಯೆ

ಮೂಲ ಶಿಕ್ಷಣದ ಮೌಲ್ಯಮಾಪನ ೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯ

ಭರತೇಶನ ನಾಲ್ಕು ಚಿತ್ರಗಳು ೧-೪-೦
ಶ್ರೀ. ಮಿರ್ಜಿ ಅಣ್ಣಾರಾಯ

ಶ್ರೀ ಶಾಂತಿಸಾಗರ ೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ಮಿರ್ಜಿ ಅಣ್ಣಾರಾಯರು
ಪೊ ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

'ಇಲ್ಲ ಶಾರದಾ, ನನ್ನ ಮನಸ್ಸು ಈಗೀಗ ಅದೇಕೋ ಒಂದು ತೆರನಾಗಿದೆ. ಯಾತ್ರೆ ಮಾಡಬೇಕೆನ್ನುವವರನ್ನು ತಡೆಯುವಷ್ಟು ನಾನು ನೀಚನೆ?....ಹಾಂ....ಯಾವಾಗ ಹೊರಡುತ್ತಾರಂತೆ?'

'ಇನ್ನೆರಡು ದಿನಗಳಲ್ಲಿ ಹೊರಡಬೇಕೆಂದು ನಿಶ್ಚಯವಾಗಿದೆ. ಸುಮಾರು ಒಂದು ತಿಂಗಳು ಹಿಡಿಯಬಹುದು,'– ಎಂದು ಅವಳು ಹಿಂದಿರುಗಿ ನಾಲ್ಕು ಹೆಜ್ಜೆಯಿಡುವಷ್ಟರಲ್ಲಿಯೇ ಕೇಶವ ಏನೋ ಯೋಚಿಸಿ: 'ಒಟ್ಟಿಗೆ ನೀನೂ ಹೋಗುವಿ ತಾನೇ?' ಎಂದು ಕೇಳಿದ. ಶಾರದೆ ಸ್ತಬ್ಧಳಾಗಿ ಅರೆಕ್ಷಣ ಅವನ ಮುಖವನ್ನೇ ನೋಡುತ್ತಿದ್ದು ಮಾತಾಡದೆ ಹೊರಬಂದಳು.

ಅವಳ ಮುಖಭಾವವನ್ನು ಲಕ್ಷ್ಯಿಸಿದಾಗ, ತಾನು ಹಾಗೆ ಹೇಳಬಾರದಿತ್ತೆಂದು ಆಮೇಲೆ ಕೇಶವನಿಗೆನಿಸಿತು.

x x x x x

ಗಂಗಮ್ಮ ಕಾಶೀಯಾತ್ರೆಗೆ ಹೊರಟು ಒಂದು ತಿಂಗಳಾಗುತ್ತ ಬಂತು. ಉತ್ತರ ಹಿಂದುಸ್ಥಾನದ ಯಾತ್ರಾಸ್ಥಳವನ್ನೂ ಅವಳು ಬಿಡಲಿಲ್ಲ. ಖರ್ಚಿಗೆ ಹಣದ ಕೊರತೆಯಿದ್ದಿಲ್ಲ. ಅಲ್ಲದೆ ಮನೆಯ ವಾತಾವಣದಿಂದ ರೋಸಿದ ಮನಸ್ಸಿಗೆ ತುಂಬಾ ಉಲ್ಲಾಸವೂ ಆಗಿತ್ತು. 'ದೇವಾ, ನನ್ನ ಮಗನನ್ನು ಕ್ಷಮಿಸು, ವಂಶವನ್ನು ಉದ್ಧರಿಸು. ಅವನು ಏನೂ ಅರಿಯದ ಹಸುಳೆ,' ಎಂದು ಅವಳು ಭಕ್ತಿಯಿಂದ ಹೋದಲ್ಲೆಲ್ಲ ದೇವರನ್ನು ಪ್ರಾರ್ಥಿಸುತ್ತಿದ್ದಳು. ಇದರಿಂದ ಇವಳಿಗೆ ತುಂಬಾ ಸಮಾಧಾನವೆನಿಸುತ್ತಿತ್ತು.

ಇತ್ತ ಶಾಸ್ತ್ರಿಗಳ ಮನೆಯೂ ಹೊಸರೂಪವನ್ನು ತಳೆದಿತ್ತು. ಪ್ರಾಚೀನತೆಯ ಕುರುಹೇ ಇಲ್ಲದಂತೆ ಮಾರ್ಪಾಟವನ್ನು ಹೊಂದಿತು. ಗಂಗಮ್ಮನು ಯಾತ್ರೆಗೆ ಹೋದಂದಿನಿಂದಲೇ, ಕೇಶವನು ಹುಚ್ಚು ಆವೇಶದಿಂದ ಮನೆಯ ರಿಪೇರಿ ಕೆಲಸಕ್ಕೆ ಆರಂಭಿಸಿದ್ದ. ಚೆನ್ನಾಗಿ ಗಾಳಿ ಬೆಳಕು ಬರುವಂತೆ ಕಿಟಕಿಗಳನ್ನು ಹೆಚ್ಚಿಸಿದ. ನೆಲಕ್ಕೆ ಸಿಮೆಂಟು ಹಾಕಿಸಿದ. ಹಿಂದಿನ ಕಹಿನೆನಪು ಯಾವುದೂ ಉಳಿಯದಂತೆ ಜಾಗ್ರತೆವಹಿಸಿದ. ಗೋಡೆಗಳನ್ನೆಲ್ಲ ತರತರದ ಚಿತ್ರಗಳು ಅಲಂಕರಿಸಿದುವು. ಮೇಜು-ಕುರ್ಚಿಗಳ ಸಂಖ್ಯೆ ಹೆಚ್ಚಾಯಿತು. ರೇಡಿಯೋ, ವಿದ್ಯುದ್ದೀಪಗಳ ವ್ಯವಸ್ಥೆಯೂ ನಡೆಯಿತು. ಸಂಜೆ walking ಆರಂಭವಾಯಿತು. ಕೇಶವನ ಸುಪ್ತ ಆಕಾಂಕ್ಷೆಗಳು ಕಟ್ಟೊಡೆದು ಹೊರಹೊಮ್ಮಿದುವು

ಈ ಎಲ್ಲ ಬದಲಾವಣೆಗಳನ್ನೂ ಶಾರದೆ ಮೆಚ್ಚಿದಳು. ಪತಿಯ ಮನಸ್ಸು ಸ್ತಿಮಿತದಲ್ಲಿರಲು ಇದಲ್ಲದೆ ಗತ್ಯಂತರವಿಲ್ಲವೆಂದು ಅವಳು ಕಂಡುಕೊಂಡಿದ್ದಳು; ಆದರೆ ಅವಳ ಮುಖ ಆಗಾಗ ಮ್ಲಾನವಾಗುತ್ತಿತ್ತು. ಉತ್ಸಾಹದ ಭರದಲ್ಲಿ ಕೇಶವನಿಗೆ ಅದಾವುದೂ ಕಾಣಿಸುತ್ತಿರಲಿಲ್ಲ. ಈಗ ಅವನು ತನ್ನ ಹೆಚ್ಚಿನ ಸಮಯವನ್ನು ಮನೆಯಲ್ಲೇ ಕಳೆಯತೊಡಗಿದ್ದ. ಬೇಸರವಾಯಿತೆಂದರೆ ರೇಡಿಯೋ ಇಡುತ್ತಿದ್ದ; ಕಾದಂಬರಿಯೋದುತ್ತಿದ್ದ; ಶಾರದೆಯೊಡನೆ ಹರಟೆ ಹೊಡೆಯುತ್ತಿದ್ದ; ಸಿನೇಮಾ ನೋಡುತ್ತಿದ್ದ; ಆದರೆ ಎಲ್ಲದರಲ್ಲೂ ಶಾರದೆ ಅನಾಸಕ್ತಳಾಗಿದ್ದಳು. ಕಷ್ಟ ತಂದ ಉತ್ಸಾಹವನ್ನು ತೋರ್ಪಡಿಸುತ್ತಿದ್ದಳು.

ಅವಳ ಕೊರಗೇನು ಸಾಮಾನ್ಯವೇ? ಅತ್ತೆ ಮನೆಗೆ ಮರಳಿದಾಗ ಈ ದೃಶ್ಯ ಅವರ ಮೇಲಾವ ಪ್ರಭಾವ ಬೀರಬಹುದು? ಎರಡು ವಿರುದ್ಧಪ್ರಕೃತಿಗಳ ಸಂಘರ್ಷಕಾಲ ಸನ್ನಿಹಿತವಾಗಿದೆಯೆಂದು ಅವಳು ಭಾವಿಸಿದಳು. "ಅತ್ತೆ ಈ 'ಕಾಲಧರ್ಮ' ವನ್ನು ಕಂಡು ಎದೆಯೊಡೆದು ಸಾಯರೆ? ಮಗನೆದುರಿಗೆ ಏನೂ ಹೇಳರು ನಿಜ; ಆದರೆ ಅಂತರ್ವೇದನೆಯಿಂದ ಅವರ ಪರಿಸ್ಥಿತಿ ಶೋಚನೀಯವಾದೀತು. ಇದಕ್ಕೇನಾದರೂ ಉಪಾಯ ಹೂಡಬೇಕು. ಪತಿಗೆ ಇದೆಲ್ಲ ಅರ್ಥವಾಗುವಂತಿಲ್ಲ. ನಾನೇ ಧೈರ್ಯದಿಂದ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು"—ಎಂದಾ ಸಾಧ್ವಿ ನಿರ್ಧರಿಸಿದಳು.

ಮರುದಿನ ಮಧ್ಯಾಹ್ನ ಕಾಲೇಜ್ ಮುಗಿಸಿ ಮನೆಗೆ ಮರಳಿದಾಗ,ದೇವರ ಕೋಣೆಯಲ್ಲಿ ಪೂಜೆಯ ಗಂಟೆ ಕೇಳಿ ಕೇಶವ ಬೆರಗಾದ. ತಂದೆಯ ಶ್ರಾದ್ಧ ಮುಗಿದ ಮೇಲೆ, ಇದುವರೆಗೂ ಗಂಟೆಯ ದನಿ ಅವನ ಕಿವಿಗೆ ಬಿದ್ದಿರಲಿಲ್ಲ. 'ಇಂದು ಆಕಸ್ಮಾತ್ ಇದೆಲ್ಲಿಂದ ಬಂತೋ ನೋಡೋಣ'— ಎಂದು ಅವನು ಒಳಗಿಣಿಕಿ ನೋಡಿದ. ಭಟ್ಟರೊಬ್ಬರು ಪೂಜೆ ಮಾಡುತ್ತಿದ್ದರು. ಶಾರದೆ ಸಾಮಗ್ರಿಗಳನ್ನೆಲ್ಲ ಅಣಿಮಾಡಿ ಕೊಡುತ್ತಿದ್ದಳು. ಪತಿ ಬಂದುದರ ಅರಿವಾದರೂ, ಅವಳು ತಿರುಗಿ ನೋಡಲಿಲ್ಲ. ಕೇಶವನ ಮುಖ ಬಿಳುಪೇರಿತು; ಒಟ್ಟಿಗೆ ಸಿಟ್ಟೂ ಬಂತು.

ಪೂಜೆ ಮಾಡಿ ಭಟ್ಟರು ಮನೆಗೆ ತೆರಳಿದರು. ಕೇಶವ ಧಡಧಡನೆ ಅಡುಗೆಮನೆಗೆ ಬಂದು– 'ಇದೇನು ಹುಚ್ಚಾಟ ನಡೆಸಿರುವಿ?' ಎಂದ.

ಶಾರದೆ ಇದಕ್ಕೆಲ್ಲ ಸಿದ್ಧಳಾಗಿಯೇ ನಿಂತಿದ್ದಳು. ತನ್ನ ಅಂತಃಸತ್ತ್ವದ ಪರೀಕ್ಷಾಕಾಲವಿದೆಂದು ಅವಳು ಮನಸ್ಸನ್ನು ಆದಷ್ಟು ದೃಢಪಡಿಸಿಕೊಂಡಳು. ಸಂಯತಸ್ವರದಿಂದ–'ಪೂಜೆ ಹುಚ್ಚಾಟವೇ?' ಎಂದಳು.

'ಅಲ್ಲವೆ ಮತ್ತೆ? ನನಗಿದೆಲ್ಲ ಸೇರುವುದಿಲ್ಲವೆಂದು ಗೊತ್ತಿಲ್ಲವೆ ನಿನಗೆ? ತಿಳಿದೂ ತಿಳಿದೂ ಈ ಪ್ರವೃತ್ತಿಗಿಳಿದಿರುವೆಯಲ್ಲಾ?'

'ಮನುಷ್ಯನಿಗೆ ಸ್ವಾರ್ಥಸಾಧನೆಯೊಂದೇ ಗುರಿಯಲ್ಲ; ಇತರರ ಸುಖ-ಸೌಕರ್ಯಗಳ ಕಡೆಗೂ ಲಕ್ಷ್ಯಕೊಡಬೇಕಾಗುವುದು.'

'ಎಂದರೆ....ಅತ್ತೆಯ ಮೆಚ್ಚಿಗೆಗಾಗಿಯೇ ಈ ಎಲ್ಲ ಅವಾಂತರವೆ? ಇಲ್ಲ ಶಾರದಾ, ಈ ಹುಚ್ಚಾಟವನ್ನು ನಾನು ಸಹಿಸಲಾರೆ!'

'ಮತ್ತೇನು ಮಾಡಬೇಕೆನ್ನುವಿರಿ? ಸ್ವಾರ್ಥಲೋಲುಪರಾಗಿ ತಾಯಿಯನ್ನು ಬಲಿಗೊಡುವಿರಾ? ಇದನ್ನು ನಾನೂ ಸಹಿಸಲಾರೆ,'— ಆವೇಗದಿಂದ ಅವಳು ಹೇಳಿದಳು. ಅವಳ ಕಣ್ಣಂಚಿನಲ್ಲಿ ನೀರು ತುಂಬಿಬಂದಿತ್ತು.

'ಆಂ ....ತಾಯಿಯ ಬಲಿ?'

'ಇನ್ನೇನು? ಈ ಬದಲಾವಣೆಯನ್ನು ಕಂಡು ಅವರು ಜೀವ ಹಿಡಿದಾರೆಂದು ನಿಮ್ಮ ಭಾವನೆಯೇ? ಜೀವನದ ಹೆಚ್ಚಿನ ಸಮಯವನ್ನು ಧಾರ್ಮಿಕ ವಾತಾವರಣದಲ್ಲಿ ಕಳೆದವರಿಗೆ ವೃದ್ಧಾಪ್ಯ

ದಲ್ಲಿ ಮಗನಿಂದಲೇ ಈ ದುರವಸ್ಥೆ ಒದಗಬೇಕೆ? ಸಹನೆಯ ಮೂರ್ತಿಯಾಗಿ, ಬಂದದ್ದೆಲ್ಲವನ್ನೂ ನುಂಗಿಕೊಂಡು, ಕೊರಗಿ ನವೆಯುತ್ತಿರುವ ವೃದ್ಧಮಾತೆಯ ದೀನಮುಖಮುದ್ರೆ ಒಮ್ಮೆಯಾದರೂ ನಿಮ್ಮ ಕಣ್ಣಿಗೆ ಕಟ್ಟಿ ಹೃದಯವನ್ನು ಕಲಕಿದುದುಂಟೆ? ನಿಮ್ಮ ಕುರಿತೇ ನೀವು ಯೋಚಿಸಿದಿರಲ್ಲದೆ ಮುದಿತಾಯಿಯ ಬಗ್ಗೆ ನಿಮ್ಮ ಕರ್ತವ್ಯವೇನಿದೆಯೆಂಬುದನ್ನು ನೀವು ವಿಚಾರ ಮಾಡಿದುದುಂಟೆ? ಅವರನ್ನು ನಿಮ್ಮ ದಾರಿಗೆ ಬಲಾತ್ಕಾರವಾಗಿ ಎಳೆದೊಯ್ಯುವುದು ಶಕ್ಯವಿಲ್ಲವೆಂಬ ಭಾವನೆ ಒಂದು ಸಲವಾದರೂ ನಿಮ್ಮ ಮನದಲ್ಲಿ ಮೂಡಿದುದುಂಟೆ? ಇದನ್ನೆಲ್ಲ ವಿವೇಕಿಗಳಾದ ನಿಮಗೆ ನಾನು ಹೇಳಬೇಕೆ?'

ಶಾರದೆಯ ಈ ಉಗ್ರರೂಪ, ಕಳವಳಿಯ ಕೇಳಿಕೆ ಕೇಶವನನು ದಂಗು ಪಡಿಸಿತು. ಅವನು ತುಸು ತಡೆದು—'ಅದಕ್ಕೇನು ಮಾಡಲಿ?' ಎಂದನು.

'ಸಮನ್ವಯದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು. ಮನೆಯ ಆಧುನಿಕರೂಪ ಅವರಿಗೆ ಹಿತವಾಗದಿದ್ದರೂ ನಾವದನ್ನು ಅಲಕ್ಷ್ಯಿಸಬಹುದು. ಅಷ್ಟು ಔದಾರ್ಯವನ್ನು ಅವರೂ ತೋರಿಸಬೇಕು. ಆದರೆ ಮನೆಯಿಂದ ಸಾಂಪ್ರದಾಯಿಕತೆ ಸಮೂಲವಾಗಿ ಕಿತ್ತುಹೋಯಿತೆಂದು ಅವರು ಭಾವಿಸುವಂತಾಗಬಾರದು. ಅದಕ್ಕಾಗಿಯೆ ನಾನೊಬ್ಬ ಅರ್ಚಕನನ್ನು ನಿಯಮಿಸಿರುವೆ. ದಿನಕ್ಕೆ ಎರಡು ಬಾರಿ ಅವನು ಪೂಜೆಮಾಡಿ ಹೋಗುವನು. ಇದರಿಂದ ನಿಮಗಾಗುವ ತೊಂದರೆಯೇನು? ಮನಸ್ಸಿಲ್ಲದಿದ್ದರೆ ನೀವು ದೇವರ ಕೋಣೆಗೆ ಕಾಲಿಡಬೇಕಿಲ್ಲ. ಆದರೆ ಅತ್ತೆಯ ಮನಃಕಾಮನೆ ಪೂರ್ಣವಾಗುವುದಿಲ್ಲವೆ? ದೇವರ ಮನೆಯಲ್ಲೇ ಜಪಮಾಡುತ್ತ ಕುಳಿತುಕೊಳ್ಳುತ್ತಾರೆ. ಅವರ ಈ ಅಲ್ಪತೃಪ್ತಿಯನ್ನು ಈಡೇರಿಸುವ ಸೌಭಾಗ್ಯ ನಮಗೆ ದೊರೆಯಬಾರದೆ?'

ಕೇಶವನಿಗೆ ಈ ಸಲಹೆ ಸೂಕ್ತವೆನಿಸಿತು. ಇಷ್ಟು ದಿನಗಳವರೆಗೆ ತಾಯಿಯ ಮನನೋಯಿಸಿದುದಕ್ಕಾಗಿ ಅವನಿಗೆ ವಿಷಾದವಾಯಿತು. ಶಾರದೆಯ ದೂರಾಲೋಚನೆಯಿಂದ, ಮಹಾಭಾರವೊಂದು ತಲೆಯಿಂದ ತಪ್ಪಿದಂತಾಯಿತು. ಹೃದಯ ಹಗುರವಾಯಿತು.

• • • •

ಮುಚ್ಚಂಜೆಯ ವೇಳೆ, ಗಂಗಮ್ಮ ಮನೆಯನ್ನು ಹೊಕ್ಕಾಗ ಜಗಜಗಿಸುವ ವಿದ್ಯುದ್ದೀಪಗಳ ಬೆಳಕು ಕಣ್ಣು ಕೋರೈಸಿತು. ರೇಡಿಯೋ ಯಾವುದೋ ಸಿನೇಮಾ ಪದವನ್ನು ಇಂಪಾಗಿ ಹಾಡುತ್ತಿತ್ತು. ಅದರ ಧ್ವನಿ ಮೆಲ್ಲಮೆಲ್ಲನೆ ಅಲೆಯಲೆಯಾಗಿ ಗಂಗಮ್ಮನ ಕಿವಿದೆರೆಗಳಿಗೆ ಬಂದು ಅಪ್ಪಳಿಸುತ್ತಿತ್ತು. ಗಂಗಮ್ಮ ಪ್ರಸ್ತರಮೂರ್ತಿಯಂತೆ ನಿಂತುಬಿಟ್ಟಳು; ತನ್ನ ಮನೆಯೇ ಹೌದೋ ಅಲ್ಲವೋ—ಎಂಬಷ್ಟರ ಮಟ್ಟಿಗೆ ಅವಳಿಗೆ ಸಂದೇಹವಾಗಿತ್ತು.

ಥಕ್ಕನೆ ಶಾರದೆಯ ದೃಷ್ಟಿ ಅತ್ತ ಸರಿಯಿತು. ಅವಳು ಓಡುತ್ತಾ ಓಡುತ್ತಾ ಬಂದು ಅತ್ತೆಯ ಕಾಲಿಗೆರಗಿದಳು. ಸೊಸೆಯ ಕಣ್ಣೀರಿನಿಂದಂಗೆ ಗಂಗಮ್ಮ ತನ್ನೆಲ್ಲ ದುಃಖವನ್ನೂ ಮರೆತಳು. ಅವಳನ್ನೆತ್ತಿ ಗುಳ್ಳೆರಿಸಿ ಪ್ರೀತಿಯಿಂದ ಬೆನ್ನಮೇಲೆ ಕೈಯಾಡಿಸಿದಳು. ಶಾರದೆ ಆವರೆಗಿನ ಘಟನೆಗಳನ್ನೆಲ್ಲ ಮರೆಮಾಚದೆ ಅತ್ತೆಗೆ ತಿಳುಹಿದಳು. ತನ್ನ ತಪ್ಪನ್ನು ಮನ್ನಿಸಬೇಕೆಂದು ವಿನಯದಿಂದ ಬೇಡಿಕೊಂಡಳು. ಅವಳ ಪ್ರಾರ್ಥನೆಗೆ ಗಂಗಮ್ಮನ ಅಂತಃಕರಣ ಕರಗಿ ನೀರಾಗಿ, ಕಂಗಳ ಮೂಲಕ ಹೊರಹರಿಯಿತು. ಅಷ್ಟರಲ್ಲಿ ಕೇಶವನೂ ಅಲ್ಲಿಗೆ ಬಂದು ತಾಯಿಯೆದುರಿಗೆ ತಲೆತಗ್ಗಿಸಿ ನಿಂತುಕೊಂಡ. ತನ್ನ ಮಗನನ್ನು ಪುನಃ ಪಡೆದಷ್ಟು ಗಂಗಮ್ಮನಿಗೆ ತೃಪ್ತಿಯಾಯಿತು ಯಾತ್ರೆಯಿಂದ ಸಮಾಧಾನ ಹೊಂದಿದ ಮನಸ್ಸಿಗೆ ಮನೆಯಲ್ಲೂ ಶಾಂತಿ ದೊರೆಯಿತು. ಆನಂದ ಬಾಷ್ಪಗಳು ಅವಳ ಕಂಗಳಿಂದ ಒಂದೇ ಸಮನೆ ಉದುರುತ್ತಿದ್ದವು.

ಆಗಲೇ ದೇವರ ಕೋಣೆಯಿಂದ ಭಟ್ಟರ ಘಂಟಾನಾದವು ಕೇಳಿಸಿತು. ಎಂದೂ ಹೋಗದ ಕೇಶವ, ಅಂದೇಕೋ ಅವರಿಬ್ಬರೊಡನೆ ದೇವರ ಕೋಣೆಯ ಕಡೆಗೆ ಹೊರಟ.

ಭಟ್ಟರು ಎತ್ತಿದ ಮಂಗಳಾರತಿಯು ಮೂವರ ಮನೋಮಂದಿರವನ್ನೂ ಬೆಳಗಿ ಮಂಗಳವನ್ನುಂಟು ಮಾಡಿತ್ತು.

———

ಮಕ್ಕಳ ಸದೃಢತೆ-ಗಾಗಿ

"ಬಗನ ಬಾಲಾ-ಮೃತ"

ಹಲ್ಲು ಬರುವಾಗ

"ಎಸ್ಸೆನ್ಸ್ ಗ್ರಾಇಪ್" ಹೀಲರ್

ಜಂತು ಆದರೆ



"ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

“ಪ್ಯಾರೀ”ಯ ದರ್ಶನ.

(ಪರದೇಶದಿಂದ ಬಂದ ಒಂದು ಪತ್ರ)

ಬರೆದವರು: ಶ್ರೀ. ಎಂ. ಕೆ. ವರಾಹಮೂರ್ತಿ ಬಿ. ಎಸ್‌ಸಿ (ಟೆಕ್) ಎಂ. ಎಸ್‌ಸಿ. ಪಶ್ಚಿಮ ಜರ್ಮನಿ.

ಪ್ಯಾರೀಸ್ ನಗರದ ಸೌಂದರ್ಯವನ್ನೂ ವೈಭವವನ್ನೂ ಕಣ್ಣಾರೆ ಕಂಡು, ಅದರ ವಾಸ್ತವ ಸ್ವರೂಪವನ್ನು ವಿವರಿಸಿದ ಮಾತುಗಳು ಈ ಪತ್ರದಲ್ಲಿವೆ.

ಮಾಯನ್ಸ್
೨೮–೪–೧೯೫೪

ತಾಯಿಗೆ ವಂದನೆಗಳು,

ನಿಮ್ಮ ಓಲೆ ತಲುಪಿತು. ತಡಮಾಡಿ ಪತ್ರ ಬರೆದದ್ದಕ್ಕೆ ಕ್ಷಮೆ ಇರಲಿ. ಇಂದೇ ಬೆಳಗ್ಗೆ ೫ ಗಂಟೆಗೆ ಬ್ರುಸೆಲ್ಸಿನಿಂದ ಬಂದೆನು. **ಪ್ಯಾರೀಸ್, ಲಂಡನ್ ಮತ್ತು** ಬ್ರುಸೆಲ್ಸಿನ **ಪ್ರ**ವಾಸ, ಬಹಳ ಮನೋರಂಜಕವೂ **ಶೈಕ್ಷಣಿಕವೂ** ಆಗಿತ್ತು. **ನೋಡಿದ** ಸ್ಥಳಗಳು ತುಂಬ ಇರುವುದರಿಂದ, **ಪ್ಯಾರೀಸನ್ನಷ್ಟೇ ಈ ಪತ್ರದಲ್ಲಿ ಚಿತ್ರಿಸಲು ಪ್ರಯತ್ನಿಸುತ್ತೇನೆ.**

ಅಂದು ಶುಕ್ರವಾರ. ಏಪ್ರಿಲ್ ೯ನೆಯ ತಾರೀಖು. ಮೊದಲೇ ಗೊತ್ತುಪಡಿಸಿದಂತೆ, ಎರಡು ದೊಡ್ಡ “ಅಮ್ನಿಬುಸ್ಸು”ಗಳು ಮಾಯಿನ್ಸ್ ವಿಶ್ವವಿದ್ಯಾಲಯದ ಹೆಬ್ಬಾಗಿಲಿನ ಹತ್ತಿರ, ಬೆಳಗಿನ ೬ ಗಂಟೆಗೆ ಕಾದುಕೊಂಡು ನಿಂತಿವೆ. ವಿಶ್ವವಿದ್ಯಾಲಯದ (“Fussball manschaft”) ಫುಟ್‌ಬಾಲ್ ಟೀಮಿನವರು ಒಬ್ಬೊಬ್ಬರಾಗಿಯೇ ಒಟ್ಟುಗೂಡುತ್ತಿದ್ದಾರೆ. ಮಾಯಿನ್ಸ್ ವಿದ್ಯಾಲಯದ ಹುಡುಗರು “ಸಿಟೆ ಯುನಿವ್ಹರ್ಸಿಟೇರ್” ಪ್ಯಾರಿಸಿನ ಹುಡುಗರ ಸಂಗಡ ಫುಟ್‌ಬಾಲ್ ಪಂದ್ಯಾಟದ ನಿಮಿತ್ತ ಈ ಪ್ರವಾಸವನ್ನು ತೆಗೆದಿದ್ದರು. ಸುಮಾರು ೬½ ಗಂಟೆಯ ಕಾಲಕ್ಕೆ ಎಲ್ಲರೂ ಬಂದಂತಾಯಿತು. ಈ “ಅಮ್ನಿಬುಸ್ಸುಗಳಲ್ಲಿ” ಇನ್ನೂ ನಾಲ್ಕು ಸ್ಥಳಗಳು ಖಾಲೀ ಇದ್ದುದರಿಂದ, ನಾನೂ ಮತ್ತು ನನ್ನ ಉಳಿದ ೩ ಹಿಂದೀ ಗೆಳೆಯರೂ ಅವರನ್ನು ಕೂಡಿಕೊಂಡೆವು. ಆಂಧ್ರದ ಶ್ರೀ. ಯತಿರಾಜಂ ಅವರು, ಪಂಜಾಬದ ಶ್ರೀ. ಭಂಡಾರಿಯವರು ಮತ್ತು ಟ್ರಾವಣಕೋರ-ಕೊಚೀನದ ಶ್ರೀ ಶ್ರೀನಿವಾಸನ್ನರು. ಈ ಕಾಲುಚಂಡಿನ ಸಂಘದ ಸಂಗಡ ಪ್ರವಾಸ ಮಾಡುವ ಕಾರಣವಿಷ್ಟೇ: ಹೋಗಿಬರುವ ಖರ್ಚು ಅತಿ ಕಡಿಮೆ. ಹುಡುಗರೆಲ್ಲರಿಂದ ಬಸ್ಸಿನ ದುಡ್ಡನ್ನು ಇಸಿದುಕೊಂಡ ಮೇಲೆ, ಸಾವಕಾಶವಾಗಿ ನಮ್ಮ ಮೋಟರುಗಳು ಹೊರಟುವು. “ವಿಶ್ವವಿದ್ಯಾಲಯ ಕೀ ಜೈ!” ಎಂಬ ಜಯಜಯಕಾರದಿಂದ ಹೊರಟೆವು.

ಮಾಯಿನ್ಸಿನಿಂದ ಪ್ಯಾರೀಸು ಸುಮಾರು ೫೦೦ ಕಿಲೋಮಿಟರುಗಳು. ಬೇರೆ ಬೇರೆ ದಾರಿಗಳಿವೆ. ನಾವು ತೆಗೆದುಕೊಂಡ ದಾರಿ “ಕೈಸರ”ನ ದಾರಿ, ಫ್ರೆಂಚ್‌ಗಡಿಯ ವರೆಗಿರುವ ಜರ್ಮನ್ ಪಟ್ಟಣಗಳು ಮುಖ್ಯವಾಗಿ “ಕೈಸರ್ ತಾವಟರ್ನ್” ಮತ್ತು ‘ಬಾಡ್ ಹೊಂಬುರ್ಗ.’ ಈ ಪಟ್ಟಣದ ಗಡಿಯಲ್ಲಿ ಎರಡೂ ರಾಷ್ಟ್ರಗಳ “check points.” ನಮ್ಮ ಪಾಸಪೋರ್ಟ್ ಇತ್ಯಾದಿ ಕಾಗದಗಳನ್ನು ತಪಾಸು ಮಾಡಿದ ಮೇಲೆ, ನಮ್ಮ ಪ್ರಯಾಣ ಮುಂದುವರೆಯಿತು. ಬಾಡ್ ಹೊಂಬುರ್ಗದಲ್ಲಿ ಅತೀ ಪುರಾತನಪ್ರಸಿದ್ಧವಾದ ಮೆಡಿಕಲ್ ಕಾಲೇಜಿದೆ. ಅಲ್ಲದೆ ಸುತ್ತುಮುತ್ತಲಿನ ಪ್ರಾಕೃತಿಕಸೌಂದರ್ಯ ಬಹಳ ರಮಣೀಯವಾಗಿದೆ. ಈಗ ಇಲ್ಲಿ ವಸಂತಋತುವಾದದ್ದರಿಂದ, ಗಿಡಗಳು ಚಿಗುರಿ ಎಲ್ಲಿ ನೋಡಿದಲ್ಲಿ ಹಸಿರೇ ಹಸಿರು. ನಮ್ಮ ದೇಶದಲ್ಲಿ, ಯಾವ ಭಾಗಗಳಲ್ಲಿಯೂ ಈ ಋತುಬದಲಾವಣೆಯ ಸೌಂದರ್ಯವನ್ನು ನೋಡಿ ಮಹದಾನಂದವನ್ನು ಪಡುವುದು ಸಾಧ್ಯವಿಲ್ಲ. ಕವಿ ಕಾಳಿದಾಸನ ಋತುಬದಲಾವಣೆಯ ವರ್ಣನೆಯನ್ನು ಇಲ್ಲಿ ಕಣ್ಮುಟ್ಟ ನೋಡಿ ಅತ್ಯಾನಂದ ಪಡಬಹುದು.

ಸುಮಾರು ೧೨ ಗಂಟೆ, “ಮೆತ್ಸ್” ಎಂಬ ಫ್ರೆಂಚ್ ಪಟ್ಟಣಕ್ಕೆ ಬಂದೆವು. ಎಲ್ಲರೂ ಬಹಳ ಹಸಿದದ್ದರಿಂದ, ಮಧ್ಯಾಹ್ನದ ಹಸಿವನ್ನು ತಣಿಸಿಕೊಂಡು, ಪ್ರಯಾಣವನ್ನು ಮುಂದುವರಿಸಿದೆವು. ಈಗಾಗಲೇ ಭಾಷೆಯ ತೊಂದರೆ ತೋರಹತ್ತಿತು. ಆದರೂ ಈ ಭಾಗದಲ್ಲಿ ಜರ್ಮನಿಯ ಭಾಷೆಯಿಂದ ಪಾರಾಗಬಹುದು. “ಎಪಿನಾಲ್” ಎಂಬ ಹಳ್ಳಿಯನ್ನು ಸುಮಾರು ನಾಲ್ಕುಗಂಟೆಗೆ ಎಂದರೆ ಚಹದ ವೇಳೆಗೆ ತಲುಪಿದೆವು. ಚಹ ಮುಗಿಸಿ ವಿಶ್ರಾಂತಿ ಪಡೆದ ಮೇಲೆ, ಇಲ್ಲಿಯ ಅತಿ ಪುರಾತನ ಚರ್ಚಿನ ಸಂದರ್ಶನ ಮಾಡಿದೆವು.

ತಾಯಿ! ನಿನಗೆ ಗೊತ್ತಿದ್ದಂತೆ, “ಪ್ಯಾರೀಸನ್ನು ಜೀವನದಲ್ಲಿ ಒಮ್ಮೆಯಾದರೂ ನೋಡಲೇ ಬೇಕು,” ಎಂದು, ನನ್ನ ಕುತೂಹಲವನ್ನು ಆಗಾಗ ನಿನ್ನ ಮುಂದೆ ವ್ಯಕ್ತ ಮಾಡಿದ್ದೆ. ಧಾರವಾಡದಿಂದ ಪ್ಯಾರಿಸಿಗೆ ಸುಮಾರು ೮೦೦೦ ಮೈಲು ಇರಬಹುದು. ಜರ್ಮನಿಗೆ ಬಂದ ಮೇಲೆ ಈ ದಾರಿ, ೫೦೦ ಕಿಲೋಮಿಟರಿಗಿಳಿಯಿತು. ಪ್ಯಾರೀಸನ್ನು

ನೋಡಬೇಕೆಂಬ ಲವಲವಿಕೆಯು ಹೆಚ್ಚಾಗಹತ್ತಿತು. ಆದರೆ, ಅನೇಕ ಅನನುಕೂಲತೆಗಳಿಂದ ಕಳೆದ ೧೪ ವರುಷ ಶಕ್ಯವಾಗಲಿಲ್ಲ. ಈಗ ಆ ಸುಸಂಧಿಯು ದೊರಕಿದ್ದು ನನ್ನ ಸುದೈವವೇ ಸರಿ.

ಸರಿ! ಸಂಜೆಯ ೮ ಗಂಟೆ. ಮೂರುಸಂಜೆ. ಇನ್ನೂ ಸಾಕಷ್ಟು ಬೆಳಕಿದೆ. ನಮ್ಮ ಮೋಟರುಗಳು ಪ್ಯಾರೀಸಿನಲ್ಲಿ ಕಾಲಿಟ್ಟುವು. ಪ್ಯಾರೀಸಿನ ಗಡಿಯಿಂದ, ಗೊತ್ತುಪಡಿಸಿದ ನಮ್ಮ ಸ್ಥಳಕ್ಕೆ ಬರಲು ಮತ್ತೊಂದರ್ಧ ಗಂಟೆ ಹಿಡಿಯಿತು. ಮೋಟರುಗಳು "ಸೆಂಟ್-ಮಿಶೆಲ್ (St. Micheal) ಎಂಬ ಭಾಗದಲ್ಲಿ ಗೊತ್ತು ಪಡಿಸಿದ "ವಿಶ್ರಾಂತಿಗೃಹದ" ಮುಂದೆ ಬಂದುನಿಂತುವು. ನಾವು ಐವತ್ತು ಜನರಿದ್ದುದರಿಂದ, ೨-೩ ವಿಶ್ರಾಂತಿಗೃಹದಲ್ಲಿ ಇಳಕೊಳ್ಳಲು ವ್ಯವಸ್ಥೆ ಮಾಡಿದ್ದರು. "ನನ್ನ ಪಾಲಿಗೆ" "ಸೆಂಟ್ ಪಾಲ್" ಎಂಬ ಖಾನಾವಳಿಯಲ್ಲಿರುವುದು ಸಿಕ್ಕಿತು. ಎಲ್ಲರೂ ಸತತ ೧೪ ತಾಸಿನ ಪ್ರವಾಸದಿಂದ ದಣಿದದ್ದರಿಂದ, ರಾತ್ರಿಯ ಊಟವಾದ ಮೇಲೆ ತಮ್ಮ ತಮ್ಮ ಕೋಣೆಗಳಿಗೆ ಹೋದರು.

ನಾಲ್ಕು ದಿವಸಗಳಲ್ಲಿ "ಪಾರೀ"ಯನ್ನು ಹೇಗೆ ಸುಲಭವಾಗಿ ನೋಡಿ ಮುಗಿಸಬೇಕೆಂದು, ನಮ್ಮ ಕಾರ್ಯಕ್ರಮವನ್ನು ಮೊದಲೇ ತಯಾರಿಸಿದ್ದೆವು. ಇಲ್ಲಿ ನೋಡಿದ ಸ್ಥಳಗಳು ನೂರೆಂಟಿವೆ. ಅವುಗಳಲ್ಲಿ ಮಹತ್ತ್ವವಾದುವುಗಳನ್ನಷ್ಟೇ ಇಲ್ಲಿ ಕೊಡುತ್ತೇನೆ.

"ಪ್ಯಾರಿಸು ಯುರೋಪದ ಕಲಾಕೃತಿಯ ಕೇಂದ್ರ". ಐತಿಹಾಸಿಕ ಕುರುಹುಗಳ ಸಾಗರ ಇಲ್ಲಿದೆ.

೧. **ಸೊರಬೊರ್ನ್ಸ್**:— ಜಗತ್ಪ್ರಸಿದ್ಧ ವಿಶ್ವವಿದ್ಯಾಲಯವು. ಮಧ್ಯಯುಗದಲ್ಲಿ ಸ್ಥಾಪಿಸಲ್ಪಟ್ಟಿತು. ಎಷ್ಟೋ ಪ್ರಸಿದ್ಧ ಶಾಸ್ತ್ರಜ್ಞರು ಇಲ್ಲಿ ಆಗಿಹೋದರು. ಎಲ್ಲರಿಗೂ ವಿದಿತವಾದ ಹೆಸರು: "ಮೆಡಂ-ಕ್ಯೂರಿ" ಮತ್ತು "ಪಿಯರೀ ಕ್ಯೂರಿ" ಇವರು ಕೆಲಸ ಮಾಡಿದ ಲೆಬೊರೇಟರಿಗಳು ಇಲ್ಲಿವೆ.

೨. **ನೋತರಡಾಂ**:—ಪುರಾತನ ಚರ್ಚು. ಕಟ್ಟಡದ ರೀತಿ ಗೋಥಿಕ್ ರೀತಿ. ಇದರ ಸೌಂದರ್ಯವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನೋಡಿಯೇ ಸುಖ ಪಡಬೇಕು.

೩. **ಆರ್ಕ್. ಡಿ. ಟ್ರಿಯಂಫ್** : ಪ್ಯಾರಿಸಿನ ಪೂರ್ವಭಾಗದ ವಿಜಯದ ಆರ್ಕ್. ಫ್ರೆಂಚ್ ಆರ್ಮಿಯ ವಿಜಯವನ್ನು ವ್ಯಕ್ತಗೊಳಿಸುವುದರ ಸಲುವಾಗಿ, ಇಲ್ಲಿ ಮಾನ್ಯೂಮೆಂಟ್ ಕಟ್ಟಬೇಕೆಂದು ನೆಪೋಲಿಯನನ ಇಚ್ಛೆಯಿತ್ತು.

೪. **ಪಾಂಥಿಯೋ** : ಸೆಂಟ್ ಗೆನ್‌ವ್ಹೀವೆ ಇವರ ಚರ್ಚು. ಇದು ಕೂಡ ಪುರಾತನ ಕಲಾಪೂರಿತ ಚರ್ಚು. ಫ್ರೆಂಚ್ ರಾಜ್ಯಕ್ರಾಂತಿಯಲ್ಲಿ ಪ್ರಸಿದ್ಧ ಪುರುಷರು ಸತ್ತ ಮೇಲೆ, ಅವರನ್ನು ಹೂಗಿಯುವ ಸ್ಥಳವಾಗಿತ್ತು.ವ್ಹೊಲ್ಟೇರ್ ವ್ಹಿಕ್ಟರ್ ಹ್ಯೂಗೋ,ಎಮಿಲೆ ಝೋಲೆ. ಇತ್ಯಾದಿ ಪುರುಷರ ಗೋರಿಗಳಿಲ್ಲಿವೆ.

೫. Chaillot: Palais de Chaillot. ಅಂತರರಾಷ್ಟ್ರೀಯ ಪ್ರದರ್ಶನದ ಸಲುವಾಗಿ ೧೯೩೭ರಲ್ಲಿ ಕಟ್ಟಿದ ಅತಿದೊಡ್ಡ ಕಟ್ಟಡ. ಅದರ ಎರಡೂ ದೊಡ್ಡ ವಿಭಾಗಗಳಲ್ಲಿ (wings) Muse'e de Homme, Musse'e de la Marine ಮತ್ತು Muse'e de Monuments Francais ನ್ನು ನೋಡಬಹುದು.

೬. Fouborg st. Antoine:೧೭೮೯ನೆಯಇಸ್ವಿಯ ... ಕ್ರಾಂತಿ ಸುರುವಾದ ಜಾಗ.ಇವತ್ತುಇದು ಶಾಂತತೆಯ ಬೀದಿಯಾಗಿ ಅಲ್ಲದೆ ಕಟ್ಟಿಗೆಯ ಸಾಮಾನಿನ ವ್ಯವಹಾರದ ಕೇಂದ್ರವಾಗಿದೆ.

೭. **ಲೂವ್ರೆ**(Louvre)ಇಡೀ ಜಗತ್ತಿನಲ್ಲಿಯೇ ಪ್ರಸಿದ್ಧವಾದ ದೊಡ್ಡ ವಸ್ತುಸಂಗ್ರಹಾಲಯ. ರಿನ್ನಾಯಸೆನ್ಸ್ ಕಾಲದಿಂದ ... ನೆಪೋಲಿಯನನ ಕಾಲದ ವರೆಗಿನ, ಸರಕಾರದ ಮತ್ತು ರಾಜ್ಯದಾಳಿಕೆಯ ಕುರುಹುಗಳನ್ನು ಇಲ್ಲಿ ಕಾಣಬಹುದು. ಪ್ರಸಿದ್ಧ ಕಲಾಕಾರರ ಮತ್ತು ಚಿತ್ರಗಾರರ ಮತ್ತು ಬಣ್ಣಗಾರರ ಕೃತಿಗಳನ್ನು ಇಲ್ಲಿ ನೋಡಬಹುದು. ಇದನ್ನು ಒಂದೇ ದಿವಸದಲ್ಲಿ ನೋಡಿ ಮುಗಿಸುವುದು ಅಸಾಧ್ಯ. ಪ್ರತಿಯೊಂದು ವಸ್ತುವನ್ನೂ ಕೂಲಂಕಷವಾಗಿ ನೋಡಬೇಕಾದರೆ, ಸುಮಾರು ೬ ತಿಂಗಳು ಬೇಕಾಗುವುವೆಂದು ಸ್ವ... ಗ್ರಹಿಕೆ.

೮. **ಸಾಕ್ರೆಕರ್**(Sacre'Coeur)೧೮೭೦-೧೯೧೪ನೆಯ ಯುದ್ಧ ಕಾಲದಲ್ಲಿ ಕಟ್ಟಲ್ಪಟ್ಟ ಚರ್ಚು. ಸರಸ್ವತಿಯ ಶುಭ್ರವಸ್ತ್ರಗಳಂತೆ ಇದು ಶುಭ್ರವಾಗಿದೆ. ಪವಿತ್ರತೆ ಇದೆ. ಆದರೆ ವಿಲಕ್ಷಣರೀತಿಯಿಂದ ಈ ಚರ್ಚನ್ನು ಮೊಮಾರ್ತ್ರ ಎಂಬ ಗುಡ್ಡದ ಮೇಲೆ ಕಟ್ಟಿದ್ದಾರೆ. ಇದರ ಅಡಿಗೆ ಜೂಜಾಡುವ ಮನೆಗಳು, ರಾತ್ರಿಯ ಜೀವನದ ಮನೆಗಳು ಹೇರಳವಾಗಿವೆ. ಈ ಭಾಗದಲ್ಲಿ, ರಾತ್ರಿ ೧೨ ಗಂಟೆಯ ಸಮಯವೂ ದಿನದಂತೆ ಕಾಣುತ್ತದೆ. ಮುಖ್ಯವಾದ ರಾತ್ರಿಯ ಕ್ಲಬ್‌ಗಳಲ್ಲಿ "ಮೂಲೇ ರೂಶ್" "ಫೋಲಿ ಬರ್ಜೆರ್" ಮತ್ತು "ಪ್ಲಾಸ್ ಪಿಗ್ಯಾಲ್." ಗುಡ್ಡದ ಮೇಲ್ಗಡೆ ಸ್ವರ್ಗ; ಅಡಿಗೆ ನರಕ.

೯. **ಆಯಫಲ್‌ಟಾವರ್**(ಆಯಫಲ್‌ಸ್ತಂಭ)ಮೂರು ನೂರು ಮೀಟರ್ ಗಗನಚುಂಬಿತ ಸ್ತಂಭ. ೧೮೮೭-೧೮೮೯ ರಲ್ಲಿ ಫ್ರೆಂಚ ಗಣಿತಜ್ಞನ ಒಂದು ಇಕ್ವೇಶನ್ನಿನ ಪರಿಣಾಮವಾಗಿ,ಈ ಸ್ತಂಭ ಕಟ್ಟಲ್ಪಟ್ಟಿತು. ತುಟ್ಟತುದಿಯ ವರೆಗೆ ಹೋಗಲು ಇಲೆಕ್ಟ್ರಿಕ್ ಗಾಡಿಯ ವ್ಯವಸ್ಥೆ ಇದೆ. ಇದರ ತುದಿಯಿಂದ "ಪಾರೀ"ಯು ಅತಿ ರಮ್ಯವಾಗಿ ಕಾಣುತ್ತದೆ.

೧೦. Place de Concorde: ಫ್ರೆಂಚ್‌ರಾಜ್ಯಕ್ರಾಂತಿಯಿಂ ಸ್ವಾತಂತ್ರ್ಯದ ವರೆಗೆ, ಇಡೀ ಫ್ರೆಂಚ್ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಸ್ಥಳ. ನೆಪೋಲಿಯನ್ನನು ಇಜಿಪ್ತದಿಂದ ತಂದ ಸ್ಥಂಭವನ್ನು ಈ "circle"ನಲ್ಲಿ ಕಟ್ಟಿದ್ದಾರೆ. ಈ ಸ್ತಂಭದ ಮೇಲೆ ಕುರಾನಿದೆ.

೧೧. Bastille: ಫ್ರೆಂಚ್ ರಾಜ್ಯಕ್ರಾಂತಿಯ ನೆನಪಿನ ಕುರುಹು ಆಗಿ ಈವೊತ್ತಿಗೂ ನಿಂತಿದೆ. ೧೭೮೯ ನೆಯ ಜುಲೈ ೧೪ನೇ ತಾರೀಖಿನ ದಿವಸ, ಕ್ರಾಂತಿಕಾರರು ಸರಕಾರದ ಬಂದೀಖಾನೆಯನ್ನು ನುಗ್ಗಿ, ಬಂದಿಯಲ್ಲಿ "Genius of Liberty" ಯನ್ನು (statue) ನಿಲ್ಲಿಸಿದರು. ಈ ಕ್ರಾಂತಿಕಾಲದಲ್ಲಿ ಮಡಿದವರ ಹೆಸರುಗಳನ್ನು ಅದರ ಮೇಲೆ ಕೊರೆದಿದ್ದಾರೆ.

೧೨. **Invalides: (Tombeau de Napole'on),**

ನೆಪೋಲಿಯನ್ನನ ಗೋರಿಯನ್ನು ಸುಂದರವಾಗಿ ಕಟ್ಟಿದ್ದಾರೆ. ಅವನ ಅಣ್ಣ-ತಮ್ಮಂದಿರ ಗೋರಿಗಳು ಕೂಡ ಇಲ್ಲಿ ಇವೆ. ನೆಪೋಲಿಯನ್ನನ ಬಾಲ್ಯ, ರಾಜ್ಯದಾಡಳಿತ, ರಾಜಕಾರಣ ಪಟುತ್ವ, ನ್ಯಾಯ ಮತ್ತು ಜನರ ಹಿತಾಹಿತಗಳನ್ನು ನೋಡದ ಅವನ ನಡತೆ ಮುಂತಾದ ಅವನ ಗುಣಗಳನ್ನು ವರ್ಣಿಸುವ ಅನೇಕ ರಮ್ಯ ಬಣ್ಣದ ಚಿತ್ರಗಳನ್ನು ಇಲ್ಲಿ ನೋಡಬಹುದು.

೧೩. **Mosque :** ಫ್ರೆಂಚ್ ರಾಜ್ಯದಲ್ಲಿ ಸುಮಾರು ೫೦೦೦,೦೦೦ ಮುಸಲ್ಮಾನರಿದ್ದಾರೆ. ಅವರು, ಪಾರೀಸಿಗೆ ಬಂದಾಗ ಉಪಯೋಗಮಾಡಿಕೊಳ್ಳುವುದರ ಸಲುವಾಗಿ ಕಟ್ಟಿದ ಮಸೀದೆಯಿದು.

೧೪. **Conciergerie :** ಫಿಲಿಪ್ ರಾಜನ ಕಾಲದ ಅರಮನೆಯ ಕುರುಹು. ಕಟ್ಟಿದ ಕಾಲ ೧೨೭೮-೧೩೧೪. ಮೇರಿ ಅಂಟೋಯನೆಟ್ಟ ಮತ್ತು ಕವಿ ಆನಡ್ರೆ ಸೆನಿಯರ್ (Andre' Chenier) ವಧಸ್ಥಳ.

೧೫. **ಸೇನ:** (seine) ಸೇನ ನದಿಯು ಪ್ಯಾರೀಸಿನ ಮಧ್ಯದಲ್ಲಿ ಹರಿದಿರುವುದರಿಂದ, ಪಾರೀಗೆ ಈ ನದಿಯು ವಿಚಿತ್ರ ಪ್ರಾಕೃತಿಕ ಸೌಂದರ್ಯವನ್ನು ಕೊಟ್ಟಿದೆ.

ಇನ್ನೂ ಎಷ್ಟೋ ಕಲಾಪೂರಿತ ಕಟ್ಟಡಗಳಿವೆ. "ಮದಲೀನ್" ಮತ್ತು "ಓಪೇರಾ". ಓಪೇರಾ ಇಡೀ ಜಗತ್ತಿನಲ್ಲಿಯೇ ಅತಿದೊಡ್ಡದಾದ ನಾಟಕದ ಮನೆ. ಇದರ ಕಟ್ಟಡ ಬಹಳ ಮನೋಹರವಾಗಿದೆ. ಪಾರೀಸಿನ "ಓಪೇರಾ" ಮತ್ತು "ಬ್ಯಾಲೆಟ್ಸ್" ಬಹಳ ಪ್ರಸಿದ್ಧವಾಗಿದ್ದರಿಂದ, ಈ "ಓಪೆರಾ" ಮನೆಯಲ್ಲಿ "ಓಪೆರಾ" ನೋಡಲು ಹೋಗಿದ್ದೆ. ಈ ಓಪೆರಾ ಬಹಳ ಮನೋರಂಜಕವಾಗಿತ್ತು.

ವಿಜ್ಞಾನಿ "ಪಾಶ್ಚರರ" (Pasteur) ಹೆಸರು ಕೇಳದ ಜನರಿಲ್ಲ. ಅಂಥ ಮಹಾನುಭಾವರ ವಿಜ್ಞಾನಸಂಸ್ಥೆಯನ್ನು ನೋಡಲು ಸಿಕ್ಕಿದ್ದು ನನ್ನ ಸುದೈವವು. ಇನ್ನೂ ಎಷ್ಟೆಷ್ಟೋ ಇವೆ; ಅವೆಲ್ಲ ಚಿಕ್ಕ ಕಟ್ಟಡಗಳು.

ಪ್ಯಾರಿಸಿನ ಕಲಾಸೌಂದರ್ಯವನ್ನು ಉಂಡು ತಣಿದು "ಕಲೇ" ಎಂಬ ಫ್ರೆಂಚ್ ಬಂದರಕ್ಕೆ ಬಂದು ತಲುಪಿದೆವು. "ಕಲೇ" ಯಲ್ಲಿ ರಾತ್ರಿಯನ್ನು ಕಳೆದು ಮರುದಿನ ಬೆಳಗ್ಗೆ "ಫೋಕಸ್ಟನ್" ಎಂಬ ಇಂಗ್ಲಿಷ್ ಬಂದರಕ್ಕೆ ಹೋಗುವ ಹಡಗನ್ನು ಹತ್ತಿದೆವು.

ನನ್ನ ಈ ಲಂಡನ್ ಪ್ರವಾಸವನ್ನು ಮುಂದಿನ ಓಲೆಯಲ್ಲಿ ಬರೆಯುತ್ತೇನೆ.

ಹಿರಿಯರಿಗೆ ನಮಸ್ಕಾರಗಳು.

ನಿಮ್ಮ ಮಗ
ಮಧುಕರ

ಚಂದ್ರಬಿಂಬ

ಶ್ರೀ. ಯಮುನೋಜಿ ರಾಮಚಂದ್ರ, ಪೆಂಡಾಲ.

ಅದು ಎಲ್ಲಿಂದ ಬಂದಿತೀ ತಂಗಾಳಿ?
ಇದಕು ನೆಲವೇ ಮನೆಯೆ?
ಇನ್ನೂ ಎರೆಹುಳದಂತೆ ಅಲ್ಲಿಯೇ ಸುಳಿಸುಳಿದು ಸುತ್ತುತಿದೆ
ಇಂದು ಕಮರಿದ ಮುಗುಳ ಮನವ ನೇವರಿಸುತಿದೆ
ನಾಳೆ ಚಿಗುರಲಿ ಎಂದು ಬೀಜಗಳ ತಟ್ಟಿ ಮೈಮುಟ್ಟಿ ಎಬ್ಬಿಸುತಲಿದೆ.

ಕತ್ತಲಿನ ಬಸಿರಿಂದ ಮೇಲೆದ್ದ ಮರಗಳಿವು ...
ಎಂಥ ಹೆಮ್ಮೆಯೊ ಇವಕೆ
ಆಕಾಶದಿಂದಲೇ ಇಳಿದವರೊ ಎಂಬಂತೆ!
ಅಲ್ಲೊಮ್ಮೆ ಇಲ್ಲೊಮ್ಮೆ ಮಿಂಚುಗಣ್ಣನು ತೆರೆದು
ಯಾರ ಬೆನ್ನಟ್ಟುತಿವೆ ತಾರೆಗಳು?

ಇದು ರಾತ್ರಿ,
ನಾಳೆಯ ಭವಿಷ್ಯವನು ತೆರೆವ ಕರಿಬಾಗಿಲು,
ಕಳೆದ ಕ್ಷಣಗಳ ನೆನಪು ಮರುಕಳಿಸಿ ಬಿಕ್ಕುತಿದೆ
ಬಿಕ್ಕು ಮರುಕಳಿಸುತಿದೆ
ಮತ್ತೆಲ್ಲ ಮೆಲುಮೆಲನೆ ನೆಲದಲ್ಲಿ ಇಂಗುತಿದೆ.
ಮೇಲೆ ನಡುಬಾನಿನಲಿ ಮೈತೆರೆದು ನಿಂತಿಹುದು

ಚಂದ್ರಬಿಂಬ!
ಎಲ್ಲವೂ ಬರಿಬರಿದು, ಬೆಳ್ಳಿಯುಂಡೆಯೊಲಿಹುದು
ಒಂದು ಚಿನ್ನದ ರೇಖೆಯೂ ಮೈಯ್ಯ ಮೇಲಿಲ್ಲ.
ಒಮ್ಮೊಮ್ಮೆ ತೂಗುವಾ ತಾರೆಗಳ ಲೋಲಕವೂ ಇಂದಿಲ್ಲ.
ಅಲ್ಲಿ ಅದೊ ಇಂದು ಕಳೆಯುತಿಹ, ನಾಳೆ ಬರುತಲಿದೆ—
ಎನುತಿದೆ ಈ ತೋರುಗಂಬ.
ಆದರೂ ಎಂಥ ನಗೆಯಾಡುತಿದೆ
ನೀರಿನಾಳದಲಿ ನೀರವ ಸುಳಿಗಳೇಳುತಿವೆ.
ಬಿಡುವಿಲ್ಲ, ಬಿಡುವಿಲ್ಲ
ಇಲ್ಲಿ ಮೌನವೂ ಮೌನವಾಗಿ ಮುಂಬರಿಯುತಿದೆ.
ಸಾಲುಮರಗಳ ಕೆಳಗೆ ಕಪ್ಪಾಗಿ ಹೆಪ್ಪುಗಟ್ಟಿದ್ದ ಈ ಕತ್ತಲೆ
ಮೆಲ್ಲಮೆಲ್ಲನೆ ಕರಗಿ ಮೂಡಲಿಗೆ ಹರಿಯುತಿದೆ.
ನಿಶ್ಚಲವೊ? ನೀರವವೊ? ಇಲ್ಲಿ ಒಂದೂ ಇಲ್ಲ;
ಒಂದೊಂದು ಕ್ಷಣದಲೂ ಏನೇನೊ ಆಗುತಿದೆ.
ಕಣ್ಮುಚ್ಚಿ ತೆರೆಯೆ ದಾಟಿಹೆವು ಸಾವಿರ ಮೈಲು.
ಅದೊ ಕೇಳು ಕೋಳಿಲ ದನಿ
ಪಡುವಲಲಿ ಮೊದಲಾಗಿ ಮೂಡಲಲಿ ಕಂತುತಿದೆ;
ಇಲ್ಲಿ ಸಂಜೆಯ ಗಾಳಿ ಊದಿದೆವು
ನಾದರೂಪವು ಅಲ್ಲಿ ಬೆಳಗಿನಲಿ ಬೆಳಗಲಿದೆ
ಏಳು ಎದ್ದೇಳು ನೆಲವೆ!
ಈ ಪುಟ್ಟ ಮಲ್ಲಿಗೆಯ ಬಳ್ಳಿ
ಕತ್ತಲಲಿ ತೊಳಲಾಡಿ ಅಳುತಿವೆ
ಸ್ವಲ್ಪ ಕೈ ಸರಿಸೊ ಹೆಮ್ಮರವೆ!
ಅಲ್ಲಿ ಅದೊ,
ಮೌನದಿಂದಲೆ ಮೊಳೆತ ಮೆಲುನಗೆಯು ಮಸುಳುತಂಬ
ಸಾಗುತಿದೆ ಚಂದ್ರಬಿಂಬ.

ಮಾಯಾಪರಾಜಯ

(ಏಕಾಂಕ ರೂಪಕ)*

[illegible]

ಪಾತ್ರಗಳು

ಅಲ್ಲಮಪ್ರಭು	ಮಾಯಾದೇವಿ
[illegible]	[illegible]
[illegible]	[illegible]
[illegible]	[illegible]

ಸೂತ್ರಧಾರ:

[illegible]

ದೃಶ್ಯ ೧

[illegible]

* [illegible]

[illegible] ...... !

[illegible]

[illegible] ...... [illegible] ... [illegible] ?

[illegible] ...... [illegible]

[illegible] ...... [illegible]

([illegible])

[illegible] ([illegible] ...... [illegible] ...... [illegible] ([illegible])

([illegible] ...... [illegible])

[illegible]

[illegible] ...... [illegible]

[illegible] ...... [illegible]

[illegible] ...... [illegible] ?

[illegible] ...... [illegible] ......

[illegible]

[illegible] ......

[illegible] ......

[illegible] ... [illegible] ?

[illegible] ......

[illegible]

[illegible] ...... [illegible] !

[illegible] ...... [illegible] ......

[illegible]

[illegible] ...... [illegible] !

[illegible]

[illegible]

[illegible]

[illegible]

[illegible]

[illegible]

[illegible] ?

[illegible]

[illegible] !

[illegible] ......

ಮಮಕಾರ:– ಹಾಗೆಂದರೆ..ನಮ್ಮ ಮಾಯಾದೇವಿಗೆ ನಾಟ್ಯ-ಕಲೆಯನ್ನು ಕಲಿಸುವುದಕ್ಕೆ ನಿಮಗೆ ಇಚ್ಛೆಯಿಲ್ಲವೆಂದೇ ?

ರಾಣಿ:– ಆಚಾರ್ಯರೆ, ತಮ್ಮ ಅನುಕೂಲಕ್ಕೆ ಯಾವ ಅಡ್ಡಿಯೂ ಆಗದಂತೆ ನೋಡಿಕೊಳ್ಳುವೆವು........

ಅಹಂಕಾರ:– ಮಹಾರಾಜ....ಇವರು ವ್ರತಚಾರಿಗಳು.... ತಮ್ಮ ಅನುಕೂಲ-ಪ್ರತಿಕೂಲಗಳನ್ನರಿತು ಕೇವಲ ಕುಮಾರಿಯ ನಾಟ್ಯಾಚಾರ್ಯರಾದರೆ ಸಾಕು !

ಅಲ್ಲಮ:– ಅಹುದು ರಾಜನ್........ಹಾಗೇ ಮಾತ್ರ ಸಾಧ್ಯವಾದೀತು.

ಮಮಕಾರ:– ....ಆಗಲಿ ! ....ಪೂಜ್ಯರೇ ನಿಮಗೆ ಇಚ್ಛೆ ಬಂದಂತೆ ನಡೆದುಕೊಳ್ಳಬಹುದು.

ಅಹಂಕಾರ:– ಇನ್ನು ಶುಭಕಾಲವನ್ನು ನೋಡಿ, ನಾಟ್ಯಾ-ಭ್ಯಾಸವನ್ನು ಪ್ರಾರಂಭಿಸಬಹುದು.

ಅಲ್ಲಮ:– ರಾಜನ್........ನಾನು ನಾಟ್ಯಾಭ್ಯಾಸ ಮಾಡಿ-ದುದು ಹತ್ತುವರ್ಷಗಳ ಹಿಂದೆ. ಈ ದಿನ ಮಧುಕೇಶ್ವರನ ಸನ್ನಿಧಿಯಲ್ಲಿ ಮೃದಂಗವನ್ನು ಮಾತ್ರ ಬಾರಿಸಿದೆನು. ಆದರೆ ನಾನೊಂದು ಮಾತು ಹೇಳಬೇಕಾಗಿದೆ.

ಮಮಕಾರ:– ಅಗತ್ಯವಾಗಿ ನಿವೇದಿಸಬಹುದು.

ಅಲ್ಲಮ:– ತಮ್ಮ ಕುಮಾರಿಯ ಆಸಕ್ತಿಯನ್ನು ಕಂಡು, ಈ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕಾಗಿದೆ........ನನ್ನ ಶಿಷ್ಯೆಯ ನಡತೆಯಲ್ಲಿ ಎಂದು ವ್ಯತ್ಯಾಸ ಕಾಣುವುದೋ, ಅಂದೇ ನಾನು ಇದನ್ನು ತ್ಯಜಿಸಿ ಹೋಗಬೇಕಾಗುವುದು !

ಮಮಕಾರ:– ಹ ಹ ಹ ....ಆಗಲಿ....ಆಗಲಿ........ನಮ್ಮ ಕುಮಾರಿಯೆಂದರೆ ಅಪೂರ್ವರತ್ನ....ಈಕೆಯನ್ನು ನಾಟ್ಯಕಲಾ-ಕೋವಿದೆಯನ್ನಾಗಿ ಮಾಡುವುದು ನಿಮ್ಮ ಹೊಣೆ.

ಅಲ್ಲಮ:– ಆಗಲಿ...........

ದೃಶ್ಯ ೩

ಮದಮಾನಿ:– ಪೂಜ್ಯರೆ,........ರಾಜಕುಮಾರಿಯ ನೃತ್ಯವನ್ನು ಸ್ವತಃ ನೋಡಿ ಆನಂದಿಸಬೇಕೆಂದು. ಮಹಾರಾಣಿಯವರು ಇಚ್ಛಿಸಿದ್ದಾರೆ........ಅದಕ್ಕಾಗಿ ಮುಂಚಿತವಾಗಿ ನನ್ನನ್ನು ಕಳುಹಿರುತ್ತಾರೆ.

ಅಲ್ಲಮ:– ಹುಂ........ಹಾಗಾದರೆ ರಾಜಕುಮಾರಿಯನು ನೃತ್ಯಕ್ಕೆ ಸಿದ್ಧಳಾಗುವಂತೆ ಮಾಡು........

ಮದಮಾನಿ:- ಆಕೆಯಾಗಲೆ ನೃತ್ಯಶಾಲೆಗೆ ಸಿದ್ಧಳಾಗಿ ಬಂದಿರುವಳು.

ಅಲ್ಲಮ:– ಸರಿ....ನೀನು ಮುಂದೆ ನಡೆ...........ನಾನು ಬರುತ್ತೇನೆ ....!

(ನಾಲ್ಕು ಹೆಜ್ಜೆ ಮುಂದಿರಿಸಿ ನಿಲ್ಲುವನು) (ಸ್ವಗತ)–ಸಮಯವು ತಾನಾಗಿಯೇ ಒದಗಿ ಬಂದಿರುವುದು. ಮಹಾರಾಣಿಯ ನಯನಗಳು ಇಂದು ತೆರೆಯಲಂತೆ !

ದೃಶ್ಯ ೪

[ನಾಟ್ಯಶಾಲೆಯಲ್ಲಿ ಅಲ್ಲಮಪ್ರಭುವಿನ ಪ್ರವೇಶ]

ರಾಣಿ:– ಪೂಜ್ಯರೆ.......ರಾಜಕುಮಾರಿಯ ನೃತ್ಯವನ್ನು ನೋಡಲು ಬಯಸಿ ಬಂದಿದ್ದೇನೆ.

ಅಲ್ಲಮ:– ಮಹಾರಾಣಿಗೆ ವಂದನೆಗಳು....ರಾಜಕುಮಾರಿ, ನಿಮ್ಮ ಮಾತೆಯವರು ಆಹ್ಲಾದಗೊಳ್ಳುವಂತೆ, ನೀನು ಕಲಿತಿರುವುದನ್ನು ವ್ಯಕ್ತಪಡಿಸಲು ಸಿದ್ಧಳಾಗಿರುವೆಯಲ್ಲವೆ?....!

ಮಾಯಾದೇವಿ:– ಪ್ರಭುಗಳೆ........ಇದೋ, ಈ ದೇಹಲತೆ ಲಾಸ್ಯಕ್ಕಾಗಿ ಬಯಸಿ ನಿಂತಿದೆ. ಕಾಲ ಗೆಜ್ಜೆಗಳು ಮೌನವಾಗಿ ತಮ್ಮ ಬರವನ್ನೇ ಕಾಯುತ್ತಿವೆ........ನನ್ನ ಗಿಣಿ, ನಿಮ್ಮ ಹೆಸರನ್ನು ಹೇಳಿ ಎಚ್ಚರಿಸಿ ನೋಡುತ್ತಿದೆ. ಇನ್ನು ಈ ಬಾಲೆಯ ಹೃದಯ ಮೃದಂಗದ ಧ್ವನಿಗಾಗಿ ಕಾದಿರುವುದಲ್ಲವೇ!

ಅಲ್ಲಮ:– ಹುಂ....ನೃತ್ಯವು ಪ್ರಾರಂಭವಾಗಲಿ.

ತಾ....ತ....ಥೈ ತಕದಿಂ ತಾ....ತದಿಗಿಣಥಾ....ತದಿಗಿಣಥಾ ... ತಾ....ತ.

(ಒಂದು ನೃತ್ಯವಾಗುವುದು. ಕೊಂಚ ವಿಶ್ರಾಮಕಾಲ....)

ರಾಣಿ:– ಆಚಾರ್ಯರೇ....ಕುಮಾರಿ ಬಹಳ ಜಾಣೆಯಲ್ಲವೇ?

ಅಲ್ಲಮ:– ಅಹುದು ಮಹಾರಾಣಿ........ ಭ್ರೂಭಂಗಿಗಳು, ಲಾಸ್ಯ....ವಿನ್ಯಾಸ....ಬಂಧಗಳನ್ನಂತೂ ಅತ್ಯಾಶ್ಚರ್ಯಕರವೆನ್ನುವಂತೆ ವ್ಯಕ್ತಪಡಿಸಬಲ್ಲಳು. ಕುಮಾರಿ....ಇನ್ನು ನೀನು ಕಲಿತಿರುವ ಅರ್ಪಣ ನೃತ್ಯವನ್ನು ಆರಂಭಿಸು....ನಾನೇ ಮೃದಂಗವನ್ನು ಬಾರಿಸುವೆ....

ಮಾಯಾದೇವಿ:- ಅಪ್ಪಣೆ ಗುರುಗಳೇ........ (ಕೈಮುಗಿದು ತಲೆಬಾಗುವಳು.)

(ನೃತ್ಯವು ನಿಧಾನವಾಗಿ ಪ್ರಾರಂಭವಾಗಿ, ತೀವ್ರಗತಿಯನ್ನು ತಾಳುವುದು. ಕೊನೆಗೆನ್ನುವಂತೆ ಮಾಯಾದೇವಿ, ಅಲ್ಲಮನ ಪಾದದಲ್ಲಿ ಶಿರವಿಟ್ಟಂತೆ ಬೀಳುವಳು. ಅದೇ ವೇಳೆಗೆ ಮೃದಂಗರವವೂ ನಿಲ್ಲುವುದು.]

ರಾಣಿ:– (ಗಾಬರಿಯಿಂದ) ಅಂ? ಕುಮಾರಿ....ಕುಮಾರಿ.... ಮದಮಾನೀ....ಕುಮಾರಿಗೆ ಪನ್ನೀರು ಚಿಮುಕಿಸು....

[ದಾಸಿಯರು ಬಳಸುವರು....ಉಪಚಾರದ ಓಡಾಟವಾಗುವುದು.]

ಅಲ್ಲಮ:– ರಾಣಿಯವರೇ....ಗಾಬರಿಯಾಗಬೇಡಿ.... ಇದೋ, ...ನಾಡಿಯ ಮಿಡಿತ ಸಮದೃಷ್ಟಿಯಲ್ಲಿದೆ....ಕುಮಾರಿಯು ಎಚ್ಚರಗೊಳ್ಳುತ್ತಿರುವಳು.

[ಮದಮಾನಿ ಪನ್ನೀರನ್ನು ಚಿಮುಕಿಸುವಳು ...ರಾಜಕುಮಾರಿ ಕಂದೆರೆದು ತಾಯಿಯನ್ನು ನೋಡುವಳು.]

ರಾಣಿ:– ಏಕೆ ಮಗು....ಶಕ್ತಿ ಕುಂದಿತೇ....?

ಅಲ್ಲಮ:– ಅರ್ಪಣೆಯಲ್ಲಿ ತಲ್ಲೀನಳಾದ ಕಾರಣ ಕೊಂಚ ಹಾಗಾಯಿತು. ತಾವು ಚಿಂತಿಸಬೇಕಿಲ್ಲ!....ಕುಮಾರೀ....ಇನ್ನು ಈ ದಿವಸ ವಿಶ್ರಾಂತಿಯನ್ನು ಪಡೆ....ನಾನು ಬರುತ್ತೇನೆ.

ಮಾಯಾದೇವಿ:– ಪ್ರಭುಗಳೇ.... ತಮ್ಮನ್ನು ಇಂದು ಮತ್ತೆ ಕಾಣಲಾರೆನೇ?

ಅಲ್ಲಮ:– ಇಲ್ಲ....ಇಂದು.... ನನ್ನ ಕರ್ಮದಿನ....ಆದ್ದರಿಂದ ನಾಳೆಯ ದಿವಸ ಆಗಬಹುದು.... ರಾಣಿಯವರೇ, ನನಗೆ ಅವಕಾಶ ಕೊಡುವಿರಾ?....

ರಾಣಿ:– ಆಗಬಹುದು....ಇನ್ನು ಧೈರ್ಯವಾಯಿತು....ಹೋಗಿ ಬನ್ನಿರಿ.

[ಅಲ್ಲಮ ತೆರಳುವನು. ಉಳಿದವರು ಅಲ್ಲಿಯೇ ...]

ರಾಣಿ:– ಕುಮಾರಿ....ಇನ್ನು ನೀನು ವಿಶ್ರಮಿಸಿಕೊ....ನಡೆ.

(ಮಾಯಾದೇವಿ ಪರ್ಯಂಕದಲ್ಲಿ ವಿಶ್ರಾಂತಿಯಲ್ಲಿರುವಳು....)

ರಾಣಿ:– ಮದಮಾನಿ.... ಉಳಿದ ದಾಸಿಯರನ್ನೆಲ್ಲಾ ಕಳುಹಿ ಬಂದೆಯಾ....?

ಮದಮಾನಿ:– ಒಬ್ಬೊಬ್ಬರಿಗೂ ಕೆಲಸವನ್ನು ನಿಯಮಿಸಿ ಬಂದೆ....

ರಾಣಿ:– ಸರಿ (ಮೆಲ್ಲಗೆ) ಕುಮಾರಿಗೆ ನಿದ್ರೆ ಬಂದಿರಬೇಕಲ್ಲವೇ?

ಮದಮಾನಿ:– ಆಹುದು ದೇವಿಯವರೆ.... ನಿದ್ರೆ ಬಂದು ಅರ್ಧ ಗಳಿಗೆಯಾದರೂ ಕಳೆದಿರಬೇಕು.

ರಾಣಿ:– ಸರಿ.... ನನ್ನಲ್ಲಿ ಮರೆಮಾಚದೆ ಸ್ಪಷ್ಟಹೇಳಬೇಕು.... ತಿಳಿಯಿತೆ?....

ಮದಮಾನಿ:– ಆಗಲಿ....ಮಹಾರಾಣಿಯವರೆ....

ರಾಣಿ:– ಹಾಗಾದರೆ....ಅಂದು ನೀನು ಅಲ್ಲಮಪ್ರಭುದೇವನನ್ನು ದೇವಾಲಯದಿಂದ ಕರೆತಂದುದು ಹೇಗೆ?.... ಆತ ಅಲ್ಲಿಗೆ ಬಂದದ್ದೇಕೆ?

ಮದಮಾನಿ:– ಈ ಬಡದಾಸಿಯನ್ನು ಕ್ಷಮಿಸಬೇಕು....ರಾಜಕುಮಾರಿಯು ನೃತ್ಯಗೈಯುವ ವೇಳೆಗೆ ಸರಿಯಾಗಿ ಮೃದಂಗದ ಧ್ವನಿ ಕೇಳಿಬಂದಿತು........ ಪ್ರಭುದೇವರು ದೇವಾಲಯದ ಮೆಟ್ಟಿಲೇರಿ ಮೃದಂಗವನ್ನು ಬಾರಿಸುತ್ತಲೇ ಬರುತ್ತಿದ್ದರು....ಕುಮಾರಿಯವರು ನನ್ನನ್ನು ಬಳಿಗೆ ಕರೆದು, ಅವರನ್ನು ಅರಮನೆಗೆ ಬರಮಾಡಬೇಕೆಂದು ತಿಳುಹಿದರು....ನಾನು ಅದಕ್ಕನುಸಾರವಾಗಿ ತಮ್ಮಲ್ಲಿಗೆ ಅವರನ್ನು ಕರೆತಂದೆನು....ಮುಂದಿನದು ತಮಗೆ ತಿಳಿದೇ ಇರುತ್ತದೆ....

ರಾಣಿ:– ಸರಿ....ಹಾಗಾದರೆ.... 'ಅರ್ಪಣೆ'ಯನ್ನು ಆತ ಕಲಿಸಿರುವುದರಲ್ಲಿ ನಮಗೆ ಸಂಶಯ ಮೂಡುತ್ತಿದೆ. ಕುಮಾರಿಯನ್ನು ಈತನೇನಾದರೂ ಮರುಳು ಮಾಡಿರಬಹುದೇನು....?

ಮದಮಾನಿ:– ತಮ್ಮಲ್ಲಿ ನಾನು ಏನೂ ಬಚ್ಚಿಡಿಸಲಾರೆ.... ಆದರೆ....

ರಾಣಿ:– ಇರುವುದನ್ನು ಹೇಳದಿದ್ದರೆ, ನೀನು ಶಿಕ್ಷೆಗೆ ಗುರಿಯಾಗಬೇಕಾದೀತು....ಎಚ್ಚರಿಕೆ!....ಅದದ್ದೇನು ಹೇಳಿಬಿಡು....

ಮದಮಾನಿ:– ರಾಜಕುಮಾರಿಯವರು....

ರಾಣಿ:– ಹೂ.... ಕುಮಾರಿಯು ಈತನ ಬಲೆಯ ಮೀನಾಗಿರುವಳಲ್ಲವೇ?

ಮದಮಾನಿ:– ಅಲ್ಲ....ಕುಮಾರಿಯು ಬಯಸಿದರೂ ಆತನಿನ್ನೂ ಒಪ್ಪಿರುವುದಿಲ್ಲ.

ರಾಣಿ:–ಹೂಂ....ಇರಲಿ....ನೀನು ಗುಟ್ಟಾಗಿ ಇದನ್ನೆಲ್ಲಾ ಸಾಧಿಸಬೇಕು.... ಮಹಾರಾಜರ ವರೆಗೂ ಸುಳಿವು ಮುಟ್ಟಬಾರದು.... ತಿಳಿಯಿತೇ?....ಯೌವನದಲ್ಲಿ ಅರಳುವ ಆಶಾಕುಸುಮಗಳು ಮಸುಳಿಹೋಗಬಾರದು....ರಾಜಕುಮಾರಿಯು ಚಿಂತೆಯಿಂದ ಕೃಶಳಾಗಬಾರದು....ಎಚ್ಚರಿಕೆಯಿಂದಿರಬೇಕು.... ತಿಳಿಯಿತೇ....? ಇದೋ, ಈ ಮುತ್ತಿನ ಹಾರವನ್ನು ಬಹುಮಾನವಾಗಿ ಕೊಡುತ್ತೇನೆ....ಹಿಡಿ....

(ಮದಮಾನಿಯು ಬಾಗಿ ಕೈನೀಡಿ ಪಡೆಯುವಳು)

ರಾಣಿ:– ಇನ್ನು ನಾವು ತೆರಳುತ್ತೇವೆ........ಕುಮಾರಿಯನ್ನು ಎಚ್ಚರಿಕೆಯಿಂದ ನೋಡಿಕೋ....

ಮದಮಾನಿ:– (ನಮಸ್ಕರಿಸಿ)....ಅಪ್ಪಣೆ

ಮಾಯಾ:– ಸಖೀ....

ಮದಮಾನಿ:–....ಬಂದೆ....

(ಮಾಯಾದೇವಿಯ ಪರ್ಯಂಕದ ಬಳಿ ನಿಂತು ನುಡಿಸುವಳು)

ರಾಜಕುಮಾರಿ.... ನಿನ್ನ ನಿದ್ರೆಗೆ ಆತಂಕವಾದರೂ ಏನು?....

ಮಾಯಾ:– ಅದನ್ನು ನೀನು ಅರಿಯೆಯಾ..ಸ್ವಲ್ಪ ಬಾಗಿಲ್ಲಿ.... ಒಂದು ಮಾತು....

(ಕಿವಿಯಲ್ಲಿ ಪಿಸುಗುಡುವಳು. ಕೇಳಿದ ಮದಮಾನಿಯು ಈಗ ಸಂತೋಷಭರಿತಳಾಗಿ ನಿಲ್ಲುವಳು)

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಕೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ ರಾಮಬಾಣ**

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಮದನಮಾನಿ: ...ರಾಜಕುಮಾರಿ..... ನೀನು ನಿನ್ನೆಯಿಂದ ಆಹಾರವನ್ನೇ ಸ್ವೀಕರಿಸಿಲ್ಲವೆಂದು ಮತ್ತೆ ಯಾರಿಗೂ ತಿಳಿಯದು.... ಆದರೆ.... ಹೀಗೆ ಚಿಂತೆಯನ್ನು ಬೆಳೆಸಿಕೊಳ್ಳುವುದು.......ಸರಿಯಾಗಲಾರದು....

ಮಾಯಾ:– ಇಲ್ಲ....ನನಗೇನೂ ಚಿಂತೆಯಾಗಿಲ್ಲ....

ಮದನಮಾನಿ:– ಸುಳ್ಳು ಹೇಳುತ್ತಿರುವೆ ಕುಮಾರಿ....ಹೃದಯದಲ್ಲೇ ಯಾವುವನ್ನು ಎಚ್ಚರಿಸಿಕೊಂಡರೂ.... ಅಂಗಾಂಗವನ್ನೆಲ್ಲಾ ಕ್ಷೀಣ ಮಾಡಿಕೊಳ್ಳುತ್ತಿರುವಿ.

ಮಾಯಾ:– ಇಲ್ಲ....ಮದನಮಾನಿ....ಇಲ್ಲ!

ಮದನಮಾನಿ:– ಇರಲಿ....ನಿನ್ನ ಅಸ್ವಸ್ಥತೆಗೆ ನಾನು ಮದ್ದನ್ನು ಬಲ್ಲೆ. ಹೇಳಲೇ?

ಮಾಯಾ:– ....(ಅವಳನ್ನೇ ದಿಟ್ಟಿಸಿ ನೋಡುವಳು)

ಮದನಮಾನಿ:– ಹೇಳಿ ಬಿಡಲಾ....ಪ್ರ....ಭು....ದೇವರು....!

ಮಾಯಾ:– ಸಾಕು....ಮದನಮಾನಿ....ಹೋಗಿನ್ನು....

(ಕೈ ನೀಡಿ ತಳ್ಳಿಬಿಡುವಳು–ಹುಸಿಮುನಿಸಿನಲ್ಲಿ ಇರುವಳು)

ಮದನಮಾನಿ– (ಹತ್ತಿರ ಬಂದು ಸಾಂತ್ವನದಿಂದ) ಇದು ನಿನ್ನ ತಪ್ಪಲ್ಲ....ಚಿಂತಿಸಬೇಡ.

ಮಾಯಾ:– ಮತ್ತೇನು ಮಾಡಬಲ್ಲೆ........ ಹೆಣ್ಣಾಗಿ ಹುಟ್ಟಿ ಬಯಸಿದ ವಸ್ತುವು ದೂರ ದೂರ ಸರಿಯುವುದನ್ನು ನೋಡುತ್ತಾ ಹೇಗೆ ಬದುಕಿರಲಿ?....

ಮದನಮಾನಿ:– ಇನ್ನು ನೀನು ಚಿಂತಿಸಬೇಡ....(ಕಿವಿಯಲ್ಲಿ) ನಾನು ಎಲ್ಲವನ್ನೂ ಸರಿಪಡಿಸುತ್ತೇನೆ....ತಿಳಿಯಿತೇ? (ಗಟ್ಟಿಯಾಗಿ) ನಾಳೆಯ ಸಂಧ್ಯಾಸಮಯದ ವೇಳೆಗೆ, ನೀನು....ವಸ್ತ್ರಾಲಂಕಾರ ಭೂಷಿತಳಾಗಿರಬೇಕು....ತಿಳಿಯಿತೆ?

(ಮಾಯಾದೇವಿ ನಾಚಿಕೆಯಿಂದ ಮೊಗ ಮುಚ್ಚಿಕೊಳ್ಳುವಳು)

ಇನ್ನು ನಾಚಿಕೊಂಡರೆ ಆಗದು ರಾಜಕುಮಾರಿ.

ಮಾಯಾ;– ನನ್ನ ಮುಂದೆ ನಿಲ್ಲಬೇಡ....ತೊಲಗಾಚೆ....

ಮದನಮಾನಿ:– ಕ್ಷಮಾಪಣೆ ಬೇಡುತ್ತೇನೆ ರಾಜಕುಮಾರಿ!.... ಗೆಳತಿಯಂತಿರುವೆಯಾದರೂ....ನಾನು ಸೇವಕಿಯಲ್ಲವೇ?

ಮಾಯಾ:– ಸಖೀ........ಕೋಪಿಸಿಕೊಳ್ಳಬೇಡ........ಬಾ.... ಹೋಗೋಣ.

ದೃಶ್ಯ ೪
(ಮರುದಿನ)

ಮದಮಾನಿ:–ಈತನು ಸಾಮಾನ್ಯನಂತೆ ಕಾಣುವುದಿಲ್ಲ..ನಿಜಕ್ಕೂ ನಿರ್ಲಿಪ್ತನೆಂದು ಅಂದಿನಿಂದಲೂ ನಂಬಿದ್ದೆನು....ಆದರೆ ರಾಜಕುಮಾರಿಯ ಕುಡಿನೋಟದ ಹೊಳಹು ತಾಗುತ್ತಲೇ....ಅಷ್ಟೇಕೆ ನಾನು ಕರೆಯುತ್ತಲೇ, ವೇಷ-ಭೂಷಣಾಲಂಕೃತನಾಗಿ ಸರಾಗವಾಗಿ ಬಂದೇ ಬಿಟ್ಟನಲ್ಲ!.... ಆಗಲಿ ನಾನಿನ್ನು ಸ್ವಲ್ಪ ಮರೆಯಾಗುವೆನು....

(ಅಲ್ಲಮನ ಪ್ರವೇಶ....ಮಾಯಾದೇವಿ ನಿಂತಿರುವಳು)

ಮಾಯಾ:– (ಸ್ವಗತ) ಇದೇನು........ನನಗಾಗಿ ಬಂದರೂ, ಅಲುಗದೇ ಮೌನವಾಗಿ ನಿಂತಿರುವರು....ಆಗಲಿ....(ಗಟ್ಟಿಯಾಗಿ).. ಪ್ರಭುವಿಗೆ ಈ ಚರಣದಾಸಿಯು ವಂದಿಸುವಳು....ದಯಮಾಡಿ.. ಇತ್ತ....ಬರಬೇಕು.

ಅಲ್ಲಮ:– ಮಾಯಾದೇವಿ.... ಮಧುಕೇಶ್ವರನ ವರಪ್ರಸಾದದಿಂದ ಜನಿಸಿದ ನೀನು....ನಿನ್ನ ಜನ್ಮವನ್ನೇ ಮರೆತೆಯೇನು?

ಮಾಯಾ:– (ಸ್ವಗತ) ಇದೇನು?.... ಇವರಿಗೆ ಈ ವಿಚಾರವೇಕೆ?....

ಅಲ್ಲಮ:– ಈ ನಶ್ವರಶರೀರವನ್ನು, ಬಯಸಿ, ನಿನ್ನ ಪವಿತ್ರತೆ ಮಸಿಯನ್ನು ಬಳಿದುಕೊಳ್ಳುವ ಸಾಹಸಕ್ಕೇಕೆ ತೊಡಗಿದೆ?

ಮಾಯಾ:–ಪ್ರಭುದೇವ....ನನ್ನ ಈ ಜನ್ಮಕ್ಕೆ ನಿಮ್ಮ ಕರುಣೆಯೊಂದೇ ಸಾಕು....ದಯೆಮಾಡಿ ಈ ಹೃದಯದ ಬಯಕೆಯನ್ನು ಸಲ್ಲಿಸಿಕೊಡಬೇಕು.

ಅಲ್ಲಮ:– ....ಹ....ಹ್ಹ....ಹ್ಹ!....ಆಗಲಿ.... ನಿನಗೆ ತಿಳಿದಂತೆ ಮಾಡು.

(ಮಾಯಾದೇವಿ ದಿಟ್ಟಿಸಿ ನೋಡುವಳು. ಮತ್ತೆ ತಲೆಬಾಗಿ ನಿಲ್ಲುವಳು. ಮತ್ತೆ ನಿಧಾನವಾಗಿ ಮುಂದುವರಿದು ಅಲ್ಲಮನನ್ನು ಸ್ಪರ್ಶಿಸುವಳು.)

ಮಾಯಾ:– ಹಾ....ಇದೇನು?....ಈ ಮೂರ್ತಿಯು ಬರಿಯ ಗಾಳಿಯ ದೇಹವೇ?....ನನಗೆ ನಿಲುಕದೇ ಹೋಗುವುದಲ್ಲ!..ಹಾ.... ಏನಚ್ಚರಿ!....ತುಟಿಯ ನಗೆ ಮಿರುಗುತ್ತಿದೆ....ನಯನಗಳು ಪ್ರಕಾಶಿಸುತ್ತಿವೆ....ರೂಹು ಅಚ್ಚಳಿಯದಿದೆ.... ಆದರೂ ಈ ಅಲಂಕಾರ ಭೂಷಿತ ಮೂರ್ತಿ, ನನ್ನನ್ನೇ ಪರಿಹಾಸ್ಯ ಮಾಡುವಂತೆ ನಿಂತಿದೆಯಲ್ಲಾ!.... ಇದೇನು.... ಮಾಯಾಜಾಲವೇ?....ಅಲ್ಲ ಅಲ್ಲ....ಇವರೆ ನನ್ನ ಪ್ರಿಯತಮ ಪ್ರಭುದೇವರಲ್ಲವೇ?

(ಸ್ಪರ್ಶದಿಂದ ಬೆದರಿ ಹಿಮ್ಮೆಟ್ಟಿ ನಿಲ್ಲುವಳು)

ಅಲ್ಲಮ:– ಅಹ್ಹ ಹ್ಹ ಹ್ಹ....ಮಾಯಾದೇವಿ....ಏಕೆ ಹಿಂದೆಗೆಯುವೆ?....ಬಯಸಿ ಬಯಸಿ ಬರಮಾಡಿಕೊಂಡು ಹಿಂದೆಗೆವೆಯೇಕೇ? ....ಹಾಗಾದರೆ ನಾನು ನಿನಗೆ ಬೇಡವೇ?....

ಮಾಯಾ:– ಇಲ್ಲ ಪ್ರಭು ...ಕ್ಷಮಿಸು....ಬಯಕೆಯ ಗಾಳದಲ್ಲಿ ಸಿಕ್ಕಿ ನರಳುತ್ತಿರುವ ನನ್ನನ್ನು ಉದ್ಧರಿಸು!....

ಅಲ್ಲಮ:– ಮಾಯಾದೇವಿ.... ನಿನಗೆ ನಾನಿನ್ನು ಬೇಕಿಲ್ಲ.... ನಾನಿನ್ನು ಹೊರಡುವೆನು....

ಮಾಯಾ:– ಬೇಡ.... ಬೇಡ ಇದೋ....(ಭುಜಗಳನ್ನು ಹಿಡಿಯಹೋಗಿ ಹಿಂದೆಗೆವಳು)....ಅಯ್ಯೋ ಇದೇನು....ಮತ್ತೆ ಗಾಳಿ'....ಇದು ದೇಹವೇ ಅಲ್ಲ. ನನ್ನನ್ನು ಕಂಡು ನಗುತ್ತಿರುವ ಈ ಮೂರ್ತಿ, ನನಗೆ ನಾಟ್ಯಾಭ್ಯಾಸ ಮಾಡಿಸಿಲ್ಲವೇ?....ಇಲ್ಲವೇ....ಕನಸು ಕಾಣುತ್ತಿರುವೆನೇ?....ಇದೆಲ್ಲಾ....ಐಂದ್ರಜಾಲವಿರಬೇಕೆ?.... ಅಂ.... (ಚೀರುವಳು)

ಮದನಮಾನಿ:– ಇದೇನು!........ರಾಜಕುಮಾರಿ........ ರಾಜ-ಕುಮಾರೀ....

ಮಾಯಾ:– ಮದನಮಾನೀ....ನೀನು ಸತ್ಯವಾಗಿಯೂ ನನ್ನ ಗೆಳತಿಯೇ?....ನೀನೂ ಇಂದ್ರಜಾಲದ ರೂಪಲ್ಲವೇ?....

ಮದನಮಾನಿ:– ಇದೇನು ರಾಜಕುಮಾರಿ.... ಹೀಗೇಕೆನ್ನುವೆ? ನನ್ನನ್ನಾಗಲೇ ಮರೆತೆಯಾ?

ಮಾಯಾ:– ಹೊರಡು.......ಹೊರಡು...... .ಆ ಮೂರ್ತಿಯ ಹಿಂದೆಯೇ....

(ಹಾಸಿಗೆಯಲ್ಲಿ ಬಿದ್ದು ರೋದಿಸುವಳು)

ಮದಮಾನಿ:– ಮಾಯಾದೇವಿ....ನಾನು ನಿನ್ನ ಪ್ರಿಯಸಖಿಯಲ್ಲವೇ?....ಸಮಾಧಾನತಾಳು....ಆದದ್ದಾದರೂ ಏನು?....

ಮಾಯಾ:– ಅಹುದು.... ನೀನು ನನ್ನ ಗೆಳತಿ ನಿಶ್ಚಯ.... ಆದರೆ ಆತನೆಲ್ಲಿ? ಆತನಿಗೆ ದೇಹವೇ ಇಲ್ಲ....ಗಾಳಿಯಲ್ಲಿ ಧೂಮದ ರೂಹು!

ಮದಮಾನಿ:– ಇರಲಿ....ಈಗ ಮಲಗಿಕೋ. ಸಮಾಧಾನ ತಾಳು....ನಾನೂ ನಿನ್ನ ಬಳಿಯಲ್ಲೇ ಇರುವೆನು....ದುಃಖಿಸಬೇಡ....

ದೃಶ್ಯ ೫

ಮದಮಾನಿ:–ಆಶ್ಚರ್ಯ!....ಸಂಜೆಯ ಮುಸುಕಿನಲ್ಲಿ ಮುಗಿಲು ಬೇರೆ ಕವಿಯಿತಲ್ಲ! ಅರಮನೆಯಿಂದ ಹೊರಟುದಾಯಿತು....ಇನ್ನೂ ಬಹುದೂರ ಹೋಗಬೇಕು....

(ಗುಡುಗು-ಸಿಡಿಲು-ಮಿಂಚು!....ಗಾಳಿಯು ಭೋರೆನ್ನುವುದು.)

ಅಶರೀರವಾಣಿ:– ಮದಮಾನೀ.... ಎಚ್ಚರಿಕೆ .... ನೀನು ವಿಮಲೆಯೆಂಬುದನ್ನು ಮರೆತು, ಅಕಾರ್ಯಕ್ಕೆ ತೊಡಗಿರುವೆ. ಅಲ್ಲಮನು ಮಾನವನಲ್ಲ....ಪರಮೇಶ್ವರನ ಸಾತ್ತ್ವಿಕಾವತಾರಿ.... ಮಾಯಾದೇವಿಯ ಸೋಲು ಖಂಡಿತ....ಖಂಡಿತ....!

(ಗಾಳಿಯು ಮೆಲ್ಲಿತಾಗುವುದು. ಮಳೆಯು ನಿಲ್ಲುವುದು....)

ಮದಮಾನಿ:– ಎಂತಹ ಅಜ್ಞಾನಿ ನಾನು?....ಜನ್ಮತಾಳಿದು-ದಾದರೂ ಇಂತಹ ಹೀನಕಾರ್ಯಕ್ಕಾಗಿಯೇ ? .... ಇರಲಿ .... ಮಾಯಾದೇವಿಯನ್ನೂ ಎಚ್ಚರಿಸಿ; ಮುಕ್ತಳನ್ನಾಗಿ ಮಾಡಲು ಯತ್ನಿ-ಸುವೆನು.

ದೃಶ್ಯ ೬

ಮಾಯಾದೇವಿ:– ಗೆಳತಿ.... ಏಕೆ ಹೀಗೆ ನಿಂತೆ?....ಓಡಿಬಂದ ಕಾರಣ ಬಹಳ ದಣಿದಂತೆ ಕಾಣುತ್ತಿದೆ. . . . . ಕುಳಿತುಕೊ! . . . . ಬಾ .... ಇದೇನು ಗೆಳತಿ?.... ಏಕೆ ಮೌನ ?....ಆಚಾರ್ಯರನು ಕಾಣಲಿಲ್ಲವೇ ? .... ಕಂಡೆಯಾ ? .... ಹಾಗಾದರೆ ಏಕೆ . . . ಮಾತನಾಡುವುದಿಲ್ಲವೆ ? ....,

ವಿಮಳೆ ಅಥವಾ ಮದಮಾನಿ:– ನೀನು ಅವರ ಚಿಂತೆಯನ್ನು ಬಿಡು.......ನಿನಗೆಟುಕದ ವ್ಯಕ್ತಿಯದು!.....

ಮಾಯಾ:– ಅಂದರೆ ?.... ಹಣತೆಯಂತೆ ಹೊತ್ತಿ ಉರಿಯು-ತ್ತಿರುವ ಆಸೆಯನ್ನು ನಂದಿಸಬಹುದೇ ? ....

ವಿಮಳೆ:– ಮಾಯಾದೇವಿ .... ಎಲ್ಲಿಯವರೆಗೆ ಕಾಮುಕಳಾಗಿ ಆತನನ್ನು ಕಾಣುವೆಯೋ, ಅಲ್ಲಿಯವರೆಗೂ ಆ ಪ್ರಭುವು ನಿನಗೆ ಅಸಾಧ್ಯನು......

ಮಾಯಾ – ಮದನಮಾನಿ........ನಿನಗೆ ವೈರಾಗ್ಯ ಬಂದಿತೇನು? .... ಪ್ರಭುದೇವರು ನನ್ನ ರೂಪಿಗೆ ಮೆಚ್ಚಿ ಬಂದಿಲ್ಲವೆಂದು ಯಾರು ಹೇಳಿದರು ನಿನಗೆ ?

ವಿಮಳೆ:– ಅಮರವಾಣಿ .... ನುಡಿಯಿತು. — ಪ್ರಭುದೇವನು ಸಾಮಾನ್ಯ ಮಾನವನಲ್ಲ .... ಪರಶಿವನ ಅವತಾರಿ........

ಮಾಯಾ:– ಅ ಹ್ಹ ಹ್ಹ ....ಮೃದಂಗವನ್ನು ಬಾರಿಸುವ ಈ ಮೂರ್ತಿ ಪರಮೇಶ್ವರನೇನು!? .... ಆದರೇನು! .... ಆತನೂ ನನ್ನ ಸೌಂದರ್ಯಕ್ಕೆ ಬಾಗಲೇ ಬೇಕು......!ಹುಂ—ನೋಡುತ್ತಿರು.

ವಿಮಳೆ:– ಮಾಯಾದೇವಿ.... ....ಮಾರಿಕಾಕೋಲಾಹಳನಾದ ಪ್ರಭುದೇವರಿಗೆ ಮೊರೆಹೋಗು....ನಿನಗೆ ಕ್ಷೇಮವಾದೀತು. !

ಮಾಯಾ:– ನನ್ನ ಈ ಸೌಂದರ್ಯಕ್ಕೆ ಆತನೂ ದಾಸನೆಂಬು ದನ್ನು ನೀನೇ ನೋಡುವೆ ! ....

ವಿಮಳೆ:– ರಾಜಕುಮಾರಿ.-....ಆಗಬಹುದು........ನಿನ್ನ ಗುರಿ ಮುಟ್ಟುವುದನ್ನು ನಾನು ಕಾಣುವೆ....ಅಷ್ಟೇಕೆ, ನಾನೂ ನಿನಗೆ ಅನು-ಕೂಲಳಾಗಿ ವರ್ತಿಸುತ್ತೇನೆ .... ಆದರೆ ನಿನ್ನ ಗುರಿ ನಿನ್ನದೇ ಹೊರತು ನನ್ನದಲ್ಲ......

ಮಾಯಾ:– ಹಾಗಾದರೆ........ನಡೆ..........ಅಲ್ಲಿಗೇ ನಾವು ಹೋಗೋಣವಂತೆ......

ವಿಮಳೆ:– ಇಷ್ಟು ಬೇಗ ಮರೆತೆಯೇನು?. ..ಅದರಲ್ಲೂ ಸಂಧ್ಯಾ ಸಮಯವು ಮೀರಿರುವಲ್ಲಿ.. ....ನಾವಿಬ್ಬರೇ ಅರಮನೆಯಿಂದ......... ಹೊರಡಬಹುದೇ ? ಇನ್ನೇನು, ಮಹಾರಾಣಿಯವರು ಭೋಜನಕ್ಕೆ ಬರಮಾಡಿಕೊಳ್ಳಬಹುದು...... !

ಮಾಯಾ:– ಓ ಹೋ......ಇದು ಶುಕ್ಲಪಕ್ಷವೆಂಬುದನ್ನು ಮರೆ-ತೆಯಾ......ನಾಳೆ ಹುಣ್ಣಿಮೆಯಿರುವಲ್ಲಿ ಬೆದರಿಕೆಯೇ ?........ಹೆಚ್ಚು ಮಾತಿನಿಂದೇನು?......ಈಗ ನಾನು ಹೋಗಲೇ ಬೇಕು........ಉರಿ-ಯುತ್ತಿರುವ ಹಣತೆಗೆ ನೀರೆರೆಯುವ ಬುದ್ಧಿ ಒಳಿತಲ್ಲ.....

ವಿಮಳೆ:– ಅಂತಹ ಕೆಲಸ ನನ್ನಿಂದಾಗದು ದೇವಿ....ಇದೋ ಸಿದ್ಧಳಿದ್ದೇನೆ. .... ಆದರೆ ಗುಪ್ತಮಾರ್ಗದಿಂದಲೇ ಹೋಗಬೇಕು. .... ಮೃದಂಗರವವು ಮಧುಕೇಶ್ವರನ ದೇವಾಲಯದ ಕಡೆಯಿಂದಲೇ ಬರುವಂತಿದೆ.

ಮಾಯಾ:– ಅಹುದು—ನನ್ನದೂ ಅದೇ ಅಭಿಪ್ರಾಯ........ ನಡೆ....ಬೇಗ ಬೇಗ ಹೋಗೋಣ.

(ಮೃದಂಗಧ್ವನಿ ಸ್ವಲ್ಪ ಗಟ್ಟಿಯಾಗಿ ಕೇಳುವುದು.)

ಮಾಯಾ:– .... ಗೆಳತಿ ....

ವಿಮಳೆ:– ಶ್ .... (ಮೆಲುದನಿಯಲ್ಲಿ) ಅರಮನೆಯ ಕಾವ-ಲಿಂದ ತಪ್ಪಿಸಿಕೊಂಡೆವಾದರೂ ಎಚ್ಚರಿಕೆ !.....

.... ಈ ಬೆಳುದಿಂಗಳು ಎಷ್ಟು ಪ್ರಶಾಂತವಾಗಿದೆ! ....

.... ಈಕೆಯ ಅಹಂಕಾರವೆಲ್ಲಾ......ಮೃದಂಗರವಕ್ಕೇ ಕರಗಿ ಹೋದಂತಿದೆಯಲ್ಲ........ಇರಲಿ....

ಮಾಯಾ:–ಗೆಳತೀ..ಗೆಳತೀ...ಇದೇನು ನಿಂತೇ ಬಿಟ್ಟೆಯೇನು?

(ವಿಮಲೆ ತೆರಳುವಳು. ಮೃದಂಗರವವು ಸ್ಪಷ್ಟವಾಗಿ ಕೇಳಿ ಬರುವುದು.)

ವಿಮಲೆ:– ದೇವಿ .... ನನ್ನಂತೆ ಬಾ ....ಹಾಂ....ಯಾರಾದರೂ ಇರಬಹುದು........

....ಸರಿ........ಮತ್ತೊಂದು ನರಪಿಳ್ಳೆಯೂ ಇಲ್ಲ....

ಮಾಯಾ:– ಸಖೀ........

ವಿಮಲೆ:– ಇದೋ ನಿಶ್ಶಂಕೆಯಿಂದ ಬರಬಹುದು.

(ದೇಗುಲದಲ್ಲಿ ರಂಗಸ್ಥಳದ ಬಳಿಯಲ್ಲೇ ಮೃದಂಗ ಬಾರಿಸುತ್ತಾ ನಿಂತಿರುವನು ಅಲ್ಲಮ. ಮಾಯಾದೇವಿ ನೃತ್ಯ ಗೈಯತೊಡಗುವಳು. ವಿಮಲೆ ಹಾಡುವಳು.)

ಮಾಯಾ:– ಪ್ರಭು........ನಿಲ್ಲಿಸಿದಿರೇಕೆ?....ಪಯಣ ಅರ್ಧಕ್ಕೆ ನಿಲ್ಲುವಂತೆ, ಮೇಘನಾದಕ್ಕೆ ಒಲಿದ ನವಿಲು ನೃತ್ಯದಲ್ಲಿ ತಲ್ಲೀನವಾಗುವುದಕ್ಕೆ ಮುಂಚೆಯೇ ಆಗಸ ಬರಿದಾದಂತಾಯಿತೇ ?....ಮತ್ತೆ ಬಾರಿಸಿ. ಮಧುಕೇಶ್ವರನಿಗೆ ನನ್ನ ಅರ್ಪಣೆ ಇನ್ನೂ ಸಂದಿರುದಿಲ್ಲ....

ವಿಮಲೆ:– ಪ್ರಭುದೇವ........... ಮುಂದುವರಿಸಬಾರದೇ ?

ಅಲ್ಲಮ:– ಯುವತಿ....ನಿನ್ನ ಅರ್ಪಣೆಗೆ, ಅಡ್ಡಿಯಾಯಿತು.... ಅದು ಹಾಗೆಯೇ ಆಗಬೇಕಲ್ಲವೇ ? ....ನಿನ್ನ ಮಾಯಾಜಾಲದಲ್ಲಿ ಮಧುಕೇಶ್ವರನೂ ಬೀಳಬಾರದಷ್ಟೆ !....

ಮಾಯಾ:–(ಸ್ವಗತ)ಮೃದಂಗವನ್ನು ಬಾರಿಸುವ ಚಾತುರ್ಯದಿಂದ ಆಚಾರ್ಯರೆನಿಸಿಕೊಂಡವರಿಗೆ ಇಷ್ಟು ಮಾತೇ ?........ ಈ ವೈರಾಗ್ಯ-ಜ್ಞಾನ-ಬೋಧೆಯನ್ನೂ ಕಲಿತು,ವೇಷ-ಭೂಷಣಗಳಿಂಲಂಕೃತನಾಗಿ, ನಗುಮಲ್ಲಿಗೆಯೆರಚುತ್ತಾ ಯುವತಿಯರನ್ನೇಕೆ ನೋಡಬೇಕು! ಇಂತಹ ಕಪಟವರ್ತನೆಯಿಂದ ವಂಚನೆಯನ್ನು ಅಭ್ಯಾಸ ಮಾಡುವವನಲ್ಲಿ ಏನು ಘನತೆ ಇದ್ದೀತು ?....

(ಅಲ್ಲಮನ ಕಡೆಗೆ ಎರಡು ಹೆಜ್ಜೆ ಇಟ್ಟು........ಬಳುಕುತ್ತಾ ಮುಗುಳುನಗೆಯೆರಚಿ)....ಪ್ರಭು....ನನ್ನ ಪ್ರಭು........ಮತ್ತೊಮ್ಮೆ ಮೃದಂಗವನ್ನು ಬಾರಿಸಿ ನನ್ನ ಅರ್ಪಣೆಯನ್ನು ಸ್ವೀಕರಿಸಬಾರದೇ?

ಅಲ್ಲಮ:– ಅಹ್ಹ....ಹ್ಹ....ಹ....ಯುವತೀ, ನಿನ್ನಲ್ಲಿ ನನಗೆ ತಿರಸ್ಕಾರವಿಲ್ಲ........ನಿನ್ನ ಸೌಂದರ್ಯಕ್ಕೆ ಮೂರು ಲೋಕಗಳಲ್ಲಿಯೂ ಎಣೆಯಿರುವುದಿಲ್ಲ....ಆದರೆ....ನಾನು ನಿನಗಾಗಿ ಜನ್ಮ ತಾಳಿದವನಲ್ಲ.. ನೀನು ಬಂದ ದಾರಿಯನ್ನೇ ಹಿಡಿದು ಹೋಗುವುದು ಲೇಸು.... (ಜೋರಿನಿಂದ ಮೃದಂಗಧ್ವನಿ ಮಾಡುವನು.)

ಮಾಯಾ:– ಪ್ರಭು....ಎಂದು ನಿನ್ನ ಮೃದಂಗದ ಮೊದಲ ದನಿಯೆದ್ದು ಕುಸುಮಶರವೇಗದಲ್ಲಿ ನನ್ನ ಜೀವನವನ್ನು ಮುಟ್ಟಿ ತಲ್ಲಣಗೊಳಿಸಿತೋ....ಅನ್ಯದೇವರನ್ನು ಚಿಂತಿಸದೆ, ನಿನ್ನನ್ನೇ ಪೂಜಿಸಿ, ಹಗಲು-ರಾತ್ರಿಗಳನ್ನು ಕಳೆದೆ....ಇಂದು ನಿನ್ನ ದಾಸಿಯಾಗಿ ಬಂದಿರುವ ನನ್ನಲ್ಲಿ ಕೃಪೆದೋರು.....

ಅಲ್ಲಮ:– ಮಹಾದೇವಿ....ನಾನು ಮೃದಂಗವನ್ನು ಬಾರಿಸಿದುದು ನಿನಗಾಗಿಯಲ್ಲ. ಮಧುಕೇಶ್ವರನ ಪ್ರಾರ್ಥನೆಗೆಂದು ನಾನು ಬಂದುದು.....ನನ್ನ ಮೃದಂಗದ ತಾಳಕ್ಕೆ ನೃತ್ಯಮಾಡಿ, ಕಡೆಗೆ ಬೇಡಿಕರೆದೊಯ್ದವಳು ನೀನು....ಎಂದಮೇಲೆ, ನನ್ನ ಮೇಲೆ ಆರೋಪಣೆ ಸರಿಯಾದುದಲ್ಲ.....

ಮಾಯಾ:– (ಕೋಪದಿಂದ) ಮೃದಂಗವನ್ನು ಬಾರಿಸುತ್ತ ಬಂದವರೂ, ಮಹಾರಾಜರ ದಯೆಯನ್ನು ದೊರಕಿಸಿಕೊಟ್ಟವಳು ನಾನು....ಬೀದಿಬೀದಿ ಅಲೆಯುತ್ತಿದ್ದುದನ್ನು ತಪ್ಪಿಸಿ, ಭೋಗ-ಭಾಗ್ಯವನ್ನು ಸ್ವರ್ಣಪಾತ್ರೆಯಲ್ಲಿ ತಂದಿರಿಸಿದವಳು....ನಾನು!.... ಬಿಕಾರಿಯೆಂದು ಒಂದು ಬಾರಿಯ ಭಿಕ್ಷೆ ನೀಡಿ ಕಳುಹದೆ, ನನ್ನನ್ನೇ ನೀಡಿದುದು ಮಹಾಪರಾಧವಲ್ಲವೇ ?....

ಅಲ್ಲಮ:– ಅಹ್ಹ....ಹ್ಹ.....ಹ....ಮಹಾದೇವಿ.....ಮಮಕಾರ ಭೂಪಾಲಕುಮಾರೀ....ಹಿಮವಂತನೆಲ್ಲಿ; ಊರಿನ ಪಕ್ಕದ ಗುಡ್ಡವೆಲ್ಲಿ? ಸುವಿಶಾಲವಾದ ನೀಲನಭವೆಲ್ಲಿ; ಅರಮನೆಯ ಛಾವಣಿಯೆಲ್ಲಿ?.... ಯೌವನಮದದಲ್ಲಿ ಭವದ ದೇಹದ ಬಯಕೆಯನ್ನಲ್ಲದೆ....ಪರಮಾತ್ಮನ ಸ್ವರೂಪವನ್ನು ಕಾಣಲಾರದೆ, ಸೌಂದರ್ಯಭೋಗವೇ ಸರ್ವಸ್ವವೆಂದು ಯತ್ನಿಸುವೆಯೇಕೆ ?.... ಈಗಲೂ ಭವದ ಭೂತದ ದವಡೆಯಿಂದ ತಪ್ಪಿಸಿಕೊ....ನಿನ್ನ ಜನ್ಮದ ಕಾರಣವರಿತು ಬಂದ ಹಾದಿಯನ್ನು ಹಿಡಿದು ಹಿಂದಿರುಗು....ಕ್ಷೇಮಫಲ ಕೈಗೆಟುಕೀತು !

ಮಾಯಾ:– (ಅಳುವಳು)ಪ್ರಭು, ಕನಸು-ನನಸುಗಳಲ್ಲಿಯೂ ಮತ್ತೊಂದು ರೂಪವನ್ನು ಕಾಣದೆ ಬಯಸಿದುದಕ್ಕೆ ಇದೇ ತಕ್ಕ ಫಲವೇನು ?....ನನ್ನ ಅಂತಃಕರಣಪೂರ್ವಕ ಸರ್ವಸ್ವಾರ್ಪಣೆಗೆ ಕೇವಲ ತಿರಸ್ಕಾರವೇ ತಕ್ಕ ಶಾಸ್ತಿಯೇನು ?....ಇದೋ, ಈ ದೇಹವನ್ನೂ.... ಜೀವವನ್ನೂ ನಿನಗಾಗಿ ಅಂದೇ ಮೀಸಲು ಮಾಡಿರುತ್ತೇನೆ; ಒಪ್ಪಿಕೊಳ್ಳು: ಇಲ್ಲವೇ ನಿನ್ನಿಚ್ಛೆಬಂದಂತೆ ಮಾಡು.....

ಅಲ್ಲಮ:– ಮಹಾದೇವಿ....ನಿನ್ನ ಆತ್ಮಾರ್ಪಣೆ ಸಾರ್ಥಕವಾಗಬೇಕಾದರೆ, ಪರಶಿವನ ಸಾಕಾರವನ್ನು ಅರಿತುಕೊಳ್ಳಬೇಕು...... ನಿನ್ನ ಯೌವನ, ನಿನ್ನ ಸೌಂದರ್ಯ, ನಿನ್ನ ಸರ್ವಸ್ವ,.....ನೀನು...... ಯಾವುದೂ ಪ್ರಯೋಜನವಾಗಲಾರವು. ಬಯಲನ್ನು ನಿನ್ನ ಮೋಹಕ ಬಾಹುಗಳಲ್ಲಿ ಬಂಧಿಸುವ ಸಾಹಸಕ್ಕೆ ತೊಡಗಬೇಡ. ಸಾಗರದ ನೀರನ್ನು ಬರಿದು ಮಾಡುವ ಸಾಹಸವಾದೀತು!....ಆ ಸಾಮರ್ಥ್ಯ.... ಪರಶಿವನಿಗೇ ಸಾಧ್ಯ....ಇನ್ನೂ ಸಕಾಲವಳಿದಿರುವುದಿಲ್ಲ. ಬಂದದಾರಿ ಹಿಡಿದು ಹೋಗು, ಕ್ಷೇಮವಾದೀತು !

(ಅಲ್ಲಮನು ಅಲ್ಲಿಂದ ಹೊರಟುಬಿಡುವನು)

ಮಾಯಾ:–....ಪ್ರಭೂ....ಪ್ರಭೂ....ಇದೋ....ನಾನೂ ನಿನ್ನ ಹಿಂದೆಯೇ ಬರುವೆನು....ಪ್ರಭೂ....ಪ್ರಭೂ.....

ವಿಮಲೆ:– ರಾಜಕುಮಾರೀ........

ಮಾಯಾ:– ವಿಮಲೇ....ಬರುವೆಯಾದರೆ ನನ್ನ ಜೊತೆಯಲ್ಲಿ ಬಾ....ಇಲ್ಲವಾದರೆ ಅರಮನೆಗೆ ಹೋಗು ....ನಾನು ಬರಲಾರೆ....

(ಇಬ್ಬರೂ ತೆರಳುವರು. ರಂಗಭೂಮಿ ಬರಿದಾಗುವುದು.)

ಮಾನವದೇಹದ ಎತ್ತರ—ಆಸನಗಳು

ಶ್ರೀ. ಎಲ್. ವ್ಹಿ. ಜೋಶಿ. ಬಿ. ಎ. ಬಿ. ಇಡಿ. ರಾ.ಭಾ. ವಿಶಾರದ, ಕೂಡ್ಲಿಗಿ.

ಎತ್ತರವಾದ ನಿಲುವಿಕೆಯನ್ನು ಅಪೇಕ್ಷಿಸುವವರು ಬಹುಜನರು. ಆದರೆ ನಿಸರ್ಗವು ಎಲ್ಲರಿಗೂ ಈ ಅನುಕೂಲತೆಯನ್ನು ಸಹಜವಾಗಿ ಒದವಿಸುವುದಿಲ್ಲ. ಯೋಗಾಸನಗಳು ಈ ನೈಸರ್ಗಿಕ ಕುಳ್ಳನ್ನು ಕಳೆದು ದೀರ್ಘದೇಹಿಯನ್ನಾಗಿ ಮಾಡುವ ಶಕ್ತಿ-ಸತ್ತ್ವಗಳಿಂದ ಕೂಡಿಗುವುವು.

◆

ಎಲ್ಲ ಮಾತಿನಲ್ಲಿಯೂ ಸ್ಪರ್ಧಿಸಬೇಕಾಗಿರುವ ಸಮಾಜದಲ್ಲಿ, ಸರ್ವಶ್ರೇಷ್ಠನೇ ಆರಿಸಲ್ಪಡುವನು. ವ್ಯಕ್ತಿಯು ಸ್ಪರ್ಧಿಸುವಾಗ, ಅವನ ನಿಲುವಿಕೆಯೂ, ಉನ್ನತವಾದ ಸೌಷ್ಠವಯುತ ಶರೀರವೂ ಅವನಿಗೆ ಸಹಾಯಕವಾಗಿ, ಸ್ಪರ್ಧೆಯಲ್ಲಿ ಜಯವನ್ನೊದಗಿಸಿ ಕೊಡುವುವು. ಸಾಮಾಜಿಕರು ನೋಡಿದರೆ ನಯನಮನೋಹಾರಿಯಾದ ಅನುಕರಣೀಯವಾದ ಅಂಗಾಂಗಸೌಷ್ಠವವನ್ನುಳ್ಳ ವ್ಯಕ್ತಿಯನ್ನು ಪ್ರಶಂಸಾಪೂರ್ಣ ಗೌರವಯುಕ್ತ ತೃಪ್ತನಯನಗಳಿಂದ ನೋಡುವರು. ಜೀವನದ ಅನೇಕಾನೇಕ ಪಥಗಳಲ್ಲಿ ಧೃಥಗಾಮಿಯಾಗಿ ಗುರಿಯನ್ನು ಮುಟ್ಟಲು, ವ್ಯಕ್ತಿಗೆ ಅವನ ಉತ್ತುಂಗ ಶರೀರರಚನಾವಿಶೇಷವೂ ಒಂದು ಮುಖ್ಯಾಂಶವೆ.

ಈ ದೃಷ್ಟಿಯಿಂದ ಆಧುನಿಕಪ್ರಪಂಚವು ವಿವಿಧ ಯಾಂತ್ರಿಕ ಸಾಧನೆಗಳನ್ನು ನಿರ್ಮಿಸಿಕೊಂಡು, ಸಮಾಜದ ವೈಯಕ್ತಿಕ ಸರಾಸರಿ ಔನ್ನತ್ಯವನ್ನು ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿದೆ. ಆದರೆ ಇವು ಸಾಮಾನ್ಯರಿಗೆ, ಬಡಬಗ್ಗರಿಗೆ ನಿಲುಕದ ವಿಧಾನಗಳು ಮತ್ತು ಸಾಧನೆಗಳು.

ನಮ್ಮ ಪೂರ್ವಜರಾದ ಋಷಿ-ಮುನಿಗಳು, ತಮ್ಮ ವೈಶಿಷ್ಟ್ಯಪೂರ್ಣ ಯೋಗಪದ್ಧತಿಯಲ್ಲಿ, ಮನುಷ್ಯನ ದೇಹದ ಎತ್ತರವನ್ನು ವೃದ್ಧಿಸಲು ಅನೇಕ ಅಭ್ಯಾಸಗಳನ್ನು ಕಂಡು ಹೇಳಿರುವರು.

ಆಧುನಿಕ ವಿದ್ಯಾವಿಧಾನದಲ್ಲಿ ಪಳಗಿದ ಕೆಲವರ ಮತದಂತೆ, ಮನುಷ್ಯನ ದೇಹದ ಎತ್ತರವನ್ನು ಹೆಚ್ಚಿಸಲಾಗುವುದಿಲ್ಲ ಆದರೆ ಮನುಷ್ಯದೇಹದ ವಿವಿಧಮಂಡಲಗಳು, ಅವುಗಳ ಕಾರ್ಯಕಲಾಪಗಳು, ಅದರಲ್ಲಿಯೂ ದೇಹದ ಎತ್ತರವನ್ನು ಹೆಚ್ಚಿಸಲು ಅನುಕೂಲವಾದ ಪದ್ಧತಿಯಾವುದೆಂಬುದು, ಅದರ ತತ್ತ್ವವೇನೆಂಬುದು ಇವುಗಳ ವಿಚಾರ ಮಾಡಿದಲ್ಲಿ, ನಮಗೆ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ: ನಿರ್ವಿವಾದವಾಗಿ ಮನುಷ್ಯನ ಎತ್ತರವನ್ನು ಆತನ ೩೦ ನೆಯ ವರುಷ ವಯಸ್ಸಿನ ವರೆಗೂ ಹೆಚ್ಚಿಸಲು ಅವಕಾಶವಿದೆ-ಎಂದು.

ಒರ್ವ ಸುಪ್ರಸಿದ್ಧ ವ್ಯಾಯಾಮ ಅಧ್ಯಾಪಕರು ಎನ್ನುತ್ತಿದ್ದರಂತೆ: "ಮನುಷ್ಯನ ದೇಹದ ಎತ್ತರವನ್ನು ಹೆಚ್ಚಿಸಲು ಸಾಧ್ಯವಾಗಿದ್ದರೆ, ನೀನು ನನ್ನನ್ನು ಕುಳ್ಳನನ್ನಾಗಿ ನೋಡುತ್ತಿರಲಿಲ್ಲ," ಎಂದು. ಅವರು ವ್ಯಾಯಾಮವಿದ್ಯಾವಿಶಾರದರು ನಿಜ; ಆದರೆ ಅವರ ಅಭಿಪ್ರಾಯದೊಡನೆ ಸಹಮತನಾಗಲು ನಾನು ಒಪ್ಪಲಾರೆನೆಂದರೆ, ಆ ಮಹಾವ್ಯಕ್ತಿಯನ್ನು ನಾನು ಧಿಕ್ಕರಿಸಿ ಮಾತನಾಡಿದೆ ಎಂದು ಓದುಗರು ತಿಳಿಯಬಾರದು.

ಎತ್ತರದ ಪ್ರಶ್ನೆ ಎಂದರೆ ಅದು ಅಸ್ಥಿಗಳ ಮತ್ತು ಪೃಷ್ಠಾಸ್ಥಿಗಳ ಪ್ರಶ್ನೆಯಾಗಿದೆ. ಆದುದರಿಂದ ಅವುಗಳ ಬಗ್ಗೆ ಸೂಕ್ತವಾದ ಕೆಲವು ಅಂಶಗಳನ್ನಿಲ್ಲಿ ತಿಳಿಸಲಾಗುತ್ತದೆ.

ಅಸ್ಥಿಗಳೂ ಉಳಿದೆಲ್ಲಾ ಅಂಗಾಂಶಗಳಂತೆ, ತಮ್ಮ ಮೂಲಕ ಹಾಯ್ದು ಹೋಗುತ್ತಿರುವ ನರಗಳಿಂದಲೂ ರಕ್ತನಾಳಗಳಿಂದಲೂ ಕೂಡಿರುವ ಜೀವಕಣಗಳಿಂದುಂಟಾಗಿವೆ. ಬೆಳವಣಿಗೆಯ ಸಾಮಾನ್ಯ ಶಕ್ತಿಗಳಿಂದಲೂ. ಬಾಹ್ಯ ಪರಿಣಾಮಗಳಿಂದಲೂ, ಪರಿವರ್ತಿತವಾಗುತ್ತ, ಅನೇಕ ರೋಗಗಳಿಗೂ ಒಳಪಡುತ್ತವೆ. ಇವು ಸಂಪೂರ್ಣಸಾಂದ್ರ ಸಂಕೀರ್ಣತಂತುಗಳ ಆವರಣದಿಂದ ಆಚ್ಛಾದಿತವಾಗಿರುತ್ತವೆ. ಈ ಆವರಣಕ್ಕೆ ಹೇರಳವಾಗಿ ರಕ್ತದ ವಿನಿಮಯವಾಗಿ, ಎಲುಬುಗಳ ಅಭಿವೃದ್ಧಿಯಲ್ಲಿ ಮುಖ್ಯವಾದ ಭಾಗವನ್ನು ಇದು ವಹಿಸುತ್ತದೆ. ಇದನ್ನು 'ಪೇರಿಯಾಸ್ಟಿಯಮ್' ಎಂದು ಕರೆಯುತ್ತಾರೆ. ಇದರಂತಹುದೇ ಆದ 'ಎಂಡೋಸ್ಟಿಯಮ್'ಎಂಬ ಒಂದು ಪೊರೆಯು, ಎಲುಬುಗಳ ಟೊಳ್ಳಾದ ಒಳಭಾಗವನ್ನು ಆವರಿಸಿರುತ್ತದೆ. ಈ ಆವರಣವೂ ರಕ್ತನಾಳಗಳಿಂದ ಪರಿಪೂರಿತವಾಗಿರುತ್ತದೆ.

ಮನುಷ್ಯನ ಎತ್ತರಕ್ಕೆ ಅವನ ಕಾಲುಗಳ ಮತ್ತು ಬೆನ್ನೆಲುಬಿನ ಅಸ್ಥಿಗಳೂ ಮುಖ್ಯವಾಗಿ ಕಾರಣಗಳಾಗಿವೆ. ಮಾನವನ ಶರೀರೋನ್ನತ್ಯಾಭಿವೃದ್ಧಿಯ ಸರಿಯಾದ ಗ್ರಹಿಕೆಯಾಗಬೇಕಾದರೆ, ಕಶೇರುಕಸ್ತಂಭದ ರಚನಾವಿಧಾನವನ್ನು ಸ್ವಲ್ಪ ಲಕ್ಷ್ಯಿಸಬೇಕಾಗುವುದು.

ನೋಡಿ, ಮೂಲತಃ ಇದು ಮೂವತ್ತೆರಡು ಪ್ರತ್ಯೇಕ ಭಾಗಗಳಿಂದ ಕೂಡಿದೆ. ಒಂದೊಂದು ಭಾಗವನ್ನೂ ಕಶೇರುಕಮಣಿಯೆಂದು ಕರೆಯುತ್ತಾರೆ. ವಯಸ್ಕನ ಕಶೇರುಕದಲ್ಲಿ ಇಪ್ಪತ್ತಾರು ಪ್ರತ್ಯೇಕ ಮಣಿಗಳಿರುತ್ತವೆ ಉಳಿದುವು ಸಮ್ಮಿಳಿತವಾಗಿ ಏಕವಾಗಿರುತ್ತವೆ. ಪ್ರತ್ಯೇಕವಾದ ಮಣಿಗಳು ಒಂದರ ಮೇಲೊಂದು ಜೋಡಿಸಲ್ಪಟ್ಟಿರುತ್ತವೆ. ಪ್ರತಿಯೊಂದು ಮಣಿಗೂ, ಅದರ ಕೆಳಗೆ ಅಥವಾ ಮೇಲಿರುವ ಮಣಿಗೂ ನಡುವೆ, ದೃಢವಾದ ಸಮನಶೀಲತೆಯುಳ್ಳ ಮೆತ್ತನೆಯ ಪದಾರ್ಥವಿರುತ್ತದೆ. ಇದಕ್ಕೆ ಮೃದ್ವಸ್ಥಿಯೆನ್ನುವರು. ಇದು ಮಣಿಗಳನ್ನು ಕೂಡಿಸುತ್ತದೆ. ಈ ಕೂಡಿಕೆಯು ಜಾರುವ ಕೀಲುಗಳಲ್ಲಿ ಪರಿಣತವಾಗುತ್ತದೆ. ಮಣಿಗಳು ಚಲಿಸುವಾಗ, ಅವು ಸವೆಯದಂತೆ ನೋಡಿಕೊಳ್ಳುವುದು ಈ ಮೃದ್ವಸ್ಥಿಯ ಕೆಲಸ. ಬಲವಾದ ಅಸ್ಥಿಬಂಧಕಗಳಿಂದಲೂ ಉಂಟಾಗಿರುತ್ತವೆ ಈ ಕೀಲುಗಳು.

ಮನುಷ್ಯನ ಎತ್ತರವು ಅವನ ಅಸ್ಥಿಪಂಜರದ ಉದ್ಧಮಾನ ಬೆಳವಣಿಗೆಯಿಂದಲೇ ಪ್ರಧಾನವಾಗಿ ನಿರ್ಧಾರಿತವಾಗಿದೆ. ಈ ರೀತಿಯ ದೈಹಿಕ ದೈರ್ಘ್ಯಪ್ರವೃದ್ಧಿಯು, ಅಸ್ಥಿಗಳ ಸಮಗ್ರ ಅಭಿವೃದ್ಧಿಯ ಮೇಲೆ ಆಧಾರಪಟ್ಟಿದ್ದರೂ, ಈ ಲೇಖನವು ಅವುಗಳ ದೈರ್ಘ್ಯಪ್ರವೃದ್ಧಿಗೆ ನೇರವಾಗಿ ಸಹಾಯಮಾಡುವ ಯೋಗಾಸನಗಳ ವಿಚಾರವನ್ನೇ ಮಾಡುತ್ತದೆ.

ಸುಪ್ರಸಿದ್ಧ ಶರೀರಶಿಕ್ಷಣಜ್ಞರಾದ ಮೇಯರ್ ಮಹಾಶಯರ ಮತದಂತೆ, ಮಾನವನ ಅಸ್ಥಿಪಂಜರದ ಬೆಳವಣಿಗೆಯ ಮೇಲೆ ಪರಿಣಾಮಕಾರಿಯಾದ ಶಕ್ತಿಗಳು ದ್ವಿವಿಧವಾಗಿವೆ. ಅವುಗಳಲ್ಲಿ ಒಂದು ಎಳೆಯುವ ಬಲ ಮತ್ತೊಂದು ಒತ್ತಡದ ಬಲ.

ಈ ಸೂತ್ರದ ಸಹಜ ಸಮರ್ಪಕತೆಯನ್ನು ಕಶೇರುಕ ಸ್ತಂಭದಲ್ಲಿ ಕಾಣಲಾಗುವುದು. "ಪ್ರಕೃತಿಯ ಸಮಸ್ಯೆಗಳು (Problems of Nature)" ಎಂಬ ಪುಸ್ತಕದಲ್ಲಿ ಜೇಗರ್ ಮಹಾಶಯರು ಸೂಚಿಸಿರುವಂತೆ, ಮಗುವಿನ ಮತ್ತು ಬೆಳೆದ ಮನುಷ್ಯನ ಕಶೇರುಕ ಮಣಿಗಳ ಉದ್ದವು, ಕ್ರಮವಾಗಿ ಕತ್ತಿನ ಎರಡನೆಯ ಮಣಿಯಿಂದ ಮೊದಲ್ಗೊಂಡು ಟೊಂಕದಲ್ಲಿಯ ಐದನೆಯ ಮಣಿಯವರೆಗೆ ಹೆಚ್ಚುತ್ತ ಹೋಗುತ್ತದೆ. ಮನುಷ್ಯನ ದೇಹದ ತೂಕವು ಸರಾಸರಿಯ ಮೇಲೆ ೧" ಗೆ ೩ ಪೌಂಡೆಂದು ಭಾವಿಸಿದರೆ, ಪ್ರತಿಯೊಂದು ಮಣಿಯು ತನ್ನ ಮೇಲಿನ ಮಣಿಗಿಂತಲೂ ಹೆಚ್ಚು, ತನ್ನ ಕೆಳಗಿನ ಮಣಿಗಿಂತಲೂ ಕಡಿಮೆ ಭಾರವನ್ನು ವಹಿಸುವುದು. ಅಸ್ಥಿಗಳ ಈ ಉದ್ದದ ಹೆಚ್ಚುವಿಕೆ, ಸ್ಪಷ್ಟವಾಗಿ ವರ್ಧಿತ ಒತ್ತಡದ ಸ್ಪಂದನದಿಂದಲೇ ಆಗುವುದು. ಬಹುಶಃ ಇದೇ ಸೂತ್ರವೇ ಶಿರಸ್ಸಂಪುಟದ ಹ್ರಸ್ವತೆಯನ್ನೂ, ದೇಹದ ಭಾರವನ್ನೆಲ್ಲ ಹೊರಬೇಕಾದ ಕಾಲುಗಳ ಸುದೀರ್ಘತೆಯನ್ನೂ ವಿಶದೀಕರಿಸುತ್ತದೆ.

ನಮ್ಮ ಪೂರ್ವಜರಾದ ಯೋಗಿಗಳು ಈ ಮೇಯರ್ ಮಹಾಶಯರ ಸೂತ್ರವನ್ನು ನಿರ್ವಚಿಸಲಿಲ್ಲವಾದರೂ, ಅವರು ಆವಿಷ್ಕರಿಸಿರುವ ಅಭ್ಯಾಸಗಳು ಅದೇ ಸೂತ್ರದ ಅನುಗುಣವಾಗಿರುವುದನ್ನು ಕಂಡರೆ, ಅವರಿಗೆ ಈ ಸೂತ್ರದ ವ್ಯಾವಹಾರಿಕ ಜ್ಞಾನವಿತ್ತೆಂದು ಎನಿಸುತ್ತದೆ.

ಈ ಸಂದರ್ಭದಲ್ಲಿ ಹೇಳಬೇಕಾದುವುಗಳಲ್ಲಿ **ಶೀರ್ಷಾಸನವು** ಒಂದು. ಸಾಮಾನ್ಯವಾಗಿ ದೈಹಿಕ ಭಾರವನ್ನೇ ಹೊರದಂತಹ ಶಿರಸ್ಸಂಪುಟವು, ಈ ಆಸನಸ್ಥಿತಿಯಲ್ಲಿ ದೇಹದ ಭಾರವನ್ನೆಲ್ಲ ಹೊರುತ್ತದೆ. ಕಶೇರುಕದ ವಿವಿಧಮಣಿಗಳು ಈ ಆಸನದಲ್ಲಿ ವಿಪರ್ಯಸ್ತವಾಗಿ ಭಾರವನ್ನು ಹೊತ್ತುಕೊಳ್ಳುವುವು. ಹೀಗಾಗಿ ತಲೆಮೇಲಾಗಿನ ಸ್ಥಿತಿಯಲ್ಲಿ ಬಲಹೀನ ಒತ್ತಡದ ಸ್ಪಂದನೆಗೊಳಗಾಗಿರುವ ಮಣಿಗಳು, ಅವುಗಳ ಸ್ಥಾನಗಳಿಗನುಗುಣವಾಗಿ ಹೆಚ್ಚು ಹೆಚ್ಚು ಬಲವತ್ತಾದ ಪ್ರಚೋದನೆಯನ್ನು ಪಡೆಯುವುವು. ಮತ್ತು ಬಲವಾಗಿರುವ ಸ್ಪಂದನೆಗಳಿಗೊಳಗಾಗಿರುವ ಮಣಿಗಳು ಬಲಹೀನ ಸ್ಪಂದನೆಗಳಿಗೊಳಗಾಗುವುವು.

ಇದೇ ಸೂತ್ರಾನುಗತವಾಗಿ ಪರಿಣಾಮ ಮಾಡುವ ಮತ್ತೊಂದು ಆಸನವೆಂದರೆ **ವೃಕ್ಷಾಸನವು**. ಇಡಿ ಮರದ ಭಾರವು ಅದರ ಕಾಂಡದ ಮೇಲೆ ಬೀಳುವಂತೆ, ದೇಹದ ಭಾರವೆಲ್ಲ ಒಂದೇ ಕಾಲಿನ ಮೇಲೆ ಬೀಳುತ್ತದೆ. ಇನ್ನೊಂದು ಕಾಲನ್ನು ತೊಡೆಯನ್ನು ಬಳಸಿಕೊಂಡು ಬರುವಂತೆ ಮಡಿಸಿರುತ್ತದೆ. ದೇಹದ ಅತ್ಯಂತ ಕೆಳಭಾಗಕ್ಕೆ ಹೆಚ್ಚಿಗೆಯ ಒತ್ತಡದ ಸ್ಪಂದನೆಯನ್ನು ಒದಗಿಸುವುದೇ ಇದರ ಸ್ಪಷ್ಟೋದ್ದೇಶ.

ದೇಹಾಂಗದ-ಯಾವುದೇ ಆಗಲಿ-ಅಂಗಾಂಶಗಳ ದ್ವಾರಾ ಮಾತು ಮಾತಿಗೂ ಪ್ರಕಂಪನೆಗಳನ್ನು ಪ್ರವಹಿಸುವಂತೆ ಮಾಡಿದಾಗ, ಪ್ರಚೋದನೆಗಳು ಅತಿ ಉತ್ತಮ ಕಾರ್ಯಕಾರೀ ಪ್ರತಿಕ್ರಿಯೆಯನ್ನು ಉತ್ಪಾದಿಸುವುವೆಂಬುದು;— ಸುಪ್ರಸಿದ್ಧ —ಸರ್ವ ವಿದಿತ— ಶರೀರವ್ಯವಹಾರ ಸೂತ್ರವಾಗಿದೆ. ಕಶೇರುಕದ ಮಣಿಗಳಿಗೆ ಪುನಃಪುನಃ ಊರ್ಧ್ವ ಮತ್ತು ಅಧೋಮುಖ ಒತ್ತಡಗಳ ಪ್ರಚೋದನೆಯನ್ನು ಕೊಟ್ಟು, ಅಸ್ಥಿಗಳ ಅಂಗಾಂಶಗಳನ್ನು ದೀರ್ಘವಾಗಿ ಬೆಳೆಯಲು ಅನುಕೂಲವಾಗುವಂತೆ ಮಾಡುವ ಉತ್ತಮ ಅಭ್ಯಾಸಗಳನ್ನು ಯೋಗಿಗಳು ಕಂಡುಹಿಡಿದಿರುವರು.

ಉಡ್ಡಿಯಾನವು ಇಂತಹ ಅಭ್ಯಾಸದಲ್ಲೊಂದು. ಇದರಲ್ಲಿ ದೀರ್ಘನಿಶ್ವಾಸಾನಂತರ ಉದರದ ಸ್ನಾಯುಗಳು ಪಕ್ಕೆಲುಬುಗಳ ಕೆಳಗೆ ಒಳಕ್ಕೆ ಚೆನ್ನಾಗಿ ಒತ್ತಲ್ಪಡುತ್ತವೆ. ಬೆನ್ನಿನ ಕಡೆ ಲಾಟಿಸ್ಮಸ್ ಡಾರ್ಸಿ ಮತ್ತು ಟ್ರೆಪೀಜಿಯಸ್‌ಗೆ ಊರ್ಧ್ವವಾದ ಎಳೆತ ಪರಿಣಮಿಸಿ, ಇದಕ್ಕೆ ಸಹಾಯಕವಾಗಿ ಉದರದ ಕೇಂದ್ರಸ್ನಾಯುಗಳು ಇನ್ನೂ ಒಳಗೆ ಮೇಲಕ್ಕೆ ಒತ್ತಲ್ಪಟ್ಟು, ಚೆನ್ನಾಗಿ ನತೋದರತೆ ಏರ್ಪಡುತ್ತದೆ. ಈ ಬಾಹ್ಯಸ್ನಾಯುಗಳ ಯತ್ನವು ಉದರ ವಿತಾನವು ವಕ್ಷಸಂಪುಟದ ಪಾರ್ಶ್ವದಿಂದ ಅತಿ ಉನ್ನತವಾದ ಸ್ಥಾನವನ್ನು ವಹಿಸುವಂತೆ ಮಾಡುತ್ತದೆ. ಹೀಗೆ ಕಶೇರುಕವನ್ನು ಅದರ ಸರಿಯಾದ ಸ್ಥಾನದಲ್ಲಿರಿಸುವ ಎಲ್ಲಾ ಬಾಹ್ಯ ಅಂತರಿಕಸ್ನಾಯುಗಳು, ಕಶೇರುಕದ ಅಸ್ಥಿಭಾಗಗಳನ್ನು ಮೇಲಕ್ಕೆ ಸಾವಧಾನವಾಗಿ ಎಳೆಯುತ್ತವೆ. ಈ ಅಸ್ಥಿಭಾಗಗಳು ಈ ಒತ್ತಡದಿಂದ ಪ್ರಚೋದಿತವಾಗುತ್ತವೆ.

ಇದಕ್ಕೆ ವಿರುದ್ಧವಾಗಿ **ನೌಲಿಕ್ರಿಯೆಯು** ಕಶೇರುಕ ಮಣಿಗಳಿಗೆ ಅಧೋಮುಖ ಒತ್ತಡವನ್ನು ಹಾಕಿ ಪ್ರಚೋದಿಸುತ್ತವೆ.

ಸ್ನಾಯುಗಳ ಎಳೆದಾಟ ನೂಕಾಟಗಳು ಒಂದರನಂತರ ಒಂದಾಗಿ ಒದಗುವುದರಿಂದ, ಅಸ್ಥಿಗಳಿಗೆ ಪ್ರಬಲ ಪ್ರಚೋದನೆಯು ದೊರಕಿ, ಅವುಗಳ ದೀರ್ಘ ಮುಖ ಬೆಳವಣಿಗೆಗೆ ಸಹಾಯಕವಾಗುವುದರಿಂದ, ಉಡ್ಡಿಯಾನ–ನೌಲಿಗಳನ್ನು ಪರ್ಯಾಯವಾಗಿ ಆಚರಿಸುವುದರಿಂದ ಅಧಿಕ ಅನುಕೂಲವಿದೆ.

ಮೇಲೆ ಹೇಳಿದುದಕ್ಕಿಂತ ಸುಲಭವಾಗಿ ಮಣಿಗಳಿಗೆ ಶೀಘ್ರವಾಗಿ ಪರಂಪರೆಯಾಗಿ ಎಳೆತ–ತಳ್ಳುವಿಕೆಗಳನ್ನು ಒದಗಿಸುವ ಬೇರೆ ಅಭ್ಯಾಸಗಳೂ ಇವೆ. ಹೀಗೆ ಮಾನವನ ಎತ್ತರವನ್ನು ಹೆಚ್ಚಿಸಲಿಕ್ಕೆ ಒತ್ತಡದ ಪ್ರಚೋದನೆಯಿಂದ ಮುಂಡದ ಬೆಳವಣಿಗೆಯ ದೈರ್ಘ್ಯವ್ಯಾಕೋಚಕ್ಕೆ ಬೇಕಾದ ಶಾಸ್ತ್ರೀಯ ಅಭ್ಯಾಸಗಳನ್ನು ಯೋಗವು ತಿಳಿಸುತ್ತದೆಯೆಂಬುದು ಬಹಳ ಸ್ಪಷ್ಟವಾಗಿದೆ.

ಅಸ್ಥಿಗಳ ಈ ದೈರ್ಘ್ಯವ್ಯಾಕೋಚವನ್ನು ಕರ್ಷಣೆಯ ದ್ವಾರಾ ಪ್ರಚೋದಿಸುವ ಯೌಗಿಕಅಭ್ಯಾಸಗಳೂ ಅಷ್ಟೇ ಕುತೂಹಲಜನಕವಾಗಿವೆ.

ಈ ಕರ್ಷಣೆಯು ಸ್ನಾಯುಸಂಬಂಧವಾದುದು. ಸ್ನಾಯುಗಳು ಅಸ್ಥಿಪಂಜರದ ಎಲುಬುಗಳನ್ನು ಸ್ಥಿತಿಯಲ್ಲಿಡುತ್ತವೆ. ಇವು ಎಲುಬುಗಳ ಮೇಲೆ ಸತತವಾಗಿ ಎಳೆತವನ್ನು ಪ್ರಯೋಗಿಸುತ್ತಿರುತ್ತವೆ. ಎಲುಬುಗಳ ಬೆಳವಣಿಗೆಗೆ ಕಾರಣೀಭೂತಗಳಾದ ಪ್ರಚೋದನೆಗಳಲ್ಲಿ **ಎಳೆತ ಒಂದು.** ಕೈಕಾಲುಗಳ ಎಲುಬುಗಳನ್ನು ಅವುಗಳ ಕೀಲುಗಳಲ್ಲಿ ಬಾಗುವಂತೆ ಸಂಕೋಚಕಸ್ನಾಯುಗಳೂ, ಅವುಗಳ ಕಾರ್ಯಕ್ಕೆ ಪ್ರತಿಕ್ರಿಯೆಯಿಂದ ತಡೆಯುವ ಚಾಚುವ ಸ್ನಾಯುಗಳೂ, ಈ ಎಲುಬುಗಳು ತಮ್ಮ ಮೇಲೆಯೇ ತಾವು ಮುದುಡಿಕೊಳ್ಳದಂತೆ ನೋಡಿಕೊಳ್ಳುತ್ತವೆ. ಮೊಣಕೈ ಕೀಲುಗಳಲ್ಲಿ ದ್ವಿಶೀರ್ಷಪೇಶಿಯು ಸಂಕೋಚಕಪೇಶಿಯಾಗಿಯೂ, ತ್ರಿಶೀರ್ಷಪೇಶಿಯು ಚಾಚುವ ಪೇಶಿಯಾಗಿಯೂ ಕೆಲಸ ಮಾಡುತ್ತವೆ. ಇದರಂತೆಯೇ ಮೊಣಕಾಲು ಕೀಲಿನಲ್ಲಿ ತ್ರಿಶೀರ್ಷಪೇಶಿಯ ಸ್ಥಾನವನ್ನು ಚತುಶ್ಶೀರ್ಷ ಪೇಶಿಯು ವಹಿಸುತ್ತದೆ. ಟೊಂಕ ಮತ್ತು ತೊಡೆಗಳ ನಡುವಿನ ಕೀಲಿನಲ್ಲಿ Psaos ಮತ್ತುIhiaens ಸ್ನಾಯುಗಳು ಸಂಕೋಚ ಪೇಶಿಗಳಾಗಿಯೂ, Glutens Maximus ಮತ್ತು ಇತರ ಸ್ನಾಯುಗಳು ಚಾಚುವ ಸ್ನಾಯುಗಳಾಗಿಯೂ, ವರ್ತಿಸುತ್ತವೆ. Latissimus dorsi ಯು ವಕ್ಷಸಂಪುಟವನ್ನೂ Trapezius ಸ್ನಾಯುವು ಶಿರಸ್ಸನ್ನೂ ಮುಂದಕ್ಕೆ ಬಾಗದಂತೆ ನೋಡಿಕೊಳ್ಳುತ್ತವೆ. ಎಂದರೆ ಇವು ಕಶೇರುಕ ಸ್ತಂಭಕ್ಕೆ ವ್ಯಾಕೋಚಕಗಳಾಗಿಯೂ Rectus Abdominus ಸಂಕೋಚಕವಾಗಿಯೂ ವರ್ತಿಸಿದಂತೆಯಾಯಿತಲ್ಲ. ಹೀಗಾಗಿ ಎಲುಬುಗಳ ಇಕ್ಕಡೆಗಳಲ್ಲಿ ಸ್ನಾಯುವಿನ ಎಳೆತಗಳಿವೆ. ಇವು ಕಾರ್ಷಣ ಪ್ರಚೋದನೆಯ ಮೂಲಕ, ಎಲುಬುಗಳು ಬೆಳೆಯಲಿಕ್ಕೆ ಸಹಾಯಕವಾಗುತ್ತವೆ.

ಈ ಕರ್ಷಣೆಯು ತಕ್ಕ ಪ್ರಮಾಣದಲ್ಲಿ ಪ್ರಯೋಗವಾಗಬೇಕಾದರೆ, ಸ್ನಾಯುಗಳು ಸ್ಥಿತಿಸ್ಥಾಪಕ ಗುಣವುಳ್ಳವುಗಳೂ, ಆರೋಗ್ಯವಂತವಾಗಿಯೂ ಉಳಿಯಬೇಕು. ದೇಹದ ವಿವಿಧ ಸ್ನಾಯುಗಳನ್ನು ಬಗ್ಗಿಸಿ ನಮನವಾಗಿರಿಸುವ ವಿವಿಧ ಆಸನಗಳಿಂದ ಯೋಗವು ಈ ಸ್ನಾಯುಗಳ ಆರೋಗ್ಯವನ್ನು ಭದ್ರಪಡಿಸುತ್ತದೆ ಇಡೀ ದೇಹವು ಸುಲಭವಾಗಿ ನೆಟ್ಟಗೆ ನಿಲ್ಲಬೇಕೆಂಬ ಉದ್ದೇಶದಿಂದ, ಚಾಚುವ ಸ್ನಾಯುಗಳಿಗಿಂತ ಸಂಕೋಚಪೇಶಿಗಳು ಹೆಚ್ಚು ನಮನವಾಗಿರುವಂತೆ ಇಟ್ಟುಕೊಳ್ಳುವುದನ್ನೇ ಯೋಗಪದ್ಧತಿಯು ಸಂಸ್ಕೃತಿಯು ತನ್ನ ಗುರಿಯಾಗಿಟ್ಟುಕೊಂಡಿದೆ ಎಂಬುದು, ವಿವಿಧ ಆಸನಗಳ ಶಾಸ್ತ್ರೋಕ್ತ ನಿರೀಕ್ಷಣೆಯಿಂದ ಸುಸ್ಪಷ್ಟವಾಗುತ್ತದೆ. ಈ ಎಲ್ಲಾ ಹಿಗ್ಗಿಸುವ ಅಭ್ಯಾಸಗಳು, ಎಲುಬುಗಳ ಮೇಲಿನ ಸ್ನಾಯುಗಳ ಕರ್ಷಣವನ್ನು ವೃದ್ಧಿಸುತ್ತವೆ. ಇದರಿಂದ ಎಲುಬುಗಳು ಬೆಳೆಯಲಿಕ್ಕೆ ಪ್ರಚೋದನೆಯನ್ನೂ ಒದಗಿಸುತ್ತವೆ.

'ಪಶ್ಚಿಮತಾನ' ಮತ್ತು **'ಭುಜಂಗ'** ಆಸನಗಳು, ಕೈಗಳನ್ನು ಉಳಿದು ಬಹುಶಃ ದೇಹದ ಉಳಿದೆಲ್ಲ ಮುಖ್ಯವಾದ ಸಂಕೋಚಪೇಶಿಗಳನ್ನು ಜಗ್ಗುತ್ತವೆ. ಇವುಗಳಲ್ಲಿ ವ್ಯಾಕೋಚಕಗಳೂ ಹಿಗ್ಗಿಸಲ್ಪಡುತ್ತವೆ. ಆದರೆ ಈ ಆಸನಗಳನ್ನು ಮಾಡುವಾಗ, ಸಂಕೋಚಪೇಶಿಗಳಿಗೆ ಕೊಡುವ ಗಮನ ಪ್ರಧಾನವಾದುದಾಗಿರುತ್ತದೆ; ವ್ಯಾಕೋಚಕಗಳಿಗೆ ಕೊಡುವ ಗಮನ ಗೌಣವಾದುದು. ಮತ್ತೆ ಕಶೇರುಕವನ್ನು ನಿಯಂತ್ರಿಸುವ ಸ್ನಾಯುಗಳಿಗೆ ಕೊಡುವ ಗಮನವು ಅತ್ಯಂತವಾಗಿ ಇರುತ್ತದೆ. ಭುಜಂಗ-ಹಲಾಸನಗಳು Latissimus dorsi ಮತ್ತು Trapezius ಗಳಿಗೆ ಸೊಗಸಾದ ಅಭ್ಯಾಸಗಳು. ಇವು ಕಶೇರುಕದ ಪ್ರತಿಯೊಂದು ಮಣಿಯನ್ನು ಒಳಮುಖವಾಗಿಯೂ, ಹೊರಮುಖವಾಗಿಯೂ ಹಿಗ್ಗಿಸಿ, ಅವುಗಳ ಅಭಿವೃದ್ಧಿಗೆ ಸಹಾಯ ಮಾಡುತ್ತವೆ.

ಕಶೇರುಕಮಣಿಗಳ ನಡುವೆ ಮೆತ್ತನೆಯ ಎಲುಬುಗಳೆಂಬ ರಚನೆಗಳು, ಅವುಗಳಿಗೆ ಮಿದುವಾಗಿ ಇರುವಂತೆ ಜೋಡಿಸಲ್ಪಟ್ಟಿರುತ್ತವೆ. ಇವು ಎಲುಬುಗಳಿಗಿಂತ ಬಹಳ ಮಿದುವಾಗಿದ್ದು, ಒಂದೇ ಸಮನಾಗಿ ದೇಹಭಾರವನ್ನು ಹೊರುವಂತೆಯಾದರೆ, ಕ್ರಮೇಣ ಇವು ಚಪ್ಪಟೆಯಾಗಿ ಕ್ರಮತಪ್ಪಿ ಹೋಗಿ ತೊಂದರೆ ತಲೆದೋರುವುದು. ಮನುಷ್ಯನು ಸ್ವೀಕರಿಸಿರುವ ಈ ನೆಟ್ಟನೆ ನಿಲ್ಲುವ ಸ್ಥಿತಿಯು ಈ ಮೃದ್ವಸ್ಥಿಗಳಿಗೆ ಬಹಳ ತೊಂದರೆ ಕೊಡುತ್ತದೆ. ಈ ಪ್ರಯಾಸವನ್ನು ಕಡಿಮೆ ಮಾಡಲು ಮನುಷ್ಯನು ಕೆಲವು ಕಾಲ ಮಲಗುವನು. ಆದರೆ ಈ ಮೃದ್ವಸ್ಥಿಗಳ ಸುರಕ್ಷಿತತೆಯ ದೃಷ್ಟಿಯಿಂದ ನೋಡಿದರೆ, ಮನುಷ್ಯನಿಗೆ ನಿದ್ರೆಯಲ್ಲಿ ಸಿಗುವ ವಿಶ್ರಾಂತಿಗಿಂತಲೂ ಹೆಚ್ಚು ಪರಿಣಾಮಕಾರಿಯಾದ ವಿಶ್ರಾಂತಿ ದೊರೆಯಬೇಕು. ಶೀರ್ಷಾಸನವು, ಇವುಗಳ ಮೇಲಿನ ಭಾರವನ್ನು ಬಹಳ ಮಟ್ಟಿಗೆ ಕಡಿಮೆ ಮಾಡುತ್ತ, ಇವುಗಳ ಆರೋಗ್ಯ ಮತ್ತು ಸ್ಥಿತಿಸ್ಥಾಪಕತೆ(ನಮನ)ಗೆ ಸಹಾಯ ಮಾಡುವುದು. ಈ ಮೃದ್ವಸ್ಥಿಗಳ ಬೆಳವಣಿಗೆಯು ಮನುಷ್ಯನ ಎತ್ತರಕ್ಕೆ ಸ್ವಲ್ಪ ಸಂಕಲಿಸುತ್ತದೆ.

ಮಣಿಗಳನ್ನು ಬಂಧಿಸಿರುವ ಅಸ್ಥಿಬಂಧಗಳು. ತಂತುಗಳಿಂದ ಕೂಡಿದ ಅಂಗಾಂಶಗಳು. ಇವುಗಳಲ್ಲಿ ವೇಗವಾಗಿ ಎಡೆಬಿಡದೆ ಕಳಿಸುವ ಕಂಪನಗಳಿಂದ ಇವು ಆರೋಗ್ಯಮಯುವಾಗಿಯೂ, ಸ್ಥಿತಿಸ್ಥಾಪ-

ಕತ್ವವನ್ನು ಹೊಂದಿದುವೂ ಆಗುವುವು. ಉಡ್ಯಾನ-ನೌಲಿಗಳು ಇವುಗಳಿಗೆ ಒಳ್ಳೆಯ ಹದವನ್ನು ಒದಗಿಸಲು ಅತ್ಯನುಕೂಲವಾದುವುಗಳು. ಹಿಗ್ಗಿಸುವ ಅಭ್ಯಾಸಗಳೂ ಇವುಗಳನ್ನು, ಸಂಪೂರ್ಣ ಸ್ಥಿತಿ-ಸ್ಥಾಪಕತ್ವ ಉಳ್ಳವುಗಳೂ ಮತ್ತು ಶಕ್ತಿಯುತವಾದವುಗಳೂ ಆಗುವಂತೆ ಮಾಡುವುವು.

ವೃದ್ಧೀಕರಿಸಿದ ಸ್ನಾಯುಸಂಬಂಧಕ್ರಿಯೆಯು ಅಭ್ಯಾಸಕ್ಕೆ ಒಳಪಡಿಸಿದ ಅಂಗಭಾಗಗಳಿಗೆ ರಕ್ತಸಂಪತ್ತನ್ನು ಒದಗಿಸಿ ಕೊಡುತ್ತದೆ. ಹೀಗಾಗಿ Periosteam ಮತ್ತು Endosteam ಹೇರಳ ರಕ್ತವನ್ನು ಪಡೆದುಆರೋಗ್ಯಕರನಾದ ಎಲುಬುಗಳನ್ನು ನಿರ್ಮಾಣ ಮಾಡುತ್ತವೆ.

ಒಟ್ಟಾರೆ ಹೇಳಬೇಕೆಂದರೆ, ಇಲ್ಲಿ ಕಾಣಿಸಿದ ಅಭ್ಯಾಸಗಳು ಶರೀರ ವ್ಯವಹಾರಿಕ ದೃಷ್ಟಿಯಿಂದ ಸಮರ್ಪಕವಾಗಿದೆ, ಮತ್ತೂ ಎಲ್ಲ ವಿಧದಿಂದಲೂ ವ್ಯಕ್ತಿಯ ಎತ್ತರವನ್ನು ಹೆಚ್ಚಿಸಬಲ್ಲವು.

ಆದರೆ ಇವುಗಳನ್ನು ಅಭ್ಯಸಿಸುವ ಅತ್ಯುತ್ತಮ ಸಮಯವಾವುದೆಂದರೆ, ವ್ಯಕ್ತಿಯು ವಯಸ್ಸಿಗೆ ಬಂದ ಅಚಿರಕಾಲ. ಆಗಲಾದರೆ ಅಸ್ಥಿಸಂವರ್ಧಕ ಚಟುವಟಿಕೆ ಅಸಾಧಾರಣವಾಗಿ ಅಧಿಕವಾಗಿರುತ್ತದೆ. ಮತ್ತು ಆ ಸಮಯದಲ್ಲಿ ಈ ಅಭ್ಯಾಸಗಳಿಂದೊದಗುವ ಹೆಚ್ಚಿನ ಪರಿಮಾಣದ ರಕ್ತದ ಸರಬರಾಯಿಯಿಂದಾಗಿ, ಶರೀರವ್ಯಾವಹಾರಿಕ ಕಾರ್ಯವು ಅತುಲ ಸಮಗ್ರವಾಗಲು ಅವಕಾಶವಿದೆ. ಆದರೂ ಮನುಷ್ಯ ದೇಹದ ಅಸ್ಥಿಪಂಜರವು ತನ್ನ ಐದನೆಯ ದಶಕದಲ್ಲಿ ಪೂರ್ಣ ವಿಕಸನ ಸ್ಥಿತಿಯನ್ನು ಪಡೆಯುವುದರಿಂದ, ಈ ಅಭ್ಯಾಸಗಳು ಕನಿಷ್ಠ-ಪಕ್ಷದಲ್ಲಿ, ೩೦ ನೆಯ ವರುಷದ ವರೆಗೂ ಉಪಯುಕ್ತವಾಗಿರುತ್ತವೆ.

ಈ ಅಭ್ಯಾಸಗಳನ್ನು ನಿರ್ಗತಿಕನೂ ಕೈಕೊಳ್ಳಬಹುದು; ಏಕೆಂದರೆ ಇತರ ಶರೀರಸಂಸ್ಕೃತಿಯ ಪದ್ಧತಿಗಳು ಶಿಫಾರಸು ಮಾಡುವ-ಹೆಚ್ಚು ಬೆಲೆಯ-ಸಲಕರಣೆಗಳು ಬೇಕಾಗಿಲ್ಲ ಈ ಅಭ್ಯಾಸಗಳಲ್ಲಿ.

ಇಲ್ಲಿ ಈ ಅಭ್ಯಾಸಗಳ ಬಗ್ಗೆ ಶರೀರ ವ್ಯಾವಹಾರಿಕ ಸೂತ್ರಗಳ ಅನ್ವಯವನ್ನು ಮಾತ್ರ ಸೂಚಿಸಿದೆಯಷ್ಟೆ. ಈ ಅಭ್ಯಾಸಗಳಿಂದಾಗುವ ನರಮಂಡಲದ ಮೇಲಿನ ಅದ್ಭುತ ಪರಿಣಾಮದ ಬಗ್ಗೆ ವಿವರಿಸಲು ಈ ಲೇಖನದ ಮಿತಿಯು ಒಪ್ಪದು. ಆದರೆ ಇಷ್ಟುಮಾತ್ರ ಹೇಳಬಯಸುವೆನು; ನರಮಂಡಲದ ಮೇಲಿನ ಈ ಆಸನಗಳ ಪರಿಣಾಮವು ಯೌಗಿಕಪದ್ಧತಿಯ ವಿಶೇಷ ವಿಶಿಷ್ಟ ಲಕ್ಷಣವನ್ನು ಎತ್ತಿತೋರಿಸುತ್ತದೆ.

ಹೀಗಾಗಿ ಈ ಅಭ್ಯಾಸಗಳು, ದೇಹದ ಅಸ್ಥಿಭಾಗದ ಮೇಲಿನ ಸ್ನಾಯುಗಳ ಎಳೆತಗಳನ್ನು ಮತ್ತೂ ತಳ್ಳುವಿಕೆಗಳನ್ನು, ಸ್ನಾಯು ಸಂಬಂಧ ಕರ್ಷಣೆಗಳಿಂದುಂಟಾಗುವ ಪ್ರಚೋದನೆಯನ್ನೊದಗಿಸಿಯೂ, ಅದರಿಂದಾಗಿ ಜೀವಶಕ್ತಿಗೆ ಕಾರಣವಾದ ರಕ್ತದ ಹೇರಳವಾದ ಪ್ರಸಾರದಿಂದಲೂ, ದೇಹದ ಎಲ್ಲಾ ಮಂಡಲಗಳಿಗೂ, ಜೀವನದ ಉಗಮವಾಗಿರುವ ನರಮಂಡಲವನ್ನು ಹದಗೊಳಿಸಿಯೂ, ಶಂಕಾರಹಿತವಾಗಿ ಮಾನವದೇಹದ ಎತ್ತರವನ್ನು ವೃದ್ಧಿಸುವುವು.

ಒಂದು ರೂಪಕ ಕಥೆ

ಕಾಲಚಕ್ರ

ಶ್ರೀ ಮನೋಹರ ಕೊರಟೂರ.

ಅದೊಂದು ಸುಂದರವಾದ ನಗರ. ಆ ನಗರದ ಮಧ್ಯದಲ್ಲಿ ಭವ್ಯವಾದ, ರಮಣೀಯವಾದ ಉದ್ಯಾನ-ವನಗಳಿಂದ ಕಂಗೊಳಿಸುವ ಇಂದ್ರನರಮನೆಯಂತಹ ಭವ್ಯವಾದ ರಾಜಮಂದಿರದ ಶೋಭೆ ಕಾಣುತ್ತದೆ. ಆ ರಾಜಮಂದಿರದಲ್ಲಿ ಸಾಮಂತ- ಅರಸನೇಕರಿಂದ ಶೋಭಿಸುವ, ಪರ ಅರಸರ ಸಿಂಹಾಸನ ಸೂರೆಗೈದ ಮಹಾ ಅರಸನು ತನ್ನ ಸಮಸ್ತ ಸುಂದರಿಯರಾದ ರಾಣಿಯರೊಂದಿಗೆ, ಮಕ್ಕಳೊಂದಿಗೆ ಪರಿವಾರದೊಂದಿಗೆ ವಾಸಿಸುತ್ತಾನೆ. ಅದರ ನೆರೆಯಲ್ಲಿಯೇ ರಾಜ-ಸಭಾಗೃಹ. ರಾಜಸಿಂಹಾಸನದಲ್ಲಿ ಮುಕ್ಕಳು. ಆತನ ಎಡ-ಬಲ ಬದಿಗಳಲ್ಲಿ ಹತ್ತಿರದಲ್ಲಿಯೇ ದಾಸಾನುದಾಸರ ಗುಣಗಾನ-ಚವರಿ ಬೀಸುವದು. ಮಂತ್ರಿಗಳ ಪರಿವಾರ ಎದುರಿನ ಆಸನಗಳಲ್ಲಿ ಕುಳಿತಿರುವರು. 'ಎಂಥಹ ಸುಖೀ ಅರಸ'ನೆಂದು ಪ್ರಜೆಗಳೆಲ್ಲ ಹರಸುವರು. ಹೀಗೆ ಆ ನಗರ ಮಹಾನಗರ —ಸಂಕ್ಷಿಪ್ತ ರಾಜ್ಯದ ಚಿತ್ರವೇ ಆಗಿತ್ತು.

ಆದರೆ ಅಬ್ಬಾ ! ಎಂತಹ ಬದಲಾವಣೆ !! ಕನಸು-ಮನಸಿನಲ್ಲಿಯೂ ಕಲ್ಪಿಸದ ಬದಲಾವಣೆ !!!

ಸಾವಿರಾರು ಸಲ ಪೆಟ್ಟುತಿಂದ ಸಾಮಂತರೆಲ್ಲ ಸೇರಿದರು. ಒಮ್ಮಿಂದೊಮ್ಮೆ ಮುಗಿಬಿದ್ದರು- ಯುದ್ಧ ನಡೆಯಿತು. ಹೆಣಗಳ ಬಣವೆ ಬಿದ್ದಿತು. ರಾಜ, ರಾಜಪರಿವಾರ ಎಲ್ಲ ಹತವಾಯಿತು. ಇಷ್ಟಾಗಿ ಲಕ್ಷಾನುಗಟ್ಟಲೇ ಸೈನಿಕರು ಪುರ-ಪ್ರವೇಶ ಮಾಡಿದರು. ಮೇಲಧಿಕಾರಿಗಳಿಂದ ಬೇಕಾದುದನ್ನು ಮಾಡಲು ಅನುಮತಿ ದೊರೆಯಿತು. ಮನೆ-ಮನೆಗಳಲ್ಲಿಯ ಹುಡುಗರು, ಮುದುಕರು, ಹೆಣ್ಣು-ಮಕ್ಕಳು ಅವರ ಕತ್ತಿಗೆ ಕುತ್ತಿಗೆ ಕೊಟ್ಟರು. ಊರೆಲ್ಲ ರಕ್ತದಿಂದ ಸ್ನಾನಮಾಡಿತು. ಓಕುಳಿಯಾಡಿತು. ಊರಿಗೆಲ್ಲ ಜ್ವಾಲೆ ಹೊತ್ತಿಕೊಂಡಿತು. ಸತ್ತುಹೋದ ಜನರಿಗೆ ಗತಿಯನ್ನು, ಸಾಯಲಾಗದ ಕಟ್ಟಡಗಳಿಗೆ,-ಉದ್ಯಾನಗಳಿಗೆ ಅಪ್ಪಣೆಯನ್ನು ಕೊಟ್ಟಿತು. ಊರೆಲ್ಲ ಉರಿದು ಬೂದಿಯಾಗಿ ಬಿದ್ದಿತು.

ಆ ಸುಂದರ ನಗರ, ರಾಜ-ಪ್ರಜೆಗಳ್ಯಾರೂ ಉಳಿದಿಲ್ಲ. ಆ ಸುಂದರವಾದ ನಗರ ಮೌನಗೀತದ ಮೆಲುಕು ಹಾಕುತ್ತ ನಿಂತಿರುವ ಮಸಣ. ಅಂದಿನ ಉದ್ಯಾನಗಳೆಲ್ಲ ಉರುಳಿವೆ. ಕಟ್ಟಡ ಕುಸಿದಿವೆ. ಅರಮನೆ ಉರಿದು ಹೋಗಿದೆ. ಮಾನವಪ್ರಾಣಿಯ ಸುಳಿವಿಲ್ಲ.

ಅದೊಂದು ಕಥೆ ಮಾತ್ರ ಆಗಿ ಉಳಿದಿದೆ.

ಕಾಲಾಯ ತಸ್ಮೈ ನಮಃ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, ಆ ಸಂಚಿಕೆಯ ಬಹುಮಾನ ಪಡೆದ ಮೂರು ಕತೆಗಳನ್ನು ವಿಮರ್ಶಿಸಿ, ಒಟ್ಟು ೧೪ ಜನರಿಂದ ಲೇಖನಗಳು ಬಂದಿವೆ. ಇವರಲ್ಲಿ ೮ ಜನರು 'ಕನಸಿನ ಕನ್ನಡಿ' ಕತೆಯನ್ನು ವಿಮರ್ಶಿಸಿದ್ದಾರೆ. ಇಬ್ಬರು ಮಾತ್ರ 'ಆನಂದು' ಕತೆಯನ್ನು ವಿಮರ್ಶಿಸಿದ್ದಾರೆ. 'ವಿಮೋಚನೆ' ಕತೆಯನ್ನು ಕುರಿತು ೪ ಜನರು ವಿಮರ್ಶೆ ಬರೆದಿದ್ದಾರೆ. ವಿಮರ್ಶಕರ ವಿವರ ಹೀಗಿದೆ:

೧ 'ಕನಸಿನ ಕನ್ನಡಿ'ಯನ್ನು ವಿಮರ್ಶಿಸಿದವರು :

೧ ಶ್ರೀ. ಎ. ಎಸ್. ಜನಾರ್ದನ, ಮೈಸೂರು. ೨ ವಿದ್ವಾನ್ ಯಂ. ಕೇಶವಭಟ್ಟ, ಕಾಸರಗೋಡು. ೩ ಶ್ರೀ. ಹಾ. ಕಸ್ತೂರಿ, ಸುರಪುರ. ೪ ಶ್ರೀ. ಜಿ. ಪ್ರಹ್ಲಾದಶೆಟ್ಟಿ, ಉನ್ನತ ಪ್ರಾಥಶಾಲೆ, ಕೂಡ್ಲಿಗಿ. ೫ ಶ್ರೀ. ಕುಸುಗಲ್ಲ ರಾಮಚಂದ್ರ ಬಿ. ಎ. (ಆನರ್ಸ್), ವಿಜಾಪುರ. ೬ ಶ್ರೀ. ಎಸ್. ಬಿ. ಇನಾಮದಾರ ಗುರುಜಿ, ಹಳ್ಳೂರ (ವಿಜಾಪುರ). ೭ ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರ' ಕಾಸರಗೋಡು. ೮ ಶ್ರೀ. ಲಕ್ಷ್ಮಣ ಜೋಶಿ ಬಿ ಎ., ಬಿ. ಇಡಿ. ಕೂಡ್ಲಿಗಿ.

೨ 'ಆನಂದು' ಕತೆಯನ್ನು ವಿಮರ್ಶಿಸಿದವರು :

೧ ಶ್ರೀ. ರಮಾನಂದ ಕೆ. ಎಸ್., ಫಸ್ಟ್‌ಗ್ರೇಡ್ ಕಾಲೇಜ್, ಮೈಸೂರು. ೨ ಶ್ರೀ. "ಸೀರಾ" ಮಲ್ಲೇಶ್ವರಂ.

೩ 'ವಿಮೋಚನೆ' ಕತೆಯನ್ನು ವಿಮರ್ಶಿಸಿದವರು :

೧ ಶ್ರೀ. ಪ ವಿ. ಪಟ್ಟಣಶೆಟ್ಟರ, ಹತ್ತೀಮತ್ತೂರು. ೨ ಶ್ರೀ. ಎಂ. ಎಸ್. ಆಚಾರ್ಯ, ಕ.ಲಾಯಿ-ಸುರತಕಲ್ಲು. ೩ ಶ್ರೀ. ಎಂ. ಎಸ್. ಜೋಶಿ, ಶಿಕ್ಷಕರು ಉಮಾವಿದ್ಯಾಲಯ ಹೈಸ್ಕೂಲು, ಲಕ್ಷ್ಮೇಶ್ವರ. ೪ ಶ್ರೀ. ಕೆ. ಗುರುರಾವ ಬಿ. ಎ. ಹೈದರಾಬಾದ್.

ಬಂದಿರುವ ವಿಮರ್ಶೆಗಳನ್ನೆಲ್ಲ ನಮ್ಮ ಸಂಪಾದಕಮಂಡಲಿಯು ಪರೀಕ್ಷಿಸಿ ನಿರ್ಣಯವನ್ನು ಕೊಟ್ಟಿದೆ. 'ಕನಸಿನ ಕನ್ನಡಿ'ಯನ್ನು ಕುರಿತು ಬರೆದ ೧ ಶ್ರೀ. ಹಾ. ಕಸ್ತೂರಿ, ೨ ಶ್ರೀ. ಕೆ. ಎಸ್. ಶರ್ಮಾ, ೩ ವಿದ್ವಾನ್ ಯಂ. ಕೇಶವಭಟ್ಟ, ೪ ಶ್ರೀ ಲಕ್ಷ್ಮಣ ಜೋಶಿ ಬಿ. ಎ., ಬಿ ಇಡಿ. ಈ ನಾಲ್ವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಒಬ್ಬೊಬ್ಬರ ವಿಮರ್ಶೆಯಲ್ಲಿ ಒಂದೊಂದು ಬಗೆಯ ವಿಶಿಷ್ಟ ಗುಣ-ರೀತಿಗಳನ್ನು ಕಾಣಬಹುದು. ಎಲ್ಲವನ್ನೂ ಒಂದೇ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕೆ ಸಾಧ್ಯವಿಲ್ಲದುದು ವಿಷಾದದ ಸಂಗತಿಯಾಗಿದೆ.

ಈ 'ವಿಮರ್ಶೆಯ ಶಿಕ್ಷಣರಂಗ'ದಿಂದ ನಮಗೆ ದೊರೆತ ಅನುಭವವೆಂದರೆ: ಬಹುಮುಖವಾದ ಸಾಹಿತ್ಯವು ಹೊರಡುತ್ತಿರುವ ಈ ಕಾಲದಲ್ಲಿ, ಪ್ರಕಟಿತ ಕೃತಿಗಳ ವಿಮರ್ಶೆಯು ಒಬ್ಬಿಬ್ಬರಿಂದಲೇ ನಡೆಯದೆ, ಸಾಮೂಹಿಕ ರೀತಿಯಿಂದ ನಡೆಯುವುದು ಒಳ್ಳೆಯದು. ಒಬ್ಬೊಬ್ಬ ವಿಮರ್ಶಕ, ಒಂದೊಂದು ವಿಶಿಷ್ಟ ದೃಷ್ಟಿಕೋನದಿಂದ ನೋಡಿ ಗುಣ-ದೋಷಗಳನ್ನು ಚರ್ಚಿಸಿ ಹೇಳುತ್ತಾನೆ. ಒಂದೊಂದು ಕೃತಿಯನ್ನು ಕುರಿತ ಹತ್ತಾರು ವಿಮರ್ಶಕರ ವಿಮರ್ಶೆಗಳು ಒಂದೆ ಕಾಲದಲ್ಲಿ ಒಂದೆ ಎಡೆಯಲ್ಲಿ ಪ್ರಕಟವಾದರೆ, ವಾಚಕವರ್ಗಕ್ಕೂ ಕೃತಿಕಾರನಿಗೂ ಕೃತಿಯ ಯೋಗ್ಯತೆಯನ್ನು ತಿಳಿದುಕೊಳ್ಳಲು ಅನುಕೂಲವಾಗುವುದು. ಆದುದರಿಂದ, ಕೇವಲ ವಿಮರ್ಶೆಗಾಗಿಯೆ ಒಂದು ಪತ್ರಿಕೆಯು ಕನ್ನಡದಲ್ಲಿ ಹೊರಡುವ ಕಾಲವೀಗ ಬಂದಿದೆ. ಆದರೆ, ವಿವಿಧ ವಿಷಯಕ ಪತ್ರಿಕೆಗಳನ್ನೇ ಕೊಂಡು ಓದುವವರ ಅಭಾವವಿರುವ ನಮ್ಮ ನಾಡಿನಲ್ಲಿ, ಸಾಹಿತ್ಯವಿಮರ್ಶೆಯಂತಹ ಗಂಭೀರ ವಿಷಯದಿಂದಲೆ ಕೂಡಿದ ಪತ್ರಿಕೆಯನ್ನು ಕೊಂಡು ಓದುವವರಾರು? ಅಂತಹ ಪತ್ರಿಕೆ ಹೊರಟು 'ಸಾ. ವಿ. ಶಿಕ್ಷಣರಂಗ'ದ ಕಾರ್ಯವನ್ನು ಕೈಕೊಂಡರೆ, ವಿಮರ್ಶಕರಿಂದ ಬಂದ ಒಳ್ಳೆಯ ವಿಮರ್ಶೆಗಳನ್ನೆಲ್ಲ ಒಂದೆ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕಾದೀತು.

'ವಿಮೋಚನೆ' ಕತೆಯನ್ನು ಕುರಿತು ಬರೆದುಬಂದ ಶ್ರೀ. ಎಂ. ಎಸ್. ಜೋಶಿಯವರ ವಿಮರ್ಶೆಯೂ ಉತ್ತಮವಾಗಿದೆ. ಅಲ್ಲದೆ ಶ್ರೀ. ಎಂ. ಎಸ್. ಆಚಾರ್ಯ, ಶ್ರೀ. 'ಸೀರಾ' ಶ್ರೀ. ಆರ್. ಎ. ಕುಸುಗಲ್ ಬಿ. ಎ. ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕವೆಲ್ಲ ಸಾಮಾನ್ಯ ವಿಮರ್ಶೆಗಳು.

ಮುಂದಿನ ಸಂಚಿಕೆಯ ಮೇಲ್ನೋಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'ಸಮನ್ವಯ'** ಎಂಬ ಕತೆಯನ್ನಾಗಲಿ **'ಮಾಯಾಪರಾಜಯ'** ಎಂಬ ರೂಪಕವನ್ನಾಗಲಿ ವಿಮರ್ಶಿಸಿ ಕಳುಹಬೇಕು. ವಿಮರ್ಶೆಗಳು ಕೃತಿಯ ಗುಣದೋಷಗಳ ನಿಜವಾದ ವಿಮರ್ಶೆಯಾಗಿರಬೇಕೆಂದೇ ನಮ್ಮ ಅಪೇಕ್ಷೆಯಿದೆ. ಅವಾಸ್ತವವಾದ ಹೊಗಳಿಕೆಯೂ ವಿಮರ್ಶೆಯೆನಿಸದು; ಅತಾರ್ಕಿಕವಾದ ತೆಗಳಿಕೆಯೂ ವಿಮರ್ಶೆಯೆನಿಸದು.

ಸಂಪಾದಕ

ನಾ ಮೆಚ್ಚಿದ ಸಣ್ಣ ಕತೆ

ಕನಸಿನ ಕನ್ನಡಿ"ಯ ವಿಮರ್ಶೆ

ಶ್ರೀ ಹಾ. ಕಸ್ತೂರಿ, ಸುರಪುರ

ಲಲಿತಾ ಸುಸಂಸ್ಕೃತಳಾದರೂ ಸುಂದರಿಯಲ್ಲದ್ದರಿಂದ ಯಾರೂ ಬಯಸದ ಹೆಣ್ಣಾಗಿದ್ದಳು. ತುಂಬುತಾರುಣ್ಯದಿಂದ ತುಂಬಿ ತುಳು ಕುತ್ತಿದ್ದರೂ, ನಿರುಪಯೋಗವಾದ ನಿರ್ಗಂಧ ಕುಸುಮದಂತೆ ಇದ್ದಿತು ಅವಳ ದೇಹ. ಅವಳ ತುಂಬಿದ ದಷ್ಟಪುಷ್ಟ ಎದೆ ಅವಳ ಮನಸ್ಸನ್ನು ನೋಯಿಸುತ್ತಿದ್ದಿತು. ತನ್ನ ಪ್ರತಿಬಿಂಬವನ್ನು ಕಂಡಾಗಲೆಲ್ಲಾ ಸಹಿಸ-ಲಸಾಧ್ಯವಾದ ಮನೋವೇದನೆಯಾಗುತ್ತಿತ್ತು. ಯಾವ ಗಂಡೂ ಅವಳನ್ನು ಬಯಸಿ ಮುಂದೆ ಬಂದಿರಲಿಲ್ಲ. ಅವಳಿಗಾಗಿ ಬಂದ ಗಂಡು ಅವಳನ್ನು ಬಯಸದೆ, ಅವಳ ತಂಗಿಯನ್ನು ಕಾಮಿಸಿ ಮದುವೆಯಾಗಿ-ದ್ದನು. ಎಂತಹ ದುರ್ದೈವಿ ಲಲಿತಾ ! ಅಂತಹ ಲಲಿತೆಯರು ನಮ್ಮ ಸಮಾಜದಲ್ಲಿ ಎಷ್ಟಿಲ್ಲ ? ನಿಜ, ಈ ಮಹಾಸಮಸ್ಯೆ ಇಂದು ನಮ್ಮ ಮುಂದಿದೆ. ಲಲಿತೆಯಂತಹ ಹೆಣ್ಣುಗಳ ಸಮಸ್ಯೆಗೆ ಪರಿಹಾರವೇನು ? ಅಂತಹ ಹೆಣ್ಣುಗಳ ಭವಿಷ್ಯವೇನು ? ಗಂಡಿನ ಸಹವಾಸವನ್ನೇ ಬಯ-ಸದೆ ಸಹಜವಾದ ಹೆಣ್ಣುತನವನ್ನೇ ಅದುಮಿ ಬರಡಾದ ಬಾಳನ್ನು ಸಾಗಿಸಬೇಕೇ ? ಮನಬಂದವರನ್ನು ಮನಸ್ಸಿನಿಂದಲೇ ರಮಿಸಿ ಮನೋಭ್ರಷ್ಟರಾಗಬೇಕೇ ? ಮನೋವ್ಯಭಿಚಾರಿಗಳಾಗಬೇಕೇ ? ಅಥವಾ ಗಂಡಸನ್ನು ಸ್ವಾರ್ಥಿಯೆಂದು ದೂರುತ್ತಾ ತೃಪ್ತಿಪಡಬೇಕೇ ? ಇಲ್ಲವೆ ತನ್ನ ದೈವವನ್ನು ತಾನು ಹಳಿಯುತ್ತಾ ಕಾಲದೂಡಬೇಕೇ ? ಇದು ನಿಜವಾಗಿಯೂ ಬಹು ಕಠಿನವಾದ ಸಮಸ್ಯೆ ?

ಮಾನವನು ಯಾವಾಗಲೂ ಸೌಂದರ್ಯಾಪೇಕ್ಷಿ. ಇದು ನಿರ್ವಿ-ವಾದವಾದುದು. ಎಂತಹ ಕುರೂಪಿ ಗಂಡುಸೂ ತನ್ನ ಪತ್ನಿ ಸುರಸುಂದರಿಯಂತಿರಬಯಸುವುದು ಸಹಜ. ಎಂತಹ ಶೂರ್ಪಣಖಿಯೂ ತನ್ನ ಪತಿ ಮನ್ಮಥನಂತಿರಬಯಸುತ್ತಾಳೆ. ಇದು ಸಾಮಾನ್ಯನಿಯಮ. ಆದುದರಿಂದ, ಲಲಿತಳನ್ನು ನೋಡಬಂದ ಗಂಡು ಕಮಲಳನ್ನು ಬಯಸಿ-ದುದು ಸ್ವಭಾವಸಿದ್ಧವಾದುದು. ಲಲಿತಳಾದರೂ ಮಾಡಿದ್ದೇನು ? ಅವಳಾದರೂ 'ತನ್ನ ಮದುವೆ ಆಗದೆ ಇರುವುದಕ್ಕೆ ಸಮಾಜದಲ್ಲಿಯ ಗಂಡುಸರನ್ನು ಬೈದೇನು ಅರ್ಥ ?' ಎಂದು ಸಮಾಧಾನ ಮಾಡಿ-ಕೊಂಡಿದ್ದಾಳೆ. ಅಭಾವ ವೈರಾಗ್ಯ ! ನಿಜವಾಗಿ ಯಾರನ್ನು ಬೈದೂ ಪ್ರಯೋಜನವಿಲ್ಲ. ತನ್ನ ಸೃಷ್ಟಿಯನ್ನು ತಾನು ಹಳಿದುಕೊಳ್ಳಬೇಕು.

ಇಷ್ಟಾದರೂ ಹಳೆಯ ನೆನಪುಗಳು ಬಂದ ಕ್ಷಣ ಲಲಿತಾ ತನ್ನ ಇರುವಿಕೆಯನ್ನೇ ಮರೆಯುವಳು. ಅವಳಿಗೆ ಸರ್ವಸ್ವವೂ ವಿಷಮಯ-ವಾಗಿ ಕಾಣುವುದು. ತನ್ನ ಒಡಹುಟ್ಟಿದ ತಂಗಿಯೇ ತನ್ನ ಸುಖ-ವನ್ನಪಹರಿಸಿದ ರಕ್ಕಸಿಯಾಗಿ ತೋರುವಳು. ತಂಗಿಯ ಗಂಡನ ವಿಷಯ ಮಾತುಗಳನ್ನು ಕೇಳಿದ ತಕ್ಷಣ, ಅವಳಲ್ಲಿಯ ಹೆಣ್ಣುತನ ಸ್ಪಷ್ಟವಾಗುವುದು. ಅವಳ ಅತೃಪ್ತಿ ವ್ಯಕ್ತವಾಗುವುದು. ಅವಳ ಮನಸ್ಸಾಗರದಲ್ಲಿ ಬಿರುಗಾಳಿಯೆದ್ದು ಶಾಂತತೆಯನ್ನು ಕದಡುವುದು. ಅವಳ ಯೋಚನೆಗಳು ಉಲ್ಲೋಲಕಲ್ಲೋಲವಾದ ಮಹಾಸಾಗರದ-ಲ್ಲಿಯ ಚುಕ್ಕಾಣಿಯಿಲ್ಲದ ನಾವೆಯಂತೆ, ಗಾಳಿಬೀಸಿದತ್ತ ಸಾಗುವುದು. ಆಗಿನ ಅವಳ ಮನಃಸ್ಥಿತಿ ವರ್ಣಿಸಲಸಾಧ್ಯ. ಅವಳ ಹೃದಯ ಅಸಹ್ಯ ವೇದನೆಯ ಆಗರ. ಹಿಂದಿನ ಘಟನೆಗಳೆಲ್ಲವೂ ಚಿತ್ರಫಲಕದ ಮೇಲೆ ಸುಳಿದು ಮಾಯವಾಗುವುವು. ತಂಗಿಯ ಲಗ್ನ-ಶೋಭನಪ್ರಸ್ಥ. ತನ್ನವನಾಗಬೇಕಾಗಿದ್ದವನೊಡನೆ ತನ್ನ ತಂಗಿ.... ಜೋಡುಗಾದೆಯ ಮೇಲೆ ... ಸಹಿಸಲಸಾಧ್ಯವೇದನೆ. ಅತೃಪ್ತಿ, ಅಸಮಾಧಾನ ಬೃಹದ್ರೂಪವನ್ನು ತಾಳುವುದು. 'ತನ್ನ ಸ್ಥಳ' ಎಂದು ಚೀರಿ ಬೀಳುವಳು. ತಂಗಿಯ ಸ್ಥಾನದಲ್ಲಿ ತಾನಿರುವಂತೆ ಕಲ್ಪಿಸಿಕೊಳ್ಳುವಳು. ತನ್ನ ಮನ-ಸ್ಸಾಮ್ರಾಜ್ಯದಲ್ಲಿ ತಂಗಿಯ ಗಂಡನೊಡನೆ ಸ್ವೇಚ್ಛೆಯಾಗಿ ರಮಿಸು-ವಳು. ಆ ಕಲ್ಪನೆಯಲ್ಲಿ ತನ್ನನ್ನೇ ಮರೆಯುವಳು. ಆ ಸುಖ ನಿಜವಾಗಿ ಕ್ಷಣಿಕ. ಎಲ್ಲವೂ ಬರಿಯ ಕನಸು. ಅವಳವನಾಗಬಂದಿದ್ದವನು ಎಂದೋ ತಂಗಿಯ ಪಾಲಾಗಿದ್ದನು. ಅವಳ ಕನಸಿನ ಕನ್ನಡಿ ಎಂದೋ ಒಡೆದು ಚೂರಾಗಿದ್ದಿತು. ಆ ಒಡೆದ ಕನ್ನಡಿಯ ಚೂರುಗಳನ್ನು ಸೇರಿಸಿ, ತನ್ನ ಪ್ರತಿಬಿಂಬವನ್ನು ನೋಡಲು ಯತ್ನಿಸುತ್ತಿರುವುದು ಬರಿಯ ಹುಚ್ಚುತನವಾಗಿದ್ದಿತು

ಲಲಿತಾ ಅವನನ್ನು ಮೋಹಿಸಿದ್ದಳು. ಅವನು ಕಮಲಳನ್ನು ಮೋಹಿಸಿ ತನ್ನವಳನ್ನಾಗಿಸಿಕೊಂಡಿದ್ದನು. ಲಲಿತಳನ್ನು ನೋಡಬಂದ ಮಾತ್ರಕ್ಕೆ, ಇವಳು ಅವನನ್ನು ಮೋಹಿಸಿದ ಮಾತ್ರಕ್ಕೆ, ಅವನು ಇವಳವನಾಗಲಿಲ್ಲ. ಕಂಡ ಸುಂದರವಸ್ತುವೆಲ್ಲದರ ಮೇಲೂ ನಮ್ಮ ಹಕ್ಕನ್ನು ಸ್ಥಾಪಿಸುವುದು ಸಾಧ್ಯವಲ್ಲ. ಹಾಗೆ ಮಾಡಲು ಪ್ರಯತ್ನ ಮಾಡಿದಷ್ಟೂ ಮನಸ್ಸಿನ ಶಾಂತಿ ಕದಡಿ ಕೊಚ್ಚೆ ಕಾಣುವುದು. ಅಷ್ಟಕ್ಕೆ ಅವಕಾಶ ಕೊಡುವುದೇ ತಪ್ಪು. ಅವಕಾಶ ಕೊಟ್ಟಲ್ಲಿ ಅದು ಸ್ವಯಂಕೃತಾಪರಾಧ. ಅವನು ಈಗ ತಂಗಿಯ ಗಂಡ. ಪರಪುರುಷ. ತಂಗಿಯ ಸುಖ-ದುಃಖಗಳು ಈಗ ಅವನನ್ನವಲಂಬಿಸಿವೆ. ಇಷ್ಟಾದರೂ ಅವಳ ಮನ ಅವನನ್ನು ಬಯಸುವುದು. ತಂಗಿಯ ೫ ತಿಂಗಳ ಮಗು-ವನ್ನೆತ್ತಿಕೊಂಡು—ಆ ಮಗು, ಮುಖವನ್ನು ಲಲಿತಳ ಎದೆಯ ಕಡೆ ತಿರುಗಿಸಿದ ತಕ್ಷಣ— ಮೈ ಪುಳಕಿತವಾಗುವುದು. ಅವಳ ತಾಯ್ತನದ ಹಂಬಲ ಎದ್ದು ನಿಲ್ಲುವುದು. ತನಗೂ ಮದುವೆಯಾಗಿದ್ದರೆ ತಾನೂ ತನ್ನ ಕಂದನಿಗೆ ಮೊಲೆಯುಣ್ಣಿಸಬಹುದಾಗಿತ್ತು. ಅವಳ ದೃಷ್ಟಿ ಅವಳ ಎದೆಯ ಕಡೆ ಹೋಗುವುದು. ನಿರರ್ಥಕವಾಗಿ ನಿಷ್ಪ್ರಯೋಜಕವಾಗಿ ಉಬ್ಬಿ ಬೆಳೆದು ನಿಂತಿರುವ ಎದೆಯನ್ನು ನೋಡಿದ ಕ್ಷಣ, ಅವಳ ಮನಸ್ಸಿನ ಕುದುರೆ ಕಡಿವಾಣ ಕಡಿದು ಹರಿಯುವುದು. ಅವಳ ಆಗಿನ ಮನದ ಉದ್ವೇಗ ಹೆಣ್ಣಿಗೆ ಅರಿವಾಗಬೇಕು. ತಂಗಿಯ ಕೋಣೆಯಲ್ಲಿ, ಮಂಚದ ಮೇಲೆ ಮಲಗಿ, ಎದೆ ಬಿಚ್ಚಿ ಮಗುವನ್ನು ಮಲಗಿಸಿಕೊಂಡು ಮೈಮರೆಯುವಳು. ಆದೇಸಮಯ ಅಸಹ್ಯಯೋಚನೆಗಳೂ ಬರುವುವು. ಹನ್ನೊಂದು ತಿಂಗಳ ನಂತರ ಕಮಲೆಯನ್ನು ಕಾಣಲು ಅವಳ ಗಂಡ ಬರುತ್ತಿದ್ದಾನೆ. ಕಮಲುವಿನ ಕೋಣೆಯಲ್ಲಿ ತಾನು— ಕತ್ತಲೆ.... ತನ್ನ ಅಸಹ್ಯ ಮುಖ ಕಾಣಿಸದು. ಹೌದು ಮೌನದಿಂದಿದ್ದರೆ ತಂಗಿ ಕಿತ್ತು

ಕೊಂಡ ಭಾಗ್ಯವನ್ನು ಅನುಭವಿಸಬಹುದು. ಹೃದಯಕ್ಕೆ ಹೊತ್ತಿದ್ದ ಬೆಂಕಿಯನ್ನು ಆರಿಸಬಹುದು. ಅವಳನ್ನು ಕಂಗಾಲಾಗಿಸಿದ್ದ ಹಸಿವನ್ನು ನೀಗಿಸಿಕೊಳ್ಳಬಹುದು. ಹೆಣ್ತನದ ಬಯಕೆಯನ್ನು ತೀರಿಸಿಕೊಳ್ಳಬಹುದು. ತುಂಬಿದ ಎದೆಯ ಇರುವಿಕೆಯನ್ನು ಸಾರ್ಥಕಗೊಳಿಸಬಹುದು....(ವಿದ್ಯಾವತಿಯಾದ ಲಲಿತೆ ಈ ರೀತಿ ಬಯಸುವುದು ಕೃತ್ರಿಮವಾಗಿ ಕಂಡುಬರುತ್ತದೆ. ಎಂತಹ ಕತ್ತಲೆಯಲ್ಲಾದರೂ, ಅನೇಕ ವರುಷಗಳಿಂದ ಸಂಸಾರ ಮಾಡುತ್ತಿರುವ ಪತ್ನಿಯನ್ನು ಗುರುತಿಸದಿರುವಂತಹ ಗಂಡನಿರುವುದು ಅಪರೂಪವೆಂದು ತೋರುತ್ತದೆ. ಇರಲಿ). ಅಷ್ಟರಲ್ಲೇ ಲಲಿತೆಯ ಮನಸ್ಸಿನಲ್ಲಿ ತುಮುಲಯುದ್ಧ ಪ್ರಾರಂಭವಾಗುತ್ತದೆ. ತಂಗಿಯ ರೂಪ ಕಣ್ಮುಂದೆ ನಿಲ್ಲುವುದು. ವಿವೇಕ ಹಿಂದಿರುಗುವುದು. ಅದು ಅವಳ ಸುಸಂಸ್ಕೃತಿಯ ಲಕ್ಷಣ. ಮಾನವತೆ ಜಾಗ್ರತವಾಗಿದ್ದಿತು. ಆ ಕ್ಷಣದಲ್ಲಿ ತನ್ನ ಅಸಹ್ಯವಾದ ಮುಖಕ್ಕೆ ಅಕೃತ್ಯದ ಮಸಿಯನ್ನು ಬಳಿದುಕೊಳ್ಳುವುದು ಕೂದಲೆಳೆಯಿಂದ ತಪ್ಪಿತು. ಆ ಕ್ಷಣದಲ್ಲಿ ಅವಳು ಮನ್ಮಥನನ್ನು ಜಯಿಸಿದ್ದಳು; ಆದರೆ ಜಯಿಸಿ ಸೋತಿದ್ದಳು. ಕೆಳಸರಿಯುತ್ತಿರುವವರು ಮತ್ತೆ ಮೇಲೇರುವುದಕ್ಕಿಂತ, ಕೆಳಸರಿಯುತ್ತಿರುವುದು ಸುಲಭ. ಮೇಲೇರಬೇಕಾದರೆ ಪ್ರಯತ್ನಬೇಕು; ಅಥವಾ ಇದ್ದೆಡೆ ಇರಬೇಕಾದರೂ ಸ್ವಲ್ಪ ಪ್ರಯತ್ನಬೇಕು. ಕೆಳಗೆ ಹೋಗುವುದಕ್ಕೆ ಯಾವ ಪ್ರಯತ್ನವೂ ಬೇಕಾಗಿಲ್ಲ. ಹೀಗಿತ್ತು ಲಲಿತಳ ಪರಿಸ್ಥಿತಿ. ಅವಳ ಮನಸ್ಸಿನ ಕಡಿವಾಣ ಕಡಿದಿತ್ತು. ಅತೃಪ್ತಸುಖದ ಸೆಳವಿಗೆ ಸಿಕ್ಕಿದ್ದಳವಳು. ಅವಳಲ್ಲಿ ನಾಟಿದ್ದ ಮೊನೆಯಾದ ಮುಳ್ಳುಕಿತ್ತೆಗೆಯಲು ಯತ್ನಿಸಿದಷ್ಟೂ ಆಳವಾಗಿ ಹೋಗುತ್ತಿತ್ತು. ಮತ್ತೆ ತನ್ನನ್ನು ಬಯಸಿ ಬರುವನೆಂದೆಣಿಸಿದಳು; ನಿರೀಕ್ಷಿಸಿದಳು; ನಿರಾಶಳಾದಳು. ತುಂಬುವಿಚಾರಗಳ ಸೆಳವಿನಲ್ಲಿ ದಣಿದಳು.

ಈ ಕಥೆಯಲ್ಲಿ ಲಲಿತಳ ಮನಸ್ಸಿನ ಅಶಾಂತಿಯನ್ನೂ, ಅತೃಪ್ತಿಯನ್ನೂ, ತೀರದ ಬಯಕೆಯನ್ನೂ, ಇಂಗದ ದಾಹವನ್ನೂ ಹೆಣ್ತನದ ಹಸಿವಿನ ವಿಕಟಾಕಾರವನ್ನೂ ಚೆನ್ನಾಗಿ ಚಿತ್ರಿಸಿದ್ದಾರೆ. ಲಲಿತೆ ಅರೂಪಿಯಾದರೂ ಹೆಣ್ಣು. ಹೆಣ್ಣು ಗಂಡನ್ನು ಬಯಸುವುದು ಸಹಜ. ತನ್ನ ಹಣೆಯಲ್ಲಿ ಗಂಡನ್ನೇ ಬರೆಯದಿದ್ದರೆ, ಆ ಹೆಣ್ಣಿನ ದುಃಖ ವರ್ಣಿಸಲು ಅಸಾಧ್ಯ. ಲಲಿತೆ ಹೆಣ್ಣಾಗಿ ಗಂಡನ್ನು ಬಯಸಿದ್ದಳು. ಅವಳ ಹಣೆಯ ಬರೆಹ ಬೇರೆಯಾಗಿದ್ದಿತು. ಅವಳ ಕುರೂಪವೇ ಅವಳ ಸುಖಕ್ಕೆ ಕಂಟಕಪ್ರಾಯವಾಗಿದ್ದಿತು; ಎಂದ ಮಾತ್ರಕ್ಕೆ ಅವಳಲ್ಲಿ ಹೆಣ್ಣುತನ ಮಾಯವಾಗಿರಲಿಲ್ಲ. ತಾಯ್ತನದ ಹಂಬಲ ಮಾಯವಾಗಿರಲಿಲ್ಲ. ಸಮಯದಲ್ಲಿ ಅವು ಬೃಹದ್ರೂಪವನ್ನು ತಾಳುತ್ತಿದ್ದುವು. ವಿವೇಕ ತಂದುಕೊಳ್ಳಲು ಯತ್ನಿಸಿದಷ್ಟೂ ವಿವೇಕ ಹಿಂದೆ ಸರಿಯುತ್ತಿದ್ದಿತು. ಅವ್ಯಕ್ತವಾದ, ಅಸಹ್ಯವಾದ ಮನೋವೇದನೆಯನ್ನು ಅನುಭವಿಸುತ್ತಿದ್ದಳು. ಅವಳ ಆ ಮನಃಸ್ಥಿತಿಯಲ್ಲಿ ಏನು ಮಾಡಿದ್ದರೂ ಅವಳಿಗೆ ನಮ್ಮ ಸಹಾನುಭೂತಿ ಇರುತ್ತಿದ್ದಿತು. ಲಲಿತೆಯಂತಹ ಕುದಿಬಾಳಿನ ಹೆಣ್ಣನ್ನು ಚಿತ್ರಿಸುವುದರಲ್ಲಿ ಕತೆಗಾರರು ಯಶಸ್ವಿಗಳಾಗಿದ್ದಾರೆ. ಆದರೆ ಅಂತಹ ಹೆಣ್ಣುಗಳ ಸಮಸ್ಯೆಗೆ ಪರಿಹಾರವನ್ನು ಕತೆಗಾರರು ಸೂಚಿಸಲಿಲ್ಲ.

ಲಲಿತೆ ಕುರೂಪಿಯಾಗಿದ್ದುದರಿಂದ, ತನ್ನಂತೆಯೇ ಕುರೂಪಿಯಾದ ಗಂಡನನ್ನು ಮದುವೆಯಾಗಿ ತನ್ನ ಹೆಣ್ತನದ ಬಯಕೆಯನ್ನು ತೀರಿಸಿಕೊಳ್ಳಬಹುದಾಗಿದ್ದಿತು ಲಲಿತಳ ಉದ್ದೇಶ್ಯ ತಾನು ಹೆಣ್ಣಾಗಿ ಹುಟ್ಟಿದುದನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬ ಮತ್ತು ತನ್ನ ಹಸಿವನ್ನು ನೀಗಿಸಿಕೊಳ್ಳಬೇಕೆಂಬ ಉದ್ದೇಶ ಮಾತ್ರವಿದ್ದಿತೇ?

ಲಲಿತಳ ಮನಸ್ಸಿನಲ್ಲಿ ಬರುವ ಯೋಚನೆಗಳು ಮತ್ತು ಅವಳು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ ಚಿತ್ರಗಳಿಂದ, ವಿಷಯಭೋಗದ ರುಚಿಯನ್ನುಣ್ಣುವುದೇ ಹೆಣ್ಣಿನ ಬಯಕೆಯೇ? ಅದೇ ಹೆಣ್ತನವೇ? ಲಲಿತಳ ವರ್ತನೆಯಿಂದ ಅವಳು ಆದರ್ಶಸ್ತ್ರೀ ಎನಿಸಿಕೊಳ್ಳಬಹುದೇ? ಭಾರತದ ಸಾಧ್ವೀಮಣಿ ಲಲಿತೆಯ ಸ್ಥಾನದಲ್ಲಿದ್ದರೆ, ಅವಳೇನು ಮಾಡುತ್ತಿದ್ದಳು? ಅವಳ ಮನಸ್ಸಿನಲ್ಲೆಂತಹ ಕಲ್ಪನೆಗಳು ಬರುತ್ತಿದ್ದುವು? ಅವಳ ಚಿತ್ತಸ್ಥೈರ್ಯವೆಂತಹವಿರುತ್ತಿದ್ದುವು?—ಎಂಬ ಪ್ರಶ್ನೆಗಳು ತಲೆದೋರದಿರವು.

ಲಲಿತೆ ಭೋಗವಿಷಯಗಳ ಕಲ್ಪನೆಯಿಂದ ಉದ್ದೀಪನಗೊಂಡು, ಚಿತ್ತಸ್ಥೈರ್ಯವನ್ನು ನೀಗಿಕೊಂಡು ಒಳಕೂಗನ್ನೂ ಸೆಳೆತವನ್ನೂ ಪಡೆಯುವ ಆತ್ಮಶಕ್ತಿಯನ್ನು ಕಳೆದುಕೊಂಡ ಹೆಣ್ಣಾಗಿದ್ದಳು. ಪ್ರತಿಯೊಬ್ಬ ಸ್ತ್ರೀಯೂ ಸಾಧ್ವೀಮಣಿಯಾಗಿರಲು ಸಾಧ್ಯವಿಲ್ಲ, ಯಾರೂ ಒಲಿಯದಿರುವಷ್ಟು ಕುರೂಪಿಯಾದ ಹೆಂಗುಸರೂ ವಿರಳ. ಒಂದು ಗಂಡಿಗೆ ಒಂದು ಹೆಣ್ಣನ್ನು ಬ್ರಹ್ಮ ನಿರ್ಮಿಸಿಯೇ ಇರುವನು. ಲಲಿತೆಯ ವಿಷಯದಲ್ಲಿ ನಮಗೆ ಮರುಕ ತುಂಬಿ ಹರಿದರೂ, ಅಂತಹ ಹೆಣ್ಣುಗಳ ಸಂಖ್ಯೆ ಹೆಚ್ಚಿಲ್ಲವೆಂಬ ಭಾವನೆ ಮನಸ್ಸಿಗೆ ಸಮಾಧಾನ ತರುತ್ತದೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನ ಎಲ್ಲಾ ಪುಸ್ತಕಗಳು

ಸೇಕಡಾ ೧೦೦% ಕಡಿಮೆ ದರಕ್ಕೆ ಕೊಡುವೆವು

	ಸಾದಾಪ್ರತಿ	ಉತ್ತಮಪ್ರತಿ
ಮನೋರಾಜ್ಯ (ನಾಟಕ)	ರೂ. ೧-೧೨	ರೂ. ೨—೪
ಪುಷ್ಪಹಾರ (ಕಾದಂಬರಿ)	೧—೪	೧-೧೨
ಇವೆತ್ (ಮೊಪಾಸಾನ ಕಾದಂಬರಿ)	೧-೧೨	—
ಪೂರ್ಣಿಮಾ (ಸಂಸಾರಚಿತ್ರಗಳು)	೧—೪	೨—೮
ಸ್ವಮನ್ನನ ತಂದೆ (ಕತೆಗಳು)	—	೨—೮
ರುಕ್ಮಿಣಿ (ಕಾದಂಬರಿ)	೧—೮	೨—೦
ಮೊಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦-೧೨	೧—೮
ಕಲ್ಪನಾ ವಿಲಾಸ (ಕತೆಗಳು)	೦-೧೨	೧—೮
ಪ್ರವಾದಿ (ಗಿಬ್ರಾನರ ಪ್ರೋಫೆಟ್)	೧—೪	೨—೦
ಋಣ (ಕಾದಂಬರಿ)	೧—೪	೧-೧೨

ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ) ರೂ. ೫—೦—೦
,, (ಉತ್ತಮ ಪ್ರತಿ) ರೂ. ೬—೦—೦

ಸಾಹಿತ್ಯವಿಹಾರ

●

ನಮ್ಮ ಸಣ್ಣಕತೆಯ ಮೇಲಾಟದಲ್ಲಿ ಎರಡನೆಯ ಬಹುಮಾನವನ್ನು ಪಡೆದ 'ಆನಂದು' ಎಂಬ ಕತೆಯ ವಿಚಾರದಲ್ಲಿ ನಮ್ಮ ಕಡೆಗೊಂದು ಪತ್ರವು ಬಂದಿದೆ. ಪತ್ರದಲ್ಲಿರುವ ವಿಷಾದಕರವಾದ ಸಂಗತಿಯು ಹೀಗಿದೆ:

"ಸಂಪಾದಕರೆ,

ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಆನಂದು' ಎಂಬ-ಇದು ಎರಡನೆ ಬಹುಮಾನವನ್ನು ಪಡೆದಿದೆ-ಕಥೆ ಇಂಗ್ಲಿಷ್ ಕಥೆ-ಯೊಂದರ ಅನುವಾದ. ಮೂಲದ ವ್ಯಕ್ತಿಗಳ ಹೆಸರನ್ನು ಬದಲಾಯಿಸಿ ಸನ್ನಿವೇಶಗಳಲ್ಲಿ ಹೆಚ್ಚಿನ ಬದಲಾವಣೆ ಮಾಡದೆ, ಆ ಕತೆಯನು ನಮ್ಮ ಸನ್ನಿವೇಶಗಳಿಗೆ ಸರಿಹೋಗಿಸಿಕೊಂಡಿದ್ದಾರೆ— ಇದರ ಕರ್ತೃ. ಆದುದರಿಂದ ನಾನು ತಮ್ಮಲ್ಲಿ ಕೇಳುವ ಪ್ರಶ್ನೆ ಇದು: ಅನುವಾದ-ಗಳಿಗೂ ಬಹುಮಾನ ಕೊಡುವಿರಾ? ಅನುವಾದಗಳಿಗೆ ಬಹುಮಾನ ಕೊಡುವುದಿಲ್ಲವಾದರೆ, ಅದರ ಪ್ರಕಟನೆ ಆಗಲೇಬಾರದಿತ್ತು. ತೀರ್ಪುಗಾರರ ತಪ್ಪು ಇದಾಗಿರಬಹುದೇ?—ಎಂದು ನಾನು ಶಂಕಿಸುತ್ತೇನೆ. ಇದರ ಉತ್ತರಕ್ಕಾಗಿ ಮುಂದಿನ ತಿಂಗಳ ಜಯಂತಿಯನ್ನು ಎದುರು ನೋಡುವ.

ತಮ್ಮ ವಿಶ್ವಾಸಿ

ಎಸ್. ಸುಬ್ರಹ್ಮಣ್ಯ"

ಈ ಪತ್ರ ಬರೆದವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇರುವವರು. ಜಯಂತಿಯಲ್ಲಿ 'ಆನಂದು' ಕತೆಯು ಅಚ್ಚಾದ ಮೇಲೆ, ಧಾರವಾಡದಲ್ಲಿಯ ನಮ್ಮ ಕೆಲವು ಸಾಹಿತ್ಯಿಕ ಮಿತ್ರರೂ ಅದು ಅನುವಾದಿತ ಕಥೆಯೆಂದು ಹೇಳಿದರು.

ಮೇಲಾಟದ ತೀರ್ಪುಗಾರರೂ ಸಂಪಾದಕರೂ ಸರ್ವಸಾಕ್ಷಿ-ಸರ್ವಜ್ಞರೇನೂ ಅಲ್ಲ. ಇಂಗ್ಲಿಷಿನಲ್ಲಿರುವ ಆ ಮೂಲ ಕತೆಯನ್ನು ಅವರ ದೃಷ್ಟಿಗೆ ಬೀಳದಿರುವುದು ಅಸಹಜವೇನೂ ಅಲ್ಲ. ಜಯಂತಿ ಮೇಲಾಟಕ್ಕಾಗಿ ಅಪೇಕ್ಷಿಸಿದ್ದುದು ಸ್ವತಂತ್ರ ಕತೆಗಳನ್ನು. ಕಳುಹು-ವವರೆಲ್ಲರೂ ಪ್ರಾಮಾಣಿಕತನದಿಂದ ಸ್ವತಂತ್ರ ಕತೆಗಳನ್ನೆ ಕಳುಹುವರೆಂದು ನಮ್ಮ ಭಾವನೆ. ಕಳ್ಳತನವು ಹೊರಬಿದ್ದರೆ, ಬಹುಮಾನ ದೊರೆತ ಸಮಾಧಾನದೊಂದಿಗೆ ಮಾನಕಳೆದುಕೊಳ್ಳಬಹುದಾದ ಅಸಮಾಧಾನದ ಪ್ರಸಂಗವೂ ಬರುವುದೆಂಬುದನ್ನು, ನಮ್ಮ ಸುಶಿಕ್ಷಿತ ಲೇಖಕರು ಮರೆತು ನಡೆಯಲಾರರೆಂದು ನಮ್ಮ ನಂಬುಗೆ. ಆದರೆ 'ಆನಂದು'ವಿನ ಲೇಖಕ, ನಮ್ಮ ನಂಬುಗೆಯ ಮೇಲೆ ಏಟು ಹಾಕಿದುದು ವಿಷಾದದ ಸಂಗತಿ. ಇತ್ತೀಚೆಗೆ ಈ ಬಗೆಯ ಸಾಹಿತ್ಯ ಚೌರ್ಯಗಳು ನಮ್ಮಲ್ಲಿ ಹೆಚ್ಚು-ಹೆಚ್ಚಾಗಿ ನಡೆಯುತ್ತಲಿವೆ. ಕೇವಲ ಇಂಗ್ಲಿಷಿನಿಂದಲೇ ಚೌರ್ಯ ನಡೆಯುವುದೆಂದಲ್ಲ. ಕನ್ನಡ ಕತೆಗಳನ್ನು ಕೂಡ ಅಲ್ಪ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಪ್ರಕಟನೆಗೆ ಕೊಡುತ್ತಿದ್ದಾರೆ. 'ಆನಂದಕಂದ'ರ '**ಮಮತೆಯ ಮುಡಿಪು**' ಎಂಬ ಕತೆಯು ಒಬ್ಬ ತರುಣ ಲೇಖಕರಿಂದ ಅಲ್ಪ ಸ್ವಲ್ಪ ಬದಲಾವಣೆ ಹೊಂದಿ, ಒಂದು ಮೇಲಾಟದಲ್ಲಿ ಅವರಿಗೆ ಬಹುಮಾನವನ್ನು ಕೂಡ ಒದಗಿಸಿಕೊಟ್ಟಿತು. ಇತ್ತೀಚೆಗೆ ಮೈಸೂರಿನ ಮಾಸಪತ್ರಿಕೆಯೊಂದರಲ್ಲಿ, ಆನಂದಕಂದರ ಇನ್ನೊಂದು ಕತೆ '**ಜೀವನದ ಹೂ**' ಎಂಬುದು ಪಾತ್ರದ ಹೆಸರನ್ನಷ್ಟು ಮಾರ್ಪಡಿಸಿಕೊಂಡು ಪ್ರಕಟವಾಗಿತ್ತು. ಇದು ಸಾಹಿತ್ಯ-ಪ್ರಪಂಚದ ಸ್ವಾಸ್ಥ್ಯದ ಲಕ್ಷಣವೇನೂ ಅಲ್ಲ.

ಶ್ರೀ. ಎಸ್. ಸುಬ್ರಹ್ಮಣ್ಯ ಅವರೂ, ಬೇರೆ ಸಾಹಿತ್ಯಿಕ ಮಿತ್ರರು ಸಕಾಲದಲ್ಲಿಯೆ ವಾಸ್ತವಸಂಗತಿಯನ್ನು ತಿಳುಹಿ ನಮಗೆ ತುಂಬ ಉಪಕಾರವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು. '**ಆನಂದು**' ಕತೆಯನ್ನು ಬರೆದ ಸಹೋದರಿಗೆ ಏನಾದರೂ ಹೇಳಬೇಕೆನಿಸಿದರೆ, ಅವಶ್ಯವಾಗಿ ನಮಗೆ ಬರೆದು ತಿಳುಹಬೇಕು. ಪಶ್ಚಾತ್ತಾಪದಿಂದ ಅಪರಾಧದ ಪರಿಮಾರ್ಜನವಾಗುವುದು.

ಸ್ವತಂತ್ರವಾಗಿ ಬರೆಯುವ ಶಕ್ತಿಯುಳ್ಳ ಲೇಖಕರು ಕನ್ನಡ-ದಲ್ಲಿ ಅವಶ್ಯವಾಗಿ ಸ್ವತಂತ್ರ ಕೃತಿಗಳನ್ನು ನಿರ್ಮಿಸಲಿ. ಪರಭಾಷೆಯ ಉತ್ತಮ ಸಾಹಿತ್ಯದ ಭಾಷಾಂತರ ಅನುವಾದಗಳೂ ನಮಗೆ ಬೇಕಾಗಿವೆ. ಆ ಕೆಲಸವನ್ನು ಮಾಡಬೇಕೆನ್ನುವವರು ಪ್ರಾಮಾಣಿಕ ಬುದ್ಧಿ-ಯಿಂದ ಭಾಷಾಂತರ ಅನುವಾದಗಳೆಂಬುದನ್ನು ಒಪ್ಪಿಕೊಳ್ಳಲಿ! 'ಆನಂದು' ಎನಂತಹ ಒಳ್ಳೇ ಕತೆಯು ಅನುವಾದವೆಂದು ಬಂದಿದ್ದರೂ ಜಯಂತಿಯಲ್ಲಿ ಅದರ ಪ್ರಕಾಶನಕ್ಕೆ ಎಡೆ ದೊರೆತೇ ದೊರೆಯುತ್ತಿತ್ತು. ಒಳ್ಳೆಯ ಕತೆಯ ಒಳ್ಳೆಯ ಅನುವಾದವೆಂದು ರಸಿಕರು ಮೆಚ್ಚಲೂ ಬಹುದಾಗಿದ್ದಿತು. ಈ ಸಂದರ್ಭದಿಂದ ನಮ್ಮ ಹೊಸ ಲೇಖಕರಿಗೆ ಒಂದು ಒಳ್ಳೆಯ ಪಾಠ ದೊರೆತಂತಾಯಿತು.

—**ಸಂಪಾದಕರು**

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಪುಸ್ತಕ ವಿಮರ್ಶೆ

ದಿ ಡಾಯಜೆಸ್ಟ್ ಆಫ್ ಬಾಂಬೆ ರೆಂಟ್‌ಕೇಸಿಸ್:

ಬರೆದವರು: ವ್ಹಿ. ಎಸ್. ಕುಲಕರ್ಣಿ. ಬಿ. ಎ., ಎಲ್‌ಎಲ್. ಬಿ. ಅಡ್ವೋಕೇಟ್, ಹಾಯಕೋರ್ಟ ಮುಂಬಯಿ. ಪ್ರಕಾಶಕರು: ಲಾ ಬುಕ್ ಹೌಸು ಪೂನಾ ೨ ಪುಟಗಳು ೫೭+೬೨=೧೧೯. ಬೆಲೆ ೩-೦-೦.

ಒಂದೊಂದು ವಿಷಯದ ಬಗ್ಗೆ ಶಾಸನಸಭೆಯು ಕಾನೂನು ಮಾಡುವುದು. ಶಾಸನ ಸಭೆಯಲ್ಲಿ ಪಾಸಾದ ಕಾನೂನು ಕೇವಲ ಸೋಪಪತ್ತಿಕವಿಧಾನವಾಗುವುದು. ಅದರಲ್ಲಿ ಅಡಕವಾದ ಪ್ರತಿಯೊಂದು ಪ್ರಸಂಗದ ವಿವರಣೆಯು ನ್ಯಾಯಾಲಯದಲ್ಲಿಯೇ ಆಗುವುದು. ಕಾನೂನನ್ನು ವಿಶಿಷ್ಟ ಪ್ರಸಂಗಕ್ಕೆ ಅನ್ವಯಿಸುವುದು ನ್ಯಾಯಾಲಯದ ಕಾರ್ಯ. ಹೀಗೆ ಅನ್ವಯಿಸಿ ನಿರ್ಣಯ ಕೊಟ್ಟಮೇಲೆ ಆ ಮೊಕದ್ದಮೆಯು ಮುಂದಿನ ಮೊಕದ್ದಮೆಯ ಪ್ರಸಂಗಗಳಿಗೆ ಮಾರ್ಗದರ್ಶಕವಾಗುವುದು. ಶಾಸನ ಸಭೆಯಲ್ಲಿ ಪಾಸಾದ ಕಾನೂನುಗಳಿಂದ ಈ ಅನ್ವಯವು ಹೆಚ್ಚು ಮಹತ್ವದ್ದಾಗುವುದು. ಆ ದೃಷ್ಟಿಯಿಂದ ನೋಡಿದಾಗ ಇಂತಹ ಪುಸ್ತಕದ ಬೆಲೆಯು ತಿಳಿದು ಬರುವುದು

ಬಾಡಿಗೆ ನಿಯಂತ್ರಣ ಕಾನೂನಿಗೆ ಸಂಬಂಧಪಟ್ಟ ನಿರ್ಣಾಯಕ ಮೊಕದ್ದಮೆಗಳನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ ಕಾನೂನಿನಲ್ಲಿಯ ಬೇರೆ ಬೇರೆ ಕಲಮುಗಳಿಗೆ ಅನ್ವಯಿಸಿದ ಕೇಸುಗಳನ್ನು ಇಲ್ಲಿ ವಿವರಣಾತ್ಮಕವಾಗಿ ಕೊಡಲಾಗಿದೆ ಇದರಿಂದ ಕಾನೂನಿನ ಬಗ್ಗೆ ಸ್ಪಷ್ಟ ಕಲ್ಪನೆಯು ಆಗುವುದು. ವಿಶಿಷ್ಟತೆಯುಳ್ಳ ಕೇಸುಗಳ ಬಗ್ಗೆಯೂ ತಿಳುವಳಿಕೆಯಾಗುವುದು

ಈಗ ಪ್ರಚಲಿತವಿರುವ ಬಾಡಿಗೆ ನಿಯಂತ್ರಣ ಕಾನೂನಿಗೆ ಅನ್ವಯಿಸುವ ಕೇಸುಗಳು ಹಿಂದಿನ ಕಾಯಿದೆಯ ಕಕ್ಷೆಯಲ್ಲಿ ಬಂದ ಕೇಸುಗಳನ್ನು ಇಲ್ಲಿ ಕೊಡಲಾಗಿದೆ. ಮೇಲಾಗಿ ಕಾನೂನಿನ ಪಠ್ಯವನ್ನು ಅಲ್ಲಲ್ಲಿ ಕೊಟ್ಟು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಲಾಗಿದೆ. ಆದುದರಿಂದ ಈ ಪುಸ್ತಕವು ಬಾಡಿಗೆನಿಯಂತ್ರಣ ಕಾಯಿದೆಯ ಕೈಪಿಡಿಯಾಗಿದೆಯೆಂದು ಹೇಳಬಹುದು ವಕೀಲರಿಗೆ ಆಧಾರ ಗ್ರಂಥವಾಗಿದೆಯೆಂದರೆ ಇದರ ಮಹತ್ವವನ್ನು ತಿಳಿಸಿದಂತಾಗುವುದು. ಒಟ್ಟಿನಲ್ಲಿ ಇದೊಂದು ಸಂಗ್ರಾಹ್ಯವಾದ ಗ್ರಂಥವಾಗಿದೆ.

—ನೆರಂಗ

ವಾಗ್-ಲಹರಿ

(ನಾಟ್ಯಛಟಾಸಂಕಲನ)

ಶ್ರೀ ಎನ್. ಎಸ್. ಗದಗಕರರು ಲಲಿತ ಪ್ರಬಂಧಕಾರರೆಂದು ನಮ್ಮ ಜನ ಚನ್ನಾಗಿಬಲ್ಲರು ಆದರೆ ಅವರು ಇದೀಗ ಏಕಪಾತ್ರ ಪ್ರಧಾನವಾದ ನಾಟ್ಯಛಟಗಳ ಕಡೆಗೆ ತಮ್ಮ ಲೇಖನಿಯನ್ನು ಹೊರಳಿಸಿದ್ದಾರೆ! 'ವಾಗ್-ಲಹರಿ'ಯೆಂದು ನಾಮಕರಣ ಮಾಡಿಕೊಂಡು ಈ ಪುಟ್ಟಹೊತ್ತಿಗೆ ಹೊರಬಂದಿದೆ. ಮುನ್ನೂರು ಪುಟಕ್ಕೆ ಮಿಕ್ಕಿದ ಗಾತ್ರದಲ್ಲಿ ಹೊರಬರುತ್ತಿರುವ ಹೆಬ್ಬೊತ್ತಿಗೆಗಳ ಈ ಕಾಲದಲ್ಲಿ ತಿರುಳಿನಿಂದ ತುಂಬಿ ಚಿಕ್ಕದಾದರೂ ಚೊಕ್ಕವಾಗಿದೆ—ಈ ಗ್ರಂಥ. ಗಾತ್ರ ಮುಖ್ಯವಲ್ಲ— ವಿಷಯ ಮುಖ್ಯವೆಂದು ನಮ್ಮ ಜನವರಿತರೆ—ಅದೆಷ್ಟೋ ಸೊಗಸು! ಇದು ಎಂದಾಗುವದೋ? ಇರಲಿ. ಶ್ರೀ ಮಾಧವ್ ಗೋಕಾಕರು ಮುನ್ನುಡಿ ಬರೆದು ಪ್ರಸ್ತುತ ಪುಸ್ತಕಕ್ಕೆ ಕಳೆ ತಂದಿದ್ದಾರೆ. ಪುಸ್ತಕದ ಪರಿವಿಡಿಯನ್ನು ಪರಿಶೀಲಿಸಿದರೆ, 'ಟೊಪ್ಪಿಗೆ ಸಿಗದಿದ್ದಾಗ' 'ವಾಗ್ಗೇಯ ವರ' 'ಕಲಿಕಾಲ' 'ವಧೂಪರೀಕ್ಷೆ' 'ಎಸ್. ಎಸ್. ಸಿ. ಯಾತ್ರೆ' 'ಕಲಾವಿದನ ಕಳವಳ' 'ಚಹಾದುಕಾನ' 'ಸಾಹಿತಿಯ ಅಂತರಂಗ' 'ರಾಯರ ರಸನಿಮಿಷ' 'ನ್ಯಾಯಾಸ್ಥಾನದಲ್ಲಿ ನಾಗಣ್ಣ' 'ಜಟಕಾಸಾಬಿ' ಹೀಗೆ ಒಂದಿಲ್ಲೊಂದು ರೀತಿಯ ವಸ್ತುವಿನ ಆಯ್ಕೆಯಲ್ಲಿ ಸಾಮಾನ್ಯ ಜನತೆಯು. ನಿತ್ಯ ಜೀವನದ ಪೇಚಲಾಟವು ಎದ್ದು ಕಾಣುವದು. ಸಮಾಜದಲ್ಲಿ ಹುದುಗಿರುವ ಅನೇಕ ದೋಷಗಳನ್ನು ಹುಚ್ಚು ದೊಡ್ಡಸ್ತಿಕೆಯ ಮಟ್ಟವನ್ನು, ಸ್ತ್ರೀಯರ ಮೂಢನಂಬಿಕೆಯನ್ನು ಪುರುಷರ ಮುನಿಸ್ನೋಟದ ಬಾಳನ್ನು ನಾವು ಇಲ್ಲಿ ನೋಡಬಹುದಾಗಿದೆ. ಸಾಮಾಜಿಕ ಚಿತ್ರಗಳನ್ನು ನಾವು ಚಿತ್ರಿಸುವಾಗ ಬಲು ಜಾಗರೂಕನಾಗಿ ಚಿತ್ರಿಸಬೇಕಾಗುವದಷ್ಟೇ? ಆ ಚಿತ್ರವು ರಾವುಗನ್ನಡಿಯಲ್ಲಿಯಂತೆ–ಇಲ್ಲವೆ–ತೀರ ಸದ್ದಾಮುದ್ದಾಗಿ ಕಾಣದಂತೆ–ವಾಸ್ತವ ಪ್ರಪಂಚಕ್ಕೆ ಹಾಗು ಆದರ್ಶ ಜೀವನಕ್ಕೆ ಹೊಂದಿ ನಡೆಯುವ ಹಾಗೆ ಚಿತ್ರಿಸಬೇಕು. ಇದು ಸಾಧಿಸದಿದ್ದರೆ ಹುಡುಗನು ನಿರಾಶೆಪಡಬೇಕಾಗುವುದು. ನಾಟ್ಯಛಟಗಳಲ್ಲಿಯಂತು ಲೇಖನಿಯ ಹೊಳಹು ಮಿಂಚಿನಂತೆ ಮುಂದುವರಿಯಬೇಕು. ಲೇಖಕನು ಸೃಷ್ಟಿಸಿರುವ ಒಂದೇ ಒಂದು ಪಾತ್ರವು ಹಲವಾರು ಓದುಗನಿಗೆ ಕಾಣದ ಪಾತ್ರಗಳ ಸಂಗಡ ವ್ಯವಹರಿಸಬೇಕಾಗುತ್ತದೆ. ಇಂಥ ಏಕೋಕ್ತಿ ದೃಶ್ಯವು ತೀರ ಮಸುಕಾಗಿ ಪರಿಣಮಿಸಬಹುದು. ಆದ್ದರಿಂದ ಪಾತ್ರವು ಸರ್ಕಸಿನಲ್ಲಿಯ ರಿಂಗಮಾಸ್ಟರನಂತೆ ಸುತ್ತುಮುತ್ತು—ತನ್ನ ಚಬುಕವನ್ನಲ್ಲ—ನಾಲಿಗೆಯನ್ನು ಹರಿಬಿಡಬೇಕಾಗುತ್ತದೆ. ನಾಟ್ಯಛಟಗಳು ಸುದೀರ್ಘವಾದರೆ-ಕುತೂಹಲವು ಕುಂಟಿತವಾಗಿ ಓದುಗನು ಬೇಸರಿಯುವ ಸಂಭವವೂ ಹೆಚ್ಚು! ಪ್ರಸ್ತುತ ಗ್ರಂಥದಲ್ಲಿಯ 'ನ್ಯಾಯಾಸ್ಥಾನದಲ್ಲಿ ನಾಗಣ್ಣ' ಎಂಬುದರ ಮೇಲೆ ನಾವು ಇದನ್ನು ಆರೋಪಿಸಬಹುದು. ಆದರೆ 'ಜಟಕಾಸಾಬಿ' 'ಸಾಹಿತಿಯ ಅಂತರಂಗ' 'ರಾಯರ ರಸನಿಮಿಷ'ಗಳಂಥವು ನಮಗೆ ರಸನಿಮಿಷಗಳನ್ನೇ ಒದಗಿಸಿಕೊಡುವವು!

ಈ ಮಾನದಂಡದಿಂದ ಅಳೆದಾಗೆಲ್ಲ, ಕನ್ನಡದಲ್ಲಿ ನಾಟ್ಯಛಟಗಳ ಪೇಕು ಹುಲುಸಾಗಿಲ್ಲವೆಂದು ಹೇಳಬೇಕಾಗುವದು. ಶ್ರೀ ಗದಗಕರರು ಈ ಪ್ರಯೋಗ ಮಾಡಿದ್ದಾರೆ.—ಅಂತೆಯೇ-ಈ ಹೊತ್ತಿಗೆಯ ಬಗ್ಗೆ ಓದುಗನಿಗೆ ಅರಿವೆನಿಸುವಲ್ಲಿ ಸಂಶಯವಿಲ್ಲ! ಇಲ್ಲಿಯ ಎಲ್ಲ ದೃಶ್ಯಗಳಲ್ಲಿ ವಾತಾವರಣ, ಅದರ ಜೊತೆಗೆ ವಿವೇಕದ ಸವಿಪಟ್ಟಿದ್ದರೂ ಸಂಗಮದಲ್ಲಿ ದೃಶ್ಯಗಳು ತುಸು ಸಪ್ಪೆಗಾಗಿ ಕಾಣುವವು. ಆದರೆ ಎಲ್ಲ ದೃಶ್ಯಗಳಲ್ಲಿಯೂ ಈ ಕುಂದು ಕಂಡುಬಾರದಿರುವದು ಒಂದು ಆನಂದದ ಸಂಗತಿಯು. ಒಟ್ಟಿನ ಮೇಲೆ ಹೇಳುವದಾದರೆ. ಬಹುರೂಪಿಯಾಗಿ ಸಾಹಿತ್ಯ ಹಬ್ಬುತ್ತಿರುವಾಗ ನಾಟ್ಯಛಟದ ಹಾದಿಯೂ ಗದಗಕರರಂತಹ ನುರಿತ ಬರಹಗಾರರಿಂದ ಹೊರಬಿದ್ದುದು ಸ್ವಾಗತಾರ್ಹವಾಗಿದೆ.

ಬಿ. ಆರ್. ವಾಡಪ್ಪಿ.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ, ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯಲ್ಲಿ ತೆಗೆದುಕೊಂಡರೆ, ಮುಗಿಯುವ ವರೆಗೂ ಪುಸ್ತಕವನ್ನು ಕೆಳಗೆ ಇಡಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ **ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦**

ಬೆಳವಡಿ ಮಲ್ಲಮ್ಮ	ಕಾರಹುಣ್ಣಿವೆ	ಬೆಂದ ಹೃದಯ
(ರಂಗನಾಟಕ ಸಂಕಲನ)	(ಕವನಸಂಕಲನ)	(ನಾಟಕ ಸಂಕಲನ)
ಕ್ರೌ. ಅ. ಪುಟ. ೧೦೬ ಬೆಲೆ ೧-೮-೦	ಕ್ರೌ. ಅ. ೧೩೪ ಪುಟ. ಬೆಲೆ ಸಾದಾ ೨-೦-೦ ಸುಂದರ ೨-೪-೦	ಕ್ರೌ. ಅ. ೧೧೨ ಪುಟ ಬೆಲೆ ೧-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ-ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	**ಕರ್ನಾಟಕ ಜನಜೀವನ**
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರೆ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ. ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಮುದ್ವೀಡರ 'ಚಿತ್ರಕಲಾಪ್ರವೇಶ'ವೂ ಚಾವಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರ್ಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by S. G Kulkarni at the Sadhana Press, Dharwar. and pulished for the Proprietors Jayanti pubications, by S. D. Dharmatti, at the Jayanti Office, Dharwar.

ಜಯಂತಿ

ಸಪ್ಟಂಬರ್ ೧೯೪೮

ಈ ಸಂಚಿಕೆಯಲ್ಲಿ:

ಪಾಕಿಸ್ತಾನಿಗಳ ತಿರುಗುಮುರುಗಾಟ (ಸಂಪಾದಕೀಯ) ಸಂಪಾದಕರು ೧೨೧

ನಾಡನಡೆ (ಪ್ರಾಸಂಗೀಕ ಟಿಪ್ಪಣಿ) 'ಕಾಲಭೈರವ' ೧೨೪

ಮಹಾಲಿಂಗ (ಸಣ್ಣಕಥೆ) ಶ್ರೀ. ಗೋವಿಂದ ಮೂರ್ತಿ ದೇಸಾಯಿ, ಧಾರವಾಡ ೧೨೫

ಜರ್ಮನಿಯ ಔದ್ಯೋಗಿಕಕೇಂದ್ರ (ಪರದೇಶದ ಪತ್ರ) ಶ್ರೀ. ಎಂ.ಕೆ. ವರಾಹಮೂರ್ತಿ ಬಿ ಎಸ್‌ಸಿ (ಟೆಕ್), ಎಂ, ಎಸ್‌ಸಿ. ೧೨೯

ನಾ ಹೋಗಬೇಕು (ನವ್ಯಕವನ) ಶ್ರೀ ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ ೧೩೨

ಪಾಂಡ್ರಿಯ ದಿಗಿಲು (ಕವನ) ಶ್ರೀ ಜ ಶ್ರೀ. ದೇಸಾಯಿ, ಜರಕುಂಟೆ ಬಿ.ಎ.,ಬಿ.ಟಿ. ೧೩೨

ಡೆಮಾಕ್ರಸಿಯಲ್ಲಿ ಡಿಗ್ರಿ (ಒಂದು ವಿಚಾರಲಹರಿ) ಶ್ರೀಮತಿ ಸರೋಜನಿ ಮಹಿಷಿ ಎಂ. ಎ ಬೆಳಗಾಂವಿ ೧೩೩

ಸಂಗಾತಿ (ಸಣ್ಣಕತೆ) ಶ್ರೀ ಎನ್. ಎ. ಕುಲಕರ್ಣಿ, ಮುಂಬಯಿ ೧೩೬

ಜಯ-ಪರಾಜಯ (ಅನುವಾದಿತ ಕಥೆ) ಶ್ರೀ ಕೆ. ಜಿ ನಾಯಕ, ಹೈದರಾಬಾದ್ ೧೪೦

ವಿಶ್ವಶಾಂತಿಯ ಶ್ರೇಷ್ಠ ಉಪಾಯ (ಪ್ರಬಂಧ) ಶ್ರಿ. ಕೆ ಬಿ ಚಿಟಣಿಸ, ಅಂಬಡಗಟ್ಟಿ ೧೪೨

ಭಕ್ತಸುದಾಮ (ಪೌರಾಣಿಕ) ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೧೪೫

ಮಂಜು (ಸಣ್ಣಕಥೆ) ಶ್ರೀ ಅನಂತರಾವ ಭೋಸಗೆ, ಸೇಡಬಾಳ ೧೫೧

ಪ್ರತಿಭೆಗೆ (ಕವನ) ಶ್ರೀ ಸಿ ಹೊಸಬೆಟ್ಟು ೧೫೫

ಅನಿರ್ವಚನೀಯ (ಕವನ) ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು ೧೫೫

ಎರಡು ರೂಪಗಳು (ಕಿರುಕತೆಗಳು) ಶ್ರೀ. ಮನೋಹರ ಸೊರಟೂರ ೧೫೫

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ ಶ್ರೀ ಕೆ. ಎಸ್. ಶರ್ಮಾ, ಕಾಸರಗೋಡು ೧೫೮

ಸಾಹಿತ್ಯವಿಹಾರ (ಪತ್ರ-ಉತ್ತರ) ಶ್ರೀ ಜಿ. ಎಸ್. ಮರಕರ ಮತ್ತು ಸಂಪಾಕರು ೧೬೦

ನಾಟಕಾಲಂಕಾರರಿಗೆ ಶ್ರದ್ಧಾಂಜಲಿ ಸಂಪಾದರು ಕವ್ಹರ್ ೩

ಸಾದರ ಸ್ವೀಕಾರ ಕವ್ಹರ್ ೨

ಸಾದರ ಸ್ವೀಕಾರ

೨೬ ಪುರಂದರದಾಸಸೇವಾಮಂಡಲ. ಹೊಸಪೇಟೆ. ಸಂಸ್ಥೆಯ ಹಿನ್ನೆಲೆ, ಮತ್ತು ಧ್ಯೇಯಗಳು. ಕ್ರಾ. ಅ. ೧೨ ಪುಟಗಳು.

ಹೊಸಪೇಟೆಯ ಬಳಿಯ ಹಾಳುಹಂಪೆಯಲ್ಲಿ, ತುಂಗಭದ್ರಾ ತೀರದ ರಘುನಾಥಯಪ್ರದೇಶದಲ್ಲಿ ಇರುವ ಶ್ರೀಪುರಂದರದಾಸರ ಸ್ಮಾರಕ ಮಂಟಪವು, ಜೀರ್ಣ-ಜೀರ್ಣವಾಗಿದೆ. ಈ ಮಂಟಪದಲ್ಲಿ ನೊದಲಿನಿಂದಲೂ, ಶ್ರೀಪುರಂದರದಾಸರ ಪುಣ್ಯತಿಥಿಯನ್ನು, ವರ್ಷ-ವರ್ಷವೂ ಜರುಗಿಸಲಾಗುತ್ತಿದೆ. ದಾಸರು ಕರ್ನಾಟಕ ಸಂಗೀತ ಪ್ರಪಂಚದಲ್ಲಿಯೂ, ಭಕ್ತಿಸಾಹಿತ್ಯಲೋಕದಲ್ಲಿಯೂ ಮಾಡಿರುವ ಕೆಲಸವನ್ನು ನೋಡಿದರೆ, ಅಖಿಲ ಕನ್ನಡಿಗರೂ ಸೇರಿ, ಅವರ ಕಾರ್ಯಕ್ಕೆ ತಕ್ಕಂತೆ ನೆನಹನ್ನು ಸಲ್ಲಿಸುತ್ತಿಲ್ಲವೆಂದೇ ಹೇಳಬೇಕಾಗುವುದು. ದಾಸರಿಂದ ನಮ್ಮ ನಾಡಿಗೆ ತುಂಬ ಉಪಕಾರವಾಗಿದೆ. ದಾಸರು ಅಪೇಕ್ಷಿಸದಿದ್ದರೂ, ಅವರ ಋಣದ ಹೊರೆಯನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಹಾಳುಬಿದ್ದ ಶ್ರೀಪುರಂದರದಾಸರ ಮಂಟಪವನ್ನು ಜೀರ್ಣೋದ್ಧಾರಗೊಳಿಸಲೆಂದೂ, ದಾಸರ ಮಹಿಮೆಗನುಗುಣವಾಗಿ, ಪ್ರತಿವರ್ಷವೂ ಅವರ ಪುಣ್ಯತಿಥಿಯನ್ನು ವಿಜೃಂಭಣೆಯಿಂದ ಜರುಗಿಸಬೇಕೆಂದೂ, ಆಗ ದಾಸರ ಸಂಗೀತ-ಸಾಹಿತ್ಯಗಳನ್ನು ಪರಿಪೋಷಿಸುವಂತಹ ಸಾಂಸ್ಕೃತಿಕ ಉತ್ಸವವನ್ನು ನಡೆಯಿಸಬೇಕೆಂದೂ, ಹೊಸಪೇಟೆಯಲ್ಲಿ ಈ ಸಂಸ್ಥೆಯು ಸ್ಥಾಪಿತವಾಗಿದೆ. ಶ್ರೀದಾಸರ ಬಗೆಗೆ ತುಂಬ ನಿಷ್ಠೆಯುಳ್ಳ ಜನರೇ ಈ ಸಂಸ್ಥೆಯ ಜನಕರಾಗಿದ್ದಾರೆ. ಈ ಸಂಸ್ಥೆಯ ಧ್ಯೇಯ-ಕಾರ್ಯಪದ್ಧತಿಗಳನ್ನು ಅರಿತುಕೊಂಡು, ಕನ್ನಡಿಗರೆಲ್ಲರೂ ಈ ಸಂಸ್ಥೆಗೆ ಆರ್ಥಿಕ ಅನುಕೂಲತೆಯನ್ನು ಒದಗಿಸಿಕೊಡಬೇಕು. 'ರೊಕ್ಕಾ ಎರಡಕ್ಕೆ ದುಃಖಾ!' ಎಂದು ಪುರಂದರದಾಸರು ಹಣವನ್ನು ತಿರಸ್ಕಾರದಿಂದ ಕಂಡವರಾದರೂ, ಇಂದಿನ ಕಾಲದಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯವನ್ನು ಆರಂಭಿಸಿ ನಡೆಯಿಸಬೇಕಾದರೆ, ಮೊದಲು ಹಣ ಬೇಕಾಗುವುದು. ಕನ್ನಡಿಗರೆಲ್ಲ ನೆರವಾಗಿ, ಸಂಸ್ಥೆಯು ಇಟ್ಟುಕೊಂಡ ಧ್ಯೇಯಗಳು ಪೂರಯಿಸುವಂತಾಗಲೆಂದು ನಮ್ಮ ಹಾರಯಿಕೆ.

೨೭ ಹಿಂದೀ ಕನ್ನಡ ಶಬ್ದಕೋಶ (ಕೋಶಗ್ರಂಥ) ಸಂಪಾದಕರು ಶ್ರೀ. ಗುರುನಾಥ ಜೋಶಿಯವರು. ಪ್ರಕಾಶಕರು ಶ್ರೀ. ಬಿ. ಜಿ. ಸಂಕೇಶ್ವರ. ಬಸವೇಶ್ವರ ಪುಸ್ತಕ ಭಾಂಡಾರ, ಹುಬ್ಬಳ್ಳಿ. ಕ್ರಾ. ಅ. ೮೦೦ ಪುಟಗಳು. ಬೆಲೆ ೪-೦-೦.

ಇದರಲ್ಲಿ ೩೫೦೦೦ಕ್ಕಿಂತ ಹೆಚ್ಚು ಹಿಂದೀ ಶಬ್ದಗಳಿಗೆ ಕನ್ನಡದ ಸಮಾನಾರ್ಥಗಳನ್ನು ಕೊಟ್ಟು ಸಂಗ್ರಹಿಸಲಾಗಿದೆ.

ಹಿಂದೀಭಾಷೆಯ ಅಭ್ಯಾಸಮಾಡುವವರಿಗೆ ಈ ಕೋಶವು ತುಂಬ ಅನುಕೂಲತೆಯನ್ನು ಒದಗಿಸಬಲ್ಲದು. ಕೊನೆಯಲ್ಲಿ ಗಾದೆಮಾತು ಮತ್ತು ಪಡೆನುಡಿಗಳ ಸಮಾನಾರ್ಥಗಳನ್ನೂ, ಭಾರತ ಸಂವಿಧಾನದ ಪಾರಿಭಾಷಿಕಪದಗಳ ಅರ್ಥಗಳನ್ನೂ ಸಂಗ್ರಹಿಸಿ ಪರಿಶಿಷ್ಟರೂಪದಿಂದ ಕೊಡಲಾಗಿದೆ. ಮುದ್ರಣ, ಕಾಗದ, ಕಟ್ಟು ಎಲ್ಲವೂ ಸುಂದರವಾಗಿದ್ದು, ಇದಕ್ಕಿರಿಸಿದ ೪ ರೂ. ಬೆಲೆಯು ತೀರ ಕಡಿಮೆಯೆಂದು ಎನಿಸುವಂತಿದೆ. ಇಷ್ಟೊಂದು ಒಳ್ಳೆಯ ರೀತಿಯಿಂದ ಸಂಪಾದನೆ ಮಾಡಿದ ಶ್ರೀ. ಗುರುನಾಥ ಜೋಶಿಯವರೂ ಸುಲಭ ಬೆಲೆಗೆ ಸಿಕ್ಕುವಂತೆ ಪ್ರಕಟಿಸಿದ ಪ್ರಕಾಶಕರೂ ಪ್ರಶಂಸಾಪಾತ್ರರಿದ್ದಾರೆ.

೨೮ ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ ಅರವಟಗಿ (೧-೪-೫೩ರಿಂದ ೩೧-೩-೫೫ರ ವರೆಗಿನ ವರ್ಷದ ಕಾರ್ಯಕಲಾಪ ಮತ್ತು ಆಯ-ವ್ಯಯಗಳ ವರದಿ) ಡೆ. ಅ. ೨೮ ಪುಟಗಳು.

ಲೋಕಕಲ್ಯಾಣ ಬುದ್ಧಿಯ ಸ್ವಯಂಪ್ರೇರಣೆಯೂ ಅದರ ಕಾರ್ಯಗಳಿಗೆ ಅವಶ್ಯಕ ಧನದ ಅನುಕೂಲತೆಯೂ ಇದ್ದರೆ, ಕಾಡನ್ನು ಸಮೃದ್ಧವಾದ ನಾಡನ್ನು ಹೇಗೆ ಮಾಡಬಹುದೆಂಬುದಕ್ಕೆ, ಅರವಟಿಗೆಯ ಸರ್ವೋದಯ ಕಾರ್ಯವೊಂದು ಪ್ರತ್ಯಕ್ಷ ದೃಷ್ಟಾಂತವೆನಿಸುವಂತಿದೆ. ಕಾರ್ಯಕರ್ತರೆಲ್ಲರ ಕರ್ತವ್ಯದಕ್ಷತೆಗಾಗಿ ನಮ್ಮ ಅಭಿನಂದನೆಗಳು ಸಲ್ಲಲಿ!

೨೯ ಭವಭೂತಿ (ಕವಿ ಮತ್ತು ಅವನ ಕೃತಿಗಳ ಪರಿಚಯ) ಬರೆದವರು ಶ್ರೀ. ಕೆ. ಕೃಷ್ಣಮೂರ್ತಿ ಎಂ. ಎ., ಬಿ. ಟಿ., ಪಿಎಚ್. ಡಿ ಅವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ೧ನೆಯ ಪುಷ್ಪ. ಫೂ. ಕ್ಯಾ. ಅ. ೬೬ ಪುಟಗಳು ಬೆಲೆ ೦-೪-೦.

೩೦ ಮನೋರೋಗಗಳು (ಮನೋವಿಜ್ಞಾನವಿಷಯಕ ಲಘುಗ್ರಂಥ). ಬರೆದವರು ಶ್ರೀ. ಎಸ್. ಆರ್. ಕುಲಕರ್ಣಿ ಎಂ. ಎ ಅವರು ಇದು ಕರ್ನಾಟಕ ವಿ. ವಿದ್ಯಾಲಯದ ಉಪನ್ಯಾಸ ಮಾಲೆಯ ೨ನೆಯ ಪುಷ್ಪ. ಫೂ. ಕ್ಯಾ ಅ. ೪೬ ಪುಟಗಳು. ಬೆಲೆ ೦-೪-೦.

೩೧ ಜೋಗುಂಡಲು (ಕನ್ನಡಪತ್ರಿಕೆ). ಸಂಪಾದಕರು ಶ್ರೀ ಶರಣಪ್ಪ ದೇವರಮನಿ ಪ್ರಕಾಶಕರು ಶ್ರೀ ಶರಣಬಸವೇಶ್ವರ ಹೈಸ್ಕೂಲ್, ಕಲಬುರ್ಗಿ. ಕ್ರೌ ೧/೮ ದ ೫೨ ಪುಟಗಳು.

೩೨ ಬೆಳಕು (ಶಾಲೆಯ ವಾರ್ಷಿಕಪತ್ರಿಕೆ) ಬಾಗಲಕೋಟೆಯ ವಿದ್ಯಾಪ್ರಸಾರಕ ಮಂಡಲದ ಪ್ರಕಟನೆ. ಕನ್ನಡಕ್ಕೆ ೬೦, ಇಂಗ್ಲಿಷಿಗೆ ೪, ಮರಾಠಿಗೆ ೮, ಹಿಂದಿಗೆ ೪, ಸಂಸ್ಕೃತಕ್ಕೆ ೨- ಹೀಗೆ ಪುಟಗಳನ್ನು ಹಂಚಿಕೊಡಲಾಗಿದೆ. ಕ್ರೌ. ೧/೮ ದ ಪುಟಗಳು.

೩೩ ಚಂದವಳ್ಳಿಯ ತೋಟ (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ತ. ರಾ. ಸು., ಪ್ರಕಾಶಕರು ಮೋಹನ ಪ್ರಕಾಶನ ಕೃಷ್ಣಮೂರ್ತಿಪುರಂ, ಮೈಸೂರು. ಕ್ರೌ. ಅ. ೩೦೦ ಪುಟಗಳು ಬೆಲೆ ೯-೮-೦.

ಜಯಂತಿ

ಸಂಪುಟ ೧೭ ಸಂಚಿಕೆ ೪

ಕುಟುಂಬದಲ್ಲಿಯು
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು :
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾಸದ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಪಾಕಿಸ್ತಾನಿಗಳ ತಿರುಗುಮುರುಗಾಟ

ಭಾರತದ ಮೇಲೆ ಸಲ್ಲದ ಅಪವಾದಗಳನ್ನು ಹೊರಿಸುತ್ತ, ಭಾರತ ಸರಕಾರವನ್ನು ಬೈಯುತ್ತ ತಿರುಗುವುದೇ ಪಾಕಿಸ್ತಾನ್ ಧುರೀಣರು ಮಾಡುವ ಮುಖ್ಯಕಾರ್ಯವಾಗಿದೆ. ತಮ್ಮ ರಾಷ್ಟ್ರದಲ್ಲಿ ನಡೆಯಬೇಕಾಗಿರುವ ವಿಧಾಯಕ ಕಾರ್ಯಗಳನ್ನೆಲ್ಲ ಒಂದೆಡೆ ಒತ್ತಿಟ್ಟು, ಭಾರತಕ್ಕೆ ಕೆಟ್ಟಹೆಸರನ್ನು ತರುವಂತಹ ಕೆಲಸಕ್ಕಾಗಿಯೆ ಅವರು ತಮ್ಮ ಸರ್ವಶಕ್ತಿಗಳನ್ನೂ ವೆಚ್ಚಮಾಡಲು ತೊಡಗಿದ್ದಾರೆ.

ಪಾಕಿಸ್ತಾನದ ಧುರೀಣನೊಬ್ಬ ಸಾಕಿದ ಕೋಳಿ ಸತ್ತಿತೊ, ಅದರ ಆರೋಪವನ್ನು ಭಾರತದ ಮೇಲೆ ಹಾಕಿ ಅವನು ಕೂಗಾಡತೊಡಗುವನು; ಆಕ್ರೋಶದ ನುಡಿಗಳನ್ನಾಡುತ್ತ ಪಶ್ಚಿಮದ ಮಹಾರಾಷ್ಟ್ರಗಳೆದುರು ಮೊರೆಗೊಳ್ಳುವನು. ಯಾವಾಗಲೂ ಕುಟಿಲ ರಾಜಕಾರಣದ ಪಗಡೆಯಾಟವನ್ನಾಡಿಯೆ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿರುವ ಆ ಮಹಾರಾಷ್ಟ್ರಗಳ ರಾಜಕಾರಣಿಗಳು, ಯಾವಾಗಲೂ ಭಾರತದ ಮೇಲೆ ಸಂದೇಹವು ಹುಟ್ಟುವಂತೆ ಪ್ರಚಾರವನ್ನು ನಡೆಸುವರು; ಅಲ್ಲಿಯ ಅನೇಕ ಪತ್ರಿಕೆಗಳೂ ಅವರ ಪ್ರಚಾರಕ್ಕೆ ಸಹಾಯಕವಾಗಿ ನಿಲ್ಲುವುವು.

ಮೊನ್ನೆಮೊನ್ನೆಯೆ ಪಾಕಿಸ್ತಾನದ ಪಾರ್ಲಮೆಂಟಿನಲ್ಲಿ, ಅಲ್ಲಿಯ ವಿದೇಶಮಂತ್ರಿಗಳಾದ ಶ್ರೀ. ಜಾಫರುಲ್ಲಾಖಾನರು, ಭಾರತದ ಪತ್ರಿಕೆಗಳೆಲ್ಲ ಪಾಕಿಸ್ತಾನಿನ ವಿರುದ್ಧವಾಗಿ ಪ್ರಚಾರ ನಡೆಸಿವೆಯೆಂದೂ ಇದಕ್ಕೆ ಭಾರತ ಸರಕಾರದ ಮೌನಸಮ್ಮತಿಯಿದೆಯೆಂದೂ ಆರೋಪಿಸಿ ಮಾತನಾಡಿರುವರು. ವರ್ಷದ ಹನ್ನೆರಡು ತಿಂಗಳೂ ಭಾರತರಾಷ್ಟ್ರವನ್ನೂ ಇಲ್ಲಿಯ ಧುರೀಣರನ್ನೂ ಬಾಯಿಗೆ ಬಂದಂತೆ ಬೈಯುತ್ತಿರುವ—ಸುಳ್ಳು ಸೊಟ್ಟು ಆರೋಪಹೊರಿಸಿ ಪ್ರಚಾರಮಾಡುತ್ತಲೆ ಇರುವ ಪಾಕಿಸ್ತಾನದ ಪತ್ರಿಕೆಗಳನ್ನು ಜಾಫರುಲ್ಲಾಖಾನರು ನೋಡಿಲ್ಲವೆ? ಅಥವಾ ಬೈಯುವ ಮತ್ತು ಆರೋಪ ಹೊರಿಸುವ ಹಕ್ಕು ಪಾಕಿಸ್ತಾನಿಗಳಿಗಷ್ಟೇ ಇದೆಯೆಂದು ಅವರು ತಿಳಿದಿರುವರೊ?

ಪಾಕಿಸ್ತಾನದ ಮುಗ್ಧಧರ್ಮಾಭಿಮಾನಿಗಳಾದ ಜನಸಾಮಾನ್ಯರನ್ನು, ಭಾರತದ ವಿರುದ್ಧವಾಗಿ ರೊಚ್ಚಿಗೆಬ್ಬಿಸಲು, ಪಾಕಿಸ್ತಾನಿಗಳು ಇನ್ನೊಂದು ತಂತ್ರವನ್ನು ಹೂಡಿದ್ದಾರೆ: ಭಾರತದಲ್ಲಿ ಮುಸ್ಲಿಮರನ್ನು ಜಾತಿಗೆಡಿಸಿ ಹಿಂದುಗಳನ್ನಾಗಿ ಪರಿವರ್ತಿಸಲಾಗುತ್ತಿದೆಯಂತೆ! ಎಂತಹ ಸುಳ್ಳಿನ ಸೃಷ್ಟಿಯಿದು! ಭಾರತದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆಯೇನೂ ಇಲ್ಲ. ಅವರೆಲ್ಲರ ಹಬ್ಬ-ಉರುಸುಗಳೆಲ್ಲ ಯಾವ ಅಡೆ-ತಡೆಯೂ ಇಲ್ಲದೆ ಎಂದಿನಂತೆ ಸರಾಗವಾಗಿ ಸಾಗುತ್ತಲಿವೆ. ವ್ಯಾಪಾರ-ವ್ಯವಹಾರಗಳಲ್ಲಿ ಹಿಂದುಗಳ ಸಹಕಾರವು ಅವರಿಗೆ ಸಂಪೂರ್ಣವಾಗಿದೆ. ಪ್ರತಿಯೊಂದು ರಾಜ್ಯ ಸರಕಾರಗಳಲ್ಲಿಯೂ ಕೇಂದ್ರಸರಕಾರದಲ್ಲಿಯೂ ಮುಸಲ್ಮಾನರು ಮಂತ್ರಿಗಳಾಗಿ ಇದ್ದಾರೆ; ಹೊಣೆಗಾರಿಕೆಯ ಅಧಿಕಾರಸ್ಥಾನಗಳಲ್ಲಿ ಇದ್ದಾರೆ. ಕಾರಕೂನರಾಗಿ ಇದ್ದಾರೆ; ಸಿಪಾಯಿಗಳಾಗಿ ಇದ್ದಾರೆ, ಪಾಕಿಸ್ತಾನಿಗಳಿಗಿಂತ ಇವರಲ್ಲಿ ಧರ್ಮಾಭಿಮಾನ, ಯಾವ ರೀತಿಯಲ್ಲಿಯೂ ಕಡಿಮೆಯಾಗಿಲ್ಲ. ಲೌಕಿಕಧರ್ಮವನ್ನೆ ಗುರಿಯಾಗಿಟ್ಟುಕೊಂಡು ಆಳುವೆನೆಂದು ಹೇಳುವ ಭಾರತ ಸರಕಾರ, ಹಿಂದುಗಳಿಗಿಂತಲೂ ಹೆಚ್ಚಿನ ಮಮತೆಯಿಂದ ಮುಸಲ್ಮಾನರನ್ನೇ ನೋಡುತ್ತಲಿದೆ. ಭಾರತವೇನೂ ಇಂದು ಕತ್ತಲೆಯಲ್ಲಿಲ್ಲ; ಇಲ್ಲಿ ಇರುವವರೂ, ವಿದೇಶಗಳಿಂದ ಇಲ್ಲಿಗೆ ಬರುವವರೂ ಕಣ್ಣುಕಟ್ಟಿಕೊಂಡೇನೂ ಇರುವುದಿಲ್ಲ. ಆದರೂ ಪಾಕಿಸ್ತಾನದ ಕಳ್ಳರಾಜಕಾರಣಿಗಳು, ತಮ್ಮ ತಿರುಬೊಬ್ಬೆಯನ್ನು ನಡೆಸಿಯೆ ಇರುವರು. ಸುಳ್ಳು ಎಷ್ಟುಕಾಲ ಗಟ್ಟಿಗೊಂಡು ನಿಂತೀತು?

ಮತಪರಿವರ್ತನೆಯ ಚಳವಳಿಯು ಭಾರತದಲ್ಲಿ ಬ್ರಿಟಿಷರ ಆಡಳಿತದ ಕಾಲದಿಂದಲೂ ನಡೆಯುತ್ತ ಬಂದಿದೆ. ಆಗ ಮುಸಲ್ಮಾನ್ ಪ್ರಚಾರಕರು ಹಿಂದುಗಳನ್ನು ಜಾತಿಗೆಡಿಸಿದಷ್ಟು,

ಇನ್ನಾರೂ ಕೆಡಿಸಿರಲಾರರು. ಆರ್ಯಸಮಾಜದ ಚಳವಳಿಯ ಮೂಲಕ ಆಗ ಉತ್ತರಭಾರತದಲ್ಲಿ, ಕೆಲವು ಜನ ಮುಸಲ್ಮಾನರನ್ನು ಆರ್ಯ ಸಮಾಜಿಗಳನ್ನಾಗಿ ಮಾಡಿಕೊಂಡಿರಬಹುದು. ಸಾಂಪ್ರದಾಯಿಕ ಹಿಂದೂಜನರು ಈ ಜಾತಿಗೆಡಿಸುವ ಕಾರ್ಯಕ್ಕೆ ಕೈಯಿಕ್ಕುವುದೇ ಇಲ್ಲ. ಹಿಂದೆಯೂ ಅವರು ಈ ಕೆಲಸವನ್ನು ಮಾಡಲಿಲ್ಲ; ಇಂದೆಯೂ ಮಾಡುತ್ತಿರುವುದಿಲ್ಲ. ಇದೊಂದು ಅವರ ದೋಷವೆಂಬುದು ಇತಿಹಾಸ ದಿಂದ ಸಿದ್ಧವಾಗಿದ್ದರೂ, ಈ ದೋಷವನ್ನೇ ದೊಡ್ಡ ಗುಣವೆಂದು ನಮ್ಮ ಸಾಂಪ್ರದಾಯಿಕ ಹಿಂದುಗಳು ತಿಳಿಯುತ್ತಾರೆ. ಹೀಗಿರುವಾಗ ಮುಸ-ಲ್ಮಾನರನ್ನು ಜಾತಿಗೆಡಿಸುವರಾರು ? ವೈಯಕ್ತಿಕ ಪರಿಸ್ಥಿತಿಯ ಕಾರಣದಿಂದ ಒಬ್ಬಿಬ್ಬರು ಮುಸಲ್ಮಾನರು ಹಿಂದುಗಳಾಗಿ ಪರಿವರ್ತಿತ ರಾಗಿದ್ದರೆ, ಅದೇ ಅವಧಿಯಲ್ಲಿ ಹತ್ತು ಜನ ಹಿಂದುಗಳು ಜಾತಿಗೆಟ್ಟು ಮುಸಲ್ಮಾನರಾಗಿದ್ದುದನ್ನೂ ನಾವು ನೋಡಬಹುದು. ಆದರೂ ಭಾರತದಲ್ಲಿಯ ಬಹುಸಂಖ್ಯಾಕ ಹಿಂದುಗಳು, ನಮ್ಮದ ಭಾರತ ಸರಕಾರದ ಧೋರಣೆಯನ್ನು ಮನವರಿಕೆ ಮಾಡಿಕೊಂಡು, ಧರ್ಮದ ಕೂಗನ್ನು ಎಬ್ಬಿಸದೆ ಸುಮ್ಮಗಿದ್ದಾರೆ. ಇದರ ದುರುಪಯೋಗವನ್ನು ಪಾಕಿಸ್ತಾನದ ಕುಟಿಲರಾಜಕಾರಣಿಗಳು ಮಾಡಿಕೊಳ್ಳತೊಡಗಿದ್ದಾರೆ.

ಧರ್ಮದ ವಿಚಾರದಲ್ಲಿ ಭಾರತಕ್ಕೆ ಸಂಪೂರ್ಣ ವಿರುದ್ಧವಾದ ಪರಿಸ್ಥಿತಿಯು ಪಾಕಿಸ್ತಾನದಲ್ಲಿದೆ. ಆ ರಾಜ್ಯವೇ ಮುಸಲ್ಮಾನರದೆಂದು ಹೇಳಿಕೊಳ್ಳಲು ಅಲ್ಲಿಯವರು ಹೆಮ್ಮೆಪಟ್ಟುಕೊಳ್ಳುವರು. ಅಲ್ಪ-ಸಂಖ್ಯಾಕರಾಗಿ ಇರುವ ವಿಧರ್ಮೀಯರಿಗೆ ಅಲ್ಲಿ ಧಾರ್ಮಿಕ ಸ್ವಾತಂ-ತ್ರ್ಯವೇ ಇಲ್ಲ. ಭಾರತದಲ್ಲಿಯ ಮುಸಲ್ಮಾನರು ತಮ್ಮ ಹಬ್ಬಗಳನ್ನು ಸಾರ್ವಜನಿಕವಾಗಿ ಬೇಕಾದ ಹಾಗೆ ಆಚರಿಸುವರು; ಧಾರ್ಮಿಕ ಮೆರೆ ವಣಿಗೆಗಳನ್ನು ತೆಗೆಯುವರು. ಯಾವ ಅಡೆ-ತಡೆಯೂ ಇಲ್ಲದೆ ಅವೆಲ್ಲ ಸಾಗುವವು. ಪಾಕಿಸ್ತಾನದಲ್ಲಿಯ ಹಿಂದುಗಳಿಗೆ ತಮ್ಮ ರಾಮೋತ್ಸವ ಕೃಷ್ಣೋತ್ಸವ, ದೇವೀ ಉತ್ಸವಗಳನ್ನು ಸಾರ್ವಜನಿಕವಾಗಿ ನಡೆಸಲು ಅವಕಾಶವಿದೆಯೆ? ಧಾರ್ಮಿಕ ಮೆರೆವಣಿಗೆಗಳನ್ನು ತೆಗೆಯಲು ಸಾಧ್ಯ ವಿದೆಯೆ ? ಹಾಗೇನಾದರೂ ಹಿಂದುಗಳು ಅಲ್ಲಿ ಬಹಿರಂಗವಾಗಿ ಜರುಗಿ ಸಿದರೆ, ಅಲ್ಲಿಯ ಮತಾಂಧರು ಕಾಳಗ-ಕಾದಾಟಕ್ಕೇ ಸಿದ್ಧರಾಗುವರು. ಜಾಫರುಲ್ಲಾಖಾನರಿಗೆ ಈ ಮಾತು ಗೊತ್ತಿಲ್ಲವೇ ? ಗೊತ್ತಿಲ್ಲವೆ ಏನು? ಪಾಕಿಸ್ತಾನದ ಮತಾಂಧರಿಂದ ತಮ್ಮ ಅಹಮ್ಮದಿಯಾ ಪಂಗಡಕ್ಕೆ ಬಿದ್ದ ಬೀಳುತ್ತಿರುವ ಏಟುಗಳೆಂತಹವೆಂಬುದನ್ನು ತಿಂದುಕೂಡ ಅರಿತಿರ ಬಹುದು. ಆದರೆ ಸ್ವಾರ್ಥವೃತ್ತಿಯೊಂದು ಇದೆಯಲ್ಲ! ಪಾಕಿಸ್ತಾನಿ ಗಳಿಗೆ ವಿದೇಶಮಂತ್ರಿಪದಕ್ಕಾಗಿ ಜಾಫರುಲ್ಲಾಖಾನರ ಅಗತ್ಯವಿದೆ; ಜಾಫರುಲ್ಲಾಖಾನರಿಗೆ ಮಂತ್ರಿಪದಾಧಿಕಾರದ ಲೋಭವಿದೆ. ಹಸಿದ ನಾಯಿ, ಹಳಸಿದ ಅನ್ನ ! ಎಲ್ಲವೂ ಗೊತ್ತಿದ್ದರೂ, ಜಾಫರುಲ್ಲಾಖಾನರು ಬಾಯಿಗೆ ಬಂದಂತೆ ಭಾರತವನ್ನು ಆಗಾಗ ಬೈದು, ಪಾಕಿಸ್ತಾನದ ಮತಾಂಧರ ಪ್ರೀತಿಯನ್ನು ಗಳಿಸಲು ಯತ್ನಿಸುತ್ತಿರುತ್ತಾರೆ !

ಮೊನ್ನೆ ಮೊನ್ನೆಯೆ, ಹೈದರಾಬಾದ್ ರಾಜ್ಯದಲ್ಲಿಯ ನೈಝಾಮಾ-ಬಾದ್ ಮತ್ತು ಗುಲಬುರ್ಗಾಗಳಲ್ಲಿ ನಡೆದಿರುವಂತಹ ಘಟನೆಗಳು ಪಾಕಿಸ್ತಾನದಲ್ಲಿ ನಡೆದಿದ್ದರೆ, ಅಲ್ಲಿಯ ಸರಕಾರವೂ ಜನರೂ ಕೂಡಿ ಆಕಾಶ-ಪಾತಾಳಗಳನ್ನು ಒಂದು ಮಾಡಿಬಿಡಬಹುದಾಗಿತ್ತು. ಪಾಕಿ-ಸ್ತಾನದಲ್ಲಿಯ ಧಾರ್ಮಿಕ ಕಟ್ಟಡದ ಮೇಲೆ, ಭಾರತ ರಾಷ್ಟ್ರೀಯ ಧ್ವಜ ವನ್ನು ಯಾರಾದರೂ ಅವಿವೇಕಿಗಳು ಹಾರಾಡಿಸಿದ್ದರೆ, ಪಾಕಿಸ್ತಾನ್ ಸರಕಾರ ಸುಮ್ಮನಿರುತ್ತಿದ್ದಿತೆ? ಅಪರಾಧಿಗಳನ್ನೂ ನಿರಪರಾಧಿಗಳನ್ನೂ ವಿಚಾರಮಾಡದೆ, ಉಗ್ರಶಿಕ್ಷೆಗೆ ಗುರಿಪಡಿಸಬಹುದಾಗಿತ್ತು. ಅಲ್ಲಿಯ ಮತಾಂಧಜನತೆಯು, ಅನ್ಯಧರ್ಮದ ಜನತೆಯಲ್ಲಿ ಕೊಲೆ-ಸುಲಿಗೆ ಗಳನ್ನೇ ನಡೆಸಬಹುದಾಗಿತ್ತು. ಆದೇ ಭಾರತಸರಕಾರದ ಮತ್ತು ಇಲ್ಲಿಯ ಜನತೆಯ ಸಮಂಜಸವಾದ ನ್ಯಾಯಬುದ್ಧಿಯನ್ನು ನೋಡಿರಿ. ಇಂತಹ ಕಿಡಿಗೇಡಿತನದ ಕಾರ್ಯಗಳಿಗೆಲ್ಲ ಪಾಕಿಸ್ತಾನಿಗಳ ಪ್ರಚೋದ-ನೆಯೇ ಕಾರಣವಾಗಿದ್ದರೂ, ಹಾಗೆಂದು ಇಲ್ಲಿಯವರು ಕೂಗೆಬ್ಬಿಸು ವಂತಿಲ್ಲ. ಅಪರಾಧಿಯನ್ನು ಹುಡುಕಿ ನ್ಯಾಯವಿಚಾರಣೆಯನ್ನು ಮಾಡಿ ಉಚಿತ ದಂಡನೆಯನ್ನು ವಿಧಿಸಬಹುದಲ್ಲದೆ, ನಿರಪರಾಧಿಗಳಿಗೆಂದೂ ಅವರು ಕೈಹಚ್ಚುವಂತಿಲ್ಲ !

ಭಾರತೀಯರ ಈ ಶಾಂತಿ-ಸಹನೆಯ ಮಾರ್ಗವು ಪಾಕಿಸ್ತಾನಿ ಗಳಿಗೆ ಹೇಡಿತನವೆಂದು ಕಾಣುತ್ತಿರಬಹುದು; ಇದನ್ನು ಕಂಡು ಅವರು ಒಳಗೊಳಗೇ ನಗುತ್ತಿರಬಹುದು. ಭಾರತ ಜನತೆಯ ಮತ್ತು ಸರಕಾರದ ಶಾಂತಿಯ ದಾರಿಯು, ಪಾಕಿಸ್ತಾನಿಗಳ ದುರಾರೋಪಣೆಗಳಿಗೆ ಇನ್ನಷ್ಟು ಪ್ರಚೋದಕವಾಗಿ ಪರಿಣಮಿಸುತ್ತಲಿದೆ.

ಪಾಕಿಸ್ತಾನಿಗಳು ನಡೆಯಿಸಿರುವ ಈ ಭಾರತವಿರೋಧಿ ಪ್ರಚಾ ರವು, ಭಾರತದ ಮುಸಲ್ಮಾನರಿಗೆ ಹಿತಮಾಡುವಂತಹದೇನೂ ಅಲ್ಲ. ನೈಝಾಮಾಬಾದ್ – ಗುಲ್‌ಬುರ್ಗಾಗಳಲ್ಲಿ ನಡೆದಂತಹ ಭಾರತ ವಿರೋಧಿ ಚಟುವಟಿಕೆಗಳನ್ನು–ಕಡೆಗಣಿಸುತ್ತ ನಡೆದರೆ ಅವರಿಗೆ ಯಾವ ತರದ ಸುಖವೂ ಇಲ್ಲ. ತಮ್ಮ ಗುಂಪಿನಲ್ಲಿಯ ಅವಿವೇಕಿಗಳಾದ ತಲೆ-ತಿರುಕ ತರುಣರೇ ಈ ಬಗೆಯ ಭಾರತದ್ರೋಹದ ಕಾರ್ಯಮಾಡುವ ರೆಂಬುದನ್ನು ಇವರು ಚೆನ್ನಾಗಿ ಬಲ್ಲರು. ಅಂತಹ ತಲೆತಿರುಕರು ತಲೆದೋರದಂತೆ ತಾವೂ ಎಚ್ಚರಿಕೆಯನ್ನು ವಹಿಸಿ ನಡೆಯಬೇಕಲ್ಲದೆ, ಮಾತುಮೀರಿ ವರ್ತಿಸುವ ಕಿಡಿಗೇಡಿಗಳನ್ನು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿಕೊಡಬೇಕು. ಹೀಗೆ ಮಾಡಲಿಲ್ಲವಾದರೆ ನಮ್ಮಲ್ಲಿಯ ಮುಸ ಲ್ಮಾನರ ರಾಷ್ಟ್ರನಿಷ್ಠೆಯ ಬಗೆಗೆ ಜನರಲ್ಲಿ ಸಂದೇಹವುಂಟಾಗಬಹುದು. ಹೀಗಾಗುವುದು ಮುಸಲ್ಮಾನ್ ಜನತೆಗೂ ಒಳ್ಳೆಯದಲ್ಲ; ಭಾರತ ರಾಷ್ಟ್ರಕ್ಕೂ ಹಿತಕಾರಿಯಲ್ಲ.

ಇಷ್ಟೆಲ್ಲ ಭಾರತ ವಿರೋಧಿ ಚೇಷ್ಟೆಗಳನ್ನು ನಡೆಯಿಸಿ, ಮತ್ತೆ ಭಾರತೀಯರನ್ನೇ ದೂರುತ್ತ ಹೊರಟಿರುವ ಪಾಕಿಸ್ತಾನಿಗಳ ತಿರುಗು-ಮುರುಗಾಟಕ್ಕೆ ಏನೆಂದು ಹೇಳಬೇಕು ? ಇದು ಯಾರನ್ನೂ ಬದುಕಿಸುವ ರಾಜಕಾರಣವಲ್ಲ !

ನಾಡ ನಡೆ

●

ಮತ್ತೆ ಆಂಧ್ರರ ಹಾವಳಿ ಆರಂಭವಾಗಿದೆ!

ಪಾಕಿಸ್ತಾನಿಗಳು ಭಾರತದ ಕಾಲಿಗೆ ತೊಡಕನ್ನು ಒಡ್ಡುತ್ತಿರುವಂತೆ, ಆಂಧ್ರರು ಕರ್ನಾಟಕದ ಕಾಲಿಗೆ ಆಗಾಗ ತೊಡಕನ್ನು ಒಡ್ಡುತ್ತಲಿದ್ದಾರೆ. ಪಾಕಿಸ್ತಾನಿಗಳಿಗೆ ಭಾರತದ ಅವಿಭಾಜ್ಯಭಾಗವಾದ ಕಾಶ್ಮೀರಬೇಕಾಗಿದೆ; ಹಾಗೆಯೆ ಆಂಧ್ರರಿಗೆ ಕರ್ನಾಟಕದ ಅವಿಭಾಜ್ಯ ಭಾಗವಾದ ಬಳ್ಳಾರಿಯ ಪ್ರದೇಶವೂ ನಗರವೂಬೇಕಾಗಿವೆ. ಪಾಕಿಸ್ತಾನಿಗಳಿಗೆ ಪಶ್ಚಿಮದ ರಾಜಕಾರಣಿಗಳು ಸಹಾನಭೂತಿಯನ್ನು ತೋರುತ್ತಿರುವಂತೆ, ಆಂಧ್ರರಿಗೂ ಕೇಂದ್ರಸರಕಾರದಲ್ಲಿಯ ಕೆಲವು ನಾಯಕರ ಸಹಾನುಭೂತಿಯಿದೆಯೆಂದು ತೋರುವುದು. ಹಾಗಿದೆಯೆಂತಲೇ ಕೇಂದ್ರದ ಗೃಹಮಂತ್ರಿಗಳಾದ ಮಾನ್ಯ ಕಟಜು ಅವರು, ಕರ್ನೂಲಿಗೆ ಬಂದಾಗ, ಆಂಧ್ರರಿಗೆ ಅನುಕೂಲವೆನಿಸುವಂತೆ ಮಾತುಗಳನ್ನು ಆಡಿದರು. ಅವರು ಗಟ್ಟಿಯಾಗಿ 'ಬಳ್ಳಾರಿಯ ಸಮಸ್ಯೆಯು ಈಗ ಸಮಸ್ಯೆಯಾಗಿಯೇ ಉಳಿದಿಲ್ಲ; ಈಗಾದ ನಿರ್ಣಯವನ್ನು ಕೇಂದ್ರ ಸರಕಾರ ಸಂಪೂರ್ಣವಾಗಿ ಒಪ್ಪಿಬಿಟ್ಟಿದೆ'—ಎಂದು ಹೇಳಿಬಿಟ್ಟಿದ್ದರೆ, ಬಳ್ಳಾರಿಯಲ್ಲಿ ತೆಲುಗರು ಮತ್ತೆ ಗೊಂದಲವನ್ನು ಎಬ್ಬಿಸುತ್ತಿರಲೇ ಇಲ್ಲ. ಆದರೆ ಶ್ರೀಮಾನ್ ಕಟಜೂ ಅವರ ಮೇಲೆ ಯಾವ ಆಂಧ್ರ ನಾಯಕರು ಹೇಗೆ ಮೋಡಿಮಂತ್ರ ಮಾಡಿದರೋ ಏನೋ—ಬಳ್ಳಾರಿಯ ಬಗೆಗೆ ಆಂಧ್ರರು ಆಯೋಗದೆದುರು ಪ್ರಯತ್ನ ಮಾಡಬಹುದೆಂದು ಹೇಳಿದರು.

ಮಾನ್ಯ ಕಟಜು ಅವರ ಆ ಮಾತನ್ನೆ ಮುಂದೆ ಮಾಡಿಕೊಂಡು ಒಳಗಿನ ಮತ್ತು ಹೊರಗಿನ ತೆಲುಗರು ಸೇರಿ, ಬಳ್ಳಾರಿಯಲ್ಲಿ ಒಂದು ವಿಧದ ಬಂಡನ್ನೇ ಹೂಡಿದ್ದಾರೆಂದು ಹೇಳಬಹುದು. ಅಲ್ಲಿ ಆಡಳಿತ ನಡೆಸಿದ ಮೈಸೂರು ಸರಕಾರವನ್ನೂ ಅಧಿಕಾರಿವರ್ಗವನ್ನೂ ತಮ್ಮ ಭಾಷೆಯಲ್ಲಿರುವ ಬೈಗುಳ ನುಡಿಗಳನ್ನೆಲ್ಲ ಬಳಸಿ ಬೈಯುತ್ತಿದ್ದಾರೆ. ಸಭೆ-ಸಮ್ಮೇಳನಗಳನ್ನು ಕೂಡಿಸಿ, ಕನ್ನಡಿಗರ ಮೇಲೆ ಕಾಲುಕೆದರಲು ತೆಲುಗರನ್ನೆಲ್ಲ ಕೆರಳಿಸುತ್ತಿದ್ದಾರೆ. ಬಳ್ಳಾರಿಯ ನಗರಸಭೆಯನ್ನಂತೂ 'ತೆಲುಗರ ಮೊಗಸಾಲೆ' ಯನ್ನಾಗಿ ಮಾಡಿದ್ದಾರೆ. ಮೈಸೂರು ಸರಕಾರವೂ ತೆಲುಗರಿಗೆ ಇಷ್ಟೇಕೆ ಅಂಜಿ ನಡೆಯುತ್ತಿದೆಯೋ ತಿಳಿಯದಂತಾಗಿದೆ. ಸ್ವಲ್ಪ ಗಂಡುತನವನ್ನದು ತೋರಿಸಿ, ಕನ್ನಡಿಗರನ್ನು ಸಂಘಟಿಸದೆ ಹೋದರೆ, ಬಳ್ಳಾರಿಯನ್ನು ಕರ್ನಾಟಕದಿಂದ ಕಳೆದ ಅಪಕೀರ್ತಿ ಮೈಸೂರು ಸರಕಾರಕ್ಕೆ ಬರುತ್ತದೆಯೆಂಬುದನ್ನು ಲಕ್ಷ್ಯದಲ್ಲಿರಿಸಿ, ಆಡಳಿತದಲ್ಲಿ ಸ್ವಲ್ಪ ಬಿಗುವನ್ನು ತಂದುಕೊಳ್ಳಬೇಕು.

ಬಳ್ಳಾರಿಯಲ್ಲಿಯ ಇಂದಿನ ಅಧಿಕಾರಿಗಳು.

ಬಳ್ಳಾರಿಯಲ್ಲೀಗ ಕನ್ನಡಿಗರಾದ ಮೈಸೂರಿಗರೇ ಅಧಿಕಾರಿಗಳಾಗಿ ಇರುವರು. ಸದ್ಯದ ಸಂದರ್ಭದಲ್ಲಿ ಅವರು ಮಾಡಬೇಕಾದ ಕಾರ್ಯವು ಮಹತ್ತ್ವದ್ದಾಗಿದೆ. ತೆಲುಗು ಅಧಿಕಾರಿಗಳು ಎಲ್ಲಿಯೇ ಇರಲಿ, ಅವರು ತಮ್ಮ ಪ್ರಾಂತಾಭಿಮಾನದ ಸಂರಕ್ಷಣೆಯ ಸಂದರ್ಭ ಬಂದಾಗ ಸ್ವಾರ್ಥವನ್ನು ಗಣಿಸದೆ ಕಾರ್ಯಪ್ರವೃತ್ತರಾಗುವರು, ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಬದುಕಿ ಬಾಳಿದ ಮೈಸೂರಿನ ಅಧಿಕಾರಿ ವರ್ಗಕ್ಕೆ, ಮೈಸೂರುರಾಜ್ಯದ ಹೊರಗಿರುವ ಭಾಷಾನುಗುಣ ರಾಜ್ಯನಿರ್ಮಿತಿ ಚಳವಳಿಯ ಅರ್ಥವೆ ಆದಂತಿಲ್ಲ. ಎಂತಲೇ ಅವರು ಬಳ್ಳಾರಿಯಲ್ಲಿ ಕೇವಲ ಸರಕಾರೀ ಅಧಿಕಾರಿಗಳಾಗಿ ಆಳುತ್ತಿದ್ದಾರೆ ಹೊರತು, ಅಲ್ಲಿಯ ಜನಮನದಲ್ಲಿ ಆತ್ಮೀಯಭಾವವನ್ನು ಹುಟ್ಟಿಸಿಲ್ಲ. 'ಮದ್ರಾಸ್ ರಾಜ್ಯದಲ್ಲಿ ನಾವು ಉಳಿದಿದ್ದರೇ ಹೆಚ್ಚು ಅನುಕೂಲವಿತ್ತು' ಎಂದಾಡುವ ಬಳ್ಳಾರಿಜಿಲ್ಲೆಯ ಜನಸಾಮಾನ್ಯರ ಆಡುವ ಮಾತುಗಳನ್ನು ಕೇಳಿದರೆ, ಕರ್ನಾಟಕದ ಅಭಿಮಾನಿಗಳಿಗೆ ಹೊಟ್ಟೆಯಲ್ಲಿ ಕಳವಳವಾಗದಿರದು.

ಪದ್ಧತಿಯಂತೆ ಮಂತ್ರಿಗಳು ಬಂದು ಅಲ್ಲಿ ಮೆರೆವಣಿಗೆ—ಮಾನಗಳನ್ನು ಮಾಡಿಸಿಕೊಂಡು ಹೋಗುತ್ತಾರೆ. ಜನತೆಯ ಯಾವ ಅವಶ್ಯಕ ಕೆಲಸವೂ ಸುಲಭವಾಗಿ ಬೇಗನೆ ಆಗದಂತೆ, ಬಳ್ಳಾರಿಯ ಇಂದಿನ ಅಧಿಕಾರಿ ವರ್ಗವು ಆಡಳಿತಕ್ರಮವನ್ನು ಇರಿಸಿದೆಯಂತೆ. ಲಂಚ-ರುಸುವತ್ತುಗಳ ವ್ಯವಸ್ಥೆ ಮೊದಲಿಗಿಂತ ಇಮ್ಮಡಿ-ಮುಮ್ಮಡಿಯಾಗಿ ಬೆಳೆದಿರುವುದೆಂದು, ಬಳ್ಳಾರಿಯ ಜನರೆಲ್ಲ ಹೇಳುತ್ತಿರುವರು. ಇಂತಹ ಉದಾಸೀನ ಆಡಳಿತ, ಜನತೆಗೆ ಹಿತಕಾರಿಯೆನಿಸೀತೆ? ಸಾಮಾನ್ಯ ಜನತೆ ಮಿಕ್ಕ ಯಾವ ಅಭಿಮಾನ-ಪ್ರೀತಿಗಳನ್ನೂ ಲೆಕ್ಕಿಸದೆ, ಕೇವಲ ಜೀವನಾನುಕೂಲತೆಯನ್ನೇ ಮುಖ್ಯವೆಂದು ಕಾಣುವುದು. ಜೀವನಾನುಕೂಲತೆ ಆಂಧ್ರರಾಜ್ಯಕ್ಕೆ ಸೇರುವುದರಿಂದ ಹೆಚ್ಚುವುದೆಂದು ಅದಕ್ಕೆನಿಸಿದಲ್ಲಿ, ಅದು ಅತ್ತಕಡೆಗೇ ತಿರುಗಿನಿಲ್ಲಬಹುದು. ಹಲವು ವಿಧದ ಆಮಿಷಗಳನ್ನು ಬಳ್ಳಾರಿಯ ಜನರೆದುರು ಆಂಧ್ರರು ಒಡ್ಡಿಯೇ ಒಡ್ಡುತ್ತಲಿದ್ದಾರೆ. ಇನ್ನೊಂದು ಮಾತೆಂದರೆ ಸದ್ಯದ ಅಧಿಕಾರಿಗಳಿಂದ ಬಳ್ಳಾರಿಯ ಕನ್ನಡಿಗರಿಗೆ ಸರಿಯಾದ ಪ್ರೋತ್ಸಾಹ-ಸಂರಕ್ಷಣೆಗಳು ದೊರೆಯುತ್ತಿಲ್ಲವಂತೆ. ಇಂತಹ ವಿಷಮಪರಿಸ್ಥಿತಿಯಲ್ಲಿಯೆ ಬಳ್ಳಾರಿಯಲ್ಲಿ ಆಂಧ್ರರ ಚಟುವಟಿಕೆಗಳು ಬಲವಾಗಿವೆ. ಈಗ ಬಳ್ಳಾರಿಯಲ್ಲಿಯ ಅಧಿಕಾರಿವರ್ಗ ಕರ್ನಾಟಕಾಭಿಮಾನದಿಂದ ಸ್ವಾರ್ಥವನ್ನು ಬದಿಗಿರಿಸಿ ನಡೆಯದೆ ಹೋದರೆ, ಕನ್ನಡಿಗರು ಇದುವರೆಗೆ ಮಾಡಿದ ಸಂಘಟನೆಯೆಲ್ಲ ಕಟ್ಟುಹೋಗುವ ಸಂಭವವಿದೆ. ಆಂಧ್ರರು ಸದ್ಯ ಬಳ್ಳಾರಿಯ ಮುಸಲ್ಮಾನರನ್ನು ತಮ್ಮ ಮೋಹದ ಬಲೆಯಲ್ಲಿ ಕೆಡಹುವ ಪ್ರಯತ್ನ ನಡೆಸಿದ್ದಾರೆ. ಆಂಧ್ರರಿಗೆ ಅದು ಸಾಧ್ಯವಾದರೆ, ಅದರ ಅಪಕೀರ್ತಿಯ ಹೊಣೆಯೆಲ್ಲ ಬಳ್ಳಾರಿಯ ಇಂದಿನ ಅಧಿಕಾರಿವರ್ಗದ ತಲೆಯ ಮೇಲೆ ಬರುವುದು ಖಂಡಿತವಾದ ಮಾತು!

ಬಳ್ಳಾರಿಯ ಕನ್ನಡಿಗರೇ!

ಇನ್ನೂ ಒಂದು ಪರೀಕ್ಷಾಪ್ರಸಂಗ ನಿಮ್ಮನ್ನು ಎದುರಿಸುವಂತೆ ಕಾಣುತ್ತದೆ. ಅದರಲ್ಲಿಯೂ ನೀವು ಉತ್ತೀರ್ಣರಾಗುವ ಸಾಮರ್ಥ್ಯ

ಇನ್ನಾರೂ ಕೆಡಿಸಿರಲಾರರು. ಆರ್ಯಸಮಾಜದ ಚಳವಳಿಯ ಮೂಲಕ ಆಗ ಉತ್ತರಭಾರತದಲ್ಲಿ, ಕೆಲವು ಜನ ಮುಸಲ್ಮಾನರನ್ನು ಆರ್ಯ ಸಮಾಜಿಗಳನ್ನಾಗಿ ಮಾಡಿಕೊಂಡಿರಬಹುದು. ಸಾಂಪ್ರದಾಯಿಕ ಹಿಂದೂಜನರು ಈ ಜಾತಿಗೆಡಿಸುವ ಕಾರ್ಯಕ್ಕೆ ಕೈಯಿಕ್ಕುವುದೇ ಇಲ್ಲ. ಹಿಂದೆಯೂ ಅವರು ಈ ಕೆಲಸವನ್ನು ಮಾಡಲಿಲ್ಲ; ಇಂದೆಯೂ ಮಾಡುತ್ತಿರುವುದಿಲ್ಲ. ಇದೊಂದು ಅವರ ದೋಷವೆಂಬುದು ಇತಿಹಾಸದಿಂದ ಸಿದ್ಧವಾಗಿದ್ದರೂ, ಈ ದೋಷವನ್ನೇ ದೊಡ್ಡ ಗುಣವೆಂದು ನಮ್ಮ ಸಾಂಪ್ರದಾಯಿಕ ಹಿಂದುಗಳು ತಿಳಿಯುತ್ತಾರೆ. ಹೀಗಿರುವಾಗ ಮುಸಲ್ಮಾನರನ್ನು ಜಾತಿಗೆಡಿಸುವವರಾರು ? ವೈಯಕ್ತಿಕ ಪರಿಸ್ಥಿತಿಯ ಕಾರಣದಿಂದ ಒಬ್ಬಿಬ್ಬರು ಮುಸಲ್ಮಾನರು ಹಿಂದುಗಳಾಗಿ ಪರಿವರ್ತಿತರಾಗಿದ್ದರೆ, ಅದೇ ಅವಧಿಯಲ್ಲಿ ಹತ್ತು ಜನ ಹಿಂದುಗಳು ಜಾತಿಗೆಟ್ಟು ಮುಸಲ್ಮಾನರಾಗಿದ್ದುದನ್ನೂ ನಾವು ನೋಡಬಹುದು. ಆದರೂ ಭಾರತದಲ್ಲಿಯ ಬಹುಸಂಖ್ಯಾಕ ಹಿಂದುಗಳು, ಸದ್ಯದ ಭಾರತ ಸರಕಾರದ ಧೋರಣೆಯನ್ನು ಮನವರಿಕೆ ಮಾಡಿಕೊಂಡು, ಧರ್ಮದ ಕೂಗನ್ನು ಎಬ್ಬಿಸದೆ ಸುಮ್ಮಗಿದ್ದಾರೆ. ಇದರ ದುರುಪಯೋಗವನ್ನು ಪಾಕಿಸ್ತಾನದ ಕುಟಿಲರಾಜಕಾರಣಿಗಳು ಮಾಡಿಕೊಳ್ಳತೊಡಗಿದ್ದಾರೆ.

ಧರ್ಮದ ವಿಚಾರದಲ್ಲಿ ಭಾರತಕ್ಕೆ ಸಂಪೂರ್ಣ ವಿರುದ್ಧವಾದ ಪರಿಸ್ಥಿತಿಯು ಪಾಕಿಸ್ತಾನದಲ್ಲಿದೆ. ಆ ರಾಜ್ಯವೇ ಮುಸಲ್ಮಾನರದೆಂದು ಹೇಳಿಕೊಳ್ಳಲು ಅಲ್ಲಿಯವರು ಹೆಮ್ಮೆಪಟ್ಟುಕೊಳ್ಳುವರು. ಅಲ್ಪಸಂಖ್ಯಾಕರಾಗಿ ಇರುವ ವಿಧರ್ಮೀಯರಿಗೆ ಅಲ್ಲಿ ಧಾರ್ಮಿಕ ಸ್ವಾತಂತ್ರ್ಯವೇ ಇಲ್ಲ. ಭಾರತದಲ್ಲಿಯ ಮುಸಲ್ಮಾನರು ತಮ್ಮ ಹಬ್ಬಗಳನ್ನು ಸಾರ್ವಜನಿಕವಾಗಿ ಬೇಕಾದ ಹಾಗೆ ಆಚರಿಸುವರು; ಧಾರ್ಮಿಕ ಮೆರವಣಿಗೆಗಳನ್ನು ತೆಗೆಯುವರು. ಯಾವ ಅಡೆ-ತಡೆಯೂ ಇಲ್ಲದೆ ಅವೆಲ್ಲ ಸಾಗುವವು. ಪಾಕಿಸ್ತಾನದಲ್ಲಿಯ ಹಿಂದುಗಳಿಗೆ ತಮ್ಮ ರಾಮೋತ್ಸವ ಕೃಷ್ಣೋತ್ಸವ, ದೇವೀ ಉತ್ಸವಗಳನ್ನು ಸಾರ್ವಜನಿಕವಾಗಿ ನಡೆಸಲು ಅವಕಾಶವಿದೆಯೆ ? ಧಾರ್ಮಿಕ ಮೆರವಣಿಗೆಗಳನ್ನು ತೆಗೆಯಲು ಸಾಧ್ಯವಿದೆಯೆ ? ಹಾಗೇನಾದರೂ ಹಿಂದುಗಳು ಅಲ್ಲಿ ಬಹಿರಂಗವಾಗಿ ಜರುಗಿಸಿದರೆ, ಅಲ್ಲಿಯ ಮತಾಂಧರು ಕಾಳಗ-ಕಾದಾಟಕ್ಕೇ ಸಿದ್ಧರಾಗುವರು. ಜಾಫರುಲ್ಲಾಖಾನರಿಗೆ ಈ ಮಾತು ಗೊತ್ತಿಲ್ಲವೇ ? ಗೊತ್ತಿಲ್ಲದೆ ಏನು? ಪಾಕಿಸ್ತಾನದ ಮತಾಂಧರಿಂದ ತಮ್ಮ ಅಹಮ್ಮದಿಯಾ ಪಂಗಡಕ್ಕೆ ಬಿದ್ದ ಬೀಳುತ್ತಿರುವ ಏಟುಗಳೆಂತಹವೆಂಬುದನ್ನು ತಿಂದುಕೂಡ ಅರಿತಿರಬಹುದು. ಆದರೆ ಸ್ವಾರ್ಥವೃತ್ತಿಯೊಂದು ಇದೆಯಲ್ಲ! ಪಾಕಿಸ್ತಾನಿಗಳಿಗೆ ವಿದೇಶಮಂತ್ರಿಪದಕ್ಕಾಗಿ ಜಾಫರುಲ್ಲಾಖಾನರ ಅಗತ್ಯವಿದೆ; ಜಾಫರುಲ್ಲಾಖಾನರಿಗೆ ಮಂತ್ರಿಪದಾಧಿಕಾರದ ಲೋಭವಿದೆ. ಹಸಿದ ನಾಯಿ, ಹಳಸಿದ ಅನ್ನ ! ಎಲ್ಲವೂ ಗೊತ್ತಿದ್ದರೂ, ಜಾಫರುಲ್ಲಾಖಾನರು ಬಾಯಿಗೆ ಬಂದಂತೆ ಭಾರತವನ್ನು ಆಗಾಗ ಬೈದು, ಪಾಕಿಸ್ತಾನದ ಮತಾಂಧರ ಪ್ರೀತಿಯನ್ನು ಗಳಿಸಲು ಯತ್ನಿಸುತ್ತಿರುತ್ತಾರೆ !

ಮೊನ್ನೆ ಮೊನ್ನೆಯೆ, ಹೈದರಾಬಾದ್ ರಾಜ್ಯದಲ್ಲಿಯ ನೈಝಾಮಾಬಾದ್ ಮತ್ತು ಗುಲಬುರ್ಗಾಗಳಲ್ಲಿ ನಡೆದಿರುವಂತಹ ಘಟನೆಗಳು ಪಾಕಿಸ್ತಾನದಲ್ಲಿ ನಡೆದಿದ್ದರೆ, ಅಲ್ಲಿಯ ಸರಕಾರವೂ ಜನರೂ ಕೂಡಿ ಆಕಾಶ-ಪಾತಾಳಗಳನ್ನು ಒಂದು ಮಾಡಿಬಿಡಬಹುದಾಗಿತ್ತು. ಪಾಕಿಸ್ತಾನದಲ್ಲಿಯ ಧಾರ್ಮಿಕ ಕಟ್ಟಡದ ಮೇಲೆ, ಭಾರತ ರಾಷ್ಟ್ರೀಯ ಧ್ವಜವನ್ನು ಯಾರಾದರೂ ಅವಿವೇಕಿಗಳು ಹಾರಾಡಿಸಿದ್ದರೆ, ಪಾಕಿಸ್ತಾನ್ ಸರಕಾರ ಸುಮ್ಮನಿರುತ್ತಿದ್ದಿತೆ ? ಅಪರಾಧಿಗಳನ್ನೂ ನಿರಪರಾಧಿಗಳನ್ನೂ ವಿಚಾರಮಾಡದೆ, ಉಗ್ರಶಿಕ್ಷೆಗೆ ಗುರಿಪಡಿಸಬಹುದಾಗಿತ್ತು. ಅಲ್ಲಿಯ ಮತಾಂಧಜನತೆಯು, ಅನ್ಯಧರ್ಮದ ಜನತೆಯಲ್ಲಿ ಕೊಲೆ-ಸುಲಿಗೆಗಳನ್ನೇ ನಡೆಸಬಹುದಾಗಿತ್ತು. ಆದೇ ಭಾರತಸರಕಾರದ ಮತ್ತು ಇಲ್ಲಿಯ ಜನತೆಯ ಸಮಂಜಸವಾದ ನ್ಯಾಯಬುದ್ಧಿಯನ್ನು ನೋಡಿರಿ. ಇಂತಹ ಕಿಡಿಗೇಡಿತನದ ಕಾರ್ಯಗಳಿಗೆಲ್ಲ ಪಾಕಿಸ್ತಾನಿಗಳ ಪ್ರಚೋದನೆಯೇ ಕಾರಣವಾಗಿದ್ದರೂ, ಹಾಗೆಂದು ಇಲ್ಲಿಯವರು ಕೂಗೆಬ್ಬಿಸುವಂತಿಲ್ಲ. ಅಪರಾಧಿಯನ್ನು ಹುಡುಕಿ ನ್ಯಾಯವಿಚಾರಣೆಯನ್ನು ಮಾಡಿ ಉಚಿತ ದಂಡನೆಯನ್ನು ವಿಧಿಸಬಹುದಲ್ಲದೆ, ನಿರಪರಾಧಿಗಳಿಗೆಂದೂ ಅವರು ಕೈಹಚ್ಚುವಂತಿಲ್ಲ !

ಭಾರತೀಯರ ಈ ಶಾಂತಿ-ಸಹನೆಯ ಮಾರ್ಗವು ಪಾಕಿಸ್ತಾನಿಗಳಿಗೆ ಹೇಡಿತನವೆಂದು ಕಾಣುತ್ತಿರಬಹುದು; ಇದನ್ನು ಕಂಡು ಅವರು ಒಳಗೊಳಗೇ ನಗುತ್ತಿರಬಹುದು. ಭಾರತ ಜನತೆಯ ಮತ್ತು ಸರಕಾರದ ಶಾಂತಿಯ ದಾರಿಯು, ಪಾಕಿಸ್ತಾನಿಗಳ ದುರಾರೋಪಣೆಗಳಿಗೆ ಇನ್ನಷ್ಟು ಪ್ರಚೋದಕವಾಗಿ ಪರಿಣಮಿಸುತ್ತಲಿದೆ.

ಪಾಕಿಸ್ತಾನಿಗಳು ನಡೆಯಿಸಿರುವ ಈ ಭಾರತವಿರೋಧಿ ಪ್ರಚಾರವು, ಭಾರತದ ಮುಸಲ್ಮಾನರಿಗೆ ಹಿತಮಾಡುವಂತಹದೇನೂ ಅಲ್ಲ. ನೈಝಾಮಾಬಾದ್ – ಗುಲ್‌ಬುರ್ಗಾಗಳಲ್ಲಿ ನಡೆದಂತಹ ಭಾರತ ವಿರೋಧಿ ಚಟುವಟಿಕೆಗಳನ್ನು–ಕಡೆಗಣಿಸುತ್ತ ನಡೆದರೆ ಅವರಿಗೆ ಯಾವ ತರದ ಸುಖವೂ ಇಲ್ಲ. ತಮ್ಮ ಗುಂಪಿನಲ್ಲಿಯ ಅವಿವೇಕಿಗಳಾದ ತಲೆತಿರುಕ ತರುಣರೇ ಈ ಬಗೆಯ ಭಾರತದ್ರೋಹದ ಕಾರ್ಯಮಾಡುವರೆಂಬುದನ್ನು ಇವರು ಚೆನ್ನಾಗಿ ಬಲ್ಲರು. ಅಂತಹ ತಲೆತಿರುಕರು ತಲೆದೋರದಂತೆ ತಾವೂ ಎಚ್ಚರಿಕೆಯನ್ನು ವಹಿಸಿ ನಡೆಯಬೇಕಲ್ಲದೆ, ಮಾತುಮೀರಿ ವರ್ತಿಸುವ ಕಿಡಿಗೇಡಿಗಳನ್ನು ಹಿಡಿದು ಅಧಿಕಾರಿಗಳಿಗೆ ಒಪ್ಪಿಸಿಕೊಡಬೇಕು. ಹೀಗೆ ಮಾಡಲಿಲ್ಲವಾದರೆ ನಮ್ಮಲ್ಲಿಯ ಮುಸಲ್ಮಾನರ ರಾಷ್ಟ್ರನಿಷ್ಠೆಯ ಬಗೆಗೆ ಜನರಲ್ಲಿ ಸಂದೇಹವುಂಟಾಗಬಹುದು. ಹೀಗಾಗುವುದು ಮುಸಲ್ಮಾನ್ ಜನತೆಗೂ ಒಳ್ಳೆಯದಲ್ಲ; ಭಾರತ ರಾಷ್ಟ್ರಕ್ಕೂ ಹಿತಕಾರಿಯಲ್ಲ.

ಇಷ್ಟೆಲ್ಲ ಭಾರತ ವಿರೋಧಿ ಚೇಷ್ಟೆಗಳನ್ನು ನಡೆಯಿಸಿ, ಮತ್ತೆ ಭಾರತೀಯರನ್ನೇ ದೂರುತ್ತ ಹೊರಟಿರುವ ಪಾಕಿಸ್ತಾನಿಗಳ ತಿರುಗುಮುರುಗಾಟಕ್ಕೆ ಏನೆಂದು ಹೇಳಬೇಕು ? ಇದು ಯಾರನ್ನೂ ಬದುಕಿಸುವ ರಾಜಕಾರಣವಲ್ಲ !

ನಾಡ ನಡೆ

●

ಮತ್ತೆ ಆಂಧ್ರರ ಹಾವಳಿ ಆರಂಭವಾಗಿದೆ!

ಪಾಕಿಸ್ತಾನಿಗಳು ಭಾರತದ ಕಾಲಿಗೆ ತೊಡಕನ್ನು ಒಡ್ಡುತ್ತಿರುವಂತೆ, ಆಂಧ್ರರು ಕರ್ನಾಟಕದ ಕಾಲಿಗೆ ಆಗಾಗ ತೊಡಕನ್ನು ಒಡ್ಡುತ್ತಲಿದ್ದಾರೆ. ಪಾಕಿಸ್ತಾನಿಗಳಿಗೆ ಭಾರತದ ಅವಿಭಾಜ್ಯಭಾಗವಾದ ಕಾಶ್ಮೀರಬೇಕಾಗಿದೆ; ಹಾಗೆಯೆ ಆಂಧ್ರರಿಗೆ ಕರ್ನಾಟಕದ ಅವಿಭಾಜ್ಯ ಭಾಗವಾದ ಬಳ್ಳಾರಿಯ ಪ್ರದೇಶವೂ ನಗರವೂಬೇಕಾಗಿವೆ. ಪಾಕಿಸ್ತಾನಿಗಳಿಗೆ ಪಶ್ಚಿಮದ ರಾಜಕಾರಣಿಗಳು ಸಹಾನುಭೂತಿಯನ್ನು ತೋರುತ್ತಿರುವಂತೆ, ಆಂಧ್ರರಿಗೂ ಕೇಂದ್ರಸರಕಾರದಲ್ಲಿಯ ಕೆಲವು ನಾಯಕರ ಸಹಾನುಭೂತಿಯಿದೆಯೆಂದು ತೋರುವುದು. ಹಾಗಿದೆಯೆಂತಲೇ ಕೇಂದ್ರದ ಗೃಹಮಂತ್ರಿಗಳಾದ ಮಾನ್ಯ ಕಟಜು ಅವರು, ಕರ್ನೂಲಿಗೆ ಬಂದಾಗ, ಆಂಧ್ರರಿಗೆ ಅನುಕೂಲವೆನಿಸುವಂತೆ ಮಾತುಗಳನ್ನು ಆಡಿದರು. ಅವರು ಗಟ್ಟಿಮುಟ್ಟಾಗಿ 'ಬಳ್ಳಾರಿಯ ಸಮಸ್ಯೆಯು ಈಗ ಸಮಸ್ಯೆಯಾಗಿಯೇ ಉಳಿದಿಲ್ಲ; ಈಗಾದ ನಿರ್ಣಯವನ್ನು ಕೇಂದ್ರ ಸರಕಾರ ಸಂಪೂರ್ಣವಾಗಿ ಒಪ್ಪಿಬಿಟ್ಟಿದೆ'—ಎಂದು ಹೇಳಿಬಿಟ್ಟಿದ್ದರೆ, ಬಳ್ಳಾರಿಯಲ್ಲಿ ತೆಲುಗರು ಮತ್ತೆ ಗೊಂದಲವನ್ನು ಎಬ್ಬಿಸುತ್ತಿರಲೇ ಇಲ್ಲ. ಆದರೆ ಶ್ರೀಮಾನ್ ಕಟಜೂ ಅವರ ಮೇಲೆ ಯಾವ ಆಂಧ್ರ ನಾಯಕರು ಹೇಗೆ ಮೋಡಿಮಂತ್ರ ಮಾಡಿದರೋ ಏನೋ—ಬಳ್ಳಾರಿಯ ಬಗೆಗೆ ಆಂಧ್ರರು ಆಯೋಗದೆದುರು ಪ್ರಯತ್ನ ಮಾಡಬಹುದೆಂದು ಹೇಳಿದರು.

ಮಾನ್ಯ ಕಟಜು ಅವರ ಆ ಮಾತನ್ನೆ ಮುಂದೆ ಮಾಡಿಕೊಂಡು ಒಳಗಿನ ಮತ್ತು ಹೊರಗಿನ ತೆಲುಗರು ಸೇರಿ, ಬಳ್ಳಾರಿಯಲ್ಲಿ ಒಂದು ವಿಧದ ಬಂಡನ್ನೇ ಹೂಡಿದ್ದಾರೆಂದು ಹೇಳಬಹುದು. ಅಲ್ಲಿ ಆಡಳಿತ ನಡೆಸಿದ ಮೈಸೂರು ಸರಕಾರವನ್ನೂ ಅಧಿಕಾರಿವರ್ಗವನ್ನೂ ತಮ್ಮ ಭಾಷೆಯಲ್ಲಿರುವ ಬೈಗುಳ ನುಡಿಗಳನ್ನೆಲ್ಲ ಬಳಸಿ ಬೈಯುತ್ತಿದ್ದಾರೆ. ಸಭೆ-ಸಮ್ಮೇಳನಗಳನ್ನು ಕೂಡಿಸಿ, ಕನ್ನಡಿಗರ ಮೇಲೆ ಕಾಲುಕೆದರಲು ತೆಲುಗರನ್ನೆಲ್ಲ ಕೆರಳಿಸುತ್ತಿದ್ದಾರೆ. ಬಳ್ಳಾರಿಯ ನಗರಸಭೆಯನ್ನಂತೂ 'ತೆಲುಗರ ಮೊಗಲಾಯಿ'ಯನ್ನಾಗಿ ಮಾಡಿದ್ದಾರೆ. ಮೈಸೂರು ಸರಕಾರವೂ ತೆಲುಗರಿಗೆ ಇಷ್ಟೇಕೆ ಅಂಜಿ ನಡೆಯುತ್ತಿದೆಯೋ ತಿಳಿಯದಂತಾಗಿದೆ. ಸ್ವಲ್ಪು ಗಂಡುತನವನ್ನದು ತೋರಿಸಿ, ಕನ್ನಡಿಗರನ್ನು ಸಂಘಟಿಸದೆ ಹೋದರೆ, ಬಳ್ಳಾರಿಯನ್ನು ಕರ್ನಾಟಕದಿಂದ ಕಳೆವ ಅಪಕೀರ್ತಿ ಮೈಸೂರು ಸರಕಾರಕ್ಕೆ ಬರುತ್ತದೆಯೆಂಬುದನ್ನು ಲಕ್ಷ್ಯದಲ್ಲಿರಿಸಿ, ಆಡಳಿತದಲ್ಲಿ ಸ್ವಲ್ಪ ಬಿಗುವನ್ನು ತಂದುಕೊಳ್ಳಬೇಕು.

ಬಳ್ಳಾರಿಯಲ್ಲಿಯ ಇಂದಿನ ಅಧಿಕಾರಿಗಳು.

ಬಳ್ಳಾರಿಯಲ್ಲೀಗ ಕನ್ನಡಿಗರಾದ ಮೈಸೂರಿಗರೇ ಅಧಿಕಾರಿಗಳಾಗಿ ಇರುವರು. ಸದ್ಯದ ಸಂದರ್ಭದಲ್ಲಿ ಅವರು ಮಾಡಬೇಕಾದ ಕಾರ್ಯವು ಮಹತ್ತ್ವದ್ದಾಗಿದೆ. ತೆಲುಗು ಅಧಿಕಾರಿಗಳು ಎಲ್ಲಿಯೇ ಇರಲಿ, ಅವರು ತಮ್ಮ ಪ್ರಾಂತಾಭಿಮಾನದ ಸಂರಕ್ಷಣೆಯ ಸಂದರ್ಭ ಬಂದಾಗ ಸ್ವಾರ್ಥವನ್ನು ಗಣಿಸದೆ ಕಾರ್ಯಪ್ರವೃತ್ತರಾಗುವರು, ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ಬದುಕಿ ಬಾಳಿದ ಮೈಸೂರಿನ ಅಧಿಕಾರಿವರ್ಗಕ್ಕೆ, ಮೈಸೂರುರಾಜ್ಯದ ಹೊರಗಿರುವ ಭಾಷಾನುಗುಣ ರಾಜ್ಯನಿರ್ಮಿತಿ ಚಳವಳಿಯ ಅರ್ಥವೆ ಆದಂತಿಲ್ಲ. ಎಂತಲೇ ಅವರು ಬಳ್ಳಾರಿಯಲ್ಲಿ ಕೇವಲ ಸರಕಾರೀ ಅಧಿಕಾರಿಗಳಾಗಿ ಆಳುತ್ತಿದ್ದಾರೆ ಹೊರತು, ಅಲ್ಲಿಯ ಜನಮನದಲ್ಲಿ ಆತ್ಮೀಯಭಾವವನ್ನು ಹುಟ್ಟಿಸಿಲ್ಲ. 'ಮದ್ರಾಸ್ ರಾಜ್ಯದಲ್ಲಿ ನಾವು ಉಳಿದಿದ್ದರೇ ಹೆಚ್ಚು ಅನುಕೂಲವಿತ್ತು' ಎಂದಾಡುವ ಬಳ್ಳಾರಿಜಿಲ್ಲೆಯ ಜನಸಾಮಾನ್ಯರ ಆಡುವ ಮಾತುಗಳನ್ನು ಕೇಳಿದರೆ, ಕರ್ನಾಟಕದ ಅಭಿಮಾನಿಗಳಿಗೆ ಹೊಟ್ಟೆಯಲ್ಲಿ ಕಳವಳವಾಗದಿರದು.

ಪದ್ಧತಿಯಂತೆ ಮಂತ್ರಿಗಳು ಬಂದು ಅಲ್ಲಿ ಮೆರೆವಣಿಗೆ–ಮಾನಗಳನ್ನು ಮಾಡಿಸಿಕೊಂಡು ಹೋಗುತ್ತಾರೆ. ಜನತೆಯ ಯಾವ ಅವಶ್ಯಕ ಕೆಲಸವೂ ಸುಲಭವಾಗಿ ಬೇಗನೆ ಆಗದಂತೆ, ಬಳ್ಳಾರಿಯ ಇಂದಿನ ಅಧಿಕಾರಿ ವರ್ಗವು ಆಡಳಿತಕ್ರಮವನ್ನು ಇರಿಸಿದೆಯಂತೆ. ಲಂಚ-ರುಸುವತ್ತುಗಳ ವ್ಯವಸ್ಥೆ ಮೊದಲಿಗಿಂತ ಇಮ್ಮಡಿ-ಮುಮ್ಮಡಿಯಾಗಿ ಬೆಳೆದಿರುವುದೆಂದು, ಬಳ್ಳಾರಿಯ ಜನರೆಲ್ಲ ಹೇಳುತ್ತಿರುವರು. ಇಂತಹ ಉದಾಸೀನ ಆಡಳಿತ, ಜನತೆಗೆ ಹಿತಕಾರಿಯೆನಿಸೀತೆ? ಸಾಮಾನ್ಯ ಜನತೆ ಮಿಕ್ಕ ಯಾವ ಅಭಿಮಾನ-ಪ್ರೀತಿಗಳನ್ನೂ ಲೆಕ್ಕಿಸದೆ, ಕೇವಲ ಜೀವನಾನುಕೂಲತೆಯನ್ನೇ ಮುಖ್ಯವೆಂದು ಕಾಣುವುದು. ಜೀವನಾನುಕೂಲತೆ ಆಂಧ್ರರಾಜ್ಯಕ್ಕೆ ಸೇರುವುದರಿಂದ ಹೆಚ್ಚುವುದೆಂದು ಅದಕ್ಕೆನಿಸಿದಲ್ಲಿ, ಅದು ಅತ್ತಕಡೆಗೇ ತಿರುಗಿನಿಲ್ಲಬಹುದು. ಹಲವು ವಿಧದ ಆಮಿಷಗಳನ್ನು ಬಳ್ಳಾರಿಯ ಜನರೆದುರು ಆಂಧ್ರರು ಒಡ್ಡಿಯೇ ಒಡ್ಡುತ್ತಲಿದ್ದಾರೆ. ಇನ್ನೊಂದು ಮಾತೆಂದರೆ ಸದ್ಯದ ಅಧಿಕಾರಿಗಳಿಂದ ಬಳ್ಳಾರಿಯ ಕನ್ನಡಿಗರಿಗೆ ಸರಿಯಾದ ಪ್ರೋತ್ಸಾಹ-ಸಂರಕ್ಷಣೆಗಳು ದೊರೆಯುತ್ತಿಲ್ಲವಂತೆ. ಇಂತಹ ವಿಷಮಪರಿಸ್ಥಿತಿಯಲ್ಲಿಯೆ ಬಳ್ಳಾರಿಯಲ್ಲಿ ಆಂಧ್ರರ ಚಟುವಟಿಕೆಗಳು ಬಲವಾಗಿವೆ. ಈಗ ಬಳ್ಳಾರಿಯಲ್ಲಿಯ ಅಧಿಕಾರಿವರ್ಗ ಕರ್ನಾಟಕಾಭಿಮಾನದಿಂದ ಸ್ವಾರ್ಥವನ್ನು ಬದಿಗಿರಿಸಿ ನಡೆಯದೆ ಹೋದರೆ, ಕನ್ನಡಿಗರು ಇದುವರೆಗೆ ಮಾಡಿದ ಸಂಘಟನೆಯೆಲ್ಲ ಕೆಟ್ಟುಹೋಗುವ ಸಂಭವವಿದೆ. ಆಂಧ್ರರು ಸದ್ಯ ಬಳ್ಳಾರಿಯ ಮುಸಲ್ಮಾನರನ್ನು ತಮ್ಮ ಮೋಹದ ಬಲೆಯಲ್ಲಿ ಕೆಡಹುವ ಪ್ರಯತ್ನ ನಡೆಸಿದ್ದಾರೆ. ಆಂಧ್ರರಿಗೆ ಅದು ಸಾಧ್ಯವಾದರೆ, ಅದರ ಅಪಕೀರ್ತಿಯ ಹೊಣೆಯೆಲ್ಲ ಬಳ್ಳಾರಿಯ ಇಂದಿನ ಅಧಿಕಾರಿವರ್ಗದ ತಲೆಯ ಮೇಲೆ ಬರುವುದು ಖಂಡಿತವಾದ ಮಾತು!

ಬಳ್ಳಾರಿಯ ಕನ್ನಡಿಗರೇ!

ಇನ್ನೂ ಒಂದು ಪರೀಕ್ಷಾಪ್ರಸಂಗ ನಿಮ್ಮನ್ನು ಎದುರಿಸುವಂತೆ ಕಾಣುತ್ತದೆ. ಆದರಲ್ಲಿಯೂ ನೀವು ಉತ್ತೀರ್ಣರಾಗುವ ಸಾಮರ್ಥ್ಯ

ವನ್ನು ತೆಂದುಕೊಳ್ಳಬೇಕು. ಇಂದು ಮೈಸೂರು ರಾಜ್ಯದಲ್ಲಿಯ ಅಧಿಕಾರ ಮೋಹಾಂಧನಾಯಕರು, ಕರ್ನಾಟಕ ಏಕೀಕರಣಕ್ಕೆ ಎಷ್ಟೇ ವಿರೋಧಿಗಳಾಗಿ ನಿಂತಿರಲಿ; ಅಖಿಲ ಕನ್ನಡಿಗರ ಹೃದಯವನ್ನು ಮಿಡಿಯುತ್ತಿರುವ ಅಖಂಡ ಕರ್ನಾಟಕದ ನಿರ್ಮಿತಿಯು ಇಂದಿಲ್ಲ ನಾಳೆ ಆಗಿಯೆ ಆಗುವುದು. ಆಗ ಬಳ್ಳಾರಿ ನಗರವೂ ಅದರ ಸುತ್ತಮುತ್ತಣ ಪ್ರದೇಶವೂ ಕನ್ನಡಿಗರದಾಗಿಯೆ ಕನ್ನಡಿಗರ ಅಧಿಕಾರದಲ್ಲಿಯೇ ಇವ್ವರೆ ಒಳ್ಳೆಯದು ಅದನ್ನು ಬಿಟ್ಟು ಕೇವಲ ಸದ್ಯದ ಹಿತವನ್ನು ಲಕ್ಷಿಸಿ, ಆಂಧ್ರದ ಕಡೆಗೇ ಸೇರಬಿಡೋಣವೆಂದು ಮನಸ್ಸು ಮಾಡಿದರೆ, ಅಖಂಡ ಕರ್ನಾಟಕದ ಭವಿಷ್ಯದ ಮೇಲೆ ಕೊಡಲಿಯೇಟನ್ನೇ ಹಾಕಿದಂತಾಗುವುದು.

ಬಳ್ಳಾರಿಯ ಕನ್ನಡ ನಾಯಕರಿಗೆ ಇನ್ನೊಬ್ಬರ ಉಪದೇಶವೇನೂ ಬೇಕಾಗಿಲ್ಲ. ಅವರ ಹೃದಯ ಹದಿನಾರಾಣೆ ಕನ್ನಡದ ಅಭಿಮಾನ-ಪ್ರೀತಿಗಳಿಂದ ತುಂಬಿದೆ. ಎಂತಲೇ ಅವರು ಪಟ್ಟ ಶ್ರಮ, ಎರಡು ಮೂರು ಬಿಕ್ಕಟ್ಟಿನ ಸಂದರ್ಭಗಳಲ್ಲಿಯೂ ಬಳ್ಳಾರಿಯನ್ನು ಕರ್ನಾಟಕಕ್ಕೆ ಉಳಿಸಿಕೊಟ್ಟಿದೆ. ಈಗಲೂ ಪ್ರೀತಿ-ಅಭಿಮಾನಗಳಿಂದ ಅವರು ಕನ್ನಡಿಗರಲ್ಲಿ ಸರಿಯಾದ ಸಂಘಟನೆಯನ್ನು ಉಂಟುಮಾಡಿ ಸಂರಕ್ಷಿಸುವರೆಂಬುದರಲ್ಲಿ ಸಂದೇಹವಿಲ್ಲ.

ಮುಸಲ್ಮಾನರ ಮನವೊಲಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ನಡೆಸಿದ ಆಂಧ್ರರ ಕಾರಸ್ಥಾನವನ್ನು — ಈ ಮೊದಲು ಹುಸಿಗೊಳಿಸಿಬಿಟ್ಟಂತೆ — ಬಳ್ಳಾರಿಯ ಮುಸಲ್ಮಾನರು ಈಗಲೂ ಖಂಡಿತವಾಗಿ ಪ್ರತಿಭಟಿಸಿ ಹುಸಿಗೊಳಿಸಬೇಕು. 'ಕೇವಲ ಸಂಧಿಸಾಧಕರು' 'ಸ್ವಾರ್ಥವೊಂದನ್ನೇ ನೋಡುವವರ.' 'ದೇಶಾಭಿಮಾನಕ್ಕೆ ಬೆಲೆಯನ್ನೇ ಕೊಡದವರು' ಎಂಬ ತೆಗಳಿಕೆಗೆ ಬಳ್ಳಾರಿಯ ಮುಸಲ್ಮಾನರು ಗುರಿಯಾಗಬಾರದು. ಮಿಶ್ರಾ ಸಮಿತಿಯ ಕಾಲದಲ್ಲಿ ತೋರಿಸಿದ ಕರ್ನಾಟಕಾಭಿಮಾನವನ್ನು ಈಗಲೂ ತೋರಿಸುವುದಕ್ಕೆ ಸಿದ್ಧರಾಗಬೇಕು. ಕೇಂದ್ರಸರಕಾರಕ್ಕೆ ಸಮಂಜಸತನವು ತಲೆದೋರಿ, ಆಂಧ್ರರ ಕರ್ನಾಟಕ ವಿರೋಧಕ ಚಟುವಟಿಕೆಯನ್ನು ತಡೆಹಿಡಿದುಬಿಟ್ಟರೆ ಒಳ್ಳೆಯದೆ ಆಯಿತು; ಇಲ್ಲವಾದರೆ ಇನ್ನೊಂದು ಅಗ್ನಿಪರೀಕ್ಷೆಗೆ ಅಣಿಗೊಳ್ಳಬೇಕಾದುದು ಬಳ್ಳಾರಿಯ ಕನ್ನಡಿಗರ ಕರ್ತವ್ಯವೇ ಆಗಿದೆ.

ಗೋವಾಂತಕದ ಗಹನ ಸಮಸ್ಯೆ

ಭಾರತದ ಪ್ರಧಾನಮಂತ್ರಿಗಳು, 'ಭಾರತದಲ್ಲಿಯ ವಿದೇಶೀಯರ ಆಡಳಿತವನ್ನು ನಾವೆಂದೂ ಸಹಿಸಲಾರೆವು!' ಎಂದು ಆಗಾಗ ಮಾತನಾಡುತ್ತಾರೆ. ಪೋರ್ತುಗಾಲಿನ ಪ್ರಧಾನಮಂತ್ರಿ ಸಾಲಝಾರರು 'ಪೋರ್ತುಗೀಜ್ ಭಾರತಪ್ರದೇಶವನ್ನು ನಾವೆಂದೂ ಬಿಡಲಾರೆವು.!' ಎಂದು ನಿತ್ಯವೂ ಗರ್ಜಿಸುತ್ತಿದ್ದಾರೆ. ಪೋರ್ತುಗಾಲಿನ ಪ್ರಧಾನಮಂತ್ರಿಗಳ ಮಾತು ನಿಜವೇ ಇದೆ; ಏಕೆಂದರೆ ಭಾರತದಲ್ಲಿಯ ಪ್ರದೇಶಗಳು ಅವರ ಕಡೆಗೆ ಈಗ ಇದ್ದೇ ಇವೆ; ಅಲ್ಲದೆ ಭಾರತದಿಂದ ಏನಾದರೂ ವಿರೋಧವುಂಟಾದುದು ಕಂಡುಬಂದರೆ,

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಅದನ್ನು ಪ್ರತಿರೋಧಿಸುವುದಕ್ಕಾಗಿ, ಸೈನ್ಯವನ್ನೂ ಶಸ್ತ್ರಸಂಗ್ರ ಗಳನ್ನೂ ಬಲಪಡಿಸುತ್ತಿದ್ದಾರೆ.

ನಮ್ಮ ಭಾರತ ಮಂತ್ರಿಗಳಿಗೆ ಪೋರ್ತುಗೀಜ್ ಭಾರತ ಪ್ರದೇ ವೇನೋ ಬೇಕಾಗಿದೆ; ಆದರೆ ಅದನ್ನು ತೆಗೆದುಕೊಳ್ಳುವುದಕ್ಕಾ ಅವರು ಯಾವ ಉಪಾಯಗಳನ್ನು ನಡೆಸಿರುವರೆಂಬುದು ಮಾ ರಹಸ್ಯದ ವಿಷಯವೇ ಆಗಿದೆ. ಭಾರತವು ಸದ್ಯ ಇರಿಸಿಕೊಂಡಿರು ವಿದೇಶ ನೀತಿಯು, ಪೋರ್ತುಗೀಜ್ ಭಾರತದ ವಿಮೋಚನೆಯ ಮಾರ್ಗದಲ್ಲಿ ತಡೆಯಾಗಿರಬಹುದು ನಿಜ! ಆದರೆ ಶಾಂತಿ–ಸಮಾಧಾ ಗಳ ನೀತಿಯಿಂದ ಹಾದಿಗೆ ಬಾರದವರೊಂದಿಗೆ, ಭಾರತದ ಜನತೆ ಹೇ ನಡೆದುಕೊಳ್ಳಬೇಕೆಂಬುದರ ನಿರ್ಣಯವನ್ನೂ ಇಂದಿನ ನಮ್ಮ ವಿದೇ ನೀತಿ ಖಂಡಿತವಾಗಿ ನಿರ್ಣಯಿಸಿ ಹೇಳಬೇಕಾಗಿದೆ. ಹಟವಾದಿಗಳಾ ಶಠರು ಗಂಟುಬಿದ್ದಾಗ, ಶಾಂತಿ–ಸಮಾಧಾನಗಳ ರಾಜನೀತಿ ಪ್ರಯೋ ಜನಕ್ಕೆ ಬರುವುದೆ?

ಪೋರ್ತುಗೀಜ್ ಭಾರತಪ್ರದೇಶದ ಜನರೇ ಜಾಗೃತರಾ ತಮ್ಮ ವಿಮೋಚನೆಯನ್ನು ಕುರಿತು ಚಳವಳಿ ನಡೆಯಿಸಬೇಕೆಂಬು ನಮ್ಮ ಪ್ರಧಾನಮಂತ್ರಿಗಳ ಅಭಿಪ್ರಾಯವಾಗಿದೆ. ಹಾಗಾದರೆ. ಅಲ್ಲಿಯ ಜನರು ಜಾಗೃತರಾಗಿ ಚಳವಳಿ ಹೂಡಲು ಅಸಮರ್ಥರಾದರೆ, ಅಲ್ಲಿಯ ವಿದೇಶೀಯ ಆಡಳಿತ ಹಾಗೆಯೆ ಉಳಿಯಬೇಕೆ? ಎಂದಮೇಲೆ 'ಭಾ ದಲ್ಲಿಯ ವಿದೇಶಿಯರ ಆಡಳಿತವನ್ನು ನಾವಿನ್ನು ಸಹಿಸಲಾರೆವು' ಎಂ ಆಡುವ ಮಾತಿಗೆ ಅರ್ಥವೇನು?

ಈಗ ಗೋವೆಯ ಪರಿಸ್ಥಿತಿಯನ್ನೇ ವಿಚಾರಮಾಡೋಣ: ಅಲ್ಲಿಯ ಜನಸಾಮಾನ್ಯರಲ್ಲಿ ದಾರಿದ್ರ್ಯವೇ ಹೆಚ್ಚಾಗಿದೆ. ಶಿಕ್ಷಣದ ದೃಷ್ಟಿ ಯಿಂದ ಆ ಜನರು ತೀರ ಹಿಂದುಳಿದವರು. ಅಂತಹರಿಗೆ ಭಾರ ರಾಷ್ಟ್ರ, ಸ್ವಾತಂತ್ರ್ಯ ಇವುಗಳ ಕಲ್ಪನೆ ಹುಟ್ಟಬೇಕು ಹೇಗೆ? ಇನ್ನ ಸಿರಿವಂತರಂತೂ ಯಾವಾಗಲೂ ಆಳುವ ಸರಕಾರದ ಬಾಲಹಿಡಿ ಹೊರಟಿರುವುದು ಎಲ್ಲೆಲ್ಲಿಯೂ ಕಂಡುಬರುವ ರೀತಿ. ಸುಶಿಕ್ಷಿತರಾ ಮಧ್ಯಮತರಗತಿಯ ಜನರು, ಸರಕಾರದ ನೌಕರಿಗಳಿಂದಲೇ ಹೊ

(೧೫೬ನೆಯ ಪುಟ ನೋಡಿರಿ)

ಮಹಾಲಿಂಗ

(ಸಣ್ಣ ಕತೆ)

ಶ್ರೀ. ಗೋವಿಂದಮೂರ್ತಿ ದೇಸಾಯಿ
ಧಾರವಾಡ

ಕನ್ನಡನಾಡಿನಲ್ಲಿ ಹಳ್ಳಿಹಳ್ಳಿಗೂ ಇಂತಹ ಸುರಮ್ಯವಾದ ಸ್ಥಳಪುರಾಣಗಳಿವೆ. ಇಂತಹ ಕತೆಗಳಲ್ಲೆಲ್ಲಾ ಕನ್ನಡಿಗರ ಭಾವುಕಬುದ್ಧಿ, ನೈತಿಕಶ್ರದ್ಧೆಗಳು ತುಂಬಿನಿಂತಿರುತ್ತವೆ. ಇಲ್ಲಿ ಮಹಾಲಿಂಗನಿದ್ದರೆ ಇನ್ನೊಂದು ಕಡೆಗೆ ಮುದ್ದುರಂಗ!

ಶಿರಹಟ್ಟಿಯಿಂದ ಪಶ್ಚಿಮಕ್ಕೆ ಒಂಬತ್ತು ಮೈಲುಗಳಂತರದಲ್ಲಿ ಒಂದು ವಿಶಾಲಶ್ರೇಣಿಯ ಬೆಟ್ಟವಿದೆ. ಆ ವಿಶಾಲ ಹಾಗು ಉನ್ನತವಾದ ಬೆಟ್ಟದ ತುದಿಯಲ್ಲಿ ಒಂದು ಪುರಾತನವಾದ ಮಹಾಲಿಂಗನ ಭವ್ಯದೇಗುಲವಿದೆ. ಆ ದೇಗುಲದಿಂದಲೇ ಬೆಟ್ಟಕ್ಕೆ ಮಹಾಲಿಂಗನ ಬೆಟ್ಟವೆಂದು ಕರೆಯುತ್ತಾರೆ. ಸಹಸ್ರಾರು ಜನರು ಏಕಕಾಲಕ್ಕೆ ದೇಗುಲದಲ್ಲಿ ಸೇರುವಷ್ಟು ವಿಶಾಲವಾದ ಮಂದಿರವನ್ನು ನಿರ್ಮಿಸಿದ್ದಾರೆ. ಅಂತಹ ಭವ್ಯದೇಗುಲದಲ್ಲಿ ತೀರ ಚಿಕ್ಕದಾದ ಒಂದೇ ಶಿಲೆಯಲ್ಲಿ ಕಟೆದ ಗರ್ಭಗುಡಿಯಿದೆ. ದೇಗುಲವು ಮಾತ್ರ ಬಹು ಸುಂದರವಿದೆ. ಆ ಕಟ್ಟಡದ ಶಿಲೆಯಲ್ಲಿ ಮೇಣದ ಮೃದುತ್ವವನ್ನು ಕಂಡು ತಮ್ಮ ಕಲೆಯನ್ನೇ ಸೂರೆಮಾಡಿದ್ದಾರೆ. ಇಂತಹ ಕಲಾಪೂರ್ಣ ಭವ್ಯದೇಗುಲದಲ್ಲಿ ಇಂತಹ ಚಿಕ್ಕ ಹಾಗು ತೀರ ಸಾಮಾನ್ಯ ಗರ್ಭಗುಡಿಯನ್ನೇಕೆ ಕಟ್ಟಿದರೆಂದು ನೋಡಿದವರು ಆಶ್ಚರ್ಯಪಡುತ್ತಾರೆ. ಈ ದೇಗುಲದಲ್ಲಿ ಸ್ತ್ರೀಯರೇ ಪ್ರವೇಶಿಸುವಂತಿಲ್ಲ. ಬೆಟ್ಟದ ಅಡಿಯಲ್ಲಿಯೂ ಒಂದು ಮಹಾಲಿಂಗನ ದೇಗುಲವಿದೆ. ಆ ಎರಡೂ ದೇಗುಲಗಳಲ್ಲಿ ಇನ್ನೊಂದು ವೈಚಿತ್ರ್ಯವಿದೆ. ಬೆಟ್ಟದ ತುದಿಯ ದೇಗುಲದಲ್ಲಿ ಶಿವನ ದೇಹವಿಷ್ಟೇ ಪ್ರತಿಷ್ಠಾಪಿಸಲ್ಪಟ್ಟಿದೆ. ಆ ಮೂರ್ತಿಗೆ ಹಸ್ತಪಾದಗಳೇ ಇಲ್ಲ. ನೀವು ಯಾರಾದರೂ, ಯವನರು ಆ ಮೂರ್ತಿಯನ್ನು ಭಗ್ನಗೊಳಿಸಿರಬೇಕೆಂದು ಸಂಶಯ ತೆಗೆದುಕೊಳ್ಳಬಹುದು. ಆದರೆ ಅದು ಹಾಗಲ್ಲ. ಬೆಟ್ಟದಡಿಯಲ್ಲಿದ್ದ ದೇಗುಲದ ಗರ್ಭಗುಡಿಯಲ್ಲಿ ಕೇವಲ ಶಿವನ ಪಾದಹಸ್ತಗಳು ಇರುತ್ತವೆ. ಕೆಳಗಿನ ದೇಗುಲದ ಪಾದಹಸ್ತಗಳು ಮೇಲಿನ ಮಹಾಲಿಂಗನ ದೇಹದುವುಗಳೆಂದು ಅಲ್ಲಿಯ ಜನರು ಹೇಳುತ್ತಾರೆ. ಪ್ರತಿವರುಷವೂ ಜಾತ್ರೆಯ ಕಾಲಕ್ಕೆ ಬೆಟ್ಟದ ಮೇಲಿಂದ ಶಿವನ ದೇಹವನ್ನು ತಂದು ಬೆಟ್ಟದಡಿಯ ದೇಗುಲದಲ್ಲಿರಿಸುತ್ತಾರೆ. ಅಂದು ಶಿವನು ಸದೇಹನಾಗಿ ಜನರಿಗೆ ಪೂರ್ಣಾಕಾರದಲ್ಲಿ ದರ್ಶನವನ್ನೀಯುತ್ತಾನೆ ಅಂದು ಮಾತ್ರ ಪುರುಷರಾಗಲಿ ಅಥವಾ ಸ್ತ್ರೀಯರಾಗಲಿ ಯಾರೂ ಶಿವನನ್ನು ನೋಡಬಹುದು. ಆದರೆ ಶಿವನು ಮತ್ತೆ ಬೆಟ್ಟದ ಮೇಲಕ್ಕೆ ಹೋಗಿ ತನ್ನ ದೇವಾಲಯದಲ್ಲಿದ್ದರೆ, ಯಾವ ಸ್ತ್ರೀಯರೂ ಆ ದೇಗುಲದ ಮೇಲೆ ನೆರಳನ್ನೂ ಹಾಕುವಂತಿಲ್ಲ. ಬೆಟ್ಟದಡಿಯ ದೇಗುಲವು ಘೋರಾರಣ್ಯದಲ್ಲಿದೆ. ಆ ದೇಗುಲದ ಮೇಲೆ ರವಿಯ ರಶ್ಮಿಗಳು ಬೀಳುವುದೇ ಕಡಿಮೆ. ಅದರ ಸಮೀಪಕ್ಕೆ ಲಂಬಾಣಿಗರೆಂಬ ಕಾಡು ಜಾತಿಯ ಜನರು ವಾಸಿಸುತ್ತಾರೆ. ಅಲ್ಲಿ ಸಾಗುವಳಿ ಮಾಡಲು ಭೂಮಿಗಳೇ ಇಲ್ಲ. ಸುತ್ತಲೂ ಹತ್ತಾರು ಮೈಲು ದಟ್ಟವಾದ ಅಡವಿ. ಯಾವ ಉದ್ಯೋಗವನ್ನೂ ಆ ಲಂಬಾಣಿಗರು ಮಾಡದೆ ಹೋದರೂ ಹಾಯಾಗಿ ಜೀವನವನ್ನು ಸಾಗಿಸುತ್ತಾರೆ. ಅವರ ಶಾಶ್ವತವೃತ್ತಿ ಚೋರವೃತ್ತಿ. "ಕಳ್ಳತನವನ್ನು ಮಾಡಿಯೇ ಜೀವನವನ್ನು ಸಾಗಿಸಬೇಕು" ಎಂದು ತಮ್ಮ ಮಕ್ಕಳಿಗೆ ಬೋಧಿಸುತ್ತಾರೆ. ಆ ರೀತಿಯಾಗಿಯೇ ಮಹಾಲಿಂಗನು ಅವರಿಗೆ ಶಾಪವಿತ್ತಿರುವನಂತೆ. ಅವರು ಜೀವನವನ್ನು ಸಾಗಿಸುವ ರೀತಿಯನ್ನು ನೋಡಿದರೆ, ಅವರ ಮಾತಿನಲ್ಲಿ ತಥ್ಯವಿದೆಯೆಂದು ಕಂಡುಬರುತ್ತದೆ. ಆ ಬೆಟ್ಟದಡಿಯ ದೇಗುಲವನ್ನು ಲಂಬಾಣಿಗರ ಸಹಾಯವಿಲ್ಲದೆ ಯಾರೂ ಗುರುತಿಸುವಂತಿಲ್ಲ. ಅಂತಹ ನಿಬಿಡವಾದ ಅರಣ್ಯದಲ್ಲಿ ಆ ದೇಗುಲವಿದೆ. ಲಂಬಾಣಿಗಳೇ ಅದರ ಆರಾಧಕರು. ಮಹಾಲಿಂಗನು ತನ್ನ ಹಸ್ತಪಾದಗಳನ್ನು ಒಂದು ದೇಗುಲದಲ್ಲೇಕೆ ಬಿಟ್ಟ? ತನ್ನ ದೇಹವನ್ನು ಬೆಟ್ಟದ ಮೇಲಿನ ದೇಗುಲದಲ್ಲೇಕಿರಿಸಿದ? ಬೆಟ್ಟದ ಮೇಲಿನ ದೇಗುಲಕ್ಕೆ ಸ್ತ್ರೀಯರೇಕೆ ಹೋಗುವಂತಿಲ್ಲ? ಇಂದಿಗೂ ಆ ಲಂಬಾಣಿಗರು ಚೋರವೃತ್ತಿಯನ್ನೇಕೆ ಮಾಡಿ ಜೀವನವನ್ನು ಸಾಗಿಸುತ್ತಾರೆ? ಯಾವ ಇತಿಹಾಸವೂ ಇದಕ್ಕೆ ಸಮರ್ಪಕವಾದ ಉತ್ತರವನ್ನೀಯಲಾರದು. ಆದರೆ ತಲೆತಲೆಗಳಿಂದಲೂ ಇಳಿದುಬಂದು ಆ ಹಳ್ಳಿಗರ ಮಧ್ಯೆ ನಿಂತಿರುವ ಅದೊಂದು ಕಥೆಯನ್ನು ಕೇಳಿದರೆ, ನಮ್ಮ ಮೇಲಿನ ಸಮಸ್ಯೆಗಳು ತಾವೇ ಪರಿಹಾರವಾಗುತ್ತವೆ. ಆ ಬೆಟ್ಟದಡಿಯ ದೇಗುಲದ ಸುತ್ತಲೂ ವಾಸಿಸುವ ಲಂಬಾಣಿಗರ ಊರು ಮಹಾಲಿಂಗಪುರ. ಅಲ್ಲಿಯ ಲಂಬಾಣಿಗರು ಶಿರಹಟ್ಟಿಯ ಸುತ್ತುಮುತ್ತಲಿನ ಪ್ರದೇಶಗಳಿಗೆಲ್ಲಾ ತೊಂದರೆಯನ್ನೀಯುತ್ತಾರೆ. ಸುಗ್ಗಿಯ ಸಮಯಕ್ಕಂತೂ ಅವರ ಕಳ್ಳತನವನ್ನು ಹಿಡಿದವರೇ ಇಲ್ಲ. ಕಳ್ಳತನದ ಅಪರಾಧಕ್ಕಾಗಿ ಒಂದು ಮನೆಯ ಯಜಮಾನನನ್ನು ಸೆರೆಹಿಡಿದರೆ, ಆ ಊರಿನ ಉಳಿದ ಜನರು ಆ ಮನೆಯವನ ಹೆಂಡಿರು-ಮಕ್ಕಳನ್ನು ಪೋಷಿಸುತ್ತಾರೆ. ಹೀಗಾಗಿ ಅವರ ಆ ವೃತ್ತಿಯನ್ನು ಉಚ್ಚಾಟನೆ ಮಾಡುವುದೇ ಅಸಾಧ್ಯವಾಗಿದೆ ಅವರು ತಮ್ಮ ವೃತ್ತಿಗೆ ಮಹಾಲಿಂಗನ ಶಾಪವೇ ಕಾರಣವೆಂದು ಹೇಳುತ್ತಾರೆ.

ಸಹಸ್ರಾರು ವರುಷಗಳಾಚೆಯ ಸಂಗತಿ ಇರಬಹುದು: ಆ ಬೆಟ್ಟದ ತುದಿಯಲ್ಲಿ ವಿಸ್ತೀರ್ಣವಾದ ಪ್ರದೇಶವಿದೆ ಅಲ್ಲಿ ವೀರಕೇಸರಿ-

ಯೆಂಬ ರಾಜನು ಆಳುತ್ತಿದ್ದನು. ಹೆಸರಿಗೆ ತಕ್ಕಂತೆ ಕೃತಿಯಲ್ಲಿಯೂ ಪರಿಣತನಿದ್ದನು. ಬೆಟ್ಟಕ್ಕೂ ಆವನ ಪ್ರದೇಶಕ್ಕೂ ಹತ್ತೆಂಟು ಗಾವುದ ದೂರ. ವೀರಕೇಸರಿ ಶಿವಭಕ್ತ. ಶಿವನನ್ನು ಭಜಿಸದೆ ಎಂದಿಗೂ ಭೋಜನವನ್ನು ಮಾಡುತ್ತಿರಲಿಲ್ಲ. ವೀರಕೇಸರಿಯ ಭಕ್ತಿಗೆ ಮೆಚ್ಚಿ ಶಿವನು ಕನಸಿನಲ್ಲಿ ಹೇಳಿದನಂತೆ:— "ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನಿನಗೆ ನಿತ್ಯವೂ ದರ್ಶನವನ್ನೀಯಬೇಕೆಂಬ ಅಪೇಕ್ಷೆಯ ಮೂಲಕ ನಿನ್ನ ಬೆಟ್ಟದಲ್ಲಿಳಿದಿದ್ದೇನೆ. ಅಲ್ಲಿಯೇ ನನಗೊಂದು ದೇಗುಲವನ್ನು ನಿರ್ಮಿಸಿ ಅಲ್ಲಿಯೇ ಪ್ರತಿಷ್ಠಾಪಿಸು." ಮರುದಿವಸ ವೀರಕೇಸರಿಯು ತನ್ನ ಪರಿವಾರಸಮೇತನಾಗಿ ಬೆಟ್ಟಕ್ಕೆ ಬಂದು ಅದನ್ನು ಶೋಧಿಸಿದನು. ಒಂದು ವೃಕ್ಷದ ಕೆಳಕ್ಕೆ ಸುಂದರವಾದ ಶಿವನಮೂರ್ತಿಯು ನಿಂತಿತ್ತು. ವೀರಕೇಸರಿಯು ಸುಪ್ರೀತನಾಗಿ ಆ ಮೂರ್ತಿಯ ಸುಂದರತೆಗೆ ತಕ್ಕಂತೆ ಸುಂದರವಾದ ಹಾಗೂ ವಿಶಾಲವಾದ ದೇಗುಲವನ್ನು ಕಟ್ಟಿಸಲು ನಿರ್ಣಯಿಸಿದನು. ಆ ದೇಗುಲದ ನಿರ್ಮಾಣದ ಸನ್ನಾಹಕ್ಕಾಗಿ ರಾಜಧಾನಿಗೆ ಮರಳಿಬಂದನು. ಮಂತ್ರಿಗಳನ್ನು ಹಾಗು ರಾಣಿಯನ್ನು ವಿಚಾರಿಸಿ, ದೇಗುಲದ ರೂಪರೇಷೆಗಳನ್ನು ಯೋಚಿಸಿದನು. ರಾಜ್ಯದಲ್ಲಿಯ ಉತ್ತಮೋತ್ತಮ ಶಿಲ್ಪಿಗಳನ್ನು ಆಹ್ವಾನಿಸಿದನು. ದೇಗುಲದ ನಿರ್ಮಾಣಕ್ಕಾಗಿ ತನ್ನ ಭಾಂಡಾರವನ್ನೇ ತೆರೆದಿಟ್ಟನು. ದೇಹದ ತುಂಬಾ ಕಣ್ಣುಗಳನ್ನು ಮಾಡಿಕೊಂಡು ಆ ಕಾರ್ಯಕ್ಕೆ ಸನ್ನದ್ಧನಾದನು. ಎಲ್ಲ ಸಾಮಗ್ರಿಗಳನ್ನು ಕೂಡಿಸಿಕೊಂಡು ಶಿಲ್ಪಿ-ಸಮೇತ ಬೆಟ್ಟಕ್ಕೆ ಬಂದನು. ಆದರೆ ಅಲ್ಲಿದ್ದ ಶಿವಮೂರ್ತಿಯು ಎಲ್ಲಿಯೋ ಮಾಯವಾಗಿತ್ತು. ಯಾರೋ ದುಷ್ಟರು ಆ ಪ್ರತಿಮೆಯನ್ನು ಅಪಹರಿಸಿಕೊಂಡು ಹೋಗಿದ್ದರು. ವೀರಕೇಸರಿಗೆ ಅತಿ ವಿಷಾದವೆನಿಸಿತು. ಇದೇಕೋ ಅಮಂಗಲವೆನಿಸಿತು. ಆದರೂ ದೇಗುಲವನ್ನು ಕಟ್ಟಲು ಶಿಲ್ಪಿಗಳಿಗೆ ಆಜ್ಞಾಪಿಸಿ, ತನ್ನ ಗುಪ್ತಚಾರರನ್ನು ರಾಜ್ಯದ ಅಷ್ಟದಿಶೆಗಳಿಗೂ ಕಳಿಸಿದನು. ಆ ಮೂರ್ತಿಯ ಶೋಧನೆಯಲ್ಲಿ ದೊರೆಯು ನಿದ್ರೆಯನ್ನೇ ಮಾಡದಾದನು. "ಆ ಮೂರ್ತಿಹೋದರೇನಾಯಿತು? ಅಂತಹ ಸಹಸ್ರಾರು ಸುಂದರ ಮೂರ್ತಿಗಳನ್ನು ಕಡೆಸುವ ಸಾಮರ್ಥ್ಯ ಹಾಗು ಸಂಪತ್ತುಗಳು ನಮ್ಮ ಬಳಿಯಿರಲು ಅದಕ್ಕೇಕೆ ಚಿಂತೆ?" ಎಂದು ರಾಣಿಯು ವೀರಕೇಸರಿಯನ್ನು ಕೇಳಿದಳು. "ನಿನಗಿಂತಲೂ ಸುಂದರವಾದ ಸ್ತ್ರೀಯರು ಈ ರಾಜ್ಯದಲ್ಲಿ ನನಗೆ ದೊರೆಯುತ್ತಿರುವಾಗ, ನಿನ್ನನ್ನೇ ರಾಣಿಯೆಂದು ಏಕೆ ಕರೆಯುತ್ತೇನೆ? ನೀನು ಕ್ಷಣಕಾಲ ಅಗಲಿದರೆ ನನಗೇಕೆ ದುಃಖವಾಗುತ್ತದೆ?" ಎಂದು ರಾಣಿಯನ್ನೇ ಮರಳಿ ಆತ ಪ್ರಶ್ನಿಸಿದನು. ರಾಣಿಗೆ ಮುಂದೆ ಮಾತನಾಡಲಿಕ್ಕೆ ಮಾರ್ಗವೇ ಉಳಿಯದಾಯಿತು.

ಪರಿಚಾರಕರು, ಅರಮನೆಯ ಪರಿವಾರದವರು, ರಾಜ್ಯಾಧಿಕಾರಿಗಳು ಹಾಗು ಪ್ರಜೆಗಳು ದೊರೆಯ ಚಿಂತೆಗಾಗಿ ವಿಷಾದಿಸಿದರು. ಶೋಧನೆಗೆಂದು ಹೋದ ಗುಪ್ತಚಾರರು ಒಬ್ಬೊಬ್ಬರೇ ನಿರಾಶರಾಗಿ ಮರಳಿ ಬರಹತ್ತಿದರು. ಯಾವ ಗುಪ್ತಚಾರನೂ ಮೂರ್ತಿಯು ಎಲ್ಲಿರುವುದೆಂಬ ವಾರ್ತೆಯನ್ನೇ ತರದಾದನು. ಇತ್ತ ದೇಗುಲದ ನಿರ್ಮಾಣವು ನಡದೇ ಇತ್ತು. ದೇಗುಲವು ಏರುತ್ತ ನಡೆದಂತೆ ದೊರೆಯ ಮನಸ್ಸಿನ ಚಿಂತೆಯೂ ಹಿರಿದಾಗುತ್ತ ನಡೆಯಿತು. ಒಬ್ಬ ಚಾಣಾಕ್ಷ ಗುಪ್ತಚಾರನನ್ನುಳಿದು ಎಲ್ಲರೂ ನಿರಾಶರಾಗಿ ಮರಳಿ ರಾಜಧಾನಿಗೆ ಬಂದರು. ಆ ಒಬ್ಬನೇ ಒಬ್ಬ ಗುಪ್ತಚಾರನ ಮೇಲೆ ರಾಜನ ಆಶೆಯಿತ್ತು. ಆ ಆಶೆಯ ಭರವಸೆಯ ಮೇಲೆ ವೀರಕೇಸರಿಯ ಜೀವವು ದೇಹವನ್ನು ಅಂಟಿಕೊಂಡಿತ್ತು. ಆ ಒಬ್ಬನೇ ಒಬ್ಬ ಚಾಣಾಕ್ಷ ಗುಪ್ತಚಾರನಾದ ಯಶೋಧನನು, ನೇರವಾಗಿ, ಲಂಬಾಣಿಗರ ವಸತಿಗೆ ತೆರಳಿ ಅಲ್ಲಿಯೇ ವಾಸಿಸಲು ಪ್ರಾರಂಭಿಸಿದನು. ಯಶೋಧನನು ಇರುತ್ತಿದ್ದ ಲಂಬಾಣಿಗರ ಯಜಮಾನನು ನಿತ್ಯವೂ ಯಶೋಧನನಿಗೆ ದೇವರ ತೀರ್ಥ-ಪ್ರಸಾದಗಳನ್ನು ಕೊಡುತ್ತಿದ್ದನು. "ಆವು ಎಲ್ಲಿಯವು? ಯಾವ ದೇವರವು?" ಎಂದು ಕೇಳಿದರೆ, ಆ ಲಂಬಾಣಿಯು ಹೇಳುತ್ತಿರಲಿಲ್ಲ. ಯಶೋಧನನು ಆ ಲಂಬಾಣಿಯ ಮಗಳ ಸ್ನೇಹವನ್ನು ಬೆಳೆಯಿಸಿ, ಎಲ್ಲಿ ಆ ಮೂರ್ತಿಯಿದೆಯೆಂಬುದನ್ನು ಕೇಳಿಕೊಂಡನು. ಅವರ ಬಳಿ ಮೂರ್ತಿಯು ಇರಲೇಬೇಕೆಂದು ಖಚಿತಪಡಿಸಿಕೊಂಡನು. ಒಮ್ಮೆ ಆ ಲಂಬಾಣಿ ಯಜಮಾನನನ್ನು ದೇಗುಲಕ್ಕೆ ಕರೆದೊಯ್ಯಬೇಕೆಂದು ಬಹುಪರಿಯಾಗಿ ಬೇಡಿಕೊಂಡನು. ಆ ಲಂಬಾಣಿಯು "ನಿನಗೆ ದೇವರ ದರ್ಶನವನ್ನು ಮಾಡಿಸುತ್ತೇನೆ. ಆದರೆ ಆ ದೇಗುಲದ ಹಾದಿಯನ್ನು ಮಾತ್ರ ತೋರಿಸಲಾರೆ. ಆದುದರಿಂದ ಕಣ್ಣಿಗೆ ಅರಿವೆಯನ್ನು ಕಟ್ಟಿ ನಿನ್ನನ್ನು ಅಲ್ಲಿಗೆ ಕರೆದೊಯ್ಯುತ್ತೇನೆ" ಎಂದು ಹೇಳಿದನು. ಅದಕ್ಕೆ ಯಶೋಧನನು ಒಪ್ಪಿದನು; ಯಾರಿಗೂ ಕಾಣದಂತೆ ಕೈಯಲ್ಲಿ ಅಕ್ಕಿಯ ಕಾಳುಗಳನ್ನು ಹಿಡಿದುಕೊಂಡನು. ಆ ಲಂಬಾಣಿಯು ಯಶೋಧನನ ಕಣ್ಣುಗಳನ್ನು ಕಟ್ಟಿ ಕೈಯಲ್ಲಿ ಒಂದು ಕೋಲನ್ನು





ಕೊಟ್ಟನು. ಆ ಕೋಲಿನ ಇನ್ನೊಂದು ತುದಿಯನ್ನು ಹಿಡಿದು ತಾನೆ ಮಾರ್ಗದರ್ಶನ ಮಾಡಿದನು. ಅವನ ಹಿಂದೆ ಹೊರಟ ಯಶೋಧನನು ಒಂದೊಂದೇ ಅಕ್ಕಿಯ ಕಾಳನ್ನು ಹಾದಿಗುಂಟ ಉದುರಿಸುತ್ತ ದೇಗುಲಕ್ಕೆ ಹೋದನು. ಅಲ್ಲಿ ಕಣ್ಣುತೆರೆದ ಮೇಲೆ ದೇವರನ್ನು ನೋಡಿ ಸಂಪ್ರೀತಿಪಟ್ಟನು. ತಮ್ಮದೇ ಮೂರ್ತಿಯನ್ನು ಲಂಬಾಣಿಗರು ಕದ್ದು-ಒಯ್ದವರೆಂದು ಖಂಡಿತಪಡಿಸಿಕೊಂಡನು. ಅಲ್ಲಿಯೇ ಏನಾದರೂ ಮಾಡಿದ್ದರೆ ಅವನ ಪ್ರಾಣವೇ ಉಳಿಯುವಂತಿರಲಿಲ್ಲ. ದೇವರನ್ನು ಪುನಃ ಪ್ರಾರ್ಥಿಸಿ, ಕುರುಡುಗಣ್ಣಿನಿಂದ ಆ ಲಂಬಾಣಿಯನ್ನು ಹಿಂಬಾಲಿಸಿ ಮನೆಗೆ ಬಂದನು. ಆ ಲಂಬಾಣಿಯು ಕಣ್ಣುತಪ್ಪಿಸಿ ಹಿಂದುಗಡೆ ಆ ಯಶೋಧನನು, ತಾನೊಗೆದ ಅಕ್ಕಿಯ ಕಾಳಿನಗುಂಟ ಹೋಗಿ ದೇಗುಲವನ್ನು ಗೊತ್ತುಪಡಿಸಿಕೊಂಡನು. ನಾಲ್ಕಾರು ದಿವಸಗಳ ವರೆಗೆ ಆ ಲಂಬಾಣಿಯರ ಮನೆಯಲ್ಲಿದ್ದು, ಒಂದು ದಿವಸ ಅವರಿಗೆ ಹೇಳದಂತೆ ಅವರ ಮನೆಯನ್ನು ಬಿಟ್ಟು ತನ್ನ ರಾಜ್ಯಕ್ಕೆ ಬಂದನು. ತನ್ನ ದೊರೆಯಾದ ವೀರಕೇಸರಿಗೆ ಎಲ್ಲ ವೃತ್ತಾಂತವನ್ನೂ ಅರುಹಿದನು. ವೀರಕೇಸರಿಗೆ ತೃಪ್ತಿಯಾಯಿತು. ಯಶೋಧನನಿಗೆ ತಕ್ಕ ಮರ್ಯಾದೆಯನ್ನಿತ್ತನು. ಮತ್ತೆ ಅರಮನೆಯಲ್ಲಿ ಸಂಭ್ರಮದ ವಾತಾವರಣವು ಪಸರಿಸಹತ್ತಿತು. ದೊರೆಯು ಉಪಾಯವಾಗಿಯಾಗಲಿ ಅಥವಾ ಸೈನಿಕರ ಒತ್ತಾಯದಿಂದಾಗಲಿ ಆ ಮೂರ್ತಿಯನ್ನು ಕಿತ್ತುತರಬೇಕೆಂದು ಬಯಸಿದನು. ತಾನು ಕಟ್ಟಿದ ದೇಗುಲಕ್ಕೆ ತಕ್ಕುದಾಗಿ ತನ್ನದೇ ಮೂರ್ತಿ ದೊರೆಯಿತೆಂದು ಸಂತೋಷಪಟ್ಟನು. ಅಂದು ರಾತ್ರಿ ನಿದ್ರೆ ಹೋದಾಗ, ಕನಸಿನಲ್ಲಿ ಅಂದು ಕಾಣಿಸಿಕೊಂಡ ಶಿವನು ಮತ್ತೆ ಬಂದನು: "ನಿನ್ನ ಸತ್ತ್ವಪರೀಕ್ಷೆಗೆ ನಾನು ಕಣ್ಣು ತಪ್ಪಿಸಿದ್ದೆ ವೀರಸಿಂಹ! ನಿನ್ನಲ್ಲಿ ನಿಜವಾಗಿಯೂ ಭಕ್ತಿಯಿದೆ. ನನಗೆ ಆ ಲಂಬಾಣಿಗರು ಮಾಡುತ್ತಿರುವ ಸೇವೆಯನ್ನು ನೋಡಿದರೆ, ಅಲ್ಲಿಂದ ಹೊರಡಲೇಬಾರದೆಂದು ಎನಿಸುತ್ತದೆ. ಆದರೆ ನಿನ್ನ ಪ್ರೀತಿ ಅದಕ್ಕೂ ಅತ್ಯಧಿಕ! ನೀನು ಲಂಬಾಣಿಗರಿಂದ ನನ್ನನ್ನು ಕಿತ್ತುಕೊಂಡು ಬರಬೇಡ! ನಿನ್ನ ದೇಗುಲದ ಬಳಿಯೇ ಬಿದ್ದ ಕಪ್ಪುಶಿಲೆಯಲ್ಲಿ ನಾನಿದ್ದೇನೆ. ಆ ಶಿಲೆಯನ್ನು ಕೆತ್ತಿ ನಿನಗೆ ಬೇಕಾದಹಾಗೆ ನನ್ನ ರೂಪವನ್ನು ಸಿದ್ಧಪಡಿಸಿಕೊಂಡು ಪ್ರತಿಷ್ಠಾಪಿಸು, ನನಗೆ ಬೇಸರಿಕೆ ಬಂದರೆ, ನಾನೇ ಆ ಲಂಬಾಣಿಗರಿಂದ ಹೊರಬರುವೆ" ಎಂದು ಹೇಳಿದನು. ದೊರೆಯು ಮರುದಿವಸ ಏಳುವಮುಂದೆ ಪ್ರಸನ್ನ ಚಿತ್ತನಾಗಿಯೇ ಎದ್ದನು. ಕಳೆದು ಹೋದ ರಾಜನ ಚೇತನೋತ್ಸಾಹಗಳು ಚಿಗುರುತ್ತಿದ್ದುವು. ರಾಣಿಗೆ ತನ್ನ ಕನಸನ್ನು ತಿಳಿಸಿದನು. ಅದನ್ನು ಅವಳು ನಂಬಲಿಲ್ಲ. ಅವಳಿಗೆ ದೇವರಲ್ಲಿ ಶ್ರದ್ಧೆಯೇ ಇರಲಿಲ್ಲ. ದೊರೆಯ ಉತ್ಸಾಹಕ್ಕಾಗಿ ತಲೆದೂಗಿದಳು. ದೊರೆಗೆ ತಿಳಿದದ್ದು ಮಾಡಲು ತನ್ನ ಸಮ್ಮತಿಯನ್ನು ಸೂಚಿಸಿದಳು. ಇತ್ತ ಕಡೆ ಮೊದಲೇ ನಿರ್ಮಿಸಲು ಪ್ರಾರಂಭವಾಗಿದ್ದ ದೇಗುಲವು ಮುಗಿಯುತ್ತ ಬಂದಿತ್ತು. ಆ ಸುಂದರ ದೇಗುಲವನ್ನು ನೋಡಲು ರಾಜ್ಯದ ಜನರು ತಂಡೋಪತಂಡವಾಗಿ ಬರುತ್ತಿದ್ದರು. ಆದರೆ ಒಳಕ್ಕೆ ಮೂರ್ತಿಯಿಲ್ಲ. ವೀರಕೇಸರಿಯು ಮತ್ತೆ ಎಲ್ಲ ಶಿಲ್ಪಿಗಳನ್ನೂ ಕರೆಹಾಕಿ, ಅವರಿಗೆ ಮೂರ್ತಿಯನ್ನು ಸಿದ್ಧಪಡಿಸಲು ಹೇಳಿದನು. ಕಪ್ಪಾದ ಶಿಲೆ ಆ ದೇಗುಲದಿಂದ ಸ್ವಲ್ಪೇ ದೂರದಲ್ಲಿ ಬಿದ್ದಿತ್ತು. ಅದನ್ನು ತಂದು ಮಂಗಲಮುಹೂರ್ತವನ್ನು ನೋಡಿ ಶಿವನ ವಿಗ್ರಹವನ್ನು ಕೆತ್ತಲು ರಾಜನು ಆಜ್ಞಾಪಿಸಿದನು. ಮೂರ್ತಿಯ ಕೆತ್ತನೆಯ ದಿನದ ರಾಜ್ಯದ ತುಂಬ ಸಂಭ್ರಮದ ಉತ್ಸವಗಳು ಜರುಗಿದುವು. ರಾಜ್ಯದ ವರಶಿಲ್ಪಿ ಬಂದು ಶಿಲೆಯನ್ನು ಪೂಜಿಸಿ ಚಾಣವನ್ನು ಶಿಲೆಗೆ ಹಚ್ಚಿದನು. ಹತ್ತಾರು ಸಲ ಆ ಚಾಣವನ್ನು ಶಿಲೆಗೆ, ತನ್ನ ಸಮಗ್ರ ಶಕ್ತಿಯನ್ನು ಉಪಯೋಗಿಸಿ ಹೊಡೆದನು. ಶಿಲೆಯ ತುಣುಕಿನಬದಲು ಆ ಚಾಣವೇ ಪುಟಿದು ಹೊರಬರುತ್ತಿತ್ತು. ಆ ವರಶಿಲ್ಪಿಯ ದೇಹದಿಂದ ಬೆವರಿಳಿಯಿತು. ಆದರೂ ಆ ಶಿಲೆಯಿಂದ ಕಣಮಾತ್ರವೂ ಹೊರಬರಲಿಲ್ಲ. ಎಲ್ಲರಿಗೂ ಆಶ್ಚರ್ಯವಾಯಿತು. ರಾಜ್ಯದ ಎಲ್ಲ ಶಿಲ್ಪಿಗಳೂ ಪ್ರಯತ್ನಿಸಿದರು. ಯಾರಿಗೂ ಆ ಶಿಲೆಯು ಒಲೆಯಲಿಲ್ಲ. ಅಷ್ಟು ಕಠಿಣವಾದ ಶಿಲೆ ಅದಾಗಿದ್ದಿತು. ಈ ಶಿಲೆಯ ವಾರ್ತೆ ಹರಡಿತು. ಮಾನವನಿಗೆ ಕಲ್ಲು ಬಗ್ಗದಾಗಿದ್ದು ಅವರ ಇತಿಹಾಸದಲ್ಲಿ ಅದೇ ಮೊದಲನೆಯದಾಗಿದ್ದಿತು. ದೊರೆಯು ಮತ್ತೆ ಚಿಂತಾಕ್ರಾಂತನಾದನು. ಶಿವನು ತನ್ನ ಸತ್ತ್ವ ಪರೀಕ್ಷೆಗೆ ಬೆನ್ನಟ್ಟಿಕೊಂಡೇ ಹೊರಟಿದ್ದಾನೆಂದು ಭಾವಿಸಿದನು. ಈ ಸಲಮಾತ್ರ ವೀರಕೇಸರಿಯು ಹಾಸಿಗೆಯನ್ನೇ ಹಿಡಿದನು. ಮನೋವ್ಯಾಧಿಯಿಂದ ಅರಮನೆಯನ್ನು ಬಿಟ್ಟು ಹೊರಕ್ಕೆ ಬಾರದಾದನು. ಸಮಗ್ರ ರಾಜ್ಯವೇ ಅರಸನ ಚಿಂತೆಗಾಗಿ ದುಃಖಿಸಿತು.

ಅಷ್ಟರಲ್ಲಿ ಅಪೂರ್ವ ಶಿಲ್ಪಿಯು ಸ್ವಯಂಪ್ರೇರಣೆಯಿಂದ ಆ ಶಿಲೆಯಲ್ಲಿ ಮೂರ್ತಿಯನ್ನು ಕೆತ್ತುವುದಾಗಿ ಸಚಿವರಿಗೆ ಹೇಳಿದನು. ವಾರ್ತೆ ಸಚಿವರಿಂದ ದೊರೆಗಳ ಚಿತ್ತದ ವರೆಗೆ ತಲುಪಿತು. ವೀರಕೇಸರಿಗೆ ಚೇತನವು ಬಂದಂತಾಯಿತು. ವಿಶ್ವದಲ್ಲಿ ಒಬ್ಬರಾದರೂ ಆ ಶಿಲೆಯಲ್ಲಿ ಮೂರ್ತಿಯನ್ನು ಕೆತ್ತುವವರು ಹುಟ್ಟಿದರೆಂದು ದೊರೆಗೆ ಅತೀವ ಸಂತೋಷವಾಯಿತು. ರಾಜ್ಯದ ಜನರೆಲ್ಲರೂ ಈ ಅಸಾಮಾನ್ಯ ಶಿಲ್ಪಿಯನ್ನು ನೋಡಲು ಬಂದರು. ಶಿಲ್ಪಿಯು ಮುದುಕನಾಗಿದ್ದರೂ ತೇಜಃಪುಂಜನಾಗಿದ್ದನು. ಶಿಲ್ಪಿಯು ಆಡಿದ ಮಾತನ್ನು ಮಾಡಿ ತೋರಿಸಿಯೇ ತೀರುವನೆಂಬ ಚಿನ್ಹವು ಅವನ ಮುಖದಲ್ಲಿ ಒಡೆದು ಕಾಣುತ್ತಿತ್ತು. ವೀರಕೇಸರಿಗೆ ಆ ಅಮರಶಿಲ್ಪಿಯು ಒಂದು ಕರಾರನ್ನು ಹಾಕಿದನು: "ಸ್ವಾಮೀ, ಆ ಶಿಲೆಯನ್ನು ದೇಗುಲದೊಳಕ್ಕಿಟ್ಟು ದೇಗುಲದಲ್ಲಿ ನನ್ನನ್ನು ಹಾಕಿ ಅದರ ದ್ವಾರಗಳನ್ನು ಮುಚ್ಚಿಸಬೇಕು. ಇಪ್ಪತ್ತೊಂದು ದಿವಸಗಳ ವರೆಗೂ ನನ್ನನ್ನು ಯಾರೂ ಕಾಣಬಾರದು. ಆ ದೇಗುಲದ ದ್ವಾರವನ್ನು ಇಪ್ಪತ್ತೊಂದು ದಿನದಲ್ಲಿ ತೆರೆದದ್ದಾದರೆ ನಿಮಗೆ ಅನಿಷ್ಟವು ಸಂಭವಿಸುವುದು. ಈ ಕರಾರಿಗೆ ಒಪ್ಪುವುದಾದರೆ ನಾನು ಆ ಕಾರ್ಯಕ್ಕೆ ಸಿದ್ಧನು" ಎಂದು ಹೇಳಿದನು. ದೊರೆಗೆ ಇದರಲ್ಲಿ ಯಾವ ರೀತಿಯ ಮೋಸವೂ ಕಂಡುಬರಲಿಲ್ಲ. ಒಮ್ಮೆಲೇ ಅದಕ್ಕೆ ಒಪ್ಪಿದನು. ಆ ರೀತಿ ಶಿಲ್ಪಿಯನ್ನೂ ಹಾಗು ಶಿಲೆಯನ್ನೂ ದೇಗುಲದಲ್ಲಿರಿಸಿ, ದೇಗುಲದ ದ್ವಾರಗಳನ್ನು ಮುಚ್ಚಿಸಿ ಅದರ ಸುತ್ತಲೂ ಬಲವಾದ ಕಾವಲನ್ನಿಟ್ಟನು. ಶಿಲ್ಪಿಯು ದೇಗುಲದೊಳಕ್ಕೆ ಹೋಗಿ ವಾರ ಒಂದು ಕಳೆಯಿತು. ರಾಜ್ಯಕ್ಕೆ ರಾಜ್ಯವೇ ಕೌತುಕ-

ದಿಂದ ಇಪ್ಪತ್ತೊಂದನೇಯ ದಿನದ ಕೊನೆಯನ್ನು ನಿರೀಕ್ಷಿಸುತ್ತಲಿತ್ತು. ರಾಣಿಯು ನಿತ್ಯವು ದೇಗುಲಕ್ಕೆ ಬಂದು, ಅದರ ದ್ವಾರಕ್ಕೆ ಕಿವಿಹಚ್ಚಿ, ಏನಾದರೂ ಸಪ್ಪಳವು ಬರುವದೋ ಹೇಗೋ ಎಂದು ನೋಡುತ್ತಿದ್ದಳು. ಇಪ್ಪತ್ತುನಾಲ್ಕು ಗಂಟೆಗಳವರೆಗೆ ನಿರೀಕ್ಷಿಸಿದರೂ ದೇಗುಲದಿಂದ ಯಾವ ರೀತಿಯ ಸಪ್ಪಳವೂ ಬರಲಿಲ್ಲ. ರಾಣಿಗೆ ಬಲವಾದ ಸಂಶಯ ಬಂದಿತು. ಇದರಲ್ಲಿ ಮೋಸವಿದೆಯೆಂದು ಭಾವಿಸಿ ತನ್ನ ಪತಿಗೆ ಎಚ್ಚರಿಕೆಯನ್ನಿತ್ತಳು. ವೀರಕೇಸರಿಯನ್ನು ದೇಗುಲಕ್ಕೆ ಕರೆದುಕೊಂಡುಬಂದು ದ್ವಾರಕ್ಕೆ ಕಿವಿಹಚ್ಚಲು ಹೇಳಿದಳು. ಯಾವ ರೀತಿಯ ಸಪ್ಪಳವೂ ಬರುತ್ತಿರಲಿಲ್ಲ. ಶಿಲೆಯನ್ನು ಕೆತ್ತದೆ ಮೂರ್ತಿಯನ್ನು ಕೆತ್ತುವ ಶಿಲ್ಪಿ ಯಾರು? ಎಲ್ಲರಿಗೂ ಆಶ್ಚರ್ಯವಾಯಿತು. ಅದಕ್ಕೆ ಆ ದೇಗುಲದ ದ್ವಾರಗಳನ್ನು ತೆರೆದು ವಸ್ತುಸ್ಥಿತಿಯನ್ನಾದರೂ ಅರಿಯಲು ರಾಣಿಯು ರಾಜನಿಗೆ ಒತ್ತಾಯಪಡಿಸಿದಳು. ಮೊದ-ಮೊದಲು ರಾಜ ಅದಕ್ಕೆ ಒಪ್ಪಲಿಲ್ಲ. "ಏನೋ ಆ ಶಿಲ್ಪಿ ಇಪ್ಪತ್ತೊಂದು ದಿನಗಳವರೆಗೆ ತಡೆಯಲು ಹೇಳಿದ್ದಾನೆ. ಇನ್ನೊಂದು ವಾರ ಉಳಿದಿದೆ. ಸ್ವಲ್ಪ ಶಾಂತಳಾಗು" ಎಂದು ಹೇಳಿದನು. ರಾಣಿಯು ಅರಸನ ಮಾತಿಗೆ ಒಪ್ಪಲಿಲ್ಲ. ತನ್ನ ವಾದವನ್ನೇ ಬೆಳೆಸಿದಳು; "ಆ ದೇಗುಲದಿಂದ ಸಪ್ಪಳವೇ ಹೊರಡದ ಮೇಲೆ, ಅವನು ಮೂರ್ತಿಯನ್ನು ಕೆತ್ತುವುದು ಅಸತ್ಯ ಹಾಗು ಅಸಾಧ್ಯ" ರಾಣಿಯು ರಾಜನಿಗೆ ಬಲವಾಗಿ ಬಿಂಬಿಸಿದಳು. ಅಂತೂ ರಾಣಿಯ ಒತ್ತಾಯಕ್ಕಾಗಿ, ಇನ್ನೂ ವಾರವೊಂದು ಉಳಿದಿರುವಾಗಲೇ ಅದರ ದ್ವಾರವನ್ನು ತೆಗೆಯಿಸಿ ನೋಡಬೇಕೆಂಬ ನಿರ್ಣಯಕ್ಕೆ ದೊರೆಯು ಬಂದನು. ಸೇವಕರಿಂದ ಆ ದೇಗುಲದ ದ್ವಾರಗಳನ್ನು ಒಡೆಯಿಸಿದನು. ದೇಗುಲದ ಒಳಕ್ಕೆ ಹೋದನು. ಆದರೆ ಅಲ್ಲೇನಿದೆ? ಅದರಲ್ಲಿ ಯಾರೂ ಇಲ್ಲ. ಶಿಲ್ಪಿಯೊ, ಎಲ್ಲಿಯೋ ಮಾಯವಾಗಿದ್ದನು. ಆ ಸೈನಿಕರಿಗೆ ಅದರ ಅರಿವೇ ಇಲ್ಲ. ಅಂತಹ ಕಠಿಣ ಶಿಲೆಯಲ್ಲಿ ಶಿಲ್ಪಿಯು ಸುಂದರವಾದ ಮೂರ್ತಿಯನ್ನು ಕೆತ್ತಿದ್ದನು. ಆದರೆ ಮೂರ್ತಿಯು ಪೂರ್ಣವಾಗಿರಲಿಲ್ಲ. ಮೂರ್ತಿಯ ದೇಹವಿಷ್ಟೇ ಸಿದ್ಧವಾಗಿತ್ತು. ಹಸ್ತ-ಪಾದಗಳಿನ್ನೂ ಸಿದ್ಧವಾಗಿದ್ದಿಲ್ಲ. ರಾಣಿಯು ರಾಜನ ಹಿಂದುಗಡೆಯಿಂದ ಬಂದು ಆ ಮೂರ್ತಿಯನ್ನು ನೋಡಿದವಳೇ ಬಿದ್ದೇಬಿಟ್ಟಳು. ಅವಳ ದೇಹದ ಮೇಲಿನ ಪ್ರಜ್ಞೆ ತಪ್ಪಿತು. ಅವಳಿಗೆ ನೀರನ್ನು ಒಡಿದು ಎಬ್ಬಿಸಿ ಕೂಡಿಸಿದ ಮೇಲೆ ಮತ್ತೆ ಮೂರ್ತಿಯ ಕಣ್ಣಿಗೆ ಬೀಳಲು ಅವಳಿಗೆ ಮತ್ತೆ ಮೂರ್ಛೆ ಬಂದಿತು. ಅವಳನ್ನು ಅರಮನೆಗೆ ಸಾಗಿಸಿ ಎಚ್ಚರ ಬಂದಮೇಲೆ ಕೇಳಿದರೆ "ಆ ಮೂರ್ತಿಯ ಕಣ್ಣಿಂದ ಬೆಂಕಿಯ ಕಿಡಿಗಳು ಹೊರಬರುತ್ತಿದ್ದುವು. "-ಸ್ತ್ರೀಜಾತಿಯೇ ನಿನ್ನಂತಹದು. ನಿನ್ನ ಒತ್ತಾಯದಿಂದ ನಿನ್ನ ಪತಿಗೂ ನನ್ನ ಮಾತಿನಲ್ಲಿ ನಂಬಿಕೆಯು ಉಳಿಯಲಿಲ್ಲ. ನಿನಗೆ ನನ್ನ ದರ್ಶನವಿಲ್ಲ!" ಎಂದು ಕಿವಿಯಲ್ಲಿ ಗಾಳಿಯು ಊದಿದಂತಾಯಿತಂತೆ ರಾಣಿಯು ಅದನ್ನು ಹೇಳಿ ತನ್ನ ತಪ್ಪನ್ನು ಕ್ಷಮಿಸಲು ಶಿವನನ್ನು ಬೇಡಿದಳು.

ದೊರೆಯಾದ ವೀರಕೇಸರಿಗೆ ಮತ್ತೆ ಚಿಂತೆಯಾಯಿತು. ಇಂತಹ ಅಪೂರ್ಣ ವಿಗ್ರಹವನ್ನು ಅದು ಹೇಗೆ ಪ್ರತಿಷ್ಠಾಪಿಸುವುದು? ಏನೇ ಆದರೂ, ಆ ಬೆಟ್ಟದಡಿಯಲ್ಲಿದ್ದ ತಮ್ಮ ಮೂಲ ಪ್ರತಿಮೆಯನ್ನು ತಂದೇ ಈ ದೇಗುಲದಲ್ಲಿ ಪ್ರತಿಷ್ಠಾಪಿಸುವುದೆಂದು ನಿರ್ಧಾರವಾಯಿತು. ಸೈನಿಕರು ಬೆಟ್ಟದ ಕೆಳಗಿನ ಮಹಾಲಿಂಗನ ಮೂರ್ತಿಯನ್ನು ತರಲು ಹೋದರು. ಅಂದುರಾತ್ರಿ ಮತ್ತೆ ಶಿವನು ಕನಸಿನಲ್ಲಿ ಬಂದು "ಇನ್ನೂ ನಿನ್ನ ಕುರುಡು ಮೋಹವು ಹೋಗಿಲ್ಲ. ನಾನು ಹೇಳಿದ ಮೇಲೆ ಅರ್ಧನಿದ್ದರೇನು? ಪೂರ್ಣನಿದ್ದರೇನು? ಇದನ್ನೇ ನೀನು ದೇಗುಲದಲ್ಲಿರಿಸಿ ಪೂಜಿಸು. ಇನ್ನೊಂದು ವಾರದ ವರೆಗೆ ನಿನಗೆ ತಡೆಯುವುದಾಗಲಿಲ್ಲ. ನಿನ್ನ ಹೆಂಡತಿಯ ಮಾತನ್ನು ಕೇಳಿ ದ್ವಾರವನ್ನು ಒಡೆದಿ" ಎಂದು ಹೇಳಿದನಂತೆ. ಬೆಟ್ಟದ ಕೆಳಕ್ಕೆ ಸೈನಿಕರು ಹೋಗಿ ಆ ಲಂಬಾಣಿಗರ ದೇಗುಲವನ್ನು ಶೋಧಿಸಿ ಅಲ್ಲಿಗೆ ಹೋದರಂತೆ. ಆದರೆ ಅಲ್ಲಿಯೂ ಒಂದು ವಿಚಿತ್ರ ವಾತಾವರಣವೇ ಉದ್ಭವಿಸಿತ್ತು. ರಾತ್ರಿಯು ಕಳೆಯುವುದರಲ್ಲಿಯೇ ಶಿವನ ದೇಹವೇ ಮಾಯವಾಗಿತ್ತು. ಕೇವಲ ಶಿವನ ಹಸ್ತ-ಪಾದಗಳಷ್ಟೇ ಆ ದೇಗುಲದಲ್ಲಿ ನಿಂತಿದ್ದುವು. ಅದಕ್ಕೆ ಆ ಲಂಬಾಣಿಗರು ಅತಿ ವಿಷಾದದಿಂದ ಆ ದೇಗುಲದ ಬಳಿ ಕುಳಿತಿದ್ದರು. ಸೈನಿಕರು ಆ ದೃಶ್ಯವನ್ನು ನೋಡಿ ನಿರಾಶರಾಗಿ ಬಂದರು. ರಾಜನಿಗೂ ಆಗಲೇ ಮುಂದಿನ ಕಾರ್ಯದ ಬಗ್ಗೆ ವಿಚಾರವು ಸುಳಿದುಹೋಗಿತ್ತು. "ಆ ಲಂಬಾಣಿಗರ ಭಕ್ತಿಗೆ ಮೆಚ್ಚಿ ಅಲ್ಲಿ ಕಾಲುಗಳನ್ನು ಹಾಗು ಕೈಗಳನ್ನಷ್ಟೇ ಬಿಟ್ಟು ಬಂದಿದ್ದೇನೆ" ಎಂಬ ಶಿವನ ಮಾತು ದೊರೆಗೆ ಕನಸಿನಲ್ಲಿ ಕೇಳಿಸಿತ್ತು. ಅದಕ್ಕೆ ಆ ದೇಹವಿದ್ದ ಪ್ರತಿಮೆಯನ್ನೇ ಅಲ್ಲಿ ಪ್ರತಿಷ್ಠಾಪಿಸಿದನು. ಆ ಶಿಲ್ಪಿಯು ಕೆತ್ತಿದಷ್ಟು ಮೂರ್ತಿಯನ್ನು ಆ ಚಿಕ್ಕ ದೇಗುಲದಲ್ಲಿಯೇ ಇರಿಸಿದರು. ಆ ಗರ್ಭಗುಡಿಯು ಆ ಶಿಲ್ಪಿಯ ಕೈವಾಡವೇ ಇದ್ದುದರಿಂದ, ಅದನ್ನು ಹಾಗೆಯೇ ಇಟ್ಟರು. ರಾಣಿಗೆ ಮೂರ್ತಿ ನೋಡಿದರೆ ಮೂರ್ಛೆ ಬರುತ್ತಿದ್ದುದರಿಂದ, ಸಮಗ್ರ ಸ್ತ್ರೀಯರೇ ಆ ಮೂರ್ತಿಯನ್ನು ಆ ದೇಗುಲದಲ್ಲಿ ನೋಡಬಾರದೆಂದು ವೀರಕೇಸರಿಯು ಕಟ್ಟಪ್ಪಣೆಯನ್ನು ವಿಧಿಸಿದನು. ಮುಂದೆ ಕೆಲದಿವಸಗಳು ಹೋದ ಮೇಲೆ, ಶಿವನು ಕನಸಿನಲ್ಲಿಬಂದು ಹೇಳಿದ್ದರಿಂದ, ಪ್ರತಿ ವರುಷವೂ ಶಿವ ಅಥವಾ ಮಹಾಲಿಂಗನ ದೇಹವನ್ನು ತಂದು ಬೆಟ್ಟದಡಿಯ ದೇಗುಲದಲ್ಲಿಟ್ಟು ಪೂಜಿಸಿ ಜಾತ್ರೆ ನೆರೆಯಿಸುತ್ತಿದ್ದರು. ಆ ಲಂಬಾಣಿಗರು ಅಂದು ಶಿವನ ಮೂರ್ತಿಯನ್ನು ಬೆಟ್ಟದ ಮೇಲಿಂದ ಕದ್ದು ತಂದು ಕೆಳಗಿರಿಸಿದ್ದಕ್ಕೆ ಕಳ್ಳತನದಿಂದಲೇ ವೃತ್ತಿಯನ್ನು ಸಾಗಿಸಲು ಶಿವನು ಅಥವಾ ಮಹಾಲಿಂಗನು ಶಾಪವನ್ನಿತ್ತನು. ಎಂತಲೇ ಶಿವನ ದೇಹವು ಬೆಟ್ಟದ ಮೇಲಿದ್ದರೆ, ಅವನ ಹಸ್ತಪಾದಗಳು ಬೆಟ್ಟದಡಿಯ ದೇಗುಲದಲ್ಲಿ ಇಂದಿಗೂ ಇರುತ್ತವೆ.

ಹಳ್ಳಿಗರ ಮಾತಿನಲ್ಲಿ ತಥ್ಯವಿದೆ ಎಂಬುದು, ಅವರು ಕಥೆಯನ್ನು ಹೇಳಿದ ಮೇಲೆ ತಿಳಿಯುತ್ತದೆ. ಶಿವನ ಅಥವಾ ಮಹಾಲಿಂಗನ ಅರ್ಧಾಕಾರದ ಮೂರ್ತಿಯ ದೇಗುಲವು ಇನ್ನೂ ಮಹಾಲಿಂಗನ ಬೆಟ್ಟದ ಮೇಲಿದೆ. ಬೆಟ್ಟದ ಕೆಳಕ್ಕಿದ್ದ ಆ ಪಾದ-ಹಸ್ತಗಳ ಮಹಾಲಿಂಗನ ದೇಗುಲದ ಸುತ್ತಲೂ, ಲಂಬಾಣಿಗರು ಕಳ್ಳತನಮಾಡಿಯೆ ಜೀವನವನ್ನು ಸಾಗಿಸಿ ವಾಸಿಸುತ್ತಾರೆ.

ಜರ್ಮನಿಯ ಔದ್ಯೋಗಿಕ ಕೇಂದ್ರ

(ಒಂದು ಪರದೇಶದ ಪತ್ರ)

ಬರೆದವರು:— ಶ್ರೀ. ಎಂ. ಕೆ. ವರಾಹಮೂರ್ತಿ ಬಿ. ಎಸ್‌ಸಿ. (ಟೆಕ್), ಎಂ. ಎಸ್‌ಸಿ ಪ. ಜರ್ಮನಿ

ಜರ್ಮನಿಯ ಇಂದಿನ ಕುಟುಂಬಪದ್ಧತಿಯು ಹೇಗಿದೆ? ಅಲ್ಲಿಯ ಜನರ ನೌಕರಿಯ ಅವಧಿಯೆಷ್ಟು? ಕಲ್ಲಿದ್ದಲಿಯ ಖಣಿಗಳಲ್ಲಿ ಹೇಗೆ ಹೇಗೆ ಕೆಲಸಗಳು ನಡೆಯುವವು? ಇವೆಲ್ಲ ಮಾತುಗಳೂ ಕುತೂಹಲಕಾರಿಯಾಗಿವೆ!

—O—

ಮಾಯನ್ಸ್
೧೪-೬-೫೪

ಮಾತೆಗೆ ವಂದನೆಗಳು.

ನಿಮ್ಮ ಓಲೆ ತಲುಪಿ ವಿಷಯವೆಲ್ಲ ತಿಳಿಯಿತು. ನನ್ನ ಮೊದಲಿನ ಬರೆಹ ನಿಮ್ಮನ್ನು ಆನಂದಪಡಿಸಿದ್ದಕ್ಕೆ ನನಗೂ ಆನಂದವಾಯಿತು. ಮಾಯನ್ಸ್ ವಿಶ್ವವಿದ್ಯಾಲಯಕ್ಕೆ ಜೂನ್ ೬ ರಿಂದ ೧೩ರ ವರೆಗೆ "ಫಿಂಗಸ್ಟನ್" ಹಬ್ಬದ ನಿಮಿತ್ತ ರಜೆಯಿತ್ತು. ನನ್ನ ಜರ್ಮನ್ ಗೆಳೆಯರಾದ ಹೆರ್ ಹೆಲ್ಮಾರ್ ಓಬರ್ ಹಾಯಿಡನ್ನರ ಔತಣದ ಮೇರೆಗೆ, ಈ ರಜೆಯಲ್ಲಿ, ಅವರ ಹುಟ್ಟಿದ ಊರಿಗೆ ಹೋಗಿದ್ದೆವು. ಇವರು ನನ್ನ ಲೆಬೊರೆಟರಿಯ ಸಹಪಾಠಿಗಳು. ಇವರೂ ಕೂಡ ಪಿ. ಎಚ್‌ಡಿಗೆ ಅಭ್ಯಾಸ ಮಾಡುತ್ತಾರೆ. ಇವರು ಹುಟ್ಟಿಬೆಳೆದ, ತಂದೆ-ತಾಯಿಗಳು ನೆಲಸಿದ ಊರು "ಲ್ಯೂನೆನ್" (Lunen). ಈ ಪಟ್ಟಣ ಮಾಯನ್ಸ್‌ನಿಂದ ಸುಮಾರು ೩೫೦ ಕಿಲೋಮಿಟರು ದೂರ. ಸುಮಾರು ೪೫ ಮಾರ್ಕ್ಸ್‌ಗಳು ಹೋಗಿಬರುವ ವೆಚ್ಚ.

ಶನಿವಾರ, ಜೂನ್ ೭ನೆಯ ತಾರೀಖು. ಮೊದಲೇ ಗೊತ್ತುಪಡಿಸಿದಂತೆ, ನಾವಿಬ್ಬರೂ, ಮಾಯನ್ಸ್‌ನಿಂದ, ಬೆಳಗಿನ ೯ ಗಂಟೆಯ ಗಾಡಿಯಿಂದ ಪ್ರಯಾಣ ಬೆಳಸಿದೆವು. ನಮ್ಮ ಗಾಡಿಯು "ರ್‍ಹಾಯಿನ್" ನದಿಯ ದಂಡೆಗುಂಟ ಓಡುತ್ತಿದ್ದುದರಿಂದ, ನದಿಯ ಎಡ-ಬಲ ದಂಡೆಯ ಚೆಲುವನ್ನು ನೋಡಿ ಮಹದಾನಂದಪಟ್ಟೆವು. ದಂಡೆಯ ಎಡಬಲಕ್ಕೂ ಐತಿಹಾಸಿಕ ಕೋಟೆ-ಕೊತ್ತಲಗಳಿರುವುದರಿಂದ, ಅವುಗಳ ವಿವರವನ್ನು ನನ್ನ ಗೆಳೆಯರು ತಿಳಿಸಿ ಹೇಳಿದರು. ಈ ದಾರಿಯ ಮೇಲಿರುವ ಮುಖ್ಯ ಪಟ್ಟಣಗಳು: ಮಾಯಿನ್ಸ್, ಬಿಂಗೆನ್, ಕೋಬ್ಲೆನ್ಸ್, ಬೊನ್ನ, ಕಲೋನ್, ಡೂಸೆಲ್‌ಡೊರ್ಫ, ಡ್ಯೂಯ್ಸಬುರ್ಗ್, ಎಸ್ಸೆನ್ ಮತ್ತು ಡೋರ್ಟ್‌ಮುಂಡ್. ಮಾಯಿನ್ಸ್‌ನಿಂದ ಕಲೋನದ ವರೆಗಿನ ಪ್ರದೇಶ ಪ್ರಾಕೃತಿಕ ಸೌಂದರ್ಯದ ತವರುಮನೆಯಾದರೆ, ಡೂಸೆಲ್‌ಡೊರ್ಫಿನಿಂದ ಡೋರ್ಟ್‌ಮುಂದಿನ ವರೆಗಿನ ಭಾಗ, ಕಾರಖಾನೆಯ ಚಿಮಣಿಯ ಹೊಗೆಯಿಂದ ತುಂಬಿದ ಉದ್ಯೋಗಗಳ ತವರುಮನೆ. ಸುಮಾರು ೪ ಗಂಟೆಗೆ ಮಧ್ಯಾಹ್ನ ಡೋರ್ಟ್‌ಮುಂಡನ್ನು ತಲುಪಿದೆವು. ಡೋರ್ಟ್‌ಮುಂಡಿನಲ್ಲಿ ಗಾಡಿಯನ್ನು ಬದಲಾಯಿಸಿ "ಲೂನೆನ್"ಗೆ ನಾಲ್ಕೂವರೆ ಗಂಟೆಗೆ ತಲುಪಿದೆವು.

ನನ್ನ ಗೆಳೆಯನ ತಂದೆ-ತಾಯಿಯವರು, ಲೂನೆನ್ ಸ್ಟೇಶನಿನಲ್ಲಿ ನಮ್ಮಿಬ್ಬರನ್ನೂ ಸ್ವಾಗತಿಸಿದರು. ನನ್ನ ಗೆಳೆಯನ ತಂದೆಯ ಹೆಸರು ಹೆರ್ ಓಟ್ಟೋ ಓಬರ್ ಹಾಯಿಡನ್, ತಾಯಿ ಹೆಡವಿಗ್ ಓಬರ್ ಹಾಯಿಡನ್. ಇವರ ಸಂಸಾರವೆಂದರೆ ಮೂರೇ ಜನರು. ಓಟ್ಟೋ ಓಬರ್‌ಹಾಯಿಡನ್‌ರಿಗೆ ಒಬ್ಬ ಮಗಳಿದ್ದಳು. ಅವಳು ಎರಡು ವರುಷಗಳ ಹಿಂದೆಯೇ ತೀರಿಕೊಂಡಿದ್ದಾಳೆ. ಸಂಸಾರ ಚಿಕ್ಕದು. ಈಗ ಸದ್ಯಕ್ಕೆ ಜರ್ಮನಿಯ ಸಂಸಾರಗಳೆಲ್ಲ ಚಿಕ್ಕವಾಗಿಯೆ ಇವೆ. ಪ್ರತಿಯೊಂದು ಕುಟುಂಬದಲ್ಲಿ ತಂದೆ, ತಾಯಿ, ಒಬ್ಬ ಮಗ ಅಥವಾ ಒಬ್ಬ ಮಗಳು. ಹೆಚ್ಚೆಂದರೆ ಎರಡು ಮಕ್ಕಳು. ಹಂಚಿಕೆಯಿಂದ ಕಟ್ಟಿದ ಕುಟುಂಬಗಳು (Planned family). ಈಗ ಸದ್ಯಕ್ಕೆ, ಹಿಂದುಸ್ಥಾನಕ್ಕೂ ಈ (Family Planning) ಪದ್ಧತಿ ಬೇಕು. ಹತ್ತು ಹನ್ನೆರಡು ಮಕ್ಕಳನ್ನು ಹಡೆದು, ಶಿಕ್ಷಣ, ಉಡಿಗೆ-ತೊಡಿಗೆಗಳಿಗೆ ಕೊರತೆಯನ್ನು ಅನುಭವಿಸುವುದಕ್ಕಿಂತ, ೨-೩ ಮಕ್ಕಳನ್ನೆ ಹಡೆದು ಉತ್ತಮರೀತಿಯಿಂದ ಸಂಸಾರವನ್ನು ನಡೆಸುವುದು ಉತ್ತಮವೆಂದು ನನ್ನ ಮತ.

'ಯಾವಾಗಲೂ ಜರ್ಮನಿಯಲ್ಲಿ Planned Familyಗಳಿದ್ದವೋ ಅಥವಾ ಇತ್ತೀಚಿನ ಜೀವನದ ರೀತಿಯೋ?' ಎಂದು ಹೆರ್ ಓಟ್ಟೋ ಓಬರ್ ಹಾಯಿಡನ್‌ರನ್ನು ನಾನು ವಿಚಾರಿಸಲು, ಅವರು 'ಇದು ಇತ್ತೀಚಿಗಿನ ಸಂಸಾರದ ರೀತಿ. ಹಿಂದಕ್ಕೆ ೩೦-೪೦ ವರುಷಗಳ ಹಿಂದೆ, ಜರ್ಮನಿಯಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಕಡಿಮೆ ಕಡಿಮೆ ಎಂದರೆ ೫-೬ ಮಕ್ಕಳಿರುತ್ತಿದ್ದರು. ಉದಾಹರಣಾರ್ಥವಾಗಿ, ನನಗೆ

೧೪ ಜನ ಅಣ್ಣ-ತಮ್ಮಂದಿರು,—ನಾಲ್ಕು ಜನ ಅಕ್ಕ-ತಂಗಿಯರಿದ್ದಾರೆ. ಈಗ ಸದ್ಯಕ್ಕೆ ಜೀವಿಸಿರುವವರು ೧೩ ಜನ' ಎಂದು ತಮ್ಮ ಕುಟುಂಬದ ಫೋಟೋವನ್ನು ನನಗೆ ತೋರಿಸಿದರು. ಇಂಥ ದೊಡ್ಡ ಕುಟುಂಬವನ್ನು ನೋಡಿ ನನಗೆ ಬಹಳೇ ಅಗಾಧವೆನಿಸಿತು. ವರುಷಕ್ಕೊಮ್ಮೆ ಎಲ್ಲರೂ ಭೆಟ್ಟಿಯಾಗುತ್ತಾರೆ. ಈ ಹಿರಿಯರ ವಯಸ್ಸು ೬೯. ತಮ್ಮ ೬೫ನೆಯ ವಯಸ್ಸಿನಲ್ಲಿ ಕೆಲಸದಿಂದ ಪೆನ್ಶನ್ ತೆಗೆದುಕೊಂಡಿದ್ದಾರೆ. ಇಲ್ಲಿ ಪೆನ್ಶನಿನ ವಯಸ್ಸು ೬೫. ನಮ್ಮ ದೇಶಕ್ಕಿಂತ ೧೦ ವರುಷ ಹೆಚ್ಚು. ಇವರು ಕಲ್ಲಿದ್ದಲಿಯ ಕಾರಖಾನೆಯಲ್ಲಿ ತಮ್ಮ ೨೦ ನೆಯ ವರುಷದಿಂದ ದುಡಿಯಲು ಪ್ರಾರಂಭ ಮಾಡಿ, ೬೫ನೆಯ ವರುಷದಲ್ಲಿ ಪೆನ್ಶನ್ ತೆಗೆದುಕೊಂಡಿದ್ದಾರೆ. ಮುಖ್ಯವಾಗಿ ಕಟ್ಟಡದ ಮುಖ್ಯಸ್ಥರಾಗಿ (Bauleiter) ಪೆನ್ಶನರಾಗಿದ್ದಾರೆ. ಒಂದೇ ಕಾರಖಾನೆಯಲ್ಲಿ ೪೫ ವರುಷ ದುಡಿದ ಧೀರರು ಇವರು. ಇಷ್ಟು ವರುಷಗಳ ವರೆಗೆ ದುಡಿದವರು ಇವರೊಬ್ಬರೇ ಅಲ್ಲ; ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ಇವುಗಳೆಲ್ಲವನ್ನೂ ನೋಡಿದರೆ, ಕೆಲಸಗಾರರಲ್ಲಿ ಬೇರೆ ಬೇರೆಯ ಭಾಗದ ಮುಖ್ಯಸ್ಥರಲ್ಲಿ, ಹುಟ್ಟಿಸುವ ಉತ್ಸಾಹ ವ್ಯಕ್ತವಾಗುತ್ತದೆ; ಅಲ್ಲದೆ ಬಹಳ ದಿವಸಗಳವರೆಗೆ ಅದೇ ಕೆಲಸಕ್ಕೆ ಅಂಟಿಕೊಂಡಿರುವುದನ್ನು ನೋಡಿದರೆ, ಕೆಲಸಗಾರರ Self contentment ವ್ಯಕ್ತವಾಗುತ್ತದೆ. ಪ್ರತಿಯೊಬ್ಬ ಕೆಲಸಗಾರನು, ಕಲ್ಲಿದ್ದಲಿಯ ಖಣಿಯಲ್ಲಿ, ಕಡಿಮೆ ಎಂದರೆ ೪೦೦–೫೦೦ ಮಾರ್ಕ್ಸ್‌ಗಳನ್ನು (೪೫೦–೫೫೦ ರೂ) ದೊರಕಿಸುತ್ತಾನೆ.

ಹೆರ್ ಓಬರ್‌ಹಾಯಿಡೆನ್ನರು ಇನ್ನೂ ತಮ್ಮ ಕಾರಖಾನೆಯ ಮನೆಯಲ್ಲಿಯೆ ಇರುತ್ತಾರೆ. ಪ್ರತಿಯೊಂದು ಕಾರಖಾನೆಯವರೂ ತಮ್ಮ ಕೆಲಸಗಾರರ ಸಲುವಾಗಿ ಮನೆಯನ್ನು ಕಟ್ಟಿಸಿದ್ದಾರೆ. ಮನೆಯೆಂದರೆ ಅಡುಗೆ ಮನೆ, ಊಟದ ಮನೆ, ಪಡಸಾಲೆ, ಕೂಡುವ-ಮನೆ, ಮಲಗುವ ಕೋಣೆ, ಬಚ್ಚಲು ಮನೆ; ಮನೆಯ ಸುತ್ತಲೂ ಸುಂದರವಾದ ತೋಟ. ಇಂತಹ ಮನೆಗೆ Nominal ಬಾಡಿಗೆ ಸುಮಾರು ೨೫–೪೦ ಮಾರ್ಕ್ಸ್‌ಗಳು. ಮೊನ್ನೆ ತಾನೇ, ಬ್ರಿಟನಿನ ಮನೆ ಕಟ್ಟಡದ ಮಂತ್ರಿಗಳಾದ (Housing Minister) ಮ್ಯಾಕ್‌ಮಿಲನ್‌ರು ಈ ಭಾಗದಲ್ಲಿಯ ಔದ್ಯೋಗಿಕ ಮನೆಗಳನ್ನು ನೋಡಲು ಬಂದಿದ್ದರು. ಇಂತಹ ಸುವ್ಯವಸ್ಥಿತವಾದ ಮನೆಗಳನ್ನು ನೋಡಿ, ಬ್ರಿಟನ್ನು ಕೂಡ ಜರ್ಮನಿಯನ್ನು ಅನುಸರಿಸಬೇಕೆಂದು ಉದ್ಗಾರ ತೆಗೆದದ್ದು ಉಚಿತವಾಗಿದೆ. ಇದರಂತೆ, ಹಿಂದುಸ್ಥಾನವೂ ಅನುಸರಿಸಬೇಕೆಂದು ನನ್ನ ಇಚ್ಛೆ. ಇಲ್ಲಿಯ ಕಾರಖಾನೆಯ ಒಡೆಯರು, ತಮ್ಮ ಕೆಲಸಗಾರರಿಗೆ ಕೊಡುವ ಸವಲತ್ತುಗಳನ್ನು ನೋಡಿದರೆ, ನನಗೆ ಇಲ್ಲಿಯೇ ಇರಬೇಕೆಂದೆನಿಸಿದರೆ ತಪ್ಪಾಗಲಾರದು.

ಹೆರ್ ಓಬರ್‌ಹಾಯಿಡೆನರ ಕುಟುಂಬ ಇಷ್ಟು ದೊಡ್ಡದಿದ್ದರೂ, ಪ್ರತಿಯೊಬ್ಬರೂ ದುಡಿಯುವವರು. ಪ್ರತಿಯೊಂದು ಕುಟುಂಬದವರು ಬೇರೆ ಬೇರೆ ಪಟ್ಟಣದಲ್ಲಿ ನೆಲಸಿದ್ದಾರೆ. ನಿಮಗೆ ಗೊತ್ತಿದ್ದಂತೆ ಇವರ ಆಹಾರ ಮಾಂಸಾಹಾರ. ನಾನು ಶಾಕಾಹಾರಿಯಾದುದರಿಂದ, ನನಗೆ ಬೇಕಾಗುವ ಸಾಮಾನುಗಳನ್ನು ಮೊದಲೇ ಏರ್ಪಡಿಸಿದ್ದರು. ಪ್ರತಿ ದಿವಸ ಅವರ ಮನೆಯಲ್ಲಿ ನನ್ನ ಆಹಾರವನ್ನು ನಾನೇ ತಯಾರು ಮಾಡಿಕೊಳ್ಳುತ್ತಿದ್ದೆ. ಅನ್ನ, ಹುಳಿ, ಚಟ್ನಿ, ಬ್ರೆಡ್ ಮತ್ತು ಬೆಣ್ಣೆ-ಇತ್ಯಾದಿ. ಅಲ್ಲದೆ ಊಟವಾದ ಮೇಲೆ ಒಂದು ಕಪ್ಪು ಚಹಾ. ಇಲ್ಲಿಗೆ ಚಹಾ ಮತ್ತು ಕಾಫಿ ನಮ್ಮ ದೇಶದಿಂದ ಬರುತ್ತವೆ. ಅವುಗಳ ಮೇಲೆ ಬಹಳ ಕರವನ್ನು ಕೊಡಬೇಕಾಗುವುದರಿಂದ, ಇವೆರಡೂ ಬಹಳೇ ತುಟ್ಟಿ. ಒಂದು ಕಪ್ಪು ಚಹಕ್ಕೆ ಸುಮಾರು ಹನ್ನೆರಡು ಆಣೆ, ಕಾಫಿಗೆ ಸುಮಾರು ಎಂಟು ಆಣೆ. ಆದ್ದರಿಂದ ಚಹಾ ಮತ್ತು ಕಾಫಿ ಇಲ್ಲಿ Luxurious ಚಟಗಳಾಗಿವೆ.

ನನ್ನ ಪ್ರಯಾಣದ ಕಾರ್ಯಕ್ರಮವನ್ನು ಮೊದಲೇ ನನ್ನ ಗೆಳೆಯರು ಏರ್ಪಡಿಸಿದ್ದರು. "ರೂರ್ ಗೆಬೀಟ್" (Ruhrgebiet) ನಲ್ಲಿ ಕಾರಖಾನೆಗಳ ಕೇಂದ್ರೀಕರಣವಾಗಿದೆ. ಎಲ್ಲಿ ನೋಡಿದಲ್ಲಿ ಕಾರಖಾನೆಗಳ ಚಿಮಣಿಗಳೇ ಚಿಮಣಿಗಳು—ಅಲ್ಲದೆ ಹೊಗೆಯು. "ರೂರ್ ಗೆಬೀಟ್" ಎಂದರೆ ರೂರ್ ನದಿಯ ಎರಡೂ ದಡದಲ್ಲಿ ಪಸರಿಸಿದ ಪಟ್ಟಣಗಳು. ಈ ಔದ್ಯೋಗಿಕ ಭಾಗ ಇಡೀ ಯುರೋಪದಲ್ಲಿಯೇ ದೊಡ್ಡದು. ಇಂತಹ ಔದ್ಯೋಗಿಕ ಭಾಗದಲ್ಲಿಯೆ ನನ್ನ ಗೆಳೆಯನ ಊರು. ಮಂಗಳವಾರ ಮೊದಲೇ ಗೊತ್ತುಪಡಿಸಿದಂತೆ, ಕಲ್ಲಿದ್ದಲಿಯ ಖಣಿಯನ್ನು ನೋಡಲು ಹೋಗಿದ್ದೆವು. ಈ ಕಲ್ಲಿದ್ದಲಿಯ ಖಣಿಯ ಹೆಸರು "ತ್ಸೆಬ್ ವಿಕ್ಟೋರಿಯಾ". ಸುಮಾರು ೫೦೦೦ ಜನ ಕೂಲಿಕಾರರು ಕೆಲಸ ಮಾಡುವ ಕಾರಖಾನೆಯು ೯೦೦ ಮೀಟರ್ ಭೂಮಿಯ ಕೆಳಗಡೆಯಿಂದ ಕಲ್ಲಿದ್ದಲಿಯನ್ನು ಅಗೆದು ಮೇಲಕ್ಕೆ ಕಳಿಸುತ್ತಾರೆ. ೫೦೦, ೬೦೦, ೮೦೦ ಮೀಟರುಗಳ ಬೇರೆ ಬೇರೆ ತಳಭಾಗದಿಂದ ಬೇರೆ ಬೇರೆ ಬಗೆಯ ಕಲ್ಲಿದ್ದಲಿಯನ್ನು ಅಗೆದು, ಕೂಲಿಕಾರರು ಮೇಲೆ ಕಳಿಸುತ್ತಾರೆ. ಕಲ್ಲಿದ್ದಲಿಯು ಮೇಲ್ಗಡೆ ಬಂದ ಮೇಲೆ, ಬೇರೆ ಬೇರೆ ತಾಂತ್ರಿಕ ಪದ್ಧತಿಯಿಂದ ಅದನ್ನು ಶುದ್ಧಮಾಡುತ್ತಾರೆ. ಪ್ರತಿಯೊಬ್ಬ ಕೆಲಸಗಾರನು ೮೦೦–೯೦೦ ಮೀಟರು ಭೂಮಿಯ ಕೆಳಗಡೆ ೮ ಗಂಟೆ ಕೆಲಸ ಮಾಡಬೇಕು. ಇಲ್ಲಿ ತಾಜಾ ಹವೆಯು ಬರಲು ಅನುಕೂಲತೆ ಮಾಡಿದ್ದಾರೆ. ಇಂತಹ ಭಾಗದಲ್ಲಿ ಅನಾರೋಗ್ಯಕರ ಹವೆಯೇ ಹವೆ. ಆದರೂ ಇಲ್ಲಿ ಕೆಲಸ ಮಾಡುವವರು ೬೦–೮೦ ವರುಷ ಜೀವಿಸುವರು. ಇದಕ್ಕೆ ಇಲ್ಲಿಯ ತಂಪಾದ ಹವೆ ಮತ್ತು ಆಹಾರವೇ ಮುಖ್ಯಕಾರಣವೆಂದು ನನಗೆನಿಸುತ್ತದೆ. ಬೇರೆ ಬೇರೆ ತೆರದ ಕಲ್ಲಿದ್ದಲಿಯನ್ನು ತಯಾರಿಸುವರಲ್ಲದೆ, ಕಲ್ಲಿದ್ದಲಿಯನ್ನು ಡಿಸ್ಟಿಲ್ (Distill) ಮಾಡುತ್ತಾರೆ. ಡಿಸ್ಟಿಲ್ ಮಾಡಿದ ಮೇಲೆ ಬಂದ ರಾಸಾಯನಿಕ ಪದಾರ್ಥಗಳನ್ನು ಬೇರ್ಪಡಿಸಿ ಶುದ್ಧಮಾಡುತ್ತಾರೆ. ಉದಾಹರಣಾರ್ಥವಾಗಿ: ಬೆಂಜೀನ್, ಫಿನೋಲ್—ಇತ್ಯಾದಿ. ಅಲ್ಲದೆ ಗಂಧಕಾಮ್ಲವನ್ನು ಮಾಡುವ ಭಾಗವೂ ಇದೆ. ಇಷ್ಟೆಲ್ಲ ನೋಡಬೇಕಾದರೆ ನಮಗೆ ೬–೮ ಗಂಟೆ ಬೇಕಾಯಿತು. ಇಂತಹ ಕಲ್ಲಿದ್ದಲಿಯ ಖಣಿಗಳು ರೂರ್‌ಗೇಬಿಟಿನಲ್ಲಿ ನೂರೆಂಟು ಇವೆ. ಇಲ್ಲಿ ಈಗ ಸೂರ್ಯಾಸ್ತವು ಬಹಳೇ ತಡವಾಗಿ ಆಗುವುದರಿಂದ, ಸಂಜೆಯ ಮುಂದೆ ಊರನ್ನು ನೋಡಲು ಅಥವಾ ಸುತ್ತುಮುತ್ತಲಿನ ಪ್ರಾಕೃತಿಕ ಸೌಂದರ್ಯವನ್ನು ನೋಡಲು ಹೋಗಲು ಅನುಕೂಲ.

"ಲ್ಯೂಸಿನ್" ಬಹಳ ಪುರಾತನ ಪಟ್ಟಣ ಸುಮಾರು ೮೦೦-೯೦೦ ವರುಷಗಳಷ್ಟು ಪುರಾತನದ್ದಿರಬಹುದು. ಈಗಿನ ಇಲ್ಲಿಯ ಜನಸಂಖ್ಯೆ ೬೫೦೦೦. ಇಲ್ಲಿ "ಲಿಫ್" ಎಂಬ ಚಿಕ್ಕ ನದಿಯಿದೆ. ಅಲ್ಲದೆ "ಡೋರ್ಟ್ಮುಂಡ್-ಎಮ್ಸ್" ಎಂಬ ನೀರಿನ ಕಾಲುವೆ(ಕ್ಯಾನಲ್) ಇದೆ. ಈ ಕಾಲುವೆಯು ಉದ್ಯೋಗಕ್ಕೆ ಬಹಳ ಅನುಕೂಲವಾಗಿದೆ. ಇಲ್ಲಿ ಚಿಕ್ಕ ಹಡಗುಗಳು ಓಡಾಡುತ್ತವೆ. ನೀರಿನ transport ಬಹಳ ಅಗ್ಗವಾದುದಾಗಿರುವುದರಿಂದ, ಇಲ್ಲಿಯ ಎಲ್ಲ ಕಾರಖಾನೆಗಳವರೂ ಇದರ ಸದುಪಯೋಗವನ್ನು ಮಾಡಿಕೊಂಡಿದ್ದಾರೆ. ಹಡಗುಗಳು ಕಚ್ಚಾಮಾಲನ್ನು ತರುತ್ತವೆ; ಅಲ್ಲದೆ ಪಕ್ಕಾಮಾಲನ್ನು ತೆಗೆದು-ಕೊಂಡು ಹೋಗುತ್ತವೆ. "ಲಿಫ್" ನದಿಯ ನೀರನ್ನು, ಕುಡಿಯಲು ಮತ್ತು ಕಾರಖಾನೆಯ ಸಲುವಾಗಿ ಬಳಸುವರು; ಇಲ್ಲಿ ಎರಡು ಮೂರು ಕಲ್ಲಿದ್ದಲಿಯ ಖಣಿಗಳು, ತಾಮ್ರದ ಕಾರಖಾನೆ, ಮತ್ತು ಅಲ್ಯುಮಿನಿಯಂ ಕಾರಖಾನೆ, ಕಬ್ಬಿಣದ ಕಾರಖಾನೆ ಅಲ್ಲದೆ ಇನ್ನೂ ಬೇರೆ ಬೇರೆ ಅನೇಕ ಚಿಕ್ಕ ಚಿಕ್ಕ ಕಾರಖಾನೆಗಳು ತುಂಬಿವೆ. ತಾಮ್ರದ ಮತ್ತು ಅಲ್ಯುಮಿನಿಯಂ ಕಾರಖಾನೆಗಳನ್ನು ಕೂಡ ನೋಡಿದೆ. ಇಲ್ಲಿ ಇವುಗಳನ್ನು ತಯಾರಿಸುವ ಪದ್ಧತಿಗಳು ಇತ್ತೀಚಿಗಿನವು. ಅಲ್ಯುಮಿನಿಯಂ ಕಾರಖಾನೆಯು ಮಾದರಿಯ ಕಾರಖಾನೆಯಾಗಿದೆ. ತಾಮ್ರ ಮತ್ತು ಅಲ್ಯುಮಿನಿಯಂ ಶುದ್ಧಮಾಡುವ, ಇಲೆಕ್ಟ್ರಿಕಲ್ ಪದ್ಧತಿಯ ಭಾಗವು ನೋಡತಕ್ಕಂತಹದು ಇದೆ. ತಾಮ್ರದ ಕಾರ-ಖಾನೆಯ ಹೆಸರು "ಕೈಸರ್ ಕುಫೆರ ಹ್ಯುಟ್". ಇವರು ಮುಂಬಯಿ-ಯಲ್ಲಿ "ಕಾಮೀನೀ ಇಂಜನಿಯರಿಂಗ್ ವರ್ಕ್ಸ್" ಕಾರಖಾನೆಯಲ್ಲಿ, ತಾಮ್ರವನ್ನು ಶುದ್ಧ ಮಾಡುವ ಭಾಗವನ್ನು ಕಟ್ಟುತ್ತೀವೆ—ಎಂದು ನನಗೆ ತಿಳಿಸಿದರು.

"ಲ್ಯೂಸಿನ್" ಸುತ್ತುಮುತ್ತಲೂ ಅಡವಿ-ಗುಡ್ಡಗಾಡು ಇರು-ವುದರಿಂದ, ಪ್ರಾಕೃತಿಕಸೌಂದರ್ಯ ಮನೋಹರವಾಗಿದೆ. ಇಲ್ಲಿಯ ಅಡವಿಗಳು ಮನುಷ್ಯನಿರ್ಮಿತ ಅಡವಿಗಳು. ನಮ್ಮಲ್ಲಿಯ ಹಾಗೆ ಕಾಡು ಅಡವಿಗಳಲ್ಲ. ಹಾವು-ಹುಲಿಗಳ ಹೆದರಿಕೆ ಇಲ್ಲ. ಚಿಕ್ಕ ಚಿಕ್ಕ ಬಾಲಕರು ಕೂಡ ಹೆದರಿಕೆಯಿಲ್ಲದೆ ತಿರುಗಾಡಲು ಹೋಗಬಹುದು. ಈಗ ಸದ್ಯ ಇಲ್ಲಿ ಬೇಸಿಗೆ ಕಾಲವಾದುದರಿಂದ, ತುಂಬ ಜನರು ಅಡವಿಯಲ್ಲಿ ತಿರುಗಾಡಲು ಹೋಗುತ್ತಾರೆ. ಈ ಊರಿಗೆ ಸಮೀಪದಲ್ಲಿಯೇ (೨-೩ ಕಿಲೋಮೀಟರ್) "ಕಾಪೆನ್ ಬರ್ಗ್" ಎಂಬ ಕಾಪೆನ್ ಗುಡ್ಡವಿದೆ. ಈ ಗುಡ್ಡದ ಮೇಲಿಂದ ಲ್ಯುನಿನ್ ನೋಡಿದರೆ, ಸುಂದರವಾಗಿ ಕಾಣುತ್ತದೆ. ಈಗುಡ್ಡದಲ್ಲಿ ೧೦೦೦-೧೨೦೦ ವರುಷಗಳ ಹಳೆಯ ರೋಮನ್ ಚರ್ಚಿದೆ. ಅಲ್ಲದೆ ನೀರಡಿಕೆಯಾದವರಿಗೆ ಬಾಯಾರಿಕೆಯನ್ನು ಆರಿಸಿಕೊಳ್ಳುವುದರ ಸಲುವಾಗಿ "ವಾಯಿನ್ ಪ್ರೋಬ್ ಸ್ಟ್ಯುಬ್"—ವಾಯಿನ್‌ಮಾಸಲೆಯನ್ನು ನೋಡುವ ಅಂಗಡಿಗಳಿವೆ.

ಮರುದಿವಸ ೨೦ ಕಿಲೋಮಿಟರು ದೂರದಲ್ಲಿರುವ "ನೋರ್ಡ ಕೆರ್ಕನ್" ಎಂಬ ಕೋಟೆಯನ್ನು ನೋಡಲಿಕ್ಕೆ ಹೋಗಿದ್ದೆವು. ಇದು ಕೂಡ ಬಹಳ ಹಳೆಯ ಕೋಟೆ. ಪ್ಯಾರೀಸಿನಲ್ಲಿಯ ವರ್ಸಾಯಿಯಲ್ಲಿರುವ ಕೋಟೆಯಂತೆ ಇದೆ. ಸುತ್ತುಮುತ್ತಲಿನ ತೋಟ ಮತ್ತು ಕಟ್ಟಡದ ಸುತ್ತಲೂ ರಕ್ಷಣೆಯ ಸಲುವಾಗಿ ಇದ್ದ ನೀರಿನ ಕಾಲುವೆ ಒಂದು ವಿಚಿತ್ರ ಸೌಂದರ್ಯವನ್ನು ಈ ಕೋಟೆಗೆ ಕೊಟ್ಟಿದೆ.

ತಾಯಿ ! ನನ್ನ ಪ್ರವಾಸದ ವಿವರ ನಿಮ್ಮನ್ನು ದಣಿಸುವ(tire) ದಿಲ್ಲೆಂದು ನಂಬಿದ್ದೇನೆ. ಇನ್ನೂ ಎಷ್ಟೋ ಹೇಳಬೇಕಾಗಿದೆ. ಮುಂದಿನ ಓಲೆಯಲ್ಲಿ ಮತ್ತೆ ಬರೆದು ತಿಳಿಸುತ್ತೇನೆ.

ಹಿರಿಯರಿಗೆ ವಂದನೆಗಳು.

ನಿಮ್ಮ ಮಗ

ಮಧ್ವೇಶ.

'ಜಯಂತಿ'ಗೆ ಚಂದಾದಾರರಾಗಿ

ಕುಟುಂಬದ ಸಂಸ್ಕೃತಿ ಬೆಳಸಿಕೊಳ್ಳಿರಿ.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ಶ್ರೀ. ಭುಜೇಂದ್ರ ಮಹಿಷವಾಡಿ	೧-೮-೦
ಬಾಳ-ಬಂಡಿ (ಕವನಸಂಗ್ರಹ) ಶ್ರೀ. ಬಾಳು ಬಿ. ಉಪಾಧ್ಯೆ	೦-೮-೦
ಮೂಲ ಶಿಕ್ಷಣದ ಮೌಲ್ಯಮಾಪಣ ಶ್ರೀ. ಮಿರ್ಜಿ ಅಣ್ಣಾರಾಯ	೦-೧೨-೦
ಭರತೇಶನ ನಾಲ್ಕು ಚಿತ್ರಗಳು ಶ್ರೀ. ಮಿರ್ಜಿ ಅಣ್ಣಾರಾಯ	೧-೪-೦
ಶ್ರೀ ಶಾಂತಿಸಾಗರ	೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. **ಉಗಾರ ಖುರ್ದ** (ಜಿಲ್ಹಾ ಬೆಳಗಾಂವಿ)

ನಾ ಹೋಗಬೇಕು

ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ. ಮುಂಬಯಿ

ನಾ ಹೋಗಬೇಕು–
ನಿನ್ನ ತೊಳ್ಸೆರೆಯಿಂದ ಸರಿದು ದೂರ
ಸಪ್ತ ಸಮುದ್ರಗಳ ದಾಟಿ....ದೂರ
ನಾ ಹೋಗಬೇಕು.
ದಿಗ್ವಿಜಯ ಸಾಧಿಸಲು ಬಯಸುತಿಲ್ಲ
ಮಲ್ಲಿಗೆಯ ತರಲು ನಾ ಆಶಿಸಿಲ್ಲ
ನಿನ್ನ ಕಣ್ಸೆರೆಯೇನು ಬೇಸರಲ್ಲ....
'ಅಂದರೇಕೆ ?'
ಹಿಮಗಿರಿಯ ಕಂದರದ ಕರೆ ಇದಲ್ಲ
ಕೈಗೆರೆಯ ಕೊರೆದಿರುವ ದೈವವಲ್ಲ
ಕನಸಿನಲಿ ನರ್ತಿಸುವ ರಂಭೆಯಲ್ಲ....
'ಅಂದರೇಕೆ
ನನ್ನ ತೋಳ್ಸೆರೆಯಿಂದ ಸರಿದು ದೂರ
ಸಪ್ತ ಸಮುದ್ರಗಳ ದಾಟಿ....ದೂರ
ನೀ ಹೋಗಬೇಕು ?'
ನಿನ್ನ ಹೃದಯವ ಕೇಳು....
ಇರುಳಿನಲಿ ನನ್ನೆದೆಗೆ ಕಿವಿಯೊತ್ತಿ ಕೇಳು
ಉರುಳುತ್ತ ನಡೆದಿರುವ ಬ್ರಹ್ಮಾಂಡವ ಕೇಳು
ಒಳಗೊಳಗೆ ಕುದಿಯುತಿಹ ಪೃಥ್ವಿಯನು ಕೇಳು
ಸಂತತವು ಅಲೆಯುತಿಹ ಸಾಗರವ ಕೇಳು
ನಿನ್ನೆದೆಯ ಕೇಳು !

ಆ ಉದ್ವೇಗ ಹಿಂಗಿಸಲು ಬೇಕು ಅರಿವು
ಬೇಕು ಶಾಂತಿ....ಬೇಕು ಮರೆವು
ಅರಿವು—
ಅದರ ತರ್ಪಣ ಬೇಕು
ನನ್ನ ಗತಜೀವನಕೆ
ಅದರ ಅರ್ಪಣ ಬೇಕು
ನಮ್ಮ ನವಜೀವನಕೆ
ಅದಕಾಗಿ ನಾನಿನ್ನು ಹೊರಡಬೇಕು
ನೂರು ಕಡೆಯಲಿ ಅರಿವ ಅರಸಬೇಕು
ಮರಳಿ ತವ ತೋಳ್ಸೆರೆಯ ಸೇರಬೇಕು
ಸೇರಲೆಂದೇ ಈಗ ಸರಿಯಬೇಕು.
ಈ ವಿರಹ, ಈ ದುಃಖ ಸಹಿಸಬೇಕು.
ಇದು ತಪಶ್ಚರ್ಯ
ಅಲ್ಲ ಕ್ರೌರ್ಯ।
'ಇದರ ಫಲ? ಫಲವೇನು ?'
ನಿನ್ನ ತೋಳ್ಸೆರೆಯಲ್ಲಿ
ನವ್ಯ ಐಶ್ವರ್ಯ;
ನಿನ್ನ ಕಣ್ಸೆರೆಯಲ್ಲಿ
ನವ್ಯ ಆಶ್ಚರ್ಯ;
ನಮ್ಮ ಬಂಧನದಲ್ಲಿ
ನವನಂದನ!

ಪಾದ್ರಿಯ ದಿಗಿಲು

ಜ. ಶ್ರೀ. ಜ.

೧

ಚರ್ಚನು ನೋಡಲು ಹೋದರು ಗಾಂಧೀ
ದಕ್ಷಿಣ ಆಫ್ರಿಕೆಯಲಿ ಇದ್ದಾಗ;
ಪ್ರೀತಿಲಿ ತೋರಿದ ಪಾದ್ರಿಯು, ಕ್ರಿಸ್ತನ
ಮಹಿಮೆಯ ಕೊಂಡಾಡುತ ಆಗೀಗ.

೨

ಕೊನೆಯಲಿ ಕೇಳಿಯೆ ಬಿಟ್ಟನು: "ಗಾಂಧೀ !
ಕ್ರಿಶ್ಚನರೇಕಾಗದಿಹಿರಿ ನೀವು ?"
ಅಂತೆನೆ ಮರುನುಡಿದರಿವರು: "ಆದರೆ,
ಅಂತಾಗಲು ಏನಿದೆ ಬಹ ಫಲವು ?".

೩

"ಓ ಫಲವೆ! ಬಣ್ಣಿಸಲೆನ್ನಳವಲ್ಲ;
ನಿಮ್ಮೆಲ್ಲಾ ಪಾಪವ ಕ್ಷಮಿಸುತ,
ಸ್ವರ್ಗದ ಸುಖವನು ಕೊಡಿಸುವ ನಿಮಗೆಲೆ
ಘನ ಕರುಣಾಘನನವ ದೇವಸುತ!"

೪

"ಹೀಗೋ !" ಉತ್ತರವಿತ್ತರು ಗಾಂಧೀ :
"ಇಂತಿರೆ ಹಿಂದೂ ಧರ್ಮವೆ ಸಾಕು;
ಪ್ರತಿಫಲ ಪಾಪಕೆ, ನನಗೊ, ಇರಬೇಕು!"
ದಿಗ್ಭ್ರಮೆ ಪಾದ್ರಿಗೆ, ನಿಂತಿತು ವಾಕು.

ಡೆಮೊಕ್ರಸಿಯಲ್ಲಿ ಡಿಗ್ರಿ!

(ಒಂದು ವಿಚಾರ ಲಹರಿ)

ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ., ಬೆಳಗಾಂವಿ

ಪದವಿಗಳಿಗೆ ಇದುವರೆಗೂ ಇದ್ದ ಪೇಟೆಯ ಬೆಲೆಯು ಇಳಿಯತೊಡಗಿದೆ. ಬೇಡಿಕೆಗಿಂತ ಮಾಲು ಕಡಿಮೆಯಿದ್ದರೆ, ಅದು ತುಟ್ಟಿಯಾಗಿ ಮಾರುವುದು. ಬೇಡಿಕೆಗಿಂತಲೂ ಮಾಲು ಹೆಚ್ಚಾದರೆ ಅದರ ಬೆಲೆಯು ತಗ್ಗಿಬಿಡುವುದು. ಪದವೀಧರರ ಗತಿಯೂ ನಮ್ಮಲ್ಲಿ ಹೀಗೆಯೇ ಆಗಿದೆ.

▲

ನಾನು ಹೇಳುತ್ತಿರುವುದು ಉಷ್ಣತಾಮಾಪಕದ ಡಿಗ್ರಿಯಲ್ಲ; ಯಾಕೆಂದರೆ ಪ್ರಜಾಸತ್ತೆಯಲ್ಲಿ ಒಂದು ವಿಧವಾಗಿ, ರಾಜಸತ್ತೆಯಲ್ಲಿ ಇನ್ನೊಂದು ವಿಧವಾಗಿ ಉಷ್ಣತೆಯನ್ನೋ ತಂಪನ್ನೋ ಉಂಟು ಮಾಡುವ ಪಕ್ಷಪಾತ ನಿಸರ್ಗಕ್ಕಿಲ್ಲ! ಉಷ್ಣತೆ, ತಂಪು ರಾಜಕೀಯ ಸಾಮಾಜಿಕ ಶಾಂತಿ–ಗಲಭೆಗಳ ಮೇಲೆ ಅವಲಂಬಿಸಿದ್ದರೆ, ಆ ಮಾತು ಬೇರೆ! ಅಥವಾ ಬೇರೆ ಬೇರೆ ಡಿಗ್ರಿಗಳ ಡೆಮೊಕ್ರಸಿಗಳೂ ಉಂಟೇ ಎಂದೂ ಸಂಶಯ ಬರಬಹುದು! ಅದೂ ಸಂಭವನೀಯ; ಡೆಮೊಕ್ರಸಿಯೆಂದು ಬಾಯಲ್ಲಿ ಹೇಳುತ್ತಿದ್ದರೂ ಆಚರಣೆಯಲ್ಲಿ ಇಳಿಯಲಿಕ್ಕಿಲ್ಲ; ಅಥವಾ ಕೆಲವು ಡಿಗ್ರಿಗಳಲ್ಲಿ ಇಳಿಯಲೂ ಬಹುದು. ಅವೇನೋ ರಾಜಕೀಯ ವಿಚಾರ! ಆದರೆ ನಾನು ಹೇಳುವುದು ಆ ವಿಚಾರವಲ್ಲ, ಶೈಕ್ಷಣಿಕ ಡಿಗ್ರಿಯ ವಿಚಾರ! ಮನುಷ್ಯನು ತನ್ನ ಹೆಸರಿನ ಮುಂದೆ ಡಿಗ್ರಿ ಹಚ್ಚುವುದು ಏಕೆ?–ಎಂದು.

ಜೀವನದ ಬೆಲೆ ಒಂದು ಕಾಲಕ್ಕಿದ್ದುದು ಇನ್ನೊಂದು ಕಾಲಕ್ಕಿರಲಿಕ್ಕಿಲ್ಲ; ಒಂದು ಕಾಲದಲ್ಲಿ ವೀರನಿಗೆ, ಇನ್ನೊಂದು ಕಾಲದಲ್ಲಿ ಸಿರಿವಂತನಿಗೆ, ಮತ್ತೊಂದು ಕಾಲದಲ್ಲಿ ವಿದ್ಯಾವಂತನಿಗೆ ಮರ್ಯಾದೆ ಸಲ್ಲುತ್ತದೆ; ಹಾಗೆ ಇದು ವಿದ್ಯಾವಂತನಿಗೆ ಮರ್ಯಾದೆ ಸಲ್ಲದ ಕಾಲ, ಸಿರಿವಂತನಿಗೆ ಮರ್ಯಾದೆ ಸಲ್ಲುವ ಕಾಲ; "ವಯೋವೃದ್ಧಾಃ ಜ್ಞಾನವೃದ್ಧಾಃ, ತಪೋವೃದ್ಧಾಃ ತಥಾಪರೇಃ ಸರ್ವೇತೇ ಧನವೃದ್ಧಸ್ಯ ದ್ವಾರಿ ತಿಷ್ಠಂತಿ ಕಿಂಕರಾಃ"ಎಂಬ ಮಾತಾಗಲಿ, "ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಂಡಿತಃ ಸ ಶ್ರುತಿಮಾನ್ ಗುಣಜ್ಞಃ"ಎಂಬ ಸುಭಾಷಿತವಾಗಲಿ ಬಂದುದು, ನಮ್ಮ ಜೀವನದ ಬೆಲೆಯು ದೃಷ್ಟಿಯಿಂದಲೆ! ದೇಶದೇಶಗಳಲ್ಲಿಯೂ ಈ ಜೀವನದ ಬೆಲೆಯು ವಿಭಿನ್ನವಾಗಿರಬಹುದು! ಆದರೆ ಇತ್ತೀಚೆ ಸಂಪರ್ಕ-ಸಾರಿಗೆಯ ಸೌಕರ್ಯದ ಮೂಲಕ, ಮುಂದುವರಿದುವೆಂದುಕೊಳ್ಳುವ ರಾಷ್ಟ್ರಗಳನ್ನು, ಹಿಂದುಳಿದುವೆನ್ನಿಸಿಕೊಳ್ಳುವ ರಾಷ್ಟ್ರಗಳು, ಜೀವನದ ಬೆಲೆಯನ್ನು ಅನುಸರಿಸುವಲ್ಲಿ ಯತ್ನಿಸುತ್ತಿವೆ!

ಇಂಗ್ಲಿಷರ ಆಡಳಿತದ ಕಾಲದಲ್ಲಿ, ಕಾರಕೂನರನ್ನೆಲ್ಲ ಇಂಗ್ಲೆಂಡಿನಿಂದ ತರುವುದು ತುಂಬ ವೆಚ್ಚದ ವಿಚಾರವೆನಿಸಿದ್ದರಿಂದ, ಹಿಂದುಸ್ಥಾನದಲ್ಲಿಯೇ ಅವರನ್ನು ತಯಾರು ಮಾಡಿ ಉಪಯೋಗಿಸಿಕೊಂಡರಾಯಿತು–ಎಂಬ ಮಾತೂ ಅವರಿಗೆ ಹೊಳೆಯಿತು; ಅಂದಿನಿಂದ ಮೊದಲಾಗಿ ಮೆಕಾಲೆ ಸಾಹೇಬರು, ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದ ಪ್ರಚಾರಕ್ಕೆ ಮೊದಲು ಮಾಡಿದರು. ಆ ಕಾಲದಲ್ಲಿ, ಅದಕ್ಕೂ ಸ್ವಲ್ಪ ಕಾಲ ಮುಂದೆ, ಡಿಗ್ರಿಯ ವರೆಗೆ ಇಂಗ್ಲಿಷ್ ಶಿಕ್ಷಣ ಪಡೆದ ಜನ ಹೆಚ್ಚಾಗಿರಲಿಲ್ಲ. ಸ್ವಲ್ಪ ಶಿಕ್ಷಣ ಪಡೆದೊಡನೆಯೆ ಪೆನ್‌ಶನ್ ಸಿಗುವ ಒಳ್ಳೆಯ ನೌಕರಿ ಸಿಗುವಾಗ, ಹೆಚ್ಚಿಗೆ ಶಿಕ್ಷಣ ಪಡೆಯುವುದಾದರೂ ಯಾಕೆ? ಅಲ್ಲಿಂದೀಚೆ ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೂ, ಇಂಗ್ಲಿಷ ಶಿಕ್ಷಣ ಪದ್ಧತಿಯ ಡಿಗ್ರಿ ಪಡೆದ ಜನರಿಗೆ ಆರ್ಥಿಕ ಸೌಲಭ್ಯವಿತ್ತು. ತನ್ಮೂಲಕ ಬೆಲೆಯಿತ್ತು. ಈಗಾದರೂ ನಮ್ಮಲ್ಲಿ, ಯಾರಾದರೂ ಶಿಕ್ಷಣಪಡೆದ ವಿಚಾರ ಹೇಳಿದರೆ, 'ಹಾಗಾದರೆ ಅವರಿಗೆ ಎಷ್ಟು ಪಗಾರ?' ಎಂಬುದೇ ಪ್ರಶ್ನೆ! ಇಂಗ್ಲಿಷರ ಆಡಳಿತದ ಒಳಗುಟ್ಟು, ಅವರ ನೈಪುಣ್ಯ, ಕಾರ್ಯಕ್ಷಮತೆ, ದಕ್ಷತೆಗಳನ್ನೂ, ದೈಹಿಕ ಬೌದ್ಧಿಕ ಪರಿಶ್ರಮಗಳನ್ನೂ ನಾವು ತಿಳಿದುಕೊಳ್ಳುವ ಗೊಡವೆಗೂ ಹೋಗಿಲ್ಲ. ಆದರೆ ಅಂದಿನ ರುಚಿ— ಇಂಗ್ಲಿಷರು ಯಾವ ಹೊಣೆಯ ಕಾರ್ಯವನ್ನೂ ಹಚ್ಚದೆ ಕಾರಕೂನಿಕೆ ಮಾಡಿಸಿ-

ಕೊಂಡು ಕೈತುಂಬ ಪಗಾರ ಕೊಟ್ಟು ಕಳಿಸುತ್ತಿದ್ದ ಕಾಲದ ರುಚಿ— ಇನ್ನೂ ನಮ್ಮನ್ನು ಬಿಟ್ಟಿಲ್ಲ. ಯಾವ ದೈಹಿಕ ದುಡಿಮೆಯಾದರೂ, 'ಸಾಹೇಬರು ಮಾಡಿದರೆ ಅದು ದೊಡ್ಡದು' ಎಂಬ ಭಾವನೆ ನಮ್ಮಲ್ಲಿ ಬೆಳೆಯಿತು. ಕೈತುಂಬ ಪಗಾರ ತರುವ ಯುವಕ, ತಾರದವರ ಮೇಲೆ ಸತ್ತೆಯನ್ನು ಪ್ರಾರಂಭಿಸಿದನು. ಆ ಸತ್ತೆಯ ಅಂಶ, ಪುರುಷವರ್ಗದ ಅಧಿಕಾರವಾಗಿ ಇನ್ನೂ ಉಳಿದಿದೆ.

ಶೈಕ್ಷಣಿಕ ಡಿಗ್ರಿಗೆ ಅಂದಿದ್ದ ಆರ್ಥಿಕ ಬೆಲೆ ಇಂದಿಲ್ಲ ಉದ್ಯೋಗದ ಕ್ಷೇತ್ರದಲ್ಲಿಯೆ ಆಗಲಿ, ವಿವಾಹದ ಮಾರ್ಕೆಟ್ಟಿನಲ್ಲಿಯೆ ಆಗಲಿ, ಬೆಲೆ ಇಳಿದಿದೆ. ಮಹಿಳೆಯರೂ ಅದೇ ಡಿಗ್ರಿಯನ್ನೇ ಪಡೆಯಲು ಉಪಕ್ರಮಿಸಿದುದರಿಂದಲೋ ಏನೋ! ವಸ್ತು ವಿರಳವಾಗಿದ್ದಾಗ ಅದಕ್ಕೆ ಬೆಲೆ ಹೆಚ್ಚು!

ಬಿ. ಎ. ಅಥವಾ ಎಮ್. ಎ. ಡಿಗ್ರಿ ಪಡೆದಾಗ, ಯಾವ ಬಗೆಯ ಅರ್ಹತೆ ನಮ್ಮಲ್ಲಿ ಬರಬೇಕೆಂದು ನಾವು ಅಪೇಕ್ಷಿಸುತ್ತೇವೆ? ಶಿಕ್ಷಣದ ಅಭೀಷ್ಟ ಉದ್ದೇಶವೇನು? ಜೀವನಕ್ಕೆ ಈ ಶಿಕ್ಷಣ ಎಷ್ಟುಮಟ್ಟಿಗೆ ಉಪಯುಕ್ತವಿದೆ? ಜೀವನ ನಿರ್ವಾಹವೇ ಈ ಶಿಕ್ಷಣದಿಂದ ಸಾಗುತ್ತದೆಂಬ ಮಾತು ಸತ್ಯವಾಗಿ ಪರಿಣಮಿಸುತ್ತಿಲ್ಲವೆಂಬುದನ್ನು, ಬಾಯ್ದೆರೆದು ನಿಂತ ಭೀಕರ ನಿರುದ್ಯೋಗದ ಪ್ರಶ್ನೆಯೆ ಹೇಳುತ್ತದೆ. ದೈನಿಕ ಪತ್ರಿಕೆಗಳೂ "ಒಂಬತ್ತು ಜನ ಎಂ. ಎ. ಪದವೀಧರರು ಬಸ್ ಕಂಡಕ್ಟರ್ ಸ್ಥಳಕ್ಕೆ ಅರ್ಜಿ ಹಾಕಿದ್ದಾರೆ" ಎಂದು ಬರೆಯುವಲ್ಲಿ, ಸಮಾಜದ ಮೂಲ ನಂಬಿಗೆಗೆ ಆಘಾತವನ್ನುಂಟುಮಾಡುವುವೆಂಬುದು ನಿಃಸಂಶಯ! ಎಂ. ಎ ಪದವೀಧರರು ಇಂತಹ ಸ್ಥಳಕ್ಕೆ ಅರ್ಜಿ ಹಾಕುವುದೆಂದರೆ ಅಪಮಾನಕರ ಅವರಿಗೆ! ಆದರೂ ಅನಿವಾರ್ಯವಾಗಿ ಹಾಕುತ್ತಿದ್ದಾರಲ್ಲ–ಎಂದು ಅವರ ಬಗ್ಗೆ ಸಮಾಜ ಮರುಕವನ್ನು ತೋರಿಸುತ್ತದೆ. ಜೀವನದ ಬೆಲೆ ತೀವ್ರ ಬದಲಾಗುತ್ತಿರುವ ಸಂಧಿಕಾಲವಿದು. ಪದವೀಧರರೆಂದೊಡನೆ, ಪುಸ್ತಕವನ್ನು ಕೈಲಿ ಹಿಡಿದು ಕುರ್ಚಿಯನ್ನಲಂಕರಿಸಿದ ವ್ಯಕ್ತಿಯೇ ನಮ್ಮ ಕಣ್ಣಿಗೆ ಬೀಳಬೇಕೆಂದು ನಮ್ಮ ಹಟವೇಕೆ? ಪುಸ್ತಕ ಓದಿದ್ದರೆ, ಜೊತೆಗೆ ಬಸ್ ಕಂಡಕ್ಟರನಾಗಿ, ನಾಲ್ಕು ಜನರೊಡನೆ ವ್ಯವಹರಿಸುವ ಶಕ್ತಿಯೂ ಇದೆಯೆಂದು ತೋರಿಸಿಕೊಟ್ಟಲ್ಲಿ ತಪ್ಪೇನು? ಬ್ರಿಟಿಷ್ ಸಮ್ರಾಟರು ಆ ಪದವಿಗೆ ಬರುವ ಮೊದಲು, "Coel man" (ಕಲ್ಲಿದ್ದಲಿ ಹಾಕುವವನು) ಎಂದು ಹಡಗಿನಲ್ಲಿ ಕೆಲಸವನ್ನು ಕೆಲಕಾಲ ನಿರ್ವಹಿಸಬೇಕಾಗುತ್ತದಂತೆ! ಹೀಗೆ ಬಸ್ ಕಂಡಕ್ಟರ್ ಸ್ಥಳಕ್ಕೆ ಅರ್ಜಿಹಾಕುವಾಗ, ಆ ಪದವೀಧರರು ಪಟ್ಟಪಾಡನ್ನು ನಮ್ಮ ಸಾಮಾಜಿಕರೂಢಿಮೂಲ ಭಾವನೆಯಿಂದ ತಿಳಿಯಬಹುದು; ಸಮಾಜದ ಪ್ರತಿಕ್ರಿಯೆಯನ್ನು ಅನಿವಾರ್ಯವಾಗಿಯೇ ಎದುರಿಸಿ, ಅವರು ಹಾಕಬೇಕಾದ ಪ್ರಸಂಗ ಬಂದಿರಲೂ ಬಹುದು. ಅಥವಾ ಇನ್ನಾವ ಅನಿರೀಕ್ಷಿತ ಸಾಹಸದ ಕೆಲಸವೂ ಬೇಡವೆಂದು, ಇದನ್ನೇ ಸುಖವಾಗಿ ನಿರ್ವಹಿಸಿಕೊಂಡು, ತಿಂಗಳ ಕೊನೆಗೆ ಪಗಾರ ಪಡೆಯಬಹುದೆಂದು ಹಾಕಿರಲೂ ಬಹುದು. ಸದ್ಯ ಅವರನ್ನೇ ನಿಯಮಿಸಿದಲ್ಲಿ ಹೇಗೆ ಕೆಲಸಮಾಡುತ್ತಾರೋ ಆ ಮಾತು ಬೇರೆ! ಅಂತೂ ಸಾಮಾಜಿಕ ಕರುಣೆಗೆ ಇಂದು ಪದವೀಧರರು ಪಾತ್ರರಾಗಿದ್ದಾರೆ.

ಪದವೀಧರನಿಗೆ, ಗ್ರ್ಯಾಜುಯೇಟ್ ಎಂದು ಹೇಳುವುದು ರೂಢಿ; ಎಂದರೆ ಮಾನವರ ಮಾನವತೆಯ, ಸಂಸ್ಕೃತಿಯ ಮಟ್ಟವನ್ನು ಅಳೆಯುವ ಪಾತ್ರೆ ಎಂದು ಹೇಳಬಹುದು. ಆದರಂತೆ ಇಂದು ಪದವೀಧರನ ದೃಷ್ಟಿಯಿಂದ, ಸಂಸ್ಕೃತಿಯನ್ನೂ, ಜೀವನದ ಬೆಲೆಯನ್ನೂ, ದೈಹಿಕ ದುಡಿಮೆಗೆ ಅವನು ಕೊಡುವ ಸ್ಥಾನವನ್ನೂ ಅಳೆಯಹೋದರೆ, ಸಮಾಜವು ಬದುಕುವದೇ ಕಷ್ಟ, ಪದವೀಧರನನ್ನೂ ಒಳಕೊಂಡು! ಇಂಗ್ಲೆಂಡಿನಲ್ಲಿ ಈ ಶಾಸ್ತ್ರ, ಸಾಹಿತ್ಯ-ಸಂಸ್ಕೃತಿಗಳ ಪದವಿಪರೀಕ್ಷೆಗೆ ಓದುವವರು, ವಿಶೇಷ ಆಸ್ಥೆಯುಳ್ಳ ಕೆಲವೇ ಜನ ಮಾತ್ರ! ಅವರು ಪ್ರೊಫೆಸರರೆಂದು ಹೇಳಿಸಿಕೊಳ್ಳುವುದೂ, ಅವರು ಆ ವಿಷಯದಲ್ಲಿ ಪೂರ್ಣ ಪ್ರಾವೀಣ್ಯವನ್ನು ಪಡೆದು ಸಂಶೋಧನೆಯನ್ನು ಮಾಡಿದ ಮೇಲೆ—ಎಂದರೆ ತಲೆಯ ಕೂದಲು ಹಣ್ಣಾದಾಗ! ಆದರೆ ನಮ್ಮಲ್ಲಿ ಯಾವುದಕ್ಕೂ ವಿಶೇಷ ವೇಳೆ ಬೇಕಾಗಿಲ್ಲ! ಮಾನವತೆಯ ಮಟ್ಟವನ್ನು ನಿರ್ಧರಿಸುವ ಈ ಪಾತ್ರೆಗಳಿಗೆ, ಬದಲಾಗುವ ಕಾಲಕ್ಕನುಸಾರವಾಗಿ, ಜೀವನವನ್ನು ಜೀವಿಸುವುದಕ್ಕಾಗಿ ಅರ್ಹತೆ ಪಡೆಯುವಂತೆ ಮಾರ್ಪಡಿಸುವ ಶಕ್ತಿಯಿಲ್ಲದೆ ಹೋದರೆ, ನಿರುದ್ಯೋಗ ಹಬ್ಬದೆ ಏನು? ಜೀವನದ ಬೆಲೆ ಅಂದು ಬೇರೆಯಾಗಿದ್ದಾಗ,

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನೆರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕನಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು

ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಸಾಂಪತ್ತಿಕ ಪರಿಸ್ಥಿತಿಯಲ್ಲಿ, ರಾಜಸತ್ತೆಯ ಆಶ್ರಯದಲ್ಲಿ ಇದ್ದ ಸಂಸ್ಕೃತಿಯು ಅಳತೆ, ಈಗಲೂ ಹಾಗೇ ಹೇಗೆ ಉಳಿಯಬಲ್ಲದು? ಉಳಿದರೆ ಅದು ಆಪತ್ತುಗಳನ್ನು ಎದುರಿಸಿ ಎದ್ದುಬಿದ್ದು ತನ್ನನ್ನು ಪರಿಸ್ಥಿತಿಗೆ ಅಳವಡಿಸಿಕೊಳ್ಳದೆ ಬೇರೆ ಮಾರ್ಗವಿಲ್ಲ. ಸಿರಿವಂತವರ್ಗದ ಸತ್ತೆ (ಅರಿಸ್ಟಾಕ್ರಸಿ) ಹೋಗಿ ಪ್ರಜಾಸತ್ತೆ (ಡೆಮೊಕ್ರಸಿ) ಬಂದಾಗ, ಕೆಲವೇ ಸಿರಿವಂತರ ಸಂಪತ್ತಿನ ಅಧಿಕಾರ ಹೋಗಿ, ಜನತೆ, ಜನತೆಗೆ ಇಷ್ಟವಾದ ರೀತಿಯಲ್ಲಿ ಅಧಿಕಾರವನ್ನು, ಅನುಕೂಲತೆಯನ್ನು ಪಕ್ಷ-ಪಾತವಿಲ್ಲದ ರೀತಿಯಲ್ಲಿ ಹಂಚುವುದಕ್ಕಾಗಿ ನಿರ್ವಹಿಸಿಕೊಳ್ಳುವ ಹೊಣೆಗೆ ತನ್ನನ್ನೇ ಅಳವಡಿಸಿಕೊಳ್ಳಬೇಕಾದಂತೆ, ಅರಿಸ್ಟಾಕ್ರಸಿಯ ಪದವೀಧರರೂ, ಡೆಮೊಕ್ರಸಿಯ ಪದವೀಧರರಾಗಬೇಕಾಗಿದೆ!

ಪದವಿ ದೊರೆಯುವುದೇ ತಡ, ಕರಡು ಗೀಚಿ, ಹೆಸರಿನ ಮುಂದೆ ಪದವಿ **ಸೇರಿಸುವುದು** ನಮಗೊಂದು ಹೆಮ್ಮೆ! ಉಳಿದವರಿಂದ ನಾವು ಬೇರೆಯಾದೆವು-ಎಂದು! ಆದರೆ ಯಾತಕ್ಕೆ ಬೇರೆಯಾದವು ಎಂಬ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿಯುತ್ತದೆ! ಇದೇ ರೂಢಿಯುಳ್ಳ ಸಮಾಜದಲ್ಲಿ ಬೆಳೆದು ಬಂದ ನಾನೂ ಇದಕ್ಕೆ ಹೊರತಾಗಿಲ್ಲ ಮತ್ತೆ! ಹಿಂದಿದ್ದ ಸಾಮಾಜಿಕ ಭಾವನೆಯೇ ಹಾಗೆ ಬರೆಯಲು ಪ್ರೇರೇಪಿಸು-ತ್ತದೆ; ಮತ್ತೆ ಪದವೀಧರನ ವಿಚಾರಗಳೆಲ್ಲ ಗ್ರಾಹ್ಯವೆಂಬ ನಮ್ಮ ಮೂಲಕಲ್ಪನೆಗೆ ಆಘಾತವಾಗಿ, ಇಂದು ಎಡವಿಬೀಳುತ್ತದೆ. ಹೆಸರಿನ ಮುಂದೆ ಉದ್ದಕ್ಕೂ ಪದವಿ ಸೇರಿಸಿ, ಅವುಗಳ ಬೆಲೆಯನ್ನು ಅಳೆಯಲು ಹಚ್ಚುವುದಕ್ಕಿಂತ, ಕೃತಿಯೇ ಒಳ್ಳೆಯದಾಗಿದ್ದರೆ, ಅದು ಇದ್ದ ಶಿಕ್ಷಣದ ಮಟ್ಟವನ್ನು ತಾನೇ ಎತ್ತಿ ತೋರಿಸುತ್ತದೆ; ಪದವಿಗನುಸಾರವಾಗಿ ಕೃತಿಯೂ ಇದ್ದರೆ ಅದೊಂದು ವೇಳೆ ಶ್ರೇಷ್ಠ; ಇಂದು ನಮ್ಮ ಮುಖಂಡರು ವಿದೇಶಗಳ ಭಿನ್ನ ಭಿನ್ನ ವಿಶ್ವವಿದ್ಯಾಲಯಗಳಿಂದ ಡಾಕ್ಟರೇಟ್ ಪದವಿಯನ್ನು ಪಡೆದಿರುವುದು ಅವರ ಕೃತಿಯ ಮೂಲಕ! ಆ ಪದವಿಯಿದ್ದರೂ ಸರಿ, ಇಲ್ಲದಿದ್ದರೂ ಸರಿ-ಎಂಬ ಮಟ್ಟದಲ್ಲಿ ಅವರಿದ್ದಾಗ, ಆ ಪದವಿಯ ಬೆಲೆಯೂ ಅವರಿಗೆ ಹೆಚ್ಚಾಗಿ ಎನಿಸ-ಲಿಕ್ಕಿಲ್ಲ; **ಪದವಿಗಾಗಿ ಹೋರಾಡುವ ನಮಗೇ ಅದರ ಬೆಲೆ ಗೊತ್ತು!**

ಮೊದಲ ನೋಟಕ್ಕೆ ಮನುಷ್ಯನ ಸಂಸ್ಕೃತಿ-ಶಿಕ್ಷಣಗಳನ್ನಳೆಯಲು ನಾವು ಪಡೆಯುವುದು ಅವನಿಗಿದ್ದ ಡಿಗ್ರಿಯ ಸಹಕಾರವನ್ನೇ! ಇದೇ ಕಾರಣಕ್ಕಾಗಿ ಡಿಗ್ರಿಯಿರದ ಮನುಷ್ಯ ತನ್ನ ಸತ್ತ್ವವನ್ನೆಲ್ಲ ಹಾಕಿ ಹೋರಾಡಿ ಅನುಭವಪಡೆದು ಮುಂದೆ ಬಂದರೆ, ಡಿಗ್ರಿಯುಳ್ಳ ಮನುಷ್ಯ, "ನನಗೆ ಅಷ್ಟು ಹೋರಾಡಬೇಕಾಗಿಲ್ಲ" ಎಂದು ಸೋಮಾರಿಯಾಗಿ ಹಿಂದೆ ಬೀಳುವನು! ಪಡೆಯುವ ಶಿಕ್ಷಣ, ಮನುಷ್ಯನ ಬುದ್ಧಿ-ಮನಸ್ಸುಗಳ ಹಿನ್ನೆಲೆಯಲ್ಲಿ ಒಂದು ಸಾಮಾನ್ಯ ಜ್ಞಾನದ ಭೂಮಿಕೆಯನ್ನು ಸಿದ್ಧಗೊಳಿಸುವುದು. ಆದರೆ ಆ ತಳಹದಿಯಲ್ಲಿ ಒಳ್ಳೆಯ ಕಟ್ಟಡದ ಯೋಚನೆ ಮಾಡಿದರೆ, ಮೊದಲು ಪಡೆದ ಶಿಕ್ಷಣಕ್ಕೂ ಬೆಲೆ ಬಂದೀತು! ಡಿಗ್ರಿಯ ಮಾತಂತೂ ದೂರ ಉಳಿಯಿತು! ಶಾಲೆಯ ಶಿಕ್ಷಣವನ್ನೂ ಪಡೆಯಲಾರದೆ ಕೆಲವರು, ಪಡೆಯಲೊಪ್ಪದೆ ಕೆಲವರು, ಶಾಲೆಯಲ್ಲಿ ಹೊಡೆತ ತಿಂದವರು ಇನ್ನು ಕೆಲವರು— ದೊಡ್ಡವರಾಗಿ ಹೆಸರು ಪಡೆದ ಉದಾಹರಣೆಗಳೂ ನಮ್ಮಲ್ಲಿ ಸಾಕಷ್ಟಿವೆ! ದೊಡ್ಡವರಾದವರೂ ಹಲವರು ಈ ಬಗೆಯ ಶಿಕ್ಷಣ ಪಡೆದವರಷ್ಟೆ, ಈ ಶಿಕ್ಷಣವೇ ದೊಡ್ಡವರನ್ನು ನಿರ್ಮಾಣ-ಗೊಳಿಸುತ್ತದೆ—ಎಂದು ಹೇಳುವುದು ಸಾಹಸದ ಮಾತು! ಶಿಕ್ಷಣ ಪಡೆದ ಮೇಲೆ, ಜೀವನದಲ್ಲಿ ತಮ್ಮ ಯೋಗ್ಯತೆಯನ್ನು ಕಾಯ್ದು-ಕೊಂಡು, ಮೇಲೆ ಶಿಕ್ಷಣಕ್ಕೆ ಹಿರಿಮೆಯನ್ನು ತಂದುಕೊಡಬೇಕಾದರೆ, ಆ ಮನುಷ್ಯನಲ್ಲಿ ನಿಜಕ್ಕೂ ಒಳಗೆ ಜೀವವಿರಬೇಕಾಗುತ್ತದೆ!

ಹಣವುಳ್ಳವರೂ, ಡಿಗ್ರೀಯುಳ್ಳವರೂ ಸ್ಪರ್ಧೆಗೆ ನಿಂತರೆ, ಮೊದಲನೆಯ ಜಾತಿಯವರಿಗೇ ಜಯಸಿಕ್ಕುತ್ತದೆಯೆಂಬುದು ಪ್ರಯೋಗಸಿದ್ಧ ಮಾತು. ಆದರೆ ಬರೀ ಎರಡನೆಯ ಜಾತಿಯ ಪ್ರಾಣಿಗಳೇ ಇದ್ದಾಗ, ಉದ್ದನೆಯ ಡಿಗ್ರಿಯುಳ್ಳವರಿಗೆ ಬೆಲೆ ಹೆಚ್ಚು! ಅಧ್ಯಕ್ಷಸ್ಥಾನ ಕೊಡಲು, ಲೇಖ ಆರಿಸಲು, ಕಾರ್ಯಕಾರೀ ಸಮಿತಿಗೆ ಸದಸ್ಯತ್ವ ಪಡೆಯಲು, ಡಿಗ್ರಿಯೇ ಸಹಾಯಕಾರಿ. ಅದು ದೊಡ್ಡ-ದಾಗಿದ್ದರೆ ಸದಸ್ಯತ್ವದ ವಂತಿಗೆಯ ಹಣವನ್ನು ಕೂಡ ಕೊಡದೆ ಬಿಡಬಹುದು!

ಆದರೆ ಡೆಮೊಕ್ರಸಿಯಲ್ಲಿಯ ಡಿಗ್ರಿಗೆ ಈ ಸೌಕರ್ಯವಿಲ್ಲ ಮತ್ತೆ!

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ

ಬರೆಯಿರಿ :

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ಸಂಗಾತಿ

ಸಣ್ಣ ಕತೆ

ಶ್ರೀ. ಎನ್. ಎ. ಕುಲಕರ್ಣಿ. ಮುಂಬಯಿ,

ವ್ಯಕ್ತಿವ್ಯಕ್ತಿಗಳ ತ್ಯಾಗವು ಸಮಾಜದಲ್ಲಿ ಸಮತೆಯನ್ನು ಸಂರಕ್ಷಿಸುವುದು. ಸುಮಾ ತೋರಿಸಿದ ತ್ಯಾಗ-ಬುದ್ಧಿಯಿಂದ ಮದನನ ಮಧ್ಯಾಹ್ನದ ಚಿಂತೆ ತಪ್ಪಿತು. ಸುಮಳ ಮನೋ-ರಥವೂ ನೆರವೇರಿತು.

ಇಂಟರ್‌ವ್ಯೂ ಮುಗಿಸಿ ಮದನ ಹೊರಬಿದ್ದಾಗ, ಐದು ಹೊಡೆದು ಹೋಗಿತ್ತು. ಆತ ದಣಿದವನಂತೆ ತೋರುತ್ತಿದ್ದ. ಅವನ ಮುಖ ಗಂಭೀರತೆಯನ್ನು ತಾಳಿತ್ತು. ಅದಕ್ಕೆ ಕಾರಣವೂ ಇತ್ತು; ಅದೇ ಸ್ಥಳಕ್ಕಾಗಿ ಅದರ ಹಿಂದಿನ ದಿನವೂ ಕೆಲವರ ಇಂಟರವ್ಯೂ ಆಯಿತೆಂದೂ, ಅದರಲ್ಲಿ B. A. ಪಾಸಾದ ಒಬ್ಬ ಉಮೇದುವಾರಳಿಗೆ (Girl Candidate) ಅದು ಸಿಗುವ ಸಂಭವವಿದೆಯೆಂದೂ, ಅಲ್ಲಿಯ ಸ್ನೇಹಿತ ಅವನಿಗೆ ಸಂಕ್ಷಿಪ್ತವಾಗಿ ತಿಳಿಸಿದ್ದ. ಇದರಿಂದ ಅವನ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಹಿಂದೆ ಎಷ್ಟೋ ಸಾರೆ ನಿರಾಶನಾಗಿ ಹಿಂದಿರುಗಿದ್ದ; ಆದರೆ ಇಂದೂ ಅದರ ಪುನರಾವೃತ್ತಿಯಾಗಬಹು-ದೆಂದು ಆತ ಎಣಿಸಿರಲಿಲ್ಲ. ತನ್ನ ತಾಯಿ ಹೇಳಿದ್ದು ನೂರು ಬಾರಿ ಸತ್ಯವೆಂದುಕೊಂಡ.

ತನ್ನ ಹೆಚ್ಚಿನ ಅಭ್ಯಾಸಕ್ಕಾಗಿ ತಂದೆ ಗಳಿಸಿಟ್ಟ ಹಣವನ್ನು ವ್ಯಯಮಾಡುವುದನ್ನು ಬಿಟ್ಟರೆ, ಅವೇ ತಮಗೆ ಮತ್ತೆ ಕೆಲವು ದಿನಗಳ ಉಪಜೀವನದ ಆಧಾರವಾಗಬಹುದೆಂದು, ಮದನ ತನ್ನ ತಾಯಿಯ ಮುಂದೆ ಅನೇಕ ಸಲ ಪ್ರಸ್ತಾಪ ಮಾಡಿದ್ದ. ಆದರೆ ರಮಾಬಾಯಿಯವರಿಗೆ ಅವನು ಓದನ್ನು ಬಿಟ್ಟುಕೊಡುವುದು ಎಳ್ಳಷ್ಟೂ ಸೇರಲಿಲ್ಲ. ಅವರೇ ಅವನಿಗೆ ಒಂದು ದಿನ ಸಿಟ್ಟು ಮಾಡಿ, "ಮದ್ದು, ಕಟ್ಟಿದ ಬುತ್ತಿ ಒಂದಿಲ್ಲ ಒಂದುದಿನ ಮುಗಿಯತಕ್ಕದ್ದೆ ! ಆ ಮೇಲೆ ನಾವು ಮಾಡುವುದೇನು ? ಅದಕ್ಕಾಗಿ ನಾವು ನಮ್ಮಲ್ಲಿರುವ ಅಲ್ಪಸ್ವಲ್ಪ ಹಣದ ಉಪಯೋಗ ತೆಗೆದುಕೊಳ್ಳಲೇ ಬೇಕು. ನಿನ್ನ ಅಭ್ಯಾಸವನ್ನು ಸರ್ವಥಾ ಬಿಡಬೇಡ. ಗಳಿಸಿದ ವಿದ್ಯೆ ಶಾಶ್ವತವಾದದ್ದು, ಆದರೆ ಗಳಿಸಿದ ಹಣದ ಮಾತು ಹಾಗಲ್ಲ. ನೀನಾದರೂ ನಿನ್ನ ತಂದೆ-ಯಂತೆ ವಕೀಲನಾದರೆ, ನಮಗೇನು ಕೊರತೆ ಹೇಳು? ಓದು ನಿಲ್ಲಿಸುವ ವಿಚಾರವನ್ನು ಪುನಃ ಪುನಃ ನನ್ನ ಮುಂದಿಟ್ಟು ನನ್ನ ದುಃಖವ ಇಮ್ಮಡಿಸಬೇಡ, ಅಲ್ಲದೆ ನೌಕರಿಗಾಗಿ ಎರಡನೆಯವರಿಗೆ ಕೈಯೊಡ್ಡು ದಕ್ಕಿಂತ ಸ್ವತಂತ್ರವೃತ್ತಿ ಯೋಗ್ಯವಲ್ಲವೇ ?" ಎಂದು ಖಂಡಿತವಾ ಹೇಳಿಬಿಟ್ಟಿದ್ದರು. ಮದನನಾದರೂ ತಾಯಿಯ ಉಪನ್ಯಾಸವ ಪಿಟ್ಟೆನ್ನದೆ ಕೇಳಿದ್ದ. ಅವನ ವಿವೇಕವಾದರೂ ತಾಯಿಯ ಪ್ರ ಯೊಂದು ಶಬ್ದವನ್ನೂ ಒಪ್ಪುತ್ತಿತ್ತು. ಆದರೇನು? ತನಗಾಗಿ ತ ತಾಯಿ ಮತ್ತು ತಂಗಿ ಕಷ್ಟಪಡುವುದನ್ನು ಆತ ಸಹಿಸಲಾರ. ತ ತಂದೆ ಇದ್ದಾಗ ಅವರೆಷ್ಟೋ ಸುಖಪಟ್ಟಿದ್ದರು; ಆದರೆ ಈಗ ಅವ ಇದ್ದ ಸುಖವನ್ನು ಇಮ್ಮಡಿಸುವ ಬದಲು, ಅದನ್ನೆ ಅವರಿಂದ ದೂ ಮಾಡುತ್ತಿರುವೆನಲ್ಲಾ—ಎಂದು ಹಳಹಳಿಸಿದ. ಹೇಗೋ ಓದನ ಸಾಗಿಸಿದ. B. A. ಮುಗಿಯಿತು. L. L. B. ಗೆ ಟರ್ಮ್ ತುಂಬುವ ದಾಗಿ ನಿರ್ಧರಿಸಿದ. ಅಷ್ಟರಲ್ಲಿ ಯಾವುದಾದರೂ ನೌಕರಿ ಸಿಕ್ಕ ಅನುಕೂಲವೆಂದು, ರಮಾಬಾಯಿಯವರಿಗೆ ತಿಳಿಯದಂತೆ ನಾಲ್ಕೆಂ ಕಡೆಗೆ ಅಪ್ಲಿಕೇಶನ್ನೂ ಮಾಡಿದ. ಕೆಲವೆಡೆಗೆ ಇಂಟರ್‌ವ್ಯೂಗೆ ಹೋ ಮೋರೆ ಒಣಗಿಸಿಕೊಂಡು ಬರುವುದೂ ಆಯಿತು. ಆದರೆ ಆಕಸ್ಮಾ ಅದೇ ಊರಲ್ಲಿಯ ರೇಶನಿಂಗ್ ಆಫೀಸಿನಲ್ಲಿಯ ಅಸಿಸ್ಟಂಟ್ ರೇಶನಿಂ ಆಫೀಸರ್ ಜಾಗೆಗಾಗಿ ಅಂದು ಇಂಟರ್‌ವ್ಯೂಗೆ ಹೋಗಿದ್ದ. ಅ ಇಂಟರ್‌ವ್ಯೂ ಮುಗಿಸಿಕೊಂಡು ಆತ ಹೊರಬಿದ್ದಿದ್ದ. ಅಲ್ಲಿಯು ನಿರಾಶೆ ತಲೆದೋರಬಹುದೆಂದು ಆತ ಕನಸುಮನಸಿನಲ್ಲಿಯೂ ಎ ಸಿರಲಿಲ್ಲ. ಆ ತರುಣಿಯ ಬಗ್ಗೆ (Girl Candidate) ಆತನ ತಿರಸ್ಕಾರವು ತುಂಬಿ ನಿಂತಿತ್ತು. ದಾರಿಗುಂಟ ಆ ತರುಣಿಯ ಬ ಯೋಚಿಸುತ್ತಲೇ ನಡೆದ.

ಆಕೆ ಯಾರಿರಬಹುದೆಂದೂ ಆತ ಊಹಿಸಲಾರ. ಆದರೆ ಬಿ. ವರೆಗೆ ಕಲಿತಿರುವಳೆಂದ ಮೇಲೆ, ಆಕೆ ಅನಾಥಳಂತೂ ಅಲ್ಲವೇ ಅ ತಕ್ಕಮಟ್ಟಿಗಾದರೂ ಒಳ್ಳೆಯ ಮನೆತನದವಳಿರಲಿಕ್ಕೆ ಸಾಕು. ಇಂ ವಳು ನೌಕರಿಗಾಗಿ ಕೈಯೊಡ್ಡುವ ಆವಶ್ಯಕತೆಯಾದರೂ ಏನು ಒಂದು ವೇಳೆ ಸಾಕಿಸಲಹಿದ ತಂದೆ-ತಾಯಿಗಳಿದ್ದರೆ, ಈಕೆಗೇ ನೌಕರಿಯ ಹಂಬಲ? ನೌಕರಿ ಮಾಡುವುದು ಕೇವಲ ಹೊಟ್ಟೆ ಬಟ್ಟೆ ಗಳ ಊರುಗೋಲಿಗಾಗಿ! ಅರೆಹೊಟ್ಟೆ ತುಂಬಿಸುವ ನಾಲ್ಕು ಕಾಸಿಗಾ ಅದೂ ನಿರ್ವಾಹವಿಲ್ಲದವರಿಗೇ ನೌಕರಿಯ ಗತಿ ! ನೌಕರಿ ಮಾಡು ಆಕೆಯ ಉದ್ದೇಶವಾದರೂ ಯಾವುದಿರಬಹುದು ? ಕೇವಲ ಮನೋ ರಂಜನೆಗಾಗಿಯೆ? ಇದರಿಂದ ಆಕೆ ಸಾಧಿಸುವುದಾದರೂ ಏನು ಇದೇ ನೌಕರಿ ನನಗೆ ಸಿಕ್ಕರೆ ನನಗೆಷ್ಟು ಅನುಕೂಲ ! ನನ್ನ ತಾಂ ತಂಗಿ ಎಷ್ಟು ಸುಖವಾಗಿರಬಹುದು ! ಇರಲಿ, ಇದು ಸ್ವಾರ್ಥ ಮಾತಾಗಬಹುದು? ಇದನ್ನು ಇಡೀದೇಶಕ್ಕೆ ಅನ್ವಯಿಸಿದರೆ ಇವಳಂತ ಎಷ್ಟು ಮಂದಿ ಸ್ತ್ರೀಯರು ಅನಾವಶ್ಯಕವಾಗಿ, ನೌಕರಿ ಮಾಡುತ್ತಿ ಬಹುದು ! ನನ್ನಂತಹ ಎಷ್ಟು ಮಂದಿ ತರುಣರು ನೌಕರಿಗಾಗಿ ಅ ದಾಡಿ ಹೀಗೆ ನಿರಾಶರಾಗುತ್ತಿರಬಹುದು? ಎಂದು ಇನ್ನೂ ಏನನ್ನೊ ಯೋಚಿಸುತ್ತ, ತನಗರಿವಿಲ್ಲದೆ ಹೆಜ್ಜೆಹಾಕುತ್ತ, ಮದನ ಮಾಗ ಕ್ರಮಣ ನಡೆಸಿದ್ದ.

"ಮಿ. ಮದನ್‌ss", ಹಿಂದಿನಿಂದ ಯಾರೋ ಕೂಗಿ ಕರೆದರು. ಮದನ ತನ್ನ ವಿಚಾರದಲ್ಲಿಯೇ ಮಗ್ನನಾಗಿದ್ದ. ಆ ಕೂಗಿನ ತೆರೆ-ಗಳು ಅವನನ್ನು ದಾಟಿ ಮುಂದೆ ಹೋದುವು.

"ಓ. ಮಿ. ಮದನ್‌s" ಕೂಗು ಸ್ವಲ್ಪ ಗಟ್ಟಿಯಾಗಿಯೇ ಹೊರಬಿತ್ತು. ಈಗ ಮಾತ್ರ ಮದನ ಎಚ್ಚತ್ತ. ಯಾರೋ ಕರೆದಂತೆ ಭಾಸವಾಯಿತು, ಹಿಂದಿರುಗಿ ನೋಡುತ್ತಾನೆ; ತನ್ನೆಡೆಗೆ ಬರುತ್ತಿರು-ವವಳು ಸುಮಾ....ತನ್ನ ಸಹಪಾಠಿನಿ! ಅವನ ಆಶ್ಚರ್ಯಕ್ಕೆ ಪಾರವೇ ಉಳಿಯಲಿಲ್ಲ. ತಡವರಿಸುತ್ತಲೇ ನುಡಿದ: "ಕ್ಷಮಿಸು ಸುಮಾ, ನಾನಾವುದೋ ವಿಚಾರದಲ್ಲಿ ಮುಳುಗಿದ್ದೆ. ನೀನು ಕರೆದುದರ ಕಡೆಗೆ ಲಕ್ಷ್ಯವೇ ಇಲ್ಲ. ನೀನೀಗ ಹೊರಟಿರುವುದಾದರೂ ಎತ್ತ? ಅಯ್ಯೊ ಮರೆತೇ ಹೋಗಿತ್ತು; ಕಾಂಗ್ರ್ಯಾಚುಲೇಶನ್ಸ್ ಸುಮಾ! ಅಂತೂ ನೀನೂ ಫಸ್ಟ್‌ಕ್ಲಾಸ್ ಬಿಡಲಿಲ್ಲ!"

"ಯಾಕೆss ನೀವು ಒಬ್ಬರೇs ಫಸ್ಟ್‌ಕ್ಲಾಸ್ ಬರಬೇಕಂತ ಮಾಡಿದ್ದಿರೇನು?" ಸುಮಾ ಮಾತು ಹೊಡೆದಳು.

"ಛೇ ಅದು ಹೇಗಾದೀತು?" ಮದನ ದೇಶಾವರಿ ನಗೆ ನಕ್ಕ, "ಕಷ್ಟಪಟ್ಟವರಿಗೆ ಫಲ ಸಿಗಬೇಕೆಂಬುದೇ ನನ್ನ ಅಭಿಪ್ರಾಯ." ಸುಮಾ ನುಡಿದಳು.

"ಇದೇ ಈಗ ಆರು ಗಂಟೆಯಾಗಿದೆ," ಮದನ ತನ್ನ ಕೈ ಗಡಿ-ಯಾರ ನೋಡಿಕೊಳ್ಳುತ್ತ ಹೇಳಿದ: "ಎಲ್ಲಿಯಾದರೂ ಸ್ವಲ್ಪ ಕಾಫಿ ಕುಡಿದು, ನ್ಯಾಶನಲ್ ಪಾರ್ಕ್‌ವರೆಗೆ ಹಾಯಾಗಿ ತಿರುಗಾಡಿಕೊಂಡು ಬರೋಣ ನಡೆ. ಅನಾಯಾಸವಾಗಿಯೆ ಬಂದಂತಾಗಿದೆ. ಇಲ್ಲವಾ-ದರೆ ಈ ರಜೆಯಲ್ಲಿ ನಿನ್ನ ಭೆಟ್ಟಿಯೇ ಅಪರೂಪ. ಒಪ್ಪಿಗೆ ತಾನೆ?" ಮದನ ತುಸು ಆದರಪೂರ್ವಕವಾಗಿಯೆ ಕೇಳಿದ. "ನನ್ನದೇನೋ ಒಪ್ಪಿಗೆ; ಆದರೆ ನಿನಗೆ ಅನೇಕ ಕೆಲಸಗಳು! ಮೇಲಾಗಿ ಏಕಾಂತ-ಪ್ರಿಯ. ನಿನಗೆ ಬೇಸರವಾಗದಿದ್ದರೆ ಮಾತ್ರ ನಡೆ!" ಸುಮಾ ತುಸು ನಿಷ್ಠುರವಾಗಿಯೇ ನುಡಿದಳು.

ಮದನ ಮುಗುಳುನಗೆ ನಕ್ಕ; ಸುಮಳೂ ಪ್ರತಿಯಾಗಿ ನಕ್ಕಳು ಇಬ್ಬರೂ ನಗುತ್ತಲೇ ಮುಂದೆ ನಡೆದರು.

ಸುಮಳಿಗೆ ಮದನನ ಪರಿಚಯವಾದದ್ದು ಕಾಲೇಜಿನಲ್ಲಿಯೇ. ಅವಳ ತಂದೆ ಕರ್ನಾಟಕದಲ್ಲಿಯೇ ಹೆಸರಾದ ವಕೀಲರಲ್ಲಿ ಒಬ್ಬರು. ಅವರಿಗೆ ಮಗಳೆಂದರೆ ವಿಶೇಷ ಪ್ರೀತಿ; ಅಂತೆಯೇ ಅವಳನ್ನು ಕಾಲೇ-ಜಿಗೆ ಕಳುಹಿದ್ದರು. ಮದನನಾದರೂ ಅದೇ ಕಾಲೇಜನ್ನು ಸೇರಿದ್ದ. ಅವನ ದೃಢಕಾಯ, ನಿರಾಡಂಬರ ರೀತಿ-ನೀತಿ, ಯಾರ ಮನಸ್ಸನ್ನೂ ಆಕರ್ಷಿಸುವಂತಹವಾಗಿದ್ದುವು. ಎಂತಲೇ ಆತ ಸುಮಳ ಮನಸ್ಸನ್ನು ಸೆಳೆದದ್ದು ವಿಶೇಷವೇನಲ್ಲ. ದಿನ ಕಳೆದಂತೆ ಅವರಲ್ಲಿ ಸ್ನೇಹ ಬೆಳೆಯು ತ್ತಲೇ ನಡೆದಿತ್ತು. ಅವನ ಕೂಡ ಎಷ್ಟು ಮಾತನಾಡಿದರೂ ಸುಮ-ಳಿಗೆ ಕಡಿಮೆಯೆ. ಮದನನಾದರೋ ವಿಚಿತ್ರಸ್ವಭಾವದವ; ಸುಮಳನ್ನು ಬಿಟ್ಟು ಬೇರೆ ಯಾರ ಜೊತೆಯಲ್ಲಿಯೂ ವಿಶೇಷ ಸಲಿಗೆಯಿಂದ ಮಾತ ನಾಡುವವನಲ್ಲ. ಇವರ ಸ್ನೇಹ ಉಳಿದವರಿಗೊಂದು ಒಡೆಯಲಾರದ ಒಗಟಾಗಿತ್ತು. ಸ್ನೇಹ ಬೆಳೆದಂತೆ ಪರಸ್ಪರರನ್ನು ಸಂಬೋಧಿಸುವ ಅವರ ರೀತಿಯೇ ಬೇರೆಯಾಯಿತು. ಅವರಲ್ಲಿ ಪರಸ್ಪರರ ಆಕೃತ್ರಿಮ ಪ್ರೇಮ ಮನೆಮಾಡಿತ್ತು.

ಅವರಿಬ್ಬರೂ ಕಾಫಿ ತೀರಿಸಿಕೊಂಡು ನ್ಯಾಶನಲ್ ಪಾರ್ಕಿಗೆ ಬಂದಾಗ, ದಿನವಿಡೀ ದುಡಿದು ದಣಿದ ಸೂರ್ಯ ತಾಯಿಯ ಒಡಲನ್ನು ಸೇರುವುದಕ್ಕಾಗಿ ಧಾವಿಸಿ ನಡೆದಿದ್ದ. ಅವನ ಹೊಂಬಣ್ಣದ ಕಿರಣಗಳು, ಆ ಪಾರ್ಕಿನ ಗಿಡ-ಬಳ್ಳಿಗಳ ಮೇಲೆ ಬಿದ್ದು, ಅವುಗಳ ಸೌಂದರ್ಯವನ್ನು ಇಮ್ಮಡಿಸಿದ್ದುವು. ಇಬ್ಬರೂ ಪಾರ್ಕಿನ ತುಂಬ ಮನದಣಿ ಸುತ್ತಾಡಿದರು. ಗಿಡ-ಮರಗಳ ಸಜೀವತೆಯನ್ನೂ, ಅವು ಗಳ ಹೂ-ಮೊಗ್ಗೆಗಳಲ್ಲಡಗಿದ ಸೌಂದರ್ಯವನ್ನೂ, ಕವಿಗೆ ಶೋಭಿ-ಸುವಂತೆ ಮದನ ಸುಮಳಿಗೆ ವರ್ಣಿಸಿ ಹೇಳಿದ. "ಸುಮಾ", ಮದನ ಮುಂದುವರಿಸಿದ: "ಈ ಅರಳಿದ ಸುಂದರ ಗುಲಾಬಿ, ಈ ಸುವಾಸಿಕ ಸಂಪಿಗೆ, ನೊಂದಮನಕ್ಕೆ ಎಷ್ಟು ಶಾಂತಿಯನ್ನು ನೀಡಬಲ್ಲವು ಕಂಡೆಯಾ? ಮನುಷ್ಯನಿಗೆ ಗಿಡ-ಮರಗಳ ಉಪಯುಕ್ತತೆ ಅಪಾರ-ವಾದದ್ದು. ಅವುಗಳಿಲ್ಲದೆ ಮನುಷ್ಯ ಅರೆಕ್ಷಣ ಬದುಕಲಾರ. ಅದ ರಂತೆ ಪ್ರಾಣಿಗಳಾದರೂ ಮನುಷ್ಯನಿಗಾಗಿ ಸಲ್ಲಿಸುವ ಸೇವೆ ಅಷ್ಟಿಷ್ಟಲ್ಲ; ಆದರೆ ಮನುಷ್ಯ ಮನುಷ್ಯನಿಗೇ ಸಹಾಯ ಸಲ್ಲಿಸಲಾರ. ಪರಸ್ಪರ ಜಾತಿದ್ವೇಷ, ತಿರಸ್ಕಾರ, ಅನ್ಯಾಯ, ಅವಹೇಳನ ಇವೇ ಬೆಳೆಯತೊಡಗಿವೆ. ಸಹಾನುಭೂತಿಯಂತೂ ಮಾಯವಾಗಿದೆ. ಒಬ್ಬ ಒಂದುವೇಳೆಯ ಕೂಳಿಗಾಗಿ ಬಡಿದಾಡುವಾಗ, ಇನ್ನೊಬ್ಬ ಅಜೀರ್ಣ ವಾಗುವ ವರೆಗೆ ತಿಂದು ತೇಗುವ ಉದಾಹರಣೆಗಳೇ ಹೆಚ್ಚಾಗಿವೆ. ಈ ಪರಿಸ್ಥಿತಿ ಚಿನ್ನದ ನಾಡಾದ ಕರ್ನಾಟಕದಲ್ಲೂ ತಲೆಯೆತ್ತಿದ್ದನ್ನು

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ
ಗಾಂಧಿಚೌಕ, ಧಾರವಾಡ

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಬಿ. ಮಾತಕರ
೬೩. ರವಿವಾರಪೇಠ, ಪುಣೆ ೨

ನೋಡಿ ಯಾವ ವಿವೇಕಿಗೆ ತಾನೇ ಅಸಮಾಧಾನವಾಗಲಿಕ್ಕಿಲ್ಲ ?" ಮದನ ಚಿಕ್ಕದಾದ ಒಂದು ಉದ್ಬೋಧಕ ಉಪನ್ಯಾಸವನ್ನೇ ಮಾಡಿದ. ಅವನಿಗೆ ಎಲ್ಲಿಂದಲೋ ಸ್ಫೂರ್ತಿ ಬಂದಂತಾಗಿತ್ತು, ಬಹುಶಃ ಅವನ ನೊಂದ ಮನದಿಂದಿರಬೇಕು. ಆದರೆ ಪಾಪ, ಸುಮಾ ಮನಸ್ಸಿನಲ್ಲಿ ನೆಂದುಕೊಳ್ಳುವಳೋ ಎಂದು ಅನುಮಾನಪಟ್ಟ. ಈ ಪಾರಮಾರ್ಥಿಕ ವಿಚಾರಗಳೆಲ್ಲ ಇದೇವೇಳೆಯಲ್ಲಿ ತನಗೇಕೆ ಬಂದುವೋ—ಎಂದು ಮರುಗಿದ. ಬಹಳ ದಿನಗಳಮೇಲೆ ಭೆಟ್ಟಿಯಾದ ಸುಕೋಮಲೆ ಯನ್ನು ಸವಿಮಾತುಗಳಿಂದ ಆದರಿಸುವುದನ್ನುಬಿಟ್ಟು ತಾತ್ತ್ವಿಕ ವಿಚಾರಗಳಿಂದ ನೋಯಿಸಿದೆನಲ್ಲಾ—ಎಂದು ಹಳಹಳಿಸಿದ.

"ಈ ನನ್ನ ತಾತ್ತ್ವಿಕ ವಿಚಾರಗಳಿಂದ ನಿನಗೆ ಬೇಸರವಾಯಿತೆ?" ಮದನ ಆಕೆಯನ್ನು ಸಾಂತ್ವನಗೊಳಿಸುವುದಕ್ಕಾಗಿ ಕೇಳಿದ.

"ಛೀ, ಹಾಗೇನಿಲ್ಲ," ಸುಮಾ ನಗುತ್ತ ಹೇಳಿದಳು: "ನಿನ್ನ ತಾತ್ತ್ವಿಕತೆಯಿಂದ ನನಗೆ ಜ್ಞಾನೋದಯವಾದಂತಾಯಿತು. ಹೃದಯಾಂತ್ಯದಯದ ಇಂಗಿತವನ್ನರಿಯಿತು. ಆದರೆ ನಿನ್ನ ಅಸಮಾಧಾನದಿಂದ ನನ್ನ ಹೃದಯ ನೊಂದಿದೆ. ಅದರ ಕಾರಣವನ್ನು ನಾನು ಕೇಳಬಹುದೇ ?"

ಮದನನ ಮುಖ ಕುಂದಿಹೋಯಿತು. "ಛೀ, ಛೀ ! ಎಲ್ಲಿಯ ಅಸಮಾಧಾನ," ಆತ ತುಂಬ ಆಧ್ಯತೆಯಿಂದಲೇ ನಕ್ಕ. "ಇರಲಿ ಸುಮಾ!" ಮದನ ಮುಂದುವರೆಸಿದ: "ನಿನ್ನ ಬಿ. ಎ. ಆಯಿತು ಮುಂದೇನು ಮಾಡಬೇಕೆಂದಿರುವೆ? ಎಮ್. ಎ. ಗೆ ಟರ್ಮ್ ತುಂಬುವವಳೋ ?" ವಿಷಯಾಂತರ ಮಾಡುವ ದೃಷ್ಟಿಯಿಂದ ಮದನ ಕೇಳಿದ.

"ಇದು ಬೇಕಾಗಿಲ್ಲ ಮದನ್! ವಿಷಯ ಬದಲಿಸಬೇಡ" ಸುಮ ತುಸು ನಿಷ್ಠುರಳಾಗಿಯೇ ಹೇಳಿದಳು: "ಆ ಬಗ್ಗೆ ನಿನಗೆ ಮತ್ತೊಮ್ಮೆ ಹೇಳುವೆ. ಮೊದಲು ನಿನ್ನಲ್ಲುಂಟಾದ ಅಸಂತೋಷದ ಕಾರಣವನ್ನು ಹೇಳು. ನನ್ನಿಂದ ನಿನಗೆ ಸಹಾಯವಾಗಲಿ ಬಿಡಲಿ, ಅದನ್ನು ಕೇಳದ ವಿನಾ ನನಗೆ ಸಮಾಧಾನವಾಗಲಾರದು. ದಯೆಮಾಡಿ ಏನೂ ಸಂಕೋಚವಿಲ್ಲದೆ ವಸ್ತುಸ್ಥಿತಿಯನ್ನು ವಿವರಿಸು. ಇದರಿಂದ ನಿನ್ನ ವ್ಯಥೆಯೂ ಕಡಿಮೆಯಾಗಬಹುದು; ನನ್ನಿಂದ ಸಾಧ್ಯವಿದ್ದಷ್ಟು ಸಹಾಯವೂ ಸಿಗಬಹುದು!" ಆಕೆ ಕಳಕಳಿಯಿಂದಲೇ ಮಾತನಾಡಿದಳು.

ಕೂಡಲೆ ಮದನನಿಗೆ ತಮ್ಮ ಕಾಲೇಜಿನಲ್ಲಿ ಕಳೆದ ಎಷ್ಟೋ ರಸನಿಮಿಷಗಳ ನೆನಪು ಬಂತು. ಆಕೆಯ ಕೂಡ ಮಾತನಾಡುತ್ತಿದ್ದ ಅನೇಕ ಸನ್ನಿವೇಶಗಳು ಅವನ ಕಣ್ಣುಮುಂದೆ ಕಟ್ಟಿದುವು. ಆಗ ಆಕೆಯ ಪ್ರತಿಯೊಂದು ಮಾತೂ ತನ್ನ ಬಗೆಗೆ ಎಷ್ಟೊಂದು ಆತ್ಮೀಯತೆಯನ್ನು ಸೂಸುತ್ತಿತ್ತು! ಹೆಚ್ಚೇಕೆ-ಇಡೀ ಕಾಲೇಜಿನಲ್ಲಿ ಅವಳೊಬ್ಬಳೇ ಇವನಿಗೆ ಆತ್ಮೀಯಳು ! ಅಂತೆಯೇ ತನ್ನ ದುಃಖದ ಕಾರಣವನ್ನು ಆಕೆಯ ಮುಂಬಿಡಲು ಆತ ಹಿಂದು-ಮುಂದು ನೋಡಲಿಲ್ಲ.

"ನನ್ನ ಕಹಿಜೀವನದ ಕಥೆಯನ್ನು ತೆಗೆದುಕೊಂಡೇನು ಮಾಡುವೆಯೋ ನಾನರಿಯೆ ಆದರೆ ಸುಮಾ...." ಮದನ ಹೇಳಿದ: "ನಿನ್ನ ಆತ್ಮೀಯತೆಯ ಒತ್ತಾಯ ನನ್ನ ದುಃಖವನ್ನು ನಿನ್ನೆದುರಿಗೆ ಉಸುರುವಂತೆ ಬಲಾತ್ಕಾರ ಮಾಡಿದೆ. ನೀನಿಷ್ಟು ಆದರಪೂರ್ವಕವಾಗಿ ನನ್ನ ಯೋಗ-ಕ್ಷೇಮವನ್ನು ವಿಚಾರಿಸುವುದು ನನ್ನ ಭಾಗ್ಯವೇ ಸರಿ." ಆತ ಮುಂದುವರೆಸಿದ:—"ನಾನು ಈ ಊರಲ್ಲಿಯ ಅಸಿಸ್ಟಂಟ್ ರೇಶನಿಂಗ್ ಆಫೀಸರ್ ಜಾಗೆಗೆ ಅಪ್ಲಿಕೇಶನ್ ಮಾಡಿದ್ದೆ. ಅದರ ಇಂಟರವ್ಯೂ ಇಂದೇ ಇತ್ತು. ೫ ಗಂಟೆಗೆ ಮುಗಿಯಿತು......."

"ಅದಕ್ಕಾಗಿ ಈಗಾಗಲೇ ಇಷ್ಟು ನಿರಾಶೆಯೇ ?" ಸುಮಾ ನಡುವೇ ಕೇಳಿದಳು.

"ಆಶೆಯ ಅಂಶವೂ ಉಳಿದಿಲ್ಲ ಸುಮಾ" ಮದನ ಹೇಳಿದ: "ಅದೇ ಜಾಗೆಗಾಗಿ ನಿನ್ನೆಯೂ ಕೆಲವರ ಇಂಟರವ್ಯೂ ಆಗಿದೆಯಂತೆ. ಅವರಲ್ಲಿ ಒಬ್ಬ ಗರ್ಲ್ ಕ್ಯಾಂಡಿಡೇಟ್ ಸಿಲೆಕ್ಟ್ ಆಗಿರುವಳೆಂದು ಸುದ್ದಿ. ಆದರೇನು ಉಪಾಯವಿಲ್ಲ......." ನಿಟ್ಟುಸಿರೊಂದನ್ನು ಬಿಟ್ಟ.

ಸುಮಳ ಮುಖದ ಮೇಲೆ ಎಲ್ಲಿಯದೋ ಒಂದು ಕೃತ್ರಿಮನಗೆ ಬಂದು ಮಾಯವಾಯಿತು. "ಯಾಕೆ ? ನೌಕರಿ ಸೇರುವುದು, ಈಗಾಗಲೇ ಇಷ್ಟು ಅವಸರವಾಗಿ ಕಂಡುಬಂತೇ ?" ಆಕೆ ಕೇಳಿದಳು.

"ಅವಸರವಿರದೇನು," ಮದನ ಹೇಳಿದ: "ನಿನ್ನದು ಹೆಣ್ಣುಜೀವ. ಮೇಲಾಗಿ ನಿನಗೊಬ್ಬ ಸಿರಿವಂತ ತಂದೆಯಿದ್ದಾನೆ. ಅಂದಮೇಲೆ ನಿನ್ನ ಬಗ್ಗೆ ನೀನು ಚಿಂತಿಸುವ ಕಾರಣವಿಲ್ಲ. ಆದರೆ ನನ್ನ ಮಾತೇ ಬೇರೆ! ತಂದೆಯಿಲ್ಲದ ಪರದೇಶಿ ನಾನು. ನನ್ನ ಬಗೆಗಷ್ಟೇ ಅಲ್ಲ; ನನ್ನ ತಾಯಿ-ತಂಗಿಯರ ಬಗೆಗೂ ನಾನು ಚಿಂತಿಸಬೇಕಾಗಿದೆ ತಂದೆ ಗಳಿಸಿಟ್ಟುದರಲ್ಲಿಯೇ ನಮ್ಮ ಉಪಜೀವನ ಸಾಗಿದೆ. ನನ್ನ ಬಿ. ಎ. ಸಹಿತ ಅದರಲ್ಲಿಯೇ ಆಯಿತು. ಆದರೆ ಮುಂದೆ ? ಎಣ್ಣೆ ತೀರಿದ ಮೇಲೆ ದೀಪ ಉಳಿಯಬಹುದೆ ?" ಅವನ ಧ್ವನಿಯಲ್ಲಿ ಕಂಪನವಿತ್ತು.

ಮದನನ ವಸ್ತುಸ್ಥಿತಿಯ ವಿವರಣೆಯನ್ನು ಕೇಳಿ ಸುಮಾ ಮನಸ್ಸಿನಲ್ಲಿಯೇ ಮರುಗಿದಳು. ಅವನ ಮೇಲಿನ ಆಕೆಯ ಪ್ರೇಮಕ್ಕೆ, ಅವನ ಸಾನ್ನಿಧ್ಯದಿಂದ ಕಳೆಬಂದಂತಾಗಿತ್ತು. ಸುತ್ತಾಡಿ ಬೇಸತ್ತ ಅವರು ನಿರ್ಜನವಾದ ಭಾಗದಲ್ಲಿಯ ಒಂದು ಬೆಂಚಿನಮೇಲೆ ಕುಳಿತರು. ಆಗ ಏಳು ಗಂಟೆಯಾಗಿರಬಹುದು. ಇನ್ನೂ ಅವರ ಮಾತುಕಥೆಗಳು ನಡೆದಿದ್ದುವು. ಅಷ್ಟು ತೀವ್ರ ಅಗಲುವುದು ಇಬ್ಬರಿಗೂ ಬೇಕಾಗಿರಲಿಲ್ಲ.

ಮಾತಿಗೆ ಮಾತು ಬೆಳೆಯಿತು. ಇಬ್ಬರೇ ಎಷ್ಟೋ ವಿಷಯಗಳ ಬಗೆಗೆ ಚರ್ಚಿಸಿದರು. ಸುಮಳ ಪ್ರಶ್ನೆ, ಮದನನ ಉತ್ತರ ನಡೆದೇ ಇತ್ತು. ಸಂದರ್ಭ ನೋಡಿ ಸುಮಾ ಕೇಳಿದಳು: "ನಮ್ಮಂತಹ ಕಲಿತ ತರುಣಿಯರು ನೌಕರಿ ಮಾಡುವುವರ ಬಗ್ಗೆ ನಿನ್ನ ಅಭಿಪ್ರಾಯ ವೇನು ?"

ಈಗ ಮಾತ್ರ ಬುಸುಗುಟ್ಟುವ ಹಾವಿನಂತಾದ ಮದನ. ಅವನಿಗೆ ತನ್ನ ವೇದನೆಯ ವಿಷವನ್ನು ಹೊರಗೆ ಹಾಕುವ ಸಂದರ್ಭ ಒದಗಿದಂತಾಯಿತು.

"ಸುಮಾ" ಆತ ಸುರುಮಾಡಿದ: "ಸ್ಪಷ್ಟವಾಗಿ ಹೇಳುವು ದಾದರೆ ನಿಮ್ಮಂತಹರು ನೌಕರಿಯ ಕಡೆಗೆ ಕಣ್ಣೆತ್ತಿ ಸಹ ನೋಡ ಕೂಡದು. ಇದರಿಂದ ನೀವು ಎರಡನೆಯವರಿಗೆ ಉಪಕಾರ ಮಾಡಿ-ದಂತೆಯೇ ಸರಿ. ಯಾಕೆಂದರೆ,. ಅದರಿಂದ ನೌಕರಿಗಾಗಿ ಅಲೆಯು ತ್ತಿರುವ ನನ್ನಂತಹ ಎಷ್ಟೋ ಜನ ತರುಣರಿಗೆ ಸಹಾಯವಾಗಬಹುದು. ಹೆಚ್ಚೇಕೆ ? ಹೆಣ್ಣು ಮಕ್ಕಳಿಗೆ ನೌಕರಿ ಕೊಡಕೂಡದೆಂದೇ ನನ್ನ ಅಭಿಪ್ರಾಯ ! "

"ಹಾಗಾದರೆ, ಅವರೆಲ್ಲರ ಉಪಜೀವನದ ಭಾರ ನಿನ್ನದೋ?" ಸುಮಾ ಗಹಗಹಿಸಿ ನಕ್ಕಳು.

"ಅದೇಕೆ?" ಮದನ ಕಿರುನಗೆಯೊಂದನ್ನು ಬೀರಿದ: "ಮದುವೆ-ಯಾದವರ ಬಗೆಗೆ ನಾವು ಚಿಂತಿಸುವ ಕಾರಣವಿಲ್ಲ; ಅವರ ಯೋಗ-ಕ್ಷೇಮದ ಭಾರ, ಅವರು ಯಾರ ಬಾಳಸಂಗಾತಿಯಾಗಿ ಬಂದಿರು ವರೋ ಅವರಿಗೆ ಸಂಬಂಧಿಸಿದ್ದು........"

" ಮದುವೆಯಾಗದವರ ಭಾರ ನಿನ್ನದೋ ? " ಸುಮಾ ನಡು ವೇ ಬಾಯಿ ಹಾಕಿದಳು.

" ತಾಳು ಸುಮಾ. ನಾನು ಹೇಳುವುದನ್ನು ಪೂರ್ಣ ಕೇಳು. ನಿನ್ನ ಕಮೆಂಟ್ಸ್ ಆ ಮೇಲೆ " ಮದನ ಮುಂದುವರೆಸಿದ: " ಅವಿವಾ-ಹಿತರ ವಿಷಯ ಅವರ ತಂದೆ, ಅಣ್ಣ-ತಮ್ಮಂದಿರಿಗೆ ಸೇರಿದ್ದು. ಅದೂ ಅವರು ವಿವಾಹಿತರಾಗುವವರೆಗೆ ಮಾತ್ರ. ನಾನು ಹೀಗೆ ಹೇಳುವುದು ಹೆಣ್ಣುಮಕ್ಕಳ ಮೇಲಿನ ಈರ್ಷೆಯಿಂದಲ್ಲ ಸುಮಾ; ನೀನು ಸಿಟ್ಟಿಗೇ-ಳುವ ಕಾರಣವಿಲ್ಲ. ನೌಕರಿ ಸಿಗದೆ ಅಲೆಯುತ್ತಿರುವ ತರುಣರ ಸಂಖ್ಯೆಯೇ ಹೆಚ್ಚಿದೆಯೆಂದ ಮೇಲೆ, ಅವರಿಗೇ ಪ್ರಾಧಾನ್ಯ ಕೊಡ-ಬೇಕೆಂಬುದು ನನ್ನ ಮತ ! ಯಾಕೆಂದರೆ ಒಬ್ಬ ತರುಣ ಒಂದು ಕುಟುಂಬದ ಜೀವನವನ್ನೇ ನಿರ್ವಹಿಸಬಲ್ಲ!"

"ಯಾಕೆ, ತರುಣಿಯು ನಡಿಸಲಾರಳೇ ? ಮದನ, ನಾವಿರು-ವುದು ೨೦ನೆಯ ಶತಮಾನದಲ್ಲಿ. ಜಗತ್ತು ಹೊಸ ಹೊಸ ಸುಧಾರ-ಣೆಯ ಕಡೆಗೆ ಸಾಗಿದೆ!"

"ಹೌದು ಜಗತ್ತು ಸುಧಾರಣೆಯ ಉಚ್ಚಮಟ್ಟದಲ್ಲಿದೆಯೆಂದು ನಾವು ತಿಳಿದಿದ್ದೇವೆ. ಆದರೆ ನಮ್ಮ ಜೀವನದ ಮಟ್ಟವೇ ನಮ್ಮ ಸುಧಾರಣೆಯ ಹುರುಳನ್ನು ಸಾರಿ ಹೇಳುತ್ತದೆ. ನೌಕರಿಯ ಚಕ್ಕಂದ-ದಲ್ಲಿ ಮೈಮರೆತು, ರೀತಿ-ನೀತಿ ಮೊದಲಾದ ಸಂಸ್ಕಾರಗಳನ್ನೆಲ್ಲ ತೊರೆದು, ಕೈಯಲ್ಲಿ ಒಂದು ಪರ್ಸ್ ಹಿಡಿದುಕೊಂಡು ಒಬ್ಬ ತರುಣಿ ತಿರುಗಾಡಿದರೆ, ಅದು ಸುಧಾರಣೆಯೇ ? ಸುಮಾ, ನಾನು ಹೇಳುವುದು ನನ್ನಂತಹ ತರುಣರಿಗೂ ಅನ್ವಯಿಸುತ್ತದೆ. ನೀನು ಸಿಡಿಮಿಡಿಗೊಳ್ಳುವ ಕಾರಣವಿಲ್ಲ. ನಾವೆಲ್ಲ ಸುಧಾರಣೆಯ ಮರೆಯಲ್ಲಿ ನಮ್ಮ ಸಂಸ್ಕೃತಿಯನ್ನು ಅಧಃಪತನಕ್ಕೆ ಒಯ್ಯುತ್ತಿದ್ದೇವೆ." ಮದನ ಬಿಸಿಯುಸಿರೊಂದನ್ನು ಬಿಟ್ಟ.

ಇನ್ನೂ ಅವರ ಮಾತು-ಕತೆಗಳು ನಡೆದೇ ಇದ್ದುವು. ಎಷ್ಟು ಹೊತ್ತಿನ ಮೇಲೆ ಮನೆಗೆ ತೆರಳಿದರೋ ಅವರಿಗೇ ಗೊತ್ತು.

x x x x x

ಇದಾದ ಮೇಲೆ ಒಂದು ವಾರವಿನ್ನೂ ಕಳೆದಿರಲಿಲ್ಲ. ಮದನ ಸುಮೆಯೊಂದಿಗೆ ಹರಟೆ ಹೊಡೆಯುತ್ತ ತನ್ನ ಕೋಣೆಯಲ್ಲಿ ಕುಳಿತಿದ್ದ. ಆಗ ಅಂಚೆಯ ಜವಾನನೊಬ್ಬ ಬಂದು, ಮದನನ ಹೆಸರಿನಲ್ಲಿದ್ದ ಲಕೋಟೆಯೊಂದನ್ನು ತಂದುಕೊಟ್ಟ. ಸುಮಳಿಗಂತೂ ಅದಾವು ದೆನ್ನುವುದರ ಬಗ್ಗೆ ಸಂಶಯವಿದ್ದಿಲ್ಲ. ಆದರೂ ಆಕೆ ಏನೂ ಅರಿಯ-ದವಳಂತೆ ಸುಮ್ಮನಿದ್ದಳು. ಮದನ ಮಾತ್ರ ಒಳ್ಳೇ ಆತುರತೆಯಿಂದ ಲಕೋಟೆಯನ್ನೊಡೆದು, ಅದರಲ್ಲಿಯ ಕಾಗದವನ್ನೋದತೊಡಗಿದ

ಅವನಿಗೆ ಅದನ್ನೋದಿದಂತೆ ಸಖೇದಾನಂದಾಶ್ಚರ್ಯವಾಯಿತು. ಆ ಅಸಿಸ್ಟಂಟ್ ಲೇಬರಿಂಗ್ ಆಫೀಸರ ಜಾಗೆಗೆ ಅವನನ್ನೇ ನೇಮಿಸ-ಲಾಗಿತ್ತು. ಅಲ್ಲದೆ, "ಇದೇ ಜಾಗೆಗಾಗಿ ಮೊನ್ನೆ ಮೊನ್ನೆ ಆರಿಸಲ್ಪಟ್ಟ ಮಿಸ್ ಸುಮಾ ಅವರು ತಮ್ಮ ರಾಜೀನಾಮೆ ಸಲ್ಲಿಸಿದ್ದರಿಂದ, ಅವರ ಬದಲಾಗಿ ನಿಮ್ಮನ್ನು ಅದೇ ಜಾಗೆಗೆ ನೇಮಿಸಲಾಗಿದೆ" ಎಂಬ ಕಾರಣವನ್ನೂ ಅದರಲ್ಲಿ ಕೊಡಲಾಗಿತ್ತು.

ಮದನ ತನ್ನನ್ನು ತಾನೇ ನಂಬದಾದ. ತನಗೆ ಅಂದು ತಿಳಿದು ಬಂದ ಆ ಗರ್ಲ್‌ಕ್ಯಾಂಡಿಡೇಟ್, ಸುಮಾ ಇರಬಹುದೆಂದು ಆತ ಕನಸು-ಮನಸಿನಲ್ಲಿಯೂ ಊಹಿಸಿರಲಿಲ್ಲ. ತನ್ನ ಮೇಲಿದ್ದ ಆಕೆಯ ಪ್ರೀತಿಯ ಆಳವನ್ನು ಅಳೆಯದಾದ. ಆಕೆಯ ಕಡೆಗೊಂದು ಕರುಣಾ-ಪೂರಿತ ದೃಷ್ಟಿಯನ್ನು ಬೀರಿದ. ಆಕೆಯೂ ಪ್ರತಿಯಾಗಿ ಮಂದಹಾಸ ವನ್ನು ಬೀರಿದಳು.

" ಸುಮಾ, ನನಗಾಗಿ ಈ ತ್ಯಾಗವೇ ? " ಮದನ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವುದಕ್ಕಾಗಿ ಕೇಳಿದ.

"ಮದನ್", ಸುಮಾ ಕೋಮಲ ಸ್ವರದಲ್ಲಿಯೇ ಉಸುರಿದಳು : ಇದು ನಿನ್ನ ಸಂಗಾತಿಯ ತ್ಯಾಗ ! ತ್ಯಾಗವೇ ಪ್ರೇಮದ ದ್ಯೋತಕ ವಲ್ಲವೇ ?"

ಆಕೆಯ ಮೇಲಿದ್ದ ಮದನನ ಅನುರಾಗದ ಮೇರೆಯೂ ಮೀರಿತು. ಆತ ತನ್ನ ಕೈಯಿಂದ ಆಕೆಯ ಕೆನ್ನೆಯನ್ನು ಮೃದುವಾಗಿ ತಟ್ಟಿದ, "ಹೌದು ಸುಮಾ, ಇಂದಿನಿಂದ ನಿಜವಾಗಿಯೂ ನೀನು ನನ್ನ ಬಾಳ ಸಂಗಾತಿ" ಅವನ ಕಂಠ ತುಂಬಿ ಬಂದಿತ್ತು.

ಜಯ-ಪರಾಜಯ

ಸಣ್ಣ ಕತೆ

ಶ್ರೀ. ಕೆ. ಜಿ. ನಾಯಕ, ಹೈದರಾಬಾದ

ಪ್ರಣಯದ ಸಂವರ್ಧನೆ-ವಿಕಾಸಗಳಿಗೆ ಅನುಕೂಲವಾದ ವಾತಾವರಣಬೇಕು. ಅನುಕೂಲ ವಾತಾವರಣ ದೊರೆಯದೆ ಹೋದರೆ, ಹೂವಾಗಿ ಅರಳಲಿರುವ ಪ್ರಣಯವು ಪ್ರಾಣಹಾರಕ ವಿಷವಾಗಿ ಪರಿಣಮಿಸುವುದು.

ವನವಿಹಾರವನ್ನು ಮುಗಿಸಿ ತಿರುಗಿಬರುವ ರಾಜಕುಮಾರಿ ದಾಮಿನಿಯ ರಥವು ಸಂಧ್ಯಾಸಮಯದ ಗಾಢವಾದ ಮಬ್ಬನ್ನು ಸೀಳಿಕೊಂಡ ಹಾಗೆಯೇ ಮುನ್ನಡೆಯಿತು. ದಾರಿಯ ಪಕ್ಕದಲ್ಲಿ ಒಂದು ಜೀರ್ಣವಾದ ಆದರೆ ಶಾಂತ ಹಾಗೂ ಸ್ವಚ್ಛವಾದ ಗುಡಿಸಿಲಿನ ಪ್ರಾಂಗಣದಲ್ಲಿ ಒಂದು ದೀವಿಗೆ ಉರಿಯಹತ್ತಿತ್ತು. ರಥವು ಹತ್ತಿರ ಬಂದಕೂಡಲೆ ಕುಮಾರಿಯ ಭವ್ಯವಾದ ವಸ್ತ್ರವು ಮಂದಪ್ರಕಾಶದಲ್ಲಿಯೂ ವಜ್ರದಂತೆ ಝಗಝಗಿಸಿತು ರಥದ ಸಾರಥಿಯು ಕುದುರೆಯ ಮೈದಡವಿದ್ದರಿಂದ ಅವುಗಳ ಗತಿಯು ಮತ್ತಿಷ್ಟು ಅಸ್ಥಿರವಾಯಿತು. ರಥವು ಬಹುದೂರ ಹೊರಟುಹೋದರೂ, ಅದರ ಗಡಗಡ ಸಪ್ಪಳವು ಮಾತ್ರ ಬಹಳ ಹೊತ್ತಿನ ವರೆಗೆ ಪ್ರತಿಧ್ವನಿಸಹತ್ತಿತ್ತು. ಕಾಷಾಯವಸ್ತ್ರವನ್ನು ಧರಿಸಿದ ಪುರುಷ ಕುಟೀರದೊಳಗೆ ಬಂದ ಅವನು ಬಹುಹೊತ್ತಿನ ವರೆಗೆ ರಥವು ಹೋದ ದಿಕ್ಕಿನ ಕಡೆಗೇ ನೋಡಹತ್ತಿದ್ದ. ಅದು ಕಾಣದಂತಾದ ಮೇಲೆ ತನ್ನಲ್ಲಿಯೇ ತಾನು ನುಡಿದುಕೊಂಡ: 'ವಜ್ರವನ್ನು ನೋಡಲಿಕ್ಕೆ ಕಣ್ಣು ಬೇಕು. ಬೆಳಕಲ್ಲ''.

ಅವನು ಬಹಳ ಉದ್ವಿಗ್ನನಾದಂತೆ ಕಂಡುಬಂದಿತು. ಕೆಲ ನಿಮಿಷಗಳಲ್ಲೇ ಆಶ್ರಮದಲ್ಲಿ, ವೀಣೆಯಿಂದ ನುಡಿಸಲ್ಪಟ್ಟ ಕೇದಾರರಾಗ ಪ್ರತಿಧ್ವನಿಸಿತು. ಕಾಷಾಯವಸ್ತ್ರಧಾರಿಯನ್ನು ಮೋಹಗೊಳಿಸುವ ಮಧುರಸ್ವರವು ಏರುತ್ತಲೇ ನಡೆಯಿತು.

x x x x x

ದಾಮಿನಿ ವಿದರ್ಭರಾಜನ ಒಬ್ಬಳೇ ಒಬ್ಬ ಮಗಳು. ಅವಳ ಸೌಂದರ್ಯದೆದುರಿಗೆ ಸ್ವರ್ಗದ ಅಪ್ಸರೆಯರು ತಲೆತಗ್ಗಿಸುವಂತಿತ್ತು. ಅವಳ ಕೋಮಲವಾದ ಕಂಠಮಾಧುರ್ಯ, ಸಂಗೀತದ ನಿಪುಣತೆಯಿಂದ ದ್ವಿಗುಣಿತವಾಗಿತ್ತು. ಕುಮಾರಿಯ ಸ್ವರಸಾಧನೆಯಿಂದ ಗೋಡೆಗಳೂ ಸ್ತಬ್ಧವಾಗುತ್ತಿದ್ದುವು. ಯೌವನದ ಪ್ರಭಾತದಲ್ಲಿ ದಣಿವುಗೊಂಡ ಸೌಂದರ್ಯ ಮೈಮುರಿಯುವಂತಿತ್ತು.

ಕುಮಾರಿಯು ವಿವಾಹಕ್ಕೆ ಯೋಗ್ಯಳಾದ ಕೂಡಲೆ, ಅದೆಷ್ಟೋ ರಾಜರು ಮದುವೆಯ ಮಾತೆತ್ತಿದರು. ವೃದ್ಧ ವಿದರ್ಭರಾಜನು ಚಿಂತೆಗೊಳಗಾದನು. ಯೋಗ್ಯತೆಯಿಂದ ಆರಿಸುವುದು ಹೇಗೆ? ಎಲ್ಲರೂ ತಮ್ಮ ತಮ್ಮ ವೈಶಿಷ್ಟ್ಯಗಳಿಂದ ಯೋಗ್ಯರಾಗಿದ್ದರು. ಆದರೂ ಸಭೆಯಲ್ಲಿ 'ಯಾರು ನನ್ನನ್ನು ಸಂಗೀತಸ್ಪರ್ಧೆಯಲ್ಲಿ ಸೋಲಿಸುವರೋ ಅಂಥವರನ್ನು ಮಾತ್ರ ವಿವಾಹವಾಗಬಲ್ಲೆ. ಹಾಗೂ ಸೋತ ವ್ಯಕ್ತಿ ನನ್ನ ದಾಸನಾಗಿ ಬಾಳಬೇಕು' ಎಂದು ಗಂಭೀರ ಸ್ವರದಲ್ಲಿ ಹೇಳಿ ಕುಮಾರಿ ದಾಮಿನಿ ಮಂದ ಹೆಜ್ಜೆ ಇಡುತ್ತ ಹೆಬ್ಬಾಗಿಲ ಹತ್ತಿರದ ಕೋಣೆಯೊಳಗೆ ನಡೆದಳು. ಕ್ಷಣಹೊತ್ತು ಸಭೆಯಲ್ಲಿ ನಿಃಶಬ್ದತೆ ಆವರಿಸಿತು. ಆದರೆ ಮರುಕ್ಷಣವೇ ಒಮ್ಮತದ ಒಪ್ಪಿಗೆಯ ಜಯಘೋಷದಿಂದ ಸಭಾಭವನವು ಪ್ರತಿಧ್ವನಿಸಹತ್ತಿತು.

ಅನೇಕ ರಾಜಕುಮಾರರು ಪ್ರತಿಸ್ಪರ್ಧೆಯಲ್ಲಿ ಭಾಗ ತೆಗೆದುಕೊಂಡು ಸೋತು, ಅವಳ ದಾಸರಾದಂತೆಲ್ಲ ಕುಮಾರಿಯ ಅಹಂಕಾರವು ಹೆಚ್ಚುತ್ತ ನಡೆಯಿತು. ಅವಳ ಯೌವನದ ನಿರಂಕುಶ ಪ್ರಬಲ ಆಶೆಯು ಮನಸ್ಸನ್ನು ಬಡಿದೆಬ್ಬಿಸಿ ಜಾಗೃತಗೊಳಿಸಹತ್ತಿತ್ತು. ಎಷ್ಟು ಕುಡಿದರೂ ಶಾಂತವಾಗದಂತಹ ನೀರಡಿಕೆ ಹುಟ್ಟಹತ್ತಿತ್ತು. ಯಾರಿಂದಲೂ ದೂರ ಮಾಡಲುಬಾರದ ಅಶಾಂತತೆ ಮನಸ್ಸಿನಲ್ಲಿ ಮನೆ ಮಾಡಹತ್ತಿತ್ತು. ಸ್ವತಂತ್ರವಾಗಿ ಉಸಿರಾಡಿಸದಂಥ ಒಂದು ಬಂಧನದ ಸಲುವಾಗಿ ಮನಸ್ಸು ವ್ಯಾಕುಲಗೊಳ್ಳಹತ್ತಿತು. ಭಿನ್ನ ಅಸ್ತಿತ್ವವೇ ಉಳಿಯದಂಥ ಆತ್ಮಸಮರ್ಪಣೆಯ ಇಚ್ಛೆ ಜಾಗೃತವಾಗಹತ್ತಿತು. ರಾಜಕುಮಾರಿಯು ವಿಜಯಿನಿಯಾಗಿಯೂ ಹರ್ಷಚಿತ್ತಳಾಗಿರಲಿಲ್ಲ. ಮನಸ್ಸು ಅತೃಪ್ತವಾದಾಗಲೆಲ್ಲ ತಾನು ಪರಾಜಿತಳಾಗಿದ್ದರೆ ಚೆನ್ನಾಗಿತ್ತೆಂದು ಎನಿಸಹತ್ತಿತ್ತು. ಸೋತ ರಾಜಕುಮಾರರ ಉದ್ವಿಗ್ನತೆಗಿಂತ ರಾಜಕುಮಾರಿಯ ಉದ್ವಿಗ್ನತೆ ಇನ್ನೂ ಹೆಚ್ಚುತ್ತ ನಡೆಯಿತು.

x x x x x

ಅರ್ಧ ರಾತ್ರಿ ಕಳೆದಿತ್ತು. ರಾಜಕುಮಾರಿಯು ಉಪವನದ ಹಾಸುಗಲ್ಲಿನ ಮೇಲೆ ಉದಾಸೀನಳಾಗಿ ಮಲಗಿದ್ದಳು. ಅದ್ವಿತೀಯ ನೀಲಾಕಾಶದಲ್ಲಿ ನಕ್ಷತ್ರಗಳು ಮಿನುಗಹತ್ತಿದ್ದುವು. ಉಪವನದ ಎಲೆ-ಎಲೆಗಳು ಬೆಳುದಿಂಗಳಿನ ಬೆಳಕಿನಲ್ಲಿ ಕಿಲಕಿಲನೆ ನಗುವಂತೆ ತೋರ ಹತ್ತಿದ್ದುವು. ಪುಷ್ಪಗಳ ಪರಿಮಳವು ಎಲ್ಲೆಡೆಗೆ ಹಬ್ಬಿ ಇಡಿ ವಾತಾ–ವರಣವೇ ನಿಶೆಯಲ್ಲಿ ಮುಳುಗಿದಂತಿತ್ತು. ಅರೆತೆರೆದ ಕಣ್ಣುಗಳಿಂದ ಕುಮಾರಿಯು ಏನನ್ನೋ ಕಳೆದುಕೊಂಡವಳಂತೆ ತೋರುತ್ತಿದ್ದಳು. ಸಖಿಯರು ಹತ್ತಿರದಲ್ಲೇ ಗದ್ದಲ ಮಾಡಹತ್ತಿದ್ದರು. ನಿದ್ರೆ ಇಲ್ಲದ್ದ-ರಿಂದ ಕುಮಾರಿಯ ಕಣ್ಣುಗಳು ಗುಲಾಬಿಯ ಬಣ್ಣ ತಳೆದಿದ್ದುವು ಆವಳ ಮನಸ್ಸಿಗೆ ಶಾಂತಿ ಇಲ್ಲವಾಯಿತು. ಎದ್ದು ವೀಣೆಯನ್ನು ಹಿಡಿದು, ಮಾಲಕಂಸದ ಸ್ವರವನ್ನು ಮೀಡಿದಳು. ಆ ನೀರವತೆಯಲ್ಲಿ ವೀಣೆಯ ನಾದವು ನಾಲ್ಕೂ ಕಡೆಗೆ ಹರಡಹತ್ತಿತು. .... 'ತಡೆ, ತಡೆ'........... ರಾಜಕುಮಾರಿ ದೃಷ್ಟಿಯನ್ನು ಮೇಲೆತ್ತಿದಳು. .... ಎದುರಿಗೆ ಒರ್ವ ಭಿಕ್ಷು ನಿಂತಿದ್ದಾನೆ. ಕಾವಲುಗಾರ-ನೇನಾದರೂ ಸಂಗೀತಕ್ಕೆ ಮುಗ್ಧನಾಗಿ ಆಕಸ್ಮಾತ್ .... ಈ ಭಿಕ್ಷು ಇಲ್ಲಿಯ ವರೆಗೆ ಬಂದನೆ ? ಪೂರ್ಣಿಮೆಯ ಸಂಗೀತೋತ್ಸವ-ದಲ್ಲಿ ಕೂಡ ಈ ಭಿಕ್ಷು ನನ್ನ ಕಡೆಗೇ ನೋಡಹತ್ತಿದ್ದ...........ಈತನ ನಯನಗಳು ಎಷ್ಟು ಮಾದಕತೆಯಿಂದ ಕೂಡಿವೆಯಲ್ಲ ?............... ....ಕುಮಾರಿ ಎವೆಬಡಿಯದೆ ಭಿಕ್ಷುವನ್ನು ನೋಡುತ್ತಲೇ ಇದ್ದಳು. ಕಾಷಾಯ ವಸ್ತ್ರಧಾರಿಯ ಮಧುರಸ್ವರಕ್ಕೆ ಕುಮಾರಿಯ ಆರೆನಿದ್ರೆ ಭಂಗವಾಯಿತು.

' ರಾಜಕುಮಾರಿ, ಈ ಅಯೋಗ್ಯನ ಚೇಷ್ಟೆಗಾಗಿ ಕ್ಷಮೆ ಕೇಳುತ್ತೇನೆ. ಸಂಗೀತದ ಮೋಹ ನನ್ನನ್ನು ಇಲ್ಲಿಯ ವರೆಗೆ ಎಳೆದು ತಂದಿತು. ತೀವ್ರಸ್ವರದ ಆಲಾಪನೆಯನ್ನು ನುಡಿಸಿ. ತಾವು ಈ ರಾಗದ ಕೊಲೆಗೈಯ ಹತ್ತಿರುವಿರಿ. ಇದನ್ನು ನನ್ನಿಂದ ಕೇಳಲಾಗ-ಲಿಲ್ಲ.— ನಾನು ನುಡಿಸಿ ತೋರಿಸಲು ಅಪ್ಪಣೆಯೇ?

ಕುಮಾರಿ ತನ್ನ ತಪ್ಪನ್ನು ತಿಳಿದುಕೊಂಡು ಗಂಭೀರಸ್ವರದಲ್ಲಿ ಹೇಳಿದಳು:— 'ಹೌದು, ಏನೋ ಮಾನಸಿಕ ಉದ್ವಿಗ್ನತೆಯಿಂದ ನಾನು ತಪ್ಪುಮಾಡಿದೆ. ಆದರೆ ನೀವು ಪ್ರತಿಸ್ಪರ್ಧೆಯಲ್ಲಿ ಭಾಗಿ–ಯಾಗಲು ಇಚ್ಛಿಸುವಿರಾ? ನೀವು ನನ್ನ ಪಣವನ್ನು ಬಲ್ಲಿರಾ ಭಿಕ್ಷುಗಳೆ ?'

— ಭಿಕ್ಷು ಒಂದು ಕ್ಷಣ ಮೌನತಾಳಿದ. ಮರುಕ್ಷಣದಲ್ಲಿಯೆ 'ನಾನು ನಿಮ್ಮ ಪಣಕ್ಕೆ ಒಪ್ಪಿದ್ದೇನೆ............' ಭಿಕ್ಷು ಕರುಣಸ್ವರದಲ್ಲಿ ಹೇಳಿ, ವೀಣೆಯನ್ನು ಎತ್ತಿಹಿಡಿದ. 'ಈಗಲೇ ಅಲ್ಲ, ಪ್ರಾತ:ಕಾಲದಲ್ಲಿ!'

ಪ್ರಾತ:ಕಾಲದ ವೀಣೆಯ ಗಂಭೀರ ಧ್ವನಿಯಲ್ಲಿ ಕುಮಾರಿಯ ಸ್ವರವು ಅಡಗಿಹೋಯಿತು. ಗಂಟಲಲ್ಲಿ ಏನೋ ಸಿಕ್ಕಂತಾಯಿತು. ಭಿಕ್ಷು ಮಾಲಕಂಸ ಸ್ವರವನ್ನು ಪೂರ್ಣಗೊಳಿಸಿದ–ಪ್ರಿಯನ ದರ್ಶನ-ಕ್ಕಾಗಿ ಮನಸ್ಸು ಹಂಬಲಿಸಿತು.– ಭಿಕ್ಷು ಎವೆ ಬಡಿಯದೆ ದೃಷ್ಟಿಯಿಂದ ರಾಜಕುಮಾರಿಯಕಡೆಗೆ ನೋಡಹತ್ತಿದ್ದ –ಕುಮಾರಿ ಚೇತನಾಹೀನ-ಳಾಗಹತ್ತಿದ್ದಳು. ಮಾಲಕಂಸದ ಕರುಣೆ ಆತನ ಸ್ವರದಲ್ಲಿ ಮೂರ್ತಿ-ಮಂತವಾಗಿತ್ತು............'ನಿಲ್ಲಿಸು,........ನಿಲ್ಲಿಸು.............ನಿಲ್ಲಿಸು ಭಿಕ್ಷು..........ನಾನು ಪರಾಜಿತಳಾದೆ ....' ಕುಮಾರಿ ಭಿಕ್ಷುವಿನ ಚರಣಗಳಮೇಲೆ ಬಿದ್ದುಬಿಟ್ಟಳು. ವೀಣೆ ಜೋರಾಗಿ 'ಝುನ್ ಝುನನ'ವೆಂದು ಸಪ್ಪಳಾಯಿತು. ತಂತಿ ಹರಿಯಿತು. ಭಿಕ್ಷುವಿನ ಬೆರಳಿನಿಂದ ರಕ್ತ ಸೋರಿತು. ಸಾವರಿಸಿಕೊಂಡು ರಾಜಕುಮಾರಿ–ಯನ್ನು ಎತ್ತಿಹಿಡಿದ..........ರಕ್ತದ ಹನಿಗಳು ಕುಮಾರಿಯ ವಕ್ಷದ ಮೇಲೆ ಬಿದ್ದುವು. ಒಂದು ಹನಿ ಹೃದಯದ ಮೇಲೂ ಬಿತ್ತು.

''ಧರ್ಮಂ ಶರಣಂ ಗಚ್ಛಾಮಿ"........ದೂರದ ಎಲ್ಲಿಂದಲೋ ಬೇರೊಬ್ಬ ಭಿಕ್ಷುವಿನ ಸ್ವರ ಗಾಳಿಗುಂಟ ತೇಲಿಬಂತು. ಅದನ್ನು ಕೇಳಿ ತಕ್ಷಣವೆ ಭಿಕ್ಷು ಎಚ್ಚರಗೊಂಡ. 'ನನ್ನಿಂದ ಅನರ್ಥವಾಯಿತು ಕುಮಾರೀ ! ನಾನು ಇದನ್ನೇನು ಮಾಡಿದೆ? ನಾನು ಭಿಕ್ಷು .... ಬೌದ್ಧ ಭಿಕ್ಷು!' ಎಂದು ಹೇಳಿ ಮೋರೆಗೆ ವಸ್ತ್ರವನ್ನು ಹಾಕಿಕೊಂಡು ಅಲ್ಲಿಂದಲೇ ಬೇಗಬೇಗನೆ ಹೊರಟು ಬಿಟ್ಟ. ಕುಮಾರಿ ಪ್ರಜ್ಞೆ ತಪ್ಪಿದವಳಂತೆ ಅವನನ್ನೇ ನೋಡುತ್ತ ನಿಂತುಬಿಟ್ಟಳು. ಪ್ರಭಾತ–ವಾಗಹತ್ತಿತ್ತು. ಚಂದ್ರ ಮಂದನಾಗಹತ್ತಿದ್ದ.

x x x x x

ಪ್ರಾತಃಕಾಲದ ಹೊಂಬಣ್ಣದ ಕಿರಣಗಳು ಎಲ್ಲೆಡೆಗೆ ಪಸರಿಸಿ–ದುವು. ಜಾಗರಣೆಯಿಂದ ಕುಮಾರಿಯ ಕಣ್ಣುಗಳ ಕೆಂಪು ಪ್ರಭಾತದ ಸುಕುಮಾರ ಕಿರಣಗಳೊಂದಿಗೆ ಪ್ರತಿಸ್ಪರ್ಧಿಸುವಂತಿತ್ತು. ರಾಜ–

(೧೪೪ನೆಯ ಪುಟಕ್ಕೆ ಮುಂದುವರಿದಿದೆ)

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ವಿಶ್ವಶಾಂತಿಯ ಶ್ರೇಷ್ಠ ಉಪಾಯ

(ಒಂದು ವಿಚಾರಧಾರೆ)

ಶ್ರೀ. ಕೆ. ಬಿ. ಚಿಟಣಿಸ, ಅಂಬಡಗಟ್ಟಿ

ಅಧ್ಯಾತ್ಮವಾದಿಯೆ ಇರಲಿ, ಅನಾತ್ಮವಾದಿಯೆ ಇರಲಿ; ಜೀವನದಲ್ಲಿ ಶಾಂತಿ-ಸಮಾಧಾನಗಳನ್ನು ಪ್ರತಿಯೊಬ್ಬನೂ ಬಯಸುವನು. ವ್ಯಕ್ತಿಯ ಶಾಂತಿ-ಸಮಾಧಾನಗಳೇ ಸಮಾಜದ ಶಾಂತಿ-ಸಮಾಧಾನ, ಲೋಕದ ಪ್ರತಿಯೊಂದು ವ್ಯಕ್ತಿಯೂ ಇನ್ನೊಬ್ಬರ ಶಾಂತಿ-ಸಮಾಧಾನಗಳ ಗುರಿಯನ್ನಿರಿಸಿ ನಡೆಯತೊಡಗಿದರೆ ಎಲ್ಲರಿಗೂ ಆ ಶಾಂತಿ-ಸಮಾಧಾನ ಸಿಗುವುವು.

—O—

ವಿಶ್ವರಂಗದೊಳಗಿನ ಪ್ರತಿಯೊಂದು ವ್ಯಕ್ತಿಯೂ, ಶಾಂತಿಪ್ರಿಯನಾಗಿದ್ದಾನೆ. ಪ್ರಪಂಚದ, ಮೂಲೆ-ಮೂಲೆಗಳಲ್ಲಿಯೂ 'ಶಾಂತಿ! ಶಾಂತಿ!' ಎಂಬ ಕೂಗು ಕೇಳಬರುತ್ತದೆ. ಕೇವಲ ತನ್ನ ಸ್ವಾರ್ಥಕ್ಕಾಗಿ, ಮಾರ್ಗತಪ್ಪಿ ನಡೆಯುವ ವ್ಯಕ್ತಿಗಳಿಂದಲೆ ಅಶಾಂತಿಯು ಹುಟ್ಟುತ್ತದೆ. ಆದರೂ ಇಂತಹ ಅಶಾಂತಿಯುಕ್ತ ವಾತಾವರಣವನ್ನು ನಿರ್ಮಿಸುವ ವ್ಯಕ್ತಿಗೂ ಶಾಂತಿ ಬೇಕೇ ಬೇಕು. ಶಾಂತಿರಹಿತ ಬಾಳು ಯಾರಿಗಾದರೂ ಪ್ರಿಯವಾಗಿದೆಯೇ? ಈ ಕ್ಷಣಕ್ಷಣಕ್ಕೂ ಜಗತ್ತು ಶಾಂತಿಗಾಗಿ ಕೊರಗುತ್ತಿದ್ದರೂ, ಅಶಾಂತಿಯೆ ಬೆಳೆಯುತ್ತಲಿದೆ. ಎಂದ ಮೇಲೆ ಇದಕ್ಕೆ ಏನಾದರೊಂದು ಕಾರಣವಿರಲೇ ಬೇಕಲ್ಲವೇ? ಅದರ ಶೋಧಕ್ಕಾಗಿಯೆ ಪ್ರಸ್ತುತ ಲೇಖದಲ್ಲಿ, ನಿಜವಾದ ಶಾಂತಿಯನ್ನು ಹೊಂದುವ ಸರಳ ಉಪಾಯದ ಬಗಗೆ ವಿಚಾರಿಸೋಣ. ವಿವೇಕಿಗಳೂ ವಿಚಾರಶೀಲರೂ ಆದ ಮಹಾನುಭಾವರಿಗೆ, ಇದರಲ್ಲಿ ಒಂದು ಆಶೆಯ ಕಿರಣ ಪ್ರಾಪ್ತವಾಗಬಹುದು. ಆ ದೊರೆತಂತಹ ಆಶೆಯ ಕಿರಣವು ನಮ್ಮ ಜೀವನದಲ್ಲಿ ಎಷ್ಟೆಷ್ಟು ವ್ಯಾಪಿಸುತ್ತ ಹೋಗುವುದೊ, ಅಷ್ಟಷ್ಟು ಶಾಂತಿ (ವಿಶ್ವಶಾಂತಿಯು) ಮಾತ್ರೆಯು ವೃದ್ಧಿ ಹೊಂದುತ್ತ ಹೋದೀತು

ಅನೇಕ ವ್ಯಕ್ತಿಗಳ ಸಮೂಹಕ್ಕೆ ಸಮಾಜವೆಂದೂ, ಇಂತಹ ಎಷ್ಟೋ ಸಮಾಜಗಳ ಸಮೂಹಕ್ಕೆ ದೇಶವೆಂದೂ ಅಥವಾ ಜನಾಂಗವೆಂದೂ ನಾವು ಕರೆಯುತ್ತೇವೆ ಇದೇ ಪ್ರಕಾರ ಅನೇಕ ಜನಸಮುದಾಯಕ್ಕೆ 'ವಿಶ್ವಜನತೆ' ಎನ್ನುವ ಪರಿಪಾಠವಿದೆ. ಆ ವಿಶ್ವಜನತೆಯ ಧಾರ್ಮಿಕ, ನೈತಿಕ, ಮತ್ತು ದೈನಿಕ, ಜೀವನದ ಉಚ್ಚ-ನೀಚ ಜೀವನಚರ್ಯೆಯಿಂದಲೆ ವಿಶ್ವದಲ್ಲಿ ಶಾಂತಿ ಅಥವಾ ಅಶಾಂತಿಯ ವಿಕಾಸ-ಕ್ಷಯಗಳಾಗುತ್ತಿರುತ್ತವೆ. ಅಶಾಂತಿಯು ಯಾವಾಗಲು ಅವಾಂಛನೀಯ ಮತ್ತು ಅಗ್ರಾಹ್ಯವಾಗಿದೆ. ಆದಕಾರಣ ಇದರ ನಿರ್ಮಾಣ ಯಾವಾಗ ಮತ್ತು ಹೇಗೆ, ಯಾವ ಯಾವ ಕಾರಣಗಳಿಂದ ಆಯಿತೆಂಬುದನ್ನು ವಿಚಾರಿಸುವುದು ಅವಶ್ಯಕವಾಗಿದೆ. ಇದಕ್ಕಿಂತ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ಶಾಂತಿ ಅಥವಾ ಅಶಾಂತಿಯ ಕಾರಣಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ. ಇದರಿಂದಲೆ ವಿಶ್ವಶಾಂತಿ, ಮತ್ತು ಅಶಾಂತಿಯ ಕಾರಣವು ಸಹಜವಾಗಿ ಗೋಚರಿಸುತ್ತದೆ. ಯಾವುದೊಂದು ವ್ಯಕ್ತಿಯ ಅಶಾಂತಿಯ ಸಮಸ್ಯೆ ಬಿಡಿಸಲ್ಪಟ್ಟು, ಅದರಿಂದ ಅವನಿಗೆ ಸಮಾಧಾನ ಪ್ರಾಪ್ತವಾದರೆ, ಅಂತಹ ಅನಂತ ವ್ಯಕ್ತಿಗಳ ಸಾಮೂಹಿಕ ರೂಪದ ಅಶಾಂತಿಯ ಸಮಸ್ಯೆಯು ಸಹಜವಾಗಿ ಬಿಡಿಸಲ್ಪಡುವುದೆಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಪ್ರಪಂಚದೊಳಗಿನ ಪ್ರತಿಯೊಂದು ಜೀವಧಾರಿ ವ್ಯಕ್ತಿಯೂ ಸ್ವತಃ ಸೂಕ್ಷ್ಮವಾಗಿ ಪರಿಶೀಲಿಸುತ್ತ ಹೋದರೆ, ಅವನಿಗೆ ಅಶಾಂತಿಯು ಬೇಡವಾಗಿದ್ದರೂ,—ಅವನಲ್ಲಿ, ಅವನ ಸುತ್ತುಮುತ್ತಲೂ- ಅದು ಅಖಂಡವಾಗಿ ವ್ಯಾಪಿಸಿದಂತೆಯೂ, ಶಾಂತಿಯು ಪ್ರಿಯವಾಗಿದ್ದು ಅದನ್ನು ಅವನು ಆದರಪೂರ್ವಕ ಬರಮಾಡಿಕೊಳ್ಳಬೇಕೆಂದು ಆಶಿಸಿದ್ದರೂ, ಅದು ಅವನಿಂದ ಬಹಳ ದೂರವಾಗಿ ಓಡಿಹೋಗುವಂತೆಯೂ ಕಂಡುಬರುತ್ತದೆ. ಹೀಗಾಗಲು ಕಾರಣವೇನೆಂಬುದನ್ನು ಶೋಧಿಸಲು ನಮಗೆ ಬಹಳ ವೇಳೆ ಹಿಡಿಯಲಾರದು.

ವಿಶ್ವದೊಳಗಿನ ಸಮಸ್ತ ಪ್ರಾಣಿಮಾತ್ರಗಳ ಬುದ್ಧಿಯ ವಿಕಾಸ ಒಂದೆ ಬಗೆಯಾಗಿ ಆಗದು. ಆದುದರಿಂದ ಶಾಂತಿಯ ಉಪಾಯ ಶೋಧನೆಗಾಗಿ, ವಿಚಾರಶೀಲ ವ್ಯಕ್ತಿಗಳ ಆವಶ್ಯಕತೆ ಇರುವುದು

ಸಾಮಾನ್ಯಮಾನವನ ಬುದ್ಧಿಗೆ ಶಾಂತ್ಯುಪಾಯದ ಶೋಧನೆಯ ಮಾರ್ಗವು ಹೊಳೆಯಲಾರದು. ಅದಕ್ಕಾಗಿ ವಿಚಾರಶೀಲ ಮನುಷ್ಯರೇ ಮಾರ್ಗದರ್ಶಕರಲ್ಲದೆ, ಅವರ ಮೇಲೆ ಪ್ರಪಂಚದ ದೊಡ್ಡ ಜವಾಬ್ದಾರಿ ಇದೆ.

ಜಗತ್ತಿನ ಇತಿಹಾಸದ ಒಂದೊಂದೇ ಹಾಳೆಗಳನ್ನು ಹೊರಳಿಸುತ್ತ ಹೋದರೆ, ಯಾವಾಗಲೂ ವಿಚಾರವಂತ ವ್ಯಕ್ತಿಗಳ ಸಹಾಯ-ಸಹಕಾರಗಳಿಂದ ರಾಷ್ಟ್ರೋನ್ನತಿಯಾದದ್ದು ಕಂಡುಬರುತ್ತದೆ. ಎಂದ ಮೇಲೆ, ವಿಶ್ವದೊಳಗಿನ ಇಂತಹ ಸ್ವಲ್ಪೇ ವ್ಯಕ್ತಿಗಳು, ವಿಶ್ವದ ಅಶಾಂತಿಯ ಕಾರಣಗಳನ್ನು ನಿಃಸ್ವಾರ್ಥ ಬುದ್ಧಿಯಿಂದ ಪರಿಶೋಧಿಸಿ, ಅದರ ರಸವನ್ನು ಸಾಮಾನ್ಯ ವ್ಯಕ್ತಿಗಳಾದ ನಮ್ಮೆಲ್ಲರ ಮುಂದೆ ಇಟ್ಟಿದ್ದಾದರೆ, ವಿಶ್ವಶಾಂತಿಗೆ ಒಂದು ನಿಮಿಷವೂ ಹತ್ತಬಾರರು.

ವ್ಯಕ್ತಿಯ ಅಶಾಂತಿಯ ಮೂಲಕಾರಣವು ಅವನ ಅಜ್ಞಾನ; ಅರ್ಥಾತ್ ಯಾವುದೊಂದು ವ್ಯಕ್ತಿಯು ತನ್ನ ಮೂಲಸ್ವರೂಪವನ್ನು ಅರಿಯದೆ; ಕಾಲ್ಪನಿಕ ಸ್ವರೂಪವೇ ನಿಜವೆಂದು ನಂಬಿ, ಆ ಕಾಲ್ಪನಿಕ ಸ್ವರೂಪ ಮತ್ತು ವಸ್ತುಗಳ ಪ್ರಾಪ್ತಿಯ ದುರಾಶೆಯವನಾಗಿ, ಯಾವಾಗಲೂ ಅಸತ್ಯ-ಅನ್ಯಾಯಮಾರ್ಗಗಳಿಂದ ತನ್ನ ಆಶೆಯನ್ನು ಈಡೇರಿಸಿಕೊಳ್ಳಲು, ಅಧಾರ್ಮಿಕ ಹಾಗು ನೀತಿರಹಿತ ಕ್ರಿಯೆಗಳನ್ನು ಮಾಡುತ್ತಾನೆ. ಈ ರೀತಿಯಾಗಿ ವರ್ತಿಸುವುದರಿಂದ, ತಾನೂ ವಿಪದ್-ಗ್ರಸ್ತನಾಗುವನಲ್ಲದೆ, ಸಮಾಜವನ್ನೂ ರಾಷ್ಟ್ರವನ್ನೂ ವಿಪತ್ತಿಗೀಡು ಮಾಡುತ್ತಾನೆ. ಇದನ್ನೇ ನಾವು ಅಶಾಂತಿಯೆಂದು ಸಂಬೋಧಿಸುವೆವು. ಈ ಅಜ್ಞಾನಕ್ಕೆ ಜೈನ ಪರಿಭಾಷೆಯಲ್ಲಿ "ಮಿಥ್ಯಾತ್ವ" ಎಂದು ಹೇಳಲ್ಪಡುತ್ತದೆ. ಯಾವ ವಸ್ತುವು ತನ್ನದಲ್ಲವೋ ಅದು ತನ್ನದೆಂದೂ ಮತ್ತು ಯಾವ ವಸ್ತುವು ನಿಜವಾಗಿ ತನ್ನದೋ ಅದು ತನ್ನದಲ್ಲವೆಂದೂ ಉದಾಸೀನನಾಗುತ್ತಾನೆ ಉದಾ:—ಜಡವಸ್ತುಗಳಾದ ಧನ, ಮನೆ, ವಸ್ತ್ರ, ಮೊದಲಾದ ನಶ್ವರಪದಾರ್ಥಗಳು ತನ್ನವೆಂದು ತಿಳಿದು, ಅವುಗಳ ಪ್ರಾಪ್ತಿ ಮತ್ತು ಪಾಲನೆಗಾಗಿ ಉತ್ಸುಕನಾಗಿರುತ್ತಾನೆ. ಹಾಗೂ ಸತ್-ಚಿತ್-ಆನಂದ ಮತ್ತು ಬೋಧ ಸ್ವರೂಪವಾದ ಯಾವ ಆತ್ಮವಸ್ತುವು ತನ್ನ ನಿಜಸಂಪತ್ತಿಯೊ ಅದನ್ನು ತ್ಯಜಿಸಿ, ಕ್ಷಣ-ಭಂಗುರವಸ್ತುಗಳ ಪ್ರಾಪ್ತಿಗಾಗಿ ತನ್ನ ತನು-ಮನಗಳನ್ನು ಸವೆಸುತ್ತಾನೆ. ವಸ್ತುತಃ ದುಃಖದ ಉಗಮಸ್ಥಾನವೇ ಇದು

ದೃಶ್ಯಮಾನ ಯಾವತ್ತು ಪದಾರ್ಥಗಳೂ ಜಡವಾಗಿದ್ದು, ಆತ್ಮವಸ್ತುವು ನಮ್ಮ ಲೌಕಿಕದೃಷ್ಟಿಗೆ ಗೋಚರಿಸಲಾರದು. ಕಾರಣ ದೇಹವೇ ನಿತ್ಯವಸ್ತುವೆಂದು ನಂಬಿ ಅದರ-ಸುಖಕ್ಕೋಸ್ಕರ, ಏನಕೇನ ಪ್ರಕಾರೇಣ ಧನ-ಮಾನ-ಸಂಪದಗಳನ್ನು ಸಂಗ್ರಹಿಸುವುದರಲ್ಲಿಯೆ ನಾವು ಸಂಲಗ್ನರಾಗುತ್ತೇವೆ. ಈ ಪ್ರಕಾರ ಅನಿತ್ಯವಸ್ತುಗಳ ಸಂಗ್ರಹಕ್ಕಾಗಿ ನಮ್ಮ ಜೀವನಶಕ್ತಿಯನ್ನು ಹಾಳು ಮಾಡುವುದು, ತನ್ನ ಹಾಗೂ ಸಕಲವಿಶ್ವದ ಅಶಾಂತಿಗೆ ಮೂಲಕಾರಣವಾಗಿದೆ.

ಜಡಪದಾರ್ಥಗಳು ಮರ್ಯಾದಿತವಾಗಿವೆ. ತದ್ವಿರುದ್ಧ ಮಾನವನ ಇಚ್ಛೆಗಳು ಅನಂತವಾಗಿವೆ. ಅದಕ್ಕನುಸಾರವಾಗಿ ಒಂದು ವಸ್ತುವು ಪ್ರಾಪ್ತವಾದ ಕೂಡಲೆ ಮತ್ತೊಂದು ವಸ್ತುವನ್ನು ಪ್ರಾಪ್ತಮಾಡಿಕೊಳ್ಳುವ ಇಚ್ಛೆಯು ಜಾಗೃತಿ ಹೊಂದುತ್ತದೆ. ಈ ಪ್ರಕಾರ ನಮ್ಮೊಳಗಿನ ಆಶಾಂಕುರವು ಕ್ರಮೇಣ ಬಲಗೊಳ್ಳುತ್ತ ಬಲಗೊಳ್ಳುತ್ತ, ಅಧಿಕ ಸಂಗ್ರಹ ಮಾಡುವುದೇ ನಮ್ಮ ಜೀವನದ ಗುರಿಯಾಗಿ, ಅದು ಸಿದ್ಧಿಗೊಳ್ಳದೆ, ಮನಸ್ಸು ವ್ಯಗ್ರತೆ ಮತ್ತು ಅಶಾಂತತೆಯನ್ನು ಹೊಂದುತ್ತದೆ. ಇದೇ ಪ್ರಕಾರ ಸಮಸ್ತ ವಿಶ್ವದೊಳಗಿನ ಎಲ್ಲ ವ್ಯಕ್ತಿಗಳೂ, ಅನಾವಶ್ಯಕ ವಸ್ತುಗಳ ಸಂಗ್ರಹ ಮಾಡುವುದರಲ್ಲಿ ತತ್ಪರರಾದುದರಿಂದ, ಪ್ರತಿಯೊಂದು ವ್ಯಕ್ತಿ, ಸಮಾಜ, ರಾಷ್ಟ್ರ ಮೊದಲಾದುವುಗಳಲ್ಲಿ, ಪರಸ್ಪರ, ದ್ವೇಷ, ಕಲಹ, ಕಾಳಸಂತೆ ಮುಂತಾದ ಅನರ್ಥಕಾರಿ ದುರಾಚರಣೆಗಳು ತಲೆಯೆತ್ತಿ ಒಂದು ತರದ ಸಂಘರ್ಷ ಪ್ರಾರಂಭವಾಗುತ್ತದೆ. ಆ ಸಂಘರ್ಷದಿಂದ ಉತ್ಪನ್ನಿಸಿದ ಅಶಾಂತಿಮಯ ಕಿಡಿಗಳು ದಿನೇ ದಿನೇ ಬೆಳೆದು, ಅದರ ಪ್ರಖರವಾದ ಜ್ವಾಲೆಯು ವಿಶ್ವದಲ್ಲೆಲ್ಲ ಪಸರಿಸುವುದಲ್ಲದೆ, ವಿಶ್ವವ್ಯಾಪೀ ಯುದ್ಧದ ಅಗ್ನಿಕುಂಡವು ಪ್ರಜ್ವಲಿಸಹತ್ತುತ್ತದೆ. ಅದರಿಂದಾಗಿ ಸಮಸ್ತ ಪ್ರಪಂಚದ ಸಾಹಿತ್ಯ, ಜನಸಮೂಹ, ಸಂಪತ್ತು—ಸುಟ್ಟು ಭಸ್ಮವಾಗುತ್ತದೆಂಬುದು ಸರ್ವರೂ ತಿಳಿದ ವಿಷಯ. ಇಂತಹ ಅನ್ಯೋನ್ಯ ನಾಶಕಾಂಡವನ್ನು ಮುಂಗಂಡವರಾದ—ಬೇರೆ ಬೇರೆ ದೇಶದೊಳಗೆ ಆಗಾಗ ತಲೆದೋರುವ—ಮಹಾಪುರುಷರು "ನೀವು ಯಾರು? ಪರರು ಯಾರು? ಎಂಬುದನ್ನರಿತು ನಿಮ್ಮ ನಿಜಸ್ವರೂಪದಲ್ಲಿ ತನ್ಮಯರಾಗಿ, ನಿಮ್ಮ ಆವಶ್ಯಕತೆಗಳನ್ನು ಮರ್ಯಾದೆಗೊಳಿಸಿರಿ. ವಿಲಾಸವೃತ್ತಿಯನ್ನು ಹೊಡೆದೋಡಿಸಿ, ಆಶೆಯನ್ನು ಸೀಮಿತಗೊಳಿಸಿರಿ!" ಎಂದು ಉಪದೇಶ ಮಾಡಿದ್ದಾರೆ. ಮಹಾಪುರುಷರ ಈ ಉಪದೇಶಾಮೃತವು ಎಷ್ಟು ರಸಭರಿತ ಮತ್ತು ರಹಸ್ಯಮಯವಾಗಿದೆಯೆಂಬುದನ್ನು ಶಾಂತಚಿತ್ತದಿಂದ ವಿಚಾರಿಸಿರಿ. ಯಾವಾಗ ಆಶೆಯು ಮರ್ಯಾದಿತವಾಗುವುದೊ, ಆಗ ಪ್ರಾಪಂಚಿಕ ವಸ್ತುಗಳ ಕೊರತೆ ನಮಗಾಗದು. ಆವಶ್ಯಕತೆಯನುಸಾರವಾಗಿ, ಸರ್ವರಿಗೂ ಸರ್ವವಸ್ತುಗಳು ತನ್ನಿಂದ ತಾನೇ ಪ್ರಾಪ್ತವಾಗಿ, ಸಮಾಜದಲ್ಲಿ—ಅದರಂತೆ ವಿಶ್ವದಲ್ಲಿ—ಸ್ವಾಭಾವಿಕವಾಗಿಯೆ ಶಾಂತಿ-ಸಮಾಧಾನಗಳು ನೆಲೆಗೊಳ್ಳುತ್ತವೆ. ಭೌತಿಕವಸ್ತುಗಳು, ಸುಲಭವಾಗಿ ದೊರೆಯುವುದರಿಂದ, ಅವುಗಳ ಬಗೆಗೆ ಆಸಕ್ತಿ ಲಯವಾಗಿ ಮನಸ್ಸು ಆತ್ಮೋನ್ನತಿಯ ಕಡೆಗೆ ಹೊರಳುವುದಲ್ಲದೆ, ಆತ್ಮಾಭಿಮುಖವಾಗಿರುವ ಮಾನವನಿಗೆ; ಪ್ರಪಂಚದಲ್ಲಿಯ ಸರ್ವ ಭೌತಿಕ ವಸ್ತುಗಳಲ್ಲಿ ಮೋಹವಿಡುವುದು ಮಹಾಮೂರ್ಖತನವೆಂದು ಭಾಸವಾಗುತ್ತದೆ. ಅಲ್ಲಿಂದ ಅವನು ಸಂಗ್ರಹ, ಪರಿಗ್ರಹ ಎರಡೂ ಕಾರ್ಯಗಳನ್ನು ಮಾಡಲಾರನು. ಕೊನೆಗೆ ಆತ್ಮವೇ ನಿಜವಾದ ವಸ್ತುವೆಂದು ನಂಬಿ ಅದರಲ್ಲಿಯೇ ಮಹದಾನಂದ ಹೊಂದುವನು. ವಿಶ್ವದ ಸಕಲ ಪ್ರಾಣಿಮಾತ್ರರು ಶಾಂತಿತತ್ತ್ವದ ಈ ಆಧ್ಯಾತ್ಮಿಕಮಾತ್ರೆಯನ್ನು ಸೇವಿಸಿದ್ದಾದರೆ, ಅಶಾಂತಿಗೆ ಸ್ಥಾನವೆಲ್ಲಿ ?

ಆದರೆ ಇಂದು ವಿಶ್ವವು ನಿಜವಾದ ಶಾಂತಿಮಾರ್ಗದ ಕಡೆಗೆ ಹೊರಳಿ ಸಹ ನೋಡದೆ, ಕಣ್ಣುಮುಚ್ಚಿಕೊಂಡು ಭೌತಿಕವಿಜ್ಞಾನದತ್ತ ಸಾಗಿದೆ. ಇಂದು ಪ್ರಗತಿಪರರೆಂದು ಹೇಳಿಕೊಳ್ಳುವ ಐರೋಪ್ಯರು ಆಧ್ಯಾತ್ಮಿಕವಿಜ್ಞಾನದ ಮಹತ್ವವನ್ನರಿಯದೆ—ಭೌತಿಕ ವಿಜ್ಞಾನವೇ

ಏಕಮೇವ ವಿಶ್ವಪ್ರಪಂಚದ ಕಲ್ಯಾಣಸಾಧನವೆಂದು ತಿಳಿದು, ಅದನ್ನು ಇನ್ನೂ ವಿಕಾಸಗೊಳಿಸುವುದರಲ್ಲಿಯೆ ತನ್ಮಯರಾಗಿರುತ್ತಾರೆ; ಪ್ರಪಂಚದ ಉನ್ನತಿಯು ನಮ್ಮಿಂದಲೇ ಸಾಧ್ಯವೆಂದು ಜಂಬಕೊಚ್ಚಿಕೊಳ್ಳುತ್ತಿದ್ದಾರೆ. ಅದರ ಫಲಸ್ವರೂಪವಾಗಿ ಇಂದು ಯುರೋಪಿಯರು ಅಣುಬಾಂಬು, ಹೈಡ್ರೋಜನ್ ಬಾಂಬು ಮೊದಲಾದ, ಮಹಾನ್ ಅನರ್ಥಕಾರೀ ಶಸ್ತ್ರ-ಅಸ್ತ್ರಗಳನ್ನು ನಿರ್ಮಿಸಿ, ಕೋಟ್ಯಂತರ ನಿಷ್ಪಾಪ, ನಿಷ್ಕಲಂಕ, ನಿರುಪದ್ರವಿ ಜನಾಂಗಗಳನ್ನು ಸಂಹರಿಸಿರುವರಲ್ಲದೆ, ಇನ್ನೂ ಹೆಚ್ಚುಹೆಚ್ಚಾಗಿ ಸಂಹರಿಸುವ ಪ್ರಯತ್ನದಲ್ಲಿದ್ದಾರೆ. ಇಂತಹ ರಾಕ್ಷಸೀ ವಿನಾಶಕಶಕ್ತಿಯ ಬಲದ ಮೇಲೆ ಅಮೇರಿಕಾ, ಚೀನಾ, ಜಪಾನ್, ರಶಿಯಾ ಮೊದಲಾದ ದೇಶಗಳಲ್ಲಿ, ಏನೇನು ಅನರ್ಥಪರಂಪರೆ ನಡೆದಿದೆಯೆಂಬುದು ಸರ್ವರೂ ಅರಿತ ವಿಷಯ. ಈ ಪ್ರಕಾರ ಪಾಶ್ಚಿಮಾತ್ಯರಾಷ್ಟ್ರಗಳು ಭೌತಿಕ ವಿಜ್ಞಾನದಲ್ಲಿ ವಿಜಯಶಾಲಿಗಳಾಗಿದ್ದರೂ, ಜೀವನ ಸಂಗ್ರಾಮದ ವಿಫಲರಾಗಿ, ಶಾಂತಿಯ ಸಫಲತೆಗಾಗಿ ಭಾರತದತ್ತ ಆಶಾನ್ವಿತ ದೃಷ್ಟಿಯಿಂದ ನೋಡುತ್ತಿದ್ದಾರೆ. ಭಾರತವರ್ಷದಲ್ಲಿ ಅನಾದಿಯಿಂದಲೂ ಸತ್ಯ, ಮತ್ತು ಅಹಿಂಸೆಗಳನ್ನೇ ತಳಹದಿಯನ್ನಾಗಿ ಮಾಡಿ ನಿರ್ಮಿಸಿದ ಸರ್ವಧರ್ಮ ಸಮನ್ವಯ 'ಆಧ್ಯಾತ್ಮ ಮಂದಿರವು' ಪರಕೀಯರ, ಪರಧರ್ಮಗಳ, ಅನಂತ ಆಘಾತಗಳನ್ನು ಸಹಿಸಿ, ಶ್ರೇಷ್ಠತರವಾದ ಪರ್ವತದ ಶಿಖರದಂತೆ ತಲೆಯೆತ್ತಿಕೊಂಡು, ಸಕಲ ವಿಶ್ವಜನಾಂಗಕ್ಕೂ ಶಾಂತಿಯ ಪ್ರಸಾದವನ್ನು ಕೊಡಲು ಕೈಮಾಡಿ ಕರೆಯುತ್ತಲಿದೆ. ಅಂತಹ ಮಹಾನ್ ಅಧ್ಯಾತ್ಮಮಂದಿರದ ಉಪಾಸಕರಾದ, ಬುದ್ಧ, ಶಂಕರ, ಮಧ್ವ ಮೊದಲಾದ ಮಹಾವಿಭೂತಿಗಳು, ಆ ಸತ್ಯ, ಅಹಿಂಸೆಯ ತತ್ತ್ವದ ತಿರುಳನ್ನೇ ಭಾರತವರ್ಷಕ್ಕಲ್ಲದೆ ಅಖಿಲ ವಿಶ್ವಕ್ಕೂ ಬೋಧಿಸಿ, ತಮ್ಮ ಧವಲಕೀರ್ತಿಯಿಂದ ಅಮರರಾಗಿದ್ದಾರೆ. ಇಷ್ಟೇ ಅಲ್ಲದೆ ಮೊನ್ನೆ ಮೊನ್ನೆ, ಪರಕೀಯರ ದಾಸ್ಯದಲ್ಲಿ ಸಿಕ್ಕಿ ನರಳುತ್ತಿದ್ದ ಭಾರತವನ್ನು, ರಾಷ್ಟ್ರಪಿತ ಪೂಜ್ಯ ಮಹಾತ್ಮಾಜಿಯವರು, ಶಸ್ತ್ರಾಸ್ತ್ರಗಳ ಸಹಾಯವಿಲ್ಲದೆ ಕೇವಲ ಸತ್ಯ-ಅಹಿಂಸೆಯ ಬಲದಿಂದಲೇ ಚಿರ ಅಭಿಲಷಿತ ಸ್ವಾತಂತ್ರ್ಯವನ್ನು ಕೊಡಿಸಿ ಮುಕ್ತ ಮಾಡಲಿಲ್ಲವೇ ? ಅಂತೆಯೇ ಪಶ್ಚಿಮರಾಷ್ಟ್ರಗಳವರು ಭಾರತೀಯರ ಆಧ್ಯಾತ್ಮಿಕ ಬಲವೇ ಇಂದು ಜಗತ್ತಿಗೆ ಚಿರಶಾಂತಿಯನ್ನು ಕೊಡಬಲ್ಲದೆಂದು ಮನಗಂಡು, ಪೂಜ್ಯ ಬಾಪುವಿನ ಉತ್ತರಾಧಿಕಾರಿ ಜವಹರಲಾಲರೇ ವಿಶ್ವಶಾಂತಿಗೆ ಸಹಾಯಕರಾಗುವರೆಂದು ಬಾಯ್ತುಂಬ ಹೊಗಳುತ್ತಿದ್ದಾರೆ. ಇಲ್ಲಿಯವರೆಗೆ ಶಾಂತಿಯ ಬಗೆಗೆ ಮಾಡಿದ ವಿವೇಚನೆಯಿಂದ ನಾವು ಕಲಿಯಬೇಕಾದ ಮುಖ್ಯಮಾತೆಂದರೆ, ಪ್ರತಿಯೊಂದು ವ್ಯಕ್ತಿಯೂ ತಾನು, ತನ್ನ ಮನೆ, ದೇಶ, ಜಾತಿ, ಕುಲ, ಧರ್ಮಗಳೆಂಬ ಸಂಕುಚಿತ ಭಾವನೆಗೆ ಒಳಗಾಗದೆ, ಶಾಂತಿಗೆ ಸಹಾಯಕವಾದ ಸರ್ವ ವ್ಯಕ್ತಿ, ಧರ್ಮ, ಕುಲ, ಪಂಥಗಳು, ನನ್ನವೇ ಎಂಬ ಆತ್ಮೀಯ ಭಾವನೆಮಾಡಿಕೊಂಡು ನಡೆದದ್ದಾದರೆ, ಸರ್ವರಿಗೂ ಶಾಂತಿ-ಸಮಾಧಾನಗಳು ಪ್ರಾಪ್ತವಾಗಿ, ವಿಶ್ವಶಾಂತಿಯು ನೆಲೆಗೊಳ್ಳುವುದರಲ್ಲಿ ಸಂದೇಹವಿಲ್ಲ.

(೧೩೧ನೆಯ ಪುಟದಿಂದಬಂದದ್ದು)

ಕುಮಾರಿಯು ತೀವ್ರ ವೇದನೆಯನ್ನು ಅನುಭವಿಸಹತ್ತಿದ್ದಳು. ಅವಿರತ ಅಶ್ರುಪ್ರವಾಹದಿಂದ ಅವಳ ಕೆನ್ನೆಗಳು ಗುಲಾಬಿಯ ಬಣ್ಣವನ್ನು ಹೊಂದಿದ್ದವು. ವೇದನೆಯಿಂದ ಮುಖವೆಲ್ಲ ಬಿಳುಪಾಗಿತ್ತು. ಕುಮಾರಿ ಏಕಾಂತವನ್ನು ಬಯಸುತ್ತಿದ್ದಳು.

ಆದರೆ ಇಂದು ಅವಳಿಗೆ ಪಾಂಚಾಲರಾಜನಾದ ಉದಯಸಿಂಹನ ಜೊತೆಗೆ ಸಂಗೀತಸ್ಪರ್ಧೆಯಲ್ಲಿ ಭಾಗ ತೆಗೆದುಕೊಳ್ಳಬೇಕಾಗಿತ್ತು. ಆ ಕಾರಣದಿಂದ ಹೇಗೋ ಮನಸ್ಸನ್ನು ಬಿಗಿಹಿಡಿದಳು. ಭಿಕ್ಷು ಪುನಃ ಕಾಣದ್ದಕ್ಕೆ ಅವಳು ನಿರಾಶಳಾಗಿದ್ದಳು. ಸ್ಪರ್ಧೆಯಲ್ಲಿ ಉದಯಸಿಂಹನಿಗೆ ಕುಮಾರಿ ಸೋತು ಹೋದಳು. ನಗರದಲ್ಲೆಲ್ಲ ಸಂತೋಷದ ವಾತಾವರಣ ಹಬ್ಬಿಕೊಂಡಿತು. ರಾಜಕುಮಾರಿಯು ಉದಯಸಿಂಹನಿಗೆ ಪರಾಜಿತಳಾಗುವುದರ ಮೊದಲೇ ಸೋತು ದಾಸರಾದ ರಾಜಕುಮಾರರನ್ನು ಸ್ವತಂತ್ರರನ್ನಾಗಿ ಮಾಡಿಸಿದಳು. ಈ ಒಗಟಿನ ಅರ್ಥವೆ ಯಾರಿಗೂ ಹೊಳೆಯಲಿಲ್ಲ.

ಅರಮನೆಯಲ್ಲಿ ವಿವಾಹದ ಸಿದ್ಧತೆ ನಡೆಯಿತು. ಕುಮಾರಿ ಹತಪ್ರಭ ಕಣ್ಣುಗಳಿಂದ ಎಲ್ಲವನ್ನೂ ನೋಡಹತ್ತಿದ್ದಳು. ಭಿಕ್ಷುವಿನ ಪ್ರತೀಕ್ಷೆ ಕೊನೆಗೊಳ್ಳಲೇ ಇಲ್ಲ. ಮನಸ್ಸಿನ ಉದ್ವೇಗದಿಂದ ಕಣ್ಣೀರೂ ಬತ್ತಿಹೋದುವು. ವಿವಾಹದ ದಿನಗಳು ಸಮೀಪಕ್ಕೆ ಬಂದಂತೆಲ್ಲ ಕುಮಾರಿಯ ಮಾನಸಿಕ ವ್ಯಥೆ ಹೆಚ್ಚುತ್ತಲೇ ನಡೆದಿತ್ತು. "..........ಮನಸ್ಸು ಭಿಕ್ಷುವಿನದು, ಶರೀರ ಉದಯಸಿಂಹನದು........... ಇಲ್ಲ, ಇಲ್ಲ, ನಾನು ನನ್ನ ನಾರೀತ್ವವನ್ನು ಕಳೆದುಕೊಳ್ಳಬಾರದು......ಭಿಕ್ಷು........" ಭಿಕ್ಷುವಿನ ಸ್ಮರಣೆಯಿಂದ ಅವಳ ಮೈಮೇಲೆ ರೋಮಾಂಚನಗಳೆದ್ದು ಅವಳು ನಡುಗಿದಳು.

ಒಂದು ಶುಭದಿನದಲ್ಲಿ ವಿವಾಹ ನಡೆದು ಹೋಯಿತು. ರಾಜನ ಸಂಗಡ ಹೊರಡುವ ದಿನ ರಾಜಕುಮಾರಿಯ ಸ್ಥಿತಿ ಗಾಳಿತುಂಬಿದ ಶವದಂತಾಗಿತ್ತು. ಅವಳು ಆ ದಿನ ಬಹಳ ಸಾಹಸದಿಂದ ತನ್ನನ್ನು ತಾನೇ ಸಾವರಿಸಿಕೊಂಡಳು.

ಪಲ್ಲಕ್ಕಿ ರಾಜಮಾರ್ಗದ ಮಧ್ಯದಲ್ಲಿ ತಲುಪಿತ್ತು. ಅಲ್ಲಿ ಅತಿ ಹೆಚ್ಚಾಗಿ ಜನರ ಗದ್ದಲ ನಡೆದಿತ್ತು. ರಾಜಕುಮಾರಿ ಆ ಕಡೆಗೆ ಲಕ್ಷ್ಯಗೊಟ್ಟಳು. ಓರ್ವ ಬೌದ್ಧಭಿಕ್ಷು ಒಂದು ಪಾಪದ ಪ್ರಾಯಶ್ಚಿತ್ತಕ್ಕಾಗಿ ಸಮಾಧಿಯಲ್ಲಿ ಪ್ರಾಣ ಬಿಟ್ಟಿದ್ದ............ನೆರೆದ ಜನರ ಕೋಲಾಹಲ ಇನ್ನೂ ಹೆಚ್ಚಾಯಿತು. ....ಬೌದ್ಧಭಿಕ್ಷು ಪಾಪ ಮಾಡಿದ್ದ............ಅಂಥದೇನು ಪಾಪ ಅವನಿಂದ ಘಟಿಸಿತ್ತು. ?........... ಕುಮಾರಿ ಗಡ ಗಡ ನಡುಗಿದಳು. .... ಏನು ಪಾಪ ಮಾಡಿದ್ದ? ಎಚ್ಚರ ತಪ್ಪುವ ಮೊದಲೇ ರಾಜಕುಮಾರಿ ಪಲ್ಲಕ್ಕಿಯಿಂದ ಕೆಳಗೆ ಉರುಳಿದಳು. ಹಿಂದೆಯೇ ಬರುತ್ತಿದ್ದ ಸಾಮಂತನ ರಥದ ಗಾಲಿಗೆ ಬಿದ್ದು ಪ್ರಾಣಬಿಟ್ಟಳು. ಅವಳ ಶರೀರ ಛಿನ್ನವಿಚ್ಛಿನ್ನವಾಯಿತು.

ಅಂದಿನ ಉಲ್ಲಾಸ, ಹಾಹಾಕಾರದಲ್ಲಿ ಪರಿವರ್ತಿಸಿತು. ಎಲ್ಲರೂ ಹುಚ್ಚರಂತೆ ದಂಗುಬಡಿದು ನಿಂತುಬಿಟ್ಟರು.

ಒಬ್ಬರೂ ಕುಮಾರಿಯ ಆಕಸ್ಮಿಕ ಮರಣದ ಸಂಬಂಧವನ್ನು ಭಿಕ್ಷುವಿಗೆ ಜೋಡಿಸಲಿಲ್ಲ. ಒಬ್ಬರಿಗೂ ವಿಜಯ— ಪರಾಜಯದ ರಹಸ್ಯವನ್ನು ತಿಳಿಯಲಾಗಲಿಲ್ಲ.

ಭಕ್ತ ಸುದಾಮ

(ಒಂದು ಪೌರಾಣಿಕ ರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರವಿವರ

ಗಂಡುಸರು

ಕುಚೇಲ (ಒಬ್ಬ ಬ್ರಾಹ್ಮಣ.— ಈತನೆ ಸುದಾಮ)
ಶ್ರೀಕೃಷ್ಣ (ದ್ವಾರಕೆಯ ಅರಸು)
ಗೋಪಾಲ
ಗೋವಿಂದ } (ಕುಚೇಲನ ಮಕ್ಕಳು)
ನಾರಾಯಣ

ಹೆಂಗುಸರು

ಸುಶೀಲಾ (ಕುಚೇಲನ ಹೆಂಡತಿ)
ರುಕ್ಮಿಣಿ (ಶ್ರೀಕೃಷ್ಣನ ಹೆಂಡತಿ)
ಮಾಲತಿ (ರುಕ್ಮಿಣಿಯ ದಾಸಿ)
ಲಕ್ಷ್ಮಿ
ಮಾಯಾ } ಕುಚೇಲನ ಮಕ್ಕಳು

ಪ್ರಾರ್ಥನಾಗೀತ :—

ಭವತಾರಿಣಿ ಶ್ರೀಭಕ್ತಿಭಾಮಿನೀ ।
ಭುವನಜನಹೃದಯಸುಮವಿಕಾಸಿನೀ ॥ ಪ ॥

ಜೀವಕುಲಕೆ ಮುಸುಕಿದ ತಮವಳಿಸಿ-
ಭಾವಕೆ ದೇವನ ನಿಲುಮೆಯ ತಿಳಿಸಿ-
ದೇವ-ಜೀವರಂತರ ಹುಸಿಗೊಳಿಸಿ-
ಕಾಯುವೆ ನೀ ಕರುಣೇ-ಜನನೀ ! ॥ ೧ ॥

ನಿರೂಪಕ :— ಇದು ದ್ವಾಪರಯುಗದ ಸಂಗತಿ. ಕುಚೇಲನು ಒಬ್ಬ ಬಡಬ್ರಾಹ್ಮಣ. ಸುದಾಮನೆಂಬುದು ಅವನಿಗೇ ಇನ್ನೊಂದು ಹೆಸರು. ದ್ವಾರಕೆಯ ಹತ್ತಿರದ ಒಂದು ಅಗ್ರಹಾರದಲ್ಲಿ, ಹೆಂಡತಿ-ಮಕ್ಕಳೊಂದಿಗೆ ಕುಚೇಲ ವಾಸವಾಗಿರುವನು. ಮಹಾ ಭಗವದ್ಭಕ್ತ, ಸಾಧುಸ್ವಭಾವಿ. ಅಯಾಚಿತ ವೃತ್ತಿಯಿಂದಲೇ ಆತನ ಸಂಸಾರದ ಉಪಜೀವನ. ಯಾರಾದರೂ ತಾವಾಗಿಯೇ ತಿಳಿದು ದಾನಕೊಟ್ಟರೆ, ಹೆಂಡತಿ-ಮಕ್ಕಳೊಂದಿಗೆ ಆತನ ಊಟ; ಕೊಡದೆ ಇದ್ದ ದಿನ ಎಲ್ಲರಿಗೂ ಉಪವಾಸ. ಉಡು-ತೊಡುವ ಬಟ್ಟೆಗೂ ತಾಪತ್ರಯ. ಹೆಂಡತಿ ಸುಶೀಲಾದೇವಿ ತುಂಬ ಸಾಧ್ವಿ. ಎಲ್ಲ ಮಾತುಗಳಲ್ಲಿಯೂ ಪತಿಯನ್ನು ಅನುಸರಿಸಿ ನಡೆಯುವಳು.

ಬೆಳಗಿನ ಒಂದು ಪ್ರಹರ ಕಳೆದಿದೆ. ಕುಚೇಲನು ತನ್ನ ಕುಟೀರದ ಪಡಂಬದಿಯಲ್ಲಿ ಕುಳಿತಿದ್ದಾನೆ. ಭಕ್ತಿಪೂರ್ಣಧ್ವನಿಯಲ್ಲಿ ದೇವ-ದೇವನನ್ನು ಪ್ರಾರ್ಥಿಸುತ್ತಿದ್ದಾನೆ.

ಕುಚೇಲ :

ತ್ವಮೇವ ಮಾತಾಚ ಪಿತಾ ತ್ವಮೇವ ।
ತ್ವಮೇವ ಬಂಧುಶ್ಚ ಸಖಾ ತ್ವಮೇವ ॥
ತ್ವಮೇವ ವಿದ್ಯಾಚ ಗುರುಸ್ತ್ವಮೇವ ।
ತ್ವಮೇವ ಸರ್ವಂ ಮಮ ದೇವದೇವ ! ॥

(ಪ್ರಾರ್ಥನೆಯನ್ನು ಮುಗಿಸಿ ಭಜನೆಯನ್ನು ಆರಂಭಿಸುವನು.)

ಹರೇರಾಮ ಹರೇರಾಮ, ರಾಮರಾಮ ಹರೇಹರೇ ।
ಹರೇಕೃಷ್ಣ ಹರೇಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ ! ॥

(ಒಳಗೆ ಮಕ್ಕಳನ್ನು ಉದ್ದೇಶಿಸಿ)

ಹುಂ, ಗೋಪಾಲಾ, ಗೋವಿಂದಾ, ನಾರಾಯಣಾ, ಎಲ್ಲರೂ ನಾನು ಹೇಳಿದಂತೆ ಭಜನೆಯನ್ನು ಹೇಳಬೇಕು. ಮತ್ತೆ,—ಮಾಯಾ, ಲಕ್ಷ್ಮೀ, ನೀವೂ ಹೇಳಬೇಕು. ಹುಂ, ಎಲ್ಲಿ—ಈಗ ಎಲ್ಲರೂ ಹೇಳಿರಿ ನೋಡೋಣ.

ಹರೇರಾಮ ಹರೇರಾಮ ರಾಮರಾಮ ಹರೇ ಹರೇ !

(ಹುಡುಗರೆಲ್ಲರೂ ಭಜನೆಯನ್ನು ಹೇಳದೆ ಸುಮ್ಮನಿರುವರು.)

ಕುಚೇಲ :- ಯಾಕೆ ಗೋಪಾಲಾ! ನೀವು ಯಾರೂ ಭಜನೆಯನ್ನು ಹೇಳುವುದಿಲ್ಲವೆ?

ಗೋಪಾಲ :— ಏನು ಹೇಳುತ್ತಾರೆ ಬಿಡು ತಾತಾ! ಮೂರು ದಿನವಾಯಿತು.—ಒಬ್ಬರ ಹೊಟ್ಟೆಯಲ್ಲಿಯೂ ಒಂದು ತುತ್ತು ಕೂಳು

ಏಕಮೇವ ವಿಶ್ವಪ್ರಪಂಚದ ಕಲ್ಯಾಣಸಾಧನವೆಂದು ತಿಳಿದು, ಅದನ್ನು ಇನ್ನೂ ಏಕಾಸಗೊಳಿಸುವುದರಲ್ಲಿಯೆ ತನ್ಮಯರಾಗಿರುತ್ತಾರೆ; ಪ್ರಪಂಚದ ಉನ್ನತಿಯು ನಮ್ಮಿಂದಲೇ ಸಾಧ್ಯವೆಂದು ಜಂಬಕೊಚ್ಚಿ-ಕೊಳ್ಳುತ್ತಿದ್ದಾರೆ. ಅದರ ಫಲಸ್ವರೂಪವಾಗಿ ಇಂದು ಯುರೋಪಿ-ಯರು ಅಣುಬಾಂಬು, ಹೈಡ್ರೋಜನ್‌ಬಾಂಬು ಮೊದಲಾದ, ಮಹಾನ್ ಅನರ್ಥಕಾರೀ ಶಸ್ತ್ರ-ಅಸ್ತ್ರಗಳನ್ನು ನಿರ್ಮಿಸಿ, ಕೋಟ್ಯಂತರ ನಿಷ್ಪಾಪ, ನಿಷ್ಕಲಂಕ. ನಿರುಪದ್ರವಿ ಜನಾಂಗಗಳನ್ನು ಸಂಹರಿಸಿರು-ವರಲ್ಲದೆ, ಇನ್ನೂ ಹೆಚ್ಚುಹೆಚ್ಚಾಗಿ ಸಂಹರಿಸುವ ಪ್ರಯತ್ನದಲ್ಲಿ-ದ್ದಾರೆ. ಇಂತಹ ರಾಕ್ಷಸೀ ವಿನಾಶಕಶಕ್ತಿಯ ಬಲದ ಮೇಲೆ ಅಮೇರಿಕಾ, ಚೀನಾ, ಜಪಾನ್, ರಶಿಯಾ ಮೊದಲಾದ ದೇಶಗಳಲ್ಲಿ, ಏನೇನು ಅನರ್ಥಪರಂಪರೆ ನಡೆದಿದೆಯೆಂಬುದು ಸರ್ವರೂ ಅರಿತ ವಿಷಯ. ಈ ಪ್ರಕಾರ ಪಾಶ್ಚಿಮಾತ್ಯರಾಷ್ಟ್ರಗಳು ಭೌತಿಕ ವಿಜ್ಞಾನ ದಲ್ಲಿ ವಿಜಯಶಾಲಿಗಳಾಗಿದ್ದರೂ, ಜೀವನ ಸಂಗ್ರಾಮ ವಿಫಲರಾಗಿ, ಶಾಂತಿಯ ಸಫಲತೆಗಾಗಿ ಭಾರತದತ್ತ ಆಶಾನ್ವಿತ ದೃಷ್ಟಿಯಿಂದ ನೋಡುತ್ತಿದ್ದಾರೆ. ಭಾರತವರ್ಷದಲ್ಲಿ ಅನಾದಿಯಿಂದಲೂ ಸತ್ಯ, ಮತ್ತು ಅಹಿಂಸೆಗಳನ್ನೇ ತಳಹದಿಯನ್ನಾಗಿ ಮಾಡಿ ನಿರ್ಮಿಸಿದ ಸರ್ವ-ಧರ್ಮ ಸಮನ್ವಯ 'ಆಧ್ಯಾತ್ಮ ಮಂದಿರವು' ಪರಕೀಯರ, ಪರ-ಧರ್ಮಗಳ, ಅನಂತ ಆಘಾತಗಳನ್ನು ಸಹಿಸಿ, ಶ್ರೇಷ್ಠತರವಾದ ಪರ್ವತದ ಶಿಖರದಂತೆ ತಲೆಯೆತ್ತಿಕೊಂಡು, ಸಕಲ ವಿಶ್ವಜನಾಂಗಕ್ಕೂ ಶಾಂತಿಯ ಪ್ರಸಾದವನ್ನು ಕೊಡಲು ಕೈಮಾಡಿ ಕರೆಯುತ್ತಲಿದೆ. ಅಂತಹ ಮಹಾನ್ ಅಧ್ಯಾತ್ಮಮಂದಿರದ ಉಪಾಸಕರಾದ, ಬುದ್ಧ, ಶಂಕರ, ಮಧ್ವ ಮೊದಲಾದ ಮಹಾವಿಭೂತಿಗಳು, ಆ ಸತ್ಯ, ಅಹಿಂಸೆಯ ತತ್ತ್ವದ ತಿರುಳನ್ನೇ ಭಾರತವರ್ಷಕ್ಕಲ್ಲದೆ ಅಖಿಲ ವಿಶ್ವಕ್ಕೂ ಬೋಧಿಸಿ, ತಮ್ಮ ಧವಲಕೀರ್ತಿಯಿಂದ ಅಮರರಾಗಿ-ದ್ದಾರೆ. ಇಷ್ಟೇ ಅಲ್ಲದೆ ಮೊನ್ನೆ ಮೊನ್ನೆ, ಪರಕೀಯರ ದಾಸ್ಯದಲ್ಲಿ ಸಿಕ್ಕಿ ನರಳುತ್ತಿದ್ದ ಭಾರತವನ್ನು, ರಾಷ್ಟ್ರಪಿತ ಪೂಜ್ಯ ಮಹಾತ್ಮಾಜಿ ಯವರು, ಶಸ್ತ್ರಾಸ್ತ್ರಗಳ ಸಹಾಯವಿಲ್ಲದೆ ಕೇವಲ ಸತ್ಯ-ಅಹಿಂಸೆಯ ಬಲದಿಂದಲೇ ಚಿರ ಅಭಿಲಷಿತ ಸ್ವಾತಂತ್ರ್ಯವನ್ನು ಕೊಡಿಸಿ ಮುಕ್ತ ಮಾಡಲಿಲ್ಲವೇ ? ಅಂತೆಯೇ ಪಶ್ಚಿಮರಾಷ್ಟ್ರಗಳವರು ಭಾರತೀಯರ ಆಧ್ಯಾತ್ಮಿಕ ಬಲವೇ ಇಂದು ಜಗತ್ತಿಗೆ ಚಿರಶಾಂತಿಯನ್ನು ಕೊಡಬಲ್ಲ-ದೆಂದು ಮನಗಂಡು, ಪೂಜ್ಯ ಬಾಪುವಿನ ಉತ್ತರಾಧಿಕಾರಿ ಜವಹರ-ಲಾಲರೇ ವಿಶ್ವಶಾಂತಿಗೆ ಸಹಾಯಕರಾಗುವರೆಂದು ಬಾಯತುಂಬ ಹೊಗಳುತ್ತಿದ್ದಾರೆ. ಇಲ್ಲಿಯವರೆಗೆ ಶಾಂತಿಯ ಬಗೆಗೆ ಮಾಡಿದ ವಿವೇಚನೆಯಿಂದ ನಾವು ಕಲಿಯಬೇಕಾದ ಮುಖ್ಯವಾತೆಂದರೆ, ಪ್ರತಿಯೊಂದು ವ್ಯಕ್ತಿಯೂ ತಾನು, ತನ್ನ ಮನೆ, ದೇಶ, ಜಾತಿ, ಕುಲ, ಧರ್ಮಗಳೆಂಬ ಸಂಕುಚಿತ ಭಾವನೆಗೆ ಒಳಗಾಗದೆ, ಶಾಂತಿಗೆ ಸಹಾ-ಯಕವಾದ ಸರ್ವ ವ್ಯಕ್ತಿ, ಧರ್ಮ, ಕುಲ, ಪಂಥಗಳು, ನನ್ನವೇ ಎಂಬ ಆತ್ಮೀಯ ಭಾವನೆಮಾಡಿಕೊಂಡು ನಡೆದದ್ದಾದರೆ, ಸರ್ವರಿಗೂ ಶಾಂತಿ-ಸಮಾಧಾನಗಳು ಪ್ರಾಪ್ತವಾಗಿ, ವಿಶ್ವಶಾಂತಿಯು ನೆಲೆಗೊಳ್ಳು ವುದರಲ್ಲಿ ಸಂದೇಹವಿಲ್ಲ.

(೧೪೧ನೆಯ ಪುಟದಿಂದಬಂದದ್ದು)

ಕುಮಾರಿಯು ತೀವ್ರ ವೇದನೆಯನ್ನು ಅನುಭವಿಸಹತ್ತಿದ್ದಳು ಅವಿರತ ಅಶ್ರುಪ್ರವಾಹದಿಂದ ಅವಳ ಕೆನ್ನೆಗಳು ಗುಲಾಬಿಯ ಬಣ್ಣವನ್ನು ಹೊಂದಿದ್ದುವು. ವೇದನೆಯಿಂದ ಮುಖವೆಲ್ಲ ಬಿಳುಪಾಗಿತ್ತು ಕುಮಾರಿ ಏಕಾಂತವನ್ನು ಬಯಸುತ್ತಿದ್ದಳು.

ಆದರೆ ಇಂದು ಅವಳಿಗೆ ಪಾಂಚಾಲರಾಜನಾದ ಉದಯಸಿಂಹನ ಜೊತೆಗೆ ಸಂಗೀತಸ್ಪರ್ಧೆಯಲ್ಲಿ ಭಾಗ ತೆಗೆದುಕೊಳ್ಳಬೇಕಾಗಿತ್ತು. ಆ ಕಾರಣದಿಂದ ಹೇಗೋ ಮನಸ್ಸನ್ನು ಬಿಗಿಹಿಡಿದಳು. ಭಿಕ್ಷು ಪುನಃ ಕಾಣದ್ದಕ್ಕೆ ಅವಳು ನಿರಾಶಳಾಗಿದ್ದಳು. ಸ್ಪರ್ಧೆಯಲ್ಲಿ ಉದಯ-ಸಿಂಹನಿಗೆ ಕುಮಾರಿ ಸೋತು ಹೋದಳು. ನಗರದಲ್ಲೆಲ್ಲ ಸಂತೋಷದ ವಾತಾವರಣ ಹಬ್ಬಿಕೊಂಡಿತು. ರಾಜಕುಮಾರಿಯು ಉದಯ ಸಿಂಹನಿಗೆ ಪರಾಜಿತಳಾಗುವುದರ ಮೊದಲೇ ಸೋತು ದಾಸರಾದ ರಾಜಕುಮಾರರನ್ನು ಸ್ವತಂತ್ರರನ್ನಾಗಿ ಮಾಡಿಸಿದಳು. ಈ ಒಗಟಿನ ಅರ್ಥವೆ ಯಾರಿಗೂ ಹೊಳೆಯಲಿಲ್ಲ.

ಅರಮನೆಯಲ್ಲಿ ವಿವಾಹದ ಸಿದ್ಧತೆ ನಡೆಯಿತು. ಕುಮಾರಿ ಹತಪ್ರಭ ಕಣ್ಣುಗಳಿಂದ ಎಲ್ಲವನ್ನೂ ನೋಡಹತ್ತಿದ್ದಳು. ಭಿಕ್ಷುವಿನ ಪ್ರತೀಕ್ಷೆ ಕೊನೆಗೊಳ್ಳಲೇ ಇಲ್ಲ. ಮನಸ್ಸಿನ ಉದ್ವೇಗದಿಂದ ಕಣ್ಣೀರೂ ಬತ್ತಿಹೋದುವು. ವಿವಾಹದ ದಿನಗಳು ಸಮೀಪಕ್ಕೆ ಬಂದಂತೆಲ್ಲ ಕುಮಾರಿಯ ಮಾನಸಿಕ ವ್ಯಥೆ ಹೆಚ್ಚುತ್ತಲೇ ನಡೆದಿತ್ತು. "........... ಮನಸ್ಸು ಭಿಕ್ಷುವಿನದು, ಶರೀರ ಉದಯಸಿಂಹನದು........... ಇಲ್ಲ, ಇಲ್ಲ, ನಾನು ನನ್ನ ನಾರೀತ್ವವನ್ನು ಕಳೆದುಕೊಳ್ಳಬಾರದು......ಭಿಕ್ಷು ...." ಭಿಕ್ಷುವಿನ ಸ್ಮರಣೆಯಿಂದ ಅವಳ ಮೈಮೇಲೆ ರೋಮಾಂಚನ-ಗಳೆದ್ದು ಅವಳು ನಡುಗಿದಳು.

ಒಂದು ಶುಭದಿನದಲ್ಲಿ ವಿವಾಹ ನಡೆದು ಹೋಯಿತು. ರಾಜನ ಸಂಗಡ ಹೊರಡುವ ದಿನ ರಾಜಕುಮಾರಿಯ ಸ್ಥಿತಿ ಗಾಳಿತಪಂಬಿನ ಶವವಂತಾಗಿತ್ತು. ಅವಳು ಆ ದಿನ ಬಹಳ ಸಾಹಸದಿಂದ ತನ್ನನ್ನು ತಾನೇ ಸಾವರಿಸಿಕೊಂಡಳು.

ಪಲ್ಲಕ್ಕಿ ರಾಜಮಾರ್ಗದ ಮಧ್ಯದಲ್ಲಿ ತಲುಪಿತ್ತು. ಅಲ್ಲಿ ಅತಿ ಹೆಚ್ಚಾಗಿ ಜನರ ಗದ್ದಲ ನಡೆದಿತ್ತು. ರಾಜಕುಮಾರಿ ಆ ಕಡೆಗೆ ಲಕ್ಷ್ಯಗೊಟ್ಟಳು. ಓರ್ವ ಬೌದ್ಧಭಿಕ್ಷು ಒಂದು ಪಾಪದ ಪ್ರಾಯ-ಶ್ಚಿತ್ತಕ್ಕಾಗಿ ಸಮಾಧಿಯಲ್ಲಿ ಪ್ರಾಣ ಬಿಟ್ಟಿದ್ದ...........ನೆರೆದ ಜನರ ಕೋಲಾಹಲ ಇನ್ನೂ ಹೆಚ್ಚಾಯಿತು. ....ಬೌದ್ಧಭಿಕ್ಷು ಪಾಪ ಮಾಡಿದ್ದ...........ಅಂಥದೇನು ಪಾಪ ಅವನಿಂದ ಘಟಿಸಿತ್ತು. ?.... .... ಕುಮಾರಿ ಗಡ ಗಡ ನಡುಗಿದಳು. .... ಏನು ಪಾಪ ಮಾಡಿದ್ದ? ಎಚ್ಚರ ತಪ್ಪುವ ಮೊದಲೇ ರಾಜಕುಮಾರಿ ಪಲ್ಲಕ್ಕಿಯಿಂದ ಕೆಳಗೆ ಉರುಳಿದಳು. ಹಿಂದೆಯೇ ಬರುತ್ತಿದ್ದ ಸಾಮಂತನ ರಥದ ಗಾಲಿಗೆ ಬಿದ್ದು ಪ್ರಾಣಬಿಟ್ಟಳು. ಅವಳ ಶರೀರ ಛಿನ್ನವಿಚ್ಛಿನ್ನ-ವಾಯಿತು.

ಅಂದಿನ ಉಲ್ಲಾಸ, ಹಾಹಾಕಾರದಲ್ಲಿ ಪರಿವರ್ತಿಸಿತು. ಎಲ್ಲರೂ ಹುಚ್ಚರಂತೆ ದಂಗುಬಡಿದು ನಿಂತುಬಿಟ್ಟರು.

ಒಬ್ಬರೂ ಕುಮಾರಿಯ ಆಕಸ್ಮಿಕ ಮರಣದ ಸಂಬಂಧವನ್ನು ಭಿಕ್ಷುವಿಗೆ ಜೋಡಿಸಲಿಲ್ಲ. ಒಬ್ಬರಿಗೂ ವಿಜಯ— ಪರಾಜಯದ ರಹಸ್ಯವನ್ನು ತಿಳಿಯಲಾಗಲಿಲ್ಲ.

ಜಯಂತಿ

ಭಕ್ತ ಸುದಾಮ

(ಒಂದು ಪೌರಾಣಿಕರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರವಿವರ

ಗಂಡುಸರು

ಕುಚೇಲ (ಬಡ ಬ್ರಾಹ್ಮಣ.— ಈತನೆ ಸುದಾಮ)
ಶ್ರೀಕೃಷ್ಣ (ದ್ವಾರಕೆಯ ಅರಸು)
ಗೋಪಾಲ, ಗೋವಿಂದ, ನಾರಾಯಣ } (ಕುಚೇಲನ ಮಕ್ಕಳು)

ಹೆಂಗುಸರು

ಸುಶೀಲಾ (ಕುಚೇಲನ ಹೆಂಡತಿ)
ರುಕ್ಮಿಣಿ (ಶ್ರೀಕೃಷ್ಣನ ಹೆಂಡತಿ)
ಮಾಲತಿ (ರುಕ್ಮಿಣಿಯ ದಾಸಿ)
ಲಕ್ಷ್ಮಿ, **ಮಾಯಾ** } ಕುಚೇಲನ ಮಕ್ಕಳು

ವೃಂದಗೀತ :—

ಭವತಾರಿಣಿ ಶ್ರೀಭಕ್ತಿಭಾಮಿನೀ ।
ಭುವನಜನಹೃದಯಸುಮವಿಕಾಸಿನೀ ॥ ಪ ॥
ಜೀವಕುಲಕೆ ಮುಸುಕಿದ ತಮವಳಿಸಿ-
ಭಾವಕೆ ದೇವನ ನಿಲುಮೆಯ ತಿಳಿಸಿ-
ದೇವ-ಜೀವರಂತರ ಹುಸಿಗೊಳಿಸಿ-
ಕಾಯುವೆ ನೀ ಕರುಣೇ-ಜನನೀ ! ॥ ೧ ॥

ನಿರೂಪಕ :— ಇದು ದ್ವಾಪರಯುಗದ ಸಂಗತಿ. ಕುಚೇಲನು ಒಬ್ಬ ಬಡಬ್ರಾಹ್ಮಣ. ಸುದಾಮನೆಂಬುದು ಅವನಿಗೇ ಇನ್ನೊಂದು ಹೆಸರು. ದ್ವಾರಕೆಯ ಹತ್ತಿರದ ಒಂದು ಅಗ್ರಹಾರದಲ್ಲಿ, ಹೆಂಡತಿ-ಮಕ್ಕಳೊಂದಿಗೆ ಕುಚೇಲ ವಾಸವಾಗಿರುವನು. ಮಹಾ ಭಗವದ್ಭಕ್ತ, ಸಾಧುಸ್ವಭಾವಿ. ಅಯಾಚಿತ ವೃತ್ತಿಯಿಂದಲೇ ಆತನ ಸಂಸಾರದ ಉಪಜೀವನ. ಯಾರಾದರೂ ತಾವಾಗಿಯೇ ತಿಳಿದು ದಾನಕೊಟ್ಟರೆ, ಹೆಂಡತಿ-ಮಕ್ಕಳೊಂದಿಗೆ ಆತನ ಊಟ; ಕೊಡದೆ ಇದ್ದ ದಿನ ಎಲ್ಲರಿಗೂ ಉಪವಾಸ ಉಡು-ತೊಡುವ ಬಟ್ಟೆಗೂ ತಾಪತ್ರಯ. ಹೆಂಡತಿ ಸುಶೀಲಾದೇವಿ ತುಂಬ ಸಾಧ್ವಿ. ಎಲ್ಲ ಮಾತುಗಳಲ್ಲಿಯೂ ಪತಿಯನ್ನು ಅನುಸರಿಸಿ ನಡೆಯುವಳು.

ಬೆಳಗಿನ ಒಂದು ಪ್ರಹರ ಕಳೆದಿದೆ. ಕುಚೇಲನು ತನ್ನ ಕುಟೀರದ ಮುಂಬದಿಯಲ್ಲಿ ಕುಳಿತಿದ್ದಾನೆ. ಭಕ್ತಿಪೂರ್ಣಧ್ವನಿಯಲ್ಲಿ ದೇವ-ದೇವನನ್ನು ಪ್ರಾರ್ಥಿಸುತ್ತಿದ್ದಾನೆ.

ಕುಚೇಲ :

ತ್ವಮೇವ ಮಾತಾ ಚ ಪಿತಾ ತ್ವಮೇವ ।
ತ್ವಮೇವ ಬಂಧುಶ್ಚ ಸಖಾ ತ್ವಮೇವ ॥
ತ್ವಮೇವ ವಿದ್ಯಾ ಚ ಗುರುಸ್ತ್ವಮೇವ ।
ತ್ವಮೇವ ಸರ್ವಂ ಮಮ ದೇವದೇವ ! ॥

(ಪ್ರಾರ್ಥನೆಯನ್ನು ಮುಗಿಸಿ ಭಜನೆಯನ್ನು ಆರಂಭಿಸುವನು.)

ಹರೇರಾಮ ಹರೇರಾಮ, ರಾಮರಾಮ ಹರೇಹರೇ !
ಹರೇಕೃಷ್ಣ ಹರೇಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ ! ॥

(ಗಂಡು ಮಕ್ಕಳನ್ನು ಉದ್ದೇಶಿಸಿ)

ಹೂಂ, ಗೋಪಾಲಾ. ಗೋವಿಂದಾ, ನಾರಾಯಣಾ, ಎಲ್ಲರೂ ನಾನು ಹೇಳಿದಂತೆ ಭಜನೆಯನ್ನು ಹೇಳಬೇಕು. ಮತ್ತೆ—ಮಾಯಾ, ಲಕ್ಷ್ಮೀ, ನೀವೂ ಹೇಳಬೇಕು. ಹೂಂ, ಎಲ್ಲಿ—ಈಗ ಎಲ್ಲರೂ ಹೇಳಿರಿ ನೋಡೋಣ.

ಹರೇರಾಮ ಹರೇರಾಮ ರಾಮರಾಮ ಹರೇ ಹರೇ !

(ಹುಡುಗರೆಲ್ಲರೂ ಭಜನೆಯನ್ನು ಹೇಳದೆ ಸುಮ್ಮನಿರುವರು.)

ಕುಚೇಲ :— ಯಾಕೆ ಗೋಪಾಲಾ ! ನೀವ್ಯಾರೂ ಭಜನೆಯನ್ನು ಹೇಳುವುದಿಲ್ಲವೆ ?

ಗೋಪಾಲ :— ಏನು ಹೇಳುತ್ತಾರೆ ಬಿಡು ತಾತಾ ! ಮೂರು ದಿನವಾಯಿತು.—ಒಬ್ಬರೆ ಹೊಟ್ಟೆಯಲ್ಲಿಯೂ ಒಂದು ತುತ್ತು ಕೂಳು

ಇಲ್ಲ. ಹಸಿವೆ ಕಸನಿಸಿಗೊಳಿಸುತ್ತಿರುವಾಗ, ಎಲ್ಲಿಯ ರಾಮ—ಎಲ್ಲಿಯ ಕೃಷ್ಣ!

ಕುಚೇಲ:— ಹಾಗೆಲ್ಲಾ ಮಾತಾಡಬಾರದು ಗೋಪೀ! ನನ್ನ ಶ್ರೀಹರಿ ಕರುಣಾಮಯ—ಲೋಕವನ್ನೆಲ್ಲಾ ಸುಖದಿಂದಿರಿಸಿ ಕಾಪಾಡುವ ಪ್ರಭುವು ಅತ!

ಗೋಪಾಲ:— ಹಾಗಾದರೆ—ನಾವು ಲೋಕವನ್ನು ಬಿಟ್ಟು ಮತ್ತೆಲ್ಲಿಯಾದರೂ ಹೊರಗೆ ಇದ್ದೇವೆಯೆ ತಾತ? ಲೋಕವೆಲ್ಲವನ್ನೂ ಸುಖದಿಂದ ಕಾಪಾಡುವವನು, ನಮ್ಮನ್ನೇಕೆ ಮರೆತುಬಿಟ್ಟಿದ್ದಾನೆ—ಆ ನಿನ್ನ ಪ್ರಭು?

ಕುಚೇಲ:— ಪ್ರಾರಬ್ಧಕರ್ಮ! ಸುಖದ ವಿಷಯದಲ್ಲಿ ನಿನ್ನ ಕಲ್ಪನೆಯೇ ಬೇರೆಯಿದೆ, ಗೋಪಾಲಾ!

ಮಾಯಾ:— ಅವನ ಕಲ್ಪನೆ ಬೇರೆಯೇನಿದೆ ತಾತಾ? ಹೊಟ್ಟೆಗೆ ಹಿಟ್ಟಿಲ್ಲದೆ ಕೊರಗುವುದರಲ್ಲಿ ಸುಖವಿದೆಯೆ? ಮೈಗೆ ಬಟ್ಟೆಯಿಲ್ಲದೆ ಬರಿಬತ್ತಲು ಇರುವುದರಲ್ಲಿ ಸುಖವಿದೆಯೆ? ನೀವು ಯಾವುದರಲ್ಲಿ ಸುಖವನ್ನು ಕಾಣುತ್ತೀರೋ—ನನಗೆ ಗೊತ್ತಾಗಲೊಲ್ಲದು!

ಲಕ್ಷ್ಮಿ:— ಸುಖವಂತೆ ಸುಖ! ಅದು ನಮ್ಮ ಮನೆಯ ಬಳಿಯಲ್ಲಿ ಎಂದಾದರೂ ಸುಳಿದಿದೆಯೆ? ಆಚೆಮನೆಯ ರಾಜೋಪಾಧ್ಯಾಯರ ಮನೆ ನೋಡಬೇಕು. ಸುಖವು ಅವರಲ್ಲಿ ಕಾಲು ಮುರಿದುಕೊಂಡು ಬಿದ್ದಿದೆ. ನಿನ್ನೆಯ ದಿನ ಅವರಲ್ಲಿ ಸೌಭಾಗ್ಯಗೌರಿಯ ಪೂಜೆಯನ್ನು ಮಾಡಿದ್ದರು. ಅದೆಷ್ಟು ಅಲಂಕಾರ—ಅದೆಷ್ಟು ವೈಭವ! ಉಂಡಿ, ಮಂಡಿಗೆ, ಹೂರಿಗೆ, ಪರಮಾನ್ನ, ಗಾರಿಗೆ, ಒಡೆ, ಸಾರು ಪಳಿದ್ಯ............

ನಾರಾಯಣ:—ಅದನ್ನೆಲ್ಲ ಹೇಳಬೇಡ ಬಿಡೇ ಲಚ್ಚಕ್ಕಾ—ನನ್ನ ಹೊಟ್ಟೆಯಲ್ಲಿ ಕೆಟ್ಟಸಂಕಟವಾಗುತ್ತದೆ!

ಗೋವಿಂದ:—ನನ್ನಬಾಯಲ್ಲಿ ಹಾಗೇ ನೀರೂರುತ್ತಲಿದೆ. ನೋಡು ತಾತ! ಆ ದಿನ ನಾನು, ರಾಜೋಪಾಧ್ಯಾಯರ ಮನೆಯಿಂದ ಬರುತ್ತಿದ್ದ ಅಡಿಗೆಯ ಕಂಪನ್ನೇ ಉಸಿರಾಡಿಸುತ್ತ ಕುಳಿತಿದ್ದೆ. ಕೆಟ್ಟ ಜನರು, ನಮಗೆ ಸ್ವಲ್ಪವೂ ಕೊಡಲಿಲ್ಲ. ಎಲ್ಲವನ್ನೂ ತಾವೇ ಬಕ್ಕರಿಸಿದರು!

ಕುಚೇಲ— ಹೀಗೆ ದುಷ್ಟಮಾತುಗಳನ್ನು ಆಡಬಾರದು—ಗೋವಿಂದಾ! ಮಾನವಮಾತ್ರರು ಏನು ಕೊಟ್ಟಾರು ನಮಗೆ! ಕೊಡುವ ಕಾಲ ಬಂದಾಗ ನನ್ನ ಲಕ್ಷ್ಮೀರಮಣನು ಸಾವಿರ ಸಾವಿರ ಕೈಗಳಿಂದ ಕೊಡಬಲ್ಲನು!

ನಾರಾಯಣ:— ಕೇಳಿದೆಯಾ ಲಕ್ಷ್ಮೀ? ನಿನ್ನ ರಮಣನು ಸಾವಿರ ಸಾವಿರ ಕೈಗಳಿಂದ ನಮಗೆ ಕೊಡಬಲ್ಲನಂತೆ! ಬೇಗನೆ ಮದುವೆ ಮಾಡಿಕೊಂಡು ಬಿಡಮ್ಮಾ ನೀನು!

ಗೋವಿಂದ:— ಸಾವಿರ ಸಾವಿರ ಕೈಗಳು ಉಳ್ಳವನು ಸಿಕ್ಕಾಗಲ್ಲವೇ ಲಚ್ಚಕ್ಕನಿಗೆ ಮದುವೆ! ಅಂಥವನು ಸಿಕ್ಕುವವರೆಗೆ ನಾವು-ಬರಿಹೊಟ್ಟೆ-ಬರಿಮೈಯ ಬಾಳನ್ನೇ ಬಾಳಬೇಕು!

ಲಕ್ಷ್ಮಿ:— ಹೋಗೋ ಗೋವ್ಯಾ, ಹಾವ್ಯಾ!

ಮಾಯಾ:— ನಾನೊಂದು ಮಾತನ್ನು ಹೇಳುತ್ತೇನೆ ಕೇಳಿರಿ! ನಿನ್ನೆಯ ದಿನ—ಆ ರಾಜೋಪಾಧ್ಯಾಯರ ಹೆಂಡತಿ-ಮಗಳು—ಸೊಸೆ ಎಲ್ಲರೂ ಉಟ್ಟ ಪೀತಾಂಬರಗಳನ್ನು ನೋಡಿದ್ದಿರಾ? ತೊಟ್ಟ ಚಿನ್ನ-ರನ್ನದ ಒಡವೆಗಳನ್ನು ನೋಡಿದ್ದಿರಾ? ನಾವು ಕನಸಿನಲ್ಲಾದರೂ ಅಂಥಾ ಬಟ್ಟೆ—ಒಡವೆ—ಕಾಣಬಹುದೆ?

ಗೋವಿಂದ:— ಹೇಳಿಕೇಳಿ ಕುಚೇಲಾಚಾರ್ಯರ ಮಕ್ಕಳು ನಾವು! ನಮಗೆ ಎಲ್ಲಿಯ ಬಟ್ಟೆ!—ಎಲ್ಲಿಯ ಒಡವೆ? ಹಸಿವೆಯಿಂದ ನಿದ್ದೆಯೆ ಬಾರದಿರುವಾಗ, ಕನಸುಗಳಾದರೂ ಬೀಳಬೇಕು ಹೇಗೆ?

ಕುಚೇಲ:— ಅಯ್ಯೋ, ಲೋಕವೆಲ್ಲವೂ ಇಂತಹ ಸುಖವನ್ನೇ ಬಯಸುತ್ತಿದೆಯಲ್ಲವೆ? ಹಾಗಾದರೆ—ಹಾಗಾದರೆ—ನಾನು ನನ್ನ ಹೆಂಡತಿ-ಮಕ್ಕಳಿಗೆ ಕೊಡುತ್ತಿರುವ ಸುಖವೇನು? ಇದು ನನ್ನ ಕರ್ತವ್ಯಚ್ಯುತಿಯಲ್ಲವೆ? ನಾನು ಸಂಸಾರಿ! ಸಾಕುವ ಸಾಮರ್ಥ್ಯವೇ ಇಲ್ಲದವನಿಗೆ ಹೆಂಡಿರು-ಮಕ್ಕಳು ಏತಕ್ಕೆ ಬೇಕು? ದೇವಾ! ಯಾರದು ಸರಿ? ನಾನು ತಪ್ಪು ಮಾಡಿದೆನೆ? ನಾನು ಹಿಡಿದ ಮಾರ್ಗವು ಅನುಚಿತವಾದುದೆ....? ದೇವಾ—

(ಗುಡುಗು ಹೊಡೆದಂತಾಗಿ ಆಕಾಶಧ್ವನಿಯು ಕೇಳುವುದು.)

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ
ಪರ್ಯುಪಾಸತೇ!
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ
ವಹಾಮ್ಯಹಂ!

ಕುಚೇಲ:— ಓ! ನನ್ನ ಮೋಹಾಂಧತೆಗೆ ಸಿದ್ಧಮಂತ್ರ! ದೈವದ ಅಭಯವಾಣಿ!! ಶಾಂತಂ ಪಾಪಂ, - ಶಾಂತಂ ಪಾಪಂ! ನನ್ನ ಪ್ರಭುವು—ತನ್ನನ್ನು ಸಂಪೂರ್ಣವಾಗಿ ನಂಬಿದವರ ಯೋಗಕ್ಷೇಮಗಳನ್ನು ನೋಡಿಕೊಳ್ಳುವನಂತೆ! ಕೇಳಿದಿರೇನು ಗೋಪಾಲಾ—ನೀವೆಲ್ಲರೂ?

(ಎಲ್ಲರ ಪ್ರತಿನಿಧಿಯಾಗಿ).

ಗೋಪಾಲ:— ಅಹುದು ತಾತಾ! ಕೇಳಿದೆವು. ಇನ್ನು ಮೇಲೆ ನಾವೂ ನಿನ್ನ ಆ ದೇವದೇವನಲ್ಲಿ ಶ್ರದ್ಧೆಯಿರಿಸಿ ನಡೆಯುತ್ತೇವೆ. ಈಗ ನೀನು ಭಜನೆಯನ್ನು ಹೇಳು—ನಾವೂ ಹೇಳುತ್ತೇವೆ.

ಕುಚೇಲ:— ಸಂತೋಷ! ಹೇಳಿರಿ ಹಾಗಾದರೆ—

ಹರೇರಾಮ ಹರೇರಾಮ ರಾಮರಾಮ ಹರೇಹರೇ!
ಹರೇಕೃಷ್ಣ ಹರೇಕೃಷ್ಣ ಕೃಷ್ಣಕೃಷ್ಣ ಹರೇಹರೇ!

(ಎಲ್ಲ ಹುಡುಗರೂ ತನ್ಮಯರಾಗಿ ಹೇಳುವರು. ಭಜನೆಯ ಧ್ವನಿ ಕ್ರಮಕ್ರಮವಾಗಿ ಮೆಲ್ಲಗಾಗುತ್ತ ಹೋಗಿ ಕೇಳದಂತಾಗಬೇಕು.)

೨

ನಿರೂಪಕ:— ಕುಟೀರದ ಮೊಗಸಾಲೆಯಲ್ಲಿ ಆಚಾರ್ಯ ಕುಚೇಲ, ಅತನ ಹೆಂಡತಿ ಸುಶೀಲಾದೇವಿ ಕುಳಿತಿದ್ದಾರೆ. ಸಮಯ, ಹಗಲು ಮೂರು ಪ್ರಹರಗಳನ್ನು ದಾಟಿದೆ.

ಕುಚೇಲ :— ಲೌಕಿಕಸುಖದ ಮೋಹ, ನನ್ನನ್ನೂ ಕವಿಯಲು ಬಂದಿತ್ತು ನೋಡು—ದೇವಿ! ನನ್ನ ಪ್ರಭುವಿನ ವಾಣಿ, ಸಕಾಲದಲ್ಲಿಯೆ ನನ್ನನ್ನು ಎಚ್ಚರಿಸಿತು ಆ ದೈವದ ಅಭಯವಚನಗಳನ್ನು ಕೇಳಿದಾಗಿನಿಂದಲೂ, ಹಸಿವೆ, ಬಾಯಾರಿಕೆ, ನಿದ್ರೆ—ಒಂದರದೂ ನೆನಪಾಗುತ್ತಿಲ್ಲ—ನನಗೆ!

ಸುಶೀಲಾದೇವಿ :— ತಾವು ಅಲೌಕಿಕಪುರುಷರು! ತಮ್ಮ ಪುಣ್ಯ ಮಹಾಪುಣ್ಯ! ತಮ್ಮ ಯೋಗ್ಯತೆಗೆ ಯಾರು ಸರಿಸಿಂತಾರು? ನನ್ನ ಯಾವುದೋ ಜನ್ಮದ ಎಂತಹದೋ ಪುಣ್ಯದಿಂದ, ತಮ್ಮ ಕೈಹಿಡಿಯುವ ಭಾಗ್ಯ ನನಗೆ ದೊರೆತಿದೆ—ನಾನು ಧನ್ಯೆ!

ಕುಚೇಲ :— ನಿನ್ನಿಂದ ನನ್ನ ಜೀವನ ಪಾವನವಾಗಿದೆ ದೇವೀ....! ಸರಿ..! ಹುಡುಗರೆಲ್ಲರೂ ಮಲಗಿಕೊಂಡಿದ್ದಾರೇನು?

ಸುಶೀಲಾ :— ಅಹುದು! ಲೌಕಿಕಜೀವಿಗಳವು! ನಾಲ್ಕು ದಿನದ ಉಪವಾಸ! ಹೇಗೆ ಸಹಿಸಿಕೊಂಡಾವು! ಎಲ್ಲರೂ ಹಸಿದು ಕಂಗೆಟ್ಟು ಬಿದ್ದುಕೊಂಡಿದ್ದಾರೆ. ಗೋಪಾಲನೊಬ್ಬ ಮಾತ್ರ ಎಲ್ಲಿಯೊ ಹೊರಗೆ ಹೋಗಿದ್ದಾನೆ.

ಕುಚೇಲ :— ಲೌಕಿಕ ಜೀವಿಗಳು—ನಿಜ! ಅಂಥವರನ್ನೇ ನಾವು ಮಕ್ಕಳನ್ನಾಗಿ ಹೆತ್ತಿದ್ದೇವೆ. ನನ್ನ ಪ್ರಾರಬ್ಧಕರ್ಮ!

ಸುಶೀಲಾ :— ಇದರಲ್ಲಿ ತಮ್ಮ ಪ್ರಾರಬ್ಧಕರ್ಮವೇನು ಬಂತು? ಸರ್ವಗುಣಪರಿಪೂರ್ಣನಾದ ಪರಮಾತ್ಮನ ಸೃಷ್ಟಿಯಲ್ಲಿ ಲೌಕಿಕಜೀವಿಗಳ ಸಂಖ್ಯೆಯೆ ಹೆಚ್ಚಲ್ಲವೆ? ಅಂತಹ ಅನೇಕ ಲೌಕಿಕಜೀವಿಗಳಿಗೆ ಪರಮಾತ್ಮನು ಇಹಲೋಕದ ಸುಖಗಳನ್ನೂ ಇತ್ತು ಸಲಹುತ್ತಾನೆ!

ಕುಚೇಲ :— ಅಹುದು! ಅವನು ಸರ್ವಶಕ್ತಿಸಂಪನ್ನನೂ ಆಗಿದ್ದಾನೆ. ಎಂತಲೇ ಅವನು ತನ್ನ ಲೌಕಿಕಸಂತಾನವನ್ನೂ ಸುಖದಲ್ಲಿಟ್ಟು ಸಲಹಬಲ್ಲ! ನಾನು ಬಡವ ನನ್ನ ಮಕ್ಕಳನ್ನು ಸಲಹುವ ಸಾಮರ್ಥ್ಯವೂ ನನಗಿಲ್ಲ. ಅಯಾಚಿತಸಾಧಕನ ಜೀವನ, ಇಂತಹ ಲೌಕಿಕಕಷ್ಟಗಳಿಗೆ ಆಗರವಾಗಿರುವುದು. ಎಲ್ಲವನ್ನೂ ನಾವು ಸಹಿಸಬೇಕು.

ಸುಶೀಲಾ :— ತಾವು ಸಹಿಸುವಿರಿ—ನನ್ನಲ್ಲಿಯೂ ಸಹಿಸುವ ಶಕ್ತಿಯನ್ನು ತಾವು ತುಂಬಿದ್ದೀರಿ! ಚಿಕ್ಕಚಿಕ್ಕ ಮಕ್ಕಳಿಗೆ ಆ ಸಹನೆ ಎಲ್ಲಿಂದ ಬರಬೇಕು?

ಕುಚೇಲ :— ಹಾಗಾದರೆ—ತಂದೆ ಎನಿಸಿಕೊಳ್ಳುವ ನಾನು ಏನು ಮಾಡಬೇಕು?

ಸುಶೀಲಾ :— ಹೆಚ್ಚು ಮಾತುಗಳನ್ನು ಆಡುತ್ತಿರುವ ನನ್ನನ್ನು ಕ್ಷಮಿಸಬೇಕು. ತಾವೇ ಆಗಾಗ ಹೇಳುತ್ತಿರುವಿರಿ, 'ಲೌಕಿಕಜೀವನಕ್ಕೆ ಪರಮಾತ್ಮನು ಎಂದೂ ಪ್ರತ್ಯಕ್ಷವಾಗಿ ಸಹಾಯ ಮಾಡಲಾರ — ಯಾರಿಂದಲಾದರೂ ಮಾಡಿಸುತ್ತಾನೆ.'—ಎಂದು; ನಮ್ಮ ಈ ಲೌಕಿಕ ಜೀವನಕ್ಕೆ ಸಹಾಯ ಮಾಡುವವರು ಯಾರೂ ಇಲ್ಲವೇನು?

ಕುಚೇಲ :— ಯಾರು ಇದ್ದಾರೆಂದು ಹೇಳಲಿ? ನನ್ನ ಗುರುಕುಲದ ಗೆಳೆಯ ಶ್ರೀಕೃಷ್ಣನೊಬ್ಬನು ಮಾತ್ರ ಇದ್ದಾನೆ. ಬಹಳ ಒಳ್ಳೆಯ ಗೆಳೆಯ! ಹೂವಿನಂತಹ ಮೃದುಹೃದಯ ಆತನದು! ನಾವೆಲ್ಲ ಗುರುಗಳ ಬಳಿಯಲ್ಲಿ ಇದ್ದಾಗ, ನನ್ನೊಡನೆ ತಮ್ಮನಂತೆ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದ. ನನಗೂ ಆತನಲ್ಲಿ ಎಲ್ಲಿಲ್ಲದ ಪ್ರೀತಿ! ಆದರೇನು? ಇಂದು ಆತ ದ್ವಾರಕೆಯ ಸಾಮ್ರಾಜ್ಯದ ಸಾರ್ವಭೌಮ.... ನಾನು ಬಡವನಾದ ಬ್ರಾಹ್ಮಣ! ಈಗ ನನ್ನ ಗುರುತನ್ನಾದರೂ ಹಿಡಿಯುವನೋ ಇಲ್ಲವೋ - ಎಂದು ಸಂದೇಹ ನನಗೆ!

ಸುಶೀಲಾ :— ಎಲ್ಲರೂ ಒಂದೆ ರೀತಿಯಾಗಿರುವುದಿಲ್ಲ. ಒಳ್ಳೆಯವರೂ ಲೋಕದಲ್ಲಿ ಇದ್ದಾರೆಂತಲೇ, ಇದುವರೆಗೂ ನಾವು— ಈ ಲೋಕದಲ್ಲಿ ಬದುಕಿ ಉಳಿದಿದ್ದೇವೆ. ಸರಿ! ಶ್ರೀಕೃಷ್ಣ ತಮ್ಮ ಗೆಳೆಯನೆನ್ನುವಿರಿ. ಸಾರ್ವಭೌಮರಾಜನೆನ್ನುವಿರಿ! ಆಪತ್ತಿಗೆ ಒಳಗಾದವರನ್ನು ಉದ್ಧರಿಸುವುದು, ಗೆಳೆಯನೂ ರಾಜನೂ ಇದನ್ನ ಕರ್ತವ್ಯವಲ್ಲವೆ? ಅಲ್ಲದೆ ರಾಜನು ವಿಷ್ಣುಸ್ವರೂಪಿ ಎಂಬುದನ್ನೂ ತಮ್ಮ ಮುಖದಿಂದಲೇ ಕೇಳಿ ತಿಳಿದಿದ್ದೇನೆ.

ಕುಚೇಲ :— ನಿನ್ನ ಅಭಿಪ್ರಾಯ ಸಮಂಜಸವಾಗಿದೆ ದೇವೀ! ಶ್ರೀಹರಿಯೇ ನಿನ್ನ ಮುಖದಿಂದ, ಗೆಳೆಯನಾದ ಶ್ರೀಕೃಷ್ಣನ ನೆನಪನ್ನು ತಂದುಕೊಟ್ಟಿದ್ದಾನೆ. ಶ್ರೀಕೃಷ್ಣನ ಗೆಳೆತನ ಅಂತಿಂತಹದಲ್ಲ! ಮಿಕ್ಕವರೆಲ್ಲರೂ ಕುಚೇಲಾ—ಎಂದು ಕೊಂಕುಮಾತಿನಿಂದ ಕರೆದರೆ, ಅವನು 'ಸುದಾಮಣ್ಣಾ!' ಎಂದು ನನ್ನನ್ನು ಕರೆಯುತ್ತಿದ್ದ. ತನ್ನ ಸವಿಯುಣಿಸು-ತಿನಿಸುಗಳಲ್ಲಿ, ನನಗೂ ಪಾಲನ್ನು ಕೊಡುತ್ತಿದ್ದ. ಹಾಗಾದರೆ—ನಾನು ದ್ವಾರಕೆಗೆ ಹೋಗಿ ಬರಲೆ?

ಸುಶೀಲಾ :— ಅದಕ್ಕೆ ನನ್ನ ಒಪ್ಪಿಗೆ ಬೇಕಾಗುವುದೇ? ತಮಗೆ ಸಮ್ಮತವೆನಿಸಿದರೆ ಹೋಗಬಹುದು!

(ಅಗಲೇ ಗೋಪಾಲನು ಒಂದು ಗಂಟನ್ನು ತೆಗೆದುಕೊಂಡು ಬರುವನು.)

ಗೋಪಾಲ :— (ಸಂಭ್ರಮದ ಧ್ವನಿಯಲ್ಲಿ) ಅಮ್ಮಾ, ಅಮ್ಮಾ, ಇದು ನೋಡು ಅವಲಕ್ಕಿ! ಅವಧಾನಿಗಳ ಮನೆಯವರು, ಅಯಾಚಿತದಾನವಾಗಿ ಇದನ್ನು ಕೊಟ್ಟು ಕಳುಹಿದ್ದಾರೆ! ಅವಲಕ್ಕಿ—! ಇಂದಿನ ರಾತ್ರಿಯಲ್ಲಾದರೂ, ನಮ್ಮೆಲ್ಲರ ಹೊಟ್ಟೆಯಲ್ಲಿ, ತುತ್ತು ಕೂಳುಬೀಳುವುದು!

ಕುಚೇಲ :— ಗೋಪಾಲ! ನಿನ್ನ ಸಂತೋಷವನ್ನು ಕಂಡು ನಮಗೂ ಸಮಾಧಾನವಾಯಿತು! ದೇವಿ, ಇನ್ನೊಂದು ಚಿಂತೆ ನನ್ನನ್ನೀಗ ಪೀಡಿಸತೊಡಗಿದೆ.

ಸುಶೀಲಾ :— ಅದಾವ ಚಿಂತೆ ಆಚಾರ್ಯ!

ಕುಚೇಲ :— ಮಿತ್ರನ ದರ್ಶನಕ್ಕೂ ರಾಜನ ದರ್ಶನಕ್ಕೂ ಹೋಗುವವನು, ಬರಿಗೈಯಿಂದ ಹೋಗಕೂಡದೆಂದು ಧರ್ಮಶಾಸ್ತ್ರವು ಹೇಳುವುದು. ನಾನು—ಶ್ರೀಕೃಷ್ಣನಿಗಾಗಿ ಜೊತೆಯಲ್ಲಿ ಏನು ತೆಗೆದುಕೊಂಡು ಹೋಗಬೇಕು?

ಸುಶೀಲಾ :— ಮನೆಯಲ್ಲಿ ಏನಿದೆಯೆಂದು ಹೇಳಲಿ? ಈಗ ಈ ಗೋಪಾಲ ತಂದಿರುವ ಅವಲಕ್ಕಿಯನ್ನು ಬಿಟ್ಟರೆ ಮತ್ತೇನೂ ಇಲ್ಲ!

ಗೋಪಾಲ :— (ಸ್ವಗತ) ಈಗ ಈ ಅವಲಕ್ಕಿಯ ಮೇಲೆ ದಾಳಿಬರುವುದೋ ಏನೋ!

ಕುಚೇಲ :— (ಅನುಮಾನದ ಧ್ವನಿಯಲ್ಲಿ) ಅವಲಕ್ಕಿ— ಉಹುಂ! ಬೇಡಬೇಡ! ಅನ್ನ ಹಸಿದ ಮಕ್ಕಳಿಗೇ ಇದ್ದುಬಿಡಲಿ!

ಸುಶೀಲಾ :— ಇಷ್ಟರಲ್ಲಿಯೆ— ಸ್ವಲ್ಪ - ಮಕ್ಕಳು ಹಂಚಿಕೊಂಡು ತಿನ್ನಲಿ! ಸ್ವಲ್ಪ ನಿಮ್ಮ ಜೊತೆಗೆ ತೆಗೆದುಕೊಂಡು ಹೋಗಿರಿ! ನಿಮ್ಮ ತಮ್ಮ ಶ್ರೀಕೃಷ್ಣನಿಗೆ ನೀವು ಹೇಳಬೇಕು: 'ನಿನ್ನ ಅತ್ತಿಗೆಯ ಬಳಿ— ನಿನಗೆ ಕಾಣಿಕೆಕೊಡುವುದಕ್ಕೆ ಇನ್ನೇನೂ ಇಲ್ಲ— ಇದ್ದುದನ್ನು ಪ್ರೀತಿಯಿಂದಲೆ ಕೊಟ್ಟಿದ್ದಾಳೆ' ಎಂದು.

ಗೋಪಾಲ :— (ಸ್ವಗತ) ಕೈಗೆ ಬಂದಿರುವ ಗ್ರಾಸವೂ ಪೂರ್ಣವಾಗಿ ನಮ್ಮ ಬಾಯೊಳಗೆ ಬೀಳಬಾರದೇ? ದೈವವೆಂದರೆ ನಮ್ಮ ದೈವ! (ನಿಟ್ಟುಸಿರು ಬಿಡುವನು.)

ಕುಚೇಲ :— ಹಾಗಾದರೆ ನಾನು— ನಾಳೆಯ ಬೆಳಗಿನಲ್ಲಿಯೆ ಹೊರಡುತ್ತೇನೆ. ನನ್ನ ಶ್ರೀಕೃಷ್ಣ— ದೊಡ್ಡಮನಸ್ಸುಮಾಡಿದರೆ, ನನ್ನ ಮಕ್ಕಳ ಸೌಭಾಗ್ಯಕ್ಕೆ ಏನು ಕಡಿಮೆ?

(ಮತ್ತೆ ಗುಡುಗು— ಆಕಾಶವಾಣಿ)

ಅನನ್ಯಾಶ್ಚಿಂತಯಂತೋಮಾಂ ಯೇ ಜನಾಃಪರ್ಯುಪಾಸತೇ
ತೇಷಾಂನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ!

೩

ನಿರೂಪಕ :— ಮರುದಿನದ ಅರುಣೋದಯದ ಸಮಯ (ಕೋಳಿಯ ಕೂಗು, ಕಾಗೆಯ ಉಲುಹು) ಕುಚೇಲನು ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ದ್ವಾರಕೆಯ ದಾರಿಯನ್ನು ಹಿಡಿದುಹೊರಟಿದ್ದಾನೆ. ದಾರಿಯನ್ನು ನಡೆಯುತ್ತಲೇ ಬೆಳಗಿನ ರಾಗದಲ್ಲಿ, ಪರಮಾತ್ಮನ ಕೀರ್ತನೆಯೊಂದನ್ನು ಹಾಡುತ್ತಿದ್ದಾನೆ.

ಕುಚೇಲ :—

ನಾರದಾದಿ ಸಂಧ್ಯಾನಿತಚರಣಾ
ಶ್ರೀಮನ್ನಾರಾಯಣಾ— ಪಾವನಾ
ಶ್ರೀಮನ್ನಾರಾಯಣಾ!
ಘೋರದುರಿತಕುಲಹರಣಾ ಸಜ್ಜನ-
ತಾಪಕೋಟಿಶಮನಾ! ॥ ಪಲ್ಲ ॥

ನಿಗಮಘಾತಕನ ತಗುಬಗಗೊಳಿಸಲು
ತಳೆದೆ ಮೀನನಪುವ— ದೇವಾ
ತಳೆದ ಮೀನನಪುವ ॥
ನಗವ ಧರಿಸಿ ಸುಧೆಯಿಂಸಿ ಪಾಲಿಸಿದೆ
ದಿತಿಜಾಧಿಸರಿಪುವ— ದೇವಾ
ದಿತಿಜಾಧಿಸರಿಪುವ ॥
ಜಗವ ದಾಢೆಯಿಂದೆತ್ತಿತಂದೆ, ಸ್ವರ್ಣಾಕ್ಷನನ್ನು ಕೊಂದೆ....
ಬಗಿದು ಬಸಿರ ದಾನವನ ನಿವಾರಿಸಿ ಮಗುವಕಾಯ್ದೆ
ತಂದೆ ॥ ೧ ॥

ಕುಚೇಲ :— ಆಹಾ! ದಾರಿಯಲ್ಲಿ ಇವು ಎಂತೆಂತಹ ಶುಭ ಶಕುನಗಳು....! ಇದೊ! ಇಲ್ಲಿ ಸುಮಂಗಲೆ, ತುಂಬಿದ ಕೊಡ ಹೊತ್ತುಕೊಂಡು ಬರುತ್ತಿದ್ದಾಳೆ....ಓ, ಅಲ್ಲಿ ಅಲ್ಲಿ! ಕಾಗೆ ಎಡದಿಂದ ಬಲಕ್ಕೆ ಹಾರಿಬಂದಿತು. (ಕಾಗೆಯ ಹಾರಿಕೆ— ಕೂಗು)....ಇಲ್ಲಿ ಇದೋ, ಹಂಗ ಎಡವನ್ನು ಕಟ್ಟಿತು....! (ಸ್ವಲ್ಪ ನಡೆದಂತೆ ಮಾಡಿ) ಓ! ಇದೀಗ ಅರಳಿದ ಕಮಲದ ಸರೋವರ! ಕಲಹಂಸಗಳು ಕಲಕಲಿಸುತ್ತ ಆಟವಾಡುತ್ತಲಿವೆ......! ಖಂಡಿತವಾಗಿಯೂ ನನ್ನ ಪಯಣ ಮಂಗಲಕಾರಿಯಾಗುವುದು! ಶ್ರೀಹರಿಯು ತನ್ನ ಭಕ್ತರ ಕಲ್ಯಾಣದ ಹೊಣೆಯನ್ನು ಹೊತ್ತಿರುವನಲ್ಲವೇ? ನನ್ನ ಪ್ರಭುವು ಕರುಣಾಕರ ......ಭಕ್ತವತ್ಸಲ!

ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ।
ತಸ್ಮಾತ್ ಕಾರುಣ್ಯಭಾವೇನ ರಕ್ಷರಕ್ಷ ರಮಾಪತೇ! ॥

೪

ನಿರೂಪಕ :— ದ್ವಾರಕೆಯಲ್ಲಿ ಶ್ರೀಕೃಷ್ಣನ ರಾಣೀವಾಸ ರುಕ್ಮಿಣೀದೇವಿಯೊಂದಿಗೆ ಸರಸಸಲ್ಲಾಪವನ್ನಾಡುತ್ತ ಶ್ರೀಕೃಷ್ಣನು ಪರ್ಯಂಕದ ಮೇಲೆ ಕುಳಿತಿದ್ದಾನೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನ ಎಲ್ಲಾ ಪುಸ್ತಕಗಳು
ಸೇಕಡಾ ೧೦% ಕಡಿಮೆ ದರಕ್ಕೆ ಕೊಡುವೆವು

	ಸಾದಾಪ್ರತಿ	ಉತ್ತಮಪ್ರತಿ
ಮನೋರಾಜ್ಯ (ನಾಟಕ)	ರೂ. ೧—೧೨	ರೂ. ೨—೪
ಪುಷ್ಪಹಾರ (ಕಾದಂಬರಿ)	೧—೪	೧—೧೨
ಇವೆತ್ (ಮೊಪಾಸಾನ ಕಾದಂಬರಿ)	೧—೧೨	—
ಪೂರ್ಣಿಮಾ (ಸಂಸಾರಚಿತ್ರಗಳು)	೧—೪	೨—೮
ಸ್ವಾಮಿನ್ನನ ತಂದೆ (ಕತೆಗಳು)	—	೨—೮
ರುಕ್ಮಿಣಿ (ಕಾದಂಬರಿ)	೧—೮	೨—೦
ಮೊಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦—೧೨	೧—೮
ಕಲ್ಪನಾ ವಿಲಾಸ (ಕತೆಗಳು)	೦—೧೨	೧—೮
ಪ್ರವಾದಿ (ಗಿಬ್ರಾನರ ಪ್ರೋಫೆಟ್)	೧—೪	೨—೦
ರುಣ (ಕಾದಂಬರಿ)	೧—೪	೧—೧೨
ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ)		ರೂ. ೫—೦—೦
,, (ಉತ್ತಮ ಪ್ರತಿ)		ರೂ. ೬—೦—೦

ಶ್ರೀಕೃಷ್ಣ :— ಇಂದು........ಅದೇಕೋ............ಊಟದಲ್ಲಿ ಸವಿಯೇ ಕಾಣಲಿಲ್ಲ ನನಗೆ! ಪ್ರತಿಯೊಂದು ಪದಾರ್ಥದಲ್ಲಿಯೂ ಏನೇನೋ ಕೊರತೆಯೆನಿಸಿತು!

ರುಕ್ಮಿಣಿ :— ಅದೇಕೆ? ಎಂತಹ ರುಚಿಯಾದ ಅಡಿಗೆ! ನಳನ ಪಾಕವನ್ನೂ ಮೀರಿಸುವಂತಹದು! ಎಂದೂ ಉಣ್ಣದಷ್ಟು ಈ ದಿನ ನಾನು ಊಟಮಾಡಿದೆ. ಅಂತಹದು ನಿಮಗೆ ಸವಿಯೆನಿಸಲಿಲ್ಲವೆ? ಆಶ್ಚರ್ಯ! ನಿಮಗೆ........ಅಂದಿನ ಗೋಪಾಲತನದ ಬುತ್ತಿಯಗಂಟಿನ ನೆನಪಾಗಿದೆಯೆಂದು ಕಾಣುವುದು.

ಶ್ರೀಕೃಷ್ಣ :— (ಮೆಲುನಗೆ ನಗುತ್ತ) ಓ, ಅದರ ರುಚಿಯೇ? ಪಾಪ, ನಿನಗೇನು ಗೊತ್ತು ಆ ಬುತ್ತಿಯ ಸವಿ? ವಿದರ್ಭರಾಜನ ಪಾಕಶಾಲೆಯ ಬಾಣಸಿಗನ ನೀರಸ ಕವಳವನ್ನು ನೀನು ಉಣ್ಣುತ್ತಿದ್ದಾಗ, ನಾನಿಲ್ಲಿ ಗೊಲ್ಲಗೆಳೆಯರೊಂದಿಗೆ.... ...ಕಲ್ಲಿಗೂಳಿನ ರಸದೂಟವನ್ನು ಹೊಡೆಯುತ್ತಿದ್ದೆ. ನನ್ನ ರಾಧೆಯೊಬ್ಬಳು ಮಾತ್ರ ಅದರ ರುಚಿಯನ್ನು ಚೆನ್ನಾಗಿ ಅರಿತಿದ್ದಳು.

ರುಕ್ಮಿಣಿ :— (ನಸುಮುನಿಸಿನಿಂದ) ಸರಿ, ಮತ್ತೆ ಮತ್ತೆ ಅದೇ ಪಲ್ಲವಿ: ನನ್ನ ರಾಧೆ........ನನ್ನ ರಾಧೆ! ಮಲ್ಲಯ್ಯನಿಗೆ ಹುಲ್ಲಿನ ಸರದ ಪೂಜೆ! ಗೊಲ್ಲರ ಗಂಡಿಗೆ ಗೊಲ್ಲರ ಹೆಣ್ಣೇ ಮೆಚ್ಚು!

ಶ್ರೀಕೃಷ್ಣ :— ರಾಧೆಯು ಹೆಸರನ್ನು ತೆಗೆದರೆ ಸಾಕು........ ಈ ದೇವಿಗೆ ಮೂಗಿನ ತುದಿಯ ಮೇಲೆಯೇ ಕೋಪ! ಸಕ್ಕರೆಯು ಸಿಹಿ ಇರುವುದೆಂದು ಹೇಳಿದರೂ ಅದು ಅಪರಾಧವಾಗಿ ತೋರಬೇಕೆ?

(ದ್ವಾರಪಾಲಿಕೆ ಮಾಲತಿಯು ಮೆಲ್ಲಗೆ ಬರುವಳು.)

ಮಾಲತಿ :— ದ್ವಾರಕಾಧೀಶನಿಗೆ ಜಯವಾಗಲಿ!

ಶ್ರೀಕೃಷ್ಣ :— ಈಗಾಗಲೇ ಸಾಕಷ್ಟು ಆಗಿದೆ ಜಯ! ಮತ್ತೇನು ವಿಶೇಷ ಮಾಲತೀ?

ಮಾಲತಿ :— ಬಾಗಿಲಲ್ಲಿ ಯಾರೋ ಒಬ್ಬರು ಬ್ರಾಹ್ಮಣ, ಶ್ರೇಷ್ಠರು ಬಂದಿದ್ದಾರೆ. (ಕಿರುನಗೆನಗುತ್ತ) ಪ್ರಭುಗಳ ಬಾಲ್ಯದ ಮಿತ್ರರಂತೆ ಅವರು.

ಶ್ರೀಕೃಷ್ಣ :— (ಆಶ್ಚರ್ಯಾತುರಭಾವದಲ್ಲಿ) ಏನು? ಬಾಲ್ಯದ ಮಿತ್ರನಂತೆ? ಬಾಲ್ಯದ ಮಿತ್ರ............! ಯಾರು ಆತ? ಹೇಗೆ ಇದ್ದಾನೆ?

ಮಾಲತಿ :— ಹೇಗಿದ್ದಾನೆಂದು ಹೇಳಲಿ ಪ್ರಭು? ಸೊರಗಿ ಸೊರಗಿ ಎಲುವಿನ ಗೂಡಾಗಿದೆ ದೇಹ........! ತಲೆಯಲ್ಲಿ ದೀಪಹಚ್ಚಿ ಹುಡುಕಿದರೂ, ಒಂದು ಕೂಡ ಕರಿಯ ಕೂದಲು ಸಿಗುವಂತಿಲ್ಲ. ಜನಿವಾರದ ಹೊರತು ಗಟ್ಟಿಯಾದುದೇನೂ ಮೈಮೇಲೆ ಕಾಣದು! ....ಹಚ್ಚಿದ ಮಟ್ಟಿಯ ನಾಮಗಳೇ ಆತನಿಗೆ ಅಲಂಕಾರ!

ರುಕ್ಮಿಣಿ :— (ಅಣಕದ ನಗೆಯೊಂದಿಗೆ) ಅಂತಹರೇ ಈ ದೊರೆಗಳಿಗೆ ಪ್ರೀತಿಯ ಸ್ನೇಹಿತರು........ಹತ್ತಿರದ ಆಪ್ತಬಂಧುಗಳು!

ಮಾಲತಿ :— ಮಹಾಪ್ರಭುಗಳೊಂದಿಗೆ ಆತನೂ ಗುರುಕುಲದಲ್ಲಿ ಇದ್ದನಂತೆ. ತಮ್ಮನ್ನು ಕಾಣಲೇಬೇಕೆಂದು ಹಟವನ್ನೇ ಹಿಡಿದಿದ್ದಾನೆ! ಆ ಪ್ರಾಣಿ, ಪಾದಗಳ ಅಚ್ಚುಮೆಚ್ಚಿನ ಗೆಳೆಯನಂತೆ!

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ
ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. **ಹಸಿವೆ**, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ **ತಾರುಣ್ಯ** ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ **ಬಲಗೊಳ್ಳುವುದು**. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರ-ಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭-೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರ ಪೇಟ
ಮು. ಪೋ. ಮಿರಜ

ಶ್ರೀಕೃಷ್ಣ :— (ಆತುರದಿಂದೆದ್ದು) ಯಾರು? ಸುದಾಮಣ್ಣನೆ? ಇಷ್ಟುದಿನಗಳ ಮೇಲೆ ಬಂದನೆ? (ಮುಂದೆ ಸಾಗುತ್ತ) ಸುದಾಮಣ್ಣ! ....ನನ್ನ ಗೆಳೆಯ ಸುದಾಮ ಬಂದಿದ್ದಾನೆಯೆ? (ಮುಂದೆಹೋಗಿ) ಸ್ವಾಗತ, ಸ್ವಾಗತ!

ಮಾಲತಿ :— (ನಗುತ್ತ) ತಾಯಿಯವರೇ, ಮೊದಲು ನಾನು, ಆತನನ್ನು ಹುಚ್ಚನೆಂದು ತಿಳಿದಿದ್ದೆ. ಮಾತನಾಡುವುದೆಲ್ಲ ಬಡಬಡಿಕೆಯೆಂದು ಭಾವಿಸಿದ್ದೆ! ಎಂತಲೇ ಆವನ ಮಾತಿನ ಕಡೆಗೆ ಏಷ್ಟೋ ಹೊತ್ತು ಕಿವಿಯನ್ನೇ ಕೊಟ್ಟಿರಲಿಲ್ಲ. ಆದರೆ ಪಿಶುಗಿನಂತೆ ನನಗೆ ಪೀಡೆಯನ್ನೇ ಕೊಡಲಾರಂಭಿಸಿದ. ಬೇಸತ್ತು, ಕೊನೆಗೆ ದೇವರಿಗೆ ಬಿನ್ನವಿಸಲು ಬಂದೆ. ತಾವೂ ಕಣ್ಣಾರೆ **ನೋಡಬೇಕು**........ತಮ್ಮ ಒಡೆಯರ ಮಿತ್ರನ ಅವತಾರವನ್ನು!

ರುಕ್ಮಿಣಿ :— ಇಂತಹ ಜನರ ಸಹವಾಸವೇ ಅವರಿಗೆ ಬೇಕು. ಅದರಲ್ಲಿಯೆ ಅವರಿಗೆ ಆನಂದ.......

(ರುಕ್ಮಿಣಿಯು ಮಾತನಾಡುತ್ತಿರುವಾಗಲೆ, ಶ್ರೀಕೃಷ್ಣನು ಕುಚೇಲನ ಕೈಹಿಡಿದು, ಅತಿಶಯ ಸಂತೋಷದಿಂದ ಕರೆದುಕೊಂಡು ಬರುವನು.)

ಶ್ರೀಕೃಷ್ಣ :— ದೇವೀ,...........ಸುದಾಮಣ್ಣ........! ನನ್ನ ಬಾಲ್ಯದ ಪ್ರಿಯಮಿತ್ರ ಸುದಾಮ! ಗೆಳೆಯಾ, ಈಕೆ ನನ್ನ ಹಿರಿಯ ಹೆಂಡತಿ ರುಕ್ಮಿಣೀದೇವಿ ! ....ನನ್ನ ಪಟ್ಟದ ರಾಣಿ.

ಕುಚೇಲ :— ರುಕ್ಮಿಣೀಮಾತೆಗೆ ಮಂಗಲವಾಗಲಿ ! ಶ್ರೀಕೃಷ್ಣಾ, ಎಂತಹದು ನಿನ್ನ ವೈಭವ ? ಧನ್ಯ ಧನ್ಯ !

ಶ್ರೀಕೃಷ್ಣ :— ದೇವಿ, ಸದ್ಬ್ರಾಹ್ಮಣನ ಆಗಮನವಾಗಿದೆ. ಎದ್ದು ಈತನಿಗೆ ನಮಸ್ಕಾರವನ್ನು ಮಾಡಿ, ಹರಕೆಯನ್ನು ಪಡೆ! ಇಂತಹ ಹರಕೆ ನಿನಗೆ ಎಲ್ಲಿಯೂ ಸಿಗಲಾರದು !

ರುಕ್ಮಿಣಿ :— (ಎದ್ದು ಬಂದು) ಪೂಜ್ಯರಿಗೆ ಆದರದ ವಂದನೆಗಳು !

ಕುಚೇಲ :— ಮಂಗಲವಾಗಲಿ ತಾಯೀ ! ಶ್ರೀಕೃಷ್ಣ, ನೀನು ....ನನ್ನನ್ನು ಮರೆತು ಬಿಟ್ಟಿರಬಹುದೆಂದು ನಾನು ಭಾವಿಸಿದ್ದೆ. ನನ್ನ ಭಾವನೆಯನ್ನು ನೀನು ತಪ್ಪೆಂದು ತೋರಿಸಿಕೊಟ್ಟೆ !

ಶ್ರೀಕೃಷ್ಣ :— ಈಗ ಬೇರೆಯ ಮಾತು ಬೇಡ ! ಮಿತ್ರಾ, ನೀನೀಗ ಸರಿಯಾಗಿ ವಿಶ್ರಾಂತಿಯನ್ನು ಹೊಂದಬೇಕು. ದಾರಿಯನ್ನು ನಡೆದುಬಂದು ದಣಿವಾಗಿರಬಹುದು. ದೇವೀ, ಸುದಾಮಣ್ಣ ಬಹುದಿನಕ್ಕೆ ಬಂದಿದ್ದಾನೆ. ಈತನಿಗೆ ತಕ್ಕ ಆತಿಥ್ಯಗಳೆಲ್ಲ ನಡೆಯಬೇಕು ! ....ಇದೇನು ಮಿತ್ರಾ, ಉತ್ತರೀಯದ ಗಂಟಿನಲ್ಲಿ ಅದೇನಿದೆ ? ಅತ್ತಿಗೆ ನನಗಾಗಿ ಏನಾದರೂ ತಿನಿಸನ್ನು ಕಳುಹಿದ್ದಾಳೇನು ?

ಕುಚೇಲ :— (ನಾಚಿಕೆ-ವಿನಯಗಳಿಂದ) ನನ್ನ ದಾರಿದ್ರ್ಯದ ಗುಡಿಸಿಲಲ್ಲಿ ನಿನ್ನ ರಾಜವೈಭವಕ್ಕೆ ಸಲ್ಲಬಹುವಾದ ತಿಂಡಿ-ತಿನಿಸು, ಎಲ್ಲಿಯದು ಬರಬೇಕು ಕೃಷ್ಣಾ ? ಒಡವನಲ್ಲಿ ದೊರೆಯಬಹುದು ಹಿಡಿ ಅವಲಕ್ಕಿ !

ಶ್ರೀಕೃಷ್ಣ :— ಅವಲಕ್ಕಿಯೇ ? ಅವಲಕ್ಕಿ ! .... ತಿಂದು ಎಷ್ಟು ದಿನಗಳಾದುವು ಗೆಳೆಯಾ ! ಹುಂ, ಮೊದಲು ಗಂಟುಬಿಚ್ಚು ! ನನ್ನ ನಾಲಗೆಗೆ ನೀರು ಬಿಡುತ್ತಲಿದೆ ! ಹುಂ, ಬೇಗನೆ ಕೊಡು !

ಕುಚೇಲ :— ನಗೆಯಾಟಬೇಡ ಗೆಳೆಯಾ, ನನ್ನ ಅವಲಕ್ಕಿ ನಿನಗೀಗ ಸವಿಯೆನ್ನಿಸೀತೇ ?

ಶ್ರೀಕೃಷ್ಣ :— ಯಾಕೆ ? ನನಗೆ ಕೊಡಬಾರದೆಂದು ನಿನ್ನ ಅಪೇಕ್ಷೆಯೇನು ? ಆ ಗಂಟನ್ನು ಇಲ್ಲಿ ಕೊಡು ! ನಾನೇ ಬಿಚ್ಚಿ ತಿನ್ನುತ್ತೇನೆ ಅವಲಕ್ಕಿಯನ್ನು !

(ಲಜ್ಜಾಭಾವದಿಂದಲೇ ಕುಚೇಲನು ಗಂಟನ್ನು ಕೊಡುವನು !

ಕುಚೇಲ :— ಇಕೊ, ತೆಗೆದುಕೊಳ್ಳಪ್ಪಾ ! ನಿನ್ನ ಇಷ್ಟ ಹೇಗಿದೆಯೋ, ಹಾಗೇ ಆಗಲಿ !

ಶ್ರೀಕೃಷ್ಣ :— (ಗಂಟನ್ನು ಬಿಚ್ಚುತ್ತ) ಅತ್ತಿಗೆಯು ಗಂಟು ಕಟ್ಟುವುದರಲ್ಲಿ ತುಂಬ ಎಚ್ಚರಿಕೆಯನ್ನು ವಹಿಸಿದ್ದಾಳೆ ! ನೂರಾರು ಛಿದ್ರಗಳಿಂದ ಕೂಡಿದ ಉತ್ತರೀಯವಿದು ! (ಅವಲಕ್ಕಿಯನ್ನು ಬಿಚ್ಚಿ ಬಾಯಲ್ಲಿ ಹಾಕಿಕೊಂಡು ತಿನ್ನುತ್ತ) ಅಬ್ಬಾ ! ಎಷ್ಟೊಂದು ರುಚಿ ಈ ಅವಲಕ್ಕಿಗೆ .. ....! ಇಂದಿನ ಮೃಷ್ಟಾನ್ನದ ಊಟದಲ್ಲಿ, ಒಂದು ಪದಾರ್ಥವೂ ಇಷ್ಟು ಸವಿಯೆನಿಸಲಿಲ್ಲ ದೇವೀ, ಇದು ನೋಡು....... ಅತ್ತಿಗೆಯು ಕಳುಹಿದ ಅವಲಕ್ಕಿ !

ರುಕ್ಮಿಣಿ :— ನೀವು ಒಬ್ಬರೇ ತಿಂದು ಮುಗಿಸುವವರೇನು ? ಅರ್ಧಾಂಗಿಗೆ ಪಾಲು ಸಿಗುವಂತಿಲ್ಲವೆ ?

ಶ್ರೀಕೃಷ್ಣ :— ಅದೇಕೆ ಸಿಗುವಂತಿಲ್ಲ ? ಹಿಡಿ, ತೆಗೆದುಕೋ ! ನೀನೂ ಸೇವಿಸು ಈ ಪ್ರಸಾದವನ್ನು ! ಓ ! ಸುದಾಮಣ್ಣನ ಸವಿಯಾದ ಅವಲಕ್ಕಿ ! (ರುಕ್ಮಿಣಿಗೆ ಕೊಟ್ಟು) ಏಕೆ ದೇವಿ, ಹೇಗಿದೆ ?

ರುಕ್ಮಿಣಿ :— ಅಮೃತದ ರುಚಿಗೆ ಸಮಾನವಾಗಿದೆ !

ಶ್ರೀಕೃಷ್ಣ :— ನಿನ್ನ ಹೋಲುವೆಯ ಮಾತು ಸರಿಯಾದುದಲ್ಲ ! ಅಮೃತವನ್ನು ಮೀರಿಸುವಂತಹ ರುಚಿಯಿದೆ ! ಇಂತಹ ರುಚಿಯನ್ನು ಒದಗಿಸಿ ಕೊಟ್ಟ ನನ್ನ ಗೆಳೆಯನಿಗೆ ಪ್ರತಿಯಾಗಿ ನೀನು ಏನು ಕೊಡಬಲ್ಲೆ ಮಹಾದೇವೀ ?

ರುಕ್ಮಿಣಿ :— ತಾವು ಕೊಡೆಂದು ಹೇಳಿದುದೆಲ್ಲವನ್ನೂ ನಾನು ಕೊಡುತ್ತೇನೆ. ಮೊದಲು ಪೂಜ್ಯರ ಸ್ನಾನಾಹ್ನಿಕಗಳಾಗಿ, ಭೋಜನ ಮುಗಿಯಲಿ ! ಆ ಮೇಲೆ ಗೆಳೆಯರು ಗೆಳೆಯರು ಕೂಡಿ, ಮನಸ್ಸು ತಣಿಯುವಷ್ಟು ಮಾತನಾಡುವಿರಂತೆ ! ಈಗ ಪೂಜ್ಯರು ನನ್ನೊಂದಿಗೆ ದಯೆಮಾಡಿಸಬೇಕು !

ಕುಚೇಲ :— ಆಗಲಿ ತಾಯಿ, ನಿನ್ನ ಆದರದ ವಚನಗಳು, ನನ್ನ ಹೃದಯವನ್ನು ಅರಳಿಸುತ್ತಲಿವೆ. ನನ್ನ ಮಿತ್ರನಿಗೆ ತಕ್ಕವಳಾದ ರಾಣಿ ನೀನು ! (ಕುಚೇಲ ರುಕ್ಮಿಣಿ ಹೋಗುವರು.)

ಶ್ರೀಕೃಷ್ಣ :— ಭಕ್ತಜನಲಲಾಮಾ; ಸುದಾಮಾ, ನಿನ್ನ ಭಕ್ತಿಗೆ ಸರಿಯಾಗಿ ಭಾಗ್ಯಕೊಡುವ ಶಕ್ತಿ ಭಾಗ್ಯದೇವತೆಯ ಬಳಿಯಲ್ಲಿಯೂ ಇಲ್ಲ ! ನಾನು ಕೊಟ್ಟುದರ ಬೆಲೆಯು ನಿನಗೆ ಏನೂ ಅಲ್ಲ. ಆದರೆ ನಿನಗೂ ನಿನ್ನವರಿಗೂ—ಕೊಡಬೇಕಾದುದು ನನ್ನ ಕರ್ತವ್ಯ ! ನಿನ್ನ ಪ್ರಾರಬ್ಧಕರ್ಮದ ಕಾಟಕ್ಕೆ ಇದೇ ಕೊನೆಯದಿನ !

ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ।

ಮಂಜು

(ಸಣ್ಣ ಕತೆ)

ಶ್ರೀ ಅನಂತರಾವ ಕೆ. ಭೋಸಗೆ, ಶೇಡಬಾಳ

●

ಕಾಯುವ ಬೇಲಿಯೆ ಹೊಲವನ್ನು ಮೇಯತೊಡಗಿದರೆ, ಬೆಳೆಯು ಉಳಿಯಬೇಕು ಹೇಗೆ? ನಾಯಕರೆಂದು ಮೆರೆಯುವವರೇ ದಾರಿತಪ್ಪಿ ನಡೆಯತೊಡಗಿದರೆ ಸಮಾಜದಲ್ಲಿ ಸುವ್ಯವಸ್ಥೆ ಹೇಗೆ ಉಳಿಯಬೇಕು? ಇಂದು ನಮ್ಮ ಹಳ್ಳಿಯಲ್ಲಿ ಬಾಬಣ್ಣನಂತಹ ಹಿರಿಯರೇ ತುಂಬಿದ್ದಾರೆ.

●

ವಯಸ್ಸು ನಲವತ್ತರ ಗಡಿ ದಾಟಿದ್ದರೂ ಸಾವುಕಾರ ಬಾಬಣ್ಣನವರ ಪುಷ್ಟದೇಹದಲ್ಲಿ ಸಿಡಿಲಿನ ಸಂಚಾರವಿರಲಿಲ್ಲ. ಸಾದುಗಪ್ಪು ಬಣ್ಣ, ದುಂಡುಮುಖ, ಮುಖದಮೇಲೊಪ್ಪುವ ಕುಡಿಮೀಸೆ, ಹಣೆಯ ಮೇಲೆ ಅಗಲವಾದ ತಿಲಕ; ಜರದಂಚಿನ ರುಮಾಲೊಂದನ್ನು ಸುತ್ತಿ, ಶುಭ್ರ ಶಲ್ಯೆಯನ್ನು ಹೆಗಲಿಗೇರಿಸಿ ಬೀದಿಗಿಳಿದರೆಂದರೆ ಸಾಕು; ಮನ್ಮಥನ ರೂಪು ಧರಿಸಿ ನಡೆದಂತೆ ಕಾಣುವುದು. ಇನ್ನು ಅವರ ವ್ಯಕ್ತಿತ್ವದ ಬಗೆಗೆ ಕೇಳಿ: ಅವರ ನುಡಿಯೆಂದರೆ ಸಾಕ್ಷಾತ್ ಗ್ರಾಮದೇವತೆಯ ನುಡಿ! ಹೀಗೆ ಆ ಊರ ಜೀವನಾಡಿಯಂತಿದ್ದ ಬಾಬಣ್ಣನವರ ಸಹಕಾರ, ಸಹಾನುಭೂತಿ ಯಾರಿಗೆ ಬೇಡ? ಎಂತಲೇ ಈ ದಿನ ಸಂಜೆ, ಕೂಲಿಕಾರ ಭರಮ ಅವರ ಅಂಗಳದಲ್ಲಿ ಕಾಲಿರಿಸಿದ್ದ.

ಬಾಗಿಲೊಳಗೆ ಬರುವ ಭರಮನನ್ನು ಸಾವುಕಾರರು ಸಹಜರೀತಿಯಲ್ಲಿಯೇ ನಿರೀಕ್ಷಿಸಿ, 'ಬಾ' ಎಂದು ಗೋಣಿನ ಸನ್ನೆಯಿಂದಲೆ ಸೂಚಿಸಿ, ದಿಂಬಿಗೆ ಆತುಕೊಂಡು ಕೂತು, ಬೇರೆಡೆಗೆ ದೃಷ್ಟಿ ಹೊರಳಿಸಿದರು. ಬಂದ ಭರಮ ನಮಸ್ಕಾರದ ಉಪಚಾರ ಗೈದು; ಕಟ್ಟೆಯ ತುದಿಗೇ ಕೈಯೂರಿ ಕುಳಿತ. ಅವನ ಮುಖಮುದ್ರೆ ನಿರಾಶೆಯಲ್ಲಿ ಕುಸಿದುಹೋಗಿತ್ತು; ದೈನ್ಯ, ಅಸಹಾಯತೆಗಳು ಅದರಲ್ಲಿ ತುಂಬಿಕೊಂಡಿದ್ದುವು. ಸಾವುಕಾರರ ದೃಷ್ಟಿ ಅವನೆಡೆಗೆ ಹೊರಳಿತು. ದೀನವಾಣಿಯಿಂದ ಮಾತು ಬಿಚ್ಚಿದ ಭರಮ.

" ನಿಮ್ಮ ಕಡೇಽಽನ, ಬಂದಿದ್ದಿನ್ರಿ. "

" ಅದೇಽನು, ಭರಮಾಽಽ! ಮತ್ತೇನು ತೆಗೆದಿ,—ಕೆಲಸ? "

ಸಾವುಕಾರರು ಅನಾಸ್ಥೆಯಿಂದಲೇ ಕೇಳಿದರು.

" ಅದ್ರಽಽ ಹೊಲದ ಸಲುವಾಗಿನ್ರಿ "

" ಆಂ? ಆ ಹೊಲದ್ದು ಯಾನ ಮತ್ತ? ಏನ ಮಾಡತಿದೆಲ್ಲಾ ಗೌಡರಮ? "

" ಈ ವರ್ಷ ಬಿಡಿಸಿಕೊಂಡರರಿ ಅವರು; ಅದಕಽಽ ನೀವಽಽ ಒಂದೆರಡು ಕೂರಿಗಿ ಕೊಟ್ಟರ, ಈ ಬಡವನ ಮ್ಯಾಲೆ ಭಾಳ ಉಪಕಾರ ಆಗತೈತ್ರಿ "

ಭರಮನ ಕಣ್ಣುಗಳು ಆಶೆ ತುಂಬಿಕೊಂಡು, ಸಾವುಕಾರರನ್ನೇ ನೋಡುತ್ತಿದ್ದುವು.

" ಆದರ, ಏನ್ರಿ? ಽಽ "

" ಏನು, ಹೇಳೂದು, ಈಗಿನ ಕಾಯದೆ, ಕಾನೂನು, ಯಾನ ಗೊತ್ತಿಲ್ಲಾ ನಿನಗ? ಹೊಲಾ ಸಾಗುವಾಡುವಾಗ, ಯಾನೋ ಹೀಂಗ ಸಣ್ಣಾಗಿ ಇರತಾರು! ಮುಂದ ಮಾಲಕಗಽಽ ಕೈ ತೋರಿಸತಾರು. "

ಬೋಳು ತಲೆಯಮೇಲೆ ಕೈಯಾಡಿಸುತ್ತ ನುಡಿದರು ಸಾವುಕಾರರು. ಸರಳ ಹೃದಯದ ಭರಮನಿಗೆ **ಈ ಮಾತು** ಮರ್ಮಕ್ಕೆ ತಾಗಿತು.

'ನಾನು ಈ ರೀತಿಯ ಕೃತಘ್ನನೇ?' **ಎಂದು** ಮನಸ್ಸು ಉಸುರು ಹಾಕಿತು; ಆ ಉಸಿರಿನಲ್ಲಿಯೇ—

" ನನಗ್ಯಾತಕ್ಕ ಬೇಕ್ರೀ ಅಣ್ಣಾ,ಽ ' ಇಂಥಾದೆಲ್ಲಾ! ನೀವು ಹೇಳಿದ್ಹಂಗ ಕೇಳಿಕೊಂತ ನಿಮ್ಮ ಸೇವಾ ಮಾಡಿಕೊಂತ ಇರೋದು ಬಿಟ್ಟು....ಽ ?

ಕ್ಷಣ ಹೊತ್ತು ಇಬ್ಬರೂ ಮೌನ. ಆ ಮೌನದ ಮುದ್ರೆಯಲ್ಲಿಯೆ ಏನೇನೋ ನಿರೀಕ್ಷಿಸಿದರು ಸಾವುಕಾರರು; ಕೊನೆಗೆ ಮುಖ ಅಗಲವಾಯಿತು. ಅವರ ಬಗೆಗಣ್ಣಿನೆದುರಿಗೆ ಭಾವಕ್ಕನ ಚಿತ್ರ ಸುಸುಳಿತೇನೋ! ಒಮ್ಮೆ ಕುಲು ಕುಲು ನಕ್ಕರು. ಅವರ ಮನದಾಶೆ ಎಲ್ಲಿಯೋ ಬೇರು ಬಿಡುತ್ತಿತ್ತು. ಕೊನೆಗೆ ಭರಮ ಆಳಿನಪಾಲನ್ನು ತೆಗೆದುಕೊಂಡ., ಹೊಲ ಸಾಗುವಾಡುವುದು ನಿಶ್ಚಯವಾಯಿತು; ಆ ರೀತಿ ಕಾಗದವೂ ಸಿದ್ಧವಾಯಿತು.

× × × ×

ಆಷಾಢಮಾಸದ ಗಾಳಿ ಒಂದೆ ಸಮನೇ ಬೀಸುತ್ತಿತ್ತು. ಮೊಣಕಾಲೆತ್ತರ ಬಂದ ಜೋಳದ ಬೆಳೆ ಕುಣಿಯುತ್ತಿತ್ತು ಭರಮನ ಭೂಮಿಯಲ್ಲಿ. ಭೂಮಿತಾಯಿ ತೊಟ್ಟಿಲಲ್ಲಿ ಕುಲುಕುಲು ನಗುವ ಎಳೆಯ ಶಿಶುವಿನಂತೆ ತೋರುತ್ತಿದೆ ಆ ಬೆಳೆವ ಎಳೆಯ ಪೈರು! ಮೇಲೆ ಮುಗಿಲಿನಲ್ಲಿ ಚಿತ್ರ-ವಿಚಿತ್ರವಾದ ಮೋಡದ ತುಂಡುಗಳು ತೇಲಾಡುತ್ತ ಹೋಗುತ್ತಿವೆ. ನಿಸರ್ಗದ ಈ ಮೋಹಕತೆಗೋ ಏನು ಅಂತರಂಗದಲ್ಲಿಯ ಆವೇಗೊ,–ಮಾರು–ಹೋಗಿ ಭರಮ, ಹಗಲಿರುಳೆನ್ನದೆ ಅಲ್ಲಿ ದುಡಿಯುತ್ತಿದ್ದ. ಕೆಲಸದಲ್ಲಿ ತೊಡಗಿದ ಅವನ ಮನಸ್ಸು ಗತಕಾಲದ ತನ್ನ ಜೀವನದ ಸಿಹಿ-ಕಹಿ ನೆನಹುಗಳನ್ನು ಮೆಲುಕು ಹಾಕುತ್ತಿತ್ತು. 'ದೂರದ ತನ್ನ ಊರು. ಮುಪ್ಪಿನ ತಂದೆ-ತಾಯಿ, ಅಣ್ಣ-ತಮ್ಮಂದಿರು, ಮದುವೆಯಾದ ಮೇಲೆ ತನ್ನ ಮನೆಯಲ್ಲಿ ಬಂದ ತೊಡಕು, ಮನೆಬಿಟ್ಟು ಬಂದು ಪ್ರಾಯದ ಹೆಂಡತಿಯೊಡನೆ ಈ ಊರನ್ನು ಸೇರಿದ್ದು, ಈ ಎರಡು-ಮೂರು ವರ್ಷದ ಕಷ್ಟದ ದಿನಗಳನ್ನು ಕಳೆದ ಬಗ್ಗೆ, ಭಾವೀಜೀವನದ ಸುಖದ ವಿಚಾರ—ಏನೇನೊ ಆಶೆ-ನಿರಾಶೆಗಳ ಜಾಲದಲ್ಲಿ ಸಿಕ್ಕ ಅವನ ಮನಸ್ಸು, ದೇಹಕ್ಕೆ

ಕೂಡ ವಿಶ್ರಾಂತಿಯನ್ನು ನೀಡುತ್ತಿರಲಿಲ್ಲ. ಈ ರೀತಿ ಇತ್ತ ಭರಮನ ದುಡಿತ ಸಾಗಿದರೆ, ಅತ್ತ ಮನೆಯಲ್ಲಿ ಸಾವಕ್ಕ, ಬೆಳಗಿನಲ್ಲಿಯೆ ಎದ್ದು ಬಿಸಿರೊಟ್ಟಿ-ಸುಚ್ಚು ಮಾಡಿಕೊಂಡು, ಒಂದೆರಡು ತಾಸು ಹೊತ್ತೇರು ವುದರೊಳಗಾಗಿಯೆ ಬಂದು, ಗಂಡನ ಕೆಲಸಕ್ಕೆ ನೆರವಾಗುವಳು.

ಸಾವಕ್ಕ ಆದೇ ತಾರುಣ್ಯದ ಹೊಸ್ತಿಲಲ್ಲಿ ಅಡಿಯಿಡುತ್ತಿರುವ ಹೆಣ್ಣು. ಬಣ್ಣವಿಲ್ಲದಿದ್ದರೂ ಕಣ್ಣೆತ್ತಿ ನೋಡಬೇಕಾದ ಚೆಲ್ವಿಕೆ ಅವಳದು. ಭರಮನ ಪಾಲಿಗೆ ಇವಳೊಬ್ಬಳು ಭಾಗ್ಯದೇವತೆ. ಗಂಡ-ಹೆಂಡಿರ ಅನ್ಯೋನ್ಯ ಪ್ರೀತಿಯೇ ಬಡತನದ ಬಾಳ-ಬಂಜರದಲ್ಲಿ ಚಿಮ್ಮುವ ಸೆಲೆಯಾಗಿತ್ತು. ಹೀಗೆ ಎರಡೂ ಒಂದನ್ನೊಂದು ನಂಬಿ ನಡೆವ ಜೀವಗಳವು.

ಎಂದಿನಂತೆ ಗಂಡನಿಗೆ ಬುತ್ತಿಯನ್ನು ಒಯ್ಯುತ್ತಿದ್ದ ಸಾವಕ್ಕ– ಅಂದು ಕೂಡ ಬುತ್ತಿಯನ್ನು ಬುಟ್ಟಿಯಲ್ಲಿ ತುಂಬಿ. ಹೊಲಕ್ಕೆ ಹೊರಡಲನುವಾದಳು.

"ಸುಡ್ಲಿ! ಮುಂಜಾವಿನಿಂದ, ಎಂಥಾ ಮಂಜು ಬಿದ್ದೈತ್ಯೋ ಏನೋ! ನ್ಯಾರೇದ ಯಾಳೆ ಆದರನೂ ಹೊತ್ತಽಽ ಕಾಣಿಸವೊಲ್ತು!"

ಎಂದು ಗುಣುಗುಟ್ಟುತ್ತ ಸಾವಕ್ಕ, ತನ್ನ ಮನೆಯ ದಂಟಿನ ಬಾಗಿಲಿಗೇ ಕೀಲಿ ಜಡಿದು, ರಸ್ತೆಗಿಳಿದು ನಡೆದಳು. ಊರಿಂದ ಎರಡು ಮೈಲಿನ ಮೇಲಿರುವ ಹೊಲಕ್ಕೆ ಹೋಗಬೇಕಾಗಿತ್ತವಳಿಗೆ. ದಟ್ಟವಾದ ಮಂಜಿನಲ್ಲಿ ಮಾರ್ಗಕ್ರಮಿಸುತ್ತ, ಹಾಗೆಯೆ ಮುನ್ನಡೆಯುತ್ತಿದ್ದಳು. ಸುತ್ತಲೆಲ್ಲ ಭೂಮಿ-ವ್ಯೋಮಗಳನ್ನು ಒಂದುಗೂಡಿಸುವ ಹೊಗೆ; ಹೋದ-ಹೋದಂತೆ ಕಾಲಲ್ಲಿಯ ದಾರಿಯಷ್ಟೇ ಕಾಣುವುದು; ಮತ್ತೆ ಒಂದುಗೂಡುವುದು. ಅದರಲ್ಲಿಯೆ ದಾರಿಮಾಡಿಕೊಂಡು ಸಾಗುತ್ತಿದ್ದಳು ಸಾವಕ್ಕ. ಹೋದ-ಹೋದಂತೆ ಅವಳ ಜೋಳದ ಬೆಳೆಯ ಚಿತ್ರ ಕಣ್ಣು ಮುಂದೆ ಬರುವುದು. ತಾನು ಕಂಡ ಬೇರೆ ಬೆಳೆಗಳಿಗೆ ಅದನ್ನು ಹೋಲಿಸಿ ನೋಡುವಳು. 'ತನ್ನ ಬೆಳೆ ಎತ್ತ? ಅವೆತ್ತ?' ಎಂದು ಹೆಮ್ಮೆಯಿಂದ ಹೆಜ್ಜೆಯನ್ನು ಮತ್ತಿಷ್ಟು ಬೆಳೆಸುವಳು. "ಊರಿಗೆ ಊರೇ ಮಾತಾಡುತ್ತಿರುವುದಲ್ಲ....ಅಂಥ ಬೆಳೆ ಆ ಭೂಮಿಯಲ್ಲಿ ಎಂದೂ ಬಂದಿಲ್ಲವೆಂದು! ಏನಾದರೂ ನಮ್ಮ ದೈವ ಒಳ್ಳೇದು. ಸಾವುಕಾರರು ಭೂಮಿ ಕೊಡದಿದ್ದರ, ನಮ್ಮ ದೈವರೇ ಏನುಮಾಡುತ್ತಿತ್ತು?"

ಎಂದು ಏನೇನೋ ಮನಸು ಮೆಲಕುಹಾಕುತ್ತ, ದೇಹವನ್ನು ಎಳೆದು ಒಯ್ಯುತ್ತಿತ್ತು. ಈ ಅವಧಿಯಲ್ಲಿ ತನ್ನ ಹೊಲ ದಾಟಿದ ಅರಿವು ಕೂಡ ಅವಳಿಗಿರಲಿಲ್ಲ.

"ಯಾಽನ ಸಾವೂ? ಇತ್ತಲಾಗ ಎಲ್ಲಿ ನಡದಿ?"

ನಿದ್ರೆಯಿಂದ ಒಮ್ಮೆಲೆ ಎಚ್ಚತ್ತವರಂತೆ ಸಾವಕ್ಕ ಎಚ್ಚತ್ತು ಸುತ್ತಲೂ ದೃಷ್ಟಿಬೀರಿದಳು: ಧ್ವನಿ ಮಾತ್ರ ಗುರುತಿನದಾಗಿತ್ತು. ದನಗಳೆರಡು ಹಾದಿಯ ಒಡ್ಡಿನ ಮೇಲೆ ಮೇಯುತ್ತ ನಿಂತಿದ್ದುವು. ಗಿಡಗಂಟೆಯ ಮರೆಯಿಂದ ಬರುವ ಆ ದನಗಾಯುವ ಹೆಂಗುಸು ನಸು-ನಗುತ್ತ ಮತ್ತೆ ಅದೇ ಪ್ರಶ್ನೆ ಮಾಡಿದಳು.

"ಅಯ್ಯ, ನನ್ನ ಸುಡ್ಲಿಽಽ! ಮಂಜಿನಾಗ ಯಾನೂ ತಿಳೀ-ವೊಲ್ಲದು; ಹೊಲಾ ದಾಟಿ ಹಂಗಽಽ ಮುಂದ ಹೊಂಟೇನಿ."

ಎಂದು ನಸುನಕ್ಕು ತನ್ನ ಹೊಲದೆಡೆಗೆ ತಿರುಗಿದಳು ಸಾವಕ್ಕ.

× × × ×

"ಎಂಥಾಽ ಇಬ್ಬನ್ನೋಽಽ ಏನೋ! ನ್ಯಾರೇದ ವ್ಯಾಳೇ ಆದರೂ ಕಡಿಮಿ ಆಗವೊಲ್ಲದು!"

ಎಂದು ಒಡ್ಡಿನ ಮೇಲೆ ಬಂದು ಕೂಡುತ್ತ ನುಡಿದ ಭರಮ. ಹಾಗೆಯೆ ಕೆಳಗೆ ಬಿದ್ದ ಸಣ್ಣ ಹಂಚಿನ ತುಂಡಿನಿಂದ ಕುರುಪಿಯ ತುದಿಗೆ ಅಂಟಿದ ಕೆಸರನ್ನು ತೆಗೆಯುವುದರಲ್ಲಿ ಮಗ್ನನಾದ. ಬಂದ ಸಾವಕ್ಕ ಸದ್ದುಮಾಡದೆ ಹಿಂದೆ ನಿಂತಿದ್ದಳು. ಕೆಲವು ನಿಮಿಷ ಕಳೆದಿರಬಹುದು; ಬುತ್ತಿಯ ಬುಟ್ಟಿಯನ್ನು ಹಿಡಿದ ಕೈ ಬದಲಿಸುವಾಗ, ಕೈಯೊಳಗಿನ ಬಳೆಗಳು 'ಖಳ್' ಎಂದುವು. ಬೆಚ್ಚಿಬಿದ್ದು ಭರಮ ಹಿಂದೆ ನೋಡಿದ; ತುಟಿಯಲ್ಲಿಯೆ ನಗುತ್ತ ನಿಂತಿದ್ದಳು ಸಾವಕ್ಕ. ಅವನೂ ನಗೆ ಬೀರಿದ.

"ಕಸಾ ತಗೀತೇನಂತ ಹೇಳಿ, ಇಲ್ಲಿ ಬಂದು ಕೂಡತೀರೇನ್ರಿಽಽ"

"ನೀಽ ಇದ್ದೀಯಲ್ಲ, ಕಸಾ ತಗೆಯುವಾಕಿ!"

"ಅಯ್ಯಽ, ಹೆಂಗಸೆಲ್ಲಾಽ ಮಾಡಬೇಕಾದರ, ಅದರ ಜನ್ಮ ಹೀಂಗ್ಯಾಕ ಆಗಿರೋದು!"

"ಆ ಮ್ಯಾಲೇನು! ಹೆಂಗಸರಿಗೆ, ಬರೇ ಕೂತು ತಿನ್ನೊದಽ ಹೇಳೇತಿ ಏನ?ಽ"

"ಕೂತು ಯಾಕ? ಅಡಿಗಿ ಅಂಬಲಿ ಮಾಡೂದಿಲ್ಲೇನ್ರಿ?"

"ಬರೇ ಅಡಿಗಿ-ಅಂಬಲಿ ಮಾಡಿದರ ಹೊಟ್ಟಿ ತುಂಬಽದ ಯೇನ?"

"ನೀವು ಇದ್ದೀರಲ್ಲ! ಽಽ ಹೊಟ್ಟಿಗಿ ಹಾಕಾಕ ಮಾಲಿಕರು!"

"ನಾನರೇ ಒಬ್ಬಽ ಎಷ್ಟುಮಂದಿಗಂತ, ಹೊಟ್ಟಿಗಿ ಹಾಕಾಂವಾ?"

"ಈಗೆಲ್ಲಿ ನಾವು ಹತ್ತಿಪ್ಪತ್ತು ಮಂದಿ ಇದ್ದೇವು? ಇರಾವರ ಇಬ್ಬರಽ-ಅಲ್ಲ!"

"ಈಗ ಇಬ್ಬರಽ ಇದ್ದರಽ? ನಾಳೆ ಹಿಂಗಽ ಇರತೈತೇನು ಸಂಸಾರ?"

"ಸಾಕು, ಸುಮ್ಮನ್ನಽ ಎಳ್ರಿ; ಇಲ್ಲದ್ದೊಂದು ಮಾತಾಡ-ಬ್ಯಾಡ್ರಿ!ಽ"

ಎಂದು ಸಾವಕ್ಕ ಗೋಣುಕೊಂಕಿಸಿ, ನಗೆಬೀರಿ ನುಡಿಯುವ ಮಾತಿಗೆ ಭರಮನ ಮುಖವೂ ನಗೆಯನ್ನು ಸೂಚಿಸಿತು; ನಗೆ-ನಗೆಗಳಲ್ಲಿ ಬೆರೆತು ನೋಟಗಳೆರಡೂ ಒಂದಾದುವು. ದಂಪತಿಗಳಿಬ್ಬರೂ ಅಲ್ಲಿಂದೆದ್ದು ಒಂದು ಗಿಡದ ಬಳಿಗೆ ಬಂದರು. ಸಾವಕ್ಕ ಗಂಡನಿಗೆ ಉಣಬಡಿಸಿ, ತಾನೂ ತೆಗೆದುಕೊಂಡಳು. ಇಬ್ಬರದೂ 'ನ್ಯಾರಿ' ಆಯಿತು. ಆಗ ಹೊತ್ತು ಸಾಕಷ್ಟು ಮೇಲಕ್ಕೇರಿದ್ದಿತು; ಆದರೂ ಮಂಜು ಸರಿದಿರಲಿಲ್ಲ. ಭರಮ ಕಸ ತೆಗೆಯಲು ಆರಂಭಿಸಿದ; ಅವನನ್ನು ಹಿಂಬಾಲಿಸಿದಳು ಸಾವಕ್ಕ.

× × × ×

ಬಾಬಣ್ಣ ಸಾವುಕಾರರ ಒಕ್ಕಲುತನ ಮಾಡುವ ಪದ್ಧತಿ ಆ ಊರಿಗೇ ಮಾದರಿಯದಾಗಿತ್ತು. ಮನೆಯಲ್ಲಿ ದುಡಿಯಲು ನಾಲ್ಕೆಂಟು ಆಳುಗಳಿದ್ದರೂ, ಯಾವತ್ತು ಒಕ್ಕಲುತನದ ಹೊಣೆಯನ್ನು ಆವರ ಮೇಲೆಯೇ ಹೊರಿಸಿ ಕೂಡಲು ಅವರು ಸಿದ್ಧರಿಲ್ಲ. ಯಾವ ಕೆಲಸಕ್ಕೂ ಸಾವುಕಾರರ ವಿಚಾರ ಮಾರ್ಗದರ್ಶನ ಬೇಕೇಬೇಕು. ಎಂತಲೇ ದಿನಾಲು ಅವರು ಇಳಹೊತ್ತಿನ ಸುಮಾರಿಗೆ, ತಮ್ಮ ಭೂಮಿಗಳನ್ನು ಸುತ್ತಾಡಿ, ಅಲ್ಲಿದ್ದ ಆಳುಗಳಿಗೂ ಲಾವಣಿದಾರರಿಗೂ ಸಲಹೆ, ಸೂಚನೆಗಳನ್ನಿತ್ತು ಮರಳುವರು ಮನೆಗೆ. ಅದರಂತೆಯೆ ಭರಮನಿಗೆ ಕೊಟ್ಟ ಹೊಲದೆಡೆಗೂ ಮೇಲಿಂದ ಮೇಲೆ ಹೋಗುವರು. ಅದೇನು ಕಾರಣವೋ ತಿಳಿಯದ.; ಆ ಹೊಲ ಸಾವುಕಾರರ ಚಿತ್ತವನ್ನು ಬಹಳಷ್ಟು ಸೆಳೆದಿತ್ತು. ಬಂದ ಬಾಬಣ್ಣನವರು, ಗಂಟೆಗಟ್ಟಲೆ ಭರಮನೊಡನೆ ಮಾತುಬೆಳಸುವರು; ಆಗಾಗ ಅವರ ನಗೆಮೊಗ ಸಾವಕ್ಕನೆಡೆಗೆ ಹೊರಳುವುದು.

ಒಂದು ದಿನ ಬಂದ ಸಾವುಕಾರರು, ಎಂದಿನಂತೆ ಮಾತನ್ನು ಮುಂದುವರಿಸುತ್ತ ' ಏ ಭರಮಾ ? ನೀ ಯಾನ ಕಾಳಜೀ ಮಾಡಬ್ಯಾಡ ! ಈ ಹೊಲಾ ಇನ್ನ ಕಾಯಂ ನಿನ್ನ ಕಡೇನ ಇರೋದು ನೋಡು ! "

ಹೀಗೆನ್ನುತ್ತ ಸಾವುಕಾರರು, ಭರಮನ ಹಿಂದೆ ಕಳೆತಗೆಯುತ್ತಿದ್ದ ಸಾವಕ್ಕನೆಡೆಗೆ ದೃಷ್ಟಿ ಬೀರುವರು. ಅದೆ ವೇಳೆಗೆ ಕೃತಜ್ಞತೆಯಿಂದ ಕೂಡಿದ ಕಣ್ಣುಗಳೆರಡು ಅವರನ್ನೇ ಕಂಡುವು; ಮುಖ ಅಗಲವಾಯಿತು ಸಾವುಕಾರರದು. ಭರಮ ಬಾಬಣ್ಣನವರು ತೋರಿದ ಆಸೆಯ ಬಲೆಯಿಂದ ಬಂಧಿಸಲ್ಪಟ್ಟನು.

ಮುಂದೆ ಭರಮ ಸಾವುಕಾರರಲ್ಲಿ ಹೆಚ್ಚು ಸಂಬಂಧ ಬೆಳೆಯಲಿಕ್ಕೆ, ಮತ್ತೊಂದು ಪ್ರಸಂಗವೂ ಕಾರಣವಾಯಿತು : ದೀಪಾವಳಿಗೆ ತವರು ಮನೆಗೆ ತೆರಳಿದ ಸಾವುಕಾರರ ಧರ್ಮಪತ್ನಿ, ತಿಂಗಳೊಪ್ಪತ್ತು ತವರು ಮನೆಯಲ್ಲಿ ಉಳಿದಳು. ಮನೆಯಲ್ಲಿ ಮತ್ತಾರೂ ಇಲ್ಲದ ಈ ಅವಧಿಯಲ್ಲಿ, ಭರಮ ತನ್ನ ಹೆಂಡತಿಯೊಡನೆ ಸಾವುಕಾರರ ಸೇವೆಗೆ ನಿರತನಾದ. ಮನೆಗೆ ಬೇಕಾಗುವ ನೀರನ್ನಷ್ಟು ತುಂಬಿ, ಹೊರಗಿನ ಚಿಕ್ಕಪುಟ್ಟ ಕೆಲಸಗಳನ್ನೂ ನೋಡಿಕೊಂಡು, ತನ್ನ ಕೆಲಸಕ್ಕೆ ಹೋಗುವವ ಭರಮ. ಸಾವಕ್ಕ ಸಾವುಕಾರರಿಗಾಗಿ ಅಡುಗೆಯನ್ನು ಮಾಡಿಟ್ಟು, ಗಂಡನ ಬುತ್ತಿಯನ್ನು ಸಿದ್ಧಪಡಿಸಿಕೊಂಡು ಹೊಲ ಸೇರುವ ಹೊತ್ತಿಗೆ ಮಧ್ಯಾಹ್ನವೇ ಆಗುವುದು. ಅಲ್ಲಿ ಹೆಂಡತಿಯ ಬರವನ್ನು ಕಾಯುತ್ತ ಕೆಲಸಮಾಡುವ ಭರಮ.

ಒಂದೊಂದು ದಿನ ಸಾವಕ್ಕನಿಗೆ ಹೊಲಸೇರಬೇಕಾದರೆ ಬಹಳ ವೇಳೆಯಾಗುತ್ತಿತ್ತು. ಆಗ ಅವಳು ಸಾವುಕಾರರ ಮನೆಯ ಕೆಲಸ, ವೇಳೆಯಾದ ಕಾರಣ, ಎಲ್ಲವನ್ನೂ ಗಂಡನೆದುರಿಗೆ ನಿವೇದಿಸುವಳು. ಭರಮ ಯಾವುದಕ್ಕೂ ಮಾತನ್ನು ಬೆಳಸದೆ ' ಹಾಂ, ಹೂಂ ! ' ಎಂದಿಷ್ಟೇ ನುಡಿದು ಸುಮ್ಮನಾಗುವನು.

ಕೆಲವು ದಿನ ಹೀಗಾದರೂ, ಆ ದಿನ ಮಾತ್ರ ಬಹಳ ಸಮಯದವರೆಗೆ ಸಾವಕ್ಕನ ಸುದ್ದಿಯೆ ಇಲ್ಲ. ಇತ್ತ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಭರಮನ ಮನಸ್ಸು ಸಂಶಯದಿಂದ ಕಸಿವಿಸಿಗೊಂಡು ಏನೇನೋ ಆಲೋಚಿಸತೊಡಗಿತು.

' ವೇಳೆ ಇಷ್ಟೇಕೆ ಮಾಡುತ್ತಾಳೆ ? ಬೇಗನೇ ಅಡಿಗೆಯನ್ನಿಷ್ಟು ಮಾಡಿಟ್ಟು ಬರಲಿಕ್ಕೇನಾಗಿದೆ ? ಸಾವುಕಾರರು ಬೇಗ ಊಟತೀರಿಸಿಕೊಳ್ಳುವುದಿಲ್ಲವೇನೊ ! ನಿರುದ್ಯೋಗಿ ಜನ ಬಂದು ಹೊತ್ತು — ವೇಳೆಯನ್ನರಿಯದೆ ಹರಟೆ-ಹೊಡೆಯುತ್ತ ಕೂಡುತ್ತಾರಲ್ಲ ! ಅವರೆಲ್ಲ ಹೋದ ಮೇಲೆಯೆ ಸಾವುಕಾರರ ಊಟ ! ಆಗ ಮನೆಯಲ್ಲಿ.... ಬೇರೆ ಯಾರೂ ಇಲ್ಲ ! '

ಹೀಗೆನ್ನುತ್ತಿದ್ದ ಮನಸ್ಸು ಬೇರೆಡೆಗೆ ಹಾರಿತು. ಅಲ್ಲಿಂದ ಆಲೋಚನಾ ಚಕ್ರ ಸುತ್ತತೊಡಗಿತು :

" ಹರಯದ ಹೆಂಗಸು ! ಬೇರಾರೂ ಇಲ್ಲದ ಮನೆಯಲ್ಲಿ ! ಅದರಲ್ಲಿಯೂ ಏಕಾಂತದಲ್ಲಿ ಪರಪುರುಷನ ಸಮೀಪವಿರಬೇಕೇ ? ಮೇಲಾಗಿ ದೊಡ್ಡ ಸಾವುಕಾರರು ! ಯಾವುದಕ್ಕೆ ಕಡಿಮೆಯಿದೆ ? ಐಶ್ವರ್ಯಕ್ಕೆ ಏನು ಒಲಿಯದು ?— ನನ್ನಲ್ಲೇನಿದೆ ? ದರಿದ್ರ, ದಿಕ್ಕಿಲ್ಲದ ಕೂಲಿಯವ ! ....

ಇದೇನು ಹುಚ್ಚುತನ ! ಎಂಥ ಹೀನ ವಿಚಾರಗಳಿವು ? ಈಗ ಬರಬಹುದಲ್ಲ ! ಅವಳೇನು ಅಂಥವಳೆ ! ಸಾವುಕಾರರಂತೂ ಊರೊಳಗಿನ ದೊಡ್ಡ ಧಾರ್ಮಿಕರು ! ಇಂಥವರ ಬಗ್ಗೆ ಏನೇನೋ ವಿಚಾರಿಸುತ್ತಿರುವೆನಲ್ಲ ! ಮಂಗನಂತಹ ಮನಸ್ಸು ಬೇಕಾದತ್ತ ಹಾರುವುದಲ್ಲ ! "

ಮಲಿನ ಮನದ ಮಡುವಿನಲ್ಲಿ ಮುಳುಗಿದ್ದ ಭರಮ ತನ್ನನ್ನು ತಾನೇ ಜರಿದುಕೊಂಡು, ಬಳಿಯಲ್ಲಿರುವ ಒಡ್ಡಿನ ಮೇಲೇರಿ ಕ್ಷಣಹೊತ್ತು ತನ್ನ ಹೆಂಡತಿ ಬರುವ ದಾರಿಯೆಡೆಗೆ ದೃಷ್ಟಿ ಬೀರುತ್ತ ನಿಂತ. ಕೆಲಕಾಲದ ಮೇಲೆ ನಿರಾಶೆಪಟ್ಟ. ಚಂಚಲವಾಗಿ ಓಡುವ ಮನದ ಕುದುರೆಗೆ ಕಡಿವಾಣವೆಲ್ಲಿ ? ಅದು ಮತ್ತೆ ತನ್ನ ಕಾರ್ಯವನ್ನು ಮುಂದುವರೆಸಿತು :

" ಏನಾದರೂ ಇರಲಿ, ನಾನು ಮನೆಗೆ ಹೋಗಬಾರದೇಕೆ ? ಎದುರಿಗೆ ಬಂದರೂ ಬರುವಳಲ್ಲ ! ಒಂದುವೇಳೆ ಬೇರೆ ದಾರಿಯಿಂದ ಬಂದರೆ ? ....ಬಂದರೂ ಹಿಂದಿನಿಂದ ಗೊತ್ತಾಗುವುದಲ್ಲ ! "

ಎಂದು ಒಂದೆರಡು ಹೆಜ್ಜೆಗಳನ್ನು ಕಿತ್ತಿಟ್ಟ, ಮತ್ತೆ ನಿಂತ. ಏನೇನೋ ತಲೆತುಂಬ ವಿಚಾರಗಳು; ಆದರೂ ಒಂದು ನಿರ್ಣಯಕ್ಕೆ ಬಂದ ಭರಮ ಮನೆಯದಾರಿಯನ್ನು ಹಿಡಿದೇ ಬಿಟ್ಟ. ಮತ್ತೆ ವಿಚಾರಪಟಲದ ಸುರುಳಿ ಬಿಚ್ಚತೊಡಗಿತು.

"ಏನಾದರೂ ದೊಡ್ಡವರ ಸಂಗ ಒಳ್ಳೆಯದಲ್ಲ ! ಮಾಡಿದರೇನಾಯಿತು ? ಹರಯದ ಹೆಂಡತಿಯನ್ನು ಅಂಥವರ ಮನೆಗೆ ಕಳುಹಬೇಕೇ ? ನನ್ನದೇ ತಪ್ಪು : ಅವಳು ನಿರಾಕರಿಸಿದಾಗ, ಸಿಟ್ಟುಮಾಡಿ ನಾನೇ ಕಳುಹಲಿಲ್ಲವೇ ? ಅವಳದೇನೂ ತಪ್ಪಿಲ್ಲ; ಮೇಲಾಗಿ ಮೂರು-ನಾಲ್ಕು ವರ್ಷ ನನ್ನ ಜೊತೆಯಲ್ಲಿ ಬಾಳುವೆಮಾಡಿದವಳಿದ್ದಾಳೆ. ಅವಳ ನಡತೆಯ ಬಗ್ಗೆ ನನಗೇನು ನಂಬಿಗೆಯಿಲ್ಲವೇ ?...."

ಈಗಿನ ಕಾಲದಲ್ಲಿ ಹೆಂಗಸರನ್ನು ಯಾರು ನಂಬಿದ್ದಾರೆ? ಕುದುರೆಯ ನೆಲೆ, ಹೆಂಗಸಿನ ನೆಲೆ ಯಾರಿಗೂ ತಿಳಿದಿಲ್ಲವಂತೆ! ಆದುದರಿಂದ ಹೆಂಗಸನ್ನು ನಂಬುವುದಾದರೂ ಹೇಗೆ? ಮೇಲಾಗಿ ಹೆಣ್ಣಿನಂತಹ ಚಂಚಲವಸ್ತುವಿಗೆ ಐಶ್ವರ್ಯದ ಮೋಹದ ಗಾಳಿ ತಗಲಿದರೆ ... ...

ಇನ್ನು ಸಾವುಕಾರರು,—ಸಾವುಕಾರರೇನೂ ಅಂಥವರಲ್ಲ. ದೇವ-ಧರ್ಮಗಳ ಮೇಲೆ ಅವರಿಗೆಷ್ಟು ಪ್ರೀತಿ? ಅನೀತಿಯ ಜನರನ್ನು ನೋಡಿದರೆ ಅವರಿಗೆಷ್ಟು ತಿರಸ್ಕಾರ!........

ಛೇ! ಹಾಗೇನೂ ಹೇಳಲು ಬರುವುದಿಲ್ಲ. ಬೆಳ್ಳಗಿದ್ದದ್ದೆಲ್ಲ ಹಾಲೆಲ್ಲಿ ಇರುತ್ತದೆ! ಇಂಥವರಲ್ಲೇ ಇರೋದು ಇದ್ದದ್ದೆಲ್ಲ! ಮೇಲಾಗಿ ಯಾಕೋ ಸಾವುಕಾರರು, ಇತ್ತಿತ್ತಲಾಗಿ ನಮ್ಮ ಮೇಲೆ ಒಳ್ಳೇ ಪ್ರೇಮ ಮಾಡುತ್ತಿದ್ದಾರಲ್ಲ! 'ಹಣ! ದೀಪಾವಳಿಯ ಊಟಕ್ಕೆ ಎಷ್ಟು ಆಗ್ರಹ ಮಾಡಿದರು? ಎಷ್ಟು ಒಲ್ಲೆಂದರೂ ಕೇಳದೆ ಅವಳಿಗೆ ಜರದಂಚಿನ ಕುಪ್ಪುಸ ಕೊಟ್ಟಾರಲ್ಲ!........"

ಮನದ ವಿಚಾರ ಹೀಗೆ ಮುಂದುವರೆಯುತ್ತಿದ್ದರೂ, ಅವನ ಮನೆ ಮಾತ್ರ ಮುಂದೋಡಲು ಶಕ್ಯವಿರಲಿಲ್ಲ. ಅವನ ಕಾಲುಗಳು ಅವನಿಗರಿಯದಂತೆ ಮನೆಯ ಬಾಗಿಲ ಮುಂದೆ ಬಂದು ನಿಂತುವು. ಭರಮ ಬಾಗಿಲನ್ನು ನೋಡಿದ; ಅದು ಮುಂದಾಗಿತ್ತು; ಬೀಗಹಾಕಿಕೊಂಡಿತ್ತು.

ಭರಮನ ಕಾಲುಗಳಲ್ಲಿ ಕಂಪನ ಉಂಟಾಯಿತು ಹೆಚ್ಚಾಯಿತು ಹೃದಯದ ಹೊಡೆತ. ಮೈಯಲ್ಲಿ ಕಿರುಬೆವರೊಡೆಯಿತು. ಪ್ರಜ್ಞಾಶೂನ್ಯನಂತಾಗಿ ಹಾಗೆಯೇ ಮುಂದೆ ನಡೆದ. ಅಂತರಿಕ ಶಕ್ತಿ ಅವನನ್ನು ಎಲ್ಲಿಗೋ ಎಳೆದೊಯ್ಯುತ್ತಿತ್ತು. ಬೀದಿಯ ಮೇಲಿರುವ ಚಹದ ಅಂಗಡಿಯೊಂದರಲ್ಲಿ ನಾಲ್ಕಾರು ಜನರು ಗೊಂದಲ ಹಾಕುತ್ತಿದ್ದರು. ಅವರಲ್ಲೊಬ್ಬ ಬೀದಿಹಿಡಿದು ಹೋಗುವ ಭರಮನನ್ನು ಕಂಡು: "ಯಾಕ; ಭರಮಾ? ಮದಿನದಾಗ ಊರ ಕಡೆ ಬಂದೀ?"

ಎಂದೆನ್ನುವ ಮಾತಿಗೆ ಇನ್ನೊಬ್ಬ—

"ಅವಂದೇನೋ, ಸಾವುಕಾರು ಹೊಲಾ ಕೊಟ್ಟಾರು! ಚೈನ ಐತಿ ಬಿಡು." ಎಲ್ಲರೂ ಘೊಳ್ಳನೆ ನಕ್ಕರು. ಭರಮನಿಗೆ ಈ ಮಾತು ಸುಟ್ಟಗಾಯದ ಮೇಲೆ ಬರೆಕೊಟ್ಟಂತಾಯಿತು. ಯಾವ ಮಾತಿಗೂ ಉತ್ತರಕೊಡುವ ಸ್ಥಿತಿ ಅವನದಿರಲಿಲ್ಲ. ಸಾವುಕಾರರ ಬಾಗಿಲ ಬಳಿ ಬಂದ. ಹೆಬ್ಬಾಗಿಲಲ್ಲಿದ್ದ ನಾಯಿ ಗುರ್ರೆಂದಿತು. ಒಳಗೆ ನೋಡಿದ; ಎಲ್ಲಿಯೂ ಶಾಂತತೆ. ಕೊಟ್ಟಿಗೆಯಲ್ಲಿ ಒಂದೆರಡು ಕರುಗಳು ಮಾತ್ರ ಮೆಲುಕಾಡಿಸುತ್ತ ನಿಂತಿದ್ದುವು. ಪಡಸಾಲೆಯಲ್ಲಿ ಹಾಕಿಟ್ಟ ದಿಂಬು-ಲೋಡುಗಳೂ, ಹಾಗೆಯೆ ಬಿದ್ದುಕೊಂಡಿದ್ದುವು. ಎಲ್ಲಿಯೂ ನೀರವ, ನಿಃಶಬ್ದ! ಗೋಡೆಯ ಮೇಲೆ ಹಲ್ಲಿಗಳೆರಡು 'ಲೊಟ್, ಲೊಟ್, ಲೊಟ್' ಎಂದು ಏನೇನೋ ಮಾತನಾಡಿ ಮುಂದೆ ಹೋದುವು.

ನಡುಮನೆಗೆ ಬಂದ ಭರಮನ ಚಿತ್ತ ಕವಡಿತ್ತು; ಹೃದಯದ ಹೊಡೆತ ಸಾವಿರಪಟ್ಟಿನಷ್ಟಾಗಿತ್ತು. ಅವನ ಉಸಿರಿನ ಸಪ್ಪಳವೂ ಆಗ ಅಂತರ್ಮುಖಿಯಾಗಿತ್ತು. ಎದುರಿಗಿರುವ ಕೋಣೆಯ ಬಾಗಿಲು ಅರ್ಧಮರ್ಧ ಮುಚ್ಚಿಕೊಂಡಿತ್ತು. ಒಳಗಿಂದ ಏನೋ ಗುಣುಗುಣು ಮಾತುಗಳು! ಎರಡು ದನಿಗಳು ಹೊರಬರುತ್ತಿದ್ದರೂ, ಕಳ್ಳದನಿಯಿಂದ ಮಾತಾಡುವ ಒಂದರ ಗುರುತು ಮಾತ್ರ ಹತ್ತುವಂತಿರಲಿಲ್ಲ.

"ಯಾರಿಗ್ಯಾರ ತಿಳಿದರ ಯಾನ ಗತಿ?"

"ತಿಳಿದರ ಯಾವ ಯಾನ ಮಾಡತಾನ!"

"ನಿಮಗೇನು! ನೀವು ಪುಂಭಾರೇನಲಾ!"

"ಯಾಕವರೆ! 'ಬ್ರ' ಅನ್ನಲಿ; ಕಡದ ಹಾಕಸತೇನು! ನೀ ಅವರ ಕಾಳಜೀ ಬಿಡು!"

"ಒಂದು ವ್ಯಾಳೇ!"

"ಯಾಕನ ಹೇಳಲಾ"

"ಫಕ್ಕಾನ, ಅಂವಗ ತಿಳಿದರ?"

"ಅದರ ವ್ಯವಸ್ಥಾ ಮಾಡಲಾಕ ಆಗ್ಯದಿಲ್ಲೇನು?"

ಕೊನೆಯ ಎರಡು ನುಡಿ ಕೇಳಿದ ಭರಮನಿಗೆ ಮುಂದೆ ಕೇಳುವ ಧೈರ್ಯ-ತಾಳ್ಮೆಗಳು ಉಳಿಯಲಿಲ್ಲ. ಹಿಂದೆ ಸರಿದ; ನಡುಗುವ ದೇಹದೊಡನೆ, ಕತ್ತರಿಸುವ ಕರುಳಿನೊಡನೆ ಹೇಗೋ ಪಡಸಾಲೆಯ ಕಟ್ಟೆಯಿಳಿದು ಬೀದಿಗೆ ಬಂದ. ಅಲ್ಲಿ ಮಲಗಿದ್ದ ನಾಯಿಗೆ ಒಮ್ಮೆಲೆ ಎಚ್ಚರಾದಂತಾಗಿ, ಕೊಂಯ್‌ಗುಡುತ್ತ ಮುಂದೆ ಓಡಿಹೋಯಿತು. ಬೇವಿನಮರದ ಮೇಲೆ ಕೂತು ಲಲ್ಲೆಯಾಡುತ್ತಿದ್ದ ಹಕ್ಕಿಗಳ ಜೋಡೊಂದರಲ್ಲಿಯ ಹಕ್ಕಿ, ತನ್ನ ಬಳಿಯಲ್ಲಿದ್ದ ಸಂಗಾತಿಯನ್ನು ಕುಕ್ಕಿ ಹಾರಿಹೋಯಿತು. ಆಕಾಶದಲ್ಲಿ ಕರಿಯ ಮೋಡದ ತುಂಡೊಂದು ಬಂದು, ಸೂರ್ಯನಿಗೆ ಇದಿರಾಯಿತು; ಮುಂದೆ ಸರಿದು ಹೋಯಿತು. ನಡೆದಿದ್ದ ಭರಮ ಮನೆಗಳನ್ನೂ, ಬೀದಿಗಳನ್ನೂ ಒಂದೊಂದಾಗಿ ದಾಟುತ್ತ ಮುಂದೆ ನಡೆದೇ ಇದ್ದನು. ಊರನ್ನೂ ದಾಟಿದನು ಮತ್ತೆ ನಡೆದನು.

ಸಾಗಿದ್ದ ಭರಮ—ದಾರಿಯೊಂದನ್ನು ಹಿಡಿದು ಸಾಗಿಯೆ ಇದ್ದ. ಹಳ್ಳ ದಾಟಿದ, ಹಳ್ಳದ ಹೊಲಗಳನ್ನೂ ದಾಟಿದ. ತನ್ನ ಬಾಳ ಒಟ್ಟಿಲವನ್ನೇ ಒದ್ದೋಡುತ್ತಿದ್ದ ಅವನಿಗೆ ಹೊಲದ ಹಂಗೇನು? ಅವನು ತನ್ನ ಹೊಲದಲ್ಲಿರುವ ಹಾದಿಯಿಂದ ಹೊರಟಾಗ, ಬದಿಯಲ್ಲಿಯೇ ಜೋಳದ ದಂಟುಗಳ ತಲುಗಾಡುತ್ತಿದ್ದುವು. ಒಳಗೆ ಕಸತೆಗೆಯುವ ಕೆಲಸ ನಡೆದಿತ್ತು. ಇದಾವುದನ್ನೂ ನೋಡಲು ಅಲ್ಲಿರಲಿಲ್ಲ ಭರಮನ ದೃಷ್ಟಿ. ಅವನು ತನ್ನ ಹಾದಿಯನ್ನು ತುಳಿಯುತ್ತ ಮುಂದೆ ನಡೆದೆ ಇದ್ದ ...ಹಾಗೆಯೆ ಹೊರಟೇ ಇದ್ದ.

× × × ×

ಬಾವಿಗೆ-ಗೀವಿಗೆ ನೀರಿಗೆ ಹೋಗಿರಬೇಕು, ಈಗ ಬಂದಾನು ಭರಮ—ಎಂದು ನಿರೀಕ್ಷಿಸುತ್ತ, ಕಳೆ ತೆಗೆಯುತ್ತಲಿರುವ ಸಾವಕ್ಕ, ಹೊಲದಲ್ಲಿ ಗಂಡನ ದಾರಿಯನ್ನು ನೋಡಿಯೇ ನೋಡುತ್ತಲಿದ್ದಳು.

ಪ್ರತಿಭೆಗೆ

ಶ್ರೀ. ಸಿ. ಹೊಸಬೆಟ್ಟು

೧

ಮನದ ಬಿರು-ಬಯಲಲ್ಲಿ ಭಾವನೆಯ ಹಸುಗೂಸು
ಎಳಬಳ್ಳಿ ಚಿಗುರುವುದು ನಿನ್ನ ನೆನೆಸಿ,
ಆ ಕುಡಿಗೆ ನೀರೆರೆಸಿ. ಚೆಲುವ ಹೂಗಳ ನಗಿಸಿ
ವಯ್ಯಾರಿ, ಪ್ರತಿಭೆಯೇ ಬಾರ, ವರಿಸಿ!

೨

ನಿನ್ನ ಶಿಖೆಯೊಳಗಿಂದ ಕಾವ್ಯಗಂಗಾವಾಹ
ಹರಿದಿರಲಿ, ಜೀವನದ ಹೊಕ್ಕು-ಹಾಸು
ಹೊಸೆದಿರಲಿ ಹಸನಾಗಿ, ರಸಸ್ರೋತ ಚಿರವಾಗಿ
ನಿನ್ನ ಸೇವಾಭಾಗ್ಯವಿರಲಿ, ನೆಲೆಸು.

೩

ಸಾವು-ಬದುಕುಗಳೆದುರು ಬಾಳಿನೆಳೆ ಕವಲೊಡೆದು
ಮುಗ್ಗುರಿಸಿ, ಹೃತ್ಕಮಲದಲವ ತೆರೆದು,
ಅಲ್ಲಿರುವ ರಸಗಂಧ, ಮಕರಂದಗಳನೆನಗೆ
ಉಣಲೂಡು ಚುಕ್ಕೆಗಳ ಬೆಳಕ ತಳೆದು.

೪

ತಲೆಯೆಲ್ಲ ಮಿದುಳುಗಳ ರಣರಂಗವಾಗುತಿರೆ
ವಾಸುದೇವನೆ ಆಗಿ ಗೀತೆಯೂದು;
ಶಬ್ದಗಳ ಬಿರುಗಾಳಿ ಸ್ತಬ್ಧವಾಗಿಸಿ, ಶುದ್ಧ-
ಭಾವ ತಾರುಣ್ಯವನು ನೀಡು—, ಬಂದು.

೫

ಹುಣ್ಣಿವೆಯ ಹಾಲುಜೆಳುದಿಂಗಳಿನ ಹೊನಲಲ್ಲಿ
ರಸೈಕ ದೃಷ್ಟಿಯ ಕುಮುದವರಳುವಂತೆ,
ನವನವೋನ್ಮೇಷಶಾಲಿನಿ, ನಿನ್ನ ಮಡಿಲಲ್ಲಿ
ನನ್ನ ಬದುಕಿನ ಕೂಸು ರಮಿಸಲಂತೆ.

೬

ಮನದ ಬಿರುಬಯಲಲ್ಲಿ ಭಾವನೆಯ ಹಸುಗೂಸು
ಎಳಬಳ್ಳಿ ಚಿಗುರುವುದು ನಿನ್ನ ನೆನೆಸಿ,
ಆ ಕುಡಿಗೆ ನೀರೆರೆದು ಚೆಲುವ ಹೂಗಳನೊಗೆದು
ಬಾಬಾರೆ ಪ್ರತಿಭೆ, ಬಗೆಗಳನು ಕುಣಿಸಿ!

ಅನಿರ್ವಚನೀಯ!

ಶ್ರೀ. ಟಿ. ಎಸ್. ಶ್ರೀನಿವಾಸಮೂರ್ತಿ, ಮೈಸೂರು

ನೀಲ ಪಟಾಂಗಣ, ಕಲೆ ಸಮ್ಮೇಳನ,–
ಸಂಧ್ಯಾವ್ಯೋಮವ ನೋಡಲ್ಲಿ!
ಮುಗಿಲಿನ ಕಲೆ–ಬಲೆ ಅದರಗಲಕು ನೆಲೆ;
ಕಣ್ಸೊಗಸಗೆಯು ಕಲೆ:— ನಿಲ್ಲಿಲ್ಲಿ!

ಕೆರೆ ತಟದಲಿ ಕವಿ; ಮೇಲೆ ಜಗತ್ಕವಿ
ಕೈಚಳಕಕೆ ಮುದ ತಳೆದೋವಿ,–
ದೂರದೊಳಾ ಮಲೆ, ಬಳಿ ಸಲಿಲದ ನೆಲೆ–
ಬಗೆ ತುಂಬಿರೆ ನಿಂತನು ಭಾವಿ!

ತೆರೆ ತೆರೆ ಮಲೆಯಿದೊ? ಶಿಖರದ ಚಾಚಿದೊ!
ಪಾರಾವಾರದ ವಿಸ್ತಾರ,—
ಭೀಮಾಕಾರವಿ, ಕೋಮಲ ರೂಪದಿ
ಎಸೆದಿದೆ ಮುಗಿಲಿನ ಚಿತ್ತಾರ!

ಕಲೆ ನೈಪುಣ್ಯವೊ, ಬಗೆ ಬಗೆ ವರ್ಣವೊ;
ಎನಿತಿದ್ದರು, ಓ, ವರ್ಣ-ಕವಿ!
ನಿರ್ವಿಪನೆನ್ನುತ ಹೆಮ್ಮೆಯ ಪಡುವೆಯು....,
ಕಲೆಯೊಂದನು ಮೇಣಿದಕೆ ಸರಿ!

ಶಿವಶಿವ! ಸಲ್ಲದು, ಹೆಮ್ಮೆಯ ಮಾತದು,
ಅಮಾನುಷವು ಇದು- ಕೃತಿ ವಂದ್ಯ!
ಯುಗಯುಗ ತಪಮಿರ್ದರು ಕೈಗಣ್ಮದು,
ದೇವನ ಕಲೆಯಿದು ಹೃದ್ವೇದ್ಯ!

ಕಲೆಯಿದು ಎಂಬೆನೆ, ಮುಂಚಿದೆ ಕಲೆಯನೆ!
ಇದುವೆ ಜಗತ್ಕವಿ ಸಾನ್ನಿಧ್ಯ!
'ಸೌಂದರ್ಯವೆ ಶಿವ;' 'ಶಿವ ಸೌಂದರ್ಯವು;'
ಶಿವಸಾನ್ನಿಧ್ಯವೆ ಸೌಂದರ್ಯ!

ನಿಂತೆನು ಬಗೆ–ಕಣ್ ತುಂಬಲು ಕಲೆ-ಹೊನ್;
ಮಾತಿಗೆ ನಿಲುಕದ ಅನುಭಾವ—
ತುಂಬಲು ಹೃದಯವ. ಮಧುರ-ವೇದನೆಗೆ
ಕಂಬನಿ ತುಂಬಿತು; ಮೈಪುಳಕ!

ಹೆಮ್ಮೆಯು ಅಡಗಿತು; ತಿಳಿಯಿತು ಬಗೆ;–ಇದೆ
ಅವಾಙ್ಮನಸ ಗೋಚರನು ಶಿವ!

ಎರಡು ರೂಪಕಗಳು

೧

ಮಾನವನ ಕರುಣೆ

ಆಗಸದ ತುಂಬ ಅಲೆದಾಡುತ್ತಿದ್ದ ಮೋಡಗಳೆಲ್ಲ ಮಳೆಸುರಿಸಿ ಮರೆಯಾದುವು. ಇದುವರೆಗೆ ಸುರಿದ ಜಲರಾಶಿಯನ್ನುಂಡು ಭೂಮಿಯೆದೆ ತಂಪಾಗಿ, ತಣಿದಿದ್ದಿತು. ತಿಳಿನೀಲ ನಭ ಶುಭ್ರವಾಗಿತ್ತು.

ಹಾರಾಡುತ್ತಿದ್ದ ಪಕ್ಷಿಗಳೆರಡು ಗಿಡವೊಂದರಲ್ಲಿ ಕುಳಿತವು. ಅರೆನಿಮಿಷ ತಡೆದು ಗಂಡು ಹಕ್ಕಿ ಹೇಳಿತು. "ಇದೆಲ್ಲ ಮಾನವನಿಗೆ ದೇವ ದೇವನ ಕರುಣೆ"

"ದೇವ ದೇವನು ಅವನಿಗೇಕೆ ಕರುಣಿಸಬೇಕು"

ಹೆಣ್ಣು ಹಕ್ಕಿಯ ಮರು ಪ್ರಶ್ನೆ ಇದು.

"ಹಾಗೆಂದರೆ? ಮಾನವನು ಪ್ರಾಣಿಗಳಿಗೆ ಕೃಪೆದೋರುವದಿಲ್ಲವೇ? ಹಾಗೆ ದೇವನು ಮಾನವರಿಗೆ ಕರುಣೆದೋರುವನು."

ಹೆಣ್ಣು ಹಕ್ಕಿ ನಕ್ಕು ಹೇಳಿತು. "ದೇವರು ಮಾನವನಿಗೆ ತೋರಿದ ಕರುಣೆ ಇದಲ್ಲ. ತಾನು ಸೃಷ್ಟಿಸಿದ, ಶ್ರೇಷ್ಠ ಪ್ರಾಣಿಗಳಾದ ಮಾನವರು ಮಾಡುತ್ತಿರುವ ಅಘಾತ....ಅಪರಾಧಗಳಿಂದ ನೊಂದು ಮರುಗಿ, ಕೊರಗಿದ ದೇವನ ಕಣ್ಣೀರಿನ ಕಡಲಿದು. ಹಿಂದೊಮ್ಮೆ ಆನಂದ ಬಾಷ್ಪ ಉದುರಿಸಿದ್ದ, ಇಂದು ಕಣ್ಣೀರು ಸುರಿಸುತ್ತಿದ್ದಾನೆ. ಆತನ ಕಣ್ಣೀರೂ ಇವರಿಗೆ ಆಶ್ರಯವಾಗಿವೆ. ಆದರೆ ಇವರು ಅದನ್ನರಿಯರು." ಕೊನೆಗೆ ಹೇಳಿತು. "ಮಾನವ ಯಾರಿಗೂ ಕರುಣೆದೋರಲಾರ."

ಐದಾರು ನಿಮಿಷ ಸಂದಿರಬಹುದು. ಅತ್ತಿತ್ತ ದೃಷ್ಟಿ ಹೊರಳಿಸುತ್ತಿದ್ದ ಹೆಣ್ಣು ಗಂಡಿಗೆ ಹೇಳಿತು. "ನೋಡಲ್ಲಿ, ಪ್ರಾಣಿಗಳಿಗೆ ದಯ ತೋರುವ ಮಾನವ, ನಮಗೆ ದಯೆ ತೋರಲು ನಿಂತಿದ್ದಾನೆ."

ಅತ್ತ ದೃಷ್ಟಿ ಹೊರಳಿಸಿತು ಗಂಡು. ಬಿಲ್ಲು ಬಾಣ ಹಿಡಿದು ಗುರಿಯಿಟ್ಟ ಭಿಲ್ಲ ಅದರ ಕಣ್ಣಿಗೆ ಕಂಡ.

ಅಂತಹದರಲ್ಲಿಯೂ ನಿರಾಶೆಯ ನಗು ಸುಳಿಯಿತು.

ಆಗಲೇ ಮಾನವನ ಕರುಣೆಯ ಕೃಪಾ-ಕಟಾಕ್ಷಕ್ಕೊಳಗಾಗಿ ಪಕ್ಷಿಗಳೆರಡೂ ನೆಲಕ್ಕುರುಳಿದುವು. ದೇವನ ಕಣ್ಣೀರಿನಲ್ಲಿ ತಮ್ಮ ಕಣ್ಣೀರನ್ನೂ ಬೆರಸಿದುವು.

೨

ವಿಶ್ವಚರಿತ್ರೆ

ಆತ ಬರೆಯ ಬಯಸಿದ್ದ ವಿಶ್ವಚರಿತ್ರೆಯಂದು ಪೂರ್ಣವಾಗಿತ್ತು. ಜೇಲಿನ ಜೀವನದಲ್ಲಿ ಆತ ಸಾಧಿಸಿದ ಮಹತ್ವದ ಕಾರ್ಯಗಳಲ್ಲೊಂದಾಗಿತ್ತು. ವಿಶ್ವದ-ಇತಿಹಾಸವನ್ನೇ ಹೆಮ್ಮೆ ಬಡುವಂತೆ ರಮ್ಯವಾಗಿ ಅದ್ಭುತವಾಗಿ ಬರೆದಿದ್ದ.

ಆ ದಿನ ಮುಂಜಾನೆ ಸಮಾಧಾನದ ಉಸಿರೆಳೆದು ಕುಳಿತಿದ್ದ. ಹೊರಗೆ ಇಬ್ಬರು ವ್ಯಕ್ತಿಗಳು ಪರಸ್ಪರ ನಿಂದಿಸತೊಡಗಿದರು. ಕೊನೆಗೆ ಕೈಗೆ ಕೈಯೂ ಹತ್ತಿತು. ಹೀಗೆ ದೊಡ್ಡದೊಂದು ಜಗಳವೇ ಉತ್ಪನ್ನವಾಯಿತು. ಜನ ಅದನ್ನು ಬಿಡಿಸಿದರು.

ಸಂಜೆಯ ವಿಚಾರಣೆ ನಡೆಯಿತು. ನೋಡಿದ್ದ ಹತ್ತು ಇಪ್ಪತ್ತು ಜನ ಹತ್ತಿಪ್ಪತ್ತು ತರಹ ಸಾಕ್ಷೀ ಕೊಟ್ಟರು. ಮುಂಜಾನೆ ನಡೆದದ್ದೇನು? ಎಂಬುದು ಸಂಜೆಗೆ ವಿಚಾರಿಸಿದಾಗ ತಿಳಿಯಲಿಲ್ಲ. ಯಾರ ಅಪರಾಧಿಗಳೆಂಬುದು ನಿರ್ಣಯಿಸುವುದು ಕಠಿಣವಾಯಿತು.

ಇದನ್ನೆಲ್ಲ ನೋಡುತ್ತಿದ್ದ ವಿಶ್ವಚರಿತ್ರ-ಕರ್ತ ಮನದಲ್ಲಿಯೆ ಯೋಚಿಸಿದ. "ಮುಂಜಾನೆ ನಡೆದ ಘಟನೆಯ ನಿಜ ವಿವ ಸಂಜೆಗೆ ತಿಳಿಯಲಿಲ್ಲ. ಇನ್ನು ಸಾವಿರಾರು ವರುಷಗಳ ಘಟನೆಗಳನ್ನು ನಂಬಿ, ಅವುಗಳಿಗೆ ಸತ್ಯದ ಬಣ್ಣ ಬಡಿಯಲೆಳಿಸುವುದ ಎಷ್ಟೊಂದು ಮೂರ್ಖತನ."

ಆಗಲೇ ಆತ ಬರೆದಿದ್ದ ವಿಶ್ವಚರಿತ್ರೆ ಪ್ರಕೋಪಾಗ್ನಿಯ ಬಾಯಿಯ ಅಹಾರವಾಯಿತು.

(೧೪ನೆಯ ಪುಟದಿಂದ ಬಂದುದು)

ಹೊರೆಯುವವರು. ಹೀಗಿರುವಾಗ ಗೋವೆಯ ಪ್ರದೇಶದಲ್ಲಿ ವಾಸಿಸುವ ಜನರು, ವಿಮೋಚನೆಗಾಗಿ ಜಾಗೃತರಾಗಬೇಕೆಂದು? ಚಳವಳಿಯನ್ನವರು ಹೂಡಬೇಕೆಂದು?

ಇದೆಲ್ಲ ಪರಿಸ್ಥಿತಿಯನ್ನು ಅರಿತ ಭಾರತದ ಜನತೆಗೆ, ಪೋರ್ತುಗೀಜ್ ಭಾರತದ ವಿಮೋಚನೆಯು ಒಂದು ಮಹಾಸಮಸ್ಯೆಯಾಗಿ ಕುಳಿತಿದೆ. ನಮ್ಮ ಜನತೆಗೆ ಭಾರತದಲ್ಲಿ ವಿದೇಶೀಯರ ಆಡಳಿತವ ಈಗಲೂ ಇರಬೇಕೆಂದು ಎನಿಸುತ್ತಿಲ್ಲ. ಆ ಪ್ರದೇಶದಲ್ಲಿಯ ಜನರ ಜಾಗೃತರಾಗುವ ವರೆಗೆ ಹಾದಿಯನ್ನು ಕಾಯಲು ಸಿದ್ಧವಿಲ್ಲ. ಅದಕ್ಕಾಗಿ ನಮ್ಮ ಜನತೆ ತಾನೇ ಚಳವಳಿ ಹೂಡಿ ವಿದೇಶಿಯರನ್ನು ಹೊರ ಅಟ್ಟಬೇಕೆಂದರೆ, ನಮ್ಮ ಸರಕಾರದ ವಿದೇಶನೀತಿ ಅದರ ಕಾಲಿಗೆ ತೊಡಕನ್ನು ಒಡ್ಡುತ್ತಲಿದೆ. ಹಾಗಾದರೆ ಈ ಸಮಸ್ಯೆ ಬಿಡುವ ಬಗೆ ಹೇಗೆ?

ಗೋಮಾಂತಕೀಯರ ಸತ್ಯಾಗ್ರಹದ ಅವಸ್ಥೆ.

ಹೊರಗಿದ್ದ ಗೋಮಾಂತಕೀಯರು ಗೋವೆಯ ವಿಮೋಚನೆಗಾಗಿ ಚಳವಳಿ ಹೂಡಿದ್ದಾರೇನೋ ಸರಿಯೆ! ಆದರೆ ಹೊರಗಿದ್ದ ಗೋಮಾಂತಕೀಯರ ಸಂಖ್ಯಾಬಲವೆಷ್ಟು? ಅವರಲ್ಲಿಯೂ ಚಳವಳಿಗೆ ಸಿದ್ಧರಾಗುವ ಜನವೆಷ್ಟು? ಹೋದ ಸತ್ಯಾಗ್ರಹಿಗಳನ್ನು, ಹಿಂಸಾಚಾರವನ್ನು ಅವಲಂಬಿಸಿ ನಿಂತ ಗೋವೆಯ ಸರಕಾರ ಏನು ಮಾಡುವದೆಂಬುದೂ ಹೊರಗಿನವರಿಗೆ ಗೊತ್ತಾಗುವಂತಿಲ್ಲ. ವಿದೇಶದ ಸುದ್ದಿಗಾರರು ಅಲ್ಲಿಂದ ಹೊರಗೆ ಕಳುಹುವ ಸುದ್ದಿಗಳು, ಅಲ್ಲಿಯ ಸರಕಾರದ ಚಟುವಟಿಕೆಗಳನ್ನು ಪುರಸ್ಕರಿಸಿ ಬರೆದುವೇ ಆಗಿರುತ್ತವಲ್ಲದೆ, ಸತ್ಯಾಗ್ರಹಿಗಳ ವಿಚಾರದ ಸಹಾನುಭೂತಿಯ ಒಂದು ಮಾತೂ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೊರಗಿನಿಂದ ಚಳವಳಿ ನಡೆಯಿಸುತ್ತಿರುವ ಗೋಮಾಂತಕೀಯ ಸತ್ಯಾಗ್ರಹಿಗಳಲ್ಲಿ ಉತ್ಸಾಹ-ಆತ್ಮವಿಶ್ವಾಸಗಳು ಉಳಿಯುವ ಬಗೆ ಹೇಗೆ! ಹೊರಗಿನವರ ಈ ಚಳವಳಿಯು ಅಯಶಸ್ವಿಯಾದರೆ ಒಳಗಿನವರಲ್ಲಿ ಜಾಗೃತಿ ಮಾಡುವುದಕ್ಕೆ ಸಾಧ್ಯವಿದೆಯೆ? ನಮ್ಮ ವಿದೇಶದ ರಾಜಕಾರಣ, ಗೋವೆಯ ವಿಷಯದಲ್ಲಿ ಹಪಗಾಲವನ್ನು ತಪ್ಪಿಸಿಕೊಳ್ಳುವುದೆಲ್ಲಿಯೋ ಎಂದು ಜನತೆ ವಿವಂಚನೆಗೊಳಗಾಗಿದ್ದರೆ ಅದು ಅಸಹಜವೇನೂ ಅಲ್ಲ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ನಾವು ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಸಮನ್ವಯ' ಕತೆಯನ್ನು ವಿಮರ್ಶಿಸಿ ಒಂಬತ್ತು ಜನರಿಂದ ಲೇಖನಗಳು ಬಂದಿವೆ. 'ಮಾಯಾಪರಾಜಯ'ದ ಬಗೆಗೆ ಯಾರಿಂದಲೂ ವಿಮರ್ಶೆಗಳು ಬಂದಿಲ್ಲ. ಕತೆಯನ್ನು ವಿಮರ್ಶಿಸಿದವರ ಪರಿವಿಡಿ ಹೀಗಿದೆ:

೧ ಶ್ರೀ. ರಾಘವೇಂದ್ರ ವರಾಹಮೂರ್ತಿ ಜ್ಯೂ. ಬಿ. ಎ. ಕರ್ನಾಟಕ ಕಾಲೇಜ್, ಧಾರವಾಡ. ೨ ಶ್ರೀ. ಎಸ್. ಪಿ. ಜೂಚನಿ ಶಿಕ್ಷಕರು, ಗಜೇಂದ್ರಗಡ. ೩ ಶ್ರೀ. ಎನ್. ಕೃಷ್ಣಮೂರ್ತಿ, ಬೆಂಗಳೂರು. ೪ ಶ್ರೀ. ಎಂ. ಟಿ. ಮಾತನವರ ಜ್ಯೂ. ಬಿ. ಎಸ್‌ಸಿ. ಕರ್ನಾಟಕ ಕಾಲೇಜ್, ಧಾರವಾಡ. ೫ ಶ್ರೀ. ಎಂ. ಎಸ್. ಜೋಶಿ. ಶಿಕ್ಷಕರು ಉಮಾವಿದ್ಯಾಲಯ ಹೈಸ್ಕೂಲ್, ಲಕ್ಷ್ಮೇಶ್ವರ. ೬ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೭ ಶ್ರೀ. ಕುಲಕರ್ಣಿ ಶಂಕರರಾಯರು. ಅಕ್ಕಲಕೋಟಿ. ೮ ಶ್ರೀ. ಎಸ್. ಬಿ. ಅಲ್ಲಯ್ಯನ ಮಠ, ಬೆಳಗಾಂವಿ. ೯ ಶ್ರೀ. ಯಂ. ಕೇಶವಭಟ್ಟ, 'ವಿದ್ವಾನ್' ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಮಂಡಲಿಯು ನೋಡಿ ನಿರ್ಣಯವನ್ನು ಕೊಟ್ಟಿದೆ. ಶ್ರೀಮಾನ್ ಕೆ. ಎಸ್. ಶರ್ಮಾ ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಯಂ. ಕೇಶವಭಟ್ಟ, ಶ್ರೀ. ಎಂ. ಎಸ್. ಜೋಶಿ, ಶ್ರೀ. ಎನ್. ಕೃಷ್ಣಮೂರ್ತಿ—ಇವರ ವಿಮರ್ಶೆಗಳು ಚೆನ್ನಾಗಿವೆ. ಶ್ರೀ. ಎ. ಟಿ. ಮಾತನವರ, ಶ್ರೀ. ಕುಲಕರ್ಣಿ ಶಂಕರರಾಯ—ಇವರ ಪ್ರಯತ್ನಗಳೂ ಒಳ್ಳೆಯವಾಗಿವೆ. ಮಿಕ್ಕವು ತೀರ ಸಾಮಾನ್ಯವಾಗಿವೆ.

'ಸಮನ್ವಯ' ಕತೆಯು ವಿಮರ್ಶಕರಿಗೆಲ್ಲ ಮೆಚ್ಚಿಗೆಯಾದುದು ಸಂತೋಷದ ಸಂಗತಿ. ಕೆಲವು ಜನ ವಾಚಕರಿಂದ ಬರಿ ಮೆಚ್ಚಿಗೆಯ ಪತ್ರಗಳೂ ಬಂದಿವೆ. ಸಮನ್ವಯದಲ್ಲಿ ರೂಪಿಸಿ ತೋರಿಸಿದ ಸಮಸ್ಯೆ, ಇಂದಿನ ಎಲ್ಲ ಕುಟುಂಬಗಳ ಸಮಸ್ಯೆಯೂ ಆಗಿದೆ. ಹೊಸ-ಹಳೆಯ ವಿಚಾರಗಳ ಹೋರಾಟ, ಎಂದಿನಿಂದಲೂ ಕುಟುಂಬಗಳಲ್ಲಿ ಇದ್ದುದೇ; ಆದರಲ್ಲಿಯೂ ಇಂದಿನ ವೈಜ್ಞಾನಿಕಮನೋವೃತ್ತಿ, ಆರ್ಥಿಕ-ಸ್ವಾತಂತ್ರ್ಯ—ಇವೆರಡೂ ಸೇರಿ, ಈ ಹೋರಾಟಕ್ಕೆ ಒಂದು ವಿಶಿಷ್ಟಸ್ವರೂಪವನ್ನು ತಂದುಬಿಟ್ಟಿವೆ. ಹಿಂದಿನ ಕಾಲದ ಅವಿಭಕ್ತಕುಟುಂಬ ಪದ್ಧತಿಯಲ್ಲಿ, ಹಿರಿಯ ಯಜಮಾನನ ಹೊರತು ಮಿಕ್ಕವರಿಗೆ ಆರ್ಥಿಕಸ್ವಾತಂತ್ರ್ಯವೇ ಇರುತ್ತಿರಲಿಲ್ಲ. ಅಂತಲೇ ತರುಣರಲ್ಲಿ ಹೊಸ ವಿಚಾರಗಳೇನಾದರೂ ತಲೆದೋರಿದರೆ, ಅವು ಬೆಳೆಯಲಿಕ್ಕೆ ಆಸ್ಪದವಿರುತ್ತಿರಲಿಲ್ಲ. ಇಂದಿನ ಪರಿಸ್ಥಿತಿಯ ಮೂಲಕ, ಒಂದೇ ಮನೆಯಲ್ಲಿದ್ದ ಬೇರೆಬೇರೆ ಜನರು ಸ್ವತಂತ್ರವಾಗಿ ಅರ್ಥಾರ್ಜನೆ ಮಾಡುತ್ತಿದ್ದಾರೆ. ಆದುದರಿಂದ, ಅವರಲ್ಲಿ ವಿಚಾರಭೇದಗಳ ತಿಕ್ಕಾಟವೇಳುವುದು ಸಹಜ. ಪ್ರೇಮ, ತ್ಯಾಗ, ತಿಳಿವಳಿಕೆಗಳ ಹೊರತು ಇನ್ನಾವುದರಿಂದಲೂ ಈ ತಿಕ್ಕಾಟಗಳು ಕಡಿಮೆಯಾಗಲಾರವು. ಯಾವುದೇ ಕುಟುಂಬದಲ್ಲಿಯ ವ್ಯಕ್ತಿಗಳು, ಇನ್ನೊಬ್ಬರಿಂದ ಈ ಗುಣಗಳನ್ನು ಬಯಸುತ್ತಾರಲ್ಲದೆ, ತಾವು ಅವುಗಳನ್ನು ತಳೆಯಲು ಸಿದ್ಧರಾಗುವುದಿಲ್ಲ. ತರುಣರಲ್ಲಿ ಹೊಸ ಹುಮ್ಮಸವಿದ್ದರೆ, ಹಿರಿಯರಲ್ಲಿ ಜೀವನಾನುಭವದ ಜ್ಞಾನವಿರುವುದು. ಕುಟುಂಬದ ಮುಂದುವರಿಕೆಕ್ಕೆ ಎರಡೂ ಬೇಕು. ಆದುದರಿಂದ ಹಳಬರೂ ಹೊಸಬರೂ ಒಂದೇ ಎಡೆಯಲ್ಲಿ ಕೂಡಿ ಇರಬೇಕಾದಾಗ, ಇಬ್ಬರೂ ಒಬ್ಬರ ಮನವನ್ನೊಬ್ಬರು ತಿಳಿದುಕೊಂಡು ಪರಸ್ಪರರ ಮನಸ್ಸು ನೋಯದಂತೆ ನಡೆಯಬೇಕು. ಇದೊಂದು ಯೋಗ—ಜೀವನಯೋಗ! ಈ ಜೀವನಯೋಗವನ್ನು ಸಾಧಿಸದ ಕುಟುಂಬಗಳಲ್ಲಿ ಸುಖ-ಶಾಂತಿಗಳೆಂದೂ ನೆಲಸಲಾರವು.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ '**ಮಹಾಲಿಂಗ**' ಎಂಬ ಕತೆಯನ್ನಾಗಲಿ '**ಭಕ್ತ ಸುದಾಮ**' ಎಂಬ ನಾಟಕವನ್ನಾಗಲಿ ವಿಮರ್ಶಿಸಿ, ಬರೆಹಗಳನ್ನು ಕಳುಹಬೇಕು.

—**ಸಂಪಾದಕರು**

ಸಮನ್ವಯ

(ಒಂದು ಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು.

ಕೌಟುಂಬಿಕ ಜೀವನದ ಸುಭದ್ರವಾದ ತಳಹದಿಗೆ. ಸಂಪ್ರದಾಯದ ಸಮನ್ವಯವು ಅತಿ ಮುಖ್ಯವಾಗಿದೆ. ಹೊಸ ಆದರ್ಶಗಳು ಹಳೆಯ ಆದರ್ಶಗಳ ಮುಂದೆ ಕೈನೀಡಿ ನಿಂತಾಗ—ಇರಿಸುವ ಕೈಯೂ ಕೊಳ್ಳುವ ಕೈಯೂ "ಅಂಜಲಿಯ ರೂಪಿನಂತೆ" ಕಲ್ಪಿಸಿದರೆ, ಆಗಲೇ ಒಂದು ಪುಷ್ಕಲವಾದ ಜೀವನದ ನಿರ್ಮಾಣವಾದಂತಾಗುವುದು. ವೈಷಮ್ಯ-ವಿರೋಧಗಳು ದೂರ ಸರಿದು ಒಳ್ಳೆಯದನ್ನು ಹೊಸತು—ಹಳತು ಎಂಬ ಭೇದವನ್ನು ಮರೆತು ಕೈಕೊಳ್ಳುವ ಉದಾರ ಮನೋಭಾವವು ಸಮಾಜದಲ್ಲಿ ಮೂಡಿದರೆ,—ತದಾಯತ್ತವಾಗಿ ನೆಲೆನಿಂತ

ಸಾರ್ಗಮುಖೀನ ಜೀವನಗತಿಯು ಸುಗಮವಾಗಿ ಸಾಗುವುದು. ಈ ಭವ್ಯಾದರ್ಶದ ಮೇಲೆ ಹೊಸೆದ ಒಂದು ನೀಳ್ಗತೆಯೆ "**ಸಮನ್ವಯ**". ಅದುವೇ ಜೀವನದ ಏರಿಳಿತಗಳನ್ನು ಸಮತ್ವದಲ್ಲಿ ತಂದಿರಿಸಿ, ಮನೆ-ಯನ್ನು ಬೆಳಗಿಸುವಂತಾದ ಜೀವನಸಮನ್ವಯ. ಗಂಡು-ಹೆಣ್ಣುಗಳ ಜೀವನದ ಅರಿವೂ-ಅಲ್ಲೂ ಹೆಣ್ಣು "ಕುಲದೀಪಿಕೆ" ಯಾಗಿ ಬೆಳಗಿ-ನಿಂತ ಚೆಲುವೂ--ಈ ಕತೆಯಿಂದ ಹೊರಸೂಸುತ್ತಿವೆ. ಹಾಗಾದರೆ ಸಮನ್ವಯ ?

" ಹಳೆಯ ಸಂಪ್ರದಾಯದಲ್ಲೇ ಜೀವನವನ್ನು ತೇಲಿಸಿಕೊಂಡು ಹೋಗುತ್ತಿದ್ದ ಶ್ರೀನಿವಾಸಶಾಸ್ತ್ರಿಗಳು, ತನ್ನ ಪತ್ನಿ ಗಂಗಮ್ಮನೊಡನೆ ಸ್ವೇಚ್ಛಿಕ ಜೀವನಕ್ಕೆ ಕಳೆಯಿತ್ತು ಸಾಗಿ ಮುಂದುವರಿಸಿದ್ದಾರೆ. ಅವರ ಸುಪುತ್ರನೇ " ಎಂ. ಎ. " ಪದವೀಧರನಾದ ಕೇಶವ. ಕೇಶವನು ನಾಗರಿಕತೆಯ ಬೆನ್ನು ಹಿಡಿದು ಸಾಗಿದ ಯುವಕನಾದರೆ, ಶಾಸ್ತ್ರಿಗಳು ಮನೆಯ ತುಂಬ ಶಿಷ್ಯರನ್ನಿರಿಸಿ ವೇದೋಕ್ತಮಾರ್ಗದಲ್ಲಿ ಶಾಂತಿಯನ್ನು ಸವಿಯುತ್ತಿದ್ದರು. ದೈವಾತ್ ನೆರೆಯೂರಿನ ಶಿವರಾಮ ಐತಾಳರ ಪುತ್ರಿ " ಬಿ. ಎ. ಪದವಿಧರೆ-ಸುಶೀಲೆ " " ಶಾರದೆ "ಯು ಕೇಶವನ ಪದವಿಗನುಗುಣವಾಗಿ- ಶಾಸ್ತ್ರಿಗಳ ತುಂಬುಮನದೊಂದಿಗೆ ಆಹ್ವಾ-ನಿತಳಾಗಿ-ಶಾಸ್ತ್ರಿಗಳ ಮನೆಯಲ್ಲಿ ದೀಪವನ್ನಿರಿಸಿದಳು; ಮಾತ್ರವಲ್ಲ, ಅತ್ತೆ-ಮಾವಂದಿರ ಹೃದಯದೀಪಿಕೆಯಾಗಿ, ಅವರ ಭಾವಮಂದಿರ-ದಲ್ಲಿ ಗೃಹಿಣಿಯ ಕರ್ತವ್ಯವನ್ನು ಸಾರಿ, ಅವರಿಗನುಗುಣವಾಗಿ ಸಾಗಿ-ನಿಂತಳು ! ಆದರೆ ಕೇಶವನಿಗಿದು ಹಿಡಿಸದ ಮಾತು ! ಅವನಿದನ್ನು ಒಪ್ಪಲಾರ. ಜೀವನಸಂಗಾತಿಯಾಗಿ ಒಡನಾಡಿಯಾಗಿ ನಾಗರಿ-ಕತೆಗೆ ಸರಿಯಾದ ಬಗೆಯಲ್ಲಿ ನಡೆಸಬೇಕೆಂದು, ಜೀವನವನ್ನು ಉಲ್ಲಾಸ-ಗೊಳಿಸಬೇಕೆಂದು ಬಗೆದ ಕೇಶವ ನಿರಾಶನಾದ; ತನ್ನ ಮನೆಯವರಲ್ಲೇ ಅತ್ತೆ-ಮಾವಂದಿರಿಗಾಗಿ ದುಡಿವ-ಪುರಾಣವಾಚನದಲ್ಲಿ ದಿನಗಳೆವ-ಈಶ್ವರಭಕ್ತಿಯಲ್ಲಿ ತನ್ನ ಜೀವನನೇಪಥ್ಯವನ್ನು ಅರಳಿಸಿದ ಶಾರದೆ-ಯಲ್ಲಿ ನಿರಾಶನಾಗಿ, ಈ ನಿರಾಶೆಯನ್ನು ತಂದೆ-ತಾಯಿಗಳಲ್ಲಿ ನಿವೇ-ದಿಸಲು ಸಂಕೋಚವನ್ನು ತಾಳಿ, ಕೊನೆಗೊಂದು ದಿನ ದೈಹಿಕ ಹಾಗೂ ಮಾನಸಿಕ ಕ್ಷೀಣತೆಗೀಡಾಗುವನು. ಪರಿಣಾಮವಾಗಿ ಶಾರದೆ ಯೊಡನೆ ಕೆಲವು ದಿನದ ಪ್ರವಾಸದಲ್ಲಿದ್ದು ಸುಖಿವಾಗುವನು. ಈ ಘಟನೆಯಲ್ಲೇ ಶಾಸ್ತ್ರಿಗಳಿಗೆ ಮಗನ ಸಂಕೋಚದ ಅರಿವಾಗುವುದು, ತನ್ನ ನೋವಿನ, ತಪ್ಪಿನ, ಅವಿವೇಕದ ಅರಿವಾಗುವುದು. ಅಂದಿ-ನಿಂದ ಶಾಸ್ತ್ರಿಗಳು, ಮಗನು ಮನೆಯಲ್ಲಿರುವಾಗ ನವ ಹೂಡಿ ಸೊಸೆ-ಯನ್ನು ಅವನ ಬಳಿ ಕಳುಹಲು ತೊಡಗಿದರು. ಹೀಗೆ ಹೃದಯವನ್ನು ವಿಶಾಲವಾಗಿರಿಸಿದ ಶಾಸ್ತ್ರಿಗಳು-ತನ್ನ ಪತ್ನಿಗೂ ಪ್ರಕೃತ ವಿಚಾರದ ಕರ್ತವ್ಯದ ತಿಳುಹನ್ನಿತ್ತು, ಶಾಂತಿಯಲ್ಲೇ ಮರೆಯಾಗುವರು. ಆ ಬಳಿಕಿನ ದಿನಗಳಲ್ಲಿ, ಇಡೀ ಮನೆಯ ಹೊರೆಯು ಶಾರದೆಗೆ ಸಿಕ್ಕರೆ, ಸಿಕ್ಕು ಆಕೆ ಬಡವಾದರೆ, ಕೇಶವನು ದಿಙ್ಮೂಢನಾಗುವನು. ಮನೆಯ ವಾತಾವರಣವೇ ಕೆಡುವುದು. ಒಂದು ದಿನ ಗಂಗಮ್ಮ ತನ್ನ ಅಣ್ಣ-ನೊಡನೆ ಕಾಶಿಗೆ ತೆರಳುವಳು. ಅದೇ ಸಂದರ್ಭದಲ್ಲೇ ಮನೆ ನಾಗ-ರಿಕತೆಯಲ್ಲಿ ಮುನ್ನಡೆಯಿತು, ಹೊಸ ವಾತಾವರಣವನ್ನು ಸೃಜಿಸು-ವುದು. ಶಾರದೆಯು ಕರ್ತವ್ಯವನ್ನು ಮರೆಯದೆ, ಗಂಡನ ಅ ಪ್ರಾಯಕ್ಕೆ ನೇಹದ ಉಡುಗೊರೆಯಿತ್ತು, ಸಹಭಾಗಿನಿಯಾ ಆದರ್ಶಪತ್ನಿಯಾಗಿ ಬಾಳಿ-ಮರಳಿ ಬರಲಿರುವ ಅತ್ತೆಯ ಹೃದಯ ಆಪ್ಯಾಯನವಾಗುವಂತೆ " ನಂದಿಹೋದ ಮನೆಯ ದೇವರ ದೀ ವನ್ನು ಬೆಳಗಿಸಿ " ಅರ್ಚಕನಿಂದ ಪೂಜೆಯನ್ನು ಮಾಡಿಸಿ—ತ ಹಿತೋಕ್ತಿಯಿಂದ ನಾಗರಿಕತೆಯ ಮುಸುಕಿನೊಳಗಿದ್ದ ತನ್ನ ಪತಿ ಮನಸ್ಸನ್ನು ಹೊರಸೆಳೆದು ಉದ್ದೀಪಿಸಿ-ಮನೆಗೆ ಬಂದ ಅತ್ತೆಯನ ಕಣ್ಣೀರಿನಿಂದ ಸ್ವಾಗತಿಸಿ ತಪ್ಪನ್ನು ಒಪ್ಪಿ--"ಹಳೆಯ ಆಚಾರದಲ್ಲ ಹೊಸ ಆಚಾರದಲ್ಲೂ" ಸಮನ್ವಯವನ್ನು ಒಪ್ಪವಾಗಿಸಿ ಸಾಗಿಸ ತ್ತಾಳೆ. ಆಗಲೆ ಒಳಗಿನಿಂದ ಘಂಟಾನಾದವಾಗುವುದು. ಎಂದ ದೇವರ ಕೋಣೆಗೆ ಹೋಗದ ಕೇಶವ ದೇವರ ಕೋಣೆಯಲ್ಲಿ ಕಾ ರಿಸಿ,—ದೇವರಿಗೆ ಕೈಮುಗಿಯುವನು. ಅಂದೆಯೆ ಆ ಜ್ಯೋತಿ ಮೂವರ ಮನೋಮಂದಿರಗಳಲ್ಲೂ ಶಾಂತಿಯನ್ನು ಚೆಲ್ಲಾಡುವುದ ಇದೇ ಸಮನ್ವಯ !

ಸಮನ್ವಯವಿದೊಂದು ಚೆಲುವಿನ ಕಥೆ. ಎರಡು ಸಂಪ್ರದಾಯ ಗಳ ಯೋಗ್ಯವಾದ ಸಮನ್ವಯವನ್ನು ಒಂದು ಉದಾತ್ತವಸ್ತುವಿನ ಎರಕವಾಗಿಸಿ ಸಾಗಿಸಿದ ಈ ಗತಿಯು ಸುಂದರವಾಗಿದೆ. ಕಥೆ ಆದಿಯು ಸಮನ್ವಯಕ್ಕೆ ಒಪ್ಪವಿಡುವ ರೀತಿಯಲ್ಲಿ ಹರಿದುಬಂ ಸಾಗುವ ಹಳೆಬರ ಜೀವನಕ್ರಮದ ಒಂದು ವಿಶಿಷ್ಟವಾದ ಮಾದ ಯಾಗಿದೆ. ಕೇವಲ ಹಳೆಯ ವಾತಾವರಣದಲ್ಲಿದ್ದ ಶಾಸ್ತ್ರಿಗ-ಐತಾಳರು ಪ್ರಸ್ತಾಪಪತ್ರಿದಾಗ ಮದುವೆಯ ಕುರಿತಾಗಿ-ವಧೂವರ ಒಪ್ಪಿತವನ್ನು ಸೂಚಿಸುವ ಬಗೆಯಲ್ಲಾಡಿದ ಮಾತು, ವರದಕ್ಷಿ ಯನ್ನು ಅಲ್ಲಗಳೆವ ಸದುದ್ದೇಶ--ಇವನ್ನು ಆಡಿದಾಗ, ನಿಜವಾ ನಾವು ಆ ಹೃದಯದಲ್ಲಿ ಮೂಡಿದ ಪುತ್ರಪ್ರೇಮವನ್ನೂ—ಕುಟುಂ ಜೀವನದ ಸಾಮರಸ್ಯವನ್ನೂ ಕಾಣಬಹುದು. ಅದರದೇ ಮುಂದಿ ಭಾಗದಲ್ಲಿ ಶಾಸ್ತ್ರಿಗಳ ಸ್ವಭಾವವನ್ನು ಗಂಗಮ್ಮನಂತಹ ಆದರ್ಶ ಪತ್ನಿಯ ಸಹಾನುಭಾವವನ್ನು ಲೇಖಕರು ಸೂಚಿಸಿದ್ದಾರೆ. ಸೂಚನೆಯು-ಈ ಹೃದಯವು-ಸಮನ್ವಯ ಕತೆಯ ಜೀವಾಳವಾ ಹರಿದು ಬರುತ್ತಿರುವಾಗ, ಈ ವಿಧವಾದ ಒಂದು ಪ್ರಸ್ತಾಪನೆ ಅಗತ್ಯವು ಬೇಕೆಂದು ಕಾಣಿಸದಿದ್ದರೂ, ನೀಳ್ಗತೆಯ ದೃಷ್ಟಿಯಿಂದಲ ಸನ್ನಿವೇಶ-ಕಥಾಘಟಿತಗಳ ದೃಷ್ಟಿಯಿಂದಲೂ ಯಾವ ಬಗೆ ಕುಂದನ್ನೂ ಕಾಣಿಸಲಾರದೆಂದೇ ತಿಳಿಯಬೇಕಾಗುತ್ತದೆ. ಶಾಸ್ತ್ರಿ ಉದಾರವರ್ತನೆಯ ಮುಂದೆ--ನಾಗರಿಕ ಹೆಣ್ಣುಮಗಳು ಮನೆ ಕಾಲಿರಿಸಿದ ದಿನದಿಂದಲೇ-ಆಕಾಶಗೋಪುರವನ್ನು ಸವೆದಿದ್ದ ಕೇ ವನು, ತನ್ನ ಆಶೆಯು ಮಣ್ಣುಪಾಲಾಗುವ ಬಗೆಯನ್ನರಿತು ಕೊರಗು ಬಗೆಯನ್ನು, ಲೇಖಕರು ಬಹುಸುಂದರವಾಗಿ ನಿರೂಪಿಸಿದ್ದಾರೆ. ಕೇಶವನ ಮನಸ್ಸಿನಲ್ಲೇಳುವ ಗೊಂದಲಗಳು,-ಪಾರಮಾರ್ಥಿಕ ಪಾ ಲೌಕಿಕಸುಖಗಳ ಅರಿವಿನ ಯಥಾರ್ಥವು ತಂದೆ-ತಾಯಿಗಳಿ ನಿಲುಕಿಲ್ಲವೆಂದು ಬಗೆದು ಕೊನೆದಾಡುವ ಭಾಗಗಳು-ಅದರಿಡೆಯಲ್ಲಿ ಸ್ವಾಭಿಪ್ರಾಯವನ್ನು ಸೂಚಿಸಲು ಮುಂದಾಗುವಲ್ಲಿ ಅವನನ್ನು ತಡೆ

ಸಂಕೋಚಗತಿ ಇವು, ಯಥಾರ್ಥವಾಗಿ ರೂಪುಗೊಳ್ಳುವ ಕೇವಲ ನಾಗರಿಕ ಪ್ರಪಂಚದಲ್ಲೇ ಹಾರಾಡುವ ಯುವಕಹೃದಯದ ಸತ್ಯ ಸ್ವರೂಪವಲ್ಲದೆ ಮತ್ತೇನು ? ಈ ತರುಣಜೀವನದ ಎಡೆಯಲ್ಲೇ ಲೇಖಕರು ನಿರೂಪಿಸಿದ, 'ಶಾರದೆ'ಯ ಚಿತ್ರವು ಅನ್ಯಾದೃಶವಾಗಿದೆ. ಯೋಗ್ಯಗೃಹಿಣಿಯಲ್ಲಿ ತುಂಬಿದ ಭಾವಮಾಧುರ್ಯವನ್ನು ಆಕೆ ಹೊರಚೆಲ್ಲಿದ್ದಾಳೆ. ಅತ್ತೆ-ಮಾವಂದಿರ ಕಣ್ಮಣಿಯಾಗಿ ಆಕೆ ಸಾಗಿದ್ದಾಳೆ. ಹಳೆಯ ಸಂಪ್ರದಾಯದಲ್ಲೇ ಕಾಲಿರಿಸುತ್ತಿದ್ದ ಆಕೆ, ಅತ್ತೆ-ಮಾವಂದಿರ ಹಿತದಂತೆ ನಡೆದುಕೊಂಡು, ತನ್ನಲ್ಲಿ ನಾಗರಿಕತೆಯ ಪರಮಾವಧಿಯೂ ಇದೆಯೆಂದು ತನ್ನವರಿಗೆ ಗಂಡನೊಡನೆ ತೆರಳದೆಂದು ತೋರಿಕೊಟ್ಟು, ಆತನ ಹೃದಯದಲ್ಲೂ ನಿರಾಶೆಯ ಹೊನಲನ್ನು ಏಳಿಸದೆ, ನಾಗರಿಕತೆ-ಸಂಪ್ರದಾಯ ಹಳತು-ಹೊಸತು ಇವುಗಳ ಗತಿಯಲ್ಲಿ ಸಮನ್ವಯವನ್ನು ತಂದೊಪ್ಪಿಸಿ ಸಾಗಿದ ಬಗೆ ಪೂರ್ಣಸೌಸ್ಠ್ಯವಾಗಿದೆ. ಆದರೆ ಗಂಡನ ಮನೆಯಲ್ಲಿ ಆಕೆ ತೋರಿಸುತ್ತಿದ್ದ ಪತಿಯ ವಿಷಯಕವಾದ ಅನಾಸಕ್ತಿ, ಗಂಡನ ಅನಾರೋಗ್ಯದ ಮುಂದೆ ಬಲವಾದ ಪ್ರಶ್ನೆಯೆತ್ತಿದಂದು ಮಾತ್ರ ಆಕೆ ದಿಙ್ಮೂಢಳಾಗಿ-ಒಂದೊಮ್ಮೆ ಕಂಗಾಲಾದರೂ, ಪುನಃ ನೇರವಾದ ದಾರಿಗಿಳಿದು, ಪತಿಯಯೋಗಕ್ಷೇಮದಲ್ಲಿ ಕಾಲಿರಿಸಿ-ಸಾಗಿದ ಬಗೆಯು-ಲೇಖಕರ ನಿರೂಪಣೆಯದೊಂದು ವೈಶಿಷ್ಟ್ಯವೇ ಸರಿ! ಆದರೂ ಅತ್ತೆ-ಮಾವಂದಿರಿಗೆ ಅಹಿತವನ್ನುಣ್ಣಿಸದೆ ಪತಿಯ ಯೋಗದಲ್ಲೂ ಕ್ಷೇಮವನ್ನು ಬಿಸಿ-ಮಾವನ ಮರಣಾನಂತರ ದುಡಿದ ಬಗೆ, ಅತ್ತೆ ಕಾಶೀಯಾತ್ರೆಗೆ ತೆರಳಿದಾಗ ತೋರಿದ ಪತಿವಿಷಯಾಸಕ್ತ ಹೃದಯಾನುಸಂವೇದನೆ—ಒಪ್ಪುವ ಸ್ತ್ರೀಜೀವನದ ತಿರುಳಲ್ಲದೆ ಮತ್ತೇನು? ಅದೆಂತಿದ್ದರೂ ಅತ್ತೆಯ ಸಮಾಗಮಕಾಲದಲ್ಲಿ ಆಕೆಯು ಪತಿಯೊಡನೆ ವಾದಿಸಿ "ಮನುಷ್ಯನಿಗೆ ಸ್ವಾರ್ಥಸಾಧನೆಯೊಂದೇ ಗುರಿಯಲ್ಲ; ಇತರರ ಸುಖ-ಸೌಕರ್ಯಗಳ ಕಡೆಗೂ ಲಕ್ಷ್ಯಬೇಕಾಗುವುದು. "—ಮತ್ತೇನು ಮಾಡಬೇಕೆನ್ನುವಿರಿ ? ಸ್ವಾರ್ಥಲೋಲುಪರಾಗಿ ತಾಯಿಯನ್ನು ಬಲಿಗೊಡುವಿರಾ? ಇದನ್ನು ನಾನು ಸಹಿಸಲಾರೆ" ಎಂದೆನ್ನುವ ಮಾತು, ಆ ಮಾತಿಗನುವಾಗುವಂತೆ ಮನೆಯಲ್ಲೇರ್ಪಡಿಸಿದ ಪೂಜಾವಿಧಾನದ ಸಮರ್ಥತೆಗೆ ಕೇಶವನ ಮನಸ್ಸನ್ನು ಒಲಿಸುವುದು— ಇದು ವಿದ್ಯಾವಂತ-ಸುಸಂಸ್ಕೃತ-ನಾಗರಿಕ ತರುಣಿಯರಿಗೊಂದು ಪಾಠವಲ್ಲದೆ ಮತ್ತೇನು ? ಶಾರದೆಯೇ ಮನೆಯನ್ನು ಬೆಳಗಿದವಳು. ಆಕೆಯೇ ಸಮನ್ವಯದ ರಜತಪರದೆಯನ್ನು ನೆಳೆದವಳು. ಜೀವನದ ಗತಿಯಲ್ಲಿ ಹಳೆ-ಹೊಸದರ ತಾಕಲಾಟದಲ್ಲಿ ಬೆಳ್ಳಿಮೂಡಿಸಿ ಕೇಶವನನ್ನು ಬೆಳಗಿಸಿದ ಆದರ್ಶಪತ್ನಿ ಶಾರದೆ ಗೃಹಿಣಿಯೇ ಸರಿ ! ಇಡೀ ಕತೆಯ ಜೀವನಾಡಿ ಶಾರದೆ. ಶಾರದೆ ಪತಿಗನುಕೂಲವಾಗಿ ಮೊದಲೇ ನಡೆದಿದ್ದರೆ, ಈ ತಾಕಲಾಟದಲ್ಲಿ ಅತ್ತೆ- ಮಾವಂದಿರ ಗತಿ ? ಆಕೆ ಹಾಗಾಗಿಸಲಿಲ್ಲ. ಒಂದು ಸಮನ್ವಯದ ರೇಖೆಯನ್ನು ಮೊದಲೇ ಸೆಳೆದು, ಕ್ರಮೇಣ ಅದಕ್ಕೊಂದು ಆಕಾರ ಬಲಿದು, ಮನೆಯನ್ನು ತುಂಬಿದಳು.

ಕತೆಯನ್ನು ಅನುಗೊಳಿಸಿದ ಬಗೆಯಲ್ಲಿ-ಇಷ್ಟು ದೀರ್ಘವಾಗಿದ್ದರೂ ಈ ಕತೆಯು—ಯಾವುದೊಂದು ಭಾಗದಲ್ಲೂ ಕುಸಿದಿಲ್ಲವೆಂದು ಹೇಳಬಹುದು. ಮೊದಲೇ ಹೇಳಿದಂತೆ, ಶಾಸ್ತ್ರಿಗಳ—ಗಂಗಮ್ಮನ—ಗುಣನಿರೂಪಣೆಯನ್ನು ಜೋಡಿಸದಿರುತ್ತಿದ್ದರೂ ಕೆಡುತ್ತಿದ್ದಿಲ್ಲವೆಂದು ಮಾತ್ರ ಹೇಳಬಹುದು. ಭಾಷೆಯೂ ಶೈಲಿಯೂ ಈ ಕತೆಗೆ ಅನುಗುಣವಾಗಿದ್ದು, ಸಮನ್ವಯ ದೃಷ್ಟಿಯಿಂದಲೇ ಸಾಗಿ, ಸಂಭಾಷಣೆಯಲ್ಲೂ ನಾಗರಿಕ ಜನಾಂಗದ ಸಂಭಾಷಣೆಯ ಶಕ್ತಿಯನ್ನೇ ಒಳಗೊಂಡು ಸಾಗಿದೆಯೆನ್ನಲೇಬೇಕು. ಇದಕ್ಕೆ ಕೇಶವ ಶಾರದೆಯರ ವಿಲಾಸಸಂಭಾಷಣೆಯೂ (ರಿಸ್ಟವಾಚ್ ಕೊಡುವಲ್ಲಿ) ಕೊಂಕುಮಾತೂ (ಕಾಶೀಯಾತ್ರೆಯ ಹಾಗೂ ರಾಮಾಯಣದ ಓದಿನ ಕಾಲದಲ್ಲಿ) ಜೀವನದ ಮರ್ಮಸ್ಪರ್ಶಿಯಾದವೂ (ಮನೆಯಲ್ಲಿ ಅರ್ಚಕನನ್ನಿರಿಸಿದಕಾಲದಲ್ಲಿ) ಸಾಕ್ಷಿಯಾಗಿದೆ. ಅಂತೂ ಪ್ರಕೃತಕಥೆಯು ಸುಂದರವಾಗಿಯೆನ್ನಲು ಯಾವ ಅಡ್ಡಿಯೂ ಇಲ್ಲ. ವ್ಯಕ್ತಿ-ಭಾವ-ಸೌಖ್ಯ ಇವುಗಳ ಮಿಲನವೇ ಸಮನ್ವಯ!

—O—

ಮಕ್ಕಳ ಸದೃಢತೆ-ಗಾಗಿ

"ಬಗನ ಬಾಲಾ-ಮೃತ"

ಹಲ್ಲು ಬರುವಾಗ

"ಎಸ್ಸೆನ್ಸ ಗ್ರಾಇಪ್" ಹೀಲರ್

ಜಂತು ಆದರೆ



"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ನಾಟಕಾಲಂಕಾರದ ಪ್ರಸ್ತಾವನೆ

[illegible]

JAYANTI Septamber 1954 R. No. B. 4161

ಓದಿದರೆ ರಸಪೂರ್ಣ ಕಥೆಗಳು, ಆಡಿದರೆ ಮನೋಹರ ನಾಟಕಗಳು !

ಇದರಲ್ಲಿ 'ಬೆಂದಹೃದಯ' 'ಕಾಣದ ಕೈ' ಹುಡುಗರ ಆಟ' ಸಾಮಾಜಿಕ ಚಿತ್ರಗಳು

'ಸೀಮೋಲ್ಲಂಘನ' ವಿಜಯನಗರದ ಇತಿಹಾಸದ ಒಂದು ರಮ್ಯಚಿತ್ರ

'ಶಿವಭಕ್ತ ನಂದನಾರ್' ಭಕ್ತಿರಸ ಪ್ರಪೂರ್ಣ ಸುಂದರ ನಾಟಕ.

ಕ್ರೌ. ಅ. ೧೨೦ ಪುಟಗಳು ಬೆಲೆ ೧—೪—೦

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ.

Printed by S. G. Kulkarni at the SadhanaPress, Dharwar. and pulished for the Proprietors Jayanti publications, by S. D. Dharmatti at the Jayanti Office Dharwar.

ಜಯಂತಿ

ಅಕ್ಟೋಬರ್ ೧೯೩೪

ಧಾರವಾಡದ ಸೆಷನ್ಸ್ ನ್ಯಾಯಮಂದಿರದ ಒಂದು ನೋಟ

ಬೆಲೆ : ೮ ಆಣೆಗಳು

ಸಂಚಿಕೆ

JAYANTI

ಈ ಸಂಚಿಕೆಯಲ್ಲಿ :

ಮಹಾತ್ಮರ ಉಪದೇಶದ ಭೀಕರವಿಸ್ಮೃತಿ (ಸಂಪಾದ..
ಸಂಪಾದಕರು ೧೬೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೬೩

ಶಾಂತ-ಅನಂತ (ಸಣ್ಣಕತೆ)
ಶ್ರೀ ವೆಂ. ಮು. ಜೋಶಿ, ಧಾರವಾಡ ೧೬೫

ಬಿರುಗಾಳಿಯ ಬಲ
ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ.
ಹೈದರಾಬಾದ್ ೧೬೯

ಓಯಾಸಿಸ್ (ಕವನ)
ಶ್ರೀ. ಗಿರೀಶ ಕಾರ್ನಾಡ, ಧಾರವಾಡ ೧೬೯

ಕರ್ನಾಟಕದ ವಾಗ್ಗೇಯಕಾರರು (ಶ್ರೀ ಪುರಂದರದಾಸರು)
ಶ್ರೀ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ ೧೭೦

ಸಮಸ್ಯೆಯ ಕಳ್ಳ (ಸಣ್ಣಕತೆ)
ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ ೧೭೩

ಡಾಕ್ಟರ ಮತ್ತು ಅವನ ಪ್ರಯೋಗಗಳು (ಪರಿಚಯ)
ಶ್ರೀ. ಟಿ. ಆರ್. ನಾಡಿಗೇರ, ಬಿ. ಎಸ್‌ಸಿ. (ಆನರ್ಸ)
ಬಿ. ಎಸ್‌ಸಿ. (ಟೆಕ್.), ಮುಂಬಯಿ ೧೭೬

ನಿಸರ್ಗ ಸ್ವರ್ಗ (ಕವನ)
ಶ್ರೀ. ಅರವಿಂದ ನಾಡಕರ್ಣಿ, ಬಿ. ಎ., ಎಲ್‌ಎಲ್. ಬಿ.
ಬಂಕಿಕೊಡ್ಲ ೧೮೩

ಕಾಣದೆ ನೋಡುವುದು (ಹರಟೆ)
ಶ್ರೀ. ಶಂಕರ ವಿ. ಜೋಶಿ, ಬಿ. ಎ., ಎಲ್‌ಎಲ್. ಬಿ.
ಧಾರವಾಡ ೧೮೪

ಎಲ್ಲ ಈ ಲೀಲೆ ಓ ದಿವ್ಯಶಕ್ತಿ! (ಕವನ)
'ನಿರಂಜನ' ಭಟ್ಟ, ಮುಂಬಯಿ ೧೮೬

ಭಾವಪಂಚಮಿ (೫ ಕಿರುಗತೆಗಳು)
ಶ್ರೀ. ಹಾ. ವೆಂ. ನಾಗೇಶ, ಕಲ್ಬುರ್ಗಿ ೧೮೭

ಧಾರವಾಡದ ಮಲ್ಲಸಜ್ಜನ ವ್ಯಾಯಾಮಶಾಲೆ (ಸಂದರ್ಶನ)
ಒಬ್ಬ ವ್ಯಾಯಾಮಪ್ರೇಮಿಗಳು ೧೮೯

ಸುಪ್ರಭಾತ (ಕವನ)
ಶ್ರೀ. ವೆಂಕಟರಾಯ ಪ್ರಭು, ಜ್ಯೂ. ಎಂ. ಎ.
ಮುಂಬಯಿ ೧೯೨

ಬುದ್ಧಿವಂತ ಮಕ್ಕಳಶಾಲೆ (ಶೈಕ್ಷಣಿಕ)
ಶ್ರೀ. ನಗರ ಕೃಷ್ಣಾಚಾರ್ಯ, ಬಿ. ಎ., ರಂಗಂಪೇಟೆ ೧೯೩

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ, 'ವಿದ್ವಾನ್' ಕಾಸರಗೋಡು ೧೯೭

ಸಾದರ ಸ್ವೀಕಾರ.... (ಕವ್ಹರ್ ೩ನೆಯ ಪುಟದಲ್ಲಿ)

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ
ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾಗುವ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. ಹಸಿವೆ, ಸ್ಮರಣಶಕ್ತಿ ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮುಶ್ರಿ, ಶಾಬಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಕಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೪೮ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭-೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: **ವಿ. ಎಸ್. ಕಾಪಸೇ,** ಶನಿವಾರ ಪೇಟ
ಮು. ಪೋ. ಮಿರಜ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟ ಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಿಗಿ

ಜಯಂತಿ

ಸಂಪುಟ ೧೭ ಸಂಚಿಕೆ ೫

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮಾ

ವ್ಯವಸ್ಥಾಪಕರು :
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

◆ ಸಂಪಾದಕೀಯ ◆

ಮಹಾತ್ಮರ ಉಪದೇಶದ ಭೀಕರ ವಿಸ್ಮೃತಿ

ಮಹಾತ್ಮಾ ಗಾಂಧಿಯವರು ಹೇಳಿದ ಮಾತುಗಳ ಸುರಿಮಳೆ ಮಾತ್ರ, ನಮ್ಮ ದೇಶದಲ್ಲಿ ಎಲ್ಲೆಲ್ಲಿಯೂ ನಡೆದಿದೆ; ಆದರೆ ಅವರು ಹೇಳಿರುವ 'ಮಾತಿನಂತೆಯೆ ಕೃತಿಯೂ ಬೇಕು!' ಎಂಬುದರ ಕಡೆಗೆ ಯಾರೂ ಲಕ್ಷ್ಯವನ್ನೇ ಕೊಡುತ್ತಿಲ್ಲನೆಂಬುದು, ಎಲ್ಲ ಕಡೆಗೂ— ಎಲ್ಲ ವಿಷಯಗಳಲ್ಲಿಯೂ— ಕಂಡುಬರುತ್ತಲಿದೆ.

ಮಹಾತ್ಮರಿಗೆ, ಭಾರತೀಯರ ಪರಾಧೀನಜೀವನಕ್ಕಿಂತ ಇಲ್ಲಿಯ ಬಹುಸಂಖ್ಯಾತರಾದ ಬಡವರ ಬವಣೆಯು ಹೆಚ್ಚು ಮಹತ್ತ್ವದ್ದಾಗಿ ಕಾಣುತ್ತಿದ್ದಿತು. ಅದನ್ನು ಹೋಗಲಾಡಿಸುವುದಕ್ಕಾಗಿಯೆ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯಬೇಕೆಂದು ಹಲವು ರೀತಿಗಳಿಂದ ಹೋರಾಟವನ್ನು ನಡೆಯಿಸಿದರು. ಅವರ ಹೋರಾಟದ ಫಲವಾಗಿ, ಭಾರತದ ರಾಜಕೀಯ ಪರಾಧೀನತೆಯೇನೋ ಹೊರಟುಹೋಯಿತು; ಆದರೆ ಭಾರತದ ಬಡತನವು ಎಂದಿನಂತೆಯೆ ಹಲವು ಜನರನ್ನು ಕಷ್ಟ-ಕೋಟಲೆಗಳ ಕೋಟೆಯಲ್ಲಿ ಕೆಡಹಿಬಿಟ್ಟಿರುವುದು

ಮೊದಲಿನಿಂದಲೂ ಬಡವರಾಗಿದ್ದವರಲ್ಲದೆ, ಈಗ ಹೊಸತಾಗಿ ಬಡವರಾಗುತ್ತಿರುವವರು ಅವರಲ್ಲಿ ಸೇರಿ, ಭಾರತದಲ್ಲಿಯ ಬಡವರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ. ಮಹಾತ್ಮರು ಹೇಳಿದ ಸರಳ-ಸಾದಾಜೀವನದ ಆದರ್ಶವು, ಇಂದು ನಮ್ಮ ಜನರ ಕಣ್ಣಿಂದ ಮರೆಯಾಗಿದೆ. ಇಂದಿನ ನಮ್ಮ ಆಡಳಿತದ ಪದ್ಧತಿಯೂ ಮಹಾತ್ಮರ ಆದರ್ಶಗಳನ್ನು ಬಿಟ್ಟು ಬೇರೆಯ ದಾರಿಯಿಂದಲೇ ಹೊರಟಿದೆ ಮಹಾತ್ಮರು ಜೀವಿಸಿರುವ ಕಾಲದಲ್ಲಿ ಜನತೆಗೆ ತ್ಯಾಗವನ್ನು ಉಪದೇಶಿಸುತ್ತ ತಿರುಗುತ್ತಿದ್ದ ಧುರೀಣರುಗಳೇ, ಇಂದು ಭೋಗವನ್ನು ಮೋಹಿಸಿ ಅದರ ಬೆನ್ನುಹತ್ತಿ ಹೊರಟಿದ್ದಾರೆಂದು ಜನತೆಗೆ ಎನಿಸುತ್ತಿದೆ. ಆದುದರಿಂದ, ಧುರೀಣರೆನಿಸಿಕೊಳ್ಳುವ ಯಾರ ಮಾತನ್ನೂ ಜನತೆ ವಿಶ್ವಾಸದಿಂದ ಕಾಣದಾಗಿದೆ.

ಬ್ರಿಟಿಷರು ಹೊರಟುಹೋಗುವಾಗ, ಭಾರತದ ಬೊಕ್ಕಸವನ್ನವರು ಬರಿದುಮಾಡಿ ಹೋದುದೇನೋ ಸರಿಯೆ. ಹೊಸ ರಾಜ್ಯಾಧಿಕಾರಿಗಳಿಗೆ ಆಡಳಿತಕ್ಕಾಗಿ ಹಣವು ಬೇಕಾಯಿತು; ಅದಕ್ಕಾಗಿ ಬಡವರು, ಸಿರಿವಂತರು— ಎಲ್ಲರೂ ಕರದ ಭಾರವನ್ನು ಹೊರಬೇಕಾಯಿತು. ಇದರಿಂದ ಬಡವರ ಬವಣೆ ಇನ್ನಿಷ್ಟು ಹೆಚ್ಚಿತು. ಆದಾಯದ ಅಂಕೆಗಳಲ್ಲಿ ಹೆಚ್ಚು ಏನೂ ಇಲ್ಲ; ವ್ಯಯದ ಅಂಕಿಗಳು ಮಾತ್ರ ದಿನದಿನಕ್ಕೂ ಹೆಚ್ಚಾಗುತ್ತಿವೆ. ಇನ್ನೂ ಒಂದು ವಿಷಯವೆಂದರೆ, ಬ್ರಿಟಿಷರ ಕಾಲದಲ್ಲಿಯೂ ಕಂಡುಬಾರದಿದ್ದಂತಹ ಸಾಮಾಜಿಕಶೈಥಿಲ್ಯವೊಂದು ಈಗ ಹೆಚ್ಚಾಗಿ ಕಾಣಿಸಿದೆ ಇದಕ್ಕೆ ಕಾರಣವೆಂದರೆ, ಮಹಾತ್ಮರಂತಹ ಅಧಿಕಾರವಾಣಿಯಿಂದ, ಸಮಾಜಕ್ಕೆ ಕಾಲೋಚಿತ ಆದರ್ಶಗಳನ್ನು ಬೋಧಿಸುವ ಧುರೀಣರೇ ಈಗ ಉಳಿದಿಲ್ಲ.

ರಾಜಕೀಯ ಅಧಿಕಾರದಲ್ಲಿ ಇರುವವರು, ಜನತೆಯ ಕಣ್ಣಿಗೆ ಭೋಗಿಗಳಾಗಿ ತೋರುವುದು ಸಹಜವೇ ಆಗಿದೆ; ಆದರೆ ಸಮಾಜಸೇವೆಗೆಂದೇ ಇರುವ ಅಲ್ಲಲ್ಲಿಯ ಕಾಂಗ್ರೆಸ್ ಸಂಸ್ಥೆಗಳ ಅಧಿಕಾರಿಗಳೂ ಇಂದು ಬಡವರನ್ನು ಕಡೆಗಣಿಸಿ, ಮೋಟಾರು-ವಿಮಾನಗಳಲ್ಲಿ ಕುಳಿತು ಮೆರೆಯುತ್ತಿರುವುದು, ಜನರನ್ನು ಇನ್ನಿಷ್ಟು ತಪ್ಪುತಿಳಿವಳಿಕೆಯಲ್ಲಿ ನೂಕಿದೆ. ಭೋಗವೇ ಇಂದು ನಮ್ಮ ಜನತೆಯ ಕಣ್ಣೆದುರಿನ ಆದರ್ಶವಾಗಿ ಕುಳಿತಿದೆ; ಅದಕ್ಕಾಗಿಯೇ ಈಗ ಪ್ರತಿಯೊಬ್ಬನೂ ಹಂಬಲಿಸುತ್ತಿದ್ದಾನೆ. ಇದು ರಾಷ್ಟ್ರದ ಆರೋಗ್ಯದ ಲಕ್ಷಣವೆ?

ನಮ್ಮಲ್ಲಿ ಶಿಕ್ಷಣಕ್ಕೊಂದು ಸರಿಯಾದ ಗುರಿಯೇ ಇಲ್ಲವಾಗಿದೆ. ಎಲ್ಲರಿಗೂ ಅಕ್ಷರ ಶಿಕ್ಷಣವನ್ನು ಕೊಡಬೇಕೆಂದು ಇಂದಿನ ನಮ್ಮ ಸರಕಾರಗಳು ಉದ್ದೇಶವನ್ನಿಟ್ಟುಕೊಂಡಿವೆ. ಉದ್ದೇಶ ತಪ್ಪೆಂದು ತೋರುವುದಿಲ್ಲವಾದರೂ, ಅಕ್ಷರಶಿಕ್ಷಣದ ಗುರಿಯು ನೌಕರಿಯೇ ಎಂದು ನಮ್ಮ ಜನರು ತಿಳಿದಿರುವುದರಿಂದ, ಅದರ ದುಷ್ಪರಿಣಾಮವು ಮಾತ್ರ ಎಲ್ಲ ಕಡೆಗೂ ಕಂಡುಬರುತ್ತಲಿದೆ.

ಕಲಿತ 'ಬಿಳಿಛಾಯೆಯ' ತರುಣರು ಒಕ್ಕಲುತನ, ಮನೆ-ಕೈಗಾರಿಕೆ— ಮೊದಲಾದ ದೇಹಶ್ರಮದ ಕೆಲಸಗಳನ್ನು ಮಾಡುವುದಕ್ಕೆ ಸಿದ್ಧರಾಗುವುದಿಲ್ಲ; ಕಲಿತವರನ್ನೆಲ್ಲ ಹಿಡಿದಿಡುವಷ್ಟು ಸರಕಾರೀ ನೌಕರಿಗಳೂ ಇರುವುದಿಲ್ಲ. ಇದರಿಂದ ನಿರುದ್ಯೋಗಿಗಳ ಸಂಖ್ಯೆ ದಿನ-ದಿನಕ್ಕೂ ಹೆಚ್ಚುತ್ತಲಿದೆ. ಹಳ್ಳಿಗಳಲ್ಲಿ ಕೂಡ ಕಲಿತ ನಿರುದ್ಯೋಗಿಗಳ ತಂಡವು ಈಗ ಕಣ್ಣಿಗೆ ಬೀಳುವುದು. ಎಂದೆಂದೂ ನೋಡದಿದ್ದ ನೋಟವಿದು!

ಇದೇ ರೀತಿಯ ಶಿಕ್ಷಣಪದ್ಧತಿಯು ಮುಂದುವರಿದರೆ, ಹಳ್ಳಿಗಳು ಹಾಳಾಗುವುದು ಖಂಡಿತವಾದ ಮಾತು. ಅಲ್ಲಿ ಒಕ್ಕಲಿಗರ ಸಂಖ್ಯೆಯೂ ಕಡಿಮೆಯಾಗುವುದು; ಒಕ್ಕಲುತನಕ್ಕೆ ಬೇಕಾಗುವ ಕೂಲಿಕಾರರ ಸಂಖ್ಯೆಯೂ ಕಡಿಮೆಯಾಗುವುದು. ಕಲಿತ ಜನರು 'ಬಿಳಿಛಾಯೆಗೆ' ಮೆಚ್ಚುವವರಾದುದರಿಂದ, ಕೈನೂಲು ಕೈಮಗ್ಗಗಳಂತಹ ಕಾಮಧೇನುಗಳಿಗೂ ಬದುಕಿ ಇರಲು ಅವಕಾಶವಿಲ್ಲದಂತಾಗುವುದು. ಅಗ್ಗದ ಬೆಲೆಗೆ ಅಂದವಾದ ಗಿರಣಿಯ ಬಟ್ಟೆಗಳು ಬೇಕಾದಷ್ಟು ಪೇಟೆಯಲ್ಲಿ ದೊರೆಯುತ್ತಿರುವಾಗ, ಕೈನೂಲಿನ ಒರಟುಬಟ್ಟೆಯನ್ನು ಅವರು ಏತಕ್ಕಾಗಿ ತೊಡಬೇಕು? ತೊಡದೆ ಇರುವಂತಹ ಉಪದೇಶವನ್ನು ಹೇಳಲು ಈಗ ಇರುವರಾದರೂ ಯಾರು?

ಕಲಿತವರಾದ ಕೆಲವು ಸುದೈವಿಗಳಿಗೆ ಸರಕಾರದ ನೌಕರಿಗಳೇನೋ ಸಿಗುವುವು; ಆದರೆ ಪ್ರಾಮಾಣಿಕತೆ ಇರದುದರಿಂದಲೋ, ಸಾಮರ್ಥ್ಯ ಸಾಲದುದರಿಂದಲೋ ಅವರು, ರಾಷ್ಟ್ರೀಯ ಭಾವನೆ-ಜನಹಿತಬುದ್ಧಿಗಳಿಂದ ಕೆಲಸ ಮಾಡುತ್ತಲೇ ಇಲ್ಲ. ಮಹಾತ್ಮರು ಸಾರಿರುವ ಜೀವನತತ್ತ್ವಜ್ಞಾನವು ಅವರ ಹೃದಯ-ಮನಗಳನ್ನು ಸೋಂಕುತ್ತಲೇ ಇಲ್ಲ. ಸರಕಾರದ ಯಾವ ಕಾರ್ಯಾಲಯದಲ್ಲಿಯೂ ಇಂದು ಅನವಸ್ಥೆ ತುಂಬಿದೆ. ಕರ್ತವ್ಯಬುದ್ಧಿಯಿಂದ ತಾವೂ ದುಡಿದು ಕೆಳಗಿನವರಿಂದ ಜಡಿದು ಕೆಲಸಮಾಡಿಸಿಕೊಳ್ಳುವ ಸಮರ್ಥರಾದ ಮೇಲಧಿಕಾರಿಗಳಿಲ್ಲ. ತಾವು ಮಾಡುತ್ತಿರುವುದು ದೇಶದ ಕೆಲಸವೆಂದು, ಪ್ರಾಮಾಣಿಕ ಭಾವನೆಯಿಂದ ದುಡಿಯುವ ಕೆಳಗಿನ ನೌಕರರಿಲ್ಲ. ಪ್ರತಿಯೊಂದು ವಿಷಯದಲ್ಲಿಯೂ 'ತೆಕ್ಕೆ ಹೆಚ್ಚು ತೆಕ್ಕೆ ಕಡಿಮೆ' ನಡೆದುಬಿಟ್ಟಿದೆ. ಸಂಧಿಸಾಧಕರಾದ ಸ್ವಾರ್ಥಿಗಳಿಗಿದು ಸುಗ್ಗಿಯ ಕಾಲವಾಗಿದೆ. ಮಹಾತ್ಮರು ಮರೆಯಾಗಿ ಏಳು ವರುಷಗಳಷ್ಟು ಅಲ್ಪ-ಕಾಲವಾಗಿದ್ದರೂ, ಅವರ ಆದರ್ಶಬೋಧೆಯ ಮರೆವು ಸಾವಿರ-ಸಾವಿರ ವರ್ಷದ ದೀರ್ಘಕಾಲದುದೆಂದು ಎನಿಸುವಂತಿದೆ. ದೇಶದ ದುರ್ಧರವಾದ ದುರ್ದೈವ!

ವಿಜ್ಞಾನದ ಪ್ರಗತಿಯು ದಿನ-ದಿನಕ್ಕೂ ಭೋಗಸಾಧನಗಳನ್ನು ಹೆಚ್ಚಿಸುತ್ತಿದೆ. ಅವುಗಳನ್ನು ಸಂಪಾದಿಸಲು ನಮ್ಮಲ್ಲಿಯ ಸಿರಿವಂತರಿಗೂ ಹಣವು ಸಾಲದಾಗಿದೆ. ತನಗೇ ಸಾಲದೆನ್ನುವವನು ಇನ್ನೊಬ್ಬನಿಗೆ ಕೊಡಲು ಮುಂದುವರೆಯುವನಾದರೂ ಹೇಗೆ? ಸಿರಿವಂತರ ಹಣವು ದೇಶದ ಬಡವರ ಕಡೆಗೆ ತಿರುಗದೆ ಹೋದರೆ, ಬಡವರ ಬಡತನವು ಹಿಂಗುವುದಾದರೂ ಹೇಗೆ? ತಾವಾಗಿಯೇ ತಿಳಿದು ಅವರು ಬಡವರಿಗೆ ಕೊಡುವಂತಿಲ್ಲ. ನಮ್ಮ ಸರಕಾರಗಳು ಜನತೆಯವೆನಿಸಿಕೊಳ್ಳುತ್ತಿದ್ದರೂ, ಸಿರಿವಂತರ ವಿಷಯದಲ್ಲಿ ದಾಕ್ಷಿಣ್ಯವನ್ನಿರಿಸಿಕೊಂಡೇ ನಡೆದಿರುವುವಾದುದರಿಂದ, ಅವರ ಮೇಲೆ ಯಾವ ಬಗೆಯ ಒತ್ತಾಯವನ್ನೂ ಮಾಡುವಂತಿಲ್ಲ; ಬಡವರ ಹಿತದ ಕಡೆಗೆ ನೋಡಬೇಕೆಂದು ಅವರಿಗೆ ಎಚ್ಚರಿಕೆ ಕೊಡಬೇಕೆನ್ನುವಂತಹ ನೈತಿಕ ಧೈರ್ಯವನ್ನೂ ತೋರಿಸುವಂತಿಲ್ಲ.

ಕೇಂದ್ರ ಸರಕಾರದಲ್ಲಿರುವ ಕೆಲವೊಂದು ಆದರ್ಶವಾದಿಗಳ ಹಂಬಲದ ಪರಿಣಾಮವಾಗಿ, ಬೇರೆ ಬೇರೆ ಯೋಜನೆಗಳ ಹೆಸರಿನಿಂದ ಹಣದ ರಾಶಿಯೇನೋ ಕರಗುತ್ತಲಿದೆ, ಸರಿ! ಆ ಕರಗುತ್ತಲಿರುವ ಹಣವು ಮತ್ತೆಮತ್ತೆ ಹೊಟ್ಟೆತುಂಬಿದವರ ಬೊಕ್ಕಸಕ್ಕೇ ಹೋಗಿ ಬೀಳುತ್ತಿದೆಯೇನೋ! ಏಕೆಂದರೆ, ಜನತೆಯಲ್ಲಿ ದಿನದಿನಕ್ಕೆ ಹೆಚ್ಚುತ್ತಿರುವ ಬಡತನದ ಪ್ರಮಾಣವು ಕಡಿಮೆಯಾದುದೇನೂ ಕಾಣಲೊಲ್ಲದಾಗಿದೆ. ಇದರಲ್ಲಿಯೇ ನಮ್ಮ ಆಡಳಿತಗಳ ಸಮ್ಮಿಶ್ರ ರಾಜಕೀಯ ತತ್ತ್ವಜ್ಞಾನದ ಪರಿಣಾಮವಾಗಿ, ಒಂದು ಕಾಲದಲ್ಲಿ ಆರ್ಥಿಕದೃಷ್ಟಿಯಿಂದ ಮಧ್ಯಮ ತರಗತಿಯವರೆಂದು ಎನಿಸಿಕೊಳ್ಳುತ್ತಿದ್ದವರೆಲ್ಲ ಇಂದು ಬಡವರಿಗಿಂತ ಬಡವರಾಗಿ, ಬಸಿಯುಸಿರಿನ ಬಾಳನ್ನು ನೂಕುತ್ತಿದ್ದಾರೆ. ಇವರ ಜೀವನಸಮಸ್ಯೆಯನ್ನು ಬಿಡಿಸುವವರಿಂದು ಯಾರೂ ಇಲ್ಲ. ಮಹಾತ್ಮರ ರಾಜಕೀಯ ತತ್ತ್ವಜ್ಞಾನವು ಈ ಆಭಾಸಾತ್ಮಕ ರಾಜ್ಯಪದ್ಧತಿಯನ್ನು ಎಂದೂ ಒಪ್ಪಲಾರದು. ಮಾನವಕಲ್ಯಾಣವೇ ಅವರ ರಾಜಕೀಯ ತತ್ತ್ವದ ತಿರುಳು. ಆದರೆ ಇಂದಿನ ಸರಕಾರಗಳು ಮಾಡುತ್ತಿರುವ ಹೊಸ ಹೊಸ ಕಾಯಿದೆಗಳನ್ನು ನೋಡಿದರೆ, ಅವುಗಳ ಹಿಂದೆ ಸರ್ವರ ಹಿತದ ಸಹೃದಯತೆಯು ಇರದೆ, ದ್ವೇಷ-ಮತ್ಸರಗಳು ಅಡಗಿ ಕುಳಿತಿವೆಯೆಂಬುದು ಯಾವ ಸೂಕ್ಷ್ಮವಿಮರ್ಶಕನಿಗೂ ಚೆನ್ನಾಗಿ ತಿಳಿದುಬರುವಂತಿದೆ.

ಅಯ್ಯೋ! ಲೋಕವನ್ನೇ ಮಾರುಗೊಂಡಿದ್ದ ಮಹಾತ್ಮರ ತತ್ತ್ವಜ್ಞಾನವು, ಅವರ ತರುವಾಯ ಇಷ್ಟೊಂದು ಅಲ್ಪಾವಧಿಯಲ್ಲಿಯೇ, ಅವರು ಹುಟ್ಟಿಬೆಳೆದು ಬಾಳಿದ ಭಾರತದಲ್ಲಿಯೆ, ಇಂತಹ ದುರ್ದಶೆಗೆ ಒಳಗಾಗಬೇಕೆ? ಭಾರತೀಯರನ್ನಷ್ಟೇ ಅಲ್ಲ; ಲೋಕದ ಮಾನವಕುಲವನ್ನೇ ಉದ್ಧರಿಸುವಂತಹ ಸತ್ಯ-ಸುಂದರವಾದ ತತ್ತ್ವಜ್ಞಾನವು ಮಹಾತ್ಮರದು. ಇಂದು ಪ್ರಚಾರದಲ್ಲಿರುವ ಆಭಾಸಾತ್ಮಕ ರಾಜಕೀಯವಾದಗಳಾವುವೂ ಶಾಶ್ವತವಾಗಿ ನಿಲ್ಲಲಾರವು. ಮಹಾತ್ಮರ ಮಾನವ ಜೀವನತತ್ತ್ವಜ್ಞಾನವು ಮಾತ್ರ ಶಾಶ್ವತವಾಗಿ ನಿಲ್ಲುವಂತಹದು; ಮಾನವ ಕುಲಕ್ಕೇ ತಾರಕವಾದುದು. ಅದನ್ನು ಮರೆತು ನಡೆದರೆ, ಭಾರತೀಯರಿಗಂತೂ ಸ್ವಾತಂತ್ರ್ಯ-ಸ್ವರಾಜ್ಯಗಳು ಬಂದಿದ್ದರೂ, ಶಾಂತಿ-ಸಮಾಧಾನಗಳು ದೊರೆಯಲಾರವು.

'ತನಗಾಗಿಯೆ ತನ್ನ ಬದುಕು' ಎಂಬುದಿದುವೆ ತ್ಯಾಜ್ಯ!
ಜನಮಂಗಲ ಯಜ್ಞಕಾಗಬೇಕು ತಾನು ಆಜ್ಯ!
ಸರುವರ ಎದೆಯುಣ್ಣಬೇಕು ಸುವಿವೇಕದ ಭೋಜ್ಯ!
ಸರ್ವೋದಯ ಜಗದೊಳೆಂದು ಶಾಂತಿಯ ಸಾಮ್ರಾಜ್ಯ!'

— ಸಂಪಾದಕರು

ನಾ ಡ ನ ಡೆ

ಶ್ರೀಮಾನ್ ದಿವಾಕರರ ಷಷ್ಟ್ಯಬ್ದಿಪೂರ್ತಿ

ಯಾವುದೇ ಮಾನವವ್ಯಕ್ತಿ ೬೦ ವರ್ಷಗಳವರೆಗೆ ಬದುಕಿ ಬಾಳುವುದೆಂದರೆ, ಅದೊಂದು ಮಹತ್ವದ ಸಂಗತಿಯೇ ಎನಿಸಿರಬೇಕು! ನಮ್ಮ ಭಾರತೀಯ ಸಂಸ್ಕೃತಿಯಲ್ಲಂತೂ ೬೦ ವರ್ಷಗಳವರೆಗೆ ಸುಖದಿಂದ ಬಾಳಿದವನು ಪುಣ್ಯಶಾಲಿಯೆಂದೇ ಪರಿಗಣಿಸಲ್ಪಡುವನು. ಸಾಮಾನ್ಯ ರೀತಿಯಲ್ಲಿ ಬದುಕಿಬಾಳಿದ ಭಾರತೀಯನೂ, ತನ್ನ ೬೧ನೆಯ ವರ್ಷ ತುಂಬಿದ ವಿಶೇಷೋತ್ಸವವನ್ನು ಆಚರಿಸುತ್ತಾನೆ. ಮುಂದಿನ ಜೀವನದ ಸುಖ-ಸಮಾಧಾನಕ್ಕಾಗಿ ಶಾಂತಿಹೋಮವನ್ನು ಮಾಡುತ್ತಾನೆ. ತುಲಾಭಾರವನ್ನು ಜರುಗಿಸಿ, ಸಾಮರ್ಥ್ಯವಿದ್ದಷ್ಟು ದಾನ-ಧರ್ಮಗಳನ್ನು ಕೊಡುತ್ತಾನೆ. ಇದೊಂದು ಭಾರತೀಯ ಸಮಾಜದ ಸಂಪ್ರದಾಯ.

ಕನ್ನಡನಾಡಿನ ಸುಪ್ರಸಿದ್ಧ ಕರ್ಮವೀರ ಧುರೀಣರೂ ಸದ್ಯ ಬಿಹಾರದ ರಾಜ್ಯಪಾಲಪೀಠವನ್ನು ಅಲಂಕರಿಸಿದವರೂ ಆದ ಶ್ರೀಮಾನ್ ದಿವಾಕರ ರಂಗರಾಯರು ತಮ್ಮ ವಯಸ್ಸಿನ ೬೦ ವರ್ಷಗಳನ್ನು ದಾಟಿ ೬೧ನೆಯ ವರ್ಷದಲ್ಲಿ ಕಾಲಿರಿಸಿದರು. ಅವರ ೬೧ನೆಯ ಹುಟ್ಟಿದ ದಿನದಂದು ಸಾಂಪ್ರದಾಯಿಕ ಷಷ್ಟ್ಯಬ್ದಪೂರ್ತಿ ಶಾಂತಿಮಹೋತ್ಸವವು ಜರುಗಿತು. ಶ್ರೀಮಾನ್ ದಿವಾಕರರು ಕನ್ನಡಿಗರ ಕುಟುಂಬಗಳಿಗೆಲ್ಲ ಆಪ್ತಬಂಧುಗಳಾದುದರಿಂದ, ಅವರ ಈ ಶಾಂತಿಮಹೋತ್ಸವವು ಕನ್ನಡಿಗರಿಗೆಲ್ಲ ಮಹೋತ್ಸವವೇ ಆಗಿದೆ. ಎಂತಲೇ ಕನ್ನಡನಾಡಿನ ಹಲವಾರು ನಗರಗಳ ಜನರು ಅವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು, ಆತ್ಮೀಯ ಭಾವದಿಂದ ತಮ್ಮ ಆದರ ಸತ್ಕಾರಗಳನ್ನು ಸಲ್ಲಿಸಿ, ಸದಿಚ್ಛೆಗಳನ್ನು ಪ್ರಕಟಿಸುತ್ತಲಿದ್ದಾರೆ; ಅವರಿಗೆ ಆಯುರಾರೋಗ್ಯಗಳನ್ನು ಹೃತ್ಪೂರ್ವಕವಾಗಿ ಕೋರುತ್ತಿದ್ದಾರೆ. ಎಲ್ಲರೂ ಸಂತೋಷಪಡತಕ್ಕ ಸಂಗತಿಯೇ ಇದು.

ಶ್ರೀಮಾನ್ ದಿವಾಕರರ ದಿವ್ಯವಾದ ವ್ಯಕ್ತಿತ್ವ

ಕರ್ನಾಟಕದ ಬಗೆಗೆ ನಿಜವಾದ ಕಳ್ಳಸೆಯುಳ್ಳ ಮುಂದಾಳುಗಳು ಬಹುಕಾಲದವರೆಗೂ ಇಲ್ಲಿ ಇರಲಿಲ್ಲ. ಇದ್ದ ಒಬ್ಬಿಬ್ಬರು ಕರ್ನಾಟಕದ ಹೆಸರಿನಿಂದ ಮುಂದಾಳುಗಳಾಗಿ ಮೆರೆಯುತ್ತಿದ್ದರೇ ಹೊರತು, ಕರ್ನಾಟಕದ ಕಡೆಗೆ ಅವರ ದೃಷ್ಟಿಯೇ ಇರಲಿಲ್ಲ. ಜಾಗ್ರತ ಕರ್ನಾಟಕದ ಜನತೆಯು ಅಂತಹ ಉದಾಸೀನಭಾವದ ಮುಂದಾಳುಗಳನ್ನು ಮೂಲೆಗೆ ಒತ್ತಿ, ತರುಣರಾಗಿದ್ದರೂ ಕರ್ನಾಟಕದ ಭಾವನೆಯ ಕೆಚ್ಚಿನಿಂದ ಕೂಡಿದ ಶ್ರೀಮಾನ್ ದಿವಾಕರರನ್ನು ತನ್ನ ಮುಂದಾಳೆಂದು ಒಪ್ಪಿಕೊಂಡಿತು. ಅಂದಿನಿಂದ ಇಂದಿನವರೆಗೆ ಸುಮಾರು ೩೪ ವರುಷಗಳವರೆಗೆ ಶ್ರೀಮಾನ್ ದಿವಾಕರರು, ವಿವಿಧಮುಖವಾಗಿ ಕರ್ನಾಟಕದ ಸೇವೆಯನ್ನು ಮಾಡಿ, ಜನರೆಲ್ಲರಿಗೂ ವಿಶ್ವಾಸದ ಮುಂದಾಳಾಗಿ ನಿಂತಿದ್ದಾರೆ. ರಾಜಕೀಯದ ರಜೋಮಾರ್ಗದಲ್ಲಿ ನಡೆಯುತ್ತಿರುವಾಗ, ಒಂದೆರಡು ವ್ಯಕ್ತಿಗಳು ಇವರ ವಿಷಯದಲ್ಲಿ ಅನುದಾರವಾಗಿ ವರ್ತಿಸಿರಬಹುದು. ಆದರೆ ದಿವಾಕರರ ಸಹನೆಯ ಶಿವಶಕ್ತಿ, ಆ ವ್ಯಕ್ತಿಗಳು ಸುರಿಸಿದ ಕಾಲಕೂಟವನ್ನೂ ನುಂಗಿ, ನೀಲಕಂಠವಾಗಿ ನಿಂತಿದೆ. ಮಾತು-ಮಾತುಗಳ ಜಗಳಾಟಕ್ಕಿಂತ ಮೌನಿಯಾಗಿ ಕಾರ್ಯಮಾಡುತ್ತಿರುವುದು ಮಹಾವ್ಯಕ್ತಿಯ ಮುಖ್ಯ ಲಕ್ಷಣವಾಗಿದೆ. ಈ ೩೪-೩೫ ವರ್ಷಗಳಲ್ಲಿ, ದಿವಾಕರರು ಅದೇ ರೀತಿಯಿಂದ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ. ಅವರು ಮಾಡಿರುವ ಕಾರ್ಯಪರಂಪರೆಯ ಎದುರು, ಇಂದು ಯಾವ ವಿರೋಧಿವ್ಯಕ್ತಿಗೂ ತನ್ನ ವಿರೋಧವನ್ನು ಪ್ರಕಟಿಸುವಂತಹ ನೈತಿಕಧೈರ್ಯವಿರದು.

ಪಂಡಿತ ಜವಾಹರಲಾಲರು ಬರಿಯ ರಾಜಕಾರ್ಯಜ್ಞರೆ ಆಗಿದ್ದರೆ, ಇಷ್ಟೊಂದು ಅವರ ಕೀರ್ತಿ ಲೋಕವಿಖ್ಯಾತವಾಗುತ್ತಿದ್ದಿತೋ ಇಲ್ಲವೋ? ಅವರ ಸಾಂಸ್ಕೃತಿಕ ವ್ಯಕ್ತಿತ್ವವೇ ಇಂದು ಲೋಕದ ಜನರಿಂದ ಹೊಗಳಿಕೆಗೊಳಗಾಗುತ್ತಿದೆ. ಇಂದು ಕನ್ನಡನಾಡಿನಲ್ಲಿ ನಾವಿಂಗಿತ್ತಲೆ ರಾಜಕೀಯ ಮುಂದಾಳುಗಳಿದ್ದರೂ, ಸಾಂಸ್ಕೃತಿಕ ವ್ಯಕ್ತಿತ್ವವಿದ್ದವರನ್ನು ಒಂದು ಕೈಬೆರಳಿನಿಂದಲೇ ಎಣಿಸಿಬಿಡಬಹುದು. ಶ್ರೀ. ದಿವಾಕರರ ಅಂತರಪ್ರಾಂತೀಯ ಕೀರ್ತಿಗೆ, ಅವರ ರಾಜಕೀಯ ವ್ಯಕ್ತಿತ್ವದಷ್ಟೇ ಸಾಂಸ್ಕೃತಿಕ ವ್ಯಕ್ತಿತ್ವವೂ ಕಾರಣವಾಗಿ ನಿಂತಿದೆ

ಜ್ಞಾನಾಭಿಲಾಷಿಗಳಾದ ಧುರೀಣರು ನಮ್ಮಲ್ಲಿ ಎಷ್ಟು ಜನರಿದ್ದಾರೆ ದೂರದ ಜ್ಞಾನಾಭಿಲಾಷೆ ಬೇಕಾಗಿಲ್ಲ; ಕನ್ನಡ ನಾಡಿನ ಸಾಹಿತ್ಯ-ಸಂಸ್ಕೃತಿಗಳನ್ನೂ, ರಾಜಕೀಯ ಸಮಸ್ಯೆಗಳನ್ನೂ ಕೂಲಂಕಷವಾಗಿ ಅಭ್ಯಾಸ ಮಾಡಿದವರು ನಮ್ಮಲ್ಲಿ ಎಷ್ಟು ಜನರಿದ್ದಾರೆ? ವರ್ತಮಾನ ಪತ್ರಗಳಲ್ಲಿಯ ಸುದ್ದಿಗಳನ್ನೋದಿ, ಅವುಗಳ ಬಂಡವಾಳದಿಂದಲೇ ವ್ಯಾಸಪೀಠಗಳ ಮೇಲೆ ನಿಂತು 'ಲೆಕ್ಚರ್' ಜಡಿಯುವವರೇ ಬಹುಜನರಾಗಿದ್ದುದು ನಮ್ಮ ನಾಡಿನದೊಂದು ದುರ್ದೈವ.

ಶ್ರೀ. ದಿವಾಕರರ ವಿಷಯ ಹಾಗಲ್ಲ. ಅವರು ವಿಶ್ವವಿದ್ಯಾಲಯದ ೩-೪ ಪದವಿಗಳನ್ನು ಒಳ್ಳೆಯ ರೀತಿಯಲ್ಲಿ ಪಡೆದವರು. ಉಚ್ಚ ಶಿಕ್ಷಣಾಲಯಗಳಲ್ಲಿ ಕಾರ್ಯಮಾಡಿ, ಒಳ್ಳೆಯ ಪ್ರಾಧ್ಯಾಪಕರೆಂದು ಹೆಸರು ಗಳಿಸಿದವರು. ದೇಶಸೇವೆಯ ಯಜ್ಞಕುಂಡದಲ್ಲಿ ಧುಮುಕುವಾಗ, ದೇಶಕ್ಕಾಗಿ ತಾವು ಯಾವ ಯಾವ ವಿಧಾಯಕ ಕಾರ್ಯಗಳನ್ನು ಮಾಡಬೇಕಾಗಿದೆಯೆಂಬುದನ್ನು ಸಕಲದೃಷ್ಟಿಯಿಂದಲೂ ವಿಚಾರಮಾಡಿ ಧುಮುಕಿದವರು ಆ ಮೇಲೆಯೂ ತಮ್ಮ ಪ್ರಾಮಾಣಿಕ ಬುದ್ಧಿಗೆ ಸರಿಯೆನಿಸಿದುದನ್ನು ಮಾಡುತ್ತಬಂದವರು.

ಕರ್ನಾಟಕವಷ್ಟೇ ಅಲ್ಲದೆ, ಅಖಿಲ ಭಾರತವೂ ಶ್ರೀ. ದಿವಾಕರರ ಪ್ರಾಮಾಣಿಕ ಕಾರ್ಯಗಳನ್ನೂ, ಕರ್ತೃತ್ವಶಕ್ತಿಯನ್ನೂ ಒಪ್ಪಿಕೊಂಡಿತು. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಶ್ರೀ. ದಿವಾಕರರು ಎಂತೆಂತಹ ಕಷ್ಟ-ನಷ್ಟಗಳನ್ನೂ ಎದೆಗೊಟ್ಟು ಸಹಿಸಿ ಹೆಚ್ಚಿನ

ತ್ಯಾಗವನ್ನು ತೋರಿಸಿದರು. ಭಾರತದೇಶವಿಂದು ಅದನ್ನು ಒಪ್ಪಿಕೊಂಡು, ಅವರಿಗೊಂದು ಮನ್ನಣೆಯ ಪೀಠವನ್ನು ಕೊಟ್ಟಿರುವುದು. ಇವರಿಗ್ಯಾಗಿ ಕನ್ನಡಿಗರಾದ ನಾವೆಲ್ಲ ಅಭಿಮಾನಪಡಬೇಕು.

ಸಂಸ್ಕೃತಿಯಿಲ್ಲದ ಮುಂದಾಳುಗಳು

ನಮ್ಮಲ್ಲಿಯ ಬಹುಜನ ಧುರೀಣರು ಸಂಸ್ಕೃತಿರಹಿತರಾಗಿ, ಕೇವಲ ವೈಯಕ್ತಿಕ ಸ್ವಾರ್ಥದ ಮೂಲಕ, ಅಲ್ಪರಂತೆ ಜಗಳವಾಡುತ್ತಿರುವುದಕ್ಕೆ ಮೈಸೂರಿನ ಮಹಾಪ್ರಧಾನ ಮಾನ್ಯ ಕೆ. ಹನುಮಂತಯ್ಯನವರು ಮತ್ತು ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಇವರ ಪ್ರಕರಣವು ಸ್ಪಷ್ಟವಾದ ಸಾಕ್ಷಿಯಾಗಿದೆ. ಇಂತಹ ಮುಂದಾಳುಗಳು ನಮ್ಮ ಕನ್ನಡ ಜನತೆಯ ಹಣೆಬರೆಹವನ್ನು ಬರೆಯುವ 'ಭಾಗ್ಯವಿಧಾತ'ರು. ಇವರಿಬ್ಬರಲ್ಲಿ ನಡೆದ ರಾಜಕೀಯ ವಿಷಯಕ ಪತ್ರವ್ಯವಹಾರವು ಮೊನ್ನೆಮೊನ್ನೆಯೆ ಬೆಳಕಿಗೆ ಬಂದಿದೆ. ಆ ಪತ್ರವ್ಯವಹಾರವು ಪತ್ರಿಕಾವ್ಯವಸಾಯಿಯ ಕೈವಾಡವಾಗಿರದೆ ವಸ್ತುಸ್ಥಿತಿ ಪ್ರದರ್ಶಕವಾದುದೇ ಆಗಿದ್ದರೆ, ನಮ್ಮ ನಾಯಕರ ಅಲ್ಪತೆಗಾಗಿ ನಾವೆಲ್ಲರೂ ಕಂಬನಿಗಳನ್ನು ಹಾಕುವಂತಿದೆ. ಇಂತಹ ಮುಂದಾಳುಗಳ ಸ್ವಾರ್ಥಸಾಧನೆಯ ಕಾರಣದಿಂದಲೆ ಕರ್ನಾಟಕದ ಏಕೀಕರಣದ ಸಮಸ್ಯೆಯು ಮಣ್ಣುತಿನ್ನುತ್ತ ಬಿದ್ದುಕೊಂಡಿದೆ. ಎಲ್ಲ ಮುಂದಾಳುಗಳೂ ತಮ್ಮ ಮಾತಿನಲ್ಲಿ ಕರ್ನಾಟಕ ಏಕೀಕರಣವು ಬೇಗನೇ ಆಗುವುದೆಂದು ಭರವಸೆಯನ್ನೇನೋ ಕೊಡುತ್ತ ನಡೆದಿದ್ದಾರೆ. ಆದರೆ ಅದಕ್ಕಾಗಿ ಕೃತಿಗಳನ್ನು ಪ್ರತ್ಯಕ್ಷವಾಗಿ ಮಾಡಬೇಕಾಗಿ ಬಂದಾಗ, ಹಿಂಜರಿದು ದೂರದಲ್ಲಿ ನಿಲ್ಲುತ್ತಾರೆ. ಮೊಲವು ಎದ್ದು ಬಯಲಿಗೆ ಬಿದ್ದಾಗ, ಇವರ ಬೇಟೆಯ ನಾಯಿಗಳು 'ಬಯಲ ಕಡೆಗೆ' ಹೋಗಿರುತ್ತವೆ.

ಇಂತಹ ಅರೆಮನಸ್ಸಿನ ಮುಂದಾಳುಗಳೇ ಕೂಡಿ, ಮೈಸೂರಿಗರಲ್ಲಿರುವ ಅಖಿಲ ಕರ್ನಾಟಕ ಭಾವನೆಯ ಬೇರಿಗೆ ಬಿಸ್ನೀರನ್ನು ಎರೆಯುತ್ತಲಿದ್ದಾರೆ. ಬಳ್ಳಾರಿಯಲ್ಲಿ ಆಂಧ್ರರು ಬೇಕಾದಂತೆ ಗೊಂದಲ ಹಾಕುತ್ತಿರುವುದಕ್ಕೂ ನಮ್ಮ ಮುಂದಾಳುಗಳ ಈ ಅರೆಮನಸ್ಸೇ ಮುಖ್ಯಕಾರಣವಾಗಿ ಕುಳಿತಿದೆ. ಮೈಸೂರಿನಿಂದ ದಿಲ್ಲಿಗೆ ಹೋಗಿ, ಕೇಂದ್ರದಲ್ಲಿ ಮಂತ್ರಿ-ಉಪಮಂತ್ರಿಗಳಾಗಿರುವ ಮೈಸೂರಿನ ಮುಂದಾಳುಗಳು ಏನೇನೋ ಸೂತ್ರಗಳನ್ನು ಆಡಿಸುತ್ತಿದ್ದಾರೆ. ಅವರಿಗೆ ಕರ್ನಾಟಕದ ಏಕೀಕರಣ ಬೇಕಾಗಿಲ್ಲ. ಅವರ ಸೂತ್ರದಂತೆ ಕುಣಿಯುವ ಮುಂದಾಳುಗೊಂಬೆಗಳೇ ನಮ್ಮ ನಾಡಿನಲ್ಲಿ ಹೆಚ್ಚಾಗಿವೆ

ಶ್ರೀಮಾನ್ ನಿಜಲಿಂಗಪ್ಪ ಮತ್ತು ಕೆ. ಹನುಮಂತಯ್ಯನವರ ಜಗಳಾಟವು ಮೇಲಿನವರ ಸೂತ್ರಚಾಲನೆಯ ಪರಿಣಾಮವೇ ಆಗಿದೆಯೆಂದು ಸುದ್ದಿಗಳಿವೆ. ಶ್ರೀ. ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಉಳಿಯಬೇಕಾದರೆ, ಸಂಪೂರ್ಣವಾಗಿ ಮೇಲಿನವರ ಸೂತ್ರದ ಗೊಂಬೆಯಾಗಬೇಕಾಗಿದೆಯಂತೆ. ಇದೆಲ್ಲವೂ ಸಂಸ್ಕೃತಿರಹಿತವಾದ ಸ್ವಾರ್ಥಭಾವನೆಯ ಪರಿಣಾಮವಾಗಿದೆ. ಸಂಸ್ಕೃತಿಯಿರುವಲ್ಲಿ ಪ್ರಾಮಾಣಿಕತೆಯಿರುವುದು. ಪ್ರಾಮಾಣಿಕತೆಯಿರುವಲ್ಲಿ ನಿಜವಾದ ಸ್ವಾತಂತ್ರ್ಯವಿರುವುದು. ಸ್ವಾತಂತ್ರ್ಯೋಪಾಸಕನು ಸ್ವಾರ್ಥಸಾಧಕನಾಗಿರನು. ಲೋಕಕಲ್ಯಾಣವೇ ಅವನ ಗುರಿಯಾಗಿರುವುದು.

ಮುಂದಾಳುತನದ ಮತ್ತೊಂದು ಮಾದರಿ

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಿಕೊಳ್ಳಲಿಕ್ಕೆಂದು ಅಡಿಯಿಂದ ಮುಡಿಯವರೆಗೂ ಆಂಧ್ರರು ಚಳವಳಿಯನ್ನು ನಡೆಯಿಸಿದ್ದಾರೆ. ಎಂತಹ ಕುತಂತ್ರಗಳನ್ನು ಮಾಡಲು ಅವರು ಹಿಂಜರಿಯುವವರಲ್ಲ. ಕನ್ನಡಿಗರ ಮುಂದಾಳಾಗಿ ಮೆರೆದ ಶ್ರೀಮಾನ್ ಬೆಲ್ಲಡೋಣಿ ಭೀಮರಾಯರಂತಹ 'ಬುದ್ ರೂಖ್ ಆದ್ಮಿ'ಯನ್ನೂ ಅವರು ತಮ್ಮ ಬಲೆಗೆ ಹಾಕಿಕೊಂಡುಬಿಟ್ಟರು. ಆಯೋಗಸಮಿತಿಯೆದುರು ಬಳ್ಳಾರಿಯು ಆಂಧ್ರಕ್ಕೆ ಸೇರುವುದೇ ಸಮಂಜಸವೆಂದು ಅವರಿಂದ ಹೇಳಿಸಿಬಿಟ್ಟರು. ಒಂದು ವಿಚಿತ್ರಸಂಗತಿಯೆಂದರೆ, ಅಲ್ಲಿ ಹಾಗೆ ಹೇಳಿಬಂದ ಶ್ರೀ. ಬೆಲ್ಲಡೋಣಿಯವರು, ತಿರುಗಿ ಬಳ್ಳಾರಿಗೆ ಬಂದಮೇಲೆ, ಮಾತುಗಳನ್ನು ಬದಲಾಯಿಸಿದರು. ಬಳ್ಳಾರಿಯ ನಿಜವಾದ ಪರಿಸ್ಥಿತಿಯ ಜ್ಞಾನವಿಲ್ಲದೆ ತಾವು ಹಾಗೆ ಹೇಳಿದೆವೆಂದೂ ಬಳ್ಳಾರಿಯು ನಿಜವಾಗಿಯೂ ಕರ್ನಾಟಕಕ್ಕೆ ಸೇರಬೇಕಾದುದೆಂದೂ ಆಯೋಗಕ್ಕೆ ಬರೆದು ತಿಳಿಸಿದರು. ಇದೂ ಒಂದು ಸೂತ್ರಗೊಂಬೆಯ ಆಟವೆ? ಆಯೋಗಸಮಿತಿಯ ಸದಸ್ಯರು ಈ ಕರ್ನಾಟಕದ ಮುಂದಾಳಿನ ಮಹಾಬುದ್ಧಿಯನ್ನು ಕಂಡು ಏನೆಂದುಕೊಂಡಿರಬಹುದು? ಇಂತಹ ಮುಂದಾಳುಗಳಿಂದ ಕೂಡಿದ ನಮ್ಮ ನಾಡಿನ ಬೆಲೆಯನ್ನೂ ಅವರು ಕಟ್ಟಿರಬಹುದು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನನ ಎಲ್ಲಾ ಪುಸ್ತಕಗಳು
ಸೇಕಡಾ ೧೦% ಕಡಿಮೆ ದರಕ್ಕೆ ಕೊಡುವೆವು.

	ಸಾದಾ ಪ್ರತಿ	ಉತ್ತಮ ಪ್ರತಿ
ಮನೋರಾಜ್ಯ (ನಾಟಕ)	ರೂ. ೧—೧೨	ರೂ. ೨—೪
ಪುಷ್ಪಹಾರ (ಕಾದಂಬರಿ)	೧—೪	೧—೧೨
ಇವೆತ್ (ಮೋಪಾಸಾನ ಕಾದಂಬರಿ)	೧—೧೨	—
ಪೂರ್ಣಿಮಾ (ಸಂಸಾರ ಚಿತ್ರಗಳು)	೧—೪	೨—೮
ಸ್ವಪ್ನನ ತಂದೆ (ಕತೆಗಳು)	—	೨—೮
ರುಕ್ಮಿಣಿ, (ಕಾದಂಬರಿ)	೧—೮	೨—೦
ಮೋಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦—೧೨	೧—೮
ಕಲ್ಪನಾ ವಿಲಾಸ (ಕತೆಗಳು)	೦—೧೨	೧—೯
ಪ್ರವಾದಿ (ಗಿಬ್ರಾನರ "ಪ್ರೊಫೆಟ್")	೧—೪	೨—೦
ಋಣ (ಕಾದಂಬರಿ)	೧—೪	೧—೧೨

ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ) ರೂ. ೫—೦—೦
,, (ಉತ್ತಮ ಪ್ರತಿ) ರೂ. ೬—೦—೦

ಸಾಂತ-ಅನಂತ

ಶ್ರೀ. ನೆಂ. ಮು. ಜೋಶಿ, ಧಾರವಾಡ

(ಒಂದು ಕಥೆ)

ಮನುಷ್ಯನ ಜೀವನದಲ್ಲಿ, ರಹಸ್ಯವಾಗಿ ಏನೇನೋ ವಿಚಿತ್ರವಾದ ಘಟನೆಗಳು ಜರುಗುತ್ತವೆ. ಆದರೆ ಆ ಘಟನೆಯ ಹಿಂದಿರುವ ಸತ್ಯವಸ್ತು, ಸಮಾಜದ ಬಾಯಿಗೆ ಸಿಕ್ಕಿ ಏನೇನೋ ವಿಕೃತಾಕಾರವನ್ನು ಪಡೆಯುತ್ತದೆ. ಇದೇ ಕಾರಣದಿಂದ ಎಷ್ಟು ಜನ ಸುಶೀಲರು ಕೆಟ್ಟ ಹೆಸರನ್ನು ಪಡೆದಿರುವರೋ; ಎಷ್ಟು ಜನ ಶೀಲಭ್ರಷ್ಟರು ಶೀಲವಂತರಾಗಿ ಮೆರೆಯುತಿರುವರೋ!

ನಮಗೆ ಸಂಬಂಧವಿಲ್ಲದ ಹಬ್ಬದ ಸಲುವಾಗಿ, ಆಫೀಸಿಗೆ ಎರಡು ದಿನಗಳ ಬಿಡುವು ಇದ್ದಿತು. 'ಯಾವುದೇ ಹಬ್ಬವಿರಲಿ ಇರದಿರಲಿ, ಎರಡು ದಿನಗಳ ಸಂಪೂರ್ಣ ವೇಳೆ ಸಿಕ್ಕಿತಲ್ಲಾ!' ಎಂಬ ಸಮಾಧಾನವನ್ನು ಆವರಿಸಿತ್ತು. ಆಫೀಸಿನಲ್ಲಿ ತುಂಬುಕೆಲಸದಲ್ಲಿ ತೊಡಗಿದಾಗ, ಎಷ್ಟೋ ಕಥಾವಸ್ತುಗಳು ತಲೆಯಲ್ಲಿ ಸುಳಿ-ಸುಳಿದು ಮಾಯವಾಗುತ್ತಿದ್ದುವು. ಆಗಲೇ, ಅದೇ ವೇಳೆಗೆ ಆಫೀಸಿನ ಕೆಲಸದಿಂದ ಬಿಡುಗಡೆ ದೊರೆತಿದ್ದರೆ, ಎಷ್ಟೋ ಕಥೆಗಳನ್ನು ಬರೆದು ಮುಗಿಸಬಹುದಾಗಿತ್ತು— ಎಂಬ ಭ್ರಮೆ ನನ್ನನ್ನು ಆವರಿಸುತ್ತಿತ್ತು. 'ಭ್ರಮೆ' ಶಬ್ದವನ್ನು ಉಪಯೋಗಿಸಿದುದಕ್ಕಾಗಿ ಕೆಲವರು ನಗಬಹುದು; ಆದರೆ ಅದು ಭ್ರಮೆಯೇ ಎಂಬುದು ತೀರ ನಿಜ. ಅದರ ಅನುಭವ ಬಂದು ಹೋಗಿದೆ ನನಗೆ.

ಎರಡು ದಿನಗಳ ಬಿಡುವು ಇಂದಿನಿಂದಲೇ ಪ್ರಾರಂಭ. ಮುಂಜಾನೆ ಮನೆಗೆಲಸವಾಯಿತು. ಮಧ್ಯಾಹ್ನ ಊಟವಾದಾಕ್ಷಣ ಕಥೆಯನ್ನು ಬರೆಯಬೇಕೆಂದು ಕುಳಿತುಕೊಂಡೆ. ಖುರ್ಚಿಯ ಮೇಲೆ ಕುಳಿತು, ತಲೆಯನ್ನು ಎದುರಿಗಿದ್ದ ಟೇಬಲ್ಲಿಗೆ ಆನಿಸಿದೆ. ಕಥಾವಸ್ತುವನ್ನು ಹುಡುಕುವುದಕ್ಕಾಗಿ ಕಣ್ಣನ್ನು ಮುಚ್ಚಿದೆ. ಮುಚ್ಚಿದ ಕಣ್ಣು ಮನಸ್ಸನ್ನು ತೆರೆಯಿಸಿತು; ಆದರೂ ಪ್ರಯೋಜನವಾಗಲಿಲ್ಲ. ಕೈಯಲ್ಲಿ ಲೇಖಣಿಯನ್ನು ಹಿಡಿದುಕೊಂಡು ಕಾಗದದ ಮೇಲೆ ಏನನ್ನೋ ಗೀಚಲುತೊಡಗಿದೆ. ಅಕ್ಷರಗಳ ಬದಲು ಚಿತ್ರಗಳು ಹೊರಡತೊಡಗಿದುವು. ತಲೆಯಲ್ಲಿ ಕಥಾನಕ ಪೂರ್ಣವಾದ ಹೊರತು, ಕಾಗದದ ಮೇಲೆ ಅದಾವ ಅಕ್ಷರಗಳು ಮೂಡಬೇಕು? ಮತ್ತೆ ವಿಚಾರಿಸತೊಡಗಿದೆ. ಏನಾದರೂ, ಒಂದಾದರೂ ಕಥೆಯನ್ನು ಬರೆಯಬೇಕೆಂದು ಹಟವನ್ನು ತೊಟ್ಟೆ. ಮನಸ್ಸಿನಲ್ಲಿದ್ದ ಹಟ ಮೆದುಳಿನಲ್ಲಿರಲಿಲ್ಲ. ಕಣ್ಣನ್ನು ಮುಚ್ಚಿ ಮತ್ತೆ ವಿಚಾರಿಸತೊಡಗಿದೆ. ನನ್ನ ಮನಸ್ಸು, ಮಲಾಯದ ಹಕ್ಕಿಗಳನ್ನು ಹಿಡಿದು ಹಿಂದುಸ್ಥಾನದ ತುಂಬೆಲ್ಲ ಸಂಚರಿಸತೊಡಗಿತು. ಒಮ್ಮೆ ಮನಸ್ಸಿನಲ್ಲಿ ಬಂದಿತು, ದಿಬ್ರುಗಡ! ಹೊಳೆಯ ಮಹಾಪೂರಕ್ಕೆ ಬಲಿಯಾದ ಬಲಿಷ್ಠ ನಗರ! ಅಸಂಖ್ಯ ಕುಟುಂಬಗಳು! ಮನೆ-ಮಾರು ಕಳೆದುಕೊಂಡ ದೀನಮುದ್ರೆಯ ಜನರ ಕರುಣಕಥೆಯನ್ನು ಬರೆಯಬೇಕೆಂದು ಯೋಚಿಸಿದೆ. ಟಾಕನ್ನು ದೌತಿಯಲ್ಲೇನೊ ಎದ್ದಿದೆ; ಎದ್ದಿದ ಟಾಕು ದೌತಿಯಲ್ಲಿಯೆ ಉಳಿಯಿತು. ಮನಸ್ಸಿನ ಮುಂದೆ "ಏನು?" ಎಂಬ ಪ್ರಶ್ನೆಯು ನಿಂತಿತು. ಕಥೆ ಸ್ವಾರಸ್ಯವಾದೀತೆ? ಸ್ವಾರಸ್ಯವಾಗಲಿ ಆಗದಿರಲಿ, ಪ್ರಾಸಂಗಿಕ ವಿಷಯದ ಮೇಲೆ ಕಥೆ ಬರೆದರೆ ಹೆಚ್ಚು ವಾಸ್ತವವೆನಿಸೀತು! ಆದರೆ ಮನಸ್ಸು ಪುನಃ ಉತ್ತರಿಸಿತು: "ನಿನ್ನ ಕಥೆಯನ್ನು ಓದುವವರು ಇಲ್ಲಿಯವರು. ಇಲ್ಲಿಯ ಜನ ಅಂತಹ ಮಹಾಪೂರದ ದುಃಖವನ್ನು ಅನುಭವಿಸಿಲ್ಲ. ಅವರು ಆ ಕಥಾವಸ್ತುವಿನಲ್ಲಿ ಸಮರಸರಾಗಲಿಕ್ಕಿಲ್ಲ!" ಮನಸ್ಸಿನ ಉಪದೇಶ ಸರಿಯೆನಿಸಿತು. ಕವಿ ಬೇಂದ್ರೆಯವರ ಕವಿತೆಯ ಸಾಲೊಂದು ನೆನಪಿಗೆ ಬಂದಿತು: "ಹಸಿದವ ಬಲ್ಲ ಹಸಿವೆಯ ಶೂಲಿ!" ನನ್ನ ಸೈನಿಕಜೀವನದ ಕಥೆಗಳನ್ನು ಓದಿದ ಪದವೀಧರ ಮಹಿಳೆಯೊಬ್ಬಳು "ಎಂತಹ ನೀರಸ ಕಥೆಗಳನ್ನು ನೀವು ಬರೆಯುತ್ತೀರಿ?" ಎಂದು ಮೂಗು ಮುರಿದಿದ್ದಳು. ಹಾಗಾದರೆ....!

ವಿಚಾರಗಳೇನೋ ಬೆಳೆದುವು. ಆದರೂ ಕಾಗದದ ಮೇಲೆ ಒಂದು ಸಾಲೂ ಮುಂದಡಿ ಇಡಲಿಲ್ಲ. ಮಹಾಪೂರದಲ್ಲಿ ತೇಲಿಹೋದ ದಿಬ್ರುಗಡವೂ ನನ್ನ ಮನಸ್ಸಿನಿಂದ ಮಾಯವಾಯಿತು. 'ಹಾಗಾದರೆ ಪ್ರಾಸಂಗಿಕ ವಿಷಯ ಮತ್ತಾವುದನ್ನು ಶೋಧಿಸಬೇಕು?' ಎಂದು ಗದ್ದದ ಕೆಳಗೆ ಬಲಗೈಯನ್ನು ತಂದಿರಿಸಿದೆ. ಒಮ್ಮೆಲೆ ಹೊಳೆಯಿತು— ಗೋವೆಯ ಸ್ವಾತಂತ್ರ್ಯದ ಹೋರಾಟ! ತೆರೆಯೋಲದಲ್ಲಿ ಜೀವವನ್ನರ್ಪಿಸಿದ ಹುತಾತ್ಮ!! ಅವನ ಸುತ್ತಲೂ ಕಥೆಯನ್ನು ಹೆಣೆದರೆ ಕಥೆ ಸುಂದರವಾದೀತು; ಜತೆಯಲ್ಲಿ, ಕಥೆಯಲ್ಲಿ ವಾಸ್ತವತೆಯೂ ಬರಬಹುದು. ಮೈಯಲ್ಲಿ ಗಾಳಿ ಸಂಚಾರವಾದಂತೆ, ದೌತಿಯಲ್ಲಿದ್ದ ಟಾಕನ್ನು ಎತ್ತಿ ಕಾಗದದ ಮೇಲೊಯ್ದೆ. ಅಲ್ಲಿ ಮೊತ್ತಮೊದಲಿಗೆ ಬಿದ್ದುದು ಮಸಿಯ ಗೊಣ್ಣೆ. "ಪ್ರಥಮಗ್ರಾಸೇ ಮಕ್ಷಿಕಾ ಪಾತಃ" ಎಂಬ

ಸಂಸ್ಕೃತ ಶ್ಲೋಕ ನೆನಪಾಯಿತು; ಮನಸ್ಸು ಮುದುಡಿಕೊಂಡಿತು. ಅವರೂ ಆಗಿನ ವಾತಾವರಣವನ್ನು ಮರೆಯಿಸುವಷ್ಟು ಮೀರಿಸುವಷ್ಟು ಒಳಗಿನ ಇಚ್ಛೆ ಅನಿವಾರ್ಯವಾಯಿತು. ದಾದ್ರಾ, ನಗರಹವೇಲಿಯ ವರ್ಣನೆಯಿಂದ ಕಥೆಯನ್ನು ಮೊದಲುಮಾಡಬೇಕೆಂದು ನಿರ್ಣಯಿಸಿದೆ. ಕೈಯನ್ನೇನೋ ಎತ್ತಿದೆ; ಆದರೆ ಕೈಯಲ್ಲಿದ್ದ ಲೇಖಣಿ ಅಸಹಕಾರವನ್ನೇ ಹೂಡಿತು."ಗೋವೆಯಲ್ಲಿಯ ಜನ ನನ್ನ ಹಾಗೆಯೇ ಅಸಹಕಾರ ಪ್ರಾರಂಭಿಸಬೇಕು" ಎನ್ನುವ ಇಚ್ಛೆ ಅದಕ್ಕಿರಬೇಕು— ಎಂದು ಕವಿಗಳು ಕಲ್ಪಿಸಬಹುದು. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ. ದಾದ್ರಾ, ನಗರಹವೇಲಿಗಳನ್ನು ನಾನೆಂದೂ ಕಂಡವನಲ್ಲ. ತೆರೆ ಮೋಲವನ್ನು ಭೂಗೋಲದಲ್ಲಿ ಕೂಡ ಓದಿರಲಿಲ್ಲ. ನಮ್ಮಲ್ಲಿದ್ದ ಎಷ್ಟೋ ಜನ ಲೇಖಕರ ದುರ್ದೈವ, ಇದು! ಸ್ವತಃ ನೋಡದ ಊರನ್ನೂ ಕಾದಂಬರಿಯಲ್ಲಿ ಬಳಸಿ, ತಮ್ಮ ಕ್ಷೇತ್ರವಿಸ್ತಾರವನ್ನು ತೋರಿಸುವ ಹುಚ್ಚುಹವ್ಯಾಸ ಅವರನ್ನು ವ್ಯಾಪಿಸಿರುತ್ತದೆ. ಒಬ್ಬ ಶ್ರೇಷ್ಠ ಕಾದಂಬರಿಕಾರರು, ಮಲಾಯಾದ ಕ್ಷೇತ್ರವನ್ನು ತಮ್ಮ ಕಾದಂಬರಿಯ ಮೊದಲ ಪುಟಗಳಲ್ಲಿ ಬಳಸಿಕೊಂಡರು. ಅಲ್ಲಿಯ ಅಸಂಬದ್ಧ ಪ್ರಲಾಪಕ್ಕೆ ನನ್ನ ಮನಸ್ಸೇ ಹೇಸಿಕೊಂಡಿತು. ಈ ತರದ ಕಸಬೆ, ಸಾಹಿತ್ಯದಲ್ಲಿ ಏಕೆ? ತಾನೂ ಭ್ರಮೆಯಲ್ಲಿ ಬಿದ್ದು ಓದುಗರನ್ನೂ ಭ್ರಮೆಯಲ್ಲಿ ಕೆಡಹುವ ದುರ್ಬುದ್ಧಿ ಏಕೆ?— ಎಂದು ನನ್ನನ್ನು ನಾನೇ ಕೇಳಿಕೊಂಡೆ. ಸರಿಯುತ್ತರ ದೊರೆಯಲೆ ಇಲ್ಲ. 'ವೃಥಾ ಇಲ್ಲದ ಖಟಾಟೋಪವೇಕೆ?' ಎಂದು, ಮತ್ತೆ ಹೊಸ ವಸ್ತುವಿಗಾಗಿ ಹಂಬಲಿಸತೊಡಗಿದೆ. ಕೆಲಸವಿಲ್ಲದಾಗ ಮನುಷ್ಯ ಅತ್ತಿತ್ತ ನೋಡುತ್ತಾನೆ; ಹಾಗೆಯೇ ನಾನೂ ಎದುರು ಇದ್ದ ಪುಸ್ತಕಗಳ ಸಾಲಿನತ್ತ ನೋಡಿದೆ. ಕೈಯಲ್ಲೊಂದು ಪುಸ್ತಕವನ್ನು ತೆಗೆದುಕೊಂಡೆ. ಅದು ನನ್ನ ತಮ್ಮನ ಅಭ್ಯಾಸದ ಪುಸ್ತಕವಾಗಿತ್ತು. ಪುಸ್ತಕದ ಮೇಲೆ ಒಂದು ದಿನಪತ್ರಿಕೆಯ ಕವ್ಹರನ್ನು ಹಾಕಲಾಗಿತ್ತು. ಅದರಲ್ಲಿ ಅಚ್ಚಾದ ಒಂದು ಸುದ್ದಿ ನನ್ನ ಮನಸ್ಸನ್ನು ಸೆಳೆಯಿತು:

"ಹುಬ್ಬಳ್ಳಿಯಲ್ಲಿ ಭೀಕರ ಕೊಲೆ, ಆತ್ಮಹತ್ಯೆ!"

ಕಣ್ಣರಳಿಸಿಕೊಂಡು ಓದಿದೆ.

"ಇಲ್ಲಿಯ ತರುಣ ಡಾಕ್ಟರರಾದ ಶ್ರೀ. ಗೋಡಸೆಯವರು ನಿನ್ನೆಯ ರಾತ್ರಿ, ತಮ್ಮ ಹೆಂಡತಿಯನ್ನು ಇರಿದು ತಾವೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು—"

ಸುದ್ದಿ ಹಳೆಯದು. ಆ ಸುದ್ದಿಯನ್ನು ಈ ಮೊದಲೇ ಹಲವಾರು ಸಲ ಕೇಳಿದ್ದೆ. ಆ ಘಟನೆ ಘಟಿಸಿದನಂತರ, ಒಂದು ತಿಂಗಳವರೆಗೆ, ಊರಲ್ಲೆಲ್ಲ ಆ ದಂಪತಿಗಳ ಸುದ್ದಿಯೆ ಸುದ್ದಿ. ನೂರಾರು ಬಗೆಯ ಇತಿಹಾಸಗಳು ರಚಿತವಾಗತೊಡಗಿದ್ದುವು. ಅವಿನ್ನೂ ಮಾಯವಾಗಿಲ್ಲ! 'ಹಾಗಾದರೆ ಇದೇ ವಸ್ತುವನ್ನಾಗಿರಿಸಿಕೊಂಡೇಕೆ ಕಥೆ ಬರೆಯಬಾರದು?' ಎಂದು ವಿಚಾರಿಸಿದೆ. ಬರೆಯಲೇ ಬೇಕೆಂದು ನಿರ್ಧರಿಸಿಬಿಟ್ಟೆ. ನಾಲ್ಕು ಜನ ಆಡುವ ಮಾತು ನನ್ನ ಕಿವಿಗೂ ಅಪ್ಪಳಿಸಿದ್ದುವು. ಅವರ ಆಧಾರದ ಮೇಲೆ ಕಥೆಯ ಹಂದರವನ್ನು ರಚಿಸಿದೆ: ಡಾಕ್ಟರರು ಕೆಲಸಮಾಡಿ ಬರುತ್ತಿರಬೇಕು. ದಾಂಪತ್ಯಜೀವನದಲ್ಲಿ ಅವರಿಗೆ ಸುಖವಿರಕೂಡದು. ಲಗ್ನದ ಮೊದಲೇ ಅವರ ಹೆಂಡತಿ ಮತ್ತೊಬ್ಬ[…] ಪ್ರೇಮಪಾಶದಲ್ಲಿ ಸಿಲುಕಿರಬೇಕು. ಅದಕ್ಕೆ ಅವಳು ಸಂಸಾರದ[…] ಸಮರಸಳಾಗಿರದಂತೆ ತೋರಿರಬೇಕು. ಒಮ್ಮೆ ಡಾಕ್ಟರರು ದವಾಖಾನೆಗೆ ಹೋದಾಗ, ಅವಳ ಪ್ರಿಯಕರ ಮನೆಗೆ ಬಂದಿರಬೇಕು[…] ಅವರ ಏಕಾಂತವನ್ನು, ಥಟ್ಟನೇ ಮನೆಗೆ ಬಂದ ಡಾಕ್ಟರರು ನೋಡಿದಂತೆ ತೋರಿಸಬೇಕು. ಅನಂತರ ರೊಚ್ಚಿಗೆದ್ದು ಡಾಕ್ಟರರ[…] ಹೆಂಡತಿಯ ಕೊಲೆಮಾಡಲು, ಕಥೆ ಮುಗಿಸಬೇಕು—

ಒಮ್ಮೆಲೇ ಮನಸ್ಸು ಹಗುರಾಯಿತು. 'ಕಥೆಯ ಹಂದರವಂತೂ ರಚಿತವಾಯಿತಲ್ಲ!' ಎಂದು ಸಮಾಧಾನವಾಯಿತು. ಹಂದ[…] ರಚಿತವಾದ ಮೇಲೆ ಕೇಳುವುದಿದೆಯೆ? ಹಸಿದ ಕುದುರೆಗೆ ಹುಲ್ಲ[…] ಮೇಯಿಸಿದ ನಂತರ ಅದು ಬಹುವೇಗದಿಂದ ಓಡುವಂತೆ, ನನ್ನ ಕೈಯಲ್ಲಿದ್ದ ಲೇಖಣಿಯೂ ಭರದಿಂದ ಕಾಗದದ ಮೇಲೆ ಸಾಗ[…] ತೊಡಗಿತು. ಸರಿಯಾಗಿ ೫೦ ನಿಮಿಷದಲ್ಲಿಯೆ ಕಥೆಯನ್ನು ಮುಗಿಸಿದೆ[…] ಕಥೆಯನ್ನು ಮುಗಿಸಿದ ಗೆಲುವಿನಲ್ಲಿ ಖುರ್ಚಿಗೆ ಆತು ಕುಳಿತೆ. ಎರಡು ಕಾಲುಗಳನ್ನು ಟೇಬಲ್ಲಿನ ಮೇಲೆ ಇಟ್ಟಿದ್ದೆ. ಬದಿಯ ಕಿಟಕಿಯ[…] ತೆರೆದಿಟ್ಟಿದ್ದೇ ಇತ್ತು. ತಂಪುಗಾಳಿ ಒಳಗೆ ಸುಳಿಯತೊಡಗಿತು. […]

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ಶ್ರೀ. ಭುಜೇಂದ್ರ ಮಹಿಷವಾಡಿ	೧-೮-೦
ಬಾಳ-ಬಂಡಿ (ಕವನಸಂಗ್ರಹ) ಶ್ರೀ. ಬಾಳು ಬಿ. ಉಪಾಧ್ಯೆ	೦-೮-೦
ಮೂಲ ಶಿಕ್ಷಣದ ಮೌಲ್ಯಮಾಪನ ಶ್ರೀ. ಮಿರ್ಜಿ ಅಣ್ಣಾರಾಯ	೦-೧೨-೦
ಭರತೇಶನ ನಾಲ್ಕು ಚಿತ್ರಗಳು ಶ್ರೀ. ಮಿರ್ಜಿ ಅಣ್ಣಾರಾಯ	೧-೪-೦
ಶ್ರೀ ಶಾಂತಿಸಾಗರ	೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. ಉಗಾರ ಬದ್ರುಕ್ (ಜಿಲ್ಹಾ ಬೆಳಗಾಂವಿ)

ಮೊದಲು ವಿಚಾರಗಳ ಗುಂಗಿನಲ್ಲಿ ಸಿಲುಕಿ ಗಾಸಿಯಾದ ಮನಸ್ಸು ವಿಶ್ರಾಂತಿಯನ್ನು ಅಪೇಕ್ಷಿಸತೊಡಗಿತು. ತಂಪುಗಾಳಿ ಬೇರೆ ಅದಕ್ಕೆ ಸಹಾಯಕವಾಗಿ ನಿಂತಿತು. ಮೆಲ್ಲನೆ ಕಣ್ಣುಗಳು ಮುಚ್ಚಲುತೊಡಗಿದುವು. ಪೂರ್ಣ ಮುಚ್ಚಿದುವು.

"ಟಕ್ ಟಕ್ ಟಕ್"

ಹೊರಗಿನಿಂದ ಬಾಗಿಲನ್ನು ಯಾರೋ ಬಡಿಯತೊಡಗಿದರು. "ಬಾಗಿಲಿಗೆ ಅಗಳಿ ಇಲ್ಲ; ಸ್ವಲ್ಪ ಜೋರಾಗಿ ದೂಡಿರಿ" ಎಂದೆ. ಬಾಗಿಲನ್ನು ದೂಡಿ ಒಂದು ವ್ಯಕ್ತಿ ಒಳಗೆ ಬಂದಿತು. ನಮಸ್ಕಾರದ ಸಾಂಪ್ರದಾಯಿಕತೆ ಮುಗಿಯಿತು. ಆ ವ್ಯಕ್ತಿಯ ಕೈಯಲ್ಲಿ ಸ್ಟೆಥಾಸ್ಕೋಪೊಂದು ಇದ್ದಿತು. ಅದನ್ನು ಕಂಡ ನಾನು, ಇವರು ಡಾಕ್ಟರರೇ ಇರಬೇಕೆಂದು ಊಹಿಸಿ ಹೇಳಿದೆ:

" ನಮ್ಮ ಮನೆಯಲ್ಲಿ, ಸುದೈವದಿಂದ ಎಲ್ಲರೂ ಆರೋಗ್ಯದಿಂದ ಇದ್ದಾರೆ!"

" ಓಹೋ" ಎಂದು ಆ ವ್ಯಕ್ತಿ ನಕ್ಕಿತು.

" ಮತ್ತೆ ನೀವು ನನ್ನ ಕಡೆಗೆ ಬಂದಿರಿ? ಯಾರಾದರೂ ಕಳಿಸಿದರೇನು? "

" ಯಾರೂ ಕಳಿಸಲಿಲ್ಲ; ನಾನೇ ಬರಬೇಕಾಯಿತು!"

" ಕಾರಣ ತಿಳಿಸಿದರೆ ಒಳಿತು! "

" ತಾಳ್ಮೆಯಿಂದ ಕೇಳಿರಿ. ಅಂಜಬೇಡಿರಿ. ನಿಮಗೆ ನಾನು ತೊಂದರೆಯನ್ನು ಕೊಡಲು ಬಂದಿಲ್ಲ. ನೀವು ಇದೀಗ ಕಥೆ ಬರೆದು ಮುಗಿಸಿದರಲ್ಲವೇ ? "

" ಹೌದು ! "

" ಆ ಕಥಾನಾಯಕ ನಾನೇ, ಡಾಕ್ಟರ್......."

" ನೀವೇಯೋ ? ಆಂ ! " ಎಂದು ಕುರ್ಚಿಯಲ್ಲಿ ಸರಿಯಾಗಿ ಕುಳಿತುಕೊಂಡೆ.

" ಅಂಜಬೇಡಿರಿ !" ಎಂದು ಮೊದಲೇ ಹೇಳಲಿಲ್ಲವೇ "

ನಾನು ನಿರುತ್ತರನಾದೆ.

" ಇಂದಿನ ತರುಣ ಕತೆಗಾರರ ಬಗ್ಗೆ, ನನಗೇಕೋ ಕರುಣೆ ಎನಿಸುತ್ತಿದೆ!"

" ಏಕೆ ? "

" ಏಕೆ ಎಂದು ಒಡೆದು ಹೇಳಲೇ ? ಈ ತರುಣ ಕತೆಗಾರರಿಗೆ ತಮ್ಮ ಕಥೆಗಳಲ್ಲಿ ಕಾಮುಕತೆಯನ್ನು ಕಾಣಿಸಿದ ಹೊರತು ಸಮಾಧಾನವೇ ಇಲ್ಲವೇನೋ ! ಎದ್ದು ಬಿದ್ದು ವ್ಯಭಿಚಾರವನ್ನು ವರ್ಣಿಸಿ, ಕಾಮವನ್ನು ಕೆರಳಿಸುವ ಸನ್ನಿವೇಶ ! ಇದರ ಹೊರತು ಮತ್ತೇನಾದರೂ ಇದೆಯೇ ? "

"................"

" ನನ್ನ ಅಧಿಕಪ್ರಸಂಗತನಕ್ಕೆ ನೀವು ಸಿಟ್ಟಾಗಬೇಡಿರಿ. ನೀವು ತರುಣ ಕಥೆಗಾರರಿಷ್ಟೇ ಹೀಗೆ ಮಾಡುವರೆಂದಲ್ಲ; ಕೆಲ ಹಿರಿಯ ಸಾಹಿತಿಗಳೂ ಅದಕ್ಕೇ ಅಂಟಿಕೊಂಡು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರ ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡುವ ಪ್ರಯತ್ನ ನಿಮ್ಮದು ! "

" ನಿಮ್ಮ ವಿವರಣೆ ನನಗೆ ಅರ್ಥವಾಗಲಿಲ್ಲ ! "

"ನಿಮ್ಮನ್ನು ಹೆಚ್ಚುಹೊತ್ತು ಗೊಂದಲದಲ್ಲಿ ಕೆಡಹುವುದಿಲ್ಲ. ನೀವು ಇದೀಗ ಕಥೆಯನ್ನು ಬರೆದಿರಿ. ನಾನು ನನ್ನ ಹೆಂಡತಿಯನು ಕೊಲೆ ಮಾಡಿದೆ; ಅದಕ್ಕೆ ಸಮಾಜ ತನಗೆ ತಿಳಿದಂತೆ ಇತಿಹಾಸವನ್ನು ರಚಿಸಿತು. ನೀವು ಲೇಖಕರೂ ನಾಲ್ಕು ಜನ ಆಡಿದುದನ್ನೇ ನಿಜವೆಂದು ನಂಬಿ ಕಥೆಯನ್ನು ಬರೆದಿರಿ. ನಾಳೆ ಈ ಕಥೆ ಅಚ್ಚಾದ ಮೇಲೆ, ಸಾವಿರಾರು ಜನ ಓದುವರು. ಎಂತಹ ಆಭಾಸ ! ಸತ್ಯದ ವಿಪರ್ಯಾಸ !! ಸತ್ಯಕ್ಕೆ ತೀರ ದೂರವಾದ ಕಥೆ !"

"ಹಾ— ಹಾಗಾದರೆ ನಿಮ್ಮ ಹೆಂಡತಿ— ಹೀಗಿರಲಿಲ್ಲವೇ ?"

"ಇಲ್ಲ, ಅವಳು ಮಹಾಪತಿವ್ರತೆಯಾಗಿದ್ದಳು; ಆದರೆ ಅವಳ ಸ್ವಭಾವ ವಿಚಿತ್ರವಾಗಿತ್ತು. ನನ್ನ ಸತ್ಯಕಥೆಯನ್ನು ನಿದಾನವಾಗಿ ಕೇಳಿರಿ! ಅವಳ ತಂದೆಯೆ ನನ್ನನ್ನು ಗ್ರ್ಯಾಂಟ್ ಮೆಡಿಕಲ್ ಕಾಲೇಜಿಗೆ ಕಳಿಸಿದರು. ಅಭ್ಯಾಸದ ವೆಚ್ಚದ ಭಾರವನ್ನು ಅವರೇ ಹೊತ್ತುಕೊಂಡರು. **ಎಮ್. ಬಿ. ಬಿ. ಎಸ್.** ಪರೀಕ್ಷೆಯನ್ನು ಪಾಸಾಗಿ ನಾನು ತಿರುಗಿ ಬಂದೆ. ಮದುವೆಯೂ ಆಯಿತು. ಅವಳ ಅಪ್ಪನೇ, ಹುಬ್ಬಳ್ಳಿಯಲ್ಲಿ ದವಾಖಾನೆ ತೆರೆಯಲು ಮತ್ತೆ ಹತ್ತುಸಾವಿರ ರೂಪಾಯಿಗಳನ್ನು ಸಾಲಕೊಟ್ಟರು. ಇದೇ ಸಾಲ ನನ್ನ ಸ್ವಾಮಿತ್ವವನ್ನು ಬಲಿ ತೆಗೆದುಕೊಂಡಿತು. ಸಣ್ಣ ಹಣವಲ್ಲ; ತಿರುಗಿಸುವುದು ಅಸಾಧ್ಯವಾಗತೊಡಗಿತು. ನನ್ನ ಸ್ವಾಭಿಮಾನವೆಲ್ಲ ಮಾವನ ಸಾಲದ ಭಾರದ ಕೆಳಗೆ ನುಚ್ಚುನೂರಾಗಿ ಹೋಯಿತು. ಮಾವನ ಮಗಳೂ ದಿನಕ್ಕೊಂದೆರಡು ಸಲವಾದರೂ ತನ್ನ ತಂದೆಯ ಹಣದ ಜಂಭದ ಮಾತನ್ನು ಹೇಳಿ,ಹಂಗಿಸಿ ತೋರಿಸತೊಡಗಿದಳು. "ಇವರ ಜತೆಯಲ್ಲಿ ಲಗ್ನವಾಗಿ ಸುಖವನ್ನೇನು ಪಡೆದೆ? ಒಂದು ತೊಲೆ ಬಂಗಾರ ತೊಡಿಸಿದರೆ ನನ್ನಾಣೆ!" ಇಂತಹವೇ ಮಾತು. ಹಗಲು ದುಡಿತ ಮುಗಿಸಿ ಮನೆಯಲ್ಲಿ ವಿಶ್ರಾಂತಿಗೆಂದು ಬಂದರೆ, ಮನೆಯವಳು ಈ ರೀತಿಯಲ್ಲಿ ಹಂಗಿಸಿ ನನ್ನ ದಣಿವನ್ನು ಇಮ್ಮಡಿಸಿಬಿಡುತ್ತಿದ್ದಳು. ಅವಳೇನೋ ಮಾತಾಡಿ ಪಾರಾಗುತ್ತಿದ್ದಳು; ಆದರೆ ಆ ಮಾತುಗಳು ನನ್ನ ಎದೆಯಲ್ಲಿ ತೂತನ್ನು ಕೆಡಹತೊಡಗಿದುವು. ಬಾಣಬಿಟ್ಟ ಸ್ಥಳದಲ್ಲಿ ಅದರ ಗುರುತು ಉಳಿಯಲಾರದು; ಆದರೆ ನೆಟ್ಟ ಸ್ಥಳದಲ್ಲಿ ಅಳಿಯದ ತೂತು ಉಳಿಯುತ್ತದೆ. ಸಹನೆಗೂ ಮಿತಿ ಇದೆ. ಅವಳ ತಂದೆಯ ದುಡ್ಡನ್ನು ಹೇಗಾದರೂ ಮುಗಿಸಲೇಬೇಕು— ಎಂದು ಹಟತೊಟ್ಟು, ದವಾಖಾನೆಯಲ್ಲಿ ಹೆಚ್ಚು ಹೊತ್ತು ದುಡಿಯತೊಡಗಿದೆ. ಹೆಂಡತಿಯ ಹಂಗಿನ ಮಾತನ್ನು ಕೇಳುತ್ತಲೆ ನಡೆದೆ. ಬೇರೆ ಗತಿ ಇರಲಿಲ್ಲ."

"ಮುಂದೆ ಸಾಲ ತೀರಿತೆ ?"

"ಇಲ್ಲ. ನಿಧಾನವಾಗಿ ಕೇಳಿರಿ. ಒಂದು ದಿನ ಮುಂಜಾನೆ ದವಾಖಾನೆಯಲ್ಲಿ ಕುಳಿತಾಗ, ಒಬ್ಬ ೪೦ ವಯಸ್ಸಿನ ಹೆಣ್ಣುಮಗಳು, ಸುಮಾರು ೫೦ ವರುಷದ ಮುದುಕನನ್ನು, ಟಾಂಗೆಯೊಳಗಿಂದ ಕರೆದುಕೊಂಡು ಬಂದಳು. ಅವರಿಬ್ಬರ ಹಿಂದೆಯೆ, ಸುಮಾರು ಹದಿನೆಂಟು ವಯಸ್ಸಿನ ತುಂಬುಯೌವನೆಯೊಬ್ಬಳಿದ್ದಳು ಆ ಹೆಣ್ಣುಮಗಳು, ಮುದುಕನಿಗೆ ಔಷಧಕೊಡಲು ಬಿನ್ನವಿಸಿಕೊಂಡಳು.

ಮುದುಕ ಆ ವಯಸ್ಸಾನ ಹೆಂಗುಸಿನ ಗಂಡನಾಗಿದ್ದ. ಹದಿನೆಂಟು ವಯಸ್ಸಿನ ಆ ತರುಣಿ, ಅವರಿಬ್ಬರ ಮಗಳಾಗಿದ್ದಳು. ನಾನು ಮುದುಕನನ್ನು ಪರೀಕ್ಷಿಸಿದೆ. ಅವನು ಉದರರೋಗದಿಂದ ಬಳಲುತ್ತಿದ್ದ. ರೋಗ ಔಷಧದಿಂದ ವಾಸಿಯಾಗುವಂತಿರಲಿಲ್ಲ. ಆಪರೇಶನ್ ಮಾಡಿಸಬೇಕಿತ್ತು. ಸುಮಾರು ೧೦೦—೧೫೦ ರೂಪಾಯಿಗಳು ಬೇಕಾಗಬಹುದೆಂದು ಆ ಹೆಣ್ಣುಮಗಳಿಗೆ ತಿಳಿಸಿದೆ. ಅವಳು ನಿಂತಲ್ಲಿಯೆ ಕುಳಿತು ಅಳುವುದಕ್ಕೆ ಪ್ರಾರಂಭಿಸಿದಳು. “ಹ್ಯಾಂಗಾದರೂ ಮಾಡ್ರೀಯಪ್ಪಾ! ಜೀವಾ ಉಳಿಸಿರಿ! ನೆಟ್ಟಗ ಮಾಡಿರಿ!! ರೂಪಾಯಿ ಬಾಳಷ್ಟು ಹೇಳಬ್ಯಾಡ್ರಿ! ನನ್ನ ಮನ್ಯಾಗ ಇದ್ದದ್ದೆಲ್ಲಾ ಬಳಕೊಂಡು ತಂದೀನಿ ನೋಡ್ರಿ!” ಎಂದು, ಅವಳು ನನ್ನ ಕೈಯಲ್ಲಿ ೨೫ ರೂಪಾಯಿಗಳನ್ನಿರಿಸಿದಳು. ಅವಳ ದುಃಖಕ್ಕಾಗಿ ನನ್ನ ಮನಸ್ಸು ಮೊದಲು ಮೊದಲು ಕಳವಳಿಸಿತು; ಆದರೆ ಆ ಕಳವಳ ಬಹಳೊತ್ತು ನಿಲ್ಲಲಿಲ್ಲ. ಮಾವನ ಸಾಲ, ಹೆಂಡತಿಯ ಹಂಗಿನ ಮಾತು— ಈ ರೋಗದಿಂದ ನನಗೆ ಪಾರಾಗುವುದಿತ್ತು. ನಿಶ್ಚಯಸ್ವರದಲ್ಲಿ ಉತ್ತರಿಸಿದೆ: “ಈಗ ದವಾಖಾನ್ಯಾಗ ಮಲಗಿಸು! ಈಗ ಬರೇ ಔಷಧ ಕೊಡ್ತೀನಿ. ಆದರೆ ನಾಳೆ ನೀನು ಇನ್ನು ೧೦೦ ರೂಪಾಯಿ ತಂದುಕೊಡದಿದ್ದರ ಆಪರೇಶನ್ ಮಾಡೂದಿಲ್ಲ. ಬ್ಯಾರೇ ಕಡೆ ಕರಕೊಂಡು ಹೋಗೋದಿದ್ದರ ಹೋಗು ಬೇಕಾದರೆ!” ಮುದುಕಿ “ಅಯ್ಯೋ!” ಎಂದು ನಿಟ್ಟುಸಿರು ಬಿಟ್ಟಳು. ದುಃಖವನ್ನು ಅಳೆಯುವ ಥರ್ಮಾಮೀಟರ್ ಇದ್ದಿದ್ದರೆ, ಅದನ್ನು ಅವಳ ಮುಖದ ಮೇಲೆ ಹಿಡಿದಿದ್ದರೆ, ಅದರ ಮೇಲಿದ್ದ ಅಂಕಿಗಳು ಕಡಿಮೆ ಬೀಳುತ್ತಿದ್ದುವೇನೋ!

ಮರುದಿನ ಮುಂಜಾನೆ ಅವಳೇನೋ ಬಂದಳು; ಆದರೆ ಅವಳು ಒಬ್ಬಳೇ ಬಂದಿದ್ದಳು; ಜತೆಯಲ್ಲಿ ನಿನ್ನೆ ಬಂದ ಅವಳ ಮಗಳು ಬಂದಿರಲಿಲ್ಲ. ಮುದುಕಿ ನನ್ನ ಕೈಯಲ್ಲಿ ೧೦೦ ರೂಪಾಯಿಯ ನೋಟೊಂದನ್ನು ಇರಿಸುತ್ತ ಹೇಳಿದಳು: “ಯಪ್ಪಾ, ಇಕಾ ತೊಗೊಳ್ರಿ ನಿಮ್ಮ ರೂಪಾಯಿ! ಹ್ಯಾಂಗಾದರೂ ಮಾಡಿ ನನ್ನ ಗಂಡನ ಜೀವಾ ಉಳಿಸಿರಿ! ಗಡಾನು ನೆಟ್ಟಗ ಮಾಡಿರೆಪ್ಪಾ.” ನಾನು ಆಶ್ಚರ್ಯಗೊಂಡೆ. ನಿನ್ನೆ ೨೫ರ ಹೊರತು ಒಂದು ಪೈಯೂ ಮನೆಯಲ್ಲಿ ಇಲ್ಲವೆಂದು ಹೇಳಿದ ಇವಳು,ಇಂದು ನೂರರ ನೋಟು ತರಬೇಕೆಂದರೆ! ಇದ್ದವರೇ ಇಲ್ಲವೆಂದು ಹೇಳುತ್ತಾರೆ— ಎಂದು ಭಾವಿಸಿ, ಅವಳನ್ನು ಕೇಳಿದೆ: “ಏನವ್ವಾ! ನಿನ್ನೆ ಇಲ್ಲಾ ಅಂದಿದ್ದಿ ಅಲ್ಲಾ; ಮತ್ತ ಈಗ ಹ್ಯಾಂಗ ಬಂದುವು ರೂಪಾಯಿ? ಹುಗಿದು ಇಟ್ಟಿದ್ದಿ ಕಾಣಸ್ತದ?” ಅವಳು ಮರುಮಾತನಾಡಲಿಲ್ಲ. ಕಣ್ಣುಗಳೊಳಗಿಂದ ನೀರು ಧಾರಾಳವಾಗಿ ಹರಿಯತೊಡಗಿತು. ಅವಳ ದೀನ ಮುಖಮುದ್ರೆಯನ್ನೊಮ್ಮೆ ನೋಡಿ ನನ್ನನ್ನು ನಾನೇ ಹಳಿದುಕೊಂಡೆ. ಅವಳ ಮುಗ್ಧ ಮನಸ್ಸನ್ನೇಕೆ ಕೆಣಕಿದೆನೋ— ಎಂದು ನಾನೂ ಕಳವಳಗೊಂಡೆ. ಮಾತನ್ನು ಮರೆಯಿಸಲು ಮತ್ತೆ ಕೇಳಿದೆ: “ಅಲ್ಲವ್ವಾ, ಇವೊತ್ತು ನಿನ್ನ ಮಗಳನ್ನು ಕರಕೊಂಡು ಬಂದಿಲ್ಲಾ?” ಈ ನನ್ನ ಮಾತನ್ನು ಕೇಳಿದಾಕ್ಷಣ ಅವಳಲ್ಲಿ ಅಳುವು ಜ್ವಾಲಾಮುಖಿಯಂತೆ ಸ್ಫೋಟಗೊಂಡಿತು. ‘ಇದೇನಿದು ಅವಾಂತರ!’ ಎಂದು ನಾನು ಬೆರಗಾದೆ. ಸ್ವಲ್ಪ ಸಮಯದ ನಂತರ ಅಳುವನ್ನು ನುಂಗಿ ಅವಳು ಹೇಳಿದಳು: “ಯಪ್ಪಾ, ನನ್ನ ಗಂಡನ ಜೀವ ಉಳಿಸಬೇಕಾದರ ನೀವು ರೂಪಾಯಿ ಬೇಡಿದ್ರಿ. ಬಡಮುದಿಕಿ ಎಲ್ಲಿಂದ ತರಬೇಕ್ರಿ? ನನ್ನ ಮಗಳು!.... ಅವಳನ್ನು ನಿನ್ನೆ ಟೆಂಜಿನಾಗ.... ಬ್ಯಾಡ್ರಿ! ಅದನ್ನೆಲ್ಲಾ ಕೇಳಬ್ಯಾಡ್ರಿ! ಬಡವರ ಹೆಣ್ಣುಮಕ್ಕಳ ಶೀಲಕ್ಕ ಬೆಲಿಯಿಲ್ಲರಿ! ಅವರ ರೂಪಕ್ಕ ಹಣ ಸಿಗತೈತಿರಿ!” ಮಾತಿನ ಕೊನೆಯೊಂದಿಗೆ ಅಳತೊಡಗಿದಳು. ನಾನು ಸ್ತಂಭೀಭೂತನಾಗಿ ನಿಂತುಬಿಟ್ಟೆ. ನನ್ನ ಮನಸ್ಸು ಅವಳನ್ನೂ ನನ್ನ ಹೆಂಡತಿಯನ್ನೂ ಹೋಲಿಸುವುದರಲ್ಲಿ ತೊಡಗಿತ್ತು. ‘ಗಂಡನ ಜೀವದ ಸಲುವಾಗಿ ಸ್ವಂತದ ಮಗಳ ಜೀವನವನ್ನೂ ನೋಡದ ಈ ಸಾಧ್ವಿಯೆಲ್ಲಿ? ತಂದೆಯ ದುಡ್ಡಿಗಾಗಿ ಗಂಡನ ಜೀವ ಅರೆಯುವ ನನ್ನ ಹೆಂಡತಿಯೆಲ್ಲಿ?’ ಎಂದು ಲೆಕ್ಕ ಹಾಕಿದೆ. ಸಂತಾಪ-ರೋಷ-ಕಳವಳ-ಕರುಣೆ ಎಲ್ಲ ಭಾವಗಳ ಮಿಶ್ರಣದಲ್ಲಿ, ನನ್ನ ಮನಸ್ಸು ಕಾಯ್ದಿತು. ಕಾಯ್ದ ಮನಸ್ಸಿನಿಂದಲೇ ಆ ಮುದುಕನ ಆಪರೇಶನ್ ಮುಗಿಸಿದೆ. ಆಪರೇಶನ್— ದೇವರ ದಯೆಯಿಂದ— ಸುಗಮವಾಗಿ ಸಾಗಿತು.

ಹೆಚ್ಚಿನ ದುಡಿತದಿಂದ ಅಂದು ಮೈ ನುಗ್ಗಾಗಿತ್ತು. ಮನಸ್ಸು ಭಾರವಾಗಿತ್ತು. ಅಂತಹ ಸ್ಥಿತಿಯಲ್ಲಿಯೆ ಮನೆಗೆ ಬಂದೆ. ಮನೆಯಲ್ಲಿ ಅಡಿಗೆಯಾಗಿರಲಿಲ್ಲ. ಹೊಟ್ಟೆ ಹಸಿದಿತ್ತು. “ಅಡಿಗೆಯಾಗಿಲ್ಲವೇ?” ಎಂದು ಕೇಳಿದೆ. ಅದಕ್ಕುತ್ತರವಾಗಿ ಹೆಂಡತಿ ನುಡಿದಳು: “ದುಡ್ಡು ಕೊಟ್ಟು ಇಟ್ಟ ಅಡಿಗಿಯಾಕಿನ್ನ ಕೇಳಿದ್ಹಾಂಗ ಕೇಳ್ತೀರಲ್ಲಾ!” ನನ್ನ ದೇಹದಲ್ಲಿಯ ಪ್ರತಿ ರೋಮ-ರೋಮದಲ್ಲಿಯೂ ರಕ್ತ ಕುದಿಯತೊಡಗಿತು. “ಹಾಗಾದರೆ ಖಾನಾವಳಿಗೆ ಹೋಗಿಬರುವೆ!” ಎಂದೆ. ಅದಕ್ಕವಳು: “ಏನು? ಖಾನಾವಳಿಗೆ ಹೋದರೂ ಯಾರ ದುಡ್ಡು? ನಿಮ್ಮ ಸ್ವಂತದ್ದು ಏನದ? ನನ್ನ ಅಪ್ಪನದೇ ಹೌದಲ್ಲೋ?” ನನ್ನ ಮನಸ್ಸಿನ ಮೇಲಿದ್ದ ಮಿದುಳಿನ ಸ್ವಾಮಿತ್ವ ತಪ್ಪಿತು. ಯಾವುದೋ ಉನ್ಮಾದ ನನ್ನ ತಲೆಯನ್ನು ವ್ಯಾಪಿಸಿತು. ಹೊರಚಿಲಕ ಹಾಕಿ ಒಳಗೆ ಬಂದವನೇ............”

“ಅಂ ಮುಂದೆ?”

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

"ಮುಂದಿನ ಘಟನೆಯನ್ನು ನೀವು ದಿನಪತ್ರಿಕೆಯಲ್ಲಿ ಓದಿರುವಿರಿ. ಸಮಾಜದ ಜನರು, ತಮ್ಮ ಬುದ್ಧಿಯ ಅಳವಿಗೆ ತಕ್ಕಂತೆ ಸುದ್ದಿಯನ್ನು ಹರಡುತ್ತಾರೆ ಎಷ್ಟೋ ಸಲ, ಅಸತ್ಯ ಸುದ್ದಿಗಳೂ ಸತ್ಯದ ರೂಪದಲ್ಲಿ ಹಬ್ಬುತ್ತವೆ. ಎಚ್ಚರ! ನಾಲ್ಕು ಜನ ಆಡಿದರೆಂದು ಅದರ ಮೇಲೆ ವಿಶ್ವಾಸವಿಡಬಾರದು! ಬರುವೆ ನಮಸ್ಕಾರ!"

"ನಮಸ್ಕಾರ!"

"ಟ್ರಿನ್ ಟ್ರಿನ್ ಟ್ರಿನ್" ಗಡಿಯಾರದ ಅಲಾರ್ಮ್ ಸಪ್ಪಳದಿಂದ ಎಚ್ಚತ್ತೆ. ಗಡಿಯಾರವನ್ನು ಹತ್ತಿರ ತೆಗೆದುಕೊಂಡೆ. ನಸುಕಿನಲ್ಲಿ ಏಳುವುದಕ್ಕಾಗಿ ಇಟ್ಟ ೫|| ಗಂಟೆಯ ಅಲಾರ್ಮು ಹಾಗೆಯೇ ಇತ್ತು. ಮಧ್ಯಾನ್ಹದ ೫|| ಗೂ ಅದು ಬಾರಿಸತೊಡಗಿತ್ತು.

ಆ ಗಂಟೆಯಿಂದ ಸಂಪೂರ್ಣ ಎಚ್ಚತ್ತೆ. ಬಾಗಿಲು ಹಾಕಿದಂತೆಯೆ ಇತ್ತು. 'ಎಲ್ಲವೂ ಸ್ವಪ್ನವೇ?' ಎಂದು ವಿಚಾರಿಸಿದೆ. 'ಸ್ವಪ್ನವಿದ್ದರೂ, ಸ್ವಪ್ನದ ಕಥೆ ಸತ್ಯವಿರಬಾರದೇಕೆ?' ಎಂದು ಮನಸ್ಸು ಕೇಳಿತು.

ನನ್ನ ಮನಸ್ಸು ವ್ಯಗ್ರವಾಯಿತು. ಮನಸ್ಸಿನಲ್ಲಿರುವ ತಾಕಲಾಟ ನನಗೆ ರುಚಿಸಲಿಲ್ಲ. ಮೊದಲು ಬರೆದಿಟ್ಟ ಕಥೆಯನ್ನು ಚೂರು-ಚೂರಾಗಿ ಹರಿದುಹಾಕಿದೆ.

ನಿರ್ದೋಷ ಜೀವಿ ನನಗೆ ಹೇಳಿದ ಕಥೆಯು ಸತ್ಯವಿರಲೇಬೇಕು. ನಡೆದ ಘಟನೆ ಒಂದು ಸಾಂತಸ್ವರೂಪದಲ್ಲಿದ್ದರೂ, ಸಮಾಜದ ಬಾಯಿಗೆ ಸಿಲುಕಿ ಅದು ಅನಂತವಾಗುತ್ತದೆ.

ಬೆರಗಾದಳು ಬಲು!

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ. ಎ.
ಹೈದರಾಬಾದ್ ದಕ್ಷಿಣ

ಬೆರಗಾದಳು ಬಲು ತಾಯಿ ಯಶೋದೆ
ಮುರಲೀಧರನ ಬಾಲಲೀಲೆಗೆ || ಪಲ್ಲವಿ ||

ಬಟ್ಟಲ ಬೆಣ್ಣೆಯು ಮೆದ್ದುದ ಕಂಡು
ಗಂಟಲಕ್ಕಿತ್ತಿ ಬಿಕ್ಕುವನೆಂದು—
ಬಾಲನ ಕರೆದು ಬಾಯ್ದೆರೆಯೆನಲು
ನೋಡುತೆ ಬ್ರಹ್ಮಾಂಡದ ತುದಿ-ಮೊದಲು
ಬೆರಗಾದಳು ಬಲು ತಾಯಿ ಯಶೋದೆ || ೧ ||

ನುಡಿದಳು ಮಳೆಯಲಿ ಆಡದಿರೆಂದು
ಬೇನೆಬೇಸರಿಕೆ ಮಾಡುವುವೆಂದು—
ಗೋಳಿಡೆ ಮಳೆಯಲಿ ಗೊಲ್ಲರ ದಂಡು
ಕಿರುಬೆರಳಲಿ ಗಿರಿಯೆತ್ತಿದ ಕಂಡು
ಬೆರಗಾದಳು ಬಲು ತಾಯಿ ಯಶೋದೆ || ೨ ||

ತಡೆದಳು ಕಾಡೊಳು ಅಲೆಯದಿರೆಂದು
ಹುಳುಹುಪ್ಪಡಿಗಳ ಭಯವಿಹುದೆಂದು—
ಬೆದರಿರೆ ಉರಗಕೆ ಹಸುಗಳ ಹಿಂಡು
ದುರುಳ ಕಾಳಿಂಗನ ತುಳಿದುದ ಕಂಡು
ಬೆರಗಾದಳು ಬಲು ತಾಯಿ ಯಶೋದೆ || ೩ ||

ಶಕ್ತಿಗೆ ನೆಲೆಯೊ! ಶೌರ್ಯದ ಸೆಲೆಯೊ!
ದೇವಕಿ ಸುತನ ಅಗಾಧ ಲೀಲೆಯು—
ಧೂರ್ತರ ಮುರಿಯಲು ಆರ್ತರ ಪೊರೆಯಲು
ಪೃಥ್ವಿಗೆ ಇಳಿದಿಹ ದೇವನೊಲುಮೆಯೊ!
ಬೆರಗಾದಳು ಬಲು ತಾಯಿ ಯಶೋದೆ || ೪ ||

ಓಯಾಸಿಸ್!

ಶ್ರೀ. ಗಿರೀಶ ಕಾರ್ನಾಡ, ಧಾರವಾಡ

●

ಅತ್ತಿತ್ತ ಸುತ್ತ ಮೂಡಿಹವು ಪದಚಿಹ್ನ
ನನ್ನ ಹೆಜ್ಜೆಯ ಗುರುತೆ— ಅಲ್ಲೊಂದು ಇಲ್ಲೊಂದು!
ಉರಿವ ಮರುಬಯಲಿನಲಿ, ಕಾಲ್ಸುಡುವ ಮಳಲಿನಲಿ
—ನಂತರದಿ ಬಿರುಗಾಳಿ ಅಳಿಸಲದನೆಂದು?—
ನಭವಗ್ನಿ ಕುಂಡ ಪಡುವಣದೊಳಿಳಿಯುತಿಹೆ
ನೆಲದ ಬೆಂಬಿಸಿಯು ಇಳಿದಿಲ್ಲವಿನ್ನು!
ನಂದುತಿಹ ಹಣತಿಗೆಯ ತೆರದಿ ಬೆಳಕಳಿಯುತಿದೆ
ಮನದ ಮಿಣುಕಾಸೆ ಕಳೆದಿಲ್ಲವಿನ್ನು!
ಒಂಟೆಯನ್ನೇರಿ ಹೊರಟಿದ್ದೆ— ಕುಂಟುತ ಬಂದೆ.
ಕಳೆದೆನೆಲ್ಲವ; ಉಳಿದುದೊಂದು ಆಸೆಯ ಮಬ್ಬೆ
ದೇಹವನು ಸೇರಿ, ಅವಯವಗಳನು ದಹಿಸುತಿಹ
ನಾಗವಿಷದೊಲು ಸುಡುತ, ಹೆಚ್ಚಿಪುದು ಕ್ಷೋಭೆ.
ಮುಚ್ಚಂಜೆಗೆಂಪು ನೆರೆಯುತಿದೆ ಹೆಳಗಾಗಸದಿ
ಮಂದ ಮುಂಜಿನ ತೆರೆಯು ಹರಡುತಿದೆ ಜಗದಿ
ಬರುವ ಕಾವಳದಿ ನಕ್ಷತ್ರಗಳು ಹೆಚ್ಚುತಿವೆ
ಹುಚ್ಚಾಸೆಯಾ ಕೊಚ್ಚು ಹೆಚ್ಚುತಿದೆ ಮನದಿ.......
ಹಾ! ಹೃದಯದಿಂ ತೊಳೆದ ಸಾಸದೀ ಮಸಿಯಲ್ಲಿ
ತುಳುಕಿ ಕುಂಚವ ನಿಶೆಯು ನೀಲನಭದಲ್ಲಿ
ಚಿತ್ರ ಬಳಿದಂತೆ ಮೂಡಿಹುದು ಬಿರಿಕ್ಷಿತಿಜದಲಿ
ಖರ್ಜೂರ ವೃಕ್ಷದಾ ಕೃಷ್ಣಛಾಯೆ!
ಓ ಆಶೆಯಾ ಕೊನೆಯೆ! ಓ ದೈವೀಮಾಯೆ!

ಶ್ರೀ ಪುರಂದರದಾಸರು

ಶ್ರೀ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ

ಸಂಗೀತಪ್ರಪಂಚದಲ್ಲಿ ಪುರಂದರದಾಸರು ಮಾಡಿದ ಮಹತ್ಕಾರ್ಯವು ನಮ್ಮಲ್ಲಿ ಅನೇಕ ಜನರಿಗೆ ಗೊತ್ತಿಲ್ಲ. ಕರ್ನಾಟಕದ ಸಂಗೀತವು, ಒಂದು ಕಾಲದಲ್ಲಿ ಪುರಂದರದಾಸರ ಕಾರ್ಯದಿಂದಲೆ ಮೇಲ್ಮೆಯನ್ನು ಪಡೆಯಿತು.

●

ಕನ್ನಡ ನಾಡಿನಲ್ಲಿ ಪುರಂದರದಾಸರ ಹೆಸರು ಎಲ್ಲೆಲ್ಲಿಯೂ ಮನೆಮಾತಾಗಿದೆ. ಅವರ ಕೀರ್ತನೆ-ಸುಳಾದಿ-ಉಗಾಭೋಗಗಳನ್ನು ಕೇಳದ ಒಬ್ಬ ಕನ್ನಡಿಗನೂ ದೊರೆಯಲಾರನು. ನಮ್ಮ ಉತ್ತರ-ಕರ್ನಾಟಕದ ಹಳ್ಳಿಗಳಲ್ಲಿ ಇರುವ ದಂಡಿಗೆದಾಸರು, ಗೊಂದಲಿಗರು, ಜೋಗಿಗಳು— ಇವರೆಲ್ಲ, ನೂರುಗುಡಿಸಿಲ ಕಿರುವಳ್ಳಿಯವರ ಕಿವಿಗೂ ಪುರಂದರದಾಸರ ಹಾಡು-ಕೀರ್ತನೆಗಳನ್ನು ತಲ್ಪಿಸಿದ್ದಾರೆ. ಪುರಂದರದಾಸರ ನೀತಿಯ ಮಾತುಗಳೆಷ್ಟೋ, ಹಳ್ಳಿಯ ಜನರ ಬಾಯಲ್ಲಿ ಗಾದೆಯ ಮಾತಿನಂತೆ ಸ್ಥಾನವನ್ನು ಪಡೆದಿವೆ. ತೀರ ಹಳ್ಳಿಗರಿಗೆ ಪುರಂದರದಾಸರೆಂದರೆ ಯಾರೆಂಬುದು ಗೊತ್ತಿರಲಿಕ್ಕಿಲ್ಲ. ಆದರೆ ನಾಗರಿಕರಿಗೆ ಪುರಂದರದಾಸರೆಂದರೆ ಒಬ್ಬ ದೊಡ್ಡ ಭಕ್ತರೆಂಬುದು ಗೊತ್ತಿಲ್ಲದೆ ಇಲ್ಲ. ಪುರಂದರದಾಸರ ಪೂರ್ವಜೀವನದ ಕೃಪಣತೆಯ ಕಥೆ, ಅವರ ಹೆಂಡತಿ ಬ್ರಾಹ್ಮಣನೊಬ್ಬನಿಗೆ ಮೂಗುತಿಯನ್ನು ದಾನವೆಂದು ಕೊಟ್ಟಕಥೆ, ಅದರಿಂದಲೇ ಅವರಲ್ಲಿ ವಿರಕ್ತಿಯುಂಟಾಗಿ ಶ್ರೀ ವ್ಯಾಸರಾಯಸ್ವಾಮಿಗಳಲ್ಲಿ ದೀಕ್ಷೆಪಡೆದು ದಾಸರಾದ ವಿಷಯ, ಪಂಢರಪುರದಲ್ಲಿ ದಾಸರು ತೋರಿಸಿದ ಪವಾಡಗಳು— ಇವೆಲ್ಲವನ್ನೂ ನಮ್ಮ ನಾಗರಿಕ ಕನ್ನಡಿಗರು ಚೆನ್ನಾಗಿ ಅರಿತಿರುವರು. ಆದರೆ ಒಂದು ಆಶ್ಚರ್ಯದ ಸಂಗತಿ: ಪುರಂದರದಾಸರು ಶ್ರೇಷ್ಠಭಕ್ತರೆಂದು ಮಾತ್ರ ಬಹುಜನರಿಗೆ ಪರಿಚಿತರಾಗಿರುವರು; ಅವರು ಸಂಗೀತಶಾಸ್ತ್ರದಲ್ಲಿ ತೋರಿಸಿದ ದಿವ್ಯವ್ಯಕ್ತಿತ್ವವನ್ನು ಅರಿತ ಕನ್ನಡಿಗರು ನಮ್ಮಲ್ಲಿ ತೀರ ಕಡಿಮೆ.

ಕರ್ನಾಟಕದಲ್ಲಿ ಪುರಂದರದಾಸರ ಸ್ಥಾನ ಈ ಬಗೆಯದಿದ್ದರೂ, ದಕ್ಷಿಣಭಾರತದ ತೆಲುಗು ತಮಿಳು ಮಲೆಯಾಳು ಪ್ರದೇಶಗಳಲ್ಲೆಲ್ಲ, ಇವರು ಶ್ರೇಷ್ಠ ವಾಗ್ಗೇಯಕಾರರೆಂಬ ಕೊಂಡಾಟ ಕೇಳಬರುತ್ತದೆ. ಕರ್ನಾಟಕ ಸಂಗೀತಪ್ರಪಂಚಕ್ಕೆಲ್ಲ ಪುರಂದರದಾಸರು ಸನ್ಮಾನ್ಯ ಗುರುಗಳೆಂಬ ಮಾತನ್ನು ಅವರು ಅರಿತು ನಡೆಯುತ್ತಾರೆ. ಕರ್ನಾಟಕ ಸಂಗೀತದ ಪರಂಪರೆಗೆ ಉತ್ತರಕರ್ನಾಟಕದಲ್ಲಿ ಈಗ ವಿಚ್ಛಿತ್ತಿ ಒದಗಿದೆ; ಎಂತಲೇ ಪುರಂದರದಾಸರ ಸಂಗೀತವ್ಯಕ್ತಿತ್ವವು ಇತ್ತಣ ಭಾಗದವರಿಗೆ ಮರೆತೇಹೋಗಿದೆ.

ಒಂದು ಕಾಲದಲ್ಲಿ ವಿಂಧ್ಯಾದ್ರಿಯಿಂದ ದಕ್ಷಿಣದ ಭಾರತ ಪ್ರದೇಶದಲ್ಲೆಲ್ಲ— ಸ್ವಲ್ಪ ಹೆಚ್ಚುಕಡಿಮೆ— ಒಂದೇ ಬಗೆಯ ಸಂಗೀತಪದ್ಧತಿಯು ಪ್ರಚಾರದಲ್ಲಿದ್ದಿತು. ಆ ಸಂಗೀತ ಪದ್ಧತಿಯನ್ನು ಕುರಿತು ಬರೆದ ಶಾಸ್ತ್ರಗ್ರಂಥಗಳು ಕರ್ನಾಟಕ ಪ್ರದೇಶದಲ್ಲಿಯೆ ರಚನೆಗೊಂಡಿವೆ. ಔತ್ತರೇಯ ಸಂಗೀತಗಾರರೂ ಇಂದು ಪ್ರಮಾಣಗ್ರಂಥವೆಂದು ಮನ್ನಿಸುವ 'ಸಂಗೀತ ರತ್ನಾಕರ' ಎಂಬ ಗ್ರಂಥವು ಕರ್ನಾಟಕದಲ್ಲಿ ರಚಿತವಾದುದಿಷ್ಟೇ ಅಲ್ಲ; ಅದರ ಮೇಲೆ ಟೀಕೆ-ಟಿಪ್ಪಣಿ-ವ್ಯಾಖ್ಯಾನಗಳನ್ನು ಬರೆದ 'ಕಲ್ಲಿನಾಥ'ನು ಅಚ್ಚಕನ್ನಡಿಗನು. ವಿಜಯನಗರದ ೨ನೆಯ ದೇವರಾಯನ ಆಸ್ಥಾನವಿದ್ವಾಂಸನಾಗಿದ್ದು, ಅವನಿಂದ 'ರಾಯ ವೈಕಾರತೊಡರಮಲ್ಲ' ಎಂಬ ಬಿರುದನ್ನು ಪಡೆದಿದ್ದನು. ಸರ್ವಶಾಸ್ತ್ರಪ್ರವೀಣರಾದ ಶ್ರೀವಿದ್ಯಾರಣ್ಯರೂ 'ಸಂಗೀತಸಾರ' ಎಂಬ ಹೆಸರಿನ ಶಾಸ್ತ್ರಗ್ರಂಥವನ್ನು ಬರೆದಿರುವರೆಂದು ತಿಳಿಯುವುದು. ಒಂದೇ ಮಾತಿನಲ್ಲಿ ಇಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ: ೧೫ನೆಯ ಶತಮಾನದ ಕೊನೆಯವರೆಗೂ, ದಕ್ಷಿಣ ಭಾರತದಲ್ಲಿ ಒಂದೆ ಪದ್ಧತಿಯ ಸಂಗೀತ ಪ್ರಚಾರದಲ್ಲಿತ್ತು. ಅದು ಕರ್ನಾಟಕ ಸಂಗೀತವೆಂದು ಕರೆಯಿಸಿಕೊಳ್ಳುತ್ತಿತ್ತು.

ಪುರಂದರದಾಸರ ಉದಯಕ್ಕಿಂತ ಮೊದಲು, ಇಲ್ಲಿಯ ಸಂಗೀತ 'ಕರ್ನಾಟಕ ಸಂಗೀತ' ಎಂದು ಕರೆಯಿಸಿಕೊಳ್ಳುತ್ತಿತ್ತೇನೋ ಸರಿಯೆ; ಆದರೆ ಸಂಗೀತಕ್ಕೆ ಬೇಕಾಗುವ ಗೀತಪ್ರಬಂಧಗಳೆಲ್ಲ ಸಂಸ್ಕೃತ ಭಾಷೆಯವಾಗಿಯೆ ಇರುತ್ತಿದ್ದುವು. ಸಾಮಾನ್ಯ ಜನರು ದೇಶಭಾಷೆಯ ಪದ-ಪದ್ಯಗಳನ್ನು, ಜಾನಪದ ಸಂಗೀತ ಪದ್ಧತಿಯಲ್ಲಿ ಹಾಡಿಕೊಳ್ಳುತ್ತಿರಬಹುದಿಷ್ಟೆ! ಆದರೆ ಸಂಗೀತ ವಿದ್ವಾಂಸರೆನಿಸಿಕೊಳ್ಳುವವರು ದೇಶಭಾಷೆಯ ಪದ-ಪ್ರಬಂಧಗಳನ್ನು ಹಾಡುತ್ತಿರಲೇ ಇಲ್ಲವೆಂದು ತೋರುವುದು. ಹಾಗವರು ಹಾಡುತ್ತಿದ್ದರೆ, ಅಂತಹ ಪದ-ಪ್ರಬಂಧಗಳಲ್ಲಿ ಕೆಲವಾದರೂ ಇದುವರೆಗೆ ಉಳಿಯಬಹುದಾಗಿತ್ತು; ಆದರೆ ಒಂದೂ ಉಳಿದು ಬಂದ ಉದಾಹರಣೆ ಕಾಣುವುದಿಲ್ಲ.

ಪುರಂದರದಾಸರು ಸಂಗೀತಕ್ಷೇತ್ರದಲ್ಲಿ ಕಾರ್ಯ ಮಾಡಿದುದೇ ತಡ; ಕನ್ನಡನುಡಿಗೆ ಸಂಗೀತಪ್ರಪಂಚದಲ್ಲಿ ಉಚ್ಚಸ್ಥಾನವೇ

ದೊರೆಯಿತು. ಈ ದಾಸರು, ಸಂಗೀತಶಾಸ್ತ್ರದಲ್ಲಿ ಪಾರಂಗತತೆಯನ್ನು ಪಡೆದ ಭಗವದ್ಭಕ್ತರೇ ಆಗಿರಬೇಕು! ಭಕ್ತಿರಸವನ್ನು ಹರಿಸುವ ಸಾಹಿತ್ಯವನ್ನು ಅಗಣಿತ ಪ್ರಮಾಣದಲ್ಲಿ ನಿರ್ಮಿಸಿದಂತೆ, ಸಂಗೀತ ವಿದ್ವಾಂಸರಿಗೆ ಬೇಕಾಗುವಂತಹ ಲಕ್ಷ್ಯ ಗೀತಗಳನ್ನೂ ವಿವಿಧರಾಗ-ತಾಳಗಳ ಕೀರ್ತನ-ಪ್ರಬಂಧಗಳನ್ನೂ ನಿರ್ಮಿಸಿಕೊಟ್ಟರು. ಎಂತಲೇ ಕರ್ನಾಟಕ ಸಂಗೀತಪ್ರಪಂಚದಲ್ಲಿ ಇವರು ಶ್ರೇಷ್ಠ ವಾಗ್ಗೇಯಕಾರರು— ಎಂಬ ಶಾಶ್ವತಕೀರ್ತಿಯನ್ನು ಸಂಪಾದಿಸಿರುವರು.

'ವಾಗ್ಗೇಯಕಾರ' ಎಂದರೆ ಏನು? ಪುರಂದರದಾಸರನ್ನು ವಾಗ್ಗೇಯಕಾರರೆಂದು ಏಕೆ ಹೇಳಬೇಕು? 'ಸಂಗೀತರತ್ನಾಕರ' ಎಂಬ ಗ್ರಂಥವನ್ನು ಬರೆದ ಶಾರ್ಙ್ಗದೇವನು:

'ವಾಚಂ ಗೇಯಂಚ ಕುರುತೇ ಯಃ ಸವಾಗ್ಗೇಯಕಾರಕಃ'

ಎಂದು ವಾಗ್ಗೇಯಕಾರನ ಲಕ್ಷಣವನ್ನು ಹೇಳಿದ್ದಾನೆ. 'ಯಾವನು ಮಾತನ್ನು ಹಾಡನ್ನಾಗಿಯೂ ಮಾಡಬಲ್ಲನೊ, ಅವನು ವಾಗ್ಗೇಯಕಾರ ಎನಿಸುವನು' ಎಂದು ಇದರ ಅರ್ಥ. ಪುರಂದರದಾಸರ ಅನ್ಯಾದೃಶವಾದ ದೈವಭಕ್ತಿಯೂ ಸಂಗೀತದ ಪ್ರಾವೀಣ್ಯವೂ ಅವರ ಮಾತನ್ನೆಲ್ಲ ಗೀತಗಳನ್ನಾಗಿಸಿದುವು. ಆ ಗೀತಗಳನ್ನು ಅವರೂ ಗಾಯನ ಮಾಡಿದರು; ಬೇರೆ ಸಂಗೀತ ವಿದ್ವಾಂಸರಿಂದಲೂ ಗಾಯನ ಮಾಡಿಸಿದರು. ಎಂತಲೆ ಪುರಂದರದಾಸರ ತರುವಾಯ ಬಂದ ಸಂಗೀತದ ಲಕ್ಷಣಗ್ರಂಥಕಾರರೂ ವಾಗ್ಗೇಯಕಾರರೂ ಪುರಂದರ ದಾಸರನ್ನು ಗುರುಸ್ಥಾನದಲ್ಲಿ ಇಟ್ಟುಕೊಂಡು ಹೊರಟಿರುವರು.

ಪುರಂದರದಾಸರ ಕೃತಿರಚನೆಯ ವೈವಿಧ್ಯವನ್ನು, ಅವರ ಪರಂಪರೆಯ ಶಿಷ್ಯರಾದ ಶ್ರೀ ಪ್ರಸನ್ನವೆಂಕಟದಾಸರು ಹೀಗೆ ಹೇಳಿದ್ದಾರೆ:

"ಗೀತಠಾಯಿ ಸುಳಾದ್ಯುಗಾಭೋಗ ಪದ್ಯಪದ-
ವ್ರಾತಪ್ರಬಂಧ ರಚಿಸಿ ವಿಠ್ಠಲನ |
ಪ್ರೀತಿಬಡಿಸಿ ಪ್ರತ್ಯಕ್ಷಕಂಡು ನಲಿವ ವೈಷ್ಣವಾಗ್ರ-
ನಾಥ ಪ್ರಸನ್ನವೆಂಕಟಕೃಷ್ಣಪ್ರಿಯನ— ವಂದಿಸುವೆ!"

ಗೀತಠಾಯಿ, ಸುಳಾದಿ, ಉಗಾಭೋಗ, ಪದ್ಯ, ಪದ, ಪ್ರಬಂಧ— ಇಷ್ಟೆಲ್ಲ ಜಾತೀಯ ಕೃತಿಗಳನ್ನು ಪುರಂದರದಾಸರು ರಚಿಸಿದ್ದಾರಂತೆ. ಇವೆಲ್ಲವೂ ಸಂಗೀತಶಾಸ್ತ್ರದಲ್ಲಿ ಹೇಳಿದ ವಾಗ್ಗೇಯ ಕೃತಿಗಳು. ಪುರಾತನ ಲಕ್ಷಣಕಾರರು ಇವೆಲ್ಲವುಗಳಿಗೂ ತಮ್ಮ ಗ್ರಂಥಗಳಲ್ಲಿ ಲಕ್ಷಣಗಳನ್ನು ಹೇಳಿದ್ದಾರೆ. ಲಕ್ಷ್ಯಕೃತಿಗಳನ್ನೂ ಕೊಟ್ಟಿದ್ದಾರೆ.

ಪುರಂದರದಾಸರಿಗೆ ಸಂಗೀತದಲ್ಲಿ ಎಂತಹ ಪಾಂಡಿತ್ಯವಿದ್ದಿತೆಂಬುದನ್ನು, ಅವರ ಈ ಒಂದು ಕೀರ್ತನೆಯಿಂದಲೇ ತಿಳಿದುಕೊಳ್ಳಬಹುದು:

"ತಾಳ ಬೇಕು ತಕ್ಕ ಮೇಳಬೇಕು— ಒಳ್ಳೇ
ವೇಳೆ ಬೇಕು ಗಾನ ಕೇಳಬೇಕೆಂಬವರಿಗೆ ||ಪಲ್ಲವಿ||
ಗಳಶುದ್ಧಿ ಇರಬೇಕು, ತಿಳಿದು ಹಾಡಬೇಕು
ಕಳವಳ ಬಿಡಬೇಕು, ಕಳೆಮೊಗ ಇರಬೇಕು ||೧||
ಯತಿ ಪ್ರಾಸ ಇರಬೇಕು, ಗತಿಗೆ ನಿಲ್ಲಿಸಬೇಕು
ರತಿಪತಿಪಿತನೊಳು ಅತಿಪ್ರೇಮವಿರಬೇಕು ||೨||
ಹರಿದಾಸನಾಗಲು ಬೇಕು, ಹರುಷಹೆಚ್ಚಲು ಬೇಕು
ಪುರಂದರ ವಿಠಲನಲ್ಲಿ ಸ್ಥಿರಚಿತ್ತವಿರಬೇಕು ||೩||

ದಾಸರು ಹೇಳಿರುವ ಈ ಸಂಗೀತಕಾರನ ರೀತಿ-ನೀತಿಗಳು, ಲಕ್ಷಣಗ್ರಂಥಗಳಲ್ಲಿ ಹೇಳಿದುವೇ ಆಗಿವೆ. ಅವರು ರಚಿಸಿರುವ ವಿವಿಧ ಕೃತಿರೀತಿಯಲ್ಲಿ 'ಗೀತಠಾಯಿ' ಎಂದರೆ, ವಿಲಂಬಿತಗತಿಯಲ್ಲಿ, ರಾಗಾಲಾಪನೆಗೆ ಪ್ರಾಮುಖ್ಯ ಕೊಟ್ಟು ಹಾಡಲು ಬರುವ 'ಖ್ಯಾಲ್' ಜಾತಿಯ ಕೃತಿಗಳು. ದಕ್ಷಿಣದೇಶದಲ್ಲಿ ಇಂತಹ ಗೀತಕೃತಿಗಳನ್ನೆ 'ಪಲ್ಲವಿ' ಎಂದು ಹೇಳುವರು.

ದಾಸರ ಉಗಾಭೋಗ-ಸುಳಾದಿಗಳನ್ನು ಹೇಳುವವರು, ಇಂದು ಹೇಗೋ ಹೇಗೋ -- ಲಕ್ಷಣವನ್ನರಿಯದೆ ಹೇಳುತ್ತಾರೆ. ಉಗಾಭೋಗವೆಂಬುದು ಆಲಪ್ತಿಪ್ರಧಾನವಾದ ಗೀತಪದ್ಧತಿಯಾಗಿದೆ. ಇದಕ್ಕೆ ಲಯದ ಆವಶ್ಯಕತೆಯಿಲ್ಲ. 'ಉಗಾಭೋಗ' ಎಂಬುದು ತದ್ಭವ ಪದವಾಗಿದೆ. ಇದರ ಮೂಲ ಸಂಸ್ಕೃತಪದವು 'ಉದ್ಗ್ರಾಹಾಭೋಗ' ಎಂದಿದೆ. ಇದು 'ಉದ್ಗ್ರಾಹ' ಮತ್ತು 'ಆಭೋಗ' ಎಂಬ ಎರಡು ಪದಗಳು ಕೂಡಿ ಆದ ಸಮಸ್ತಪದವು. ಗೇಯಯೋಗ್ಯ ಕೃತಿಗಳು ಐದು 'ಧಾತು'ಗಳಿಂದ ಕೂಡಿ ಆಗಿರಬೇಕೆಂದು ಪ್ರಾಚೀನ ಲಕ್ಷಣಕಾರರು ಹೇಳಿದ್ದಾರೆ. ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರ, ಆಭೋಗ— ಇವೇ ಐದು ಆ 'ಧಾತು'ಗಳು. ಪುರಂದರದಾಸರು ರಚಿಸಿದ ಕೀರ್ತನ-ಪ್ರಬಂಧಗಳು ಈ ಐದೂ ಅಂಗಗಳಿಂದ ಕೂಡಿ ಲಕ್ಷಣವಿಶುದ್ಧವಾಗಿರುವುವು. ಆದರೆ ಉಗಾಭೋಗಗಳು ಮಾತ್ರ ಉದ್ಗ್ರಾಹ, ಆಭೋಗ ಎಂಬ ಎರಡೇ ಧಾತುಗಳಿಂದ ಕೂಡಿ ಆಗಿರುವುವು. ಭಕ್ತಿಭಾವ ಹೊರಹೊಮ್ಮುವಂತೆ, ಕಾಲೋಚಿತ ರಾಗಾಲಾಪನೆಯೊಂದಿಗೆ ಹೇಳಲು, ಉಗಾಭೋಗದ ಸ್ವರೂಪರಚನೆ ಯುಕ್ತಿಯುಕ್ತವಾಗಿರುವುದು. ಈ ಬಗೆಯ ಕೃತಿಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಟ್ಟವರು ಪುರಂದರದಾಸರೆ!

ಸುಳಾದಿಗಾಯನದ ಪದ್ಧತಿಯನ್ನು ಬೆಳೆಸಿದವರೂ ಪುರಂದರ ದಾಸರೆ. ಪುರಂದರದಾಸರ ತರುವಾಯದ ಲಕ್ಷಣಕಾರರಲ್ಲಿ ಕೆಲವರು 'ಸುಳಾದಿ' ಎಂಬ ಕೃತಿಯ ಲಕ್ಷಣವನ್ನು ಹೇಳಿದ್ದಾರೆ. ಸುಳಾದಿಯು ತಾಳಪ್ರಧಾನವಾದುದು. ಒಂದೊಂದು ನುಡಿಯೂ ಒಂದೊಂದು ತಾಳಗತಿಯಲ್ಲಿರುವುದು. ಏಳುತಾಳಗಳಲ್ಲಿ ನಡೆಯುವ ಏಳು ನುಡಿಗಳೂ ಕೊನೆಗೊಂದು ಆಭೋಗದ ಮಾದರಿಯ ಜತೆಯೂ ಸೇರಿ ಒಂದು ಸುಳಾದಿಕೃತಿಯಾಗುವುದು. ಇದು ನರ್ತನಕ್ಕೆ ತಕ್ಕಕೃತಿಯೆಂದು ಪುಂಡರೀಕ ವಿಠಲನೆಂಬ ಲಕ್ಷಣಕಾರನು ಹೇಳಿದ್ದಾನೆ. ತಂಜಾವರದ ತುಳಜೇಂದ್ರನೆಂಬ ಸಂಗೀತ ಲಕ್ಷಣಕಾರನು, ಸುಳಾದಿಯ ಪರಂಪರೆಯನ್ನು ಬೆಳೆಸಿದವರು ಪುರಂದರದಾಸರೇ ಎಂಬುದನ್ನು ತನ್ನ 'ಸಂಗೀತ ಸಾರಾಮೃತ' ಎಂಬ ಗ್ರಂಥದಲ್ಲಿ ಹೇಳಿದ್ದಾನೆ:

"ಇತಿಸಾಲಗ ಸೂಡಸ್ಥ ಗೀತಾನಾಂ ಲಕ್ಷ್ಯಕೀರ್ತನಂ
ಶ್ರೀಪುರಂದರ ದಾಸಾದ್ಯೈಃ ಅಭಿಯುಕ್ತೈಃ ಪುರಾತನೈಃ ||

ಶ್ರೀಪುರಂದರದಾಸರಿಗೆ ಸುಷಿರವಾದ್ಯಗಳದೂ ಮೃದಂಗಾದಿ ಚರ್ಮವಾದ್ಯಗಳದೂ ಚೆನ್ನಾಗಿ ಪರಿಚಯವಿದ್ದಿತೆಂಬುದು, ಅವರ ಅನೇಕ ಕೀರ್ತನೆಗಳಿಂದ ಕಂಡುಬರುವುದು. ಉದಾಹರಣೆಗಾಗಿ—'ಶ್ರೀಶಾ ಕೊಳಲನೂದಿದನಿಂದು' ಎಂಬ ಪದ್ಯವನ್ನು ನೋಡಬಹುದು. ಅದರಲ್ಲಿ 'ಬೆರಳಾ ಸಂದೀಲಿ ಮುರಲಿಯ ಹಿಡಿದು, ಮುರಾರಿ ತಾನು ಹರುಷದಿಂದ್ಯಲಿ ಸ್ವರಗಳ ಜಡಿದು' ಎಂದು ಹೇಳುತ್ತ, ಕೊಳಲೂದುವ ಚಿತ್ರದೆಡೆಗೇ ರಸಿಕರನ್ನು ಒಯ್ದು ನಿಲ್ಲಿಸುತ್ತಾರೆ. ನರ್ತನ ಶಾಸ್ತ್ರದಲ್ಲಿಯೂ ಅವರು ಪರಿಣಿತರಿದ್ದರೆಂಬುದು,—ಶ್ರೀಕೃಷ್ಣನ ರಾಸಲೀಲೆಯನ್ನು ಬಣ್ಣಿಸಿದ ಹಲವಾರು ಕೀರ್ತನೆಗಳಿಂದ ಗೊತ್ತಾಗುವುದು.

ಇಂದು ಕರ್ನಾಟಕ ಸಂಗೀತವಿದ್ವಾಂಸರು, ಹೆಚ್ಚಾಗಿ ತೆಲುಗು ವಾಗ್ಗೇಯಕಾರರ ಕೃತಿಗಳನ್ನೇ ಹಾಡುತ್ತಾರೆ. ತೆಲುಗು ವಾಗ್ಗೇಯಕಾರರೆಲ್ಲರೂ ಪುರಂದರದಾಸರಿಗಿಂತ ಅರ್ವಾಚೀನರು. ಸುಪ್ರಸಿದ್ಧ ವಾಗ್ಗೇಯಕಾರರೆನಿಸಿಕೊಂಡ ತ್ಯಾಗರಾಜರಂತೂ ಪುರಂದರದಾಸರಿಗೆ ತುಂಬ ಗೌರವವನ್ನು ಸಲ್ಲಿಸಿದ್ದಾರೆ. ಅವರ ಭಕ್ತಿಯ ಬೆಳವಣಿಗೆಗೂ ಸಂಗೀತಸ್ಫೂರ್ತಿಗೂ, ತ್ಯಾಗರಾಜರ ತಾಮ ಹೇಳುತ್ತಿದ್ದ ಪುರಂದರದಾಸರ ಭಕ್ತಿಗೀತಗಳೇ ಮೂಲಕಾರಣವೆನಿಸಿದುವಂತೆ. ತ್ಯಾಗರಾಜರಿಗಿಂತಲೂ ಮೊದಲಿನ ತೆಲುಗು ವಾಗ್ಗೇಯಕಾರರಾದ ಅನ್ನಮಾಚಾರ್ಯರೂ ಪುರಂದರದಾಸರನ್ನು ಗೌರವಿಸಿರುವರು. ಇದೆಲ್ಲವನ್ನೂ ನೋಡಿದರೆ,—ಪುರಂದರದಾಸರ ತರುವಾಯ ಅನೇಕ ಕಾಲದ ವರೆಗೆ ದಕ್ಷಿಣದೇಶದ ಸಂಗೀತಗಾರರೆಲ್ಲ ಪುರಂದರದಾಸರ ಕೃತಿಗಳನ್ನೇ ತಮ್ಮ ಅಭ್ಯಾಸಕ್ಕೂ ಸಂಗೀತಸಭೆಗೂ ಉಪಯೋಗಿಸಿಕೊಳ್ಳುತ್ತಿದ್ದರೆಂದು ವ್ಯಕ್ತವಾಗುತ್ತದೆ.

ಸಂಗೀತಪರಂಪರೆಯಲ್ಲಿ, ಪುರಂದರದಾಸರು ಬರುವವರೆಗೂ ಖರಹರಪ್ರಿಯದ ಶುದ್ಧಸ್ವರಸಪ್ತಕದಿಂದಲೇ ಸಂಗೀತದ ಪ್ರಾಥಮಿಕ ಅಭ್ಯಾಸ ಪ್ರಾರಂಭವಾಗುತ್ತಿದ್ದಿತು ಪುರಂದರದಾಸರು ಅದನ್ನು ಬದಲಿಸಿ, ಮಾಯಾಮಾಳವಗೌಳ ಸ್ವರಸಪ್ತಕದಿಂದ ಪ್ರಾಥಮಿಕ ಸಂಗೀತಾಭ್ಯಾಸವನ್ನು ಪ್ರಾರಂಭಿಸುವ ರೂಢಿಯನ್ನು ಹಾಕಿದರಂತೆ. ಈಗ ದಕ್ಷಿಣದೇಶದಲ್ಲೆಲ್ಲ ಸಂಗೀತಾಭ್ಯಾಸವು ಮಾಯಾಮಾಳವಗೌಳದಿಂದಲೆ ಪ್ರಾರಂಭವಾಗುವುದು. ಅದಕ್ಕಾಗಿ ಉಪಯೋಗಿಸುವ "ಲಂಬೋದರ ಲಕುಮಿಕರಾ" "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೊ" ಎಂಬ ಲಕ್ಷ್ಯಗೀತಗಳು, ಪುರಂದರದಾಸರ ರಚನೆಗಳೇ ಆಗಿವೆ. ತೀರ ತೆಲುಗು-ತಮಿಳು ದೇಶದಲ್ಲಿ ಕೂಡ, ಈ ಕನ್ನಡ ಲಕ್ಷ್ಯಗೀತಗಳನ್ನೇ ಉಪಯೋಗಿಸಿಕೊಳ್ಳುತ್ತಾರೆ. ಅಲ್ಲದೆ, ಕನ್ನಡ ಭಾಷೆ ಸ್ವಲ್ಪವೂ ತಿಳಿಯದ ಅಲ್ಲಿಯ ಸಂಗೀತ ವಿದ್ವಾಂಸರು ಸಭೆಗಳನ್ನು ನಡೆಯಿಸುವಾಗ, ಕೊನೆಯಲ್ಲಿ ಒಂದೆರಡಾದರೂ ಪುರಂದರದಾಸರ ಕೀರ್ತನೆಗಳನ್ನು ಹಾಡಿಯೆ ಹಾಡುವರು. ಅದು ಹಳೆಯ ಸಂಪ್ರದಾಯ ಸಂರಕ್ಷಣೆಯ ಒಂದು ದೃಷ್ಟಾಂತವೆ ಸರಿ!

ತಮಿಳರಲ್ಲಿ ಮಾತೃಭಾಷೆಯ ಅಭಿಮಾನ ಉಗ್ರವಾದ ಮೇಲೆ, ತಮ್ಮ ನಾಡಿನ ಸಂಗೀತಗಾರರೆಲ್ಲ ತಮಿಳು ಭಾಷೆಯ ಕೃತಿಗಳನ್ನೇ ಹಾಡಬೇಕೆಂದು ಚಳವಳಿ ನಡೆಸಿದರು. ಅಲ್ಲಿಯ ಸಂಗೀತಗಾರರಿಗೆ ಪುರಂದರದಾಸರ ಕೃತಿಗಳ ಮೇಲಿನ ಮೋಹ ಕಡಿಮೆಯಾಗಲಿಲ್ಲ. ಆದುದರಿಂದ ಒಬ್ಬ ದ್ವಿಭಾಷಾಪಂಡಿತರು, ಪುರಂದರದಾಸರ ಕೆಲವು ಕೀರ್ತನೆಗಳನ್ನು ಆಯ್ದು, ಸಮರಾಗ-ಸಮತಾಳಗಳಲ್ಲಿಯೇ ತಮಿಳಿಗೆ ಭಾಷಾಂತರಿಸಿ ಪ್ರಕಟಿಸಿದ್ದಾರೆ.

ಈಗ ಐವತ್ತು ಅರುವತ್ತು ವರ್ಷದ ಹಿಂದಿನ ಉತ್ತರ ಕರ್ನಾಟಕದ ಪರಿಸ್ಥಿತಿಯನ್ನು ಕಣ್ಣಾರೆ ಕಂಡವರು ಹೇಳುತ್ತಾರೆ: ಅಂದು ಇಲ್ಲಿ ನಡೆಯುತ್ತಿದ್ದ ಸಂಗೀತಸಭೆಗಳು ಕರ್ನಾಟಕೀ ಸಂಗೀತ ವಿದ್ವಾಂಸರಿಂದಲೆ ನಡೆಯುತ್ತಿದ್ದುವಂತೆ. ಆ ವಿದ್ವಾಂಸರು ಹೆಚ್ಚಾಗಿ ಪುರಂದರದಾಸರ ಕೃತಿಗಳನ್ನೇ ಹಾಡುತ್ತಿದ್ದರಂತೆ. ಯಾರಾದರೂ ಅಪೇಕ್ಷೆಪಟ್ಟರೆ ಮಾತ್ರ, ಒಂದೋ ಎರಡೋ ತ್ಯಾಗರಾಜರ ಕೀರ್ತನೆಗಳನ್ನು ಹಾಡುತ್ತಿದ್ದರಂತೆ.

ಇದನ್ನೆಲ್ಲ ನೋಡಿದರೆ, ನಮ್ಮ ಸಂಗೀತಪ್ರಪಂಚದಲ್ಲಿ ಪುರಂದರದಾಸರು ಎಷ್ಟೊಂದು ಆಸಕ್ತಿಯಿಂದ ಕಾರ್ಯಮಾಡಿದ್ದಾರೆಂಬುದು ಗೊತ್ತಾಗುವುದು. ಈ ವಾಗ್ಗೇಯಕಾರರು ರಚಿಸಿದ ಗೀತ-ಪ್ರಬಂಧಗಳು ಹತ್ತಲ್ಲ, ನೂರಲ್ಲ; ನಾಲ್ಕೂ ಕಾಲು ಲಕ್ಷ. ಅವರ ಕೃತಿಗಳನ್ನೆಲ್ಲ ಹಾಡಬೇಕೆಂದರೆ, ಒಂದು ವ್ಯಕ್ತಿಯ ಆಯುಷ್ಯದಲ್ಲಿ ಸಾಧ್ಯವಾಗದು. ಎಂತಲೇ ಪುರಂದರದಾಸರು ಮಹಿಮಾಶಾಲಿಗಳೆನಿಸಿಕೊಂಡಿದ್ದಾರೆ; ಅಪರೋಕ್ಷ ಜ್ಞಾನಿಗಳೆಂದು ತಮ್ಮ ಗುರುಗಳಾದ ಶ್ರೀವ್ಯಾಸರಾಯಸ್ವಾಮಿಗಳಿಂದಲೇ ಕೊಂಡಾಡಿಸಿಕೊಂಡಿದ್ದಾರೆ!

"ನೀತಿಯೆಲ್ಲವನರಿದು ನಿಗಮವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲಿ ||
ಗೀತ-ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರ್ಯೆಯು! ||
ದಾಸರೆಂದರೆ ಪುರಂದರ ದಾಸರ್ಯೆಯು!

"ಜಯಂತಿಗೆ" ಚಂದಾದಾರರಾಗಿ
ಕುಟುಂಬದ ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸಿರಿ

ಸಮಸ್ಯೆಯ ಕಳ್ಳ

ಲೇಖಕರು:
ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ

(ಸಣ್ಣ ಕಥೆ)

ಉಣ್ಣಲೂ ಉಡಲೂ ಕಡಿಮೆಯಿಲ್ಲದ ಸಿರಿವಂತರ ಮನೆಯ ಹುಡುಗರೂ ಕಳ್ಳರಾಗುತಾರೆ! ಹುಡುಗರು ಕಳ್ಳರಾಗುವುದಕ್ಕೆ ಹುಟ್ಟುಗುಣ ಕಾರಣವೆ? ಹಾಗಾದರೆ ರಾಮೂ ಕಳ್ಳತನ ಬಿಟ್ಟು ಸಂಭಾವಿತನು ಹೇಗಾದ?

◆

ಊಟ ಮುಗಿದ ನಂತರ, ಗೆಳೆಯ ರಾಜನೊಡನೆ ಪಡಸಾಲೆಗೆ ಬಂದು ಹಾಸಿಗೆಯ ಮೇಲೆ ಉರುಳಿದೆ. "ಪಾಕಶಾಸ್ತ್ರದಲ್ಲಿಯೂ ಪ್ರವೀಣನಾಗಿದ್ದೀಯಲ್ಲಾ!" ಎಂದು ಪರಟೆಗೆ ಸೀರಿಕೆ ಹಾಕಿದೆ. "ಏನು ಮಾಡಬೇಕು? ಆಕೆ ಮೇಲಿಂದ ಮೇಲೆ ತವರಿಗೆ ಹೋಗುವ ಪ್ರಸಂಗ ಬಂದರೆ! ಅಲ್ಲಾ, ನೀನು ಇಂತಹ ಸಮಯದಲ್ಲಿಯೆ ಬರಬೇಕೆ?" ಎಂದು ತಾಂಬೂಲ ಕೈಗಿಡುತ್ತ ರಾಜ ನುಡಿದ. "ನನಗೇನು ಕನಸು ಬಿದ್ದಿತ್ತೆ?" ಎಂದು ನಾನು ನುಡಿಯುವಾಗಲೆ ರಾಜ ಅಡಿಗೆಮನೆ ಸೇರಿದ. ನನಗೆ ಸುಮ್ಮನೆ ಬಿದ್ದುಕೊಳ್ಳುವ ಮನಸ್ಸಾಗಲಿಲ್ಲ. ಆದೇ ತಂದ ಜಯಂತಿಯ ವಿಶೇಷಾಂಕವನ್ನು ಓದಬೇಕೆಂಬ ಆಸೆಯಾಯಿತು. ಅಂತೆಯೆ ಭಾರವಾದ ಹೊಟ್ಟೆಯನ್ನು ಬಲುಮೆಯಿಂದ ಹೊತ್ತುಕೊಂಡು ಎದ್ದು, ನನ್ನ ಕೋಟಿನ ಜೇಬಿನಲ್ಲಿಟ್ಟ ಪತ್ರಿಕೆಯನ್ನು ತೆಗೆದುಕೊಳ್ಳಲು ಹೋದೆ. ಆದರೆ ನನ್ನ ಕೋಟು ಅಲ್ಲಿ ಕಾಣಲಿಲ್ಲ. ಅತ್ತಿತ್ತ ದೃಷ್ಟಿ ಹೊರಳಿಸಿದೆ; ಎಲ್ಲಿಯೂ ಗೋಚರಿಸಲಿಲ್ಲ. ನನಗೆ ವಿಚಿತ್ರವೆನಿಸಿತು. 'ಹೌದು, ಇದೇ ಮೊಳೆಗೇ ನೇತುಹಾಕಿದ್ದೆ; ಇನ್ನೂ ತಾಸುಕೂಡ ಸಂದಿಲ್ಲ. ನಮ್ಮಿಬ್ಬರ ಹೊರತಾಗಿ ಮತ್ತಾರೂ ಈ ಮನೆಯಲ್ಲಿ ಬಂದುದಿಲ್ಲ. ಹೋಯಿತೆಲ್ಲಿ?....' ಎಂದು ಮನದಲ್ಲಿಯೆ ವಿಚಾರಿಸುತ್ತ ನಿಂತುಕೊಂಡಿದ್ದೆ. "ಏನು ಬೇಕಿತ್ತು?" ಎಂದು ಒಳಗಿನಿಂದ ಬಂದ ರಾಜ ಕೇಳಿದ. "ನನ್ನ....ಕೋಟು...." ಎಂದೆ. ಆಧೈರ್ಯದಲ್ಲಿಯೂ ಕೊಂಚ ನಗೆ ಬಂತು. "ಎಲ್ಲಿ ಬಿಟ್ಟು ಬಂದಿರುವಿರಿ?" ರಾಜ ನಗುತ್ತ ಕೇಳಿದ. "ಎಲ್ಲಿಯಾದರೂ ಬಿಟ್ಟುಬಂದಿದ್ದರೆ ಇಲ್ಲೇತಕ್ಕೆ ಹುಡುಕಲಿ? ನಾನು ಪೇಟೆಯಿಂದ ಬಂದಕೂಡಲೆ ಈ ಮೊಳೆಗೆ ತಗುಲುಹಾಕಿ, ಒಳಗೆ ನೀತ ನಿನ್ನೆಡೆಗೆ ಬಂದೆ." ಎಂದು ಗಂಭೀರನಾಗಿಯೆ ನುಡಿದೆ. "ನಿಜವಾಗಿಯೂ?"ಗೆಳೆಯನ ಮುಖದಲ್ಲಿ ಕಾತರತೆ ಕಾಣಿಸಿಕೊಂಡಿತು. "ಸುಳ್ಳುಬೇರೆ ಹೇಳುತ್ತೇನೇನು?" ಎಂದೆ. "ಈ ಮನೆಯಲ್ಲಿ ಇದುವರೆಗೆ ಒಂದು ಚಿಕ್ಕವಸ್ತುಕೂಡ ಹೋದುದಿಲ್ಲ. ತೀರ ವಿಚಿತ್ರ.... ಅದರಲ್ಲಿ ಏನೇನು ಇಟ್ಟಿದ್ದಿ?" ಅತ್ತಿತ್ತ ನೋಡುತ್ತ ರಾಜ ಕೇಳಿದ.

"ಒಂದು ಪೆನ್ನು, ಪತ್ರಿಕೆ, ನಾಲ್ವತ್ತು ರೂಪಾಯಿಗಳುಳ್ಳ ಒಂದು ಪಾಕೀಟು" ಎಂದು ತಿಳಿಯಪಡಿಸಿದಾಗ, ರಾಜನ ಮುಖ ಮತ್ತಿಷ್ಟು ಮುದುಡಿತು. ಮುದುಡಿದ ಮುಖದಲ್ಲಿ ಅಚ್ಚರಿಯ ಗೆರೆಗಳು ಎದ್ದು ಕಾಣುತ್ತಿದ್ದುವು. ನಾವಿಬ್ಬರೂ ಹೊರಗೆ ಬಂದೆವು. "ನಮ್ಮ ಮನೆಯಲ್ಲಿ ಇದೀಗ ಯಾರಾದರೂ ಬಂದಿದ್ದರೆ?" ಎಂದು ರಾಜ ನೆರೆಮನೆಯವರನ್ನು ವಿಚಾರಿಸಿದ. ಅವರು ತಮಗೇನೂ ಗೊತ್ತಿಲ್ಲವೆಂದು ತಲೆಹಾಕಿದರು. ಈ ವಾರ್ತೆ ಓಣಿಯಲ್ಲೆಲ್ಲ ಹಬ್ಬಿತು. ಬಂದವರೆಲ್ಲ 'ಏನು? ಏನಾಯಿತು? ಏನು ಹೋಯಿತು?' ಎಂದು ಕೇಳುವವರೆ. ಒಯ್ದವರಾರೆಂಬುದನ್ನು ಹೇಳಲು ಯಾರೂ ಸಮರ್ಥರಾಗಲಿಲ್ಲ. ಅಷ್ಟರಲ್ಲಿ ಎದುರುಮನೆಯ ಯಜಮಾನನೊಬ್ಬನು ನಮ್ಮ ಹತ್ತಿರ ಬಂದು, "ನೀವು ಒಂದು ತಾಸಿನ ಹಿಂದೆಯೆ ಈ ಮನೆಗೆ ಬಂದಿರಲ್ಲವೆ?" ಎಂದ. "ಹೌದು" ಎಂದು ನಾನು ಗೋಣುಹಾಕಿದೆ. "ನಿಮ್ಮ ಹಿಂದೆಯೆ ಒಬ್ಬ ಹುಡುಗ ಮನೆಯಲ್ಲಿ ಬಂದನಲ್ಲ, ಏಕೆ?" ಎಂದನವ. "ಯಾರು? ನನ್ನ ಹೊರತಾಗಿ ಬೇರೆ ಯಾರೂ ಆಗ ಮನೆಯಲ್ಲಿ ಬಂದುದೇ ಇಲ್ಲ." ಎಂದೆ ನಾನು ತವಕದಿಂದ. "ಹಾಗಾದರೆ ಅವನೇ ಈ ಕಾರ್ಯ ಮಾಡಿರಬೇಕು?" ಎಂದು ಆ ಯಜಮಾನ ತೀರ್ಪುಕೊಟ್ಟ. "ಅವನಾರು ಗೊತ್ತಿಲ್ಲವೆ?" ರಾಜ ಕೇಳಿದ. "ಆ ಹುಡುಗನ ಹೆಸರು ನನಗೆ ಗೊತ್ತಿಲ್ಲ; ಅವನು ನೂತನ ವಸ್ತ್ರಭಾಂಡಾರದ ಕಟ್ಟದ ಮೇಲಿರುವ ಪಾಟೀಲ ಬಂಧುಗಳಲ್ಲಿ ಹೊಲಿಗೆಯ ಕೆಲಸಕ್ಕಿದ್ದಾನೆ" ಎಂದು ಹೇಳಿದ. "ಅವನು ಈ ಮನೆಯಲ್ಲಿ ಬಂದುದನ್ನು ನೀವು ಚೆನ್ನಾಗಿ ನೋಡಿದ್ದೀರಾ?" ಎಂದೆ ನಾನು. "ಹೌದು. ನಾನು ಆದೇ ಪೇಟೆಯಿಂದ ಬರುತ್ತಿದ್ದೆ. ನನ್ನ ಮುಂದೆಯೆ ಆ ಹುಡುಗನಿದ್ದ; ಅವನ ಮುಂದೆಯೆ ಸ್ವಲ್ಪ ದೂರದಲ್ಲಿ ನೀವಿದ್ದಿರಿ. ನೀವು ಮನೆಯಲ್ಲಿ ಹೋದ ಕೆಲಹೊತ್ತಿನಲ್ಲಿಯೆ ಆ ಹುಡುಗ ಒಳಗೆ ಬಂದ. ನಿಮ್ಮ ಕಡೆಗೆ ಕೆಲಸವಿರಬೇಕೆಂದು ನಾನು ವಿಚಾರಿಸಲಿಲ್ಲ. ಅವನು ಮರಳಿ ಹೋಗುವುದನ್ನು ಮಾತ್ರ ನಾನು ನೋಡಲಿಲ್ಲ" ಎಂದು ಆ ಯಜಮಾನ ವಿವರಿಸಿದ. "ದಯೆಮಾಡಿ

ನೀವು ಅವನಿದ್ದ ಅಂಗಡಿಯ ವರೆಗೆ ಬರುತ್ತೀರಾ?" ಎಂದೆ. "ಆಗಲಿ" ಎಂದು ಆ ಯಜಮಾನ ಮುಂದಾದನು.

ಹೋಗಿ ನೋಡಿದಾಗ, ಅಂಗಡಿಯಲ್ಲಿ ಆ ಹುಡುಗ ಕಾಣಲಿಲ್ಲ. "ನಿಮ್ಮಲ್ಲಿ ಕೆಲಸಕ್ಕಿದ್ದ ಹುಡುಗನೆಲ್ಲಿ?'' ಎಂದು, ನನ್ನೊಡನೆ ಬಂದ ಯಜಮಾನ ಮಾಲೀಕರನ್ನು ವಿಚಾರಿಸಿದ. "ಯಾರು ರಾಮನೇ? ಅವನನ್ನು ಒಂದು ವಾರದ ಹಿಂದೆಯೆ ಅಂಗಡಿಯಿಂದ ಹೊರಗೆ ಹಾಕಿದೆವು." ತನ್ನ ಕನ್ನಡಕವನ್ನು ಮೂಗಿಗೇರಿಸುತ್ತ ಮಾಲೀಕರು ಉತ್ತರಿಸಿದರು. "ಯಾಕೆ? ಹುಡುಗ ಚೆನ್ನಾಗಿರಲಿಲ್ಲವೆ?" ಎಂದೆ ನಾನು. "ಮೈ ಕೈ ಎಲ್ಲ ರೀತಿಯಿಂದಲೂ ಚೆನ್ನಾಗಿದ್ದಾನೆ; ಸುಂದರನೂ ಇದ್ದಾನೆ. ಆದರೆ....!" ಎಂದು ತಮ್ಮ ಕೈಯಲ್ಲಿಯ ಅಳತೆಪಟ್ಟಿಯನ್ನು ಹೆಗಲಿಗೇರಿಸುತ್ತ ನುಡಿದರು. ನನಗೆ ಹೆಚ್ಚಿಗೆ ಮಾತು ಬೆಳೆಯಿಸುವುದು ಬೇಕಿರಲಿಲ್ಲ. ಅಂತೆಯೆ "ಅವರ ಮನೆ ಎಲ್ಲಿದೆ ಎಂಬುದನ್ನು ತಿಳಿಸುವಿರಾ?" ಎಂದೆ. "ಯಾಕೆ? ಅವನಿಂದೇನಾದರೂ ಕೆಲಸವಿದೆಯೆ?" ಮಾಲೀಕನೆಂದ. 'ಹೌದು' ಎಂದೆ. "ಸಿವ್ಹಿಲ್ ಹಾಸ್ಪಿಟಲ್ ನೋಡಿದ್ದೀರಲ್ಲ! ಅದರ ಹಿಂದೆಯೆ ಲೋಕಲ್‌ಬೋರ್ಡ್ ಕಚೇರಿ ಇದೆ. ಕಚೇರಿಯ ಬಲಬದಿಯಲ್ಲಿಯೆ ನಾಲ್ಕಾರು ಮನೆಗಳನ್ನು ಬಿಟ್ಟು ಒಂದು ಮಹಡಿಯ ಮನೆ ಇದೆ. ಅದೇ ಅವರ ಮನೆ. ಅಲ್ಲಿ ಹೋಗಿ, ಶಿವಪುರದ ನಾಗರಾಯರ ಮನೆ ಯಾವುದೆಂದು ಕೇಳಿದರೆ, ಯಾರಾದರೂ ಹೇಳುತ್ತಾರೆ." ಕೈಯಲ್ಲಿದ್ದ ಅರಿವೆಯನ್ನು ಹರಿಯುತ್ತ ಮಾಲೀಕ ವಿವರಿಸಿದ. ಕೆಲಸವಿದ್ದರೆ "ನೀವು ಹೋಗಬಹುದು" ಎಂದು ನನ್ನೊಡನಿದ್ದ ಯಜಮಾನನನ್ನು ಕಳುಹಿ, ರಾಜನೊಡನೆ ಅತ್ತ ಹೆಜ್ಜೆ ಹಾಕಿದೆ.

ಅವರ ಮನೆ ಸಿಕ್ಕುವುದಕ್ಕೆ ಹೆಚ್ಚು ಕಷ್ಟವಾಗಲಿಲ್ಲ. ಆದರೆ ಅವರನ್ನು ವಿಚಾರಿಸುವುದೇ ಹೆಚ್ಚು ಕಷ್ಟವಾಗಿ ತೋರಿತು. ಯಾವ ..ತಿಯೆ ಇರಲಿ, ಒಂದು ನಿರ್ಧಾರಕ್ಕೆ ಬಂದಹೊರತು ನನ್ನ ಮನಸ್ಸಿಂದೂ ಸಮಾಧಾನ ಹೊಂದದು. ಅಂತೆಯೆ ಯಾವುದಕ್ಕೂ ಹಿಂದೆಗೆಯಲಿಲ್ಲ. ನೇರವಾಗಿ ಅವರ ಮನೆಯಲ್ಲಿ ಹೋಗಿ "ರಾಮನಿರುವನೇನ್ರಿ?'' ಎಂದೆ. ಹಾಸಿಗೆಯ ಮೇಲೆ ಉರುಳಿ ಏನೋ ಓದುತ್ತಲಿದ್ದವರು ಎದ್ದು ಕೂತು ''ಊಟಕ್ಕೆ ಕೂತಿದ್ದಾನೆ, ಬರ್ರಿ'' ಎಂದರು. ನಾವಿಬ್ಬರೂ ಮೇಲೆ ಹೋಗಿ ಆಸನಗಳಲ್ಲಿ ಕುಳಿತುಕೊಂಡೆವು. ಅವರ ಮನೆಯ ಪ್ರತಿಯೊಂದು ವಸ್ತುಗಳೂ ಸಿರಿವಂತಿಕೆಯ ಪ್ರತೀಕದಂತಿದ್ದುವು. 'ಇವರನ್ನು ಕೇಳುವುದು ಹೇಗೆ?' ಎಂದು ತಲೆ ತುರಿಸಿಕೊಳ್ಳತೊಡಗಿದ್ದೆ. ಹಾಸಿಗೆಯ ಮಗ್ಗುಲಲ್ಲಿಯೆ ರಾಯರು ಓದಿ ಡಬ್ಬುಹಾಕಿದ 'ಜಯಂತಿ'ಯ ವಿಶೇಷ ಸಂಚಿಕೆ ಕಣ್ಣಿಗೆ ಬಿತ್ತು! ಎದ್ದುಹೋಗಿ ಅದನ್ನು ಕೈಗೆ ತೆಗೆದುಕೊಂಡೆ. ಅದರ ಮೇಲೆ ನನ್ನ ಅಂಕಿತವಿತ್ತು!! ದೀರ್ಘವಾದ ಉಸಿರೊಂದು ನನ್ನ ಬಾಯಿಂದ ಹೊರಗೆಬಿತ್ತು. ಅದರೊಡನೆ ಉದ್ವೇಗ-ಕಾತರತೆ-ಗಾಬರಿಗಳೆಲ್ಲ ಹೊರಬಂದುವು. 'ಕಳ್ಳ ಸಿಕ್ಕಿದ' ಎಂದುಕೊಂಡು ''ಅಲ್ರೀ, ಇದು ಯಾರದು?'' ಎಂದು ಪತ್ರಿಕೆಯನ್ನು ಮೇಲೆತ್ತಿ ರಾಯರನ್ನು ಕೇಳಿದೆ. ''ನಮ್ಮ ರಾಮೂ ತಂದಿದ್ದಾನೆ. ಯಾರದೋ ಗೆಳೆಯರದಂತೆ!" ಎಂದರು ರಾಯರು. ''ನೋಡಿ ರಾಯರೆ, ಈ ಪತ್ರಿಕೆ ನನ್ನದು. ಇದರ ಮೇಲೆ ನಾನೇ ಹಾಕಿದ ಅಂಕಿತವಿದೆ. ನಿಮ್ಮ ಹುಡುಗ ನನ್ನ ಕೋಟನ್ನೇ ಅಪಹರಿಸಿಕೊಂಡು ಬಂದಿದ್ದಾನೆ!" ಎಂದು ಹೇಳಿದೆ. ನಾಗರಾಯರು ನಾನು ಹೇಳುವುದನ್ನೆಲ್ಲ ಸಾವಕಾಶವಾಗಿ ಕೇಳಿಕೊಂಡರು. ಎಲ್ಲ ಸಂಗತಿಯನ್ನೂ ಅವರ ಮುಂದೆ ವಿವರಿಸಿದೆ. ಅವರು ಎದ್ದು ಒಳಗೆ ಹೋಗಿ ಕೆಲವೇಳೆಯಲ್ಲಿಯೆ ಹೊರಬಂದು ''ಇದೋ ನೋಡಿರಿ; ಈ ಎರಡು ನೋಟುಗಳನ್ನು ಮಾತ್ರ ನನ್ನ ಕೈಯಲ್ಲಿ ತಂದುಕೊಟ್ಟಿದ್ದಾನೆ. 'ಅಂಗಡಿಯವರು ಕೊಟ್ಟಿದ್ದಾರೆ' ಎಂದು ನನ್ನ ಮುಂದೆ ಹೇಳಿದ!" ಎಂದು ಹತ್ತರ ಎರಡು ನೋಟುಗಳನ್ನು ನನ್ನ ಕೈಗಿಡುತ್ತ ನುಡಿದರು. ''ಇದರ ಹೊರತಾಗಿ ಉಳಿದುದನ್ನು ನಾನರಿಯೆ. ಊಟವಾದ ಮೇಲೆ ಅವನನ್ನು ನಿಮ್ಮ ವಶಕ್ಕೆ ಕೊಡುತ್ತೇನೆ. ಬೇಕಾದ ಹಾಗೆ ವಿಚಾರಿಸಿರಿ'' ಎಂದ ರಾಯರೇ ಉದಾಸೀನತೆಯಿಂದ ನುಡಿದರು. ಮಗನ ವಿಷಯವಾ.. ಕನಿಕರ-ವಾತ್ಸಲ್ಯಗಳೊಂದೂ ಅವರಲ್ಲಿ ಕಾಣಲಿಲ್ಲ. ಈ ಸಂಗತಿಯಿಂದ ಅವರಿಗೆ ಆಶ್ಚರ್ಯವಾದಂತೆಯೂ ತೋರಲಿಲ್ಲ. ನಾನು (ಎರಡೂ ನೋಟುಗಳನ್ನು ಕೈಗೆ ತೆಗೆದುಕೊಂಡು ವಿಚಾರದ.. ಕುಳಿತೆ. ಕೆಲವೇಳೆಯಲ್ಲಿಯೆ ರಾಮು ಅಡಿಗೆಮನೆಯಿಂದ ಹೊರಬಂ..

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ



"ಎಸ್ಸೆನ್ಸ್ ಗ್ರಾಇಪ್" ಹೀಲರ್

ಜಂತು ಆಪದೆ



"ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

ಅಷ್ಟು ಹಿರಿದು-ಕಿರಿದೂ ಅಲ್ಲದ ನಿಲುವು, ನಿಲುವಿಗೆ ತಕ್ಕ ಅಂಗಾಂಗ-ಗಳು. ಹೊಸ ಯೌವನದ ಸಂಕೇತದಂತಿದ್ದ ಚಿಗುರುಮೀಸೆ. ಹರವಾದ ಹಣೆಯಲ್ಲಿ ತೂರಾಡುವ ಮುಂಗುರುಳು ಆಕರ್ಷಕವಾಗಿ-ದ್ದುವು. ನಾನು ಭಾವಿಸಿದ ಹಾಗೆ, ನಮ್ಮನ್ನು ನೋಡಿದಾಗ ಅವನು ಅಷ್ಟೊಂದು ಹೆದರಿದಂತೆ ಕಾಣಲಿಲ್ಲ. ಮುಖದಲ್ಲಿ ನಿರಾಶೆಯ ತೆರೆಯೊಂದು ತೇಲಿ ಮಾಯವಾಯಿತು. ಬಟ್ಟೆಧರಿಸಿ ಹೊರಡಲು ಸನ್ನದ್ಧನಾದ. "ಇವನನ್ನು ನೀವು ಬೇಕಾದಲ್ಲಿ ಕರೆದೊಯ್ಯಬಹುದು! ನಿಮ್ಮ ಒಡವೆಗಳ ಸಂಪಾದನೆಗಾಗಿ ಏನನ್ನಾದರೂ ಮಾಡಬಹುದು!" ಎಂದು ರಾಯರು ಹಣೆಗಂಟಿಕ್ಕಿ ನುಡಿದರು. "ಇವರ ಕೋಟು ಎಲ್ಲಿದೆ?" ಗೆಳೆಯ ರಾಜ ಕೇಳಿದ. ರಾಮು ಉತ್ತರಿಸುವ ಸಾಹಸಕ್ಕೆ ಹೋಗಲಿಲ್ಲ. "ಹೊರಗೆ ಬಾ ರಾಮು!" ಎಂದು ಎದ್ದು, ನಾನು ಮುಂದಾದೆ. ರಾಮು ಬೆನ್ನು ಹತ್ತಿದ. ರಾಯರು ರಾಮೂನ ಮುಖ-ವನ್ನೊಮ್ಮೆ ದುರುಗುಟ್ಟಿ ನೋಡಿದರು. "ಸ್ವಲ್ಪ ನೀವೂ ಹೋಗಿ ಅವರ ಒಡವೆ ಕೊಡಿಸಿರಿ. ಮಗುವಿಗೆ ಏನಾದರೂ ಆದರೆ........!" ನಾವು ಬಾಗಿಲು ದಾಟುತ್ತಿರುವಾಗ, ಅಡಿಗೆಯ ಮನೆಯಿಂದ ತಾಯಿಯ ಕಂಪಿತ ಕಂಠದ ದನಿ ಕೇಳಬಂತು. ರಾಯರು ತಿರುಗಿ ಆ ಕಡೆ ದುರುಗುಟ್ಟಿ ನೋಡಿದರು.

ರಾಮುವನ್ನು ಕರೆದುಕೊಂಡು ನಾವಿಬ್ಬರೂ ಹೊರಬಂದ ಮೇಲೆ "ನನ್ನ ಕೋಟನ್ನೆಲ್ಲಿಟ್ಟಿರುವೆ?" ಎಂದೆ. "ಅಲ್ಲಿ ಇದೆ" ಎಂದು ನಮ್ಮನ್ನು ಇಕ್ಕಟ್ಟಾದ ಬೀದಿಗೆ ಕರೆದೊಯ್ದ. ಅಲ್ಲಿ ಜನರಾರೂ ಹೆಚ್ಚಾಗಿ ಸುಳಿದಾಡುವಂತಿರಲಿಲ್ಲ. ಅಂತಹ ಸಂದಿಯೊಂದರಲ್ಲಿಯ ಚರಂಡಿಯ ಬದಿಯಲ್ಲಿ ಬಿದ್ದು ಹೊರಳಾಡುತ್ತಿತ್ತು ನನ್ನ ಕೋಟು. ರಾಮೂ ಅದನ್ನೆತ್ತಿ ನನ್ನ ಕೈಗಿಟ್ಟ. "ಇನ್ನು ಇಪ್ಪತ್ತು ರೂಪಾಯಿ-ಗಳೆಲ್ಲಿವೆ?" ಎಂದ. "ನನಗೆ ಗೊತ್ತಿಲ್ಲ" ಎಂದ. "ನೋಡು ರಾಮು, ಸುಳ್ಳುಹೇಳುವುದರಿಂದ ಪರಿಣಾಮ ಚೆನ್ನಾಗದು. ಬೇಗ ಕೊಟ್ಟು ಬಿಡು" ಎಂದೆ. ರಾಮು ಮೌನವಾಗಿಯೇ ಇದ್ದ. ಅದುವರೆಗೆ ಸುಮ್ಮನೆ ಇದ್ದ ರಾಜ, ಥಟ್ಟನೆ ರಾಮುವಿನ ಕೆನ್ನೆಗೆ ಒಂದೇಟು ಕೊಟ್ಟ. ಮತ್ತೆ ಕೈಯೆತ್ತಿದಾಗ ನಾನವನ ಕೈಹಿಡಿದೆ "ಕಳ್ಳ ಸೂ........ಮಗ! ಹೀಗೆಲ್ಲ ಮೆತ್ತಗೆ ಮಾತಾಡಿದರೆ ಹಾದಿಗೆ ಬರುತ್ತಾನೇನು? ಪೋಲೀಸರ ವಶಕ್ಕೆ ಕೊಟ್ಟು ಮೈ ಮೆತ್ತಗೆ ಮಾಡಿಸ ಬೇಕು." ಎಂದು ಕಣ್ಣು ಕಿಸಿದು ರಾಮುವಿನ ಮೈಮೇಲೆ ಏರಿ ಹೋಗತೊಡಗಿದ. "ಸ್ವಲ್ಪ ತಡೆ, ದುಡುಕಬೇಡ." ಎಂದು ಗೆಳೆಯನ ರಟ್ಟೆಹಿಡಿದು ನಿಲ್ಲಿಸಿ, "ಕೊಟ್ಟು ಬಿಡು ರಾಮು, ನೀನು ಒಳ್ಳೆಯ ಹುಡುಗ ಕಾಣುತ್ತೀ, ನಿನಗೆ ಕಳ್ಳನೆಂದು ಶಿಕ್ಷೆ ದೊರೆಯಬಾರದು." ಎಂದು ಅವನ ಬೆನ್ನಮೇಲೆ ಕೈಯಾಡಿ ಸುತ್ತ ನುಡಿದೆ. ರಾಮು ತನ್ನ ಚೊಣ್ಣದ ಜೇಬಿಗೆ ಕೈ ತುರುಕಿ ಎರಡೂ ನೋಟುಗಳನ್ನು ನನ್ನ ಕೈಗಿಟ್ಟು, ಮಿಳ್ಮಿಳನೆ ನನ್ನ ಮುಖ ನೋಡತೊಡಗಿದ. "ಪೆನ್ನು ಎಲ್ಲಿ?" ಎಂದು ರಾಜ ಗುಡುಗಿದ. ರಾಮು ತುಟಿ ಬಿಚ್ಚಲಿಲ್ಲ. ಅವನನ್ನು ಹೆಚ್ಚು ಪೀಡಿಸುವುದು ಸರಿಕಾಣಲಿಲ್ಲ. ಎಲ್ಲ ದೊರಕಿದ ಸಂತೋಷದಲ್ಲಿ, ಪೆನ್ನಿಗಾಗಿ ಅವನನ್ನು ಕಾಡಲು ಮನಸ್ಸು ಒಪ್ಪಲಿಲ್ಲ. ಅಂತೆಯೆ "ನಡೆ ರಾಮೂ, ನಿಮ್ಮ ತಂದೆಯವರಿಗೆ ನಿನ್ನನ್ನು ಮರಳಿ ಒಪ್ಪಿಸುವುದು ನಮ್ಮ ಕರ್ತವ್ಯ." ಎಂದು ಅವನೊಡನೆ ಮನೆಯ ಹಾದಿಯನ್ನು ಹಿಡಿದೆವು.

ಮನೆಯಲ್ಲಿ ನಾಗರಾಯರಿಗೆ ಎಲ್ಲ ಸಂಗತಿ ಹೇಳಿದೆ. "ಅವರ ಪೆನ್ನು ಎಲ್ಲಿದೆ ಕೊಟ್ಟುಬಿಡು!" ಎಂದು ರಾಯರು ಹಣೆಗಂಟಿಕ್ಕಿ ನುಡಿದರು. ರಾಮು ಮೌನಮಂತ್ರವನ್ನು ಬಿಡಲಿಲ್ಲ. ನನಗೆ ಆ ಹುಡುಗನೊಬ್ಬ ಒಂದು ಸಮಸ್ಯೆಯಾಗಿ ತೋರಿದ 'ಹೀಗೆ ಅಡ್ಡದಾರಿ ಹಿಡಿಯಲು ಕಾರಣವೇನು?' ಎಂಬ ವಿಚಾರ ನನ್ನ ತಲೆಯಲ್ಲಿ ಸುಳಿದಾಡತೊಡಗಿತು. ಇದನ್ನು ಒರೆಗೆ ಹಚ್ಚಿ ನೋಡಬೇಕೆಂಬಾಸೆ ಮಿಂಚಿತು. 'ರಾಮೂ, ನಿನ್ನೊಡನೆ ಕೆಲವು ಮಾತನಾಡಬೇಕಾಗಿದೆ; ಸ್ವಲ್ಪಹೊತ್ತು ನನ್ನೊಡನೆ ಬರುತ್ತೀಯಾ?' ಎಂದೆ. "ಹೋಗು, ಅವರ ಪೆನ್ನು ಕೊಟ್ಟು ಮನೆಯೊಳಗೆ ಬಾ!" ಎಂದು ರಾಯರು ಸಿಡುಕಿನಿಂದ ನುಡಿದರು. ರಾಮು ನನ್ನ ಬೆನ್ನು ಹತ್ತಿದ. "ದಯೆಯಿಟ್ಟು ರಾಮೂನನ್ನು ಪೀಡಿಸಬೇಡಿರಿ. ಅವನು ಎಲ್ಲ ಕೊಡುತ್ತಾನೆ" ಎಂಬ ಧ್ವನಿ ಕೇಳಿ ಹೊರಳಿ ನೋಡಿದೆ; ರಾಮೂನ ತಾಯಿ ಕರುಣಾಮಯ ನೇತ್ರಗಳಿಂದ ನನ್ನನ್ನು ದಿಟ್ಟಿಸುತ್ತಿದ್ದಳು. "ಇಲ್ಲ ತಾಯಿ! ರಾಮು ನನ್ನ ತಮ್ಮ, ಅವನೊಡನೆ ಕೆಲಮಾತುಗಳನ್ನಾಡಬೇಕಾಗಿದೆಯಷ್ಟೆ!" ಎಂದು ಹೇಳಿ ಹೊರಗೆ ಬಂದೆ.

ನಾವು 'ಆರೋಗ್ಯ ನಿವಾಸ'ದತ್ತ ಹೆಜ್ಜೆಹಾಕಿದಾಗ ರಾಮು ನಿಂತುಕೊಂಡ. "ಬಾ ರಾಮು, ಸಂಕೋಚವೇಕೆ?" ಎಂದು ಅವನ ಕೈಹಿಡಿದು ಒಳಗೆ ಕರೆದೊಯ್ದೆ. ನನ್ನ ಆಜ್ಞೆಯ ಮೇರೆಗೆ ಮಾಣಿ ದೋಸೆಯ ಮೂರು ಪ್ಲೇಟುಗಳನ್ನು ಟೇಬಲ್ ಮೇಲೆ ತಂದಿರಿಸಿದಾಗ, ರಾಮು ನನ್ನ ಮುಖ ನೋಡತೊಡಗಿದ. "ತೆಗೆದುಕೊಳ್ಳು ತಮ್ಮಾ" ಎಂದು ಒಂದನ್ನು ಅವನ ಮುಂದೆ ಸರಿಸಿದೆ. ಮೌನವಾಗಿಯೆ ತಿಂಡಿ-ಕಾಫಿ ಮುಗಿಸಿಕೊಂಡು ಹೊರಬಂದೆವು. "ಒಂದಿಷ್ಟು ಹಾಯಾಗಿ ತಿರುಗಾಡಿ ಬರೋಣವೆ?" ಎಂದು ರಾಜನ ಮುಖವನ್ನು ನೋಡುತ್ತ ನುಡಿದೆ. "ಸಾಕು ಮಹಾರಾಯಾ. ಇದುವರೆಗೆ ತಿರುಗಿದ್ದು ಸಾಲದೆ?.... ನನಗೆ ಬೇರೆ ಕೆಲಸವಿದೆ ಹೋಗಬೇಕು!" ಎಂದವನು ಹೊರಡಲನು-ವಾದ. "ಆಗಲಿ, ನಾನು ಸಂಜೆಯ ಎಂಟುಗಂಟೆಗೆ ಬರುತ್ತೇನೆ." ಎಂದು ರಾಜನನ್ನು ಬೀಳ್ಕೊಟ್ಟು, ರಾಮೂನೊಡನೆ ನಗರವನವತ್ತ ನಡೆದೆ.

ಸುತ್ತಲೂ ಹಸುರಿನ ಹಾಸಿಗೆ ಹರಡಿತ್ತು. ಕ್ರಾಪು ಬಿಡಿಸಿ-ಕೊಂಡ ಗಿಡ-ಗಂಟಿಗಳು ಕುಲುಕುಲು ನಗುತ್ತಿದ್ದುವು. ಹದಿನಾರರ ಹರಯದ ಚದುರೆಯರಂತಿದ್ದ ಹೂ-ಬಳ್ಳಿಗಳು, ವಿವಿಧ ಭಂಗಿಯಲ್ಲಿ ನಿಂತುಕೊಂಡು, ಸುಳಿಗಾಳಿ ಸೋಂಕಿದಾಗ ನರ್ತಿಸುತ್ತಿದ್ದುವು. ಭೃಂಗ ಕುಂತಳೆಯರು, ಬೆಡಗುಗಾತಿಯರು, ಹೂಗೆನ್ನೆಯ ಚೆಂದುಟಿಯ ಚೆಲುವೆಯರು, ನೀಳ್ಜಡೆಯ ಕುಡಿನೋಟದ ಕುವರಿಯರು ಆ ಉದ್ಯಾನದ ಸಜೀವ ಹೂಗಳಂತೆ ಸಂಚರಿಸುತ್ತಿರುವಾಗ, ಆಸೆಗಂಗ-ಳನ್ನರಳಿಸಿ ಅತ್ತ ನೋಡುವ ಯುವಹೃದಯಕ್ಕೇನು ಅಲ್ಲಿ ಕೊರತೆ-ಯಿರಲಿಲ್ಲ. ಕಾರಂಜಿಯಿಂದ ಚಿಮ್ಮುವ ತುಂತುರ ಹನಿಗಳನ್ನು ಹೊತ್ತುತಂದ ತಂಗಾಳಿ, ನಮ್ಮ ಮುಖಕ್ಕೆ ಮುತ್ತುಕೊಟ್ಟು,

ಮೈ-ಮನಗಳನ್ನು ಪುಳಕಿತಗೊಳಿಸುತ್ತಿತ್ತು. ಕೆಲಕಾಲ ಈ ನೋಟದಲ್ಲಿ ತಲ್ಲೀನನಾದ ನನಗೆ. ಒಮ್ಮೆಲೆ ನನ್ನ ಕರ್ತವ್ಯದ ಅರಿವಾಯಿತು.

"ನಿಮ್ಮ ತಂದೆಯವರು ಏನು ಕೆಲಸ ಮಾಡುತ್ತಾರೆ ರಾಮೂ?" ಎಂದು ಮಾತಿಗಾರಂಭಿಸಿದೆ.

"ಈಗೇನೂ ಇಲ್ಲ ಸರ್. ಮೊದಲು ಗೋವಿಂದ ಶೇಠರೊಡನೆ ವ್ಯಾಪಾರ ಮಾಡುತ್ತಿದ್ದರಂತೆ; ಅವರ ಅಂಗಡಿಗಳಲ್ಲಿ ಪಾಲು ಇಟ್ಟಿದ್ದ-ರಂತೆ! ಮುಂದೆ ಕೂಡಿ ನಡೆಯಲಿಲ್ಲವಂತೆ! ಈಗ ನಾಲ್ಕಾರು ವರ್ಷ-ಗಳಿಂದ ಕೆಲಸವಿಲ್ಲದೆ ಮನೆಯಲ್ಲಿಯೆ ಇದ್ದಾರೆ."

"ನಿನಗೆ ಅಣ್ಣ-ತಮ್ಮಂದಿರಿದ್ದಾರೆಯೆ?"

"ಯಾರೂ ಇಲ್ಲ, ನಾನೊಬ್ಬನೇ!"

"ಈಗ ನಿಮಗೆ ಬರುವ ಉತ್ಪನ್ನವೇನು?"

"ನೆರೆಯ ಹಳ್ಳಿಯಲ್ಲಿ ನಾಲ್ಕೈದು ಹೊಲಗಳಿವೆ ಸರ್! ಮೇಲಾಗಿ ಇದೇ ಊರಲ್ಲಿ ಎರಡು ಮನೆಗಳಿವೆಯಂತೆ! ಪೇಟೆಯಲ್ಲಿ ಒಂದು ಅಂಗಡಿಯಿದೆ. ಅವುಗಳಿಂದ ಬಾಡಿಗೆಯ ಹಣ ಸಾಕಷ್ಟು ಬರುತ್ತದೆ. ಮತ್ತು ಬ್ಯಾಂಕಿನಲ್ಲಿ ಹಣ ಇಟ್ಟ ಹಾಗಿದೆ."

"ನಿಮ್ಮ ಮನೆತನ ಶ್ರೀಮಂತಿಕೆಯದೆಂದು ಕಾಣುತ್ತದೆ!"

"ಹಾಗೆಂದು ಜನರು ಅನ್ನುತ್ತಾರೆ!"



"ಏಕೆ ನೀನೆನ್ನುವುದಿಲ್ಲವೆ?"

"ನಮ್ಮ ಮನೆತನದ ವ್ಯವಹಾರ ನನಗೆ ತಿಳಿದರಲ್ಲವೇ ಸರ್ ನಮ್ಮ ತಂದೆ ಯಾವ ವಿಷಯವನ್ನೂ ನನ್ನಮುಂದೆ ಪ್ರಸ್ತಾಪಿಸುವ ದಿಲ್ಲ. ಒಂದು ದುಡ್ಡಿನ ವ್ಯವಹಾರ ಮಾಡಲೂ ನನಗೆ ಅಧಿಕಾರವಿ ಈ ಮನೆಯಲ್ಲಿ ನನಗೆ ಸ್ವಾತಂತ್ರ್ಯವೆಳ್ಳಷ್ಟೂ ಇಲ್ಲ ಸಾರ್! ಎಂ ಮೇಲೆ ಸಿರಿವಂತಿಕೆ ತಿಳಿಯುವುದು ಹೇಗೆ?"

"ಯಾಕೆ? ತಿನ್ನುಣ್ಣುವುದಕ್ಕೆ ಕೊರತೆಯಿದೆಯೆ?"

"ಹಡೆದ ತಪ್ಪಿಗೆ ಅಷ್ಟುಕೂಡ ಮಾಡಬೇಡವೆ?"

"ನೀನು ಅಪೇಕ್ಷಿಸುವುದಾದರೂ ಏನು ರಾಮೂ?"

"ನೋಡಿ ಸರ್! ಸರಿಕರೊಡನೆ ತಿರುಗಾಡುವಾಗ ಕೈಯ ನಾಲ್ಕು ದುಡ್ಡು ಬೇಡವೆ? ಮೈಮೇಲೆ ಒಳ್ಳೆಯ ಬಟ್ಟೆ ಬೇಡವೆ ವಾರಕ್ಕೊಂದು ಸಲವಾದರೂ ಸಿನೀಮಾ ನೋಡಲು ಸಾಧ್ಯವಿರ ಬಾರದೆ?........ ಯಾವುದಕ್ಕೂ ಸ್ವಾತಂತ್ರ್ಯವಿಲ್ಲ. ಅವರು ತಂದ ಹಾಕಿದುದನ್ನು ತಿನ್ನಬೇಕು; ಹೊಲಿಸಿದುದನ್ನು ತೊಡಬೇಕು ಕಳಿಸಿದಲ್ಲಿ ಹೋಗಬೇಕು! ಅವರ ಪಾಲಿಗೆ ನಾನೊಂದು ಯಂತ್ರವಿ ಹಾಗೆ. ನನ್ನ ಮೇಲೆ ಅವರ ವಿಶ್ವಾಸವೇ ಇಲ್ಲ. ನಾನವರಿಗೆ ಶುದ್ಧ ಮೂರ್ಖನಾಗಿಯೆ ಕಂಡಿದ್ದೇನೆ........"

"ಎಂದಿನಿಂದ ನಿನ್ನನ್ನು ಹೀಗೆ ಕಾಣುತ್ತಿದ್ದಾರೆ?"

"ನನಗೆ ಜ್ಞಾನ ಬಂದಂದಿನಿಂದಲೂ ಇದೇ ಗತಿ. ಹಿಂದಿನದೆ ನನಗೆ ಜ್ಞಾಪಕದಲ್ಲಿದೆ ಸಾರ್. ನಾನಿನ್ನೂ ಚಿಕ್ಕವ. ಸರಿಕರೊಡ ಶಾಲೆಗೆ ಹೋಗುತ್ತಿದ್ದೆ. ಜೊತೆಯವರು ಪೆಪ್ಪರಮೆಂಟನ್ನೋ-ಬಿಸ್ಕತ್ತನ್ನೋ ತಿನ್ನುವಾಗ, ನಾನವರ ಮುಖ ನೋಡುತ್ತ ಕುಳಿತ ಕೊಳ್ಳುತ್ತಿದ್ದೆ. ಅದಕ್ಕಾಗಿ ನನ್ನ ತಂದೆ ಒಂದು ಪೈಕೂಡ ಕೊಡುತ್ತಿರ-ಲಿಲ್ಲ. 'ಏನಿದ್ದರೂ ಮನೆಯಲ್ಲಿಯೆ ತಿಂದುಹೋಗು' ಎಂದು ಎದುರು ಕುಳಿತೇ ತಿನ್ನಿಸುತ್ತಿದ್ದರು. ಗೆಳೆಯರು ಚೆಂಡು-ಬುಗರಿಯೊಡನೆ ಆಡುತ್ತಿರುವಾಗ, ನಾನು ಸುಮ್ಮನೆ ನೋಡುತ್ತ ನಿಲ್ಲುತ್ತಿದ್ದೆ. ನನಗೂ ಅವರೊಡನೆ ಕೂಡಿ ತಿನ್ನಬೇಕು-ಆಡಬೇಕು ಎಂಬ ಇಚ್ಛೆಯಾಗು-ತ್ತಿತ್ತು. ಅದು ಸಾಧ್ಯವಿರಲಿಲ್ಲ. ಆಗಲೆ ಜೊತೆಯವರ ತಿಂಡಿ-ಆಟಿಗೆ-ಗಳನ್ನು ಕದಿಯಲು ಆರಂಭಿಸಿದೆ!"

"ನಿನ್ನ ತಾಯಿಯವರು ಕೂಡ ನಿನಗೆ ಏನೂ ಕೊಡುತ್ತಿರ-ಲಿಲ್ಲವೆ?"

"ಅವಳಿಗಾದರೂ ಅಧಿಕಾರವೆಲ್ಲಿದೆ ಸರ್? ಇದ್ದುದರಲ್ಲಿಯೆ ನನಗೆ ಏನಾದರೂ ಕೊಡಲು ಯತ್ನಿಸಿದಾಗ 'ಇಲ್ಲದ ಸವಿರುಚಿ ಮಗನನ್ನು ಅಡ್ಡದಾರಿ ಹಿಡಿಸಬೇಕೆನ್ನುವೆಯಾ?' ಎಂದು ತಂದೆ ಗದರಿಸುತ್ತಿದ್ದರು. ಇದರ ಸಲುವಾಗಿಯೆ ಆಕೆ ಒಂದೆರಡು ಸಲ ಏಟು ತಿಂದುದುಂಟು"

"ನೀನು ಶಾಲೆಯಲ್ಲಿ ಬಾಲಕರ ವಸ್ತುಗಳನ್ನು ಕದಿಯುವಾಗ ನಿಮ್ಮ ಗುರುಗಳು ಶಿಕ್ಷಿಸುತ್ತಿರಲಿಲ್ಲವೆ?"

"ಮೊದ-ಮೊದಲು ಚಿಕ್ಕವನೆಂದೋ- ಮಹತ್ತ್ವವಿಲ್ಲದ ವಸ್ತು-ಗಳೆಂದೊ, ಹೆಚ್ಚಾಗಿ ನನ್ನ ಕಡೆಗೆ ಗಮನಕೊಡುತ್ತಿರಲಿಲ್ಲ. ಮು

ಗಡಿಗರ ಗಂಟೆನೊಳಗಿನ ಹಣ ಎತ್ತಿದಾಗ ಸಾಕಷ್ಟು ಶಿಕ್ಷಿಸಿದರು–ಹೇಳಿದರು. ತಂದೆಯವರಿಗೂ ಹೇಳಿ 'ಉಪಚಾರ' ಮಾಡಿಸಿದರು. ಾವುದಕ್ಕೂ ನನ್ನ ಬಯಕೆ ಮಣಿಯಲಿಲ್ಲ. ಹಾಗೂ ಹೀಗೂ ಸ್ಕೂಲುಕಟ್ಟೆ ಏರಿದೆ. ಅಲ್ಲಿಯೂ ಇದೇ ಹಾಡು. ಜತೆಗೆ ನನ್ನಂತಹ ್ಟರು ಗೆಳೆಯರು ಕೂಡಿದರು. ಹೊಟೆಲ್ ತಿಂಡಿತಿನ್ನುವ–ಸಿನೀಮಾ ೋಡುವ ಚಟ ಬೆಳೆಯಿತು. 'ನಾಲ್ಕು ತಿಂಗಳಿಂದ ನಿಮ್ಮ ಮಗನ ಹಣ ಬಂದಿಲ್ಲ' ಎಂದು, ಮುಖ್ಯಗುರುಗಳು ತಂದೆಯವರಿಗೆ ಗದ ಕಳುಹಿದರು. ತಂದೆಯವರು ನನ್ನನ್ನು ಚೆನ್ನಾಗಿ ಉಪಚರಿಸಿ ಳಿದಾಗ, ಎಲ್ಲವನ್ನೂ ಹಾಳುಮಾಡಿದ ವಿವರ ಒಪ್ಪಿಸಿದೆ. ಬಲುಮೆ–ಂದ ಮತ್ತೆ ನನ್ನನ್ನು ಶಾಲೆಗೆ ತುರುಕಿದರು. ಉಪಯೋಗವಾಗ–ಲ್ಲ. ನನ್ನ ಚಟ ಬಿಡಲಿಲ್ಲ. ಮತ್ತೊಮ್ಮೆ ಇಂತಹ ಘಟನೆ ನಡೆದಾಗ ಲೆಯಿಂದ ಹೊರಗಟ್ಟಿದರು.''

"ಹೀಗೆ ಅಡ್ಡದಾರಿ ಹಿಡಿದರೆ, ಏಟು ತಿನ್ನಬೇಕಾಗುತ್ತದೆಂಬ ದರಿಕೆಯಾಗುತ್ತಿರಲಿಲ್ಲವೆ ?"

"ಪ್ರಬಲವಾದ ಇಚ್ಛಾಶಕ್ತಿಯ ಎದುರು, ಭಯ–ಭೀತಿ–ನೀತಿ ಾವುವೂ ಉಳಿಯುತ್ತಿರಲಿಲ್ಲ ಸರ್! ಶಾಲೆಯನ್ನು ಬಿಟ್ಟಮೇಲಂತೂ ಾನು ತೀರ ದಾರಿಬಿಟ್ಟೆ. ಪೇಟೆಯಲ್ಲಿ ಸುಳಿದಾಡುವಾಗ, ಕಂಡ ಸ್ತುಗಳನ್ನು ಎತ್ತುವ ಸಾಹಸವನ್ನು ಮಾಡುತ್ತಿದ್ದೆ. ಎಷ್ಟೋ ಸಲ ಕ್ಕು ಏಟನ್ನೂ ತಿಂದೆ. ಇದರಿಂದ ತಂದೆಯವರಿಗೂ ಸಾಕಾಗಿ ೋಯಿತು. ಒಮ್ಮೆ ಒಬ್ಬರು ತಮ್ಮ ವಾಚ್ ಬಿಚ್ಚಿಟ್ಟು ನಲ್ಲಿಯ ಳಗೆ ಸ್ನಾನಕ್ಕೆ ಕುಳಿತಿದ್ದರು. ನಾನದನ್ನು ಎತ್ತಿಕೊಂಡು ನಡೆದಾಗ ಕ್ಕಿಬಿದ್ದೆ. ತಂದೆಯವರಿಗೆ ಅದರಿಂದ ನನ್ನನ್ನು ಉಳಿಸಿಕೊಳ್ಳಲು ಾಕುಬೇಕಾಯಿತು. ಎಲ್ಲಿಯಾದರೂ ಕೆಲಸಕ್ಕೆ ಸೇರಿಸಿದರೆ ಸರಿ–ೋಗುವುದೇನೋ— ಎಂದು ಭಾವಿಸಿ ತಂದೆಯವರು, ತಮಗೆ ರಿಚಿತರಾದ ಪಾಟೀಲಬಂಧುಗಳಲ್ಲಿ, ಹೊಲಿಗೆಯ ಕೆಲಸಕ್ಕೆ ನಿಯ–ಮಿಸಿದರು. ಕೈಯಲ್ಲಿ ಸಂಬಳವು ಬರುವುವೆಂದು ನಾನೂ ಹಿಗ್ಗಿದೆ. ದರೆ ನಾನು ಭಾವಿಸಿದಂತೆ ನಡೆಯಲಿಲ್ಲ. ಪ್ರತಿತಿಂಗಳೂ ಎಲ್ಲಹಣ ೇರವಾಗಿ ತಮಗೇ ಬಂದು ತಲುಪಬೇಕೆಂದು, ತಂದೆಯವರು ಾಟೀಲರಿಗೆ ತಿಳಿಯಪಡಿಸಿದ್ದರು. ಇದರಿಂದ ನಿರಾಶನಾದ ನಾನು ಂದೆರಡು ತಿಂಗಳುಗಳಲ್ಲಿಯೆ, ಅವರಿಲ್ಲದಾಗ ಅಂಗಡಿಯಲ್ಲಿಯ ಹಣ ತ್ತತೊಡಗಿದೆ. ಒಂದೆರಡು ಸಲ ಹೇಳಿ ನೋಡಿದರು; ಪ್ರಯೋಜನ–ಾಗಲಿಲ್ಲ. ಕೊನೆಯಲ್ಲಿ ಅವರೂ ಅಪ್ಪಣೆಕೊಟ್ಟರು."

"ನನ್ನ ಕೋಟನ್ನು ಹೇಗೆ ಎತ್ತಿ ಹಾಕಿದೆ ?''

"ನೀವು ವಿಜಯ ಪುಸ್ತಕಾಲಯದಲ್ಲಿ 'ಜಯಂತಿ' ಪತ್ರಿಕೆ ಗೆದುಕೊಂಡು ನಿಂತಿದ್ದಿರಲ್ಲ! ಆಗ ನಾನು ಆ ಅಂಗಡಿಯ ಕೆಳಗಡೆ ಿಂತಿದ್ದೆ. ನೀವು ಪಾಕೀಟನ್ನು ಬಿಚ್ಚಿ ಹಣಕೊಡುವಾಗ, ಅದರಲ್ಲಿಯ ೋಟುಗಳು ನನ್ನ ಆಸೆಯನ್ನು ಕೆರಳಿಸಿದುವು. ನನ್ನ ಸರಿಕರಂತೆ ಾನೂ ಬುಶ್‌ಕೋಟ್ ತೊಡಬೇಕೆಂಬ ಆಸೆ ಒಂದು ವಾರದಿಂದಲೂ ನ್ನಲ್ಲಿ ಕುಣಿಯುತ್ತಿತ್ತು. ನಿಮ್ಮ ಹಣ ಕಂಡಾಗ ಬಯಕೆ ಬಾಯ್ದೆ ಯಿತು. ನೀವು ಅಂಗಡಿ ಇಳಿದು ನಡೆದಾಗ, ನನ್ನ ಕಾಲುಗಳು ನಿಮ್ಮ–ನ್ನನುಸರಿಸಿದವು. ಹಾಗೆಯೇ ಯೋಚಿಸುತ್ತ ಬೆನ್ನುಹತ್ತಿದೆ. ಹೆದರಿಕೆಯಾಯಿತು. ಈ ಕಾರ್ಯ ಅಸಂಭವವೆಂದೆನಿಸಿತು. ಹೊರಳಬೇಕೆಂದೆ ಮನಸ್ಸು ಕೇಳಲಿಲ್ಲ. ನೀವು ಆ ಮನೆಯಲ್ಲಿ ಹೊಕ್ಕಾಗ, ಬಾಗಿಲಲ್ಲಿ ಹಣೆಯಿಕ್ಕಿ ನೋಡಿದೆ. ಕೋಟನ್ನು ಕಳೆದು ಪಡಸಾಲೆಯಲ್ಲಿಯ ಮೊಳೆಗೆ ತಗುಲಿಸಿ ಒಳಗೆ ಹೋದಿರಿ. ಅಲ್ಲಿ ಮತ್ತಾರೂ ಕಾಣಲಿಲ್ಲ. ಜಪ್ಪಿಸಿ ಒಳಗೆ ಬಂದು, ಕೋಟನ್ನು ಬಗಲಲ್ಲಿರಿಸಿಕೊಂಡು ಹೊರಟು ಬಂದೆ."

"ಪಾಕಿಟೊಂದನ್ನೇ ಒಯ್ಯಬಹುದಿತ್ತಲ್ಲ! ''

"ನೋಡಿ ಸರ್, ನಾನು ಪಾಟೀಲರಲ್ಲಿದ್ದಾಗ, ಅರಿವೆಗಳನ್ನು ತರುವ ಹಾಗೂ ಅವರ ಮನೆಗಳಿಗೆ ಮುಟ್ಟಿಸುವ ಕೆಲಸವನ್ನು ನಾನೇ ಮಾಡುತ್ತಿದ್ದೆ. ಹಿರಿ–ಕಿರಿದಾದ ಕೋಟುಗಳನ್ನು ಹೀಗೆ ಎಷ್ಟೋಸಲ ಸರಿಪಡಿಸುವುದಕ್ಕಾಗಿ ಒಯ್ದುದುಂಟು. ಕಾರಣ ಹೀಗೆ ಒಯ್ದರೆ, ಯಾರೂ ಸಂಶಯಪಡಲಾರರೆಂದು ಭಾವಿಸಿದೆ. ಮೇಲಾಗಿ ನಿಮ್ಮ ಜೇಬುಗಳನ್ನು ಪರೀಕ್ಷಿಸುವಷ್ಟು ಅವಕಾಶವೆಲ್ಲಿತ್ತು ?''

ನನಗೆ ಆ ಹುಡುಗನ ಮನಃಸ್ಥಿತಿ ಚೆನ್ನಾಗಿ ಅರ್ಥವಾಯಿತು. ಅವನಲ್ಲಿ ಬೆಳೆದುಬಂದ ದುರ್ಭಾವನೆಗಳ ಮೂಲಕಾರಣವು ತಿಳಿ–ದಂತಾಯಿತು.

''ಇದರಿಂದ ನಿನಗೆ ಸೌಖ್ಯವೆನ್ನಿಸುತ್ತದೆಯೆ ರಾಮು ?'' ಎಂದೆ.

''ಸೌಖ್ಯವೊ ಕಷ್ಟವೊ, ನನಗಾವುದೂ ತಿಳಿಯದು ಸರ್! ಒಮ್ಮೊಮ್ಮೆ ನನ್ನ ಸರಿಕರನ್ನು ನೋಡಿದಾಗ, 'ನಾನು ಹೀಗೇಕಾದೆ ?' ಎಂಬ ವಿಚಾರ ಬಂದು ಅಳುಬರುತ್ತದೆ.''

"ರಾಮು, ನೀನೊಳ್ಳೆ ಸುವಿಚಾರಿ ಕಾಣುತ್ತಿ. ನಿನ್ನ ಜೀವನ–ಲತೆಯಲ್ಲಿ ಇಂತಹ ದುಷ್ಟ ಹುಳುವಿಗೆ ಆಸ್ಪದ ಕೊಡಬಾರದು." ರಾಮೂನ ತಲೆ ನೇವರಿಸುತ್ತ ನುಡಿದೆ.

"ನಾನೇನು ಮಾಡಲಿ ಸರ್...." ಎಂದವನು ಮುಖ ಮೇಲೆತ್ತಿ ನನ್ನೆಡೆಗೆ ನೋಡಿದ. ಅದೇ ಹೊತ್ತಿಕೊಂಡ ವಿದ್ಯುತ್ತಿನ ಬೆಳಕಿನಲ್ಲಿ, ಅವನ ಕಣ್ಣು ತುಂಬಿನಿಂತಿರುವುದನ್ನು ಕಂಡೆ. ಅವನ ಮನದ ಯಾತನೆಯೆಲ್ಲ ಆ ಕಣ್ಣೀರಲ್ಲಿ ತೇಲಾಡುವಂತಿತ್ತು.

"ಇನ್ನು ಇಂತಹ ನಡತೆಯನ್ನು ಬಿಟ್ಟುಬಿಡು ರಾಮು !''

''ನನ್ನ....ತಂದೆ.......''

"ಅವರಿಗೆ ನಾನೆಲ್ಲ ಹೇಳುತ್ತೇನೆ. ಅವರ ಯೋಜನೆ ಬೇಡ!"

"ಆಗಲಿ ಸರ್" ಎಂದ: ಅವನಲ್ಲಿ ದೃಢನಿರ್ಧಾರ ಮೂಡಿದಂತಿತ್ತು.

''ಇನ್ನು ಹೋಗೋಣವೆ ?'' ಎಂದು ಎದ್ದೆ. ರಾಮು ನನ್ನನ್ನು ಹಿಂಬಾಲಿಸಿದ. 'ಕರುಣಾಳು ಬಾ ಬೆಳಕೆ' ಎಂಬ ಹಾಡು ಅಲ್ಲಿಯ ರೇಡಿಯೊದಿಂದ ಕೇಳಬರುತ್ತಿತ್ತು.

ದಾರಿಯಲ್ಲಿ, ಅವನ ಮನಸ್ಸಿಗೆ ಮುದ್ದುಕೊಡುವ ಅದೆಷ್ಟೋ ಹಿತದ ಮಾತುಗಳನ್ನು ಆಡುತ್ತ ಸಾಗಿದೆ. ಸರಕಾರೀ ಆಸ್ಪತ್ರೆಯ ಸಮೀಪ ಬಂದಾಗ, ರಾಮು ಸ್ವಲ್ಪ ಬದಿಗೆ ಸರಿದು ಅಲ್ಲಿದ್ದ ಚರಂಡಿ–ಯಲ್ಲಿ ಕೈಯಾಡಿಸತೊಡಗಿದ. "ಏನದು ರಾಮು ? ಅಲ್ಲೇನು ಮಾಡುತ್ತೀ ?'' ಎಂದು ಕುತೂಹಲದಿಂದ ಕೇಳಿದೆ. ಅವನು ಏನೂ

ಉತ್ತರಿಸದಿರುವುದನ್ನು ಕಂಡು, ಹತ್ತಿರ ಹೋಗುವಷ್ಟರಲ್ಲಿ ಅವನ ಕೈಯಲ್ಲಿ ಪೆನ್ನು ಕಾಣಿಸಿತು. 'ಹತ್ತಿರದ ನಲ್ಲಿಯಲ್ಲಿ ಅದನ್ನು ತೊಳೆದು "ತಕ್ಕೊಳ್ಳಿ ಸರ್, ಇದು ನಿಮ್ಮ ಪೆನ್ನು" ಎಂದು ಅದನ್ನು ನನ್ನ ಕೈಗಿಟ್ಟ.

ರಾಮೂನ ಸಂಗಡ ನಾನು ಅವರ ಮನೆಯೊಳಗೆ ಹೋದೆ. ಪಡಸಾಲೆಯಲ್ಲಿ ತಿರುಗಾಡುತ್ತಲಿದ್ದ ರಾಯರು ನನ್ನನ್ನು ನೋಡಿ "ಬನ್ನಿ ಮೇಲೆ" ಎಂದು ಕರೆದರು. ನಾನು ಮೇಲೆ ಹೋಗಿ ಕುಳಿತು-ಕೊಂಡೆ. ರಾಮು ಅಡಿಗೆಮನೆ ಸೇರಿದ.

"ನಿಮ್ಮ ರಾಮೂನ ವಿಷಯವಾಗಿ ನಿಮ್ಮೊಡನೆ ಒಂದೆರಡು ಮಾತನಾಡಬೇಕಾಗಿದೆ. ಬೇರೆಯೇನು ತಿಳಿದುಕೊಳ್ಳುವುದಿಲ್ಲವಷ್ಟೆ?" ಎಂದೆ ನಾನು.

"ಮಾತಾಡಬಹುದು ಅದಕ್ಕೇನು? ಒಳಗೇ ನಡೆಯಿರಿ" ಎನ್ನುತ್ತ ತಮ್ಮ ವಿರಾಮಕೋಣೆಗೆ ಕರೆದೊಯ್ದರು

"ರಾಮು ಹೀಗೆ ಅಡ್ಡದಾರಿ ತುಳಿಯಲು ಕಾರಣವೇನಿರಬಹು-ದೆಂಬುದನ್ನು ಕಂಡುಹಿಡಿಯಲು ಯತ್ನಿಸಿರುವಿರಾ?" ಸೋಫಾದ ಮೇಲೆ ಕೂಡುತ್ತ ನುಡಿದೆ.

"ದಿನವೂ ಅದೇ ವಿಚಾರದಲ್ಲಿಯೆ ನವೆಯುತ್ತಿದ್ದೇನೆ. ಅವನ ಹುಟ್ಟುಗುಣವೇ ಹಾಗಿದೆ. ನಮ್ಮ ದುರ್ದೈವಕ್ಕೆ ಇಂತಹ ಮಗ ಹುಟ್ಟಿದ್ದಾನೆ." ರಾಯರು ಹಣೆಗಂಟಿಕ್ಕಿ ನುಡಿದರು.

"ಅವನ ನಡತೆಯನ್ನು ತಿದ್ದಲು ಯತ್ನಿಸಿರುವಿರಾ?"

"ಸಾಕಷ್ಟು ಪರಿಶ್ರಮ ಪಟ್ಟಿದ್ದೇನೆ. ಬೆದರಿಸಿ ಹೇಳಿದ್ದೇನೆ. ಉಪವಾಸ ಕೆಡವಿದ್ದೇನೆ. ಮೈಮುರಿ ಹೊಡೆದಿದ್ದೇನೆ. ಯಾವುದಕ್ಕೂ ಆತ ಹಾದಿಗೆ ಬಂದಿಲ್ಲ."

"ಅವನ ಕೈಯಲ್ಲಿ ಮನೆಯ ವ್ಯವಹಾರಕ್ಕಾಗಿ ಹಣ ಕೊಡು-ತ್ತಿರುವಿರಾ?"

"ಕಳ್ಳನ ಕೈಯಲ್ಲಿ ಹಣ ಕೊಡುವುದು ಹೇಗೆ? ಅವನನ್ನು ಮತ್ತಿಷ್ಟು ಅಡ್ಡದಾರಿ ತುಳಿಯಲ ಹಚ್ಚಿದಂತಾಗುವುದಿಲ್ಲವೆ?"

"ನೀವು ತಪ್ಪು ಭಾವಿಸಿರುವಿರಿ ರಾಯರೆ! ನಾನಿಂದು ರಾಮೂನ ಹೃದಯವನ್ನು ಅರಿತಿದ್ದೇನೆ. ಅವನು ಹೂವಿನಂತಹ ಹುಡುಗ...."

"ಹಾಂ.... ಇದರಲ್ಲಿ ನನ್ನ ತಪ್ಪೇನು?"

"ನೀವು ರಾಮೂನನ್ನು ನಿಮ್ಮ ಬಂಧನದಲ್ಲಿಯೆ ಇಡಲು ಯತ್ನಿಸಿದ್ದೀರಿ. ಅವನಿಗೆ ವ್ಯವಹಾರದ ನೀತಿ-ರೀತಿಗಳನ್ನು ಅರಿತು ಕೊಳ್ಳಲು ಆಸ್ಪದ ಕೊಟ್ಟಿಲ್ಲ. ಅವನ ಹೂವಿನಂತಹ ಮನಸ್ಸನ್ನು ಹಿಸುಕಿಬಿಟ್ಟಿದ್ದೀರಿ. ಅವನ ಬಯಕೆಗಳನ್ನೆಲ್ಲ ಹತ್ತಿಕ್ಕಲು ಯತ್ನಿಸಿ-ದ್ದೀರಿ. ನೀವು ಹಿಸುಕಿದಷ್ಟು ಹತ್ತಿಕ್ಕಿದಷ್ಟು ಅವನ ಮನಸ್ಸು ವ್ಯಗ್ರವಾಗಿ-ಉಗ್ರವಾಗಿ ಬೆಳೆದಿದೆ. ನೀವು ಆತನನ್ನು ತಿದ್ದಲು ಕೈಕೊಂಡ ಉಪಾಯಗಳೆ, ಮತ್ತಿಷ್ಟು ಅಡ್ಡದಾರಿ ಹಿಡಿಸಿವೆ. ಇದಕ್ಕೆ ಏನೆನ್ನುವಿರಿ?"

ರಾಯರು ಉತ್ತರಿಸಲಿಲ್ಲ. ಯಾವುದೋ ತಪ್ಪು ಮಾಡಿದವ-ರಂತಿತ್ತು ಅವರ ಮುಖಮುದ್ರೆ.

"ನೋಡಿ ರಾಯರೆ, ಮಕ್ಕಳ ಮನಸ್ಸು ಕೋಮಲವಾದು... ಅವರ ಇಚ್ಛಾಶಕ್ತಿಯನ್ನು ಹತ್ತಿಕ್ಕಲು ಯತ್ನಿಸುವುದು ಮಹಾಪರಾ... ಮಕ್ಕಳಿಗೆ ವ್ಯವಹಾರದ ಕಲ್ಪನೆ ಮಾಡಿಕೊಡಬೇಕು. ಏನಾದರ... ತಪ್ಪಿದಲ್ಲಿ ದುಡುಕದೆ, ಮೃದುವಾಗಿ ತಿದ್ದಿ ದಾರಿತೋರಿಸಬೇಕು... ಮುಂತಾಗಿ ನನ್ನ ಅಭಿಪ್ರಾಯ ಬಿಚ್ಚಿದೆ.

"ಮಾಡುವುದೇನು? ಎಲ್ಲವೂ ಕೈಮೀರಿದೆ......." ರಾಯ... ದೀರ್ಘವಾಗಿ ಉಸಿರೆಳೆದು ನುಡಿದರು.

"ನಿರಾಶರಾಗಲು ಕಾರಣವಿಲ್ಲ. ಇನ್ನೂ ಅವನನ್ನು ತಿದ್ದ... ಅವಕಾಶವಿದೆ. ನೀವು ಮಾತ್ರ ಸಿದ್ಧರಾಗಬೇಕು."

"ಈಗ ನಾನು ಎಲ್ಲದಕ್ಕೂ ಸಿದ್ಧನಿದ್ದೇನೆ. ಇದ್ದೊಬ್ಬ ಮ... ಹೀಗೆ ಅವಿವೇಕಿಯಾದರೆ ನನಗೆಷ್ಟು ವಿಷಾದವಾಗಿರಬೇಡ! ಇದರಿಂ... ನನಗೆ ಬಾಳಿನಲ್ಲಿ ನಿರಾಶೆ ತಲೆದೋರಿದೆ. ಅವನು ಒಳ್ಳೆಯವನಾದ... ನನಗೆಷ್ಟು ಹರುಷ!!"

"ನೀವು ಅವನಿಗೆ ಮನೆತನದ ಹೊಣೆ ಒಪ್ಪಿಸಿರಿ. ವ್ಯವಹಾರದ... ಆತನಿಗೆ ಸ್ವಾತಂತ್ರ್ಯಕೊಟ್ಟು ನೋಡಿರಿ. ಯಾವುದಾದರೊಂದ... ಸ್ವತಂತ್ರ ಉದ್ಯೋಗದಲ್ಲಿ ತೊಡಗಿಸಿರಿ. ಮೊದಲು ಇದರಿಂದ ನಿಮ... ಪ್ರಯಾಸ ತೋರಿದರೂ, ಕೊನೆಯಲ್ಲಿ ಯಶ ಕಟ್ಟಿಟ್ಟಿದ್ದು. ನನ್ನ ... ಮಾತಿನ ಮೇಲೆ ತಾವು ವಿಶ್ವಾಸಪಿಟ್ಟು ನಡೆಯುವಿರೆಂದು ಭಾವಿ... ಸಿದ್ದೇನೆ." ಎಂದು ಮಾತು ಮುಗಿಸಿ "ಹೊತ್ತಾಯ್ತು ಹೋಗಬೇಕು" ಎಂದು ಎದ್ದುನಿಂತೆ. ರಾಯರೂ ಎದ್ದು — "ರಾಮೂ...." ಎಂದರು... ರಾಮು ಒಳಗಿನಿಂದ ಓಡಿಬಂದ. "ಈ ನಿನ್ನಣ್ಣ ಹೋಗುತ್ತಾರಂ... ಅವರನ್ನು ಕಳುಹಿ ಬಾ" ಎಂದರು. "ಬೇಡ ನನಗೇನೂ ಅರಿಯ... ದಾರಿಯಲ್ಲ" ಎಂದು ಅವನನ್ನು ತಡೆದೆ. "ಹೋಗಿಬನ್ನಿ ಸರ್" ಎಂದು ರಾಮು ಕೈಮುಗಿದ. "ದೇವರು ನಿನಗೆ ಸದ್ಬುದ್ಧಿಯನ್ನು ಕೊಡಲಿ" ಎಂದು ಹರಸಿ ಮುನ್ನಡೆದೆ. "ಮತ್ತೆ ಊರಿಗೆ ಬಂದಾ... ಮನೆಗೆ ಬನ್ನಿ" ಎಂದು ರಾಯರು ಹೇಳಿದರು. "ಆಗಲಿ" ಎಂದು ಹೊರಬಿದ್ದೆ.

x x x x x

ಮೇಲಿನ ಈ ಘಟನೆ ನಡೆದು ಐದಾರು ವರ್ಷ ಗತಿಸಿದ್ದುವು... ನಾನು ಅದೇ ಪಟ್ಟಣದ ಪೇಟೆಯಲ್ಲಿ ಸುತ್ತಾಡುತ್ತಿದ್ದೆ. ಬಟ್ಟೆಕೊಳ್ಳಲು ಒಂದು ಅಂಗಡಿಯ ಕಟ್ಟೆಯನ್ನು ಏರಿದೆ. ದಿಂಬಿಗೆ ಆತು ಕುಳಿತ ತರುಣ... ನೊಬ್ಬ ನನ್ನನ್ನು ನೋಡುತ್ತಲೆ ಎದ್ದುಬಂದು "ಬನ್ನಿ, ಯಾವಾ... ಬಂದಿರಿ?" ಎಂದು ಆದರದಿಂದ ಕರೆದೊಯ್ದು ತನ್ನ ಆಸನದಲ್ಲಿ... ಕುಳ್ಳಿರಿಸಿದ. ಅವನು ರಾಮೂ ಎಂದು ಕಂಡುಹಿಡಿಯಲು ನನ... ಬಹಳ ವೇಳೆ ಹಿಡಿಯಲಿಲ್ಲ. "ತಂದೆಯವರನ್ನು ಕರೆ" ಎಂದು... ಆಳುಮಗನಿಗೆ ಹೇಳಿದ. ಆಳು ಮಹಡಿಯ ಮೇಲಿದ್ದ ರಾಯರನ್ನು... ಕರೆತಂದನು. ಅವರು ಮಿಳ್ಮಿಳನೆ ನನ್ನ ಮುಖ ನೋಡತೊಡಗಿದರು... "ಇವರಾರು ಗೊತ್ತೇ ಅಪ್ಪಾ?" ರಾಮು ನನ್ನನ್ನು ತೋರಿ... ನುಡಿದ. "ಓಹೋ! ನಿನ್ನ ಅಣ್ಣನಲ್ಲವೆ?....... ಯಾವಾ...

(೧೮೩ನೆಯ ಪುಟಕ್ಕೆ ಮುಂದುವರಿದಿದೆ)

ಪಾಶ್ಚರ್ ಮತ್ತು ಆತನ ಪ್ರಯೋಗಗಳು

(ವೈಜ್ಞಾನಿಕ ವ್ಯಕ್ತಿಪರಿಚಯ)

[ಪೂರ್ವಾರ್ಧ]

ಶ್ರೀ. ಟಿ. ಆರ್. ನಾಡಿಗೇರ, ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ. (ಟೆಕ್.) ಮುಂಬಯಿ

ಜೀವನಕ್ಕೆ ವಿಧಾಯಕವೆನಿಸುವಂತಹ ಅನೇಕ ವೈಜ್ಞಾನಿಕಸಿದ್ಧಿಗಳನ್ನು ಕಂಡುಹಿಡಿದವನು ಈ ಮಹಾನುಭಾವ. ತನಗೆ ಗೊತ್ತೇ ಇಲ್ಲದ ಅನೇಕ ಕ್ಷೇತ್ರಗಳಲ್ಲಿಯೂ ಒಳಹೊಕ್ಕುನೋಡಿ, ಅವುಗಳಲ್ಲಿಯ ತೊಡಕು-ಅಡಚಣೆಗಳಿಗೆ ವೈಜ್ಞಾನಿಕ ಉಪಾಯಗಳನ್ನು ಕಲ್ಪಿಸಿಕೊಟ್ಟ ಕರ್ಮಯೋಗಿಯಿವ!

●

೧೮೩೧ರಲ್ಲಿ, ಸೂಕ್ಷ್ಮಜೀವಿಗಳ ಶೋಧವು ತಾತ್ಕಾಲಿಕವಾಗಿ ಸ್ಥಗಿತವಾಗಿತ್ತು. ಟೆಲಿಗ್ರಾಫ್ ಯಂತ್ರವು ಆಗ ತಾನೆ ರೂಪುಗೊಳ್ಳುತ್ತಲಿತ್ತು. ಸೂಕ್ಷ್ಮದರ್ಶಿನಿಗಳ (Microscope) ಕಾರ್ಯಕ್ಷಮತೆ ಹೆಚ್ಚುತ್ತಿದ್ದಿತು. ಇಂತಹ ಅನುಕೂಲ ಪರಿಸ್ಥಿತಿಯಲ್ಲಿಯೂ ಸೂಕ್ಷ್ಮಜೀವಿಗಳನ್ನು ಕುರಿತ ಹೆಚ್ಚಿನ ಅಭ್ಯಾಸವು ಆಗ ಕಡೆಗಣಿಸಲ್ಪಟ್ಟುದು ವಿಷಾದಕರ ಸಂಗತಿಯು. ಸೂಕ್ಷ್ಮಜೀವಿಗಳಿಂದಲೇ ಸಾವು, ತಿಳಿಯದಂತೆ ಅತಿಸಹಜವಾಗಿ ಅಷ್ಟೇ ತ್ವರಿತಗತಿಯಿಂದ ಸಮೀಪಿಸುತ್ತಿರುವುದು ಆಗ ಇನ್ನೂ ಯಾರಿಗೂ ಗೊತ್ತಿರಲಿಲ್ಲ. ಇಂತಹ ಕಾಲದಲ್ಲೊಂದು ದಿನ, ಒಂದು ಮಹತ್ತ್ವದ ಘಟನೆ ಜರುಗಿತು.

೧೮೩೧ನೆಯ ಇಸ್ವಿಯ ಅಕ್ಟೋಬರ್ ತಿಂಗಳಲ್ಲೊಂದು ದಿನ. ಒಂಬತ್ತು ವರ್ಷ ವಯಸ್ಸಿನ ಬಾಲಕನೊರ್ವನು, ಗಾಬರಿಯಾಗಿ ಕಮ್ಮಾರನ ಸಾಲೆಯಲ್ಲಿ ಸೇರಿದ್ದ ಜನಸಮ್ಮರ್ದವನ್ನು ಭೇದಿಸಿ ಓಡಲಾರಂಭಿಸಿದನು. ಏಕೆಂದರೆ, ಆಗ ಕಮ್ಮಾರ ಹುಚ್ಚುತೋಳದಿಂದ ಕಚ್ಚಲ್ಪಟ್ಟವನೊಬ್ಬನಿಗೆ ಬರೆಕೊಡುತ್ತಲಿದ್ದ. ಕಮ್ಮಾರನು ಕಾದ ಸಲಾಕಿಗಳನ್ನು ಆ ಮನುಷ್ಯನ ಮೇಲೆ ಎಳೆಯುತ್ತಿರುವಂತೆ ಉಂಟಾದ 'ಸ್ಸ' ಎಂಬ ಶಬ್ದ, ಎಳೆದಾದ ಮೇಲೆ ವೇದನೆಯನ್ನು ಸಹಿಸಲಾರದೆ ಚೀತ್ಕರಿಸುತ್ತಿದ್ದ ಆ ಮನುಷ್ಯನ ಕೂಗಾಟ— ಇವುಗಳನ್ನು ನೋಡಲಾರದೆ, ಆ ಪುಟ್ಟಬಾಲಕನು ಗಾಬರಿಗೊಂಡು ಓಡಿದ. ಈ ಬಗೆಯ ಬರೆಕೊಡುವ ಕ್ರಮ ಆಗ ತೀರ ಸಾಮಾನ್ಯವಾಗಿತ್ತು. ಅಂದು ಹಾಗೆ ಓಡಿಹೋದ ಬಾಲಕ ಯಾರು ಗೊತ್ತಿದೆಯೆ? ಮುಂದೆ ಜಗತ್ಪ್ರಸಿದ್ಧ ವಿಜ್ಞಾನಿಯಾಗಲಿದ್ದ ಲೂಯಿ ಪಾಶ್ಚರನೇ ಆ ಬಾಲಕ!

ಬರೆಕೊಡುತ್ತಿರುವ ಅಂದಿನ ದೃಶ್ಯ, ಪುಟ್ಟ ಪಾಶ್ಚರನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು. ಬಾಲಕ ಸಹಜವಾದ ಕುತೂಹಲದಿಂದಲೇ ಪಾಶ್ಚರನು ಅಂದು ಜನಸಮೂಹದಲ್ಲಿ ಸೇರಿದ್ದನಾದರೂ, ಉಳಿದ ಎಳಮಕ್ಕಳಂತೆ ಆತ ಆ ಘಟನೆಯನ್ನು ಮರೆಯಲಿಲ್ಲ. ಕುಳಿತಲ್ಲಿ, ನಿಂತಲ್ಲಿ ಅದು ಪಾಶ್ಚರನ ಅಂತಶ್ಚಕ್ಷುಗಳೆದುರಿಗೆ ಥುತ್ತೆಂದು ನಿಲ್ಲುತ್ತಿತ್ತು. ಕಡೆಗೊಂದು ದಿನ ಆತ ಅಂತರ್ವೇದನೆಯನ್ನು ಸಹಿಸಲಾರದೆ, ತನ್ನ ತಂದೆಯನ್ನು ಕೇಳಿದ:— 'ಅಪ್ಪಾ, ತೋಳಗಳಿಗೆ ಮತ್ತು ನಾಯಿಗಳಿಗೆ ಹುಚ್ಚು ಏಕೆ ಹಿಡಿಯುತ್ತದೆ? ಅವು ನಮ್ಮನ್ನು ಕಚ್ಚಿದರೆ, ಸಾವು ಏಕೆ ಉಂಟಾಗುತ್ತದೆ?" ಪುಟ್ಟ ಬಾಲಕನ ಈ ಪ್ರಶ್ನೆಗೆ, ಪಾಶ್ಚರನ ತಂದೆಯು ಒಂದರೆನಿಮಿಷ ಭ್ರಾಂತನಂತೆ ಕುಳಿತ. ಆತನಾದರೂ ಏನು ಉತ್ತರ ಕೊಡಬೇಕು? ನೆಪೋಲಿಯನ್ನನ ಸೈನ್ಯದಲ್ಲಿ ಸಾರ್ಜಂಟನಾಗಿದ್ದ ಆತನು, ಯುದ್ಧಭೂಮಿಯಲ್ಲಿ ಅಸಂಖ್ಯಾತ ಜನರು ಗುಂಪುತಾಗಿ ಪಟಪಟನೆ ಬಿದ್ದು ಸಾಯುವುದನ್ನು ಮಾತ್ರ ಕಣ್ಣಾರೆ ಕಂಡವನಾಗಿದ್ದನು. ಹುಚ್ಚು ಹಿಡಿದ ತೋಳವು ಕಚ್ಚಿದರೆ ಜನ ಏಕೆ ಸಾಯುವರೆಂಬುದು ಆತನಿಗೆ ಅರಿಯದ ವಿಷಯ. ಆತನೊಬ್ಬನಿಗೇ ಏಕೆ? ಬಹುಶಃ ಆಗಿನ ಕಾಲಕ್ಕೆ ಈ ವಿಷಯ ಯಾರಿಗೂ ಗೊತ್ತಿರಲಿಲ್ಲವೆನ್ನಬಹುದು. ಎಂತಲೆ ಪುಟ್ಟಬಾಲಕನ ಕುತೂಹಲಕ್ಕೆ ಹಾರಿಕೆಯ ಉತ್ತರ ದೊರೆಯಿತು: "ಏಕೆ ಎಂದರೆ ಏನು ಹೇಳಲಿ ಮಗು? ಎಲ್ಲವೂ ದೇವರ ಲೀಲೆ!" ಇಷ್ಟಕ್ಕೆ ಆತ ತೃಪ್ತನಾಗದೆ, ತನ್ನ ಮಾತನ್ನು ವಿಶದೀಕರಿಸಬಯಸಿದ: "ದೇವರಿಗೆ ನಿನ್ನ ಮೇಲೆ ಕೋಪಬಂದರೆ, ಆ ಬೇನೆ ನಿನಗೂ ಬರಬಹುದು; ನಿನ್ನನ್ನೂ ಅದು ಬಲಿಯಾಗಿ ತೆಗೆದುಕೊಳ್ಳಬಹುದು!" ಪಾಶ್ಚರನಿಗೆ ತಂದೆಯ ವಿವರಣೆಯಿಂದ ಸಮಾಧಾನವೆನಿಸದಿದ್ದರೂ, ತಿಳಿಯಿತೆಂಬಂತೆ, ಕತ್ತು ಕೊಂಕಿಸುವುದು ಅನಿವಾರ್ಯವಾಯಿತು.

ಪಾಶ್ಚರನು ಪ್ರಾಪ್ತವಯಸ್ಕನಾಗುತ್ತಲೆ, ಆತನ ತಂದೆ ಪ್ಯಾರಿಸಿನಲ್ಲಿಯ Normal Schoolಗೆ ಆತನನ್ನು ಕಳುಹಿದನು. ಸ್ವಲ್ಪ ದಿನಗಳಲ್ಲಿಯೆ ಪಾಶ್ಚರನಿಗೆ ಮನೆಯ ನೆನಪುಂಟಾಗಿ, ಅಲ್ಲಿಂದೋಡಿ ಮನೆಗೆ ಬಂದು, ಅಲ್ಲಿಯೇ ಒಂದು ವರ್ಷ ಕಳೆದನು. ಮತ್ತೆ ಮರುವರುಷ ಪಾಶ್ಚರನನ್ನು ಅದೇ ಶಾಲೆಗೆ ಅಟ್ಟಲಾಯಿತು. ಆ ಶಾಲೆಯಲ್ಲಿದ್ದಾಗ ಪಾಶ್ಚರನಿಗೆ, ಅಂದಿನ ಸುವಿಖ್ಯಾತ ವಿಜ್ಞಾನಿ ಡ್ಯೂಮಾಸನ ಭಾಷಣವನ್ನು ಕೇಳುವ ಸುಯೋಗ ಲಭಿಸಿತು. ಡ್ಯೂಮಾಸನ ಅಂದಿನ ಭಾಷಣವು ಪಾಶ್ಚರನ ಮನಸ್ಸನ್ನು ಲೋಹಚುಂಬಕದಂತೆ

ಆಕರ್ಷಿಸಿ, ರಸಾಯನಶಾಸ್ತ್ರದಲ್ಲಿಯ ಆತನ ಆಸಕ್ತಿಯನ್ನು ಹೆಚ್ಚಿಸಿತು. ಮೇಲಾಗಿ ಅಂದೆಯೆ ಆತನು, ಒಂದಿಲ್ಲೊಂದು ದಿನ ತಾನೂ ಡ್ಯೂಮಾಸನಂತೆ ಸುಪ್ರಸಿದ್ಧ ವಿಜ್ಞಾನಿಯಾಗುವ ಕನಸನ್ನು ಕಂಡನು; ಆದರೆ ಈ ಕನಸು ನನಸಾಗುವ ಲಕ್ಷಣವು ಆತನ ಬಾಳಿನ ಮೊದಲಿನ ಇಪ್ಪತ್ತು ವರುಷಗಳಲ್ಲಿ ಕಂಡುಬರಲಿಲ್ಲ. ಆತನಿಗೆ ೨೬ ವರುಷಗಳಾದಾಗ ಅದು ಗೋಚರಿಸಿತು.

ವಿದ್ಯಾರ್ಥಿದೆಸೆಯಲ್ಲಿದ್ದಾಗ, ವರ್ಗಕ್ಕೆಲ್ಲ ಕಿರಿಯನಾಗಿದ್ದರೂ, ವರ್ಗದ ಹಿರಿಯಮಣಿಯಾಗಿ, ವರ್ಗವನ್ನು ಹೇಗೆ ನಿಯಂತ್ರಿಸಬೇಕೆಂಬುದನ್ನು ಮನಗಾಣಿಸುವ ಮಹದಾಸೆ ಆತನಿಗಿತ್ತು. ಈ ಆಶೆಯೂ ಬಹುಬೇಗ ಕೈಗೂಡಿತು. ೨೦ನೆಯ ವಯಸ್ಸಿನಲ್ಲಿ ಬೆಝುಂಕಾನ್ (Bezancon) ಕಾಲೇಜಿನ ಉಪಾಧ್ಯಾಯನಾಗಿ ಆಸಕ್ತಿಯಿಂದವನು ದುಡಿದನಲ್ಲದೆ, ಸಹೋದ್ಯೋಗಿಗಳನ್ನೂ ತನ್ನಂತೆಯೆ ಮನಃಪೂರ್ವಕವಾಗಿ ದುಡಿಯಹಚ್ಚಿದನು. ಆಗ ಪಾಶ್ಚರನು ಎಲ್ಲರಿಗೂ ಬೋಧಿಸುತ್ತಿದ್ದ ಅಮರ ವಾಕ್ಯವೆಂದರೆ 'ಸತತೋದ್ಯೋಗ!' ಇದನ್ನೇ ಆತ ತನ್ನ ಸೋದರಿಗೆ ಬರೆದೊಂದು ಓಲೆಯಲ್ಲಿ ಹೀಗೆ ವಿವರಿಸಿದ್ದಾನೆ:— "ಯಾವುದೇ ಒಂದು ವಿಷಯದ ಕಡೆಗೆ ಮನಸ್ಸು ಮಾಡುವುದೇ ಒಂದು ಮಹತ್ತ್ವದ ವಿಷಯ. ಒಮ್ಮೆ ನಿರ್ಧಾರ ವಾಯಿತೆಂದರೆ, ಕಾರ್ಯವು ತಾನೇ ರೂಪುಗೊಳ್ಳುವುದು. ಧೃಢ-ನಿರ್ಧಾರದ ಕಾರ್ಯಕ್ಕೆ ಯಶಸ್ಸು ಸ್ವತಃಸಿದ್ಧ !"

ಪಾಶ್ಚರನ ಪ್ರಪ್ರಥಮ ಸಂಶೋಧನೆಯಾದ ಟಾರ್ಟರಿಕ-ಮ್ಲದ ಪೃಥಕ್ಕರಣವು, ಆತನ ೨೬ನೆಯ ವಯಸ್ಸಿನಲ್ಲಾಯಿತು. ಈ ಸಂಶೋಧನೆಯನ್ನು ಕೈಕೊಂಡಾಗ, ಸಂಶೋಧನೆಯ ಪ್ರಗತಿಯನ್ನು ಸವಿವರವಾಗಿ ಮಿತ್ರನಾದ ಚ್ಯಾಪಿಯಸ್ಸನಿಗೆ ಹೇಳುತ್ತಿದ್ದ ಚ್ಯಾಪಿಯಸ್ ವಿಜ್ಞಾನದ ವಿದ್ಯಾರ್ಥಿಯಾಗಿರಲಿಲ್ಲ. 'ಚ್ಯಾಪಿಯಸ್, ನೀನೇಕೆ ವಿಜ್ಞಾನವನ್ನು ತೆಗೆದುಕೊಳ್ಳಲಿಲ್ಲ?' ಎಂದು ಪಾಶ್ಚರನು ತನ್ನ ವ್ಯಥೆಯನ್ನು ಆತನೆದುರಿಗೆ ತೋಡಿದುದುಂಟು. ಪಾಶ್ಚರನ ಪ್ರಪ್ರಥಮ ಸಂಶೋಧನೆಯಿಂದಾಗಿ, ಆತನಿಗೆ ಅಂದಿನ ಹಿರಿಯ ವಿಜ್ಞಾನಿಗಳ ಕೃಪೆದೊರೆತು, ಸ್ಟ್ರಾಸ್‌ಬರ್ಗಿನಲ್ಲಿ ಪ್ರಾಧ್ಯಾಪಕ ಪದವಿ ಲಭಿಸಿತು. ಅಲ್ಲಿಯೇ ಆತನು ಡೀನನ ಮಗಳನ್ನು ಪ್ರೇಮಿಸಿ, ಮದುವೆಯಾದ. ಲಗ್ನವಾದ ಮೇಲೆ ಕೆಲವು ದಿನಗಳು ಕೂಡ ಹೆಂಡತಿಯೊಂದಿಗೆ ಪಾಶ್ಚರ್ ಸರಸದಿಂದಿರಲಿಲ್ಲ. ಯಾವಾಗಲೂ ಯಾವುದನ್ನಾದರೂ ಶೋಧಿಸುವ ಗುಂಗೇ ಆತನಿಗಿರುತ್ತಿತ್ತು. ಇಂತಹ ಪತಿಯನ್ನು ಪಡೆದ ಆ ಹೆಂಡತಿ ಬಹು ಪೇಚಾಡಬೇಕಾಯಿತು. ಒಂದಿಲ್ಲೊಂದು ದಿನ ತನ್ನ ಪತಿ ಸುಪ್ರಸಿದ್ಧ ವಿಜ್ಞಾನಿಯಾಗುವನೆಂಬ ಬಲವಾದ ನಂಬಿಗೆಯಿತ್ತು ಆ ಸಾಧ್ವಿಗೆ.

ಒಂದೇ ಒಂದು ಸಂಸ್ಥೆಯನ್ನು ನಂಬಿಕೊಂಡಿರುವುದು ಪಾಶ್ಚರನಿಗೆ ಅಸಾಧ್ಯವೆನಿಸಿತು. ಕೆಲದಿನಗಳಲ್ಲಿಯೇ ಸ್ಟ್ರಾಸ್‌ಬರ್ಗನ್ನು ತ್ಯಜಿಸಿದನು. ಬಳಿಕ ಆತನನ್ನು ಲಿಲ್ಲಿಯಲ್ಲಿಯ ಕಾಲೇಜಿನಲ್ಲಿ ಮುಖ್ಯಾಧ್ಯಾಪಕನನ್ನಾಗಿ ನಿಯಮಿಸಲಾಯಿತು. ಇಲ್ಲಿಯೇ ಪಾಶ್ಚರ್ ಸೂಕ್ಷ್ಮಜೀವಿಗಳ ಅಭ್ಯಾಸ ಕೈಕೊಂಡು ಪ್ರಸಿದ್ಧಿಯನ್ನು ಪಡೆದುದು. ವಿದ್ಯೆಗೆ ಹೆಸರಾಗದ, ಅತಿ ಸಾಮಾನ್ಯಪಟ್ಟಣವಾದ ಲಿಲ್ಲಿ (Lille) ಪಾಶ್ಚರನ ಪ್ರಯೋಗಗಳಿಂದಾಗಿ ಪ್ರಸಿದ್ಧಿಯನ್ನು ಪಡೆಯಿತು. ಪಾಶ್ಚರನಿಗೆ ಇಲ್ಲಿಯೇ ಸೂಕ್ಷ್ಮಜೀವಿಗಳ ಅಭ್ಯಾಸದ 'ಓನಾಮ' ವಾಯಿತೆನ್ನಬಹುದು. ಅಲ್ಲಿಯ ಆತನ ಪ್ರಯೋಗಗಳು ಪ್ರಕಟವಾಗಿ, ಕೀರ್ತಿಯೊಂದಿಗೆ ಅವಹೇಳನವನ್ನೂ ಪಡೆದುವು. ಈ ಪ್ರಯೋಗ-ಗಳಿಂದಾಗಿ ಪಾಶ್ಚರನಿಗೆ, ಮಿತ್ರರಂತೆ ಶತ್ರುಗಳೂ ನಿರ್ಮಾಣವಾದರು. ಎಷ್ಟೋ ಜನರು, ರಾಸಾಯನಿಕ ಕ್ರಿಯೆಗೆ ಸೂಕ್ಷ್ಮಜೀವಿಗಳಿಂದ ಅಮೌಲ್ಯ ಸಹಾಯವಾಗುವುದೆಂಬ ಪಾಶ್ಚರನ ಸಿದ್ಧಾಂತವನ್ನು ಹಾಸ್ಯಾಸ್ಪದವೆಂದು ಹೀಗಳೆದರು. ಅನೇಕ ವಿಜ್ಞಾನೋದ್ಯಮಿಗಳು ಪಾಶ್ಚರನಿಗೆ ಸವಾಲು ಹಾಕಿದರು: "ಪ್ರೊಫೇಸರ್, ನಿಮ್ಮ ಪುಸ್ತಕೀಯ ಜ್ಞಾನ ಪ್ರತ್ಯಕ್ಷಕ್ಕಿಳಿಯಲಿ. ನಿಮ್ಮ ಪ್ರಯೋಗಗಳಿಂದ ವ್ಯವಹಾರ-ಕ್ಕಾಗುವ ಪ್ರಯೋಜನವನ್ನು ಪ್ರಮಾಣಿಸಿಕೊಡಿರಿ. ಇಲ್ಲಿ ಬೆಳೆಯ-ಲಾಗುವ ಬೀಟ್‌ಗಡ್ಡೆಗಳಲ್ಲಿ ಸಕ್ಕರೆಯ ಪ್ರಮಾಣವನ್ನು ಹೆಚ್ಚಿಸುವ ವಿಧಾನವನ್ನು ಸೂಚಿಸಿರಿ. ಹಾಗೆಯೆ ಅವುಗಳಿಂದ ಮದ್ಯಾರ್ಕವು (Alcohol) ಹೆಚ್ಚುಹೆಚ್ಚು ಬರುವಂತೆ ಮಾಡಿತೋರಿಸಿರಿ. ಇವು-ಗಳನ್ನು ನೀವು ಸಾಧಿಸಿದಲ್ಲಿ, ನಿಮಗೆ ಬೇಕಾಗುವ ಸಕಲ ವಿಧದ ಸಹಾಯವನ್ನೂ ಒದಗಿಸುವ ಹೊಣೆ ನಮ್ಮ ಮೇಲೆ!" ಇದೇ ತೆರನ ಆವ್ಹಾನವು ನ್ಯೂಟನ್ ಅಥವಾ ಫ್ಯಾರಡೇನ ಕಾಲದಲ್ಲಿ ಬಂದಿದ್ದರೆ! ಪಾಶ್ಚರ್ ಈ ಸವಾಲಿನಿಂದಾಗಿ ಒಂದಿನಿತೂ ಧೃತಿಗೆಡಲಿಲ್ಲ. ಇಷ್ಟೇ ಅಲ್ಲ; ಹೆಚ್ಚು ಕಾರ್ಯಪ್ರವೃತ್ತನಾಗಿ ಯಶಸ್ವಿಯಾದ. ಮದ್ಯಾರ್ಕ ನಿರ್ಮಿತಿಯಲ್ಲಿ ಆಗಾಗ ಒದಗುವ ತೊಂದರೆಗಳಿಗೆ Yeast ಸೂಕ್ಷ್ಮಜೀವಿಗಳೇ ಕಾರಣವೆಂದೂ, ಅವುಗಳ ನಿರ್ಮೂಲನವಾದಲ್ಲಿ ಪ್ರಮಾಣ ಹೆಚ್ಚುವುದೆಂದೂ ಸಪ್ರಯೋಗ ಸಿದ್ಧಪಡಿಸಿದನು. ಈ ಪ್ರಯೋಗವು ಫಲಿಸಲು ಪಾಶ್ಚರ್ ಬಹಳ ಪ್ರಯತ್ನಿಸಬೇಕಾಯಿತು. ಅದೆಷ್ಟೋ ಗಂಟೆಗಳನ್ನು ಆತ ನಿಮಿಷಗಳಂತೆ ಗಣಿಸಿದ ಈ ಪ್ರಯೋಗಗಳನ್ನು ಕೈಕೊಂಡಾಗ, ಆತನಿಗೆ ಸಹಾಯಕರಾರೂ ಇದ್ದಿಲ್ಲ. ತನಗೆ ಬೇಕಾಗುವ ಸಲಕರಣೆಗಳನ್ನು ತಾನೇ ಒದಗಿಸಿಕೊಂಡು, ತಾನೇ ಅವುಗಳನ್ನು ಸ್ವಚ್ಛ ಮಾಡುತ್ತಿದ್ದ. ಇದರೊಂದಿಗೆ ವರ್ಗಗಳ ಅಭ್ಯಾಸದ ತಯಾರಿಯನ್ನೂ ಮಾಡಬೇಕು. ಈ ಎಲ್ಲ ಕಾರ್ಯಗಳಲ್ಲಿ ಆತನ ಏಕಮಾತ್ರ ಸಹಾಯಕಳೆಂದರೆ, ತಾಳ್ಮೆಯೇ ಮೈವೆತ್ತಂತಿರುವ ಆತನ ಹೆಂಡತಿ. ಆಕೆಯೆ ಆತನ ಕಾರ್ಯದರ್ಶಿನಿಯಾದಳು. ಪಾಶ್ಚರನ ಪ್ರಯೋಗಗಳ ವಿವರವನ್ನು ಬರೆದುಕೊಳ್ಳುವ ಮತ್ತು ಪ್ರತಿಮಾಡಿಕೊಳ್ಳುವ ಬೇಸರದ ಕೆಲಸವನ್ನು, ನಗೆಮುಖದಿಂದಲೇ ಅವಳು ಮಾಡುತ್ತಿದ್ದಳು. ಲಿಲ್ಲಿಯಲ್ಲಿಯ ಪಾಶ್ಚರನ ಪ್ರಯೋಗ-ಗಳಿಂದಾಗಿ ಆತನಿಗೆ ಪ್ಯಾರಿಸಿನಲ್ಲಿಯ ನಾರ್ಮಲ್ ಸ್ಕೂಲಿನಲ್ಲಿ ಡಿರೆಕ್ಟರ್ ಹುದ್ದೆಯು ಲಭಿಸಿತು.

ಈ ನಾರ್ಮಲ್ ಸ್ಕೂಲಿನಲ್ಲಿಯೇ ಅಲ್ಲವೇ, ಡ್ಯೂಮಾಸನ ಭಾಷಣದಿಂದ ಪ್ರಭಾವಿತನಾಗಿ, ಪಾಶ್ಚರ್ ತಾನೂ ಹಿರಿಯ ವಿಜ್ಞಾನಿಯಾಗಬೇಕೆಂಬ ಹೊಂಗನಸನ್ನು ಕಂಡದ್ದು! ಇಲ್ಲಿ ಪಾಶ್ಚರ್ ಡಿರೆಕ್ಟರನಾಗಿ ಬಂದಾಗ, ಕಾಲೇಜಿನಲ್ಲಿಯ ಪರಿಸ್ಥಿತಿ ತೀರ ಚಿಂತಾಜನಕವಿತ್ತು. ವಿದ್ಯಾರ್ಥಿಗಳಿಗಾಗಿಯೆ ಸುಸಜ್ಜಿತ ಪ್ರಯೋಗ ಶಾಲೆಗಳಿರಲಿಲ್ಲವೆಂದ

ಮೇಲೆ, ಅಧ್ಯಾಪಕರಿಗೆಂದು ಎಲ್ಲಿಯ ಪ್ರತ್ಯೇಕ ಪ್ರಯೋಗಶಾಲೆಗಳು? ಈ ಸಂಸ್ಥೆಯ ವೈಶಿಷ್ಟ್ಯವೆಂದರೆ, ವೈಜ್ಞಾನಿಕ ಸಲಕರಣೆಗಳನ್ನು ತೆಗೆದುಕೊಳ್ಳಲು ಸಾಕಷ್ಟು ಹಣ ಸರಕಾರಕ್ಕಿರಲಿಲ್ಲವಂತೆ. ಪಾಶ್ಚರ್ ಮಹಾ-ಸಾಹಸಿ. ಅದೆಲ್ಲಿಂದಲೊ ಹಣ ದೊರಕಿಸಿ, ಈ ಸಂಸ್ಥೆಯಲ್ಲಿಯದೇ ಒಂದು ಚಿಕ್ಕ ಕೋಣೆಯನ್ನು ತನ್ನ ಪ್ರಯೋಗಶಾಲೆಯನ್ನಾಗಿ ಮಾರ್ಪಡಿಸಿದನು. ದೊರೆತ ಹಣದಿಂದ ಸಾಕಷ್ಟು ಸಲಕರಣೆಗಳನ್ನು ಕೊಂಡುಕೊಂಡನು. ಲಿಲ್ಲಿಯಲ್ಲಿದ್ದಾಗ ಸಕ್ಕರೆಯಿಂದ ಮದ್ಯವಾಗಲು ಯೀಸ್ಟ್‌ಗಳೇ ಕಾರಣವೆಂದು ಮನಗಂಡಿದ್ದನೇನೋ ಸರಿ; ಆದರೂ ಅದನ್ನು ಸಪ್ರಯೋಗವಾಗಿ ಸಿದ್ಧಪಡಿಸಬೇಕಾಗಿತ್ತು. ಯೀಸ್ಟಿನಿಂದಲೇ ಈ ಬಗೆಯ ರಾಸಾಯನಿಕ ಕ್ರಿಯೆಯಾಗುವುದೆಂಬ ಪಾಶ್ಚರನ ಸಿದ್ಧಾಂತವನ್ನು, ಅಂದಿನ ಪ್ರಸಿದ್ಧ ವಿಜ್ಞಾನಿ **ಲಾಯಬಿಗ್** ವಿರೋಧಿಸಿದ್ದುದರಿಂದ, ಪಾಶ್ಚರನ ಸಹನೆ ತಪ್ಪಿ, ಆತನ ಮೇಲೆ ಕೋಪದ ಕಿಡಿ ಕಾರಿ, ಲಾಯಬಿಗ್‌ನನ್ನು ಹಣ್ಣುಮಾಡುವ ಪ್ರತಿಜ್ಞೆಯನ್ನು ಗೈದು, ಕಾರ್ಯಪ್ರವೃತ್ತನಾದನು. ತನ್ನ ಸಿದ್ಧಾಂತವನ್ನು ಸಿದ್ಧಿಗೊಯ್ಯುವ ಸಾಹಸದಲ್ಲಿ, ಪಾಶ್ಚರನಿಗೆ ಊಟದ ಪರಿವೆಯೂ ಇರುತ್ತಿದ್ದಿಲ್ಲ. ನಿದ್ದೆ ಕಂಡದ್ದೇ ಅಪೂರ್ವ! ಅಂತೂ ಕೊನೆಗೆ, ಸಪ್ರಯೋಗವಾಗಿ ಪಾಶ್ಚರನ ಸಿದ್ಧಾಂತ ಸಿದ್ಧಿ ಹೊಂದಿದಂತಾಯಿತು. ಈ ಬಗೆಯ ಪ್ರಯೋಗಗಳಿಂದಾಗಿ, ಅವನು ಹಿರಿಯ ವಿಜ್ಞಾನಿಗಳ ಮನ್ನಣೆಗೆ ಪಾತ್ರನಾದನು.

ಪಾಶ್ಚರನ ವೈಶಿಷ್ಟ್ಯವು, ತನ್ನ ಪ್ರಯೋಗಗಳ ಪರಿಣಾಮವನ್ನು ನಿರೂಪಿಸುವ ಕ್ರಮದಲ್ಲಿತ್ತು. ಈ ಬಗೆಯ ನಿರೂಪಣೆಯಿಂದಾಗಿಯೇ ಆತ ಬಹು ಬೇಗನೆ ಪ್ರಸಿದ್ಧಿಗೆ ಬಂದನು. ಪಾಶ್ಚರನಲ್ಲಿ ಅಹಂಕಾರ ತಾನೇ ತಾನಾಗಿತ್ತು. ಆತನ ಭಾಷಣಗಳಲ್ಲೂ ಲೇಖನಗಳಲ್ಲೂ ಇದು ಎದ್ದು ಕಾಣುತ್ತಿತ್ತು. ಈ ಅಹಂಕಾರವೇ ಆತನಿಗೆ ಶತ್ರುಗಳನ್ನು ನಿರ್ಮಿಸಿತು. ಪಾಶ್ಚರನ ವಾದದ ಸಬಲತೆಗೆ ಆತನ ಪ್ರಯೋಗ-ಗಳೊಂದೇ ಮೂಲಾಧಾರವಾಗಿರದೆ, ಎದುರಾಳಿಗಳ ಅಸಮರ್ಥತೆ ಅಥವಾ ಅಸಹಾಯಕತೆಗಳೂ ನೆರವು ಕೊಡುತ್ತಿದ್ದುವು.

ಈಗ ಪಾಶ್ಚರ್ ತನ್ನ ಲಕ್ಷ್ಯವನ್ನು ರೋಗಾಣುಜೀವಿಗಳತ್ತ ವೇಧಿಸಿದನು. ವಾತಾವರಣದಲ್ಲಿ ಅಣುಜೀವಿಗಳಿರುವುವೆಂದು ಪ್ರಯೋ-ಗಗಳಿಂದ ತೋರಿಸಿದನಲ್ಲದೆ, ಕಾಸುವುದರಿಂದ ಅಣುಜೀವಿಗಳು ನಾಶವಾಗುವುವೆಂದೂ ಕಂಡುಹಿಡಿದನು. ಆತನ ಎದುರಾಳಿಗಳಿಗೆ ಇದು ಸಮ್ಮತವಾದರೂ, ಅಣುಜೀವಿಗಳ ಉಗಮದ ಬಗೆಗೆ ಅವರು ಸಾಶಂಕರಾದರು. 'ಅಣುಜೀವಿಗಳ ಉಗಮ ಧೂಳಿಯ ಕಣಗಳಿಂದ' ಎಂದು ಸಿದ್ಧಪಡಿಸಲು, ಪಾಶ್ಚರ್ ಬಹುದಿನ ಪರಿಶ್ರಮ ಪಡಬೇಕಾಯಿತು.

ಪಾಶ್ಚರನ ಪ್ರಸಿದ್ಧಿಯು ನೆಪೋಲಿಯನ್ III ಚಕ್ರವರ್ತಿಗೆ ತಲುಪಿ, ಅವನಿಗೆ ರಾಜಮರ್ಯಾದೆ ಲಭಿಸಿತು. ಬೇನೆಗಳಿಗೆ ಸೂಕ್ಷ್ಮಜೀವಿಗಳೇ ಕಾರಣವೆಂದೂ, ಅವು ಎಲ್ಲೆಡೆಯೂ ಇರುವುವೆಂದೂ ಪಾಶ್ಚರ್ ವಾದಿಸಿದನು. ಈ ವಾದವನ್ನು ಸಾಮಾನ್ಯ ಜನತೆಗೆ ಬಹು ಸುಲಭವಾಗಿ ಅರುಹಿದನು. ಅದು ನಡೆದುದು ಹೀಗೆ:—

ಒಂದು ದಿನ ಒಂದು ಸಭೆಯಲ್ಲಿ, ಸೂಕ್ಷ್ಮಜೀವಿಗಳನ್ನು ಕುರಿತು ಮಾತನಾಡುತ್ತ, ಮಾಯಾದೀಪದ ಸಹಾಯದಿಂದ ಧೂಳಿಯ ಕಣ-ಸಾಗರವನ್ನೆತ್ತಿ ತೋರಿಸಿ, ಈ ಕಣಗಳಲ್ಲಿಯೇ ರೋಗಾಣುಜೀವಿಗಳಿರುವುವೆಂದು ಸಾರಿ, ಸೇರಿದ ಜನತೆಯನ್ನು ದಿಗ್ಭ್ರಮೆಗೊಳಿಸಿದನು. ಅಂದಿನಿಂದ ಚಕ್ರವರ್ತಿಯಿಂದ, ಸಾಮಾನ್ಯಜನತೆಯ ವರೆಗೆ ಎಲ್ಲರೂ ಪಾಶ್ಚರನ ಪ್ರಯೋಗಗಳನ್ನು ಕುತೂಹಲದಿಂದ ನಿರೀಕ್ಷಿಸಲಾರಂಭಿದರು. ರೋಗಾಣುಜೀವಿಗಳನ್ನು ಕುರಿತು ಪಾಶ್ಚರನು ಉದ್ಬೋಧಕ ಭಾಷಣಗಳನ್ನು ಮಾಡಿದನು. ಹಾಗೆ ನೋಡಿದರೆ, ಅಣುಜೀವಿಗಳಿಂದಲೇ ಬೇನೆಗಳುಂಟಾಗುತ್ತವೆಂಬುದು ಆಗಿನ್ನೂ ತಿಳಿಯದ ವಿಷಯ. ಪಾಶ್ಚರನ ಕೀರ್ತಿಲತೆ ಇಂತು ಹಬ್ಬುತ್ತಿರುವುದನ್ನು ಗಮನಿಸಿ, ಫ್ರೆಂಚ್ ಜನತೆಗೆ ದೇಶಾದ್ಯಂತ ಪ್ರಯೋಗಶಾಲೆಗಳನ್ನು ತೆರೆಯಲು ಅವನು ಮನವೊಲಿಸಿದನು.

೧೮೬೫ರಲ್ಲಿ ಪಾಶ್ಚರನ ದೈವ ತೆರೆಯಿತೆನ್ನಬಹುದು. ಏಕೆಂದರೆ ಕುಪ್ಪಳಿಸುತ್ತಿದ್ದ ರೇಶಿಮೆಯ ಉದ್ಯಮಕ್ಕೆ ನವಜೀವವನ್ನೀಯುವ ಸೌಭಾಗ್ಯ ಪಾಶ್ಚರನ ಪಾಲಿಗೆ ಬಂದಿತು. ಆಗ ರೇಶಿಮೆಯ ಉದ್ಯಮವು, ರೇಶಿಮೆಯನ್ನುಂಟುಮಾಡುವ ಹುಳುಗಳಿಗುಂಟಾದ ಮಹಾ ಬೇನೆಯಿಂದಾಗಿ, ಕುಪ್ಪಳಿಸಿ ಹೋಗುತ್ತಿರುವುದನ್ನು ಕಣ್ಣಾರೆ ಕಂಡು ಮನಸ್ಸು ಕರಗಿದ ಡ್ಯೂಮಾಸನು— ಪಾಶ್ಚರನ ಗುರು—ಅದರ ನಿವಾರ-ಣೆಯ ಕುರಿತು ಅಭ್ಯಾಸ ಕೈಕೊಳ್ಳಲು ಹೇಳಿದನು. ಆತನ ಹೇಳಿಕೆಯಲ್ಲಿ ದೈನ್ಯತೆಯು ವ್ಯಕ್ತವಾಗುತ್ತಿತ್ತು: 'ಪಾಶ್ಚರ್, ದಕ್ಷಿಣ ಫ್ರಾನ್ಸ್ ನನ್ನ ನಾಡು. ನಾನು ಈಗ ತಾನೇ ಅಲ್ಲಿ ಸಂಚರಿಸಿ ಬಂದಿದ್ದೇನೆ. ಅಲ್ಲಿ ರೇಶಿಮೆಯ ಹುಳುಗಳ ಬೇನೆಯಿಂದಾದ ಹಾನಿಯನ್ನು ಹೇಳಲಾಸಲ್ಲ. ಒಂದಾನೊಂದು ಕಾಲದಲ್ಲಿ ಸಿರಿಯಿಂದ ತುಂಬಿತುಳುಕುತ್ತಿದ್ದ ಆ ನಾಡು, ಇಂದು ಅನನ್ಯಗತಿಕವಾಗಿದೆ. 'ಮುಲಬೆರಿ' ಗಿಡಗಳಿಂದ ಶೋಭಿಸುತ್ತಿದ್ದ ನಾಡು ಹಾಳುಸುರಿಯುತ್ತಿದೆ. ಇದನ್ನೆಲ್ಲ ಕಣ್ಣಾರೆ ಕಂಡ ನನ್ನನ್ನು ನಿದ್ದೆ ಬಳಿಸಾರದಾಗಿದೆ.' ಇಂತಹ ಹೃದಯವಿದ್ರಾವಕ ವಸ್ತುಸ್ಥಿತಿಯ ವಿವರಣೆ ಕೊಡುವಾಗ, ಡ್ಯೂಮಾಸನ ಕಣ್ಣಲ್ಲಿ ನೀರು ನಿಂತಿತ್ತು. ಪಾಶ್ಚರನಿಗೂ ಕರುಣೆಯುಂಟಾಯಿತು. ಆದರೆ ಪಾಶ್ಚರ್ ಈ ಮಹಾ ಸಾಹಸವನ್ನು ಕೈಕೊಳ್ಳಲು ಆತುರನಾಗಲಿಲ್ಲ. ಏಕೆಂದರೆ—"ರೇಶಿಮೆ ಹುಳುಗಳಿಗೇನಾಗಿದೆ? ಈ ಹುಳುಗಳಿಗೆ ಬೇನೆಯುಂಟಾಗತ್ತದೆಂಬುದನ್ನೂ ನಾನರಿಯೆ. ಹಾಗೆ ನೋಡಿದರೆ ಇದುವರೆಗೆ ನಾನು ರೇಶಿಮೆಯ ಹುಳುವನ್ನೇ ನೋಡಿದವನಲ್ಲ." ಎಂದು ಜಾರಿಕೊಳ್ಳಬಯಸಿದನು. ಹೀಗೆ ಮಾಡುವುದರಲ್ಲಿ ಒಂದು ಗತ್ತುಗಾರಿಕೆಯಿತ್ತು. ಅದೆಂದರೆ: ದುರ್ದೈವದಿಂದ ಇದರಲ್ಲಿ ತನಗೆ ಯಶಸ್ಸು ಲಭಿಸಲಾರದೆಂಬ ಭೀತಿ ಪಾಶ್ಚರನಲ್ಲಿ ಅಂತರ್ಭೂತವಾಗಿತ್ತು. ಆದರೆ ಡ್ಯೂಮಾಸನ ಮಾತಿಗೆ ಒಪ್ಪಲೇಬೇಕಾಯಿತು. "ಸರಿ. ನಿಮ್ಮ ಆಜ್ಞೆಯಂತೆ ಕಾರ್ಯಪ್ರವೃತ್ತನಾಗುವೆನು." ಎಂದು ಕಾರ್ಯಕ್ಷಮಿಯಾದ ಪಾಶ್ಚರ್. ತನ್ನ ಮೂವರು ಅನುಯಾಯಿಗಳೊಂದಿಗೆ ಸಾಧನ ಸಾಮಗ್ರಿಗಳನ್ನು ಹೊತ್ತುಕೊಂಡು, ಸಪತ್ನಿಕನಾಗಿ ದಕ್ಷಿಣಫ್ರಾನ್ಸ್ (Alais)ಗೆ ಪ್ರಯಾಣ ಬೆಳಸಿದನು. ಈ ಮೊದಲು ಪಾಶ್ಚರನಿಗೆ ರೇಶಿಮೆಯ ಹುಳುಗಳ ಬಗ್ಗೆ ಏನೂ ಗೊತ್ತಿರಲಿಲ್ಲ. ಕಣ್ಣುಕಟ್ಟಿ ಜನನಿಬಿಡವಾದ, ಸವಾರಿ ವಾಹನಗಳಿಂದ ಗಜಬಜಿಸುವ ಸ್ಥಳದಲ್ಲಿ ಬಿಟ್ಟಂತಾಯಿತು. ಪಾಶ್ಚರ್-

ಅಲ್ಲಿಯ ಜನರಿಂದಲೇ ಹುಳುಗಳ ಬಗೆಗೆ ಮತ್ತು ರೇಶಿಮೆ ತಯಾರಿಸುವ ವಿಧಾನದ ಬಗೆಗೆ ತಿಳಿದುಕೊಳ್ಳುತ್ತಿರುವುದನ್ನು ಗಮನಿಸಿದ ಆ ಜನರಲ್ಲಿ, ಪಾಶ್ಚರನ ಬಗೆಗೂ ಮತ್ತು ಆತನ ಪ್ರಯೋಗಗಳ ಬಗೆಗೂ ಸಂಶಯವುಂಟಾಗಲು ಆಸ್ಪದವಾಯಿತು. ಅಂಜಿದವರ ಮೇಲೆ ಕಪ್ಪೆಯೊಗೆವಂತೆ, ಪ್ರಯೋಗಗಳ ಸಫಲತೆಯ ಬಗೆಗೆ ಸಾಶಂಕನಾಗಿದ್ದ ಪಾಶ್ಚರನಿಗೆ, ಮೊದಲು ಅಪಯಶಸ್ಸು-ಅವಮಾನಗಳನ್ನು ಹೊಂದಬೇಕಾಯಿತು. ಈ ಬಗೆಯ ವಿಫಲತೆಯಿಂದಾಗಿ, ಕೈಕೊಂಡ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಬೇಕೆನ್ನುವ ವರೆಗೆ ಆತ ಧೃತಿಗುಂದಿದ. ಆದರೆ ಸಹೋದ್ಯೋಗಿಗಳೂ, ಶಿಷ್ಯೋತ್ತಮರೂ ಆತನ ಮನವೊಲಿಸಿದರು; ಧೈರ್ಯತುಂಬಿದರು. ೬ ವರ್ಷಗಳ ಸತತವಾದ ಸಂಯುಕ್ತ ಪರಿಶ್ರಮದ ಪರಿಣಾಮವಾಗಿ, ಪಾಶ್ಚರನ ಪ್ರಯೋಗಗಳಿಗೆ ಯಶಸ್ಸು ಲಭಿಸಿತು. ರೇಶಿಮೆಯ ಉದ್ಯಮವನ್ನು ಮೊದಲಿನಂತೆ ಯಶಸ್ವಿಯಾಗಿ ನಡೆಸಿಕೊಂಡು ಹೋಗುವ ಕ್ರಮವನ್ನು ಕಂಡುಹಿಡಿದರು. ಇದರಿಂದಾಗಿ ಕುಪ್ಪಳಿಸುತ್ತಿದ್ದ ರೇಶಿಮೆಯ ಉದ್ಯಮ ಚೇತರಿಸಲು ಅನುಕೂಲವಾಯಿತು. ಇಂತು ನಿರಲಸ ಅಭ್ಯಾಸದಿಂದಾಗಿ ಪಾಶ್ಚರ್ ಬೇನೆ ಬೀಳಬೇಕಾಯಿತು. ಹಾಗೆ ನೋಡಿದರೆ, ಪಾಶ್ಚರ್ ಈಗಿನ ಬೇನೆಯಿಂದ ಬದುಕಿದ್ದೇ ದೈವಯೋಗವೆನ್ನಲಡ್ಡಿಯಿಲ್ಲ. ಪಾಶ್ಚರನು ಯಶಸ್ವಿಯಾದುದಕ್ಕೂ ರೇಶಿಮೆಯ ಉದ್ಯಮಕ್ಕೆ ಜೀವಕಳೆಯನ್ನಿತ್ತುದಕ್ಕೂ ಡ್ಯೂಮಾಸ್ ಅವನನ್ನು ಹಾಡಿ ಹರಸಿದನು. ಪಾಶ್ಚರನ ಈ ಪ್ರಯೋಗಗಳಿಗೆ ಮನ್ನಣೆ ದೊರೆಯಿತೆಂದು ಅಲಾಯದ ನಗರ ಪಿತಾಮಹರು, ಆತನ ಸ್ವರ್ಣಪುತ್ಥಳಿಯನ್ನು ಪ್ರತಿಷ್ಠಾಪಿಸಬಯಸಿದರು.

ಅನಂತರ ಪಾಶ್ಚರ್, ಮಾನವತೆಯ ದುಃಖಗಳನ್ನು ಪರಿಹರಿಸುವ ಮಾರ್ಗಗಳನ್ನು ಕಂಡುಹಿಡಿಯಬಯಸಿದ. ಮೊತ್ತಮೊದಲು ಆತನ ದೃಷ್ಟಿಗೆ ಬಿದ್ದವರೆಂದರೆ ಗರ್ಭಿಣಿಯರು. ಆಗ ಹೆರಿಗೆಯ ಆಸ್ಪತ್ರೆಯಿಂದ, ಸುಖಪ್ರಸೂತರಾಗಿ ಮನೆಗೆ ಮರಳಿದ ಹೆಂಗಳೆಯರೇ ಕಡಿಮೆ. ಹೆರಿಗೆಗಾಗಿ ಬಂದ ೧೯ ಜನ ಹೆಂಗಸರಲ್ಲಿ, ಕನಿಷ್ಠ ಪಕ್ಷ ಒಬ್ಬಳಂತೂ ಮಗುವನ್ನು ಅನಾಥಳನ್ನಾಗಿ ಮಾಡುತ್ತಿದ್ದಳು. ಹೀಗಾಗಿ ಹೆರಿಗೆಯ ಆಸ್ಪತ್ರೆಯೆಂದರೆ ಅದೊಂದು ಕಾಲನ ಕಾರ್ಯಾಲಯ ಎಂಬ ಭೀತಿ ಜನರಲ್ಲಿ ತಲೆದೋರಿತ್ತು. ಎಷ್ಟೋ ಜನರು ಮಕ್ಕಳೇ ಆಗದಿರಲೆಂದು ದೇವರನ್ನು ಪ್ರಾರ್ಥಿಸುತ್ತಿದ್ದರಂತೆ. ಪಾಪ, ಡಾಕ್ಟರರೂ ಈ ವಿಷಯದಲ್ಲಿ ನಿಃಸಹಾಯಕರಾಗಿದ್ದರು.

ಒಂದು ದಿನ ಪ್ಯಾರಿಸಿನ ವೈದ್ಯಕೀಯ ಸಂಸ್ಥೆಯ ಆಶ್ರಯದಲ್ಲಿ ಒಬ್ಬ ಡಾಕ್ಟರರು, ಹೆರಿಗೆಯಿಂದ ಸಾಯುವ ಹೆಣ್ಣುಮಕ್ಕಳನ್ನು ಕುರಿತು ಉದ್ದುದ್ದ ಭಾಷಣ ಮಾಡುತ್ತಿರುವಾಗ—ಈ ಬಗೆಯ ಸಾವಿನ ಕಾರಣ ಅವರಿಗೆ ಗೊತ್ತಿರಲಿಲ್ಲವಂತೆ— ಪ್ರೇಕ್ಷಕರಲ್ಲೊಬ್ಬನು, ಈ ಉದ್ದಾಮ ಪಂಡಿತರನ್ನು ಸ್ತಬ್ಧಗೊಳಿಸಿದನು— "ಮಹಾಶಯರೆ, ಹೆಣ್ಣುಮಕ್ಕಳಲ್ಲಿ ಹೆರಿಗೆಯ ಕಾಲಕ್ಕೆ ಉಂಟಾಗುವ ಬೇನೆಗೆ ಕಾರಣರು ಮತ್ತಾರೂ ಅಲ್ಲ; ನೀವೇ ಡಾಕ್ಟರರು! ಪೀಡಿತ ಹೆಂಗುಸಿನಿಂದ ನೀವೇ ಹಬ್ಬಿಸುತ್ತೀರಿ" ಎಂದು ಗಡುಸುಧ್ವನಿಯಲ್ಲಿ, ಅಧಿಕಾರವಾಣಿಯಲ್ಲಿ ಉಚ್ಚರಿಸಿದನಾ ಪ್ರೇಕ್ಷಕ. ಪ್ರೇಕ್ಷಕನ ಎದೆಗಾರಿಕೆಯನ್ನು ತುಂಬಿದ ಸಭೆ ಮೆಚ್ಚಿ ತಲೆದೂಗಿತು. ವಕ್ತಾರನಿಗೂ ಇದು ಸಮ್ಮತವೆನಿಸಿದಂತೆ ಕಾಣಬರುತ್ತದೆ. ಎಂತಲೇ ಆತ 'ಸಂಭವವಿದೆ!' ಎಂದು ತಿದ್ದುಪಡಿಯನ್ನು ಮಾತ್ರ ಒಪ್ಪಿ ಸುಮ್ಮನಾಗದೆ, ತನ್ನ ಪಾಂಡಿತ್ಯಪ್ರದರ್ಶನವನ್ನು ಮಾಡ ಬಯಸಿದ. 'ಆ ಅಣುಜೀವಿಯನ್ನು ನೀವು ಕಾಣಿರಿ' ಎಂದವನೇ ಭಾಷಣ ಪ್ರಾರಂಭಿಸಲು ಪ್ರಯತ್ನಿಸಿದ. ಆದರೆ ಪ್ರೇಕ್ಷಕ ಅದಕ್ಕೂ ವಿರೋಧಿಸಿದ. ಅರ್ಧಾಂಗದ ಆಘಾತಕ್ಕೊಳಪಟ್ಟ ಎಡಗಾಲನ್ನು ಎಳೆದು, ಆವೇಶದಿಂದ ವೇದಿಕೆಯನ್ನೇರಿ ವಕ್ತಾರನನ್ನೇ ಜರಿದನು. 'ಮಹಾಶಯರೆ, ನಾನು ಆ ಅಣುಜೀವಿಯನ್ನು ಕಾಣೆನೆ? ಹೂಂ! ಹುಚ್ಚರಿರುವಿರಿ ನೀವು! ನಾನು ಅದನ್ನು ಎಂದೋ ಕಂಡಿದ್ದೇನೆ. ಅದು ಹೀಗಿದೆ!' ಎಂದವನೇ ಅಣುಜೀವಿಯ ಚಿತ್ರವನ್ನು ಫಲಕದ ಮೇಲೆ ತೆಗೆದನು. ಈಗ ಆ ಸುಪ್ರಸಿದ್ಧ ಪಂಡಿತನು ನಿರುತ್ತರನಾಗಬೇಕಾಯಿತು. ಸಭೆ ಅಲ್ಲೋಲ-ಕಲ್ಲೋಲವಾಗಿ ಮುಕ್ತಾಯವಾಗುವುದು ಅನಿವಾರ್ಯವಾಯಿತು. ಈ ಬಗೆಯ ಧೈರ್ಯವನ್ನು ತೋರಿಸಿದವರು ಯಾರಿರಬಹುದು? ಈ ಬಗೆಯ ಅಹಂಕಾರವಾಣಿ ಯಾರದಿರಬಹುದು? ಪಾಶ್ಚರನಲ್ಲವೇ ಆತ? ಸರಿ. ಪಾಶ್ಚರನೇ ಅವನು! ಈಗ ಅವನಿಗೆ ೫೦ ವರುಷಗಳಾಗಿದ್ದುವು. ವಯಸ್ಸು ಐವತ್ತಾಗಿದ್ದರೂ, ಉತ್ಸಾಹ ತರುಣನದಿತ್ತು. ವಿಶೇಷವೆಂದರೆ, ಸುಪ್ರಸಿದ್ಧ ಡಾಕ್ಟರರನ್ನೆ ಮುರಿಸಿದಾಗ, ಪಾಶ್ಚರನಿಗೆ ವೈದ್ಯಶಾಸ್ತ್ರದ ಗಂಧ ಕೂಡ ಇರಲಿಲ್ಲ. ಆಸ್ಪತ್ರೆಯ ವಿವಿಧವಾಸನೆಗಳು ಆತನಿಗೆ ಸಹನವಾಗುತ್ತಿರಲಿಲ್ಲ. ಅನಂತರ ವೈದ್ಯಶಾಸ್ತ್ರವನ್ನು ಮೂವರು ತರುಣ ಡಾಕ್ಟರರಾದ ಜಾಬರ್ಟ್, ಕಾಕ್ಸ್ ಮತ್ತು ಚೇಂಬರ್‌ಲೆಂಡ್ ಇವರಿಂದ ಕಲಿತನು. ಇವರೇ ಮುಂದೆ ಪಾಶ್ಚರನಿಗೆ ಶಿಷ್ಯರಾದರು.

(೧೭೮ನೆಯ ಪುಟದಿಂದ)

ಬಂದಿರಿ?........" ಎಂದು ರಾಯರು ಹರ್ಷದಿಂದ ಕೇಳಿದರು.

"ನಿನ್ನೆಯೆ ಬಂದಿದ್ದೇನೆ. ಈಗೆಲ್ಲ ಚೆನ್ನಾಗಿದೆಯೆ?" ಎಂದೆ ನಾನು.

"ನೋಡಿರಿ, ರಾಮು ಈಗ ಎಲ್ಲ ಸರಿಯಾಗಿ ನೋಡಿಕೊಳ್ಳುತ್ತಾನೆ. ನನಗಾವ ಚಿಂತೆಯೂ ಇಲ್ಲ. ಇದೆಲ್ಲ ನಿಮ್ಮ ಪುಣ್ಯ......." ಎಂದರು.

"ಸರ್. ಇಂದು ನೀವು ನಮ್ಮ ಮನೆಗೆ ಬರಬೇಕು. ಅವ ನಿಮ್ಮನ್ನು ಯಾವಾಗಲೂ ನೆನೆಯುತ್ತಿರುತ್ತಾಳೆ...." ರಾಮು ನುಡಿ ನನಗೆ ಇಲ್ಲವೆನ್ನಲಿಕ್ಕಾಗಲಿಲ್ಲ. ಇಬ್ಬರ ಮುಖದ ಕಡೆಗೆ ದೃ ಹೊರಳಿಸಿದೆ. ಎಲ್ಲಿಲ್ಲದ ಕೃತಜ್ಞತೆ ಅವರ ಮುಖಗಳಲ್ಲಿ ಮ ನಿ ತ್ತು!

ಜಯಂ.

ನಿ ಸ ರ್ಗ ಸ್ವ ರ್ಗ

ಶ್ರೀ. ಅರವಿಂದ ನಾಡ್ಕರ್ಣಿ ಬಿ. ಎ., ಎಲ್‌ಎಲ್.ಬಿ. ಬಂಕೀಕೋಡ್ಲ

ಏನಿದೇನು ಸಹಸ್ರವರ್ಣ
ಲೀಲೆಯಲ್ಲಿ ಶಾಂತಿಪೂರ್ಣ
ಮೊಗವನೆತ್ತಿ
ಸೊಗವ ಬಿತ್ತಿ
ನಿಂತಿಹಳು ನಿಸರ್ಗದೇವಿ !
ತಿರೆಯ ಮೇಲೆ ಸ್ವರ್ಗ ಠೀವಿ !
ಇಂದ್ರವನದ ಹೂವುಬಳ್ಳಿ ಕಾವಣ—
ಇಂದ್ರಚಾಪ ತೋರಣ !
ಮಂದರಗಿರಿ ಕಂದರದಲಿ
ಯಕ್ಷಲೋಕ ಪರಿಸರದಲಿ
ಲಜ್ಜೆಗೊಂಡು ಹೆಜ್ಜೆಯಿಡುವ ಉಷಾಸುಂದರಿ !
ಅಗಲಿದಿನಿಯನರಸಲೆಂದು
ಕೋಟಿ ಪಂಜು ಬೆಳಗಿಬಂದು
ಕೇಶ ಕೆದರಿ ಅಲೆವ ಮೂಕ ನಿಶಾಸೋದರಿ !
ಮುಂಜಾವದ ನೀಲಮಲೆಯ ಚಿನ್ನದಂಚು
ಮೋಡದ ಹಿತ್ತಾಳೆ ತಾಮ್ರ ಸೀಸ ಕಂಚು.
ನವಿಲ ಗರಿ ಗಿಳಿಯ ಚುಂಚು
ಪಾರಿವಾಳ ಹವಳಗಣ್ಣು
ಗುಬ್ಬಿಕೂಟ ಸಾಲದೇನು ?
ತೆರೆತೆರೆನೊರೆಯಾಟದಲ್ಲಿ
ಅಹಾ ಹಂಸ-ಮಿಾಂಚುಳ್ಳಿ !
ರೆಂಬೆ ರೆಂಬೆ ತುಂಬಿ ತೂ-
ಗಾಡಿ ಕಂಪುಕರೆವ ಹೂ-
ಗೊಂಚಲು ಗೊಂಚಲುಗಳು !
ಚೆಂದಳಿರಿನ ತೊಂಗಲು.
ಪಾರಿಜಾತ ಸೇವಂತಿಗೆ
ಪಾಟಲ ಮಲ್ಲಿಗೆ ಸಂಪಿಗೆ
ಜಾಜಿ ಬಕುಲ ಕಮಲವೃಂದ
ಸಕಲವರ್ಣ ಸೊಬಗಿನಂದ !
ಅಲೆಯುತಿರುವ ಮತ್ತ ಭೃಂಗ
ರೇಶಿಮೆಮೈಗಳ ಪತಂಗ.
ಮುಕುರುತಿಹವು ರೆಂಬೆ ರೆಂಬೆ
ನೇರಿಲು ದಾಳಿಂಬ ನಿಂಬೆ
ದ್ರಾಕ್ಷೆ ಸೇಬು ಮತ್ತೆ ಲಕ್ಷ
ಅಲಂಕರಿಸುತಿಹವು ವೃಕ್ಷ !
ಸಂಜೆಯು ಆ ವರ್ಣ ಕಾಂತಿ
ಮರೆಯಾಗಲು ಮೌನಶಾಂತಿ
ಧರಿಸಿಬರುವ ಚಂದ್ರಿಕೆ
ಮೂಕನಾಟ್ಯ ಮೋದಕೆ
ತಿರೆಯ ಲಾಕ್ಷ ಸೌಧಕೆ !
ಕಡಲ ರಮ್ಯ ನೀಲದೇಶ
ಅಲೆಯುಲಿಗಳ ಬೆಳ್ಳಿಹಾಸ !
ಹೊಯ್ದಾಡುವ ಹಾಯಿದೋಣಿ
ನೀರ್ವಕ್ಕಿಗಳಂದ ಶ್ರೇಣಿ !
ಒಣರೇವೆಯು ರತ್ನವೇದಿಕೆ !
ಇಂದ್ರಲೋಕ ಬೇರೆ ಏತಕೆ !
ಹಸುರು ಹೊಲ
ಕುಸುರ ದಳ
ತಂಗಾಳಿಯ ಅಂಗಳ
ಜೀವದುಸಿರು ಮಂಗಲ !
ಬಣ್ಣಬಣ್ಣದಾ ನಿಸರ್ಗ
ಅಹಾ ಕಂಡೆ ನೆಲದ ಸ್ವರ್ಗ
ಶ್ರೀಕೃಷ್ಣ-ಗೋಪಿಕೆಯರ ವೃಂದಾವನ
ಅಮರಾವತಿಯಿಂದ್ರವನ !
ಓ ಅನಾದಿ ಓ ಅನಂತ
ಏನು ನಿನ್ನ ಕಾಂತಿಯಿದು ದಿಗಂತ !
ಅಹಾ ಬಗಲ ನೋಡಿ ಮುಗಿಲನರಿತೆ !
ಮುಗಿಲ ನೋಡಿ ಬಗಲ ಮರೆತೆ ಮರೆತೆ !
ನಿನ್ನದೊಂದು ಅಣುವಿನಂಶ
ಸೌಂದರ್ಯದ ಈ ವಿಲಾಸ !
ಪೂರ್ಣರೂಪವೇನು ? ಏನು ?
ಬಣ್ಣಿಸುವರು ಯಾರು ಏನು ?
ನಿಸರ್ಗಸ್ವರ್ಗ ನೋಡಿ ತಂದೆ
ಇಂದು ಮುಗ್ಧಜೀವಿಯಾದೆ
ಇದನು ಪೂರ್ಣ ಸವಿಯಲಿಕ್ಕೆ
ಬರೀ ಎರಡು ಕಣ್ಣು ಸಾಕೆ ?
ಹತ್ತುದಿನದ ಬಾಳು ಸಾಕೆ ?
ಕೋಟಿ ಕಣ್ಣು ಕೋಟಿ ವರುಷ
ನೀಡು ನೀಡು ಲೋಕದೀಶ.

ಕಾಣಿಸದೆ ನೋಡುವುದು

(ಒಂದು ಹರಟೆ)

ಶ್ರೀ. ಶಂಕರ ವಿನಾಯಕ ಜೋಶಿ, ಬಿ. ಎ. (ಆನರ್ಸ್), ಎಲ್‌ಎಲ್. ಬಿ. ಧಾರವಾಡ

ಇಂದು ಲೋಕದಲ್ಲಿ ಕಾಣಿಸಿಯೂ ನೋಡದವರು ಹೆಚ್ಚಾಗಿ ಇದ್ದಾರೆ. ಇವರಿಂದ ಲೋಕಕ್ಕೆ ಯಾವ ಉಪಯೋಗವೂ ಇಲ್ಲ; ಉಪಕಾರವೂ ಇಲ್ಲ. ಕಾಣಿಸದೆ ನೋಡುವವರ ಸಂಖ್ಯೆ ಹೆಚ್ಚಾದರೆ, ನಿಜವಾಗಿಯೂ ಲೋಕದಲ್ಲಿ ಸುಖ-ಶಾಂತಿಗಳು ಹೆಚ್ಚಾಗಬಹುದು!

◆

ಎಂತಹ ವಿಚಿತ್ರವಾದ ತಲೆಬರೆಹವಿದು? ಬರೆಹದ ತಲೆಯಿಲ್ಲದವನಿಗೇ ಒಪ್ಪುವಂತಹದಿದು. 'ಕಾಣಿಸದೆ' ನೋಡುವುದು ಸಾಧ್ಯವೇ? ಸ್ವಲ್ಪ ಸಮಾಧಾನ ತಾಳಿರಿ! ಕಾಣಿಸದೆ ನೋಡುವುದು ಸಾಧ್ಯವಿದೆಯಷ್ಟೇ ಅಲ್ಲ; ಕೆಲವು ಪ್ರಸಂಗಗಳಲ್ಲಿ ಅದು ಜಾಣತನವೂ ಆವಶ್ಯಕವೂ ಎಂದೆನಿಸಿಕೊಳ್ಳುವುದು. ಇನ್ನೊಂದು ದೃಷ್ಟಿಯಿಂದ ನೋಡಿದರೂ, ಕಾಣಿಸದೆ ನೋಡುವುದು ಅಶಕ್ಯವಾದ ಮಾತಲ್ಲ. ಕಣ್ಣಿದ್ದು ನೋಡದವರು ಈ ಪ್ರಪಂಚದಲ್ಲಿ ಅನೇಕರುಂಟು. ಹಾಗೆಯೆ ಕಣ್ಣಿಲ್ಲದೆ ನೋಡುವವರೂ ಏಕೆ ಇರಬಾರದು? ಇದು ಯಂತ್ರಯುಗ-ಶೋಧಗಳ ಯುಗ. ಮಸಿ ಬೇಕಾಗದ ಪೆನ್ನು, ಒಣಕಲು ಬರ್ಫು, ಸಪ್ಪಳವಿಲ್ಲದ ಟೈಪು ರಾಯಿಟರು, ವಾಸನೆಯಿಲ್ಲದ ಔಡಲೆಣ್ಣೆ— ಇವುಗಳನ್ನು ನೀವು ಕೇಳಿರಬಹುದು. ರೇಡಿಯೋದ ಸೃಷ್ಟಿಯಲ್ಲಿ 'ಮಾಯಿಕ್' ಎಂಬ ಯಂತ್ರದ ಮಾಯೆಯಿಂದ ಎಳ್ಳಷ್ಟೂ ಘನತೆ-(Volume)ಯಿಲ್ಲದ ಧ್ವನಿಯು 'ಘನತೆ'ಗೇರಿಸಲಾಗುವಂತೆ, ಧ್ವನಿಯೇ ಬೇಕಾಗದ ಗಾಯನವನ್ನು ಕೂಡ ಬೇಗನೆ ಶೋಧಿಸಲಾಗಬಹುದು. ಅದರಂತೆಯೆ ಕಣ್ಣಿಲ್ಲದೆ ನೋಡುವುದು ಕೂಡ ಅಸ್ತಿತ್ವದಲ್ಲಿ ಬರಬಹುದು. ಕಣ್ಣಿಲ್ಲದೆ ನೋಡುವ ಶೋಧವು ಹೊರಟ ಮೇಲೆ, ಕಣ್ಣಿದ್ದವರ ಮಹತ್ತ್ವವು ಜಗತ್ತಿನಲ್ಲಿ ಉಳಿಯಲಿಕ್ಕಿಲ್ಲ. ಅದೇನೇ ಇರಲಿ. ಕಣ್ಣಿಲ್ಲದೆ ನೋಡುವುದು ಒಂದು ವೇಳೆ ಸಾಧ್ಯವಾಗದಿದ್ದರೂ 'ಕಾಣಿಸದೆ' ನೋಡುವ ಕಲೆಯು ಮಾತ್ರ ಮೊದಲಿನಿಂದಲೂ ಜಾಣರಿಗೆ ಸಾಧ್ಯವಾದ ಮಾತಾಗಿದೆ. 'ಕಾಣಿಸದೆ' ನೋಡುವುದನ್ನು ಸಾಧಿಸಿಕೊಂಡವರೇ ಈ ಪ್ರಪಂಚದಲ್ಲಿ ಚತುರರೂ ಧೂರ್ತರೂ ಎಂದೆನಿಸಿಕೊಂಡಿದ್ದಾರೆ.

ನನ್ನೊಬ್ಬ ಸ್ನೇಹಿತರು ಬೇರೆಯವರ ಬಗೆಗೆ ತಪ್ಪು ತಿಳಿವಳಿಕೆಯನ್ನು ಮಾಡಿಕೊಳ್ಳುವುದರಲ್ಲಿ ಯಾವಾಗಲೂ ತತ್ಪರರು. ಅವರ ಜೀವನವೆಂದರೆ ತಪ್ಪುತಿಳಿವಳಿಕೆಗಳ ತವರುಮನೆ. ರಸ್ತೆಯಲ್ಲಿ ಅವರು ನನಗೆ ಎದುರಾಗಿ ಬರುತ್ತಿರುವಾಗ, ಅವರನ್ನು ಮಾತಾಡಿಸದೆ,

ಅಭಿವಂದಿಸದೆ, 'ಒಂದೇ ಬೆರಳಿನ' ನಮಸ್ಕಾರವನ್ನು ಕೂಡ ಮಾ
ನಾನು ಹಾಗೆಯೆ ಮುಂದೆ ಸಾಗುತ್ತೇನೆಂದು, ನನ್ನ ಮೇಲೆ ಅ
ಆರೋಪ. ಎಷ್ಟೋ ಸಲ ಅವರನ್ನು ಅಭಿವಂದಿಸದೆ ಹಾಗೆ
ಮುಂದೆ ಹೋಗಿಬಿಡುವ ತಪ್ಪು ನನ್ನ 'ಕೈಯಿಂದ' ಆಗಿದೆ. ಆ
ಆ ತಪ್ಪು ಪ್ರತಿಸಲಕ್ಕೂ ಆದ ಮೇಲೆಯೇ ನನಗೆ ಗೊತ್ತಾಗಿ
ನಾನಾದರೂ ಏನು ಮಾಡಬೇಕು— ಹೇಗೆ ಮಾಡಬೇಕು? ಅವರ
ನಾನು ಅಭಿವಂದಿಸಬೇಕಾದರೆ, ಅವರು ನನಗೆ 'ಕಾಣಿಸ'ಬೇಕಲ್ಲ
ಅವರ ಗುರುತು ಸಿಗುವುದೇ ಕಠಿಣ. ಒಂದು ದಿವಸ ನೆಹರು ಶ
ಇನ್ನೊಂದು ದಿವಸ ಶೆರವಾನಿ-ಸುರವಾರಿನ ರಾಷ್ಟ್ರೀಯವೇ
ಮತ್ತೊಂದು ದಿವಸ ಸಾಹೇಬರ ಸೂಟು— ಹೀಗೆ ದಿನಾಲು ಒಂ
ತೆರದ ವೇಷವನ್ನು ಹಾಕಿಕೊಂಡು, ಸಾಯಕಲ್ಲಿನ ಮೇಲಿಂದ ಭ
ಹೋಗುವ ನನ್ನ ಸ್ನೇಹಿತರನ್ನು, ನಾನು ಗುರುತಿಸುವುದಾದ
ಹೇಗೆ? ಪ್ರತಿದಿನವೂ ಬೇರೆ ಬೇರೆ ವೇಷವನ್ನು ಧರಿಸುವ ಮನು
ನನ್ನು ಗುರುತಿಸುವುದೂ ಅಷ್ಟೊಂದು ಕಠಿಣವಾಗುವುದಿಲ್ಲ. ಅ
ನನ್ನ ಈ ಸ್ನೇಹಿತರ ಹೆಚ್ಚಿನ ವೈಲಕ್ಷಣ್ಯದ ಮತ್ತು ನಮ್ಮ ನಡು
ತಪ್ಪು ತಿಳಿವಳಿಕೆಯ ಅನರ್ಥದ ಮೂಲವೆಂದರೆ, ಅವರು ಹಗಲಿ
ಹಾಕಿಕೊಳ್ಳುವ ಕರಿಯ ಚಾಳೀಸು! ಯಾವಾಗಲೂ ಕಣ್ಣಿಗೆ ಕರಿ
ಚಾಳೀಸು! ಅದು ಕೂಡ ಸಾದಾ ಫ್ರೇಮಿನದಲ್ಲ; ಎರ
ಕಡೆಗೆ ಟಾಂಗಾದ ಕುದುರೆಯ 'ಅಂಧಾರಿ'ಯಂತೆ ತೊಗ
ಮುಚ್ಚಳವಿದ್ದ ಹಳೆಯ ನಮೂನೆಯದು! ಅವರ ಗುರುತು ನ
ಸಿಗದುದಕ್ಕೆ ಮುಖ್ಯ ಕಾರಣವೇನೆಂದರೆ, ಪ್ರತಿದಿವಸ ಬದಲಾ
ವೇಷದ ಜೊತೆಗೆ, ಕಣ್ಣುಗಳಿಂದ ಎಂದೂ ಅಗಲದಿರುವ ಅವರ
ಕರಿಯ ಚಾಳೀಸು! ಬೆಳುದಿಂಗಳಲ್ಲಿಯೂ ಅವರು ಚಾಳೀಸನ್ನು
ಸುವುದೆಂದರೆ, ಅದು ನನಗೊಂದು ಭಯಂಕರ ಗೂಢವಿಷಯ
ಆಗಿದೆ. 'ಹಿಟ್ಟಿನಂತೆ' ಬೆಳ್ಳಗಿದ್ದ ಬೆಳುದಿಂಗಳು ಕೂಡ ಅವರಿಗೆ ಸ್ವ
ಮಸುಕುಮಸುಕಾಗಿಯೇ ಕಾಣಿಸುತ್ತಿರಬೇಕಲ್ಲ!' ಎಂಬ ವಿಚಾರ

ಮನಸ್ಸಿಗೆ ವಿಷಾದವೆನಿಸುತ್ತದೆ. ಮಲಗಿಕೊಳ್ಳುವಾಗಲಾದರೂ ಅವರು ತಮ್ಮ ಕರಿಯ ಚಾಳೀಸನ್ನು ಕಳೆದಿಡುವರೊ ಅಥವಾ ಕನಸಿನಲ್ಲಿಯು ಜಗತ್ತಿನ ಕಡೆಗೂ ಕರಿಯ ಚಾಳೀಸಿನಿಂದಲೇ ನೋಡುವರೊ ಎಂಬುದನ್ನು ಶೋಧಹಚ್ಚಬೇಕಾಗಿದೆ. ಅವರ ಮನೆಯವರನ್ನು ಕೇಳಿದರೆ ಈ ಮಾತಿನ ಶೋಧ ಹತ್ತಬಹುದು. ಮೊನ್ನೆಯ ದಿನ ನಾನು ಸ್ವತಃ ಅವರನ್ನೇ ಕೇಳಿದೆ: 'ಬಿಸಿಲಲ್ಲಿ ಮಾತ್ರ ಅದನ್ನು ಹಾಕಿಕೊಂಡು ಬೆಳುದಿಂಗಳಲ್ಲಿ ಹಾಕಿಕೊಳ್ಳುವುದನ್ನು ಬಿಟ್ಟರೆ ನಡೆಯಲಿಕ್ಕಿಲ್ಲವೇ ?' ಎಂದು ಸೌಮ್ಯರೀತಿಯಿಂದಲೇ ಕೇಳಿನೋಡಿದೆ. ಆಗಲೂ ಅವರ ಕರಿಯ ಚಾಳೀಸಿನ ರಹಸ್ಯವೇನೂ ತಿಳಿಯಲೇ ಇಲ್ಲ. ಅವರು ನಕ್ಕು ನುಡಿದರು: 'ನನ್ನನ್ನು ನೀವು ಹಿಂದುಸ್ಥಾನದ ಗವರ್ನರ್ ಜನರಲ್ಲನನ್ನಾಗಿ ಮಾಡಿದರೂ, ನಾನು ನನ್ನ ಕರಿಯ ಚಾಳೀಸನ್ನು ಬಿಡಲಾರೆ!' ಎಂದು ಅವರು ನುಡಿದುದು ತುಂಬ ಸರಿಯಾದ ಮಾತು. ಹಿಂದುಸ್ತಾನದ ಮೊದಲನೆಯ ಗವರ್ನರ್ ಜನರಲರಾದ ರಾಜಾಜಿಯವರ ಕರಿಯ ಚಾಳೀಸಂತೂ ಸುಪ್ರಸಿದ್ಧವಾದ ಮಾತು. ಗವರ್ನರ್ ಜನರಲರಾದ ಮೇಲೆಯೂ ಅದನ್ನವರು ಬಿಡಲಿಲ್ಲ. ಕರಿಯ ಚಾಳೀಸನ್ನು ನೀವು ಹಾಕಕೂಡದೆಂಬ ಶರ್ತಿನ ಮೇಲೆ ಗವರ್ನರ್ ಜನರಲ್ ಪದವನ್ನು ಯಾರಾದರೂ ಅವರಿಗೆ ಕೊಡಮಾಡಿದ್ದರೆ, ಅದನ್ನು ಅವರು ಸ್ವೀಕರಿಸುತ್ತಿರಲಿಲ್ಲವೆಂದೇ ನನ್ನ ಊಹೆ. ಕರಿಯ ಚಾಳೀಸಿನ ಮಹಿಮೆಯೇ ಹಾಗಿದೆ. ಒಂದೇ ಸವನೆ ಕರಿಯ ಚಾಳೀಸನ್ನು ಧರಿಸುವವರಿಗೆ ಅದರಿಂದ ಸುಖವಿದೆಯೆ ? ಬೆಳುದಿಂಗಳ ಸೌಂದರ್ಯಕ್ಕೆ ಕೂಡ ಅವರು ಎರವಾಗಬೇಕಾಗುವುದು. ಇದು ದೊಡ್ಡ ಹಾನಿಯಲ್ಲವೆ? ಯಾವ ರಸಿಕನೂ ಸಹಿಸಲು ಒಪ್ಪಲಾರದ ಮಾತಿದು! ಆದರೆ ಕರಿಯ ಚಾಳೀಸಿನ 'ಹಿಂದಿನ' ಮನುಷ್ಯನು, ಎಷ್ಟೊಂದು ಅನನುಕೂಲತೆಗಳನು ತಡೆದುಕೊಳ್ಳಬೇಕಾದರೂ, ಅದು ಅವನ ಗೆಲುವೇ ಸರಿ! ತಾತ್ತ್ವಿಕವಾದ ಮಾತಿನಲ್ಲಿ ಹೇಳಬೇಕೆಂದರೆ, ಅವನು ಜಗತ್ತನ್ನು ಗೆದ್ದಿರುವನು. ಆ ಗೆಲುವೆಂದರೆ 'ಕಾಣಿಸದೆ ನೋಡುವುದು'! ಹಾಗೆ ನೋಡಿದರೆ ಕರಿಯ ಚಾಳೀಸಿನ ಮನುಷ್ಯನು ಜಗತ್ತಿನಿಂದ 'ನೋಡಲ್ಪಡುವ' ಸುಖವನ್ನೂ ತೊರೆಯಬೇಕಾಗುವುದು. ಮನುಷ್ಯನ ವ್ಯಕ್ತಿಮತ್ತ್ವವು ಅವನ ಕಣ್ಣುಗಳಲ್ಲಿರುವುದು. ಜಗತ್ತು ಅವನನ್ನು ಗುರುತಿಸುವುದು ಮುಖ್ಯವಾಗಿ ಕಣ್ಣುಗಳ ಮೇಲಿಂದ. 'ಕೆಂಪುಜನರ ಭಾವನೆಯು ಇಡಿಯ ಮೋರೆಯಿಂದ ಗೊತ್ತಾದರೆ, ಕರಿಯ ಜನರ ಭಾವನೆಗಳು ಬಹುತರವಾಗಿ ಅವರ ಕಣ್ಣುಗಳಿಂದ ತಿಳಿಯುವುವು' ಎಂದು ಯುರೋಪಿಯನರು ಭಾವಿಸುವುದರ ರಹಸ್ಯವಾದರೂ ಇದೇ ಇರಬಹುದು. 'ಕಣ್ಣು ಆತ್ಮನ ಕಿಟಕಿ' ಎಂಬ ಅರ್ಥದ 'One eye is the window of the Sole' ಈ ಇಂಗ್ಲಿಷ್ ಸುಭಾಷಿತವು ಭಾರತೀಯರಿಗೆ ಹೆಚ್ಚಾಗಿ ಅನ್ವಯಿಸುವುದು. ಕಣ್ಣುಗಳನ್ನೇ ಕಣ್ಮರೆಮಾಡುವ ಕರಿಯ ಚಾಳಿಸು, ಮನುಷ್ಯನ 'ವ್ಯಕ್ತಿತ್ವವನ್ನೇ' ಹತ್ತಿಕ್ಕುವುದು. ಮನುಷ್ಯನ ಕಣ್ಣುಗಳು ಜಗತ್ತಿಗೆ ಕಾಣಿಸದಿದ್ದರೆ, ಅವನ ಮುಸುಕಿನಲ್ಲಿ ಇದ್ದಂತೆಯೆ ಸರಿ! ಕಣ್ಣು ತೆರೆದಿವೆಯೊ ಮುಚ್ಚಿವೆಯೊ— 'ನೇತ್ರ ಕಮಲಗಳು' ಬಾಡಿವೆಯೊ, ಅರಳಿವೆಯೊ— ಎಂಬುದು ಜಗತ್ತಿಗೆ 'ಕಾಣಿಸದೆ', ಇಡಿ ಆಯುಷ್ಯವನ್ನೇ ಕಳೆಯುವ ಮನುಷ್ಯನನ್ನು ಕುರಿತು— Many a flower is born & blush unseen ಎಂದರೆ "ಕಾಣಿಸದೆ ಅರಳಲಿಕ್ಕೇ ಹಲವಾರು ಹೂಗಳು ಹುಟ್ಟುವುವು" ಎಂದೆನ್ನಲು ಅಡ್ಡಿಯಿಲ್ಲ.

ಜಗತ್ತಿಗೆ 'ಕಾಣಿಸದೆ' ಇರುವುದು ಅಥವಾ ಕೊನೆಗೂ ಕಾಣಿಸದೆ ಹೋಗುವುದು, ಮೇಲೆ ಮೇಲೆ ನೋಡುವವರಿಗೆ ಕಾಣುವಷ್ಟು ಹಗುರಾದ ಮಾತಲ್ಲ. ಕಾಣಿಸದೆ ಇರುವುದರಲ್ಲಿ, ಕಾಣಿಸದೆ ಎಲ್ಲವನ್ನೂ 'ನೋಡು'ವುದರಲ್ಲಿಯೇ ಜಾಣತನದ ರಹಸ್ಯವಿದೆ. ಇದರಲ್ಲಿ ಸ್ವಲ್ಪಮಟ್ಟಿಗೆ 'ತುಂಟ'ತನವೂ ಇರಬಹುದು; ಆದರೆ ಆ ತುಂಟತನದಲ್ಲಿಯೂ 'ಭೋಗ'ಕ್ಕಿಂತ 'ತ್ಯಾಗ'ವೇ ಹೆಚ್ಚಿದೆ. ತಾನು ಕಾಣಿಸದೆ ಜಗತ್ತನ್ನು ಅವಲೋಕಿಸುವ ಕಲೆಯು ಲಲಿತಲೇಖಕನಿಗಂತೂ ತೀರ ಅವಶ್ಯವಾದದ್ದು. ಜಗತ್ತಿಗೆ ಕಾಣಿಸದೆ ಜೀವನವನ್ನು ನಿರೀಕ್ಷಿಸುವ ಕಲೆಯು ಸಾಧ್ಯವಾಗದಿದ್ದರೆ, ಜೀವನದ ನಿರೀಕ್ಷಣೆಯನ್ನು ಮಾಡಿ ಟಿಪ್ಪಣಿಗಳನ್ನು ಬರೆಯಿಡಲು ಹೊರಟು, ಮೊದಲನೆಯ ದಿವಸವೇ ಫಜೀತಿ ಹೊಂದಿದ- ಪಿಕ್‌ವಿಕ್ ಪೇಪರ್ಸ್‌ನಲ್ಲಿಯ- ಮಿ.ಪಿಕ್‌ವಿಕ್ಕನ ಅವಸ್ಥೆಯಾಗಬಹುದು. ಬೆಳಕಿನಲ್ಲಿ ನಡೆದ ಸಂಗತಿಗಳನ್ನು ಕತ್ತಲೆಯಲ್ಲಿ ನಿಂತು ನೋಡುವುದರಲ್ಲಿಯೆ ಅವಲೋಕನೆಯ ರಹಸ್ಯವಿದೆ. ಈ ರೀತಿಯಲ್ಲಿ 'ಕತ್ತಲೊಳಗಿಂದ ಬೆಳಕಿನ' ಕಡೆಗೆ ನೋಡದುದರಿಂದಲೇ

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ

ಬರೆಯಿರಿ :

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ಕತ್ತಲೆಯೊಳಗಿನ ಕರಿಯ ಸಂಗತಿಗಳನ್ನು ಬೆಳಕಿಗೆ ತರುವುದು ಸಾಧ್ಯವು. ಆದರೆ ಹೀಗೆ ನೋಡುವುದೆಂದರೆ 'ಕೃಷ್ಣಕೃತ್ಯ'ವೆಂದು ಮಾತ್ರ ಯಾರೂ ತಿಳಿಯಲಾಗದು. ಜಗತ್ತಿನ ಹಿತಕ್ಕಾಗಿಯೆ, ಅದಕ್ಕೆ ಕಾಣಿಸದೆ ಇದ್ದು ಅದನ್ನು ನೋಡಬೇಕಾಗುತ್ತದೆ. ಕಾಣಿಸದೆ ನೋಡುವುದರಲ್ಲಿ ತನ್ನ ಹಿತವಾದರೂ ಇದೆ. ಜಗತ್ತು ತನ್ನಕಡೆಗೆ ನೋಡಲಿ ನೋಡದಿರಲಿ, ಅದರ ಪರಿವೆಯಿಲ್ಲದೆ ತನ್ನ ಕರ್ತವ್ಯವನ್ನು ನಿರಪೇಕ್ಷ ಬುದ್ಧಿಯಿಂದ ಮಾಡುವವರಂತೂ ದೊಡ್ಡವರಿರುವರೆಂಬು-ದರಲ್ಲಿ ಸಂದೇಹವೇ ಇಲ್ಲ. ಆದರೆ ತಿಳಿದೂ ತಿಳಿದೂ ಜಗತ್ತಿಗೆ ತಾನು 'ಕಾಣಿಸದೆ' ಅದನ್ನು 'ನೋಡುವ' 'ಕರಿಯ

ಚಾಳೀಸಿನವರು, ಅವರಿಗಿಂತಲೂ ದೊಡ್ಡವರು ಅಲ್ಲದೆ ತ್ಯಾಗಿಗಳ ಅಹುದು.

ನಿಜವಾದ ಮುಂದಾಳುತನವು ಹಿಂದುಳಿಯುವುದರಲ್ಲಿ ಇಲ್ಲವೆ? ತಾವು ಹಿಂದೆಯೆ ಉಳಿದೂ, ಜಗತ್ತನ್ನು ಮುಂದೆ ಒಯ್ಯ ಹಂಬಲಿಸುವ ಮುಂದಾಳುಗಳೇ ಕಾಣಿಸದೆ ನೋಡುವ ಮಹಾ ತ್ಯಾಗಿಗಳು! ಜಗತ್ತಿಗೆ ತಾವು ಕಾಣಿಸದೆ ಮತ್ತು ಕಾಣಿಸು ಹವ್ಯಾಸವನ್ನು ಹಿಡಿಯದೆ, ಅದರ ಹಿತಕ್ಕಾಗಿ ಹೆಣಗುವ ಸತ್ಪುರುಷ ಸಮಾಜದ ನಿಜ ವಾದ ನಾಯಕರು

ದೇವರಾದರೂ ನಮಗೆ 'ಕಾಣಿಸ'ದೆಯೆ ನಮ್ಮನ್ನು ನೋಡುವು ದಿಲ್ಲವೇ?

ಏನೆಲ್ಲ ಈ ಲೀಲೆ, ಓ ದಿವ್ಯ ಧೀಶಕ್ತಿ!

◆

'ನಿರಂಜನ' ಭಟ್ಟ, ಮುಂಬಯಿ

ಎದುರ ಗುಡಿಸಿಲುಮನೆಯ ಹೊಟ್ಟೆಹರೆಯುವ ಹಸುಳೆ
ಒಂದೆ ಸಮ ಮಿಡುಕಿಹುದು ಮಳೆಯ ನೀರಲಿ ನಲಿಯೆ;
ತಾಯಿಯಾಣತಿ ಮೀರಿ, ಹಸುಳೆ ಹೊಸಿಲನು ಸಾರೆ,
ಮತ್ತೆ ತಾಯಿಯ ನಲ್ಮೆ ಹಿಂದೇಟನೀಳೆ—
ಓ, ಮಾನವನ ಕ್ರತುಶಕ್ತಿ ಮಗುವಾಗಿ ಮಣಿದಿಹುದೆ,
'ಚೀನಾ' ಗೋಡೆಯ ಕಟ್ಟ, ಲಂಕೆಸೇತುವ ಬಿಗಿದ
ಮುಗಿಲ ಮುಗಿಲೆತ್ತರಕು ಬಿತ್ತರದಿ ಮೆರೆದಿರುವ
ಓ ದಿವ್ಯಧೀಶಕ್ತಿ, ಅಣುಕೋಟಿ ಒಡಲುಕ್ತಿ
ನಮ್ಮ ಬಾಳುವೆಕತೆಗೆ ಕಳಸವಿಟ್ಟಿಹ ಕೀರ್ತಿ
ಮಗುವಾಗಿ ಮಣಿದಿಹುದೆ,
ಮಳೆನೀರ ಬೇಡಿಹುದೆ,
ಏನೆಲ್ಲ ಈ ಲೀಲೆ,
ಓ ದಿವ್ಯ ಧೀಶಕ್ತಿ!
ನಿನ್ನ ಶಕ್ತಿ ಗಾಳಿಯಾಗಿ,
ನಾಲ್ಕುದಿಕ್ಕು ಬೀಸೆ,
ನಿನ್ನ ಪಿಂಡ ಸೂರ್ಯ-ಚಂದ್ರ
ನಮ್ಮ ಬಾಳ ಸೂಸೆ.
ನಿನ್ನ ಶಕ್ತಿಯುಗಿಯೆ ಉಕ್ಕಿ
ವಿಶ್ವಜೀವ ಸಾಗೆ.
ಓ ದಿವ್ಯ ಧೀಶಕ್ತಿ, ಅಣುಕೋಟಿ ಒಡಲುಕ್ತಿ
ಮಗುವಾಗಿ ಎದುರೊಳಿಹೆ
ಮಳೆಯಾಗಿ ಹನಿಹನಿಯೆ.
ಹಿಮಗಿರಿಯ ತುದಿತುತ್ತ
ಕಡಲಾಳ ಮಣಿಮುತ್ತ—
ಎಲ್ಲವನು ಹುಡುಕಿರುವೆ
ಎಲ್ಲಿಗೋ ಹೊರಟಿರುವೆ
ಓ ಧೀರ ಧೀಶಕ್ತಿ, ಮನುಕುಲದ ಕ್ರತುಶಕ್ತಿ!
ಆಶೆ ಅಳಿಯದೆ ಇರಲಿ,
ಸಾಹಸವು ನಮಗಿರಲಿ.
ಮೇರುಗಿರಿ ಕಂಡಿರಲಿ
ನಿನ್ನಕೃಪೆ ಕೊನೆಗಿರಲಿ.
ಏನೆಲ್ಲ ಈ ಲೀಲೆ,
ಓ ದಿವ್ಯ ಧೀಶಕ್ತಿ!

ಭಾವ ಪಂಚಮಿ

(ಐದು ಭಾವರೂಪಕಗಳು)

ಶ್ರೀ. ಹಾ. ವೆಂ. ನಾಗೇಶ, ಕಲ್ಬುರ್ಗಿ

ಮೀನುಗಾರ

ಸಂತೋಷಸಾಗರದ ತುಂಬ ಗೆಳೆಯರೊಡನೆ ಈಸಾಡಿದೆ. ಸೌಂದರ್ಯಸಾಗರದ ತುಂಬೆಲ್ಲ ಪ್ರಿಯರೊಡನೆ ನಲಿದಾಡಿದೆ. ಇನ್ನೆಷ್ಟೆಷ್ಟೋ ಹುಚ್ಚು ಆಶೆಗಳು ನನಗೆ. ಆದರೆ ಬರುಬರುತ್ತ ಸನ್ನೊಡನಾಡಿಗಳಲ್ಲಿ ಕೆಲವರು ಮಾಯವಾಗುತ್ತಿದ್ದರು. ಯಾರದೀ ಮಟಮಾಯವೆಂದು ಸುತ್ತು ನೋಡಿದೆ. ಅಲ್ಲೊಬ್ಬ ಕೃಷ್ಣವರ್ಣದ ಮತ್ಸ್ಯಗಾರ, ಆ ಎಲ್ಲ ಗೆಳೆಯರನ್ನು ಬಲಿತೆಗೆದುಕೊಳ್ಳುತ್ತಿದ್ದಾನೆ. ಮೋಹ-ಕೀಳಾಸೆಗಳೆಂಬ ಹುಳು-ಹುಪ್ಪಡಿಗಳನ್ನು ಗಾಳದ ಮೊನೆಗೆ ಸಿಕ್ಕಿಸಿ, ಕ್ಷಣಕ್ಷಣಕ್ಕೂ ನಾವಿರುವತ್ತ ಎಸೆಯುತ್ತಿದ್ದಾನೆ.

ನನ್ನ ಉಳಿದ ಮತ್ಸ್ಯಬಂಧುಗಳು ಒಬ್ಬೊಬ್ಬರಾಗಿ ಕಾಲನ ಗಾಳಕ್ಕೆ ಸಿಕ್ಕಿ ನಾಶವಾಗುವುದನ್ನು ನೋಡುತ್ತ "ಏನು ನಿಷ್ಕರುಣಿಯೋ ನೀನು! ಮೇಲಿಂದ ಮೇಲೆ ಸಕಲ ಮತ್ಸ್ಯಬಾಂಧವರನ್ನು ನಿನ್ನ ಗಾಳಕ್ಕೆ ಬಲಿಕೊಡುತ್ತಿದ್ದೀಯೆ? ಕರುಣೆ ಎಂಬ ಹೆಸರು ನಿನ್ನಲ್ಲಿಲ್ಲವೆ? ಹೀಗೆಯೇ ಎಷ್ಟು ಕಾಲ ನಿನ್ನಾಟ ನಡೆಸೀಯೆ? ಇದಕ್ಕೊಂದು ಕೊನೆ-ಯಿಲ್ಲವೇ?" ಎಂದು ದೂರದಲ್ಲಿದ್ದು ಈಜುತ್ತಿದ್ದಂತೆಯೆ, ಆ ಮೀನು-ಗಾರನನ್ನು ಕೇಳಿದೆ.

ಬೀಸುವ ಗಾಳಿಗೆ ಬೆನ್ನು ತೋರಿಸುತ್ತ ತಡಿಯಲ್ಲಿ ನಿಂತು ಗಾಳ ಹಿಡಿದುಕೊಂಡಿದ್ದ ಮೀನುಗಾರ ನನ್ನನ್ನು ನೋಡಿದ. ನೋಡಿ ಯಾಕೋ ಪರಿಹಾಸದ ಒಂದು ಮುಗುಳ್ನಗೆ ನಕ್ಕ. "ಎಲಾ ನೀರಿನ ಮಗನೇ! ಏನು ಇದರಿಂದ ಪಾರಾಗಬೇಕೆಂದು ಆಶೆಯೇ?" ಎಂದು ನನ್ನನ್ನೇ ನಿರುಕಿಸುತ್ತಿದ್ದ.

"ಹುಂ ಹುಂ" ಎಂದು ಒಮ್ಮೆ ಹೊರಳಾಡಿದೆ. ನನ್ನ ಮೈಯಲ್ಲಿಯ ಬೆಳ್ಳಿಮಿರುಗಿನ ಕಾಂತಿ ಒಂದು ಕ್ಷಣ ಸುತ್ತೆಲ್ಲ ಆವರಿಸಿತು. "ಎಲಾ, ಇಂತಹ ನನ್ನನ್ನೂ ಇಲ್ಲದಾಗಿಸಬಲ್ಲನೇ ಈತ?" ಎಂದು ಕಾಂತಪ್ರಭಾಪ್ರಸರದ ಹೆಮ್ಮೆಯಿಂದ, ಮೀನುಗಾರನನ್ನು ಗರ್ವದಿಂದ ನಿರುಕಿಸಿದೆ.

"ಎಲೈ ಮೂರುತಿ, ಮನದಲ್ಲಿಯ ಭಾವನೆಯೇನು? ಪಾರಾಗುವೆಯೆಂದೆ? ಸಾಧ್ಯವಿಲ್ಲ. ನೀನು ಈ ಗಾಳಕ್ಕೆ ಸಿಕ್ಕಿ ಬಿದ್ದೇ ಬೀಳುವಿ. ಇದು ಅನಿವಾರ್ಯ"! ಎಂದು ನನ್ನೆಡೆಗೆ ಮುಖಮಾಡಿ ಹೇಳಿ, ತನ್ನ ಗಾಳವನ್ನು ಸಮುದ್ರದಲ್ಲಿ ದೂರದ ತನಕ ಎಸೆದು, ಕೆಲ ಮೀನುಗಳನ್ನು ಎಳೆದು ಮೇಲಕ್ಕೆಸೆದು, ತಿರುಗಿ ತನ್ನ ಗಾಳದ ಮೊನೆಗೆ ಏನೋ ಸಿಕ್ಕಿಸುತ್ತಿದ್ದ.

"ಏನು! ಸಾಧ್ಯವಿಲ್ಲವೇ? ನಿನ್ನ ಹತ್ತಿರ ಸುಳಿಯದಿದ್ದರಾಯಿತು. ನೀನಾದರೂ ಆಗ ಏನು ಮಾಡಬಲ್ಲೆ?" ಎಂದು ಎವೆ-ಯಿಕ್ಕದ ಕಣ್ಣುಗಳಿಂದ ಅವನನ್ನೇ ನೋಡಹತ್ತಿದೆ.

"ಅಲ್ಪಜೀವಿಯೇ, ನೋಡು! ಉಳಿದ ಮೀನುಗಾರರಂತಲ್ಲ ನಾನು! ನನ್ನ ಗಾಳಕ್ಕೆ ಸಿಗದ ಮೀನೊಂದನ್ನೂ ನಾನು ಕಂಡಿಲ್ಲ. ನನ್ನ ನೇರ ಒಗೆತಕ್ಕೆ ತುತ್ತಾದವರೆಷ್ಟೋ, ತಮ್ಮಿಚ್ಛೆಯಂತೆ ಬಂದು ಈ ಗಾಳದ ಮೊನೆಗೆ ಬೀಳುವವರೆಷ್ಟೋ, ನಾನೊಡ್ಡುವ ಆಮಿಷಗಳಿಗೆ ಬಲಿಬೀಳುವವರೆಷ್ಟೋ, ಅಚಾತುರ್ಯದಿಂದ ಇನ್ನೆಷ್ಟೋ! ತಪ್ಪಿ ಉಳಿದವರ ಸಂಚಾರಮಾರ್ಗದಲ್ಲೆಲ್ಲ ಕಣ್ಣಿಗೆ ಎಣ್ಣೆ ಹಾಕಿಕೊಂಡು ಅವರ ಹಿಂದಿಂದೆ ಹಿಂಬಾಲಿಸಿ ಗಾಳಕ್ಕೆ ಸಿಗಹಾಕುವೆ. ನಾನು ಅಂತಿಂತಹ ಮೀನುಗಾರನಲ್ಲ ನೆನಪಿಡು!" ಎಂದಾತ ಎಚ್ಚರಿಸಿದ.

"ಅಮ್ಮಾ! ಅಂತಹ ಮೀನುಗಾರನೇ ನೀನು? ನಿನ್ನ ಹೆಸ-ರಾದರೂ ಹೇಳು!" ಎಂದು ಅವನನ್ನು ಕೇಳಿದೆ.

"ನೀನಿನ್ನೂ ತಿಳಿಯಲಾರೆಯಾ? ಅಯ್ಯೋ ಹುಚ್ಚೀ!" ಎಂದು ನಕ್ಕು ಗಂಭೀರವಾಗಿ ಆತ ಹೇಳಿದ: "ನಾನೇ ಕಾಲ!"

'ನಾನು'

'ಬಾ' ಎಂದು ಕರೆ ಬಂದಿತ್ತು; ಅದಕ್ಕಾಗಿ ಹೋಗಿದ್ದೆ.

"ಸುಸ್ವಾಗತ" ಎಂದು ಬರೆದಿತ್ತು ಅಲ್ಲಿ.......ಆದರೆ ಏನು ಸ್ವಾಗತದ ರೀತಿಯೋ ಅದು! ಬಾಗಿಲು ಮುಚ್ಚಿತ್ತು; ನನ್ನ ಸ್ವಾಗತ ಬಯಸಲು ಯಾರೂ ಅಲ್ಲಿ ನಿಂತಿರಲಿಲ್ಲ— ಬಾಗಿಲನ್ನು ಕಾಯುವವನು ಕೂಡ ಅಲ್ಲಿ ನನಗಾಗಿ ಕಾದಿರಲಿಲ್ಲ.

ನೇರವಾಗಿ ಹೋಗಿ ಬಾಗಿಲನ್ನು ತಟ್ಟಿದೆ. ಒಳಗಿನಿಂದ ಯಾರೂ ಉತ್ತರಕೊಡಲಿಲ್ಲ. ತಿರುಗೊಂದು ಸಾರೆ ಗಟ್ಟಿಯಾಗಿ ಬಾಗಿಲು ಬಡಿದೆ.

ಒಳಗಿನಿಂದ ಒಂದು ಸ್ವರ "ಯಾರು?" ಎಂದು ಕೇಳಿತು.

ಹೊರಗಣಿಂದ "ನಾನು" ಎಂದು ಒಳಗನಿಗೆ ಉತ್ತರಿಸಿದೆ.

ಒಳಗಿನಿಂದ ಸ್ವರ ಗಟ್ಟಿಯಾಗಿ ಕೇಳಿತು: "ಯಾರು? ಯಾರ-ವರು?........ ಯಾರವರು ಬಾಗಿಲನ್ನು ತಟ್ಟುವವರು?"

ತಿರುಗಿ ನಾನು "ನಾನು" ಎಂದು ಜೋರಿನಿಂದ ಹೇಳಿದೆ.

"ಇಲ್ಲಿ 'ನಾನು' ಬರಲಾರ; ಅವನಿಗೆ ನಾವೆಂದೂ ಇಲ್ಲಿ ಎಡೆಮಾಡಿಕೊಡಲಾರೆವು. ಹಿಂದಿರುಗಿರಿ."— ಆ ಸ್ವರ ಒಳಗಿನಿಂದ ಗಂಭೀರವಾಗಿ ನುಡಿಯಿತು.

'ಅರೆ! ಇದೇನು!' ಎಂದು ನಾನು ಬೆಚ್ಚಿಬಿದ್ದೆ; ಆದರೆ ಎದೆಗೆಡಲಿಲ್ಲ. ತಿರುಗೊಂದು ತಡವೆ ದ್ವಾರಗಳೆಡೆಗೆ ಹೋಗಿ ಗಟ್ಟಿಯಾಗಿ ಅಪ್ಪಳಿಸಿದೆ. ಒಳಗಿನಿಂದ ಅದೇ ಸ್ವರ "ಯಾರು?" ಎಂದು ಕೇಳಿತು. ನಾನು ಮಾತನಾಡಲಿಲ್ಲ. ಆ ಸ್ವರ ತಾನಾಗಿಯೇ ಮತ್ತೊಮ್ಮೆ ಕೇಳಿತು: "ಯಾರವರು ಬಾಗಿಲನ್ನು ತಟ್ಟುವವರು?"

ಈ ಬಾರಿ ನಾನು "ನೀನೇ" ಎಂದು ಒಳಗಿನಿಂದ ಬಂದ ಸ್ವರಕ್ಕೆ ಉತ್ತರಿಸಿದೆ. ಒಂದೇ ಕ್ಷಣದಲ್ಲಿ ಬಾಗಿಲು ತೆರೆಯಿತು. ಒಳಗಿನಿಂದ ಯಾವನೋ ಒಬ್ಬ ಬಂದು, ನನ್ನನ್ನು ವೈಭವದ ಒಳಜಾವಡಿಯೊಂದಕ್ಕೆ ಕರೆದುಕೊಂಡು ಹೋದ.

ಚಿಟ್ಟೆ

ಹೂವಿನ ಮೇಲೆ ಕುಳಿತು ಮಧುವನ್ನು ಹೀರುತ್ತಿರುವ ಚಿಟ್ಟೆಯೊಂದನ್ನು ನೋಡಿದೆ. ಅದರ ವರ್ಣವರ್ಣದ ಪುಕ್ಕಗಳ ಸೌಂದರ್ಯದಿಂದ ಪ್ರಭಾವಿತನಾಗಿ ಅದನ್ನು ಹೊಗಳಿದೆ. ಒಂದು ಬಾರಿ ಹೂವಿನತ್ತಲೂ ನೋಡಿದೆ. ಅದರ ಹೊಂಬಣ್ಣದ ಪಕಳೆಗಳ ಚೆಲುವನ್ನೂ ಮೆಚ್ಚಿದೆ. "ಅಬ್ಬಾ ಏನು ಜೋಡಿ........ ಧನ್ಯರು ನೀವು" ಎಂದು ಹೊಗಳುತ್ತ, ಕೆಲಕಾಲ ತಲ್ಲೀನನಾಗಿ ನೋಡುತ್ತ ಕುಳಿತೆ.

ಚಿಟ್ಟೆ ಇನ್ನೂ ಮಧುವನ್ನು ಹೀರುತ್ತಲೇ ಇತ್ತು. ಹೂವಿನ ಎಸಳುಗಳಲ್ಲಿ ಮಧುವಿರಲಿಕ್ಕಿಲ್ಲ ಬರಿದಾಗಿರಬಹುದು. ಆದರೆ ಚಿಟ್ಟೆ ಅಲ್ಲಿಂದೇಳದೇ, ಇನ್ನೂ ತನ್ನ ಶೋಷಣೆ ನಡೆಸುತ್ತಲೇ ಇತ್ತು. ನಾನು ಕುಳಿ-ಕುಳಿತಿದ್ದಂತೆ, ಒಂದು ಯೋಚನೆ ನನ್ನನ್ನು ಬಾಧಿಸಿತು. "ಇನ್ನೂ ಈ ಚಿಟ್ಟೆ ಏಳಲೊಲ್ಲದು. ಏನು ಆಶೆಯೊ ಇದಕ್ಕೆ! ಹೂ ನೀರಸವಾಗಿ ಬಾಡಿಹೋಗುವಂತೆ ಅದನ್ನು ಹೀರಿಬಿಟ್ಟಿದೆ.....ನಿಷ್ಕರುಣಿ."

ಆಗಲೇ ನಾನು ಆ ಚಿಟ್ಟೆಗೆ ಛೀಮಾರಿ ಹಾಕಿಯೂ ಬಿಟ್ಟೆ.

ಚಿಟ್ಟೆ ನನ್ನನ್ನು ನೋಡಿ ಮುಗುಳ್ನಕ್ಕು ಅಂದಿತು: "ಹುಚ್ಚು ಕವಿ! ನನ್ನನ್ನೇಕೆ ಹೀಗೆ ಗೋಳು ಹೊಯ್ದುಕೊಳ್ಳುತ್ತೀಯೆ? ನಿನ್ನನ್ನೇ ಮೊದಲು ನೋಡಿಕೊ! ಸೌಂದರ್ಯದ ಮಧುವನ್ನು ಸ್ವಾರ್ಥಿಚಿಟ್ಟೆಯಂತೆ ಎಷ್ಟುಸಲ ನೀನು ಸವಿದಿಲ್ಲ? ಮರವೆಯಾಯಿತೆ? ನೆನಸಿಕೊ— ನೀನೂ ಒಂದು ಚಿಟ್ಟೆ. ಸೌಂದರ್ಯದ ಶತಶತೀನ ಪುಷ್ಪಗಳನ್ನು ಸಾಮೂಲಾಗ್ರ ಹೀರಿ ಸವಿದ ಸ್ವಾರ್ಥಿ ಚಿಟ್ಟೆ ನೀನೆ! ಮೊದಲು ನಿನ್ನದನ್ನು ಕೆದರಿಕೊ; ಆನಂತರ ನನ್ನನ್ನು ಕೆಣಕುವ ಸಾಹಸಕ್ಕೆ ಬಾ!"

ನಾನು ಮೂಕನಾಗಿ ಹೋದೆ.

'ಸೈತಾನ'

ಸುತ್ತಲಿನ ಚೇತೋಹಾರಿ ದೃಶ್ಯಗಳಲ್ಲೇ ದೃಷ್ಟಿಯಿಟ್ಟು ತಲ್ಲೀನನಾಗಿ ಆ ದೊಡ್ಡ ಬಂಡೆಯ ಮೇಲೆ ಒಬ್ಬ ಕುಳಿತಿದ್ದ. ಮುಗ್ಧ ಮನಸ್ಸು.... ತಿಳಿ ಮನಸ್ಸು....ನಿರ್ವಿಕಾರ ಮನಸ್ಸು—ಆತ ಬಹಳ ಹೊತ್ತು ಅಲ್ಲಿ ಒರಗಿಯೇ ಇದ್ದ.

ಒಮ್ಮಿಂದೊಮ್ಮೆಗೇ ಮೇಲಿನದೊಂದು ಹನಿ ರಕ್ತ ಅವನ ಮೈಮೇಲೆ ಸಿಡಿಯಿತು. ರಕ್ತ....ರಕ್ತ!....ಅದರ ಬೆನ್ನ ಹಿಂದೆಯೇ ಬರತಕ್ಕ ಆ ಭೀಕರಚಿತ್ರ ಅವನಿಗೆ ಕಾಣಹತ್ತಿತು. ಆತನ ಅಂಗಾಂಗ ಕಂಪಿಸಿತು. ಧೈರ್ಯದಲ್ಲಿ ಧೈರ್ಯತಂದುಕೊಂಡು ಆತ ಮತ್ತ ಒರಗಿಯೆ ಇದ್ದ.

ಹನಿ ಬಿದ್ದು ಮುಗಿದಿತ್ತೇನೋ— ಆಗ ತೊಟ್ಟುತೊಟ್ಟಾ ರಕ್ತದ ಧಾರೆ ಬೀಳುತ್ತಲೇ ಇತ್ತು. ಆ ಮೇಲೆ ಕ್ಷಣದ ಸಂದೂ ಇಲ್ಲ ಒಂದೇ ಸವನೆ ರಕ್ತಧಾರೆ ಸುರಿಯಹತ್ತಿತು. ರಕ್ತವೇ ರಕ್ತ!....ರಕ್ತ ಪ್ರವಾಹ ತುದಿಮೊದಲಿಲ್ಲದೇ ಹರಿದು ಹೋಗುತಿತ್ತು.... ಅಲ್ಲೊಂ ರಕ್ತದ ಮಡುವು....ಇಲ್ಲೊಂದು ಸಣ್ಣ ಹಳ್ಳ....

ಬರುಬರುತ್ತ ಅವನಿಗೆ ಆ ಚಿತ್ರ ಮೊದಲಿನಷ್ಟು ಭೀಕರವೆನಿ ಲಿಲ್ಲ.... ರಕ್ತಧಾರೆಯನ್ನು ಎವೆಯಿಕ್ಕದೆ ನೋಡುತ್ತ ಕುಳಿತಿದ್ದಂತೆ ಆತನ ಕಾಲುಗಳು ಏಕೋ ಏನೋ, ತಂತಾನೆ ಮುಂದಾಗಿ ಸರಿದ ಪ್ರವಾಹಕ್ಕೆ ಒಡ್ಡಿಕೊಂಡುವು.... ಎಷ್ಟೋ ಹಿತಕರವಾಗಿ ಕಂಡಿತು— ಆ ಕೆನ್ನೀರಿನಲ್ಲಿ ನಡೆದ ಪಾದಸ್ನಾನ.

ಸ್ವಲ್ಪ ಹೊತ್ತು ಕಳೆದಾಗ, ಅವನ ಮೈ-ಮನಗಳಿಗೆ ಸ್ವಲ್ಪ ದ ವಾದಂತೆ ಕಂಡಿತು. 'ವಿಶ್ರಾಂತಿಯು ಬೇಕು' ಎಂದು ಅವನು, ಸ ಹಂಬಲಿಸಿದ. ನಿಧಾನವಾಗಿ ಬಂಡೆಯಿಂದಿಳಿದುಬಂದು ಕೆನ್ನ ಮಡುವಿನಲ್ಲಿ ಮುಳುಗುಹಾಕಿ ಆತ ಸ್ನಾನ ಮಾಡಹತ್ತಿದ ತಣ್ಣ ಮಡುವಿಗಿಂತಲೂ ಆತನಿಗಾಗ ಆ ಕೆನ್ನೀರ ಮಡುವೇ ಹಿತಕರವೆನಿಸಿ

ಸ್ನಾನ ಮುಗಿದಿತ್ತು. ಎಲ್ಲಿಲ್ಲದ ಬಾಯಾರಿಕೆಯ ಅನುಭ ವಾಗಿತ್ತು ಆತನಿಗೆ. ನೇರವಾಗಿ ಮುನ್ನಡೆದು ತಿಳಿಯಾದ ಕೊಳಗಳ ಹುಡುಕಾಡ ಹತ್ತಿದ.... ಬೇರೆ ಕೊಳಗಳ ಅವಶ್ಯಕತೆಯೂ ಮತ್ತೆ ಆಗ ಆತನಿಗೆ ಎನಿಸುತ್ತಿರಲಿಲ್ಲ. ಆತ ನೇರವಾಗಿ ಮಡುವಿಗಿಳಿದ ಬೊಗಸೆ ತುಂಬ ಕೆನ್ನೀರನ್ನೆತ್ತಿ ಕುಡಿಯುತ್ತಿದ್ದ.

ಆ ಕೆನ್ನೀರು ಆತನಿಗೆ ಪೈಶಾಚಗುಣವನ್ನು ತುಂಬಿ ತು ಸುರಿಸುತ್ತಿತ್ತು. ಕೆನ್ನೀರನ್ನೆತ್ತಿ ಕುಡಿ-ಕುಡಿಯುತ್ತಿದ್ದಂತೆಯೇ ಆ ಪ್ರತಿಕ್ಷಣ ಮತ್ತನಾಗುತ್ತ ಸಾಗುತ್ತಿದ್ದ. ಮೈಯಲ್ಲಿಯ ಮಾನವತೆಯ ಲಕ್ಷಣಗಳೆಲ್ಲ ಮಾಸುತ್ತ ಸಾಗಿದ್ದುವು.

ಉನ್ಮತ್ತ, ಹೀಗೆಯೆ ರಕ್ತದಾಹದಿಂದ ತುಂಬಿದವನಾಗಿ ಅದ ಉಗಮದತ್ತ ಸಾಗಿದ್ದ..... ರಕ್ತಪಿಪಾಸಿಯಾದ 'ಸೈತಾನ'ನಾ ಮುಂದುವರೆಯುತ್ತಿದ್ದ....

ಕೆಲಕಾಲ........

"ಚೀಂ ಚೀಂ ಚೀಂ ಚೀಂ ಚೀಂ................"

ಎಲ್ಲಿಂದಲೋ ಹಕ್ಕಿಗಳು ಹಾರಿಬಂದುವು: ಒಂದು ಮರ ಕೊಂಬೆಯ ಮೇಲೆ ತಳವೂರಿಕೊಂಡುವು; ತಂದ ಕಾಳುಗಳನ್ನ ಇಡಿಯೋ ಹುಡಿಯೋ ಮುಕ್ಕಿಕೊಂಡುವು; ಬಂಧು-ಬಳಗ ಎಂ ತಮ್ಮಲ್ಲೇ ಎಳೆದಾಡಿಕೊಂಡುವು; ಮಕ್ಕಳು ಮರಿಗಳೆಂದು ಕೆಲವನ್ನು ಮುಂಡಾಡಿಕೊಂಡುವು; ಒಳಿತೊ ಕೆಡುಕೊ— ಕೆಲಕಾಲ ಏನೇನೊ ಒದರಾಡಿಕೊಂಡುವು; ಆಗಲೇ ಸುದೂರದ ಅವ್ಯಕ್ತವೇನನ್ನೊ ನೆನ ಕೊಂಡುವು; ಎಲ್ಲಿಂದಲೋ ಕರೆ ಬಂತು ನಡೆಯೋಣ— ಎಂದಂ ಕೊಂಡುವು; ಅರೆಕ್ಷಣವೂ ತಡಮಾಡದೆ ಅಲ್ಲಿಂದ ಅವು ಜಾರಿಕೊಂಡುವು

"ಚೀಂ ಚೀಂ ಚೀಂ ಚೀಂ ಚೀಂ................"

ಧಾರವಾಡದ ಮಲ್ಲಸಜ್ಜನ ವ್ಯಾಯಾಮಶಾಲೆ

(ಒಂದು ಸಂದರ್ಶನದ ವರದಿ)

ಸಂದರ್ಶಕರು : ಒಬ್ಬ ವ್ಯಾಯಾಮಪ್ರೇಮಿಗಳು

ಈ ಸಂದರ್ಶಕರು ಜಯಂತಿಯ ಅಭಿಮಾನಿಗಳು. ತಮ್ಮ ಸಂದರ್ಶನದ ವರದಿ ಜಯಂತಿಯಲ್ಲಿಯೆ ಪ್ರಕಟವಾಗಬೇಕೆಂಬ ಅಪೇಕ್ಷೆಯಿಂದ, ಪಡಿಯಚ್ಚುಗಳೊಂದಿಗೆ ಅದನ್ನು ಕಳುಹಿದ್ದಾರೆ. ಧಾರವಾಡದವರಿಗೆ ಮಲ್ಲಸಜ್ಜನ ವ್ಯಾಯಾಮಶಾಲೆಯು ಆತ್ಮೀಯ ಸಂಸ್ಥೆಯಾಗಿದೆ. ಅದು ಬೆಳ್ಳಿಯ ಹಬ್ಬವನ್ನು ಮಾಡಿಸಿಕೊಳ್ಳುವಷ್ಟು ಪ್ರೌಢದೆಶೆಯನ್ನು ಪಡೆದುದು, ಧಾರವಾಡದವರಿಗಷ್ಟೇ ಅಲ್ಲ, ಕನ್ನಡಿಗರಿಗೆಲ್ಲ ಸಂತೋಷವೆನಿಸಬೇಕಾದ ಸಂಗತಿ. ಈ ವ್ಯಾಯಾಮ ಶಾಲೆಯಲ್ಲಿ ಶಿಕ್ಷಣಪಡೆದ ಹಲವುಜನರು, ಕನ್ನಡ ನಾಡಿನ ಬೇರೆ ಬೇರೆ ಕಡೆಗಳಲ್ಲಿ ವಾಸಿಸುತ್ತಿದ್ದು, ಅವರು ಇದ್ದಲ್ಲೆಲ್ಲ ವ್ಯಾಯಾಮಪ್ರಚಾರದ ಕಾರ್ಯವನ್ನೇ ಮಾಡುತ್ತಿರುವರು. ತನ್ನ ಇಪ್ಪತ್ತೈದು ವರ್ಷದ ಜೀವನವನ್ನು ಸಾಹಸದಿಂದಲೇ ಕಾರ್ಯಕಾರಿಯಾಗಿ ಸಾಗಿಸಿದ ಈ ಕನ್ನಡಿಗರ ವ್ಯಾಯಾಮಸಂಸ್ಥೆ ಬಹುಕಾಲ ಬದುಕಿ, ಕನ್ನಡ ತರುಣರಲ್ಲಿ ಶಕ್ತಿ-ಸತ್ತ್ವಗಳನ್ನು ತುಂಬಲಿ !

— **ಸಂಪಾದಕರು**

ನನಗೆ ವಯಸ್ಸಾಗುತ್ತ ಬಂದಿದ್ದರೂ, ಮೊದಲಿಗಿದ್ದ ವ್ಯಾಯಾಮದಲ್ಲಿಯ ಅಭಿರುಚಿ ಅಳಿದಿಲ್ಲ. ನಾನು ಪರಪ್ರಾಂತದಲ್ಲಿರುವಾಗಲೇ ಈ ವ್ಯಾಯಾಮಶಾಲೆಯ ಬಗೆಗೆ ಎಷ್ಟೋ ಮಾತುಗಳನ್ನು ಕೇಳಿದ್ದೆ. ಅವಂದಿನಿಂದಲೇ ಅದನ್ನೊಮ್ಮೆ ಸಂದರ್ಶಿಸಬೇಕೆಂಬ ಕುತೂಹಲವು ನನ್ನಲ್ಲಿ ಬಹುದಿನಗಳಿಂದ ಬೇರೂರಿತ್ತು.

ಮಲ್ಲಸಜ್ಜನ ವ್ಯಾಯಾಮಶಾಲೆಯ ಗೌರವ ಸಂಚಾಲಕರಾದ ಶ್ರೀಮಾನ್ ನಾಡಗೀರ ಕೃಷ್ಣರಾಯರು, ಬಿ.ಎ.,ಬಿ.ಟಿ ಡಿ.ಪಿ.ಇಡಿ. ಅವರು. ಗೌರವ ಕಾರ್ಯದರ್ಶಿಗಳಾದ ಶ್ರೀಮಾನ್ ಹಲಸಿಗಿ ಕೃಷ್ಣರಾಯರು, ಬಿ.ಎ.,ಬಿ ಟಿ.,ಡಿ.ಪಿ.ಇಡಿ. ಮತ್ತು ಶ್ರೀಮಾನ್ ಕೆಲಗೇರಿ ಭೋಜಣ್ಣನವರು. (ಬಲದಿಂದ ಎಡಕ್ಕೆ.

ಧಾರವಾಡಕ್ಕೆ ಬಂದ ಕೆಲವು ದಿನಗಳಲ್ಲಿಯೇ ಮಲ್ಲಸಜ್ಜನ ವ್ಯಾಯಾಮಶಾಲೆಯನ್ನು ಕಣ್ಣಾರೆ ನೋಡುವ ಸೌಭಾಗ್ಯವು ನನಗೆ ದೊರೆಯಿತು. ಅಲ್ಲಿ ಕಾಲಿಡುತ್ತಲೇ ಗೌರವ ಕಾರ್ಯದರ್ಶಿಗಳು, ನನ್ನನ್ನು ಸ್ವಾಗತಿಸಿ, ತಮ್ಮ ಪರಿಚಯವನ್ನು ನನಗೆ ಮಾಡಿಕೊಟ್ಟು, ನನ್ನ ಪರಿಚಯವನ್ನು ಸಂಚಾಲಕರಾದ **ಶ್ರೀ. ನಾಡಿಗೇರ** ಕೃಷ್ಣರಾಯರಿಗೆ **ಮಾಡಿಕೊ**ಟ್ಟರು ಶ್ರೀ. ಕೃಷ್ಣರಾಯರು ಆಗ ವ್ಯಾಯಾಮದ ವರ್ಗದಲ್ಲಿ ತಮ್ಮ ಶಿಷ್ಯರಿಗೆ ಪಾಠಹೇಳಿಕೊಡುತ್ತಿದ್ದರು. ಅವರ ವರ್ಗವು ಮುಗಿಯುವವರೆಗೆ, ಗೌರವ ಕಾರ್ಯದರ್ಶಿಗಳಾದ ಶ್ರೀ. ಕೆ. ಜಿ. ಹಲಸಿಗಿ ಅವರಿಂದ ನಾನು ವ್ಯಾಯಾಮಶಾಲೆಯ ವಿಷಯದಲ್ಲಿ ಅನೇಕ ಸಂಗತಿಗಳನ್ನು ಕೇಳಿಕೊಂಡೆ. ಅಷ್ಟರಲ್ಲಿಯೆ ಶ್ರೀ ನಾಡಗೀರರೂ ಬಂದರು. ಅವರಿಬ್ಬರೂ ನನ್ನನ್ನು ಕರೆದುಕೊಂಡು, ಶಾಲೆಯಲ್ಲಿ ನಡೆಯುತ್ತಿರುವ ಎಲ್ಲ ಚಟುವಟಿಕೆಗಳನ್ನೂ ತೋರಿಸಿಕೊಂಡು ಬಂದರು. ಇದರಿಂದ ನನ್ನ ಮನಸ್ಸಿನಲ್ಲಿ ಮೂಡಿದ ಕೆಲವು ಭಾವನೆಗಳನ್ನು ವ್ಯಕ್ತಪಡಿಸುವುದೇ ಈ ನನ್ನ ಲೇಖನದ ಉದ್ದೇಶ.

ನಾನು ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಸಂಚರಿಸಿ ಬಂದಿದ್ದರೂ, ಇಷ್ಟೊಂದು ವ್ಯವಸ್ಥಿತವಾಗಿ— ತನ್ನದೇ ಆದ ಭವ್ಯ ಕಟ್ಟಡದಲ್ಲಿ ಮತ್ತು ಆಟದ ಬಯಲಲ್ಲಿ — ವ್ಯಾಯಾಮ ಶಿಕ್ಷಣವನ್ನು ದಿನಾಲು ನೂರಾರು ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಸಾರ್ವಜನಿಕ ಸ್ವರೂಪದ ವ್ಯಾಯಾಮಶಾಲೆಗಳು ತೀರ ವಿರಳವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ವ್ಯಾಯಾಮಶಾಲೆಯ ನಡುವಿರುವ ಮುಖ್ಯವಾದ ವ್ಯಾಯಾಮಮಂದಿರದಲ್ಲಿ ಕಾಲಿಟ್ಟೊಡನೆಯೆ, ನನ್ನಲ್ಲಿ ವಿಲಕ್ಷಣವಾದ ಸ್ಫೂರ್ತಿ ಮೂಡಿತು. ಆ ಹಾಲ್‌ನಲ್ಲಿಯ ಸ್ವಚ್ಛತೆ, ವಿದ್ಯಾರ್ಥಿಗಳು ತಮ್ಮ ದೇಹದ ಬೆಳವಣಿಗೆಯನ್ನು ನೋಡಿಕೊಂಡು ಉಬ್ಬುಬ್ಬಿ ವ್ಯಾಯಾಮ ಮಾಡಲು ಎರಡು ದೊಡ್ಡ ನಿಲುಗನ್ನಡಿಗಳು, ಒಳಬದಿಯ ನಾಲ್ಕು ಗೋಡೆಗಳ ಮೇಲೆ ಹಚ್ಚಿದ ಚಾರ್ಲಸ್, ಅ್ಯಟ್ಲಸ್, ಗಾಮಾ, ಶ್ರೀ ಕೆ. ವ್ಹಿ. ಅಯ್ಯರ, ಶ್ರೀ ಕೆ. ಜಿ. ನಾಡಗೀರ ಮೊದಲಾದವರ ಪುರುಷಾಕಾರದ ತೈಲಚಿತ್ರಗಳು— ಇವೆಲ್ಲ ಎಂತಹ ವ್ಯಾಯಾಮದ್ವೇಷಿಯನ್ನೂ ವ್ಯಾಯಾಮಕ್ಕೆ ಹಚ್ಚಬಲ್ಲವುವಾಗಿವೆ. ಆ ತೈಲಚಿತ್ರಗಳು ಧಾರವಾಡದ ಸುಪ್ರಸಿದ್ಧ ಚಿತ್ರಕಾರರಾದ ಅರ್ಕಸಾಲಿ ಬಂಧುಗಳ ಕೃತಿಗಳೆಂಬುದು ತಿಳಿದುಬಂದಿತು. ಅಲ್ಲಿಯೇ ಮಾಡಿನಲ್ಲಿ ಇರಿಸಿದ ಬುದ್ಧದೇವನ ಮೂರ್ತಿಯು, ತನ್ನ ನಗುಮುಖದ ಶಾಂತವಾದ ಕಿರಣಗಳನ್ನು ವಿದ್ಯಾರ್ಥಿಗಳ ಮೇಲೆ ಪಸರಿಸುತ್ತಿರುವಂತೆ ನನಗೆ ಭಾಸವಾಯಿತು. ಈ ಮುಖ್ಯ ಹಾಲಿನ ಎರಡೂಬದಿಗೂ ಎರಡು ಉದ್ದವಾದ ಕೋಣೆಗಳು. ಒಂದನ್ನು ಆಡಳಿತವರ್ಗದ ಕಚೇರಿ ಮತ್ತು ವಾಚನಾಲಯಗಳಿಗಾಗಿಯೂ, ಇನ್ನೊಂದನ್ನು

ಮಲ್ಲಸಜ್ಜನ ವ್ಯಾಯಾಮಶಾಲೆಯ ಒಬ್ಬ ತರುಣ, ಭಾರವೆತ್ತುವ ಅಭ್ಯಾಸ ಮಾಡುತ್ತಿದ್ದಾನೆ.

ವೈದ್ಯಕೀಯ ಪರೀಕ್ಷೆ, ಆಸನ ಮತ್ತು ಇತರ ವ್ಯಾಯಾಮಗಳಿಗಾಗಿಯೂ ಮೀಸಲಾಗಿರಿಸಿದ್ದಾರೆ. ಅಲ್ಲಿಯೇ ಇಟ್ಟಿದ್ದ ಒಂದು ದೊಡ್ಡ ತಗಡಿನ ಡಬ್ಬಿಯಂತಹ ವಸ್ತುವನ್ನು ನೋಡಿದಾಗ, ಅದೇನೆಂಬುದು ನನಗೆ ಅರ್ಥಮಾಡಿಕೊಳ್ಳಲಾಗಲಿಲ್ಲ. ಸಂಚಾಲಕರು ಅದು “Steam bath Cabin” ಎಂದು ತಿಳಿಸಿಕೊಟ್ಟರು. ವಾರಕ್ಕೊಮ್ಮೆಯಾದರೂ ಈ ಉಗಿಯ ಸ್ನಾನವನ್ನು ಮಾಡಿದರೆ, ವಾರದ ಶ್ರಮವೆಲ್ಲ ಪರಿಹಾರವಾಗುವುದಂತೆ.

ವ್ಯಾಯಾಮಶಾಲೆಯ ಬದಿಗೆ ಒಂದು ವಿಶಾಲವಾದ ತಗಡಿನ ಶೆಡ್ಡನ್ನು ಹಾಕಿಸಿದ್ದಾರೆ. ಅಲ್ಲಿ ಹತ್ತಿಪ್ಪತ್ತು ಜನ ತರುಣರು, ಭಾರವೆತ್ತುವ ರೂಢಿಯನ್ನು ಮಾಡುತ್ತಲಿದ್ದರು. ಅವರಲ್ಲಿ, ಒಬ್ಬರ

ಮಲ್ಲಸಜ್ಜನ ವ್ಯಾಯಾಮಶಾಲೆಯಲ್ಲಿಯ ಯೋಗಾಸನದ ವರ್ಗ

ಮೈಕಟ್ಟಿಗಿಂತ ಮತ್ತೊಬ್ಬರ ಮೈಕಟ್ಟು ಆಕರ್ಷಕ, ಸ್ಫೂರ್ತಿದಾಯಕ! ಇನ್ನು ಕೆಲವು ತರುಣರು, ಭಾರತೀಯರದೇ ಆದ ಮಲ್ಲಕಂಬದ ಮೇಲೆಯೂ, ಮತ್ತೆ ಕೆಲವರು ‘ಡಬಲ್ ಬಾರ್’ ಮೇಲೆಯೂ, ತರಬೇತಿಯನ್ನು ಪಡೆಯುತ್ತಿದ್ದರು. ಅಲ್ಲಿಯ ವಾತಾವರಣ, ನೋಡುವವರಲ್ಲಿಯೂ ಉತ್ಸಾಹವನ್ನು ಹೆಚ್ಚಿಸುವಂತಿರುವುದು.

ವ್ಯಾಯಾಮಶಾಲೆಯ ಮುಂದಿನ ಬಯಲಲ್ಲಿ, ೮ರಿಂದ ೧೬ರವರೆಗೆ ವಯಸ್ಸಿನ ಬಾಲಕರು ಸುಕೂತು, ಖೋಖೋ, ವ್ಹಾಲಿಬಾಲ್, ಪಿರಾಮಿಡ್ ಮುಂತಾದ ಆಟಗಳಲ್ಲಿ ನಿರತರಾಗಿದ್ದರು. ಈ ಎಲ್ಲ ವರ್ಗಗಳೂ, ಇದೇ ವ್ಯಾಯಾಮಶಾಲೆಯಲ್ಲಿಯೇ ಶಿಕ್ಷಣಪಡೆದು ಇಲ್ಲಿಯ ವಿದ್ಯಾರ್ಥಿನಾಯಕರಿಂದಲೇ ನಡೆಸಲ್ಪಡುತ್ತಿದ್ದುವು. ಮಳೆಗಾಲವಾದುದರಿಂದ ಹಾಕಿ ಮತ್ತು ಫುಟ್‌ಬಾಲ ಆಟಗಳನ್ನು ಪ್ರಾರಂಭಿಸಿದ್ದಿಲ್ಲ. ನೂರಾರು ಮಕ್ಕಳು ದಿನಾಲುಬಂದು ಆಟನೋಟಗಳ ಮುಖಾಂತರವಾಗಿ ತಮ್ಮ ಆರೋಗ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು ಕಂಡು, ಈ ವ್ಯಾಯಾಮಶಾಲೆಯು ನಿಜವಾದ ನಾಡಸೇವೆಯನ್ನು ಮಾಡುತ್ತಿರುವ ಬಗ್ಗೆ ಅವರಿಗೆ ಧನ್ಯವಾದಗಳನ್ನು ಮನಸ್ಸಿನಲ್ಲಿಯೆ ಅರ್ಪಿಸಿದೆ.

ವ್ಯಾಯಾಮಶಾಲೆಯ ಹಿಂದಿನ ಬದಿಗೂ ವಿಶಾಲವಾದ ಬಯಲು ಇದೆ. ಅಲ್ಲಿದ್ದ ತಗ್ಗು-ದಿನ್ನೆಗಳನ್ನು ಸಮಮಾಡಿಸುವ ಕೆಲಸವಿನ್ನೂ ನಡೆದಿದೆ. ೪ರಿಂದ ೮ ವರ್ಷದ ವಯಸ್ಸಿನ ಮಕ್ಕಳು ಇನ್ನೂ ಹೆಚ್ಚಾಗಿ ವ್ಯಾಯಾಮಶಾಲೆಗೆ ಬರಬೇಕೆಂಬುದು ಸಂಚಾಲಕರ ಹಂಬಲ. ಅದಕ್ಕಾಗಿ ಮಕ್ಕಳ ಆಟದ ಉಪಕರಣಗಳಾದ ಜಾರಗುಂಡಿ, ಜೀಕಬಾರ್, ಜೋಕಾಲಿ ಮೊದಲಾದ ಉಪಕರಣಗಳನ್ನು ಅಲ್ಲಿ

ಕೃಷೀಕೆಂಬ ಯೋಜನೆ ಇವೆಯೆಂದು ನನಗೆ ತಿಳಿಸಿದರು. ಸಾರ್ವ-
ಜನಿಕರ ಸಹಾಯ-ಸಹಕಾರಗಳಿಂದ ಇಷ್ಟೊಂದು ಪ್ರಗತಿಯನ್ನು
ಹೊಂದಿದ ಈ ವ್ಯಾಯಾಮಶಾಲೆಗೆ, ಇವುಗಳನ್ನು ದೊರಕಿಸುವುದೇನೂ
ಹೆಚ್ಚ ಕಷ್ಟದ ವಿಷಯವಲ್ಲವೆಂಬುದನ್ನು ನಾನು ಚಿಂತಿಸಿದೆ.

ಮೊನ್ನೆಮೊನ್ನೆ, ಚಿಕ್ಕದಾದರೂ ಚೊಕ್ಕಟವಾದ, ಸಂಚಾಲಕರ ನಿವಾಸವನ್ನು ಕಟ್ಟಿಸಲಾಗಿದೆ. ಸಂಚಾಲಕರು ಅಲ್ಲಿಯೇ ಇದ್ದು ವ್ಯಾಯಾಮಶಾಲೆಯ ವ್ಯವಸ್ಥೆಯನ್ನು ಕಾಯ್ದುಕೊಂಡಿರುವುದರಿಂದ, ವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೇ ಬೆಳೆಯುತ್ತಿದೆ. ಅಲ್ಲಿಯ ಶುದ್ಧ ವಾತಾವರಣವು ತರುಣರನ್ನೂ, ಮಕ್ಕಳನ್ನೂ ತನ್ನೆಡೆಗೆ ಸೆಳೆದುಕೊಳ್ಳುತ್ತಲಿದೆ. ಇದೂ ನಿಜವಾದ ನಾಡಸೇವೆಯ ಒಂದು ರೂಪವಲ್ಲವೆ?

ಇಷ್ಟು ಕಾರ್ಯಕ್ರಮಗಳಿಂದ ವ್ಯವಸ್ಥಾಪಕರು ತೃಪ್ತಿಪಟ್ಟು-ಕೊಂಡಿದ್ದಾರೆಂದು ಭಾವಿಸಿದ್ದೆ; ಆದರೆ ಮುಂದೆ ಇನ್ನೂ ಕಟ್ಟ-ಬೇಕೆಂದಿರುವ ಮಂದಿರದ ನಕಾಶೆಯನ್ನು ನನ್ನ ಮುಂದೆ ಮಂಡಿಸಿದರು: ಸುಮಾರು ೫೦-೬೦ ವಿದ್ಯಾರ್ಥಿಗಳಾದರೂ ಅಲ್ಲಿಯೇ ಇದ್ದು ವ್ಯಾಯಾಮ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಒಂದು ವಿದ್ಯಾರ್ಥಿ ನಿಲಯ; ಎಂತಹ ಮಳೆಗಾಲದಲ್ಲಿಯೂ ಕೂಡ ನೂರಾರು ವಿದ್ಯಾರ್ಥಿಗಳು ಒಳಗೇ ವ್ಯಾಯಾಮ ಮಾಡಲು ಅನುಕೂಲವಾಗು-ವಂತಹ ಒಂದು ಭವ್ಯವಾದ ವ್ಯಾಯಾಮಮಂದಿರ, ಧಾರವಾಡದಂತಹ ನಗರದಲ್ಲಿ ಅತ್ಯಂತ ದೊಡ್ಡ ಕೊರತೆಯೆನಿಸಿದ್ದ ಒಂದು ಈಜುವ ಕೊಳ, ನಿಸರ್ಗ ಚಿಕಿತ್ಸಾಲಯ, ಒಲಿಂಪಿಕ್ ಆಟಗಳ ಕರ್ನಾಟಕದ ಕೇಂದ್ರ, ಕರ್ನಾಟಕಕ್ಕೊಂದು ಶರೀರಶಿಕ್ಷಣ ಕಾಲೇಜು ಮುಂತಾದುವುಗಳೂ

ಮಲ್ಲಸಜ್ಜನ ವ್ಯಾಯಾಮಶಾಲೆಯಲ್ಲಿ ಬಾಕ್ಸಿಂಗ್ ವ್ಯಾಸಂಗದ ವರ್ಗ

ಅವರ ಚಿತ್ರಪಟಲದಲ್ಲಿವೆಯೆಂಬುದನ್ನು ನನಗವರು ತಿಳಿಯ-ಪಡಿಸಿದರು.

ಕಳೆದ ೨೫ ವರ್ಷಗಳವರೆಗೆ ಅವ್ಯಾಹತವಾಗಿ ಅಡೆ-ತಡೆಗಳ-ನ್ನೆದುರಿಸಿ, ನಾನಾಸ್ಥಾನವಾಗಿ ಕಟ್ಟುತ್ತ ಬಂದಿದ್ದ ಈ ವ್ಯಾಯಾಮಶಾಲೆಗೆ, ಇವು ಕನಸಿನ ಮಾತುಗಳಲ್ಲವೆಂದೆಂದುಕೊಂಡೆ. ಇದೇ ಫೆಬ್ರುವರಿ ೧೦ನೆಯ ತಾರೀಖಿಗೆ ಜರುಗಲಿರುವ ಬೆಳ್ಳಿಹಬ್ಬಕ್ಕೆ ಮುಖ್ಯ ಅತಿಥಿಗಳೆಂದು ಬೆಂಗಳೂರಿನ ವ್ಯಾಯಾಮಶಾಲೆಯ ಸಂಸ್ಥಾಪಕ ಸಂಚಾಲಕರೂ ಭಾರತದ ತುಂಬೆಲ್ಲ ಶಿಷ್ಯ-ವರ್ಗವನ್ನು ಬೆಳೆಯಿಸಿ-ಕೊಂಡವರೂ ಆದ ಶ್ರೀ. ಕೆ. ವಿ. ಅಯ್ಯರ್ ಅವರು ಬರು-ತ್ತಾರೆಂಬುದನ್ನು ಕೇಳಿ ಇನ್ನೂ ಹರುಷಗೊಂಡೆ. ಬೆಂಗಳೂರಲ್ಲಿ ಶ್ರೀ ಅಯ್ಯರ್ ಅವರ ವ್ಯಾಯಾಮಶಾಲೆಯಂತೆಯೆ, ಉತ್ತರ ಕರ್ನಾಟಕದ

ಮಲ್ಲಸಜ್ಜನ ವ್ಯಾಯಾಮಶಾಲೆಯಲ್ಲಿಯ ಬಾಲಿಕೆಯರ ನರ್ತನವರ್ಗ

ಕೇಂದ್ರವಾದ ಧಾರವಾಡದಲ್ಲಿ ಮಲ್ಲಸಜ್ಜನ ವ್ಯಾಯಾಮಶಾಲೆಯೂ ಶಾಶ್ವತಸಂಸ್ಥೆಯಾಗಿ ಬಾಳಲಿ— ಎಂದು ಮನಸ್ಸಿನಲ್ಲಿಯೇ ಭಗವಂತ-ನನ್ನು ಪ್ರಾರ್ಥಿಸಿಕೊಂಡೆ. ಮಲ್ಲಸಜ್ಜನ ವ್ಯಾಯಾಮಶಾಲೆಯು ಚಿರಾಯುವಾಗಲಿ.





ಸುಪ್ರಭಾತ

ಶ್ರೀ. ವೆಂಕಟರಾಯ ಪ್ರಭು, ಜ್ಯೂ. ಎಂ. ಎ. ಮುಂಬಯಿ

೧

ಮೂಡಣದಿ ಆಗಸವು ರಕ್ತರಂಜಿತವಾಯ್ತು
ರವಿಯು ಉದಿಸುವನಿನ್ನು, ಬೆಳಕುತೊರೆ ಹರಿಸುವನು;
ಹಕ್ಕಿಗಳ ಹಾಡಿಪನು, ಧರೆಯ ಬೆಳಗಿಪನವನು;
ಸ್ವಾಗತದ ಓಕುಳಿಯ ಮೂಡಣದಿ ಸುರಿದಾಯ್ತು;
ಪ್ರಕೃತಿಕನ್ನೆಯು ಚಿಗುರ ಹಸುರುಡಿಗೆ ತೊಟ್ಟಿಹಳು.
ಕರೆಗಾಳಿ ಮಂದನಗು ಸುಮಸೌರಭವ ಚೆಲ್ಲಿ
ಇಬ್ಬನಿಯ ಸೇಸೆಯನು ಬಟ್ಟಲಾಗಸದಲ್ಲಿ
ಬಟ್ಟಗೆಯ್ಯಲಿ ಅರುಣ ಆರತಿಯನೆತ್ತಿಹಳು!

೨

ದಿನವು ಬಹ ನಲ್ಲನಿವ ಸಂಭ್ರಮವು ಎತ್ತಣದು?
ಬರಿಯ ಮಂದಹಾಸಿಲನ ನಗುವ ಸೂಸಿದರೇನು,
ಕುಸುಮಗಳ ಕಂಪಿನಲಿ ದೂತರನು ಬಿಡಲೇನು,
ಆಚಾರ ವಿಡಂಬನೆಯೆ? ಒಲವಿನ ಮುಕ್ತಿ ಇದು!
ವರ್ಷಋತುರವಿ ಕಾಣದಿರೆ ನೀರೆ ಪ್ರಕೃತಿಯು
ಗುಡುಗುರೋದನದಲ್ಲಿ ಕಣ್ಣೀರ ಮಳೆಯಲ್ಲಿ
ನೆನೆಯುವಳು ವಿರಹದಲಿ ಉಡುಗೆಯಲಿ ಮನವೆಲ್ಲ?
ಕಂಡೊಡನೆ ಬಿಸಿಲುಮಳೆ ಸುಖಬಾಷ್ಪ ತಿರೆಹರಿಯು!

೩

ಹಸು-ಹಕ್ಕಿ-ಮಾನವರ ತರು-ಲತಾ-ಗುಲ್ಮಗಳ
ಹಿಂದಣದ ಹೂಸ್ವವಿದು ಕುಂದಣಿಸಿ ಬಂದವೊಲು
ಧರೆಯ ಜಣಬದುಕಿನಲಿ ಸುಧೆಯಿಳಿದು ಸಂದವೊಲು
ಬುವಿರವಿಯ ತಾಯ್ತಂತೆ ಪಡೆದ ಸವಿಸುಖ ವಿಪುಲ!
ಮೃದುಹಾಲ ತನಿರಸವ ಮೆಲ್ವಣ್ಣಸಿರಿಯನ್ನ-
ವಿತ್ತು ಸಲಹಿದ ಮಾತೆ ಪ್ರಕೃತಿಯೇ, ಓ, ವಂದ್ಯೆ!
ಬಾಳಿನಲಿ ಬೆಳಕಿತ್ತ ರವಿಬೆಳಗಿಪಿಂ ಸಂಧ್ಯೆ
ಶಕ್ತಿಚೇತನವಿತ್ತು ಹಾಳ ಗೈದಿಹೆ ಹೊನ್ನ!

೪

ಸ್ವಸ್ತಿ! ಸ್ವಾಗತವು ಜಗದೊಡೆಯ ರವಿಪಿತಗೆ ಆಗಮವು,
ಹಕ್ಕಿಗಳು ಮಂಗಲದ ಸುಪ್ರಭಾತದ ಗೀತ,
ತಂಗಾಳಿ ಚಾಮರವನೆತ್ತಿ ವಾಯು ವಿನೀತ,
ಸಸ್ಯಗಳ ಸೂನಗಳು ಚಿಗುರುಡೆಯನುಟ್ಟಿಹವು;
ಸುತಮಾನವನು ಮಿಂದು ಧರೆತಾಯ್ಗೆ ಜಲವಿತ್ತು
ಪಾದ ಹುಡಿಮೃತ್ತಿಕೆಯ ಹಣೆಗೊತ್ತಿ ಕೈಮುಗಿದು
ಬಾನಂಗಣದಿ ನಿಂದ ರವಿಪಿತಗೆ ಶಿರಮುಗಿದು
ಅರ್ಘ್ಯ-ಅರ್ಚನೆಗಳಿಂ ಅಪರಿಪನೀ ಹೊತ್ತು!

೫

"ಬನ್ನಿರೈ. ಪಿತೃದೇವ ನಿಮ್ಮಡಿಯ ಪುಣ್ಯದಿಂ
ನಾಡು ಪಾವನಗೊಳ್ಳೆ. ನುಡಿಯು ನಿರ್ಮಲಗೊಳ್ಳೆ
ನಿಮ್ಮ ಮುಖ ಅರವಿಂದವನಿಂ ಕತ್ತಲೆಯ ತಳ್ಳೆ
ನಿಮ್ಮ ಕಿಡಿಯೊಂದರಲಿ ಸೃಷ್ಟಿಯಿದು ಶೂನ್ಯದಿಂ
ಲತೆ ಮಗಳು ತರುಸುತನು ತಳರುಲಿಯ ನುಡಿಗಳಿಂ
ಖಗಕುಲದ ಇಂಚರದ ನಾದಮೇಳಗಳಿಂದ
ಚಿರಬಂಧು ಮಾರುತನು ಕುಸುಮಸೌರಭದಿಂದ
ಕರೆಯುತಿವೆ, ಮಾತೆ ಇಬ್ಬನಿಯ ಬಾಷ್ಪಗಳಿಂ!"

೬

ರವಿಯುದಯ ಹೊಂದಿದನು ತಿರೆಯೆಲ್ಲ ನಲಿಯುತಿದೆ,
ಭ್ರಾಂತನಾಗಿಹನಿಲ್ಲಿ ಕವಿಯು. ಕಾಣುತ ನಿಂದು
ಈ ಹುಲ್ಲ ತಾಣದೆಡೆ ಮುಂಜಾವಿನಲಿ ಬಂದು
ಸೌಂದರ್ಯಮುಕ್ತಿಯಲಿ ಭಾವಸ್ವರ್ಗವನೈದೆ;
"ನಿನ್ನದಿದು ಈ ಒಡಲು ಈ ಒಡಲ ಸಂಪತ್ತು.
ತಿರುಕನಿಹೆ ಹುಚ್ಚಿನಲಿ ಕಣ್ಣುತಿರುಪೆಯ ಬೇಡೆ.
ಹಸಿದಾತ್ಮ ಆರಯ್ಯುಂಡು ಬದುಕುವಲ್ಲವಿ ಹಾಡೆ,
ಹುಟ್ಟು-ಸಾವುಗಳೆತ್ತ, ಸುಖ-ದುಃಖಗಳ ಕುತ್ತು?

ಬುದ್ಧಿವಂತ ಮಕ್ಕಳ ಶಾಲೆ

(ಶೈಕ್ಷಣಿಕ ಲೇಖನ)

ಶ್ರೀ ಮುರಲಿಧರರಾವ್ ಘಾಣೇಕರ್ ಎಂ. ಎ., ಬಿ. ಟಿ.
ಅಸಿಸ್ಟಂಟ್ ಡಾಯರೆಕ್ಟರ್ ವಿದ್ಯಾಖಾತೆ ಹೈದರಾಬಾದು (ದಕ್ಷಿಣ)*

●

ಜಡಪದಾರ್ಥಗಳನ್ನು ಅಳೆದು ನೋಡಿ ಪ್ರಮಾಣವನ್ನು ನಿರ್ಣಯಿಸುವಂತೆ, ಮನುಷ್ಯನ ಬುದ್ಧಿಯನ್ನೂ ಅಳೆದು ನೋಡಿ ತಾರ-ತಮ್ಯಗಳನ್ನು ನಿರ್ಣಯಿಸಬಹುದಾಗಿದೆ. ಮಕ್ಕಳ ಶಿಕ್ಷಣಕ್ಷೇತ್ರದಲ್ಲಿ ಈ ಹೊಸ ಶೋಧದ ಉಪಯೋಗವನ್ನು ಸರಿಯಾಗಿ ಮಾಡಿಕೊಂಡರೆ, ಎಷ್ಟೋ ಮಕ್ಕಳ ಆಯುಷ್ಯ ವ್ಯರ್ಥ ಹಾಳಾಗದು!

●

ಹೊಸಯುಗ ಅಥವಾ ವಿಜ್ಞಾನಯುಗವು ಪ್ರಾರಂಭವಾಗಿ ಎಷ್ಟೋ ವರ್ಷಗಳು ಗತಿಸಿಹೋಗಿದ್ದರೂ, ಸಕಲಜಗತ್ತು ಸದ್ಯ ಅಣುಯುಗದಲ್ಲಿ ಭ್ರಮಿಸುತ್ತಿದ್ದರೂ, ಬಹುಸಂಖ್ಯಾಕ ಭಾರತೀಯರಾದ ನಾವು, ಇನ್ನೂ ಹಳೆಯ ವಿಚಾರಪ್ರಣಾಲಿಯಿಂದಲೇ ಎಲ್ಲವನ್ನೂ ನೋಡುತ್ತಿದ್ದೇವೆ. ನಮ್ಮ ಆಚಾರ-ವಿಚಾರದಲ್ಲಿ ಎಷ್ಟರ ಮಟ್ಟಿಗೆ ಶಾಸ್ತ್ರೀಯವಿದೆಯೆಂಬುದರ ಕಡೆಗೂ ನಮ್ಮ ಲಕ್ಷ್ಯ ಕ್ವಚಿತ್ತಾಗಿ ಹೋಗುತ್ತಿರುತ್ತದೆ. "ನಹಿ ಸಂಹರತೇ ಜ್ಯೋತ್ಸ್ನಾಂ ಚಂದ್ರಶ್ಚಾಂಡಾಲವೇಶ್ಮನಿ" ಇಲ್ಲವೆ, "ಯತ್ ವೈಷಮ್ಯ ನೈರ್ಘೃಣ್ಯೇತಿ। ಚೇತ್ ಈಶ್ವರಸ್ಯ ನ ಪ್ರಸಜ್ಯೇತೆ। ಈಶ್ವರಸ್ಯ ಪರ್ಜನ್ಯವತ್।" ಈ ಅರ್ಥದ ಕವಿತೆಯಲ್ಲಿಯ ಇಲ್ಲವೆ ವೇದಾಂತದಲ್ಲಿಯ ವಾಕ್ಯಗಳು ಹೇಗೆ ನಮ್ಮ ಬಾಯಲ್ಲಿ ಸುತ್ತಾಡುತ್ತಿರುವುವೊ, ಹಾಗೆಯೆ "ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ। ಗುರುದೇವ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ" ಅಥವಾ "ವಿತರತಿ ಗುರುಃ ಪ್ರಾಜ್ಞೇ ವಿದ್ಯಾಂ ಯಥೈವ ತಥಾ ಜಡೇ" ಎಂಬರ್ಥದ ಮೋಕ್ಷ ಮತ್ತು ಗುರುವಿನ ಸಂಬಂಧದ ಸುಭಾಷಿತಗಳು ಹಾಗೂ ಅವನ ವಿದ್ಯಾದಾನಪದ್ಧತಿಯ ಸಂಬಂಧದ ವಾಕ್ಯಗಳು, ಲೌಕಿಕ ವಿದ್ಯೆಯ ಸಂಬಂಧದಲ್ಲಿಯೂ ಮತ್ತು ಆ ವಿದ್ಯೆಯನ್ನೀಯುವವರ ಸಂಬಂಧದಲ್ಲಿಯೂ ನಮ್ಮ ಮುಖದಿಂದ ಹೊರಡುತ್ತವೆ; ಇಲ್ಲವೆ ನಾಲಗೆಯ ತುದಿಯಲ್ಲಿ ನಲಿದಾಡುತ್ತಿರುತ್ತವೆ. ಎಲ್ಲರಿಗೂ ಒಂದೇ ರೀತಿಯ (ಪದ್ಧತಿಯ) ಶಿಕ್ಷಣ ಉಪಯುಕ್ತವಾಗಬಹುದೆಂದೂ, ಸರ್ವಸಾಧಾರಣವಾಗಿ ಎಲ್ಲರ ಬುದ್ಧಿಮತ್ತೆ ಒಂದೇ ತೆರನಾಗಿರುತ್ತದೆಂದೂ ನಾವು ಭಾವಿಸುತ್ತೇವೆ. ನಮ್ಮ ಮಕ್ಕಳ ಶಾಲೆಗಳು ಪಾಶ್ಚಿಮಾತ್ಯ ಪದ್ಧತಿಯವು; ಅಭ್ಯಾಸಕ್ರಮ ಪಾಶ್ಚಿಮಾತ್ಯ ಪದ್ಧತಿಯದು. ಆ ಅಭ್ಯಾಸಕ್ರಮವನ್ನು ಹೇಳಿಕೊಡುವ ಶಿಕ್ಷಕರೂ ಪಾಶ್ಚಿಮಾತ್ಯ ಪದ್ಧತಿಗನುಸರಿಸಿ ಶಿಕ್ಷಣವನ್ನು ಪಡೆದವರು; ಅವರು ಕಲಿಸುವ ಧ್ಯೇಯವೂ ಪಾಶ್ಚಿಮಾತ್ಯ ಪದ್ಧತಿಯದೆ. ಆದರೆ, ಅವರಲ್ಲಿ ಹೊಸ ಹೊಸ ಸುಧಾರಣೆಗಳಾಗಬೇಕು— ಎಂದೊಡನೆಯೆ, ಒಮ್ಮಿಂದೊಮ್ಮೆ ಪೌರ್ವಾತ್ಯ ಮನಸ್ಸು ಜಾಗ್ರತವಾಗಿ, ಹೊಸ ಪ್ರಯೋಗಕ್ಕೆ ಮಾತ್ರ ಸಾಕಷ್ಟು ವಿರೋಧವನ್ನು ವ್ಯಕ್ತಪಡಿಸುತ್ತದೆ. ಇಲ್ಲಿಯ ವರೆಗೆ ನಮ್ಮ ಶಿಕ್ಷಣದ ಧ್ಯೇಯವನ್ನು ನಿಶ್ಚಯಿಸುವುದಕ್ಕೆ, ಹೊಸ ಹೊಸ ಪ್ರಯೋಗಗಳನ್ನು ಮಾಡುವುದಕ್ಕೆ ನಮಗೆ ಸಾಕಷ್ಟು ಸ್ವಾತಂತ್ರ್ಯವಿದ್ದಿಲ್ಲ. ಆದರೆ ಈಗ ಶಿಕ್ಷಣದ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ, ಆದರ್ಶಶಿಕ್ಷಣದ ವ್ಯವಸ್ಥೆಯನ್ನು ಮಾಡುವುದಕ್ಕೆ ಮತ್ತು ಪರದೇಶಗಳಲ್ಲಿಯ ಯಶಸ್ವೀ ಪ್ರಯೋಗಗಳನ್ನು ಒಂದೊಂದಾಗಿ ಬಳಸುವುದಕ್ಕೆ — ಸಾಕಷ್ಟು ಸ್ವಾತಂತ್ರ್ಯವೂ ಸಮಯವೂ ಸಿಕ್ಕಿದೆ. ಎಂದಮೇಲೆ ಪ್ರಗತಿಪರ ದೇಶಗಳಲ್ಲಿಯ ಆದರ್ಶಶಿಕ್ಷಣವು ಯಾವ ಯಾವ ರೀತಿಯದಿದೆ — ವಿಶೇಷವಾಗಿ ಪ್ರಾಥಮಿಕ ಶಿಕ್ಷಣವು ಯಾವ ಪದ್ಧತಿಯದಿದೆ—ಶಿಶುಶಿಕ್ಷಣ ಅಥವಾ ಬಾಲಶಿಕ್ಷಣ ಎಷ್ಟು ಮಹತ್ತ್ವದ್ದಾಗಿ ಪರಿಗಣಿಸಲ್ಪಡುತ್ತಿದೆ—ಎಂಬುದರ ಕಡೆಗೆ ಲಕ್ಷ್ಯಕೊಡುವುದು ಅಗತ್ಯದ್ದಾಗಿದೆ. ಎಲ್ಲ ಮುಂದುವರೆದ ದೇಶಗಳಲ್ಲಿ, ರಶಿಯಾ ಮತ್ತು ಅಮೇರಿಕಾ ಈ ಎರಡೂ ರಾಷ್ಟ್ರಗಳು, ಶಿಕ್ಷಣಕ್ಷೇತ್ರದಲ್ಲಿ ಅತ್ಯಂತವಾಗಿ ಮುಂದುವರೆದಿವೆ. ಅಮೇರಿಕೆಯಲ್ಲಿಯ ಸಂಯುಕ್ತಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ ಕಲಿಸುವ ಶಾಲೆಗಳಲ್ಲಿ, ಹೊಸರೀತಿಯ ಕೆಲವು ಶಾಲೆಗಳು ಹುಟ್ಟಿ

* ಮೂಲ ಇಂಗ್ಲಿಷ್ ಲೇಖನವನ್ನು ಕನ್ನಡಿಸಿದವರು ಶ್ರೀ. ಸಗರ ಕೃಷ್ಣಾಚಾರ್ಯ ಬಿ. ಎ. ಮುಖ್ಯಾಧ್ಯಾಪಕ ರಂಗಂಪೇಟ ಅವರು.

ಸಂ. ಜ.

ಕೊಂಡಿವೆ. ಅವುಗಳಿಗೆ "ಬುದ್ಧಿವಂತ ಮಕ್ಕಳ ಶಾಲೆ" ಎಂದು ಕರೆಯುವುದು ಸೂಕ್ತವಾಗಿದೆ. ರಶಿಯದಲ್ಲಿ ಈ ಬಗೆಗೆ ಮಾಹಿತಿ ಸಿಗುತ್ತಿದ್ದರೂ, ಎಷ್ಟೋ ಜನರಿಗೆ ಆ ಉಕ್ಕಿನ ಪರದೆಯ ಹಿಂದಿನ ಸಂಗತಿಗಳ ಸಂಬಂಧದಲ್ಲಿ ಸಂಶಯವಿದೆ; ಆದಕಾರಣ ಯಾವ ತರದ ನಿರ್ಬಂಧವೂ ಇರದ ರಾಷ್ಟ್ರದಲ್ಲಿಯ ಮಾಹಿತಿಯನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ.

'ಒಂದೇ ವರ್ಗದಲ್ಲಿ ಒಬ್ಬನೇ ಶಿಕ್ಷಕನ ಹತ್ತಿರ, ಒಂದೇ ಪರಿಸ್ಥಿತಿಯಲ್ಲಿ ಶಿಕ್ಷಣಹೊಂದುತ್ತಿರುವ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ವ್ಯತ್ಯಾಸ ಕಂಡು ಬರುತ್ತಿದ್ದುದರಿಂದ, ಪ್ರತಿಯೊಬ್ಬನ ನಿಸರ್ಗದತ್ತ ಬುದ್ಧಿಯ ಪ್ರಮಾಣ ಬೇರೆಬೇರೆಯಾಗಿರುತ್ತದೆ!' ಎಂಬ ಅಭಿಪ್ರಾಯ ಬಹುದಿನಗಳಿಂದ ರೂಢಿಯಲ್ಲಿತ್ತು. ಆದರೆ ಯಾವ ಪ್ರಕಾರ ರೋಗಿಯ ಜ್ವರ ಕಡಮೆ ಅಥವಾ ಹೆಚ್ಚು ಎಂದರೆ ಎಷ್ಟು? ಇಲ್ಲವೆ ಮಳೆ ಕಡಮೆ ಅಥವಾ ಹೆಚ್ಚು ಎಂದರೆ ಯಾವ ಪ್ರಮಾಣದ ಮೇಲೆ?— ಎಂಬುದನ್ನು, ನಿಶ್ಚಿತರೀತಿಯಿಂದ ಹೇಳಲು ಮೊದಮೊದಲ ಹೇಗೆ ಬರುತ್ತಿದ್ದಿಲ್ಲವೋ, ಹಾಗೆಯೇ ಬುದ್ಧಿಯು ಎಷ್ಟು ತೀಕ್ಷ್ಣ ಅಥವಾ ಮಂದ ಎಂಬುದನ್ನೂ ನಿಶ್ಚಿತ ರೀತಿಯಿಂದ ತಿಳಿಸುವುದು ಸಾಧ್ಯವಾಗಿರಲಿಲ್ಲ; ಆದರೆ ಶಾಸ್ತ್ರೀಯಯುಗದಲ್ಲಿ ಜ್ವರ ಮತ್ತು ಪರ್ಜನ್ಯದ ಪ್ರಮಾಣ ಗೊತ್ತುಪಡಿಸಲಿಕ್ಕೆ ಬರುತ್ತಿರುವಂತೆ, ವಿದ್ಯಾರ್ಥಿಗಳ ಬುದ್ಧಿಯ ಪ್ರಮಾಣವನ್ನೂ ಗೊತ್ತುಪಡಿಸಲಿಕ್ಕೆ ಸಾಧ್ಯವಾಗಿದೆ. ಆದರಿಂದ ಈಗ, ಪ್ರತಿಯೊಬ್ಬ ವಿದ್ಯಾರ್ಥಿಯ ಬುದ್ಧಿಯ ಗುಣಾಂಕವನ್ನು ನಿಶ್ಚಯಿಸುವುದೂ ಸಾಧ್ಯವಾಗಿದೆ.

ಮೊದಮೊದಲು ೧೯೦೫ರಲ್ಲಿ, ಫ್ರೆಂಚ್ ಮನಶ್ಶಾಸ್ತ್ರಜ್ಞ 'ಬೀನೆ' ಎಂಬವನು ಬುದ್ಧಿಮಾಪನ ಶಾಸ್ತ್ರಕ್ಕೂ ಮತ್ತು ಅದರ ಪದ್ಧತಿಗೂ ಒಂದು ನಿಶ್ಚಿತರೂಪವನ್ನು ತಂದು ಕೊಟ್ಟನು. ಈಗ ಕಳೆದ ೪೦-೪೫ ವರ್ಷಗಳಲ್ಲಿ, ಈ ಶಾಸ್ತ್ರದ ಮೂಲಕ ಶಿಕ್ಷಣಪದ್ಧತಿಯಲ್ಲಿ ಹೆಚ್ಚು ಕ್ರಾಂತಿಯುಂಟಾಗಿದೆ. ಈ ಮೂಲಕ ೩ ರಿಂದ ೧೩ ವರ್ಷ ವಯಸ್ಸಿನ ವರೆಗೆ, ಪ್ರತಿಯೊಂದು ವಯಸ್ಸಿನ ಮಗುವಿನ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತದೆ. ಬುದ್ಧಿಮಾಪನದ ಪರೀಕ್ಷೆಗಳನ್ನು ೧೮ ತಿಂಗಳ ವಯಸ್ಸಿನ ಮಕ್ಕಳ ಮೇಲೆ ನಡೆಸಲಾಗುತ್ತದೆ. ಈ ರೀತಿ ಪ್ರತಿ ೫ ತಿಂಗಳಿಗೊಂದು ಪರೀಕ್ಷೆಯಂತೆ, ಒಟ್ಟು ೯-೧೦ ಪರೀಕ್ಷೆಗಳನ್ನು, ವಯಸ್ಸಿನ ೭೧ನೆಯ ತಿಂಗಳ ಪರ್ಯಂತವೂ ತೆಗೆದುಕೊಳ್ಳಲು ಬರುತ್ತದೆ; ಮತ್ತು ಈ ಪರೀಕ್ಷೆಗಳ ಮೇಲಿಂದ ಆಯಾ ವಿದ್ಯಾರ್ಥಿಯ ಬುದ್ಧಿಮಾಪನವು ಸಾಧ್ಯವಾಗುತ್ತದೆ. ಈ ಮಾಪನದಿಂದ, ಆಗಿರುವ ವಯಸ್ಸು ಮತ್ತು ಬೌದ್ಧಿಕ ವಯಸ್ಸಿನಲ್ಲಿಯ ಅಂತರ ತಟ್ಟನೆ ತಿಳಿದುಬಿಡುತ್ತದೆ— ಮತ್ತು ಅವಶ್ಯಕನುಸರಿಸಿ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಶಕ್ಯವಾಗುತ್ತದೆ. ಇಷ್ಟೇ ಅಲ್ಲದೆ, ಸಮಾನ ಬುದ್ಧಿಯುಳ್ಳ ಮಕ್ಕಳ ವರ್ಗವನ್ನು ಸ್ಥಾಪಿಸಲು ಅನುಕೂಲವಾಗುತ್ತದೆ.

ಈಪ್ರಕಾರ ಪರೀಕ್ಷಣದ ಪ್ರಮಾಣ ತೆಗೆದುಕೊಂಡು, ಶಾಸ್ತ್ರಜ್ಞರು ಹದಿನಾರು ವರ್ಷಗಳ ವರೆಗೆ ಬುದ್ಧಿಯು ವಿಕಾಸಹೊಂದುತ್ತಿರುತ್ತದೆಯೆಂದು ನಿಶ್ಚಯಿಸಿದ್ದಾರೆ. ಬುದ್ಧಿಯ ಬದಲಾವಣೆಯ ಪ್ರಕಾರ ಶಿಕ್ಷಣವಿತ್ತರೆ, ಅದರಿಂದ ಲಾಭವಾಗುವುದಷ್ಟೇ ಅಲ್ಲದೆ, ರಾಷ್ಟ್ರದ ಬೌದ್ಧಿಕಸಂಪತ್ತಿನ ಉಪಯೋಗವೂ ಅತ್ಯಂತ ಯೋಗ್ಯರೀತಿಯಲ್ಲಾದಂತಾಗುವದು. ಪಾಶ್ಚಾತ್ಯ ಶಿಕ್ಷಣತಜ್ಞರಾದ ಸಲಿ, ಪಿಯರ್‌ಸನ್, ಗಾಲ್ಟನ್, ಸ್ಪಿಯರ್‌ಮನ್, ಸಿರಿಯಲ್ ಬರ್ಟ್, ಬೀನೆ ಮತ್ತು ಟರ್ಮನ್ ಮುಂತಾದವರು, ಬುದ್ಧಿಮಾಪನದ ಸಾಧನಗಳನ್ನು ಹುಡುಕಿ ತೆಗೆಯಲು ಪ್ರಾರಂಭಿಸಿದರು. ಭಾರತದಲ್ಲಿ ಪ್ರೊ. ಡಾ. ವಿ. ವಿ. ಕಾಮತ್ ಅವರು ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿ ೧೯೩೪ರಲ್ಲಿ, ಹಿಂದೀ ಬಾಲಕರ ಸಲುವಾಗಿ 'ಬೀನೆಪ್ರಮಾಣ' ಸಿದ್ಧಪಡಿಸಿದರು. ಮತ್ತು ಡಾ ರಾಯಿಸ್ ಅವರು ೧೯೨೯ರಲ್ಲಿ ಉರ್ದು ಮತ್ತು ಪಂಜಾಬೀ ಭಾಷೆಯಲ್ಲಿ, ಹಿಂದುಸ್ತಾನೀ 'ಬೀನೆ' ಪ್ರಮಾಣವನ್ನು ತಯಾರಿಸಿದರು. ಒಬ್ಬ ಹುಡುಗನ ಶಾರೀರಿಕ ವಯಸ್ಸು ೭ ವರ್ಷದ್ದಿದ್ದರೆ, ಮಾನಸಿಕ ವಯಸ್ಸು ಐದುವರ್ಷದ್ದಿರಬಹುದು. ಬುದ್ಧಿಮಾಪನದ ರೀತಿಯನ್ನು ನಿಶ್ಚಯಿಸುವುದಕ್ಕೂ, ಬೌದ್ಧಿಕ ಗುಣಾಂಕವನ್ನು ತೆಗೆಯುವುದಕ್ಕೂ, ಬೌದ್ಧಿಕ ವಯಸ್ಸನ್ನು ಶಾರೀರಿಕ ವಯಸ್ಸಿನಿಂದ ಭಾಗಿಸಿ, ನೂರರಿಂದ ಗುಣಿಸಿದರೆ, ಆ ಸಂಖ್ಯೆ ಬರುತ್ತದೆ. ಮೇಲಿನ ಉದಾಹರಣೆಯಲ್ಲಿಯ ಬಾಲಕನ ಗುಣ ೭೧ ಬಂದರೆ, ಇದರ ವಿರುದ್ಧ ಎರಡನೆಯ ಬುದ್ಧಿವಂತಬಾಲಕನ ಗುಣ ೧೪೨.೮ ಬರಬಹುದು. ಬಾಲಕರ ಬೌದ್ಧಿಕವರ್ಗೀಕರಣದ ಪ್ರಕಾರ ಬುದ್ಧಿಯ ಏಳು ಮಟ್ಟಗಳಿವೆ: ಅಲೌಕಿಕ ಬುದ್ಧಿ, ಕುಶಾಗ್ರಬುದ್ಧಿ, ಮಧ್ಯಮಬುದ್ಧಿ, ಜಡಬುದ್ಧಿ, ನಿರ್ಬುದ್ಧ! ಬುದ್ಧಿಮಾಪನದ ನಂತರ ಟರ್ಮನ್ ಮತ್ತು ಬರ್ಟ್ ಇವರಿಗೆ ಬುದ್ಧಿಗುಣಾಂಕಗಳ ಪ್ರತಿಶತ ಪ್ರಮಾಣವು ಈ ಮುಂದೆ ತಿಳಿಸಿದಂತೆ ದೊರಕಿತು. ಟರ್ಮನ್ ಪ್ರಮಾಣದಿಂದ ಬುದ್ಧಿಗುಣಾಂಕ ೧೪೦ರ ಮೇಲೆ ಇದ್ದವರು, ೧೦೦ಕ್ಕೆ ಒಂದರಂತೆ ಇದ್ದರೆ 'ಬರ್ಟ್'ನ ಪ್ರಮಾಣದಿಂದ ನೂರಕ್ಕೆ ಎರಡು. ಟರ್ಮನ್ ಪ್ರಮಾಣದ ಪ್ರಕಾರ ೧೨೦ ರಿಂದ ೧೪೦ ಬುದ್ಧಿಗುಣಾಂಕವನ್ನು ಪಡೆದ ಮಕ್ಕಳು ನೂರಕ್ಕೆ ಐದರಂತೆ ಇದ್ದರೆ 'ಬರ್ಟ್'ನ ಪ್ರಮಾಣದ ಪ್ರಕಾರ ನೂರಕ್ಕೆ ಹತ್ತು. ಇದರ ಮೇಲಿಂದ ಅಲೌಕಿಕ ಬುದ್ಧಿಮತ್ತೆಯ ಮಕ್ಕಳು ನೂರಕ್ಕೆ ಒಂದೆರಡು ಇದ್ದರೆ, ೭೦ಕ್ಕಿಂತ ಕಡಮೆ ಬುದ್ಧಿಗುಣಾಂಕವನ್ನು ಪಡೆವ ನಿರ್ಬುದ್ಧಮಕ್ಕಳೂ ಒಂದೆರಡು ಅಷ್ಟೆ! ಉಳಿದುವುಗಳು ಕ್ರಮವಾಗಿ ನೂರಕ್ಕೆ ೫/೧೦, ೨೪ ಅಥವಾ ೩೮; ೬೦ ಅಥವಾ ೩೮; ೧೪ ಅಥವಾ ೧೨; ೫ ಅಥವಾ ೨ ಹೀಗೆ ಬರುತ್ತದೆ. ಮಂದಬುದ್ಧಿಯ ಅಥವಾ ಹಿಂದುಳಿದ ಜಡಬುದ್ಧಿಯ ಮಕ್ಕಳ ಸಲುವಾಗಿ ಪ್ರತ್ಯೇಕಶಾಲೆಗಳು ಮತ್ತು ವಿಶೇಷ ಪ್ರಕಾರದ ವರ್ಗಗಳು ಹಾಗೂ ಶಿಕ್ಷಣಪದ್ಧತಿಯು ಅಸ್ತಿತ್ವದಲ್ಲಿ ಬಂದಿದೆ; ಪ್ರಯೋಗಗಳೂ ನಡೆದಿವೆ. ಆದರೆ ಹೆಚ್ಚು ಬುದ್ಧಿವಂತ ಮಕ್ಕಳ ಸಲುವಾಗಿ ಸ್ವತಂತ್ರ ಶಾಲೆಗಳನ್ನು ತೆಗೆಯುವ ಪ್ರಯೋಗ ಪ್ರಾಯಶಃ ಆಗಿಲ್ಲ. ನಮ್ಮಲ್ಲಿಯ ಮತ್ತು ಪರದೇಶಗಳಲ್ಲಿಯ ಶಾಲೆಗಳಲ್ಲಿ, ಸರ್ವಸಾಮಾನ್ಯವಾಗಿ ಎಲ್ಲ ಹುಡುಗರೂ ಒಂದೆ ಕಡೆಗೆ ಕಲಿಯುತ್ತಿದ್ದು, ಶಿಕ್ಷಕನ ಅಧ್ಯಾಪನ ಕೌಶಲ್ಯಕ್ಕನುಸಾರವಾಗಿ, ಕಾರಖಾನೆಯಿಂದ ಹೊರಬೀಳುವ ಮಾಲಿನಂತೆ, ಮಧ್ಯಮಪ್ರತಿಯ ಈ ಒಳ್ಳೆಯ ಹಾಗೂ ಕೆಟ್ಟಮಾಲು ಹೊರಗೆ ಬೀಳುತ್ತಿರುತ್ತದೆ.

ಆದರ್ಶ ಶಿಕ್ಷಣದ ದೃಷ್ಟಿಯಿಂದ ನೋಡಿದಲ್ಲಿ, ಆದರ್ಶ ಋಗ್ಣಾಲಯದಲ್ಲಿ ಪ್ರತಿಯೊಬ್ಬ ರೋಗಿಗೂ ಒಬ್ಬ ಡಾಕ್ಟರನಿದ್ದಂತೆ, ಪ್ರತಿಯೊಬ್ಬ ಹುಡುಗನಿಗೂ ಒಬ್ಬ ಶಿಕ್ಷಕ ಅಥವಾ ಮಾರ್ಗದರ್ಶಕನಿರುವುದು ಅಗತ್ಯದ್ದಾಗಿದೆ. ಆದರೆ ಇಂತಹ ಆದರ್ಶ ಅಸ್ತಿತ್ವದಲ್ಲಿ ಬರುವುದು ಯಾವ ಕಾಲಕ್ಕೂ ಸಾಧ್ಯವಿಲ್ಲ. ಯಾಕೆಂದರೆ ಎಂತಹ ಸಂಪತ್ಸಮೃದ್ಧ ರಾಷ್ಟ್ರವೂ ಈ ರೀತಿಯ ವ್ಯವಸ್ಥೆಯನ್ನು ಮಾಡಲಾರದು. ಇದಕ್ಕೆ ಇನ್ನೊಂದು ಉಪಾಯವೆಂದರೆ, ಮಧ್ಯಮಬುದ್ಧಿ, ಶೀಘ್ರ ಬುದ್ಧಿ, ಮತ್ತ ಸ್ವಲ್ಪಮಂದಬುದ್ಧಿಯ ಮಕ್ಕಳನ್ನು ಒಂದೆಡೆಗೆ, ಮತ್ತು ಅಲೌಕಿಕ ಹಾಗೂ ಕುಶಾಗ್ರಬುದ್ಧಿಯ ಮಕ್ಕಳನ್ನು ಇನ್ನೊಂದೆಡೆಗೆ ಸೇರಿಸಬಹುದು. ಇದೇ ರೀತಿ ನಿರ್ಬುದ್ಧ ಇಲ್ಲವೆ ಜಡಬುದ್ಧಿಯ ಮಕ್ಕಳನ್ನು ಒಂದೆಡೆಗೆ ಸೇರಿಸುವ ವ್ಯವಸ್ಥೆಯನ್ನಾದರೂ ಮಾಡಬೇಕು. ಈ ರೀತಿಯ ವ್ಯವಸ್ಥೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡುಬರುತ್ತದೆ; ಆದರೆ ನಮ್ಮಲ್ಲಿ ಮಾತ್ರ ಆಕಳು, ಕುದುರೆ ಕತ್ತೆ ಎಲ್ಲವನ್ನೂ ಒಂದೆಡೆಗೇ ಕಟ್ಟುವುದಲ್ಲದೆ, ಒಂದೇ ರೀತಿಯ ಶಿಕ್ಷಣವನ್ನು ಕೊಡಲಾಗುತ್ತದೆ. ಹಿಂದಕ್ಕೆ ಯಕ್ಷನು ಧರ್ಮರಾಜನಿಗೆ, "ಜಗತ್ತಿನಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಆಶ್ಚರ್ಯ ಯಾವುದು?" ಎಂದು ಪ್ರಶ್ನಿಸಿದಾಗ, ಮಹಾಭಾರತದಲ್ಲಿಯ ಧರ್ಮರಾಜನು ಒಂದು ಸಮರ್ಪಕ ಉತ್ತರವನ್ನಿತ್ತಿದ್ದನು. ಆದರೆ ಶಿಕ್ಷಣಕ್ಷೇತ್ರದಲ್ಲಿ ಒರ್ವ ಯಕ್ಷನು, ಆಧುನಿಕ ಧರ್ಮರಾಜನನ್ನು ಪ್ರಶ್ನಿಸಿದರೆ, 'ಇಬ್ಬಿಬ್ಬರು ಹುಡುಗರ ಜೋಡಿಗಳು ತಮ್ಮ ತಮ್ಮ ಬಲ-ಎಡ ಕಾಲುಗಳನ್ನು ಒಂದೆಡೆಗೆ ಕಟ್ಟಿಕೊಂಡು ಮೂರು ಕಾಲಿನ ಓಟ ಓಡಲಾರರು; ಸರಿಯಾಗಿ ಪಲಾಯನ ಮಾಡಲಾರರು—ಎಂಬುದನ್ನು ನಾನು ನೋಡುತ್ತೇನೆ.' ಎಂದು ಉತ್ತರಿಸಬಹುದು. ಆದರೆ ಶಾಲೆಯಲ್ಲಿಯ ಒಂದು ವರ್ಗ-೩೦–೪೦ ಹುಡುಗರನ್ನು ಒಂದೆಡೆಗೆ ಕಟ್ಟಿಹಾಕಿದರೂ, ಅವರು ಶಿಕ್ಷಣದಲ್ಲಿ ಪ್ರಗತಿಹೊಂದಬಹುದು; ಮತ್ತು ಅಭ್ಯಾಸದ ಓಟ ಓಡಬಹುದು ಇದು ಜಗತ್ತಿನಲ್ಲಿಯ ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯದ ಸಂಗತಿಯಾಗಿದೆ. ಎಂದ ಮೇಲೆ, ಈ ರೀತಿ ಬೌದ್ಧಿಕ ದರ್ಜೆಯಿಂದ ಹೀನ, ಕನಿಷ್ಠ ಮತ್ತು ಅಪ್ರಯೋಜಕ (ತೆಗೆದುಹಾಕಲು ಯೋಗ್ಯರಾದ) ಮಕ್ಕಳ ಸಂಗಡ, ಬುದ್ಧಿವಂತ ಮತ್ತು ಮಧ್ಯಮಬುದ್ಧಿಯ ಮಕ್ಕಳು ಕುಳಿತು ಅಭ್ಯಸಿಸಬೇಕೆಂದರೆ, ರಾಷ್ಟ್ರದ ಬುದ್ಧಿರೂಪೀಶಕ್ತಿಯ ಅಪವ್ಯಯವಾದಂತೆಯೆ! ಈ ಮೂರುಕಾಲಿನ ಓಟದಲ್ಲಿ ಯಾರೂ ಮುಂದಕ್ಕೆ ಹೋಗದಿದ್ದುದರಿಂದ, ರಾಷ್ಟ್ರದ ಹಾನಿಯಾಗುತ್ತಲಿದೆ. ಸದ್ಯದ ಶಾಲೆಗಳ ಅಭ್ಯಾಸಕ್ರಮಕ್ಕನುಸರಿಸಿ ಪಾಠ ಹೇಳಿಕೊಡುತ್ತಿರುವಾಗ, ಅಧ್ಯಾಪಕನು, ೫೦ ಮಕ್ಕಳ ಒಂದು ವರ್ಗದಲ್ಲಿ, ಕನಿಷ್ಠ ೩೦ ಮಂದಬುದ್ಧಿಯ ಮಕ್ಕಳಿಗೆ ಪಾಠ ಹೇಳಿಕೊಡುತ್ತಿರುತ್ತಾನೆ. ಇದರಿಂದ ಉಳಿದ ೨೦ ಮಕ್ಕಳ ಆಯುಷ್ಯದ ಅಪವ್ಯಯವಾಗುತ್ತಿರುತ್ತದೆ. ಅವರ ಕಡೆಗೆ ಶಿಕ್ಷಕರೂ ಲಕ್ಷ್ಯಕೊಡುವುದಿಲ್ಲ; ಪಾಲಕರೂ ವಿಚಾರಮಾಡುವುದದಿಲ್ಲ. ಅಲೌಕಿಕ ಮತ್ತು ಕುಶಾಗ್ರಬುದ್ಧಿಯ ಮಕ್ಕಳ ಸಲುವಾಗಿ, ಅಮೇರಿಕೆಯಲ್ಲಿ ಕೂಡ ಮೊನ್ನೆಮೊನ್ನೆ ವ್ಯವಸ್ಥೆ ಮಾಡಲಾಗಿದೆ; ಮತ್ತು ಆ ಮೂಲಕ ಈ ಪ್ರಯೋಗದ ಕಡೆಗೆ ಎಲ್ಲರ ಲಕ್ಷ್ಯವನ್ನೂ ಸೆಳೆಯಲಾಗಿದೆ. "ಬುದ್ಧಿವಂತಮಕ್ಕಳಿಗೆ" ಎಂಬ ಒಂದು ಪ್ರಾಥಮಿಕ ಶಿಕ್ಷಣಾಲಯದ ವಿಚಾರವನ್ನು, ಟಾಯಿಮ್ಸ್ (ಲಂಡನ್)ನ ಶೈಕ್ಷಣಿಕ ಪುರವಣಿಯಲ್ಲಿ ೧೯೫೩, ಆಗಸ್ಟ್ ದಿನಾಂಕ ೩೧ರಂದು ಪ್ರಕಟಿಸಲಾಗಿದೆ. ಉಪಲಕ್ಷಣಾತ್ಮಕ ವೃತ್ತಿಯಿಂದ ಈ ಶಾಲೆಯ ಕಾರ್ಯಭಾರವನ್ನು ನಮ್ಮ ವಾಚಕರ ಅವಗಾಹನೆಗೆ ತರುವುದು ಹೆಚ್ಚು ಹಿತಾವಹವೂ, ಬೋಧಪ್ರದವೂ ಆಗಬಹುದು.

ಈ ಶಾಲೆಯ ಹೆಸರು "ಹಂಟರ್ ಕಾಲೇಜ್ ಪ್ರಾಥಮಿಕ ಶಾಲೆ" ಎಂದು ಇದೆ. ಇಲ್ಲಿ ಅಲೌಕಿಕ ಬುದ್ಧಿಮತ್ತೆಯ ಮಕ್ಕಳ ಸಲುವಾಗಿ ಯಾವ ರೀತಿಯ ಅಧ್ಯಾಪನ ಪದ್ಧತಿಯನ್ನು ಉಪಯೋಗದಲ್ಲಿ ತರುತ್ತಾರೆಂಬುದು ನೋಡತಕ್ಕುದಾಗಿದೆ. ಪೂರ್ವದಿಂದಲೆ ಈ ಶಾಲೆಯಲ್ಲಿ ಅಧ್ಯಾಪಕರ ಪ್ರಾತ್ಯಕ್ಷಿಕ ಪಾಠಗಳಾಗುತ್ತಿದ್ದು, ಅಧ್ಯಾಪಕ ಶಿಕ್ಷಣಾಲಯಕ್ಕೆ ಒಂದು ಪ್ರಯೋಗಶಾಲೆಯನ್ನೂ ಜೋಡಿಸಲಾಗುತ್ತಿತ್ತು. ಕಳೆದ ೭೫ ವರ್ಷಗಳಿಂದ ಈ ರೀತಿ ಪ್ರಚಾರದಲ್ಲಿದ್ದು, ಈಗ ೯ ವರ್ಷಗಳಿಂದ ಮಾತ್ರ ಈ ಶಾಲೆಯನ್ನು ಕೇವಲ ಬುದ್ಧಿವಂತ ಮಕ್ಕಳ ಶಿಕ್ಷಣದ ಸಲುವಾಗಿ ಕಾಯ್ದಿಡಲಾಗಿದೆ. ಮತ್ತು ಅಧ್ಯಾಪಕ ಶಿಕ್ಷಣಾಲಯದಲ್ಲಿ ಕಲಿಯುವ ಶಿಕ್ಷಕರೂ ಇಲ್ಲಿಗೆ ಬಂದು ಉತ್ತಮೋತ್ತಮ ಶಿಕ್ಷಣಪದ್ಧತಿಯ ಪರಿಚಯವನ್ನು ಹೊಂದುತ್ತಿರುತ್ತಾರೆ; ಅಲ್ಲದೆ ಬುದ್ಧಿವಂತ ಮಕ್ಕಳ ಶಾಲೆಯನ್ನು ಹೇಗೆ ನಡಿಸಿಕೊಂಡು ಹೋಗಬೇಕೆಂಬುದನ್ನೂ ಕಲಿತುಕೊಳ್ಳುತ್ತಾರೆ. ಮೇಧಾವಿ ಶಿಕ್ಷಕರಿಗೆ ಪ್ರತ್ಯಕ್ಷ ಪಾಠವನ್ನು ಕೊಡುವ ಸಂಧಿಯೂ ಸಿಕ್ಕುತ್ತದೆ. ಇಲ್ಲಿಯ ಪಾಠಪದ್ಧತಿ ಪ್ರತ್ಯೇಕ, ಪಾಠದ ಸಾಹಿತ್ಯವೂ ಪ್ರತ್ಯೇಕ, ಮತ್ತು ಅಭ್ಯಾಸಕ್ರಮವೂ ಪ್ರತ್ಯೇಕವಾಗಿದೆ.

ಪ್ರತಿವರ್ಷವೂ ಈ ಶಾಲೆಯಲ್ಲಿ ಪ್ರವೇಶಕ್ಕಾಗಿ ೨೦೦೦ ಅರಿಕೆಪತ್ರಗಳು ಬರುತ್ತವೆ; ಆದರೆ ಅವುಗಳಲ್ಲಿ ೫೦ ರಿಂದ ೭೫ ಹುಡುಗರನ್ನು ಆರಿಸಿಕೊಳ್ಳಲಾಗುತ್ತದೆ. ಒಟ್ಟು ಬಾಲಕರ ಸಂಖ್ಯೆಯನ್ನು ೪೫೦ ಕ್ಕಿಂತ ಮೇಲ್ಪಟ್ಟು ಇಟ್ಟುಕೊಳ್ಳಲಾಗುವುದಿಲ್ಲ. ಶಿಶುವರ್ಗದಿಂದ ಮೊದಲುಗೊಂಡು, ಎಂದರೆ ಒಂದುವರೆ, ಎರಡು ವರ್ಷದ ಮಕ್ಕಳಿಂದ ಮೊದಲ್ಗೊಂಡು ೬ನೆಯ ಇಯತ್ತೆಯ ವರೆಗಿನ ಮಕ್ಕಳೂ ಈ ಶಾಲೆಯಲ್ಲಿ ಓದುತ್ತಿರುತ್ತಾರೆ. ಮಕ್ಕಳ ಸರಾಸರಿ ವಯ ೩ರಿಂದ ೧೨ರ ವರೆಗೆ ಇರುತ್ತದೆ. ಪ್ರತಿಯೊಂದು ಪ್ರವೇಶಾಪೇಕ್ಷಿ ಮಗುವಿಗೆ, ಬೀನೆ ಪ್ರಮಾಣದ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಮೇಲೆಯೆ ಪ್ರವೇಶ ದೊರೆಯುತ್ತದೆ. ಅಲ್ಲದೆ ಈ ರೀತಿಯ ಪ್ರತಿಯೊಬ್ಬ ವಿದ್ಯಾರ್ಥಿಯ ಬುದ್ಧಿಗುಣಾಂಕವು ಕನಿಷ್ಠ ಲಕ್ಷ ೧೩೦ ಇರುವುದು ಅನಿವಾರ್ಯವಾಗಿದೆ. ಆದರೆ ಈ ಬೌದ್ಧಿಕವಯದ ಜೊತೆಗೆ ನಿಜವಾದ ವಯಸ್ಸು ಇರುವುದು ಅಗತ್ಯದ್ದಾಗಿರುತ್ತದೆ; ಸಮಾನ ಶಾರೀರಿಕ ವಯ ಹಾಗೂ ಸಮಾನ ಬೌದ್ಧಿಕ ವಯಸ್ಸಿನ ಬಾಲಕರು ಒಂದೇ ವರ್ಗದಲ್ಲಿ, ಮತ್ತು ಇದೇ ರೀತಿಯ ಹೆಣ್ಣುಮಕ್ಕಳು ಅದೇ ವರ್ಗದ ಪ್ರತ್ಯೇಕ ಗುಂಪಿನಲ್ಲಿ ಕುಳಿತುಕೊಳ್ಳುತ್ತಾರೆ. ಪ್ರವೇಶ ಕಾಲದಲ್ಲಿ ಯಾವಾಗಲೂ ಉಚ್ಚ ಬುದ್ಧಿ ಗುಣಾಂಕವನ್ನು ಪಡೆದವರಿಗೆ ಮೊದಲು ಮತ್ತು ೧೩೦ರ ವರೆಗೆ ಗುಣಾಂಕವನ್ನು ಪಡೆದ ಮಕ್ಕಳಿಗೆ

ಅನಂತರ ಹೀಗೆ ಕ್ರಮಾನುಸಾರ ಸ್ಥಳಾಪೇಕ್ಷೆಗನುಸರಿಸಿ ಪ್ರವೇಶ ದೊರೆಯುತ್ತದೆ. ಸಮಾಜದಲ್ಲಿಯ ಆರ್ಥಿಕ ವರ್ಗಗಳಿಗೆ ಇಲ್ಲಿ ಯಾವ ಮಹತ್ವವೂ ಇಲ್ಲ ಯಾವ ತರಗತಿಯ (ಬಡವ ಅಥವಾ ಶ್ರೀಮಂತ) ವಿದ್ಯಾರ್ಥಿಗಳಿಗೂ ಇಲ್ಲಿ ಪ್ರವೇಶವು ಸಾಧ್ಯವಿರುತ್ತದೆ. ಇಲ್ಲಿ ಪ್ರವೇಶ ದೊರೆಯುವುದಕ್ಕಿಂತ ಪೂರ್ವದಲ್ಲಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಶಾಲೆಯಲ್ಲಿ ಪ್ರವೇಶಿಸಿ ಶಿಕ್ಷಕನ ಪರಿಚಯ ಪಡೆದುಕೊಳ್ಳುವುದಲ್ಲದೆ, ತನ್ನ ಸಾಮಾಜಿಕಜೀವನ ಹಾಗೂ ಭಾವನೆಯ ಪೂರ್ಣಾಪೂರ್ಣತೆಯ ಪರಿಚಯವನ್ನು ಮಾಡಿಕೊಡುತ್ತಾನೆ ಸೇರಬಯಸುವ ಮಕ್ಕಳನ್ನು ಆರಿಸಿಕೊಳ್ಳುವುದಕ್ಕಿಂತ ಮುಂಚೆ, ಮಕ್ಕಳ ಗೃಹಸ್ಥಿತಿಯ ಮತ್ತು ಪರಿಸರದ ಆರ್ಥಿಕಮಾಹಿತಿ ಪಡೆಯುವ ನಿಮಿತ್ತದಿಂದ, ಕಮಿಟಿಯ ಸಭಾಸದರು ಅವರ ತಾಯಿ-ತಂದೆಗಳನ್ನು ಕಾಣುತ್ತಿರುತ್ತಾರೆ. ಈ ಮೂಲಕ ವಿಶಿಷ್ಟರೀತಿಯ ಮಕ್ಕಳೊಡನೆ ವಿಶಿಷ್ಟ ರೀತಿಯಿಂದ ನಡೆದುಕೊಳ್ಳಲು ಸುಲಭವಾಗುತ್ತದೆ. ಅಲ್ಲದೆ ಶಾಲೆಯಲ್ಲಿ ಮೊದಲಿನಿಂದಲೇ ಓದುತ್ತಿರುವ ಮಕ್ಕಳ ತಂಗಿ-ತಮ್ಮಂದಿರನ್ನು ಆರಿಸಿಕೊಳ್ಳುವಾಗ, ಹೆಚ್ಚು ಸೌಕರ್ಯವುಂಟಾಗುತ್ತದೆ. ಶಿಶುವರ್ಗದಲ್ಲಿ ೧೫ರಿಂದ ೨೦ ಮಕ್ಕಳಿದ್ದರೆ, ಮೇಲಿನ ತರಗತಿಗಳಲ್ಲಿ ಪ್ರತಿಯೊಂದಕ್ಕೆ ೨೫ ರಿಂದ ೨೮ ರ ವರೆಗೆ ಇರುತ್ತಾರೆ. ಸಾಧಾರಣವಾಗಿ ಪ್ರತಿಯೊಂದು ವರ್ಗದಲ್ಲಿ ಹುಡುಗ-ಹುಡುಗಿಯರ ಸಂಖ್ಯೆಯನ್ನು ಸಮಪ್ರಮಾಣದಲ್ಲಿಡಲು ಪ್ರಯತ್ನಿಸಲಾಗುತ್ತದೆ

ಈ ಮನೋವೃತ್ತಿಯ ಮಕ್ಕಳ ಪ್ರಾಥಮಿಕ ಶಿಕ್ಷಣವು ಬಹು ಲೀಲೆಯಿಂದ ಮುಗಿಯುತ್ತದೆ. ಅನಂತರ ನ್ಯೂಯಾರ್ಕ್ ನಗರದ ಕನಿಷ್ಠ (ಸಾಮಾನ್ಯ) ಹಾಯಸ್ಕೂಲಿನಲ್ಲಿ ಈ ಮಕ್ಕಳಿಗೆ ಪ್ರವೇಶ ದೊರೆಯುತ್ತದೆ. ಈ ಸಮಯದಲ್ಲಿ ಅವರ ದೇಹವಯಸ್ಸು ಸಾಮಾನ್ಯ ಬುದ್ಧಿಯ ಮಕ್ಕಳಗಿಂತಲೂ ಎಷ್ಟೋ ಕಡಮೆಯದಾಗಿರುತ್ತದೆ. ಕೆಲವು ವೇಳೆ ಹಾಯಸ್ಕೂಲಿನಲ್ಲಿ ಸೇರಿಸುವುದಕ್ಕೆ ಪ್ರಯತ್ನಿಸದೆ, ಈ ಉಚ್ಚ ಮನೋಧರ್ಮದ ಮಕ್ಕಳಿಗೆ ಅವರ ಮೊದಲಿನ ಶಿಕ್ಷಕರಿಂದಾಗಲಿ ಇಲ್ಲವೆ ಇನ್ನಿತರ ಶಿಕ್ಷಕರಿಂದಾಗಲಿ, ಅಥವಾ ಶಾಲೆಯ ಹೊರಗಣ ವಿವಿಧ ಚಟುವಟಿಕೆಗಳಿಂದಾಗಲಿ ಅವರ ಅನುಭವವನ್ನು ಹೆಚ್ಚಿಸಲಾಗುತ್ತದೆ. ಸಮೃದ್ಧಿಪಡಿಸಲಾಗುತ್ತದೆ. ಈ ಕಾರ್ಯದಲ್ಲಿ ಪಾಲಕರ ಸಹಕಾರವೂ ಇದ್ದೇ ಇರುತ್ತದೆ. ನಿತ್ಯದ ಕಾರ್ಯಕ್ರಮದಲ್ಲಿ ವಿಚಾರಶೀಲತೆಗೆ ಅನುವು ಇರುತ್ತದೆ ಆ ಮೂಲಕ ಕೆಲವು ಆರಿಸಿದ ವಿಷಯಗಳ ಮೇಲೆ ಅಥವಾ ಪ್ರಶ್ನೆಗಳ ಮೇಲೆ ಮಕ್ಕಳು ಹೆಚ್ಚು ಶ್ರಮ ತೆಗೆದುಕೊಳ್ಳುತ್ತಾರೆ. ನ್ಯೂಯಾರ್ಕ್‌ನಗರದ ಶಿಕ್ಷಣಮಂಡಲವು ನಿಯಮಿಸಿದ ಅಭ್ಯಾಸಕ್ರಮವನ್ನಂತೂ ಪೂರ್ಣವಾಗಿ ಮುಗಿಸಲೇ ಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಎರಡನೆಯ ಪ್ರಾಥಮಿಕಶಾಲೆಯಲ್ಲಾಗಲಿ, ಅಥವಾ ಕನಿಷ್ಠತರದ ಹಾಯಸ್ಕೂಲಿನಲ್ಲಾಗಲಿ ಆರು-ವರ್ಷಗಳ ಅಭ್ಯಾಸದನಂತರ ಬೇಕಾದಾಗ ಹೋಗುವ ಅಧಿಕಾರ ವಿರುತ್ತದೆ. ಆದರೆ ಅವರು ಇಲ್ಲಿಯವರೆಗೆ ಪಡೆದ ಜ್ಞಾನವನ್ನಳೆಯಲು ಪ್ರಮಾಣಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆಯೆ ಎರಡನೆಯ ಶಾಲೆಯಲ್ಲಿ ಸೇರಲು ಬರುತ್ತದೆ.

ಈ ಶಾಲೆಯ ಈಗಿನ ಪ್ರಿನ್ಸಿಪಾಲರು (ಪ್ರಮುಖ) ಫ್ಲಾರೆನ್ಸ್‌, ಎನ್. ಬುಮಚಾರವರು. ಪ್ರತಿಯೊಂದು ವರ್ಗಕ್ಕೂ ಒಬ್ಬೊಬ್ಬ ಶಿಕ್ಷಕ(ಶಾಸ್ತ್ರಾ)ರಿದ್ದಾರೆ. ಅವರನ್ನು ಉಚ್ಚಶಿಕ್ಷಣಮಂಡಲದಿಂದ ನೇಮಿಸಿದ ಪ್ರಮಾಣಾನುಸಾರ ಆರಿಸಿಕೊಳ್ಳಲಾಗುತ್ತದೆ. ಈ ಉಚ್ಚಶಿಕ್ಷಣಮಂಡಲವೇ ಈ ಶಾಲೆಯನ್ನು ನಡೆಸುತ್ತದೆ. ಶಿಕ್ಷಕ ಕನಿಷ್ಠ ಎಂ. ಎ. ಆದರೂ ಇರಲೇ ಬೇಕಾಗುತ್ತದೆ. ತರಗತಿಯ ಶಿಕ್ಷಕರ ವಿನಾ ವಿದ್ಯಾರ್ಥಿಶಿಕ್ಷಕರೂ (pupil teachers) ಅಧ್ಯಾಪನಕುಲದಿಂದ ಇಲ್ಲಿಗೆ ಬರುತ್ತಿರುತ್ತಾರೆ. ಮತ್ತು ಟರ್ಮಿನ ಅರ್ಧಕಾಲ ಈ ಶಾಲೆಯಲ್ಲಿ, ಉಳಿದರ್ಧಕಾಲ ಇನ್ನಿತರ ಶಾಲೆಗಳಲ್ಲಿ— ಈ ಪ್ರಕಾರ ಬರುತ್ತಿರುತ್ತಾರೆ. ವರ್ಗದಲ್ಲಿಯ ನಿಯೋಜಿತ ಮತ್ತು ಪರಿಪೂರ್ಣ ಅಭ್ಯಾಸಕ್ರಮಕ್ಕೆ ಪೂರಕವಾಗುವಂತೆ, ಈ ಕೆಳಗಣ ಪ್ರಕಾರದ ವಿಶಿಷ್ಟ ಅಭ್ಯಾಸವನ್ನೂ ಸೇರಿಸಲಾಗುತ್ತದೆ.

(೧) **ಕಲೆ ಮತ್ತು ಕಾರಖಾನೆ :—** ವೈಯಕ್ತಿಕ-ವಿಧಾಯಕ ಸ್ವರೂಪದ ಅಭಿರುಚಿಯ ವಿಕಾಸಕ್ಕಾಗಿ, ಇಲ್ಲಿಯ ಮಕ್ಕಳಿಗೆ ಅಗಣಿತ ಸಾಧನಗಳು ಉಪಯೋಗಿಸಲು ಸಿಗುತ್ತವೆ. ಕಾರಖಾನೆಯಲ್ಲಿಯ ಎಷ್ಟೋ ಕೆಲಸವನ್ನು ವಿಜ್ಞಾನಕ್ಕೆ ಸಂಬಂಧಿಸಲಾಗುತ್ತದೆ. ಕೊಠಡಿಯಿಂದ ಕೊಠಡಿಗೆ, ವರ್ಗದಿಂದ ವರ್ಗಕ್ಕೆ ಸಹಜವಾಗಿ ಎತ್ತಿಕೊಂಡು ಹೋಗುವಂತಹ ಯಂತ್ರಗಳನ್ನು ಇಡಲಾಗುತ್ತದೆ.

(೨) **ಶ್ರವಣ-ನೇತ್ರೇಂದ್ರಿಯಗಳ ಅನುಭವ :—** "ಜಗತ್ತಿನ ಜ್ಞಾನ" ಎಂಬ ವಿಷಯವನ್ನು ಎಷ್ಟೋ ವರ್ಷಗಳ ವರೆಗೆ ಇಡಲಾಗಿದ್ದಿತು. ಈಗ ಮಾತ್ರ "ಕಷ್ಟದಲ್ಲಿಯೂ ಕೂಡ" ಎಂಬ ವಿಷಯಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಜ್ಞಾನೇಂದ್ರಿಯಗಳ ಉಪಯೋಗವಾಗುತ್ತಿರುತ್ತದೆ. ಶಾಲೆಯ ತುಂಬೆಲ್ಲ ಈ ಕಾರ್ಯಕ್ರಮ ನಡೆದಿರುತ್ತದೆ. ಆದರೆ ಕೆಲಕೆಲವು ವರ್ಗಗಳಿಗೆ ಮಾತ್ರ ಇದು ವ್ಯವಸಾಯವಾಗಿರುತ್ತದೆ. ವಿದ್ಯಾರ್ಥಿಗಳು ಕೂಡ ಮುಂಬರುವ ಯೋಜನೆಯ ಮೇಲೆ ತಮ್ಮ ಮತವನ್ನು ಮಂಡಿಸಲೆಂಬುದೇ ಇದಕ್ಕೆ ಕಾರಣ.

(೩) **ಫ್ರೆಂಚ್ :—** ಸಾಧಾರಣವಾಗಿ ಎಂಟನೆಯ ವರ್ಷದಿಂದ ಪ್ರಾರಂಭಿಸಲಾಗುತ್ತದೆ; ಮತ್ತು ಪ್ರತಿಯೊಂದು ವರ್ಗಕ್ಕೆ ವಾರಕ್ಕೆರಡು ತಾಸಿನಂತೆ 'ಫ್ರೆಂಚ್' ಕಲಿಸಲಾಗುತ್ತದೆ.

(೪) **ಗಾಯನ :—** ಗಾಯನ ನಿರ್ಮಿತಿ ಮತ್ತು ರಸಜ್ಞತೆಯ ಬಗ್ಗೆ ಪೋಷಣೆ.

ಧ್ವನಿಮುದ್ರಿಕಾಸಂಗ್ರಹಾಲಯದಲ್ಲಿಯ ಧ್ವನಿಮುದ್ರಿಕೆಗಳು ಬೇಕಾದಾಗ ಪುಕ್ಕಟೆಯೂ, ಕೈಗಡವೂ ಸಿಕ್ಕುತ್ತವೆ. ಶಾಲೆಯಲ್ಲಿಯ ಪ್ರತಿಯೊಂದು ಕೊಠಡಿಯಲ್ಲಿ ಬಾನುಲಿ ಮತ್ತು ಫೋನೋಗ್ರಾಫ್ ಜೊತೆಯಾಗಿ ಇರುತ್ತವೆ. ಪಾಲಕಸಂಘವು ಇವುಗಳನ್ನು ಪೂರೈಯಿಸುತ್ತದೆ.

(೨೦೦ನೆಯ ಪುಟಕ್ಕೆ ಮುಂದುವರಿದಿದೆ)

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ **'ಮಹಾಲಿಂಗ'** ಕತೆಯನ್ನು ಕುರಿತು ಐದು ಜನರಿಂದಲೂ, **'ಭಕ್ತಸುದಾಮ'** ರೂಪಕವನ್ನು ಕುರಿತು ಎಂಟು ಜನರಿಂದಲೂ ವಿಮರ್ಶೆಗಳು ಬಂದಿವೆ.

'ಮಹಾಲಿಂಗ' ಕತೆಯ ವಿಮರ್ಶಕರು :

೧. ಶ್ರೀ. ಎಂ. ಎಸ್. ಜೋಶಿ, ಲಕ್ಷ್ಮೇಶ್ವರ, ೨. ಶ್ರೀಮತಿ ಗೀತಾ ಬಾಗಲ, ಮಲಾಡ– ಮುಂಬಯಿ. ೩. ಶ್ರೀ ಆಯ್. ಕೆ. ಬಳ್ಳೂರ, ನವಿಲೂರು. ೪. ಶ್ರೀ. ರಾಮರಾವ್, ಗ. ಹೈಸ್ಕೂಲ್, ಸುಲ್ತಾನ್ ಬಝಾರ್, ಹೈದರಾಬಾದ್. ೫. 'ಜಯಂತಿಯ ಓದುಗನೊಬ್ಬ' ಕಾಸರಗೋಡು.

'ಭಕ್ತಸುದಾಮ'ದ ವಿಮರ್ಶಕರು:

೧. ಶ್ರೀ. ಎಸ್ ಪಿ. ಜೂಚನಿ, ಶಿಕ್ಷಕ, ಗಜೇಂದ್ರಗಡ. ೨. ಶ್ರೀ ರಾಘವೇಂದ್ರ ಗುಮಾಸ್ತೇ, ಉಪಾಧ್ಯಾಯ, ಮಾಧ್ಯಮಿಕ ವಿದ್ಯಾನಿಲಯ **ಚಿಂಚೋಳಿ.** ೩. ಶ್ರೀ ಎಂ. ಎಸ್. ಜೋಶಿ, ಶಿಕ್ಷಕರು, ಉಮಾವಿದ್ಯಾಲಯ ಹೈಸ್ಕೂಲ್, ಲಕ್ಷ್ಮೇಶ್ವರ. ೪. ಶ್ರೀ ಕೆ. ವೆಂಕಟರಾಯಾಚಾರ್ಯ 'ವಿದ್ವಾನ್' ಸುರತ್ಕಲ್ಲು. ೫. ಶ್ರೀ. ಬಾಲಕೃಷ್ಣ ದತ್ತಾತ್ರಯ ಶೆಟ್ಟಿ, ಅಂಕೋಲಾ. ೬. ಶ್ರೀ ಕೆ. ಎಸ್. ಶರ್ಮಾ, **ಕಾಸರಗೋಡು.** ೭. ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ. ೮. ಶ್ರೀ ಎಂ. ವೆಂಕಟಗಿರಿರಾವ್, ಕೊಯಿಮುತ್ತೂರು.

ಈ ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ, ತೀರ್ಮಾನವನ್ನು ಈ ರೀತಿ ಕೊಟ್ಟಿದ್ದಾರೆ: **ಶ್ರೀಮಾನ್ ಕೆ. ಎಸ್. ಶರ್ಮಾ** ಮತ್ತು **ಶ್ರೀಮಾನ್ ಲಕ್ಷ್ಮಣ ಜೋಶಿ**ಯವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ ಎಂ. ಎಸ್. ಜೋಶಿ (ಕತೆ–ರೂಪಕ ಎರಡರವೂ), ಶ್ರೀ ರಾಘವೇಂದ್ರ ಗುಮಾಸ್ತೆ ಮತ್ತು ಶ್ರೀ ಎಂ. ವೆಂಕಟಗಿರಿರಾವ ಅವರ ವಿಮರ್ಶೆಗಳೂ ಚೆನ್ನಾಗಿವೆ. ಮಿಕ್ಕುವು ಸಾಮಾನ್ಯ. ಶ್ರೀ ವೆಂಕಟರಾಯಾಚಾರ್ಯರ ವಿಮರ್ಶೆಯ ರೀತಿ ಸಂಶೋಧನೆಯನ್ನು ಬೆನ್ನುಹತ್ತಿ ಹೊರಟುದಾಗಿದೆ ಲಲಿತ-ಸಾಹಿತ್ಯವನ್ನು ವಿಮರ್ಶಿಸಲು ಇದು ಸರಿಯಾದ ದಾರಿಯಲ್ಲ. ಶ್ರೀಮತಿ ಬಾಗಲ ಅವರು ಬರೆದುದು ಕಥಾವಿಮರ್ಶೆಯೆನಿಸದೆ ಹೋದರೂ, ಕಥೆಯನ್ನು ಇಂದಿನ ದೃಷ್ಟಿಯಿಂದ ನೋಡುವವರಿಗೆ ಕಾಣಬಹುದಾದ ಕೆಲವು ಸಾಮಾಜಿಕ ದೋಷಗಳನ್ನು ಎತ್ತಿ ಚೆನ್ನಾಗಿ ತೋರಿಸಿದ್ದಾರೆ. ಈ ಸಂಚಿಕೆಯಲ್ಲಿ ಅದಕ್ಕೆ ಎಡೆಯಿರದಿದ್ದರೆ, ಮುಂದಿನ ಸಂಚಿಕೆಯಲ್ಲಿ ಅದನ್ನು ಒಂದು ಲೇಖನವೆಂದು ಪ್ರಕಟಿಸಬಹುದು.

ಅತ್ಯುತ್ತಮವೆಂದು ತೀರ್ಪುಗೊಂಡ ಎರಡು ವಿಮರ್ಶೆಗಳಲ್ಲಿ ಶ್ರೀ. ಲಕ್ಷ್ಮಣ ಜೋಶಿಯವರದು ದೀರ್ಘವಿಮರ್ಶೆಯಾಗಿ ಇದೆ; ಆದುದರಿಂದ ಶ್ರೀ ಕೆ. ಎಸ್. ಶರ್ಮಾ ಅವರ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಬಹುದು.

ಸುದಾಮನ ಮಕ್ಕಳು ಸುದಾಮನೊಂದಿಗೆ ನಡೆಯಿಸಿದ ಮಾತು-ಕತೆಗಳಲ್ಲಿ, ಒಳ್ಳೆಯ ವಿಮರ್ಶಕರೇ ಒಬ್ಬರು, ಸ್ವಲ್ಪ ಕೊರತೆಯನ್ನು ಕಂಡಂತೆ ಬರೆದಿದ್ದಾರೆ ಸುದಾಮನ ಅಲೌಕಿಕವಾದ ಆದರ್ಶದ ಜ್ಞಾನ ಆತನ ಮಕ್ಕಳಿಗೆ ಇರಲಿಲ್ಲ. ಇದ್ದರೆ, ಅವರೂ ಸುದಾಮನಂತೆಯೆ ಪುರಾಣಪ್ರಸಿದ್ಧರೆ ಆಗುತ್ತಿದ್ದರು. ಅವರು ಕೇವಲ ಲೌಕಿಕಜೀವಿಗಳು: ಹೊಟ್ಟೆತುಂಬ ಊಟವನ್ನೂ ಸಾಂಸಾರಿಕ ಸುಖವನ್ನೂ ಬಯಸುವವರು. ಇವುಗಳನ್ನು ಕೊಡುವ ದೇವರಿದ್ದರೆ, ಅಂತಹ ದೇವರೂ ಅವರಿಗೆ ಬೇಕು. ಈ ಮಾತನ್ನೇ ೩ನೆಯ ಪ್ರವೇಶದಲ್ಲಿ ಪತಿ-ಪತ್ನಿಯರಾಡುವ ಮಾತುಗಳಲ್ಲಿ ಸ್ಪಷ್ಟೀಕರಿಸಿ ತೋರಿಸಲಾಗಿದೆ. ಲೋಕದಲ್ಲಿ ಆದರ್ಶಮಾರ್ಗದಿಂದ ನಡೆವ ಜೀವಿಗಳು ಅತ್ಯಲ್ಪ. ಆದರ್ಶಜೀವಿಯೊಂದರ ಸಂತಾನ, ಆತನಮಾರ್ಗದಲ್ಲಿಯೆ ನಡೆಯುವ ಉದಾಹರಣೆಗಳು ತೀರ ಕಡಿಮೆ. ಆದರ್ಶ ಮಹಾತ್ಮನಾದ ಪ್ರಲ್ಹಾದನ ಮಗ ವಿರೋಚನ, ಮೊಮ್ಮಗ ಬಲಿ, ಮರಿಮಗ ಬಾಣಾಸುರ ಇವರೆಲ್ಲ ಹಿರಿಯನಾದ ಪ್ರಲ್ಹಾದನು ನಡೆದ ಅಲೌಕಿಕ ಮಾರ್ಗದಲ್ಲಿ ನಡೆಯಲಿಲ್ಲವೆಂಬುದನ್ನು ಪೌರಾಣಿಕ ಕತೆಗಳಿಂದಲೆ ನಾವು ಅರಿತುಕೊಳ್ಳಬಹುದು. ಇಂದಿನ ಜೀವನದಲ್ಲಂತೂ ಬೇಕಾದಷ್ಟು ಉದಾಹರಣೆಗಳು ದೊರೆಯುವುವು. ಲೋಕಮಾನ್ಯ ತಿಲಕರ ಮಾಹಾತ್ಮ್ಯವನ್ನರಿತವರು, ಅವರ ಪ್ರತ್ಯಕ್ಷಪುತ್ರರ ಜೀವನದ ಕಥೆಯನ್ನು ಕೇಳಿದರೆ ಆಶ್ಚರ್ಯಪಡಬಹುದು. ದೂರವೇಕೆ? ಮಹಾತ್ಮರ ನೆರಳಿನಂತೆಯೆ ಇದ್ದ ಅವರ ಹೆಂಡತಿ ದಿ. ಕಸ್ತೂರಬಾ ಅವರನ್ನು ಲೌಕಿಕ ಮೋಹ ಹೇಗೆ ಸೆಳೆಯುತ್ತಿದ್ದಿತೆಂಬುದನ್ನು, ಮಹಾತ್ಮರ ಆತ್ಮಚರಿತ್ರೆಯಿಂದ ನಾವು ಕಾಣಬಹುದು. ಇದೆಲ್ಲವೂ ಹೋಗಲಿ! ರೂಪಕದಲ್ಲಿ ಸೃಷ್ಟಿಸಿದ ಸುದಾಮನ ಮಕ್ಕಳೆಲ್ಲ ೯ರಿಂದ ೧೫–೧೬ ವರ್ಷಗಳ ವರೆಗಿನ ಬಾಲಕರು. ಅವರಿಗೆ ತಮ್ಮ ತಂದೆಯ,

ಲೌಕಿಕ ಆಪತ್ತಿಗಳಿಂದ ತುಂಬಿದ ಆದರ್ಶಜೀವನದ ಅರ್ಥವು ಹೇಗಾಗಬೇಕು? ಆ ಬೆಳೆಯುವ ಜೀವಿಗಳಿಗೆ ಹೊಟ್ಟೆತುಂಬ ಅನ್ನ ಮೈಗೆ ಬಟ್ಟೆ ಬೇಕಾಗಿದ್ದಿತು. ಮೂರು ಮೂರು ದಿನ, ನಾಲ್ಕುನಾಲ್ಕು ದಿನ ಉಪವಾಸವಿರಬೇಕಾದ ಸಂದರ್ಭ ಬಂದು ಬೇಸತ್ತ ಆ ಮಕ್ಕ ಮನಸ್ಸು ಕೆರಳಿ ನಿಲ್ಲುವುದು ಅನಿವಾರ್ಯ. ಪಾಪ! ಅಂತಹ ಕಳವಳದ ಸಂದರ್ಭದಲ್ಲಿಯೂ ಸುತ್ತ ಏನೇನನೋ ಪರಿಹಾಸದ ಮಾತು ಗಳನ್ನಾಡಿ ನಗಲು ಬಯಸುತ್ತವೆ. ಈ ಸಂದರ್ಭವನ್ನು ಶ್ರೀ ಕೆ. ಎಸ್. ಶರ್ಮರು ಸರಿಯಾಗಿ ಅರ್ಥಮಾಡಿಕೊಂಡು ವಿಮರ್ಶೆ ಮಾಡಿದ್ದಾರೆ."

ಸಂಪಾದಕ ಮಂಡಲಿಯವರ ತೀರ್ಮಾನದಲ್ಲಿಯೂ ಒಂದು ಚಿಕ್ಕ ವಿಮರ್ಶೆಯೆ ಆಹಕವಾಗಿದೆ. ಎಂತಲೇ ಅದನ್ನಿಲ್ಲಿ ಸಂಪೂರ್ಣ ವಾಗಿ ಪ್ರಕಟಿಸಲಾಗಿದೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **"ಸಾಂತ-ಅನಂತ"** ಎಂಬ ಕತೆಯನ್ನಾಗಲಿ **"ಸಮಸ್ಯೆಯ ಕಳ್ಳಿ"** ಎಂಬ ಕತೆಯನ್ನಾಗಲಿ, ತೆಗೆದುಕೊಳ್ಳಬೇಕು.

— **ಸಂಪಾದಕರು**

ಭಕ್ತ ಸುದಾಮ

(ಒಂದು ಪೌರಾಣಿಕರೂಪಕವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಕೇವಲ ನಾಲ್ಕೇ ದೃಶ್ಯಗಳಿಂದನುಗೊಳಿಸಿದ, ದಶಪಾತ್ರ-ಸಂಯೋಜಿತವಾದ ಪುರಾಣಾಂತರ್ಗತ ಕಥಾಭಾಗವೊಂದರ ಸುಂದರ ಸಮಾವೇಶವೇ ಪ್ರಕೃತನಾಟಕದ ಇತಿವೃತ್ತವು. ಕಥಾಸಂಯೋಜ-ನೆಗೆ, ಶೀಘ್ರಪರ್ಯವಸಾಯಿಯಾ ನಾಟಕತಂತ್ರಕ್ಕೆ, ದೃಶ್ಯಗಳ ಪಾರಸ್ಪರಿಕವಾದ ಹೊಂದಿಕೆಗೆ ಅನುಗುಣವಾಗಿ ನಾಟಕಕಾರರು ಪ್ರಕೃತ ನಾಟಕದಲ್ಲಿ ಶ್ರವ್ಯಾನುಗುಣವಾದ "ನಿರೂಪಕ" ಸ್ಥಾನವನ್ನು ಅನುಗೊಳಿಸಿ, ಒಂದು ವಿಶಿಷ್ಟ ರೀತಿಯ ಓಟವನ್ನು ದೃಶ್ಯಗಳಲ್ಲೂ ದೃಶ್ಯಘಟಕಗಳಲ್ಲೂ ಹಾಯಿಸಿದ್ದಾರೆ. ಆದುದರಿಂದಲೆ ಸರ್ವವಿದಿತ-ವಾದ ಈ ಕಥಾಭಾಗದಲ್ಲೂ ವಾಚಕನಿಗೊಂದು ಆಕರ್ಷಕವಾದ ಸೆಳೆತದ ಹಿಡಿತವಿದೆ. ಈ ಆಕರ್ಷಣೆಯಿಂದಲೆ ನಾಟಕವಿದು ಕಳೆಯೇರಿದೆಯೆಂದು ಧಾರಾಳವಾಗಿ ಹೇಳಬಹುದು.

ದೃಶ್ಯ–ಶ್ರವ್ಯಾಯತ್ತವಾಗಿ ಸಾಗುವ 'ನಾಟಕ'ವು, ಶ್ರವ್ಯ-ಮಾರ್ಗಕ್ಕಿಂತ ದೃಶ್ಯಮಾರ್ಗದಲ್ಲಿ ವಿಶೇಷವಾದ ಪರಿಣಾಮವನ್ನುಂಟು ಮಾಡಬೇಕಾಗಿದೆ. ಅಭಿನಯ, ರಂಗಸಂವಿಧಾನ, ರಸಭಾವಾನು-ಗುಣವಾದ ಸಂಭಾಷಣೆ, ರಂಗಪರಿಣಾಮ ಇವೆಲ್ಲವುಗಳನ್ನೊಳಗೊಂಡು ಸಾಗುವ ದೃಶ್ಯವಿಧಾನವು, ಭಾವುಕನನ್ನು ಉದಾತ್ತಕಥಾವಸ್ತುವಿನಿಂದ ಸೆರೆಹಿಡಿಯುವಂತೆ ಸ್ವಾಯತ್ತವಾಗಿರುವ ವ್ಯಕ್ತಿಪೋಷಣೆ, ಕಥಾ-ಪೋಷಣೆ, ದೃಶ್ಯಯೋಜನೆ ಇವುಗಳಿಂದಲೂ ಸುಂದರವಾಗಿರ-ಬೇಕಾಗಿದೆ. ಉಳಿದುವು ವಿಚಾರಪೂರ್ಣ ದಿಗ್ದರ್ಶಕನ ಹಾಗೂ ನಿಪುಣನಟನ ಮೇಲೆ ಹೊಂದಿಕೊಂಡಿದೆಯೆಂದು ಹೇಳಬಹುದು. ಉಪರಿನಿರ್ದಿಷ್ಟವಾದ ಕೆಲವು ಅವಶ್ಯಂಭಾವೀ ಗುಣಲಕ್ಷಣಗಳಲ್ಲಿ 'ಭಕ್ತ ಸುದಾಮ'ವು ಹೇಗೆ ಹರಿದೋಡಿದೆಯೆಂದು ವಿಚಾರಿಸುವು-ದಗತ್ಯವಿದೆ.

"ಅಯಾಚಿತ ಸಾಧಕನಾದ ಭಕ್ತಸುದಾಮ, ಪರಮಸಾಧ್ವಿ-ಯಾದ ಸುಶೀಲಾದೇವಿಯೊಂದಿಗೆ ಬಡತನದ ಬೇಗೆಯಲ್ಲಿ ಕುದಿ-ಯುತ್ತಿರುವ ದಿನ. ಮನೆಯಲ್ಲಿ ಮಕ್ಕಳನ್ನು ಹರಿನಾಮ ಸ್ಮರಣೆಗಾ ಕೇಳುವನು. ಮೂರು ನಾಲ್ಕು ದಿನಗಳಿಂದ ಕನಸಿನಲ್ಲೂ ಹಸಿ ತಣಿವನ್ನು ಕಾಣದ ಮಕ್ಕಳು, ಭಜನೆಯನ್ನು ನಿರಾಕರಿಸಿ ತಂ ಯೊಡನೆ ವಾದಿಸುವರು. ಈ ವಾದದ ಕೊನೆಯಲ್ಲೇ "ಅನನ್ಯಾಃ ....ವಹಾಮ್ಯಹಂ" ಎಂಬ ಮಾತು ಕೇಳಿಸಿದರೆ, ಮಕ್ಕಳೆಲ್ಲರ ಭಯಭಕ್ತಿಯಿಂದ ಭಜನಾಸಕ್ತರಾಗಲು ಒಂದನೆಯ ದೃಶ್ಯ ಮುಗಿದ ಎರಡನೆಯ ದೃಶ್ಯದಲ್ಲಿ ಕುಚೇಲನು ತನ್ನ ಪತ್ನಿಯೊಂದಿಗೆ ಸಂಸಾರ ಸುಖ-ದುಃಖಗಳನ್ನು ಉದಾತ್ತವಾದ ರೀತಿಯಲ್ಲಿ ವಿಮರ್ಶಿಸುತ್ತ "ಲೌಕಿಕಜೀವನವನ್ನು ಬೆಳಗುವನೆ"ಂಬ ಮಹದಾಸೆಯಿಂ ಶ್ರೀಕೃಷ್ಣನ ಬಳಿಗೆ ಹೋಗುವ ನಿರ್ಧಾರವನ್ನು ಮಾಡುವನ ಇದರೆಡೆಯಲ್ಲೇ ಅವಧಾನಿಗಳ ಮನೆಯಿಂದ ಅಯಾಚಿತವಾಗಿ ಸಿಕ್ಕಿ ಅವಲಕ್ಕಿಯನ್ನು ಗೋಪಾಲನು (ಕುಚೇಲನ ಪುತ್ರ) ತರಲು ಅದರಿಂದೊಂದು ಪಾಲನ್ನು ಕೃಷ್ಣನ ಕಾಣಿಕೆಗಾಗಿ ಕೊಂಡೊಯ್ಯು ಯೋಚನೆಯನ್ನು— ಗೋಪಾಲನ ಗುಣುಗಾಟದಲ್ಲೇ ಮಾಡಲು-ಮೂರನೆಯ ದೃಶ್ಯವು ಕಾಣಿಸಿಕೊಳ್ಳುವುದು. ಆ ದೃಶ್ಯವು ಸುದಾಮ ಹರಿನಾಮಕೀರ್ತನೆಯನ್ನೂ ಪಂಥಾನುಗತ ಶುಭಶಕುನಗಳನ್ನೂ ತೋರಿದರೆ, ನಾಲ್ಕನೆಯ ದೃಶ್ಯದಲ್ಲಿ ಶ್ರೀಕೃಷ್ಣ-ರುಕ್ಮಿಣಿಯರ ಸರ ಸಂಭಾಷಣೆಯನ್ನೂ ಆ ಸಂಭಾಷಣಾನುಗತ ಸುರಸಸಂಧಿಯಲ್ಲಿ ಕುಚೇಲನ ದಯನೀಯ ಆಗಮನವನ್ನೂ ಕೃಷ್ಣನ ಆದರ ಸ್ವಾಗತವನ್ನೂ ಶ್ರೀಕೃಷ್ಣ ರುಕ್ಮಿಣಿಯರೊಡಗೊಂಡು ಸಾಗು ಸುದಾಮನ ವಿನೀತವಚನವನ್ನೂ ಅಂತ್ಯದಲ್ಲಿ ಶ್ರೀಕೃಷ್ಣನ ಹೃದಯ ದಿಂದೆದ್ದ ಭರತವಚನವನ್ನೂ ನಾವು ಕಂಡು ಆನಂದಿತರಾದಾ ನಾಟಕವು "ಅನನ್ಯಾಃ..........ವಹಾಮ್ಯಹಂ" ಎಂಬ ತಥ್ಯಪೂರ್ಣ ಕಥಾವಸ್ತ್ವನುಭಾವಕ ಗೀತದಿಂದ ಕೊನೆಗಾಣುವುದು. ಹೀಗಿ ಕಥಾರಚನೆ; ಹೀಗಿದೆ ವಸ್ತುವಿನ್ಯಾಸ.

ಈ ನಾಟಕದಲ್ಲಿ "ವೃಂದಗೀತ"ವನ್ನೊಡಗೊಂಡ ಇನ್ನೊಂದು ದೃಶ್ಯವನ್ನು ನಾವು ಕಾಣಬಹುದು. ಈ ಗೀತಗಳೆರಡೂ ಭಾವಪೂರ್ಣ-ವಾಗಿದ್ದರೂ, ವಸ್ತುಭಾವಾತೀತವಾಗಿರದಿದ್ದರೂ, ಸಂಸ್ಕೃತ ಪದಗಳ ಹಾಗೂ ಸಮಸ್ತಪದಗಳ ಕಾಠಿಣ್ಯದಿಂದ ಸುಲಭವಾಗಿ ಅರ್ಥವಾಗು-ವಂತಿಲ್ಲವೆಂದು ಹೇಳಿದರೀ ಮಾತು ಎಂದೆಂದೂ ನಾಟಕಕ್ಕೆ ಕುಂದಾಗ-ವೆಂದು ನಿಶ್ಚಯವಾಗಿ ಹೇಳಬಹುದು. ಉಳಿದ ಸಂಸ್ಕೃತಗೀತಗಳು ಸಾಮಾನ್ಯ ಜನರ ನಿತ್ಯಜೀವನದಲ್ಲೂ ಒಳಹೊಕ್ಕು ಬರುವುವುಗಳಾ-ದುದರಿಂದ ಕಠಿಣವೆನಿಸವು; ಮಾತ್ರವಲ್ಲ ಈ ಭಾಗಕ್ಕದು ಒಪ್ಪು-ವಂತಿದೆ. ಆದರೆ ''ಅನನ್ಯಾಃ......'' ಎಂಬ ಈ ಪದ್ಯವು ಒಂದನೆಯ ದೃಶ್ಯದಲ್ಲಿ ಕಾಣಿಸಿಕೊಂಡು ಗೌರವವನ್ನು ತಂದಂತೆ, ಎರಡನೆಯ ದೃಶ್ಯದಲ್ಲಿ ಕಳೆಬೀರಲಿಲ್ಲವೆಂದು ಹೇಳುವಂತೆ, ಅದರ ದ್ವಿರುಕ್ತಿಯು ಆ ಭಾಗದಲ್ಲಿ ಬಂದುದು ಸಮುಚಿತವೆಂದೂ ನನಗೆ ತೋರುವುದಿಲ್ಲ. ನಾಟಕಕಾರರು ಕುಚೇಲನ ಹೃದಯಾಶ್ವಾಸನೆಗಾಗಿ ಅಲ್ಲದನ್ನು ಅನುಗೊಳಿಸಿರಬೇಕೆಂದೇ ತೋರುತ್ತದೆ; ಈ ಆಶ್ವಾಸನೆಯು ಕುಚೇಲನಿಗಲ್ಲಿ ದೊರೆತಿರದಿದ್ದರೆ, ಶಂಕೆಯಿಂದ ಕೃಷ್ಣನಲ್ಲಿಗೆ ತೆರಳುವ ಕುಚೇಲನು ತನ್ನೆದುರಿಗೆ ಕಾಣುವ ಶಕುನಗಳಲ್ಲಿ ಭರವಸೆಯಿರಿಸು-ವುದರಲ್ಲಿ ಸ್ವಾಭಾವಿಕತೆಯಿರುವಂತೆ, ಸಮಂಜಸವೂ ತಲೆದೋರುತ್ತದೆ. ಹೀಗೆಂದು ಹೇಳಿದರೆ,ಆ ಬಗೆಯ ರಚನೆಯಲ್ಲಿ ದೋಷವಿದೆಯೆಂದರ್ಥ ವಾಗಲಾರದು.

ನಾಟಕಾಂತರ್ಗತ ದೃಶ್ಯಗಳಲ್ಲಿ ಒಂದನೆಯದರಲ್ಲಿ ಮಕ್ಕಳೊಡನೆ ಮಾತನಾಡುವ ಸುದಾಮನನ್ನೂ ಹಸಿವೆಯ ತಾಕಲಾಟದಿಂದ ತಂದೆಯ ಮತಕ್ಕೆದುರಾಡುವ ಮಕ್ಕಳ ಮನೋಭಾವವನ್ನೂ ನಾಟಕಕಾರರು ಸುಂದರವಾಗಿ ರೂಪಿಸಿದ್ದಾರೆ. ಮಕ್ಕಳಲ್ಲಿ "ಲಕ್ಷ್ಮಿ"ಯು ನೆರೆಮನೆಯ ರಾಜೋಪಾಧ್ಯಾಯರ ಮನೆಯಲ್ಲಿ "ಸುಖವು ಕಾಲುಮುರಿದುಕೊಂಡು ಬಿದ್ದಿದೆ"ಎಂದೂ, ಅವರ ಮನೆಯಲ್ಲಿ ನೆರವೇರಿಸಿದ್ದ ಸೌಭಾಗ್ಯ ಗೌರೀ ಪೂಜೆಯ ಅಲಂಕಾರ ವೈಭವವನ್ನೂ ತಿಂಡಿ-ತಿನಿಸುಗಳ ಪಟ್ಟಿಯನ್ನೂ ಹೇಳುವಾಗ— ನಾವು ಆ ಮಗುವಿನ ಎಳಮನಸ್ಸನ್ನು ಕಂಡು ನೊಂದಂತೆ— ಅದಕ್ಕುತ್ತರವಾಗಿ ಬರುವ ಮತ್ತೊಬ್ಬ ಹುಡುಗ ನಾರಾಯಣನ "ಅದನ್ನೆಲ್ಲ ಹೇಳಬೇಡ ಬಿಡೇ ಲಚ್ಚಕ್ಕಾ— ನನ್ನ ಹೊಟ್ಟೆಯಲ್ಲಿ ಕೆಟ್ಟ ಸಂಕಟವಾಗುತ್ತಿದೆ" ಎಂಬ ಮಾತನ್ನು ಕೇಳುವಾಗ ಮರುಗಲೇಬೇಕಾಗುತ್ತದೆ. ಈ ಮಾತುಗಳ ಮಧ್ಯದಲ್ಲೇ ಕುಚೇಲನು "ಕೊಡುವ ಕಾಲ ಬಂದಾಗ ಲಕ್ಷ್ಮೀರಮಣನು ಸಾವಿರ-ಸಾವಿರ ಕೈಗಳಿಂದ ಕೊಡಬಲ್ಲನು" ಎಂದಂದರೆ—ನಾರಾಯಣನದನ್ನು ಲಕ್ಷ್ಮಿಗೆ ಹೊಂದಿಸಿಕೊಂಡು, ಆ ಹೊಟ್ಟೆಯ ಸಂಕಟದಲ್ಲೂ "ಬೇಗನೆ ಮದುವೆ ಮಾಡಿಕೊಂಡುಬಿಡಪ್ಪಾ ನೀನು!" ಎಂದಂದು ತಂದೆ-ಯೆದುರಲ್ಲೇ ತಂಗಿಯನ್ನು ಕೆಣಕುವಾಗ ನಾವು ಉಮ್ಮಳಿಸಿದರೆ, ಗೋವಿಂದನಾಡುವ "ನಮಗೆಲ್ಲಿಯ ಬಟ್ಟೆ–ಒಡವೆ? ಹಸಿವೆಯಿಂದ ನಿದ್ರೆಯೇ ಬಾರದಿರುವಾಗ, ಕನಸುಗಳಾದರೂ ಬೀಳಬೇಕು ಹೇಗೆ?" ಎಂಬ ಒಂದೇ ಒಂದು ಮಾತಿನಿಂದ ಆ ಸಂಸಾರದ ಕಷ್ಟವನ್ನೂ, ಆ ಕಷ್ಟದಲ್ಲಿ ತೊಳಲಾಡುವ ಆ ಜೀವಿಗಳ ಪೂರ್ಣಸ್ವರೂಪವನ್ನೂ ಕಾಣಬಹುದಾಗಿದೆ. ಇಲ್ಲಿಯೆ ಕುಚೇಲನ ಮನೋವೃತ್ತಿಯ ಪ್ರಕಾರವೂ, ನಿರ್ಧಾರವೂ, ಮಕ್ಕಳಹೃದಯವೂ ಸರಿಯಾಗಿ ಪ್ರತಿ-ಬಿಂಬಿಸುವುದು. ಇದರಂತೆಯೆ ಎರಡನೆಯ ಅಧ್ಯಾಯದಲ್ಲಿ ಕುಚೇಲ ಮತ್ತು ಸುಶೀಲೆಯರ ಉದಾತ್ತಸಂಸಾರದ ಸಂಭಾಷಣೆಯನ್ನೂ, ಸುಶೀಲೆಯ ದಾಂಪತ್ಯಾನುಕೂಲ ರೀತಿ-ನೀತಿಗಳನ್ನೂ ಕಂಡಂತೆ ಕೃಷ್ಣನ ಹೃದಯವನ್ನೂ ಕಾಣಬಹುದು. ನಾಟಕಕಾರರು ನಾಟಕಾ-ನುಗತವಾಗಿ ಬರುವ ಪಾತ್ರಗಳನ್ನು ಅಲ್ಲಲ್ಲಿ ಅನ್ಯಗತ ಸಂಭಾಷಣೆಗಳಲ್ಲಿ ಮಿರುಗೇರಿಸಿ ಪೂರ್ಣವಾಗಿಸುವ ವಿಧಾನವಿದು, ಈ ಚಿಕ್ಕ ರೂಪಕಕ್ಕೆ ಯೋಗ್ಯವಾದ ಪುಟವಿತ್ತಿದೆಯೆಂದೆನ್ನಬಹುದು. ಈ ಎರಡು ದೃಶ್ಯ-ಗಳಿಗಿಂತಲೂ ಉಚಿತವಾಗಿ, ಶೀಘ್ರಗಾಮಿಯಾಗಿ, ರಸವತ್ತಾಗಿ ಸಾಗುವ ದೃಶ್ಯವೆಂದರೆ ನಾಲ್ಕನೆಯದು. ಅಲ್ಪವಾಗಿ ಹರಿವ ಶ್ರೀಕೃಷ್ಣ-ರುಕ್ಮಿಣಿಯರ ಕೇವಲ ನಾಲ್ಕೇ ಮಾತುಗಳು ಎಂತಹವರ ಹೃದಯವನ್ನೂ ಸೂರೆಗೊಳ್ಳುವಷ್ಟು ಹೃದಯಂಗಮವಾಗಿ ರಸಭರಿತ-ವಾಗಿವೆಯೆಂದೆನ್ನಲೇಬೇಕು. ಶ್ರೀಕೃಷ್ಣನು ಊಟದ ರುಚಿಯನ್ನು ಅಲ್ಲಗಳೆಯುತ್ತ, ರುಕ್ಮಿಣಿಯಾಡಿದ ಕೊಂಕುಮಾತಿಗೆ ಉತ್ತರವೀವ ಬಗೆಯಲ್ಲಿ "ರಾಧೆಯ ಮೆಚ್ಚನ್ನು ಸೂಸಿ" ಕಥಾಭಾಗಕ್ಕೆ ಕಳೆಯೇರಿಸಿ ರುಕ್ಮಿಣಿಯಲ್ಲಿ ಮಸುಮುನಿಸನ್ನೇರಿಸಿ "ಮತ್ತೆ, ಮತ್ತೆ ಅದೇ ಪಲ್ಲವಿ— ನನ್ನ ರಾಧೆ.... ನನ್ನ ರಾಧೆ.... ಮಲ್ಲಯ್ಯನಿಗೆ ಹುಲ್ಲಿನ ಸರದ ಪೂಜೆ! ಗೊಲ್ಲರ ಗಂಡಿಗೆ ಗೊಲ್ಲರ ಹೆಣ್ಣೇ ಮೆಚ್ಚು.'' ಎಂದಾಡಿಸಿದುದು ರಸಪೂರ್ಣ ಸನ್ನಿವೇಶದ ಪರಮಾವಧಿಯಾಗಿದೆ. ಮುಂದೆ ಬಾಗಿಲು ಕಾಯುವ ಮಾಲತಿ ಬಂದು ಸುದಾಮನನ್ನು ಈದಂತಹವಾ ನಿರೂಪಿಸಿದುದು, ಶ್ರೀಕೃಷ್ಣ, ಸುದಾಮ, ರುಕ್ಮಿಣಿ ಇವರ ಸಂಭಾಷಣೆ ಇವು ಕೃಷ್ಣನ ಭಕ್ತಜನವಾತ್ಸಲ್ಯವನ್ನೂ, ಸುದಾಮನ ಭಕ್ತಜನ ಮನೋಭಾವವನ್ನೂ, ಮುಖ್ಯವಾಗಿ ರುಕ್ಮಿಣಿಯ ಹೃದಯವೈಶಾಲ್ಯ-ವನ್ನೂ ಎತ್ತಿತೋರುವುವು. ಹೀಗೆ ಈ ದೃಶ್ಯಗಳು ಸುಂದರವಾಗಿದ್ದು, ಕೇವಲ ಕೆಲವೇ ಸಂಭಾಷಣೆಗಳಿಂದ ಎಲ್ಲಾ ಪಾತ್ರಗಳ ಹೃದಯ-ವನ್ನು ತೆರೆದು ತೋರಿವೆಯೆಂದರೆ, ಉತ್ತಮ ನಾಟಕಕಾರರ ಮುಂದಿದು ಸ್ತುತಿಪಾತವಾಗದು.

ಸುಪುಷ್ಟ ಭಾಷಾಸಂಪತ್ತಿಯಿಂದಲೂ, ರಸಭಾವಪೂರ್ಣ ಸಂಭಾ ಷಣೆಯಿಂದಲೂ ಕಳೆಯೇರಿದ ನಾಟಕವಿದು, ಸರ್ವಾಂಗ ಸುಂದರವೆಂದೆನ್ನಬಹುದು. ನಾಟಕದಲ್ಲಿ ಕಾಣಬರುವ ಗೀತಗಳಲ್ಲಿ ದೀರ್ಘೋಚ್ಚಾರಣೆಯು ಸ್ವಾಭಾವಿಕವಾಗಿದ್ದರೂ, ಅವನ್ನು ಅದೇ ಬಗೆಯಲ್ಲಿ ದೀರ್ಘ ಬರೆವುದವಶ್ಯವೇ?'' ಎಂಬೊಂದು ಶಂಕೆಯನ್ನು ಮಾತ್ರ ಮುಂದಿರಿಸಿ, ಈ ಸುಂದರ ರೂಪಕವನ್ನು ಆದರದಿಂದ ಸ್ವಾಗತಿಸುವೆನು.

(೧೯೬ನೆಯ ಪುಟದಿಂದ ಬಂದುದು)

(೫) **ಆರೋಗ್ಯಶಿಕ್ಷಣ:** — ಆರೋಗ್ಯ ಮತ್ತು ಶಿಕ್ಷಣ, ಈ ಎರಡೂ ಹೇತುಗಳನ್ನನುಲಕ್ಷಿಸಿ ಪ್ರವಾಸವನ್ನು ಕೈಕೊಳ್ಳಲಾಗುತ್ತದೆ. ಗುಂಪುಗಳು ಹೊರಹೊರಡುತ್ತವೆ. ಶಾರೀರಿಕ ವ್ಯಾಯಾಮ ಮತ್ತು ಆಟಕ್ಕಾಗಿ ಎಷ್ಟೋ ವ್ಯಾಯಾಮಶಾಲೆಗಳನ್ನು ತೆರೆಯಲಾಗಿದೆ.

ಗ್ರಂಥ ಸಂಗ್ರಹಾಲಯ: — ಶಿಶುವರ್ಗವನ್ನೊಳಗೊಂಡು ಪ್ರತಿಯೊಂದು ವರ್ಗಕ್ಕೂ ಒಂದು ಗ್ರಂಥಾಲಯದ ಗಂಟೆ ಇರುತ್ತದೆ. ಸಾರ್ವಜನಿಕ ಗ್ರಂಥಾಲಯದಲ್ಲಿಯ ಬಾಲವಿಭಾಗಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಇಲ್ಲಿಯ ಗ್ರಂಥಾಲಯದಿಂದ ಓದುವುದಕ್ಕಾಗಿ ಮನೆಗೆ ತೆಗೆದುಕೊಂಡು ಹೋಗಲಾಗುತ್ತದೆ.

ನಾಟ್ಯ: — ಕೆಲವೊಂದು ಹುಡುಗರಿಗೆ ಕಿಶೋರರಂಗಭೂಮಿಯ ಮೇಲೆ ಪ್ರವೇಶವು ದೊರೆಯುತ್ತದೆ ಅದರಂತೆಯೆ ಬಾನುಲಿಯ ಕಾರಖಾನೆಯಲ್ಲಿ ಸಹ, ಕಾಲೇಜಿನಲ್ಲಿ ಅಭ್ಯಾಸ ಮಾಡುವವರಿಗೆ ಪ್ರವೇಶ ಸಿಕ್ಕುತ್ತದೆ.

ಪಾಲಕಸಂಘದ ಸಹಕಾರ್ಯ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಸಿಕ್ಕುತ್ತದೆ ತನ್ನಿಮಿತ್ತ ಎಷ್ಟೋ ಕಮಿಟಿ(ಸಭೆ)ಗಳು ಅನೇಕ ವಿಭಾಗಗಳಲ್ಲಿ ಸಹಾಯಮಾಡುತ್ತಿರುತ್ತವೆ. ಉದಾಹರಣಾರ್ಥ ಗ್ರಂಥಸಂಗ್ರಹಾಲಯಗಳು, ಕಾರಖಾನೆಗಳು, ಉದ್ಯೋಗ ವ್ಯವಸ್ಥೆ, ಪ್ರದರ್ಶನ ಮುಂತಾದುವುಗಳಿಗೆ ಹೊರಡುವ ಪ್ರವಾಸ, ಸಂಘದ ಕಾರ್ಯಕ್ರಮ, ಮತ್ತು ಶ್ರವಣ-ದರ್ಶನಾತ್ಮಕ ಕಾರ್ಯಕ್ರಮ. ಪ್ರತಿಯೊಂದು ವರ್ಗಕ್ಕೂ ಒಂದು 'ವರ್ಗಮಾತಾ' ಇರುತ್ತದೆ. ಒಂದು ಪಾಲಕಶಿಕ್ಷಕ ಮಂಡಲವೂ ಇರುತ್ತದೆ. ಅದರಲ್ಲಿ ಮೂರು ಜನ ಶಿಕ್ಷಕರು, ಮೂವರು ಪಾಲಕರು, ಶಾಲೆಯ ಪ್ರಮುಖ ಮತ್ತು ಪಾಲಕಸಂಘದ ಅಧ್ಯಕ್ಷ ಹೀಗೆ ೮ ಜನ ಸಭಾಸದರು ಇರುತ್ತಾರೆ. ತಿಂಗಳಿಗೊಮ್ಮೆ ಇವರು ಒಂದೆಡೆ ಸೇರಿ, ಅದರಲ್ಲಿ ಮುಂದಿನ ತಿಂಗಳ ಕಾರ್ಯಕ್ರಮವನ್ನು ಹಾಕುವುದಲ್ಲದೆ, ಕಾರ್ಯಕ್ರಮದಲ್ಲಿ ಉದ್ಭವಿಸುವ ಅಡಚಣೆಗಳನ್ನು ದೂರಮಾಡುವ ಉಪಾಯಗಳನ್ನೂ ಆಲೋಚಿಸಲಾಗುತ್ತದೆ.

ಸಾಮಾನ್ಯಬುದ್ಧಿಯ ಮಕ್ಕಳ ಶಿಕ್ಷಣದಲ್ಲಿ ಕೆಲ ಸಮಸ್ಯೆಗಳು ಉತ್ಪನ್ನವಾಗುತ್ತಿರುವಂತೆ, ಅಲೌಕಿಕ ಕುಶಾಗ್ರಬುದ್ಧಿಯ ಮಕ್ಕಳ ಶಿಕ್ಷಣದಲ್ಲಿಯೂ ಕೆಲವೊಂದು ಸಮಸ್ಯೆಗಳು ಉತ್ಪನ್ನವಾಗುತ್ತವೆ. ಈ ಸಮಸ್ಯೆಗಳ ಸ್ವರೂಪವು ಭಿನ್ನವಾಗಿದ್ದರೂ ವ್ಯಕ್ತಿತ್ವ. ಜೋಡಣೆ ಮತ್ತು ಭಾವನೆ ಮುಂತಾದುವುಗಳಲ್ಲಿ ಮಾತ್ರ ಸಮಾನ ವಯಸ್ಸಿನ ಮಕ್ಕಳಂತೆಯೇ ಇವರ ಸಮಸ್ಯೆಗಳೂ ಇರುತ್ತವೆ. ತಜ್ಞ ಶಿಕ್ಷಕರ ಉಪಯೋಗವನ್ನು ಶಾಲೆ ಆಗಾಗ ತೆಗೆದುಕೊಳ್ಳುತ್ತಿರುತ್ತದೆ. ಮತ್ತು ಪಾಲಕ ಹಾಗೂ ಶಿಕ್ಷಕರ ಸಮ್ಮಿಳಿತ ಪ್ರಯತ್ನದಿಂದ ಎಷ್ಟೋ ಸುಧಾರಣೆಗಳಾಗುತ್ತಿರುತ್ತವೆ. ಮಾರ್ಗದರ್ಶನ ದೃಷ್ಟಿಯಿಂದಲೇ ಯಾಕಾಗಲೊಲ್ಲದು, ಹಂಟರ್ ಕಾಲೇಜಿನ ಈ ಪ್ರಾಥಮಿಕ ಶಾಲೆಯು ರಾಷ್ಟ್ರೀಯ ಹಿತಸಂಬಂಧಗಳನ್ನು ತನ್ನೆಡೆಗೆ ಸೆಳೆದುಕೊಂಡಿದೆ. ಕಾರಣ ಈ ಶಾಲೆಯು ಅಮೇರಿಕೆಯ ಅತ್ಯಪೇಕ್ಷಿತ, ಅಲೌಕಿಕ ಬುದ್ಧಿಮತ್ತೆಯ ಮಕ್ಕಳಿಗೆ ಶಿಕ್ಷಣವೀಯಬೇಕಾದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಪದ್ಧತಿಯು ಯಾವುದಿದೆಯೆಂಬುದನ್ನು ತೋರಿಸಿಕೊಟ್ಟಿದೆ. ಪ್ರತಿವರ್ಷ ಸಂಯುಕ್ತ ಸಂಸ್ಥಾನದಲ್ಲಿಯ ಎಲ್ಲ ಪ್ರಾಂತಗಳಿಂದ ನೂರಾರು ಶಿಕ್ಷಕರು ಶಾಲೆಯನ್ನು ನೋಡುವುದಕ್ಕೆ ಬರುತ್ತಿರುತ್ತಾರೆ. ಹಾಗೆಯೆ ಸಂಯುಕ್ತ ರಾಷ್ಟ್ರಸಂಘದಿಂದ ಬರತಕ್ಕ ಎಷ್ಟೋ ಪ್ರೇಕ್ಷಕರ ಲಕ್ಷ್ಯವನ್ನು ಕೂಡ ಈ ಶಾಲೆ ಸೆಳೆದಿದೆ. ಈ ಶಾಲೆಯಲ್ಲಿ ೭೫ ಸಂಶೋಧನ- ಅಭ್ಯಾಸ ಮುಗಿದಿವೆ. ಇಂತಹ ಅಭ್ಯಾಸದಲ್ಲಿ ಮಾನಸಿಕ, ಶಾರೀರಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳು ಸಮಾವೇಶಗೊಂಡಿವೆ.

ಹಂಟರ್ ಕಾಲೇಜಿನ ಪ್ರಾಥಮಿಕ ಶಾಲೆಯ ಇಂದಿನ ಇತಿಹಾಸ, ನಮ್ಮ ಶಿಕ್ಷಣಾಭ್ಯಾಸಿ ಮತ್ತು ಕ್ರಾಂತಿದರ್ಶಿ ರಾಜಕೀಯ ಮುಂದಾಳುಗಳಿಗೆ ಸ್ವಲ್ಪಾದರೂ ಸ್ಫೂರ್ತಿಯನ್ನು ಕೊಡಲಾರದೆ?

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಬಿ. ಮುತಳಿಕ
೪೩ ರವಿವಾರಪೇಠ, ಪುಣೆ ೨

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ ರಾಮಬಾಣ**

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಸಾದರ ಸ್ವೀಕಾರ

೩೪ **ಬಲಿಯು ಬೀಸಿದರು** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಬಸವರಾಜ ಕಟ್ಟೀಮನಿಯವರು. ಪ್ರಕಾಶಕರು ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು. ಕ್ರೌ. ಅ. ೨೬೦ ಪುಟಗಳು. ಬೆಲೆ ೧-೮-೦.

೩೫ **ಮೃಗಜಲ** (ಸಾಮಾಜಿಕ ಕಾದಂಬರಿ) ಮೂಲ ಹಿಂದೀ ಲೇಖಕರು ಶ್ರೀಮಾನ್ ಅನಂತ ಗಣೇಶ ಶೇವಡೆಯವರು. ಅನುವಾದಕರು ಶ್ರೀಮಾನ್ ಸಿ. ಸದಾಶಿವಭಟ್ಟರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೧ನೆಯ ಕಿರಣ. ಕ್ರೌ ಅ. ೨೧೨ ಪುಟಗಳು. ಬೆಲೆ ೧-೪-೦.

೩೬ **ಪ್ರೇಮಾಶ್ರಮ** (ಅನುವಾದಿತ ಕಾದಂಬರಿ) ಮೂಲ ಹಿಂದೀ ಉಪನ್ಯಾಸ ಸಾಮ್ರಾಟ್ ಪ್ರೇಮಚಂದರ ಕಾದಂಬರಿಯನ್ನು ಶ್ರೀಮಾನ್ ಮೇವುಂಡಿ ಮಲ್ಲಾರಿಯವರು ಕನ್ನಡಿಸಿದ್ದಾರೆ. ಧಾರವಾಡದ ಮಿಂಚಿನಬಳ್ಳಿಯ ೧೬ನೆಯ ವರ್ಷದ ೪ನೆಯ ಕುಡಿ. ಕ್ರೌ. ಅ. ೫೬೮ ಪುಟಗಳು ಬೆಲೆ ೧-೮-೦.

೩೭ **ಕಾಂತೆಯರ ಕನಸು** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಜನಾರ್ದನ ಗುರಿಕಾರ, ಧಾರವಾಡ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೧ನೆಯ ವರ್ಷದ ೫ನೆಯ ಕಿರಣ. ಕ್ರೌ. ಅ. ೩೦೪ ಪುಟಗಳು. ಬೆಲೆ ೧-೮-೦.

೩೮ **ಸಿದ್ದೋಜಿ** (ಸಾಮಾಜಿಕ ನಾಟಕ) ಬರೆದವರು ಶ್ರೀಮಾನ್ ಎಸ್. ಕೆ. ಕರಿಮ್ ಖಾನ್. ಪ್ರಕಾಶಕರು ರಾಮರಾಜ್ಯ ಪ್ರಕಾಶನ, ಗಾಂಧೀನಗರ, ಬೆಂಗಳೂರು ೨. ಕ್ರೌ ಅ. ೧೪೪ ಪುಟಗಳು ಬೆಲೆ ೧-೮-೦.

೩೯ **ನಭೋರಂಗ** (ರೇಡಿಯೋ ನಾಟಕಗಳ ಸಂಕಲನ) ಬರೆದವರು ಶ್ರೀಮಾನ್ ಧೀರೇಂದ್ರ ಕುಲಕರ್ಣಿ, ಧಾರವಾಡ. ಪ್ರಕಾಶಕರು ಶ್ರೀಮಾನ್ ಜಿ. ಎಸ್. ಕುಲಕರ್ಣಿ, ಮುದಿಹನಮಂತದೇವರ ಓಣಿ, ಧಾರವಾಡ. ಕ್ರೌ. ಅ. ೬೦ ಪುಟಗಳು. ಬೆಲೆ ೦-೮-೦.

೪೦ **ಶ್ರೀಮದ್ ಭಗವದ್ಗೀತಾ** (ಕನ್ನಡ ಭಾವಾನುವಾದ ಸಹಿತ) ಅನುವಾದಕರು ಶ್ರೀಮಾನ್ ಬನ್ನಂಜೆ ರಾಮಾಚಾರ್ಯರು, ಉಡುಪಿ. ಪ್ರಕಾಶಕರು ಶ್ರೀಕೃಷ್ಣ ಪ್ರಕಾಶನ, ಯೋಗೀಂದ್ರಸದನ, ಉಡುಪಿ. ಡೆಮಿ ೧೬ದ ೨೨೦ ಪುಟಗಳು ಬೆಲೆ ೦-೮-೦.

೪೧ **ಚಿಕ್ಕನ ಹುಚ್ಚು** (ಸಣ್ಣ ಕತೆಗಳ ಸಂಕಲನ) ಲೇಖಕರು ಶ್ರೀಮಾನ್ ಯಮರ್ಕುಂಜ ರಾಮಚಂದ್ರ. ಪ್ರಕಾಶಕರು ಸಂಗಮ ಸಾಹಿತ್ಯಮಾಲೆ, ಕಲ್ಮಡಕ–ದ. ಕ. ಜಿಲ್ಲೆ. ಕ್ರೌ ಅ. ೯೮ ಪುಟಗಳು. ಬೆಲೆ ೧-೦-೦.

೪೨ **ಮುಂಬಯಿ ಕರ್ನಾಟಕ ಸಂಘದ** ೨೧ನೆಯ ವರ್ಷದ ವರದಿ (೧೯೫೩-೫೪) ಅಧ್ಯಕ್ಷರು ಶ್ರೀಮಾನ್ ರಾ. ಶ್ರೀ. ಹುಕ್ಕೇರಿಕರರು. ಗೌರವ ಕಾರ್ಯದರ್ಶಿಗಳು ಶ್ರೀ. ರಾ. ಸು. ಸ್ವಾದಿ ಮತ್ತು ಶ್ರೀ. ಎ. ಜಿ. ಮಂಗಳವೇಡೆಕರ. ಸಂಘವಿದ್ದ ಸ್ಥಳ: ಸಂಧ್ಯಾಗಿರಿ ಸದನ, ಗಿರಗಾಂವ–ಮುಂಬಯಿ ೪. ಡೆ. ಅ. ೨೦ ಪುಟಗಳು.

ವರದಿಯ ವರ್ಷದಲ್ಲಿ ಈ ಸಂಸ್ಥೆಯು ಮುಂಬಯಿ ನಗರದಲ್ಲಿ ಹಲವು ಕನ್ನಡ ಚಟುವಟಿಕೆಗಳನ್ನು ಯಶಸ್ವಿಯಾಗಿ ಜರುಗಿಸಿರುವುದು ಅಭಿನಂದನೀಯ ಸಂಗತಿ. ಕರ್ನಾಟಕ ಸಂಘಕ್ಕೆ ಸ್ವತಂತ್ರ ಕಟ್ಟಡವನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಹಣವನ್ನು ಕೂಡಿಸುತ್ತಲಿದ್ದಾರೆ. ಮುಂಬಯಿಯಲ್ಲಿರುವ ಕನ್ನಡಿಗರು ಮನಸ್ಸು ಮಾಡಿದರೆ, ಸ್ವತಂತ್ರ ಕಟ್ಟಡವೊಂದು ಅಸಾಧ್ಯವಾದ ವಿಷಯವೇನೂ ಅಲ್ಲ. ಉತ್ಸಾಹದಿಂದ ಕಾರ್ಯ ಮಾಡುತ್ತಲಿರುವ ಸಂಚಾಲಕ ವರ್ಗಕ್ಕೆ ನಮ್ಮ ಅಭಿನಂದನೆಗಳು.

೪೩ **ಆಶಾದೀಪ** (ಕವನ ಸಂಕಲನ) ಲೇಖಕರು ಶ್ರೀ. ಎಚ್. ಎಸ್. ಹುಯಿಲಗೋಳ, ಹಳೇಹುಬ್ಬಳ್ಳಿ ಅವರು. ಪ್ರಕಾಶಕರು: ಪ್ರಕಾಶ ಮಂದಿರ, ಅಕ್ಕಸಾಲಿಗರ ಓಣಿ, ಹಳೆಯ ಹುಬ್ಬಳ್ಳಿ. ಫೂ. ಕ್ಯಾ. ಅ. ೩೦ ಪುಟಗಳು. ಬೆಲೆ ೦-೨-೦.

೪೪ **ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘದ** ೧೧ನೆಯ ವರ್ಷದ ವರದಿ (ಶಾ. ವಾ. ಶಕೆ ೧೮೭೫) ಕಾರ್ಯದರ್ಶಿಗಳು ಶ್ರೀ. ಹ. ಜನಾರ್ದನರಾಯರು ಮತ್ತು ಶ್ರೀ. ಗುಲಾಮರಸೂಲ್ ಸಾಹೇಬರು. ಕ್ರೌ. ಅ. ೨೦ ಪುಟಗಳು.

ರಂಗಂಪೇಟೆಯು ಚಿಕ್ಕ ಊರಾದರೂ ಅಲ್ಲಿಯ ಜನರ ಕನ್ನಡದ ಪ್ರೀತಿಯೂ ಸಾಹಿತ್ಯ-ಸಂಸ್ಕೃತಿಗಳನ್ನು ಅರಿತುಕೊಳ್ಳಬೇಕೆಂಬ ಅಭಿಲಾಷೆಯೂ ಪ್ರಶಂಸನೀಯವಾದವುಗಳಾಗಿವೆ.

ಓದಿದರೆ ರಸಪೂರ್ಣ ಕಥೆಗಳು, ಆಡಿದರೆ ಮನೋಹರ ನಾಟಕಗಳು !

ಶ್ರೀ 'ಆನಂದ ಕಂದರು' (ಬೆಟಗೇರಿ ಕೃಷ್ಣಶರ್ಮ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಆಕರ್ಷಕ ಸಂಭಾಷಣೆಗೆ, ತಿಳಿಯಾದ ನಗೆಯ ಬುಗ್ಗೆಗೆ, ಮನಮುಟ್ಟುವ ಪಾತ್ರನಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ, 'ಬೆಂದ ಹೃದಯ'.

— ಪುಸ್ತಕ ಪ್ರಪಂಚ (ಸಪ್ಟಂಬರ್ ೧೯೫೪)

ಕ್ರಾ. ಅ. ೧೨೮ ಪುಟಗಳು

ಬೆಲೆ ೧—೪—೦

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ.

Printed by S. G. Kulkarni at the Sadhana Press, Dharwar. and pulished for the Proprietors Jayanti publications, by S. D. Dharmatti, at the Jayanti Office, Dharwar.

ಜಯಂತಿ

ನವೆಂಬರ್ ೧೯೪೪

ಪ್ರಜ್ವಾಲಿತೋ ಜ್ಞಾನಮಯಪ್ರದೀಪಃ !

◆

ದೀಪವು ಜ್ಞಾನದ ಸಂಕೇತವಾಗಿ ನಡೆದುಬಂದಿದೆ!
ದೀಪಾವಳಿಯ ಹಬ್ಬವೆಂದರೆ ಜನತೆಯ ಜ್ಞಾನದ ಸಂಕೇತ!
ದೀಪಾವಳಿಯನ್ನು ಹಾರಯಿಸುವದೆಂದರೆ ಜ್ಞಾನದ
ಪರಿಪೂರ್ಣತೆಯನ್ನು ಹಾಗಯಿಸುವುದು!
ಜ್ಞಾನರಹಿತವಾದ ದೀಪಾವಳಿ ಹಬ್ಬವು ಬೆಳಕನ್ನು ತಾರದು!
ಈ ಹಬ್ಬದಲ್ಲಿ ಸಂಸ್ಕೃತಿಯ ಸವಿದುತ್ತನ್ನು
ಉಣ್ಣಬೇಕೇ ಹೊರತು ಪಕ್ವಾನ್ನದ ಸವಿಯೂಟವನ್ನಲ್ಲ!
ಸಂಸ್ಕೃತಿಯಿಲ್ಲದ ಸವಿಯೂಟ ದೇಶಕ್ಕೆ ದೀಪಾವಳಿಯೆನಿಸದು;
ಅಂಧಕಾರಾವಳಿಯಾಗಿಯೆ ಪರಿಣಮಿಸುವುದು!
ನಿಜವಾದ ದೀಪಾವಳಿ ಲೋಕವನ್ನೆಲ್ಲ ತೊಳಗಿಸಲಿ!

ಬೆಲೆ : ೮ ಆಣೆಗಳು

ಸಂಚಿಕೆ

ಈ ಸಂಚಿಕೆಯಲ್ಲಿ:

●

ಪಾಕಿಸ್ತಾನದಲ್ಲಿಯ ಪ್ರಜಾಪ್ರಭುತ್ವ (ಸಂಪಾದಕೀಯ)
ಸಂಪಾದಕರು ೨೦೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೨೦೩

ಶೋಭನೆಯ ಹಾದಿ (ಸಣ್ಣಕತೆ)
ಶ್ರೀ. ಶಾಂತಿನಾಥ ದೇಸಾಯಿ ಎಂ., ಎ. ಮುಂಬಯಿ ೨೦೫

ಮೂರ್ತಿಗೆ ಕಾಗದಗಳು (ಪತ್ರ ಪ್ರಬಂಧ)
ಶ್ರೀಮತಿ ಸರೋಜಿನಿ ಮಹಿಷಿ ಎಂ., ಎ. ಬೆಳಗಾಂವಿ ೨೧೩

ಲೀಲಾವತಿ (ಕಥನಕವನ)
ಶ್ರೀ. ಜ. ಶ್ರೀ. ದೇಸಾಯಿ, ಜರಕುಂಟಿ ಬಿ. ಎ., ಬಿ ಟಿ. ಶಹಾಪುರ ೨೧೫

ಗೆಳೆಯನಿಗೆ (ಕವನ)
ಶ್ರೀ. ಎಂ. ಗೋಪಾಲಕೃಷ್ಣ ಭಟ್ಟ, ಸೀಜಾರ್ಲ (ದ. ಕ.) ೨೧೬

ಪಾಶ್ಚರ್ ಮತ್ತು ಅವನ ಪ್ರಯೋಗಗಳು (ಪರಿಚಯ)
ಶ್ರೀ. ಟಿ ಆರ್. ನಾಡಿಗೇರ ಬಿ ಎಸ್ಸಿ. (ಆನರ್ಸ್), ಬಿ. ಎಸ್ಸಿ. (ಟೆಕ್) ಮುಂಬಯಿ ೨೧೭

ದೀಪಾವಳಿಯಂದು ಬರುತಿದೆ ಚೆನ್ನೆ (ಕವನ)
ಶ್ರೀ ಎಸ್ ಎಸ್. ಬಸುಪಟ್ಟದ ಎಂ. ಎ., ಬಿ ಇಡಿ. ಗುಳೇದಗುಡ್ಡ ೨೨೧

ಅಭಂಗ (ಕಿರುಗತೆ)
ಶ್ರೀ. ವಸಂತ ಕುಷ್ಟಗಿ, ಲಿಂಗಸುಗೂರು ೨೨೨

ಕಾರುಣ್ಯಗಂಗಾ (ಸಣ್ಣಕತೆ)
ಶ್ರೀ. ಆರ್. ಜಿ. ಕುಲಕರ್ಣಿ, ಕರ್ನಾಟಕ ಕಾಲೇಜ್, ಧಾರವಾಡ ೨೨೩

ಜರ್ಮನಿಯ ಕಾರ್ನಿವಾಲ್ ಹಬ್ಬದ ಸಂಭ್ರಮ (ಒಂದು ಪತ್ರ)
ಶ್ರೀ. ಎಂ. ಕೆ. ವರಾಹಮೂರ್ತಿ ಬಿ. ಎಸ್ಸಿ (ಟೆಕ್), ಎಂ. ಎಸ್ಸಿ. ಪ. ಜರ್ಮನಿ ೨೨೬

ಕಣ್ಣುಮುಚ್ಚಾಲೆ (ಒಂದು ದೃಶ್ಯ)
ಶ್ರೀ. ವಿ. ಎಂ. ಇನಾಮದಾರ ಎಂ. ಎ. ಧಾರವಾಡ ೨೨೮

ಕರ್ನಾಟಕ ಮತ್ತು ಆಂಧ್ರ ಸಂಸ್ಕೃತಿಗಳು (ಪರಿಚಯ ಪ್ರಬಂಧ)
ಶ್ರೀ. ಸಿ ವೆಂಕೋಬಾಚಾರ್ಯ ಬಿ. ಎ, ಬಿ. ಟಿ. ಹುಬ್ಬಳ್ಳಿ ೧೩೭

ಪ್ರಾಣದ ಕರೆ (ನವ್ಯಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್ಎಲ್. ಬಿ. ಮುಂಬಯಿ ೨೪೦

ಸಾದರ ಸ್ವೀಕಾರ ... . ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೭ ಸಂಚಿಕೆ ೬

ಕುಟುಂಬದಲ್ಲಿಯು
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಪಾಕಿಸ್ತಾನದಲ್ಲಿಯ ಪ್ರಜಾಪ್ರಭುತ್ವ

ಭಾರತೀಯರ ಸ್ವಾತಂತ್ರ್ಯದ ಹೋರಾಟದ ಫಲವಾಗಿ, ಹಿಂದೆ ಭಾರತದ ಅಂಗವಾಗಿಯೆ ಇದ್ದ ಪಾಕಿಸ್ತಾನವೂ ಸ್ವಾತಂತ್ರ್ಯ ಪಡೆಯಿತು. ಭಾರತ-ಪಾಕಿಸ್ತಾನಗಳೆರಡರಲ್ಲಿಯೂ ಪ್ರಜಾ-ಪ್ರಭುತ್ವವು ಆರಂಭವಾಯಿತು. ಸ್ವಾತಂತ್ರ್ಯ ದೊರೆತಂದಿನಿಂದಲೂ ಭಾರತದ ಆಡಳಿತಸೂತ್ರವು ಕಾಂಗ್ರೆಸ್ಸಿನ ಕಡೆಗಿದೆ; ಪಾಕಿಸ್ತಾನದ ಆಡಳಿತಸೂತ್ರವು ಮುಸ್ಲಿಂಲೀಗಿನ ಕಡೆಗಿದೆ. ಭಾರತ-ದಲ್ಲಿಯ ಪ್ರಜಾಪ್ರಭುತ್ವವು ಪ್ರಗತಿಪಥವನ್ನು ಹಿಡಿದು ನಡೆದಿದೆ; ಪಾಕಿಸ್ತಾನದಲ್ಲಿ ಅದು ಅಧೋ-ಗತಿಯ ದಾರಿಯನ್ನು ಹಿಡಿದು ಹೊರಟಿದೆ.

ಸ್ವಾತಂತ್ರ್ಯಯುದ್ಧದಲ್ಲಿ ತನು-ಮನೋಧನಗಳನ್ನು ಸಮರ್ಪಣಮಾಡಿ, ಬಂದ ಕಷ್ಟ-ನಷ್ಟಗಳಿಗೆಲ್ಲ ಎದೆಗೊಟ್ಟು ನಿಂತು ಗೆಲವನ್ನು ಗಳಿಸಿದ ಭಾರತೀಯ ಕಾಂಗ್ರೆಸಿಗರಿಗೆ, ಸ್ವಾತಂತ್ರ್ಯ-ಪ್ರಜಾಪ್ರಭುತ್ವಗಳ ಬೆಲೆಯು ಎಂತಹದೆಂಬುದು ಚೆನ್ನಾಗಿ ಗೊತ್ತಿದೆ. ಯಾವ ಕಷ್ಟ-ನಷ್ಟಗಳನ್ನೂ ಅನುಭವಿಸದೆ ಮನೆಯಲ್ಲಿ ಮಲಗಿಕೊಂಡಾಗಲೆ—ಅನಾಯಾಸವಾಗಿ—ದೊರೆತಿರುವ ಸ್ವಾತಂತ್ರ್ಯ-ಸ್ವರಾಜ್ಯಗಳ ಬೆಲೆಯು ಪಾಕಿಸ್ತಾನದಲ್ಲಿಯ ಮುಸ್ಲಿಂಲೀಗಿನವರಿಗೆ ಸ್ವಲ್ಪವೂ ಇಲ್ಲದಂತಾಗಿದೆ. ಎಂತಲೇ ಅಲ್ಲಿಯ ಸರಕಾರಗಳು, ಅಧಿಕಾರಲೋಭಿಗಳಾದ ಸಂಧಿಸಾಧಕರ ಸಂತೆಗಳಾಗಿವೆ.

ಪೈಗಂಬರವಾಸಿ ಜಿನ್ನಾಸಾಹೇಬರ ವೈಯಕ್ತಿಕ ದುರಾಗ್ರಹವು ಭಾರತವನ್ನು ಶಾಶ್ವತ-ವಾಗಿ ಎರಡು ಭಾಗಗಳಾಗುವಂತೆ ಮಾಡಿತು. ಅಂದು ಮುಸಲ್ಮಾನ್ ಜನಸಾಮಾನ್ಯರ ಮನದಲ್ಲಿ ಪಾಕಿಸ್ತಾನದ ರಾಜಕೀಯ ಭವಿಷ್ಯದ ವಿಚಾರವೇ ಮೂಡಿರಲಾರದು. ಧರ್ಮದ ಅಂಧವಿಶ್ವಾಸ-ದಿಂದ ಅವರು ಜಿನ್ನಾಸಾಹೇಬರಿಗೆ ಬೆಂಬಲವನ್ನು ಕೊಟ್ಟರು; ಪಾಕಿಸ್ತಾನವನ್ನು ದೊರೆಕಿಸಿ ಜಯ-ಘೋಷವನ್ನು ಮಾಡಿದರು. ಜಿನ್ನಾಸಾಹೇಬರು ಸುದೈವಿಗಳಾದುದರಿಂದ; ಬೇಗನೆ ಪೈಗಂಬರ ವಾಸಿಗಳಾಗಿ ತಮ್ಮ ಹೆಸರನ್ನು ಉಳಿಸಿಕೊಂಡರು. ಇದುವರೆಗೂ ಅವರು ಬದುಕಿ ಉಳಿದಿದ್ದರೆ, ಕೃತಕರ್ಮಕ್ಕಾಗಿ ಅವರು ಪಶ್ಚಾತ್ತಾಪವನ್ನು ಪಡುವ ಪ್ರಸಂಗ ಬಾರದೆ ಇರುತ್ತಿರಲಿಲ್ಲ.

ಜಿನ್ನಾಸಾಹೇಬರನ್ನು ದೊಡ್ಡವರನ್ನಾಗಿ ಮಾಡಿದವರು ಮುಸ್ಲಿಂ ಸಮಾಜದವರಲ್ಲ. ಇಷ್ಟೇ ಏಕೆ? ಎಷ್ಟೋ ಕಾಲದ ವರೆಗೆ ಅವರನ್ನು ಮುಸ್ಲಿಂ ಸಮಾಜ ತನ್ನ ನಾಯಕನೆಂದು ಒಪ್ಪಿ ಕೊಳ್ಳುತ್ತಲೂ ಇರಲಿಲ್ಲ. ಬ್ರಿಟಿಷರ ಕುಟಿಲ ರಾಜನೀತಿ, ಜಿನ್ನಾಸಾಹೇಬರನ್ನು ದೊಡ್ಡವರನ್ನಾಗಿ ಮಾಡಿತು; ಅವರು ದೊಡ್ಡವರಾದ ಮೇಲೆ, ಅನೇಕ ಮುಸಲ್ಮಾನರು ಅವರನ್ನು ನಾಯಕರೆಂದು ಒಪ್ಪಿಕೊಳ್ಳಲು ಸಿದ್ಧರಾದರು. ಹೀಗೆ ಒಪ್ಪಿಕೊಳ್ಳುವವರಲ್ಲಿ ಬಹುಜನರು ಅಧಿಕಾರಲುಬ್ಧರಿದ್ದರೇ ಹೊರತು, ನಿಜವಾದ ಪ್ರಜಾಹಿತಬುದ್ಧಿಯ ದೇಶಸೇವಕರು ಒಬ್ಬರೂ ಇರಲಿಲ್ಲ.

ಸ್ವಾತಂತ್ರ್ಯ ದೊರೆತ ಮೇಲೆ, ಜಿನ್ನಾಸಾಹೇಬರಿರುವಾಗಲೆ ಅಲ್ಲಿ ಮೊದಲನೆಯ ಕೇಂದ್ರ ಮಂತ್ರಿಮಂಡಲ ಪ್ರಸ್ಥಾಪಿತವಾಯಿತು. ಪ್ರಾಂತೀಯ ಸರಕಾರಗಳು ಕೆಲವು ಮೊದಲೇ ಇದ್ದುವು. ಒಂದೆರಡು ಆ ಮೇಲೆ ರೂಪುಗೊಂಡುವು. ಆಗಲೆ ಅಲ್ಲಲ್ಲಿ ವೈಯಕ್ತಿಕ ದ್ವೇಷದ ಕಿಚ್ಚು ಹೊತ್ತ-ತೊಡಗಿತು. ಪಶ್ಚಿಮ-ಪೂರ್ವಪಾಕಿಸ್ತಾನಗಳಲ್ಲಿಯ ವೈಮನಸ್ಯವಂತೂ ಸರಿಯೇ ಸರಿ. ಸಿಂಧ-ಪಂಜಾಬಗಳಲ್ಲಿ ಒಳತೋಟಿಯೂ ಪ್ರಾರಂಭವಾಯಿತು. ವಾಯುವ್ಯಪ್ರಾಂತವಂತೂ ಅಶಾಂತಿಯ ಆಗರವಾಗಿದ್ದಿತು. ಹೊಸ ಹುರುಪಿನಲ್ಲಿ ಅನೇಕ ಜನರು ಜಿನ್ನಾಸಾಹೇಬರ ಮಾತಿಗೆ ಮನ್ನಣೆ ಕೊಡುವವರಂತೆ ನಟಿಸಿದುದರಿಂದ, ಅವರು ಹೇಗೋ ಏನೋ—ಕೆಲವು ದಿನ ಕಡಿವಾಣವನ್ನು ಹಿಡಿದುಕೊಂಡು, ಆಡಳಿತದ ಕುದುರೆಯನ್ನು ನಡೆಯಿಸಿದರು. ಬರು-ಬರುತ್ತ ಆ ಕುದುರೆ ಅವರ ಕಡಿವಾಣದ ಬಿಗಿತವನ್ನೂ ಕೇಳದಂತಾಯಿತು. ಜಿನ್ನಾಸಾಹೇಬರಿಗೆ ಕಂಗೆಡುವ ಪ್ರಸಂಗವೇ

ಬಂದ್ಬಿದ್ದಿತು. ಅಷ್ಟರಲ್ಲಿಯೆ ಕಾಲರಾಯನು ಕೃಪೆಯನ್ನು ತೋರಿ ಅವರನ್ನು ಪೈಗಂಬರರ ಬಳಿ ಕರೆದುಕೊಂಡು ಹೋದ.

ಜಿನ್ನಾಸಾಹೇಬರ ಅಭಾವದಿಂದ ಪಾಕಿಸ್ತಾನವು ಸೇನಾನಿಯಿಲ್ಲದ ಸೈನ್ಯದಂತಾಯಿತು. ಅವರ ವರದಹಸ್ತದಿಂದ ಮುಖ್ಯಮಂತ್ರಿ ಪದದಲ್ಲಿ ಮೆರೆಯುತ್ತಿದ್ದ ಲಿಯಾಕತ ಅಲ್ಲಿಖಾನರು, ಬಂದುಗಾರನ ಗುಂಡಿಗೆ ಆಹುತಿಯಾದರು. ಪ್ರಾಂತೀಯ ಸರಕಾರಗಳಲ್ಲಿಯೂ ಒಳಜಗಳಗಳು ಪ್ರಾರಂಭವಾದುವು. ಮುಸ್ಲಿಂಲೀಗಿನ ತಂತ್ರದಿಂದಲೇ ನಿರ್ಮಾಣವಾದ ಸರಕಾರಗಳಾದರೂ, ಅಧಿಕಾರದಲ್ಲಿರದ ಮುಸ್ಲಿಂಲೀಗಿನ ಮುಂದಾಳುಗಳೇ ಅಧಿಕಾರಮೋಹದಿಂದ, ಸರಕಾರದ ನಿಯಮಗಳನ್ನು ಉಲ್ಲಂಘಿಸಿ ನಡೆಯತೊಡಗಿದರು. ಪಾಕಿಸ್ತಾನದ ಪ್ರಾರಂಭದಲ್ಲಿ ಒಂದೇ ಒಂದು ಸರ್ವಸತ್ತಾತ್ಮಕ ಸಂಸ್ಥೆಯಾಗಿದ್ದ ಮುಸ್ಲಿಂಲೀಗಿಗೆ ವಿರೋಧಿಸಂಸ್ಥೆಗಳು ಹುಟ್ಟಿ ಬೆಳೆಯತೊಡಗಿದುವು.

ಭಾರತದೊಂದಿಗೆ ಪಾಕಿಸ್ತಾನದಲ್ಲಿಯೂ ರಾಜ್ಯಘಟನಾಸಮಿತಿ ಸ್ಥಾಪಿತವಾಗಿದ್ದಿತು. ಭಾರತದ ಘಟನಾಸಮಿತಿ ತನ್ನ ಕಾರ್ಯವನ್ನು ಪೂರ್ತಿಗೊಳಿಸಿ, ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಿಸಿ ೫-೬ ವರ್ಷಗಳಾದುವು; ಆದರೆ ಪಾಕಿಸ್ತಾನದ ಘಟನಾಸಮಿತಿಗೆ ಏಳು ವರ್ಷಗಳಲ್ಲಿಯೂ ಯಾವ ಕಾರ್ಯವನ್ನೂ ಮಾಡಲಿಕ್ಕಾಗಲಿಲ್ಲ. ಈಗ ಅದು ಅಲ್ಲಿಯ ಗವ್ಹರ್ನರ್ ಜನರಲರ ವಿಶೇಷ ಕಟ್ಟಪ್ಪಣೆಯಂತೆ ತನ್ನ ಅಸ್ತಿತ್ವವನ್ನೇ ನಷ್ಟಗೊಳಿಸಿಕೊಂಡಿತು.

ಪಾಕಿಸ್ತಾನದಲ್ಲಿಯ ಕೇಂದ್ರ ಸರಕಾರ ಇದುವರೆಗೂ, ತನ್ನ ರಾಷ್ಟ್ರದ ಯೋಗ-ಕ್ಷೇಮದ ವಿಚಾರವನ್ನು ಮರೆತು, ಭಾರತದೊಂದಿಗೆ ಬಡಿದಾಡಬೇಕೆಂದು ಕಾಲುಕೆದರುವುದರಲ್ಲಿಯೆ ತನ್ನ ವೇಳೆಯನ್ನು ವ್ಯಯಮಾಡಿದೆ. ಭಾರತ ಪೂರ್ವವೆಂದರೆ, ಪಾಕಿಸ್ತಾನ ಪಶ್ಚಿಮವೆನ್ನುವುದು. ಎಂತಲೇ ಅಮೇರಿಕನರಂತಹ ಸಾಮ್ರಾಜ್ಯವಾದಿಗಳನ್ನು ಕರೆದು ತಂದು ತನ್ನ ನಡುಮನೆಯಲ್ಲಿ ಕೂಡಿಸಿಕೊಂಡಿರುವುದು. ಭಾರತದ ಉನ್ನತಿಯನ್ನು ಸಹಿಸದ ಬ್ರಿಟಿಷರನ್ನೂ ಅದು ತನ್ನ ಹತ್ತಿರದ ಮಿತ್ರರನ್ನಾಗಿ ಮಾಡಿಕೊಂಡಿದೆ. ಇಷ್ಟು ಮಾಡಿಯೂ ಅದು ಸಾಧಿಸಿದುದೇನು ? ಅಂತರಿಕ ಅಶಾಂತಿ! ವೈಯಕ್ತಿಕ ದ್ವೇಷ-ಮತ್ಸರಗಳು! ಇವರ ದುಷ್ಪರಿಣಾಮವನ್ನು ಪಾಪ, ಬಡ ಪಾಕಿಸ್ತಾನದ ಪ್ರಜಾಸಾಮಾನ್ಯರು ಅನುಭವಿಸಬೇಕಾಗಿದೆ.

ಹಲವು ಧರ್ಮ-ಸಂಘಗಳವರಿಗೆ ಆಶ್ರಯವಾದ ಹಿಂದುಸ್ತಾನದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗುವುದು ಸಾಧ್ಯವೇ ಇಲ್ಲವೆಂದು ಹೇಳುತ್ತಿದ್ದ ಪಶ್ಚಿಮದ ರಾಜಕಾರಣಿಗಳ ಬಾಯನ್ನು, ಇಂದಿನ ಭಾರತದ ಪ್ರಜಾಪ್ರಭುತ್ವವು ತೆರೆಯದಂತೆ ಮಾಡಿದೆ. ಆದರೆ ಒಂದೆ ಒಂದು ಧರ್ಮದ ಜನರಿಂದ ಕೂಡಿದ ಪಾಕಿಸ್ತಾನದಲ್ಲಿ, ಪ್ರಜಾಪ್ರಭುತ್ವದ ದಿವಾಳಿಯು ಎದ್ದಿದೆ. ರಾಷ್ಟ್ರದ ಸುಖ-ಸೌಕರ್ಯಗಳೇ ಸರಕಾರದ ಆದರ್ಶವೆಂಬ ಭಾವನೆಯಿಂದ, ಭಾರತದ ರಾಜಕಾರಣಿಗಳು ತಮ್ಮ ತಮ್ಮ ವೈಯಕ್ತಿಕ ಮತ-ಪಂಥಗಳನ್ನು ಕಡೆಗಣಿಸಿ, ರಾಷ್ಟ್ರಧರ್ಮಿಗಳಾಗುತ್ತಲಿದ್ದಾರೆ. ವೈಯಕ್ತಿಕ ಅಧಿಕಾರವು ಆದರ್ಶವಾಗಿರುವ ಪಾಕಿಸ್ತಾನದ ರಾಜಕಾರಣಿಗಳು, ಒಂದೆ ಧರ್ಮದವರಾದರೂ ನೂರು ಪಂಗಡಗಳನ್ನು ಹುಟ್ಟಿಸಿಕೊಂಡು ತಮ್ಮ-ತಮ್ಮೊಳಗೆ ಹೋರಾಡುತ್ತಲಿದ್ದಾರೆ.

ಪಾಕಿಸ್ತಾನದ ಇಂದಿನ ಮುಖ್ಯಮಂತ್ರಿಗಳಾಗಿರುವ ಮಹಮ್ಮದ್ ಅಲಿಯವರು, ಮೊದ-ಮೊದಲು ಭಾರತದೊಂದಿಗೆ ಸಮಂಜಸ ಮಾರ್ಗದಿಂದಲೇ ನಡೆದುಕೊಳ್ಳಬೇಕೆಂದು ಹೊರಟರು. ಮಾನ್ಯ ಜವಾಹರಲಾಲರನ್ನು ಹಿರಿಯಣ್ಣನೆಂದು ಹತ್ತಿರದ ಸಂಬಂಧದ ಮಾತುಗಳನ್ನೇ ಆಡಿದರು. ಆದರೆ ಯಾವ ಬಿಳಿಯ ಬೆಕ್ಕು ಎಲ್ಲಿ ಸೀತಿತೇನೊ! ಒಮ್ಮೆಲೆ ಅವರು ತಮ್ಮ ವಿಚಾರದ ದಿಶೆಯನ್ನೇ ಬದಲಿಸಿದರು. ಪಕ್ಕದಲ್ಲಿಯೆ ಇರುವ ಭಾರತೀಯರನ್ನು ಬಿಟ್ಟು, ಸಪ್ತಸಮುದ್ರ ದಾಚೆಯ ಅಮೇರಿಕನರ ಸಂಬಂಧವನ್ನು ಬೆಳಸಿದರು. ಭಾರತದ ವಿರುದ್ಧವಾಗಿ ವಿದೇಶಗಳಲ್ಲೆಲ್ಲ ಕುಪ್ರಚಾರ ನಡೆಸಿದರು. ಪಾಪ ಏನು ಮಾಡಿಯೂ ಏನು ? ನಿಂತ ನೆಲವು ಗಟ್ಟಿಯಾಗಿದ್ದರಲ್ಲವೇ ಏನಾದರೂ ಚಲನವಲನಗಳನ್ನು ನಡಿಸುವುದು ?

ಆಂತರಿಕ ಅಶಾಂತಪರಿಸ್ಥಿತಿಯ ಮೂಲಕ ಮಹಮ್ಮದ್ ಅಲಿಯವರಿಂದು ಕಂಗೆಟ್ಟು ಹೋಗಿದ್ದಾರೆ. ಗವರ್ನರ್ ಜನರಲರ ನೆರವು ದೊರೆಯದೆ ಹೋಗಿದ್ದರೆ ಮಂತ್ರಿತ್ವದ ಪೀಠ ಅವರಿಗೆ ಉಳಿಯುತ್ತಿದ್ದಿತೋ ಇಲ್ಲವೊ! ಮುಖ್ಯಮಂತ್ರಿಗಳಾಗಿ ಮಹಮ್ಮದ್ ಅಲಿಯವರೇ ಉಳಿದಿದ್ದರೂ, ಮಿಕ್ಕ ಮಂತ್ರಿಮಂಡಲವೆಲ್ಲ ಪುನರ್ಘಟಿತವಾಗಿದೆ. ಇದುವರೆಗಿನ ಪಾಕಿಸ್ತಾನ್ ಸರಕಾರವು ವಿದ್ರೋಹಿಯೆಂದು ಕಾಣುತ್ತಿದ್ದ ಡಾಕ್ಟರ್ ಖಾನ್‌ಸಾಹೇಬ ಅವರಿಗೂ ಈಗ ಮಂತ್ರಿಮಂಡಳದಲ್ಲಿ ಸ್ಥಾನ ದೊರೆತುದು ಆಶ್ಚರ್ಯದ ಸಂಗತಿಯಾಗಿದೆ.

ಹೊಸತಾಗಿ ಮಂತ್ರಿಪದಕ್ಕೆ ಬಂದ ಒಬ್ಬಿಬ್ಬರ ಬಾಯಿಂದ ಸಮಂಜಸ ವಿಚಾರಗಳು ಹೊರಗೆ ಬರತೊಡಗಿದುದು ಒಳ್ಳೆಯ ಭವಿಷ್ಯದ ಲಕ್ಷಣವಾಗಿದೆ. ಇದರ ಪರಿಣಾಮವಾಗಿ ಭಾರತ-ಪಾಕಿಸ್ತಾನಗಳಲ್ಲಿಯ ವಿರೋಧಭಾವವು ನಷ್ಟವಾಗಿ, ನಿಜವಾದ ಸೌಹಾರ್ದವು ಬೆಳೆಯಲು ತೊಡಗಿದರೆ, ಎರಡು ರಾಷ್ಟ್ರಗಳಿಗೂ ಸುಖವಾಗುವುದು. ಆದರೆ ಭಾರತ-ಪಾಕಿಸ್ತಾನಗಳ ದ್ವೇಷಾಗ್ನಿಯಲ್ಲಿ ಪೆಟ್ರೋಲನು ಉಗ್ಗಲು ಸಿದ್ಧರಾಗಿ ಒಳಮನೆಯಲ್ಲಿಯೆ ಕುಳಿತಿರುವ ವಿದೇಶಿಗರು ಸುಮ್ಮನೆ ಇರುವರೆ ? ಮುಂದೆಯೂ ಪಾಕಿಸ್ತಾನವು ಅವರ ಕುಟಿಲ ತಂತ್ರದ ಬಲೆಯಲ್ಲಿಯೆ ಸಿಲುಕಿಕೊಂಡರೆ, ಅಲ್ಲಿಯ ಪ್ರಜಾ-ಪ್ರಭುತ್ವದ ಗೋಳನ್ನು ಅಲ್ಲಾನೇ ಕೇಳಬೇಕು.

ಈ ಸಂಚಿಕೆ

ಎಷ್ಟೋ ಪತ್ರಿಕೆಗಳು ದೀವಳಿಗೆಗಾಗಿ ಬಣ್ಣಬಣ್ಣದ ಚಿತ್ರದ ಸಂಚಿಕೆಗಳನ್ನು ಪುಷ್ಟ-ಪುಷ್ಟಗಾತ್ರಗಳಲ್ಲಿ ಹೊರಡಿಸಿವೆ. ಜಯಂತಿ ಬಡವಿ. ಆಡಂಬರದ-ವೇಷಭೂಷಣ ಮಾಡಿಕೊಳ್ಳಲು ಸಾಧ್ಯವಿಲ್ಲ. ದೇಹವನ್ನು ಪುಷ್ಟಗೊಳಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ. ಆದರ ಸಾಧ್ಯವಿದ್ದಷ್ಟು ಸವಿಯಾದ-ಹಿತವಾದ-ಸಾಹಿತ್ಯದೂಟವನ್ನು ತನ್ನ ವಾಚಕರಿಗೆ ಕೊಡುವ ತನ್ನ ಪ್ರಯತ್ನವನ್ನು ಮಾತ್ರ ಬಿಟ್ಟಿಲ್ಲ. ಈ ಸಲ ಬಂದ ಲೇಖನಗಳನ್ನು ಓದುವವರಿಗೆ, ಜಯಂತಿಯ ಪ್ರಯತ್ನದ ಫಲವ ಮನವರಿಕೆಯಾಗದಿರದೆಂದು ನಮ್ಮ ನಂಬುಗೆ.

—ಸಂಪಾದಕರು

ನಾಡನಡೆ

●

ಭಾರತದಲ್ಲಿಯ ಫ್ರೇಂಚ್ ಪ್ರಭುತ್ವದ ಮುಕ್ತಾಯ

ಇದೇ ನವಂಬರ್ ೧ನೆಯ ತಾರೀಖಿನಿಂದ ಭಾರತದಲ್ಲಿಯ ಫ್ರೇಂಚ್ ಪ್ರದೇಶಗಳೆಲ್ಲ ಸ್ವತಂತ್ರವಾಗಿ, ಭಾರತದ ಆಡಳಿತದ ಕೆಳಗೆ ಬಂದುವು. ಸಂಸ್ಕಾರಸಂಪನ್ನರಾದ ಫ್ರೇಂಚರಿಗೆ ಮಾನವತೆಯ ಬೆಲೆಯು ಚೆನ್ನಾಗಿ ಗೊತ್ತಿದೆ; ಜಾಗತಿಕ ರಾಜಕಾರಣದ ಅರಿವು ಸಾಕಷ್ಟು ಇದೆ ಎಂತಲೆ ಅವರು ಭಾರತ ಸರಕಾರದೊಂದಿಗೆ ಸಹಾನು-ಭೂತಿ ಸೌಹಾರ್ದಗಳಿಂದ ಮಾತುಕತೆ ನಡೆಯಿಸಿ, ಸ್ನೇಹಪೂರ್ಣ ವಾತಾವರಣದಲ್ಲಿಯೆ ಕೊಡುಕೊಳ್ಳುವ ವ್ಯವಹಾರವನ್ನು ಬಗೆಹರಿಸಿಕೊಂಡು, ಭಾರತದಿಂದ ಬೀಳ್ಕೊಂಡರು. ಸ್ವತಂತ್ರ ಭಾರತದ ನಕ್ಷೆಯಲ್ಲಿ ಕಲಂಕದಂತೆ ಉಳಿದುಕೊಂಡು ಸ್ವಾತಂತ್ರ್ಯಪ್ರಿಯರ ಎದೆಯನ್ನು ಚುಚ್ಚುತ್ತಿದ್ದ ಪಾಂಡಿಚೇರಿ, ಮಾಹಿ, ಯೂನಾನ್, ಕಾರೈಕಲ್– ಈ ನಾಲ್ಕೂ ಪ್ರದೇಶಗಳೂ ಸ್ವತಂತ್ರ ಭಾರತದಲ್ಲಿ ಕೂಡಿಕೊಂಡುವು. ಸಂಕ್ರಮಣಕಾಲದಲ್ಲಿ ಅಲ್ಲಿಯ ಆಡಳಿತದ ವ್ಯವಸ್ಥೆಯು ಮೊದಲಿನ ರೀತಿಯಲ್ಲಿಯೇ ನಡೆಯಬಹುದಾದರೂ, ಬೇಗನೆ ಅಲ್ಲಿಯೂ, ಚುನಾವಣೆಗಳೂ ನಡೆದು, ಪ್ರಜೆಗಳ ಅಪೇಕ್ಷೆಯಂತೆ ಭಾರತದ ರಾಜ್ಯಘಟನೆಗನುಸಾರವಾದ ಆಡಳಿತ ಅಲ್ಲಿಯೂ ನಡೆಯಬಹುದು.

ಈಗ ತೋರಿಸಿದ ಸಮಂಜಸತನವನ್ನು ಫ್ರೇಂಚರು ಹಿಂದೆಯೆ ತೋರಿಸಿಬಿಟ್ಟಿದ್ದರೆ, ಅವರ ಸೌಜನ್ಯ ಪರಿಪೂರ್ಣವಾದುದೆಂದು ಸಿದ್ಧ-ವಾಗುತ್ತಿತ್ತು. ಫ್ರೇಂಚಭಾರತದಲ್ಲಿ ಇಲ್ಲದ ಅಶಾಂತಿ-ಅತೃಪ್ತಿಗಳು ಏಳುವ ಕಾರಣವೇ ಇರಲಿಲ್ಲ. ಆದರೆ, ಕೈಯಲ್ಲಿ ಸಿಕ್ಕಿರುವುದನ್ನು ಸಹಜವಾಗಿ ಬಿಟ್ಟುಹೋಗಲು ಹೃದಯದ ವೈಶಾಲ್ಯ ಬಹಳವಾಗಿರ-ಬೇಕಾಗುವುದು. ಅಷ್ಟು ವಿಶಾಲಹೃದಯ ಫ್ರೇಂಚರಲ್ಲಿ ಇಲ್ಲವೆಂಬುದನ್ನು ಈ ರಾಜಕೀಯ ಪ್ರಕರಣವು ಲೋಕಕ್ಕೆ ಸಿದ್ಧಮಾಡಿಕೊಟ್ಟಿತು. ಆದ-ರಂತೆಯೆ ಪೋರ್ತುಗೀಜರಷ್ಟು ಹುಂಬರೂ ಹಟವಾದಿಗಳೂ ಇಲ್ಲ-ವೆಂಬುದು ಸಿದ್ಧವಾಯಿತು. ಫ್ರೇಂಚ್ ಭಾರತಪ್ರದೇಶದ ಜನತೆಯಲ್ಲಿ ಜಾಗ್ರತವಾದ ಸ್ವಾತಂತ್ರ್ಯಪ್ರೀತಿಯು ಗೆಲವನ್ನು ಗಳಿಸಿಕೊಂಡುಬಿಟ್ಟುದು ಸಂತೋಷದ ಸಂಗತಿ. ಆದಕ್ಕಾಗಿ ಅವರಿಗೆ ಭಾರತೀಯರೆಲ್ಲ ಅಭಿನಂದನೆಗಳನ್ನು ಅರ್ಪಿಸಬೇಕಾದುದು ಅವಶ್ಯವಾಗಿದೆ.

ಗೋವೆಯಲ್ಲಿಯ ಗೋಳಾಟ

ಫ್ರೇಂಚ್‌ಭಾರತಪ್ರದೇಶವು ಪರದಾಸ್ಯದಿಂದ ಮುಕ್ತವಾಯಿ-ತಾದರೂ ಪೋರ್ತುಗೀಜ್ ಭಾರತದ ರಾಜಕೀಯವು ಹಾಗೆಯೆ ಕುದಿ.

೫೦ ಐವತ್ತು ವರ್ಷಗಳಿಗಿಂತಲೂ ಹೆಚ್ಚಾಗಿ ಜನತೆಯ ಸೇವೆಯನ್ನು ಮಾಡುತ್ತ ಬಂದಿರುವ, ಮುಂಬಯಿಯಲ್ಲಿರುವ ಒಂದು ಪ್ರಸಿದ್ಧವಾದ ನಿವಾಸಸ್ಥಾನ!

सरदारगृह

ಸರದಾರಗ್ರಹ

ಪ್ರತಿಯೊಂದು ಕೋಣೆಯಲ್ಲಿಯೂ ಸ್ವತಂತ್ರವಾದ ಬಾಥ್‌ರೂಮ್ ಮತ್ತು ಬಾಲ್ಕನಿಗಳಿವೆ.

ಮದುವೆ-ಮುಂಜಿ ಮೊದಲಾದ ಮಂಗಲಕಾರ್ಯಗಳ ಮತ್ತು ಭೋಜನಪಾರ್ಟಿಗಳ ಉತ್ತಮವಾದ ಏರ್ಪಾಡು ಅಲ್ಪವೆಚ್ಚದಲ್ಲಿಯೇ ಆಗುವುದು.

ಸಭಾ-ಸಮ್ಮೇಲನಗಳಿಗಾಗಿ ಟಿಳಕಹಾಲ್‌ನಲ್ಲಿ ಎಲ್ಲ ಬಗೆಯ ಅನುಕೂಲತೆಯಿದೆ.

ಕ್ರಾಫರ್ಡ್‌ಮಾರ್ಕೆಟಿನ ಹತ್ತಿರ, ಮುಂಬಯಿ ೨

ಯುತ್ತ ಕುಳಿತಿದೆ. ಅಲ್ಲಿ ಈಗ ಆಳುವವರಿಗೂ ಸುಖ-ಸಮಾಧಾನ-ಗಳಿಲ್ಲ. ಆಳಿಸಿಕೊಳ್ಳುವವರಿಗೂ ಸುಖಸಮಾಧಾನವಿಲ್ಲ. ಅಲ್ಲಿಯ ಪ್ರಜೆಗಳ ಬಾಳು ಜೀವ-ಸಾವುಗಳ ನಡುವೆ ಜೋಲಾಡುತ್ತಿದೆ. ಮೊದ-ಮೊದಲು ಪಾಕಿಸ್ತಾನ್ ಸರಕಾರವು ಗೋವೆಯ ಸರಕಾರಕ್ಕೆ ಏನೇನೋ ಅಲ್ಪ-ಸ್ವಲ್ಪ ಸಹಾಯವನ್ನು ಮಾಡಿತು ಆದರೆ ಈಗ ತಾನೇ ಗಾಳಿಯ ಗಿರಿಯಮೇಲೆ ನಿಂತಿರುವಾಗ, ಅದರಿಂದ ಪೋರ್ತುಗೀಜರಿಗೆ ಯಾವ ಸಹಾಯವು ಸಿಕ್ಕೀತು? ಭಾರತದಿಂದ ಒಂದು ತೃಣುಕು ಪದಾರ್ಥವೂ ಗೊವೆಯೊಳಗೆ ಹೋಗದಂತೆ, ಭಾರತಸರಕಾರವು ದಿಗ್‌ಬಂಧನವನ್ನು ಹಾಕಿಬಿಟ್ಟಿದೆ. ಗೋವೆಯ ಸರಕಾರದ ಆಹಾರದ ಉಗ್ರಾಣವೆಲ್ಲ ಬರಿದೋ ಬರಿದು! ತೆರವೋ ತೆರವು!' ಆಗಿಬಿಟ್ಟಿದೆ. ಹೊರಗಿನಿಂದ ತಂದು ಇರಿಸಿದ ಸೈನಿಕರ ಹಸಿವಿನುರಿಗಾಗಿ, ಆ ಪ್ರದೇಶದ ಜನರ ಮನೆಯಲ್ಲಿಯ ಆಹಾರಪದಾರ್ಥಗಳೂ ಕರಗಿಹೋಗಿವೆ. ಇಂದು ತುಳಿಗಾಗಿ ಅಲ್ಲಿಯ ಜನರೂ ಬಾಯಿಬಾಯಿ ಬಿಡುತ್ತಿದ್ದಾರೆ; ಸರ-ಕಾರವೂ ಬಾಯಿಬಾಯಿ ಬಿಡುತ್ತಲಿದೆ. ಪೋರ್ತುಗಾಲಿನಿಂದ ಹಡಗು ತುಂಬಿ ಆಹಾರಪದಾರ್ಥಗಳು ಬಂದಾಗಲೇ ಗೋವೆಯಲ್ಲಿಯ ಸೈನಿಕ-ರಿಗೂ ಸರಕಾರೀ ಅಧಿಕಾರಿಗಳಿಗೂ ಅನ್ನ. ಇಲ್ಲವಾದರೆ ಏಕಾದಶಿ ಶಿವ-ರಾತ್ರಿಗಳೆ.

ಗೋವೆಯಲ್ಲಿ ಬಿಳಿಯರ ಸೈನ್ಯವೂ ಇದೆ. ದಕ್ಷಿಣಆಫ್ರಿಕೆ-ಯಿಂದ ತಂದಿಟ್ಟ ಕರಿಯರ ಸೈನ್ಯವೂ ಇದೆ. ಅಲ್ಲಿಂದ ಸರಕಾರವು ತೋರಿಸುತ್ತಿದ್ದ ವರ್ಣವೈಷಮ್ಯನೀತಿಗಾಗಿ, ಕರಿಯರ ಸೈನ್ಯ ಕೋಪಿಸಿ-ಕೊಂಡಿದೆಯಂತೆ. ಬಿಳಿಯರು ಒಳ್ಳೆಯ ಆಹಾರವನ್ನು ಹೊಟ್ಟೆತುಂಬ ಉಣ್ಣುತ್ತಿರುವಾಗ, ಕರಿಯರು ಕೊಳಕು-ಹುಳುಕು ಕಗ್ಗ ಕೂಳನ್ನು ಅರೆಬರೆಯಾಗಿ ಉಂಡು ಬದುಕಬೇಕಾಗಿದೆ. ಈ ತಾರತಮ್ಯವನ್ನು ಕರಿಯರು ಎಷ್ಟು ದಿನವೆಂದು ಸೈರಿಸಿಕೊಂಡಾರು.

ಇಷ್ಟಾದರೂ ಪೋರ್ತುಗಾಲ್ ಸರಕಾರದ ಸೂತ್ರಧಾರ, ಡಾ. ಸಲಝಾರನು ಹುಂಬತನದ ಜಂಬದ ಮಾತುಗಳನ್ನೇ ಉಗ್ಗಡಿ-ಸುತ್ತಿದ್ದಾನೆ. ಭಾರತದ ಭಾಗ್ಯವನ್ನು ಉಳಿಸಿಕೊಳ್ಳಬೇಕೆಂಬ ಒಣ ಹಟಕ್ಕಾಗಿ, ಪೋರ್ತುಗಾಲ್ ರಾಷ್ಟ್ರದ ದಿವಾಳಿಯೆ ಏಳತೊಡಗಿದೆ-ಯೆಂಬುದರ ಎಚ್ಚರು ಕೂಡ ಆತನಿಗೆ ಇದ್ದಂತಿಲ್ಲ. ದಿಗ್ಬಂಧನದಿಂದಲೇ ಗೋವೆಯ ಸರಕಾರವನ್ನು ಹಣ್ಣಿಗೆ ತರಬೇಕೆನ್ನುವ ನೇಹರೂ ಅವರ ರಾಜನೀತಿಯು ಪ್ರಭಾವಶಾಲಿಯಾಗಿಯೇ ತೀರುವುದೆಂಬುದು ಇಂದು ಲೋಕಕ್ಕೆಲ್ಲ ಗೊತ್ತಿದ್ದರೂ, ಡಾ. ಸಾಲಝಾರನ ದುರಭಿಮಾನಾಂಧ ಬುದ್ಧಿಗೆ ಗೋಚರವಾಗಲೊಲ್ಲದಾಗಿದೆ. ಈಗ ಭಾರತವನ್ನು ಬಿಟ್ಟು ಹೊರಟ ಫ್ರೆಂಚರ ನಡತೆಯಿಂದಾದರೂ ಡಾ. ಸಾಲಝಾರನಿಗೆ ಬುದ್ಧಿ ಬಂದೀತೆ? ಅಂತಹ ಬುದ್ಧಿ ಬಾರದೆ ಹೋದರೆ ಗೋವೆಯ ಪೋರ್ತು-ಗೀಜರು ಗುದ್ದಿಸಿಕೊಂಡೇ ಗಂಟು ಹೊರುವುದರಲ್ಲಿ ಸಂಶಯವಿಲ್ಲ.

ಪಂಡಿತ ಜವಾಹರಲಾಲರ ಸ್ನೇಹಯಾತ್ರೆ

ಪೂರ್ವ ಭೂಖಂಡದಲ್ಲಿರುವ ಭಾರತ ಮತ್ತು ಚೀನಾರಾಷ್ಟ್ರಗಳು ಸ್ನೇಹದಿಂದ ಒಂದುಗೂಡಿ ಕಾರ್ಯಮಾಡಲು ತೊಡಗಿದರೆ, ಜಗತ್ತಿ ಪ್ರಗತಿಯನ್ನೇ ಅವು ಸಾಧಿಸಬಲ್ಲವು. ಈ ಮಾತು ಭಾರತದ ಚೈತನ್ಯ ಮೂರ್ತಿ ಜವಾಹರಲಾಲರಿಗೆ ಸಂಪೂರ್ಣ ಮನವರಿಕೆಯಾಗಿದೆ ಅದರಂತೆಯೇ ಚಿನಾರಾಷ್ಟ್ರದ ಧುರೀಣರಿಗೂ ಮನದಟ್ಟಾಗಿದೆ. ಎಂತಲ ಚೀನ-ಭಾರತಗಳ ಸ್ನೇಹರಜ್ಜುವನ್ನು ಭದ್ರಗೊಳಿಸಲು ಮಾನ್ಯ ಜವಾಹರಲಾಲರು ಚೀನಾಯಾತ್ರೆಯನ್ನು ಮಾಡಿ ಮರಳಿದರು ಹೋದಲ್ಲೆಲ್ಲ ಚೀನೀಯರಿಂದ ಅವರ ಮೇಲೆ ಸ್ನೇಹದ ಮಳೆಯ ಕರೆಯಿತು. ವಿರೋಧಭಾವನೆಯ ವಿಷಬಿಂದುವು ಎಲ್ಲಿಯ ಅವರ ಕಾಣಲಿಲ್ಲ. ಅವರಿಂದು ಚೀನೀಯರ ಸ್ನೇಹದ ಅಕ್ಷಯಪಾತ್ರೆಯನ್ನ ತೆಗೆದುಕೊಂಡು ಸ್ವದೇಶಕ್ಕೆ ಮರಳುತ್ತಿದ್ದಾರೆ.

ಭಾರತವು ಅನುಸರಿಸುತ್ತಿದ್ದ ರಾಜಕೀಯ ತತ್ತ್ವ, ಚೀನವು ಪು ಸ್ಕರಿಸುವ ರಾಜಕೀಯತತ್ತ್ವಕ್ಕಿಂತ ಭಿನ್ನವಾದುದೇನೋ ಸರಿಯ ಸರಿ! ರಾಜಕೀಯ ತತ್ತ್ವಗಳ ಜಗಳವೂ ದ್ವೈತಾದ್ವೈತಮತಗ ಜಗಳಾಟದಂತಿದೆ. ದ್ವೈತರಿಗೂ ಅದ್ವೈತರಿಗೂ ಬೇಕಾಗಿರು ಐಹಿಕ-ಪಾರಲೌಕಿಕ ಸುಖದ ಸ್ವರೂಪವು ಒಂದೆ ಬಗೆಯದು. ಆ ಆಚಾರ-ವಿಚಾರಗಳ ವಿವರಗಳಲ್ಲಿ ಸ್ವಲ್ಪ ಭಿನ್ನತೆ ಕಾಣಬಹುದಷ್ಟೆ ಹಾಗೆಯೆ ಚೀನಾ-ಭಾರತಗಳ ರಾಜಕೀಯ ತಂತ್ರವಿವರಗಳಲ್ಲಿ ಸ್ವ ಭಿನ್ನಭೇದಗಳಿದ್ದರೂ, ಎರಡೂರಾಷ್ಟ್ರಗಳ ಗುರಿಯು ಸ್ವಾವಲಂಬಿ ಶಾಂತಿಸಾಧನೆ— ಇವೇ ಆಗಿವೆ. ದ್ವೈತಾದ್ವೈತರಲ್ಲಿ ವ್ಯಾವಹಾ ಕೊಡುಕೊಳ್ಳುವ ಸಂಬಂಧವು ಸರಾಗವಾಗಿ ಸಾಗುವುದು, ಇಬ್ಬರ ವ್ಯಕ್ತಿತ್ವದ ವಿಕಾಸಕ್ಕಾಗಿ ಯಾವ ಪಂಥವನ್ನೂ ಪುರಸ್ಕರಿಸಿ ನಡೆಯ ಬಹುದು. ಲೌಕಿಕ ಸುಖ-ಸಮಾಧಾನಗಳ ಸಾಧನೆಗಾಗಿ ಅವ ಒಬ್ಬರೊಡನೊಬ್ಬರು ಸ್ನೇಹ, ಸಹಕಾರಗಳಿಂದ ನಡೆದುಕೊಳ್ಳಲೇಬೇ ಗುವುದು. ಇಷ್ಟೇ, ಒಬ್ಬರ ದಾರಿಯಲ್ಲಿ ಇನ್ನೊಬ್ಬರು ಅಡ್ಡ ಬ ಬಾರದು, ಒಬ್ಬರ ಸೊತ್ತನ್ನು ಇನ್ನೊಬ್ಬರು ಕಿತ್ತುಕೊಳ್ಳಬಾರದ ಸಂಕಟ ಬಂದಾಗ ಒಬ್ಬರಿಗೊಬ್ಬರು ನೆರವಾಗಬೇಕು.

ಚೀನವು ಪುರಸ್ಕರಿಸಿದ ರಾಜಕೀಯ ತತ್ತ್ವದಿಂದ ಆದು ತ ರಾಷ್ಟ್ರದ ಆಂತರಿಕ ಕಲ್ಯಾಣವನ್ನು ಸಾಧಿಸಲಿ; ಭಾರತವು ಸ್ವೀಕರಿಸಿ ರಾಜಕೀಯ ತತ್ತ್ವದಿಂದ ಭಾರತವು ತನ್ನ ಆಂತರಿಕ ಕಲ್ಯಾಣವ ಸಾಧಿಸಲಿ! ಎರಡೂ ರಾಷ್ಟ್ರಗಳ ಆದರ್ಶವು ಒಂದೆ ಇರುವಾ ಅದನ್ನು ಸಾಧಿಸಲು ಎರಡರ ಬಲವೂ ಒಟ್ಟುಗೂಡಿದರೆ, ಆದರ್ಶ ಬೇಗನೆ ಆಗಬಹುದಲ್ಲವೆ? ಮಾನ್ಯ ಜವಾಹರಲಾಲರು ತಮ್ಮ ಸ್ನೇಹಯಾತ್ರೆಯಿಂದ ಒಂದು ಮಹಾಕಾರ್ಯವನ್ನೇ ಸಾಧಿಸಿರು ರೆಂದು ಹೇಳಬಹುದು.

ಶೋಭನೆಯ ಹಾದಿ

(ಸಣ್ಣ ಕತೆ)

ಶ್ರೀ. ಶಾಂತಿನಾಥ ದೇಸಾಯಿ, ಎಂ. ಎ.
ಮುಂಬಯಿ

ಇಂದಿನ ಆದರ್ಶರಹಿತ—ಸಂಯಮರಹಿತ—ಬಾಳಿನಲ್ಲಿ, ನಮ್ಮ ಸಮಾಜವು ಎಷ್ಟು ಜನ ಶೋಭನೆಯರನ್ನು ಸಂಕಟದಲ್ಲಿ ತೊಳಲಾಡಿಸುತ್ತಲಿದೆಯೊ! ಮುಗ್ಧಭಾವನೆಗಳ ಕನಸು ಒಂದು ಬಗೆಯದಾದರೆ, ಯೌವನದ ದೇಹಧರ್ಮದ ವಾಸ್ತವಸ್ವರೂಪವೇ ಅದೊಂದು ಬಗೆ!

◆

ಶೋಭನೆ ಆದೇ ಹಾಯ್‌ಸ್ಕೂಲಿನಿಂದ ಬಂದಿದ್ದಾಳೆ. ಎಂದಿನಂತೆ ಮುಖ ತೊಳೆದುಕೊಂಡು, ಅಕ್ಕ ಮಾಡಿಕೊಟ್ಟ ಚಹ ಕುಡಿದು ಅಟ್ಟದ ಮೇಲಿನ ತನ್ನ ರೂಮಿಗೆ ಹೊರಟಿದ್ದಾಳೆ.

" ಯಾಕೆ ಶೋಭಾ, ಇಂದು ಮುಖಬಾಡಿದೆ.... ತಲೆ ನೋಯುತ್ತದೇನು ? ಇಂದು ಬಂದಾಗಿನಿಂದ ಒಂದು ಮಾತನ್ನು ಸಹ ಆಡಿಲ್ಲ ನೀನು ?........ "

ಅಕ್ಕನ ಈ ಪ್ರೇಮಲವಾದ ನುಡಿಯನ್ನು ಕೇಳಿ ಶೋಭನೆಗೆ ಅಳುವು ಬಂದಂತಾಯಿತು. ಅದನ್ನು ಹೇಗೋ ತಡೆದುಕೊಂಡು :

" ಹೌದು ಅಕ್ಕಾ, ಇಂದು ಬಹಳ ಕೆಟ್ಟ ತಲೆನೋವಿದ್ದಿದೆ " ಎಂದು ನುಡಿದವಳೇ ಅಟ್ಟವನ್ನೇರತೊಡಗಿದಳು.

" ಆಸ್ಪ್ರೋ ತರಿಸಿ ಕೊಡಲೇನು ? " ಮತ್ತೆ ಅದೇ ಸೌಮ್ಯ-ಆತುರದ ಧ್ವನಿ. ಮತ್ತೆ ಅಳುವಿನ ಗಂಟು ಶೋಭನೆಯ ಗಂಟಲಿಗೆ ಬಂತು. ಪ್ರಯತ್ನದಿಂದ ನುಂಗಿ :

" ಬೇಡ ಅಕ್ಕಾ, ಮಲಗಿದರೆ ಸರಿಹೋಗಬಹುದು " ಎಂದು ಹೇಳಿದವಳೆ ಸರಸರನೆ ಮೇಲೆಹೋದಳು.... ಅಕ್ಕ ಮತ್ತೇನೋ ಎನ್ನುತ್ತಿದ್ದಳು. ಶೋಭನೆಗೆ ಅದನ್ನೆಲ್ಲ ಕೇಳುವ ಮನಸ್ಸಿಲ್ಲ. ಮನಸ್ಸಿನಲ್ಲಿ ಭಯಂಕರ ಕೋಲಾಹಲ. ಯಾವ ವಿಚಾರವೂ ಸ್ಪಷ್ಟವಾಗಿ ಮೂಡುತ್ತಿಲ್ಲ. ಮಂಜಿನಲ್ಲಿ ಸಾವಿರಾರು ಜನರು ಯುದ್ಧಮಾಡುತ್ತಿದ್ದಂತೆ, ಏನೋ ಕೋಲಾಹಲ ! ಎಲ್ಲ ಮುಸುಕು-ಮುಸುಕು....ಗಾದೆಯ ಮೇಲೆ ಮಲಗಿ ಶಾಂತವಾಗಿ ವಿಚಾರಮಾಡಬೇಕು—ಎಂದು ಶೋಭನೆಗೆ ಎನಿಸಿತು ... ಆದರೆ ಈ ರಾಮು-ಎಂಟು ವರುಷದ ಈ ರಾಮು, ರೂಮಿನಲ್ಲಿ ಶೋಭನೆಯ ದಾರಿಯನ್ನು ಕಾಯುತ್ತಿದ್ದಾನೆ. ಅವಳು ಹೋಗುವುದೇ ತಡ:

" ಶೋಭಕ್ಕಾ, ಸಿನೆಮಾಕ್ಕೆ ಹೋಗೋಣಲ್ಲವೆ ಈಗ? " ಎಂದು ಹುರುಪಿನಿಂದ ಕೇಳಿದ ರಾಮು.

ಶೋಭನೆಗೆ ಕೊಂಚ ಸಿಟ್ಟುಬಂತು. ತನ್ನ ಜೀವನ-ಮರಣದ ಪ್ರಶ್ನೆ ತನ್ನ ಮುಂದೆ ಥುತ್ತೆಂದು ನಿಂತ ಸಮಯದಲ್ಲಿ, ಈ ಹುಡುಗ ಸಿನೇಮಾಕ್ಕೆ ಕರೆಯುತ್ತಿದ್ದಾನೆ. ಆದರೂ ಆತನದೇನು ತಪ್ಪು ಪಾಪ....ತನ್ನ ಈ ಭಯಂಕರ ದುಃಖದ ಕಲ್ಪನೆ ಅವನಿಗೆ ಹೇಗಾಗಬೇಕು.... ?

" ನನ್ನ ತಲೆ ಬಹಳ ನೋಯುತ್ತಿದೆ. ನೀನು ನಿನ್ನ ಗೆಳೆಯ ವಿಜಯನ ಕೂಡ ಇಂದು ಹೋಗು ಸಿನೇಮಾಕ್ಕೆ....ನಿಮ್ಮವ್ವನ ಕಡೆ ರೊಕ್ಕ ಇಸಿದುಕೊ.... "

" ಅವ್ವ ರೊಕ್ಕ ಕೊಡುವುದಿಲ್ಲ ಸಿನೇಮಾಕ್ಕೆ.... " ರಾಮೂ ಮುಖ ಕಿವುಚಿ, ಹಟದ ಧ್ವನಿಯಲ್ಲಿ ಹೇಳಿದ.

" ನಾನು ಕೊಡಿಸುತ್ತೇನೆ ಹೋಗು.... " ಎಂದು ಹೇಳಿ ಅಲ್ಲಿಂದಲೆ ಒದರಿ ಹೇಳಿದಳು:

" ಕಮಲಕ್ಕಾ, ಅಕ್ಕಾ, ರಾಮೂನಿಗೆ ಸಿನೇಮಾಕ್ಕೆ ರೊಕ್ಕ ಕೊಡು....ನನಗೆ ಎಷ್ಟು ಕಾಡಲಿಕ್ಕೆ ಹತ್ತಿದ್ದಾನೆ ನೋಡು ಇವ ... "

ಕಮಲಕ್ಕ ಕೆಳಗಿನಿಂದಲೇ ಕೂಗಿ ಹೇಳಿದಳು :

" ಏ ರಾಮೂ, ಅವಳ ತಲೆ ನೋಯುತ್ತದೆ ಬಿಡೊ; ಇಲ್ಲಿ ಬಾ, ಕೆಳಗೆ....

" ಅವ್ವ ನನಗ ಹೊಡೀತಾಳ ಈಗ.... ನೀ ಬಹಳ ಕೆಟ್ಟ ಇದ್ದೀ ಶೋಭಕ್ಕಾ ! ನಾನೆಲ್ಲಿ ನಿನಗೆ ಕಾಡೇನಿ ?.... "

ಶೋಭನೆಗೆ ಒಮ್ಮೆಲೆ ಅವನ ಮೇಲೆ ಮಮತೆ ಉಕ್ಕಿ ಬಂತು. ಟೇಬಲ್ಲಿನ ಡ್ರಾವರನನ್ನು ಎಳೆದು, ಮೂಲೆಯಲ್ಲಿಯ ಚಿಕ್ಕ ಪುಸ್ತಕವೊಂದನ್ನು ತೆರೆದು ನೋಡಿದಳು. ಒಂದು ರೂಪಾಯಿಯ ನೋಟು ಕಣ್ಣಿಗೆ ಬಿತ್ತು.

" ಹಿಡಿ, ಈ ರೂಪಾಯಿ ತೆಗೆದುಕೊ....ಅಕ್ಕನ್ನ ಮತ್ತೆ ಕೇಳಬೇಡ.... ಸುಮ್ಮನೆ ಹೋಗು ಹೊರಗೆ.... ಅಂ ? "

ರಾಮೂನನ್ನು ಕಳುಹಿದ್ದಾಯಿತು. ಇನ್ನು ವಿಚಾರ....ಹೌದು ಈಗ ವಿಚಾರ ಮಾಡಲೇ ಬೇಕು.... ಆಳವಾಗಿ.... ಮನಃಪೂರ್ವಕವಾಗಿ.... ಗಾದೆಯ ಮೇಲೆ ಉರುಳಿದಳು.... ಕಿಡಕಿಯ ಹೊರಗೆ ದೃಷ್ಟಿ ನೆಲಸಿದಳು....ಸೂರ್ಯನ ಮ್ಲಾನಕಿರಣಗಳು ಗಿಡಗಳ ಎಲೆಗಳ ಮೇಲೆ ಕುಣಿದಾಡುತ್ತಿವೆ. ಆ ಗಿಡಗಳ ಹಿಂದೆ ಕೆಲವು ಮೋಡಗಳು ರಕ್ತರಂಜಿತವಾಗುತ್ತಿವೆ....ಒಮ್ಮೆಲೆ ಜೋರಿನಿಂದ ಅಳಬೇಕೆಂದೆನಿಸಿತು ಶೋಭನೆಗೆ....ತಲೆದಿಂಬಿನಲ್ಲಿ ಮುಖ ಹಾಕಿ, ಕೊಂಚ ಹೊತ್ತು ಕಣ್ಣೀರನ್ನು ಸುರಿಸಿದಳು.

' ಅಯ್ಯೋ ಇದೇನಾಯಿತು....ಇದೇನು ಮಾಡಿದೆ....ಮುಂದೆ ಹೇಗೆ ? '

ತನ್ನಷ್ಟಕ್ಕೇ ಉಸುರಿದಳು. ಅದೇ ನಿಮಿಷ ಒಂದು ವಿಚಿತ್ರ ಪ್ರಕಾರದ ರೊಚ್ಚು ಏರತೊಡಗಿತು:

' ಈ ರಘೂಮಾಮಾನದೇ ಎಲ್ಲ ತಪ್ಪು ! ಅವನೇ ನನ್ನನ್ನು ಕೆಡಿಸಿದ ! ನಾನು ಹುಡುಗಿ. ಇಷ್ಟು ದೊಡ್ಡವನಾಗಿ ಅವನಿಗೆ ತಿಳಿಯ ಬಾರದೇನು.... ಅಯ್ಯೋ ಇದೆಲ್ಲ ಅಕ್ಕನಿಗೆ ತಿಳಿದರೆ....'

ಮತ್ತೆ ಒಂದು ದುಃಖದ ತೆರೆ ಏರಿ ಬಂತು.... ಒಮ್ಮೆಲೆ ರೂಮಿನ ಕದ ಹಾಕದಿದ್ದುದರ ಅರಿವಾಯಿತು. ಥಟ್ಟನೆ ಎದ್ದು ಹೋಗಿ ರೂಮಿನ ಕದವನ್ನು ಹಾಕಿ, ಮರಳಿ ಗಳಗಳನೆ ಅಳಲು ಪ್ರಾರಂಭಿಸಿದಳು :

'ಅಯ್ಯೋ, ನಿಜವಾಗಿಯೂ ನಾನು ಬಸಿರಾಗಿರುವೆನೇ ?....ಹೊರಗೆ ಆಗುವುದು ನಿಂತರೆ ಬಸಿರಾದಂತೆ—ಎಂದು ಶಾರದೆ ಹೇಳಿದ್ದು ನಿಜವಿರಲೇ ಬೇಕು. ಅವಳಿಗೆ ಇಂತಹ ವಿಷಯಗಳೆಲ್ಲ ಗೊತ್ತು.... ಇಂದು ಶಾಲೆಯಲ್ಲಿ ವಾಂತಿಯಾದಾಗ ಅವಳು " ಏ ಶೋಭಾ ಯಾಕೆ ? ಬಸಿರುಹೆಂಗಸರಂತೆ ಕಾರಲಿಕ್ಕೆ ಹತ್ತೀ ಅಲ್ಲ !" ಎಂದ ಅಂದಳು. ಅಯ್ಯೋ ! ಅವಳಿಗೆ ಗೊತ್ತಾಗಿಬಿಟ್ಟಿದೆಯೋ ಏನೋ.... ದೇವರೇ, ನನ್ನನ್ನು ಈ ಸಂಕಟದಿಂದ ಪಾರುಮಾಡು....ಇನ್ನು ಮುಂದೆ ಎಂದೂ ಇಂತಹ ತಪ್ಪನ್ನು ಮಾಡುವುದಿಲ್ಲ..... ತಪ್ಪು—ಇದು ನನ್ನ ತಪ್ಪಲ್ಲ.... ರಘೂಮಾಮಾನದು ! ಇಷ್ಟು ದೊಡ್ಡ ಗಂಡುಸಾಗಿ ವಕೀಲನಾಗಿ ಆತನಿಗೆ ಸ್ವಲ್ಪವೂ ಬುದ್ಧಿ ಇರಬಾರದೇ ?.... ಕಾಮುಕ, ನೀಚ....ಇದೆಲ್ಲ ಹೇಗಾಯಿತು.... ಹೇಗೆ ಸುರುವಾಯಿತು....ಈ ಮೂರ್ಖತನ.... '

ಅಷ್ಟರಲ್ಲಿ ಸ್ಮೃತಿಪಥದಲ್ಲಿ ಒಂದು ಚಿತ್ರ ಮೂಡಿನಿಂತಿತು.... ಆ ಸಂಜೆ....

ಆ ಸಂಜೆ, ಕಮಲಕ್ಕ ಗುಡಿಗೆ ಹೋಗಿದ್ದಳು. ಮನೆಯಲ್ಲಿ ತಾನು ಮತ್ತು ರಾಮು. ಪರೀಕ್ಷೆ ಸಮೀಪಿಸಿದುದರಿಂದ, ಏನನ್ನೋ ಓದುತ್ತಿದ್ದಳು ರಘೂಮಾಮಾ ಕೋರ್ಟಿನಿಂದಲೋ ಎಲ್ಲಿಂದಲೋ ಬಂದರು. ಕೇಳಿದರು : " ಅವಳೆಲ್ಲಿ ?"

" ಗುಡಿಗೆ ಹೋಗಿದ್ದಾಳೆ ಅಕ್ಕ."

" ಮುಗಿಯಿತು ! ಇನ್ನು ಎಂಟುಹೊಡೆಯುವ ತನಕ ಆಕೆ ಮನೆಗೆ ಬಂದರೆ ಆಣೆ.... ಹೊಟ್ಟೆ ಇಷ್ಟು ಹಸಿದದ...."

" ಉಪ್ಪಿಟ್ಟು ಮಾಡಿದ್ದೇ ಅದ. ಚಹಾ ಮಾಡಿ ಕೊಡಲೀ ಮಾಮಾ ? "

" ನನಗೂ ಒಂದು ಕಪ್ಪು ಶೋಭಕ್ಕಾ !" ರಾಮೂನ ಆದೇಶ. " ಅಪ್ಪಾ, ಇಂದು ಜವಾಬ್ ಸಿನೇಮಾ ಬಂದದ. ಹೋಗೋಣು ?"

" ಏ ಮಗನ, ಸಿನೇಮಾ ಸಿನೇಮಾ ಅಂತ ಕನಕರಸತೀ ಯಲ್ಲೊ.... ಸುಮ್ಮನೆ ಸಿನೇಮಾಕಂಪನಿಯಾದರೂ ಸೇರಿಬಿಡು ! ಅಲ್ಲೊ, ದಿನಾ ಸಿನೇಮಾ ನೋಡಲಿಕ್ಕೆ, ನಿಮ್ಮಪ್ಪ ರೊಕ್ಕದ ಗಿಡ. ಹಚ್ಚ್ಯಾನೇನು ಮನಿಯೊಳಗ....

ರಾಮೂನ ಮುಖ ಸ್ವಲ್ಪ ಪೆಚ್ಚಾಯಿತು. ತನಗೆ ಕೆಟ್ಟೆನಿಸಿತು. ಏನಾದರೂ ಹೇಳುವ ಉದ್ದೇಶದಿಂದ ತಾನು:

" ನಿಮಗೇನು ಕಡಿಮಿ ಆಗಿದೆ ? ಕ್ಷಕ್ಷಿಗಾರರು ಕೊಡತಾರಲ್ಲ ಬೇಕಾದಷ್ಟು ಹಣ ! ಕ್ಲಬ್ಬಿನಲ್ಲಿ ಜೇರೆ ದಿನಾಲು ಗೆದೀತೀರಿ... ಎಂದು ನಗುತ್ತ ಅಂದಳು.

" ವಾಹ್, ಹುಷಾರ್ ಹುಡುಗಿ ಇದ್ದೀ ನೋಡು ನೀನು ಈಗೇನಂತಿ ? ಅವನಿಗೆ ಸೀನೆಮಾಕ್ಕೆ ರೊಕ್ಕಾ ಕೊಡು—ಅಂತ ಅಂತಿ ಯೇನು ? "

" ಕೊಡಿರಲ್ಲ, ಹೋಗಲಿ ಪಾಪ!"

" ಶೋಭಕ್ಕಾ, ನೀನೂ ಬಾರಲ್ಲs ಸಿನೇಮಾಕ್ಕೆ" ರಾಮೂ ಎಂದಿನ ಕರೆ. ತನಗೂ ಸಿನೇಮಾಕ್ಕೆ ಹೋಗುವ ಆಶೆ ಆದರೆ....

"ಅಕ್ಕ ಮನೆಯಲ್ಲಿಲ್ಲ. ಇವರೂ ಕ್ಲಬ್ಬಿಗೆ ಹೋಗುವವರು.... ಮತ್ತು ಪರೀಕ್ಷೆಯ ಅಭ್ಯಾಸ ಮಾಡಬೇಕಪ್ಪಾ ನಾನು. ನೀನು ಹೋಗು.... ಅಂತೂ ರೊಕ್ಕ ಸಿಗತsದಲ್ಲಾ...."

ರಘೂಮಾಮಾ ತನ್ನ ಕಡೆಗೆ ಒಂದು ವಿಚಿತ್ರದೃಷ್ಟಿಯನ್ನು ಬೀರಿ, ನಕ್ಕು, "ಆಗಲಿ ತಗೋ ಮಗನ.... ಹೀಂಗ ಸಿನೇಮಾ ನೋಡುತ್ತಾ ಹೋದರ, ಪರೀಕ್ಷೆ ಪಾಸಾದಂತಾಯಿತು ನೀನು!" ರಾಮೂನ ಕೈಯಲ್ಲಿ ಎಂಟಾಣೆ ಬೀಳುವುದೇ ತಡ; ಚಪ್ಪಲಿ ಹಾಕಿ-ಕೊಂಡು ಓಡಿಯೇ ಬಿಟ್ಟ. ಚಹ ಕುಡಿಯುವಾಗ, ಎಂದಿನ ಸಲುಗೆ-ಯಿಂದ ಅವರು ಕೇಳಿದರು:

"ಶೋಭಾ, ಯಾಕ ? ನಿನಗ ಸಿನೇಮಾಕ್ಕೆ ಹೋಗಬೇಕಂತ ಅನಿಸಲಿಲ್ಲೇನು ?"

"ಅನಿಸಿತು. ಅಕ್ಕ ಮನೆಯಲ್ಲಿಲ್ಲ; ಮತ್ತೆ ಮೇಲಾಗಿ ನನ್ನ ಆರು ತಿಂಗಳ ಪರೀಕ್ಷೆ ಮುಂದಿನವಾರ ಅದ ಅಲ್ಲ! ನಾನು ಹೋದರೆ ನೀವು ಮನೆ ಕಾಯುತ್ತ ಕುಳಿತುಕೊಳ್ಳುತಿದ್ದಿರೇನು ?—"

"ಅಲ್ಲ, ನಿನಗೆ ಹೋಗಬೇಕನಸತಿದ್ದರೆ ನಾನೂ ಬರುತಿದ್ದೆ ! ಮನೀಗೆ ಕೀಲೀ ಹಾಕಿ, ಕಿಲೀಕ್ಕೆ ಕುಲಕರ್ಣಿಯವರ ಮನೆಯಲ್ಲಿಟ್ಟ-ರಾಗಿತ್ತು."

"ನಿನಗೆ ಹೋಗಬೇಕನಸತಿದ್ದರೆ ನಾನೂ ಬರುತಿದ್ದೆ" ಎಂದು ಅವರು ಹೇಳುವಾಗಿನ ರೀತಿ ಎಷ್ಟೋ ಮೋಹಕವಾಗಿತ್ತು ! ಆ ಮಾತಿನಲ್ಲಿಯ ಮಾಧುರ್ಯ ತನ್ನನ್ನು ಮರುಳುಗೊಳಿಸಿರಬೇಕು. ಈ ಮನೆಗೆ ಬಂದು ಆರು ವರ್ಷವಾಗಿದ್ದರೂ, ಮೊದಲಿನಿಂದಲೂ ಅವರು ಪ್ರೀತಿಯಿಂದಲೇ ಮಾತನಾಡುತ್ತಿದ್ದರೂ, ಅವರ ಮಾತಿ-ನಲ್ಲಿಯ ಮಾಧುರ್ಯ ವಿಚಿತ್ರವಾಗಿ ತನ್ನ ಮನಸೆಟ್ಟಿದ್ದು ಅದೇ ಮೊದಲನೆಯ ಸಲವಿರಬೇಕು

"ಅಭ್ಯಾಸ ಹೇಗೆ ನಡೆದಿದೆ ?.... ಡಿಫಿಕಲ್ಟೀಸ್ ಏನಾದರೂ ಇದ್ದರೆ ಕೇಳು. ಹೇಳಿ ಕೊಡುವೆ...."

"ಇಂದು ನೀವು ಕ್ಲಬ್ಬಿಗೆ ಹೋಗುವುದಿಲ್ಲವೇ ?"

"ವಾಹ್. ನಿನ್ನೊಬ್ಬಳನ್ನು ಮನೆಯಲ್ಲಿ ಬಿಟ್ಟು ನಾನ ಹೋಗುವುದೇ...."

ತನ್ನೆಡೆಗೆ ಒಂದು ಮೃದುವಾದ ನೋಟ ಬೀರಿದರು. ಎದೆಯಲ್ಲಿ ಎಲೆಕ್ಟ್ರಿಕ್ ಪ್ರವಾಹ ಹರಿದುಹೋದಂತಾಯಿತು. ಇಂದು ಹೀಗೇ ಮಾಡುತ್ತಿದ್ದಾರೆ— ಹೀಗೇಕೆ ಮಾತನಾಡುತ್ತಿದ್ದಾರೆ— ಅವ

ಹಾಗೆ ನೋಡಿದ್ದುದರಿಂದ ತನ್ನಲ್ಲಿ ಒಂದು ಬಗೆಯ ನಾಚಿಕೆ ತುಂಬಿತ್ತು. ಅವರ ಮುಂದೆ ಅಷ್ಟು ನಾಚಿಕೆಪಟ್ಟದ್ದು ಅದೇ ಮೊದಲು. ಮುಖವನ್ನು ತಗ್ಗಿಸಿ ಹೇಳಿದಳು:

"ಹಾಗಾದರೆ ನನಗೆ ಕೆಲವು ಇಂಗ್ಲಿಷ್ ಕವಿತೆಗಳ ಅರ್ಥ ಹೇಳಿಕೊಡತೀರೇನು?

"ಓಹೋ, ಹೇಳದೇ ಏನು? ನನಗೆ ತಿಳಿದರೆ ನಾನು ಹೇಳತೀನಿ...." ಎಂದು ನಕ್ಕರು.

"ತರಲೇ ಪುಸ್ತಕಾನs?"

"ತಾ, ಅಥವಾ ನಾನೇ ಮೇಲೆ ಬರುತ್ತೇನೆ ನಡೆ!"

'ಕೆಳಗಿನ ಕದ ಮುಂದೆ ಮಾಡಿ ಮೇಲೆ ಹೋದದ್ದಾಯಿತು.... ಅವರು ಹಿಂದೆ ಎಷ್ಟೋ ಸಲ ತನ್ನ ಕೋಣೆಗೆ ಬಂದಿದ್ದರೂ, ಅಂದು ಕೋಣೆಯೊಳಗೆ ಕಾಲಿಡುವಾಗ ತನ್ನ ಎದೆ ನಡುಗುತ್ತಿತ್ತು. ಅವರ ನಡತೆಯಲ್ಲಿ ಯಾವುದೋ ಒಂದು ಅವ್ಯಕ್ತಭಾವ ತುಂಬಿದೆ, ಆ ಭಾವ ತನ್ನನ್ನು ಬೇಗನೆ ಆವರಿಸಲಿದೆ—ಎಂಬ ಹೆದರಿಕೆ—ಉತ್ಸುಕತೆ ತನ್ನಲ್ಲಿ ಪ್ರಬಲವಾಯಿತು. ಅವರ ಮುಖದ ಮೇಲೆ ಒಂದು ತುಂಟನಗೆ ಸುಳಿದಾಡುತ್ತಲೇ ಇತ್ತು.

"ಯಾವ ಕವಿತಾ ಅದು? ಶೇಕ್ಸ್‌ಪೀಯರಂದು ಏನು ಮತ್ತೆ?" ಖುರ್ಚಿಯಲ್ಲಿ ಕುಳಿತುಕೊಳ್ಳುತ್ತ ಕೇಳಿದರು.

"ಯಾರದೋ ಏನೋ.... ಹಾ ಇದು—'She was a phantom of delight....' ಹಾಂ ವರ್ಡ್ಸ್‌ವರ್ತನಂದು...."

ಪುಸ್ತಕವನ್ನು ತೆಗೆದುಕೊಂಡು ಏನೇನೋ ಓದಿದಂತೆ ಮಾಡಿ, ತನ್ನೆಡೆಗೆ ನೋಡಿ ನಗುತ್ತ—

"She was a phantom of delight ಅಂದರೆ ಕವಿ ತನ್ನ ಪ್ರೇಯಸಿಯ ವರ್ಣನೆ ನಡಿಸಿಧಾಂಗ ಕಾಣಿಸ್ತsದ....ಅವನು ಅವಳನ್ನು ಮೊದಲಿಗೆ ನೋಡಿದಾಗ, ಅವಳು ಅವನಿಗೆ ಸಂತೋಷದ ಬುಗ್ಗೆಯಂತೆ ಇಲ್ಲ—ಆನಂದದ ದೇವತೆಯಂತೆ ಕಂಡಳು.... ನೀನು ಈಗ ನನಗೆ ಕಾಣುತ್ತಿರುವಂತೆ...."

ತನ್ನ ಮೈ ಜುಮ್ಮೆಂದಿತು. ಹೃದಯದಲ್ಲಿ ಕಟ್ಟಾಡಿಸಿದಂತಾಯಿತು. ಏನು ಹೇಳಬೇಕೋ ತಿಳಿಯಲಿಲ್ಲ. ಅವರ ವರ್ಣನೆ ಮುಂದೆ ಸಾಗಿತ್ತು. ಅದರೆಡೆಗೆ ಲಕ್ಷ್ಯವೇ ಉಳಿಯಲಿಲ್ಲ.

"ಅವಳ ಕಣ್ಣುಗಳು Twilightನಂತೆ ಅಂದರೆ ಮುಚ್ಚಂಜೆಯಂತೆ ಚೆಂದವಿದ್ದುವು. ಈಗ ನೋಡು ಹೊರಗೆ ಮುಚ್ಚಂಜೆ ಎಷ್ಟು ಸುಂದರವಾಗಿದೆ.... ಅದರಂತೆ.... ಆ ಮುಚ್ಚಂಜೆಯಲ್ಲಿ ನಿನ್ನ ಕಣ್ಣುಗಳಂತೆ...." ಎಂದು ಅವರು ತನ್ನ ಕಂಗಳಲ್ಲಿ ನೋಡತೊಡಗಿದರು. ತನ್ನ ಚಿತ್ತಭ್ರಂಶವಾಗಿರಬೇಕು ಕೂಡಲೆ— ಮುಂದೆ ಅವರು ಏನೇನು ಹೇಳುತ್ತಿದ್ದರೋ ಅದು ತಿಳಿಯಲೇ ಇಲ್ಲ.

"I saw her upon near or view...." ಎಂದು ಅವರು ತನ್ನನ್ನು—ತನ್ನ ಎದೆಯನ್ನು—ದುರುಗುಟ್ಟಿ ನೋಡುವಾಗಲೇ ಅವಳಿಗೆ ಎಚ್ಚರ.... ಅವರು ನೇರವಾಗಿ ತನ್ನ ಕೈಹಿಡಿದು ಹಿಚುಕಿ—

"ಶೋಭಾ ತಿಳಿಯಿತೇನು?" ಎಂದರು.

ಅವರು ಹಾಗೆ ಕೈಹಿಚುಕಿದಾಗ ಮೈಯೆಲ್ಲ ನಡುಗಿತು. ಕಿವಿಗಳೆಲ್ಲ ಉರಿದಂತಾದುವು. ನಾಚುತ್ತ ತಾನು "ಹುಂ" ಎಂದಳು ಅಷ್ಟರಲ್ಲಿ ಅವರ ಕೈಯು ತನ್ನ ನಡುವನ್ನು ಹಿಡಿದಿತ್ತು.

"ಬೇಕಾದರೆ ಇನ್ನೊಮ್ಮೆ ಹೇಳುವೆ—ಹೇಳಲೆ?" ಅವರ ಧ್ವನಿಯಲ್ಲಿ ಒಂದುಬಗೆಯ ಕಂಪನವಿತ್ತು. ತನಗೆ—ಏನು ಹೇಳಬೇಕೊ,ಏನು ಮಾಡಬೇಕೊ ತಿಳಿಯಲಿಲ್ಲ. ಕಣ್ಣಮುಂದೆ ಸಾವಿರಾರು ಬಣ್ಣಬಣ್ಣದ ತೆರೆಗಳು ಒಂದೇಸವನೆ ಓಡಲಾರಂಭಿಸಿದುವು. "ಅಯ್ಯೊ ಬಿಡಿರಿ" ಎಂದೇನೋ ಗುಣುಗುಣಿಸಿದೆ.

"ಆಂ ನನ್ನ ಚೆಂದದ ಹುಡುಗಿ.... ನನ್ನ Lovely apparihin! A spirit yet a women too—" ಎಂದು ಎದ್ದವರೇ, ಗಟ್ಟಿಯಾಗಿ ಅಪ್ಪಿಕೊಂಡರು. ಬಾಯಿಗೆ ಬಾಯಿ— ಕಣ್ಣುಮುಂದೆ ಕತ್ತಲೆ. ಮೈಯಲ್ಲೆಲ್ಲ ವಿಚಿತ್ರ ಆನಂದ— ಬಿರುಗಾಳಿ— ಪರ್ವತದ ತುಟ್ಟತುದಿ— ಉರುಳಿದೆ ಉರುಳಿದೆ....... ನೋವು—ರಕ್ತ—ಆನಂದ ಎಂದೂ ಗೊತ್ತಿಲ್ಲದ ಸುಖ....... ಆಗ ಸತ್ತರೂ ನನಗೆ ದುಃಖವಾಗುತ್ತಿದ್ದಿಲ್ಲ—

"ಶೋಭಾ, ಶೋಭಾ— ಏಳು, ಅವಳು ಬರುವ ಹೊತ್ತಾಯಿತು.... ಸರಿಯಾಗಿ ಉಟ್ಟುಕೊ...."

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಕ್ಸ್‌ನ್ಸ್ ಗ್ರಾಇಪ್ ಹೀಲರ್"

ಜಂತು ಆದರೆ



"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

ಎಲ್ಲವೂ ಶೂನ್ಯವಾಗಿತ್ತು. ಶೂನ್ಯದೃಷ್ಟಿಯಿಂದ ರಘೂಮಾವಾನೆಡೆಗೆ ನೋಡಿದಳು. ಅವರ ತುಟಿಯ ಮೇಲೆ ನಗೆಯೊಂದು ಮಿನುಗಾಡುತ್ತಿತ್ತು. ಪುತ್ತೆ ಹತ್ತಿರ ಎಳೆದು—

"ಯಾಕೆ ಶೋಭಾ, ನಡೆ, ಕೆಳಗೆ ಹೋಗೋಣ!" ಎಂದು ಬಗ್ಗಿ ಮುತ್ತನ್ನಿಟ್ಟರು. ತನಗೆ ಮಾತೇ ಬಂದಾಯಿತು— 'ಈಗ ಬೇಡ' ಎಂದವಳೇ ಸುಮ್ಮನೆ ಹೊದ್ದುಕೊಂಡು, ಮುಖತಿರುವಿ ಮಲಗಿಬಿಟ್ಟಳು ಅಂದು ಆ ಸಂಜೆ—

ಇದೇ ಆ ಕೋಣೆ, ಇದೇ ಆ ಹಾಸಿಗೆ, ಇದೇ ಆ ಗೋಡೆ, ಇದೇ ಅಂದು ಗೋಡೆಯ ಮೇಲೆ ಉಗುರಿನಿಂದ ಕೊರೆದ ಆ ಗೆರೆ.... 'ಯಾರ ತಪ್ಪು....?' 'ಯಾರ ತಪ್ಪು....?' 'ಯಾರ ತಪ್ಪು....?' ಪರ್ವತದ ಕಣಿವೆಗಳೊಳಗಿಂದ ಪ್ರತಿಧ್ವನಿಗಳು ಹೊರಟಂತೆ ಅವಳಿಗೆ ಎನಿಸತೊಡಗಿತು.

ಮುಂದೆ ದಿನಾಲು ತಾನೇಕೆ ಅವರ ಸುಖ ಅನುಭವಿಸಿದಳು?.... 'ನಾನೇ ಕೆಟ್ಟ ಹುಡುಗಿ! ನನ್ನ ನೀತಿಯನ್ನು ನಾನು ಕಾಪಾಡಿಕೊಳ್ಳಬೇಕಿತ್ತು! ನಾನೇ ಮೂರ್ಖಳು.... ಹುಚ್ಚಿ.... ಕೆಟ್ಟಳು!....' ಎಂದು ತನ್ನ ಮುಷ್ಟಿಯಿಂದ ತನ್ನ ಹಣೆಯನ್ನು ಜಪ್ಪಿಕೊಳ್ಳುತ್ತ ಶೋಭನೆ ಅಳತೊಡಗಿದಳು.

'ರಘೂಮಾಮಾನಿಗೆ ತಿಳಿಯಬಾರದೇ? ಇಷ್ಟೆಲ್ಲ ಕಲಿತ ತಲೆಯಲ್ಲಿ ಬುದ್ಧಿಯು ಇರಬಾರದೆ?— ತನ್ನ ಹೆಂಡತಿಯ ತಂಗಿಯ ಮೇಲೆ ಬಲಾತ್ಕಾರ.... ಆದರೆ....ರೆ....ಬಲಾತ್ಕಾರವಹುದೇ ಅದು? ಅಯ್ಯೋ ನಾನು ಜೀವಿಸಿರಲು ಯೋಗ್ಯಳಲ್ಲ.... ನನ್ನ ಕುತೂಹಲ.... ನನ್ನ ಮೈಯ ಹಂಬಲ.... ನಾನೇ ಅಧಮಳು! ನಾನು ಅಷ್ಟುದಿನ ಕಟ್ಟಿದ ಪ್ರೇಮದ ಕನಸುಗಳು ಅಂದು ಮಣ್ಣುಗೂಡಿಹೋದುವು. 'ನನ್ನ ಗಂಡ ಹಾಗಿರಬೇಕು ಹೀಗಿರಬೇಕು— ನಾನು ಆದರ್ಶ ಪತ್ನಿಯಾಗಬೇಕು— ನಮ್ಮ ಪ್ರೇಮ ರೋಮಿಯೊ-ಜ್ಯುಲಿಯಟ್‌ರ ಪ್ರೀತಿಯಂತೆ ದೃಢವಾಗಿರಬೇಕು— ಅಪರೂಪವಾಗಿರಬೇಕು....' ಅಯ್ಯೋ ಇನ್ನು ನನ್ನ ಗತಿ? ನನ್ನ ಅಕ್ಕನಿಗೆ ಗೊತ್ತಾದರೆ? ಇದೇನು ಘಾತ ಮಾಡಿದೆ? ಅವಳ ಜೀವನ ಹಾಳು; ನನ್ನ ಜೀವನ ಹಾಳು....... ಹಾಳು ಹಾಳು.... ಈ ದೇಹ.... ಈ ಮನಸ್ಸು.... ಈ ಜಗತ್ತು....'

ಎಂದು ಮನಸೋಕ್ತವಾಗಿ ಮತ್ತೊಮ್ಮೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಸ್ವಲ್ಪಹೊತ್ತು ಅತ್ತನಂತರ, ಬುದ್ಧಿ ಸ್ವಲ್ಪ ಹಸನಾದಂತಾಯಿತು.

'ಅಯ್ಯೋ, ಈಗ ಮಗುವನ್ನು ಹೆರಬೇಕು. ಮಗು ನನ್ನ ಮಗು— ಆದರೆ ಇಷ್ಟು ಬೇಗ? ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ನಾನು ಕಲಿಯಬೇಕು-ಕಾಲೇಜಿಗೆ ಹೋಗಬೇಕು-ಪ್ರೇಮಿಸಬೇಕು-ಆನಂತರ ಲಗ್ನವಾಗಬೇಕು- ಅಷ್ಟೆಲ್ಲ ಆದ ಮೇಲೆ ನನ್ನದೇ ಒಂದು ಮನೆ ಕಟ್ಟಿದಮೇಲೆ ಮಗು- ಅಯ್ಯೋ,ಇದೇನು ಮಾಡಿಬಿಟ್ಟೆ? ಇಷ್ಟೆಲ್ಲ ಆಗುವುದಕ್ಕಿಂತ ಮುಂಚೆಯೇ ನಾನು ತಾಯಿ....ತಾಯಿ....! ಅಯ್ಯೊ, ನನ್ನ ತಾಯಿ ಇದ್ದಿದ್ದರೆ, ನನ್ನ ದುಃಖವನ್ನು ಅವಳ ಮುಂದೆ ಹೇಳಿ ಹಗುರಾಗುತ್ತಿದ್ದೆ! ಯಾರಿಗೆ ಹೇಳಲಿ ಈಗ ನನ್ನ ಈ ದುಃಖ.... ಈ ವೇದನೆ.... ಈ ನೋವು.... ಯಾರಿಗೆ....??

ಅಷ್ಟರಲ್ಲಿ ಅಟ್ಟದ ಮೇಲೆ ಯಾರೋ ಬರುವ ಸದ್ದು.... ಅಕ್ಕನಿರಬೇಕು.... ಕದ ತಟ್ಟಿದ ಸಪ್ಪಳ....

'ಎಲ್ಲ ಹೇಳಿಬಿಡಬೇಕು ಅಕ್ಕನ ಮುಂದೆ........ ಬೇಡ........ ಅದಕ್ಕಿಂತ—ಅದಕ್ಕಿಂತ ವಿಷ ತಿನ್ನುವುದೇ ಲೇಸು....'

"ಶೋಭಾ ಶೋಭಾ!"

'ಓಹ್! ಇವರು ರಘೂಮಾಮಾ! ರಘೂಮಾಮಾ ಎಂದೆನ್ನಬೇಕೇ ಈಗ? ಹುಂ ನನ್ನ ರಘು, ನನ್ನ ಡಾರ್ಲಿಂಗ್—ಅನ್ನಬೇಕು. ಒಮ್ಮೆಲೆ ಜೋರಿನಿಂದ 'ಹಾ ಹಾ ಹಾ' ಎಂದು ನಗಬೇಕೆಂದೆನಿಸಿತು ಶೋಭನೆಗೆ.

"ಶೋಭಾ, ಏ ಶೋಭಾ! ನಿನ್ನ ತಲೆ ನೋಯುತ್ತಿದೆಯಂತೆ; ಕದ ತೆಗೆ ನೋಡೋಣ!"

ಕದವನ್ನು ತೆಗೆದು ಅವರ ಮೇಲೆ ಥಟ್ಟನೆ ಉಗುಳಬೇಕೆಂದೆನಿಸಿತು. ಆದರೆ ಈ ಸಂಕಟದಿಂದ ತನ್ನನ್ನು ಪಾರುಮಾಡುವವರು ಅವರೇ ತಾನೇ?.... ಸುಮ್ಮನೇ ಎದ್ದು ಕದವನ್ನು ತೆಗೆದಳು. ಕದ ತೆರೆದು ಒಮ್ಮೆಲೆ ಹಿಂದಿರುಗಿ ಗಕ್ಕನೆ ಹಾಸಿಗೆಯಲ್ಲಿ ಉರುಳಿದಳು.

ರಘೂಮಾಮಾ ಆತುರದಿಂದ ಕೇಳಿದರು:

"ಏನೇ ಶೋಭಾ, ಏನಾಗಿದೆ? ಮುಖವೆಲ್ಲ ಬಾಡಿದೆ. ಕಣ್ಣು ಕೆಂಪಗಾಗಿವೆ. ಮೈಯಲ್ಲಿ ನೆಟ್ಟಗಿಲ್ಲವೆ?"

ಎಂದು ಹತ್ತಿರ ಹೋಗಿ ಮಂಚದ ಮೇಲೆ ಕುಳಿತರು. ಅವಳ ಕೈ—ಗಲ್ಲ—ಹಣೆಗಳನ್ನು ಮುಟ್ಟಿನೋಡಿ, ಜ್ವರಗಿರ ಏನಿಲ್ಲ—ಎಂಬುದನ್ನು ಖಾತ್ರಿ ಮಾಡಿಕೊಂಡು, ಮುಗುಳುನಗೆ ನಗುತ್ತ, ಗೋಡೆಯ ಮೇಲೆ ನೆಟ್ಟ ಅವಳ ದೃಷ್ಟಿಯನ್ನು ತಮ್ಮ ಕಡೆಗೆ ತಿರುಗಿಸುವ ಉದ್ದೇಶದಿಂದ, ಅವಳ ಕತ್ತನ್ನು ಹೊರಳಿಸಲು ಪ್ರಯತ್ನಿಸಿದರು. ಶೋಭನೆ ಸಿಡುಕಿನಿಂದ ಮತ್ತಷ್ಟು ಗೋಡೆಯ ಕಡೆಗೆ ಸರಿದಳು. ರಘೂಮಾಮಾ ಇನ್ನಷ್ಟು ಹತ್ತಿರ ಸರಿದು, ಅವಳ ಮೇಲೆ ಒರಗಿ ಅವಳ ಗಲ್ಲದ ಹತ್ತಿರ ತಮ್ಮ ಮುಖವನ್ನು ಒಯ್ದು, ಸವಿಯಾದ ಧ್ವನಿಯಲ್ಲಿ ಕೇಳಿದರು:

"ಯಾಕೆ ಶೋಭಾ? ಏನಾಗಿದೆ ನಿನಗೆ ಇಂದು?........"

"ಯಾರ ಮೇಲೆ ಇಷ್ಟು ಕೋಪ?.... ನಿನ್ನನ್ನು ತಿರುಗಾಡಲು ಕರೆದೊಯ್ಯಲು ನಾನು ಬೇಗ ಮನೆಗೆ ಬಂದೆ....ನಡೆ ಹೋಗೋಣ... ನಿನ್ನ ತಲೆನೋವು ಖಾತ್ರಿಯಿಂದ ನಿಲ್ಲುವುದು.... ಹೋಗೋಣ?"

ಶೋಭನೆ ಮುಖವನ್ನು ಹೊರಳಿಸಿ, ನೇರವಾದ ತೀಕ್ಷ್ಣದೃಷ್ಟಿಯಿಂದ ರಘೂಮಾಮಾನ ಕಡೆಗೆ ನೋಡಿ ಹೇಳಿದಳು:

"ಸುಡುಗಾಡಿಗೆ ಕರೆದೊಯ್ಯುವುದಿದ್ದರೆ ನಾನು ಬರುವೆ?"

ರಘೂಮಾಮಾ ಬೆಚ್ಚಿಬಿದ್ದರು. ಇಂತಹ ಅಬದ್ಧ ಮಾತನ್ನು ಅವರು ಅಪೇಕ್ಷಿಸಿರಲಿಲ್ಲ. ಅವರ ಕುತೂಹಲ ಕೆರಳಿತು. ಮನಸ್ಸಿನಲ್ಲಿ ಸಂಶಯದ ಮೊನೆ ಚುಚ್ಚಿರಬೇಕು. ಆದರೂ ಅದನ್ನೆಲ್ಲ ತೋರಗೊಡದೆ:

"ಏನಿದು ಅಬದ್ಧ ಮಾತು? ಹೀಗೆ ಹುಚ್ಚುಚ್ಚಾರ ಏನಾ

ವರೂ ಮಾತನಾಡಿದರೆ, ಎಲ್ಲಿ ಕರೆದೊಯ್ಯುವೆ ಗೊತ್ತೇನು?.... ಮೆಂಟಲ್ ಹಾಸ್ಪಿಟಲಿಗೆ!" ಎಂದು ನುಡಿದವರೇ ನಗಲು ಪ್ರಾರಂಭಿಸಿದರು. ಅನಂತರ ಅವಳ ಕೈಯನ್ನು ಮೃದುವಾಗಿ ಒತ್ತಿ, ಅವಳ ಗದ್ದವನ್ನು ಅಲುಗಾಡಿಸಿ ಹೇಳಿದರು:

"ಏಳು, ಮೆಂಟಲ್ ಹಾಸ್ಪಿಟಲಿನ ಕಡೆಗೇ ತಿರುಗಾಡಲು ಹೋಗುವಾ!"

ಶೋಭನೆಗೆ ಒಮ್ಮೆಲೆ ರೊಚ್ಚು ಏರತೊಡಗಿತು. ರಘೂಮಾಮಾನ ಕೈಯನ್ನು ಸಿಟ್ಟಿನಿಂದ ಝಾಡಿಸಿ, ಗೋಡೆಯತ್ತ ಹೊರಳಿ, ಮುಖವನ್ನು ಕೈಯಿಂದ ಮುಚ್ಚಿ, ಬಿಕ್ಕಿ ಬಿಕ್ಕಿ ಅಳತೊಡಗಿದಳು. ರಘೂಮಾಮಾನಿಗೆ ಇದೇನೋ ದೊಡ್ಡ ಪ್ರಕರಣವಿರಬೇಕೆಂದು ಹೊಳೆಯದಿರಲಿಲ್ಲ. ಆದರೂ ತಮ್ಮ ವಿಚಾರವನ್ನು ತಾವೇ ಒಪ್ಪದೆ, ಅವಳನ್ನು ರಮಿಸುವ ಪ್ರಯತ್ನ ಮಾಡತೊಡಗಿದರು:

"ಏನೇ ಇದು ಶೋಭಾ....? ಏನಾಯಿತು ಅಳಲಿಕ್ಕೆ? ಸುಮ್ಮನಾಗು.... ಏನದು ಹೇಳು ನೋಡೋಣ...."

ಎಂದು ಅವಳನ್ನು ಬಳಸಿದ ಕೈಯಲ್ಲಿ ಎತ್ತಿ ಹಿಡಿದು, ಅವಳ ದೇಹವನ್ನು ತಮ್ಮ ತೊಡೆಯಮೇಲಿರಿಸಿ, ಚಿಕ್ಕ ಮಕ್ಕಳನ್ನು ರಮಿಸುವವರಂತೆ, ಅವಳ ಮುಖವನ್ನು ತಮ್ಮ ಎದೆಗೊತ್ತಿ, ಅವಳ ಗಲ್ಲ-ಕೂದಲುಗಳನ್ನು ನೇವರಿಸುತ್ತ:

"ಶೋಭಾ ಸುಮ್ಮನಾಗು.... ಎಲ್ಲ ಬಿಟ್ಟು ಇಂದೇಕೆ ಇಷ್ಟು ಅಳುವು? ಏನಾಯಿತು....ಆಂ?....ನಾನಿದ್ದೇನೆ, ನನ್ನ ಮುಂದೆ ಸ್ವಲ್ಪ ಬಾಯ್ಬಿರೆದು ಹೇಳು ನೋಡೋಣ—ಏನಾಯಿತೆಂದು.... ಆಂ?" ಎಂದು ಮೃದುವಾಗಿ ರಮಿಸಿದರು.

ರಘೂಮಾಮಾನ ಪ್ರೇಮಭರಿತ ಆ ನುಡಿಗೆ ಶೋಭನೆಯ ಹೃದಯ ಕರಗಿ ನೀರಾಯಿತು. ತನ್ನ ದುಃಖಸಾಗರದಲ್ಲಿ ರಘೂಮಾಮಾನೇ ಆಶ್ರಯಕೊಡುವ ಒಂದು ಸ್ಥಿರವಾದ ಬಂಡೆಗಲ್ಲು ಎಂದು ಅವಳಿಗೆ ಥಟ್ಟನೆ ಹೊಳೆಯಿತು. ಆ ಬಂಡೆಗಲ್ಲಿನ ಮೇಲೆಯೇ ತನ್ನ ಜೀವನನೌಕೆ ಒಡೆದಿದ್ದರೂ, ಈಗ ಅದೇ ಬಂಡೆಗಲ್ಲಿನ ಮೇಲೆಯೇ ಆಶ್ರಯ ದೊರಕಿಸಬೇಕಾಗಿದೆ. ಶೋಭನೆ ತನ್ನ ಮುಖವನ್ನು ಅವನ ಎದೆಗೆ ಗಟ್ಟಿಯಾಗಿ ಒತ್ತಿ, ಅವನನ್ನು ಅಪ್ಪಿ, ಇನ್ನಿಷ್ಟು ಜೋರಿನಿಂದ ಅಳತೊಡಗಿದಳು. ರಘೂಮಾಮಾನಿಗೆ ಏನು ಮಾಡಬೇಕೋ ತಿಳಿಯಲಿಲ್ಲ.

"ಏ ಶೋಭಾ, ಸುಮ್ಮನಾಗೇ! ಈಗ ಅವಳು ಮೇಲೆ ಬಂದು ನೋಡಿದರೆ ಏನೆಂದಾಳು?.... ಅಡಿಗೆ ಮಾಡುತ್ತಿದ್ದಾಳೆ. ಹಾಗೇನೂ ಅವಳು ಬರುವುದಿಲ್ಲ ಬಿಡು.... ಆದರೂ ..."

ಅಕ್ಕನ ನೆನಪಾದೊಡನೆಯೆ ಗಕ್ಕನೆ ಶೋಭನೆ ಅಳುವುದನ್ನು ನಿಲ್ಲಿಸಿದಳು. ಅವ್ಯಕ್ತವಾದ ರೊಚ್ಚು ಅವಳ ರಕ್ತದಲ್ಲಿ ಹರಿಯತೊಡಗಿತು. ಹೌದು ಅಕ್ಕ! ಅಕ್ಕನ ಗಂಡ ಇವ! ಇವನಿಗೂ ಅಕ್ಕನಿಗೂ ಗಂಟು! ತನ್ನದೇನಿದೆ ಇವರ ಸಂಸಾರದಲ್ಲಿ? ತನ್ನ ದಾರಿಯನ್ನು ತಾನೇ ನೋಡಿ ಕೊಳ್ಳಬೇಕು. ತನ್ನ ತಪ್ಪನ್ನು ತಾನು ಅನುಭೋಗಿಸಬೇಕು.... ತನ್ನ ಅಧಃಪತನವನ್ನು, ತನ್ನ ದುಃಖವನ್ನು ತಾನೇ ಅನುಭವಿಸಬೇಕು.... ಆದರೆ ಈ ಅಧಃಪತನಕ್ಕೆ ಕಾರಣರಾರು? ರಘೂಮಾಮಾ....

"ರಘೂಮಾಮಾ....... ಹಾ ಹಾ ಹಾ ಹಾ.... ಅಲ್ಲ ಏನೆಂದು ಕರೆಯಲಿ ನಿನ್ನನ್ನು? ರಘುನಾಥ, ರಘೂ, ಡಾರ್ಲಿಂಗ್...." ಎಂದವಳೇ ವಿಕಟವಾಗಿ ನಕ್ಕಳು.

ರಘೂಮಾಮಾ ನಿಜವಾಗಿಯೂ ಬೆಚ್ಚಿಬಿದ್ದರು. ಈ ವಿಚಿತ್ರ ನಗೆ ಅವನ ಅಂತಃಕರಣವನ್ನು ಕೊರೆದಿರಬೇಕು. ಸ್ವಲ್ಪ ಹೆದರಿದರು.

"ನೀವು ಇಷ್ಟು ಕ್ರೂರ, ಕಠೋರ, ನೀಚರಿದ್ದೀರೆಂದು ನನಗೆ ಎನಿಸಿದ್ದಿಲ್ಲ...."

"ನಾನು ಕ್ರೂರ?.... ನಾನೇನು ಕ್ರೂರತನ ಮಾಡಿದ್ದೇನೆ? ಇಲ್ಲಿ ನೋಡು.... ನಿನಗೆ ಹಿಂದೆಯೇ ಎಲ್ಲ ತಿಳಿಸಿ ಹೇಳಲಿಲ್ಲವೇ? ಮತ್ತೇಕೆ ಸುಮ್ಮನೆ ಹಿಂದಿನದನ್ನು ನೆನೆದು ಪಶ್ಚಾತಾಪ ಪಡುತ್ತಿರುವಿ?...."

"ತಿಳಿಸಿಹೇಳಿದರಂತೆ! ಏನೆಂದು? ನನ್ನಮೇಲೆ ನಿಮ್ಮ ಪ್ರೇಮ ಕುಳಿತಿದೆ ಎಂದು! ಅದಕ್ಕಾಗಿ.... ಹಾ— ಯಾವುದಾದರೂ ಕೂಸಿನ ಮುಂದೆ ಹೇಳಿರಿ...."

ಹಿಂದಿನ ಒಂದು ಸನ್ನಿವೇಶ ಅವಳ ಕಣ್ಣಮುಂದೆ ಸರ್ರನೆ ಹಾಯ್ದುಹೋಯಿತು. ಆ ಘಟನೆ ನಡೆದ ಮಾರನೆಯ ದಿನ

ಮಧ್ಯಾಹ್ನ ಮ್ಯಾಟನಿ ಶೋಕ್ಕೆ ಹಾಯಸ್ಕೂಲಿನಿಂದ ನೇರವಾಗಿ ಕರೆದೊಯ್ದಿದ್ದರು ರಘೂಮಾಮಾ. ಸಿನೇಮಾ ನಡೆದಾಗ, ಇವಳ ಕೈ ಅವರ ಕೈಯಲ್ಲಿಯೇ ಇತ್ತು. ಸಿನೇಮಾ ಮುಗಿದ ಬಳಿಕ ಆ ಗ್ರೌಂಡಿನ ಕಾಲ್ದಾರಿಯಿಂದ ಬರುವಾಗ:—

“ಶೋಭಾ, Do you know I love you? ನೀನು ಸಣ್ಣವಳಿದ್ದಾಗಿನಿಂದ ನಿನ್ನ ಮೇಲೆ ನನ್ನ ಮಮತೆ. ನೀನು ಎಷ್ಟು ಚೆಂದ ಕಾಣಿಸುತ್ತೀ ಇದರ ಕಲ್ಪನೆ ನಿನಗಿದೆಯೇ?....!” ಎಂದು ಅಂದಿದ್ದರು.

“ಆದರೆ.... ಆದರೆ.... ಅದೆಲ್ಲ ಏಕೆ ಬೇಕಾಗಿತ್ತು? ಅಕ್ಕನಿಗೆ ದ್ರೋಹ ಬಗೆಯುತ್ತಿಲ್ಲವೇ ನಾವು?”

“ಹುಚ್ಚೀ. ಅದರಲ್ಲೇನು ಬಂತು? ಅವಳು ಮುದುಕಿಯಾಗುತ್ತ ನಡೆದಿದ್ದಾಳೆ ಮೈಯಲ್ಲಿ ಜೀವವೇ ಇಲ್ಲ. ಅವಳಿಗೆ ಗಂಡನ ಕಾಳಜಿಯೇ ಇಲ್ಲ.... ಅವಳು ಒಳ್ಳೆಯ ಹೆಂಗುಸು ನಿಜ.... ಆದರೆ ನಿನ್ನ ಮುಂದೆ........ ಪ್ರೇಮದ ಮುಂದೆ........ ಇಂದು ಸಿನೇಮಾದಲ್ಲಿ ನೋಡಲಿಲ್ಲವೆ? ರಾಣಿಯ ಮೇಲೆ ಆಪನ ಪ್ರೇಮವಿದ್ದುದರಿಂದ ಅವಳ ಮೇಲೆ ಅಧಿಕಾರ ಬಂದಿತವನಿಗೆ!”

ಮುಂದೆ ಪ್ರತಿಸಲವೂ ಇವರು ಪ್ರೇಮದ ಮಾತನ್ನೇ ಆಡು-ತ್ತಿದ್ದರು, ಪ್ರೇಮದ ಹೆಸರಿನಲ್ಲಿ ತನ್ನನ್ನು ಮೋಸಗೊಳಿಸಿದರೆಂದು ಶೋಭನೆಗೆ ಎನಿಸತೊಡಗಿತು.

“ಪ್ರೇಮವಂತೆ ಪ್ರೇಮ! ಎಲ್ಲ ಮೋಸ.... ಎಲ್ಲ ಸುಳ್ಳು.... ನಿಮ್ಮ ಹಸಿವು.... ನಿಮ್ಮ ಪ್ರಾಣಿಹಸಿವು.... ನನ್ನ ಕುತೂಹಲ.... ನನ್ನ ಯೌವನ....”

ಈ ಹದಿನಾರು-ಹದಿನೇಳು ವರ್ಷದ ಹುಡುಗಿ, ಒಮ್ಮೆಲೆ ಇಷ್ಟು ತತ್ತ್ವಜ್ಞಾನ ಪ್ರಾರಂಭಿಸಬಹುದೆಂದು ರಘೂಮಾಮಾನಿಗೆ ಎನಿಸಿರ-ಲಿಲ್ಲ. ಅವರ ಮುಖ ಕಪ್ಪಿಟ್ಟಿತು.

“ಅಂತೂ ನಿಮ್ಮ ಸಮಾಧಾನವಾಯಿತಲ್ಲವೆ— ನನ್ನ ಜೀವನ ಹಾಳುಮಾಡಿ....!”

“ಜೀವನ ಹಾಳು ಮಾಡಿ! ಜೀವನ ಹಾಳಾಗಲಿಕ್ಕೆ ಏನಾಗಿದೆ? ನಿನಗೆ ನನ್ನ ಮೇಲೆ ಪ್ರೀತಿ ಇಲ್ಲ ಹೌದಲ್ಲವೋ? ಆದರೆ ನಾನು ಮೋಸ ಮಾಡಿದೆನೆಂದು ಎನ್ನಬೇಡ!”

“ಮೋಸವಲ್ಲದೆ ಮತ್ತೇನು? ನನ್ನ ಜೀವನ ಹಾಳಾಯ್ತಲ್ಲದೆ ಇನ್ನೇನು?....” ಎಂದು ಶೋಭನೆ ಮರಳಿ ಅಳಲಾರಂಭಿಸಿದಳು.

ರಘೂಮಾಮಾನ ಮೆದುಳಿನಲ್ಲಿ ಈಗ ಝಗ್ಗನೆ ಬೆಳಕು ಬಿತ್ತು.

“ಏನಾಗಿದೆ ಹಾಳಾಗಲಿಕ್ಕೆ?”

“ಮತ್ತೇನಾಗಬೇಕು? ಆಗುವುದೆಲ್ಲ ಆಗಿದೆ.... ನನ್ನನ್ನು ವಿಷಹಾಕಿ ಕೊಂದೇಕೆ ಬಿಡುವುದಿಲ್ಲ?”

ರಘೂಮಾಮಾ ತಬ್ಬಿಬ್ಬಾದರು. ಆದರೂ ಕುಶಲತೆಯಿಂದ ಸಾವರಿಸಿಕೊಂಡರು. ಈ ಹುಚ್ಚುಹುಡುಗಿಗೆ ಮನಗಾಣಿಸುವುದಕ್ಕೆ ಎಷ್ಟು ವೇಳೆ? ಕೇಸು ನಡೆದಾಗ ತಮ್ಮ ಕಕ್ಷಿಗಾರನಲ್ಲಿ ಎಳ್ಳಷ್ಟೂ ತಪ್ಪಿಲ್ಲ— ಎಂದು ಕುಶಲತೆಯಿಂದ ಚರ್ಚಿಸುವ ರೀತಿಯಲ್ಲಿ ಹೇಳ ತೊಡಗಿದರು:

“ಈಗ ನನಗೆ ತಿಳಿಯಿತು— ನೋಡು.... ಅದು ನಿಜವೇನೆ! ....ಎಷ್ಟು ದಿನವಾಯಿತು? ನನಗೇಕೆ ತಿಳಿಸಲಿಲ್ಲ ಇದಕ್ಕಿಂತ ಮುಂಚೆ?

“ನಿಮಗೇನು ತಿಳಿಸುವುದು ಮಣ್ಣು....?”

“ಹೀಗಾಯಿತೇನು?....ಹುಂ....ಮುಂದೆ? ಆದದ್ದು ಆಗಿ ಹೋಗಿದೆ..... ಇನ್ನು ಮುಂದಿನ ದಾರಿ?

“ಇನ್ನು ಮುಂದಿನ ಹಾದಿ ಹೇಳಿದೆನಲ್ಲ: ಸುಡುಗಾಡು ಎಂದು!”

“ಹಾಗೆಲ್ಲ ಮಾತಾಡಬಾರದು....ಇಲ್ಲಿ ನೋಡು, ಮನುಷ್ಯ-ನಿಂದ ತಪ್ಪು ಆಗಿಯೇ ಆಗುತ್ತವೆ. ಇಲ್ಲದಿದ್ದರೆ ಅವನಿಗೆ ಮನುಷ್ಯ ನೆಂದೇಕೆ ಎನ್ನಬೇಕು. To err is human ಎಂದು ನೀನು ಕಲಿತೇ ಇರಬೇಕು. ಹುಚ್ಚೀ! ವಿಷ-ಗಿಷ ಅಂತ ಏನೋ ಎನ್ನುತ್ತಿದ್ದಿಯಲ್ಲ— ವಿಷ ಅಂತೆ— ಅಂಥಾದ್ದೇನಾದರೂ ಮಾಡೀ ಮತ್ತೆ! ಬೇರೆ ದಾರಿ ಬೇಕಾದಷ್ಟು ಇವೆ.... ನಾನಿದ್ದಾಗ ನೀನೇಕೆ ಹೆದರುವಿ.... ಹಾಂ?”

“ಮತ್ತೇನು ಮಾಡಬೇಕೆನ್ನುವಿರಿ?” ಧ್ವನಿಯಲ್ಲಿ ಕಾಠಿಣ್ಯ-ವಿತ್ತು, ತಿರಸ್ಕಾರವಿತ್ತು.

“ನಾನೆಲ್ಲ ಅದರ ವಿಚಾರ ಮಾಡುವೆನು! ನೀನು ಸುಮ್ಮನೆ ಆರಾಮಾಗಿ ಇರು ನೋಡೋಣ, ನಿಶ್ಚಿಂತಳಾಗಿ........”

ನಿಶ್ಚಿಂತಳಾಗಿ! ಕೊಂಚಹೊತ್ತು ಶೋಭನೆ ಸುಮ್ಮನಾದಳು. ‘ನಿಶ್ಚಿಂತಳಾಗಿ....’ ತನ್ನ ಹೊಟ್ಟೆಯಲ್ಲಿ ಏನೋ ಭಯಂಕರವಾದ ಒಂದು ಕ್ರಿಯೆ ನಡೆದಿದೆ. ಒಂದು ಜೀವ ಅವತರಿಸಿ ಬೆಳೆಯುತ್ತಿದೆ, ಒದ್ದಾಡುತ್ತಿದೆ, ಉರುಳಾಡುತ್ತಿದೆ....ಹೀಗಿರುವಾಗ ನಿಶ್ಚಿಂತಳಾಗಿ ಇರುವುದು ಹೇಗೆ?.... ಆ ಜೀವ ಹೇಗೆ ಬೆಳೆಯುತ್ತಿರಬಹುದು?— ಎಂದು ಕುತೂಹಲವುಂಟಾಯಿತು ಶೋಭನೆಗೆ. ತನಗೆ ಗೊತ್ತಿಲ್ಲದೆ, ತನಗೆ ಅರಿವಿಲ್ಲದೆ, ತಾನು ಬಯಸದೆಯೆ, ತಾನಿನ್ನೂ ಕೂಸಿರುವಾಗಲೆ, ತನ್ನ ಗರ್ಭದಲ್ಲಿ ಒಂದು ಕೂಸು— ಒಂದು ಪ್ರಾಣಿ ಉದ್ಭವಿಸಿ ಬೆಳೆಯುತ್ತಿದೆಯೆಂದರೇನು? ಈ ವಿಚಿತ್ರಪವಾಡವು ನಡೆದಾಗ ನಿಶ್ಚಿಂತಳಾಗಿ ಆರಾಮಾಗಿ ಕೂಡ್ರಬೇಕಂತೆ!

“ನಿಶ್ಚಿಂತಳಾಗಿರುವುದು ಹೇಗೆ ರಘೂಮಾಮಾ? ನನ್ನೊಳಗೆ ಏನೇನೋ ನಡೆದಿರುವಾಗ, ನಿಶ್ಚಿಂತೆಯಿಂದಿರುವುದು ಹೇಗೆ?”

“ನೀನೇನೂ ಹೆದರುವ ಕಾರಣವಿಲ್ಲ. ಬೇಕಾದಷ್ಟು ಉಪಾಯಗಳಿವೆ!”

“ಅಂ....?”

“ಹೌದು ಬೇಕಾದಷ್ಟು ಉಪಾಯಗಳಿವೆ. ಯಾವುದು ಸರಳವೋ, ಸುಸೂತ್ರವೋ— ಅದನ್ನು ಕೈಕೊಳ್ಳಬೇಕು.... ಬೇಕಾದರೆ Operation ಮಾಡಿಸಬಹುದು.... ಅಥವಾ ಔಷಧದಿಂದ ಹೊರಗೆ ತೆಗೆಯಿಸಬಹುದು....”

ಶೋಭನೆಯ ಎದೆ ಧಸ್ಸೆಂದಿತು. Operation.... ಔಷಧ ಎಂದೊಡನೆ ಅವಳ ತಲೆ ಗಿರ್ರನೆ ತಿರುಗತೊಡಗಿತು. ಅದು ಸಾಧ್ಯವಿಲ್ಲ

ತಾನು ಸತ್ತರೆ, ಅಥವಾ ತನಗೆ ಮತ್ತೇನಾದರೂ ಆದರೆ.... ಅಯ್ಯೊ, ಅಯ್ಯೊ! ಹಾಳು ನಾಲ್ಕು ಕ್ಷಣಕ್ಕೋಸುಗ ಎಷ್ಟೊಂದು ತೊಂದರೆ.... ಆದಾಗದು. ಅದು ಸಾಧ್ಯವಿಲ್ಲ. ಇವೆಲ್ಲಕ್ಕಿಂತ ಪ್ರಾಣ ಹೋಗುವುದು ಲೇಸು ಅಯ್ಯೊ— ಈ ಎಲ್ಲ ಅವಮಾನ, ಈ ಎಲ್ಲ ತೊಂದರೆ, ಈ ಎಲ್ಲ ಗಂಡಾಂತರ ಯಾರಿಗೆ ಬೇಕಾಗಿತ್ತು ? Operation ! ದೇವರೇ, ಇದೇನು ಎಂಥ ಸಂಕಟದಲ್ಲಿ ಹಾಕಿದೆಯಲ್ಲ ನೀನು ? ತನ್ನ ತಪ್ಪೇನು? ತನ್ನ ತಪ್ಪನ್ನು ಕ್ಷಮಿಸಬಾರದೇ ದೇವರು ?

ರಘುಮಾಮಾ ಕೊಂಚ ತಡೆದು ಹೇಳಿದರು— ಅದರ ಕೈ ಅವಳ ಕೈಯನ್ನು ಹಿಡಿದಿತ್ತು ಧೈರ್ಯಕೊಡುವುದರ ಸಲುವಾಗಿ....

"ಅಥವಾ ಇನ್ನೊಂದು ಹಾದಿಯಿದೆ."

ಅವಳ ಜೀವದಲ್ಲಿ ಜೀವ ಬಂದಂತಾಯಿತು. ಇನ್ನೊಂದು ಹಾದಿ ಇದೆ. ಇನ್ನೊಂದು ಹಾದಿ ಇದೆ. ಮರುಭೂಮಿಯಲ್ಲಿ ಹೋಗುವವನಿಗೆ ದೂರ ನೀರು ಕಾಣಿಸಿದಂತೆ ಅವಳಿಗೆ ಎನಿಸತೊಡಗಿತು.

"ನಾವೆಲ್ಲಿಯಾದರೂ ದೂರ ಹೋಗಿ ಇರೋಣ. ಅಲ್ಲಿ ನೀನು ಹಡೆದ ಮೇಲೆ, ಆ ಕೂಸನ್ನು ಎಲ್ಲಿಯಾದರೂ.... ಅನಾಥಾಶ್ರಮದಲ್ಲಿಟ್ಟು ಬರೋಣ...."

ದೂರ ದೂರ ಎಲ್ಲಿಯಾದರೂ ಹೋಗಬೇಕು.... ಎಲ್ಲಿ ?.... ಆ ಜೀವ ಪೂರ್ಣ ಬೆಳೆದು ಹೊರಬರುವ ತನಕ ಕಾಯಬೇಕು; ಬೇಯಬೇಕು.... ಅನಂತರ ತನ್ನ ಉದರದಲ್ಲಿ ಬೆಳೆದ— ತನ್ನ, ತನ್ನದೇ ಆದ, ತನ್ನ ರಕ್ತದಿಂದ ಬೆಳೆದ ಆ ಜೀವವನ್ನು—ತನ್ನ ಕೂಸನ್ನು, ತನ್ನ ಮಗನನ್ನು ಅಥವಾ ತನ್ನ ಮಗಳನ್ನು ಎಲ್ಲಿಯೋ ಅನಾಥಾಶ್ರಮದಲ್ಲಿಟ್ಟು.... ಅಯ್ಯೊ ಇದೆಂತಹ ಪಾಪಕೃತ್ಯ! ಒಂದು ಪಾಪ ಮುಚ್ಚಲು ಇನ್ನೊಂದು ಪಾಪ! ತನ್ನ ಮಗನು ಅನಾಥನಂತೆ ಎಲ್ಲಿಯೋ ಬೆಳೆದು ಬಿಕ್ಕೆ ಬೇಡಬೇಕು. ಅದಕ್ಕಿಂತ ತಾನೊಬ್ಬಳೇ ಹೋಗಬೇಕು. ದೂರ— ಅತಿದೂರ— ಈ ಜಗತ್ತನ್ನೇ ತೊರೆದು, ಈ ಪ್ರಪಂಚದಿಂದ ವಿಮುಕ್ತಳಾಗಿ...... .

"ಅಥವಾ...." ಎಂದು ರಘೂಮಾಮಾ ರಾಗವನ್ನು ಎಳೆದರು. ಪುಣ್ಯಕ್ಕೆ ಇನ್ನೂ ಒಂದು 'ಅಥವಾ' ಇದೆ.... ಇದಾವ ದಾರಿ....? ಇದಾವ ದಾರಿ ?

"ಅಥವಾ.... ನಿನ್ನ ಲಗ್ನವನ್ನು ಕೂಡಲೇ ಮಾಡಬೇಕು!"

"ಆಂ ?"

"ಕೂಡಲೇ ಎಂದರೆ ೧೦-೧೫ ದಿನಗಳಲ್ಲಿ.... ಒಬ್ಬ ಒಳ್ಳೆಯ ಗಂಡನನ್ನು ಹುಡುಕಿ, ಕೂಡಲೇ ನಿನ್ನ ಲಗ್ನ ಮಾಡಬೇಕು...."

ಲಗ್ನ ! ಅವಳ ಮನಸ್ಸಿನಲ್ಲಿ ನೂರೆಂಟು ಚಿತ್ರಗಳು ಒಮ್ಮೆಲೆ ನುಸುಳಿಬಂದುವು.... ಲಗ್ನ ! ಅದೊಂದು ಪವಿತ್ರಬಂಧನ-ಒಬ್ಬರನ್ನೊಬ್ಬರು ಪ್ರೇಮಿಸುವ ಒಂದು ಗಂಡು, ಒಂದು ಹೆಣ್ಣು ಕೈ-ಕೈ ಹಿಡಿಯುವ ಪ್ರಸಂಗ! ತಾನು ಬಿ.ಎ. ಪಾಸು ಮಾಡಬೇಕು. ಒಬ್ಬ ಒಳ್ಳೆಯ ಯುವಕನನ್ನು— ಅವಳ ಸಾಯನ್ಸ್ ಮಾಸ್ತರ್ ಜೋಶಿಯಂಥ ಮುದ್ದಾದ ಯುವಕನನ್ನು—ಪ್ರೀತಿಸಬೇಕು. ಅವನು ಒಳ್ಳೆಯವನೂ, ಸುಂದರನೂ, ಚತುರನೂ— ಯಾರಂತೆ? ರಘೂಮಾಮಾನಂತೆ?— ಇರಬೇಕು. ಅನಂತರ ಒಂದು ಮುದ್ದಾದ ಮನೆಯಲ್ಲಿ ಸಂಸಾರ ಮಾಡಬೇಕು. ಆಮೇಲೆ ಒಂದೆರಡು ವರ್ಷಗಳನಂತರ ಒಂದು ಮಗು ಹುಟ್ಟಬೇಕು— ಎಂಬ ಅವಳ ಕನಸೆಲ್ಲಿ ? ಅವಳ ಆದರ್ಶವೆಲ್ಲಿ ? ಈಗಿನ ಅವಳ ಪ್ರಸಂಗವೆಲ್ಲಿ ? ಇಷ್ಟು ಬೇಗನೆ ತಾಯಿ-ಈಗಾಗಲೇ ಆಗಿಯೇ ಬಿಟ್ಟಿದ್ದಾಳೆ. ಗಡಿಬಿಡಿಯಲ್ಲಿ ಲಗ್ನ-ಯಾರನ್ನೋ ಏನೋ ! ಪ್ರೇಮದ ಮಾತು ದೂರವೇ ಉಳಿಯಿತು ಅಷ್ಟೇ ಅಲ್ಲ ಅವಳ ಕೂಸಿನ ತಂದೆ ಅವಳ ಗಂಡನಲ್ಲ. ಅಯ್ಯೋ, ಹಾಳು ದೈವವೆ ! ಅವಳ ಗಂಡನನ್ನು ಮೋಸಗೊಳಿಸಬೇಕು.... ಇತ್ತ ಈಗಾಗಲೇ ಅಕ್ಕನನ್ನು ಮೋಸಗೊಳಿಸಿಯಾಗಿದೆ.... ಮೋಸ.... ಮೋಸ.... ಮೋಸದ ಮರೆಯಲ್ಲಿಯ ಬಾಳ್ವೆ ಬಾಳ್ವೆಯೇ ? ಅದಕ್ಕಿಂತ.... ಶೋಭನೆಯ ವಿಚಾರಚಕ್ರ ಗರಗರ ತಿರುಗತೊಡಗಿತು.... ರಘೂಮಾಮಾ ಇಷ್ಟೊಂದು ಸರಳವಾಗಿ, ಶಾಂತವಾಗಿ ಮಾತನಾಡುತ್ತಿದ್ದುದನ್ನು ನೋಡಿ, ಅವಳಿಗೆ ಸಿಟ್ಟು ಬರಲಾರಂಭಿಸಿತು:

"ಲಗ್ನ-ಲಗ್ನವೇ ? ಹಾಗಾದರೆ ನೀವೇ ನನ್ನನ್ನೇಕೆ ಲಗ್ನವಾಗಬಾರದು" ಎಂದು ಥಟ್ಟನೆ ಸಿಟ್ಟಿನ ಭರದಲ್ಲಿ ಎಂದಳು. ತನಗೆ ಗೊತ್ತಿಲ್ಲದಂತೆಯೇ ಆ ಶಬ್ದಗಳು ಅವಳ ಬಾಯಿಂದ ಜಾರಿದುವು. ಆ ಶಬ್ದಗಳು ಅವಳ ಮನದ ಗಹ್ವರದಲ್ಲಿ ಪ್ರತಿಧ್ವನಿಗೊಂಡುವು. ಹೌದು, ತಾನು ಎಂದದ್ದು ನಿಜ ! ರಘೂಮಾಮಾನೇ ತನ್ನನ್ನೇಕೆ ಲಗ್ನವಾಗಬಾರದು ? ಪ್ರೇಮ.... ಪ್ರೇಮವೆಂದು ಹೇಳುತ್ತಿದ್ದರಲ್ಲ.... ಹಾಗಿದ್ದರೆ ಅವರೇ ಏಕೆ ತನ್ನನ್ನು ಲಗ್ನವಾಗಬಾರದು ?

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ **ನೀಲ** ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ **ಜೀವಿನಿ** ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ **ಪಂಚವಟಿ** ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ರಘೂಮಾಮಾನಿಗೆ ಆಶ್ಚರ್ಯದ ಸಿಡಿಲೆರಗಿದಂತಾಯಿತು. ಅವಳಿಗೆ ಹುಚ್ಚು ಹಿಡಿದಿಲ್ಲವಷ್ಟೇ— ಎಂದು ಸಂಶಯಪಟ್ಟರಲೂ ಬಹುದು....

" ಅಂ ? ನಾನು ನಿನ್ನನ್ನು ಲಗ್ನವಾಗುವುದೇ.......? ಹುಚ್ಚಿ ? ಜನರೇನೆಂದಾರು ? ನಿನ್ನ ಅಕ್ಕ ? ಅಷ್ಟೇ ಅಲ್ಲದೆ, ಕಾಯಿದೆ ಬೇರೆ !"

" ಆಹಾ ! ಪ್ರೇಮ–ಪ್ರೇಮವೆಂದು ಚೆಂದಚೆಂದ ಮಾತು ಹೇಳುತ್ತಿದ್ದಾಗ ಜನರೆಲ್ಲ ಎಲ್ಲಿ ಹೋಗಿದ್ದರು? ನನ್ನ ಅಕ್ಕ ಎಲ್ಲಿ ಇದ್ದಳು ? ವಾಹ್–ಈಗ......."

ಅಷ್ಟರಲ್ಲಿ ಕೆಳಗಿನಿಂದ ಕಮಲಕ್ಕನ ಕೂಗು ಕೇಳಬಂತು: ಶೋಭಾ, ಏ ಶೋಭಾ, ಇದ್ದಾರೇನು, ಅವರು ಅಲ್ಲಿ ? ಊಟಕ್ಕೆ, ಬರ್ರಿ.... ಏ ರಾಮೂ, ಊಟಕ್ಕೆ ಕರೆಯೋ ಅವರನ್ನ! ಶೋಭಾ ... ಎಲಾ, ಈ ರಾಮೂ ಎಲ್ಲಿ ಹೋಗ್ಯಾನ ? " ಎನ್ನುತ್ತ ಕಮಲಕ್ಕ ತಾನೇ ಅಟ್ಟವೇರತೊಡಗಿದಳು. ರಘೂಮಾಮಾ ಸಿಡಿದೆದ್ದು ಟೇಬಲ್ ಬಳಿಯ ಕುರ್ಚಿಯ ಮೇಲೆ ಹೋಗಿ ಕುಳಿತು. ಟೇಬಲ್ ಮೇಲಿನ ಪುಸ್ತಕವೊಂದನ್ನು ತೆರೆದು ಕೈಯಲ್ಲಿ ಹಿಡಿದರು. ಶೋಭನೆ ನೇರವಾದ ದೃಷ್ಟಿಯಿಂದ ಅವರನ್ನೇ ನೋಡುತ್ತಿದ್ದಳು ಅವರು ಕೈಯಲ್ಲಿ ಪುಸ್ತಕ ತೆಗೆದುಕೊಳ್ಳುವ ರೀತಿಯನ್ನು ನೋಡಿ ಅವಳಿಗೆ ಮೋಜೆನಿಸಿತು.... ಕನಿಕರವುಂಟಾಯಿತು.

" ಶೋಭಾಳಿಗೆ ಭಯಂಕರ ತಲೆನೋವು ! ನಡೆ—ನಾನು ಬರು-ತ್ತೇನೆ.... " ಎಂದು ಎಂದವರೆ ರಘೂಮಾಮಾ ರೂಮಿನ ಹೊರಗೆ ಹೊರಟರು.

" ಶೋಭಾ—ನಿನಗ ಚಹಾ ಮಾಡಿಕೊಡಲೇನು....? ಅಥವಾ ಸ್ವಲ್ಪ ಗಂಜಿ.... ಜ್ವರ ಗಿರ ಬಂದಾವೇನು ಮತ್ತ...." ಅಕ್ಕನ ಮಾಧುರ್ಯಯುಕ್ತ ನುಡಿಯನ್ನು ಕೇಳಿ ಶೋಭನೆಗೆ ದುಃಖವೇರಿ ಬಂತು

" ಬೇಡ ಅಕ್ಕಾ, ನನಗೇನೂ ಬೇಡ!"

" ಏನೂ ಬೇಡ— ಅಂದರೆ ಹೇಗೆ? ಸ್ವಲ್ಪ ಗಂಜೀ ಮಾಡಿ ಕೊಡುವೆ.... ಆ ಮೇಲೆ ಸ್ವಲ್ಪ ಕಾಡೆ.... ಹಾಂ"

ಅಕ್ಕ ರಘೂಮಾಮಾನ ಹಿಂದಿನಿಂದ ಕೆಳಗೆ ಇಳಿದು ಹೋದಳು. ಅವರ ಕಾಲಿನ ಸಪ್ಪಳದೊಡನೆ ಅವಳ ದುಃಖವೂ ಇಳಿಯತೊಡಗಿತು.

ಕಾಯಿದೆಯಂತೆ ಕಾಯಿದೆ ! ಅದೇಕೆ ಅಡ್ಡಬರಬೇಕು ? ಎಲ್ಲರ ಅನುಮತಿಯಿದ್ದರೆ? ಎಲ್ಲರ ಅನುಮತಿ ಸಾಧ್ಯವೇ ? ಕಾಯದೆ— ಸುಟ್ಟುಬರಲಿ ಈ ಕಾಯದೆಗೆ.... ಅಷ್ಟನ್ನೂ ಮೀರಿ ಕಾಯದೆ ಅಡ್ಡಗಾಲು ಹಾಕಿದರೆ, ತಾನೊಬ್ಬಳೇ ಬೇರೆ ಎಲ್ಲಿಯಾದರೂ ಬೇರೆ ಪ್ರಾಂತದಲ್ಲಿ ಇರಬೇಕು. ಅಥವಾ ಎಲ್ಲರೂ ಕೂಡಿಯೇ ಹೋಗ-ಬೇಕು.... ದೂರ....ದೂರ....ದೂರ.... ಇದೆಂತಹ ಕನಸು ? ಅಕ್ಕ ಏನೆಂದಾಳು ? ಅಕ್ಕನ ಗತಿಯೇನು ? ಅವಳಿಗೆ ಇದೆಲ್ಲ ತಿಳಿದರೆ....? ಅಯ್ಯೊ ಅಕ್ಕ ಪಾಪ! ಎಷ್ಟು ಒಳ್ಳೆಯ ಮನುಷ್ಯಳು.... ಬಂಗಾರದಂತಹ ಮನಸ್ಸಿನವಳು. ಅವಳಿಗೆ ತನ್ನ ಸ್ವಾರ್ಥದ ಮಾತೇ ಗೊತ್ತಿಲ್ಲ.... ಗಂಡ ಹೇಳಿದಂತೆ ಕೇಳುವವಳು.... ಅಷ್ಟೇ ಅಲ್ಲದೆ ತನ್ನ ತಂಗಿಯನ್ನು, ತಾನೇ ಆರು ವರ್ಷ ಮನೆಯಲ್ಲಿಟ್ಟುಕೊಂಡು ತಾಯಿಯಂತೆ ಜೋಪಾನ ಮಾಡಿದ ತಂಗಿಯನ್ನು—ಸಂಕಟದಿಂದ ಪಾರುಮಾಡಲು, ಅವಳ ಜೀವ ಉಳಿಸಲು, ಏನು ಬೇಕಾದುದನ್ನು ಮಾಡಲೂ ಸಿದ್ಧ-ಳಾಗುವಳು........ ಅವಳು ಮಾಡಬೇಕಾದದ್ದಾದರೂ ಏನು? ಅವಳ ಗಂಡ ಅವಳ ಗಂಡನೇ ! ತಂಗಿಯ ಸುಖಕ್ಕೆ ಗಂಡನ ಸುಖಕ್ಕೆ ತನ್ನ ಸುಖಕ್ಕೆ— ಎಲ್ಲರ ಸುಖಕ್ಕೆ ಕೊಂಚ ಸ್ವಾರ್ಥತ್ಯಾಗ ಮಾಡ-ಲಿಕ್ಕಿಲ್ಲವೇ ತನ್ನ ಮಾತೃಹೃದಯದ ಅಕ್ಕ? ಅವಳನ್ನು ದುಂಬಾಲು ಬಿದ್ದು ಸೆರಗೊಡ್ಡಿ ಬೇಡಿಕೊಂಡೇನು ! ಅವಳನ್ನು ಆರಾಧಿಸಿ ಕಾಲುಬಿದ್ದು ಕೇಳಿಕೊಂಡೇನು.... ! ಅವಳು ಒಲ್ಲೆನೆನ್ನಲಾರಳು ದೇವರೇ, ಅವಳು ಒಲ್ಲೆನೆನ್ನದಿರುವಂತೆ ಮಾಡು....ಆದರೆ....ಆದರೆ.... ರಘುಮಾಮಾನೇ ಒಲ್ಲೆನೆಂದರೆ?.... ತಾನೂ ತನ್ನ ಅಕ್ಕನೂ ಕೂಡಿಯೇ ಅವರನ್ನು ಒಪ್ಪಿಸಬಹುದು. ಅವರೇ ಮೊದಲು ತಪ್ಪು ಮಾಡಿದವರು.... ಅವರು ನಿರಾಕರಿಸಿದರೆ ಆತ್ಮಹತ್ಯೆ.... ಹೌದು ಆತ್ಮಹತ್ಯೆ ! ಆತ್ಮಹತ್ಯದ ಹೆದರಿಕೆಯಿಂದಾದರೂ ಅವರು ಹೂಂ ಅನ್ನದಿರಲಾರರು ! ರಘೂಮಾಮಾ, ರಘುನಾಥ. ರಘೂ, ಡಾರ್ಲಿಂಗ್! ಅವರು ನಿಜವಾಗಿಯೂ ತನ್ನನ್ನು ಪ್ರೀತಿಸುತ್ತಾರೆಯೇ ? ಇಷ್ಟೆಲ್ಲ ದಿನಗಳ ಅವರ ಮಾತು-ನಡತೆ ನೋಡಿದರೆ, ಎಳ್ಳಷ್ಟೂ ಸಂಶಯ ಬರಲಾರದು.... ಹೌದು ಅದೊಂದೇ ದಾರಿ.... ರಘುನಾಥ........ ರಘೂ........ರಘೂ........

ಶೋಭನೆಯ ಹೃನ್ಮನಗಳಲ್ಲಿ ಅಪೂರ್ವ ಶಾಂತತೆ, ಅಪೂರ್ವ ಆನಂದ ತುಂಬಿಬಂದುವು. ಅವಳ ಕಂಗಳಲ್ಲಿ ನೀರು ಮೂಡಿ ನಿಂತುವು. ಸಾವಕಾಶವಾಗಿ ಮಂಚದಿಂದ ಎದ್ದು, ಸೀರೆಯನ್ನು ಸರಿಪಡಿಸಿಕೊಂಡಳು. ಕನ್ನಡಿಯಲ್ಲಿ ಮುಖನೋಡಿ ಕೂದಲನ್ನು ನೇವರಿಸಿಕೊಂಡಳು. ತಾನು ಒಮ್ಮೆಲೆ ದೊಡ್ಡವ-ಳಾದಂತೆ, ಪ್ರೌಢಳಾದಂತೆ ಅವಳಿಗೆ ಭಾಸವಾಗತೊಡಗಿತು. ಅವಳ ಹೆದರಿಕೆ ನಿರಾಶೆ ಅಳಲು, ಎಲ್ಲ ಮಾಯವಾದುವು. ಒಂದು ಬಗೆಯ ಸುಂದರವಾದ ತೀಕ್ಷ್ಣ ಪ್ರಕಾಶದಲ್ಲಿ, ನೆಟ್ಟಗೆ ಎತ್ತರವಾಗಿ ಎದ್ದು ನಿಂತಂತೆ ಅವಳಿಗೆನಿಸತೊಡಗಿತು ' ಅವ್ವಾ... ಅವ್ವಾ ' ಎಂಬ ಒಂದು ಶಬ್ದ ಎಲ್ಲಿಯೋ ಅವಳ ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು. ಮನದ ತುಂಬ ಹೂವೇ ಹೂವು ಅರಳುತ್ತಿದ್ದಂತೆ, ದೇಹದಲ್ಲಿ ಚಂದ್ರಬಿಂಬವೇ ಉದಯಿಸುತ್ತಿದ್ದಂತೆ ಅವಳಿಗೆ ಭಾಸವಾಗತೊಡ-ಗಿತು. ಅವಳಿಗೆ ಒಬ್ಬಳೇ ಆ ರೂಮಿನಲ್ಲಿ ನಿಲ್ಲುವುದಾಗಲಿಲ್ಲ. ಸಾವಕಾಶವಾಗಿ, ರಾಜಠೀವಿಯಿಂದ ಕೆಳಗಿಳಿದು ಹೋದಳು. ಅಡಿಗೆಮನೆಯ ಚೌಕಟ್ಟಿನ ಹತ್ತಿರ ಹೋಗಿ, ಒಳಗೆ ಹಣಿಕಿಹಾಕಿ-ದಳು. ರಘೂಮಾಮಾ.... ಅಲ್ಲ ರಘುನಾಥ, ಗಡಿಬಿಡಿಯಿಂದ ಅನ್ನ ಊಟ ಮಾಡುತ್ತಿದ್ದ.... ಮುಖವು ಚಿಂತಾಕ್ರಾಂತವಾಗಿತ್ತು. ಶೋಭ-ನೆಯ ಹೃದಯದಲ್ಲಿ ಕರುಣೆ ಒಸರಲಾರಂಭಿಸಿತು. ಶಾಂತವಾದ ಕಂಗಳಿಂದ, ಬೇರೊಂದು ದೃಷ್ಟಿಯಿಂದ ರಘುನಾಥನೆಡೆಗೆ ನೋಡ ತೊಡಗಿದಳು :

ರಘುನಾಥ.... ೩೪–೩೫ ವರ್ಷ ವಯಸ್ಸಿರಬೇಕು .. ದುಂಡು

(೨೩೨ ನೆಯ ಪುಟಕ್ಕೆ ಮುಂದುವರಿದಿದೆ.)

ಮೂರ್ತಿಗೆ ಕಾಗದಗಳು

(ಪತ್ರಪ್ರಬಂಧ)

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ

●

ಜೀವನವನ್ನು ಗಂಭೀರವಾಗಿಯೂ ಸೂಕ್ಷ್ಮದೃಷ್ಟಿಯಿಂದಲೂ ನೋಡುವವರಿಗೆ ವಿವಿಧಸಮಸ್ಯೆಗಳೂ ಆ ಸಮಸ್ಯೆಗಳ ಕಾರಣಗಳೂ ಕಂಡುಬರುವುವು. ಹಾಗೆ ಕಂಡ ಮಾತುಗಳನ್ನು ಪತ್ರಲೇಖನದ ಸಾಹಿತ್ಯತಂತ್ರದಿಂದಲೂ ಚೆನ್ನಾಗಿ ಅಭಿವ್ಯಕ್ತಪಡಿಸಬಹುದು.

●

೧

೨೦ನೆಯ ಜೂನ್ ೧೯೫೦

ಮೂರ್ತಿ,

ಕಾಗದ ತಲುಪಿ, ನಿನ್ನ ಮಾತುಗಳು ಅರ್ಥವಾದುವು. ನಿನ್ನ ವಿಚಾರಗಳಂತೆಯೇ ಅನ್ಯರ ವಿಚಾರಗಳೂ ಇರಬೇಕೆಂಬುದು ಯಾವ ಹಟ? ಜೀವನದ ಮೂಲ್ಯ ನಿನ್ನ ದೃಷ್ಟಿಯಿಂದ ಒಂದು ಇದ್ದುದು, ಅನ್ಯರ ದೃಷ್ಟಿಯಿಂದ ಬೇರೆಯಾಗಿರಬಹುದು. ಹೀಗೆ ಬೇರೆ ಆದ ಮಾತ್ರಕ್ಕೇ ಅದು ತಪ್ಪು ಎಂದು ಹೇಳಲು ಬರುವಂತಿಲ್ಲ. ಹಾಗೆ ಹೇಳಬಹುದಾದರೆ, ಅನ್ಯರ ವಿಚಾರಗಳನ್ನು ನಾವು ಎಷ್ಟು ಸಹಜವಾಗಿ ತಪ್ಪು ಎಂದು ಹೇಳುತ್ತೇವೆಯೋ, ಅಷ್ಟೇ ಸಹಜವಾಗಿ ಅನ್ಯರೂ ನಮ್ಮ ವಿಚಾರಗಳನ್ನು ತಪ್ಪು ಎಂದು ಹೇಳಬಹುದು. ಪರಸ್ಪರರು ಹೀಗೆ ಮನಸ್ತಾಪದಿಂದ ದೂರಸರಿದರೆ ಲಾಭವೇನು? ಅಲ್ಲದೆ ಹೀಗೆ ದೂರ ಸರಿಯುವುದನ್ನು, ತಿಳಿಯದ ಜನರೆಂದು ನಾವು ಯಾರನ್ನು ಕರೆಯುತ್ತೇವೆಯೋ ಅವರು ಮಾಡಬಹುದು. ವಿಚಾರಶಕ್ತಿಯುಳ್ಳವರು ಪರಸ್ಪರರ ದೌರ್ಬಲ್ಯಗಳನ್ನು ಮರೆತು, ಒಳ್ಳೆಯ ಗುಣಗಳನ್ನೇ ಎತ್ತಿ ಹಿಡಿಯುವರಲ್ಲವೇ? ಒಟ್ಟಿನಲ್ಲಿ ಸಹಕಾರ-ಸೌಹಾರ್ದಗಳನ್ನು ನಿನ್ನ ಸುತ್ತುಮುತ್ತು ಇದ್ದವರಲ್ಲಿ ಬೆಳೆಸುವುದೇ ನಿನ್ನ ಉದ್ದೇಶವಲ್ಲವೇ? ನೀನು ಹಂಬಲಿಸುತ್ತಿರುವ ದೇವರು ಜನತೆಯ ಹೃದಯದಲ್ಲಿಯೂ, ನಿನ್ನ ವಿವೇಕದಲ್ಲಿಯೂ ಇರುವನಲ್ಲ! ನಾನು ಮಾತ್ರ ಹಾಗೇ ತಿಳಿದಿದ್ದೇನೆ.

ಸತ್ಪುರುಷರ ಅನುಭವಾಮೃತವನ್ನೂ, ಭಕ್ತರ ವಚನಗಳನ್ನೂ ಅರಗಿಸಿ ನುಂಗಿ ನೀರುಕುಡಿದ ನಿನಗೆ ಇದನ್ನು ಬೇರೆ ಹೇಳಬೇಕಾಗಿಲ್ಲ; ಅಕ್ಕನಿಗೆ ವಂದನೆಗಳನ್ನು ತಿಳಿಸು.

ನಿನ್ನ ಪತ್ರದ ದಾರಿಯನ್ನು ನೋಡುತ್ತಿದ್ದೇನೆ.

—ನಿನ್ನ ಗೆಳೆಯ ಪ್ರಭಾ

೨

೧೪ನೆಯ ಜುಲೈ ೧೯೫೦

ಪ್ರಿಯ ಮೂರ್ತಿ,

ಸಿಟ್ಟಿಗೇಳುವ ಪ್ರವೃತ್ತಿ ನಿನ್ನದಲ್ಲ-ಎಂದು ಗೊತ್ತು; ಕ್ರೋಧಾದಿಗಳನ್ನು ಜಯಿಸುವುದಕ್ಕೆ ಪ್ರಯತ್ನಪಟ್ಟು ಸಫಲವಾಗದುದಕ್ಕೆ ಸಿಟ್ಟಿಗೆ ಎದ್ದರೆ ಹೇಗೆ? ಅನೇಕ ಮಹನೀಯರು ಹೀಗೆ ಮಾಡಿದುದನ್ನು ನಿನ್ನ ಬಾಯಿಂದಲೇ ಕೇಳಿದ ಬಳಿಕ, ನೀನಾದರೂ ಹೀಗೆ ಮಾಡಲಾರಿ—ಎಂದು ನನ್ನ ನಂಬುಗೆಗೆ ಧೈರ್ಯಕೊಟ್ಟೆ. ನಿನ್ನ ಪತ್ರ ಮುಟ್ಟಿದ ಮೇಲೆ, ವಿಲಂಬವಾದುದಕ್ಕೆ ಕಾರಣವೂ ತಿಳಿದು, ನನ್ನ ನಂಬುಗೆ ನಿಜವಾದುದಕ್ಕೆ ಸಂತೋಷವಾಯಿತು!

ಶುದ್ಧ ಬಂಗಾರವನ್ನು ನೀನು ಕೊಳ್ಳದೆ ಹೋದರೂ, ನೋಡಿದ್ದೀಯೆಂದು ನನ್ನ ತಿಳಿವಳಿಕೆ: ಅದರ ಬೆಲೆಯೂ ಜನತೆ ಅದಕ್ಕೆ ಕೊಡುವ ಬೆಲೆಯೂ ನಿನಗೆ ಗೊತ್ತಿರಬಹುದು; ನೀನು ಅದಕ್ಕೆ ಕೊಡುವ ಬೆಲೆ ಮತ್ತು ಜನತೆ ಅದಕ್ಕೆ ಕೊಡುವ ಬೆಲೆಯಲ್ಲಿ ವ್ಯತ್ಯಾಸವೂ ಇದೆ: ಮೇಲಿನ ಹೊಳಪು ಜನತೆಗೆ ಹೆಚ್ಚು ಆಕರ್ಷಕ; ಬಂಗಾರದಲ್ಲಿ ಶ್ರೇಷ್ಠ ಧಾತುವಿನ ಗುಣ ಮತ್ತು ಹೊಳಪು ಇವೆರಡೂ ಕೂಡಿರುವುದು ಆಕಸ್ಮಿಕ; ಆದರೆ ರೋಲ್ಡ್‌ಗೋಲ್ಡಿನ ಒಳ್ಳೆಯ ಗಿಲೀಟೂ ಜನತೆಯನ್ನು ಅಷ್ಟೇ ಆಕರ್ಷಿಸುತ್ತದೆ. ಹಲವು ಸಲ ರೋಲ್ಡ್‌ಗೋಲ್ಡ್, ನಿಜವಾದ ಬಂಗಾರಕ್ಕಿಂತ ಹೆಚ್ಚು ಹೊಳಪನ್ನೂ ತೋರಿಸಬಹುದು. ಒರೆಗೆ ಹಚ್ಚುವ ಗೋಜಿಗೆ ಹೋದರೆ, ಅದರ ಹುಳುಕು ತಿಳಿಯುವುದಲ್ಲವೆ?

ಆತ್ಮಜ್ಞಾನಾಭಿಲಾಷೆ, ಆ ದಿಶೆಯಲ್ಲಿ ಆಚರಣೆ, ಒಳ್ಳೆಯ-ದೆಂಬುದು ನಿರ್ವಿವಾದ; ಒಂದು ತುದಿಯಲ್ಲಿ ಈ ಆಚರಣೆಯ ಸ್ತುತ್ಯ ಯತ್ನ ನಡೆದಿದ್ದರೆ, ಇನ್ನೊಂದೆಡೆಯಲ್ಲಿ ಸೋಗಿನ ಆಚರಣೆಯಿಂದ ಲಾಭಪಡೆಯುವ ಯತ್ನವೂ ನಡೆದಿರಬಹುದು. ನೇರವಾಗಿ ಹೇಳಿದರೆ ಸ್ವಾರ್ಥಸಾಧನೆಯ ಹವ್ಯಾಸವನ್ನು ಜನ ಹೇಗೆ ಒಪ್ಪಿಕೊಳ್ಳಬಹುದು? ಆದರೆ ಅದೇ ಆತ್ಮಜ್ಞಾನದ ಸುಂದರ ಗಿಲೀಟಿಗೆ ಜನತೆ ಮರುಳಾಗುವುದಿಲ್ಲವೇ?

ಜಗತ್ತಿನಲ್ಲಿ ಎಲ್ಲೆಡೆಗೂ ಇದೇ ಸ್ವಾರ್ಥವಿದೆ ಎಂದಲ್ಲ; ಆದರೆ ಇದೂ ಕೂಡ ಇರಬಲ್ಲದು—ಎಂಬುದನ್ನು ಮಾತ್ರ ಮರೆಯುವಂತಿಲ್ಲ; ಸಾಧಕನು ನೀನಾಗಿರಲಿ ಅಥವಾ ನಾನೇ ಆಗಿರಲಿ,—ನಮ್ಮೆಡೆಗೂ ಜನತೆ ಈ ದೃಷ್ಟಿಕೋನದಿಂದ ನೋಡಬಹುದೆಂಬುದನ್ನು ಸಹಿಸುವ ತಾಳ್ಮೆ ಮೊದಲು ನಮ್ಮಲ್ಲಿ ಬರಬೇಕು. ಇದನ್ನೂ ಮೀರಿ ಬಂಗಾರದ ಶುದ್ಧತೆಯನ್ನು ತೋರಿಸುವ ಶಕ್ತಿ ಸಾಧಕನಲ್ಲಿರಬೇಕಲ್ಲವೆ?

ಸದ್ಯ ಯಾವ ಪುಸ್ತಕವನ್ನು ಓದುತ್ತಿದ್ದೀ? ಸಿಟ್ಟಿಗೆದ್ದೀ—ಎಂದು ತಿಳಿಯಲು ಮತ್ತೆ ಅವಕಾಶ ಕೊಡಬೇಡ ನನಗೆ!

—ನಿನ್ನ ಪ್ರಭಾಕರ

೩

೧ನೆಯ ಆಗಸ್ಟ್ ೧೯೫೦

ಪ್ರಿಯ ಮೂರ್ತಿ,

ನಿನ್ನ ವಿಚಾರವನ್ನೋದಿ ನನಗೂ ನಗೆ ಬಂತು. ಅನ್ಯರಿಗೆ ತಿಳಿವಳಿಕೆಯಿಲ್ಲವೆಂದು ನೀನೇಕೆ ಕಣ್ಣೀರುದುರಿಸಬೇಕು! ತಿಳಿದೋ ತಿಳಿಯದೆಯೋ ಅಂತಹ ಆಚರಣೆಯಲ್ಲಿ ತೊಡಗಿದ ಸಂಶಯ ಬಂದರೆ, ತಿಳಿಹೇಳಬಹುದು. ಆದರೆ ಉದ್ದೇಶಪೂರ್ವಕವಾಗಿಯೇ ತೊಡಗಿದಲ್ಲಿ ಬಿಡಿಸುವುದೆಂತು? ಅನ್ಯರು ಇದರಿಂದ ಅನಾವಶ್ಯಕವಾಗಿ, ತೊಂದರೆಗೆ ಈಡಾದರೆಂದು ನಿನ್ನ ದೂರು ತಾನೇ? ಗಿಲೀಟಿನ ಬಣ್ಣ ತಿಳಿಯುವ ವರೆಗೂ ಹಾಗೇ ಇರುತ್ತದೆ; ಅಲ್ಲದೆ ಆ ಬಣ್ಣವನ್ನು ಅನ್ಯ ನಿರಪರಾಧಿ ಜನರು ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ—ಎಂಬುದನ್ನೂ ನಾವು ನೆನೆಯಬೇಕು. ಒಂದೆಡೆಯಲ್ಲಿ ನೀನು ಅವರಿಗೆ ಸಹಾಯ ವಿತ್ತರೆ, ಇನ್ನೊಂದೆಡೆಯಲ್ಲಿ ಮತ್ತೆ ನಿನ್ನಂತಹರು ದೊರಕಬೇಕಲ್ಲ!

ಎಂತಹದೇ ಆಚರಣೆಯ ಸೋಗಿನಿಂದ ಸ್ವಾರ್ಥಸಾಧನೆಯನ್ನು ಮಾಡುತ್ತಿದ್ದರೂ, ಸಾಮಾಜಿಕ ಅಂತಸ್ತಿನ ಜನವನ್ನು ಬೈಲಿಗೆಳೆಯುವುದು ಸಾಹಸದ ಮಾತು: ಹಲವು ಸಲ ದುಡುಕಿನದಾಗಿಯೂ ಅದು ಪರಿಣಮಿಸಬಹುದು. ಅನುಭವದ ಮಾತೆಂದು ನೀವು ಹೇಳ ಹೋದರೂ, ಜನತೆ ಮೊದ-ಮೊದಲು ಅದನ್ನು ಒಪ್ಪಲಿಕ್ಕಿಲ್ಲ. ಆಗಲೂ ಸತ್ಯಕ್ಕೆ ಜಯವಿಲ್ಲವೆಂದು ನಿರಾಶೆಯುಂಟಾಗುತ್ತದೆ. ನಿರಾಶೆ, ನಿಮಗೆ ಬೆಂಬಲ ದೊರೆಯುವ ವರೆಗೆ!

ಇದೇ ಕ್ಷೇತ್ರವೆಂದಲ್ಲ; ಯಾವ ಕ್ಷೇತ್ರದಲ್ಲಿಯಾದರೂ ತತ್ತ್ವಕ್ಕೆ ಎರಡು ಮುಖ! ಖಾದೀ ಟೊಪ್ಪಿಗೆಯು ಎಷ್ಟು ಜನರನ್ನು ಅನ್ಯಾಯವಾಗಿ ಆಕರ್ಷಿಸಿಲ್ಲ?—ತೀರ ವ್ಯವಹಾರವಾದಿಯಾದ ಮನುಷ್ಯನು ಪ್ರತಿಯೊಬ್ಬನ ಆಚರಣೆಯನ್ನೂ ನಟನೆಯೆಂದೇ ಗ್ರಹಿಸುತ್ತಾನೆ. ಕಾಲ ಕಳೆದಂತೆ, ಹಾಗೆ ತೋರದೆಹೋದರೆ ಅದು ಒಳ್ಳೆಯದೇ ಆಯಿತು; ತೋರಿದರೆ ಗ್ರಹಿಕೆ ಸರಿಯಾಯ್ತು! ನಾಲ್ಕು ವರ್ಷಗಳ ಕಾಲ ಲೈಬ್ರರಿ ಪುಸ್ತಕಗಳ ಮಧ್ಯೆ ತನ್ನನ್ನೇ ಹೂಳಿಕೊಂಡ ಪದವೀಧರನು ಇದನ್ನು ನಂಬಲಾರನು; ಆತ್ಮಜ್ಞಾನದ ತೇಜವನ್ನರಸುವ ಸಾಧಕನು ಇಂತಹದನ್ನು ನಂಬುವುದು ಪಾಪವೆಂದೂ ದ್ರೋಹವೆಂದೂ ತಿಳಿಯಬಹುದು; ಆದರೆ ಕಂಡದ್ದು ಆಘಾತವೆನಿಸಿ, ಅದನ್ನು ಸಹಿಸುವುದು ಮುಂದೆ ಅನಿವಾರ್ಯವಾಗುವುದು! ಬರುಬರುತ್ತ ಆಘಾತವೂ ರೂಢಿಯಾಗುವುದು!

ಏನೋ ಮಹಾ ತಿಳಿದವನಂತೆ ಬರೆಯುತಿದ್ದೇನೆನ್ನಬೇಡ! ನನ್ನದೂ ನಿನ್ನಂತೆಯೆ ಒಂದು ದೆಸೆಯಲ್ಲಿಯ ಪ್ರಯೋಗ ತಾನೇ!

—ನಿನ್ನ ಪ್ರಭಾ

೪

೧೫ನೆಯ ಆಗಸ್ಟ್ ೧೯೫೦

ಪ್ರಿಯ ಮೂರ್ತಿ,

ಇದೊಳ್ಳೆಯ ಪೇಚಿನ ವಿಚಾರವನ್ನು ಕೇಳುತ್ತಿದ್ದೀ ನೀನು! ಇಂತಹದೇ ಮಾರ್ಗ—ಎಂದು ನಾನಾದರೂ ಹೇಗೆ ನಿಶ್ಚಿತವಾಗಿ ಹೇಳಬಲ್ಲೆ? ಯಾವ ವಿದ್ಯೆಯನ್ನು ತಿಳಿಯಬೇಕಾದರೂ ಗುರುವು ಬೇಕು ಎನ್ನುವ... ನಿರ್ವಿವಾದ! ಆದರೆ ಎಂತಹ ವ್ಯಕ್ತಿಯನ್ನು ಗುರುವೆಂದಾರಿಸಬೇ... ಎಂಬುದೇ ಪ್ರಶ್ನೆ! "ಅಪ್ರವಕ್ತಾರಂ ಆಚಾರ್ಯಂ, ಅನಧೀಯಾನ... ಮೃತ್ವಿಜಂ......ತ್ಯಜೇತ್ ಭಿನ್ನಂ ನಾವಮಿವಾಂಭಸಿ," ಎಂದು ಸಂಸ್ಕೃ... ಸುಭಾಷಿತವು ಹೇಳಬೇಕಾದರೆ, ವೇದವಿದ್ಯೆಯನ್ನು ಅರಿಯದವರು... ಮೃತ್ವಿಜರಾಗಬಹುದಿತ್ತು—ಎಂಬುದು ಸಿದ್ಧ ತಾನೇ? ಹಾಗೆ ಈ ಮಾ... ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. 'ಅಮಾನಿತ್ವಾದಿ ಎ... ಗುಣಗಳು ಗುರುವಿನಲ್ಲಿರಬೇಕು' ಎಂದು ನೀನು ಹೇಳುವ ಭಗವದ್ಗೀ...ತೆಯ ಮಾತನ್ನು ಒಪ್ಪಿಕೊಳ್ಳೋಣ; ಇವುಗಳು ಇದ್ದವರು ಗುರುಗಳಾದರೂ, ಗುರುಗಳೆನ್ನಿಸಿಕೊಳ್ಳುವವರೆಲ್ಲರಲ್ಲಿಯೂ ಇವು ಇರಲೇ... ಬೇಕು ಎಂದು ಹಟದಿಂದ ಹೇಳಲು ಬಾರದು.

ನೀನು ಗುರುಗಳೆಂದು ಯಾವ ಆಧಾರದಿಂದ ಅನ್ಯರ... ಹೋಗುತ್ತೀ ಎಂಬುದನ್ನು ನೋಡಿದರೆ, ಏನೂ ಅರಿಯದ ನನಗು... ಆಶ್ಚರ್ಯವಾಯ್ತು! ಜನರೆಲ್ಲ ಒಬ್ಬ ವ್ಯಕ್ತಿಗೆ ಗುರುವೆನ್ನುತ್ತಾರೆಂ... ನೀನೂ ಅನ್ನುತ್ತೀಯಷ್ಟೇ! ಹೆಚ್ಚಿನ ಜ್ಞಾನದ ಲಾಲಸೆಯಿಲ್ಲದ ಜನ... ಗುರುವನ್ನು ಅಳೆಯುವ ಅಳತೆಯೇ ಬೇರೆ! ಆಚರಣೆಯ ಮಹತ್ತ್ವ... ಜನತೆ ಹೆಚ್ಚು ಲಕ್ಷ್ಯಕೊಡದು; ಬಳಿಕ ಅದೇ ಅಳತೆಯನ್ನು ನು... ನೀನೂ ಹೋದರೆ, ನಿನಗೆ ನಿರಾಶೆಯಾಗುವಲ್ಲಿ ಆಶ್ಚರ್ಯವೇನಿದೆ... ಗುರುವೆನ್ನಿಸಿಕೊಳ್ಳುವ ವ್ಯಕ್ತಿಯ ಬಳಿಗೆ ಹೋಗಿ, ಆ ಗುರುವಿ... ಪರೀಕ್ಷೆಗೆ ಅನಿವಾರ್ಯವಾಗಿ ತೊಡಗುವ, ನಿನ್ನ ಹೆಮ್ಮೆಗೆ ಏನೆನ್ನ... ಬೇಕು?—ದೋಷಗಳು ಕೂಡ ಗುಣಗಳಾಗಿ ಕಾಣುವಂತಹ ವಿಶ್ವಾಸ... ಭಕ್ತಿ—ಮೂಢಭಕ್ತಿಯೇ ಇರಲಿ—ಇದ್ದರೆ ಮಾತ್ರ ಮನಸ್ಸಿಗೆ ನೆಮ್ಮ... ದೊರೆತೀತು! ಅಂತಹ ವಿಶ್ವಾಸವಿಲ್ಲದಾಗ ಆ ಮಾರ್ಗವೂ ಸಲ್ಲದು...

ಇನ್ನೊಂದು ಮಾತು ಮೂರ್ತಿ, ಗುರುಗಳಾದರೆ, ಅವರ... ಮನುಷ್ಯರೇ ಅಲ್ಲವೇ? ಇದನ್ನು ಅನೇಕ ಬಾರಿ ನಾವು ಮರೆತುಬಿ...ತ್ತೇವೆ: ಎಂದೋ ಒಂದು ಕಾಲದ ಆದರ್ಶಕ್ಕೆ ಬಲಿಬಿದ್ದು, ಆ ಗುರುಗ... ಜೀವನ-ಆಚರಣೆಗಳ ವಿಶುದ್ಧತೆಯ ಬಗೆ ತೀರ ಉಚ್ಚವಾದ ಅಪೇಕ್ಷೆ... ಯನ್ನು ನಾವಿಟ್ಟುಕೊಂಡಿರುತ್ತೇವೆ. ಬಳಿಕ ಆ ನಮ್ಮ ಅಪೇಕ್ಷೆಯ... ಎತ್ತರವನ್ನು ಅವರು ಮುಟ್ಟದೆ ಹೋದಾಗ, ನಮ್ಮ ಅಪೇಕ್ಷೆಯ... ದೃಷ್ಟಿಕೋನದಲ್ಲಿಯ ಕೊರತೆಯನ್ನು ಕಾಣದೆ, ಗುರುಗಳಲ್ಲಿಯ ಕೊ...ತೆಯನ್ನು ಅಳೆಯ ಹೋಗುತ್ತೇವೆ! ಅರಿತೊಡೆ ತನ್ನರಿವೆ ತನಗೆ ಗು... ವಲ್ಲವೇ? ಪೂರ್ವಗ್ರಹದಿಂದ ದೂಷಿತವಾದ ನಮ್ಮ ವಿವೇಕವನ್ನ... ಶುದ್ಧವಾಗಿರಿಸುವ ಪ್ರಯತ್ನವೂ ಒಂದು ವಿಧಾಯಕಕಾರ್ಯವೆಂದೆ... ನನ್ನ ಮತ!

ಇರಲಿ, ಪತ್ರ ತುಂಬ ದೊಡ್ಡದಾಯಿತು. ನೂರು ದೊಡ್ಡ ದೊ... ಮಾತುಗಳನ್ನುರುಳಿಸುವುದಕ್ಕಿಂತ ಹತ್ತು ಮಾತುಗಳನ್ನು ಆಚರಣೆ... ಯಲ್ಲಿ ತರುವುದು ಹೆಚ್ಚು ಮಹತ್ತ್ವದ್ದು; ದೊಡ್ಡ ಮಾತುಗಳಿಂದ... ಜೀವನ ಸಾಗಿಸುವ ರೀತಿಯೊಂದು ಬೇರೆ! ಆ ಮಾತು ಸದ್ಯ ಬೇ... ಮತ್ತೆ ಬರೆಯುತ್ತೇನೆ.

—ನಿನ್ನ ಪ್ರಭಾ...

(೨೧೮ನೆಯ ಪುಟ ನೋಡಿರಿ)

ಲೀಲಾವತಿ

(ಕಥನಕವನ)

ಶ್ರೀ. ಜ. ಶ್ರೀ. ದೇಸಾಯಿ ಜರಕುಂಟಿ
ಬಿ. ಎ., ಬಿ. ಟಿ., ಶಹಾಪುರ

●

೧

ಹಿಂದೆ ಭಾಸ್ಕರವರ್ಯ,
ಗಣಿತದಲಿ ಆಚಾರ್ಯ
ಮಗಳ ಜಾತಕ ನೋಡಿ,
ಬಹಳ ಚಿಂತೆಯ ಮಾಡಿ,
ವಿಧಿಯ ಗೆಲ್ಲಲು ಬಯಸಿ,
ಮಗಳ ಶುಭವನು ನೆನೆಸಿ,
ಶುಭಮುಹೂರ್ತವನೊಂದ
ತೆಗೆದಿರಿಸುತಿಂತೆಂದನು :

೨

" ಭಾಸ್ಕರನ ವಿದ್ಯೆಯಲಿ
ತಸ್ಕರನ ತೆರದಲ್ಲಿ
ವಿಧಿಬಂದು ಹೊಗದಿರಲಿ
ಗ್ರಹಗತಿಯು ಸರಿಯಿರಲಿ;
ತನುಜೆ ಲೀಲಾವತಿಗೆ—
ಹಿತವತಿಗೆ ಮತಿವತಿಗೆ—
ಪರಶಿವನ ವರವಿರಲಿ
ಮಾಂಗಲ್ಯ ಸ್ಥಿರವಿರಲಿ! "

× × ×

೩

ಸಂದಿತು ಸಮಯವು
ಬಂದಿತು ಮದುವೆಯು
ಹಾಕಿತು ಹಂದರ
ಬಹುವಿಧಸುಂದರ
ಅಕ್ಷತೆ ಬಿದ್ದುವು
ಹರಕೆಗಳಾದುವು,
ವಿಪ್ರರನ್ನಂದವು
ಭುಂಜಿಸಿ ತಣಿದುವು.

೪

ಎಲ್ಲೆಡೆಯಲಾನಂದವುಕ್ಕೇರಿ ಹರಿದಿಹುದು;
ಉಲ್ಲಸದ ನಗೆಮಾತು ಅಲ್ಲಲ್ಲಿ ಕೇಳುವುದು.
ನಲ್ಲೆಯರ ಕೂಟದಲಿ ಹೆಸರು ಕೇಳುವ ಗುಲ್ಲು;
ಜಲ್ಲವರ ಗುಂಪಿನಲಿ ನಡೆದಿಹುದು ಸವಿಸೊಲ್ಲು!
ಇನಿತೆಲ್ಲವಾದರೆಯು ಭಾಸ್ಕರನು ಬಾಡಿಹನು ;
ದುಗುಡ-ಮೋಡವ ದೂಡಿ ಹೊರಬರಲು ಹೆದರುವನು.
ಕ್ಷುದ್ರಕಾರಣಳಾಗಿ, ಛಿದ್ರ ದೊಡ್ಡದು ಆಗಿ,
ಶೀಘ್ರದಲಿ ನೀರೇರಿ, ಗಳಿಗೆಬಟ್ಟಲು ಮುಳುಗಿ,
ಲೆಕ್ಕ ಮುಕ್ಕಾಗಿಹುದು, ಸುಮುಹೂರ್ತ ಮಿಂಚಿಹುದು.
ಏನು ಮಾಡಿದರೇನು ?
ಆಗುವುದು ಆಗಿಹುದು!

× × ×

೫

ಯಮನ ಪಾಶವು ಸೆಳೆಯೆ,
ಮಗಳ ಕುಂಕುಮವಳಿಯೆ,
ವಿಧಿಯು ಗೆದ್ದಿರೆ ಕೊನೆಗೆ,
ಮಗಳು ಬಂದಿರೆ ಮನೆಗೆ,
ತಂದೆಯೆದೆ ಮುರುಗಿಂತು,
ಅಡುಮಲಾಗದೆ ಬಂತು;
ಕೋಡಿಕೊಂಡನು ಕೆಚ್ಚ ;
ಕಟ ದಿ

೬

" ಮಗುವೆ ಲೀಲಾವತಿಯೆ!
ಅಕಟ-ನಿನಗೀಗತಿಯೆ!
ನೀ ಪಡೆದುದಿದು ತಾಯೆ!
ಮೀರಲಾಗದು ತಾಯೆ!
ನನ್ನ ಜಾಣ್ಮೆಯು ಎಲ್ಲಿ?
ನಿನ್ನ ಸತ್ತ್ವವು ಎಲ್ಲಿ?
ನುಂಗಿದನೆ ಜವರಾಯ!
ನೊಣೆದಿಹನೆ ವಿಧಿರಾಯ!
ಹಾ ದಾಹ! ಹಾ ಕುದಿಯು!
ಹಾ! ನಂಜು! ಹಾ! ಉರಿಯು!
ಈ ಗತಿಯೆ ಹಾ ಮಗಳೆ!
ಓ ಎನ್ನ ಎದೆಮುಗುಳೆ!
ಬಾ ವಿಷವ ಕುಡಿಯೋಣ
ಹುಲುಜನುಮ ನೀಗೋಣ! "

೭

ಕೇಳುತೊಡಲುರಿಯುಕ್ಕಿ,
ಕಣ್ಗೆ ಕತ್ತಲಸಿಕ್ಕಿ,
ಕೋಡಿವರಿದಿರೆ ಕಡಲು,
ನೊಂದಳುವ ಪೆಣ್ಣೊಡಲು,
ಕರಗಿ ಮರುಗಲು ಪ್ರಕೃತಿ,
ಸಂತವಿಡೆ ಜನವಿತತಿ,
ಕೊನೆಗೆ ಲೀಲಾವತಿಯು,
ಬಳಲುತಿಹ ಮಾಸತಿಯು,
ಗಣಿತ ವಿದ್ಯಾರವಿಗೆ,
ನುಡಿದಳಿಂತೀ ಒಸಗೆ:

× × ×

೮

" ಹೇ ತಂದೆ! ದೈವಜ್ಞ!
ಬೇಡಳಲು ಓ ಸೂಜ್ಞ!
ತಾಳುವೆನು ತಾಳ್ ತಂದೆ!
ಬಾಳುವೆನು ಬಾಳ್ ತಂದೆ!
ನಾ ಬಾಳ್ವೆ ನಿನಗಾಗಿ;
ನೀ ಬಾಳು ನನಗಾಗಿ.
ಗಣಿತವಿದ್ಯಾಸತಿಗೆ,
ಸತತ ಮಂಗಲ ಸಲ್ಗೆ!
ಬಿಜ್ಜೆ ಬೆಳಕಿನ ಬಾಳ್ಗೆ
ಲೀಲೆಯೊಡಲಿದು ಬೇಳ್ಗೆ!

೯

ಜಗವು ಜರುಗಿತು ಮುಂದೆ
ದಿನಗಳುರುಳಲು ಹಿಂದೆ
ಜನಕ ತನುಜೆಯನಂದು
ದಿನವು ಸಂತೈಪಂದು
ಗಣಿತಪ್ರಶ್ನೆಯ ಸುಗ್ಗಿ
ಲೀಲೆಯಲಿ ಒಳನುಗ್ಗಿ
ಹೊರಸೂಸಿ ಹರಿದಾಯ್ತು
ಧರೆಗಮರ ಕೃತಿಯಾಯ್ತು.
ಅದುವೆ " ಲೀಲಾವತಿ " ಯು;
ಗಣಿತ ವಿದ್ಯಾರತಿಯು.

× × ×

೧೦

ಜ್ಯೋತಿಷಿಯು ಜಗವರಿಯೆ
ಪಂಚಾಂಗ ಬರೆವವನು ;
ಸಾಹಿತಿಯು ತಾ ಬರಿಯೆ
ಕಬ್ಬವನು ಬರೆವವನು!
ಹಣೆಬರೆಹ ಬರೆವವನು
ಕಣಕಣವ ಕುಣಿಯಿಪನು
ಬೇರೊಬ್ಬ ತಾನಿಹನು
ಆ ಒಬ್ಬ ಘನಗೂಢನು!

ಗೆಳೆಯನಿಗೆ

ಶ್ರೀ. ಎಂ. ಗೋಪಾಲಕೃಷ್ಣಭಟ್ಟ, ನೀರ್ಚಾಲ

೧

ಬಾನಿನೊಡಲ ಹಿರಿಮೆ ಮೀರಿ ಬೆಳೆಯಬೇಕು ಕೆಳೆತನ!
ಬಾಳಬೇಕು ನನ್ನ ನಿನ್ನ ಕೊನೆಯ ತನಕ ಬಲುದಿನ!
ರವಿಯ ಶಶಿಯ ತಿರದಲುಳಿಯಲೆಮ್ಮ ನೇಹದೆಳೆತನ!
ಬೆಳೆದು ಬಾಳಿ ಬೆಳಗಲಿಂತು ನನ್ನ ನಿನ್ನ ಗೆಳೆತನ!

೨

ನಮ್ಮ ಎದೆಯ ಗುಡಿಯಲೊಂದೆ ಬೆಳಗಬಹುದು ದೀಪವು!
ನನ್ನ ನಿನ್ನ ಹೃದಯಮಿಲನಕೊಂದೆ ಜೀವಭಾವವು!
ನಮ್ಮ ಎದೆಯ ತಂತಿಯಿಂದ ಹರಿವುದೊಂದೆ ರಾಗವು!
ಬದುಕಿನೊಡಲ ರಂಗದಲ್ಲಿ ಏಳ್ವುದೊಂದೆ ಯೋಗವು!

೩

ಜಲಧಿಯಾಳದಲ್ಲಿ ಮುಳುಗಿ ಅದರ ತಳವ ಕಾಣುವ!
ಗೆಳೆಯ ಅಲ್ಲಿ ಹುದುಗಿ ಇರುವ ಮುತ್ತನೆತ್ತಿ ಒಯ್ಯುವ!
ಮೇಲೆ ಹಾರಿ ಮುಗಿಲ ಮೀರಿ ಬಾನಿನಂತಕೇಡುವ!
ಮುಗಿಯದಂಥ ದಾರಿಯೊಳೂ ನಾವು ಗುರಿಯ ಕಾಣುವ!

೪

ನನಗೆ ನೀನು, ನಿನಗೆ ನಾನು—ಎಂಬ ಕೂಗು ನಿಲ್ಲಲಿ!
ನಮ್ಮ ಕೆಳೆಯ ಹೊನಲ ನಡುವೆ ಅತುಲವಿಶ್ವ ಸರಿಯಲಿ!
ನೇಹದಮೃತದಮಲ ಕಡಲಲೆಮ್ಮ ಬಾಳು ತೇಲಲಿ!
ನಮ್ಮ ಎದೆಯ ನೇಹಜ್ಯೋತಿ, ಗೆಳೆಯ, ಅಮರವಾಗಲಿ!

ಪಾಶ್ಚರ್ ಮತ್ತು ಅವನ ಪ್ರಯೋಗಗಳು

(ವೈಜ್ಞಾನಿಕ ವ್ಯಕ್ತಿಪರಿಚಯ)

[ಉತ್ತರಾರ್ಧ]

ಶ್ರೀ. ಟಿ. ಆರ್. ನಾಡಿಗೇರ ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ. (ಟೆಕ್) ಮುಂಬಯಿ

●

ಪಾಶ್ಚರನ ವಿಜ್ಞಾನಸಾಧನೆಯಿಂದ ಹುಚ್ಚುನಾಯಿಗಳ ಕಡಿತದ ಮೇಲೆ ಔಷಧಿಯು ದೊರೆಯಿತು. ಇಂದು ಲೋಕದ ಜನರೆಲ್ಲರೂ ಪಾಶ್ಚರನ ಉಪಕಾರವನ್ನು ಸ್ಮರಿಸುವಂತಾಯಿತು. ದೃಢನಿಶ್ಚಯಿಯಾದ ಸಂಶೋಧಕನಿಗೆ ಯಾವುದು ಅಸಾಧ್ಯ?

●

ಪಾಶ್ಚರ್ ಮತ್ತು ಅವನ ಅನುಯಾಯಿಸಂಶೋಧಕರು ಸೇರಿ ಜ್ಞಾನಕ್ಷೇತ್ರದಲ್ಲಿ ವಿವಿಧಪ್ರಯೋಗಗಳನ್ನು ನಡೆಯಿಸಿದರು. ಕೆಲವು ನಗಳಲ್ಲಿಯೆ ದನಗಳಲ್ಲುಂಟಾಗುವ Anthrax ಬೇನೆಯನ್ನು ಗುಣ-ಡಿಸುವ ವಿಧಾನವನ್ನು, ಪಶುವೈದ್ಯನಾದ ಲೌವರಿಯರ್ (Louv-ier) ಕಂಡುಹಿಡಿದಿರುವ ವಾರ್ತೆಯು ಬಹು ಶೀಘ್ರವಾಗಿ ಜನಜನಿತ-ಯಿತು. ಈ ವಿಧಾನವನ್ನು ಪ್ರತ್ಯಕ್ಷದಲ್ಲಿ ಕಂಡುಕೊಳ್ಳಲು ಬಯಸಿದ ಾಶ್ಚರನು, ಲೌವರಿಯರನ ವಿಧಾನವನ್ನು ಕಂಡು ಬೆರಗಾದನಲ್ಲದೆ, ತನ ಕ್ರೂರವಿಧಾನವನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದನು. ಾಶ್ಚರ್ ತನ್ನ ಮೂವರು ಶಿಷ್ಯರೊಂದಿಗೆ ಜೂನಾಪರ್ವತದಲ್ಲಿ ಕಂಡ ೌವರಿಯರನ ಕ್ರೂರವಿಧಾನ ಹೀಗೆ ಇತ್ತು :— ಎಲ್ಲಕ್ಕೂ ಮೊದಲು ್ರಾಣಿಯನ್ನು ಬಲವಾಗಿ ತಿಕ್ಕಿ ತಿಕ್ಕಿ ಅದನ್ನು ಬೆಚ್ಚಗಾಗಿಸುವುದು, ನಂತರ ಅದರ ಮೈಮೇಲೆ ಚೂಪಾದ ಚೂರಿಯಿಂದ ತೀವ್ರಗಾಯ ಗಳನ್ನು ಮಾಡುವುದು, ತದನಂತರ ಆ ಗಾಯಗಳ ಮೇಲೆ ಟರ್ಪೆಂಟಾ-ಯಿನ್ ಚಿಮುಕಿಸಿ, ಮೇಲೆ ಬಟ್ಟೆ ಸುತ್ತುವುದು. ಹೀಗೆ ಮಾಡುವುದ-ಂದ ಅಂಥ್ರ್ಯಾಕ್ಸ್ ಪೀಡಿತ ಪ್ರಾಣಿ ಬದುಕಿದ ಉದಾಹರಣೆಗಳು ಷ್ಟೋ ಇದ್ದುವಂತೆ. ಪಾಶ್ಚರನ ಸಲಹೆಯಂತೆ ೪ ಸದೃಢ ನಿರೋಗಿ ಕಳುಗಳನ್ನು ಅ, ಬ, ಕ, ಡ ಎಂದು ವಿಭಾಗಿಸಿ, ಪ್ರತಿಯೊಂದರಲ್ಲೂ ಂಥ್ರ್ಯಾಕ್ಸ್ ಲಸಿಕೆಯನ್ನು ಚುಚ್ಚಲಾಗಿ, ಮಾರನೆಯ ದಿನವೇ ವುಗಳಲ್ಲಿ ಆ ಬೇನೆಯ ವಿಶಿಷ್ಟಲಕ್ಷಣಗಳು ಕಂಡುಬಂದುವು. ಈಗ ಮತ್ತು ಬ ಆಕಳುಗಳನ್ನು ಲೌರಿಯರನ ಉಪಚಾರಕ್ರಮಕ್ಕೊಳ-ಡಿಸಲಾಗಿ, ಅದರಲ್ಲೊಂದು ಸತ್ತಿತು. ಹಾಗೆಯೆ ಯಾವುದೇ ಬಗೆಯ ಪಚಾರವಿಲ್ಲದ ಕ ಮತ್ತು ಡ ಆಕಳುಗಳಲ್ಲಿಯೂ ಒಂದು ಸತ್ತಿತು. ವುಗಳಲ್ಲಿ ಬದುಕಿದ ಆಕಳೊಂದಕ್ಕೆ, ಮತ್ತೆ Anthrax ಲಸಿಕೆಯನ್ನು ಿಟ್ಟಿನ ಪ್ರಮಾಣದಲ್ಲಿ ಚುಚ್ಚಿದರೂ, ಆ ಪ್ರಾಣಿಯಲ್ಲಿ ಬೇನೆಯ ಯಾವುದೇ ಲಕ್ಷಣಗಳು ಕಂಡುಬರಲಿಲ್ಲ. ಈ ಪರಿಣಾಮದಿಂದ ಮುಂದೆ ಸಾರ್ವತ್ರಿಕಸಿದ್ಧಾಂತವೊಂದು ರೂಪುಗೊಳ್ಳಲು ಅನುಕೂಲವಾಯಿತು. ಅದೆಂದರೆ: ಒಂದೊಮ್ಮೆ ಯಾವುದೇ ಪ್ರಾಣಿಯು ಒಂದು ವಿಶಿಷ್ಟ ಬೇನೆಯಿಂದ ಬಳಲಿ ಬದುಕಿದಲ್ಲಿ, ಮುಂದೆ ಅದೇ ಪ್ರಾಣಿಯಲ್ಲಿ ಅದೇ ಬೇನೆಯನ್ನು ಪ್ರತಿರೋಧಿಸುವ ಸಾಮರ್ಥ್ಯವು ಬರುತ್ತದೆ. ಈ ಪ್ರತಿರೋಧಕ್ಕೆ Immunidation ಎಂದೆನ್ನುವರು. ಈ ಬಗೆಯ ಪ್ರತಿರೋಧವು ಸಂಪಾದಿತವಿರುತ್ತದೆ. ಇಂತಹ ಪ್ರತಿರೋಧವನ್ನು ಕೃತ್ರಿಮವಾಗಿ ಉಂಟುಮಾಡುವ ವಿಧಾನವನ್ನು ಕಂಡುಹಿಡಿಯುವ ಪ್ರಯೋಗವನ್ನು, ಪಾಶ್ಚರ್ ಮತ್ತು ಆತನ ಶಿಷ್ಯರು ಕೈಕೊಳ್ಳಬಯಸಿದರು.

ಈ ಪ್ರಯೋಗದ ನಂತರ ಪಾಶ್ಚರನ ಸಂಗಾತಿಗಳಿಗೆ, ಯಾವುದೇ ಪ್ರಾಣಿಯು ಒಂದು ಬೇನೆಯಿಂದ ಸತ್ತಿತೆಂದರೆ, ಆ ಸತ್ತ ಪ್ರಾಣಿಯ ಸೂಕ್ಷ್ಮ ಅಭ್ಯಾಸ ಕೈಕೊಳ್ಳುವುದು ಒಂದು ಸಾಮಾನ್ಯ ಕ್ರಮವಾಯಿತೆನ್ನಬಹುದು. ಬೇನೆಯನ್ನು ಕೃತ್ರಿಮವಿಧಾನದಿಂದ ಪ್ರತಿ-ರೋಧಿಸುವ ಬಗೆಯು ಕೂಡ ಪಾಶ್ಚರನಿಗೆ ಆಕಸ್ಮಿಕವಾಗಿ ಲಭಿಸಿತು. ೧೮೮೦ನೆಯ ಇಸ್ವಿಯಲ್ಲೊಂದು ದಿನ ಈ ಶೋಧವು ನಡೆಯಿತು. ಪಾಶ್ಚರನ ಸಹೋದ್ಯೋಗಿಗಳು, ಕೋಳಿಗಳಲ್ಲಿ ಆಗ ತಲೆದೋರಿದ ಕಾಲರಾ ಬೇನೆಯ ಅಭ್ಯಾಸವನ್ನು ಕೈಕೊಂಡು, ರೋಗಾಣುಜೀವಿ-ಗಳನ್ನು ಬಹು ಪರಿಶ್ರಮದಿಂದ ಪ್ರತ್ಯೇಕಿಸಿ, ಪಾಶ್ಚರನೇ ಸಿದ್ಧಪಡಿಸಿದ ಪೋಷಕದ್ರವ್ಯ (Medium)ದಲ್ಲಿ ಬೆಳಸಿದರು. ಆಮೇಲೆ ನಿರೋಗಿ ಕೋಳಿಗಳಿಗೆ ಅದನ್ನು ಚುಚ್ಚಲಾಗಿ, ಅವುಗಳಲ್ಲಿ ಬೇನೆಯ ವಿಶಿಷ್ಟ ಲಕ್ಷಣಗಳು ಉಗ್ರರೂಪದಲ್ಲಿ ಕಾಣಬಂದುವು. ಮತ್ತೆ ಕೆಲದಿನಗಳವರೆಗೆ ಈ ಸಾರವನ್ನು ಸಂಗ್ರಹಿಸಿ, ತದನಂತರ ನಿರೋಗಿ ಕೋಳಿಗಳಿಗೆ ಚುಚ್ಚಲಾಯಿತು. ಆಶ್ಚರ್ಯವೆಂದರೆ ಈಗ ಬೇನೆಯು ಸೌಮ್ಯ-ರೂಪದಲ್ಲಿ ಕಂಡುಬಂದು ಶಮನವಾಯಿತು. ಇವಕ್ಕೆ ವಿಷಕಾರಕ ಸಾರವನ್ನು ಚುಚ್ಚಿದರೂ, ಬೇನೆಯ ಲಕ್ಷಣಗಳು ಕಂಡುಬರಲಿಲ್ಲ. ಇದೇ ಕ್ರಮ ಮನುಷ್ಯರಲ್ಲಿಯೂ ಕಂಡುಬರುವುದಾಗಿ ಊಹಿಸಿದನು.

ಊಹೆಯೂ ನಿಜವಾಗಿ ಪರಿಣಮಿಸಿತು. ಇದರಿಂದಾಗಿ 'ಕೊಲ್ಲು-ವವನೇ ಕಾಯಬಲ್ಲನು' ಎಂಬ ಸಿದ್ಧಾಂತಕ್ಕೆ ಮುಟ್ಟಿದನು ಪಾಶ್ಚರ್. ರೋಗಾಣುಜೀವಿಯ ಸಾರವನ್ನು ಕೆಲವೊಂದು ದಿನಗಳ ಮಟ್ಟಿಗೆ ನಿಶ್ಚಿಷ್ಟಪರಿಸ್ಥಿತಿಯಲ್ಲಿ ಸಂಗ್ರಹಿಸಿದಲ್ಲಿ, ಆ ಸಾರದಲ್ಲಿಯ ರೋಗ-ಕಾರಕ ಶಕ್ತಿಯು ಇಲ್ಲದಾಗಿ, ನಿರೋಧಕ ಶಕ್ತಿಯು ಉಂಟಾಗುತ್ತೆ-ನೆಂಬುದನ್ನು ಪ್ರಯೋಗಗಳಿಂದ ಮನಗಾಣಿಸಿದನು. ಈ ಶೋಧ ನಡೆದಾಗ ಪಾಶ್ಚರನಿಗೆ ೫೮ ವರ್ಷ ತನ್ನ ಬಾಳಿನ ಮುಂದಿನ ೬ ವರ್ಷಗಳನ್ನು ಅವನು ಅನೌಲ್ಯಸಮಯದಂತೆ ವಿನಿಯೋಗಿಸಿದನು. ಮಾನವಜನಾಂಗದ ಕಲ್ಯಾಣಕ್ಕಾಗಿ ಕಂಕಣಬದ್ಧನಾದ ಪಾಶ್ಚರನಲ್ಲಿ ಆಗ೧೦೦ ಜನ ಸಾಮಾನ್ಯರ ಉತ್ಸಾಹಕ್ಕಿಂತ ಹೆಚ್ಚಿನ ಉತ್ಸಾಹವಿತ್ತು. ಏರುತ್ತಿರುವ ವೃದ್ಧಾಪ್ಯ ಆತನ ಗಣನೆಗೆ ಬಂದಿರಲಿಲ್ಲ.

ಪಾಶ್ಚರನ ಪ್ರತಿರೋಧವನ್ನು ನಿರ್ಮಿಸುವ ವಿಧಾನ ಸಂಪೂರ್ಣವಾಗಿ ಸರಿಯಾಗಿದ್ದಿಲ್ಲವಾದರೂ; ತನ್ನ ವಿಧಾನವೇ ಸರಿಯಾದುದೆಂದು ಅಧಿಕಾರವಾಣಿಯಲ್ಲಿಯೆ ಘೋಷಿಸಿದನು. ತನ್ನೀ ವಿಧಾನವು ದೋಷಪೂರಿತವಾದುದೆಂದು ಸಾಧಿಸಲು ಯತ್ನಿಸಿದ ಜೆನ್ನರನನ್ನು, ವೈಜ್ಞಾನಿಕ ಸಭೆಯೊಂದರಲ್ಲಿ ಹೀಯಾಳಿಸುವುದನ್ನು ಕಂಡು, ಗ್ವೇರಿನ್ನನಿಗೆ ಸಹನೆ ತಪ್ಪಿ, ಪಾಶ್ಚರನನ್ನು ತುಂಬಿದ ಸಭೆಯಲ್ಲಿಯೇ ಹೊಡೆಯ್ಯ ಹೋದನಂತೆ. ತಪ್ಪಿಸಿಕೊಂಡು ಹೋದ ಪಾಶ್ಚರನನ್ನು ಮರುದಿನ ಮುಷ್ಟಿಯುದ್ಧಕ್ಕೆ ಆಹ್ವಾನಿಸಿದನಂತೆ ಗ್ವೇರಿನ್! ಎಂತಹ ವಿಚಿತ್ರ! ಪಾಶ್ಚರನಿಗೆ ಆಗ ೬೦ ವರ್ಷದ ವಯಸ್ಸು, ಗ್ವೇರಿನ್ ೮೦ ವರ್ಷದವ. ವೈಜ್ಞಾನಿಕಸತ್ಯಾಸತ್ಯದ ನಿಷ್ಕರ್ಷೆಯನ್ನು ಈ ಮುಹಾಮುಹಿಮರ್ಗಳು ಬಲಾಬಲದ ಮೇಲೆ ನಿರ್ಧರಿಸಲು ಹೊರಟಿದ್ದರು.

ಪಾಶ್ಚರನಲ್ಲಿ ಅಹಂಕಾರ ತುಂಬಿ ತುಳುಕುತ್ತಿತ್ತು. ಅವನು ತಪ್ಪುಗಳನ್ನು ಎಂದೂ ಒಪ್ಪಿಕೊಂಡಿರಲಿಲ್ಲ. ತನ್ನದೇ ಸತ್ಯವೆಂದು ಸರ್ವದಾ ವಾದಿಸುವ ಮಹಾವ್ಯಕ್ತಿ ಆತ. ಪಾಶ್ಚರನ ವಿಧಾನದಲ್ಲಿ ಡಾಕ್ಟರ್ ಕೋಚನು ತಪ್ಪು ಕಂಡುಹಿಡಿದರೂ, ಫ್ರಾನ್ಸಿನ ಜನತೆ ಒಪ್ಪಲಿಲ್ಲ. ಪಾಶ್ಚರನೇ ಕೋಚನನ್ನು ಪರಿಹಾಸಗೈದನು! 'ಹುಚ್ಚುಹುಡುಗ ಕೋಚ; ಆತನಿನ್ನೂ ಹುಟ್ಟಿರಲಿಲ್ಲ, ಆಗಲೇ ನಾನು ಅಣುಜೀವಿಗಳನ್ನು ಪರೀಕ್ಷಿಸುತ್ತಿದ್ದೆ. ಇಂಥವನು ನನ್ನ ವಿಧಾನದಲ್ಲಿ ತಪ್ಪೆಣಿಸುವುದೆಂದರೆ! ಫ್ರಾನ್ಸಿನ ಜನತೆ ಪಾಶ್ಚರನದೇ ವೇದವಾಕ್ಯವೆಂದು ನಂಬಲು ಬಲವಾದ ಕಾರಣವೊಂದಿತ್ತು. ಅದೆಂದರೆ ಕೋಚನು ಜರ್ಮನ್. ಹೀಗೆ ರಾಷ್ಟ್ರ-ರಾಷ್ಟ್ರಗಳ ಘರ್ಷಣೆ ಸತ್ಯಕ್ಕೆ ಅಪಚಾರ ಮಾಡಬಲ್ಲುದೆಂಬುದಕ್ಕೆ ಇದೇ ಸಾಕ್ಷಿ! ಸತ್ಯ ಒಂದಿಲ್ಲೊಂದು ದಿನ ಹೊರಬೀಳದೆ?

ಈ ಪ್ರಯೋಗಾನಂತರ ಪಾಶ್ಚರ್ ತನ್ನ ಲಕ್ಷ್ಯವನ್ನು ಹುಚ್ಚು-ನಾಯಿಗಳತ್ತ ವೇಧಿಸಿದನು. ಆಗ ಎಷ್ಟೋ ಬೇನೆಗಳ ಕಾರಣ ಇನ್ನೂ ಗೊತ್ತಾಗದಿದ್ದರೂ, ಪಾಶ್ಚರ್ ಹುಚ್ಚುನಾಯಿಗಳ ಬಗೆಗೆ ಆಸ್ಥೆ ತಳೆದುದು ಆಶ್ಚರ್ಯಕರವಲ್ಲವೇ? ಈ ಬಗೆಯ ಆಸ್ಥೆಗೆ ಕಾರಣ ಆತನ ಬಾಲ್ಯದ ನೆನಪು — ಹುಚ್ಚುನಾಯಿ ಅಥವಾ ತೋಳಗಳಿಂದ ಕಡಿಸಿಕೊಂಡು ಕ್ರೂರವಿಧಾನದಿಂದಾಗಿ ಆರ್ತರಾಗಿ ಕೂಗುತ್ತಿದ್ದ ಜನ, ಹುಚ್ಚುನಾಯಿಯ ಬೊಗಳಿಕೆ—ಆತನ ಕಿವಿಗಳಲ್ಲಿನ್ನೂ ನಿನದಿಸುತ್ತಿತ್ತು.

ಈ ಬೇನೆಯ ಕಾರಣವನ್ನು ಶೋಧಿಸಬಯಸಿದ ಪಾಶ್ಚರ್, ಮೊತ್ತಮೊದಲು ಬೇನೆಯಿಂದ ಬಳಲುವ ನಾಯಿಯ ನಾಲಗೆಯ ಮೇಲಿನ ಬುರುಗಿನ ಅಭ್ಯಾಸವನ್ನು ಕೈಕೊಂಡಾಗ, ಕೆಲ ಅಣುಜೀವಿಗಳು ಕಂಡುಬಂದುವು. ಇವೇ ಅಣುಜೀವಿಗಳನ್ನು ಆ ಬೇನೆಯಿಂದ ಪೀಡಿತನಾದ ಮನುಷ್ಯನ ಲಾಲಾರಸದಲ್ಲಿ ಕಂಡುಕೊಂಡ ಪಾಶ್ಚರ್, ಆ ಅಣುಜೀವಿಗಳೇ ಕಾರಣವೆಂದು ತಿಳಿದು ತಪ್ಪು ಮಾಡಿದನು. ಏಕೆಂದರೆ ರೌಕ್ಸ್ ಮತ್ತು ಚೆಂಬರ್‌ಲಂಡರು ಅವನ್ನೇ ನಿರೋಗಿಗಳಲ್ಲೂ ಕಂಡರು. ಈ ಪ್ರಯೋಗವನ್ನು ಕೈಕೊಂಡಾಗ ಪಾಶ್ಚರನಿಗೆ ೬೦ ವರ್ಷಗಳ ದಾಟಿದ್ದುವು.

ಒಂದು ದಿನ ರೇಬಿ (Rabies) ಯಿಂದ ಪೀಡಿತವಾದ ನಾಯಿಯೊಂದರಿಂದ ಸದೃಢ ನಿರೋಗಿ ನಾಯಿಗಳಿಗೆ ಕಚ್ಚಿಸಲಾಗಿ, ಆ ನಾಯಿಗಳಲ್ಲಿಯೂ ಆ ಬೇನೆ ಕಂಡುಬಂದಿತು. ಆಮೇಲೆ ಪೀಡಿತ ನಾಯಿಯ ಬಾಯಿಯಲ್ಲಿಯ ಬುರುಗನ್ನು ತೆಗೆದು ಮೊಲ, ಗಿನೀ-ಪಿಗ (Guineapig) ಗಳಿಗೆ ಚುಚ್ಚಿ ಕೆಲದಿನ ಆಸ್ಥೆಯಿಂದ ನಿರೀಕ್ಷಿಸಲಾಗಿ, ಎಣಿಕೆತಪ್ಪಿ ನಿರಾಶೆಯಾಯಿತು. ಪ್ರಾರಂಭಿಕ ಅಪಯಶಗಳಿಂನೊಂದ ಪಾಶ್ಚರನಿಗೆ ಒಂದು ದಿನ, ಅದು ಹೇಗೋ ಒಂದು ವಿಚಾರ ಮಿಂಚಿತು. ತಟ್ಟನೆ ಅದನ್ನು ಸಹೋದ್ಯೋಗಿಗಳಿಗೆ ಅರುಹಿದನು:— "ರೌಕ್ಸ್ (Roux), ಈ ರೋಗಾಣುಜೀವಿಯಿರುವುದು ಮೆದುಳಿನ

(೨೧೪ನೆಯ ಪುಟದಿಂದ ಬಂದುದು)

*

೨೫ನೆಯ ಆಗಸ್ಟ್ ೧೯೫೦

ಮೂರ್ತಿ,

ಹೌದು, ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತು ಮೂರು ವರ್ಷಗಳಾದುವು! ರಾಷ್ಟ್ರದ ಇತಿಹಾಸದಲ್ಲಿ ಈ ಸ್ವಾತಂತ್ರ್ಯದ ಮೂಲ್ಯ ಅಳತೆಗೆ ನಿಲುಕದು, ಆದರೆ ಎಲ್ಲರೂ ಆ ಸ್ವಾತಂತ್ರ್ಯವನ್ನು ಉಪಭೋ-ಗಿಸಬೇಕಾದರೆ, ಕೆಲವರಿಗೆ—ಆ ಉಪಭೋಗಕ್ಕೆ ವಿಘ್ನವನ್ನುಂಟುಮಾಡುವವರಿಗೆ—ಅದನ್ನು ನಿರ್ಬಂಧಿಸುವುದು ಅನಿವಾರ್ಯ! ಹಾಗೆ ನಮ್ಮ ಕಲ್ಪನಾ-ವಿಚಾರಸ್ವಾತಂತ್ರ್ಯಕ್ಕೂ ಒಂದು ಮರ್ಯಾದೆಯಿದೆ. ನಾವೇ ಬುದ್ಧಿವಂತರೆಂದು ತಿಳಿದು, ನಮ್ಮದೇ ರಾಜ್ಯವನ್ನು ಕಲ್ಪಿಸಿದರೆ ವ್ಯವಹಾರ ಸಾಗದು. ನಾವೂ ಜನತೆಯ ಮಧ್ಯದಲ್ಲಿ ಜೀವಿಸುವ ಪ್ರಾಣಿಗಳು ತಾನೇ! ಹೆಚ್ಚಿನ ಬುದ್ಧಿ, ಕರ್ತೃತ್ವಶಕ್ತಿಗಳು ಇದ್ದುದಾದರೆ, ನಾವು ಅವುಗಳನ್ನು ಜನತೆಯ ಹಿತಕ್ಕಾಗಿಯೂ ಉಪಯೋಗಿಸಿಕೊಳ್ಳಬೇಕು. ಸ್ವಾರ್ಥದ ಒಂದಂಶ ಕಡಿಮೆಯಾದರೂ, ಮನಸ್ಸು ಅಷ್ಟು ಮಟ್ಟಿಗೆ ದೊಡ್ಡದಾಗುತ್ತದೆ—ಎಂದು ನನ್ನ ತಿಳಿವಳಿಕೆ. ನಿನ್ನ ಅನುಭವವೇನೊ!

ಸದ್ಯ ಇಷ್ಟೇ ಸಾಕು. ನಿನ್ನ ಪ್ರತಿಕ್ರಿಯೆಯನ್ನು ನೋಡಿ ಮತ್ತೆ ಬರೆಯುತ್ತೇನೆ.

ನಿನ್ನ ಪ್ರಭಾ—

ಎಂದೆನಿಸುತ್ತದೆ ನನಗೆ. ಆದುದರಿಂದ, ನೀವು ಚುಚ್ಚಿದ ಮದ್ದು ಮೆದುಳಿಗೆ ಸೇರದ್ದರಿಂದ, ಬೇನೆಯ ವಿಶಿಷ್ಟ ಲಕ್ಷಣಗಳು ಕಾಣಬರಲಿಲ್ಲ. ರೋಗಾಣುಜೀವಿಯನ್ನು ಮೆದುಳಿಗೆ ಸೇರಿಸಬೇಕು. ಹಾಗೆಯೇ ರೋಗಾಣುಜೀವಿಯನ್ನು ಮೆದುಳಿನಲ್ಲಿ ಬೆಳಸಿ ನೋಡಬೇಕು!" ಪಾಶ್ಚರನ ಈ ವಿಚಾರವು ಯಾರನ್ನಾದರೂ ದಿಗ್ಭ್ರಾಂತಗೊಳಿಸಿ, 'ಪಾಶ್ಚರನಿಗೆ ಹುಚ್ಚುಹಿಡಿದಿದೆ' ಎಂದೆನ್ನಬಹುದಾಗಿತ್ತು; ಆದರೆ ರೌಕ್ಸನಿಗೆ ಪಾಶ್ಚರನಲ್ಲಿ ತುಂಬ ಶ್ರದ್ಧೆ, ಭಕ್ತಿ. ಪಾಶ್ಚರನ ವಿಚಾರಸರಣಿಗೆ ಬೆಂಬಲಕೊಟ್ಟನು. 'ಸರಿ, ನೋಡೋಣ.' ಇದಕ್ಕೆ ನನ್ನದೊಂದು ಸಲಹೆ ಇದೆ. ರೋಗಾಣುಜೀವಿಯನ್ನು ಮೆದುಳಿನಲ್ಲಿಯೇ ಏಕೆ ಹಾಕಬಾರದು? ನಾಯಿಗೆ ನೋವಾಗದಂತೆ, ತಲೆಬುರುಡೆಯಲ್ಲಿ ಒಂದು ಛಿದ್ರವನ್ನು ಮಾಡುವೆನು. ಹಾಗೆ ಮಾಡುವಾಗ, ಮೆದುಳಿಗೆ ಅಪಾಯವಾಗದಂತೆ ಜಾಗರೂಕತೆ ವಹಿಸುವೆನು. ಅನಂತರ ಸಂಗ್ರಹಿತ ಸಾರವನ್ನು ಮೆದುಳಿನಲ್ಲಿ ಚುಚ್ಚುವೆನು. ಸರಿಯಷ್ಟೆ?...." ಪಾಶ್ಚರನ ಅನುಮತಿಯನ್ನು ನಿರೀಕ್ಷಿಸಿದ ರೌಕ್ಸನಿಗೆ ನಿರಾಶೆಯಾಯಿತು. ಪಾಶ್ಚರ್ ಅನುಮತಿಯನ್ನೀಯಲಿಲ್ಲ. "ಏನು, ನಾಯಿಯ ತಲೆಬುರುಡೆಯನ್ನು ಕೊರೆಯುವೆಯಾ? ಅಯ್ಯೋ, ಎಂತಹ ಕ್ರೂರ ನೀನು? ನೀನು ಆ ಮೂಕಪ್ರಾಣಿಗೆ ಬಲು ಹಿಂಸೆ ಕೊಡುವವನಪ್ಪಾ! ಊಹೂಂ—ಹಾಗೆ ಮಾಡಕೂಡದು." (ಬರಿ ನಾಯಿಯ ತಲೆಬುರುಡೆಯನ್ನಷ್ಟೇ ಏಕೆ—ಮನುಷ್ಯನ ತಲೆಬುರುಡೆಯಲ್ಲಿಯೂ ನಿರಾಯಾಸವಾಗಿ ಛಿದ್ರ ಕೊರೆಯುವುದೇನು ಗೊತ್ತು ಪಾಶ್ಚರನಿಗೆ!) ರೌಕ್ಸ್ ಪಾಶ್ಚರನ ವಿರೋಧದಿಂದ ಅಸಮಾಧಾನಗೊಂಡರೂ, ತನ್ನ ಕಾಯಕವನ್ನು ಬಿಡಲಿಲ್ಲ. ಮರುದಿನವೇ ಪಾಶ್ಚರ್ ಅದಾವುದೋ ಸಭೆಗೆ ಹೋದ ಸಮಯವನ್ನು ಸಾಧಿಸಿ, ತನ್ನ ಪ್ರಯೋಗವನ್ನು ಮಾಡಿಯೇ ಬಿಟ್ಟ ರೌಕ್ಸ್ (Rouks). ರಾಬಿ (Rabies) ಯಿಂದ ಪೀಡಿತವಾದ ನಾಯಿಯ ಮೆದುಳನ್ನು ಚೆನ್ನಾಗಿ ಮೊದಲು ಅರೆದನು. ಅನಂತರ ಸದೃಢ ನಾಯಿಯೊಂದನ್ನು ಕ್ಲೋರೋಫಾರ್ಮಿನಿಂದ ನಿಶ್ಚೇತನಗೊಳಿಸಿ, ತಲೆಬುರುಡೆಯಲ್ಲಿ ನಯವಾದ ಛಿದ್ರವನ್ನು ಕೊರೆದು, ಅದರಲ್ಲಿ ಸಿರಿಂಜಿನಿಂದ ತಾನು ಅರೆದು ಸಿದ್ಧಪಡಿಸಿದ ಸಾರವನ್ನು ಸೇರಿಸಿದನು. ಸಭೆಯಿಂದ ಮರಳಿ ಬಂದ ಪಾಶ್ಚರನಿಗೆ ತನ್ನ ಕಾರ್ಯಕ್ರಮವನ್ನು ವಿವರಿಸಿದನು. ಇದನ್ನು ಕೇಳಿ ಕೋಪಗೊಂಡ ಪಾಶ್ಚರನು ಆ ನಾಯಿಯನ್ನು ಕಾಣಬಯಸಿದನು. "ಎಲ್ಲಿ, ಎಲ್ಲಿದೆ ಆ ಬಡಜೀವಿ? ನಾನಿಲ್ಲದಾಗ ಎಂತಹ ಅಚಾತುರ್ಯವನ್ನು ಮಾಡಿಬಿಟ್ಟೆಯಲ್ಲ! ಅಯ್ಯೋ, ಆ ಬಡಪ್ರಾಣಿ ಈಗಾಗಲೆ ಕೊನೆಯ ಅವಸ್ಥೆಯನ್ನು ಮುಟ್ಟಿರಬಹುದು." ಪಾಶ್ಚರನ ಪರಿತಾಪವನ್ನು ಅಲಕ್ಷ್ಯಿಸಿದ ರೌಕ್ಸ್, ಆ ನಾಯಿಯನ್ನು ಪಾಶ್ಚರನೆದುರು ತಂದು ನಿಲ್ಲಿಸಿದನು. ಆ ನಾಯಿಯ ಮೈಮೇಲೆ ಪ್ರೀತಿಯಿಂದ ಪಾಶ್ಚರ್ ಕೈಯಾಡಿಸುತ್ತ 'ವಾಹ್! ಚೆನ್ನಾಗಿದೆ ಪರವಾಗಿಲ್ಲ' ಎಂದು ಸಮಾಧಾನವ್ಯಕ್ತಪಡಿಸಿದನು. ಮೇಲಿನ ಪ್ರಯೋಗ ನಡೆದು ಎರಡು ವಾರಗಳಾಗಿರಲಿಲ್ಲ; ಅದೇ ನಾಯಿಯಲ್ಲಿ ರಾಬಿಯ ವಿಶಿಷ್ಟಲಕ್ಷಣಗಳು ಕಾಣಬಂದುವು. ಮತ್ತೆ ಕೆಲದಿನಗಳಲ್ಲಿಯೇ ಅದೇ ಬೇನೆಯಿಂದ ಆ ನಾಯಿಯು ಸತ್ತಿತು ಕೂಡ. ಇದುವರೆಗಿನ ಪ್ರಯೋಗದಿಂದ ಇಷ್ಟು ಮಾತ್ರ ನಿಶ್ಚಿತವಾದಂತಾಯಿತು:—

'ಅಣುಜೀವಿಯು ಅತಿ ಸೂಕ್ಷ್ಮವಿರುತ್ತದೆ; ಕೃತ್ರಿಮವಾಗಿ ಅದನ್ನು ಬೆಳಿಸಲು ಬಾರದು.'

ಪಾಶ್ಚರ್ ಮತ್ತು ಆತನ ಅನುಯಾಯಿಗಳು ಈ ಬೇನೆಯ ಬಗೆಗೆ ಪ್ರದೀರ್ಘ ಪ್ರಯೋಗ ಕೈಕೊಂಡರು. ಈ ಕಾರ್ಯ ಕೈಕೊಂಡಾಗ ಪಾಶ್ಚರ್ ಬಹು ನಿಷ್ಠುರನಿದ್ದನು. ಆತನ ಸಹಾಯಕರು ಯಾವಾಗಲೂ ಕಾರ್ಯದಲ್ಲಿಯೇ ತತ್ಪರರಿರುವಂತೆ ಜಾಗರೂಕತೆ ವಹಿಸುತ್ತಿದ್ದನು. ಯಾರಾದರೂ ಮಿತ್ರರು ಪಾಶ್ಚರನ ಪ್ರಯೋಗಶಾಲೆಯಲ್ಲಿ ಪ್ರವೇಶಿಸಿದಾಗ, ಮತ್ತು ಆತನ ಶಿಷ್ಯರನ್ನು ಅವರು ಕಾಣಬಯಸಿದಾಗ, ಅವರಿಗೆ ಸಂದರ್ಶನಭಾಗ್ಯ ದೊರೆಯುತ್ತಿರಲಿಲ್ಲ. 'ನೀವು ಕಾಣಿರಾ?—ಅವರೀಗ ಮಹತ್ತ್ವದ ಪ್ರಯೋಗವನ್ನು ಕೈಕೊಂಡಿದ್ದಾರೆ. ನೀವೀಗ ಅವರನ್ನು ಕಾಣಲಾರಿರಿ.' ಈ ಬಗೆಯ, ಕಟ್ಟುನಿಟ್ಟಿನಲ್ಲಿ ಹಲವಾರು ತಿಂಗಳುಗಳು ಸರಿದು ಹೋದರೂ, ಯಾವುದೇ ಬಗೆಯ ಪ್ರಯೋಜನ ಉಂಟಾಗದ್ದರಿಂದ, ಆತನ ಸಹಾಯಕರಲ್ಲಿ ಸಹಜವಾಗಿ ನಿರುತ್ಸಾಹ ತಲೆದೋರಿತು. 'ಈ ಅಣುಜೀವಿಯನ್ನು ನಾವು ಕಾಣೆವು' ಎಂದು ಬೇಸರದ ದನಿಯಲ್ಲಿ ಅವರು ಹೇಳಿದಾಗ, ಪಾಶ್ಚರನ ಬಿಳಿಯ ಕೂದಲು ನಿಮಿರಿನಿಂತುವು; ಕಂಗಳು ಕೆಂಪಾದುವು. 'ಮತ್ತೊಮ್ಮೆ ಅವೇ ಪ್ರಯೋಗಗಳನ್ನು ಮಾಡಿನೋಡಿರಿ. ಕಳೆದ ಬಾರಿ ಯಶ ದೊರೆಯದ್ದಕ್ಕೆ ನಿರಾಶರಾಗಬೇಡಿರಿ. ಇನ್ನೊಮ್ಮೆ ಮಾಡಿನೋಡಿರಿ. ನಾನು ಹೀಗೆ ನಿಮಗೆ ಹೇಳುತ್ತಿರುವುದು ಹಾಸ್ಯಾಸ್ಪದವಾಗಿ ತೋರಬಹುದು. ಆದರೂ ಮಾಡಿನೋಡಿರಿ, ನನಗಾಗಿ ಮಾಡಿರಿ' ಎಂದು ದೈನ್ಯದಿಂದ ಬೇಡಿಕೊಂಡನು. ಹೀಗೆ ಪುನಃ ಪ್ರಯೋಗ ಮಾಡುತ್ತಿರಲಾಗಿ, ಒಂದು ದಿನ ಅವರು ತಯಾರಿಸಿದ ಲಸಿಕೆಯಿಂದ ಚುಚ್ಚಲ್ಪಟ್ಟ ನಾಯಿಯೊಂದರಲ್ಲಿ ಆ ಬೇನೆಯ ಲಕ್ಷಣಗಳು ಕ್ಷಣಿಕವಾಗಿ ಮಾತ್ರ ಕಂಡುಬಂದುವು. ಇದರಿಂದಾಗಿ, ಒಮ್ಮೆ ಪೀಡಿತವಾದ ನಾಯಿಯು ಬದುಕಿದಲ್ಲಿ, ಅದಕ್ಕೆ ಅನಂತರ ಆ ಬೇನೆಯಿಂದ ಭಯವಿಲ್ಲವೆಂಬುದು ತಿಳಿದುಬಂದಿತು. ರೋಗಕಾರಕ ಶಕ್ತಿಯಿರುವ ಲಸಿಕೆಯನ್ನೇ ರೋಗ ಪ್ರತಿರೋಧಕ ಶಕ್ತಿಯುಳ್ಳದ್ದಾಗಿ ಮಾರ್ಪಡಿಸುವ ವಿಧಾನವನ್ನು ಪಾಶ್ಚರ್ ಮತ್ತು ಆತನ ಸಹೋದ್ಯೋಗಿಗಳು, ಮೂರು ವರ್ಷಗಳ ಅವಿರತ ಶ್ರಮದಿಂದ ಕಂಡುಹಿಡಿದರು. ಈ ಯಶಸ್ಸಿನಿಂದ ಸ್ಫೂರ್ತಿ ಹೊಂದಿದ ಪಾಶ್ಚರ್, ಭೂಮಿಯ ಮೇಲಿಂದಲೇ ಈ ಬೇನೆಯನ್ನು ಹೊಡೆದು ಹಾಕಬಯಸಿದ. ಯಾವಾಗಲೂ ಇದನ್ನೇ ಕುರಿತು ವಿಚಾರ. ಆತನ ಈ ತೆರನ ನಿಮಗ್ನತೆಯು ಶ್ರೀಮತಿ ಪಾಶ್ಚರಳಿಗೆ ಅಸಹನೀಯವಾಗಿ ತನ್ನ ಮಗಳಿಗೆ ಓಲೆ ಬರೆದಳು:—"ನಿನ್ನ ತಂದೆ ವಿಚಾರತಂದ್ರಿಯಲ್ಲಿ ಇರುವುದೇ ಹೆಚ್ಚು. ಅಪರೂಪವಾಗಿ ಮಾತನಾಡುವರು. ಮಲಗುವುದೂ ಕೆಲಹೊತ್ತು. ಬೆಳಗಿನಲ್ಲಿ ಎದ್ದು ಕಾರ್ಯದಲ್ಲಿ ತೊಡಗುವರು!"

ಪಾಶ್ಚರ್ ತನ್ನ ಪ್ರಯೋಗಶಾಲೆಯಲ್ಲಿ ಕೈಕೊಂಡ ಮೇಲ್ಕಾಣಿಸಿದ ಪ್ರಯೋಗವನ್ನು, ಒಂದು ದಿನ, ತಜ್ಞ ಡಾಕ್ಟರರ ಸಮ್ಮುಖದಲ್ಲಿ ಮಾಡಿತೋರಿಸಿದನು. ಈ ಬಗೆಯ ಬಹಿರಂಗಪ್ರಯೋಗವಾದ ಕೆಲವು ದಿನಗಳಲ್ಲಿಯೇ ವಿಶ್ವದಾದ್ಯಂತ ಅಭಿನಂದನಪರ ತಂತಿಗಳು, ಓಲೆಗಳು ಅನೇಕ ಡಾಕ್ಟರರ ಲಸಿಕೆಯ ತ್ವರಿತ ಬೇಡಿಕೆಗಳು ಬರಲಾರಂಭಿಸಿದುವು.

ನಾಯಿಗಳಲ್ಲಿ ಯಶಸ್ವಿಯಾದ ಈ ಪ್ರಯೋಗವು ಮನುಷ್ಯರ ಮೇಲೆ ಎಷ್ಟರ ಮಟ್ಟಿಗೆ ಫಲಪ್ರದವಾಗುವುದೆಂಬುದರ ಬಗ್ಗೆ ಸಾಶಂಕಿತನಾಗಿದ್ದ ಪಾಶ್ಚರನಿಗೆ ನಿದ್ರೆಕೂಡ ಹತ್ತುತ್ತಿದ್ದಿಲ್ಲ. ಅಪ್ಪಿತಪ್ಪಿ ನಿದ್ರೆ ಹತ್ತಿದಾಗ, ಬೇನೆಯಿಂದ ಚೀತ್ಕರಿಸುವ ಎಳೆಯ ಮಕ್ಕಳ ಕರುಳು ಕತ್ತರಿಸುವ ಕೂಗು, ಆತನನ್ನು ಬಡಿದೆಬ್ಬಿಸುತ್ತಿತ್ತು. ಕೊನೆಗೆ ಈ ಪ್ರಯೋಗವನ್ನು ತನ್ನ ಮೇಲೆಯೆ ಮಾಡಿ ನೋಡಿ, ಪರಿಣಾಮವನ್ನು ಪ್ರಕಟಿಸಬೇಕೆನ್ನುವಷ್ಟರಲ್ಲಿ, ಮೇಸಿಂಗಾಟದ ಶ್ರೀಮತಿ ಮೇಸ್ಟರ್ ಹುಚ್ಚುನಾಯಿಯಿಂದ ಗಾಯಗೊಂಡ ತನ್ನ ಮಗನನ್ನೆತ್ತಿ ತಂದು, ಪಾಶ್ಚರನ ಎದುರಿಗಿಟ್ಟು ಪ್ರಾಣಭಿಕ್ಷೆ ಕೋರಿದಳು. ಆಕೆಯ ಪ್ರಾರ್ಥನೆಯನ್ನು ಮನ್ನಿಸಿ ಪಾಶ್ಚರ್, ಇಬ್ಬರು ಡಾಕ್ಟರರ ಸಮ್ಮುಖದಲ್ಲಿ ಆ ಮಗುವಿನ ಮೇಲೆ ಜುಲೈ ೬, ೧೮೮೫ ರಂದು ತನ್ನ ಲಸಿಕೆಯನ್ನು ಚುಚ್ಚಿದನು. ಆಹಾ! ಆಶ್ಚರ್ಯ! ಪ್ರಯೋಗ ನಡೆದು ೧೪ ದಿನಗಳಾಗಿರಲಿಲ್ಲ. ಆ ಮಗು ಉಲ್ಲಾಸದಿಂದ ತಾಯಿಯನ್ನು ಸೇರಿಕೊಂಡಿತು. ಆ ತಾಯಿ ಪಾಶ್ಚರನಿಗೆ ಕೃತಜ್ಞತೆಯನ್ನರ್ಪಿಸಿದಳು. ತನ್ನ ಮನೆಯ ನಂದಾದೀಪವನ್ನು ಬೆಳಗಿಸಿದ್ದಕ್ಕೆ ಆತನನ್ನು ಹಾಡಿಹರಸಿದಳು. ಇದೊಂದೇ ದೃಷ್ಟಾಂತದಿಂದ ಪಾಶ್ಚರನ ಲಸಿಕೆಯ ಕಾರ್ಯಕ್ಷಮತೆ ಲೋಕಕ್ಕೆ ವಿದಿತವಾಯಿತು. ಇದೇ ಬೇನೆಯಿಂದ ಬಳಲುತ್ತಿದ್ದ ಅನೇಕ ಜನರು ಪಾಶ್ಚರನಲ್ಲಿ ಬಂದು ಗುಣಮುಖರಾದರು. ಗುಣಹೊಂದಿದವರಲ್ಲಿ ೧೯ ರಶಿಯನ್ ಜನರ ಸ್ಥಿತಿಯಂತೂ ಮೊದಮೊದಲು ಚಿಂತಾಜನಕವಾಗಿತ್ತು. ಇವರು ಬದುಕಿ ನಾಡನ್ನು ಸೇರಿ ತಮ್ಮ ದೊರೆಗೆ ಪಾಶ್ಚರನ ಮಹಿಮೆಯನ್ನು ವಿವರಿಸಿದರು. ರಶಿಯದ ಝಾರನು ಸಂಪ್ರೀತನಾಗಿ ಪಾಶ್ಚರನಿಗೆ ಪ್ರಯೋಗಶಾಲೆಯನ್ನು ಕಟ್ಟಲೆಂದು ೧೦೦,೦೦೦ ಫ್ರಾಂಕುಗಳನ್ನಿತ್ತುದಲ್ಲದೆ, ಬಿರುದು-ಬಾವಲಿಗಳನ್ನಿತ್ತು ಗೌರವಿಸಿದನು. ಈಗಲೇ ಎಲ್ಲೆಡೆಗಳಿಂದ ಹಣ ಸುರಿದು ಬರಲಾರಂಭಿಸಿತು. ಅದೇ ಸಂಸ್ಥೆ ಇಂದು ಪಾಶ್ಚರನ ಸಂಸ್ಥೆಯೆಂದು (Pasteur Institute) ಸುಪ್ರಸಿದ್ಧವಾಗಿದೆ.

೧೮೯೨ರಲ್ಲಿ ಪಾಶ್ಚರನ ೭೦ನೆಯ ಹುಟ್ಟುಹಬ್ಬವನ್ನು ಬಹು ವೈಭವದಿಂದ ಆಚರಿಸಲಾಯಿತು. ಆಗ ಆತನನ್ನು ಫ್ರಾನ್ಸ್‌ದೇಶ ಚಿನ್ನದ ಪದಕವನ್ನಿತ್ತು ಗೌರವಿಸಿತು. ಈ ಸಭೆಗೆ ವಿಶ್ವದ ಪ್ರಸಿದ್ಧ ವ್ಯಕ್ತಿಗಳು ಆಗಮಿಸಿದ್ದರು. ಅವರಲ್ಲಿ ಸುಪ್ರಸಿದ್ಧ ಶಸ್ತ್ರಚಿಕಿತ್ಸಾ ತಜ್ಞನಾದ ಲಿಸ್ಟರನೂ ಒಬ್ಬ. ಪಾಶ್ಚರ್ ಭಾಷಣ ಮಾಡಲೆದ್ದಾಗ ಸಭಿಕವೃಂದ ಚಪ್ಪಾಳೆಯ ಕಡಕಡಾಟದಿಂದ ಆನಂದ ವ್ಯಕ್ತಪಡಿಸಿತು. ಮಳೆಗಾಲದ ಭೋರ್ಗರೆವ ಕಡಲು ಬೇಸಗೆಯಲ್ಲಿ ಪ್ರಶಾಂತವಿರುವಂತಿತ್ತು ಅಂದಿನ ಭಾಷಣ. ಮೊದಲಿನ ಅಹಮಹಮಿಕೆಯಾಗಲಿ, ಭರ್ತ್ಸನೆಯಾಗಲಿ ಇರಲಿಲ್ಲ. ಆತನ ಅಂದಿನ ಸಂದೇಶ ತುಂಬ ಮನೋಜ್ಞವಾಗಿದೆ:........

"Do not let yourselves be tainted by a deprecating and barren skepticism; do not let yourselves be discouraged by the sadness of certain hours which pass over nations. Live in the serene peace of laboratories & libraries. Say to yourselves first. What have I done for my instructions and as you gradually advance, what have I done for my country? Until the time comes when you may have the immense happiness of thinking that you have contributed in some way to the progress and good of humanity."

೧೮೯೫ರಲ್ಲಿ ಪಾಶ್ಚರನ ಪಾರ್ಥಿವಶರೀರ ಕ್ರಿಸ್ತನನ್ನು ಕೂಡಿತು. ಪಾಶ್ಚರ್ ಮೃತನಾದರೂ ಅಮರನು. ಬರೆಹಕ್ಕೆ ಶ್ರೀಕಾರವಿದ್ದಂತೆ, ರಸಾಯನ ವಿಜ್ಞಾನಿಗಳಿಗೆ ಪಾಶ್ಚರ್!

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೪-೭-೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರ ಪೇಟ

ಮು. ಪೋ. ಮಿರಜ

ದೀಪಾವಳಿಯದು ಬರುತಿದೆ ಚೆನ್ನೆ!

ಶ್ರೀ. ಎಸ್. ಎಸ್ ಬಸುಪಟ್ಟದ ಎಂ. ಎ., ಬಿ. ಇಡಿ.
ಗುಳೇದಗುಡ್ಡ.

೧

ದೀಪಾವಳಿಯದು ಬರುತಿದೆ ಚೆನ್ನೆ,
ಹೊಸ ವರುಷಕೆ ತಾ ಉಸಿರಾಗಿ;
ಸುಖಜೀವನವನು ತರುತಿದೆ ರನ್ನೆ
ವರು-ವರುಷಕೆ ತಾ ಹೊಸದಾಗಿ!

೨

ಹೊಸ ಹೊಸ ತೆರದಲಿ ಒಸಗೆಯ ತರುತಲಿ
ಮನೆ-ಮನ ಬೆಳಗಲಿ ಹಬ್ಬವು ತಾನು
ಹಾಕಿರೆ ಒಸಗೆಯು ಹೃದಯದ ಬೆಸುಗೆಯು
ಚೆಂದದಿ ಬೆಳಗಿವೆ ಆಗೊ ಬುವಿ-ಬಾನು.

೩

ಚಂದ್ರಬಿಂಬದಾ ಚಂದ್ರಿಕೆಯಲಿ ಆಗೊ
ಬುವಿ-ಬಾನುಗಳವು ಮುಳುಗುತಲಿಹವು;
ನಿತ್ಯವು ದೀಪಾವಳಿಯೊಲು ನೀಳದಿ
ತಾರಾ-ಸೊಡರಗೊ ಬೆಳಗುತಲಿಹವು

೪

ಮೇಲಿನ ಲೋಕದ ಯಕ್ಷೇಶ್ವರ ಆ
ಧನಪತಿ ಸಂತಸಗೊಂಡನು ಇಂದು;
ಧನದಗೆ ಸಂದಿತು ಹೋದಾ ಸಂಪದ
ಬಲಿಯಿಂ ತಾನದು ಈದಿನ ಬಂದು.

೫

ದೀಪಾರಾಧನೆಯಿಂದಲಿ ಧನಪತಿ
ಭಾಗ್ಯದ ಲಕ್ಷ್ಮಿಯ ಪೂಜಿಸುತಲ್ಲಿ,
ತ್ಯಾಗದ ಹಿರಿಮೆಯ ತೋರಿದ ಬಲಿಯನು
ಮನ್ನಿಸಿ ಉತ್ಸವ ಮಾಡಿದನಲ್ಲಿ.

೬

ಮೇಲಿನ ಲೋಕದ ಯಕ್ಷೇಶ್ವರನೋಲು
ವಸುಧೆಯ ಧನದರು ರಾರಾಜಿಪರು;
ಬಗೆಬಗೆಯಿಂದಲಿ ಭಾಗ್ಯದ ಲಕ್ಷ್ಮಿಯ
ಅಂತೆಯೆ ಬಿನದದಿ ಅಗೊ ಪೂಜಿಪರು.

೭

ಶೃಂಗಾರದ ಪ್ರಾಕಾರದ ಸಿರಿಯಲಿ
ವಿವಿಧೋತ್ಸಾಹದಿ ತನ್ಮಯರಾಗಿ
ಶ್ರೀವಧುವಿನ ಸಾನ್ನಿಧ್ಯದಿ ಇಂದು
ಶ್ರದ್ಧೆಯ ತೋರ್ಪರು ಚಿನ್ಮಯರಾಗಿ.

೮

ಸ್ವರ್ಗದ ವೈಭವದಾ ದೀಪಾವಳಿ
ಭೂಮಿಗು ಬರುತಿದೆ ನೋಡಿಂದು;
ಬೆಳಕಿನ ಬಳ್ಳಿಯು ಹೂಬಿಡುತಿವೆ ಇಗೊ
ಬುವಿಯಿದು ಸಗ್ಗದ ಬೀಡಿಂದು!

೯

ರಂಗು-ರಂಗಿನಾ ಬಲ್ಬಿನ ಮೂಲಕ
ವಿದ್ಯುತ್ತಿನ ಪ್ರಭೆ ಚಿಮ್ಮುವ ತೆರದಿ–
ಹೊಸ ಹೊಸ ರಂಗನು ಮೆತ್ತುತ ಮೊಗದಲಿ
ಹೊಮ್ಮಿತು ಹಬ್ಬದ ಹರುಷವು ಭರದಿ.

೧೦

ಹರುಷದ ಹೊಳೆಯದು ಹರಿಯಿತು ಚೆನ್ನೆ,
ನೋಡದೊ ನಾಡಿನ ಉದ್ದಗಲಿಂದು;
ನಾಡಿನ ಮಕ್ಕಳ ಜೀವನನೌಕೆಯು
ಸಾಗಿದೆ ಹಬ್ಬದ ಉಬ್ಬನು ತಂದು.

೧೧

ನಾಡಿನೊಳೆಲ್ಲೆಡೆ ಹರಡಲು ಬೆಳಕು
ಬಾ ಬಾ ಚಂದಿರೆ ದೀಪವ ಹಚ್ಚು–;
ದೀಪದಾವಳಿಯ ದೀಪ್ತಿಯ ಥಳುಕದು
ಜನಮನಕಾಗಲಿ ಬಹುಮೆಚ್ಚು.

೧೨

ದೀಪಾವಳಿಯದು ಬರುತಿದೆ ಚೆನ್ನೆ
ಹೊಸ ವರುಷಕೆ ತಾ ಉಸಿರಾಗಿ
ಸುಖಜೀವನವನು ತರುತಿದೆ ರನ್ನೆ
ವರು-ವರುಷಕೆ ತಾ ಹೊಸತಾಗಿ.

ಅಭಂಗ

(ಕಿರುಗತೆ)

ಶ್ರೀ ವಸಂತ ಕುಷ್ಟಗಿ, ಲಿಂಗಸುಗೂರ

'ಉರಿವ ದೀಪವ ಬಡಿದು ಹರಡುವುದು ಕತ್ತಲನು ಪರಪೀಡಕವು ಪೂರ್ಣ ಪಕ್ಷದ ಹುಳ!'

ಬಾಲಸೂರ್ಯನಿನ್ನೂ ಮೂಡಿರಲಿಲ್ಲ. ಕೆಂಜೆಡೆಯ ಬಾನು ಹೊಳೆಯುತ್ತಿತ್ತು. ವಿಚಿತ್ರವಾದ ಚಿತ್ರಗಳನ್ನು ಹೊತ್ತಿತ್ತು. ಬಣ್ಣ-ಬಣ್ಣದ ಬಾನು ಕಾಣಬೇಕೆಂದು ಜಗತ್ತು ತಲೆಯೆತ್ತಿ ನೋಡುತ್ತಿತ್ತು. ಮುದ್ದಾದ ಕಮಲ ಇನಿಯನ ಬರುವನ್ನು ಕಾಯುತ್ತಿತ್ತು. ಇಬ್ಬನಿ ಎಲ್ಲ ಸಸ್ಯಗಳ ಮೇಲೆ ಬಿದ್ದು ಥಳುಕು ತಂದಿತ್ತು.

ಮುದ್ದಾದ ಹುಡುಗರಿಬ್ಬರು, ಬೆಳಗಿನಲ್ಲೆದ್ದು ಸ್ನಾನಾದಿಗಳನ್ನು ಮುಗಿಸಿ ಓದಲು ಕುಳಿತಿದ್ದರು. ದೀಪ, ಈಗಿನ ಚಮತ್ಕಾರಕ ದೀಪವಿದ್ದಿಲ್ಲ ಒಂದು ನಂದಾದೀವಿಗೆ, ಆನಂದಯುಕ್ತ, ಶಾಂತ-ವಾತಾವರಣವನ್ನೂ ಬೆಳಕನ್ನೂ ನೀಡಿತ್ತು.

ಜಗತ್ತಿನೊಳಗೆ ಎಲ್ಲ ಕಾರ್ಯಗಳಲ್ಲಿಯೂ ತೊಂದರೆ ಕೊಡಬೇಕೆನ್ನುವ ಜಂತುಗಳು ನಮ್ಮ ಕಣ್ಣಿಗೆ ಯಾವಾಗಲೂ ಗೋಚರವಾಗುತ್ತಿರುತ್ತವೆ. ಅವುಗಳ ಕೃತಿಗಳು ನಮಗೆ ಒಂದು ತೆರನ ಮರುಕಪ್ಪುದುಭಾವನೆಗಳನ್ನು ಕಲ್ಪಿಸಿದೆ, ಕಟುಮನಸ್ಸು ಸಿದ್ಧವಾಗುತ್ತವೆ. ತೊಂದರೆಗಳಿರಲಾರದೆಯೇ ಯಾವ ಕೆಲಸಗಳೂ ನೆರವೇರುವುದಿಲ್ಲ. ಸುರಭಿ ಶೋಭಿಸಬೇಕಾದರೆ ಸುಲಭವಲ್ಲ, ಅಭ್ಯಂತರಗಳು ಬರುವಲ್ಲಿಯೂ, ಬಳ್ಳಿಯ ಕೆಲಸಗಳಲ್ಲಿ ವಿಪರೀತ.

ಮುದ್ದು ಬಾಲಕರು ಪ್ರಸನ್ನವದನರಾಗಿ ಓದುತ್ತಿರುವುದನ್ನು ಸಹಿಸಲಾಗಲಿಲ್ಲವೇನೊ, ಪತಂಗದ ಹುಳುವಿಗೆ. ಯಾವ ಮೂಲೆಯಿಂದಲೋ ಬಂದಿತು. ಪವಿತ್ರ ಬೆಳಕಿನಲ್ಲಾಡಿತು. ಬಾಲಕರಿಗೆ ಅದೇನೋ ಸೊಗಸಾಗಿ ಕಂಡಿತಾದರೂ, ಮುಂದಿನ ಆಗು-ಹೋಗನ್ನೇನು ಅವರು ಬಲ್ಲರು.

ಆ ಹುಳು ಆಡುತ್ತ ಆಡುತ್ತ, ವಿಧವಿಧವಾದ ನಟನೆ ಮಾಡುತ್ತ ನಂದಾದೀಪವನ್ನು ನಂದಿಸಿತು. ಸ್ವಲ್ಪ ಮಸಕಾಗಿ ಸನ್ನಿವೇಶ ಕಂಡರೂ, ಓದಿನಲ್ಲಿ ಸ್ವಲ್ಪ ಅಭ್ಯಂತರ ಬಂದರೂ, ಅದರ ಅಭಂಗ ಬೇಗನೆ ಆಯಿತು.

ಅಷ್ಟರಲ್ಲಿಯೆ ಬಾಲಸೂರ್ಯ ತನ್ನ ಮುದ್ದಾದ ಕಿರಣಗಳನ್ನು ಜಗದೊಳಗೆಲ್ಲಾ ಬೀಸಿದನು. ಜಗವೆಲ್ಲ ಹೊಳೆಯಿತು. ಮನವೆಲ್ಲ ಬೆಳಗಿತು. ಹೊಸ ಹುರುಪಿನಿಂದ ತನ್ನ ಕಾರ್ಯದಲ್ಲಿ ಜಗತ್ತು ಮುಳುಗಿತು. ಬಾಲಕರ ಅಭ್ಯಾಸಕ್ಕೆ ಬಾಲಾತಪನಿಂದ ಭಗ್ನ ಬಾರದೆ ಭರದಿಂದ ಸಾಗಿ ಬಲಪಡೆದು, ದೃಢಚಿತ್ತರಾದರು ಕಾರ್ಯದಲ್ಲಿ.

(೨೧೩ ನೆಯ ಪುಟದಿಂದ ಮುಂದುವರಿದುದು)

ಮುಖ ಕೆಳಗೆ ಎತ್ತರ.... ಅಕ್ಕನ ಲಗ್ನದ ಕಾಲಕ್ಕೆ ತಾನು ಏಳೆಂಟು ವರ್ಷದ ಹುಡುಗಿ.... ಅವನನ್ನು ನೋಡಿ ಆನಂದಭರಿತಳಾಗಿ "ನಮ್ಮ ಭಾವನನ್ನು ನೋಡಿದ್ದಿಯೊ? ಬಹಳ ಚೆಂದ ಇದ್ದಾನ-ಸಿನೇಮಾದೊಳಗಿನ ಆ ಚಂದ್ರಕಾಂತನಂತೆ ಕಾಣಿಸ್ತಾನ!" ಎಂದು ಹೆಮ್ಮೆಯಿಂದ ತನ್ನ ಗೆಳತಿಗೆ ಹೇಳಿದುದರ ನೆನಪಾಯಿತು.... ಇನ್ನೂ ಮುದ್ದಾಗಿಯೇ ಕಾಣುತ್ತಾರೆ.... ಅಂದು— "ನನ್ನ ಚೆಂದ ಹುಡುಗಿ" ಎಂದು ಅಂದಾಗ, ಅವರು ತನ್ನೆಡೆಗೆ ಎಂತಹ ಮೋಹಕವಾದ ದೃಷ್ಟಿಯನ್ನು ಬೀರಿದ್ದರು! ಮೂರನೆಯ ದಿನ "ಶೋಭಾ, Do you know I love you?.... ನೀನು ಸಣ್ಣವಳಿದ್ದಾಗಿನಿಂದ ನಿನ್ನ ಮೇಲೆ ನನ್ನ ಮಮತೆ.... ನೀನು ಎಷ್ಟು ಚೆಂದ ಕಾಣುಸುತ್ತೀ ಇದರ ಕಲ್ಪನೆ ನಿನಗಿದೆಯೋ?" ಎಂದು ಉಸುರುವಾಗಿನ ಅವರ ಮುಖದ ಮಾಟ, ಕಣ್ಣುಗಳ ಮೋಡಿ ಎಷ್ಟು ಮೋಹಕವಾಗಿದ್ದುವು! ಅಂದು ಅವರು ತಮ್ಮ ತೋಳುಗಳಿಂದ ತನ್ನನ್ನಪ್ಪಿ ಮುದ್ದಿಸಿದಾಗ, ತನಗೆ ಸ್ವರ್ಗವೇ ಕೈಗೆ ಬಂದಂತೆ ಎನಿಸಿತ್ತು! ಇಂದು ಅವರು ರಮಿಸುವಾಗ ತನ್ನನ್ನು ಎತ್ತಿಹಿಡಿದ ರೀತಿ.... ಅವರ ಸವಿಯಾದ ಮುದ್ದು-ಮಾತುಗಳು ಎಷ್ಟು ಮನೋಹರವಾಗಿದ್ದುವು! ....ಹೌದು ಇವರೇ ತನ್ನ ಪ್ರೇಯಸ-ತನ್ನ-ಯಕ್ಷ-ತನ್ನ ರೋಮಿಯೊ- ತನ್ನ ಗಂಡ, ತನ್ನ ದೈವ! ಹೌದು ಇವರೇ !........

ಅಭಿಮಾನಯುಕ್ತ ದೃಷ್ಟಿಯಿಂದ ರಘುನಾಥನೆಡೆಗೆ ನಿಟ್ಟಿಸುತ್ತ ನಿಂತಳು ಶೋಭನೆ.

ರಘುನಾಥನಿಗೆ ಅವಳು ಬಂದು ನಿಂತುದರ ಅರಿವಾಗಿರಬೇಕು. ಮುಖವನ್ನೆತ್ತಿ ಅವಳೆಡೆಗೆ ನೋಡಿದ.... ಅವನ ಮುಖವು ಇನ್ನೂ ಚಿಂತಾಮುದ್ರಿತವಾಗಿತ್ತು.

ಶೋಭನೆಯ ತುಟಿಯ ಮೇಲೆ ಒಂದು ಅಪೂರ್ವ ನಗೆ ಸುಳಿದಾಡುತ್ತಿತ್ತು ಅವಳ ಕಣ್ಣುಗಳಲ್ಲಿ ನೀರು ತಾರೆಯಂತೆ ಮಿಣುಕುತ್ತಿದ್ದುವು.

ಅಷ್ಟರಲ್ಲಿ ರಾಮು ಹೊರಗಿನಿಂದ ಬಂದ:

"ಶೋಭಕ್ಕಾ, ನಾನು 'ಧ್ರುವಚರಿತ್ರೆ' ನೋಡಿಬಂದೆ. ಬಹಳ ಚೆನ್ನಾಗಿತ್ತು ಸಿನೇಮಾ!" ಎಂದು ಕೂಗಿಹೇಳಿದ.

ಕಾರುಣ್ಯಗಂಗಾ

(ಸಣ್ಣ ಕತೆ)

ಶ್ರೀ. ಆರ್. ಜಿ. ಕುಲಕರ್ಣಿ, ಕರ್ನಾಟಕ ಕಾಲೇಜ, ಧಾರವಾಡ

▲

ಜೀವನದಲ್ಲಿ ಕಷ್ಟಗಳು ಬಂದು ಅಡಸಿದಾಗ ಮನುಷ್ಯನು ರಾಕ್ಷಸನಾಗ-ಬೇಕೋ? ದೇವತೆಯಾಗಬೇಕೋ? ರಾಕ್ಷಸಶಕ್ತಿ ವಿಧ್ವಂಸಕ; ದೈವೀಶಕ್ತಿ ವಿಧಾಯಕ!

▲

ನೇಸರು ಕಿಚ್ಚಿದ್ದು ಉರಿಯುತ್ತಿತ್ತು. ರಣಗುಡುವ ಕರಿನೆಲ, ಕಣ್ಣು ಹರಿಯುವವರೆಗೂ ಬವಳಿ ಬಂದು ಉರುಳಿದಂತಿತ್ತು. ಬೇಸಗೆಯ ನಡುಹಗಲು. ಬಾಡಿ ನೆಲಕೊರಗಿದ ಒಣಹುಲ್ಲಿನಲ್ಲಿ ಜೀವ ಉಂಟೇ ಎಂದು ನೋಡಲು, ಉರಿಗಾಳಿ ಕಂಡೂ ಕಾಣದಂತೆ ಸುಳಿಯುತ್ತಿತ್ತು. ಅಲ್ಲಿ ದೂರದಲ್ಲೊಂದು ಹಳ್ಳ ಮುಂದುವರೆಯಲಾಗದೆ ಸುಡುಗಟ್ಟಿ ನಿಂತಿತ್ತು. ಬದಿಯಲ್ಲಿ ಜಾಲಿಯ ಗಿಡಗಳು, ಮುಳ್ಳು-ಕಂಟಿಗಳು ಮೂಕವಾಗಿ, ಆ ಬೇಗೆಯನ್ನು ಎಸರು ನುಂಗಿದಂತೆ ನುಂಗಿನಿಂತಿದ್ದುವು. ಅಂತಹ ಒಂದು ಜಾಲಿಯ ಗಿಡದಡಿಯಲ್ಲಿ, ಆ ಬ್ರಾಹ್ಮಣ ಬರಲಾರದೆ ಬಂದು ಕುಸಿದುಬಿದ್ದ. ಹಾಗೆಯೇ ಕೈಕಾಲು ಚೆಲ್ಲಿ, ಕಣ್ಮುಚ್ಚಿ ಬಿದ್ದುಕೊಂಡ. ದಣಿವಿನಿಂದ ಆತ ತೇಕುತ್ತಿದ್ದ. ಎದೆ ಢಡಢಡ ಬಡಿದುಕೊಳ್ಳುತ್ತಿತ್ತು. ಸುತ್ತಲಿನ ಪರವೆಯೇ ಆತನಿಗೆ ಇರಲಿಲ್ಲ. ಬಿಸಿಲಿನಿಂದ ಎವೆ ಭಾರವಾಗಿ, ಬುದ್ಧಿ ಮಂಕಾಗಿ ನಿದ್ದೆ ಬಂದಂತಾಯಿತು. ಒಂದೆರಡು ನಿಮಿಷ ಜಂಪೂ ಹತ್ತಿತು. ಆದರೆ ನೀರಡಿಕೆ ಆತನನ್ನು ಮಲಗಗೊಡಲಿಲ್ಲ. ಹಾಗೆಯೆ ಹತ್ತಿಪ್ಪತ್ತು ನಿಮಿಷ ಬಿದ್ದುಕೊಂಡಿದ್ದು, ಆ ಮೇಲೆ ಏಳಲಾರದೆ ಎದ್ದು ಕುಳಿತ. ಅಲ್ಲಿಯೆ ಎದುರಿಗೆ ಇದ್ದುದರಲ್ಲಿಯೆ ಬೆಳ್ಳಗಿದ್ದ ನೀರನ್ನು ಒಂದೆರಡು ಬೊಗಸೆಯಷ್ಟು ಕುಡಿದ. ತುಸು ಶಾಂತವಾದಂತಾಯಿತು ಮತ್ತೊಂದು ಬೊಗಸೆ ತುಂಬ ನೀರನ್ನು ಎತ್ತಿಕೊಂಡ. ಇನ್ನೇನು ಕುಡಿಯಬೇಕು. ಅದೇನಾಯಿತೊ! ಸಾವಕಾಶವಾಗಿ ಅವನ್ನು ಮರಳಿ ತೊರೆಗೆ ಸುರಿದು ಶೂನ್ಯದೃಷ್ಟಿಯಿಂದ ನೋಡುತ್ತ ಕುಳಿತುಕೊಂಡ. ಸುರಿದ ನೀರು ಮಂದವಾಗಿ ಹರಿವ ನೀರಿನೊಡನೆ ಸೇರಿಕೊಂಡು ಕರಗಿ ಹೋದುವು. "ನೀನು ಕುಡಿಯದಿದ್ದರೇನು? ನಿನ್ನ ಸೆಡವು-ಸಿಟ್ಟುಗಳಿಗೆ ಲಕ್ಷ್ಯಕೊಡಲು ನನಗೆಲ್ಲಿ ವೇಳೆಯಿದೆ? ನಾನು ನನ್ನ ಹಾದಿಹಿಡಿದು ಹೋಗುವೆ...." ಎಂದು ಅಣಕಿಸುವಂತೆ ಮುರುಗಿ–ಮುರುಗಿಯಾಗಿ ಸುತ್ತಿ ಬಳುಕಿ ತೇಲಿದುವು. ಆ ಮಂದಪ್ರವಾಹವನ್ನು ಅವನು ಮಾತ್ರ ಸುಮ್ಮನೆ ನೋಡುತ್ತಿದ್ದ. ಮಂಕನಂತೆ ನೋಡುತ್ತಿದ್ದ. ದೇಹದ ದಣಿವು ಸಾವಕಾಶವಾಗಿ ಮಾಯವಾಗುತ್ತಿರುವುದು, ಸೂಕ್ಷ್ಮವಾಗಿ ನೋಡಿದರೆ ಕಾಣುತ್ತಿತ್ತು. ಆದರೆ ಆ ದಣಿವು ಆರುತ್ತ ನಡೆದಂತೆ ಇಲ್ಲಿಯವರೆಗೆ ಮನಸ್ಸಿನ ತಳದಲ್ಲಿ ಕುಸಿಬಿದ್ದ ನೂರಾರು ಭಾವನೆಗಳೂ ರುಕ್ಷರುಕ್ಷ ತೀಕ್ಷ್ಣವಿಚಾರಗಳೂ ಮೇಲಕ್ಕೇಳುವಂತೆ ಕಾಣಿಸಿತು. ಕೊನೆಗೆ "ಹ್ಞ್sss" ಎಂದು ಉಸಿರು ಹಾಕಿದ.

ಕೃಷ್ಣಾತೀರದ ಕಪ್ಪುಬ್ರಾಹ್ಮಣ. ಕೆದರಿದ ಕೂದಲು ಎಣ್ಣೆಗಾಣದೆ ಜಡೆಗಟ್ಟಿತ್ತು. ಸೂಜಿಯಂತಹ ದಾಡಿ–ಮೀಸೆಗಳು ಮುಖದ ತುಂಬ ವಿಕಾರವಾಗಿ ಬೆಳೆದಿದ್ದುವು. ಹರಯದವನಲ್ಲವಾದರೂ ಮುದುಕನಲ್ಲ. ನಲವತ್ತರ ಗಡಿದಾಟುವುದರಲ್ಲಿತ್ತು. ಆ ಗುಳಿಬಿದ್ದ ಕಣ್ಣು, ಬಾಡಿದ ನಿಸ್ತೇಜ ಮುಖ, ಶೂನ್ಯದೃಷ್ಟಿಗಳನ್ನು ನೋಡಿದರೆ ಅಲ್ಲಿ, ದಾರಿಯ ದಣಿವು, ಬಿಸಿಲಿನ ತಾಪಗಳಿಗಿಂತ ಹೆಚ್ಚಾಗಿ ಜೀವನ-ದಲ್ಲಿ ಹತಾಶನಾಗಿರುವುದರಿಂದುಂಟಾದ ನಿರ್ವಿಣ್ಣಭಾವವೇ ಎದ್ದು ಕಾಣುತ್ತಿತ್ತು. ಅಲ್ಲಿ ಆತ ಇನ್ನೂ ಎಷ್ಟುಹೊತ್ತು ಹಾಗೆಯೆ ಕುಳಿತು-ಕೊಳ್ಳುತ್ತಿದ್ದನೋ ಹೇಳಲಿಕ್ಕಾಗದು.

ಅಷ್ಟರಲ್ಲಿ ಯಾರೋ ಒಬ್ಬರು "ಓ ಸ್ವಾಮೇರs, ಸ್ವಲ್ಪ ದಾರಿಬಿಡ್ರಿ. ಕುರೀ ನೀರು ಕುಡಿತಾವ್ರು...." ಎಂದು ಒದರಿ ಹೇಳಿದರು. ಬ್ರಾಹ್ಮಣ ತಿರುಗಿ ನೋಡಿದ. ಒಬ್ಬ ಕುರುಬರ ಹುಡುಗ, ನಾಲ್ವತ್ತು-ಐವತ್ತು ಕುರಿಗಳಿಗೆ ನೀರುಕುಡಿಸಲು ಬಂದಿದ್ದ. ಬ್ರಾಹ್ಮಣ ಮಾತ-ನಾಡದೇ ಎದ್ದುನಿಂತ. ಮೂಕಕುರಿ ಮೂಕವಾಗಿಯೆ ನೀರುಕುಡಿದು ಸಾಲುಗಟ್ಟಿ ಮುಂದೆಹೋದುವು. ಅವುಗಳ ಸಂಗಡ ಕುರುಬರ ಹುಡುಗನೂ ಹೊರಟುಹೋದ. ತನಗೆ ಆ ಕುರುಬ ದಾರಿಬಿಡಲು ಹೇಳಿದ! ತನ್ನ ಕುರಿಗಳಿಗೆ ನೀರು ಕುಡಿಸಿದ! ಅಲ್ಲಿಂದ ಹೊರಟು ಹೋದ! ಹೌದು, ಅವನು ಇನ್ನೇನು ಮಾಡಬೇಕಿತ್ತು? ತನ್ನ ಬಗೆಗೆ ಕೇಳಬೇಕಿತ್ತೆ? ತನ್ನ ನೋವು-ಸಂತಾಪಗಳನ್ನು ಕುರಿತು ಕೇಳಬೇಕಿತ್ತೆ? ಅವನಿಗೇನು ಗೊತ್ತು? ಗೊತ್ತಿದ್ದರೂ ಯಾಕೆ ಕೇಳಬೇಕು? ಗೊತ್ತಿಲ್ಲದಿರುವುದೇ ತನ್ನ ಪುಣ್ಯ. ತನ್ನ ಕತೆ ಅವನಿಗೆ

ಗೊತ್ತಿದ್ದರೆ ... ಗೊತ್ತಾದರೆ...." ಎಲ್ಲರಂತೆ ಅವನೂ ನನ್ನ ಮೋರೆಯ ಮೇಲೆ ಉಗುಳುತ್ತಿದ್ದ. ಹೌದೆ?...." ಆ ಬ್ರಾಹ್ಮಣನ ಕಹಿಯಾದ ಹೃದಯ ಕಟುವಾಗಿ ಕೂಗಿತು.... "ಗೊತ್ತಿಲ್ಲದವರಿಗೆ ನನ್ನ ಬಗೆಗೆ ಚಿಂತೆಯಿಲ್ಲ. ಗೊತ್ತಿದ್ದವರಿಗೆ ನನ್ನ ಮುಖದರ್ಶನವೂ ಸಹನವಾಗುವುದಿಲ್ಲ. ಗೊತ್ತಿದ್ದವರು ಧಿಃಕರಿಸುತ್ತಾರೆ. ಗೊತ್ತಿಲ್ಲದವರು ದುರ್ಲಕ್ಷ್ಯಿಸುತ್ತಾರೆ. ಓ! ದುರ್ದೈವೀ ಬಾಳೇ......." ಒಂದೊಂದು ಸಣ್ಣಪುಟ್ಟ ಘಟನೆಗಳೂ ಆತನ ಅಂತರಂಗದ ಗಾಯಕ್ಕೆ ಅನಿರೀಕ್ಷಿತವಾಗಿ ನೋವು ಕೊಡುತ್ತಿರುವಂತೆ ಕಾಣಿಸಿತು. ಇಡೀ ಪ್ರಪಂಚದಲ್ಲೆಲ್ಲ ತಾನು ಏಕಾಂಗಿಯಾಗಿ ಸುತ್ತುತ್ತಿರುವೆನೆಂದು ಆತ ತಳಮಳಿಸುತ್ತಿದ್ದ. ಮುಳ್ಳುಕಂಟಿ, ಜಾಲಿ-ಹುಣಿಸೆಯ ಮರಗಳು ಕೂಡ ತಾನೊಂದು ಅತ್ಯಂತ ಕ್ಷುದ್ರಜೀವಿಯೆಂದು ಧಿಃಕರಿಸಿ, ದುರ್ಲಕ್ಷ್ಯಿಸಿ ಮೌನ ತಾಳಿರುವಂತೆ ಆತನಿಗೆನಿಸುತ್ತಿತ್ತು. ಆ ಮೂಕ ಕುರಿ ಎಲ್ಲಿಯವು? ಆ ಕುರುಬ ಎಲ್ಲಿಯವ? ಅವರಲ್ಲಿ ಯಾವ ಸಂಬಂಧ? ಅವು ನೀರಡಿಸಿದರೆ ಆತ ನೀರನ್ನು ಕುಡಿಸುತ್ತಾನೆ ಅವುಗಳ ಸುಖ-ದುಃಖ ನೋಡಿಕೊಳ್ಳುತ್ತಾನೆ. ನನ್ನನ್ನು ಮಾತ್ರ ವಿಚಾರಿಸುವವರೇಕೆ ಯಾರೂ ಹುಟ್ಟಿಲ್ಲ? ಅದೇನು, ಆ ಸಗಣಿಯ ಹುಳುಗಳ ಜೋಡಿ! ಎಂತಹ ಹೊಲಸೇ ಇರಲಿ ಕೂಡಿ ಆಡಿಕೊಳ್ಳುತ್ತಿವೆಯಲ್ಲ! ಅವುಗಳನ್ನಾರೂ ಬಹಿಷ್ಕರಿಸುವುದಿಲ್ಲವೇನು? ಅವುಗಳ ಕುಲದಲ್ಲಿ ಯಾರೂ ಧಿಃಕರಿಸುವುದಿಲ್ಲವೇನು? ಕ್ರೂರವಾಗಿ, ಹೀನಾಯವಾಗಿ ದಿಟ್ಟಿಸಿ ನೋಡುವುದಿಲ್ಲವೇನು? ಪತಿತ! ಪಾಪಿ! ಎಂದು ಅಟ್ಟಹಾಸ ಮಾಡಿ ನಗುವುದಿಲ್ಲವೇನು? "ಎಲ್ಲ ಧಿಃಕಾರ-ತಿರಸ್ಕಾರಗಳು, ಅಸಹ್ಯ-ಹಿಂಸೆ-ಸಂಕಟಗಳು ನನಗೆ ಮಾತ್ರ ಮೀಸಲಾಗಿವೆಯೇ?...." ಎಂದು ಸಂಕಟ ಪಟ್ಟ. ಬದಿಯಲ್ಲಿಯ ಅವರೆಯ ಕಂಟಿಯ ಹಸಿರು ತೊಪ್ಪಲ ಮರೆಯಲ್ಲಿ ಹಳದಿಯ ಹೂವೊಂದು ಕುಲುಕುಲು ನಗುತ್ತಿತ್ತು. ಆ ಬ್ರಾಹ್ಮಣ ದಿಟ್ಟಿಸಿ ನೋಡಿದ. "ನಿನಗೆ ಯಾಕೆ ಈ ನಗೆ? ಯಾಕೆ ಈ ಚೆಲುವು? ಈ ಅವರೆಯ ತೊಪ್ಪಲೇಕೆ ನಿನಗೆ ನೆಳಲುಮಾಡಬೇಕು? ಈ ಸಂತೋಷ ಸಂಭ್ರಮ ನಿನಗೆ ಯಾಕೆ? ನೀನೇನು ಪಾಂಡಿತ್ಯ ಗಳಿಸಿದ್ದೀ? ಏನು ಪುಣ್ಯ ಮಾಡಿದ್ದೀ? ನಿನಗೆ ಯಾರು ಈ ವ್ಯವಸ್ಥೆ ಮಾಡಿದರು? ನನಗೆ ಇಲ್ಲದ ನಿಶ್ಚಿಂತೆ, ಆನಂದ ನಿನಗೆ ಯಾಕೆ?.... ಈಗ, ನಿನ್ನನ್ನು ಹಿಚುಕಿ ಹಾಳುಮಾಡುತ್ತೇನೆ! .... ಉರಿಬಿಸಿಲಿನಲ್ಲಿ, ಸುಟ್ಟ ಕರಿಯ ನೆಲದಲ್ಲಿ ಹುಗಿಯುತ್ತೇನೆ. ನಿನ್ನನ್ನು ಯಾರು ಕಾಯುವರು?...." ಬ್ರಾಹ್ಮಣನ ತುಟಿ ಸಂತಾಪದಿಂದ ನಡುಗುತ್ತಿತ್ತು. ಅವರೆಯ ಕಂಟಿಯ ಬೊಡ್ಡೆಯನ್ನು ಗಟ್ಟಿಯಾಗಿ ಹಿಡಿದು ಅಲುಗಾಡಿಸುತ್ತ ಕೂಗಿದ: "ಹೇಳು. ಹೇಳು! ಈಗೇನು ಮಾಡುತ್ತೀ? ನಿನಗೆ ಗೊತ್ತೇನು? ಇನ್ನೊಂದು ಕ್ಷಣದಲ್ಲಿ ನೀನು ಸಾಯುತ್ತೀ! ಮಣ್ಣಾಗಿ ಹೋಗುತ್ತೀ! ಇನ್ನೂ ನಗುತ್ತೀಯಲ್ಲ?.... ನಾನಾದರೂ ಕಾಣುತ್ತೇನೇನು?.... ಕೊಲ್ಲುವ ಕೈಯಿಂದ ನಿನ್ನ ತಾಯಿಬೇರನ್ನೇ ಕಿತ್ತುತ್ತಿರುವೆನೆಂಬುದು ಕಾಣುತ್ತದೇನು....?...." ಬ್ರಾಹ್ಮಣ ಹುಚ್ಚನಂತೆ ಕೂಗಿದ. ಹೂ ಮಾತ್ರ ಸುಮ್ಮನೆ ನಗುತ್ತಿತ್ತು; ವಿಷದ ಬಟ್ಟಲನ್ನು ಬಾಯಿಗೆ ಹಿಡಿಯ ಬಂದ ತಾಯಿಯ ಗದ್ದ ತುಟಿ ಹಿಡಿದು ನಗುವ ಎಳಗೂಸಿನಂತೆ ಕುಲುಕುಲು ನಗುತ್ತಿತ್ತು.

"....ನಗುತ್ತೀ-! ....ಇನ್ನೂ ನಗುತ್ತೀ....!! ಹೇಳು ಹೂವೇ ಹೇಳು! ಈಗ ನಿನ್ನನ್ನು ಕಾಯುವ ದೇವರೆಲ್ಲಿದ್ದಾನೆ....?" ಹೂವು ಮಾತನಾಡಲೇ ಇಲ್ಲ. ಬರಿ ನಗುತ್ತಿತ್ತು. ಹುಚ್ಚು ಹಿಡಿಸುವ ಪುಟ್ಟಕ್ಕೆ ಬಂದ ಸಂಕಟ-ಸಂತಾಪಗಳಿಂದ ಬ್ರಾಹ್ಮಣನ ಮುಖ ವಿಕಾರವಾಗಿತ್ತು. ತಾಯಿ ಕೂಸಿನ ಕುತ್ತಿಗೆ ಹಿಚುಕುತ್ತಿರುವಂತೆ, ಹೂವಿನ ಮೊಗವೊಂದನ್ನೇ ಮೇಲೆ ಮಾಡಿ, ಇಡಿ ಅವರೆಯ ಕಂಟಿಯನ್ನೇ ತನ್ನೆರಡೂ ಕೈಗಳಲ್ಲಿ ಹಿಚುಕಿ ಹಿಡಿದು, "ಹೇಳು!.... ಹೇಳು!! ಹೇಳು!!!...." ಎಂದು ಗಟ್ಟಿಯಾಗಿ ಕೂಗಿದ. ರುಕ್ಷ ಬಿಸಿಲಿನಲ್ಲಿ ಆ ಧ್ವನಿ ಕರಗಿ ಹೋಯಿತು. ಅವನ ಕೈಯ-ಮುಷ್ಟಿಯಲ್ಲಿ ಅವರೆಯ ಹಸಿರು ತೊಪ್ಪಲು ಮುದುಡಿಮುದುಡಿಯಾಗಿ ಹೋಯಿತು ಬ್ರಾಹ್ಮಣ "ಅಮ್ಮಾ...." ಎಂದು ಕೂಗಿಕೊಂಡು, ಮುಖ ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅತ್ತ. ಒಂದೆರಡು ನಿಮಿಷಗಳನಂತರ ಕಣ್ಣು ತೆರೆದು ನೋಡಿದ. ಭಯದಿಂದ ಗದಗುಟ್ಟಿ ನಡುಗುತ್ತಿರುವ ಸಣ್ಣ ಮಗುವಿನಂತೆ ಆ ಹೂವು, ಮುದುಡಿದ ತೊಪ್ಪಲಲ್ಲಿ ಮುದುಗಿಕೊಂಡಿತ್ತು. ಬ್ರಾಹ್ಮಣ ನೀರುದುಂಬಿದ ಕಣ್ಣಿನಿಂದ ಅದರ ಕಡೆಗೆ ನೋಡುತ್ತ ಮುದುಡಿದ ಅವರೆಯ ಕಂಟಿಯ ಮೇಲೆ ಮೃದುವಾಗಿ ಕೈಯಾಡಿಸುತ್ತ "ನಾನು ಬಹಳ ಕೆಟ್ಟ ನೀಚನಲ್ಲವೇ....?.... ನೀನು ಬಹಳ ಗಾಬರಿಯಾಗಿದ್ದೀ ಏನು?.... ಇನ್ನೊಂದು ನಿಮಿಷ ತಡೆದಿದ್ದರೆ ನಿನ್ನನ್ನು ಪೂರಾ ಕೊಂದೇ ಬಿಡುತ್ತಿದ್ದೆ.... ಏನು ಮಾಡಲಿ ಹೇಳು! ನಾನಾದರೂ ಹೇಗೆ ತಡೆಯಲಿ? ನೀವೆಲ್ಲ ನಗುತ್ತೀರಿ. ನಿಮಗೆಲ್ಲಾ ಆಶ್ರಯ ಕೊಡುವವರಿದ್ದಾರೆ. ನನಗೆ ಮಾತ್ರ ಯಾರೂ ಇರಬಾರ



ನೀನು? ಇಷ್ಟಾದರೂ ನಾನು ಸಿಟ್ಟಾಗಬಾರದೇನು? ಇಲ್ಲಿ ನಿನಗಾರೂ ಇಲ್ಲವೆಂದು ನಿನ್ನ ಮೇಲೆ ಕೈಮಾಡಿದೆ. ನಿನ್ನನ್ನು ಬಿಟ್ಟರೆ ಇನ್ನಾರ ಮೇಲೆ, ಮಾಡಬೇಕು?.... ಇನ್ನು ನೀನು ನಗುದಿವ್ವಲ್ಲವೇನು?...." ಬ್ರಾಹ್ಮಣ ಬಡಬಡಿಸುತ್ತಿದ್ದ. ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ತುಸುಹೊತ್ತಿನ ನಂತರ ಮೇಲೆ ನೋಡಿದ. ಮೇಲೆ ಬಾಲಿಯ ಮುಳ್ಳುಗಳ ನಡುವೆ ಗಂಧದ ಹೂವೊಂದು ಮೈದುಂಬಿ ನಿಂತಿತ್ತು. ದಿಟ್ಟಿಸಿ ನೋಡಿದ. ತನ್ನ ಕೈಗೆ ನಿಲುಕುವಂತಿರಲಿಲ್ಲ. ಅದನ್ನು ತನ್ನ ಕಪಿಮುಷ್ಟಿಯಲ್ಲಿ ಹಿಚುಕಿ ಕೊಲ್ಲಲು ಬರುವಂತಿಲ್ಲ. ಈ ಬಡ ಅವರೆಹೂವೊಂದು ಕಣ್ಣೆದುರು ಅಸಹಾಯವಾಗಿ ನಿಂತಿದೆ. ಅದನ್ನು ತಾನು ಕೊಲ್ಲಬಹುದು. ನಗುವ ಪ್ರಪಂಚ ಉಳಿದೇ ಉಳಿಯುತ್ತದೆ. ಈ ಪುಟ್ಟ ಹೂವಿನ ಕತ್ತು ಹಿಚುಕಿದರೆ, ಅದೂ ಒಂದು ನನ್ನಂತಹ ದುಃಖೀಜೀವಗಳ ಸಾಲಿಗೆ ಸೇರುತ್ತದೆ. ತನ್ನ ಬಾಳನ್ನು ಹಾಳು ಮಾಡಿದವರನ್ನು ತಾನೀಗ ಶಪಿಸಿ ಗೋಳಿಡುವಂತೆ ಅದೂ ನನ್ನನ್ನು ಶಪಿಸಿ ಗೋಳಿಡುತ್ತದೆ. ಅದರಿಂದ ತನಗೆ ಒದುವ್ವದಾದರೂ ಏನು....?" ಅನಂತಯಾತನೆ ಪಡಬಹುದಾಗಿದ್ದ ಇದೊಂದು ಜೀವವಾದರೂ ಸುಖವಾಗಿರಲಿ!.... ನನ್ನ ದುರ್ದೈವೀ ಬಳಗದ ಸಂಖ್ಯೆ ಹೆಚ್ಚುವುದು ತಪ್ಪಿತಲ್ಲ!! ನನ್ನ ಯಾತನೆ ನಿನಗೆ ಯಾಕೆ ಹೂವೇ?.... ನೀನಾದರೂ ಸುಖವಾಗಿರು....!!...."

ಬ್ರಾಹ್ಮಣನ ಕಣ್ಣಿಂದ ಕಂಬನಿ ದಳದಳ ಸುರಿಯಹತ್ತಿತು. ನರ-ನರಗಳಲ್ಲಿ ತುಂಬಿ ಸೂಸುತ್ತಿರುವ ವಿಷ ಬಸಿಯುತ್ತಿರುವಂತೆ ಎನ್ನಿಸಿತು. ಹುಣ್ಣಿನ ಕಿಲ್ಬಿಷ ಸೋರಿಹೋದಂತೆ ಬೆಂದ ಹೃದಯಕ್ಕೆ "ಹಾಯ್" ಎನ್ನಿಸಿತು. ದುಃಖವೆಲ್ಲ ತಾನಾಗಿ ಕಣ್ಣೀರಿನಲ್ಲಿ ಹರಿದು ಹೋಗಲೆಂದು ಆತ ಸುಮ್ಮನೆ ಕುಳಿತಿದ್ದ. ಬಿಸಿಲು ಇಳಿಯುತ್ತಿತ್ತು. ಸಂಜೆಯ ಹೂಬಿಸಿಲಿನಲ್ಲಿ ಇರುಳರಾಣಿ ಗಾಳಿ ಬೀಸಿದಂತೆ, ಅವನ ಅಂತರಂಗದಲ್ಲಿ ಅದೊಂದು ತರದ ಮಧುರಶಾಂತಿ ಇಳಿಯ ತೊಡಗಿತ್ತು. ಮನುಷ್ಯತ್ವಕ್ಕೇರಿದ ಮನುಷ್ಯಕೋಟಿಯಲ್ಲಿ ಆತನಿಗೆ ಸಿಕ್ಕದ ಶಾಂತಿ ಆ ಅವರೆಯ ಹೂವಿನ ಬಳಿಯಲ್ಲಿ ಸಿಕ್ಕುತ್ತಿರುವಂತೆ ಎನ್ನಿಸಿತು. ತಾಯಿಗೆ ನೋವಾಗಿರುವುದೆಂದು ತಿಳಿಯದ ಮಗು ಒಳ್ಳೇ ಉಲ್ಲಾಸದಿಂದ ನಗುತ್ತಿರುವಾಗ, ನಡುವೆಯೆ ತಾಯಿ ಬಹಳೇ ನೊಂದಿರುವಳೆಂದೂ, ಅಂತಹ ಪ್ರಸಂಗದಲ್ಲಿ ತಾನು ನಗಬಾರದಿತ್ತೆಂದೂ ತಿಳಿದಾಗ, ಸ್ವಲ್ಪ ತಿಳಿವಳಿಕೆಯಿದ್ದ ಮಗು ಮುಖ ಬಾಡಿಸಿಕೊಂಡು ಸುಮ್ಮನಾಗುವುದಿಲ್ಲವೆ? ಹಾಗೆಯೇ ಆ ಹೂವು ತಲೆ ಬಾಗಿದಂತೆ ಕಂಡಿತು. ಬ್ರಾಹ್ಮಣ ಅತ್ಯಂತ ಪ್ರೀತಿಯಿಂದ ಅದನ್ನು ಮುದ್ದಿಸಿದ್ದ: "ನಿಮ್ಮ ಪ್ರಪಂಚದಲ್ಲಿ ನೀವೆಲ್ಲಾ ಒಂದು ನಿಯಮಕ್ಕೆ ತಲೆಬಾಗಿ ನಡೆಯುತ್ತೀರಿ. ಅಂತೆಯೇ ನಿಮ್ಮಲ್ಲಿ ಯಾವ ತರದ ಅತ್ಯಾಚಾರಕ್ಕೆ ಎಡೆಯಿರುವುದಿಲ್ಲ. ಬುದ್ಧಿವಂತರೆಂದು ಮೆರೆಯುವ ನಮ್ಮಂತಹ ಸ್ವತಂತ್ರ ಮನುಷ್ಯರು, ನಿಮ್ಮಲ್ಲಿಗೆ ಬಂದು ಕೊಲೆಗಡುಕತನಕ್ಕೆ ಕೈ ಹಾಕಿದರೆ ಯಾರು ತಡೆಯಬೇಕು? ನಮ್ಮ ಬುದ್ಧಿ, ನಮ್ಮ ವಿವೇಕ, ನಮ್ಮ ದಯೆ, ನಮ್ಮನ್ನು ತಡೆಯದಿದ್ದರೆ, ನಮ್ಮ ಮನುಷ್ಯ ಜಾತಿಯಿಂದ ಉಪಯೋಗವಾದರೂ ಏನು? ಹಾಗಾದರೆ ಕೊನೆಗೊಮ್ಮೆ ನಮ್ಮ ಜಾತಿಯನ್ನೇ ಪ್ರಕೃತಿತಾಯಿ ನಾಶಮಾಡಲಿಕ್ಕಿಲ್ಲವೇ....?" ಬ್ರಾಹ್ಮಣನ ವೇದಾಂತ ಆ ಹೂವಿಗೆ ಎಷ್ಟರಮಟ್ಟಿಗೆ ತಿಳಿಯಿತೋ ದೇವರೇ ಬಲ್ಲ; ಆದರೆ ಬಹುಕಾಲದಿಂದ ಹಿಂಸೆ, ಅವಮಾನ, ಅಸಹ್ಯ ದುರ್ಲಕ್ಷ್ಯಗಳಿಂದ ಮನುಷ್ಯತ್ವವೇ ಬೆಂದು ಹೋದಂತಾದ ಆ ಬಡ ಜೀವದಲ್ಲಿ ಇದೀಗ ಮಾನವೀ ಭಾವನೆಗಳು ಜಾಗ್ರತವಾಗ ತೊಡಗಿದ್ದುವು. ನೊಂದು, ನೊಂದು, ಅನಂತ ಪರಿಯಲ್ಲಿ ಅಪ್ಪಳಿದು ಪ್ರಪಂಚದ ಬಗೆಗೆ ರುದ್ರ, ರುಕ್ಷ, ನಿರಾಶ ಭಾವನೆಯನ್ನು ತಳೆದ ಆ ಹೃದಯದಲ್ಲಿ ಸ್ನೇಹ, ಕರುಣೆಗಳ ಸಣ್ಣ ಹೊನಲೊಂದು ಸೆಲೆಯೊಡೆದಿತ್ತು. ಇಲ್ಲಿಯವರೆಗೆ ತನ್ನದೆಂದು ಕಟ್ಟಿಕೊಂಡ ಪ್ರಪಂಚ ದೂರವಾಗಿ, ಹೊಸದೊಂದು ಪ್ರಪಂಚದಲ್ಲಿ ಅವನಿಗೆ ಪ್ರವೇಶ ದೊರೆತಿತ್ತು. ಮೊದಲಿನ ಪ್ರಪಂಚ ಆತನನ್ನು ಧಿಕ್ಕರಿಸಿತ್ತು. ಅಲ್ಲಿ ಅವನು ಸರ್ವಸುಖಗಳಿಗೂ ಎರವಾಗಿದ್ದ. ಹಸಿದು ಕಂಗಾಲನಾಗಿದ್ದ. ಹಿಂದಿನ ಯಾವುದೋ ಪಾಪಕ್ಕಾಗಿ, ಅದು ಅತ್ಯಂತ ಹೀನವಾದ ಪಾಪವೆಂದು, ಪ್ರಪಂಚ ಆತನನ್ನು ಬಹಿಷ್ಕರಿಸಿತ್ತು. ಆ ಪ್ರಪಂಚದಲ್ಲಿ ಪುನಃ ಸ್ಥಾನ ಪಡೆಯಲು ಆತ ಅತ್ಯಂತ ಕಷ್ಟಪಟ್ಟಿದ್ದ. ಆ ಪ್ರಪಂಚವನ್ನು ಬಿಟ್ಟರೆ ಇಡಿ ಬ್ರಹ್ಮಾಂಡವೇ ಅವನಿಗೆ ಶೂನ್ಯವಾಗಿ ಕಂಡಿತ್ತು. ದೈಹಿಕಯಾತನೆಗಳಿಗಿಂತ ಮಾನಸಿಕ ಯಾತನೆ ಅಸಹನೀಯವಾಗಿತ್ತು. ಅದೊಂದು ಮೋಹ ಅವನನ್ನು ಆವರಿಸಿತ್ತು. ಇಂದು ಅದೆಲ್ಲದರಿಂದ ಆತ ಮುಕ್ತನಾದ! ಆ ಪ್ರಪಂಚದ ಆಸೆಯನ್ನೇ ಬಿಟ್ಟ. ಅಲ್ಲಿ ಏನು ಮಾಡಿದರೂ ತನಗೆ ಸ್ಥಾನ ಸಿಕ್ಕುವುದೇ ಅಶಕ್ಯವಾಗಿದ್ದರೆ, ಅದಕ್ಕಾಗಿ ತನ್ನ ಸರ್ವನಾಶವನ್ನೇಕೆ ಮಾಡಿಕೊಳ್ಳಬೇಕು?" ಈ ನಿಷ್ಪಾಪ ಹೂವನ್ನು ಹಿಚುಕಿ ಬಿಟ್ಟಿದ್ದರೆ ಅದು ಸತ್ತು ಹೋಗುತ್ತಿರಲಿಲ್ಲವೇ? ಹಾಗೇ ನಾನೂ ಹಸಿವೆಯಿಂದ ಬಳಲಿ ಮಣ್ಣುಗೂಡಿ ಹೋಗಬೇಕಾಗಿದ್ದರೆ, ಸಂತೋಷದಿಂದ ಮಣ್ಣಾಗಿ ಹೋಗುತ್ತೇನೆ. ಯಾರಾದರೂ ಪ್ರೀತಿಸಲೆಂದು ಹಂಬಲಿಸಬೇಕೇ? ನಾನು ಎಲ್ಲರನ್ನೂ ಪ್ರೀತಿಸುತ್ತೇನೆ.... ಮುದ್ದು ಮುದ್ದು ಹೂವೇ, ನಿನ್ನನ್ನೂ ಪ್ರೀತಿಸುತ್ತೇನೆ....ನೀನೂ ನನ್ನನ್ನು ಪ್ರೀತಿಸುವುದಿಲ್ಲವೇ....? ಪುಟ್ಟ ಪಪ್ಪಾss.... ನಾನು ನಿನ್ನ ಪ್ರಪಂಚದವನು! ನಿನ್ನ ಸಂಗಡ ನಾನಿರುವೆನು! ಪಪ್ಪಾss....ಪಪ್ಪಾss....ಪಪ್ಪಾss......." ಆ ಬಡ ಬ್ರಾಹ್ಮಣನ ಹೃದಯ ಮಧುರತೆಯಿಂದ ತುಂಬಿ ತುಳುಕಿತು. ಕಣ್ತುಂಬ ಆನಂದ ತುಳುಕಾಡಿತು. ಅವನ ಅಂಗಾಂಗಗಳೆಲ್ಲ ಆ ಅಮೃತಬಿಂದುಗಳಲ್ಲಿ ತೊಯ್ದು ಹೋದುವು. ಆತ ಆ ಮುದ್ದು ಹೂವಿಗೆ ಮೃದುವಾಗಿ ಲಟಲಟನೆ ಮುದ್ದುಕೊಟ್ಟ.

ಜರ್ಮನಿಯ ಕಾರ್ನಿವ್ಹಾಲ್ ಹಬ್ಬದ ಸಂಭ್ರಮ

(ಪರದೇಶದಿಂದ ಬಂದ ಒಂದು ಪತ್ರ)

ಬರೆದವರು: ಶ್ರೀ. ಎಂ. ಕೆ. ವರಾಹಮೂರ್ತಿ, ಬಿ. ಎಸ್‌ಸಿ. (ಟೆಕ್.) ಎಂ. ಎಸ್‌ಸಿ. ಪಶ್ಚಿಮ ಜರ್ಮನಿ

ಹೋಳಿಯ ಹಬ್ಬಕ್ಕಾಗಿ ಮೂಗುಮುರಿಯುವ ಮಡಿವಂತರೂ ಸುಧಾರಕರೂ ನಮ್ಮಲ್ಲಿ ಬೇಕಾದಷ್ಟು ಜನರು ಕಾಣುವರು. ಪ್ರಾಚೀನ ಸಂಸ್ಕೃತಿಯನ್ನೊಳಗೊಂಡ ಪ್ರತಿಯೊಂದು ರಾಷ್ಟ್ರದಲ್ಲಿಯೂ ಆ ಮಾದರಿಯ ಹಬ್ಬಗಳಿವೆಯೆಷ್ಟೇ ಅಲ್ಲ; ಜನರೆಲ್ಲ ಆ ಹಬ್ಬದ ಸಂಪ್ರದಾಯಗಳನ್ನು ಮನವಾರೆ ಪಾಲಿಸುತ್ತಾರೆ. ಜರ್ಮನಿಯ ಕಾರ್ನಿವ್ಹಾಲ್ ಹಬ್ಬವೆಂದರೆ, ನಮ್ಮ ಹೋಳಿಯ ಹಬ್ಬವೆಂದೇ ಹೇಳಬಹುದು.

ಮಾಯನ್ಸ್
೨೩—೮—೧೯೫೪

ಮಾತೋಶ್ರೀಯವರಿಗೆ ವಂದನೆಗಳು.

ಓಲೆ ತಲುಪಿತು. ಮೊದಲಿನ ಓಲೆಯಲ್ಲಿ, 'ಮಾಯಿನ್ಸಿನ ಜನರು ತುಂಬ ರಸಿಕರು; ಅಲ್ಲದೆ ಮನೋರಂಜಕ ಕಾರ್ಯಕ್ರಮದಲ್ಲಿ ಬಹಳ ಉತ್ಸಾಹಭರಿತರು' ಎಂದು ನಿಮಗೆ ತಿಳಿಸಿದ್ದೆ. ನೆನಪಿರಬಹುದು. ಇದಕ್ಕೆ ಮುಖ್ಯ ಉದಾಹರಣೆ ಇಲ್ಲಿಯ "ಕಾರ್ನಿವ್ಹಾಲ್" ಹಬ್ಬ. ಪುರಾತನ ಕಾಲದಿಂದ "ರ್‍ಹಾಯಿನ್" ನದಿಯ ದಂಡೆಗುಂಟವಷ್ಟೇ ಇದು ಬಹಳ ಪ್ರಸಿದ್ಧವಾದ (Popular) ಹಬ್ಬವಾಗಿತ್ತು. ಎರಡನೆಯ ಜಾಗತಿಕ ಮಹಾಯುದ್ಧದ ತರುವಾಯ, ಉಳಿದ ಪಟ್ಟಣಗಳಲ್ಲಿಯೂ ಈ ಹಬ್ಬ ಸಾವಕಾಶವಾಗಿ ಪಸರಿಸಹತ್ತಿದೆ; ಮತ್ತು ಜನರನ್ನೆಲ್ಲ ಆಕರ್ಷಿಸಹತ್ತಿದೆ.

"ಕಾರ್ನಿವ್ಹಾಲ್" ಶಬ್ದ ಲ್ಯಾಟಿನ್ ಭಾಷೆಯದು. ಈ ಶಬ್ದದ ಅರ್ಥ: "ಎಲೋ ಮಾನವನೇ, ಸುಖಿಯಾಗಿ ಬಾಳು" ಎಂದಿದೆ. ಈ ಶಬ್ದಾರ್ಥವನ್ನು ರೂಢಿಯಲ್ಲಿ ತರಲು "ರ್‍ಹಾಯಿನ್"ನ ಜನರು ಬಹಳವಾಗಿ ಪ್ರಯತ್ನಿಸಿದ್ದಾರೆ; ಬಹಳ ಮಟ್ಟಿಗೆ ವಿಜಯಿಗಳಾಗಿದ್ದಾರೆ. ಇದು ನವ್ಹೆಂಬರ್ ೧೧ನೆಯ ತಾರೀಖಿನ ದಿವಸ ರಾತ್ರಿ ಹನ್ನೊಂದು ಘಂಟೆಗೆ ೧೧ ನಿಮಿಷ ೧೧ ಸೇಕಂಡಿಗೆ ಪ್ರಾರಂಭವಾಗುತ್ತದೆ. ಫೆಬ್ರುವರಿ ಕೊನೆಯ ಭಾಗದಲ್ಲಿಯಾಗಲಿ ಅಥವಾ ಮಾರ್ಚ್ ತಿಂಗಳ ಮೊದಲನೆಯ ವಾರದಲ್ಲಿಯಾಗಲಿ ಬರುವ "Rosen Montag" ದಿನ ಕಾರ್ನಿವ್ಹಾಲದ ರಾಜನ ಮೆರವಣಿಗೆಯಿಂದ ಕೊನೆಗಾಣುತ್ತದೆ. ಅಂತೂ ನವ್ಹೆಂಬರ್ ೧೧ನೆಯ ತಾರೀಖಿನಿಂದ ಮಾರ್ಚಿಯವರೆಗೆ, ಮೂರು-ಮೂರುವರೆ ತಿಂಗಳು ಮನೋರಂಜಕ ಕಾರ್ಯಕ್ರಮಗಳ ಸುರಿಮಳೆಯೇ ಸುರಿಮಳೆ. ಪ್ರತಿ ಶನಿವಾರ, ಆದಿತ್ಯವಾರ ಸಂಜೆಯಲ್ಲಿ ಕುಣಿಯುವ (Ball dances) ಕಾರ್ಯಕ್ರಮಗಳು! ತರುಣ-ತರುಣಿಯರು ಬೇರೆ ಬೇರೆ ವೇಷಗಳಲ್ಲಿ ಬರುತ್ತಾರೆ. ಒಬ್ಬರು ರೋಮನ್ ಕಾಲದ ರಾಜನ ವೇಷವನ್ನು ಧರಿಸಿದರೆ, ಮತ್ತೊಬ್ಬರು ಅರಬಸ್ತಾನದ ಅರೇಬಿಯನನ ವೇಷವನ್ನು ಧರಿಸಿರುತ್ತಾರೆ. ಒಬ್ಬರು ಜಪಾನಿನ ಜನರ ವೇಷದಿಂದ ಬಂದರೆ, ಇನ್ನೊಬ್ಬರು "ಮಹಾರಾಜರ" ವೇಷದಿಂದ ಬರುತ್ತಾರೆ. ಒಬ್ಬರು ಆಫ್ರಿಕಾದ "Mao Mao" ವೇಷವನ್ನು ಧರಿಸಿದರೆ, ಮತ್ತೊಬ್ಬರು ಟ್ರೆನಿದಾರದ ಅಡವಿಯ ಮನುಷ್ಯನಾಗಿ ಬರುತ್ತಾರೆ. ಹೀಗೆಯೇ ಈ ದಿನಗಳ ಕಾರ್ಯಕ್ರಮದಲ್ಲಿ ಅನೇಕ ತರದ ವೇಷಗಳ ಮನೋರಂಜನೆ, ಅಲ್ಲದೆ ಚಿಕ್ಕಪುಟ್ಟ ನಾಟಕಗಳು, ಹಾಡುಗಳು ಇತ್ಯಾದಿ ಮನೋರಂಜಕ ಕಾರ್ಯಕ್ರಮಗಳು! ಈ ದಿನಗಳು ತರುಣ-ತರುಣಿಯರಿಗೆ ಯೋಗ್ಯವಾದ ದಿನಗಳು. ಒಬ್ಬರನ್ನೊಬ್ಬರು ಕಂಡು, ಮಾತನಾಡಿ ತಿಳಿದುಕೊಳ್ಳುವ ದಿನಗಳು. ಹೊಸ ಸಂಬಂಧವನ್ನು ಬೆಳೆಸಲು ಸುಸಂಧಿ. ಹಳೆಯ ಸಂಬಂಧಿಯನ್ನು ಗಟ್ಟಿಯಾಗಿ ಮಾಡಲು ಒಳ್ಳೆಯ ಅನುಕೂಲತೆಯ ದಿನಗಳು. ಈ ಹಬ್ಬದ ಮಧ್ಯದ ದಿನಗಳೆಂದರೆ ಜನವರಿ ತಿಂಗಳು. ಮೇಲೆ ಹೇಳಿದ ಹಾಗೆ, ಕೊನೆಯ ದಿನ "Rosen montag" ಈ ದಿನ, ಫೆಬ್ರುವರಿಯ ಕೊನೆಯ ವಾರದಲ್ಲಿಯಾಗಲಿ ಅಥವಾ ಮಾರ್ಚ್ ತಿಂಗಳ ಮೊದಲನೆಯ ವಾರದಲ್ಲಿಯಾಗಲಿ ಬರುತ್ತದೆ. ಪ್ರತಿವರುಷ ಈ ದಿನವು ಬದಲಾಗುತ್ತದೆ. ಈ ದಿನ "ಕಾರ್ನಿವ್ಹಾಲ್" ರಾಜನ ಮೆರವಣಿಗೆ. ಈ ಹೊತ್ತು, ಈ ಹಬ್ಬದ ಪರಮಾವಧಿ. ಪಟ್ಟಣದ ದೊಡ್ಡ ದೊಡ್ಡ ರಸ್ತೆಗಳಲ್ಲಿ ಈ ಮೆರವಣಿಗೆ ಹಾಯ್ದುಹೋಗುತ್ತದೆ. ಬೆಳಗಿನ ೧೦ ಗಂಟೆಯಿಂದ ಸಂಜೆಯ ೮ ಗಂಟೆಯವರೆಗೆ ನಡೆಯುತ್ತದೆ. ಮರುದಿನ, ಜನರು "ರ್‍ಹಾಯಿನ್" ನದಿಗೆ ಹೋಗಿ ತಮ್ಮ ತಮ್ಮ ದುಡ್ಡಿನ ಚೀಲಗಳನ್ನು

ಳಿಪುಕೊಂಡು ಬರುತ್ತಾರೆ. ಈ ಹಬ್ಬಕ್ಕೆಂದು ಕೂಡಿಟ್ಟ ದುಡ್ಡು ಸಲದ ಹಬ್ಬಕ್ಕೇ ಮುಗಿಯಿತು; ಮುಂದಿನ ಸಲದ ಹಬ್ಬಕ್ಕೆ ಸದಾಗಿ ಕೂಡಿಸಲು ಚೀಲಗಳನ್ನು ಸ್ವಚ್ಛಮಾಡುತ್ತಾರೆ.

ಈ ಹಬ್ಬಕ್ಕೆ ಎರಡು ಕಾರಣಗಳನ್ನು ಕೊಡುತ್ತಾರೆ. ಮೊದ-ಯದು ಧಾರ್ಮಿಕ ಕಾರಣ. ಎರಡನೆಯದು ಭೌಗೋಲಿಕ ರಣ. ಧಾರ್ಮಿಕ ಕಾರಣವೆಂದರೆ, Rosen Montagದ ತರು-ಯ ಏಸುಕ್ರಿಸ್ತನ 'ಕ್ರುಸಿಫಿಕೇಶನ್' ಆದುದರಿಂದ ಉಪವಾಸದ ಗಳು, ದುಃಖದ ದಿನಗಳು. ಕುಣಿಯುವುದು, ಮನೋರಂಜಕ ರ್ಯಕ್ರಮಗಳಿಗೆ (ಶಬ್ಬಗಳಲ್ಲಿ) ಎಲ್ಲವೂ ನಿರ್ಬಂಧ. ಆದುದರಿಂದ ವಿದ್ದಷ್ಟು ಈ ಪೂರ್ವಭಾಗದಲ್ಲಿ ಸುಖಪಡುವುದು.

ಭೌಗೋಲಿಕ ಕಾರಣವೆಂದರೆ, ಚಳಿಗಾಲವು ಹೋಗಿ ವಸಂತ ತುವು (ಫೆಬ್ರುವರಿ ಕೊನೆ— ಚಳಿಗಾಲದ ಅಂತ್ಯ— ಮಾರ್ಚಿಯಲ್ಲಿ ವಸಂತಋತು) ಕಾಲಿಡುವುದರಿಂದ, ಈ ಋತುವಿನ ಬದಲಾವಣೆ-ಯನ್ನು celebrate ಮಾಡುವುದರ ಸಲುವಾಗಿ ಈ ಹಬ್ಬದ ಪರಮಾವಧಿ ಮಾರ್ಚಿಯಲ್ಲಿ ಬರುತ್ತದೆ. ಮಾಯಿನ್ಸಿನಲ್ಲಿ ಒಂದೇ ಅಲ್ಲದೆ, ಜರ್ಮನಿಯ ಮುಖ್ಯ ಮುಖ್ಯ ಪಟ್ಟಣಗಳಾದ "ಡ್ಯುಶೆಲ್-ಡೊರ್ಫ್", "ಕಲೋನ್" ಮತ್ತು "ಮುನ್‌ಶಿನ್"ಗಳಲ್ಲಿಯೂ ಇದೇ ರೀತಿಯಾಗಿ, ವೈಭವದಿಂದ ಜರುಗುತ್ತದೆ.

ಈ ಹಬ್ಬವನ್ನು ಕೂಲಂಕಷವಾಗಿ ಪರೀಕ್ಷಿಸಿದಲ್ಲಿ "ಕಾರ್ನಿವ್ಹಾಲ್ ಹಬ್ಬ ನಮ್ಮ ಹೋಳಿಯ ಹಬ್ಬ"ಎಂದರೆ ಅತಿಶಯೋಕ್ತಿಯಾಗ-ಲಾರದು. ಕಾರ್ನಿವ್ಹಾಲ್ ಹಬ್ಬ, ಹೋಳಿಯ ಹಬ್ಬಕ್ಕಿಂತಲೂ ಒಂದು ತೂಕ ಹೆಚ್ಚು ಎನ್ನಬಹುದು

ಈ ಕಾರ್ನಿವ್ಹಾಲ್ ಹಬ್ಬವಲ್ಲದೆ ಇಲ್ಲಿ ಇನ್ನೂ ಎಷ್ಟೋ ಧಾರ್ಮಿಕ ಹಬ್ಬಗಳಿವೆ. ಅವುಗಳನ್ನು ಆಗಾಗ ತಿಳಿಸುತ್ತೇನೆ.

ಹಿರಿಯರಿಗೆ ನಮಸ್ಕಾರಗಳು.

ಇತಿ ನಿಮ್ಮ ಮಗ,

ಮಧ್ವೇಶ

ಪುಣೆಯಲ್ಲಿ ನಮ್ಮ ಏಜಂಟರು:

ಶ್ರೀ. ಎನ್. ಬಿ. ಮಠಕರ

೭೩ ರವಿವಾರಪೇಠ, ಪುಣೆ ೨

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) **ಶ್ರೀ. ಭುಜೇಂದ್ರ ಮಹಿಷವಾಡಿ**	೧– ೮–೦
ಬಾಳ-ಬಂಡಿ (ಕವನಸಂಗ್ರಹ) **ಶ್ರೀ. ಬಾಳು ಬಿ. ಉಪಾಧ್ಯೆ**	೦–೮–೦
ಮೂಲ ಶಿಕ್ಷಣದ ಮೌಲ್ಯಮಾಪಣ **ಶ್ರೀ. ಮಿರ್ಜಿ ಅಣ್ಣಾರಾಯ**	೦–೧೨–೦
ಭರತೇಶನ ನಾಲ್ಕು ಚಿತ್ರಗಳು **ಶ್ರೀ. ಮಿರ್ಜಿ ಅಣ್ಣಾರಾಯ**	೧– ೪–೦
ಶ್ರೀ ಶಾಂತಿಸಾಗರ	೦– ೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೊ. ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

ಇಲ್ಲಿ ಹೇಳಬೇಕಾದ ಒಂದು ಮಾತು

ಇತ್ತೀಚೆಗೆ ಬೇರೆ ಬೇರೆ ಕಾರಣಗಳಿಂದ ಕನ್ನಡಿಗರೂ ವಿದೇಶಗಳಿಗೆ ಸಾಕಷ್ಟು ಜನರು ಹೋಗಿದ್ದಾರೆ; ಹೋಗಲಿದ್ದಾರೆ. ಅವರೆಲ್ಲ ಬರಿ ಹೋಗಿ-ಬರುವ ತಮ್ಮ ವೈಯಕ್ತಿಕ ಕಾರಣದ ಕಡೆಗಷ್ಟೇ ಲಕ್ಷ್ಯವನು ಕೊಡದೆ, ತಾವು ಹೋದ ಪ್ರದೇಶಗಳ ಪರಿಚಯವನ್ನೂ ಜನಜೀವನದ ವಿವಿಧಚಿತ್ರಗಳನ್ನೂ ಬರೆಯುತ್ತಿದ್ದರೆ, ಅದೊಂದು ಕನ್ನಡ ಸಾಹಿತ್ಯದ ಸೇವೆಯನ್ನೇ ಮಾಡಿದಂತಾಗುವುದು. ಇಂದು ಕಲ್ಪಿತಕತೆ.ಕಾದಂಬರಿ-ಗಳಿಗಿಂತ, ಪ್ರದೇಶ-ಜನಜೀವನ ಪರಿಚಯಗಳ ವಾಸ್ತವ ಪ್ರಬಂಧಗಳು ಜನರಿಗೆ ಹೆಚ್ಚಾಗಿ ಬೇಕಾಗಿವೆ. ಬರೆಯುವವನ ಕೌಶಲ್ಯದಿಂದ ಆ ಪ್ರಬಂಧಗಳಲ್ಲಿ ಒಳ್ಳೆಯ ಸಾಹಿತ್ಯಿಕ ಗುಣವೂ ಬರಬಲ್ಲದು. ಇಲ್ಲವಾದರೆ ಗೊತ್ತಿಲ್ಲದ ಪ್ರದೇಶದ ಮತ್ತು ಜನರ ಪರಿಚಯದ ಕುತೂಹಲ ಪೂರ್ತಿಯಂತೂ ಇದ್ದೇ ಇರುವುದು.

ಶ್ರೀಮಾನ್ ವರಾಹಮೂರ್ತಿಯವರು ಜಯಂತಿಗಾಗಿ ಈ ಕಾರ್ಯ ವನ್ನು ಸ್ವಯಂಸ್ಫೂರ್ತಿಯಿಂದ ಮಾಡಲು ತೊಡಗಿದುದು ಸಂತೋಷದ ಸಂಗತಿ. ಇವರಂತೆಯೆ ವಿದೇಶಗಳಲ್ಲಿರುವ ಬೇರೆ ಮಹನೀಯರೂ ತಮ್ಮ ಅನುಭವಗಳನ್ನು ಬರೆದು ಕಳುಹಿದರೆ, ಜಯಂತಿಯಲ್ಲಿ ಅವಶ್ಯ-ವಾಗಿ ಅವುಗಳನ್ನು ಪ್ರಕಟಿಸಲಾಗುವುದು. ಹಣಕೊಟ್ಟು ಬರೆಯಿಸುವ ಸಾಮರ್ಥ್ಯ ಜಯಂತಿಗಿಲ್ಲ. ಅಂತಹ ಸಾಮರ್ಥ್ಯವನ್ನು ತಂದುಕೊಳ್ಳು-ವುದಕ್ಕೆ ನಾಡಿನ ಒಳ್ಳೊಳ್ಳೆಯ ಲೇಖಕರೆಲ್ಲರೂ ಜಯಂತಿಯ ಕಡೆಗೆ ಪ್ರೀತಿ-ವಿಶ್ವಾಸಗಳ ದೃಷ್ಟಿಯನ್ನು ಹರಿಸಬೇಕಾಗಿ ಬೇಡಿಕೆ.

— **ಸಂಪಾದಕರು**

ಕಣ್ಣುಮುಚ್ಚಾಲೆ

(ಒಂದು ದೃಶ್ಯ)*

ಬರೆದವರು : ಶ್ರೀ. ವಿ. ಎಂ. ಇನಾಂದಾರ್, ಎಂ. ಎ. ಧಾರವಾಡ

— ಪಾತ್ರವರ್ಗ: —

ಸುಧಾ (೨೨)	ರಮೇಶ (೨೬)	ಆಧುನಿಕ ವಿದ್ಯಾವಂತ ಯುವಕ-ಯುವತಿಯರು
ಮಂದಾಕಿನಿ (೨೪)	ವಾಸುದೇವರಾಯ (೨೭)	
	ಗಂಗವ್ವ (೪೦)	ಆಳುಮಗಳು

[ತೆರೆಯು ಮೇಲಕ್ಕೆದ್ದಾಗ ನಮ್ಮ ಕಣ್ಣಿಗೆ ಬೀಳುವುದು ಒಂದು ಸಾಮಾನ್ಯ ಮನೆತನದ ಆದರೂ ಸುಧಾರಿಸಿದ ಪಡಸಾಲೆ. ವಿಶೇಷ ಆಡಂಬರವಿಲ್ಲದಿದ್ದರೂ ಹೊಸರೀತಿಯಲ್ಲಿ ಸಜ್ಜಿತವಾಗಿದೆ. ನಡುವೆ ಒಂದು ಸೋಫಾ. ಎಡಬಲದಲ್ಲಿ ಎರಡು ಕುರ್ಚಿಗಳು. ಒಂದು ಮೂಲೆಯಲ್ಲಿ ಟೀಪಾಯ್— ಅದರ ಮೇಲೆ ಬಾಡಿಹೋದ ಹೂಗಳನ್ನು ಹೊತ್ತ ಹೂದಾನಿ. ಎದುರಿನ ಗೋಡೆಯ ಮೇಲೆ ಒಂದೆರಡು ಚಿತ್ರಗಳು-ಚಿತ್ರತಾರೆಯರವು. ಅವುಗಳ ಬದಿಯಲ್ಲಿ ಒಂದುಕಡೆ ಒಂದು ಟೇನಿಸ್‌ರಾಕೆಟ್-ಇನ್ನೊಂದು ಕಡೆಯಲ್ಲಿ ಒಂದು ಬ್ಯಾಡ್‌ಮಿಂಟನ್ ರಾಕೆಟ್. ರಂಗದ ಮಧ್ಯದಲ್ಲಿ-ಒಂದು ಕಿಟಿಕಿ. ಬಲಕ್ಕೆ ನಡುಮನೆಗೆ ಹೋಗುವ ಬಾಗಿಲು. ಎಡಕ್ಕೆ ಬೀದಿಗೆ. ತೆರೆ ಸರಿದಾಗ ರಂಗಭೂಮಿಯಲ್ಲಿ ಯಾರೂ ಇರುವುದಿಲ್ಲ. ಸಮಯ ಸಂಜೆಯ ಐದೂವರೆಯ ಸುಮಾರು. ಎಲ್ಲವೂ ಸ್ತಬ್ಧವಾಗಿದೆ.

ಬಲಗಡೆಯಿಂದ ಸುಧಾ ಪ್ರವೇಶಿಸುತ್ತಾಳೆ. ಆಕೆ ಸುಮಾರು ೨೨ ವರ್ಷದ ಆಧುನಿಕಯುವತಿ. ಮದುವೆಯಾಗಿದೆ. ಮನೆಯೊಡತಿಯ ರೀತಿಯಲ್ಲಿ, ಆಳು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂಬ ಬೇಸರ ಮುಖದಲ್ಲಿದೆ. ಮೇಜಿನಮೇಲೆ ಕಾಗದ-ಪುಸ್ತಕಗಳು ಅಸ್ತವ್ಯಸ್ತವಾಗಿಬಿದ್ದುದನ್ನು ನೋಡಿ, ಆಕೆಯ ಬೇಸರ ಬೆಳೆಯುತ್ತದೆ. ಆ ಬೇಸರದ ದನಿಯಲ್ಲಿಯೇ—]

ಸುಧಾ— ಇವರಿಗೆ ಒಂದು ಸಾರೆ ಹೇಳಿದರೂ ಅಷ್ಟೇ, ನೂರು ಸಾರೆ ಹೇಳಿದರೂ ಅಷ್ಟೇ. ಇವರಿಗೆ ಹೇಳಿ ಹೇಳಿ-ಹೇಳಿದ ಮ್ಯಾಲೆ ಮುಂದ ನಿಂತು ಕೆಲಸಾ ಮಾಡಿಸಿಕೊಳ್ಳೋದರಕಿಂತಾ ಸ್ವತಃ ಮಾಡಿಬಿಡೋದು ಸರಳ. ಗಂಗವ್ವಾ—ಏ-ಗಂಗವ್ವಾ—

(ಒಳಗಿನಿಂದ ಗಂಗವ್ವ-ಆಳುಮಗಳು-ನಡುವಯಸ್ಸಿನವಳು-ಬರುತ್ತಾಳೆ. ಆಕೆಯ ಕೈಯಲ್ಲಿ ಮಡಿಮಾಡಿದ ಬಟ್ಟೆಯ ಮಡಿಕೆಗಳು ಇವೆ—)

ಗಂಗವ್ವ— ಯಾಕರಿ-ಬಾಯಾವ್ರ ?—

ಸುಧಾ— ಅಲ್ಲs, ನಿನಗೆ ಈ ಕೋಣೆಯ ಕಸಾಗೂಡಿಸಿ ಇಲ್ಲಿಯ ಸಾಮಾನೆಲ್ಲಾ ಶಿಸ್ತಾಗಿ ಇಡು ಅಂತ ಹೇಳಿ ಎಷ್ಟೋತ್ತಾಯ್ತು ? ಏನು ಮಾಡಲಿಕ್ಕೆ ಹತ್ತೀದಿ ?

ಗಂಗವ್ವ— ಅಯ್ ನನ್ನ ಶಿವನ ? ಕಸಾ ಉಡಗಾಕಂತ ಕಸಬರಿಗಿ ತಗೊಂಡು ಬಂದಾಗ ನೀವೇ ಹೇಳಿದಿರಲ್ಲರೀ ಬಾಯಾವ್ರ ಮೊದಲು ಹೋಗಿ ಆ ಅರಿವೀ ತೊಗೊಂಡು ಬಾಂs ಅರಿವಿ ತಾ ಅಂದ್ರಿ.... ಅರಿವಿ ತರಾಕ ಹೋದ್ನಿ. ಇಲ್ಲಾಂದ್ರ ಕಸಾ ಹೊಡತಿದ್ನಿರಿ—

ಸುಧಾ— ಮೊದಲು ಅರಿವಿ ತಾ ಅಂತ ಹೇಳಿದೆನೆ ನಾ ?

ಗಂಗವ್ವ— ಹೌದರಿ-ಬಾಯಾವ್ರ-ಹಾಂಗ ಹೇಳಿದಿರಿ ಅಂತs—

ಸುಧಾ— (ಇರಬಹುದೆಂದು ನೆನಪಾಗಿ) ಇರಲಿ ಹೋಗು. ನನಗಂತೂ ಯಾರಾದರೂ ಊರಿಂದ ಬರತಾರಂದ್ರ, ತಲೀನೆ ಜಾಗಾದ ಮ್ಯಾಲೆ ಉಳಿಯೋದಿಲ್ಲ—

ಗಂಗವ್ವ— ಊರಿಂದ ಬರತಾರರಿ ? ಯಾರರಿ ಬಾಯಾವ್ರ ? ಸಾಹೇಬರ ಅವ್ವಾವ್ರ ಬರ್ತಾರೇನ್ರಿ ?

ಸುಧಾ— ಸಾಕು,-ಹೋಗುs-ಏನಾರೆ ಮಾತಾಡಬ್ಯಾಡ ನೀನು. ಹೋದ ಸಾರೆ ಹೀಂಗೇ ಏನೋ ಅಂದಿ-ಮುಂದ ಮೂರು ದಿನದಾಗ ಬಂದೇ ಬಿಟ್ಟರು-ನೋಡಿದೆಯಲ್ಲ.... ಎಷ್ಟು ರಂದಿ ರಾಮಾಯಣ ಆಗಿಹೋಯ್ತು ?-ಇರಲಿ ಹೋಗು-ಮೊದಲು ಆ ಅರಿವೀ ಎಲ್ಲಾ ತಗದಿಟ್ಟು, ಇಲ್ಲೀ ಎಲ್ಲಾ ಸಾಮಾನು ಶಿಸ್ತಾಗಿ ಹಚ್ಚಿಡು !

ಗಂಗವ್ವ— ಹೂಂ-ರಿ. ಬಾಯಾವ್ರ. (ಎಂದು ಒಳಗೆ ಹೊರಡುವಳು. ಅದೇ ಏನೋ ನೆನಪಾದಂತಾಗಿ) ಅಲ್ರೀ-ಮತ್ತ ಯಾರೋ ಬರತಾರ ಅಂದ್ರಿ-ಯಾರ ಬರತಾರರಿ ?

ಸುಧಾ— ನನ್ನ ಒಬ್ಬ ಗೆಳತಿ ಬರೋವಾಕಿ ಇದ್ದಾಳ.

ಗಂಗವ್ವ— ಇಂದೇ ಫೊಂಜಿಕೆ ಬರತಾರೇನ್ರಿ ?—

ಸುಧಾ— ಹೂಂ-ನs ! ಮತ್ತ ಮಾತು ಬೆಳಸಿಕೋತ ಇಲ್ಲೇ ನಿಂದರ ತೀಯಲ್ಲ ? ಐದೂವರಿ ಆಗಿಹೋಯ್ತು.-ಇವರ್ಯಾಕ ಬರಲಿಲ್ಲ ಇನ್ನೂ ? (ನಡುವಿನ ಕಿಟಿಕಿಯೊಳಗಿಂದ ಇಣಿಕಿ ಹೊರಗೆ ನೋಡಿ ಹಿಂದಿರುಗಿ) ಎಂದ ಏನಾದರೂ ಕೆಲಸ ಇರತ್ತದ, ಅಂದೇ ತಡಮಾಡಿ

* **ಸೂಚನೆ:— ಲೇಖಕರ ಅಪ್ಪಣೆಯಿಲ್ಲದೆ ಈ ದೃಶ್ಯವನ್ನು ಯಾರೂ ಪ್ರಯೋಗಿಸಕೂಡದು.**

ಮುಂದೆ

ಬರೋದು ಗಂಡಸರ ಚಟಾನೇ ಅಂತ ಕಾಣಿಸತದ–ಚಹಾದ ಎಸರು ಕುದೀಲಿಕ್ಹತ್ತಿ ಅರ್ಧಾ ತಾಸು ಆಯ್ತು. (ಒಳಗೆ ಹೋದ ಗಂಗವ್ವನನ್ನುದ್ದೇಶಿಸಿ) ಏ–ಗಂಗವ್ವಾ–ಆ ಸ್ಟೋವ್ ಒಂದಿಷ್ಟು ಸಣ್ಣದು ಮಾಡವ್ವಾ–ಇವರೇನು ಬರೋಹಾಂಗ ಕಾಣೋದಿಲ್ಲ. ಯಾವಾಗ ಬರತಾರ ಯಾರಿಗ್ಗೊತ್ತು—ಯಾರಾರೆ ಅಕಸ್ಮಾತ್ ಬರತಿರತಾರ, ಒಂದಿಷ್ಟು ಬಿಸ್ಕೀಟು ಗಿಸ್ಕೀಟು ಮನಿಯೊಳಗ ತಂದು ಇಡ್ರಿ ಅಂದರ, ಗವ್ಹರಮೆಂಟಿನವರು ಬಿಸ್ಕೀಟಿಗೊಂದು ಬ್ಯಾರೆ ಅಲಾವನ್ಸ್ ಕೊಟ್ಟರು ಅಂದರ,ಅಗಾವು ತಂದಿಡೋಣು ಅಂತಾರ! ಈಗ ಈಕಿ ಊರಿಂದ ಬಂದಕೂಡಲೆ–ಚಹಾದ ಜೋಡಿ ಏನು ಕೊಡಬೇಕು? ಅದಕ್ಕೇ ಒಂದಿಷ್ಟು ಪ್ಯಾಟ್ಯಾಗ ಹೋಗಬೇಕಾದಾಗ–ಇಂಥಾ ವ್ಯಾಳೇಕ್ಕಂತೂ ಹಟಾ ಹಿಡಿದವ ರ್ಹಾಂಗ ದೀಪಾ ಹಚ್ಚಿದಮ್ಯಾಲೇ ಬರತಾರ—ಗಂಗವ್ವಾ—ಒಳಗ ಹೋದಳು ಅಂದ್ರ ಈಕೆಯಂತೂ ಆ ಕಡೆನೆ ಗಪ್ಪ ಆಗಿ ಬಿಡತಾಳ. ಗಂಗವ್ವಾ– (ಗಂಗವ್ವ ಕಸಬರಿಗೆಯೊಂದಿಗೆ ಬರುವಳು) ಹುಂ–ಮೊದಲು ಇಲ್ಲಿಯ ಕಸಾ ತಗಿ. ಇದನ್ನೆಲ್ಲ ಬರೋಬರಿ ಇಡು. ತಿನ್ನಲಿಕ್ಕೆ ಮಾಡೋದನ್ನಾದರೂ ಮಾಡಿ ಇಟ್ಟು–ಬಿಡಲ್ಯಾ? ಬಂದಾಗ ಬರವಲ್ಲರ್ಯಾಕ— ಗಂಗವ್ವಾ–

ಗಂಗವ್ವ— ಏನ್ರಿ ಬಾಯಾವ್ರ–?

ಸುಧಾ— ಮತ್ತ ಇದು ನೋಡು. ಇವರು ಬಂದಕೂಡಲೆ ತಟ್ಟನೆ ಒಳಗ ಬಂದು ನನಗ ಹೇಳು!

ಗಂಗವ್ವ— ಯಾರರಿ? ಊರಿಂದ ಬರಾವ್ರೇನ್ರಿ?

ಸುಧಾ— ಊರಿಂದ ಬರಾವ್ರಲ್ಲs! ಇವರು, ಆಫೀಸಿನಿಂದ ಬರೋ ಹೊತ್ತು ಆಗೇದ. ಅವರು ಬಂದ ಕೂಡಲೆ– (ಸುಧಾ ಹೊರಟು ಹೋಗುವಳು.)

ಗಂಗವ್ವ— ಅಯ್ಯ ನನ್ನ ಶಿವನs. ಅದನ್ಯಾಕ ಹೇಳಬೇಕೊ? ಬಂದ ಕೂಡಲೆ ಬೂಟಗಾಲಿಲೆ ಅಡಿಗೀ ಮನೀಗೆ ಮೊದಲು ಹೋಗತಾನ ಮಾರಾಯ! (ಎಂದು ಸುಧಾ ಇಲ್ಲದ್ದನ್ನು ತಿಳಿದುಕೊಂಡೇ ಹೇಳುವಳು.)

[ಗಂಗವ್ವ ಕಸಗುಡಿಸಿ ಮೇಜಿನ ಮೇಲಿನ ಪುಸ್ತಕಗಳನ್ನು ಸರಿಯಾಗಿ ಇಡುವಾಗ ಗುಣು ಗುಣು ಹಾಡುತ್ತಿರುವಳು. ಒಂದೆರಡು ನಿಮಿಷಗಳಲ್ಲಿಯೆ ಬಾಗಿಲ ಸದ್ದು ಕೇಳಬರುತ್ತದೆ. ಅವಸರವಾಗಿ ಕೆಲಸವನ್ನು ಮುಗಿಯಿಸಿ "ಅವರs ಬಂದ್ಹಾಂಗ ಕಾಣತದ— ಬಾಯಾವ್ರ–ಬಂದರರಿ ಸಾಹೇಬ್ರು" ಎಂದು ಅಡಿಗೆಯ ಮನೆಯ ಕಡೆಗೆ ಕೂಗಿ ಹೇಳುವಳು. ಎಡಗಡೆಯಿಂದ ರಮೇಶ ಪ್ರವೇಶಿಸುತ್ತಾನೆ. ಸುಮಾರು ೩೬ ವಯಸ್ಸಿನ ಯುವಕ. ಅಚ್ಚುಕಟ್ಟಾಗಿ ಸೂಟುಬೂಟು ಧರಿಸಿದ ವ್ಯಕ್ತಿ. ಕೈಯಲ್ಲೊಂದು ವೃತ್ತಪತ್ರದ ಮಡಿಕೆ ಇದೆ. ರಮೇಶ ರಂಗದ ಮಧ್ಯಕ್ಕೆ ಬಂದು ಪೇಪರನ್ನು ಮೇಜಿನ ಮೇಲೆ ಎಸೆಯುವುದಕ್ಕೂ ಗಂಗವ್ವ ಒಳಗಡೆ ಹೋಗುವುದಕ್ಕೂ, ಸುಧಾ ಒಳಗಿನಿಂದ ಓಡುತ್ತ ಬರುವುದಕ್ಕೂ ಸರಿಬೀಳುತ್ತದೆ.]

ಸುಧಾ— ಬಂದಿರ್ಯಾ ಅಂತೂ– ಎಷ್ಟು ತಡಾಮಾಡೋದು ಅದು? ಈಗೀಂದೀಗ ಹೋಗಬೇಕಾಗೇದ. ಎಂದು ಹಾದೀ ನೋಡತೀರತವ ಅಂದಂತೂ ಬೇಕಂತೆ ತಡಾಮಾಡತೀರಿ– ಈಗೀಂದೀಗ ಹೋಗಲಿಕ್ಕೇ ಬೇಕು. ಇಲ್ಲಾ ಅಂದ್ರ ನಾ ಏನೂ ಕೇಳೋವಾಕಿ ಅಲ್ಲ– ಏ ಗಂಗವ್ವಾ– ಗಂಗವ್ವಾ (ಬಲಗಡೆ ತಿರುಗಿ) ಸ್ಟೋವ್ ಮ್ಯಾಲೆ ಹಾಲು ಇಟ್ಟೇದಿನಿ ಒಂದಿಷ್ಟು ಇಳಿಸಿಬಿಡು. (ರಮೇಶ ಕೋಟು ತೆಗೆಯಬೇಕೆನ್ನುತ್ತಿದ್ದುದನ್ನು ಗಮನಿಸಿ) ನೀವು ಕೋಟ ತಗೀನೇ ಬ್ಯಾಡ್ರಿ– ಆಗಲೇ ತಡಾ ಆಗಿ ಹೋಗಿಬಿಟ್ಟದ—

ರಮೇಶ— (ಈ ಗೊಂದಲ-ಗಡಿಬಿಡಿಯ ಅರ್ಥವಾಗದೆ) ಏನು– ಏನು– ಏನಿದು? ಏನು, ನಡೆಸಿದೀಯಾದರೂ ಏನು? ಮನೀಯೊಳಗಾದರೂ ಬಾ ಅಂತೀಯೊ? ಅಥವಾ—

ಸುಧಾ— ಈಗಾಗಲೆ ಆರು ಗಂಟೆಯಾಗಲಿಕ್ಕೆ ಬಂತು. ಇನ್ನು ನೀವು ಹೋಗುವವರು ಯಾವಾಗ ಬರುವವರು ಯಾವಾಗ—?

ರಮೇಶ— (ಏನೂ ತಿಳಿಯದೆ) ಎಲ್ಲಿ ಹೋಗೋದು? ಏನು ಕಥಿ? ಹೀಂಗ್ಯಾಕ ಮಾಡಲಿಕ್ಹತ್ತೀದಿ? ಆಗೇದಾವರೂ ಏನು ನಿನಗ?

ಸುಧಾ— ಏನೂ ಆಗಿಲ್ಲ. ಈಗೀಂದೀಗ ನೀವು ಪ್ಯಾಟಿಗೆ ಹೋಗಿ ಬರಬೇಕು—

ರಮೇಶ— ಹೋಗಿ ಬರಬೇಕು ಅಂತ ಹೇಳತೀ, ಅಷ್ಟೇ ಪುಣ್ಯ! ಹೋಗೇಬಿಡಿರಿ ಅಂತ ಹೇಳೋದಿಲ್ಲ! ಅಲ್ಲಾ—

ಸುಧಾ— ಅಲ್ಲ ಇಲ್ಲ– ಬೆಲ್ಲ ಇಲ್ಲ. ಹೋಗಲಿಕ್ಕೇ ಬೇಕು— ಇಲ್ಲ ಅಂದರ ನಾ ಏನೂ ಕೇಳೋವಾಕಿ ಅಲ್ಲ.

ರಮೇಶ— ಏನು ಮಾಡಲಿಕ್ಹತ್ತೀದಿ ಅಂಥಾದ್ದು? ಬೆಲ್ಲ ಇಲ್ಲಾದರ ಸಕ್ರೀ ಹಾಕು! ಇಂಥಾ ಪರಿ, ಆಫೀಸಿನಿಂದ ಬರತೀನೋ ಇಲ್ಲೋ, ಬಾಗಿಲದಾಗೇ ನಿಂತು ಬೆಲ್ಲಾ ತೊಗೊಂಡು ಬರ್ರಿ ಅಂತ—

(ರಮೇಶ ಏನೂ ತಿಳಿಯದೆ ಖುರ್ಚಿಯಲ್ಲಿ ಕುಳಿತುಕೊಳ್ಳುವನು. ಸುಧಾ ಪಕ್ಕದಲ್ಲಿಯೇ ಬಂದು ಕುಳಿತು—)

ಸುಧಾ— (ಮುನಿಸ್ಕೊಂಡು ಬೇಡಿಕೊಳ್ಳುವಂತೆ) ಒಂದಿಷ್ಟು ಭಡಕ್ಕನೆ ಹೋಗಿ ಬರಬಾರದ? ಹೀಂಗ್ಯಾಕ ಮಾಡತೀರಿ?

ರಮೇಶ— ನೀ ಹೀಂಗ ಯಾಕ ಮಾಡತೀದಿ– ಅದೇ ನನಗ ತಿಳೀವೊಲ್ಲದು– ಇಷ್ಟು ಅರ್ಜಂಟಾಗಿ ಬೆಲ್ಲ ಯಾತಕ್ಕ ಬೇಕಾಗೇದ?

ಸುಧಾ— ಬೆಲ್ಲ? ಬೆಲ್ಲಾ ತರಲಿಕ್ಕೆ ಯಾರು ಹೇಳಿದರು?

ರಮೇಶ— ಇದೇ ಈಗ ನೀನೇ ಅಂದೆಲ್ಲs ಮತ್ತ? ಹುಂ— ಅಲ್ಲ–ದಿದ್ದರ ಬಿಡವಲ್ಲದ್ಯಾಕ– ಈಗೇನು ಚಹಾ ಆದರೂ ಕೊಡತೀಯೊ ಅಥವಾ ಚಹಾನೂ ಪ್ಯಾಟೀಒಳಗೇ ತೊಗೋಬೇಕೊ?

ಸುಧಾ— ಅಯ್ಯ– ಚಹಾ ಮಾಡಿಟ್ಟು ಅರ್ಧಾತಾಸು ಆಯ್ತು. ಮಾಡಿಟ್ಟ ದಿವಸ ನೀವ್ಯಾಕ ಬಂದೀರಿ? ಗಂಗವ್ವಾ– ಆ ಚಹಾ ಒಂದಿಷ್ಟು ಸೋಸಿಗೊಂಡು ಬರತೀಯಾ?—

ರಮೇಶ— ಹುಂ, ಇದು ನೋಡು. ಇನ್ನು ಒಂದಿಷ್ಟು ಸಮಾಧಾನದಲೆ ಕೂಡು. ಸುಖದಿಂದ ಒಂದಿಷ್ಟು ಚಹಾ ಕುಡಿಯೋಣಂತ. ಆ ಮ್ಯಾಲ ಮತ್ತ ಇದ್ದs ಇರತದಲ್ಲ ಪ್ಯಾಟಿ-ಸಾಮಾನು! ಪ್ಯಾಟಿ ಎಲ್ಲಿ ಹೋಗೋದಿಲ್ಲ. ಸಾಮಾನಿನ ಸಲುವಾಗಿ ನೀ ನನ್ನ

ಓಡಿಸೋದನ್ನೂ ಬಿಡೋದಿಲ್ಲ— ಆರಾಮ ಆಗಿ ಚಹಾ ಕುಡಿಯೋತನಕಾ, ನಾಅಂತೂ ಈ ಜಾಗಾ ಬಿಟ್ಟು ಏಳೂದೇ ಇಲ್ಲ– ತಿಳೀತಿಲ್ಲೊ?

ಸುಧಾ— ಸಾಕುಬಿಡ್ರಿ– ಯಾವಾಗಲೂ ಹೀಂಗೇ ನೀವು. ಯಾರರೆ ಊರಿಂದ ಬರತಾರಂದ್ರ, ಮಂದೀ ಮನಿಯೊಳಗೆ ಎಷ್ಟು ಕುಣಕುಣದ ಮಾಡತಾರ ಗಂಡಸರು– ಆದರ ನಮ್ಮಲ್ಲೇನದ? ಯಾರರೆ ಬರತಾರಂದ್ರ —

ರಮೇಶ— (ತಿಳಿಯದೆ) ಈಗ ಯಾರು ಬರೋನವರು ಇದ್ದಾರ ನಮ್ಮಲ್ಲಿ?

ಸುಧಾ— ಯಾರಂದ್ರ ?–– ಅಯ್ಯ ನನ್ನ ಹಣೇಬಾರ?— ನಿಮಗ ಗೊತ್ತೇ ಇಲ್ಲಲ್ಲ? ನಿಮಗ ಗೊತ್ತು ಅದ– ಗೊತ್ತಿದ್ದೂ ಹೀಂಗ ಮಾಡಲಿಕ್ಹತ್ತೀರಿ ಅಂತ ನಾ ತಿಳಿದೀನಿ—

ರಮೇಶ— ಏನು ಗೊತ್ತಾಗೋದು?

ಸುಧಾ— ಹೌದು. ಅಂದಹಾಂಗ— ನೀವು ಆಫೀಸಿಗ ಹೋದಮ್ಯಾಲೆ ಬಂತು ಪತ್ರ—

ರಮೇಶ— ಇದು ನೋಡು– ಒಂದಿಷ್ಟು ಸಮಾಧಾನದಿಂದ ನನಗಷ್ಟು ತಿಳಿಯೋ ಹಾಂಗ ಮಾತಾಡತೀ ಏನು? ಇಲ್ಲಾಂದ್ರ ಪ್ಯಾಟಿ-ಯೊಳಗ ಹೋಗೋದರ ಬದಲಿ, ಬೆಳಗಾವಿ ರಸ್ತೆಯ ಡಾಕ್ಟರ ಕಡೇನೇ ಹೋಗತೇನಿ— ಯಾಕಂದರ ನಿನ್ನ ತಲಿ ಒಂದಿಷ್ಟು—

ಸುಧಾ— ನನ್ನ ತಲೀಗೆ ಏನೇನೂ ಆಗಿಲ್ಲ. ನೀವು ಆಫೀಸಿಗೆ ಹೋದ ಮ್ಯಾಲೆ, ನನ್ನ ಒಬ್ಬ ಗೆಳತಿಯ ಪತ್ರ ಬಂತು ಇವತ್ತು ಸಂಜೀನಾಗಿನ ಏಳೂವರೆ ಗಾಡೀಗೆ ಬರತೀನಿ ಅಂತ—

ರಮೇಶ— ಇವತ್ತು ಸಂಜೀನ್ಯಾಗ?

ಸುಧಾ— ಹೂಂ– ಹೂಂ– ಅದಕ್ಕೇ ಇಷ್ಟು ಗಡಿಬಿಡಿ–– ಆದರ ನಿಮಗೇನು ಆದರದು?

(ಗಂಗವ್ವ ಚಹಾದ ಟ್ರೇ ತಂದಿರಿಸುವಳು.)

ರಮೇಶ— ಅಲ್ಲ– ಗೆಳತಿ ಬರತಾಳಂತ ಈ ಪರಿ ಮನೀ ತಲಿಮ್ಯಾಲ ಇಟುಕೊಂಡು ಕುಣಿಯೋದ? ಇದೇ ಈಗ ಇನ್ನೂ ದೇವರೇ ಅಂತ ಆರು ಹೊಡದದ.

ಸುಧಾ— ಅದಕ್ಕೇ— ಆರು ಹೊಡದದ ಅಂತೇ ಗಡಿಬಿಡಿ. ನೀವು ಪ್ಯಾಟಿಯಿಂದ ಬಂದಮ್ಯಾಲೆ, ನಾನು ಸ್ಟೇಶನ್ನಿಗೆ ಹೋಗ-ಬೇಕು—

ರಮೇಶ— ಯಾಕ? ನಾ ಪ್ಯಾಟಿಗೆ ಹೋಗತೀನಿ– ನೀನು ಸ್ಟೇಶನ್ನಿಗೆ ಹೋಗು–

ಸುಧಾ— ಹೂಂ– ಚೆಲೋ ಅದ. ಅಂದ್ರ ಆಕೆ ಬಂದುಬಿಟ್ಟಮ್ಯಾಲೆ ನೀವು ಒಂಬತ್ತು ಗಂಟೆಕ್ಕ ಸಾಮಾನು ತಗೊಂಡು ಬರ್ರಿ— ಅಂದ್ರ ಆಕಿ ಎದುರಿಗೆ ನನ್ನದು ಚೆಲೋ ಫಜೀತಿ ಆಗತದ— ಅದರಾಗ ಆಕಿ ಅಂತೂ ಹ್ಯಾಂಗಿದ್ದಾಳ? ಒಂದು ಎಳಿ ಸಿಕ್ಕರ ಸಾಕು.... ಏನಾವರೂ ಟೀಕಾ ಮಾಡಲಿಕ್ಕೆ—

ರಮೇಶ— ಅಲ್ಲ? ಯಾರು ಆಕಿ ನಿನ್ನ ಗೆಳತಿ? ಇಷ್ಟು ಪರಿ ಹುಚ್ಚ ಆಗಲಿಕ್ಕೆ?

ಸುಧಾ— ನಿಮಗೇನು ಗೊತ್ತು? ನನ್ನ ಅಗದೀ ಜೀವಸ್ಯ ಕಂಠಸ್ಯ–

ರಮೇಶ— ಇರಲಿ ಬಿಡು. ಬರೇ ಜೀವಸ್ಯ ಕಂಠಸ್ಯ ಯಾಕ? ಕಂಠ ಉದರಸ್ಯನೂ ಇರಲಿ. ಆದರ ಯಾರು ಆಕೆ— ಅಂದೆ.

ಸುಧಾ— ನನ್ನ ಎಲ್ಲಾ ಗೆಳತೀಯರೇನು ನಿಮಗ ಗೊತ್ತಿದ್ದಾಂಗೇ– ನಾನು ಆಕಿ ಬೆಳಗಾಂವಿಯೊಳಗ ೭ ವರ್ಷ ಕೂಡಿಯೇ ಇದ್ದಿ ಸಾಲಿಯೊಳಗ— ಮುಂದೆ ಆಕೀ ಅಪ್ಪಗ ಧಾರವಾಡಕ್ಕ ಬದ ಆಯ್ತು— ಅಲ್ಲೇ ಕಾಲೇಜಕ್ಕ ಹೋದಳು.

ರಮೇಶ— ಇದು ನೋಡು– ಆಕೀದು ಆಕೀ ಅಪ್ಪನದು ಇತಿಹಾ ಕೇಳಲಿಲ್ಲ ನಾನಿನ್ನ! ಆಕೀಗೆ ಏನಾದರೂ ಒಂದು ಹೆಸ ಅನ್ನೋದು ಇರಬೇಕಲ್ಲ?

ಸುಧಾ— ಆಕೀ ಹೆಸರು– ಮಂದಾಕಿನಿ!

ರಮೇಶ— (ಸೋಫಾದಲ್ಲಿ ಸರಕ್ಕನೆ ಮುಂದಕ್ಕೆ ಸರಿದು) ಮಂದಾಕಿನಿ?

ಸುಧಾ — ಹೂಂ– ಹೂಂ– ಮಂದಾಕಿನಿ! ಯಾಕ? ಆದಕ್ಕ ಹಿಂಗ್ಯಾ ಪಟಕ್ಕನ ಜಿಗೀತೀರಿ?

ರಮೇಶ— (ತನ್ನಷ್ಟಕ್ಕೆ ಎಂಬಂತೆ) ಮ–ಂದಾ–ಕಿ–ನಿ– ಅಂ–ದ–ರ–

ಸುಧಾ— ಅಯ್ಯ— ಹಿಂಗ್ಯಾಕ ಮಾಡತೀರಿ? ಮಂದಾಕಿನಿ ಅಂದ ಮಂದಾಕಿನಿ– ನನ್ನ ಗೆಳತಿ (ನಗುವಳು– ನಗುತಲೆವ ಮೋ ಯಾಕ? ನಿಮಗ ಗುರುತು ಅದ ಏನು?

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನನ ಎಲ್ಲಾ ಪುಸ್ತಕಗಳು
ಸೇಕಡಾ ೨೫% ಕಡಿಮೆ ದರಕ್ಕೆ ಕೊಡುವೆವು.

	ಸಾದಾ ಪ್ರತಿ	ಉತ್ತಮ ಪ್ರತಿ
ಮನೋರಾಜ್ಯ (ನಾಟಕ)	ರೂ. ೧-೧೨	ರೂ. ೨—೪
ಇವೆತ್ (ಮೋಪಾಸಾನ ಕಾದಂಬರಿ)	೧-೧೨	—
ಪೂರ್ಣಿಮಾ (ಸಂಸಾರ ಚಿತ್ರಗಳು)	೧—೪	೨—೮
ಸೈಮನ್ನನ ತಂದೆ (ಕತೆಗಳು)	—	೨—೮
ರುಕ್ಮಿಣಿ, (ಕಾದಂಬರಿ)	೧—೮	೨—೦
ಮೋಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦-೧೨	೧—೮
ಕಲ್ಪನಾ ವಿಲಾಸ (ಕತೆಗಳು)	೦-೧೨	೧—೯
ಪ್ರವಾದಿ (ಗಿಬ್ರಾನರ "ಪ್ರೊಫೆಟ್")	೧—೪	೨—೦
ಆ ರಾತ್ರಿ (ನಾಟಕ)	೦-೧೪	೧—೬
ಗುಣ (ಕಾದಂಬರಿ)	೧—೪	೧-೧೨

ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ) ರೂ. ೫—೦—೦
,, (ಉತ್ತಮ ಪ್ರತಿ) ರೂ. ೬—೦—೦

ರಮೇಶ— (ಏನು ಹೇಳಬೇಕು ತಿಳಿಯದೆ) ಗುರುತ್ಯ ?— ಅಂ— ಅಂದರ— ಯಾವ ಮಂದಾಕಿನಿ? ಅಂದರ— ಧಾರವಾಡದ ಕಾಲೇಜ- ನೊಳಗ- ಇದ್ದಳ ? ಯಾವ ವರ್ಷ—?

ಸುಧಾ— ಆಕಿ ಬಿ. ಎ. ಆಗಿಯೇ ನಾಲ್ಕೈದು ವರ್ಷ ಆಯಿತು. ಹುಂ— ಹೌದು. ಅಂದ್ಹಾಂಗ— ನಿಮ್ಮ ವ್ಯಾಳ್ಯಕ್ಕೇ ಇರಬೇಕು ಆಕೀನು ! ಯಾಕಂದ್ರ—

ರಮೇಶ— ನಮ್ಮ ವ್ಯಾಳ್ಯಾಕ್ಕ ಇದ್ದರ ಏನಾಯ್ತು? ನಾ ಕಾಲೇಜದಾಗ ಇದ್ದಾಗ, ನಮ್ಮ ಜೋಡಿ ಎರಡುನೂರು ಲೇಡಿ ಸ್ಟೂಡಂಟ್ಸ್ ಇದ್ರು. ಅವರ ಎಲ್ಲಾರ ಹೆಸರು-ದಶಿ ನಾ ಏನು ಪಾಠ ಮಾಡೀನೇನು?

ಸುಧಾ— ಎರಡುನೂರು ಆಯ್ತು, ಮೂರುನೂರು ಆಯ್ತು. ಆದರ ಆಕೆ ಕಾಲೇಜ್ ಸ್ಟಾರ್ ಇದ್ದಳು— ಸ್ಟಾರ್ !

ರಮೇಶ— ಕಾಲೇಜಿಗೆ ಬಂದ ಹುಡುಗಿಯರೆಲ್ಲಾ ಸ್ಟಾರ್ ಅಂತೇ ತಿಳಿಕೋತಾರ ಬಿಡು—

ಸುಧಾ— (ತಿಳಿಸೇಳುವವಳಂತೆ) ಆಕಿ ಬ್ಯಾಡ್‌ಮಿಂಟನ್ ಚಾಂಪಿಯನ್ ಇದ್ದಳು— ಹುಂ— ಹೌದು. ಅಂದ್ಹಾಂಗ ನಿಮಗ ಗೊತ್ತಿರ- ಲಿಕ್ಕೇ ಬೇಕು. ನೀವೂ ಮತ್ತ ಬ್ಯಾಡ್‌ಮಿಂಟನ್ ಆಡತಿದ್ದಿಲ್ಲ?

ರಮೇಶ— (ನೆನೆದುಕೊಂಡವನಂತೆ) ಹೌದು— ಹೌದು, ಅಂದ್ಹಾಂಗ, ಅರ್ಧಾಮರ್ಧಾ ಏನೋ ನೆನಪು ಅದ. ಆದರ ಆಗಲೆ ಆ ಮಾತಿಗೆ ಎಷ್ಟು ವರ್ಷ ಆದುವೊ! ಈ ಕೆಲಸ ಹಿಡಿದಾ- ಗಿಂದ ನನಗಂತೂ ಕಾಲೇಜು-ಗೀಲೇಜು ಎಲ್ಲಾ ಮರತೇ ಹೋಗೇದ ನೋಡು (ಹಳೆಯ ನೆನಪು ಕಣ್ಣೆದುರು ನಿಂತಂತೆ) ವಂಡರಫುಲ್ ಆಗಿರತದಲ್ಲs ಕಾಲೇಜಿನಾಗ ಇದ್ದಾಗ? ಏನು ಆಟ— ಏನು ನಾಟಕ— ಏನು ಓಡಾಟ?

ಸುಧಾ— ನನಗಂತೂ ಕಾಲೇಜು ಮುಗಿದಾಗ ಅಳೋ ಹಾಂಗ ಆಗಿತ್ತು. ಇನ್ನೂ ಎರಡು ವರ್ಷ ಹಾಂಗೇ ಮುಂದ ಎಂ.ಎ ನೂ ಮಾಡಬೇಕಂದ್ರ— ಏನು ಅವಸರ ಆಗಿತ್ತೋ ನಮ್ಮ ಅಪ್ಪಗ— ತಂದು ಕಟ್ಟಿದರು ನಿಮ್ಮ ಕೊಳ್ಳಾಗ!

ರಮೇಶ— ನನ್ನ ಮದಿವೀ ಮಾಡಿಕೊಂಡು ಅಷ್ಟು ತ್ರಾಸ ಆಗೇದಲ್ಲs ನಿನಗ? ಅಷ್ಟು ಬ್ಯಾಡಾಗಿದ್ದರ ಒಪ್ಪಿದಿ ಯಾಕ?

ಸುಧಾ— ಒಪ್ಪಿದಿ ಯಾಕ? (ತನ್ನಷ್ಟಕ್ಕೆಯೆ ಎಂಬಂತೆ) ಒಪ್ಪಬೇಕಾಯ್ತು ಒಪ್ಪಿದೆ. ಹುಂ— ಅದನ್ನೆಲ್ಲ ಈಗೇನು ಮಾಡೋದು ತಗೊಂಡು? ಆದೇನೊ ಅಂತಾರಲ್ಲ— ಹಿಂದಿನದು ತಗದು ಹಿತ್ತಲಾಗ ಆತ್ತರಂತ— ನೋಡಿದಿರಾ? ಹ್ಯಾಂಗ ಹರಟಿಗೆ ಹಚ್ಚಿ ಬಿಡತಾರ— ಈಗ ಚಹಾ ಕುಡಿಯೋದಂತೂ ಆಯ್ತಲ್ಲ? ಪ್ಯಾಟ್ಯಾಗ ಹೋಗತೀರೊ ಇಲ್ಲೊ? ತರಬೇಕಾದ ಸಾಮಾನು ಎಲ್ಲಾ ಬರದಿಟ್ಟುಬಿಟ್ಟೇನಿ.

ರಮೇಶ— (ಸೋಫಾದಿಂದ ಏಳುತ್ತ ನಿಟ್ಟುಸಿರೆಳದು) ಹುಂ— ಅಂತೂ ನಾಳಿನ ಪ್ರೊಗ್ರಾಮ್ ಆದ್ಹಾಂಗ ಆಯ್ತಲ್ಲ! ಏನೋ ಮದಿವಿ ಆಗಿ ನಾಳಿಗೆ ಒಂದು ವರ್ಷ ಆಗತದ ಅಂತ— ಏನೇನೊ ಗೊತ್ತುಮಾಡಿಕೊಂಡು, ಒಂದು ದಿವಸ ರಜಾ ಕೂಡ ತಗೊಂಡಿದ್ದೆ. ಆದರ, ಇದು ನೋಡು. ತನ್ಮಧ್ಯೆ ಭೂತ ಸಂಚಾರ— ಅಂತ ಅಂತಾರಲ್ಲ—

ಸುಧಾ— ಅದಕ್ಕೇನು ಮಾಡೋದು ಇನ್ನ— ಬಂದವರನ್ನ ಹೊರಗ ಹಾಕೋದೇನು? ಎಲ್ಲಾರೂ ಕೂಡಿಯೇ ಜೈಸೀಮಾಡಿದ- ರಾಯ್ತು. ಆಕೆ ಅವರೂ ಏನು ಹೊರಗಿನಾಕಿ ಅಲ್ಲ, ಏನೂ ಅಲ್ಲ—

ರಮೇಶ— ಹುಂ— ಅದೂ ಖರೇನ— ಹೊರಗಿನಾಕಿ ಅಲ್ಲ— ಹೌದು. ಹುಂ— ಪ್ಯಾಟಿಗೆ ಹೋಗೋದಾದರ ತಟ್ಟನೆ ಚೀಲಾ ತೊಗೊಂಡು ಬಾ ನೋಡೋಣ! ಹುಂ. (ಸುಧಾ ಒಳಗಡೆ ಹೋಗುವಳು. ರಮೇಶ ಎದ್ದು ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತ) ವಿಚಿತ್ರ! ಮಂದಾಕಿನಿ! ಛೆ! (ಎಂದು ಕಣ್ಣುಮುಚ್ಚಿ ತಲೆಹಿಡಿದು- ಕೊಳ್ಳುತ್ತಿರುವಷ್ಟರಲ್ಲಿ, ಬಾಗಿಲ ಸದ್ದು. "ಸಾಹೇಬ್"— ಎಂಬ ಕರೆ ಕೇಳಬರುತ್ತದೆ.) ಯಾರವರು?

ದನಿ— ಟೆಲಿಗ್ರಾಂ ಅದರಿ!

ಟೆಲಿಗ್ರಾಂ? (ಎನ್ನುತ್ತಲೆ ಬಾಗಿಲ ಕಡೆಗೆ ಹೋಗಿ ಜೇಬಿನಲ್ಲಿಯ ಪೆನು ತೆರೆದು ಸಹಿಹಾಕಿ, ಟೆಲಿಗ್ರಾಂ ತೆಗೆದುಕೊಂಡು ತೆರೆದು ಓದುತ್ತಿರುವಾಗ, ಬಾಡಿದ ಮುಖ ಗೆಲುವಾಗುತ್ತದೆ. ಮೆಲ್ಲನೆಗೆ— ಗಟ್ಟಿಯಾದ ಮೆಲು ನಗೆಯಾಗುತ್ತದೆ. ಕೊನೆಗೆ) VERY — G-O-O-D— ವೆರಿ—ಗುಡ್— ಅಂದೆ. ಏ—!

(ಸುಧಾ ಒಳಗಿನಿಂದ ಎರಡು ಮೂರು ಕೈಚೀಲಗಳನ್ನು ಹಿಡಿದುಕೊಂಡು ಬರುವಳು.)

ಸುಧಾ— ಏನೂ— ಇಲ್ಲ. ಅಷ್ಟು ಸಾಮಾನು ತರಲಿಕ್ಕೇ ಬೇಕು. ನೀವು ಏ ಅಂದರೂ ಆಯ್ತು ಓ ಅಂದರೂ ಆಯ್ತು!

ರಮೇಶ— ಇದನ್ನು ನೋಡಿದೆ ಏನು ಇಲ್ಲೆ?

ಸುಧಾ— ನೋಡೋದೇನು? ನಾನೇ ಬರದದ್ದು ಅದು! ಸಾಮಾನಿನ ಚೀಟಿ!

ರಮೇಶ— ಸಾಮಾನು, ಸಾಮಾನು! ಸಾಮಾನಿನ ಹೊರತು ನಿನ್ನ ತಲಿಯೊಳಗೆ ಬೇರೆ ಏನೂ ಹೋಗೋ ಹಾಂಗೇ ಕಾಣೋದಿಲ್ಲ, ಇದು ಸಾಮಾನಿನ ಚೀಟಿ ಅಲ್ಲ!

ಸುಧಾ— ಅಲ್ಲ ಯಾಕ? ಹೌದು. ನಾನೇ ಬರೆದೀನಿ.

ರಮೇಶ— (ಗಟ್ಟಿಯಾಗಿ ನಗುತ್ತ) ಇದು ಸಾಮಾನಿನ ಚೀಟಿ ಅಲ್ಲ- ಅಂದೆ! (ಸಲಿಗೆಯಿಂದ) ಏನದ ಹೇಳು ನೋಡೋಣ— ಈಗ ಯಾರು ಬಂದಿದ್ದರು? ಕೇಳಿಸಲಿಲ್ಲ?

ಸುಧಾ— ಯಾರು ಬಂದಿದ್ದರು? ಯಾರೂ ಬಂದಿಲ್ಲ!

ರಮೇಶ— ತಾರಿನ ಸಿಪಾಯಿ ಬಂದಿದ್ದ. ಇದು— ತಾರು!

ಸುಧಾ— ಅಯ್ಯ! ತಾರು? ಯಾರದು? ಏನಂತ? ಮಂದಾ ಬರೋದಿಲ್ಲಂತ ತಾರು ಮಾಡ್ಯಾಳೇನು ಮತ್ತ?

ರಮೇಶ— (ಗಟ್ಟಿಯಾಗಿ ನಗುತ್ತ) ಮುಂದಾ ಬರೋದಿಲ್ಲಂತ ತಾರು ಮಾಡಿಲ್ಲ. ಇನ್ನೊಬ್ಬರು ಬರತೇನಿ ಅಂತ ಮಾಡ್ಯಾರ!

ಸುಧಾ— ಯಾರು ಬರತಾರ? ಅತ್ತ್ಯಾವರು ಬರತಾರೇನು ಮತ್ತ? ಹಾಂಗಿದ್ದರ—

ರಮೇಶ— ಅತ್ತ್ಯಾವರು ಏನೂ ಬರೋದಿಲ್ಲ! ಅಷ್ಟೇನೂ ಗಾಬರಿ ಆಗಬ್ಯಾಡ.

ಸುಧಾ— ಹಾಂಗಾದರ ಯಾರು ಬರತಾರ?

ರಮೇಶ— ನನ್ನ ಒಬ್ಬ ಗೆಳೆಯ! ನನ್ನ ಜಿಗರ್-ಜಾನೀ-ದೋಸ್ತ್!

ಸುಧಾ— ಜಿಗರ್ ಜಾನು-ಜಾನೀ ಆಯ್ತು. ಆಗದಿ ಮುಹೂರ್ತಾ ನೋಡಿ ಹೊರಟ್ಹಾಂಗ ಕಾಣಿಸತದ ಮಹಾರಾಯ— ಈಗೇ ಏನು ಅಂಥಾದ್ದು ಬಂದದ್ದೊ?

ರಮೇಶ— ಯಾಕ? ನಿನ್ನ ಫ್ರೆಂಡ್ ಬರತಾಳಂತ ಅಂದ ಕೂಡಲೆ ನನಗ ಮನೀಗೆ ಬಂದಕೂಡಲೆ ಕೋಟು ಸುದ್ದಾ ಕಳೀಲಿಕ್ಕೆ ಕೊಡದೆ, ವ್ಯಾಟಿಯೊಳಗ ಅಟ್ಟುವಷ್ಟು ಹುಚ್ಚಿದ್ದು ಕುಣದಾಡಲಿಕ್ಹತ್ತೀದಿ. ನನ್ನ ಒಬ್ಬ ಫ್ರೆಂಡ್ ಬರತಾನಂದಕೂಡಲೆ—

ಸುಧಾ— ಬರಲಿ— ಇನ್ನೂ ನಾಲ್ಕು ಮಂದಿಗೆ ನೀವೇ ತಾರುಕೊಟ್ಟು ಕರೆಯಿಸಿಕೊಳ್ಳರಿ— ಆಯ್ತು? ಯಾರ್‍ಯಾರು ಬರತಾರ ಬರಲಿ; ನನಗೇನು ಮಾಡೋದು? ಬೇಕಾದವರು ಬರಲಿ—

ರಮೇಶ— ನಿನಗೇನು ಮಾಡೋದಂದ್ರ? (ಮುಗುಳುನಗೆಯಿಂದ) —ಅಡಿಗೀ ಮಾಡೋದು— ಬಂದವರಿಗೆ ಆದರಾತಿಥ್ಯ ಮಾಡೋ ಕೆಲಸ ನಿನ್ನದೇ ಅಲ್ಲ?

ಸುಧಾ— ಹೂಂ? ಅಂತೂ ನನ್ನ ಕಿಮ್ಮತ್ತು ಅಷ್ಟೇ ಅಂಥಾಂಗಾಯ್ತಲ್ಲ— ಹಾಂಗಿದ್ದರ--

ರಮೇಶ— (ಸಮಾಧಾನಪಡಿಸುವ ದನಿಯಲ್ಲಿ) ಕಿಮ್ಮತ್ತು ಅಂದೆನೇ ನಾನೀಗ? ಕೆಲಸ ಅಂದೆ—

ಸುಧಾ-- ಏನು ಬೇಕಾದ್ದು ಅನ್ನಬಲ್ಲಿರ್‍ಯಾಕ— ಸಿಕ್ಕಸಿಕ್ಕವರೆಲ್ಲ ಬಂದು ಇಲ್ಲಿ ಸಂತಿ ನೆರೆಯಿಸೋದಾದರ, ನನ್ನ ಕೈಯಿಂದ ಅಡಿಗೀ ಮಾಡೋದು ಸಾಫ್ ಸಾಫ್ ಆಗೋದಿಲ್ಲ. ತಿಳಿಯಿತ? ನೀವೇನು ಬೇಕಾದ್ದು ಮಾಡಿರಿ—

ರಮೇಶ— ಹಾಂಗಾದರ ಈಗ ನನಗ ಏನು ಮಾಡು ಅಂತೀ? ಈಗೀಂದೀಗ ಹೊರಡಬೇಕು ನಾನು—

ಸುಧಾ— ಏನೂ ಇಲ್ಲ— ಹ್ಯಾಂಗಾದರೂ ಹೊರಗ ಹೋಗತೀರಿ— ಡಬಲ್ ರೊಕ್ಕ ಬಿದ್ದರೂ ಚಿಂತಿಲ್ಲ. ತಿರುಗಿ ಒಂದು ತಾರು ಕಳಿಸಿಬಿಡ್ರಿ—

ರಮೇಶ— ಏನಂತ? ಬರಬ್ಯಾಡಂತ?

ಸುಧಾ— ಬೇಕಾದ್ದು ಬರೀರಿ— ಬರಬ್ಯಾಡಂತ ಬರೀರಿ— ಬೇಕಾದರ ನಾವು ಇಂದು ರಾತ್ರಿ ಗಾಡಿಗೆ ಊರಿಗೆ ಹೋಗಾವ್ರು ಇದ್ದೀವಿ ಅಂತ ಬರೀರಿ— ಅದೆಲ್ಲಾ ನನಗ ಗೊತ್ತಿಲ್ಲ.

ರಮೇಶ— ತಾರು ಕಳಿಸಬಹುದು ಬಿಡು, ನೀ ಹೇಳಿದ್ಹಾಂಗ. ಇಲ್ಲಾಂದ್ರ ನಾವು ಊರಾಗ ಇಲ್ಲ ಅಂತೇ ತಾರು ಕಳಿಸಬಹುದು, ಆದರ ತಾರು ಅವನಿಗೆ ಮುಟ್ಟೋ ಚಾನ್ಸೇ ಇಲ್ಲ— (ನಗುವನು)

ಸುಧಾ— ಅಂದ್ರೆ? ಹೊರಟೇಬಿಟ್ಟಾನೇನು ಮಹಾರಾಯ?

ರಮೇಶ— ಹೊರಡೂದು ಯಾಕ? ಈಗ ಎಷ್ಟು ಆಯ್ತು— ಆರೂವರಿ— ಬಂದೇಬಿಟ್ಟಿರಬೇಕು. ಆರು-ಆರೂವರಿ ಸುಮಾರಿ ಬಸ್‌ಸ್ಟ್ಯಾಂಡಿಗೆ ಬರಬೇಕೂಂತ ತಿಳಿಸ್ಯಾನ.

ಸುಧಾ— ನನಗೊತ್ತು ಇದೆಲ್ಲ ನಿಮ್ಮ ಆಟ. ಪ್ಯಾಟಿಯೊಳಗ ಹೋಗೋದನ್ನ ತಪ್ಪಿಸಲಿಕ್ಕೆ ಇದೆಲ್ಲ ಯುಕ್ತಿ ಅದ. ಎಲ್ಲಿ ಅದ ತ[ಾರು] ನೋಡೋಣ— ತಾರಿನ್ಯಾಗ ಏನು ಬರದsದ?

[ರಮೇಶನ ಕೈಯಿಂದ ತಾರನ್ನು ತೆಗೆದುಕೊಂಡು ಓದುವಳು. ಓದುತ್ತಿ[ದ್ದ]ಹಾಗೆ ಮುಖ ಹುಬ್ಬುಗಂಟಿಕ್ಕುವುದು. ಕ್ರಮವಾಗಿ ಗೆಲುವಾಗುವುದು. ನಿಧಾನವಾಗಿ ಕಾಗದದಿಂದ ಕಣ್ಣುಗಳು ರಮೇಶನ ಮುಖವನ್ನು ನೋಡುತ್ತಿರುವಾ[ಗ] ಮೆಲುವಾಗಿ ತುಟಿಗಳಂಚಿನಲ್ಲಿ ಮೂಡುವುದು. ಬಾಯಿಗೆ ಮಾತೇ ಬಾರದಿದ್ದ ಹಾ[ಗೆ] ಆತನನ್ನೇ ದಿಟ್ಟಿಸುತ್ತ ಅರೆಕ್ಷಣ ನಿಲ್ಲುವಳು— ಕೊನೆಗೆ ಹತ್ತಿರದ ಖುರ್ಚಿಯ[ಲ್ಲಿ] ತನ್ನ ವಿಚಾರದಲ್ಲಿಯೇ ಮಗ್ನಳಾಗಿ ಕುಳಿತುಕೊಳ್ಳುತ್ತಿರುವಾಗ—]

ರಮೇಶ— (ಆಕೆಯ ಪ್ರತಿಕ್ರಿಯೆ ಅರ್ಥವಾಗದೆ) —ಏನು? (ಆಕೆ ಸುಮ್ಮನಾಗಿಯೇ ಉಳಿದಾಗ) ಏನಾಯ್ತು—?

ಸುಧಾ— (ಬಲವಾಗಿ ಉಸಿರೊಂದನ್ನು ಬಿಟ್ಟು) ಈ ವಾಸುದೇವರಾಯ ಯಾರು?

ರಮೇಶ—(ತನ್ನ ಗೆಲುವಿನಲ್ಲಿಯೆ) ಯಾರಂದ್ರ? ನನ್ನ ಫ್ರೆಂಡು— ಬೆಳಗಾಂವಿಯೊಳಗ ಪ್ರೊಫೆಸರ್ ಇದ್ದಾನ. ಬ್ರಿಲಿಯಂಟ್ ಫೆಲೊ! ಅವ ಪ್ರೊಫೆಸರ್ ಆದ ಮೇಲೆ, ಅವನ್ನ ನಾನು ನೋಡಿಯೆ ಇಲ್ಲ. ಅಕಸ್ಮಾತ್ ತಾರು ಕಳಿಸ್ಯಾನ— ಏನು ಕೆಲಸಾ ಅಂತ ಬರತಾನೊ, ಯಾರಿಗೆ ಗೊತ್ತು? ಅಲ್ಲ — ಅಂದ್ಹಾಂಗ ನಿನಗ ಗೊತ್ತಿರಬೇಕು ಅವ— ಯಾಕಂದ್ರ--

ಸುಧಾ— ನಾ ಕಾಲೇಜದಾಗ ಇದ್ದಾಗಂತೂ ಆ ಹೆಸರಿನ ಪ್ರೊಫೆಸರ್ ಯಾರೂ ಇದ್ದಿದ್ದಿಲ್ಲ.

ರಮೇಶ— ಪ್ರೊಫೆಸರ್ ಇದ್ದಿರಲಿಕ್ಕಿಲ್ಲ ಬಿಡು— ಆದರ ನಿನ್ನ ಕ್ಲಾಸ್‌ಮೇಟ್ ಇರಬೇಕು— ಇಲ್ಲಾಂದ್ರ ಒಂದು ವರ್ಷ ಬಹಳಾದರ ಮುಂದ ಇರಬೇಕು— ಅಷ್ಟೆ.

ಸುಧಾ--- ಯಾರಿಗೆ ಗೊತ್ತು? ನನಗಂತೂ ನೆನಪಿಲ್ಲ.

ರಮೇಶ— ಮರೆತಿರಬೇಕು ನೀನು. ಯಾಕಂದ್ರ ಅವನೂ ಕವಿ— ನೀನೂ ಕವಿ— ಅದಕ್ಕಂದೆ— ಇಬ್ಬರು ಕವಿಗಳು ಕೂಡಿದರೂ ಅಂದರ—

ಸುಧಾ— (ಕೊಂಕು) ಏನು ಮಾಡತಾರ?

ರಮೇಶ— ಏನು ಮಾಡತಾರ? ಜಗತ್ತನ್ನೇ ಮರೆತುಬಿಡತಾರ. ಮರೆತು ಬಿಟ್ಟು ಕವಿತಾ ಬರೆಯೋದರಾಗ ಒಬ್ಬರೊಬ್ಬರ ಕೂಡ ಕೋಓಪರೇಟ್ ಮಾಡತಾರ. ಅಂದ್ರ— ಒಬ್ಬರಿಂದ ಇನ್ನೊಬ್ಬರಿಗೆ ಸ್ಫೂರ್ತಿ ಬರತದ! ಅದಕ್ಕ ಕೋಓಪರೇಟ್ ಮಾಡತಾರ ಅಂತ ನಾ ಅಂದದ್ದು. ಮತ್ತ ಮೊದಲಿನ ಸ್ಫೂರ್ತಿ ಎಲ್ಲಾ ಮುಗಿದು ಹೋಯ್ತು ಅಂದರ, ಮುಂದ ಇನ್ನೇನ

ಮಾಡೋದು ಅಂತ, ಉಪಾಯ ಇಲ್ಲದೆ ಮದಿವೀ ಮಾಡಿಕೊಂಡು ಬಿಡತಾರ— ಆಯ್ತು (ನಗುವನು)

ಧಾ— ಮಾಡಿಕೋವಲ್ಲರ್ಯಾಕ! ಈಗ ನೀವು ಹೋಗುವವರೊ ಇಲ್ಲೊ ?

ಮೇಶ— ಹೋಗತೀನಿ– ಹೋಗತೀನಿ– ಅಂದ್ರ ಮೋಟಾರ್ ಸ್ಟ್ಯಾಂಡ್‌ಗೆ ಹೋಗತೀನಿ !

ಧಾ— ಹುಂ– ನೀವು ಮೋಟಾರ್ ಸ್ಟ್ಯಾಂಡಿಗೆ ಹೋಗರಿ— ನಾನು ಸ್ಟೇಶನ್ನಿಗೆ ಹೋಗತೀನಿ. ಇಬ್ಬರೂ ಬಂದವ್ರನ್ನ, ಒಂದೂ ಸಾಮಾನಿಲ್ಲದ ಮನೀಗೆ ಕರಕೊಂಡು ಬಂದು— ಮನಿಯೊಳಗ ಏನೂ ಇಲ್ಲರೆಪಾ. ನಾಳೆ ಸಾಮಾನು ತಂದವ್ಯಾಲಿ ಅಡಿಗಿ ಮಾಡತದ ಆ ತನಕ ಮಲಗಿಕೊಂಡಿರ್ರಿ, ಅಂತ ಹೇಳೋಣು !

ಮೇಶ— ಇಷ್ಟು ಸಾಮಾನು ತೀರೋತನಕಾ ಯಾಕ ಹೇಳೋದಿಲ್ಲ?

ಧಾ— ಹತ್ತುಸಾರೇ ಹೇಳೋದರಕಿಂತಾ ಒಮ್ಮೆ ಹೋಗಿ ತರೋದು ಚೆಲೋ ಅಂತ! ಈಗ ಒಂದನೇ ತಾರೀಖು ಆದಾಗಿಂದ ಎಷ್ಟು ಸಾರೆ ಹೇಳೀನಿ? ನೆನಪು ಅದ ಏನು?

ಮೇಶ— ಅದು ಹೋಗಲಿ ಬಿಡು. ಈಗ ಏನು ಮಾಡೋದು ಹಾಂಗಾದರ? ಹೀಂಗ ಮಾಡು, ನೀ ಹ್ಯಾಂಗಾದರೂ ಸ್ಟೇಶನ್ನಿಗೆ ಹೋಗುವಾಕಿ ಇದ್ದೀದಿ. ಹೋಗುವಾಗ ಸರಕ್ಕನ ಅರ್ಜಂಟಾಗಿ ಬೇಕಾದದ್ದಷ್ಟೇ ತೊಗೊಂಡು ಸ್ಟೇಶನ್ನಿಗೆ ಹೋಗಿಬಿಡು. ಬಹಳಾದರ ನಾನೇ ಮನೆಯೊಳಗ ಉಳಿದು ಬಿಡತೀನಿ—

ಧಾ— ಸಾಧ್ಯ ಇಲ್ಲ ತಾಯಿ ನಡಕೋತ ಪ್ಯಾಟಿಗೆ ಹೋಗಿ ಗಾಡಿ ಹೊತ್ತಿನಾಗ ಸ್ಟೇಶನ್ ಮುಟ್ಟೋದೇ ಸಾಧ್ಯ ಇಲ್ಲ.

ಮೇಶ— ಹಾಂಗಾದರ ಹ್ಯಾಂಗ ಮಾಡೂದು?

ಧಾ— ಹ್ಯಾಂಗೇನು ಮಾಡೋದು? ನನಗ ಗೊತ್ತೇ ಇತ್ತು, ಕಡೀಕ ನೀವು ಇಷ್ಟಕ್ಕ ತಂದು ಹಚ್ಚತೀರಿ ಅನ್ನೋದು! ನಾನೇ ಮನೆಯೊಳಗ ಇರತೀನಿ. ನೀವೇ ಸಾಯಕಲ್ ಮ್ಯಾಲಿಂದ ಪ್ಯಾಟೀಗೆ ಹೋಗಿ ಸ್ಟೇಶನ್ನಕ್ಕೂ ಹೋಗಿಬರ್ರಿ—

ಮೇಶ— ಸ್ಟೇಶನ್ನಕ್ಕ ಹೋಗಬಹುದು ಬಿಡು— ಆದರ ನಿನ್ನ ಫ್ರೆಂಡ್ ನನ್ನ ಗುರುತು ಹಿಡಿಯಬಹುದು? ಅಲ್ಲದ, ಮೋಟರ್ ಸ್ಟ್ಯಾಂಡ್‌ಗೆ ಹೋಗಲಿಕ್ಕೆ ಆಗೋದಿಲ್ಲ ಅಂದ್ಹಾಂಗ ಆಯ್ತು —

ಧಾ— ಇನ್ನು ಮ್ಯಾಲೇನು ನೀವು ಹೋದರೂ ಆಯ್ತು, ಹೋಗದಿದ್ದರೂ ಆಯ್ತು. ಆಗಲೆ ಬಸ್ ಬಂದುಬಿಟ್ಟಿರಬೇಕು.

ಮೇಶ— (ಆಕೆಯನ್ನು ಪೀಡಿಸಬೇಕೆಂದು) ಹಾಂಗಿದ್ದರ ಅಂವ ಬಂದ ಮ್ಯಾಲೇ ಹೋಗತೀನಿ ! ಇಷ್ಟರಾಗೇ ಬಂದೂಬರಬಹುದು—

ಧಾ— ಹುಂ— ಇಷ್ಟರಾಗೇ ಬರಬಹುದು, ಆದರ ಇಷ್ಟರಾಗೇ ಗಾಡೀ ಟೈಮ್‌ನೂ ಆಗತದ—

ಮೇಶ - ಮತ್ತ ನಾ ಇಲ್ಲದಾಗ ಅಂವ ಬಂದರ—

ಸುಧಾ— ಬಂದರ ಏನಾಯ್ತು? ನಾ ಮನಿಯೊಳಗ ಇರೋದಿಲ್ಲೇನು? ಬಂದು ಕೂತಿರತಾರ!

ರಮೇಶ— ತಿರುಗಿ ಹೋಗರಿ ಅಂತೇನೂ ಹೇಳೂದಿಲ್ಲ ಹೌದಲ್ಲೊ?

ಸುಧಾ – ನಾಕು ಹೋಗರಿ ಇನ್ನು —

ರಮೇಶ - ಅಂದ್ರ ತಿರುಗಿ ತಾರೇನೂ ಮಾಡೋದು ಬ್ಯಾಡ ಹೌದಲ್ಲೊ? —

ಸುಧಾ— ಹೋಗತೀರೋ ಇಲ್ಲೊ? (ಎಂದು ಕಲಿಗೆಯಿಂದ ಆತನನ್ನು ಹೊರಗೆ ನೂಕುವಳು.) ಇಲ್ಲಾಂದ್ರೆ—

ರಮೇಶ— ಹೋಗತೀನಿ ಮಹಾರಾಯಳ— ಹೋಗದಿದ್ದರ ಕೇಳತೀಯಾ ನೀ ಎಲ್ಲ್ಯಾದರೂ— ಮತ್ತ ಇದು ನೋಡು. ಅಂವ ಬಂದಾ ಅಂದರ, ಅವನ್ನ ಇಲ್ಲೆ ಪಡಸಾಲಿಯೊಳಗ ಕೂಡಿಸಿ ಅಡಿಗೀ ಮನೀ ಸೇರಬ್ಯಾಡ.

ಸುಧಾ— ನೀವು ಹೋಗರಿ ಮೊದಲು —ಅವರು ಬಂದಾದರೂ ಬರಲಿ—

ರಮೇಶ— (ಗಾಬರಿಯನ್ನು ನಟಿಸಿ) ಅಂದರ?— (ಎಂದು ಮತ್ತೆ ಹಿಂದಿರುಗುವನು. ಆದರ ಸುಧಾನನ್ನು ನೋಡಿ ಲಗುಬಗೆಯಿಂದ ಹೊರಟು ಹೋಗುವನು. ಸುಧಾ "ಉಸ್" ಎಂದು ನಿಟ್ಟುಸಿರುಬಿಟ್ಟು ವಿಶ್ರಾಂತಿ ಪಡೆಯುವಳು. ಏನೂ ತೋಚದವಳ ಹಾಗೆ ಕೈಯಲ್ಲಿ ತಲೆಯನ್ನು ಹಿಡಿದುಕೊಂಡು ಕೂಡುವಳು. ಬಾಗಿಲಿನಿಂದ ಗಂಗವ್ವ ಪ್ರವೇಶಿಸಿ, ಆಕೆ ಹಾಗೆ ಕುಳಿತದ್ದನ್ನು ನೋಡಿ ಆಶ್ಚರ್ಯ ಪಡುವಳು—)

ಗಂಗವ್ವ— (ಅನುಮಾನಿಸುತ್ತ) ಬಾ—ಯವ್ರ—? ಸುಧಾ ಮಿಸುಕಾಡುವದಿಲ್ಲ) ಬಾಯವ್ರ —

ಸುಧಾ— (ಎಚ್ಚರವಾದಂತೆ) ಅಂ—?

ಗಂಗವ್ವ— ಯಾಕರೀ ಅವ್ವಾ. ತಲಿ ನೋಯಾಕ್ಹತ್ತೈತೇನರಿ?

ಸುಧಾ— ಅಂ?— ಏನಂದಿ?— ಇಲ್ಲ — ತಲೆ ನೋಯುವುದಿಲ್ಲ— ಏನೋ ಸುಮ್ಮನೆ ಕೂತಿದ್ದೆ—

ಗಂಗವ್ವ— ಮತ್ತ ಠೇಸನ್ನಕ್ಕ ಹೋಗಬೇಕಂತಿದ್ರಿ—ಹೋಗೂದಿಲ್ಲೇನ್ರಿ?

ಸುಧಾ— ಇಲ್ಲ—ಅವರೇ ಹೋಗತಾರ—

ಗಂಗವ್ವ— ಅಂದ್ರ?— (ಅನುಮಾನಿಸುತ್ತ) ಊರಿಂದ ಬರೋ ಅವ್ವಾಪ್ರದು ರಾಯರಿಗೆ ಗುರ್ತ ಐತೇನ್ರಿ? ಇಲ್ಲಾಂದ್ರ—

ಸುಧಾ— ನೀನೊಂದು ಹುಚ್ಚೀ. ಅಷ್ಟೂ ಗೊತ್ತಾಗೋದಿಲ್ಲೇನ? ನಾನೇ ಹೋಗತಿದ್ದೆ; ಆದರ ಇಷ್ಟರಾಗ ಇನ್ನೊಬ್ಬರು ಬರಾವ್ರು ಇದ್ದಾರ—

ಗಂಗವ್ವ— ಇನ್ನೊಬ್ಬರ್ಯಾ? ಔ ನನ್ನ! ಇಂದೇನ ಸಾಂಗೀನ ಹಚ್ಯಾವರಿ ಬಾಯವ್ರ? ಹುಂ— ಅವರೂ ಊರಿಂದ ಬರತಾರ್ರೇನ್ರಿ? ಮತ್ತೆ ಯಾರು ಬರತಾರರಿ ಬಾಯವ್ರ?

ಸುಧಾ— ಇವರ ಗೆಳೆಯರು —

ಗಂಗವ್ವ— ನೀವು ಅವ್ರನ್ನ ನೋಡೀರೇನ್ರಿ?

ಸುಧಾ— (ವಿಚಾರಮಗ್ನಳಾಗಿ ಸುಮ್ಮನಿದ್ದು ಬಳಿಕ ನಿಧಾನವಾಗಿ) ಆ ಮೇಲೆ

ಹಿಂದಕ್ಕೊನೆಸ್ಸ್ರಿ ನಾ ನಿನಗ ನನ್ನ ಮದಿವೀ ಕತಿ ಹೇಳಿದ್ದೆ ನೆನಪು ಅದ ಏನು ?

ಗಂಗವ್ವ— ಅಯ್ಯ ನನ ಶಿವನs! ಅವರs ಏನರಿ ಇಂದ ಬರವ್ರು? ಹೋಗಲಿ ಬಿಡ್ರಿ ಬಾಯವ್ರ. ಎಂದಿನ ಮಾತು ... ಏನು ಕತಿ! ಸುಮ್ಮಕ ಮನಸಿಗೆ ತಂತಾಪ ಮಾಡಿಕೋ ಬ್ಯಾಡ್ರಿ.

ಸುಧಾ— ನಾ ಏನು ತ್ರಾಸು ಮಾಡಿಕೊಂಡರ ಏನು ಆಗಬೇಕಾಗೇದ ಹೇಳು ಗಂಗವ್ವ! ನಾ ಸುಖದಿಂದೇ ಇದ್ದೀನಿ. ಆದರ ಅವರ್ನ ನೋಡಿದರ ಕೆಟ್ಟ ಅನ್ನಿಸತದ. ಬೇಕಾದಂಥಾ ಕನ್ಯಾ ಬಂದರೂ ಇನ್ನೂ ತನಕಾ ಮದಿವಿ ಆಗಲ್ಲ. ಮದಿವೀ ಮಾತು ಮುಗಿದು ಹೋಯ್ತು— ಅಂತ ಹೇಳಿದ ಮಾತೇ ಇನ್ನ ತನಕಾ ನಡಿಸ್ಯಾರ. ನನ್ನಿಂದ ಅವರ ಆಯುಷ್ಯ ಹಾಳಾಯ್ತು— ಅನ್ನೋದನ್ನ ನೆನದರ, ನನಗಂತೂ ಹೊಟ್ಟೀ ಒಳಗ ಸಂಕಟ ಆಗಿ ಏನು ಮಾಡಬೇಕು ತಿಳಿಲ್ದ್ಹಾಂಗ ಆಗತದ—

ಗಂಗವ್ವ— ಏನು ಮಾಡೋದು ಹೇಳ್ರಿ. ಅವರವರ ನಶೀಬ—

ಸುಧಾ— ಹುಂ— (ಎಂದು ನಿಟ್ಟುಸಿರೆಳೆದು ಸುಮ್ಮನಾಗುವಳು)

ಗಂಗವ್ವ— ನನ್ನ ಕೆಲಸಾ ಮುಗಿಸೇನ್ರಿ—ಮನೀಗೆ ಹೋಗತೇನ್ರಿ— ಹೋಗಲೇನರಿ ?

ಸುಧಾ— ಬ್ಯಾಡ ಗಂಗವ್ವ—ಏನಂಥ ಅವಸರ? ಮನಿಗೆ ಹೋಗ್ಯಾದರೂ ಏನು ಮಾಡೋವಾಕಿ? ಅವರು ಇವರು ಎಲ್ಲಾರೂ ಈಗ ಬಂದು ಬಿಡತಾರ. ಇಲ್ಲೇ ಇದ್ದೇ ಬಿಡು. ಅದಕ್ಕ ಇದಕ್ಕ ನೆರವಾದರೂ ಆಗತಿ. ಇಲ್ಲೇ ಊಟಾ ಮಾಡೀಯಂತ.

ಗಂಗವ್ವ— ಹಾಂಗಿದ್ದರ ಗಡಾನs ಹೋಗಿಬಂದುಬಿಡತೇನರಿ. ಹುಡಿಗಿನ್ನ ಬಿಟ್ಟ ಬಂದು ಬಹಾಳ ಹೊತ್ತಾಯ್ತರಿ ಹೋಗಲ್ಯಾ?

ಸುಧಾ— ಹುಂ—ಲಗೂನೇ ಬಂದುಬಿಡು. ನೀ ಬಂದ ಮ್ಯಾಲೇ ಅಡಿಗಿ ಸುರುವು ನೋಡು—

(ಗಂಗವ್ವ ಎಡಗಡೆಯಿಂದ ಹೊರಟು ಹೋಗುವಳು. ಸುಧಾ ವಿಚಾರಮಗ್ನಳಾಗಿ ಕುಳಿತಿರುವಳು. ಕುಳಿತು ಬೇಸರವೆನಿಸಿ, ಎದ್ದು ಕಿಟಕಿಯಲ್ಲಿ ಇಣುಕುವಳು ತಿರುಗಿ ಬಂದು ಮತ್ತೆ ಕುರ್ಚಿಯಲ್ಲಿ ಕೂಡುವಳು. ವೃತ್ತಪತ್ರವನ್ನು ಬಿಡಿಸಿ ನೋಡುವಳು. ಆದರೆ ಅದೂ ಬೇಸರವೆನಿಸಿ ಅದನ್ನು ಬಿಸುಟ ಎದ್ದು ಒಳಗಡೆ ಹೋಗುತ್ತಿದ್ದಾಗ— ಬಾಗಿಲನ್ನು ಬಡಿದ ಸದ್ದು ಕೇಳಬರುತ್ತದೆ—ಸುಧಾ ತಟ್ಟನೆ ಎದೆಯ ಮೇಲೆ ಕೈಯಿಟ್ಟುಕೊಂಡು ಅರೆನಿಮಿಷ ಸ್ತಬ್ಧಳಾಗಿ ನಿಲ್ಲುತ್ತಾಳೆ. ಮತ್ತೆ ಸದ್ದು. ಎರಡು ಹೆಜ್ಜೆ ಮುಂದೆ ಬಂದು "ಯಾರವರು ?" ಎಂದು ಕೇಳುತ್ತಾಳೆ

ವಾಸುದೇವರಾಯ ಪ್ರವೇಶಿಸುತ್ತಾನೆ— ಎಡಗಡೆಯಿಂದ. ಸುಮಾರು ೩೭ ವಯಸ್ಸಿನ ಚೆಲುವ ತರುಣ. ಒಳ್ಳೆ ಅಚ್ಚುಕಟ್ಟಾಗಿ ಸೂಟ್ ಧರಿಸಿದ್ದಾನೆ. ಕೈಯಲ್ಲೊಂದು ಸೂಟ್‌ಕೇಸು—ಮುಖ ಗಂಭೀರವಾಗಿದೆ. ಸುಧಾ ನಿಂತಲ್ಲಿಂದ ಕದಲುವುದೇ ಇಲ್ಲ—)

ವಾಸುದೇವ - ಎಲ! ಯಾರಿಲ್ಲೇನು ಮನಿಯೊಳಗ? (ತಡೆದು) ಹೀಂಗ್ಯಾಕ ನಿಂತೀದಿ. ಅಂ? (ಕುಸು ಧೈರ್ಯಗೊಂಡು) ದೀಪಾ ಸಹಿತ ಹಚ್ಚಿಲ್ಲ—ರಮೇಶ ಇಲ್ಲೇನು ಮನಿಯೊಳಗ?

ಸುಧಾ— ಇಲ್ಲ—ಹೊರಗ ಹೋಗ್ಯಾರ (ಎಂದು ಹೇಳುತ್ತಲೇ ಟೇಬಲ್ ಮೇಲಿನ ದೀಪವನ್ನು ಉರಿಸುವಳು)

ವಾಸುದೇವ— ನನ್ನ ತಾರು ಬರಲಿಲ್ಲ ?

ಸುಧಾ— ಇನ್ನೂ ಇದೇ ಬಂತು.

ವಾಸು— ಹಾಂಗಾರ— ನಾ ಬರೋದು ಅಂವಗ ಗೊತಿಲ್ಲ ಅಂದ್ಹಾಂ ಆಯ್ತು! ಹೌದ?

ಸುಧಾ— ಗೊತ್ತಾದ— (ವಾಸುದೇವರಾಯ ಹಾಗೆಯೆ ನಿಂತದ್ದನ್ನು ನೆನೆ... ಬರಬಹುದು ಇಷ್ಟರಾಗೇ. ಅವರು ಬಂದಮ್ಯಾಲೇ ಕೂತುಕೊ... ಬೇಕು ಅಂತ ಅದ ಏನು ವಿಚಾರ? (ಎಂದು ತನ್ನ ಮಾ... ಎಂಬಂತೆ ನಸು ನಗುವಳು)

ವಾಸು— ಹಾಂಗೇನಿಲ್ಲ! (ಎಂದು ಪ್ರತಿಯಾಗಿ ನಕ್ಕು, ಸುಧಾ ನಿಂತಲ್ಲಿ... ಹೋಗಿ ಆಕೆಯನ್ನು ದಿಟ್ಟಿಸಿ) ಹೀಂಗ್ಯಾಕ ನಿಂತೀದಿ? ನನಗ ಕೂ... ಅಂತ ಹೇಳಿದ ನೀನು ಮಾತ್ರ ನಿಂತುಕೊಂಡೇ ಇರುವಾ... ಏನು? (ಸುಧಾ ಸುಮ್ಮನಾಗಿಯೆ ಉಳಿದದ್ದನ್ನು ನೋಡಿ) ಅಂ... ಹಾಂಗಿದ್ದರ ನಾನೂ ನಿಂತುಕೊಂಡೇ ಇರತೀನಿ (ತಡೆ... ಏನಾಗೇದ ನಿನಗ? ಅಂ?—ನಾನು—ಬರಬಾರದಾಗಿತ್ತೇನು

ಸುಧಾ— ಬಂದಮ್ಯಾಲೆ ಈ ಪ್ರಶ್ನೆಗೆ ಏನೂ ಅರ್ಥ ಇಲ್ಲ!

ವಾಸು— ಕೇಳಿದ ಪ್ರಶ್ನೆಗೆ ಉತ್ತರ ಹೇಳಿದರ, ಅರ್ಥ ತಾನೇ ಹೊ... ತದ!

ಸುಧಾ— ಉತ್ತರ ಹೇಳಲಾಗದ ಪ್ರಶ್ನೆ ಕೇಳುವುದರಾಗ ಏನೂ ಅರ್ಥ ಇಲ್ಲ!

ವಾಸು— ವೆರಿ ಗುಡ್! ಅಂತೂ ಮಾತು ತಿರುಗಿಸಿ ಮಾತು ಹಾರಿಸೊ... ಚಟಾ ಇನ್ನೂ ಅದ ಅಂದ್ಹಾಂಗಾಯ್ತು. (ಎಂದು ನಗುವ... ವೆರಿ ಕ್ಲೆವರ್!—ಅಂ? ಅದು ಹೋಗಲಿ. ಹ್ಯಾಂಗ ನಡದದ... Are you all right?

ಸುಧಾ— ಆಲ್‌ರೈಟ್ ಅಂದ್ರ ಆಲ್‌ರೈಟ್—ಹುಂ—ಆಲ್‌ರ್ರೈಟ್ ನೀವು ಹ್ಯಾಂಗ ಇದ್ದೀರಿ— ?

ವಾಸು— ಹೀಂಗ ಇದ್ದೀನಿ—ನೋಡು. ಏನಾದರೂ ಬದಲು ಆಗೀ... ನೇನು?

ಸುಧಾ— ಯಾರಿಗೆ ಗೊತ್ತು ?

ವಾಸು— ಯಾರಿಗೆ ಗೊತ್ತು ಅಂದ್ರ? ನೋಡಿದವರಿಗೆ ಗೊತ್ತು ಅಲ್ಲ—?

ಸುಧಾ— ನನಗಂತೂ ಏನೂ ಗೊತ್ತಾಗುವದಿಲ್ಲ!

ವಾಸು— ಅದಕ್ಕೇ ಕೇಳಿದೆ—ಮೊದಲಿಗೇ—ನಾನು ಬರಬಾರದಾ... ತ್ತೇನು ಅಂತ—

ಸುಧಾ— (ಹುಸಿಮುನಿಸಿನಿಂದ) ತಿರುಗಿ ತಿರುಗಿ ನೀವು ಅದನ್ನೇ ಮಾತಾ... ಬ್ಯಾಡರಿ ಹಂ?

ವಾಸು— ಒಳ್ಳೇದು ಹಾಂಗಾದರ ನಾನು ಮಾತೇ ಆಡೋದಿಲ್ಲ- ಆಯ್ತ?—ಅಂದ್ರ—ನೀ ಮಾತಾಡಿಸೋ ತನಕ—

ಸುಧಾ— ಛೆಲೋ ಹೇಳತೀರಿ. ಅಂದ್ರ ಇಬ್ಬರೂ ಒಬ್ಬರೆದುರು ಒಬ್ಬ... ಜಗಳಾಡಿದವ್ರಾಂಗ, ಗುಮ್ ಅಂತ— ಅವರು ಬರೋ ತನ... ಕೂತಿರೋಣ. ಅಂದ್ರ ಅವರು ಬಂದ ಕೂಡಲೆ ನನ್ನದಸ...

ಚೆಲೋತನ್ಯಾಂಗ ಚಾಷ್ಟೀ ಮಾಡಲಿಕ್ಕೆ. ಮೊದಲೇ ಹೋಗೋ ಮುಂದ ಹೇಳಿಟ್ಟು ಹೋಗ್ಯಾರ; ಬಂದವ್ರನ್ನ ಪಡಸಾಲಿ ಯೊಳಗ ಕೂಡಿಸಿ ನೀನು ಅಡಿಗೀಮನಿ ಸೇರಬ್ಯಾಡ ಅಂತ!

ವಾಸು— ಓಹೋ! ಅಂತೂ ಭಾರಿ obedient wife ಆಗಿಬಿಟ್ಟೀದಿ ಯಲ್ಲ? ಅದಕ್ಕೇ ನಾ ಬರೋದಕ್ಕಿಂತ ಮೊದಲು ಪಡಸಾಲಿ ಯೊಳಗ ಬಂದು ಕೂತವಳು, ಇನ್ನೂ ಇಲ್ಲಿಂದ ಮಿಸುಕಾಡಿಲ್ಲ: ಅಲ್ಲ?— ನಾನು ಬಂದು ಇಷ್ಟು ಹೊತ್ತಾದರೂ "ಚಹಾ ಮಾಡತೀನಿ" ಅಂತಾದರೂ ಅಂದಿಯಾ ಬಾಯಿಲೆ? ಮಾಡೋದೆಂತೂ ದೂರವೆ!

ಸುಧಾ— ಚಹಾ ಮಾಡಲಿಕ್ಕೆ ನಾನೇ ಹೋಗಬೇಕಾಗಿಲ್ಲ! ಚಹಾ ತಯಾರ ಆಗಿರಬೇಕು—ತಿಳಿತೇನು?

ವಾಸು— ಚಹಾ ತನ್ನಿಂದ ತಾನೇ ತಯಾರ ಆಗಲಿಕ್ಕೆ, ಅದೇನು ತಲಿಯೊಳಗಿನ ಕವಿತಾ ಏನು?

ಸುಧಾ— ತಲಿಯೊಳಗ ತಯಾರು ಆದರೂ ಕೂತ ಕೈಯಿಂದ ಬರೀ-ಬೇಕಿಷ್ಟ್ರದ ಕವಿತಾ ಕೂಡ! ಅದಕ್ಕ ಈಗ ಒಳಗ ತಯಾರಾದ ಚಹಾ ಕೈಯಿಂದ ಎತ್ತಿ ಬಾಯಿಗೆ ಹಾಕಿಕೊಳ್ಳಬೇಕು— (ಬಾಗಿಲ ಕಡೆಗೆ ತಿರುಗಿ) ಗಂಗವ್ವಾ, ಚಹಾ ಆಗಲಿಲ್ಲೇನು ಇನ್ನೂ? ತಗೊಂಡು ಬಾ—

ವಾಸು— (ಕುತೂಹಲದಿಂದ) ಈ ಗಂಗವ್ವ ಯಾರು? ನಿಮ್ಮ ಅತ್ತೆ ಏನು?

ಸುಧಾ— ನಿಮ್ಮ ತಲಿ ಒಂದಿಷ್ಟು ಜಾಗಾದ ಮ್ಯಾಲೆ ಇದ್ದಾಂಗ ಕಾಣೋದಿಲ್ಲ!

ವಾಸು— ಯಾಕ? ಘಟ್ಟಮುಟ್ಟ ಜಾಗಾದ ಮ್ಯಾಲೇ ಅದ? ಒಂದು ಕಾಲಕ್ಕ ಇದ್ದಿದ್ದಿಲ್ಲ ಅನ್ನು—ಈಗ ಮತ್ತ ಜಾಗಾದ ಮ್ಯಾಲೆ ಬಂದsದ—

ಸುಧಾ— ಅಲ್ಲ—ಅತ್ತೆ ಅಂತ ಕೇಳಿದಿರಿ—ಅದಕ್ಕಂದೆ!

ವಾಸು— ಅಂದ್ರ—ನಿಮ್ಮ ಅತ್ತೆ ಇಲ್ಲಿ ಬಂದಿರಬಾರದು ಅನ್ನೋವಷ್ಟು ವ್ಯವಸ್ಥಾ ಮಾಡೀದಿ ಏನು ಹಾಂಗಾದರ?

ಸುಧಾ— ವ್ಯವಸ್ಥಾ ಹ್ಯಾಂಗಾರೆ ಇರವಲ್ಲದ್ಯಾಕ! ಒಂದು ವ್ಯಾಳೆ ಅವರು ಇಲ್ಲೇ ಇದ್ದರೂ—ಅವರ್ನ ಗಂಗವ್ವಾ ಅಂತ—ಕರೀತಾ ಇದ್ದೇನೆ?

ವಾಸು— ಯಾರಿಗ್ಗೊತ್ತು ಮಹಾರಾಯಳ! ಗಂಡಂದಿರನ್ನೇ ಗದ್ದರಿಸಿ ಬಿಡೋವವರಿಗೆ, ಅತ್ತಿನ್ನ ಆಳುಮನಸ್ಯಾರ್ಹಾಂಗ ಕರೆಯೋದು ಯಾವ ದೊಡ್ಡ ಮಾತು?

ಸುಧಾ— ಯಾಕ? ನಾ, ಇವರನ್ನ ಗದ್ದರಿಸಿಕೊಳ್ಳತೀನಿ ಅಂತ ನಿಮ್ಮ ಕಡೆ ತಕರಾರು ಮಾಡ್ಯಾರೇನು?

ವಾಸು— ಅಂವ ಯಾತಕ್ಕ ತಕರಾರು ಮಾಡಬೇಕು? ನನಗ ಗೊತ್ತಿ-ಲ್ಲೇನು ನೀನು ಏನು ಏನು ಮಾಡತಿರಬೇಕು ಅನ್ನೋದು?

(ಗಂಗವ್ವ ಚಹದ ಟ್ರೇಯೊಂದನ್ನು ತಂದು ಇರಿಸುವಳು. ಆಕೆ ಹೊರಟು ಹೋದ ನಂತರ)

ಸುಧಾ— ಇಕೀನೆ— ನಿಮ್ಮ ಅತ್ತಿ!

ವಾಸು— ಅಂದ್ರ? ನನ್ನ ಅತ್ತೆ? ಅಂದ್ರ?

ಸುಧಾ— (ನಗುನಕ್ಕು) ನಿಮ್ಮ.... ಅಂದ್ರ ನೀವು ಈಗ ಅಂದಿರೆಲ್ಲ ಅತ್ತೆ ಅಂತ— ಆಕೆ ಅಂದೆ!

ವಾಸು— ಅದು ಹೋಗಲಿ ಬಿಡು. ಅಲ್ಲ— ಇಂವ ಎಲ್ಲಿ ಹೋಗ್ಯಾನ? ಎಷ್ಟೊತ್ತಿಗೆ ಬರುವವ?

ಸುಧಾ— ಬರಬಹುದು ಇಷ್ಟರೊಳಗೇ!

ವಾಸು— ಹೋಗ್ಯಾನಾದರೂ ಎಲ್ಲಿಗೆ? ಆಫೀಸಿನಿಂದ ಇನ್ನೂ ಬಂದೇ ಇಲ್ಲೇನು?

ವಾಸು— ಆಫೀಸಿನಿಂದ ಬಂದುಹೋಗ್ಯಾರ. ನಿಮ್ಮ ಸ್ವಾಗತಕ್ಕ ನಾನು ಮನೆಯೊಳಗ ನಿಂತ್ಹಾಂಗ, ಇನ್ನೊಬ್ಬರ ಸ್ವಾಗತಕ್ಕ ಅವರು ಸ್ಟೇಶನ್ನಿಗೆ ಹೋಗ್ಯಾರ!

ವಾಸು— ಅಂದ್ರ? ಮತ್ತ ಯಾರು ಬರೋವವರು ಇದ್ದಾರ?

ಸುಧಾ— ಹುಂ— (ನಸುನಕ್ಕು) ಅವರ ಗೆಸ್ಟ್ ಅಂತ ನೀವು ಬಂದಿರಿ— ನಾನು ರಿಸೀವ್ಹ್ ಮಾಡಿದೆ. ನನ್ನ ಗೆಸ್ಟ್ ಅಂತ ಇನ್ನೊಬ್ಬರು ಬರುವವರು ಇದ್ದಾರ—ಅವರನ್ನ ರಿಸೀವ್ಹ್ ಮಾಡಲಿಕ್ಕೆ ಅವರು—

ವಾಸು— ಅಂತೂ ನಾನು ಅವರ ಗೆಸ್ಟ್ ಅಂದ್ಹಾಂಗಾಯ್ತು! ಅಂದ್ರ ನನ್ನ ಅಡಿಗೀ ಅವನೇ ಮಾಡಬೇಕೇನು? ಅಥವಾ ಇಬ್ಬರೂ ಕೂಡಿ —

ಸುಧಾ— ಅಷ್ಟೇನೂ ಕಾಳಜೀ ಮಾಡಬ್ಯಾಡಿರಿ. ಊಟಾ ಹಾಕೇ ಹಾಕತೀವ

ವಾಸು— ಹಾಕುವಿಯಂತ. ಆದರ ಊರಿಂದ ಯಾರು ಬರತಾರ?

ಸುಧಾ— ನನ್ನ ಒಬ್ಬ ಫ್ರೆಂಡ್! ಬೆಳಗಾಂವಿಯಿಂದೇ ಬರತಾಳ ಆಕೀನೂ!

ವಾಸು— ಬೆಳಗಾಂವಿಯಿಂದ? ಬೆಳಗಾಂವಿಯೊಳಗ ಯಾರವಾ ನಿನ್ನ ಫ್ರೆಂಡು?

ಸುಧಾ— ಮಂದಾಕಿನಿ ಅಂತ ಇದ್ದಾಳ. ನಿಮಗೇನು ಗೊತ್ತು— ಭಾರೀ ಇದ್ದಾಳ—

ವಾಸು— ಭಾರಿ, ಅಂದ್ರ?

ಸುಧಾ— ಅವೆಲ್ಲಾ ಯಾಕ? ಈಗ ಬಂದೇ ಬರತಾಳಲ್ಲ?

ವಾಸು— ಬ್ಯಾಡಮಿಂಟನ್ ಚಾಂಪಿಯನ್ ಇದ್ದಾಳ.... ಆಕಿನೇ ಏನು ಮತ್ತ?

ಸುಧಾ— ಹೌದು. ನಿಮಗ ಹ್ಯಾಂಗ ಗೊತ್ತು? ನಿಮಗ ಆಕೀ ಗುರುತು ಅದ ಏನು ಹಾಂಗಾದರ?

ವಾಸು— ಗುರುತೇನು ವಿಶೇಷ ಇಲ್ಲ— ಆದರ—

ಸುಧಾ— ಆದರ ಏನು?

ವಾಸು— ಹೋಗಲಿ ಬಿಡು. ಅದನ್ನೆಲ್ಲ ತಗೊಂಡು ಏನು ಮಾಡೋದು?—

ಸುಧಾ— ಅಂದ್ರ— ಏನು? ಹೇಳಬಾರದ?

ವಾಸು— ಹೇಳಬಾರದಂತೇ ಹೇಳೂದಿಲ್ಲ.

ಸುಧಾ— ಹಾಂಗಿದ್ದರಂತೂ ಹೇಳಲಿಕ್ಕೇ ಬೇಕು! ಏನದು?

ವಾಸು— ಅಂದರ ರಮೇಶ ಹೇಳಿಲ್ಲ ಅಂದ್ಹಾಂಗಾಯ್ತು ನಿನ್ನ ಮುಂದ?

ಸುಧಾ— ಅವರೇನು ತಮ್ಮ ತಲಿ ಹೇಳತಾರ? ಆಕಿನ್ನ ಅವರು ನೋಡಿಲ್ಲ ಸಹಿತ!

(ವಾಸು ಗಟ್ಟಿಯಾಗಿ ನಕ್ಕುಬಿಡುತ್ತಾನೆ— ನಗೆ ತಡೆಯಲಾಗದ ಹಾಗೆ.)

ಸುಧಾ— ಯಾಕ, ನಗತೀರ್‍ಯಾಕ? ಅವರದು ಅವರದು ಗುರುತು ಅದನs?

ವಾಸು— ಥೂ ನಿನ!— ಯಾವ ಊರೊಳಗ ಇದ್ದೀದಿ? ಆದರ ಏನೂ ಕಾಳಜಿ ಇಲ್ಲ ಬಿಡು. ನಿನ್ನದಂತೂ ಮದಿವಿಯಾಗಿ ಬಿಟ್ಟದಲ್ಲಾ? ಇನ್ನು ಏನು ಮಾಡೋಹಾಂಗಿದ್ದಾಳ?

ಸುಧಾ— ಅಂದ್ರ—?

ವಾಸು— ಅಂದ್ರ— ಅಂದ್ರ — ಅಂದ್ರ — ಏನು? ಒಂದು ಕಾಲಕ್ಕ ಲಗ್ನ ಆಗೋದಿತ್ತು ಅವರಿಬ್ಬರದೂ ಲಗ್ನ! ಕಾಲೇಜಿನೊಳಗ ಇದ್ದಾಗ ಅವರಿಬ್ಬರೂ famous lovers! ಅಂದರ ಪ್ರಸಿದ್ಧ ಪ್ರೇಮಿಗಳು ಅಂತ! (ಗಟ್ಟಿಯಾಗಿ ನಗುವನು)

ಸುಧಾ— ಹೌದ?— ಹೀಂಗ?— ಖರೇನ?— ಹೇ, ಸುಮ್ಮನೆ ನೀವು ಏನಾರೆ ಹೇಳಬ್ಯಾಡ್ರಿ— ಸಾಧ್ಯನೇ ಇಲ್ಲ! ಒಂದು ಮಾತೂ. ನನ್ನ ಮುಂದ ಹೇಳಬಾರದ? ಇಷ್ಟು ಮುಚ್ಚಿ ಇಡೋದಂದ್ರ—

ವಾಸು— ಅಲ್ಲ! ಅದನ್ನ ಯಾತಕ್ಕ ಹೇಳಬೇಕು? ಹೇಳಿದ್ದರ ಏನು ಫಾಯದೆ? ತ್ರಾಸು ಒಂದೇ ಖರೆ! ಈಗ ನೀನು ಹೇಳಿದೀ ಏನು? (ಸುಧಾ ವಿಚಾರವಗ್ನಳಾಗಿ ಸುಮ್ಮನೆ ಉಳಿಯುವಳು.) ಹೇಳಿದೀ ಏನು?

ಸುಧಾ— ಇಲ್ಲ!

ವಾಸು— ಆಗಿಹೋಯ್ತು! Tit for tat! ಅಥವಾ Cat for cat!

ಸುಧಾ— (ಮುನಿಸಿನಿಂದ) ಬಂದಾರ ಬಗ್ಲಿ ನಿಂದರ್‍ರಿ— ಕೇಳಿಯೇ ಬಿಡತೀನಿ— ಈಗಿಂದೀಗ

ವಾಸು— ಹಾಂಗಿದ್ದರ ಮಹಾರಾಯಳ— ನಾನು ಈಗೀಂದೀಗ ಹೊರಟುಬಿಡತೀನಿ— ನಿಮ್ಮಿಬ್ಬರ ಅಥವಾ ನೀವು ಮೂರು ಮಂದೀ ಜಗಳದಾಗ, ನಾ ಒಬ್ಬ ಯಾತಕ್ಕ ನಡುವ ಸಿಕ್ಕು ನುಗ್ಗಾಗಬೇಕು?

ಸುಧಾ— ಖರೇನ? ಮಂದಾಕಿನಿ ಇವರ್ನ ಲಗ್ನ ಮಾಡಿಕೋಬೇಕಂತ ಮಾಡಿದ್ರ? ಖರೇನ?—

ವಾಸು— (ಬಿಡಿಬಿಡಿಸಿ ತಿಳಿಹೇಳುವವನಂತೆ) ಇಬ್ಬರೂ ಮಾಡಿಕೋಬೇಕಂತ ಮಾಡಿದ್ದರು. ಆದರೂ ಆಗಲಿಲ್ಲ— ಅದಕ್ಕ ವಿಚಾರ ಮಾಡಬೇಕಾಗಿಲ್ಲ!

ಸುಧಾ— ನನ್ನ ಮುಂದ ಇವರು ಒಂದು ಮಾತು ಹೇಳಿದ್ದರ, ನಾ ಏನು ಓಡಿಹೋಗತಿದ್ದೆನೇನು?

ವಾಸು— ಹೇಳಿ ಪ್ರಯೋಜನ ಇಲ್ಲ! ಇಂಥಾದ್ದೆಲ್ಲ ಹೇಳುವವರು ಹೇಳಬಾರದು. ಕೇಳುವವರು ಕೇಳಬಾರದು! ಅವೆಲ್ಲ ex-love affairs— ಅಂದ್ರ ಆಗಿಹೋದ ಪ್ರೇಮದ ಮಾತು ಗಳು. ಅದಕ್ಕೇ ದಾಸರು 'ಚಿಂತಿಸಿ ಫಲವಿಲ್ಲ' ಅಂತ ಹೇಳಿದರು!

(ಎಂದು ನಗುವನು)

ಸುಧಾ— (ಅರೆಮುನಿಸಿನ ತಡೆದು) ನಿಮಗಂತೂ ಎಲ್ಲಾ ಮಾತು ಚಾಷ್ಟಿನ್ನೇ ಕಾಣಿಸತದ. ನಗಿ ಆದರೂ ಹ್ಯಾಂಗ ಬರತದೊ ಅಂತೀನಿ—

ವಾಸು— ಗಂಡಸರು ಯಾವಾಗಲೂ ನಕ್ಕೋತs ಇರತಾರ— ಹೆಂಗಸರು ಅತುಗೋತ ಇರತಾರ—

ಸುಧಾ— ಹೆಂಗಸರು ಅಳೋಹಾಂಗ ಗಂಡಸರು ಮಾಡತಾರ— ಮತ್ತೇನು ಮಾಡೋದು ಹಾಂಗಾದರ—

ವಾಸು— ಅದಕ್ಕ ಹೆಂಗಸರು ಹೀಂಗ ಮಾಡಬೇಕು— ಗಂಡಸರು ಅಳೋಹಾಂಗಾದರೂ ಮಾಡಬೇಕು — ಇಲ್ಲಾಂದ್ರ ಇಬ್ಬರೂ ಕೂಡಿ ನಗೋಹಾಂಗಾದರೂ ಮಾಡಬೇಕು. ಈಗ ನಾ ಹೇಳೋದು ಇಷ್ಟೇ. ಹಿಂದಿನದನ್ನ ನೆನೆದು ಹಿತ್ತಲಾಗ ಅಳೋದರಕಿಂತ, ಮುಂದಿನ ಮನಿ ಸಿಂಗಾರಮಾಡಿಕೊಂಡು ಇಂದು ಆರಾಮ ಇರಬೇಕು ಅಂತ! ಹುಂ— ಹೋಗಲಿ ಬಿಡು— ಓಹ್. ಏನು ಸೆಕೆ ಆಗತsದ ಇಲ್ಲಿ? ಅಲ್ಲ— ನಿಮ್ಮ ಹಿತ್ತಲಾಗ ಏನೋ ಒಳ್ಳೇ ಚೆಂದಾಗಿ ಗಾರ್ಡನ್ ಮಾಡೀರಂತ— ಅಲ್ಲ್ಯಾದರೂ ಹೋಗಿ ಕೂಡೋಣೇನು? ಇವರು ಬರಲಿಕ್ಕೆ ಯಾವ ಹೊತ್ತು ಯಾರಿಗೆ ಗೊತ್ತು?

ಸುಧಾ— (ಅನುಮಾನಿಸುತ್ತ) ಹಿತ್ತಲೊಳಗ ಕೂಡೋಣ? ಇಷ್ಟರಾಗೇ ಇವರು ಬಂದು ಬಿಟ್ಟರ?

ವಾಸು— ಬಂದರ ಬರತಾರ— ಹಿತ್ತಲ ಕಡೆಗೇ ಬರತಾರ — ಬಹಳ ಆದರ ನಿಮ್ಮ ಆಳಿನ್ನ ಇಲ್ಲೆ ಕೂಡಿಸಿಬಿಡು. ಬಂದಕೂಡಲೇ ಹೇಳತಾಳ — ಅಂ?

ಸುಧಾ— (ಒಳಗಡೆಗೆ ತಿರುಗಿ) ಗಂಗವ್ವಾ—ಗಂಗವ್ವಾ— (ಒಳಗಡೆಯಿಂದ 'ಬಂದ್ನಿರ್‍ರಿ ಬಾಯಾವ್ರ" ಎನ್ನುತ್ತ ಬಂದು "ಯಾಕ್ರೀ ಬಾಯಾವ್ರ!") ಏನು ಮಾಡತಿದ್ದಿ ಒಳಗ?

ಗಂಗವ್ವ— ಏನಿಲ್ರಿ —ಪಲ್ಲೇ ನೆಟ್ಟಗ ಮಾಡಿಕೋತ ಕುಂತೀನ್ರಿ.

ಸುಧಾ— ಹಾಂಗಾರ ಹೀಂಗ ಮಾಡು. ಪಲ್ಯಾ ಆರಿಸಿಕೊತ ನೀನು ಇಲ್ಲೇ ಕೂತಿರು. ನಾವು ಹಿತ್ತಲ ಕಡೆ ಇರತೀವಿ. ಮತ್ತ ಇವರು ಹೊರಗಿನಿಂದ ಬಂದ ಕೂಡಲೆ ಹೇಳು— ಅಂ?—

(ಗಂಗವ್ವ ಹುಂ-ರಿ ಎಂದು ತಲೆಯಲ್ಲಾಡಿಸಿ ಒಳಗಡೆ ಹೋಗುವಳು)

ವಾಸು— ನನ್ನ ಬ್ಯಾಗ್ ಇಲ್ಲಿಯೇ ಇರಲ್ಯಾ? ಅಥವಾ—

ಸುಧಾ— ಗಂಗವ್ವ ಎತ್ತಿ ಇಡತಾಳ ಒಳಗ—ಹುಂ—ಗಂಗವ್ವ—ಈ ಬ್ಯಾಗ್ ಎತ್ತಿ ಒಳಗೆ ಒಯ್ದು ಇಟ್ಟುಬಿಡು ಮೊದಲ

(ಎಂದು ಇಬ್ಬರೂ ಒಳಗೆ ಹೋಗುವರು. ಗಂಗವ್ವ ಪಲ್ಯದ ಬುಟ್ಟಿಯನ್ನು ತೆಗೆದುಕೊಂಡು ಒಂದು ರಂಗದ ಮಧ್ಯದಲ್ಲಿ ಇಟ್ಟು, ವಾಸು ದೇವರಾಯನ ಬ್ಯಾಗನ್ನು ಒಳಗೆ ಇಟ್ಟು ಬರುವಳು. ಆರಿಸುವ ಕೆಲಸದಲ್ಲಿ ತೊಡಗಿದ ಹಾಗಿದ್ದರೂ— ಆಕೆ

[ಇಳಗನೆಯ ಪುಟಕ್ಕೆ ಮುಂದುವರಿದಿದೆ.]

'ಜಯಂ:

ಕರ್ನಾಟಕ ಮತ್ತು ಆಂಧ್ರ ಸಂಸ್ಕೃತಿಗಳು

ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ. ಹುಬ್ಬಳ್ಳಿ

卐

ಸಾಮಾನ್ಯವಾಗಿ ಆಂಧ್ರ-ಕರ್ನಾಟಕ ಸಂಸ್ಕೃತಿಗಳಲ್ಲಿ ಸಂಬಂಧ-ಬಾಂಧವ್ಯಗಳೇ ಹೆಚ್ಚಾಗಿ ಕಾಣುವುವು. ಉಭಯಭಾಷೆಗಳಲ್ಲಿಯೂ ಪ್ರಾವೀಣ್ಯವನ್ನು ತೋರಿಸಿದ ಪ್ರಾಚೀನ ಕವಿಗಳಿದ್ದಾರೆ. ಒಂದು ಸಾಹಿತ್ಯದಮೇಲೆ ಇನ್ನೊಂದುಸಾಹಿತ್ಯದ ಪರಿಣಾಮವೂ ಸಾಕಷ್ಟಿದೆ.

ಸಂಸ್ಕೃತಿ! ಇದೊಂದು ಮಹಾವ್ಯಾಪಕ ಶಬ್ದ. ಇದನ್ನು ದೇಶ ವಾಚಕ ಶಬ್ದವಾಗಿಯೂ, ಭಾಷಾವಾಚಕ ಶಬ್ದವಾಗಿಯೂ, ಮತ ಧರ್ಮಸೂಚಕ ಶಬ್ದವಾಗಿಯೂ ಉಪಯೋಗಿಸಬಹುದು. ಪ್ರಾಪಂಚಿಕ-ಭೋಗವೇ ಸಂಸ್ಕೃತಿಯೆಂದು ಪ್ರತಿಪಾದಿಸುವ ಪಾಶ್ಚಿಮಾತ್ಯ ಸಂಸ್ಕೃತಿ-ಗಿಂತಲೂ ಪಾರಮಾರ್ಥಿಕ ಪ್ರಗತಿಯನ್ನು ಕಾಣುತ್ತ ಬಂದಿರುವ ನಮ್ಮ ಭಾರತೀಯ ಸಂಸ್ಕೃತಿ ಸಾವಿರಾರುವರುಷಗಳಿಂದ ಜಗತ್ತಿಗೇ ಆದರ್ಶವಾಗಿ ನಿಂತಿದೆಯೆಂದು ಇತಿಹಾಸ ಸಾರುತ್ತದೆ.

ಭಾರತದ ವಿವಿಧ ಸಂಸ್ಕೃತಿಗಳಲ್ಲಿ, ಕನ್ನಡದ (ಹಿರಿನಾಡು) ಸಂಸ್ಕೃತಿ ಬಹಳ ಹೆಚ್ಚಿನದು ಮತ್ತು ಹಳೆಯದು. ದ್ರಾವಿಡ ಸಂಸ್ಕೃತಿ ಯಂತೆ ಅದು ತನ್ನ ಪ್ರತ್ಯೇಕತೆಯನ್ನೂ, ವಿವಿಧತೆಯನ್ನೂ, ಪರಿಪೂರ್ಣತೆಯನ್ನೂ ಪಡೆದು ದಕ್ಷಿಣಾಪಥದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿರುವುದನ್ನು ನಾವು ಅನೇಕ ಅಗಿತಗಳಿಂದ (Excavations) ಕಾಣಬಹುದು. ಸುತ್ತಲೂ ತಮಿಳು, ಮಹಾರಾಷ್ಟ್ರ, ಗುಜರಾಥ, ಆಂಧ್ರ ನಾಡುಗಳಿರುವುದರಿಂದ ಈ ಕರ್ನಾಟಕದಲ್ಲಿ ವಿವಿಧ ಸಂಸ್ಕೃತಿಗಳ ಸಂಬಂಧ, ಸಂಪರ್ಕಗಳನ್ನು ನಾವು ಕಾಣಬಹುದು. ಬಹಳ ಹಿಂದಿನ ಕಾಲದಲ್ಲಿ ಈ ಎಲ್ಲ ನಾಡುಗಳೂ ಸಾಂಸ್ಕೃತಿಕವಾಗಿ "ಎಲ್ಲಾ ಒಂದೇಒಂದು ನಾಡು ಆಗಿರಬೇಕು" ಎಂದು ಸೂಚಿಸಿದರೆ ತಪ್ಪಾಗ-ಲಾರದು. ಸಂಶೋಧನೆಯಿಂದ ಮುಂಬಯಿ ಕರ್ನಾಟಕದಲ್ಲಿ ದೊರೆತ ಮಣ್ಣಿನ ಪಾತ್ರೆಗಳು, ಶಂಖದ ತುಣುಕುಗಳು, ಶಂಖದ ಆಭರಣಗಳು, ಚಿತ್ರವಿಚಿತ್ರವಾದ ನಕ್ಷೆಗಳುಳ್ಳ ಬೋಕೆಗಳು, ಅಲ್ಲದೆ ಮೈಸೂರಿನ ಚಂದ್ರವಳ್ಳಿಯಲ್ಲಿಯೂ, ಹೈದರಾಬಾದಿನ ಮಾಸ್ಕಿಯಲ್ಲಿಯೂ ದೊರೆತ ಅವಶೇಷಗಳಿಂದ, ಕರ್ನಾಟಕವು ಒಂದು ಭೂಖಂಡವಾಗಿರಬೇಕೆಂದು ತಿಳಿದುಬರುತ್ತದೆ. ಸಿದ್ಧಾಪುರದ ಸ್ತೂಪ, ಬಾದಾಮಿಯಲ್ಲಿಯ (ಕ್ರಿ. ಶ. ೬೭೫) ೧ನೆಯ ಪುಲಕೇಶಿಯ ಶಾಸನವು ಇದಕ್ಕೆ ನಿದರ್ಶ-ನವು. "ಈ ಶಾಸನವು ಇಡಿ ಹಿಂದುಸ್ಥಾನದಲ್ಲಿ ಶಕಾಂಕವನ್ನು ಹೇಳುವ ಶಾಸನಗಳಲ್ಲಿ ಅತಿ ಹಳೆಯದೂ ಮುಖ್ಯವಾದುದೂ" ಎಂದು ತಿಳಿಯಬೇಕು.

ಇಂತಹ ಇತಿಹಾಸ ಪೂರ್ಣವಾದ ಕನ್ನಡ ಸಂಸ್ಕೃತಿಯು ತನ್ನ ಭದ್ರತೆಯನ್ನು ನಾಶಮಾಡಿಕೊಳ್ಳದೆ ಮುಂದೆ ಅನೇಕ ಅರಸುಮನೆತನಗಳಲ್ಲಿ ಬೆಳೆಯಿತು. ೧೨ನೆಯ ಶತಮಾನದಲ್ಲಿ ಬಿಜ್ಜಳನ ಕಾಲದಲ್ಲಿ ವೀರಶೈವ ಸಂಸ್ಕೃತಿಯ ಮೂಲ ಪುರುಷರಾದ ಶ್ರೀಬಸವೇಶ್ವರರ ಸಮಯ ಮಹತ್ತ್ವದ್ದು. ಹೊಯ್ಸಳರ ಆಳಿಕೆಯಲ್ಲಿ ನಮ್ಮ ಸಂಸ್ಕೃತಿ ಪ್ರಗತಿ ಹೊಂದಿ ವಿಜಯನಗರದ ಕಾಲಕ್ಕೆ ಅದು ಅತ್ಯುತ್ತಮ ಸ್ಥಿತಿಗೆ ಬಂದಿತು.

ವೀರಶೈವ ಸಂಸ್ಕೃತಿಯು ಕರ್ನಾಟಕಕ್ಕೆ ಮುಕುಟಪ್ರಾಯವಾ-ದಂತಿದೆ. ಕನ್ನಡ ಜೈನಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳನ್ನಿತ್ತ ಪಂಪರನ್ನರು ಆಂಧ್ರರೆಂದು ತಿಳಿದುಬರುತ್ತದೆ. ಶ್ರೀ ಬಸವೇಶ್ವರರ ಅನುಯಾಯಿಗಳಾದ ವೀರಶೈವ ಸಾಹಿತಿಗಳು ಕನ್ನಾಡಿನಲ್ಲಿ ಸೇವೆ ಸಲ್ಲಿಸಿದರು. ಆಂಧ್ರಸಾಹಿತಿಗಳಲ್ಲಿ ಅಗ್ರಗಣ್ಯನಾದ ಪಾಲ್ಕುರಿಕೆ ಸೋಮನಾಥನು ರಚಿಸಿದ 'ಬಸವಪುರಾಣ' 'ಪಂಡಿತಾರಾಧ್ಯ ಚರಿತ್ರೆ' ಇವುಗಳಿಂದ ವೀರಶೈವರ ಮೂಲ, ಆಂಧ್ರದೇಶದ ಆರಾಧ್ಯ ಬ್ರಾಹ್ಮಣರಲ್ಲಿ ಕಾಣಬಹುದೆಂದು, ತೆಲುಗು ಸಾಹಿತ್ಯಪರಿಚಯ ಮಾಡಿಕೊಳ್ಳುತ್ತಿರುವ ಪ್ರೊ. ಆರ್. ಸಿ. ಹಿರೇಮಠರು ಹೇಳುತ್ತಾರೆ. [ಇವರ ಈ ನಿರ್ಣಯ ತೆಲುಗು ಮಾಸಪತ್ರಿಕೆಯಾದ ಭಾರತಿಯಲ್ಲಿ ಪ್ರಕಟವಾದ ಡಾ. ಚಿಲಕೂರಿ ನಾರಾಯಣರಾಯರಿಗೂ, ಸೋಮನಾಥನ ಮೇಲೆ ಗ್ರಂಥಗಳನ್ನು ಬರೆದ ಬಂಡಾತಮ್ಮಯ್ಯನವರಿಗೂ ನಡೆದ ಚರ್ಚೆಯನ್ನು ಅವಲೋಕಿಸಿ ಮಾಡಲ್ಪಟ್ಟಿದೆಯೆಂದು ನನ್ನ ತಿಳುವಳಿಕೆ.] ಸೋಮನಾಥನು ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಒಬ್ಬನೆಂದು ಸನಾತನ ವೀರಶೈವರ ನಂಬಿಕೆ ಇದೆ. ಇವನ ಬಸವಪುರಾಣ, 'ದ್ವಿಪದ ಬಸವಪುರಾಣ' ಎಂದು ಹೆಸರಾಗಿ ಕನ್ನಡಛಂದಸ್ಸಿಗೆ ಹೋಲುತ್ತಿದೆಯಂತೆ. ಮುಂದೆ, ಪಿಡುಪರ್ತಿ ಸೋಮನಾಥನು ಬರೆದ ತೆಲುಗಿನ ಬಸವಪುರಾಣಕ್ಕೂ, ಕನ್ನಡದಲ್ಲಿ ಬರೆದ ಭೀಮಕವಿಯ ಬಸವಪುರಾಣಕ್ಕೂ, ಇದೇ ಗ್ರಂಥವೇ ಮೂಲಾ-ಧಾರವಾಯಿತಂತೆ. ಆಂಧ್ರರ ಆದಿಗ್ರಂಥವಾದ ನನ್ನಯನ ಭಾರತವನ್ನು ರಚಿಸಲು ಕನ್ನಡ ವಿದ್ವನ್ಮಣಿಯಾದ ನಾರಾಯಣಭಟ್ಟನೇ ಕಾರಣವೆಂದು ಇತಿಹಾಸವು ಹೇಳುತ್ತದೆ.

ನನ್ನಿಚೋಡನ "ಕುಮಾರಸಂಭವ"ದಲ್ಲಿ ಕನ್ನಡ, ತಮಿಳು ಛಂದಸ್ಸು ಮತ್ತು ಶಬ್ದಗಳನ್ನು ಉಪಯೋಗಿಸಿರುವುದನ್ನು ನಾವು ಕಾಣಬಹುದು ಮುಂದೆ ಪೆದ್ದಣನು ಬರೆದ ನೀತಿಸಾರ; ಸುಮತಿ-ಶತಕಗಳ ಲಕ್ಷಣಗಳು ಕನ್ನಡದ ಕಂದಕ್ಕೆ ಹೋಲುತ್ತವೆ. ವಿಜಯನಗರದ ಅರಸರು ತೋರ್ಪುತ್ತ ಬಂದ ಉಭಯಭಾಷಾ ಪ್ರೀತಿ-ವಿಶ್ವಾಸಗಳು, ವಿಜಯನಗರದ ರಸರ ವಿಶಾಲದೃಷ್ಟಿಯನ್ನು, ನಿಷ್ಪಕ್ಷ-ಪಾತ ಮನೋವೃತ್ತಿಯನ್ನು ವ್ಯಕ್ತಗೊಳಿಸುತ್ತದೆ. ಪ್ರೌಢದೇವ-ರಾಯನ ಆಸ್ಥಾನದಲ್ಲಿ ಶ್ರೀನಾಥನಿಗೆ ನಡೆದ ಮರ್ಯಾದೆ ಇತಿಹಾಸಾ-ರ್ಹವಾಗಿದೆ; ಅಲ್ಲದೆ ಆತನಿಗೆ ಕನ್ನಡವು ಬರುತ್ತಿತ್ತೆಂಬ ಅಂಶವೂ ಸ್ಪಷ್ಟವಾಗುತ್ತದೆ. ಇದಕ್ಕೆ ಅವನ ಈ ಪದ್ಯವೇ ಸಾಕ್ಷಿ

"ಪ್ರೌಢರಿಕಿಂಪು ಸಂಸ್ಕೃತ ಭಾಷೆಯೆಂಡ್ರು,
ಪಲುಕು ನುಡಿಕಾರಮುನನಾಂಧ್ರ ಭಾಷೆಯೆಂಡ್ರು,
ಎವ್ವರೇಮನನಂಡ್ರು, ನಾಕೇಮಿಕೊರತ ?
ನಾಕವಿತ್ವಂಬು ನಿಜಮು ಕರ್ನಾಟಭಾಷ."

ಇದರರ್ಥ ಹೀಗಿದೆ :—

ಪ್ರೌಢರಿಂಗಿಂಪದುವೆ ಸಂಸ್ಕೃತದ ಭಾಷೆ
ಆಡಲ್ಕೆ ಸೊಗಸಲ್ತು ಆ ಆಂಧ್ರಭಾಷೆ
ಯಾರೆಂತು ನುಡಿದರೇಂ ನಮಗೇನು ಕೊರತೆ ?
ಸಾರುವೆನು ಕನ್ನಡವೆ ನಿಜಕಾವ್ಯಭಾಷೆ.

ವೀರಶೈವ ಕವಿಗಳು ಕನ್ನಡದಲ್ಲಿ ಕ್ರಾಂತಿಯನ್ನುಂಟು ಮಾಡಿದಂತೆ ತೆಲುಗಿನಲ್ಲಿಯೂ, ಹೊಸ ಸ್ಫೂರ್ತಿ, ರೂಪ, ಶೈಲಿಗಳನ್ನು ಬೆಳಸಿ ಅದರ ಸ್ಥಿತಿ-ಗತಿಗಳನ್ನು ಮಾರ್ಪಡಿಸಿದರು. ೧೨ನೆಯ ಶತಮಾನದ ವರೆಗೆ ಇದ್ದ ಚಂಪೂಗ್ರಂಥವ್ಯಾಮೋಹವನ್ನು ಹೋಗಲಾಡಿಸಿ ಜನ-ಸಾಮಾನ್ಯರಿಗೆ ಮನಮುಟ್ಟುವ ಸಾಹಿತ್ಯವನ್ನು ನಿರ್ಮಿಸಿದರು.

ವಿಜಯನಗರದ ರಾಜರ ಆಳಿಕೆಯಲ್ಲಿ ಕರ್ನಾಟಕ ಸಂಸ್ಕೃತಿಯು ಹೆಚ್ಚಿನ ಅಂತಸ್ತಿಗೆ ಏರಿದ್ದಿತು. ಧರ್ಮಸಂಸ್ಥಾಪನೆಯನ್ನೆ ಮುಖ್ಯ ಉದ್ದೇಶವಾಗಿಟ್ಟುಕೊಂಡ ಈ ರಾಜ್ಯವು ಬಹಳ ದಿನಗಳ ವರೆಗೂ ಬಾಳಿ ಬೆಳೆಯಿತು. ಇಂದಿಗೂ ಮೈಸೂರುಸಂಸ್ಥಾನದಲ್ಲಿಯೂ ಕೆಲವೊಂದು ಆಚಾರ—ವಿಚಾರಗಳು ನಡೆಯುತ್ತ ಬಂದಿರುವುದು ನಮ್ಮ ಅನುಭವದ ಮಾತಾಗಿದೆ. ಇವರುಗಳು ಅನುಸರಿಸಿದ ನ್ಯಾಯಮಾರ್ಗ ವಿಶಾಲದೃಷ್ಟಿ, ಸರ್ವಧರ್ಮಗಳ ಸಂವರ್ಧನೆ, ಸಾಹಿತ್ಯ,—ಸಂಗೀತ—ಚಿತ್ರಕಲೆಗಳಲ್ಲಿಯ ಆಸಕ್ತಿ ಮುಂತಾದುವುಗಳೇ ಇವರ ಅಭ್ಯುದಯಕ್ಕೆ ಕಾರಣವೆನ್ನಬಹುದು. ಈ ಅರಸರಿಂದ ಪೋಷಿಸಲ್ಪಟ್ಟ ಈ ಎರಡು ಭಾಷೆಗಳೂ ಕ್ರಮೇಣ ಅಭಿವೃದ್ಧಿಹೊಂದಿ, ವಿಜಯನಗರದ ರಾಜ್ಯವು ನಿರ್ನಾಮವಾದನಂತರವೂ ಯಾವುದೇ ಆತಂಕವಿಲ್ಲದೆ ಬೆಳೆದುವು. ಆದರೆ ಮುಂದೆ ದೇಶದಲ್ಲಿ ಅಶಾಂತತೆ, ಅತೃಪ್ತಿ ತಲೆದೋರಿ ಅಜ್ಞಾತಾವಸ್ಥೆಯಲ್ಲಿ ಉಳಿದಾಗ ಇನ್ನೊಂದು ಬಗೆಯ ಸಾಹಿತ್ಯವು ಉದ್ಭವಿಸಿತು. ಈ ಅಧೀರಸಮಯದಲ್ಲಿ ಜನರು ಭಕ್ತಿಮಾರ್ಗವನ್ನನುಸರಿಸಿ, ದೈವ ಚಿಂತನೆಯಲ್ಲಿ ಹೆಚ್ಚು ಮನಸ್ಸಿಟ್ಟುದರಿಂದ ಶತಕಗಳು, ನೀತಿಸಾರ ಗ್ರಂಥಗಳು ಹೊರಹೊಮ್ಮಿದುವು. ಈ ಶತಕಯುಗದಲ್ಲಿ ಹೆಸರಾಂತ ಕವಿಗಳಾದ ಪೋತನನ ಭಾಗವತವು ಅತ್ಯುತ್ತಮವಾದ ಗ್ರಂಥ. ಈತನೇ ಬರೆದ ನಾರಾಯಣಶತಕದಿಂದ ಆರಂಭವಾಗಿ ನೂರಾರು ಶತಕಗಳು ರಚಿಸಲ್ಪಟ್ಟುವು. ತಾಳ್ಳಪಾಕ, ಧೂರ್ಜಟಿ, ಕಂಚರ್ಲ ಗೋಪನ್ನ (ಭದ್ರಾಚಲದ ರಾಮದಾಸ) ವೇಮನ, ನೃಸಿಂಹಕವಿ, ಶೇಷಪ್ಪಕವಿ, ತರಿಕೊಂಡ ವೆಂಕಮ್ಮ, ಬಂಡಿಬಾಪನಮ್ಮ, ಕೂಚಿಮಂಚಿ ತಿಮ್ಮಕವಿ, ಮುಂತಾದವರ ಶತಕಗಳು ಜನರಲ್ಲಿ ಭಕ್ತಿ-ವಿರಕ್ತಿಗಳನ್ನುಂಟುಮಾಡಿ, ಅವರ ನೊಂದ ಹೃದಯಗಳಿಗೆ ಶಾಂತಿಯನ್ನೊದಗಿಸಿದುವು. ಮುಂದೆ ಸಂಗೀತ ಪ್ರಾಧ್ಯಾನ್ಯವಾದ ಭಜನೆಗಳು ಕೀರ್ತನೆಗಳು, ಕೃತಿಗಳು ಮೂಡಿಕೊಂಡುವು. ನಾದೋಪಾಸನೆಯಲ್ಲಿ ತಲ್ಲೀನರೂ, ಗಾಯಕಬ್ರಹ್ಮರೂ ಎಂದೆನಿಸಿಕೊಂಡ ಶ್ರೀತ್ಯಾಗರಾಜರ ಕೃತಿಗಳು, ತಾಳ್ಳಪಾಕ ಇವರ ಕೀರ್ತನೆಗಳು, ಆಂಧ್ರರ ಭಕ್ತಿಪೂರ್ಣ ಹೃದಯಗಳಿಗೆ, ದಾಸ ಮತ್ತು ವಚನ ಸಾಹಿತ್ಯದಂತೆ, ನೀರೆರೆದುವು. ಈ ಕೃತಿಕರ್ತರು ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದವರೆಂದು ಹೇಳಬಹುದು.

ಇನ್ನು ವರ್ತಮಾನಕಾಲದ ಸಾಹಿತ್ಯದ ವಿಚಾರ: ವಿಜಯ-ನಗರದ ಮುಖ್ಯರಾಜನಾದ ಶ್ರೀಕೃಷ್ಣದೇವರಾಯರ ತಂದೆಯವರ ಕಾಲದಲ್ಲಿ ನಂದಿಮಲ್ಲಯ್ಯ ಮತ್ತು ಗಂಟಾಸಿಂಗಯ್ಯನೆಂಬವರು ಸಂಸ್ಕೃತದಲ್ಲಿ ಬರೆದ "ಪ್ರಬೋಧಚಂದ್ರೋದಯ" ಎಂಬ ನಾಟಕವನ್ನು ಅನುವಾದಿಸಿದರಂತೆ. ಹೀಗೆ ಬಹಳ ವರುಷಗಳ ಹಿಂದೆಯೇ ಆಂಧ್ರ-ಸಾಹಿತ್ಯ ಅನುವಾದದಿಂದಲೇ ಪುಷ್ಟಿಗೊಂಡಿತೆಂದು ಹೇಳಿದರೆ ತಪ್ಪಾಗಲಾರದು. ಮೊದಲಿಗೆ ಯಕ್ಷಗಾನಗಳು ಕೂಚಿಪೂಡಿ ಭಾಗವತ ನಾಟಕಗಳು, ಬೀದಿಯ ಮೊಡಾಟಗಳು, ಹಳ್ಳಿಯ ಬಯಲಾಟಗಳು ಜನರಿಗೆ ರುಚಿಸುತ್ತಿದ್ದುವು, ಆದರೆ ೧೯ನೆಯ ಶತಮಾನದ ಆರಂಭದಿಂದ ಆಂಗ್ಲವಿದ್ಯಾ ಪ್ರಭಾವದಿಂದ ಕನ್ನಡ ತೆಲುಗು ಜನರಲ್ಲಿ ಪರಭಾಷಾ ವ್ಯಾಮೋಹವು ಹೆಚ್ಚಿತು. ಹೊಸಮಾರ್ಗವನ್ನು ಅನುಸರಿಸಬೇಕೆಂದು ಹಲವರು ಹವಣಿಸಿದರು. ಹಿಂದಿನ ಮಾರ್ಗದಲ್ಲಿಯೇ ನಡೆಯಬೇಕೆಂದು ಕುಳಿತವರು ಕೆಲವರು. ಆಂಗ್ಲ ಪಾದ್ರಿಗಳ ಆಗಮನದಿಂದ ಸುಮಾರು

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

೧೯ನೆಯ ಶತಮಾನದ ಮಧ್ಯಕ್ಕೆ ತೆಲುಗು ಬಾಷಾ ಲಿಪಿಗಳು ಪ್ರತ್ಯೇಕ ಗೊಂಡುವೆಂದು ತಿಳಿಯುತ್ತದೆ. ಆದರೆ ಈ ಪ್ರತ್ಯೇಕತೆ ತಲೆದೋರಿದ್ದುದು ೧೪ನೆಯ ಶತಮಾನದಲ್ಲೆಂದು, ಕೀ. ಶೇ. ಆರ್. ನರಸಿಂಹಾಚಾರ್ಯರು ತಮ್ಮ ಕನ್ನಡ ಬಾಷಾ ಇತಿಹಾಸವೆಂಬ ಪುಸ್ತಕದಲ್ಲಿ ಸೂಚಿಸಿರುವರು. (History of Kannada Language).

೨೦ನೆಯ ಶತಮಾನದ ಆರಂಭದಿಂದ ಈಗಾಗಲೇ ೧೦೦೦ ನಾಟಕಗಳು ತೆಲುಗಿನಲ್ಲಿ ಪ್ರಕಟವಾಗಿವೆಯಂತೆ. ಈ ನಾಟಕಗಳ ರಚನೆಯಲ್ಲಿ ಕೆಲವರು ಆಂಗ್ಲಮಾರ್ಗವನ್ನು, ಇನ್ನಿತರರು ಹಳೆಯ ಸಂಪ್ರದಾಯದ ಮಾರ್ಗವನ್ನು ಅನುಸರಿಸಿರುವರು. ಅನುವಾದಗಳೇ ಹೆಚ್ಚೆಂದು ಪಂಡಿತರ ಅಭಿಪ್ರಾಯ. ಬಳ್ಳಾರಿಯ ಧರ್ಮಾವರಂ ರಾಮಕೃಷ್ಣಮಾಚಾರ್ಯರು, ಕೋಲಾಚಲಂ ಶ್ರೀನಿವಾಸರಾಯುರು, ಹೊಸಪೇಟೆಯ ಸಿ. ಹೆಚ್. ಗೌಡರು, ಹರಪನಹಳ್ಳಿಯ ವಕೀಲ ಶ್ರೀಪತಿರಾಯರು ತೆಲುಗು ನಾಟಕಗಳನ್ನು ಕನ್ನಡ ನಾಟಕಗಳನ್ನು ಬರೆದು, ಬಳ್ಳಾರಿಯಂತಹ ನಗರದಲ್ಲಿ ೧೯೩೪ರ ವರೆಗೆ ರಂಗಭೂಮಿಯ ಮೇಲೆ ತಂದ ವಿಷಯ, ನನ್ನ ಸ್ವಂತ ಅನುಭವದ ಮಾತು. ಕನ್ನಡ ಸೀಮೆಯಾದ ಬಳ್ಳಾರಿಯು ತೆಲುಗು ನಾಟಕಗಳಿಗೆ ಸಲ್ಲಿಸಿದ ಸೇವೆ ಅಪಾರವಾದುದು. ಉತ್ತರದಲ್ಲಿ ಶ್ರೀ. ಕಂದುಕೂರಿ ವೀರೇಶಲಿಂಗಂ, ಚಿಲಕಮರ್ತಿ ಲಕ್ಷ್ಮೀನರಸಿಂಹಂ, ಪಾನುಗಂಟಿ ಲಕ್ಷ್ಮೀನರಸಿಂಹ ರಾಯರು, ಬಲಜೇಪಲ್ಲಿ ಲಕ್ಷ್ಮೀಕಾಂತಂ ಇವರ ಸೇವೆ ಅಮರವೆಂದು ನನ್ನ ಭಾವನೆ. ಈ ನಾಟಕಗಳ ವಸ್ತು ಮೊದಲಿಗೆ ಪೌರಾಣಿಕ ವಾದರೂ, ಬರುಬರುತ್ತ ಸಾಮಾಜಿಕ ಸಮಸ್ಯೆಗಳ ಕಡೆ ಆಂಧ್ರರ ನೋಟ ಹೊರಳಿದುದು ಕ್ರಾಂತಿಪುರುಷ, ಆಂಧ್ರ ಪದ್ಯಸಾಹಿತ್ಯ ನಿರ್ಮಾತೃ ವಾದ ಕೀ. ಶೇ. ವೀರೇಶಲಿಂಗಂ ಪಂತುಲು ಇವರಿಂದಲೇ ಎಂದೆನ್ನ ಬಹುದು. ಇವರ ಲೆಕ್ಕಣಿಕೆ ಎಷ್ಟು ಹರಿತವಾಗಿತ್ತೋ. ಅಷ್ಟೇ ವೇಗ, ಅದೇ ಧೋರಣೆ ಅವರ ಮಾತಿನ ಸರಣಿಯಲ್ಲಿತ್ತು. ತಮ್ಮ ಯಾವ ಜ್ಜೀವನವನ್ನೇ ತೆಲುಗು ಬಾಷಾಸೇವೆಗಾಗಿ ಮುಡುಪಿಟ್ಟು ತನ್ಮೂಲಕ ಜನರ ಸೇವೆ ಮಾಡಿ ಅವರನ್ನು ಸುಧಾರಿಸುವ ಉದ್ದೇಶ ಅವರ ದಾಗಿತ್ತು. ಅಷ್ಟೇ ಪ್ರಮಾಣದಲ್ಲಿ ಗುಡ್ಡಗಾಡು ಪ್ರದೇಶದಲ್ಲಿಯ ಜನರ ಏಳಿಗೆಗಾಗಿ ದುಡಿದು, ಅವರನ್ನು ನಾಗರಿಕನ್ನಾಗಿ ಮಾಡಿ ತನ್ನ ಕೆಲಸದಲ್ಲಿ ಯಶಸ್ಸು ಪಡೆದ ಧನ್ಯಜೀವಿ ಕೀ. ಶೇ. ಗಿಡುಗು ರಾಮ ಮೂರ್ತಿಗಳು. [ವೀರೇಶಲಿಂಗಂ ಪಂತುಲು ಅವರ ಹೆಸರನ್ನು ಆಂಧ್ರ-ರಲ್ಲಿಪ್ರತಿಯೊಬ್ಬರೂ ನೆನಪಿಡತಕ್ಕದ್ದು.] ಭಾಷೆಯ ಸಂಸ್ಕರಣ, ಜನಸಂಸ್ಕರಣ. ಪತಿತೋದ್ಧಾರ, ಬಾಲ್ಯವಿವಾಹಖಂಡನ, ವಿಧವಾ ಪುನರ್ವಿವಾಹ, ಮುಂತಾದುವುಗಳಿಗೆ ತಮ್ಮ ಜೀವನವನ್ನೆಲ್ಲ ಸವೆಯು ವಂತೆ ದುಡಿದ ಪುಣ್ಯಜೀವಿ. ಆಂಧ್ರಸಾಹಿತ್ಯ, ನಾಟಕ, ಕತೆ, ಕಾದಂಬರಿ, ಕವಿತೆ, ವಿಮರ್ಶೆ, ಪತ್ರಿಕಾ ವ್ಯವಸಾಯ, ಇವೆಲ್ಲ ನಾನಾ ರೂಪದಲ್ಲಿ ಹೇರಳವಾಗಿ ಬೆಳೆದುಬಂದಿವೆ. ಹೆಚ್ಚಿನ ವಿವರಗಳು ಇಲ್ಲಿ ಅನವಸರ. ಕನ್ನಡದಲ್ಲಿದ್ದಂತೆ ಪ್ರಗತಿಪರ ಮಾರ್ಗದವರೂ ಇರುವರು; ಸಂಪ್ರದಾಯವಂತರೂ ಇರುವರು. ಹೆಚ್ಚು ಚುಚ್ಚುವಂತೆ ನಮಗೆನಿಸುವುದೆಂದರೆ, ಆಂಧ್ರಸಾಹಿತ್ಯದಲ್ಲಿ ಬೆಳೆದುಬಂದಿರುವ ಮನೆಮಾತಿನ ಶೈಲಿ. ಗದ್ಯಸಾಹಿತ್ಯದಲ್ಲಿ ಇದು ವ್ಯಾಪಕ; ಕಾವ್ಯ ಕವನಗಳಲ್ಲಿ ಇದು ಹೆಚ್ಚು ಪ್ರವೇಶ ಮಾಡಿಲ್ಲ. ಕಳೆದ ಕೆಲವು ವರುಷಗಳಲ್ಲಿ ಈ ಮನೆ ಮಾತಿನ ಶೈಲಿ ಒಂದು ನಿಯಮಿತ—ವ್ಯವಸ್ಥಿತಸ್ಥಿತಿಗೆ ಬಂದಿದೆ. ಇಂತಹ ಪ್ರಯತ್ನ ನಮ್ಮಲ್ಲಿ ನಾಟಕಗಳಲ್ಲಿ, ಸಂಭಾಷಣಾಸಾಹಿತ್ಯ ದಲ್ಲಿ ಬಂದಿದ್ದರೂ, ಇನ್ನೂ ಹೆಚ್ಚುಹೆಚ್ಚು ಬಳಕೆಗೆ—ಇತರ ವಿಭಾಗ ಗಳಲ್ಲಿಯೂ ಬಂದರೆ, ಒಳಿತೆಂದು ನನ್ನ ನಮ್ರ ಸೂಚನೆ.

ಈ ಮೇಲೆ ಸೂಚಿಸಿದ ಆಂಧ್ರಸಾಹಿತ್ಯದ ಇತಿಹಾಸ ಇಂದಿನ ತೆಲುಗರ ಜನಜೀವನವನ್ನು ಚಿತ್ರಿಸುವುದಲ್ಲದೆ, ಹಿಂದಿನ ಸಾಹಿತ್ಯ-ಪರಂಪರೆಯನ್ನು ಅವರು ಹೇಗೆ ಕಾಯ್ದುಕೊಂಡು ಬಂದಿದ್ದಾರೆ-ಯೆಂಬುದನ್ನು ಸೂಚಿಸುತ್ತದೆ. ಈ ಬೆಳವಣಿಗೆಯೊಂದಿಗೆ ಕನ್ನಡ ಜನಾಂಗದ ಸಂಪರ್ಕ ಹೇಗೆ ಬೆಳೆಯಿತು—ಈ ಎರಡು ಜನಾಂಗಗಳಲ್ಲಿ ಸಂಸ್ಕೃತಿ ಹೇಗೆ ಅಭಿವೃದ್ಧಿಹೊಂದಿತೆಂಬ ವಿಷಯ ಮತ್ತೊಂದು ಸಮಯ ಬರೆದರೆ ಒಳಿತಾಗಬಹುದು.

ಅನಾದಿಕಾಲದಿಂದ ಒಂದೇ ಲಿಪಿಯ ಸಾಮ್ಯತೆಯಿಂದ ಬೆಳೆದು ಬಂದ ಆಂಧ್ರ-ಕರ್ನಾಟಕರಲ್ಲಿ ಕೆಲವೊಂದು ಹೋಲಿಕೆಗಳಿವೆ ವಿವಾ. ಹಾದಿ ಕ್ರಮಗಳು, ಹಬ್ಬದ ಆಚಾರಗಳು, ಗ್ರಾಮದೇವತೆಯ ಪೂಜೆ-ಗಳು, ಊರುಗಳಿಗೆ ಪೀಡೆ ಮುಂತಾದುವುಗಳನ್ನು ಹೋಗಲಾಡಿಸುವ ಪುರಸ್ಕಾರಗಳು, ನಾಡ ಹಿರಿಯಹಬ್ಬಗಳ ಆಚರಣೆಯ ವಿಧಾನಗಳು, ಇತ್ಯಾದಿಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ ನವರಾತ್ರಿಯ ಹಬ್ಬವನ್ನು ನಮ್ಮಂತೆ ಅವರೂ ಆಚರಿಸುವರು. ದೀಪಾವಳಿಯ ಹಬ್ಬಕ್ಕೆ ಅಲ್ಲಿ ಹೆಚ್ಚು ಪ್ರಾಶಸ್ತ್ಯವಿಲ್ಲ. ಇರ್ವರ ಯುಗಾದಿ ಉತ್ಸವಗಳು ಒಂದೇ ರೀತಿ ಯವು. ಶ್ರೀರಾಮರ ನಾಡೆಂದು ಹೆಸರಾದ ಈ ತೆಲುಗರ ನಾಡು, ಶ್ರೀರಾಮನವಮಿಯ ಉತ್ಸವವನ್ನು ಶ್ರೀರಾಮ ನವರಾತ್ರಿಯೆಂದು ಬಹಳ ವಿಜೃಂಭಣೆಯಿಂದ ಆಚರಿಸುವುದು, ಅವರ ಆಹಾರ ಉಡುಗೆ-ತೊಡಿಗೆಗಳಲ್ಲಿ ಕೊಂಚ ವ್ಯತ್ಯಾಸವಿದ್ದರೂ ಅವು ಅಲ್ಲಲ್ಲಿಯ ಬೆಳೆ ಮತ್ತು ಹವೆಯನ್ನು ಅನುಸರಿಸುತ್ತವೆ. ಅವರು ಕೊಂಚ ಗಡುಸು ಜನ' ಆಂತೆಯೆ ಅವರ ಸಾಹಿತ್ಯದಲ್ಲಿ ಹೆಚ್ಚು ಓಜಸ್ಸಿದೆಯೆಂದು ಕೆಲವರ ಅಭಿ ಪ್ರಾಯವಿದೆ. ಅಂತಹ ಸಾಹಿತ್ಯ ಕನ್ನಡದಲ್ಲಿಯೂ ಇದೆ. ಕನ್ನಡಿಗರಲ್ಲಿ ರುವ ಶೀಲ, ನುಡಿಯಂತೆ ನಡೆ, ನಿಷ್ಕಪಟವೃತ್ತಿ, ಶುದ್ಧವಾದ ಮನಸ್ಸು, ಪರೋಪಕಾರ ಸ್ವಭಾವ ಇವುಗಳನ್ನು ಅವರಲ್ಲಿಯೂ ನಾವು ಕಾಣ ಬಹುದು. ಸಮುದ್ರತೀರ, ನದಿಯ ಡೆಲ್ಟಾಭೂಮಿಗಳಲ್ಲಿರುವ ಇವರಿಗೆ ಕ್ಷಾಮವೆಂಬ ಮಾತು ದೂರವೇ ಸರಿ. ಕವಿಜನಸನ್ಮಾನ, ಊರಲ್ಲಿಯ ಸಾಹಿತ್ಯಿಕ ಉತ್ಸವಗಳು, ನಮ್ಮಲ್ಲಿಯಂತೆ ಅಲ್ಲಿಯೂ ನಡೆಯುತ್ತದೆ. ಕವಿಗಳು ತಮ್ಮ ಬಿರುದುಗಳಿಂದ ಹೆಮ್ಮೆ ಪಡುವುದು, ತಮ್ಮ ಹೆಸರು ಗಳ ಮುಂದೆ ಅವನ್ನು ಬರೆದುಕೊಳ್ಳುವುದು ದೇಶಾಚಾರದಮಾತಾಗಿ ಹೋಗಿದೆ. ಈ ವಿಷಯ ಕನ್ನಡಿಗರಿಗೆ ಹೊಸತೆನಿಸಬಹುದು: ಶತಾವ ಧಾನಿ, ಅಷ್ಟಾವಧಾನಿಗಳ ಸಭೆ ನಡೆಸಿ ಜನರನ್ನು ತಮ್ಮ ಅಪಾರ ಪಾಂಡಿತ್ಯದಿಂದ ಮೆಚ್ಚಿಸುವುದು ಕೆಲವು ಪಂಡಿತರ ವಂಶಪಾರಂಪ ರ್ಯದ ಸೊತ್ತಾಗಿ ಉಳಿದಿದೆ. ಆಶುಕವಿತ್ವ ಸರ್ವಸಾಮಾನ್ಯವಾದ ಮಾತೇ ಸರಿ

(೨೪೦ನೆಯ ಪುಟದ ಅಡಿಯಲ್ಲಿ)

ಪ್ರಾಣದ ಕರೆ

ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್ ಎಲ್. ಬಿ.
ಮುಂಬಯಿ.

ನಾ ಹೊಕ್ಕೆನು ನಿನ್ನ ಇಂದ್ರಲೋಕದಲಿ
ಸೂರ್ಯ ಚಂದ್ರ ವರುಣ ಸಮೀರ ಅಗ್ನಿ ಕುಬೇರರ ನಾಕದಲಿ
ಏಕಾಂತ ನಾನು ಕಾಣೆ
ಬಾಯೆಂದು ಕೂಗಿ ಕರೆಯುತಿದೆ ಪ್ರಾಣ ತಾನೇ
ಆ ರಮ್ಯ ವೃಂದಾವನವಿಹಾರ ಕೇಳಿಯಲಿ
ತಲ್ಲೀನನಾಗಲೆಳೆದೊಯ್ಯುತಿದೆ
ಕೈಕಾಲ್ಗಳ ತುಯ್ಯುತಿದೆ
ನವೋನ್ಮಾದದ ಗಾವಳಿಯಲಿ.

ವನತುಂಬಿ ತೊನೆದಾಡುವ ಕಲ್ಪನಾದಳದ
ಹೂಜೊಂಪದಲಂಪಲ್ಲ
ಹೊರಹೊಮ್ಮುವ ಬೆಡಗಿನೊಡ್ಡವ ಕಂಪಲ್ಲ
ತೋಂಗಲಲಿ ತಂಗಿದ ಕೋಗಿಲಗಾನದಿಂಪಲ್ಲ
ಧೂಮ್ರಪಾನವಿನೋದದಿ ಮಾಂಸಲತನು ಗುರುಪೀಠದಿ
ಹೇರುವ ಡೊಂಬುದೆಕ್ಕಾಳದ ಹಣವಲ್ಲ
ಶ್ರೀಕೃಷ್ಣನ ನಮಿಸಿ ಶಂಕರಾಚಾರ್ಯರ ಭಾನುಮುಖಕೆ
ಉಗುಳಿ ಕೇಣಗಿಡಿ ನಂದಿಸುವ ಜಾಣಲ್ಲ.

ಕಂಕಾಲಮಾಂಸನರ ಜಾಲಗಳ ಸೆರೆಯಿಂದ
ಮುಕ್ತಜೀವ ವಿಹರಿಸೆ ನೆಲಬಾನು ಸ್ವಚ್ಛಂದ
ಎದೆಯಾಳದಿಂದುಕ್ಕುವ ಗಾನದಾಲಾಪಲಯಕೆ
ಓಗೊಡುವ ಹುಚ್ಚು ಬಯಕೆ.

ಹಿಮಶೈಲ ಶೃಂಗದಿ ಗುಡಿಯೆತ್ತಿ ನೋಡಿದೆ ವಿಶ್ವಮುಖ
ರೂಪುರೇಷೆಗಳನೆಳೆದು ಪಡಿಯಚ್ಚನೊತ್ತಿದೆ
ಧವಳ ಹಾಳೆಗಳ ಮೇಲೆ.

ಪ್ರಾಣವೆರೆದಿಹ ಅಶ್ರುಧಾರೆಯಲಿ
ಪಲ್ಲವಿಸಿ ಹೊಗರಿಡುವ ಕವನ ಕುಸುಮಾವಳಿ
ಚೆಲ್ಲುವೆನು ಅತ್ತಿತ್ತ
ಪಯಣಿಗರಿಗೆ ಕಾಣಿಕೆಯೆಂತ.

ಕಟ್ಟರಣ್ಯ ಕಾವಳದಲಿ ಓಡಾಡುವ ಪ್ರಾಣ
ಅಡ್ಡೈಸುವದನು ಕಡಿದುಡಿದು ಹಿಡಿವಿದೆ ದೂರಯಾನ
ಚಿರಜ್ಯೋತಿಯ ಬೆಳಕಿಗಾಗಿ
ಅಸ್ಖಲಿತ ಅಳಬಳದಿ ದುಮ್ಮಾಳಿಸಿ ನೂಗಿ.
“ ತಮಸೋ ಮಾ ಜ್ಯೋತಿರ್ಗಮಯ ”
ಈ ವಿಗ್ರಹ ಸಮಗ್ರ ಆಲಾಪ-ವಿಲಾಪಗಳ ಪಡಿಸೊಳು
ಏ ನನ್ನಂಥ ಅಂಧಕ ಪಯಣಿಗ ಕೇಳು
ಈ ವಚೋವೈಖರಿಯ ಮಹಾಪ್ರವಾಹವಲ್ಲು
ಆ ದಿವ್ಯಪಥ ಮುಟ್ಟುವ ಕಳವಳದಿ
ಅಳಬಳ ಅಳವಡಿಸಿ ಅಂಘೈಸಲು
ಜಗಜಂಜಡದ ಪರಿತಾಪರಂಪದಿ
ಜುಣುಗಿ ಜರ್ಜರಿತ ಜೀವಕೆ ಬೇಕು
ನಿನ್ನ ಕೃಪಾಸಾದ ಹೇ ಕಾವ್ಯದೇವಿ
ಅದನು ತೊರೆದರೆ ನಾಮೃತಾಮ್ಮ

ಜೀವಂತನಾಗಿ ಜೀವಿಸಲೆಂದೇ ಸುತ್ತಾಡುವೆ ನಿನ್ನ
ದಿವ್ಯ ಲೋಕದಲಿ.

(೨೩೯ನೆಯ ಪುಟದಿಂದ ಬಂದುದು)

ಈ ಎರಡೂ ಭಾಷೆಗಳ ಲಿಪಿಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಕೆಲವೇ ಅಕ್ಷರಗಳ ಬದಲಾವಣೆ ಇದೆ. ಆದರೆ ಉಚ್ಚಾರದಲ್ಲಿ ಬಹಳ ಅಂತರ. ಇದರ ಕಾರಣವನ್ನು ಭಾಷಾಶಾಸ್ತ್ರಜ್ಞರೇ ಹೇಳಬೇಕು.

ಹೀಗೆ ನಮ್ಮ ಈ ಎರಡು ಸಂಸ್ಕೃತಿಗಳು ಪುರಾತನಕಾಲದಿಂದ ಬದಿಬದಿಯಲ್ಲಿ ಬೆಳೆದು ಬಂದು, ಪರಸ್ಪರ ಪೋಷಕವಾಗಿವೆಯೇ ಹೊರತು ನಾಶಕಾರಕವಾಗಿಲ್ಲ. ಇನ್ನು ಮುಂದೆಯೂ ಈ ಎರಡೂ ಸಂಸ್ಕೃತಿಗಳು ಬಲಗೊಂಡು, ಭಾಷಾದೃಷ್ಟಿಯಿಂದಲೂ, ಇನ್ನಿತರ ದೃಷ್ಟಿಯಿಂದಲೂ ಬೆಳೆದು ಬಲಗೊಳ್ಳುವಂತಾಗಲು, ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲ ಭಾಷೆಗಳ ಪ್ರೌಢ ವಿದ್ಯಾಭ್ಯಾಸಕ್ಕೆ ಅನುಕೂಲತೆ ಒದಗಬೇಕು. ಇದಾದರೆ, ಕಾಲಾಂತರದಲ್ಲಿ ಹೆಚ್ಚಿನ ಸಂಶೋಧನೆ ನಡೆದು ಪರಸ್ಪರ ಭಾಷೆಯ ಅಭಿವೃದ್ಧಿಗೆ ಕಾರಣವಾಗುವುದು. ದೇಶದ ಏಳಿಗೆಗೆ ಸಹಾಯಕವೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ತೆಲುಗಿನಲ್ಲಿ ಟೈಪರಟರ್ ನಿರ್ಮಾಣವಾಗಿ ಈಗಾಗಲೇ ಇಪ್ಪತ್ತು ವರುಷಗಳಾದುವು. ಕನ್ನಡ ನಾಡಿನಲ್ಲಿ ಈ ಸೌಕರ್ಯ ಎಂದುಂಟಾಗುವುದೊ ತಿಳಿಯದು. ಲಿಪಿಯಲ್ಲಿ ಸಾಮ್ಯತೆಯಿರುವ ನಮ್ಮ ಭಾಷೆಗೆ ಬೇಗ ಬರಬಹುದಾಗಿತ್ತು. ಮುಂದಾದರೂ ಈ ಕೊರತೆ ಬೇಗ ಈಡೇರಲಿ.

ನಮ್ಮ ಸಾಹಿತ್ಯಿಕ ಮಿತ್ರರಿಗೊಂದು ಮಾತು: ಉಭಯ ಭಾಷಾ ಪರಿಚಿತ ಸಾಹಿತ್ಯಿಕಗಳು ಕೇವಲ ಲಲಿತಸಾಹಿತ್ಯದ ನಿರ್ಮಾಣದ ಕಡೆ ಲಕ್ಷ್ಯ ಕೊಡುವುದಲ್ಲದೆ ಪ್ರೌಢಸಾಹಿತ್ಯದ ಬೆಳವಣಿಗೆಯಲ್ಲಿಯೂ ಆಸಕ್ತಿ ತೋರಿ ಸಹಕರಿಸಬೇಕಾಗಿ ವಿನಂತಿ.

(೨೩೬ನೇ ಪುಟದಿಂದ ಬಂದುದು)

ಒಳಗಡೆ ನೋಡುವ ಕುತೂಹಲವನ್ನು ತಡೆಯುವುದಾಗಲಿಲ್ಲ. ಇಣುಕುತ್ತಾಳೆ. ಕಾಣಿಸದಾದ ಹಾಗೆ ಎದ್ದು ಆಕಡೆ ಈಕಡೆ ನಿಂತು ಧ[illegible]ದಿಂದೆಂಬಂತೆ ಕಣ್ಣು ಚಾಚಿ ನೋಡುತ್ತಾಳೆ. ಏನೋ ಸದ್ದು ಕೇಳಿದ ಹಾಗೆ—ಪಟಕ್ಕನೆ ಬಂದು ಕುಳಿತು ಮತ್ತೆ ಕೆಲಸಕ್ಕೆ ತೊಡಗುತ್ತಾಳೆ—ಆದರೆ ತಡೆಯಲಾಗದೆ ಮತ್ತೆ ಮೊದಲಿನಂತೆಯೆ ಆಗ ಹೊರಬಾಗಿಲ ಸದ್ದು ಕೇಳಬರುತ್ತದೆ—ಏನು ಸದ್ದು ಎಂಬುದನ್ನು ಗೊತ್ತು ಹಿಡಿಯದೆ— "ಬಂದರವ್ವ" ಎನ್ನುತ್ತ, ಲಗುಬಗೆಯಿಂದ ಬುಟ್ಟಿಯನ್ನೆತ್ತಿಕೊಂಡು ಒಳಗಡೆ ಧಾವಿಸುವಳು. ಎಡಗಡೆಯಿಂದ ರಮೇಶ-ಮಂದಾಕಿನಿಯರ ಪ್ರವೇಶ. ಮಂದಾಕಿನಿ ಆತ್ಯಾಧುನಿಕ ಯುವತಿ—ಸುಂದರಿ—ಎಂದು ಹೇಳಿದರೆ ಸಾಕಲ್ಲವೇ ?)

ರಮೇಶ— ಎಲ ! ಯಾರೂ ಇಲ್ಲೇ ಇಲ್ಲಲ್ಲ ! ಎಲ್ಲಿ ಹೋದರೊ !

ಮಂದಾ— ಇದೇ ಏನು ನೀವು ಆಗಲೆ ನನಗ ಹೇಳಿದ್ದು ? ಮನೀಗೆ ಹೋದ ಕೂಡಲೆ ನಿನಗೊಂದು ಮೋಜು ತೋರಿಸತೀನಿ ಅಂತ ? ಏನು ಮೋಜು ಅದು, ಈಗಾದರೂ ಹೇಳಬಾರದ ? ದಾರಿಗುಂಟ ಹತ್ತು ಸಾರೆ ಕೇಳಿದರೂ ಹೇಳಲಿಲ್ಲ—

ರಮೇಶ— (ಸಾಮಾನುಗಳನ್ನು ಒಳಗೆ ಸಾಗಿಸುತ್ತ) ಮೋಜಂದ್ರ, ಹೀಂಗ— ಆದರ—ಏ— (ಎಂದು ಒಳಗೆ ಕರೆಯುತ್ತ) ಯಾರೂ ಇಲ್ಲೇ ಇಲ್ಲ ಏನು ? ಎಲ್ಲಿ ಹೋದಳು ಈಕೆ ?—ಏ—

ಮಂದಾ— ಇರಬೇಕು ಹಿತ್ತಲ ಕಡೆ—ಯಾತಕ್ಕಾದರೂ ಹೋಗಿರಬೇಕು—ಅಲ್ಲ—

ರಮೇಶ— ಆದರ—ಇಂವ ಬರಲೇ ಇಲ್ಲೋ ಏನು ಮಣ್ಣೊ ?— ಅಥವಾ ಬಂದು ತಿರುಗಿ ಹೋದನೋ ಮಹಾರಾಯ ಮತ್ತ ? ಛೇ, ನಾನು ಮೊದಲು ಸ್ಟ್ಯಾಂಡಿಗೆ ಹೋಗಿಯೇ ಸ್ಟೇಶನ್ನಿಗ ಬರಬೇಕಿತ್ತು—

ಮಂದಾ— ಯಾರು ಬರಲಿಲ್ಲ ? ಏನು ಮಾತಾಡಲಿಕ್ಕೆ ಹತ್ತೀದಿರಿ ? ಆಂ ? ಮತ್ತ ಯಾರಾದರೂ ಬರೋವವರು ಇದ್ದರೇನು ?

ರಮೇಶ— ಆಂ ?—ಹುಂ—ಅದೇ—ನಾನು ನಿನಗ ತೋರಿಸಬೇಕಾಗಿದ್ದ ಮೋಜು. ಆದರ ಈ ಪ್ರಾಣಿ ಬರಲೇ ಇಲ್ಲ ಅಂತ ಕಾಣಿಸತ್ತದ—ಅಥವಾ—ಬಂದು—

ಮಂದಾ— ಯಾರು ? ಮತ್ತು ಯಾರು ಬರೋವವರು ಇದ್ದರು ?

ರಮೇಶ— ನನ್ನ ಒಬ್ಬ ಗೆಳೆಯ ಬರುವವ ಇದ್ದ. ಸ್ಟ್ಯಾಂಡಿಗೆ ಹೋಗಬೇಕಾಗಿತ್ತು. ಆದರ, ಸ್ಟೇಶನ್ನಿಗೆ ಬರಲಿಕ್ಕೆ ತಡಾ ಆಗಿಬಿಡಬಹುದು ಅಂತ ಮೊದಲ ಅಲ್ಲಿಗೆ ಬಂದುಬಿಟ್ಟೆ—

ಮಂದಾ— ಆದರ ಯಾರು ಅವರು—ಇಂಥಾ ಸರಿ ಒದ್ದಾಡಲಿಕ್ಕೆ ? ಬಂದರ ಬರತಾರಲ್ಲ—ಈಗಂತೂ ಬಂದಿಲ್ಲ ? ಯಾರು ಅವರು ?

ರಮೇಶ— ನಿನಗೇನು ಗೊತ್ತು ? ನನ್ನ ಒಬ್ಬ ಫ್ರೆಂಡ್ ಇದ್ದಾನ— ವಾಸುದೇವರಾಯ ಅಂತ !

ಮಂದಾ— ವಾಸುದೇವರಾಯ ?

ರಮೇಶ— ಯಾಕ ? ನಿನಗ ಗೊತ್ತೇನು ? ನಿನಗ ಗುರುತು ಅದ ಏನು ? ಅವನೂ ಬೆಳಗಾಂವಿಯಿಂದೇ ಬರುವವ ಇದ್ದ.

ಮಂದಾ— ವಾಸುದೇವರಾಯರು ಇಲ್ಲಿಗೆ ಬರತಾರ ? ಹೌದ ? ಇಲ್ಲಿಗೆ ಬರೋವವರು ಇದ್ದಾರ ? ಹೌದ ?

ರಮೇಶ— ಇಷ್ಟು ಯಾಕ ಆಶ್ಚರ್ಯ ಅದಕ್ಕ ? ಹೌದು ಅವನೇ ಬರುವವ ಇದ್ದ—

ಮಂದಾ— (ವಿಚಾರಪರವಶಳಂತೆ) ಹುಂ—ಹಾಂಗಿದ್ದರ—

ರಮೇಶ— ಏನು ಹಾಂಗಿದ್ದರ ?

ಮಂದಾ— (ಎಚ್ಚೆತ್ತು) ಏನೂ ಇಲ್ಲ—(ನಸುನಕ್ಕು) ಹಾಂಗಿದ್ದರ ನೀವು ಹೇಳಿದ್ದೇ ಖರೆ ಅಂದ್ಹಾಂಗಾಯ್ತು ಇದು ! ಒಂದು ಮೋಜೇ ಆಯ್ತು !

ರಮೇಶ— ಮೋಜೇನು ಮಣ್ಣು ಆಯ್ತು—ಇಂವ ಬರಲೇ ಇಲ್ಲ ಅಂದ ಮ್ಯಾಲೆ—ನಾ ಮೊದಲೇ ಹೇಳಿ ಬಂದಿದ್ದೆ: ಬಂದರ ಅವನ್ನ ಗೊತ್ತಿಲ್ಲದವ ಅಂತ—

ಮಂದಾ— ಗೊತ್ತಿಲ್ಲದವ ? ಯಾರಿಗೆ ಗೊತ್ತಿಲ್ಲದವ ?

ರಮೇಶ— ಯಾರಿಗೇನು ? ಇಕಿಗೆ ಅವನ ಗುರುತು ಇಲ್ಲ ! ಅದಕ್ಕೇ ಹೇಳಿದ್ದೆ—ಆದರೂ ಇಕಿಗೆ ಏನೋ ಘೋಟಾಳೆ ಮಾಡಿಬಿಟ್ಟಳು—ಏ ?

ಮಂದಾ— (ನಕ್ಕು) ಸುಧಾಗ ವಾಸುದೇವನ ಗುರುತು ಇಲ್ಲ ?

ರಮೇಶ— ಇಲ್ಲ ! ಅದಕ್ಕೇ—

ಮಂದಾ— ಅದಕ್ಕೇ ಏನು ತಿಳಿದ್ರಿ ತಳಿ ? ಆಕಿಗೆ ವಾಸುದೇವನ ಗುರುತು ಅದ !

ರಮೇಶ— ಗುರುತು ಅದನ ?

ಮಂದಾ— ಗುರುತ ಅದ—ಅದ—ಅದ ! ಬರೇ ಗುರುತು ಯಾಕ— ಹಾಂಗ ಕೇಳಿದರ—

ರಮೇಶ— ಅಂದರ ?

ಮಂದಾ— ಹೋಗಲಿ ಬಿಡಿರಿ—ಅವನ್ನೆಲ್ಲ ತೊಗೊಂಡು ಈಗ ಏನು ಮಾಡೋಣು ? ಎಂದಿನ ಕತೀಯೊ—

ರಮೇಶ— ಎಂದಿನ ಕಥಿ ಅಂದರ ? ಏನು ? ಹೇಳಬಾರದ ?

ಮಂದಾ— ಹೌದು—ಹೇಳಬಾರದು—ಅಥವಾ ಹೇಳಿದರೂ ಏನು— ಅದಕ್ಕ ಏನೂ ಮಹತ್ತ್ವ ಇಲ್ಲ !

ರಮೇಶ— ನಿನಗ ಇರಲಿಕ್ಕಿಲ್ಲ—ನನಗ ಅದ—ಏನು ? ಏನು ಕಥಿ ?

ಮಂದಾ— ನಿಮ್ಮ ಮುಂದೆ ಸುಧಾ ಹೇಳಿಯೇ ಇಲ್ಲೇನು ?

ರಮೇಶ— ಏನೂ ಅನ್ನೋದನ್ನ ಹೇಳದೇ ಮತ್ತು ಮತ್ತೂ ಅದೇ ಮಾತು—ಏನು ಕಥಿ ಹೇಳಬಾರದ ?

ಮಂದಾ— ಇಷ್ಟು ಯಾಕ ತಲಿ ಕೆಡಿಸಿಕೋತೀರಿ ? ಅಂಥಾದ್ದೇನೂ ಇಲ್ಲ—ಒಂದ ಕಾಲಕ್ಕ ವಾಸುದೇವನ್ನ ಮದಿವಿ ಮಾಡಿಕೋಬೇಕು ಅಂತ ಇತ್ತು ಆಕೆಯ ಮನಿಸಿನೊಳಗ—ಅವನ ಮನಸಿನಾಗೂ ಇತ್ತು. ಆದರ ಯಾಕೋ ಅದು ಕೂಡಿಬರಲಿಲ್ಲ ! ಇಷ್ಟೇ !

ರಮೇಶ— (ವಿಚಾರದಲ್ಲಿ ಸಿಕ್ಕವನಂತೆ) ಹ್ಯಾಂಗ? ಹುಂ—ಮೋಸ—ವಿಶ್ವಾಸ—ಮೋಸ ಇದು—ಈಗೀಂದೀಗ ಕೇಳಿಬಿಡತೀನಿ ತಡೆ! ಏ—

ಮಂದಾ— ನೀವು ಅಂಥಾದೇನಾದರೂ ಜಗಳಾ ಹೂಡೋಹಾಂಗಿದ್ರ ನಾನು ಈಗೀಂದೀಗ ಹೊರಟುಹೋಗತೇನಿ. ತಿಳೀತಿಲ್ಲೊ?

ರಮೇಶ— ಕೇಳಬಾರದು ಅಂತೀಯಾ ಹಾಂಗಾದರ?

ಮಂದಾ— ನಾನು ಹೊರಟುಹೋದಮ್ಯಾಲೆ ಬೇಕಾದರ ಕೇಳಿ-ಕೊಂಡೀರಂತ— ಈಗಂತೂ ಕೇಳುವ ಹಾಂಗಿಲ್ಲ!

ರಮೇಶ— ಆಕಿಯಾದರೂ ಹೇಳಬಾರದಾಗಿತ್ತು—ಅಂತಲೂ ಅಂತೀ-ಯೇನು?

ಮಂದಾ— ಯಾತಕ್ಕ ಹೇಳಬೇಕು? ನೀವು ಹೇಳೀದೀರೇನು? (ತಡೆದು) ನೀವು ಹೇಳಿದೀರೇನು?

ರಮೇಶ— ಇಲ್ಲ!

ಮಂದಾ— ಹಾಂಗಿದ್ದರ ಆಗಿಹೋಯ್ತು! ನಿಮ್ಮ ಸೀಕ್ರೆಟ್ ನಿಮಗ, ಆಕೆಯ ಸೀಕ್ರೇಟ್ ಆಕಿಗೆ—

ರಮೇಶ— ಆದರ ಹ್ಯಾಂಗ ಗಂಡಾ-ಹೆಂಡತೀ ನಡುವ ಸೀಕ್ರೆಟ್ಸ್ ಇದ್ದರ— ಅವರು ಗಂಡಾ-ಹೆಂಡತೀನೇ ಅಲ್ಲ—

ಮಂದಾ— ಅದೆಲ್ಲ ಇರಲಿ ತತ್ತ್ವ— ಮನುಷ್ಯ ಇರೋದು ಈ ಪ್ರಪಂಚದಾಗ— ಕಲ್ಪನಾಸಾಮ್ರಾಜ್ಯದಾಗ ಅಲ್ಲ! ಈಗ ಇಲ್ಲೆ ನಿಂತು ಬರೇ ಮಾತಾಡೋದೇ ಆಯ್ತು. ಒಳಗ ಹೋಗಿ ನೋಡಿಯಾದರೂ ನೋಡಿರಿ—

(ಗಂಗವ್ವ ಒಳಗಿನಿಂದ ಅವಸರವಾಗಿ ಬರುತ್ತಾಳೆ.)

ರಮೇಶ— ಮನೆಯೊಳಗ ಇಲ್ಲೇನು ಈಕೆ?

ಗಂಗವ್ವ— ಆದಾರರಿ— ಅಲ್ಲಿ ಹಿತ್ತಲತೋಟದಾಗ ಕುಂತಾರರಿ—

ರಮೇಶ— ಊರಿಂದ ಯಾರೂ ಬರಲಿಲ್ಲೇನು?

ಗಂಗವ್ವ— ಬಂದಾರರಿ— ಅವರೂ ಅಲ್ಲಿಯೆ ಕುಂತಾರರಿ; ನಿಮ್ಮನ್ನೂ ಅಲ್ಲಿಗೇ ಕರಕೊಂಡು ಬಾ ಅಂತ ಹೇಳಿದರರಿ— ಅಲ್ಲೇ ಬರ-ಬೇಕಂತರಿ—

ರಮೇಶ— (ದಂಗುಬಡಿದವನಂತೆ) ಬ-ಂ-ದಾ-ನ?

ಗಂಗವ್ವ— ಹುಂ-ರಿ- (ಎಂದು ಒಳಗೆ ಹೋಗುವಳು.)

ಮಂದಾ— ನಾ ಹೇಳಲಿಲ್ಲ ನಿಮಗ? (ಎಂದು ಗಟ್ಟಿಯಾಗಿ ನಗುವಳು.)

ರಮೇಶ— ನಿನಗಂತೂ ನಗಿ ಹ್ಯಾಂಗ ಬರತದೊ! (ದರ್ಪದ ಸಿಟ್ಟಿನಿಂದ) ಗಂಗವ್ವ— ಇದು ನೋಡು— ಅವರಿಗೇ ಇಲ್ಲಿಯೇ ಬಾ ಅಂತ ಹೇಳು. (ಮಂದಾಕಿನಿ ನಗುತ್ತಲೇ ಇರುವುದನ್ನು ಕಂಡು) ಅಂಥಾ ಪರಿ ನಗಲಿಕ್ಕೆ ಏನಾಗೇದ ನಿನಗ? ನನಗಂತೂ—

ಮಂದಾ— ನಿಮ್ಮ ಸಿಟ್ಟುನೋಡಿ ನಗೀ ಬರತದ ನನಗ— ಅಲ್ಲ— ಅಷ್ಟು ಸಿಟ್ಟಿಗೆದ್ದು ಏನು ಮಾಡುವವರು ಇದ್ದೀರಿ? ಅಂ? ಅಲ್ಲದೆ ಸಿಟ್ಟ್ಯಾದರೂ ಯಾಕ ಬರಬೇಕು ನಿಮಗ ಅಂತೀನಿ!

ರಮೇಶ— ಹೌದು— ಸಿಟ್ಟು ಯಾಕ ಬರಬೇಕ? ಛೆಲೋ ಅದ— ಸಿಟ್ಟು ಯಾಕ ಬರಬೇಕಂತ— ಈಗ ತಿಳಿಯೋದಿಲ್ಲ ನಿನಗ— ಮದಿವಿ ಆದಿ ಅಂತ ಅಂದ್ರ ತಿಳೀತದ. ಮದಿವಿ ಆದಮ್ಯಾ ನಿನ್ನ ಗಂಡ ಹಿಂದಕ್ಕ ಹಿಂಗೇನಾದರೂ ಮಾಡಿದ್ದಾ ನಿನಗ ತಿಳಿದಾಗ, ನೋಡೋಣಂತ ಆಗ ನೀನು ನಗತೀ ಅಥವಾ ಸಿಟ್ಟಿಗೇಳತೀಯೋ—

ಮಂದಾ— ನಿಮಗ ಗ್ಯಾರಂಟಿ ಕೊಡತೇನಿ ಬೇಕಾದರ— ನಾ ಸಿಟ್ಟಿಗೆ ಬರೋದಿಲ್ಲ ಅಂತ— ಹ್ಯಾಂಗ ಎಲ್ಲಾರೂ ಸಿ ಎದ್ದು ಕೋತ ಹೋದರ, ನನ್ನ ಮದಿವೀನೇ ಆಗಬಾರದಾ ಈಗ ಎಷ್ಟು ಮಂದಿಗೆ ಗೊತ್ತಿಲ್ಲ— ಒಂದು ಕಾಲಕ್ಕ ನಾ ನೀವೂ ಲಗ್ನ ಮಾಡಿಕೋಬೇಕಂತ ಮಾಡಿದ್ವಿ ಅನ್ನೋ ನಿಷ್ಟಂಗ ಮಾಡಿದರ, ಪ್ರಪಂಚ ನಡೀಲಿಕ್ಕಿಲ್ಲ. ಸ್ತ್ರೀಯಚ್ಚರಿತ್ರ

ರಮೇಶ— ಸಾಕು ಸಾಕು. ಒಟ್ಟು ನೀ ಅನ್ನೋದಾದರೂ ಏ ಯಾವುದಕ್ಕೂ ಮಹತ್ತ್ವ ಇಲ್ಲದ್ಹಾಂಗಾಯ್ತು ನಿನ್ನ ಮಾ ಕೇಳಿದರ— ಈ ನಿನ್ನ ಕ್ರಾಂತಿಕಾರಕ ವಿಚಾರ—

ಮಂದಾ— ನನ್ನ ವಿಚಾರ ಕ್ರಾಂತಿಕಾರಕ? ಅಲ್ಲವೇ ಅಲ್ಲ! ನೋಡಿದರ, ನನ್ನ ವಿಚಾರ ಕ್ರಾಂತಿಕಾರಕ ಅದ. ಅ ಮರೆತುಬಿಟ್ಟು ಮದುವೆಮಾಡಿಕೊಂಡು ಮುಂದಕ್ಕ ಸಾಗೋ ಸುಖದ ಹಾದಿ!—

ರಮೇಶ— ಸುಖ! ಸುಖ! ಸುಖ ಅಂದರ ಏನು— ಅದೇ ತಿ ದ್ಹಾಂಗ ಆಗೇದ ನನಗಂತೂ—

ಮಂದಾ— ಸುಖ ಅಂದ್ರ ಏನು ಗೊತ್ತಿಲ್ಲ ನಿಮಗ? ನಿಮಗ ಗೊತ್ತದ ಆದರ ಮರೆತಿರಬೇಕು. ನೀವೇ ಹೇಳಿದ್ದಿರಿ ಹಿಂದಕ್ಕೊ ನನಗ— ನೆನಪದ ಏನು? ಏನು ಹೇಳಲಿಯಾ? ಸು **ಅಂದರ ಮರೆಯೋದು.** ಹಿಂದಿನದೆಲ್ಲ ಮರೆತು ಇಂದಿನ ರೊಳಗ ಆಸಕ್ತಿ ಇಟ್ಟುಕೊಳ್ಳೋದೇ ಸುಖ. ಇಂದಿನದ ಬಿಟ್ಟು ಹಿಂದಿನದನ್ನ ಇಲ್ಲವೆ ಮುಂದಿನದನ್ನ ಧೇನಿಸಿಕೊಳ್ಳ ಕೂಡೋದು ದುಃಖ!

(ಬಲಗಡೆಯಿಂದ ಸುಧಾ ಮತ್ತು ವಾಸುದೇವ ಬರುತ್ತಾರೆ. ರಮೇ ಸುಧಾ ಇಬ್ಬರೂ ಪ್ರೇಕ್ಷಕರಿಗೆ ಇದಿರಾಗಿ ನಿಂತುಬಿಡುತ್ತಾರೆ. ವಾಸುದೇವ ರಮೇ ನೆಡೆಗೆ, ಮಂದಾಕಿನಿ ಸುಧಾಳ ಕಡೆಗೆ ಸಾಗುತ್ತಾರೆ.)

ವಾಸುದೇವ— ಏನೊ! ಹ್ಯಾಂಗ್ಯಾಕ ನಿಂತೀದಿ? ದೆವ್ವ ಬಡಿದವರ್ಹಾಂ ತಾರು ಮಾಡಿವರೂ ಬಸ್‌ಸ್ಟ್ಯಾಂಡಿಗೆ ಬರಬಾರದೇನೊ?

ಮಂದಾ— (ನಗುತ್ತ) ಅಂಥಾದ್ದೇನಿತ್ತು ಕೆಲಸಾ? ಸ್ಟೇಶನ್ನಿಗೆ ಬರಬ ದೇನು? ಹ್ಯಾಂಗ್ಯಾಕ ನಿಂತೀದಿ?

ವಾಸುದೇವ— (ಮಂದಾಕಿನಿಯನ್ನುದ್ದೇಶಿಸಿ) ನಮಸ್ಕಾರ! ಅಲ್ರಿ ಏನಾಗೇದ ಇವರಿಬ್ಬರಿಗೂ? ಹ್ಯಾಂಗ್ಯಾಕ ನಿಂತಾರ? ಆಗೇದೇನು ಇಬ್ಬರಿಗೂ?

ಮಂದಾ— ಯಾರಿಗೆ ಗೊತ್ತು? ಇಷ್ಟು ಪರಿ ನಾನು ಬರೋ ಬ್ಯಾಡಾಗಿದ್ದರ, ಒಂದು ಪತ್ರಾ ಹಾಕಿಬಿಡಬೇಕಾಗಿತ್ತು?

ವಾಸುದೇವ— (ರಮೇಶನಿಗೆ) ಹೌದು ಅಂದ್ಹಾಂಗ! ಒಂದು ತ ಮಾಡಿಬಿಡಬೇಕಾಗಿತ್ತಪ್ಪಾ ಬರಬ್ಯಾಡ ಅಂತ— ಇಂಥಾ ಸ್ಥಿ

ಮಾಡೋದಕ್ಕಿಂತ— ಹೆ— ಇಷ್ಟು ಬದಲಾಗೀದಿ ಅಂತ ನನಗೇನೂ ಅನಿಸಿದ್ದಿಲ್ಲ ಬಿಡು. ಆ–ಲ್–ರೈ–ಟ್. ನಮ್ಮ ಹಾದಿ ನಮಗ— ನಿನ್ನ ಹಾದಿ ನಿನಗ— ಥ್ಯಾಂಕ್ ಯು. ನನ್ನ ಬ್ಯಾಗ್ ಎಲ್ಲಿ ಅದ?— (ಎಂದು ಮಂದಾಕಿನಿಯ ಬ್ಯಾಗ್ ಎತ್ತಿಕೊಳ್ಳುವನು) ಅಲ್ರೀ ಮಿಸ್ ಮಂದಾಕಿನಿ— ನೀವಾದರೂ ವಿಚಾರ ಮಾಡಿರಿ— ನೋಡಿರಿ— ಇಲ್ಲಿ ಇರೋದರಕಿಂತಾ—

ಮಂದಾ— ನೀವು ಎಲ್ಲಿ ಹೋಗತೀರಿ— ?

ವಾಸುದೇವ— ಊರೊಳಗ ಲಾಜಿಂಗ್ ಎಂಡ್ ಬೋರ್ಡಿಂಗ್ ಏನು ಕಡಿಮೆ? ಎಲ್ಲಿಯಾದರೂ ಹೋಗಿಬಿಡತೀನಿ ಆಯ್ತು—

ಮಂದಾ— (ಅನುಮಾನಿಸುತ್ತಿದ್ದವಳಂತೆ) ಹಾಂಗಿದ್ದರ—

ಸುಧಾ— ಸಾಕುಬಿಡ್ರ—

ಮಂದಾ— ನೀ ಮೊದಲು ಸಿಟ್ಟು ಬಿಡ್ರ— !

ವಾಸು— ಯಾಕಪ್ಪಾ? ಏಮಗ ಅಷ್ಟಣೆ ಹೌದಲ್ಲೊ? ಹೊರಟು ಹೋಗು ಅನ್ನೋ ಒಂದು ಮಾತಾದರೂ ಕಿವಿಮ್ಯಾಲೆ ಬೀಳಲಿ! ಉಳಿದ ಮಾತು ಬರದಿದ್ದರೂ ಅಷ್ಟೇ ಹೋಯ್ತು! (ಎಂದು ನಗುತ್ತ ಅವನ ಭುಜ ಅಲ್ಲಾಡಿಸುವನು.)

ರಮೇಶ— ಮೊದಲು, ಆ ಬ್ಯಾಗ್ ಕೈಯೊಳಗಿಂದ ಕೆಳಗ ಇಡು— ಇಡತೀಯೊ ಇಲ್ಲೊ ?

ವಾಸು— ಇಡು ಅಂದ್ರ ಇಡತೀನಿ—

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ

ಬರೆಯಿರಿ :

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ಮಂದಾ— ಆ ಬ್ಯಾಗ್ ನನ್ನದರೀ ಅದು!

ವಾಸು— (ಅದನ್ನು ನೋಡಿ) ಓಹ್— ಆಯ್ ಆಮ್ ಸಾರಿ!— ನಾನು ನೋಡಲೇ ಇಲ್ಲ. ಆದರ, ನೀವೂ ಬಂದೇಬಿಡುವವ- ರಲ್ಲೇನು ?

ಮಂದಾ— ಯಾಕಪ್ಪ? ಹ್ಯಾಂಗ ಮಾಡೋದು ಹೇಳಿಬಿಡು. ಇಲ್ಲಾಂದ್ರ ನನ್ನ ಬ್ಯಾಗೂ ಕಳಿಸಿಬಿಡತೇನಿ. ನೀವೇನು ಬಾಯಿ ಬಿಚ್ಚುವಾಕಿಯೊ ಇಲ್ಲೊ? ಮೊದಲು ಹೇಳು ನೀನು ಸ್ಟೇಶನ್ನಿಗೆ ಯಾಕ ಬರಲಿಲ್ಲ?

ಸುಧಾ— ನಾ ಯಾತಕ್ಕ ಬರಬೇಕು? ಯಾರು ಬರಬೇಕಾನವರು ಬಂದರು ಆಯ್ತು! ನಾ ಬಂದೇನು ಮಾಡಬೇಕಾಗಿತ್ತು ?

ಮಂದಾ— ನೀನೇ ಬರಬೇಕಾಗಿತ್ತು? ಅವರ್ನ ಕಳಿಸಿದಾಕಿ ನೀನೆ— ಮತ್ತ ನೀನೇ ನನ್ನ ಮ್ಯಾಲೆ ಸಿಟ್ಟು ಮಾಡತೀದಿ! ಅಲ್ಲ—ನಿನಗ ಸಿಟ್ಟಾದರೂ ಯಾಕ ಬಂದದ ಅದನ್ನರೆ ಹೇಳತೀ ಏನು ?

ವಾಸು— ಹೌದು—ಅಂದ್ಹಾಂಗ ಅಲ್ಲಪಾ, ನಿನಗ ಸಿಟ್ಟು ಯಾತಕ್ಕ ಬಂದದ ?

ರಮೇಶ— ನನ್ನ ಏನು ಕೇಳತಿ? ಇಷ್ಟೊತ್ತನಕಾ ಮಾತಾಡಿಕೋತ ಕೂತಿದ್ದಿ—ಆಕೆನ್ನs ಕೇಳು!

ಸುಧಾ— (ಮಂದಾಕಿನಿಯನ್ನುದ್ದೇಶಿಸಿ) ಆ ಮಾತು ನನ್ನ ಕೇಳಬ್ಯಾಡ— ಅವರನ್ನೇ ಕೇಳು.

ರಮೇಶ— ಯಾರನ್ನ? ನನ್ನ?

ಸುಧಾ— ಹಾಂಗಾದರ ನನ್ನ ?

ವಾಸು— ಯಾರನ್ನ ಯಾರೂ ಕೇಳಬ್ಯಾಡರಿ—ನನ್ನ ಕೇಳರಿ— ನಿಮಗೆ ಏನು ಕೇಳಬೇಕಾಗೇದ ಅದನ್ನ ನಾನು ಹೇಳತೇನಿ ಬೇಕಾದರ—

ರಮೇಶ— ಏನು ಹೇಳತೀಯಪಾ ?—

ಮಂದಾ— ನಾನೂ ಹೇಳತೀನಿ ಬೇಕಾದರ—

ರಮೇಶ— ನೀವಿಬ್ಬರೂ ಏನೋ ಒಂದು ಒಳಸಂಚು ಮಾಡಿಕೊಂಡು ಬಂದ್ಹಾಂಗ ಕಾಣಸತ್ತದ.

ವಾಸು— ಒಳಸಂಚು ಇಲ್ಲ—ಏನೂ ಇಲ್ಲ. ಏನು ಇದ್ದದ್ದು ಸ್ಪಷ್ಟನೇ ಅದ—

ರಮೇಶ— ಏನು ಸ್ಪಷ್ಟ ಅದ ?

ವಾಸು— ಏನೂ ಅಂದ್ರ—ನೀನು ಮತ್ತ ನಿನ್ನ ಹೆಂಡತಿ—ಇಬ್ಬರೂ ಸಿಟ್ಟಾಗಿ ಇದ್ದೀರಿ!

ಮಂದಾ— Exactly—ನಾನೂ ಅದನ್ನೇ ಹೇಳಬೇಕು ಅಂತ ಮಾಡಿದ್ದೆ

ಸುಧಾ— ಮತ್ತ ನೀವಿಬ್ಬರೂ ಬಹಾಳ ಶಾಣ್ಯಾರು ಅಂತ ಕಾಣಿಸತ್ತದ!

ವಾಸು— ನಾವು ಇಬ್ಬರೂ ಏನು ಇದ್ದೀವಿ—ಅನ್ನೋದು—

ಮಂದಾ— ಅದನ್ನ ಬಾಯಿಂದ ಹೇಳಬಾರದು (ಎಂದು ನಸುನಕ್ಕು ವಾಸುದೇವನನ್ನು ನೋಡುವಳು)

ವಾಸು— ಒಂದು ಮಾತು ಹೇಳಿದೆ— ಇನ್ನೊಂದು ಮಾತೂ ಹೇಳಬೇಕಾಗೇದ. ಅದನ್ನ ಹೇಳಿದ ಮ್ಯಾಲೆ— ನಿಮ್ಮ ಸಿಟ್ಟು ಇಳೀತ್ತದ. ಆ ಮಾತಂದ್ರ?— (ಮಂದಾಕಿನಿಗೆ) ಹೇಳಲಿಯಾ?

ಮಂದಾ— ಆಂ—ನೀವು ಹೇಳತೀರೊ, ಅಥವಾ—ನಾನೇ ಹೇಳಲೊ?

ರಮೇಶ— ಏನರ್‍ಯೋ ಇದು? ನೀವಿಬ್ಬರೂ ಕೂಡಿ ನಡಿಸೀರ್‍ಯಾದರೂ ಏನು?

ವಾಸು— (ರಮೇಶನಿಗೆ) ನಿನಗ ಸಿಟ್ಟು ಯಾಕ ಬಂದsದ ನಾನು ಹೇಳಲಿಯಾ?

ಮಂದಾ— ಅವರು ಹೇಳಿದ ಮ್ಯಾಲೆ ನಿನಗ ಯಾಕ ಸಿಟ್ಟು ಬಂದsದ ಅದನ್ನ ನಾನೂ ಹೇಳತೀನಿ.

ರಮೇಶ— ನನಗ ಯಾಕ ಸಿಟ್ಟು ಬಂದsದ ಅನ್ನೋದನ್ನ ನೀನು ಹೇಳಬ್ಯಾಡ ನನಗ ಗೊತ್ತದ. ಆದರ ಒಂದು ಹೇಳು. ನೀವಿಬ್ಬರೂ ಮಾತಾಡಿಕೊಂಡವರ್‍ಹಾಂಗ ಇಲ್ಲಿಗೆ ಬಂದು, ನಮ್ಮನ್ನ ಯಾಕ ಸಿಟ್ಟಿಗೆ ಬರೋಹಾಂಗ ಮಾಡಿದಿರಿ? ಅದನ್ನು ಮೊದಲು ಹೇಳು. ನಮ್ಮಿಬ್ಬರ ನಡುವೆ ಜಗಳಾ ಹಚ್ಚಿ ಮೋಜು ನೋಡಬೇಕು ಅಂತ ಬಂದ್ಹಾಂಗ ಕಾಣಿಸತsದ!

ಸುಧಾ— ಜಗಳಾ ಹಚ್ಚುವವರು ಹಚ್ಚಿದರೂ, ಜಗಳಾಡೋವವರಿಗೆ ತಿಳೀಬೇಕು!

ರಮೇಶ— ತಿಳಿದವರು ಜಗಳಾ ಹಚ್ಚೋವವರಿಗೆ ಅವಕಾಶ ಕೊಡಬಾರದು!

ಸುಧಾ— ಈಗ ಅವಕಾಶ ಕೊಟ್ಟವರು ಯಾರು?

ರಮೇಶ— ನಾನ?

ಸುಧಾ— ಹಾಂಗಾದರ ನಾನ?

ಮಂದಾ— ನೀನೂ ಅಲ್ಲ—ಇವರೂ ಅಲ್ಲ—ಇಬ್ಬರೂ!

ವಾಸು— ಈಗ ಗೊತ್ತಾಯ್ತಿಲ್ಲೋ ನಾವಿಬ್ಬರೂ ಇಲ್ಲಿಗೆ ಯಾಕ ಬಂದೀವಿ ಅನ್ನೋದು?

ರಮೇಶ— ಬಹಾಳ ದೊಡ್ಡ ಕೆಲಸಾ ಮಾಡಿದಿರಿ!

ವಾಸು— ದೊಡ್ಡ ಕೆಲಸಾ ಇನ್ನೂ ಮಾಡಿಲ್ಲ—ನಾಳೆ ಮಾಡಬೇಕಾಗೇದ—

ರಮೇಶ— ಮತ್ತೇನಪಾ? ಒಟ್ಟು ನಿನ್ನ ಸಂಗತೀನೆ ಕಠಿಣ ಕಾಣಿಸತsದ!

ವಾಸು— ಅದರ ಕಾಳಜಿ ನಿನಗ ಯಾಕ? (ಮಂದಾಕಿನಿಯನ್ನು ತೋರಿಸುತ್ತ) ನನ್ನ ಕೈ ಹಿಡಿಯುವವರು ಅದರ ಕಾಳಜೀ ಮಾಡಬೇಕು—ಹೌದಲ್ಲೋ? ಆಂ?

ಸುಧಾ— ಏನ? ನನಗಂತೂ ಏನೂ ತಿಳಿಯವೊಲ್ಲದು!

ಮಂದಾ— ತಿಳಿಯಲಾರದಂಥಾದ್ದು ಏನದನs!

ರಮೇಶ— ಏನು ಮಾತಾಡತೀಯೊ! ಯಾರ ಕೈ ಯಾರು ಹಿಡಿಯುವವರು? ಏನು ಕಥಿ?

ವಾಸು— ಮಂದಾಕಿನಿಯ ಕೈ—ವಾಸುದೇವ ಹಿಡಿಯುವವ—

ಸುಧಾ-ರಮೇಶ— ಆಂ? ಏನು? ಎಲ!—

ವಾಸು— ಇಷ್ಟು ಯಾಕ ಗಾಬರಿಯಾಗತೀಯೊ? ನಾವು ಇಲ್ಲಿ ಬಂದದ್ದೇ ಅಷ್ಟರ ಸಲುವಾಗಿ! ನಾಳೆ—ನಾವಿಬ್ಬರೂ ಇ' ರಜಿಸ್ಟರ್ ಮದಿವೀ ಮಾಡಿಕೊಳ್ಳೋವವರು ಇದ್ದೀವಿ! ಅದ ನೀವಿಬ್ಬರೂ ಸಾಕ್ಷಿ ಹಾಕಬೇಕು. ಅದಕ್ಕಾಗಿ ನಾವಿಬ್ಬರೂ ಏಕಕಾಲಕ್ಕೆ— ತಮ್ಮಲ್ಲಿಗೆ— ದಯಮಾಡಿಸಿದ್ದು! ತಿ ಯಿತೆ? ಈಗಲಾದರೂ?

ರಮೇಶ— ನಮಸ್ಕಾರ—ಮಹಾರಾಯಾ—ದೊಡ್ಡ ನಮಸ್ಕಾರ ನಿನಗ

ಸುಧಾ— ಹೌದ? (ನಗುತ್ತ) ಹೌದೇನ? ನಾಳೆಯ? ಪತ್ರದಾ ಒಂದು ಮಾತು ಬರೆದಿದ್ದರ ಏನಾಗತಿತ್ತs ನಿನಗ?

ಮಂದಾ— ಬರೆದಿದ್ದರ ಈ ಮೋಜು ಎಲ್ಲಿ ಸಿಗತಿತ್ತು? ಈಗಾದರ ಸಿಟ್ಟು ಇಳೀತೊ ಇಲ್ಲೊ?

ಸುಧಾ— ಎಲ್ಲೀ ಸಿಟ್ಟ? ರಜಿಸ್ಟರ್ ಮಾಡೋವವರ—?

ವಾಸು— ನಿನ್ನದು ಸಿಟ್ಟು ಇಳೀತೊ ಇಲ್ಲಪಾ? ಏನು ನಾಳೆ ಸಾಕ್ಷಿ ಹಾಕೋದಿಲ್ಲ ಅಂತ ಅನ್ನೋವವನೊ?

ಮಂದಾ— (ರಮೇಶನಿಗೆ) ನಾ ಏನು ಹೇಳಿದ್ದೆ ಅಗಲೆ? ಹಿಂದಿನದನ್ನ ಮರೆತು ಬಿಟ್ಟು—

ವಾಸು— ಈಗಿಂದೀಗ ಎರಡೆರಡು ಕಪ್ಪು ಚಹಾ ಕುಡಿಯೋದೆ ಸುಖ! ಹೌದಲ್ಲೋ?

ಮಂದಾ— (ಸುಧಾಳಿಗೆ) ನಡಿ, ನಡಿ—ಬಂದಾಗಿಂದ ಇಲ್ಲೇ ನಿಂತು ನನ್ನೂ ನಿಂದರಿಸೀದಿ. ಒಂದು ಕಪ್ಪು ಚಹಾ ಆದರೂ ಕೊ ತೀಯೊ ಏನು ಹೀಂಗಿದ್ದೀಂಗೇ ಹೊರಗ ಹಾಕತೀಯೊ?

ವಾಸು— ಹ್ಯಾಂಗಪಾ? ಅಪ್ಪಣೆ ಆಗಲಿ! ಹೊರಗ ಹೋಗಬೇಕೊ ಏನು ಇಲ್ಲೇ ಇರಬಹುದೊ?

ರಮೇಶ— ಹೊರಗ ಹಾಕಿದರೂ ಬಲು ಹೋಗೋವವರು ಇಬ್ಬರೂ ಸೇರಿಗೆ ಸವ್ವಾಸೇರು ಛಲೋ ಕೂಡೀರಿ ಇಬ್ಬರೂ (ನಗುವನು ಅಷ್ಟಕ್ಕಾದರೂ ನಿಮ್ಮನ್ನ ಕಾಂಗ್ರಾಚ್ಯುಲೇಟ್ ಮಾಡತೀನಿ-

ವಾಸು— ಅಷ್ಟಾದರೂ ಮಾಡತೀಯಲ್ಲ—Thanks! ಸಿಟ್ಟು ಇಳೀತ

ರಮೇಶ— ಸಾಕು ಬಿಡೋ ಚಾಷ್ಟಿ—

ಸುಧಾ— ನಡೀಯ ನಡಿ— (ಎಲ್ಲರೂ ನಗುತಿರುವಾಗಲೆ ತೆರೆ ನಿಧಾನವಾಗಿ ಇಳಿಯುತ್ತದೆ.)

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಸಾದರ ಸ್ವೀಕಾರ

೪೫ **ಸ್ವಯಂವರ** (ಪ್ರಹಸನ) ಬರೆದವರು ಶ್ರೀಮಾನ್ ...ಎ. ವಿ. ಸೀತಾರಾಮಯ್ಯನವರು ಎಂ. ಎ. ಗವರ್ನ್‌ಮೆಂಟ್ ...ಟರ್ ಮೀಡಿಯೆಟ್ ಕಾಲೇಜ್, ಬೆಂಗಳೂರು. ಲೇಖಕರೇ ...ಪ್ರಕಾಶಕರು. ಫೂಲ್ಸ್‌ಕ್ಯಾಪ್ ಅಷ್ಟಪತ್ರದ ೬೦ ಪುಟಗಳು. ಬೆಲೆ ...-೧೦-೦.

೪೬ **ಇಕಿ-ಶ್ರೀ** (ಸಾಮಾಜಿಕ ಕಾದಂಬರಿ) ಬರೆದವರು ...ಶ್ರೀಮಾನ್ ವರದರಾಜ ಹುಯಿಲಗೋಳ, ಎಂ. ಎ., ಬಿ. ಟಿ. ಧಾರ...ವಾಡ. ಧಾರವಾಡದ ಪ್ರತಿಭಾಗ್ರಂಥಮಾಲೆಯ ೧೦ನೆಯ ವರ್ಷದ ...ನೆಯ ಕಿರಣ. ಕ್ರೌ. ಅ. ೨೧೦ ಪುಟಗಳು. ಬೆಲೆ ೧-೪-೦.

೪೭ **ವಿದ್ಯಾಧರೆ** (ಸಾಮಾಜಿಕ ಕಾದಂಬರಿ) ಬರೆದವರು ...ಶ್ರೀಮಾನ್ ಕೊರಟಿ ಶ್ರೀನಿವಾಸರಾವ. ಇದು ಮೇಲಿನ ಪ್ರತಿಭಾ-...ಗ್ರಂಥಮಾಲೆಯ ಹನ್ನೆರಡನೆಯ ವರ್ಷದ ಮೂರನೆಯ ಕುಸುಮ. ...ಕ್ರೌ. ಅ. ೨೨೪ ಪುಟಗಳು. ಬೆಲೆ ೧-೪-೦.

೪೮ **ಮನೆ ತುಂಬಿದ ಬೆಳಕು** (ಕವನ ಸಂಕಲನ) ಬರೆ-...ದವರು ಶ್ರೀಮಾನ್ ಸಿದ್ಧಣ್ಣ ಮಸಳಿ, ಬಿ. ಎ., ಬಿ. ಟಿ. ಧಾರವಾಡ. ...ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಕ್ರೌ. ಅ. ೬೪ ...ಪುಟಗಳು. ಬೆಲೆ ೦-೧೨-೦.

೪೯ **ಪ್ರವಾಸಿ** (ಮಾಸಪತ್ರಿಕೆಯ ಅಕ್ಟೋಬರ್-ನವ್ಹಂಬರ್ ...ಸಂಯುಕ್ತಾಂಕ) ಸಂಪಾಕರು ಶ್ರೀಮಾನ್ ಕೆ. ಶ್ರೀನಿವಾಸ ಉಪಾಧ್ಯ ...ಮತ್ತು ಶ್ರೀಮಾನ್ ಬಿ. ಈಶ್ವರಭಟ್ಟರು. "ಪ್ರವಾಸಿ" ಕಾರ್ಯಾಲಯ ...ಗಣಪತಿ ದೇವಸ್ಥಾನ ರಸ್ತೆ, ಮಂಗಳೂರು. ಈ ಸಂಯುಕ್ತಾಂಕ ...ಕ್ರೌನ ೩೨ ಪುಟಗಳಿಂದ ಕೂಡಿದೆ. ವಾ. ಚಂ. ೨-೦-೦. ಬಿಡಿ-...ಸಂಚಿಕೆಗೆ ೦-೨-೦.

ಕನ್ನಡದಲ್ಲಿ ಮಾಸಪತ್ರಿಕೆಗಳು ದಿನದಿನಕ್ಕೆ ಹೊಸ-ಹೊಸದಾಗಿ ...ಹುಟ್ಟುತ್ತವೆ-ಸಾಯುತ್ತವೆ. ಈ ಅಕಾಲಮರಣವು ಇಲ್ಲದಂತಾಗ-...ಬೇಕಾದರೆ, ಪತ್ರಿಕೆಗಳನ್ನು ಹೊರಡಿಸುವ ಸಂಪಾದಕರೂ ಪ್ರಕಾಶಕರೂ ...ಮುಂದಿನ ವಿಚಾರವನ್ನೆಲ್ಲ ಮಾಡಿಕೊಂಡೇ ಹೊರಡಿಸಬೇಕು ...ಪ್ರಕಾಶಕರ ಹಣದ ಬಂಡವಾಳ, ಸಂಪಾದಕರ ಜ್ಞಾನದ ಬಂಡವಾಳ ...ಇದ್ದರೆಯೆ ಪತ್ರಿಕೆಗಳು ಬಹುಕಾಲ ನಡೆಯಬಲ್ಲವು. ಎರಡೂ ಇಲ್ಲದ ...ಪತ್ರಿಕೆಗಳು, ಉತ್ಸಾಹಿಗಳಾದ ಪ್ರಕಾಶಕರ ಅಲ್ಪ ಬಂಡವಾಳವನ್ನು ...ಕರಗಿಸಿ ನಿರುತ್ಸಾಹಿಗಳನ್ನಾಗಿಸಬಹುದಷ್ಟೆ! ಪ್ರವಾಸಿಯ ಸೊರಗಿದ ...ಸಂಯುಕ್ತಾಂಕವನ್ನು ಕಂಡಾಗ, ಮನಸ್ಸಿಗೆ ಕಳವಳವೆನಿಸುವುದು.

೫೦ **ಕಾವ್ಯತರಂಗ** (ಕವನಸಂಗ್ರಹ) ಬರೆದವರು ಶ್ರೀ ಕೆ. ಎಸ್. ಭಟ್. ಶಿರಾಡಿಪಾಲ್, ಪೋ. ಮುಂಡಾಜೆ-ದ. ಕ. ಜಿಲ್ಲಾ. ಲೇಖಕರೇ ಪ್ರಕಾಶಕರು. ಕ್ರೌ. ಅ. ೩೦ ಪುಟಗಳು. ಬೆಲೆ ೦-೮-೦

೫೧ **ಪಂಚಭಕ್ಷ್ಯ** (ಕಥಾ ಸಂಕಲನ) ಬರೆದವರು ಮತ್ತು ಪ್ರಕಾಶಕರು ಶ್ರೀಮಾನ್ ಕೆ. ಎಸ್. ಭಟ್. ಶಿರಾಡಿಪಾಲ್, ಪೋ. ಮುಂಡಾಜೆ (ದ. ಕ) ಕ್ರೌ. ಅ. ೭೪ ಪುಟಗಳು. ಬೆಲೆ ೦-೧೦-೦.

೫೨ SUNSHINE (ಪ್ರಗತಿಪರ ವಿದ್ಯಾರ್ಥಿಗಳಿಗಾಗಿ ಸಚಿತ್ರ ಮಾಸಪತ್ರಿಕೆ) ಸಂಪಾದಕರು ಡಾ. ಜಿ ಎಸ್. ಕೃಷ್ಣಯ್ಯ, ಎಂ. ಎ. (ಮದ್ರಾಸ್), ಎಂ. ಎ., ಪಿಎಚ್. ಡಿ. (ಕೊಲಂಬಿಯಾ) ಸನ್‌ಶಾಯಿನ್ ಪಬ್ಲಿಶಿಂಗ್ ಹೌಸ್, ೫೫೫೬ ಶಿವಾಜಿನಗರ-ಪುಣೆ ೫ ಕ್ರೌ. ೧/೪ ೩೬ ಪುಟಗಳು; ಇದಲ್ಲದೆ ಹಿಂದೀ ಭಾಗದ ಎಂಟು ಪುಟಗಳು ಕೂಡಿರುವವು. ಹಿಂದೀಭಾಗದ ಉಪಸಂಪಾದಕರು ಕ್ಯಾಪ್ಟನ್ ರತ್ನಾಂಬರದತ್ತ ಚಾಂದೋಲಾ ಅವರು. ಈ ಸಂಚಿಕೆಯ ಬೆಲೆ ೦-೪-೦.

ಸಂಪಾದಕರಾದ ಡಾ. ಕೃಷ್ಣಯ್ಯನವರು ಕನ್ನಡಿಗರಿಗೆ ಹೊಸಬರೇನೂ ಅಲ್ಲ. [illegible] ಕಾಲೇಜಿನಲ್ಲಿ ಅನೇಕ ದಿನಗಳ ವರೆಗೆ ಪ್ರಿನ್ಸಿಪಾಲರಾಗಿದ್ದರು. ಈಗ ನಿವೃತ್ತರಾದ ಮೇಲೆಯೂ [illegible] ಶಿಕ್ಷಣದ ಕಾರ್ಯಕ್ಕಾಗಿ [illegible] ಈ ಸಂಚಿಕೆಯಲ್ಲಿ ಮಕ್ಕಳ ಮತ್ತು [illegible] ಅನೇಕ ಹಿರಿಯರ ಮನಸ್ಸು [illegible] ಲೇಖನಗಳೂ, ಕತೆ-ಕವಿತೆ-ವಿನೋದಗಳೂ ಪ್ರಕಟವಾಗಿವೆ. ಸಂಪಾದಕರ ಲೋಕಾನುಭವ, ಬಹುಶ್ರುತತ್ವಗಳ [illegible] ಎಲ್ಲರೂ ಅವಶ್ಯವಾಗಿ ಮಾಡಿಕೊಳ್ಳಬೇಕು.

೫೩. **ಸ್ವಾತಂತ್ರ್ಯದೇವ** (ಕವನ ಸಂಕಲನ) ಬರೆದವರು ಶ್ರೀಮಾನ್ ಸಿ. ಬಾ. ಕಾಡಣ್ಣವರ, ಕರೀಕಟ್ಟಿ. ಪ್ರಕಾಶಕರು ಶ್ರೀಮಾನ್ ಎ ಸಿ. ಚೌಗಲೆ. ವೀರಭಾರತ ಮುದ್ರಣಾಲಯ. ಬೆಳಗಾಂವಿ. ಕ್ರೌ. ಅ. ೬೬ ಪುಟಗಳು. ಬೆಲೆ ೧-೦-೦.

೫೪. **ಆ ರಾತ್ರಿ** (ಸಾಮಾಜಿಕನಾಟಕ) ಲೇಖಕರು ಶ್ರೀಮಾನ್ ಗೋಪಾಲಕೃಷ್ಣ ಪಿ. ನಾಯಕ ಬಿ. ಎಸ್‌ಸಿ. ಅವರು. ಪುಸ್ತಕಗಳ ಆನಂದ ಗ್ರಂಥಮಾಲೆಯ ೧೪ನೆಯ ಕುಸುಮ, ಕ್ರೌ. ಅ. ೭೮ ಪುಟಗಳು, ಬೆಲೆ ೦-೧೪-೦ (ಸಾದಾ ಪ್ರತಿಗೆ).

೫೫. **ಗುಣ** (ಸಾಮಾಜಿಕಕಾದಂಬರಿ) ಬರೆದವರು ಶ್ರೀಮಾನ್ ಸಿ. ವೆಂಕೋಬಾಚಾರ್ಯರು ಎಂ. ಎ., ಬಿ. ಟಿ ಪುಸ್ತಕ ದ್ವಿಯ ಆನಂದಗ್ರಂಥಮಾಲೆಯ ೧೫ನೆಯ ಕುಸುಮ. ಕ್ರೌ. ಅ. ೧೪೮ ಪುಟಗಳು. ಬೆಲೆ ಸಾದಾಪ್ರತಿಗೆ ೧-೬-೦.

ಓದಿದರೆ ರಸಪೂರ್ಣ ಕಥೆಗಳು, ಆಡಿದರೆ ಮನೋಹರ ನಾಟಕಗಳು !



ಶ್ರೀ 'ಆನಂದ ಕಂದರು' (ಬೆಟಗೇರಿ ಕೃಷ್ಣಶರ್ಮ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಆಕರ್ಷಕ ಸಂಭಾಷಣೆಗೆ, ತಿಳಿಯಾದ ನಗೆಯ ಬುಗ್ಗೆಗೆ, ಮನಮೆಚ್ಚುವ ಪಾತ್ರನಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ, 'ಬೆಂದ ಹೃದಯ'.

— ಪುಸ್ತಕ ಪ್ರಪಂಚ (ಸಪ್ಟೆಂಬರ್ ೧೯೫೪)

ಕ್ರೌ. ೮ಂ. ೧೨೦ ಪುಟಗಳು ಬೆಲೆ ೧—೪—೦

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ.

Printed by S. G. Kulkarni at the Sadhana Press, Dharwar, and pulished for the Proprietors Jayanti publications by S. D. D...

ಜಯಂತಿ

ಸೆಂಬರ್

೧೯೫೪

ಬೆಲೆ :

ಆಣೆಗಳು

ಈ ಸಂಚಿಕೆಯಲ್ಲಿ:

ಇತಿಹಾಸದ ಅಧ್ಯಾಯದಲ್ಲಿ...... ಅಧ್ಯಾಯ (ಸಂಪಾದಕೀಯ)
ಸಂಪಾದಕರು ೨೪೫

ಹಾದಿಬದಿ (ಪ್ರಾಸಂಗಿಕ ಟಿಪ್ಪಣಿ)
'ಕಾಲಜ್ಞ್ಯಪನ' ೨೪೭

ವಾಸವದತ್ತೆ (ಅನುವಾದಿತ ಕಥೆ)
ಶ್ರೀಮತಿ ಸರೋಜಿನಿ ಹುಳಿಬನ್ನೂರ, ಬಿ. ಎ. ೨೪೯

ಟೆಸ್ರಿ ಕ್ಯಾಮೆಂಗಿಸ್ (ವ್ಯಕ್ತಿಪರಿಚಯ)
ಶ್ರೀ. ಸಂತೋಷಬಾಲಾಚಾರ್ಯ ಉಪಾಧ್ಯೆ, ಎಂ. ಎಸ್ಸಿ. ೨೫೪

ಮಹಾಶೋಧಕರು (ಸಣ್ಣಕಥೆ)
ಶ್ರೀ. ಸಂಗೀತ. ಕಡ್ಲಿಗಿ ೨೫೭

ಸಹಗಮಿಸಿದ ಚಲನಚಿತ್ರ ಪ್ರಯತ್ನ (ವಿಜ್ಞಾನ ಲೇಖ)
ಶ್ರೀ. ಎಂ. ಕೆ. ಪಂಚಮುಖಿ, ಬಿ. ಎಸ್ಸಿ., (ಹೆಚ್.) ಎಂ. ಎಸ್ಸಿ. ಜರ್ಮನಿ ೨೬೦

ಹಳೆಯ ರಜಾದಿನ (ಕಥನಕವನ)
ಶ್ರೀ. ಜ. ಶ್ರೀ. ದೇಸಾಯಿ ಜಂಬಗಿ. ಬಿ. ಎ., ಬಿ. ಟಿ. ೨೬೪

ಸ್ವಪ್ನದ ಜಗತ್ತು (ಕವನಗಳು)
ಶ್ರೀ. ಬಳ್ಳಾರಿ ಸುಬ್ಬರಾಯ ಆಚಾರ್ಯ, ಗಂಗೆಹಳ್ಳಿ ೨೬೫

'ನನ್ನ ಮನೆಯ ದೀಪಾವಳಿ ಬೆಳಕು' (ಸ್ವಗತಪರಿಚಯ)
ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ., ಧಾರವಾಡ ೨೬೭

ಅರ್ನೆಸ್ಟ್ ಹೆಮಿಂಗ್ವೆ (ವ್ಯಕ್ತಿ ಮತ್ತು ಸಾಹಿತ್ಯ)
ಶ್ರೀ. ಜಿ. ಎಸ್. ಮಂಗಳೂರ, ಎಂ. ಎ., ಬಿ. ಟಿ. ನಾಸಿಕ ೨೬೯

ಬಿದಿಗೆ ಚಂದ್ರ ಮಸಿರು (ಸಣ್ಣಕಥೆ)
ಶ್ರೀ. ಸದಾಶಿವ, ಮೈಸೂರು ೨೭೨

ಸಾಹಿತ್ಯಲೋಕ (ಸಂದರ್ಭವಿಮರ್ಶೆ)
'ವಿಹಂಗಮ' ೨೭೬

ನಾಡಿನ ಸ್ತ್ರೀಕಾಲ .... ಹೊದಿಕೆಯ ಒಳಪುಟ

ಸಾದರ ಸ್ವೀಕಾರ

೫೬ **ಯುಗಪುರುಷ** (ಮಾಸಪತ್ರಿಕೆಯ ದಸರಾ ಸಂಚಿಕೆ) ಸಂಪಾದಕರು ಶ್ರೀಮಾನ್ ಕೊಡತ್ತೂರು ಅನಂತ ಪದ್ಮನಾಭ ಉಡುಪ, 'ಯುಗಪುರುಷ' ಕಾರ್ಯಾಲಯ, ಕಿನ್ನಿಗೋಳಿ (ದ. ಕ.) ಕ್ರೌ. ೮. ೭೪ ಪುಟ ಬೆಲೆ ೧-೦-೦.

ಕತೆ, ಕವಿತೆ, ಪ್ರಬಂಧ, ನೃತ್ಯ, ನಾಟಕ, ನಗೆಬರಹ ಇತ್ಯಾದಿ ವಿಷಯಗಳು ಇದರಲ್ಲಿ ಅಡಕವಾಗಿವೆ. ಲೇಖಕ ವರ್ಗದಲ್ಲಿ ಶ್ರೀ. ಗೋವಿಂದ ಪೈ, ಪ್ರೊ. ರಂ ಶ್ರೀ. ಮುಗಳಿ. ಶ್ರೀ. ಮಿರ್ಜಿ ಅಣ್ಣಾರಾಯರು ಮೊದಲಾದ ಹಳಗಿನ ಸಾಹಿತ್ಯಿಕರಲ್ಲದೆ, ಬೇರೆ ತರುಣ ಸಾಹಿತ್ಯಿಕರೂ ಇದ್ದಾರೆ. ವಿವಿಧವಿಷಯಗಳಿಂದ ಸಂಗ್ರಹಿಸಲು ತಕ್ಕುದಾದ ಸಂಚಿಕೆಯಿದು.

೫೭ **ಗ್ರಾಮಾಭ್ಯುದಯ ಮತ್ತು ಸಹಕಾರ** (ಮಾಸಪತ್ರಿಕೆಯ ದಸರಾ ಸಂಚಿಕೆ) ಸಂಪಾದಕರು ಶ್ರೀಮಾನ್ ಕೆ. ಸಿ. ಹೊನ್ನಪ್ಪ ರೆಡ್ಡಿ ಬಿ. ಎ. — ಮೈಸೂರು ಸರಕಾರದ ಗ್ರಾಮಾಭ್ಯುದಯ ಶಾಖೆಯ ಮುಖಪತ್ರವಿದು. ಕ್ರೌ. ೪ದ ೭೮ ಪುಟಗಳು.

ಧ್ಯೇಯೋಚಿತ ಲೇಖನಗಳಿವೆ. ಉಪಯುಕ್ತವೆನಿಸುವಂತಿದೆ ಸಂಚಿಕೆ.

೫೮ **ಹೇಮಂತಗಾನ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಲೇಖಕರು ಶ್ರೀಮಾನ್ ವ್ಯಾಸರಾಯ ಬಲ್ಲಾಳರು. ಮೈಸೂರಿನ ಉಷಾ ಸಾಹಿತ್ಯಮಾಲೆಯ ೪೬-೪೭-೪೮ನೆಯ ಗ್ರಂಥ ಕ್ರೌ. ೮. ೪೬೫ ಪುಟಗಳು. ಬೆಲೆ ೩-೪-೦.

೫೯ **ಪರಪುರುಷ ಮತ್ತು ಇತರ ಕತೆಗಳು** (ಸಣ್ಣ ಕತೆಗಳ ಸಂಕಲನ) ಲೇಖಕರು ಶ್ರೀಮಾನ್ ಎಸ್. ಜಿ. ಶಾಸ್ತ್ರಿಯವರು, ಪ್ರಕಾಶಕರು ಉಷಾ ಸಾಹಿತ್ಯಮಾಲೆ, ಮೈಸೂರು. ಕ್ರೌ. ೮ ೬೬ ಪುಟಗಳು ಬೆಲೆ ೦ ೧೨-೦.

೬೦ **ಪ್ರಪಂಚ** (ವಾರಪತ್ರಿಕೆಯ ದೀಪಾವಳಿಯ ಸಂಚಿಕೆ ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಪಾಟೀಲ ಪುಟ್ಟಪ್ಪ, 'ಪ್ರಪಂಚ' ಕಾರ್ಯಾಲಯ ಹುಬ್ಬಳ್ಳಿ. ಡೆ. ೪ದ ೧೧೦ ಪುಟಗಳು. ಬೆಲೆ ೦-೬-೦.

ಹುಟ್ಟಿ ಸ್ವಲ್ಪ ಕಾಲದಲ್ಲಿಯೇ ಬಹುಜನರ ಪ್ರೀತಿಯನ್ನು ಗಳಿಸಿದ ಪ್ರಪಂಚ ವಾರಪತ್ರಿಕೆಯು, ವಿವಿಧ ವಿಷಯಗಳನ್ನು ಒಳಗೊಂಡ ಈ ದೀಪಾವಳಿ ಸಂಚಿಕೆಯನ್ನು ಪ್ರಕಟಿಸಿದೆ. ೧೧೦ ಪುಟಗಳ ಈ ಸಂಚಿಕೆಯನ್ನು ಆರಾಣೆ ಬೆಲೆಗೆ ಒದಗಿಸಿದುದು ಕರ್ನಾಟಕದಲ್ಲಿ ಒಂದು ಸಾಹಸದ ಕಾರ್ಯವೇ ಆಗಿದೆಯೆಂದು ಹೇಳಬಹುದು.

೬೧ **ಸಂದೇಶ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ ಸಂಪಾದಕರು ಶ್ರೀ ಗೋ. ಅ. ದೇಶಪಾಂಡೆ. ಸಂದೇಶ ಕಾರ್ಯಾಲಯ, ಬೆಳಗಾಂವಿ. ಕ್ರೌ. ೪ದ ೨೭ ಪುಟಗಳು. ಬೆಲೆ ೦-೩-೦.

೬೨ **ಕರ್ನಾಟಕ ವೈಭವ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಶ್ರೀಮಾನ್ ನ. ಹ. ನಾಯಕ ಮೊಹರೆ, ಎಲ್ಎಲ್. ಬಿ. ವಿಜಾಪುರ. ಡೆ. ೪ದ ೫೦ ಪುಟಗಳು. ಬೆಲೆ ೦-[illegible]

೬೩ **ಜಯಹಿಂದ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ ಸಂಪಾದಕರು ಶ್ರೀಮಾನ್ ರಾ. ವೆಂ. ಕರಿಗುದರಿಯವರು. ಪ್ರಕಾಶಕರು ಶ್ರೀಮಾನ್ ಎಸ್. ಬಿ. ಮನಗೋಳಿ, ಆದರ್ಶ ಪ್ರಿಂಟಿಂಗ್, 'ಸ್ನೇಹಕುಂಜ' ಹುಬ್ಬಳ್ಳಿ. ಕ್ರೌ. ೪ದ ೧೦೦ ಪುಟ. ಬೆಲೆ ೦-೩-೦ ಸಂಚಿಕೆ ಸರ್ವಾಂಗಸುಂದರವಾಗಿದೆ. ಸಂಗ್ರಹಾರ್ಹವಾಗಿದೆ.

೬೪ **ಅನಾಥೆ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಲೇಖಕರು ಶ್ರೀಮಾನ್ ಗೋಪಾಲಕೃಷ್ಣ ಅಡಿಗರು. ಪ್ರಕಾಶಕರು [illegible] ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು. ಕ್ರೌ. ೮. ೩೪೬ ಪುಟಗಳು. ಬೆಲೆ ೧-೮-೦.

೬೫ **ವಿಷಬಿಂದು** (ಕಥನಕವನಗಳು) ಬರೆದವರು 'ಮರುಳಸಿದ್ಧ'. ಪ್ರಕಾಶಕರು ಸುತ್ತೂರು ವಿದ್ಯಾರ್ಥಿ ಸಾಹಿತ್ಯಮಂಡಲಿ, ಮೈಸೂರು. ಕ್ರೌ. ೮. ೬೨ ಪುಟಗಳು. ಬೆಲೆ ಉತ್ತಮಪ್ರತಿಗೆ ೧-೮-೦; ಸಾದಾ ಪ್ರತಿಗೆ ೧-೦-೦.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲಸರಿಗೆ ಪ್ರತಿಕ್ರಿಯೆ

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ

ಜಯಂತಿ

ಸಂಪುಟ ೧೭ ಸಂಚಿಕೆ ೭

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:

ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಪ್ರಾಥಮಿಕ ಇತಿಹಾಸಾಭ್ಯಾಸದಲ್ಲಿ

ಕನ್ನಡ ವಿದ್ಯಾರ್ಥಿಗಳಿಗೆ ಆಗಲಿರುವ ಅನ್ಯಾಯ

ಬರಲಿರುವ ವರ್ಷದಲ್ಲಿ ಪ್ರಾದೇಶಿಕಭಾಷೆಯ ಪಾಠ್ಯಪುಸ್ತಕಗಳನ್ನೆಲ್ಲ ಬದಲಿಸಬೇಕೆಂದು ಮುಂಬಯಿ ಸರಕಾರ ನಿರ್ಣಯಮಾಡಿದೆ. ಅದಕ್ಕಾಗಿ ಅದು ವಿವಿಧವಿಷಯಗಳ ತಜ್ಞರ ಸಮಿತಿಗಳನ್ನು ನೇಮಿಸಿ, ಆ ಆ ಸಮಿತಿಗಳ ಸಲಹೆಗಳಂತೆ ಪಾಠಕ್ರಮಗಳನ್ನು ನಿರ್ಣಯಿಸಿ ಪ್ರಕಟಿಸಿಬಿಟ್ಟಿದೆ. ಆ ಪಾಠಕ್ರಮಗಳಿಗನುಗುಣವಾಗಿ ವಿವಿಧವಿಷಯಗಳ ಪಾಠ್ಯಪುಸ್ತಕಗಳೂ ಅಲ್ಲಲ್ಲಿ ಅಣಿಗೊಳ್ಳುತ್ತಿವೆ. ಅನೇಕ ಪುಸ್ತಕಗಳು ಈಗಾಗಲೆ ಅಣಿಗೊಂಡು, ಅಧಿಕಾರಿಗಳ ಕಡೆಗೂ ಹೋಗಿವೆ.

ಎಲ್ಲ ಪುಸ್ತಕಗಳಂತೆ ಪ್ರಾಥಮಿಕ ನಾಲ್ಕನೆಯ ಇಯತ್ತೆಯ ಇತಿಹಾಸವೂ ಬದಲಾಗಿ ಬರಲಿದೆ. ಇದುವರೆಗೆ ಆ ತರಗತಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಭಾಷೆಯ ಪ್ರದೇಶದ ಇತಿಹಾಸವನ್ನು ಓದಬೇಕಾಗುತ್ತಿತ್ತು. ಕನ್ನಡ ೪ನೆಯ ಇಯತ್ತೆಯ ವಿದ್ಯಾರ್ಥಿಗಳು ಕರ್ನಾಟಕದ ಇತಿಹಾಸವನ್ನು ಓದುತ್ತಿದ್ದರು. ಅದರಂತೆಯೆ ಮಹಾರಾಷ್ಟ್ರ-ಗುಜರಾತಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಪ್ರಾಂತದ ಇತಿಹಾಸವನ್ನು ಓದುತ್ತಿದ್ದರು. 'ಚಿಕ್ಕಮಕ್ಕಳಿಗೆ ಇತಿಹಾಸದ ಗಂಭೀರ ಶೈಲಿ ಬೇಡ; ಕಥೆಯ ರೂಪದಿಂದ ಇರಲಿ' ಎಂದರು; ಅದಕ್ಕನುಗುಣವಾದ ಕರ್ನಾಟಕದ ಇತಿಹಾಸ ಪುಸ್ತಕಗಳು ಸಿದ್ಧಗೊಂಡು ಸರಕಾರದ ಮನ್ನಣೆಯನ್ನೂ ಪಡೆದುಕೊಂಡುವು. ಇನ್ನು ಮೇಲೆ ಆಗಲಿರುವ ಇತಿಹಾಸಾಭ್ಯಾಸದ ಆಮೂಲಾಗ್ರ ಬದಲಾವಣೆಯ ಮೂಲಕ, ಹಿಂದಿನ ಇತಿಹಾಸ ಪುಸ್ತಕಗಳೆಲ್ಲ ನಿರುಪಯುಕ್ತವಾದುವು. ಪ್ರಕಾಶಕರ ಬಳಿ ಅವುಗಳ ಹೆಚ್ಚಿನ ಪ್ರತಿಗಳು ಉಳಿದು ಬಿಟ್ಟಿದ್ದರೆ, ಅವುಗಳನ್ನು 'ಅಗ್ನಯೇ ಸ್ವಾಹಾ' ಮಾಡುವುದೇ ಸರಿ! ಕನ್ನಡ ಪ್ರಕಾಶಕರಿಗಾಗುವಂತಹ ಈ ಆರ್ಥಿಕಹಾನಿಯು ಎಲ್ಲ ಪ್ರಾಂತದವರಿಗೂ ಸಾಮಾನ್ಯವೇ ಆಗಿದೆ. ಅದರ ವಿಚಾರವನ್ನಿತ್ತ ನಾವೀಗ ಬರೆಯುವ ಕಾರಣವೇನೂ ಇಲ್ಲ. ಆದರೆ ಇನ್ನುಮುಂದೆ ನಮ್ಮ ಕನ್ನಡ ನಾಲ್ಕನೆಯ ವಿದ್ಯಾರ್ಥಿಗಳು ಇತಿಹಾಸವೆಂದು ಏನೇನು ಓದಬೇಕಾಗಿದೆಯೆಂಬ ಮಾತು ಮಹತ್ತ್ವದ್ದಾಗಿದೆ.

ಐವತ್ತು ಜನ ಐತಿಹಾಸಿಕ ಮಹಾಪುರುಷ-ಮಹಿಳೆಯರ ಜೀವನಕಥೆಗಳನ್ನು ನಮ್ಮ ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳು ಕಲಿಯಬೇಕಾಗುವುದು. ಐವತ್ತು ಜನರಲ್ಲಿ ಝೊರೊಷ್ಟರ್, ಏಸೂಕ್ರಿಸ್ತ, ಗೌತಮಬುದ್ಧ, ಮಹಮ್ಮದ ಪೈಗಂಬರ್ ಈ ನಾಲ್ಕುಜನ ಅಂತರರಾಷ್ಟ್ರೀಯ ಧರ್ಮಸಂಸ್ಥಾಪಕರಿದ್ದಾರೆ. ಮಹಾವೀರ, ಬಸವೇಶ್ವರ, ಚೈತನ್ಯ, ನಾನಕ, ರಾಜಾರಾಮಮೋಹನರಾಯ, ದಯಾನಂದ, ರಾಮಕೃಷ್ಣಪರಮಹಂಸ ಈ ಏಳುಜನ ಅಂತರಪ್ರಾಂತೀಯ ಮತಸಂಸ್ಥಾಪಕರಿದ್ದಾರೆ. ದಾದಾಭಾಯಿ ನವರೋಜಿ, ಟಾಗೋರ್, ಲೋಕಮಾನ್ಯಟಿಳಕ, ಮಹಾತ್ಮಾಗಾಂಧಿ, ಸಿ. ಆರ್. ದಾಸ್, ವಲ್ಲಭಭಾಯಿ ಪಟೇಲ ಈ ಆರು ಜನ ಆಧುನಿಕ ರಾಷ್ಟ್ರಭಕ್ತರು ಇರುವರು. ಅದರಂತೆಯೆ ಸಮುದ್ರಗುಪ್ತ, ಚಂದ್ರಗುಪ್ತ, ಅಶೋಕ, ಹರ್ಷವರ್ಧನ, ಪುಲಿಕೇಶಿ ಈ ಐದುಜನ ಪ್ರಾಚೀನ ಭಾರತದ ಸಾರ್ವಭೌಮರು ಇರುವರು ಹಾಗೆಯೆ ಮುಂದೆ ಪೃಥ್ವೀರಾಜ ಚವ್ಹಾಣ, ಅಕಬರ್, ರಾಣಾಪ್ರತಾಪ, ಕೃಷ್ಣದೇವರಾಯ, ಶಹಾಜಹಾನ್, ಸಿದ್ಧರಾಜ, ವನರಾಜ, ಚಾಂದಬೀಬಿ ಈ ಎಂಟುಜನ ಮಧ್ಯಕಾಲದ ಸುಪ್ರಸಿದ್ಧ ರಾಜ-ರಾಣಿಯರು ಇರುವರು.

ಇನ್ನು ಮುಂದೆ ನೋಡಿರಿ ಮೋಜು: ಭಕ್ತ-ಮಹಾತ್ಮರೆಂದು ಜ್ಞಾನೇಶ್ವರ, ಏಕನಾಥ, ತುಕಾರಾಮ, ನರಸೀಮೇಹ್ತಾ, ತುಲಸೀದಾಸ, ಮೀರಾಬಾಯಿ, ಕಬೀರ ಈ ಏಳು ಜನರ ಹೆಸರು

ಗಳಿವೆ. ಅರ್ವಾಚೀನ ಇತಿಹಾಸದ ಸ್ತ್ರೀ-ಪುರುಷರೆಂದು ಶಿವಾಜಿ, ಬಾಜಿರಾವ್, ನಾನಾಫಡಣವೀಸ್, ಮಹಾರಾಣಿ ತಾರಾಬಾಯಿ, ಮಹಾದಾಜಿಸಿಂಧೆ, ಅಹಲ್ಯಾಬಾಯಿ ಹೋಳ್ಕರ, ಝಾಂಸಿ ಲಕ್ಷ್ಮೀಬಾಯಿ, ಜ್ಯೋತಿರಾವ್ ಫುಲೆ, ಸಯಾಜಿರಾವ ಗಾಯಕವಾಡ, ಕಿತ್ತೂರ ಚೆನ್ನಮ್ಮ, ರಣಜಿತಸಿಂಗ ಇಷ್ಟು ಜನರಿದ್ದಾರೆ, ಇನ್ನುಳಿದುವೆಂದರೆ ಮೂರು ಹೆಸರುಗಳು; ಕರ್ನಾಟಕದ ವಿದ್ಯಾರಣ್ಯರು, ಗುಜರಾತದ ವಸ್ತುಪಾಲ-ತೇಜಪಾಲರು, ಬಂಗಾಲದ ಶ್ರೀವಿವೇಕಾನಂದರು. ಇದಾಯಿತು ಐವತ್ತು ಜನರ ನಾಮಾವಳಿ.

ಯಾರು ಯಾರು ಕೂಡಿ, ಯಾವ ಯಾವ ದೃಷ್ಟಿಯಿಂದ ಈ ಜನರನ್ನು ಆರಿಸಿದ್ದಾರೇನೊ! ಬಂಗಾಲದ ಚೈತನ್ಯನಂತಹ ಮತ-ಸ್ಥಾಪಕನ ಹೆಸರು ಬರಬೇಕೇಕೋ, ಕರ್ನಾಟಕಕ್ಕೆ ಸಂಬಂಧಿಸಿದ ಭಾರತಪ್ರಸಿದ್ಧಿಯನ್ನು ಪಡೆದ ಶಂಕರಾಚಾರ್ಯ, ರಾಮಾನುಜಾ-ಚಾರ್ಯ, ಮಧ್ವಾಚಾರ್ಯ ಇವರ ಹೆಸರು ಬರಬಾರದೇಕೋ— ಇದು ವಿಚಿತ್ರವೇ ಆಗಿದೆ. ಕನ್ನಡ ಹುಡುಗರು ಅನ್ಯಭಾಷೆಯ ಸಂತರಾದ ಜ್ಞಾನೇಶ್ವರ, ಏಕನಾಥ, ತುಕಾರಾಮ, ತುಲಸೀದಾಸ, ಮೀರಾ-ಬಾಯಿ, ನರಸೀಮೇಥಾ ಇವರೆಲ್ಲರ ಚರಿತ್ರೆಗಳನ್ನು ಓದಬೇಕು. ಕರ್ನಾಟಕದ ಪ್ರಭುದೇವ, ಮಹಾದೇವಿಯಕ್ಕ, ಪುರಂದರದಾಸ, ಕನಕದಾಸ, ವ್ಯಾಸರಾಯರು, ನಿಜಗುಣಾರಾಧ್ಯರು ವಾದಿರಾಜರು ಇವರ ಹೆಸರನ್ನು ಕೂಡ ಅವರು ಕೇಳಬಾರದು— ಈ ಬಗೆಯ ಆಯ್ಕೆಗೆ ಏನೆನ್ನಬೇಕು ? ಇನ್ನು ರಾಜರಲ್ಲಿ ಕೃಷ್ಣದೇವರಾಯ, ಪುಲಿಕೇಶಿ ಇಬ್ಬರನ್ನು ಬಿಟ್ಟರೆ ಮಿಕ್ಕವರೆಲ್ಲರೂ ಹೊರಗಿನವರೇ! ಕರ್ನಾಟಕಕ್ಕೆ ೧೫೦೦ ವರ್ಷಗಳ ದಿವ್ಯಭವ್ಯ ಇತಿಹಾಸವಿದ್ದು, ಈಗ ಆಯ್ದು-ಕೊಂಡಿರುವ ರಾಜರ ವೈಭವ-ಕೀರ್ತಿಗಳನ್ನು ಮೀರಿಸುವವರ ಹೆಸರು-ಗಳು ಇಲ್ಲಿ ಬೇಕಾದಷ್ಟು ದೊರೆಯಬಹುದು.

ಶಿವಾಜಿಯಿಂದ ಮೊದಲುಮಾಡಿ ಸಯಾಜಿರಾವ್ ಗಾಯಕ-ವಾಡರ ವರೆಗೆ ಮಹಾರಾಷ್ಟ್ರದ ಮಹಾಪುರುಷರ ಪವಾಡವನ್ನು ನಮ್ಮ ಕನ್ನಡ ಹುಡುಗರು ಉದ್ಘೋಷಿಸಬೇಕು. (ಇಷ್ಟು ಜನರ ಚರಿತ್ರೆ-ಗಳೆಂದರೆ ಅದು ಸಂಪೂರ್ಣ ಮಹಾರಾಷ್ಟ್ರದ ಇತಿಹಾಸವಾಗುವುದು). ಆ ಕಾಲದ ಕನ್ನಡಿಗರು ಅವರ ಕಣ್ಣಿಗೇ ಬೀಳುವಂತಿಲ್ಲ. ಪುಣೆಯಲ್ಲಿ ಒಂದು ಹೆಣ್ಣುಮಕ್ಕಳ ಶಾಲೆಯನ್ನು ತೆರೆದ 'ಮಹಾತ್ಮಾ ಜ್ಯೋತಿಬಾ ಫುಲೆ'ಯವರನ್ನು ಮಹಾಪುರುಷರೆಂದು ತಿಳಿದು ನಮ್ಮ ಹುಡುಗರು ಭಕ್ತಿಯಿಂದ ಅವರ ಚರಿತ್ರೆಯನ್ನು ಓದಿಕೊಳ್ಳಬೇಕು. ಅವರಿಗಿಂತಲೂ ಹೆಚ್ಚಿನ ಸಾಮಾಜಿಕ ಸಂಘಟನೆಯ ಕಾರ್ಯಮಾಡಿದ ಶ್ರೀಸಿದ್ಧಾ-ರೂಢರು, ವಾರದ ಮಲ್ಲಪ್ಪನವರು, ಎಸ್. ಕೆ. ರೊದ್ದ ಅವರು, ಅರಟಾಳ ರುದ್ರಗೌಡರು, ರಾಜಾ ಲಖಮಗೌಡಾ ದೇಸಾಯಿ ಅವರು, ಸಿರಸಂಗಿಯ ಲಿಂಗರಾಜರು, ಇವರಾರೂ ನಮ್ಮ ಹುಡುಗರ ಹೃದಯವನ್ನು ಸೋಂಕುವಂತಿಲ್ಲ. ಸಯಾಜಿರಾವ ಗಾಯಕವಾಡರನ್ನು ನಮ್ಮ ಹುಡುಗರು ಪರಿಚಯ ಮಾಡಿಕೊಳ್ಳಬೇಕು; ಕನ್ನಡಿಗರ ಅಭಿಮಾನ ಧನರಾದ ಮೈಸೂರಿನ ನಾಲ್ಮಡಿ ಕೃಷ್ಣರಾಜರ ಹೆಸರು ಅವರ ಕಿವಿಗೆ ಕೂಡ ಬೀಳುವಂತಿಲ್ಲ. ೧೮೫೭ರ ಬಂಡಿನಲ್ಲಿ ಭಾಗವಹಿಸಿದ ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ, ಹಲಗಲಿಯ ನಾಯಕ, ಸುರಪುರದ ನಾಯಕರು—ಇವರಾರ ಹೆಸರೂ ನಮ್ಮ ಕನ್ನಡ ವಿದ್ಯಾರ್ಥಿಗಳ ಕಿವಿಗೆ ಬೀಳುವಂತಿಲ್ಲ. ಇದು ಹೊಸಬಗೆಯ ಇತಿಹಾಸಾಭ್ಯಾಸದ ಗುಣವೈಶಿಷ್ಟ್ಯ.

ಈ ಬಗೆಯ ಆಯ್ಕೆಯ ಹಿಂದೆ ಯಾವ ಯಾವ ಉದ್ದೇಶಗಳಿರ-ಬಹುದೆಂಬುದು ಸೂಕ್ಷ್ಮದೃಷ್ಟಿಯಿಂದ ನೋಡುವವರಿಗೆ ಸ್ಪಷ್ಟವಾಗಿ ಕಂಡುಬರುವಂತಿದೆ. ಆಯ್ಕೆಮಾಡುವ ಸಮಿತಿಯಲ್ಲಿ ಕನ್ನಡಿಗರು ಯಾರಾದರೂ ಇದ್ದರೆ ? ಇದ್ದರೆ ಅವರು ಕನ್ನಡಿಗರಿಗಾಗುವ ಅನ್ಯಾಯವನ್ನು ಕುರಿತು ಮಾತನಾಡಲಿಲ್ಲವೆ ? ಭಾಷಾನುಗುಣ ಪ್ರಾಂತೀಯ ಭಾವನೆಯನ್ನು ಕಡಿಮೆಮಾಡಬೇಕೆಂದು ಈ ಕ್ರಮವನ್ನು ಕೈಕೊಳ್ಳ-ಲಾಗಿದೆಯೆಂಬ ಮಹಾತತ್ತ್ವವನ್ನು, ಈ ಇತಿಹಾಸಪಾಠಗಳ ಸಂಯೋ-ಜಕರು ಹೇಳಬಹುದು; ಆದರೆ, ಅಧಿಕಾರಬಲದ ಅನುಕೂಲತೆಯಿಂದ ಒಂದು ಭಾಷೆಯ ಸಂಗಡದವರು, ತಮ್ಮ ದುರಭಿಮಾನದ ಪರಿಣಾಮ-ವನ್ನು ಇನ್ನೊಂದು ಭಾಷೆಯವರಿಗೆ ಉಣಿಸಲು ಮಾಡಿದ ಹೊಂಚು ಅಲ್ಲದೆ, ಇದು ಯಾವ ತಾತ್ತ್ವಿಕ ತಳಹದಿಯ ಮೇಲೆ ನಿಂತುದೂ ಅಲ್ಲ. ಬಸವೇಶ್ವರ, ಕಿತ್ತೂರ ಚೆನ್ನಮ್ಮ ಇಬ್ಬರ ಹೆಸರನ್ನು ಹಾಕಿದರೆ, ಉತ್ತರ ಕರ್ನಾಟಕದಲ್ಲಿಯ ಬಹುಜನಸಮಾಜವು ಬಾಯಿಮುಚ್ಚಿ ಸುಮ್ಮನೆ ಇರಬಹುದೆಂದು ಈ ಸಂಯೋಜಕರ ಸಂಕುಚಿತ ದೃಷ್ಟಿಯ ದುರಾಲೋಚನೆಯಿರಬಹುದು; ಆದರೆ ಆ ಬಹುಜನ ಸಮಾಜವು ತನ್ನ ವಿದ್ಯಾರ್ಥಿಗಳಿಗೆ, ಈಗ ಆಯ್ದಿರುವ ಬಹುಜನ ಪರಕೀಯರ ಮೇಲ್ಮೆಯನ್ನೆ ತಿಳುಹುವುದಕ್ಕೆ ಎಂದೂ ಒಪ್ಪಲಾರದು. ತನ್ನ ದೇಶದ ಇತಿಹಾಸ-ಸಂಸ್ಕೃತಿಗಳನ್ನೇ ಅವರು ಓದಿ ಕಲಿಯಬೇಕೆಂದು ಅಪೇಕ್ಷೆ-ಪಡುವುದು.

ಈ ಇತಿಹಾಸವು ಅಭ್ಯಾಸಕ್ಕೆಂದು ಬರುವುದಕ್ಕೆ ಮೊದಲೇ ನಮ್ಮ ನಾಡಿನ ಶಿಕ್ಷಣಾಭಿಮಾನಿಗಳೂ ಸಂಸ್ಕೃತಿಯ ಅಭಿಮಾನಿಗಳೂ ಕೂಡಿ ವಿಚಾರಮಾಡಬೇಕು. ಅದು ಬಾರದಂತೆ ಎಲ್ಲೆಲ್ಲಿಯೂ ಚಳವಳಿ ನಡೆಯಬೇಕು. ನಮ್ಮ ಜನರು ಇದನ್ನು ಮಾಡುವರೋ— 'ಪಾಲಿಗೆ ಬಂದದ್ದು ಪಂಚಾಮೃತ' ಎಂದು ಔದಾಸೀನ್ಯ ತಳೆದು ಸುಮ್ಮಗಿದ್ದು ಬಿಡುವರೊ ? ಕನ್ನಡ ನಾಡಿನ ಮಹಾಪುರುಷರು ನಮ್ಮ ವಿದ್ಯಾರ್ಥಿಗಳಿಗೆ ಅಪರಿಚಿತರಾಗಿಯೇ ಉಳಿಯಬೇಕೋ ಹೇಗೆ!

ನಾಡನಡೆ

ತುಂಬದ ಕೊಡದ ತುಳುಕಾಟ

ಪೋರ್ತುಗಾಲ್ ರಾಷ್ಟ್ರದ ಸರ್ವಾಧಿಕಾರಿಯಂತೆ ಮಾತನಾಡು-ತ್ತಿರುವ ಡಾ. ಸಾಲಝಾರರಲ್ಲಿ ದಿನದಿನಕ್ಕೂ ಉದ್ಧಟತನವು ಬೆಳೆಯು ತ್ತಿರುವಂತೆ ತೋರುತ್ತಿದೆ. ಭಾರತ ಸರಕಾರ, ಭಾರತದ ಪ್ರಧಾನ ಮಂತ್ರಿ ಇವರ ವಿಷಯದಲ್ಲಿ ಬಾಯಿಗೆ ಬಂದಂತೆ ಬೇಜವಾಬ್‌ದಾರಿಯ ಮಾತುಗಳನ್ನು ಆಡುತ್ತಿದ್ದಾರೆ ಅವರು. ತಾನು ಶಾಸನವಿಶುದ್ಧವಾದ ಮಾರ್ಗದಿಂದ ನಡೆದು, ಜಗತ್ತನ್ನೂ ಶಾಸನವಿಶುದ್ಧವಾದ ಮಾರ್ಗ ದಿಂದ ನಡೆಯಹಚ್ಚಿ, ಲೋಕದಲ್ಲೆಲ್ಲ ಶಾಂತಿ-ಸಮಾಧಾನಗಳನ್ನು ಹರಡಬೇಕೆಂಬ ಭಾರತದ ದಿವ್ಯಧ್ಯೇಯದ ಅರ್ಥ ಡಾ. ಸಾಲಝಾರ-ರಂತಹ ಹುಂಬರಿಗೆ ಹೇಗೆ ಆಗಬೇಕು? ಸಿಂಹದ ಶಾಂತತೆಯ ಅರ್ಥ-ವನ್ನು ಮಾಡಿಕೊಳ್ಳದೆ ನಾಯಿ ಬೊಗಳಲು ತೊಡಗಿದರೆ, ನಾಯಿಗೆ ಸಿಂಹದ ಸ್ಥಾನ-ಮಾನಗಳು ಸಿಕ್ಕುವುವೇ? 'ಭಾರತವು ಯುದ್ಧಕ್ಕೆ ಹೆದರುವುದು' ಎಂದು ಡಾ. ಸಾಲಝಾರರು ಕೆರಳಿಸುವ ಮಾತನ್ನು ಆಡುತ್ತಿದ್ದಾರೆ. ಅವರಿಗೆ ಪೋರ್ತುಗಾಲಿನ ಹೊರತು ಬೇರೆಯೇನೂ ಕಾಣುವುದಿಲ್ಲ. ಭಾರತರಾಷ್ಟ್ರದ ಧುರೀಣರು ಭಾರತಕಲ್ಯಾಣ-ವನ್ನಷ್ಟೇ ನೋಡದೆ ಲೋಕದ ಕಲ್ಯಾಣದ ಕಡೆಗೆ ದೃಷ್ಟಿಯಿರಿಸಿ ಹೊರಟಿದ್ದಾರೆ.

ಯುದ್ಧಕ್ಕೆ ಕಾಲುಕೆದರುತ್ತಿರುವ ಸಾಲಝಾರ್ ಅವರಿಗೆ ತಮ್ಮ ಶಕ್ತಿಯ ಕಲ್ಪನೆಯಿದ್ದಂತಿಲ್ಲ. ಭಾರತವು ಮನಸ್ಸು ಮಾಡಿದರೆ, ಗೋಮಾಂತಕವನ್ನು ತೆಗೆದುಕೊಳ್ಳಲು ಅದಕ್ಕೆ ಶಸ್ತ್ರಾಸ್ತ್ರ, ಯುದ್ಧ ಇವುಗಳ ಅಗತ್ಯವೇ ಇಲ್ಲ. ಭಾರತದಿಂದ ಬರೀ ಬರಿಗೈಯ ಜನಜಂಗುಳಿ ಹೋಗಿ, ಸಹಜವಾಗಿ ಗೋಮಾಂತಕವನ್ನು ಆಕ್ರ-ಮಿಸಿಕೊಳ್ಳಬಹುದು. ಸಿಂಹವೆಂದೂ ಬೊಗಳುವುದಿಲ್ಲವೆಂಬುದನ್ನು ಪೋರ್ತುಗಾಲ್ ರಾಷ್ಟ್ರವು ಅರಿತುಕೊಳ್ಳಬೇಕು.

ನಾಡಿನಲ್ಲಿಯ ರಜೋವೃತ್ತಿಯ ಜನತೆಯ ಹೃದಯವನ್ನು ಸಾಲಝಾರರ ಕೆಣಕುನುಡಿಗಳು ಕೆರಳಿಸುತ್ತಲಿವೆ. ನಮ್ಮಲ್ಲಿಯೂ ಎಲ್ಲರಿಗೂ ಪಂಡಿತ ನೆಹರೂ ಅವರ ಜಾಗತಿಕಕಲ್ಯಾಣದ ವಿಶಾಲ ದೃಷ್ಟಿಯೆ ಇದೆಯೆಂದು ಹೇಳಲು ಬರುವಂತಿಲ್ಲ. ಕೆಣಕಿ ಕೆಣಕಿ ನುಡಿ ಯುವ ಸಾಲಝಾರರ ಮಾತುಗಳನ್ನು ಅವರು ಎಷ್ಟುದಿನವೆಂದು ಸಹಿ-ಸಿಕೊಳ್ಳಬಲ್ಲರು? ಭಾರತ ಸರಕಾರ ಕೂಡಲೆ ಈ ಅಪಮಾನದ ಪರಿ-ಮಾರ್ಜನವನ್ನು ಮಾಡದೆ ಹೋದರೆ, ಕೆಣಕಿಸಿಕೊಂಡು ಕೆರಳಿದ ಜನತೆ ಯಾವ ದಾರಿಯನ್ನು ಹಿಡಿದೀತೆಂದು ಹೇಳಲು ಬರುವಂತಿಲ್ಲ.

ಪಾಕಿಸ್ತಾನದ ನಾಯಕರ ಒಳತೋಟ

ಪಾಕಿಸ್ತಾನದ ಮುಖ್ಯಮಂತ್ರಿ ಮಹಮ್ಮದ ಆಲಿಯವರು ನಿರಾ-ಶೆಯಿಂದ ಗಾಬರಿಗೊಂಡಿದ್ದಾರೊ, ಅಥವಾ ಪಾಕಿಸ್ತಾನದ ವಿಪರೀತ ರಾಜಕೀಯ ಪರಿಸ್ಥಿತಿಯ ಮೂಲಕ ಕಂಗೆಟ್ಟು ಮಿದುಳನ್ನು ಕೆಡಿಸಿ-ಕೊಂಡಿದ್ದಾರೊ, ಇಲ್ಲವೆ ಇನ್ನೊಬ್ಬರ ಅಭಿಪ್ರಾಯವನ್ನು ಕೇಳಿಕೇಳಿ ಮಾತನಾಡುತ್ತಾರೋ—ಪ್ರಾರಂಭದಲ್ಲಿಯ ಪ್ರತಿಭೆ-ಸ್ವಾತಂತ್ರ್ಯಗಳು ಅವರಲ್ಲಿ ಈಗ ಉಳಿದಿಲ್ಲ. ಭಾರತ-ಪಾಕಿಸ್ತಾನಗಳ ಸ್ನೇಹಸಂಬಂಧದ ಕುರಿತು, ಅಲ್ಲಿಯ ಗವರ್ನರ್ ಜನರಲರಾದ ಗುಲಾಮ್ ಮಹಮ್ಮದರು ಆಡುವ ಮಾತೇ ಬೇರೆಯಾಗಿದೆ. ಕೇಂದ್ರದಲ್ಲಿ ಹೊಸತಾಗಿ ಮಂತ್ರಿ-ಗಳಾಗಿ ಬಂದಿರುವ ಮಿರ್ಝಾ ಇಸ್ಕಂದರರು ಆಡಿದ ಮಾತೇ ಬೇರೆ-ಯಾಗಿದೆ. ಭಾರತದಲ್ಲಿ ಪಾಕಿಸ್ತಾನ್ ರಾಯಭಾರಿಗಳಾಗಿರುವ ಶ್ರೀ ಗಝನಫರ್ ಅಲ್ಲಿಯವರ ಸಂಪೂರ್ಣ ಸಹಾನುಭೂತಿಪೂರ್ಣ ಮಾತುಗಳೇ ಒಂದು ರೀತಿಯವಾಗಿವೆ. ಇವೆಲ್ಲವುಗಳನ್ನೂ ಕೇಳಿದ ಮೇಲೂ ಆಡಿದ ಮಾನ್ಯ ಮಹಮ್ಮದ ಆಲಿಯವರ ಮಾತುಗಳು ತೀರ ನಿರಾಶೆಯನ್ನು ಹುಟ್ಟಿಸುವಂತಹವಾಗಿವೆ. ಡಾ. ಖಾನ್‌ಸಾಹೇಬರಿಂದ ಅವರ ವ್ಯಕ್ತಿತ್ವವನ್ನು ಪ್ರಕಟಿಸುವಂತಹ ಯಾವ ಮಾತುಗಳೂ ಇದು-ವರೆಗೆ ಹೊರಬಿದ್ದಿಲ್ಲ. ಇದೆಲ್ಲವನ್ನೂ ನೋಡುವ ಸಾಮಾನ್ಯಬುದ್ಧಿಯ ಜನರಿಗೆ, ಪಾಕಿಸ್ತಾನದ ರಾಜಕೀಯ ಪರಿಸ್ಥಿತಿಯು ಒಂದು ಗೊಂದಲ ದಿಂದ ತುಂಬಿರುವುದೆಂದೇ ಎನಿಸಬಹುದು. ಸಾಮಾನ್ಯ ಬುದ್ಧಿಯವ-ರಿಗಷ್ಟೇ ಏಕೆ? ಎಂತಹ ಸೂಕ್ಷ್ಮಬುದ್ಧಿಯವರನ್ನೂ ಅದು ಬೆರಗು-ಗೊಳಿಸುವಂತೆಯೆ ಇದೆ.

ಪಾಪ, ಪಾಕಿಸ್ತಾನದ ರಾಜಕಾರಣಿಗಳಿಗೆ ಮುಂದೆ ತಾವೇನು ಮಾಡಬೇಕೆಂಬುದೇ ತಿಳಿಯದಂತಾಗಿದೆ. ಅಮೇರಿಕೆಯಿಂದ ನೆರವಿಗೆ ಬರುತ್ತಿರುವ ಶಸ್ತ್ರಾಸ್ತ್ರ-ಸೈನ್ಯಸಲಕರಣೆಗಳ ಮೂಲಕ ತಮ್ಮ ಬಲವು ಬೆಳೆದಂತೆನಿಸಿ, ಭಾರತವ ಕೂಡ ವಾಯಾದಭಾವದಿಂದಲೇ ನಡೆದು-ಕೊಳ್ಳಬೇಕೆಂದೂ ಅವರಿಗೊಮ್ಮೆ ಎನಿಸುತ್ತಿರಬಹುದು. ಅಮೇರಿಕೆ-ಯಿಂದ ಪಡೆದ ಬಲವನ್ನು ಭಾರತಕ್ಕೆ ವಿರೋಧಿಯಾಗಿ ಬಳಸಲು ಬಂದೀತೇ?—ಎಂದೂ ಒಮ್ಮೊಮ್ಮೆ ಎನಿಸುತ್ತಿರಬಹುದು. ಕಾಶ್ಮೀರದ ಕಾರಣದಿಂದಲೇ ಬೆಳಸಿಕೊಂಡು ಬಂದಿರುವ ಭಾರತವಿರೋಧವನ್ನು, ಅದನ್ನು ಪಡೆಯದೆ ಬಿಡುವುದು ಹೇಗೆಂದೂ ಒಮ್ಮೊಮ್ಮೆ ಎನಿಸುತ್ತಿರ-ಬಹುದು. 'ಕಾಶ್ಮೀರವನ್ನು ಮರಳಿ ಪಡೆಯುವುದು ಅಸಾಧ್ಯವಾದ ವಿಷಯ; ಆದುದರಿಂದ ಅದರ ಆಶೆಯನ್ನು ಬಿಟ್ಟು, ನೆರೆಯ ರಾಷ್ಟ್ರ-ವಾದ ಭಾರತದೊಂದಿಗೆ ಸ್ನೇಹಭಾವದಿಂದ ನಡೆದುಕೊಳ್ಳೋಣ' ಎಂಬ ಯೋಚನೆಯೂ ಅವರ ಮನಸ್ಸಿನಲ್ಲಿ ಕಾರ್ಯಮಾಡುತ್ತಿರಬಹುದು. ಈ ದ್ವಂದ್ವಭಾವದ ಮೂಲಕವಾಗಿಯೆ ಅಲ್ಲಿಯ ನಾಯಕರಲ್ಲಿ ಏಕ-ವಾಕ್ಯತೆಯಿಲ್ಲದಂತಾಗಿದೆ. ಇಷ್ಟಾದರೂ ಭಾರತದ ಧುರೀಣರು ಉದಾರಧೋರಣವನ್ನು ವಹಿಸಿ, ಪಾಕಿಸ್ತಾನಿಗಳಿಗೆ ಸ್ನೇಹದ ಸ್ವಾಗತ ವನ್ನು ಬಯಸುತ್ತಿರುವುದು ಅಭಿನಂದನೀಯ ಸಂಗತಿಯಾಗಿದೆ.

ಪಶ್ಚಿಮ ಪಾಕಿಸ್ತಾನದ ಏಕಘಟಕನಿರ್ಮಿತಿ

ಪಾಕಿಸ್ತಾನದ ರಾಜಕೀಯ ಬುದ್ಧಿವಂತಿಕೆಯ ದಿವಾಳಿಯೆದ್ದುದು ಅವರು ಪಶ್ಚಿಮ ಪಾಕಿಸ್ತಾನವನ್ನೆಲ್ಲ ಒಂದೆ ಘಟಕವನ್ನಾಗಿ ಮಾಡ-

ಬೇಕೆಂದು ಹೊರಟುದರಲ್ಲಿಯೂ ಸ್ಪಷ್ಟವಾಗಿ ಕಂಡುಬರುತ್ತಲಿದೆ. ಇದರಲ್ಲಿ ಪಾಕಿಸ್ತಾನದ ನಾಯಕರ ಸದ್ಬುದ್ಧಿ–ಸುವಿಚಾರಗಳೇನೂ ಕಂಡುಬರುವುದಿಲ್ಲ. ಪೂರ್ವಪಾಕಿಸ್ತಾನದ ಬಹುಮತದ ಬಲವನ್ನು ಕುಗ್ಗಿಸಿ, ಅದನ್ನು ಸಂಪೂರ್ಣವಾಗಿ ಹಣ್ಣುಗೊಳಿಸಿ ಅಧೀನಪಡಿಸಿಕೊಳ್ಳಬೇಕೆನ್ನುವ ಕುಟಿಲರಾಜಕಾರಣವು ಇದರಲ್ಲಿದೆ. ಕುಟಿಲರಾಜಕಾರಣದಿಂದ ಜನತೆಯನ್ನು ಒಂದುಗೂಡಿಸುವುದು ಅಸಾಧ್ಯವಾದ ಮಾತು. ಹೃದಯ ಹೃದಯಗಳು ಒಂದಾಗುವಂತಹ ಸರಳ ರಾಜಕಾರಣದಿಂದಲೇ ಅದು ಸಾಧ್ಯವಾಗುವುದು. ಅಧಿಕಾರಬಲದ ಕೃತ್ರಿಮ ಉಪಾಯಗಳಿಂದ, ಹಾಗೆ ಒಂದುಗೂಡಿಸಿ ತೋರಿಸುವವರೇ—ಎಂಬ ಹಟದಿಂದ ಹೊರಟರೆ, ಇಂದಿಲ್ಲ ನಾಳೆ, ಅದರ ವಿಷಫಲವನ್ನು ಜನತೆಯು ಉಣ್ಣಲೇ ಬೇಕಾಗುವುದು.

ಪಶ್ಚಿಮಪಾಕಿಸ್ತಾನದ ಧುರೀಣರಲ್ಲಿಯೆ ಈಗ ಏಕವಾಕ್ಯತೆ ಕಾಣುತ್ತಿಲ್ಲ. ವಿಧ್ವಂಸಗೊಳಿಸಿದ ಘಟನಾಸಮಿತಿಯಿಂದ ಹೊರಬಿದ್ದವರೂ, ಸಿಂಧದ ಹಿಂದಿನ ಮಂತ್ರಿಮಂಡಲದ ಪಕ್ಷದವರೂ ಈ ಏಕಘಟಕ ತತ್ತ್ವವನ್ನು ಒಪ್ಪುವುದಿಲ್ಲವೆಂಬುದನ್ನು ಅಲ್ಲಲ್ಲಿ ಆಡಿ ತೋರಿಸುತ್ತಿದ್ದಾರೆ. ಪಖ್ತೂನಿಗಳಂತೂ ಇದನ್ನು ಎಂದೂ ಒಪ್ಪಲಾರರು. ಅಲ್ಲದೆ ಪಂಜಾಬದ ಧುರೀಣರು ಈಗ ಎಷ್ಟೊಂದು ಮಾರ್ಜಾರಸಂನ್ಯಾಸಿಗಳಾಗಿ ರಾಷ್ಟ್ರಹಿತದ ಮಾತುಗಳನ್ನು ಆಡುತ್ತಿದ್ದರೂ, ಮಿಕ್ಕಪ್ರಾಂತಗಳ ಜನತೆ ಅವರನ್ನು ಸಾಶಂಕದೃಷ್ಟಿಯಿಂದ ನೋಡುವುದು ಸಹಜವೇ ಆಗಿದೆ

ಇನ್ನೂ ಒಂದು ತಮಾಷೆಯ ಸಂಗತಿಯೆಂದರೆ, ಸಿಂಧದ ಮಂತ್ರಿಮಂಡಲದ ಚದುರಂಗದಾಟ. ಅಪರಾಧಿಗಳೆಂದು ಕೋರ್ಟಿನಿಂದ ಸಿದ್ಧರಾಗಿರುವ ನಾಯಕರೇ ಅಲ್ಲಿ ಮತ್ತೆ ಮಂತ್ರಿಗಳಾಗಿ ಬಂದಿದ್ದಾರೆ. ಕೇಂದ್ರದ ನಾಯಕರ ಮಾತನ್ನು ಒಪ್ಪಿಕೊಳ್ಳದುದರಿಂದ ಹಿಂದಿನ ಮಂತ್ರಿಮಂಡಲದಲ್ಲಿದ್ದ ನಿರಪರಾಧಿಗಳೂ ಈಗ ಅಪರಾಧದ ಮುದ್ರೆಯನ್ನು ಪಡೆದುಕೊಂಡಿದ್ದಾರೆ. ಇಂತಹ ನಾಡಿನಲ್ಲಿ ಕಾನೂನಿನ ಬಲವು ಜನತೆಯ ಹೃದಯವನ್ನು ಹೇಗೆ ಬೆಸೆಯಬಲ್ಲದು?

ನಾವು ಹಿಂದೊಮ್ಮೆ 'ಪಾಕಿಸ್ತಾನದ ಗಂಗದತ್ತೀರ್ಥುಂ' ಎಂದು ಬರೆದುದನ್ನು ಮತ್ತೆ ನೆನಪಿಗೆ ತಂದುಕೊಡಬಯಸುತ್ತೇವೆ. ಸ್ವಹಿತವನ್ನು ಬಯಸುವ ಪರಕೀಯರ ಸಲಹೆಯಂತೆ ರಾಜಕಾರಣವನ್ನು ರೂಪಿಸುತ್ತ] ಹೋದರೆ, ಅದೆಂದೂ ದೇಶಕ್ಕೆ ಕಲ್ಯಾಣಕಾರಿಯಾಗಿ ಪರಿಣಮಿಸದು.

ಶೇಷಾದ್ರಿಸಮಿತಿಯ ಸೋಗಿನ-ವರದಿ

ಕರ್ನಾಟಕ ಏಕೀಕರಣದ ವಿಚಾರವನ್ನು ಮಾಡುವುದಕ್ಕಾಗಿ, ಮೈಸೂರು ಸರಕಾರದವರು ನೆಪಕ್ಕೆ ನಿಯಮಿಸಿದ್ದ ಶೇಷಾದ್ರಿ ಸಮಿತಿಯು ತನ್ನ ಕಾರ್ಯವನ್ನು ಮುಗಿಸಿ ವರದಿಯನ್ನೊ ಬೆಳಕಿಗೆ ಹಾಕಿಬಿಟ್ಟಿತು. ಆ ವರದಿ ಕರ್ನಾಟಕ ಏಕೀಕರಣ ಬಯಸುವವರನ್ನೆಲ್ಲ ನಿರಾಶೆಯ ಕಡಲಲ್ಲಿ ಮುಳುಗಿಸಿಬಿಟ್ಟಿದೆ.

ಮೈಸೂರಲ್ಲಿ ಸದ್ಯ ಅಧಿಕಾರಸೂತ್ರವನ್ನು ವಹಿಸಿರುವ ನಾಯಕರಿಗೆ ನಿಜವಾಗಿಯೂ ಕರ್ನಾಟಕ ಏಕೀಕರಣವು ಬೇಕೇ ಆಗಿದ್ದರೆ, ಅವರು ಈ ಸಮಿತಿಯನ್ನು ನಿಯಮಿಸುವ ಗೊಡವೆಗೆ ಹೊಗುತ್ತಿರಲೇ ಇಲ್ಲ. ಅದು ಬೇಡವಾದುದರಿಂದಲೆ ಈ ದೀರ್ಘಸೂತ್ರವೃತ್ತಿಯನ್ನು ಅವಲಂಬಿಸಿದರು. ಸಮಿತಿಯ ಸದಸ್ಯರಲ್ಲಿ ಒಬ್ಬನೂ ಕನ್ನಡಿಗನಿರಲಿಲ್ಲ; ಕನ್ನಡಿಗರ ಹೃದಯದ ಅಪೇಕ್ಷೆಗಳನ್ನು ಅರಿತುಕೊಂಡವನಿರಲಿಲ್ಲ. ಅವರು ಉತ್ತರಕರ್ನಾಟಕದಲ್ಲಿ ಎಲ್ಲೆಲ್ಲಿಯೊ ತಿರುಗಾಡಿದರಂತೆ; ಆದರೆ ಉತ್ತರ ಕರ್ನಾಟಕದ ಜನತೆಯ ಪ್ರತಿನಿಧಿಗಳನ್ನು ಅವರು ಕಂಡು ಮಾತನಾಡಿದಂತೆಯೆ ಕಾಣುವುದಿಲ್ಲ. ವರದಿಯನ್ನು ಹೇಗೆ ಹೇಗೆ ಬರೆಯಬೇಕೆಂಬುದನ್ನು ಮೊದಲೇ ಅವರು ನಿರ್ಣಯಿಸಿಕೊಂಡಿರಬಹುದು; ಅದಕ್ಕೆ ಸರಿಹೋಗುವಂತೆ ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸಿಕೊಂಡಿರಬಹುದು.

ಅವರ ವರದಿಯಂತೆ ಉತ್ತರಕರ್ನಾಟಕವು ಆದಾಯಕ್ಕಿಂತ ವೆಚ್ಚ ಹೆಚ್ಚಿಗಿರುವ ಪ್ರದೇಶವೆಂದು ವಾದಕ್ಕಾಗಿ ಒಪ್ಪಿಕೊಳ್ಳೋಣ. ಈಗ ಭಾರತದ ವೆಚ್ಚವೇ ಆದಾಯಕ್ಕಿಂತ ಹೆಚ್ಚಿಗೆ ಇರುವುದಲ್ಲ! ಈ ಕಾರಣದಿಂದ ಭಾರತದ ರಾಜ್ಯವೇ ಬೇಡವೆಂದು ಹೇಳಿದರೆ ಸಮಂಜಸವೆನಿಸಿತೆ? ಪ್ರಗತಿಪ್ರಿಯರಾದ ಮೈಸೂರು ಮಹಾರಾಜರ ಆಡಳಿತದ ಮೂಲಕ ಮೈಸೂರುರಾಜ್ಯದಲ್ಲಿ ಶಿಕ್ಷಣ, ಸಾರಿಗೆಯ ವ್ಯವಸ್ಥೆ, ಔಷಧೋಪಚಾರಗಳ ವ್ಯವಸ್ಥೆ ಇವೆಲ್ಲ ಹೆಚ್ಚಿನ ಪ್ರಮಾಣದಲ್ಲಿ ಇರಬಹುದು. ಮಿಕ್ಕ ಕರ್ನಾಟಕ ಪ್ರದೇಶದಲ್ಲಿ ಇವು ಕಡಿಮೆಯಿರುವುವೆಂಬುದು ಕೂಡಿಕೊಳ್ಳದಿರುವುದಕ್ಕೆ ಸಮಂಜಸಕಾರಣವೆನಿಸೀತೆ? ಬ್ರಿಟಿಷರ ಆಳಿಕೆಯ ಮೂಲಕ, ಭಾರತದ ಯಾವ ಭಾಗದಲ್ಲಿ ಇವೆಲ್ಲ ಹೆಚ್ಚಿನ ಮಟ್ಟದಲ್ಲಿವೆ? ಇಲ್ಲವೆಂದು ಮೈಸೂರುರಾಜ್ಯವು ಭಾರತದಿಂದ ಸಿಡಿದು ಇರಬಲ್ಲದೊ? ಬೇಕಾದ ಮಾತು ಬೆಲ್ಲಕ್ಕಿಂತ ಸಿಹಿಯಾಗುವುದು; ಬೇಡವಾದುದು ಬೇವಿಗಿಂತ ಕಹಿಯೆನಿಸಿಕೊಳ್ಳುವುದು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಏನೇನೋ ಕಾರಣಗಳ ಮೂಲಕ ನವಂಬರ್, ಡಿಸೆಂಬರ್ ಸಂಚಿಕೆಗಳಲ್ಲಿ 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ'ಕ್ಕೆ ಎಡೆಯನ್ನು ಕೊಡಲಾಗಲಿಲ್ಲ. ಅದನ್ನು ನಾವು ನಿಲ್ಲಿಸಿಲ್ಲ. ಮುಂದಿನ ಸಂಚಿಕೆಯಲ್ಲಿ ಅದಕ್ಕೆ ಅವಶ್ಯವಾಗಿ ಎಡೆಯನ್ನು ಕೊಡಲಾಗುವುದು.

ಸಂ. ಜ.

ವಾಸವದತ್ತೆ

(ಅನುವಾದಿತ ಕಥೆ)

ಶ್ರೀಮತಿ ಸರೋಜಿನಿ ಮಹೀಷಿ ಬಿನ್ನೂರು
ಬಿ. ಎ. ಧಾರವಾಡ.

ಯಾವುದು ಸೌಂದರ್ಯ? ಲೋಕದ ಜನರೆಲ್ಲರ ಕಣ್-ಮನಗಳನ್ನು ಸೆರೆಹಿಡಿಯಬಲ್ಲ ವಾಸವದತ್ತೆಯ ರೂಪ-ಯೌವನಗಳೆ ಸೌಂದರ್ಯ, ಉಪಗುಪ್ತನಿಗೆ ರುದ್ರಭಯಂಕರವಾಗಿ ಕಂಡುವು. ಹೊರಗಣ್ಣುಗಳನ್ನು ಕಳೆದುಕೊಂಡಿದ್ದ ವಾಸವದತ್ತೆಯ ಒಳಗಣ್ಣು, ಶಾಶ್ವತವಾದ ಸೌಂದರ್ಯವನ್ನು ಕಂಡುಕೊಂಡಿತು!

ವಾಸವದತ್ತೆಯ ಸೌಂದರ್ಯವು, ಪೂರ್ಣಚಂದ್ರನಿಗಿಂತ ಸುಂದರವಾಗಿತ್ತು ಅವಳ ದೇಹವು ಕಮಲದ ಹೂವಿಗಿಂತಲೂ ಕೋಮಲವಾಗಿತ್ತು. ಅವಳ ಕಂಠಸ್ವರವು, ವೀಣೆಯ ವಾಣಿಯನ್ನೂ ತಿರಸ್ಕರಿಸುವಂತಿತ್ತು. ಕಣ್ಣುಗಳು ಚಿಗುರೆಯ ಕಣ್ಣುಗಳನ್ನೂ ನಾಚಿಸುವಂತಿದ್ದುವು. ಸ್ವರ್ಗೀಯಸೌಂದರ್ಯವೇ, ಸ್ವತಃ ತನ್ನ ಕೈಗಳಿಂದ ತನ್ನ ಇಚ್ಛಾನುಸಾರ, ಆ ಸಜೀವ ಸ್ವರ್ಣಮೂರ್ತಿಯನ್ನು ನಿರ್ಮಾಣಮಾಡಿತ್ತು. ಇಂತಹ ಭುವನಮೋಹನ ಶೋಭೆ,—ಇಂತಹ ಆಕರ್ಷಣೀಯವಾದ ರೂಪರಾಶಿಯನ್ನು ಕೊಟ್ಟಿದ್ದರೂ, ಅವಳನ್ನು ವೇಶ್ಯೆಯನ್ನಾಗಿ ಮಾಡುವುದು ವಿಧಾತನಿಗೆ ಉಚಿತವೇ ? ಕೆಸರಿನಲ್ಲಿ ಕಮಲಗಳನ್ನೂ, ಮುಳ್ಳುಗಳಲ್ಲಿ ಹೂಗಳನ್ನೂ ಅರಳಿಸುವವನೇ ಬಲ್ಲ !

ಅಂದು ಬಾಲವಸಂತದ ಮುಂಜಾವದಲ್ಲಿ, ಕೋಗಿಲೆಯ ಕರುಣಗಾನವನ್ನು ಎದೆಯಿಂದ ಅಪ್ಪಿಕೊಂಡು ಮಲಯಮಾರುತ ಬೀಸುತ್ತಿತ್ತು. ಒಬ್ಬ ಶ್ರಮಣನು, ವಾಸವದತ್ತೆಯ ಸುವಿಶಾಲವಾದ ಮಂದಿರದ ಬಾಗಿಲಿನಲ್ಲಿ ಭಿಕ್ಷೆಗಾಗಿ ಬಂದು ನಿಂತನು. ಅಕಸ್ಮಾತ್ತಾಗಿ ವಾಸವದತ್ತೆಯ ದೃಷ್ಟಿಯು ಬೌದ್ಧಭಿಕ್ಷುವಿನ ಮೇಲೆ ಬಿದ್ದಿತು. ಒಮ್ಮೆ ನೋಡಿದಳು, ನೂರು ಸಲ ನೋಡಿದಳು, ನೋಡುತ್ತಲೇ ನಿಂತಳು.

ಅವನ ಹೆಸರು ಉಪಗುಪ್ತ. ಸಾಂಸಾರಿಕ ದೃಷ್ಟಿಯಿಂದ ಅವನು ಭಿಕ್ಷುಕನಾಗಿದ್ದರೂ, ಸ್ವರ್ಗೀಯದೃಷ್ಟಿಯಿಂದ ಅವನೇ ರಾಜ-ರಾಜೇಶ್ವರನಾಗಿದ್ದನು. ಮನಸ್ಸಿಗಿಂತ ಶ್ರೇಷ್ಠವಾದ ಹಾಗೂ ಸುವಿಶಾಲವಾದ ರಾಜ್ಯವು ಯಾವುದೂ ಇಲ್ಲ. ಉಪಗುಪ್ತನು ಈ ತನ್ನ ಮನಸ್ಸನು ಗೆದ್ದಿದ್ದನು. ಸಮಸ್ತ ಇಂದ್ರಿಯಗಳು ಅವನ ಪ್ರಜೆಗಳಾಗಿದ್ದುವು ವಿಶ್ವದ ಚಂಚಲತೆಯ ಹಾಗೂ ಅಶಾಂತಿಯ ಅರಿವು ಅವನಿಗಾಗಿತ್ತು. ಅವನ ಕಣ್ಣುಗಳು ಶಾಂತವಾಗಿದ್ದುವು, ಸ್ಥಿರವಾಗಿದ್ದುವು. ಸ್ವರ್ಗೀಯ ದಿವ್ಯಶೋಭೆಯು ಅವನ ಮುಖಮಂಡಲದಲ್ಲಿ ವಿರಾಜಮಾನವಾಗಿತ್ತು. ಕಾಷಾಯವಸ್ತ್ರಗಳು ಅವನಿಗೆ ಅಪೂರ್ವ ಶೋಭೆಯನು ತಂದುಕೊಟ್ಟಿದ್ದುವು.

ತನ್ನ ಸೌಂದರ್ಯದಿಂದ ಇಡಿಯ ಸಂಸಾರವನ್ನೇ ಸೋಲಿಸುವಂತಹ ವಾಸವದತ್ತೆಯು, ಆ ಭಿಕ್ಷುವಿನ ಬಳಿ ಸೋತಳು; ಅವನ ಸೌಂದರ್ಯದಿಂದ ಮುಗ್ಧಳಾದಳು. ಉಪಗುಪ್ತನ ಸಮೀಪಕ್ಕೆ ಹೋಗಿ ನುಡಿದಳು:—"ಭಿಕ್ಷು, ಭಿಕ್ಷಾಪಾತ್ರೆಯನ್ನು ಮುಂದೊಡ್ಡು." ಭಿಕ್ಷಾಪಾತ್ರೆಯನ್ನು ಮುಂದೊಡ್ಡಿ ಹಠಾತ್ತಾಗಿ ಉಪಗುಪ್ತನು ಆಶ್ಚರ್ಯದಿಂದ ಕೇಳಿದನು: "ಆದರೆ, ನಿನ್ನ ಎರಡೂ ಕೈಗಳು ಬರಿಯವಾಗಿವೆ. ನೀನು ನನಗೇನು ನೀಡಬಲ್ಲೆ ?" "ನಿನಗೆ ಇದುವರೆಗೆ ಈ ಸಂಸಾರದಲ್ಲಿ ಎಲ್ಲಿಯೂ ಸಿಕ್ಕಿರದಂತಹ ಮತ್ತು ಈ ಕೈಗಳಿಂದ ಇದುವರೆಗೆ ಬೇರಾರಿಗೂ ನೀಡಿರದಂತಹ ವಸ್ತುವನ್ನು ನೀಡುವೆ." "ಎಂದರೆ ?" "ಈ ಕೈಗಳು ಬರಿಯವಾಗಿಲ್ಲ." "ಈ ಸುವರ್ಣಭೂಷಣಗಳಿಂದ ನಾನೇನು ಮಾಡಲಿ ?" "ನಾನು ಈ ಸುವರ್ಣಭೂಷಣಗಳ ಮಾತು ಆಡುತ್ತಿಲ್ಲ. ಅಬೋಧಯುವಕನೇ, ಈ ಕೈಗಳು ಬರಿಯವಾಗಿಲ್ಲ. ಪ್ರೇಮಾಲಿಂಗನದಿಂದ ಪರಿಪೂರ್ಣವಾಗಿವೆ. ಅದೇ ಆಲಿಂಗನವನ್ನು ನಾನು ನಿನಗೆ ಕೊಡುವೆ. ಭಿಕ್ಷು, ವಿಚಾರ ಮಾಡು ! ಯಾವ ವಾಸವದತ್ತೆಯ ಛಾಯಾಸ್ಪರ್ಶಕ್ಕಾಗಿ ರಾಜ-ಮಹಾರಾಜರು ವ್ಯಾಕುಲರಾಗಿದ್ದಾರೆಯೊ, ಅಂತಹಳು ನಿನಗೆ ಪ್ರೇಮಾಲಿಂಗನವನ್ನು ನೀಡುವಳು !"

ಉಪಗುಪ್ತನ ಮುಖಭಾವದಲ್ಲಿ ಯಾವ ಪರಿವರ್ತನೆಯೂ ಆಗಲಿಲ್ಲ. ವಾಸವದತ್ತೆಯು ಪುನಃ ನುಡಿದಳು: "ಭಿಕ್ಷಾಪಾತ್ರೆಯನ್ನು ಮುಂದೊಡ್ಡು. ಭಿಕ್ಷೆಯೆಂದು ನನ್ನ ಹೃದಯವನ್ನೇ ನೀಡುವೆ." "ಇದರ ಅರ್ಥ ?" "ಇದರ ಅರ್ಥವೆಂದರೆ, ಈ ನಿನ್ನ ದೇಹವು ಭಿಕ್ಷಾವೃತ್ತಿಗಾಗಿ ಇಲ್ಲ. ಈ ಅನುಪಮ ಸೌಂದರ್ಯಸುಮನವು ಸಂಸಾರಸ್ಪರ್ಶದಿಂದ ದೂರ ವನದಲ್ಲಿ ಬಾಡಲು ಇಲ್ಲ. ಭಿಕ್ಷು, ನನ್ನ ಸದನಕ್ಕೆ ಬಾ. ನಾನು ವಿಶ್ವದ ಒಡತಿ, ನಿನ್ನ ದಾಸಿಯಾಗುವೆನು."

ವಾಸನಾಪ್ರಭಾವದಿಂದ ಮುಕ್ತವಾದ ಉಪಗುಪ್ತನ ಮುಖಮಂಡಲದಲ್ಲಿ, ನಗೆಯ ಒಂದು ಕ್ಷೀಣರೇಖೆಯು ಕಾಣಿಸಿಕೊಂಡಿತು. ಅವನು ಸುಮ್ಮನಿದ್ದ. ವಾಸವದತ್ತೆಯು ವಿಕಲಳಾಗಿ "ಉತ್ತರ ಕೊಡು ಭಿಕ್ಷು !" ಎಂದಳು. "ಆದರೆ, ಅನೇಕ ಕಾರಣಗಳ ಮೂಲಕ ಈಗಲೇ ಸಮಯವಿಲ್ಲ" "ಹಾಗಾದರೆ ಎಂದು ?" "ಕೆಲವು

ದಿನಗಳನಂತರ ಪುನಃ ಬರುವೆ." ವಾಸವದತ್ತೆಯು ಮನದಲ್ಲಿಯೆ ಯೋಚಿಸತೊಡಗಿದಳು. ಸುಂದರಿಯ ರೂಪಕ್ಕೆ ಅವಮಾನ! ಒಬ್ಬ ಸಾಮಾನ್ಯಭಿಕ್ಷುಕನು ಅವಳ ಸೌಂದರ್ಯವನ್ನು ತಿರಸ್ಕರಿಸಲು ಶಕ್ತನಾದನೇ? "ಇರಲಿ, ಆ ದಿನದ ಪ್ರತೀಕ್ಷೆ ಮಾಡುವೆ" ಉಪಗುಪ್ತನು ತೀವ್ರಗತಿಯಿಂದ ಸಂಘದ ಕಡೆಗೆ ಹೊರಟ. ವಾಸವದತ್ತೆಯು ಸುವರ್ಣಮೂರ್ತಿಯು ಹಾಗೆ ನೀರವ—ನಿಶ್ಚಲಳಾಗಿ ಅವನನ್ನೇ ನೋಡುತ್ತ ನಿಂತಳು.

೨

ತನ್ನ ಚಿಕ್ಕದೇ ಆದ ಜೀವನದ ಒಂದು ಹೊಳಪನ್ನು ತೋರಿಸಿ, ಸಾಯಂಕಾಲವು ತೀವ್ರಗತಿಯಿಂದ ಹೊರಟಿತ್ತು. ಶರತ್ಕಾಲದ ಶುಭ್ರಾಕಾಶದಲ್ಲಿ ಉದಯೋನ್ಮುಖನಾದ ಚಂದ್ರಮನ ಕಿರಣಗಳು, ರೂಪ್ಯೋಜ್ವಲವಾದ ಬೆಳುದಿಂಗಳನ್ನು ಹರಡುತ್ತಿದ್ದುವು. ದಟ್ಟವಾದ ವನದ ಪಾದಗಳನ್ನು ತೊಳೆಯುತ್ತ ಗಂಗಾನದಿಯು ಕಲರವ ಮಾಡುತ್ತ ಹರಿಯುತ್ತಿತ್ತು. ದಿನದ ಭಿಕ್ಷಾಭಾರದಿಂದ ಮುಕ್ತನಾಗಿ ಉಪಗುಪ್ತನು ಆ ವನದಲ್ಲಿ ಹಾಯ್ದು ತನ್ನ ಮಠಕ್ಕೆ ಹೊರಟಿದ್ದನು.

ಆ ಭಯಂಕರ ಹಿಂಸ್ರಪಶುವಾದ ಸಿಂಹದ ಮನಸ್ಸಿನ ಮೇಲೆ ಕರುಣೆಯ ಅವತಾರನಾದ ಭಗವಾನ್ ಬುದ್ಧನ ಉಪದೇಶದ ಪರಿಣಾಮವು ಸ್ವಲ್ಪ ಕೂಡ ಆಗಿರಲಿಲ್ಲ. ಅದರ ರಾಕ್ಷಸೀ ಪ್ರವೃತ್ತಿಯಲ್ಲಿ ಪರಿವರ್ತನವಾಗಲಿಲ್ಲ. ಉಪಗುಪ್ತನ ಬರವನ್ನು ನೋಡಿ, ಸಿಂಹವು ಒಳ್ಳೇ ವೇಗದಿಂದ ಅವನ ಮೇಲೆ ಏರಿಹೋಗಲು ಸಿದ್ಧವಾಯಿತು. ಭಿಕ್ಷು ಇದನ್ನು ನೋಡಿ ತಲೆತಗ್ಗಿಸಿದನು.

ಒಂದು ಕಡೆಗೆ ಸಿಂಹವು ಉಪಗುಪ್ತನನ್ನು ತಿನ್ನಲು ಸಿದ್ಧವಾಗಿ ನಿಂತಿದೆ. ಬೇರೊಂದು ಕಡೆಗೆ ಉಪಗುಪ್ತನು ಸಿಂಹಕ್ಕೆ ಆಹಾರವಾಗಿ ನಿಂತಿದ್ದಾನೆ. ಹತ್ತಿರದಲ್ಲಿಯೇ ದಟ್ಟವಾದ ಹೊದರಿನಲ್ಲಿ ಒಂದು ಛಿದ್ರವಿತ್ತು. ವಸಂತಮಾಸದ ಪೂರ್ಣಶಕ್ತಿಯೂ ಅದನ್ನು ಎಲೆಯಿಂದ ಪೂರ್ಣವಾಗಿ ತುಂಬಲು ಅಸಮರ್ಥವಾಗಿತ್ತು. ಆ ಛಿದ್ರದೊಳಗಿಂದ ಒಬ್ಬ ಬೇಡನು ಆ ಭಯಂಕರ ದೃಶ್ಯವನ್ನು ನೋಡಿದನು. ಸಿಂಹವು ಭಿಕ್ಷುವಿನ ಮೇಲೆ ಏರಿಹೋಗುತ್ತಲೆ, ಆ ಬೇಡನು ಬಿಲ್ಲಿಗೆ ಬಾಣ ಹೂಡಿ ಹೊಡೆದು, ಅದು ನೆಲದ ಮೇಲೆ ಬೀಳುವಂತೆ ಮಾಡಿದನು.

ಉಪಗುಪ್ತನು ಆಶ್ಚರ್ಯಚಕಿತನಾಗಿ, ನಾಲ್ಕೂ ಕಡೆಗೆ ನೋಡಿದನು. ತನ್ನ ಕಾರ್ಯದ ಸಫಲತೆಯಿಂದ ಮುಗುಳ್ನಗೆನಗುತ್ತ, ಬೇಡನು ಅವನ ಕಡೆಗೇ ಬರುತ್ತಿದ್ದನು. ಉಪಗುಪ್ತನು ದುಃಖಪೂರಿತನಾಗಿ ಬೇಡನಿಗೆ ಎಂದನು: "ಅಯ್ಯೋ! ನೀನು ಇದನ್ನೇನು ಮಾಡಿದೆ? ಸಿಂಹವು ನಿನಗೇನು ಮಾಡಿತ್ತು? ಅಕಾರಣವಾಗಿ ನಿರಪರಾಧಿಯ ಹತ್ಯೆಯನ್ನೇಕೆ ಮಾಡಿದೆ?" ಬೇಡನು ಮನದಲ್ಲಿಯೇ ವಿಚಾರಮಾಡಿದ: — "ಸಿಂಹ.... ಹಾಗೂ ನಿರಪರಾಧಿ!"

ತನ್ನ ದಯಾಹೀನ ಕಠೋರಜೀವನದಲ್ಲಿ ಬೇಡನಿಗೆ ಮೊತ್ತಮೊದಲು ಇಲ್ಲಿಯೇ ಕರುಣಾದೇವಿಯ ದರ್ಶನವಾಯಿತು. ಚಿತ್ರದಲ್ಲಿಯ ಗೊಂಬೆಯಂತೆ ಸ್ವಲ್ಪ ವೇಳೆ ನಿಂತುಬಿಟ್ಟನು. ಉಪಗುಪ್ತನು ಕರುಣಾಪೂರಿತ ದೃಷ್ಟಿಯನ್ನು ಅವನ ಮೇಲೆ ಬೀರಿದನು. ಕಣ್ಣಿಂದ ನೋಡಿದನು. ಹೃದಯವು ಹೃದಯದ ಸಂದೇಶವನ್ನು ಅರಿಯುತ್ತ ಬೇಡನು ಕೈ ಮುಗಿದನು. ಹೆಗಲಮೇಲಿನ ತೂಣೀರವನ್ನು ತೆಗೆದು ಗಂಗಾನದಿಯಲ್ಲಿ ಒಗೆದನು—ಅವನ ನಿರ್ದಯತೆಯು ಗಂಗಾನದಿಯಲ್ಲಿ ಮುಳುಗಿಹೋಯಿತು. ತನ್ನ ಬಲಿಷ್ಠವಾದ ಕೈಗಳಿಂದ ಧನುಷ್ಯವನ್ನು ಮುರಿದು ಭೂಮಿಯ ಮೇಲೆ ಅಪ್ಪಳಿಸಿದನು. ಅವನ ಕಠೋರತೆಯು ಕೊನೆಯ ಉಸಿರಾಡಿಸತೊಡಗಿತು. ಅನಂತರ ಬೇಡನು ಭಿಕ್ಷುವಿನ ಪಾದಗಳಿಗೆ ನಮಸ್ಕರಿಸಿ ಹೇಳಿದ:—"ಸ್ವಾಮಿ, ಇದು ನನ್ನ ಕೊನೆಯ ಹತ್ಯೆ." ಉಪಗುಪ್ತನು ಪ್ರಸನ್ನವದನದಿಂದ ಆಶೀರ್ವದಿಸಿದನು. ಬೇಡನು ಹೊಸಜೀವನದಲ್ಲಿ ಕಾಲಿಟ್ಟು ಹೊರಟನು. ಕರುಣೆಯು ಅವನಿಗೆ ಮಾರ್ಗದರ್ಶನವಾಯಿತು.

ದಯಾರ್ದ್ರನಾದ ಉಪಗುಪ್ತನು ಭೂಮಿಯ ಮೇಲೆ ಬಿದ್ದ ಸಿಂಹವನ್ನು ನೋಡಿದನು. ಅದರ ಎದೆಯಲ್ಲಿ ಬಾಣವು ತೀಕ್ಷ್ಣವಾಗಿ ನೆಟ್ಟಿತ್ತು. ಒಳ್ಳೆಯ ಪ್ರಯಾಸದಿಂದ ಅದನ್ನು ಗಂಗಾನದಿಯ ದಂಡೆಗೆ ಒಯ್ದು, ಅದರ ಗಾಯವನ್ನು ತೊಳೆಯತೊಡಗಿದನು.

ಗಂಗಾನದಿಯ ಚಂಚಲಹೃದಯದ ಹತ್ತೂದೆಸೆಗಳಲ್ಲಿ ಗಾನಸುಧೆಯನ್ನು ಸುರಿಸುತ್ತ ಒಂದು ಚಿಕ್ಕ ನಾವೆ ಹೊರಟಿತ್ತು. ಶರದೃತುವಿನ ನಿರ್ಮಲವಾದ ಬೆಳುದಿಂಗಳು ಚೆನ್ನಾಗಿ ಎಲ್ಲೆಡೆಗೆ ಹರಡಿತ್ತು. ವನಪ್ರದೇಶದಲ್ಲಿ ಹಾಗೂ ಗಂಗಾನದಿಯ ಪ್ರವಾಹದಲ್ಲಿ, ಅಪೂರ್ವವಾದ ಶೋಭೆಯು ಕಂಗೊಳಿಸುತ್ತಿತ್ತು. ಉಪಗುಪ್ತನು ತನ್ನ ಕಾರ್ಯಕ್ಕೆ ಪ್ರವೃತ್ತನಾದನು. ಸಿಂಹದ ಜೀವದ ಆಶೆಯು ಉಳಿದಿರಲಿಲ್ಲ. ಆದರೆ ಭಿಕ್ಷುವು ಏಕಚಿತ್ತನಾಗಿ ತನ್ನ ಕಾರ್ಯದಲ್ಲಿ ಮಗ್ನನಾಗಿದ್ದನು.

ನಾವೆ ಅದೇ ದಿಕ್ಕಿನಲ್ಲಿ ಬರತೊಡಗಿತು. ಸಂಗೀತದ ಧ್ವನಿಯು ಸ್ಪಷ್ಟವಾಗಿ ಕೇಳಬರತೊಡಗಿತು. ನೋಡುತ್ತಾನೆ:— ನಾವೆಯಲ್ಲಿ ಬೇರಾರೂ ಇರದೆ, ವಾಸವದತ್ತೆಯು ತನ್ನ ಕಣ್ಣುಗಳನ್ನು ಶರಚ್ಚಂದ್ರನೊಡನೆ ಹೋರಾಡಿಸುತ್ತ ಹಾಡುತ್ತಿದ್ದಳು.

ಭಿಕ್ಷುವು ಸಿಂಹದ ಎದೆಯಿಂದ ಬಾಣವನ್ನು ಹೊರದೆಗೆಯಲು ಕೈಮುಂದೆ ಮಾಡಿದನು. ಅಷ್ಟರಲ್ಲಿಯೆ ಸಂಗೀತವು ನಿಂತುಹೋಯಿತು. ನಾವೆ ಭಿಕ್ಷುವಿನ ಸಮೀಪಕ್ಕೆ ಬಂದಿತು. ವಾಸವದತ್ತೆಯು ಚಕಿತಳಾಗಿ ನಾವೆಯೊಳಗಿಂದಲೇ ಒದರಿದಳು:— "ಭಿಕ್ಷು ಇದನ್ನೇನು ಮಾಡುತ್ತಿರುವೆ? ಈ ಹಿಂಸ್ರಪಶುವು, ಜೀವವನು ಉಳುಹಿದರೂ ತನ್ನ ಜೀವದಾತನನ್ನು ಗುರುತಿಸಲಾರದೆಂಬುದು ಗೊತ್ತಿಲ್ಲವೆ? ಇದು ನಿನ್ನನ್ನು ಸಂಪೂರ್ಣವಾಗಿ ನಾಶಮಾಡುವುದು."

"ಸುಂದರಿ, ನೀನು ತಪ್ಪುತ್ತಿರುವೆ! ಬಾಹ್ಯಸೌಂದರ್ಯವಿದ್ದ ಭಯಂಕರವಾದ ಪ್ರಾಣಿಗಳಿಗಿಂತ ಇದು ಭಯಂಕರವಾಗಿಲ್ಲ. ಮನುಷ್ಯರನ್ನೇ ಕೊಲ್ಲಲು, ಕಿವಿಯವರೆಗೆ ಬಿಲ್ಲನ್ನು ಎಳೆದುನಿಂತಿರುವ ಹಿಂಸ್ರಮನುಷ್ಯನ ಸುಂದರರೂಪಕ್ಕಿಂತ ಭಯಂಕರವಾಗಿಲ್ಲ. ತನ್ನ ಬಂಧನದಲ್ಲಿ ಮನುಷ್ಯನನ್ನು ಹಿಡಿದಿಟ್ಟಿರುವ ಸುಂದರವಾದ ಮೋಹಕ್ಕಿಂತ ಭಯಾನಕವಿಲ್ಲ. ಮನುಷ್ಯನು ತನ್ನ ಧ್ಯೇಯ-ಧರ್ಮಗಳನ್ನು ಮರೆತು, ಅನಂತಜನ್ಮ ಹಾಗೂ ಜಗತ್ತಿನಲ್ಲಿ ತಿರುಗುತ್ತಿರುವ

ಸ್ವಾರವಾದ ಲೋಭಲಾಲಸೆಗಳಿಗಿಂತ ಭೀಷಣವಾಗಿಲ್ಲ." ವಾಸವದ-ತ್ತೆಗೆ ಯಾವುದೂ ತಿಳಿಯಲಿಲ್ಲ. ಪ್ರೇಮದಿಂದ ಅಧೀರಳಾಗಿ ನುಡಿದಳು: ಭಿಕ್ಷು, ನಾನು ನಿನ್ನ ಪ್ರತೀಕ್ಷೆಯಲ್ಲಿಯೇ ಇದ್ದೆ. ನೀನು ಬರಲಿಲ್ಲ. ಮರೆತಿದ್ದೆಯಾ ?'' ''ಮರೆತಿಲ್ಲ, ಬರುವೆ; ಕೆಲವು ದಿನಗಳ ನಂತರ ಬರುವೆ.'' ''ಇಂದೆಯೆ ಬಂದುಬಿಡು ಭಿಕ್ಷು. ಇದಕ್ಕೂ ಸುಂದರವಾದ ಸಮಯವು ಪುನಃ ಎಂದು ಸಿಗುವುದು ? ಇಂದು ಚಂದ್ರಮನು ಜಗತ್ತನ್ನೇ ಬೆಳಗುತ್ತಲಿದ್ದಾನೆ. ನೀನು ನನ್ನ ಮನೆಯ ಅಂಧ-ಕಾರವನ್ನು ದೂರಮಾಡು ! '' "ಸ್ವಲ್ಪ ತಡೆ" ಎಂದು ನುಡಿದು, ಸಂಪದ ಎದೆಯಲ್ಲಿಯ ಬಾಣವನ್ನವನು ಸಾವಕಾಶವಾಗಿ ತೆಗೆಯ-ತೊಡಗಿದನು. ವಾಸವದತ್ತೆಯು ಪುನಃ ನುಡಿದಳು: ''ನೀನು ನಿನ್ನ ಸೌಂದರ್ಯಬಾಣದಿಂದ ನನ್ನನ್ನು ಗಾಯಗೊಳಿಸಿರುವೆ, ಮೊದಲು ನನಗೆ ಪ್ರಾಣದಾನ ನೀಡು ! " ''ಧೈರ್ಯತಾಳು ಸುಂದರಿ, ನಾನು ಅವಶ್ಯವಾಗಿ ಬರುವೆ." ''ಎಂದು ಬರುವೆ ? — ನಿನ್ನ ಪ್ರತೀಕ್ಷೆಯಲ್ಲಿ ನನ್ನ ಕಣ್ಣ ಜ್ಯೋತಿಯು ಮಾಯವಾದ ಮೇಲೆಯೆ ? ದಿವಸಗಳನ್ನು ಎಣಿಸುತ್ತ ಎಣಿಸುತ್ತ, ಸಮಯವು ನನ್ನ ಯೌವನವನ್ನು ಕಸಿದು-ಕೊಂಡಮೇಲೆಯೆ ?'' ಉಪಗುಪ್ತನು ಅವಳ ಕಡೆಗೆ ನೋಡಿ ವಿಚಾರ ಮಾಡಿದ: ''ಇದೇನು ! ಇಷ್ಟು ಜ್ಞಾನವಿದ್ದರೂ ತಗ್ಗಿನಲ್ಲಿ ಬೀಳು-ತ್ತಿರುವಳು !'' ವಾಸವದತ್ತೆಯು ಕೇಳಿದಳು : ''ಎಂದು ಬರುವಿ ?'' ''ಇದೇ ಜೀವನದಲ್ಲಿ" ''ಇದೇ ಜೀವನದಲ್ಲಿ ! ಬಹಳ ದೂರ-ವಾಯಿತು.'' ''ಹಾಗಾದರೆ ?" ''ಇದೇ ಕ್ಷಣವೆನ್ನು'' ''ಇಲ್ಲ'' ''ಇದೇ ತಿಂಗಳು ?'' ''ಇದೇ ವರ್ಷ ಬರುವೆ. ಇದು ಸತ್ಯವೆಂದ್ತಿಳಿ'' ''ನಾನು ನನ್ನ ಬೆರಳಿನ ಮೇಲೆ ದಿನಗಳನ್ನೂ, ಶ್ವಾಸದಿಂದ ಕ್ಷಣಗಳನ್ನೂ ಎಣಿಸುವೆ'' ವಾಸವದತ್ತೆಯು ಹೊರಟುಹೋದಳು. ಉಪಗುಪ್ತನು ಮೃತಪ್ರಾಯವಾದ ಸಿಂಹದ ಹೃದಯದಲ್ಲಿಯ ಬಾಣವನ್ನು ಹೊರದೆಗೆಯಲು ಪ್ರವೃತ್ತನಾದನು.

೩

ಶರದೃತು ಬಂದಿತು, ಶಿಶಿರ ಬಂದಿತು, ಹೇಮಂತ ಬಂದಿತು. ಆದರೆ ಉಪಗುಪ್ತನು ಬರಲಿಲ್ಲ. ವಾಸವದತ್ತೆಯು ಎಷ್ಟೋ ಸಲ ಅಶ್ರುಪೂರ್ಣ ನೇತ್ರಗಳಿಂದ ಪ್ರತೀಕ್ಷೆ ಮಾಡಿದಳು. ಆದರೆ ಅವನು ಬರಲಿಲ್ಲ. ಎಷ್ಟೋ ಸಲ ಶೃಂಗರಿಸಿಕೊಂಡಳು. ಎಲ್ಲವೂ ವ್ಯರ್ಥ-ವಾಯಿತು.

ಹೂವಿನ ಸುವಾಸನೆಯನ್ನೂ ಹಾಗೂ ಸಂಜೀವಿನಿಯನ್ನೂ ತೆಗೆದುಕೊಂಡು, ವಸಂತ ಋತು ಬಂದಿತು. ಬರುಬರುತ್ತ ಅವಧಿಯೂ ತೀರುತ್ತ ಬಂದಿತು. ಆದರೂ ಉಪಗುಪ್ತನು ಬರಲಿಲ್ಲ. ವಾಸವ-ದತ್ತೆಯು ಅತೃಪ್ತ-ಅಶಾಂತ ಕಣ್ಣುಗಳಿಂದ, ಎಂದೂ ಬಾರದವನನ್ನು ನೋಡುತ್ತ ನಿಂತಳು. ಎಲ್ಲರೂ ಬಂದರು, ಎಲ್ಲವೂ ಬಂದುವು. ಆದರೆ ಬಾರದವನೆಂದರೆ ಉಪಗುಪ್ತನೊಬ್ಬನೇ !

ಅವಧಿ ಮುಗಿಯಲು ಎರಡೇ ತಿಂಗಳುಗಳುಳಿದುವು. ಸಂಸಾರದ ಪಥನಿವಾಸದಲ್ಲಿ ನಿಂತಿದ್ದ ಪಥಿಕ ''ವರ್ಷ'' ಹೋಗುವ ಸಿದ್ಧತೆ ನಡೆಸಿತು. ಅದು ಶಿಶಿರಋತುವಿನ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡಿತ್ತು. ಹೇಮಂತದ ಹಾಸಿಗೆಯನ್ನು ಕಟ್ಟಿತ್ತು. ವಸಂತದ ಪುಷ್ಪ-ವಸ್ತ್ರವನ್ನು ಧರಿಸಿತ್ತು, ಗ್ರೀಷ್ಮದ ಛತ್ರಿಯನ್ನು ಕೈಯಲ್ಲಿಯೂ, ಚಪ್ಪಲಿಗಳನ್ನು ಕಾಲುಗಳಲ್ಲಿಯೂ ಹಾಕಿಕೊಂಡಿತ್ತು. ಮಳೆಗಾಲವನ್ನು ದಾಟಿ, ತನ್ನ ಅಂತಿಮ ವಸ್ತು ಶರದೃತುವಿನ ಬೆಳುದಿಂಗಳನ್ನು ಹಿಡಿಯಲು ಕೈಚಾಚಿತು. ಆಗ ವಾಸವದತ್ತೆಯು ವಿಕಲಳಾಗಿ ನುಡಿದಳು: "ನನ್ನ ಪ್ರಿಯತಮನು ನಿಜವಾಗಿಯೂ ಈ ವರ್ಷ ಬರುವು-ದಿಲ್ಲವೇ ?''

ರಾತ್ರಿಯ ವೇಳೆಯಾಗಿತ್ತು. ಸಮಸ್ತಪೃಥ್ವಿಯು. ಅಂಧಕಾರ ದಲ್ಲಿ ಮುಳುಗಿತ್ತು. ವಾಸವದತ್ತೆಯ ಭವನವು ಸಹಸ್ರಾರು ದೀಪ-ಮಾಲೆಗಳಿಂದ ಬೆಳಗುತ್ತಿತ್ತು. ಜ್ಯೋತಿಯ ಕಿರಣಗಳು ಅವಳ ಸ್ವರ್ಣಭೂಷಣಗಳ ಮೇಲೆ ಪ್ರತಿಬಿಂಬಿತವಾಗಿ, ಅವಳ ವಿಲಾಸ ಭವನಕ್ಕೆ ಅಪೂರ್ವಶೋಭೆಯನ್ನು ತಂದುಕೊಡುತ್ತಿದ್ದುವು. ಅಸಂಖ್ಯ ದೀಪತಾರೆಗಳ ಮಧ್ಯದಲ್ಲಿ, ವಾಸವದತ್ತೆಯ ಮುಖವು ಚಂದ್ರಮನಂತೆ ಸುಶೋಭಿತವಾಗಿತ್ತು.

ಅಂದು ವಾಸವದತ್ತೆಯ ಮನೆಯಲ್ಲಿ ಉತ್ಸವವಿತ್ತು. ಆ ಉತ್ಸವವನ್ನು ಅವಳ ಒಬ್ಬ ಪ್ರೇಮಿ-ಲಕ್ಷಾಪತಿಯ ಸ್ವಾಗತಾರ್ಥ-ವಾಗಿ ಏರ್ಪಡಿಸಲಾಗಿತ್ತು. ಒಂದು ಕಡೆಯಿಂದ ಸಂಗೀತಧಾರೆಯೂ ಬೇರೊಂದು ಕಡೆಯಿಂದ ಸುರಾಧಾರೆಯೂ ಹರಿಯುತ್ತಿದ್ದುವು. ಇವುಗಳ

ಕುಟಜಾರಿಷ್ಟ
ಆಮಾಂಶ-ಸಂಗ್ರಹಣಿಗಳಿಗೆ

ಕಾಸಶ್ವಾಸಾರಿ
ದಮ್ಮು-ಕೆಮ್ಮುಗಳಿಗೆ

ಎಲ್ಲ ಜಗೆಯ ಆಯುರ್ವೇದ ಔಷಧಿಗಳಿಗಾಗಿ
ಬರೆಯಿರಿ :

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ

ಮಧ್ಯದಲ್ಲಿ, ದುರ್ಭಾಗ್ಯಲಕ್ಷ್ಮಾಪತಿಯು ಮುಳುಗುತ್ತಲಿದ್ದನು. ಅರ್ಧ-ರಾತ್ರಿಯ ಒಳಗಾಗಿಯೇ ಲಕ್ಷ್ಮಾಪತಿಯು ಸುರೆಯ ಪ್ರಭಾವ-ದಿಂದ ಸಂಪೂರ್ಣವಾಗಿ ನಿಶ್ಚೇತನನಾದನು. ಅವನಿಗೆ ತಾನು-ಪರರು ಎಂಬ ಜ್ಞಾನವೇ ಉಳಿಯದಾಯಿತು. ಸಂಗೀತವು ನಿಂತಿತು. ದಾಸಿಯರೆಲ್ಲರೂ ಹೊರಟುಹೋದರು. ಕ್ಷಣಾರ್ಧದಲ್ಲಿ ಅಲ್ಲಿ ಲಕ್ಷ್ಮಾಪತಿ ಹಾಗೂ ವಾಸವದತ್ತೆಯ ಹೊರತು ಬೇರಾರೂ ಉಳಿಯ-ಲಿಲ್ಲ. ಇಲ್ಲ, ಇಲ್ಲ; ಮತ್ತೊರ್ವ ಪಿಶಾಚಿನಿಯು ಕುಳಿತಿದ್ದಳು. ಅವಳು ಯಾರು? ವೇಶ್ಯಾ ವಾಸವದತ್ತೆಯ ನೆರಳು.

ವಾಸವದತ್ತೆಯು ನಾಲ್ದೆಸೆಕಡೆಗೆ ನೋಡಿ, ತನ್ನ ಟೊಂಕ-ದಲ್ಲಿಂದ ಒಂದು ಕತ್ತಿಯನ್ನು ಹೊರಗೆ ತೆಗೆದಳು. ರಾತ್ರಿಯ ಸಮಯದಲ್ಲಿ ಒಬ್ಬ ವೇಶ್ಯೆಯ ಕೈಯೊಳಗೆ ಕತ್ತಿ! ಅವಳೇನು ಮಾಡಬಯಸುತ್ತಾಳೆ? ಸಂಗೀತದ ವೃಷ್ಟಿಯನ್ನು ಸುರಿಸುವಂತಹ ಮುಖಚಂದ್ರವು, ವಜ್ರವನ್ನೂ ಉರುಳಿಸಬಲ್ಲುದೇ?

ನಿಶ್ಚೇತನನಾಗಿ ಬಿದ್ದ ಲಕ್ಷ್ಮಾಪತಿಯ ಕೊಲೆಮಾಡಲು ಮುನ್ನಡೆದಳು. ಕತ್ತಿಯನ್ನು ಹಿಡಿದು ಮೇಲಕ್ಕೆತ್ತಿದ್ದ ಅವಳ ಕೈ "ಎಚ್ಚರಿಕೆ, ಮೇಲೆ ಈಶ್ವರನಿದ್ದಾನೆ. ಅವನ ಭಯವಿಲ್ಲವೇ?" ಎಂದು ನುಡಿ-ದಂತಾಯಿತು. ಆ ಮೂಕ ಕೈಯ ಸಂಕೇತವು, ಆ ಪಾಪಿಷ್ಠಳಿಗೆ ತಿಳಿಯಲಿಲ್ಲ. ಅವಳು ಕತ್ತಿಯನ್ನು ಲಕ್ಷ್ಮಾಪತಿಯ ಎದೆಯಲ್ಲಿ ಚುಚ್ಚಿದಳು. ಅವನು ಚೀರಿದನು. ಅವನ ಬಾಯಿಂದ ಬಂದ ಅಂತಿಮ ಶಬ್ದಗಳು:-- "ಹಾಯ್! ಮೋಸಗಾತಿ ಪಿಶಾಚಿನಿಯೇ!" ರೂಪವತಿಯಾದ ರಾಕ್ಷಸಿಯು—ಸುಕುಮಾರ ಪಿಶಾಚಿನಿಯು—ತನ್ನ ವಿಜಯಕ್ಕಾಗಿ ಪ್ರಸನ್ನಳಾದಳು. ಇದೇ ವೇಳೆಗೆ ಹೊರಗಿನಿಂದ ಯಾರೋ ಕರುಣಸ್ವರದಿಂದ ಕೂಗಿದರು:— "ವಾಸವದತ್ತಾ!" ವಾಸವದತ್ತೆಯು ಕಂಪಿತಳಾಗಿ ನುಡಿದಳು: "ಯಾರು?" ಉತ್ತರದ ಅವಶ್ಯಕತೆ ಉಳಿಯಲಿಲ್ಲ. ಬಾಗಿಲಿಂದ ಬೆಳಕು, ಆ ವ್ಯಕ್ತಿಯ ಮುಖಮಂಡಲದ ಮೇಲೆ ಬಿದ್ದಿತು. ಅವನು ಶ್ರಮಣ ಉಪಗುಪ್ತನಾಗಿದ್ದನು. ವಾಸವದತ್ತೆಯು ಹರ್ಷಿತಳಾಗಿ, "ಭಿಕ್ಷು, ನೀನು ಬಂದೆಯಾ?" "ಇಲ್ಲ, ಆದರೆ ಶೀಘ್ರದಲ್ಲಿಯೇ ಬರುವೆ." "ಹಾಗಾದರೆ ಈ ಕುಸಮಯದಲ್ಲಿ ಏಕೆ ಬಂದೆ?" "ನಾನು ನನ್ನ ವಿಹಾರಕ್ಕೆ ಹೊರಟಿದ್ದೆ. ಇಲ್ಲಿ ನಿನ್ನ ನೆನಪು ಬಂದಿತು. ನೀನು ಮಲಗಿರುವೆಯೋ ಎಚ್ಚರಿರುವೆಯೋ ಎಂದು ಕುತೂಹಲವಾಯಿತು. ಅದಕ್ಕಾಗಿ ನೋಡಲು ಬಂದೆ." "ನಾನು ಎಚ್ಚರಿರುವೆ." "ಆದರೆ ನಿನ್ನ ಎರಡೂ ಕಣ್ಣುಗಳು ಮುಚ್ಚಿವೆ! ಆಗಲಿ, ಹೋಗುತ್ತೇನೆ. ಇಂದು ನನಗೆ ಬಹಳ ತಡವಾಗಿದೆ." "ಸ್ವಲ್ಪ ತಡೆ, ನಿನಗೆ ನಿನ್ನ ಪ್ರತಿಜ್ಞೆಯ ನೆನಪು ಇದೆಯೇ?" "ಇದೆ." "ಈ ವರ್ಷದೊಳಗಾಗಿಯೇ ಬಂದು, ನನ್ನನ್ನು ಕೂಡುವುದಾಗಿ ವಚನ ಕೊಟ್ಟಿರುವೆಯಲ್ಲವೇ?" "ವರ್ಷ ಮುಗಿಯಲು ಇನ್ನೂ ಎಷ್ಟು ದಿನಗಳುಳಿದಿವೆ?" "ಹದಿನೈದು ದಿನಗಳು ಮಾತ್ರ!" "ನಾನು ಅವಶ್ಯವಾಗಿ ಅಷ್ಟರೊಳಗಾಗಿಯೇ ಬರುವೆ." "ನೀನು ಸುಳ್ಳು ಹೇಳುತ್ತಿರುವಿ, ನನ್ನನ್ನು ಮೋಸಗೊಳಿಸುತ್ತಿರುವಿ!" "ಬುದ್ಧನ ಶಿಷ್ಯನು ಸುಳ್ಳಾಡನು. ಮೋಸ-ಕವಚ ಅವನ ಧರ್ಮವಲ್ಲ!"

ಉಪಗುಪ್ತನು ರಾತ್ರಿಯ ಅಂಧಕಾರದಲ್ಲಿ ಅದೃಶ್ಯನಾದನು. ವಾಸವದತ್ತೆಯು ಮಹಾದ್ವಾರವನ್ನು ಬಂದುಮಾಡಿ, ಒಳಗೆ ಬಡಿದುಕೊಂಡಳು.

♥

ವಾಸವದತ್ತೆಯು ಹಣಕ್ಕಾಗಿ ಲಕ್ಷ್ಮಾಪತಿಯ ಕೊಲೆಮಾಡಿದ್ದಳು. ರಹಸ್ಯವು ಹೊರಬಿದ್ದಿತು. ಅವಳನ್ನು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು. ಅವಳ ಧನವು ಅವಳ ಸಹಾಯಕ್ಕೆ ಬರಲಿಲ್ಲ. ಪ್ರೇಮಿಗಳು ಸಹಾಯಕ್ಕೆ ಬರಲಿಲ್ಲ. ಅವಳ ಅನುಪಮ ಸೌಂದರ್ಯವೂ ಅವಳನ್ನು ದಂಡದಿಂದ ಮುಕ್ತಮಾಡಲು ಅಸಮರ್ಥವಾಯಿತು. ದುರ್ದೈವಿಗೆ ನ್ಯಾಯಾಲಯದಲ್ಲಿ ಮರಣ ದಂಡನೆಯು ದೊರೆಯಲಿಲ್ಲ. ಪ್ರಾಣದಂಡವು ಅವಳ ಅಶಾಂತಜೀವನಕ್ಕೆ ಶಾಂತಿಯನ್ನೀಯಬಹುದಾಗಿತ್ತು. ಅದು ದಂಡವಾಗದೆ ಆಶೀರ್ವಾದವಾಗುತ್ತಿತ್ತು.

ಅವಳ ರೂಪವನ್ನು ಕುರೂಪಗೊಳಿಸಲಾಯಿತು. ಚಂದ್ರವದನದಂತಿರುವ ಅವಳ ಕಣ್ಣುಗಳನ್ನು ಕಿತ್ತಿದರು. ಮೂಗು-ಕಿವಿಗಳನ್ನು ಕತ್ತರಿಸಿದರು. ಅವಳ ಕೋಮಲ ಕೈಗಳನ್ನು ಬೇರ್ಪಡಿಸಿದರು. ಧನಸಂಪತ್ತಿಯನ್ನೆಲ್ಲ ಕಸಿದುಕೊಂಡರು. ಈ ಭೀಷಣ ದಂಡನೆ ಕೊಡುವಾಗ ವಾಸವದತ್ತೆಯು ತುಂಬ ಆರ್ತಸ್ವರದಿಂದ ಎಲ್ಲರನ್ನೂ ಪ್ರಾರ್ಥಿಸಿಕೊಂಡಳು: "ಒಂದು ವಾರದ ಅವಧಿಯನ್ನು ಕೊಡಿರಿ. ನನಗೊಬ್ಬ ಪ್ರಿಯತಮನನ್ನು ಕೂಡಬೇಕಾಗಿದೆ. ಅವನು ಈ ವಾರದೊಳಗಾಗಿ ಬರುವನು. ಅನಂತರ, ಅತ್ಯಂತ ಪ್ರಸನ್ನತೆಯಿಂದ, ಘಾತಕನ ಕೈಗೆ ಹಾಗೂ ನ್ಯಾಯದ ಕತ್ತಿಗೆ ನಾನು ನನ್ನ ದೇಹವನ್ನು ಒಪ್ಪಿಸುವೆನು." ಯಾರೂ ಅವಳ ಬಿನ್ನಹವನ್ನು ಮಾನ್ಯಮಾಡಲಿಲ್ಲ. ಘಾತಕನು ಅವಳನ್ನು, ಕುರೂಪಿಯನ್ನಾಗಿಯೂ, ಕುತ್ಸಿತಳನ್ನಾಗಿಯೂ ಮಾಡಿ, ರಾಜಮಾರ್ಗದಲ್ಲಿ ಬಿಟ್ಟುಬಿಟ್ಟನು. ಅವಳ ಜೊತೆಗೆ ಒಬ್ಬ ಮನುಷ್ಯನನ್ನು ಕಳುಹಿದರು. ಅವನು, ಉಚ್ಚಸ್ವರದಲ್ಲಿ ಎಲ್ಲರಿಗೂ ಕೇಳಿಸುವಂತೆ, ಅವಳ ಪಾಪದ ಕೃತಿಗಳನ್ನು ಕೂಗಿ ಹೇಳುತ್ತಿದ್ದನು.

ಎಂತಹ ಭಯಂಕರ ಹಾಗೂ ಬೀಭತ್ಸವಾದ ದೃಶ್ಯ! ಅವಳ ದೇಹದಿಂದ ರಕ್ತ-ಕೀವು ಹೊರಬರುತ್ತಿತ್ತು. ಅದರ ಮೇಲೆ ನೊಣಗಳು ಕೂಡುತ್ತಿದ್ದುವು. ಕೈಗಳನ್ನು ಕತ್ತರಿಸಿದುದರಿಂದ, ದುರ್ಭಾಗ್ಯಳಿಗೆ ಅವುಗಳನ್ನು ಹಾರಿಸಲೂ ಬರುತ್ತಿರಲಿಲ್ಲ. ಕೇವಲ, ಕರುಣಸ್ವರದಿಂದ ರೋದಿಸುತ್ತಿದ್ದಳು.

ಮೊದಲು ಅವಳ ಸೌಂದರ್ಯೋಪಾಸಕರಾದವರು ಈಗ ಅವಳನ್ನು ತಿರಸ್ಕರಿಸತೊಡಗಿದರು. ಅವಳನ್ನು ನೋಡಿ ದೂರದಿಂದಲೇ ಪಾರಾಗಿ ಹೋಗುತ್ತಿದ್ದರು. ಎಲ್ಲರೂ ಅವಳ ಮೇಲೆ ಉಗುಳುತ್ತಿದ್ದರು. ದಾರಿಯ ಭಿಕ್ಷುಕರು, ಕುಂಟರು, ಕುರುಡರು, ಕುಷ್ಠರೋಗಿಗಳು ಸಹ ಅವಳಿಂದ ದೂರ ಉಳಿಯಲು ಪ್ರಯತ್ನಿಸಿದರು.

ವಿಶ್ವವನ್ನು ಆಕರ್ಷಿಸುವಂತಹ ರೂಪವಿಲ್ಲದಾಯಿತು, ಯೌವನವಿಲ್ಲದಂತಾಯಿತು, ಧನವಿಲ್ಲದಾಯಿತು; ಸಮಸ್ತ ಸಂಸಾರವೆಲ್ಲ ಅವಳನ್ನು ತಿರಸ್ಕರಿಸತೊಡಗಿತು. ಇಂತಹ ದುರ್ದಿನದಲ್ಲಿ ಉಪಗುಪ್ತನು ಬಂದು, ಅವಳ ತಲೆಯ ಮೇಲೆ ಕೈಯಿಟ್ಟನು. ವಾಸವದತ್ತೆಯು ಚಕಿತಳಾಗಿ, "ಯಾರು?" ಎಂದಳು. "ನಾನು" ಎಂದು ಉತ್ತರವಿತ್ತ. ವಾಸವದತ್ತೆಯು ಧ್ವನಿಯನ್ನು ಸ್ವಲ್ಪ ಗುರುತಿಸಿದಳು; ಆದರೆ ತನ್ನ ಭ್ರಮನಿವಾರಣೆಗಾಗಿ, "ಯಾರು ಉಪಗುಪ್ತನೇ?" ಎಂದು ಕೇಳಿದಳು. "ಹೌದು ಉಪಗುಪ್ತನೇ!" ವಾಸವದತ್ತೆಯು ದೀರ್ಘವಾದ ಉಸಿರುಬಿಟ್ಟು ನುಡಿದಳು: "ತಿರುಗಿ ಹೋಗು; ನೀನೇಕೆ ಬಂದೆ? ನನ್ನನ್ನು ಉಪಹಾಸಮಾಡಲು ಬಂದೆಯಾ?" "ತಿರುಗಿ ಹೋಗಲು ಹೇಳುವೆಯಾ? ನಿನ್ನ ಹೇಳಿಕೆಯಂತೆಯೇ ನಿನ್ನೆಡೆಗೆ ಬಂದಿರುವೆನು; ನಾನು ಬರುವುದಕ್ಕೆ ವಿಳಂಬವಾಗಿಲ್ಲ. ವರ್ಷ ಮುಗಿಯಲು ಇನ್ನೂ ಎಂಟು ದಿನಗಳುಳಿದಿವೆ."

ವಾಸವದತ್ತೆಯು ನಿರಾಶೆಯ ಸ್ವರದಲ್ಲಿ ನುಡಿದಳು: "ಹಾಯ್! ನನ್ನ ದೇಹವು ವಸಂತದ ಸುರಭಿಯಿಂದ ಸುವಾಸಿತವಾದಾಗ ನೀನು ಬರಲಿಲ್ಲ! ನನ್ನ ಶೋಭೆಯ ಚಂದ್ರಮನು, ಪೃಥ್ವಿಯ ಮೇಲೆ ಸುಧಾವೃಷ್ಟಿಯನ್ನು ಸುರಿಸುವಾಗ ನೀನು ಬರಲಿಲ್ಲ. ಘಾತಕರು ನನ್ನ ಯೌವನವನ್ನು ನಾಶಮಾಡಲು ಕತ್ತಿಯನ್ನು ಹದಮಾಡುತ್ತಿರುವಾಗ ನೀನು ಬರಲಿಲ್ಲ. ಭಿಕ್ಷು, ನೀನು ಇಷ್ಟು ಅಜ್ಞಾನಿಯಾಗಿರುವೆಯಾ? ನನ್ನ ಸೌಂದರ್ಯದೀಪವು ಆರಿಹೋಗಿದೆ, ನನ್ನ ಶೋಭಾಸೂರ್ಯನು ಅಸ್ತನಾದನು. ಇಂತಹ ಸಮಯದಲ್ಲಿ ನೀನು ಏಕೆ ಬಂದೆ?" "ಸಹೋದರಿ, ನಾನು ಇಂದ್ರಿಯಸುಖಕ್ಕಾಗಿಯಾಗಲಿ ಅಥವಾ ಮತ್ತಾವ ಸ್ವಾರ್ಥದಿಂದ ಪ್ರೇರಿತನಾಗಿಯಾಗಲಿ ನಿನ್ನೆಡೆಗೆ ಬಂದಿಲ್ಲ ಶಾರೀರಿಕ ಸೌಂದರ್ಯವು ವ್ಯರ್ಥವಾಗಿದೆ; ನಿನ್ನ ಶರೀರವೇ ಇದಕ್ಕೆ ಸಾಕ್ಷಿಯನ್ನೀಯುತ್ತದೆ. ಧನವೂ ನಿಸ್ಸಾರವಾಗಿದೆ. ನಿನ್ನ ಅತುಲವಾದ ಐಶ್ವರ್ಯವೇ ಇದಕ್ಕೆ ಉತ್ತರವೀಯಬಲ್ಲದು. ನಾನು ನಿನ್ನೆಡೆಗೆ ಬಂದಿದ್ದೇನೆ. ನಿನಗೆ ಏನು ಬೇಕಾಗಿದ್ದರೂ ಹೇಳು"

ವಾಸವದತ್ತೆಯ ಕಣ್ಣುಗಳು ತೆರೆದವು "ಭಿಕ್ಷು, ನಾನೇನು ಹೇಳಲಿ? ಈ ನಿನ್ನ ಪ್ರಶ್ನೆಯು ನನ್ನ ಉತ್ತರವನ್ನೇ ಕಸಿದುಕೊಂಡಿದೆ. ಒಂದು ಕನಸು, ಒಂದು ಛಾಯೆ! ಒಂದು ಬಿಸಿಲುಗುದುರೆಯ ಬೆನ್ನ ಹಿಂದೆ ನಾನು ಓಡುತ್ತಿದ್ದೆನೆಂದು ಭಾಸವಾಗುತ್ತಿದೆ. ನನಗೆ ಹೇಳಬೇಕಾದುದೇನೂ ಇಲ್ಲ. ನನ್ನ ಹತ್ತಿರವೇ ಸ್ವಲ್ಪ ನಿಲ್ಲು. ನಿನ್ನ ಸ್ಪರ್ಶದಿಂದ ನನ್ನ ಯಾತನೆಯು ಕಡಿಮೆಯಾಗುತ್ತಿದೆ. ನಿನ್ನ ಮಾತುಗಳಿಂದ ಸಂತಾಪವು ದೂರವಾಗುತ್ತಿದೆ. ಭಿಕ್ಷುಶ್ರೇಷ್ಠನೇ, ನೀನೇ ಏನಾದರೂ ಹೇಳು!"

"ಸಂಸಾರದ ದುಃಖಕ್ಕೆ ಆಶೆಯೇ ಕಾರಣ. ನೀನು ಇದೇ ಆಶೆಯ ದಾಸಿಯಾಗಿ ತಿರುಗಿದೆ. ನಿನ್ನ ಕೆಲಸಕ್ಕಾಗಿ ಧರ್ಮವನ್ನು ಮಾರಿಕೊಂಡೆ. ಹಣಕ್ಕಾಗಿ ಲಕ್ಷಾಧಿಪತಿಯ ಕೊಲೆಮಾಡಿದೆ. ಇಂದು ದುಃಖದ ಸಮಯದಲ್ಲಿ ನಿನ್ನ ಸಹಾಯಕ್ಕೆ ಯಾರೂ ಬರಲಿಲ್ಲ!" "ಹಾಯ್! ಭಿಕ್ಷು, ಇದಕ್ಕೂ ಮೊದಲು ಬಂದು, ಪೆಟ್ಟು ತಿನ್ನುವುದರಿಂದ ನನ್ನನ್ನು ಏಕೆ ಉಳಿಸಲಿಲ್ಲ? ನೀನು ಬಂದೆಯೇನೋ ನಿಜ, ಆದರೆ ಬಹಳ ತಡಮಾಡಿ ಬಂದೆ!"

"ತಡವಾಗಿಲ್ಲ, ಇನ್ನೂ ಸಾಕಷ್ಟು ಸಮಯವಿದೆ. ನೀನು ಈಗ ಬಾಹ್ಯನೇತ್ರಗಳಿಂದ ಹೀನಳಾಗಿದ್ದರೂ ನಿನ್ನ ಒಳಗಣ್ಣುಗಳು ತೆರೆದಿವೆ. ಏಳು, ಬೋಧಿಸತ್ತ್ವದ ಕೈಹಿಡಿ. ನಿನ್ನ ದುಃಖವು ದೂರವಾಗುವುದು, ಮುಕ್ತಳಾಗುವಿ."

ವಾಸವದತ್ತೆಯ ಬರಡುಸಂಸಾರದಲ್ಲಿ, ಆಕಾಶಮಾರ್ಗದಿಂದ ಸುಧಾವರ್ಷವಾಯಿತು. ಅವಳ ಸಾತ್ತ್ವಿಕ ಸ್ವಭಾವವು ಜಾಗೃತವಾಯಿತು. ಸಂಸಾರದ ಕ್ಷಣಭಂಗುರತೆಯ ಜ್ಞಾನವು ಅವಳಿಗುಂಟಾಯಿತು. ಅನುಭವವೂ ಬಂದಿತು. ಭಿಕ್ಷುವಿನ ಚರಣಗಳ ಮೇಲೆ ತನ್ನ ಮಸ್ತಕವನ್ನಿಟ್ಟು, "ನಾನು ಸಿದ್ಧಳಿದ್ದೇನೆ; ನನ್ನನ್ನು ಕರೆದೊಯ್ಯಿ! ನನ್ನ ಸೆರಗು ಹಿಡಿದು ಶಾಂತಿರಾಜ್ಯಕ್ಕೆ ಕರಕೊಂಡು ಹೋಗು."

ಭಿಕ್ಷು, ತನ್ನ ಪವಿತ್ರವಾದ ಕರಗಳಿಂದ ಅವಳನ್ನು ಸಂಘದ ಕಡೆಗೆ ಕರೆದುಕೊಂಡು ಹೋದನು.

ಪಾಪತಾಪದಿಂದ ದಗ್ಧಳಾದ ವಾಸವದತ್ತೆಯು, ಪಶ್ಚಾತ್ತಾಪದ ಅಮೃತಸಾಗರದಲ್ಲಿ ಸ್ನಾನಮಾಡಿದಳು. ಸಂನ್ಯಾಸವನ್ನು ಸ್ವೀಕರಿಸಲು ಅವನ ಸಂಗಡ ಹೊರಟಳು.


ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಹೆನ್ರಿ ಕ್ಯಾವೆಂಡಿಷ್

(ವ್ಯಕ್ತಿ ಪರಿಚಯ)

ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್‌ಸಿ.
ಹೈದರಾಬಾದ್

ವಿಜ್ಞಾನಪ್ರಪಂಚದಲ್ಲಿ ಅಪಾರವಾದ ಸೇವೆ ಸಲ್ಲಿಸಿದ ಮಹಾವ್ಯಕ್ತಿಗಳಲ್ಲಿ ಹೆನ್ರಿ ಕ್ಯಾವೆಂಡಿಷ್ ಒಬ್ಬರು. ನೀರು ಮೂಲವಸ್ತುವಲ್ಲವೆಂದೂ ಜಲಜನಕ ಪ್ರಾಣವಾಯುಗಳ ಮಿಶ್ರಣದ ಸಂಯುಕ್ತ ವಸ್ತುವೆಂದೂ ಮೊದಲು ಕಂಡುಹಿಡಿದ ಸಂಶೋಧಕರೇ ಈ ಕ್ಯಾವೆಂಡಿಷ್ ಅವರು!

●

ವಿಜ್ಞಾನದ ಪ್ರಗತಿಗಾಗಿ ತಮ್ಮ ಇಡಿಯ ಜೀವನವನ್ನೇ ತ್ಯಾಗ ಮಾಡಿದ ಮಹಾಪುರುಷರಲ್ಲಿ ಹೆನ್ರಿ ಕ್ಯಾವೆಂಡಿಷರೂ ಒಬ್ಬರು. ಇವರು ಒಬ್ಬ ವಿಲಕ್ಷಣ ವ್ಯಕ್ತಿಗಳಾಗಿದ್ದರಲ್ಲದೆ ಪ್ರಸಿದ್ಧ ವಿಜ್ಞಾನಿಗಳೂ ಆಗಿದ್ದರು.

ಹೆನ್ರಿ ಕ್ಯಾವೆಂಡಿಷರು ಇಂಗ್ಲೆಂಡಿನಲ್ಲಿರುವ ನೈಸ್ ಎಂಬ ಊರಲ್ಲಿ ಕ್ರಿ. ಶ. ೧೭೩೧ರಲ್ಲಿ ಜನಿಸಿದರು. ಇವರ ತಂದೆ ಲಾರ್ಡ್ ಚಾರ್ಲ್ಸ್ ಕ್ಯಾವೆಂಡಿಷ್. ಆಗರ್ಭ ಶ್ರೀಮಂತರು. ಯಾವುದಕ್ಕೂ ಕೊರತೆ ಇದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೆಳೆದಿದ್ದ ಹೆನ್ರಿ ಕ್ಯಾವೆಂಡಿಷರು ಸಾರ್ವಜನಿಕ ಜೀವನದ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡದೆ ಏಕಾಂತಜೀವನವನ್ನು ಬಯಸಿದರು. ವಿಜ್ಞಾನದ ಸೇವೆಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟರು.

ಕ್ಯಾವೆಂಡಿಷರು ಮಿತವಾದಿಗಳು. ಯಾರ ಜೊತೆಗೂ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ. ಗದ್ದಲವೆಂದರೆ ಅವರು ಒಂದು ಮೈಲು ದೂರ ಸರಿಯುತ್ತಿದ್ದರು. ಆಗಾಗ ತಮ್ಮ ಜೊತೆಯ ವಿಜ್ಞಾನಿಗಳ ಸಂಗಡ ವಿಜ್ಞಾನವಿಷಯವನ್ನು ಕುರಿತು ಚರ್ಚಿಸುತ್ತಿದ್ದರು. ಮತ್ತು ಅದರಿಂದ ಒಂದು ತೆರದ ಆನಂದವನ್ನು ಅನುಭವಿಸುತ್ತಿದ್ದರು

ಅವರು ವಾಸಿಸುತ್ತಿದ್ದ ಮನೆ ಬಹಳ ಸಾಧಾರಣದ್ದು. ಅದರಲ್ಲಿ ಪ್ರಯೋಗಶಾಲೆ ಮತ್ತು ಕಾರಖಾನೆಗಳು ಇದ್ದುವು. ಅವರ ಸುಖಸಾಧನೆಗೆ ಬೇಕಾದ ವಸ್ತುಗಳು ಬಹಳ ಕಡಿಮೆಯ ಪ್ರಮಾಣದಲ್ಲಿ ಇದ್ದುವು. ಕುಳಿತುಕೊಳ್ಳುವ ಕೋಣೆಯನ್ನು ಪ್ರಯೋಗಶಾಲೆಯನ್ನಾಗಿಯೂ, ಅದರ ಪಕ್ಕದಲ್ಲಿದ್ದ ಕೋಣೆಯನ್ನು ಕಮ್ಮಾರ ಸಾಲೆಯನ್ನಾಗಿಯೂ, ಮತ್ತು ಮೇಲಿನ ಕೋಣೆಗಳ ಭಾಗವನ್ನು ಜ್ಯೋತಿಷ ಸಮೀಕ್ಷಾಮಂದಿರವನ್ನಾಗಿಯೂ ಮಾಡಿಕೊಂಡಿದ್ದರು. ಯಾರನ್ನಾದರೂ ಮನೆಗೆ ಕರೆದು ಅವರಿಂದ ತಮ್ಮ ಏಕಾಂತಕ್ಕೆ ಭಂಗವನ್ನುಂಟು ಮಾಡಿಕೊಳ್ಳುತ್ತಿರಲಿಲ್ಲ. ಯಾರಾದರೂ ಊಟದ ವೇಳೆಗೆ ಬಂದರೆ ತಪ್ಪದೆ ಅವರಿಗೆ ಪ್ರಿಯವಾದ ಪದಾರ್ಥವನ್ನು ತಿನ್ನಲಿಕ್ಕೆ ಕೊಡುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಕತೆ ಹೇಳುವುದುಂಟು : ಒಂದು ಸಾರೆ ಮೂರು ನಾಲ್ಕು ಜನ ಅತಿಥಿಗಳು ಊಟಕ್ಕಾಗಿ ಇವರ ಹತ್ತಿರ ಬಂದರು. ಆಗ ಇವರ ಸೇವಕನು ಊಟಕ್ಕಾಗಿ ಏನು ಮಾಡಬೇಕೆಂದು ಕೇಳಿದನು. ಅದಕ್ಕೆ ಇವರು ಪ್ರತಿನಿತ್ಯ ಹೇಳುವಂತೆ "ಕೋಳಿಯ ಒಂದು ಕಾಲು ತೆಗೆದುಕೊಂಡು ಬಾ" ಎಂದು ಹೇಳಿದರು. ಒಂದು ಕಾಲು ಇಷ್ಟು ಜನರಿಗೆ ಹೇಗೆ ಸಾಕಾಗಬಹುದೆಂದು ಸೇವಕನು ಕೇಳಿದಾಗ, ಅವರು "ಎರಡು ಕಾಲುಗಳನ್ನು ತೆಗೆದುಕೊಂಡು ಬಾ" ಎಂದು ಹೇಳಿದರಂತೆ.

ನಡುಜೀವನದಲ್ಲಿ ಕ್ಯಾವೆಂಡಿಷರು ತಮ್ಮ ಪೂರ್ವಜರಿಂದ ಒಂದು ದೊಡ್ಡ ಆಸ್ತಿಯನ್ನು ಪಡೆದರು. ಒಬ್ಬ ದೊಡ್ಡ ಶ್ರೀಮಂತರೆನಿಸಿಕೊಂಡರು. ಈ ಶ್ರೀಮಂತಿಕೆಯಿಂದ ಅವರ ಸ್ವಭಾವದಲ್ಲಿ ಯಾವ ತೆರದ ಬದಲಾವಣೆಯಾಗಲಿಲ್ಲ. ಇಂತಹ ಸ್ವಭಾವಕ್ಕೆ ಅನುಗುಣವಾಗಿ ಅವರು ತಮ್ಮ ಕೃತಿಗಳನ್ನು ಕೀರ್ತಿಗಾಗಿ ಬರೆಯಲಿಲ್ಲ. ಅವರ ಕೃತಿಗಳಲ್ಲಿ ಬಹುಭಾಗವು ಅವರು ಜೀವಿಸಿದ್ದಾಗಲೂ ಪೂರ್ಣ ಅಜ್ಞಾತವಾಗಿ ಉಳಿದುಕೊಂಡಿದ್ದುವು. ಅವರ ಸ್ವಭಾವದ ಬಗೆಗೆ ಒಂದು ಜನಜನಿತವಾದ ಕತೆಯುಂಟು. ಅವರು ಒಂದು ಸಲ ಇಂಗ್ಲೆಂಡಿನ ಬ್ಯಾಂಕಿನಲ್ಲಿ ಲಕ್ಷಕ್ಕಿಂತ ಹೆಚ್ಚು ಹಣವನ್ನು ಕೂಡಿಟ್ಟಿದ್ದರು. ಆದರೆ ಅವರಿಗೆ ಈ ದುಡ್ಡಿನಲ್ಲಿ ಆಸಕ್ತಿ ಇರಲಿಲ್ಲ. ಅವರ ಹತ್ತಿರ ಒಂದಕ್ಕಿಂತ ಹೆಚ್ಚು ಸೂಟು ಕೂಡ ಇರಲಿಲ್ಲ. ಬ್ಯಾಂಕಿನ ಅಧಿಕಾರಿಗಳು ಅವರ ಸಂಗಡ ಆ ಹಣವನ್ನು ಬೇರೆ ಉದ್ಯಮಗಳಲ್ಲಿ ವಿನಿಯೋಗಿಸಬೇಕೆಂದು ಆಗ್ರಹದ ಪತ್ರವ್ಯವಹಾರವನ್ನು ನಡೆಸಿದರು. ಅದರಿಂದ ಅವರ ಕಾರ್ಯಕ್ಕೆ ಆತಂಕ ಉಂಟಾಗಲು, ಅವರು ಸಿಟ್ಟಿಗೆದ್ದು ಮುಂದೆ ಇದೇ ರೀತಿ ಪತ್ರವ್ಯವಹಾರಗಳನ್ನು ಮಾಡಿದ್ದಾದರೆ ತಮ್ಮ ಎಲ್ಲ ಹಣವನ್ನೂ ಬ್ಯಾಂಕಿನಿಂದ ತಿರುಗಿ ತೆಗೆದುಕೊಳ್ಳುವುದಾಗಿ ಅಧಿಕಾರಿಗಳನ್ನು ಗದರಿಸಿದರು.

ಕ್ಯಾವೆಂಡಿಷರು ಉತ್ತಮ ಪ್ರಯೋಗಕಾರರಾಗಿದ್ದರು. ಗಾಳಿಯ ವಿಶ್ಲೇಷಣಕ್ಕಾಗಿ ತಮ್ಮದೇ ಆದ ಒಂದು ವಿಧಾನವನ್ನು ಕಂಡುಹಿಡಿದು, ಗಾಳಿಯ ಅನೇಕ ಮಾದರಿಗಳನ್ನು ಪರೀಕ್ಷಿಸಿದರು. ಜಗತ್ತಿನ ಎಲ್ಲ ಭಾಗಗಳಲ್ಲಿಯೂ, ವರ್ಷದ ಎಲ್ಲ ದಿನಗಳಲ್ಲಿಯೂ, ಮತ್ತು ಎಲ್ಲ

...ವರಣಗಳಲ್ಲಿಯೂ ವಾಯುಮಂಡಲದ ರಚನೆ ಸ್ಥಿರವಾಗಿರು-
...ವೆಂದು ತೋರಿಸಿಕೊಟ್ಟರು.

ಬ್ಲ್ಯಾಕ್ ಎಂಬ ವಿಜ್ಞಾನಿ ಕರೆದ "ಸ್ಥಿರಗಾಳಿ" (ಕಾರ್ಬನ್ ...ಕ್ಸೈಡ್ ಅನಿಲ)ಯ ವಿಷಯವಾಗಿ ಸಂಶೋಧನೆ ನಡೆಸಿ, ...ಶ. ೧೭೬೬ರಲ್ಲಿ ಅದರ ಗುಣಧರ್ಮಗಳ ವಿಷಯದಲ್ಲಿ ಒಂದು ...ಕೆಯನ್ನು ಕೊಟ್ಟರು. ಸ್ಥಿರಗಾಳಿ ನೀರಿನಲ್ಲಿ ಬಹುಬೇಗ ಕರ...ನೆಂದೂ, ಅದನ್ನು ಪಾದರಸದ ಸ್ಥಳಾಂತರದ ಮೂಲಕ ಶೇಖ...ಸಬಹುದಾಗಿದೆಯೆಂದೂ ವ್ಯಕ್ತಪಡಿಸಿದರು. ಅಲ್ಲದೆ ಈ "ಸ್ಥಿರಗಾಳಿ" ...ಸಾಮಾನ್ಯ ಗಾಳಿಗಿಂತ ಒಂದುವರೆಪಟ್ಟು ಹೆಚ್ಚು ಭಾರವಾಗಿರುತ್ತದೆ ...ಎಂದು ಕಂಡುಹಿಡಿದರು.

...ಗ್ರಾಹ್ಯೋಷ್ಣ ಮತ್ತು ಗುಪ್ತೋಷ್ಣಗಳ ವಿಷಯವಾಗಿ ...ಯೋಗಗಳನ್ನು ನಡೆಸಿದರು. ಉಷ್ಣಮಾಪಕವನ್ನು ತಯಾರಿಸುವ ...ತ್ತ ಉಪಯೋಗಿಸುವ ವಿಷಯದಲ್ಲಿ ಅನೇಕ ಉಪಯುಕ್ತ ಸಲಹೆ...ನ್ನು ನೀಡಿದರು. ಅಲ್ಲದೆ, ಪಾದರಸವು ಯಾವ ಡಿಗ್ರಿಯ ಮೇಲೆ ...ಘನೀಭವಿಸುತ್ತದೆಂದು ಸರಿಯಾಗಿ ಗೊತ್ತುಮಾಡಿದರು.

ಇವರು ಭೂಮಿ, ಸಮಆಕಾರದ ನೀರಿನ ಗೋಳಕಲ್ಪಕ್ಕಿಂತ ...ಷ್ಟು ಪಟ್ಟು ಭಾರವಾಗಿದೆಯೆಂಬುದನ್ನು ಕಂಡುಹಿಡಿಯಲು ಪ್ರಯ...ತ್ನಿಸಿದರು. ಅದೇ ಮೇರೆಗೆ ಪ್ರಯೋಗಗಳನ್ನು ನಡೆಸಿ, ಭೂಮಿ ...ಗಿಂತ ಐದೂವರೆಪಟ್ಟು ಹೆಚ್ಚು ಭಾರವಾಗಿದೆಯೆಂದು ಸ್ಪಷ್ಟ...ಪಡಿಸಿದರು.

ಹೈಡ್ರೋಜನಿನ ವಿಷಯವಾಗಿ ಸಂಪೂರ್ಣ ಸಂಶೋಧನೆ...ಯನ್ನು ನಡೆಸಿದವರಲ್ಲಿ ಕ್ಯಾವೆಂಡಿಷರೇ ಮೊದಲಿಗರು. ಆಮ್ಲದ ...ಲೋಹದ ಕ್ರಿಯೆಯಿಂದ ಈ ಅನಿಲವು ಹುಟ್ಟುತ್ತದೆಂದೂ, ...ಇಲ್ಲದಾಗ ಇದು ಉರಿಯುವುದಿಲ್ಲವೆಂದೂ, ಗಾಳಿ ಇದ್ದಾಗ ...ತ್ತ ಉರಿಯುತ್ತದೆಂದೂ ತೋರಿಸಿಕೊಟ್ಟರು. ಮತ್ತು ಅದಕ್ಕೆ ...ಲಿಸುವ ಅನಿಲ" ಎಂಬ ಹೆಸರನ್ನು ಕೊಟ್ಟರು. ಈ ಅನಿಲವನ್ನು ...ಮಾಡಿ, ಇದು ಸಾಮಾನ್ಯ ಗಾಳಿಗಿಂತ ಬಹಳ ಹಗುರವಾಗಿದೆ ...ದು ಕಂಡುಹಿಡಿದರು. ಆ ಮುಂದೆ ಜ್ವಲಿಸುವ ಅನಿಲವನ್ನು ...ಸ್ವಪ್ರಮಾಣದ ಆಕ್ಸಿಜನಿನಲ್ಲಿ ಬೆರಸಿ, ತಯಾರಾಗುವ ...ಣದ ಸ್ಫೋಟನೆಯಿಂದ ನೀರು ಉಂಟಾಗುತ್ತದೆಂದು ವ್ಯಕ್ತಪಡಿ...ಸಿ. ಈ ಪ್ರಯೋಗಗಳನ್ನು ಕೈಕೊಂಡಾಗ, ನೀರಿನ ಜೊತೆಗೆ ...ಕಡಿಮೆಯ ಪ್ರಮಾಣದಲ್ಲಿ ಒಂದು ಆಮ್ಲಯುಕ್ತ ಪದಾರ್ಥವು ...ಟ್ಟುತ್ತದೆಂದೂ, ಈ ಪದಾರ್ಥವು ಗಾಳಿಯಲ್ಲಿರುವ ನೈಟ್ರೋಜನು ...ಜನಿನೊಂದಿಗೆ ಸಂಯೋಗಹೊಂದಿದಾಗ ಉತ್ಪನ್ನವಾಗುವ ...ನೀರಲ್ಲಿ ಕರಗುವುದರಿಂದ ತಯಾರಾಗುತ್ತದೆಂದೂ ಕಂಡು...ದರು. ಇದೇ ಪ್ರಯೋಗವನ್ನು ಪುನಃ ಪುನಃ ಕೈಕೊಂಡಾಗ ...ಯಲ್ಲಿರುವ ನೂರಕ್ಕೆ ಒಂದು ಭಾಗವು ನೈಟ್ರೋಜನಿನಂತೆ ...ವಸ್ತುವಾಗಿದೆಯೆಂಬುದನ್ನೂ, ಅದು ಇನ್ನಿತರ ಯಾವ ವಸ್ತುಗಳ ...ಡ ಸಂಯೋಗ ಹೊಂದುವುದಿಲ್ಲವೆಂಬುದನ್ನೂ ಅವಲೋಕಿಸಿದರು. ...ಕೆತ್ತನೆಯ ಆಧಾರದ ಮೇಲೆ, ನೂರು ವರ್ಷಗಳ ಅನಂತರ ಗಾಳಿಯಲ್ಲಿ ಇರುವ ಜಡ ವಸ್ತುಗಳಾದ ಹೀಲಿಯಂ, ಆರ್ಗಾನ್, ನಿಯಾನ ಮುಂತಾದವುಗಳನ್ನು ಕಂಡು ಹಿಡಿಯಲಾಯಿತು. ಈ ಜಡ ಅನಿಲಗಳನ್ನು ಕಂಡುಹಿಡಿದ ಕೀರ್ತಿ ಕ್ಯಾವೆಂಡಿಷರಿಗೆಯೇ ಸಲ್ಲತಕ್ಕದಾಗಿದೆ.

ಕ್ಯಾವೆಂಡಿಷರ ಕಾಲದಲ್ಲಿ ನೀರು ಒಂದು ಮೂಲವಸ್ತುವೆಂದು ಭಾವಿಸಲ್ಪಟ್ಟಿದ್ದಿತು. ಇವರು ಪ್ರಯೋಗಗಳನ್ನು ನಡೆಸಿ, ನೀರು ಒಂದು ಮೂಲವಸ್ತುವಾಗಿರದೆ ಎರಡು ವರ್ಣರಹಿತ ಮತ್ತು ಕಣ್ಣಿಗೆ ಕಾಣಲಾಗದ ಅನಿಲಗಳ (ಒಂದನೆಯದು ಹಗುರವಾದ ಮತ್ತು ಜ್ವಲಿಸುವ ಹೈಡ್ರೋಜನ್, ಎರಡನೆಯದು ಜೀವನಕ್ಕೆ ಆಧಾರವಾದ ಆಕ್ಸಿಜನ್) ಒಂದು ಸಂಯುಕ್ತ ವಸ್ತುವಾಗಿದೆಯೆಂದು ತೋರಿಸಿಕೊಟ್ಟರು. ಇವೆರಡೂ ಅನಿಲಗಳ ಗುಣಗಳನ್ನು ಪರೀಕ್ಷಿಸಿ, ಇವು ಯಾವ ಪ್ರಮಾಣದಲ್ಲಿ ಸಂಯೋಗ ಹೊಂದುತ್ತವೆಯೆಂಬುದನ್ನು ಕಂಡುಹಿಡಿದರು. ಈ ಸಂಶೋಧನೆ ಅತಿ ಮಹತ್ತ್ವವಾದುದೆಂದು ಹೇಳಿದರೆ ಅದು ಅತ್ಯುಕ್ತಿಯಲ್ಲ.

ಇವರು ಕೊನೆಯವರೆಗೂ ಬ್ರಹ್ಮಚಾರಿಯಾಗಿಯೇ ಉಳಿದರು. ಸ್ತ್ರೀಯರೆಂದರೆ ಇವರಿಗೆ ಆಗುತ್ತಿರಲಿಲ್ಲ. ಅವರ ಸಂಗಡ ಮಾತನಾಡು...

ಮಕ್ಕಳ ಸದೃಢತೆ-ಗಾಗಿ

"ಬಾಲ ಬಾಲಾ-ಮೃತ"

ಹಲ್ಲು ಬರುವಾಗ



"ಎಸ್ಟನ್ಸ್ ಗ್ರಾಇಪ್" ಹೀಲರ್

ಜಂತು ಆದರೆ

"ವರ್ಮ್ಸ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar

ಹೆನ್ರಿ ಕ್ಯಾವೆಂಡಿಷ್

(ವ್ಯಕ್ತಿ ಪರಿಚಯ)

ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್‌ಸಿ.
ಹೈದರಾಬಾದ್

ವಿಜ್ಞಾನಪ್ರಪಂಚದಲ್ಲಿ ಅಪಾರವಾದ ಸೇವೆ ಸಲ್ಲಿಸಿದ ಮಹಾವ್ಯಕ್ತಿಗಳಲ್ಲಿ ಹೆನ್ರಿ ಕ್ಯಾವೆಂಡಿಷ್ ಒಬ್ಬರು. ನೀರು ಮೂಲವಸ್ತುವಲ್ಲವೆಂದೂ ಜಲಜನಕ ಪ್ರಾಣವಾಯುಗಳ ಮಿಶ್ರಣದ ಸಂಯುಕ್ತ ವಸ್ತುವೆಂದೂ ಮೊದಲು ಕಂಡುಹಿಡಿದ ಸಂಶೋಧಕರೇ ಈ ಕ್ಯಾವೆಂಡಿಷ್ ಅವರು!

●

ವಿಜ್ಞಾನದ ಪ್ರಗತಿಗಾಗಿ ತಮ್ಮ ಇಡಿಯ ಜೀವನವನ್ನೇ ತ್ಯಾಗ-ಮಾಡಿದ ಮಹಾಪುರುಷರಲ್ಲಿ ಹೆನ್ರಿ ಕ್ಯಾವೆಂಡಿಷರೂ ಒಬ್ಬರು. ಇವರು ಒಬ್ಬ ವಿಲಕ್ಷಣ ವ್ಯಕ್ತಿಗಳಾಗಿದ್ದರಲ್ಲದೆ, ಪ್ರಸಿದ್ಧ ವಿಜ್ಞಾನಿಗಳೂ ಆಗಿದ್ದರು.

ಹೆನ್ರಿ ಕ್ಯಾವೆಂಡಿಷರು ಇಂಗ್ಲೆಂಡಿನಲ್ಲಿರುವ ನೈಸ್ ಎಂಬ ಊರಲ್ಲಿ ಕ್ರಿ. ಶ. ೧೭೩೧ರಲ್ಲಿ ಜನಿಸಿದರು. ಇವರ ತಂದೆ ಲಾರ್ಡ್ ಚಾರ್ಲಸ್ ಕ್ಯಾವೆಂಡಿಷ್. ಆಗರ್ಭ ಶ್ರೀಮಂತರು. ಯಾವುದಕ್ಕೂ ಕೊರತೆ ಇದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೆಳೆದಿದ್ದ ಹೆನ್ರಿ ಕ್ಯಾವೆಂಡಿಷರು ಸಾರ್ವಜನಿಕ ಜೀವನದ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡದೆ ಏಕಾಂತಜೀವನವನ್ನು ಆರಿಸಿದರು. ವಿಜ್ಞಾನದ ಸೇವೆಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟರು.

ಕ್ಯಾವೆಂಡಿಷರು ಮಿತವಾದಿಗಳು. ಯಾರ ಜೊತೆಗೂ ಹೆಚ್ಚಿಗೆ ಮಾತನಾಡುತ್ತಿರಲಿಲ್ಲ. ಗದ್ದಲವೆಂದರೆ ಅವರು ಒಂದು ಮೈಲು ದೂರ ಸರಿಯುತ್ತಿದ್ದರು. ಆಗಾಗ ತಮ್ಮ ಜೊತೆಯ ವಿಜ್ಞಾನಿಗಳ ಸಂಗಡ ವಿಜ್ಞಾನವಿಷಯವನ್ನು ಕುರಿತು ಚರ್ಚಿಸುತ್ತಿದ್ದರು. ಮತ್ತು ಅದರಿಂದ ಒಂದು ತೆರದ ಆನಂದವನ್ನು ಅನುಭವಿಸುತ್ತಿದ್ದರು.

ಅವರು ವಾಸಿಸುತ್ತಿದ್ದ ಮನೆ ಬಹಳ ಸಾಧಾರಣದ್ದು. ಅದರಲ್ಲಿ ಪ್ರಯೋಗಶಾಲೆ ಮತ್ತು ಕಾರಖಾನೆಗಳು ಇದ್ದುವು. ಅವರ ಸುಖ-ಸಾಧನೆಗೆ ಬೇಕಾದ ವಸ್ತುಗಳು ಬಹಳ ಕಡಿಮೆಯ ಪ್ರಮಾಣದಲ್ಲಿ ಇದ್ದುವು. ಕುಳಿತುಕೊಳ್ಳುವ ಕೋಣೆಯನ್ನು ಪ್ರಯೋಗಶಾಲೆಯನ್ನಾಗಿಯೂ, ಅದರ ಪಕ್ಕದಲ್ಲಿದ್ದ ಕೋಣೆಯನ್ನು ಕಮ್ಮಾರ ಸಾಲೆಯನ್ನಾಗಿಯೂ, ಮತ್ತು ಮೇಲಿನ ಕೋಣೆಗಳ ಭಾಗವನ್ನು ಜ್ಯೋತಿಷ ಸಮೀಕ್ಷಾಮಂದಿರವನ್ನಾಗಿಯೂ ಮಾಡಿಕೊಂಡಿದ್ದರು. ಯಾರನ್ನಾದರೂ ಮನೆಗೆ ಕರೆದು ಅವರಿಂದ ತಮ್ಮ ಏಕಾಂತಕ್ಕೆ ಭಂಗವನ್ನುಂಟು ಮಾಡಿಕೊಳ್ಳುತ್ತಿರಲಿಲ್ಲ. ಯಾರಾದರೂ ಊಟದ ವೇಳೆಗೆ ಬಂದರೆ ತಪ್ಪದೆ ಅವರಿಗೆ ಪ್ರಿಯವಾದ ಪದಾರ್ಥವನ್ನು ತಿನ್ನಲಿಕ್ಕೆ ಕೊಡುತ್ತಿದ್ದರು. ಈ ಸಂದರ್ಭದಲ್ಲಿ ಒಂದು ಕತೆ ಹೇಳುವುದುಂಟು: ಒಂದು ಸಾರೆ ಮೂರು ನಾಲ್ಕು ಜನ ಅತಿಥಿಗಳು ಊಟಕ್ಕಾಗಿ ಇವರ ಹತ್ತಿರ ಬಂದರು. ಆಗ ಇವರ ಸೇವಕನು ಊಟಕ್ಕಾಗಿ ಏನು ಮಾಡಬೇಕೆಂದು ಕೇಳಿದನು. ಆದಕ್ಕೆ ಇವರು ಪ್ರತಿನಿತ್ಯ ಹೇಳುವಂತೆ "ಕೋಳಿಯ ಒಂದು ಕಾಲು ತೆಗೆದುಕೊಂಡು ಬಾ" ಎಂದು ಹೇಳಿದರು. ಒಂದು ಕಾಲು ಇಷ್ಟು ಜನರಿಗೆ ಹೇಗೆ ಸಾಕಾಗಬಹುದೆಂದು ಸೇವಕನು ಕೇಳಿದಾಗ, ಅವರು "ಎರಡು ಕಾಲುಗಳನ್ನು ತೆಗೆದುಕೊಂಡು ಬಾ" ಎಂದು ಹೇಳಿದರಂತೆ.

ನಡುಜೀವನದಲ್ಲಿ ಕ್ಯಾವೆಂಡಿಷರು ತಮ್ಮ ಪೂರ್ವಜರಿಂದ ಒಂದು ದೊಡ್ಡ ಆಸ್ತಿಯನ್ನು ಪಡೆದರು. ಒಬ್ಬ ದೊಡ್ಡ ಶ್ರೀಮಂತರೆನಿಸಿಕೊಂಡರು. ಈ ಶ್ರೀಮಂತಿಕೆಯಿಂದ ಅವರ ಸ್ವಭಾವದಲ್ಲಿ ಯಾವ ತೆರದ ಬದಲಾವಣೆಯಾಗಲಿಲ್ಲ. ಇಂತಹ ಸ್ವಭಾವಕ್ಕೆ ಅನುಗುಣವಾಗಿ ಅವರು ತಮ್ಮ ಕೃತಿಗಳನ್ನು ಕೀರ್ತಿಗಾಗಿ ಬರೆಯಲಿಲ್ಲ. ಅವರ ಕೃತಿಗಳಲ್ಲಿ ಬಹುಭಾಗವು ಅವರು ಜೀವಿಸಿದ್ದಾಗಲೂ ಪೂರ್ಣ ಅಜ್ಞಾತವಾಗಿ ಉಳಿದುಕೊಂಡಿದ್ದುವು. ಅವರ ಸ್ವಭಾವದ ಬಗೆಗೆ ಒಂದು ಜನಜನಿತವಾದ ಕತೆಯುಂಟು. ಅವರು ಒಂದು ಸಲ ಇಂಗ್ಲೆಂಡಿನ ಬ್ಯಾಂಕಿನಲ್ಲಿ ಲಕ್ಷಕ್ಕಿಂತ ಹೆಚ್ಚು ಹಣವನ್ನು ಕೂಡಿಟ್ಟಿದ್ದರು. ಆದರೆ ಅವರಿಗೆ ಆ ದುಡ್ಡಿನಲ್ಲಿ ಆಸಕ್ತಿ ಇರಲಿಲ್ಲ. ಅವರ ಹತ್ತಿರ ಒಂದಕ್ಕಿಂತ ಹೆಚ್ಚು ಸೂಟು ಕೂಡ ಇರಲಿಲ್ಲ. ಬ್ಯಾಂಕಿನ ಅಧಿಕಾರಿಗಳು ಅವರ ಸಂಗಡ ಆ ಹಣವನ್ನು ಬೇರೆ ಉದ್ಯಮಗಳಲ್ಲಿ ವಿನಿಯೋಗಿಸಬೇಕೆಂದು ಆಗ್ರಹದ ಪತ್ರವ್ಯವಹಾರವನ್ನು ನಡೆಸಿದರು. ಅದರಿಂದ ಅವರ ಕಾರ್ಯಕ್ಕೆ ಆತಂಕ ಉಂಟಾಗಲು, ಅವರು ಸಿಟ್ಟಿಗೆದ್ದು ಮುಂದೆ ಇದೇ ರೀತಿ ಪತ್ರವ್ಯವಹಾರಗಳನ್ನು ಮಾಡಿದ್ದಾದರೆ ತಮ್ಮ ಎಲ್ಲ ಹಣವನ್ನೂ ಬ್ಯಾಂಕಿನಿಂದ ತಿರುಗಿ ತೆಗೆದುಕೊಳ್ಳುವುದಾಗಿ ಅಧಿಕಾರಿಗಳನ್ನು ಗದರಿಸಿದರು.

ಕ್ಯಾವೆಂಡಿಷರು ಉತ್ತಮ ಪ್ರಯೋಗಕಾರರಾಗಿದ್ದರು. ಗಾಳಿಯ ವಿಶ್ಲೇಷಣಕ್ಕಾಗಿ ತಮ್ಮದೇ ಆದ ಒಂದು ವಿಧಾನವನ್ನು ಕಂಡುಹಿಡಿದು, ಗಾಳಿಯ ಅನೇಕ ಮಾದರಿಗಳನ್ನು ಪರೀಕ್ಷಿಸಿದರು. ಜಗತ್ತಿನ ಎಲ್ಲ ಭಾಗಗಳಲ್ಲಿಯೂ, ವರ್ಷದ ಎಲ್ಲ ದಿನಗಳಲ್ಲಿಯೂ, ಮತ್ತು ಎಲ್ಲ

ಪರಣಗಳಲ್ಲಿಯೂ ವಾಯುಮಂಡಲದ ರಚನೆ ಸ್ಥಿರವಾಗಿರು-
ವೆಂದು ತೋರಿಸಿಕೊಟ್ಟರು.

ಬ್ಲ್ಯಾಕ್ ಎಂಬ ವಿಜ್ಞಾನಿ ಕರೆದ "ಸ್ಥಿರಗಾಳಿ" (ಕಾರ್ಬನ್ ಡೈಆಕ್ಸೈಡ್ ಅನಿಲ)ಯ ವಿಷಯವಾಗಿ ಸಂಶೋಧನೆ ನಡೆಸಿ, ೧೭೬೬ರಲ್ಲಿ ಅದರ ಗುಣಧರ್ಮಗಳ ವಿಷಯದಲ್ಲಿ ಒಂದು ವರದಿಯನ್ನು ಕೊಟ್ಟರು. ಸ್ಥಿರಗಾಳಿ ನೀರಿನಲ್ಲಿ ಬಹುಬೇಗ ಕರಗುವೆಂದೂ, ಅದನ್ನು ಪಾದರಸದ ಸ್ಥಳಾಂತರದ ಮೂಲಕ ಶೇಖರಿಸಬಹುದಾಗಿದೆಯೆಂದೂ ವ್ಯಕ್ತಪಡಿಸಿದರು. ಅಲ್ಲದೆ ಈ "ಸ್ಥಿರಗಾಳಿ" ಸಾಮಾನ್ಯ ಗಾಳಿಗಿಂತ ಒಂದುವರೆಪಟ್ಟು ಹೆಚ್ಚು ಭಾರವಾಗಿರುತ್ತದೆ ಎಂಬುದನ್ನು ಕಂಡುಹಿಡಿದರು.

ಉಷ್ಣಮಾಪಕ ಮತ್ತು ಗುಪ್ತೋಷ್ಣಗಳ ವಿಷಯವಾಗಿ ಪ್ರಯೋಗಗಳನ್ನು ನಡೆಸಿದರು. ಉಷ್ಣಮಾಪಕವನ್ನು ತಯಾರಿಸುವ ಮತ್ತು ಉಪಯೋಗಿಸುವ ವಿಷಯದಲ್ಲಿ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿದರು. ಅಲ್ಲದೆ, ಪಾದರಸವು ಯಾವ ಡಿಗ್ರಿಯ ಮೇಲೆ ಘನೀಭವಿಸುತ್ತದೆಂದು ಸರಿಯಾಗಿ ಗೊತ್ತುಮಾಡಿದರು.

ಇವರು ಭೂಮಿ, ಸಮಆಕಾರದ ನೀರಿನ ಗೋಳಕ್ಕಿಂತ ಐದರಷ್ಟು ಭಾರವಾಗಿದೆಯೆಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಿದರು. ಅದೇ ಮೇರೆಗೆ ಪ್ರಯೋಗಗಳನ್ನು ನಡೆಸಿ, ಭೂಮಿ ನೀರಿಗಿಂತ ಐದೂವರೆಪಟ್ಟು ಹೆಚ್ಚು ಭಾರವಾಗಿದೆಯೆಂದು ಸ್ಪಷ್ಟಪಡಿಸಿದರು.

ಹೈಡ್ರೋಜನಿನ ವಿಷಯವಾಗಿ ಸಂಪೂರ್ಣ ಸಂಶೋಧನೆಯನ್ನು ನಡೆಸಿದವರಲ್ಲಿ ಕ್ಯಾವೆಂಡಿಷರೇ ಮೊದಲಿಗರು. ಆಮ್ಲದ ಮೇಲೆ ಲೋಹದ ಕ್ರಿಯೆಯಿಂದ ಈ ಅನಿಲವು ಹುಟ್ಟುತ್ತದೆಂದೂ, ಗಾಳಿ ಇಲ್ಲದಾಗ ಇದು ಉರಿಯುವುದಿಲ್ಲವೆಂದೂ, ಗಾಳಿ ಇದ್ದಾಗ ಮಾತ್ರ ಉರಿಯುತ್ತದೆಂದೂ ತೋರಿಸಿಕೊಟ್ಟರು. ಮತ್ತು ಅದಕ್ಕೆ "ಉರಿಸುವ ಅನಿಲ" ಎಂಬ ಹೆಸರನ್ನು ಕೊಟ್ಟರು. ಈ ಅನಿಲವನ್ನು ತೂಕ ಮಾಡಿ, ಇದು ಸಾಮಾನ್ಯ ಗಾಳಿಗಿಂತ ಬಹಳ ಹಗುರವಾಗಿದೆ ಎಂದು ಕಂಡುಹಿಡಿದರು. ಆ ಮುಂದೆ ಜ್ವಲಿಸುವ ಅನಿಲವನ್ನು ನಿರ್ದಿಷ್ಟಪ್ರಮಾಣದ ಆಕ್ಸಿಜನಿನಲ್ಲಿ ಬೆರಸಿ, ತಯಾರಾಗುವ ಮಿಶ್ರಣದ ಸ್ಫೋಟನೆಯಿಂದ ನೀರು ಉಂಟಾಗುತ್ತದೆಂದು ವ್ಯಕ್ತಪಡಿಸಿದರು. ಈ ಪ್ರಯೋಗಗಳನ್ನು ಕೈಕೊಂಡಾಗ, ನೀರಿನ ಜೊತೆಗೆ ಸ್ವಲ್ಪ ಕಡಿಮೆಯ ಪ್ರಮಾಣದಲ್ಲಿ ಒಂದು ಆಮ್ಲಯುಕ್ತ ಪದಾರ್ಥವು ಹುಟ್ಟುತ್ತದೆಂದೂ, ಈ ಪದಾರ್ಥವು ಗಾಳಿಯಲ್ಲಿರುವ ನೈಟ್ರೋಜನು ಆಕ್ಸಿಜನಿನೊಂದಿಗೆ ಸಂಯೋಗಹೊಂದಿದಾಗ ಉತ್ಪನ್ನವಾಗುವ ಆಮ್ಲವು ನೀರಲ್ಲಿ ಕರಗುವುದರಿಂದ ತಯಾರಾಗುತ್ತದೆಂದೂ ಕಂಡುಹಿಡಿದರು. ಇದೇ ಪ್ರಯೋಗವನ್ನು ಪುನಃ ಪುನಃ ಕೈಕೊಂಡಾಗ, ಗಾಳಿಯಲ್ಲಿರುವ ನೂರಕ್ಕೆ ಒಂದು ಭಾಗವು ನೈಟ್ರೋಜನಿನಂತೆ ಜಡವಸ್ತುವಾಗಿದೆಯೆಂಬುದನ್ನೂ, ಅದು ಇನ್ನಿತರ ಯಾವ ವಸ್ತುಗಳ ಜೊತೆ ಸಂಯೋಗ ಹೊಂದುವುದಿಲ್ಲವೆಂಬುದನ್ನೂ ಅವಲೋಕಿಸಿದರು. ಈ ಕಲ್ಪನೆಯ ಆಧಾರದ ಮೇಲೆ, ನೂರು ವರ್ಷಗಳ ಅನಂತರ ಗಾಳಿಯಲ್ಲಿ ಇರುವ ಜಡ ವಸ್ತುಗಳಾದ ಹೀಲಿಯಂ, ಆರ್ಗಾನ್, ನಿಯಾನ ಮುಂತಾದವುಗಳನ್ನು ಕಂಡು ಹಿಡಿಯಲಾಯಿತು. ಈ ಜಡ ಅನಿಲಗಳನ್ನು ಕಂಡುಹಿಡಿದ ಕೀರ್ತಿ ಕ್ಯಾವೆಂಡಿಷರಿಗೆಯೇ ಸಲ್ಲತಕ್ಕದಾಗಿದೆ.

ಕ್ಯಾವೆಂಡಿಷರ ಕಾಲದಲ್ಲಿ ನೀರು ಒಂದು ಮೂಲವಸ್ತುವೆಂದು ಭಾವಿಸಲ್ಪಟ್ಟಿದ್ದಿತು. ಇವರು ಪ್ರಯೋಗಗಳನ್ನು ನಡೆಸಿ, ನೀರು ಒಂದು ಮೂಲವಸ್ತುವಾಗಿರದೆ ಎರಡು ವರ್ಣರಹಿತ ಮತ್ತು ಕಣ್ಣಿಗೆ ಕಾಣಲಾಗದ ಅನಿಲಗಳ (ಒಂದನೆಯದು ಹಗುರವಾದ ಮತ್ತು ಜ್ವಲಿಸುವ ಹೈಡ್ರೋಜನ್, ಎರಡನೆಯದು ಜೀವನಕ್ಕೆ ಆಧಾರವಾದ ಆಕ್ಸಿಜನ್) ಒಂದು ಸಂಯುಕ್ತ ವಸ್ತುವಾಗಿದೆಯೆಂದು ತೋರಿಸಿಕೊಟ್ಟರು. ಇವೆರಡೂ ಅನಿಲಗಳ ಗುಣಗಳನ್ನು ಪರೀಕ್ಷಿಸಿ, ಇವು ಯಾವ ಪ್ರಮಾಣದಲ್ಲಿ ಸಂಯೋಗ ಹೊಂದುತ್ತವೆಯೆಂಬುದನ್ನು ಕಂಡುಹಿಡಿದರು. ಈ ಸಂಶೋಧನೆ ಅತಿ ಮಹತ್ತ್ವವಾದುದೆಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ.

ಇವರು ಕೊನೆಯವರೆಗೂ ಬ್ರಹ್ಮಚಾರಿಯಾಗಿಯೇ ಉಳಿದರು. ಸ್ತ್ರೀಯರೆಂದರೆ ಇವರಿಗೆ ಆಸಕ್ತಿಯಿರಲಿಲ್ಲ. ಅವರ ಸಂಗಡ ಮಾತನಾಡು

ಮಕ್ಕಳ ಸದೃಢತೆಗಾಗಿ

"ಬಾಲನ ಬಾಲಾಮೃತ"

ಹಲ್ಲು ಬರುವಾಗ



"ಎಸ್ಸೆನ್ಸ ಗ್ರಾಇಪ್" ಹೀಲರ್

ಜಂತು ಆದರೆ



"ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies &
Pharmaceuticals Ltd., Dharwar

ವುದಂತೂ ಇರಲಿ, ಅವರನ್ನು ನೋಡಲು ಕೂಡ ಸಂಕೋಚಪಟ್ಟು ಕೊಳ್ಳುತ್ತಿದ್ದರು. ಸ್ತ್ರೀಯರ ವಿಷಯದಲ್ಲಿ ಇವರಲ್ಲಿ ಅಷ್ಟೊಂದು ನಾಚಿಕೆ ಮತ್ತು ಜುಗುಪ್ಸೆ ಸೇರಿಕೊಂಡಿತ್ತು. ಮನೆಯ ಕೆಲಸ-ಕಾರ್ಯಗಳನ್ನು ನೋಡಿಕೊಂಡು ಹೋಗುವ ಆಳು, ಕ್ಯಾವೆಂಡಿಷರ ಸಂಗಡ ಬರೆವಣಿಗೆಯಲ್ಲಿಯೂ ವ್ಯವಹರಿಸುತ್ತಿದ್ದನು ಉಳಿದ ಹೆಣ್ಣು ಆಳುಗಳು ಇವರ ಕಣ್ಣಿಗೆ ಬೀಳದಂತೆ ಜಾಗರೂಕತೆಯಿಂದ ತಮ್ಮ ಕೆಲಸವನ್ನು ನಡೆಸಿಕೊಂಡು ಹೋಗುತ್ತಿದ್ದರು. ಕ್ಯಾವೆಂಡಿಷರು ಮನುಷ್ಯದ್ವೇಷಿಗಳಾಗಿದ್ದರೂ ಕೃಪಣರಾಗಿರಲಿಲ್ಲ. ಒಂದು ಸಲ ಇವರ ಪುಸ್ತಕ ಭಂಡಾರದ ಅಧಿಕಾರಿಯೊಬ್ಬನು ಬೇನೆಯಿಂದ ಬಳಲುತ್ತಿದ್ದು, ಇವರ ಕಡೆಗೆ ಧನಸಹಾಯಕ್ಕಾಗಿ ಬಂದಾಗ, ಇವರು ಯಾವ ವಿಚಾರ ಮಾಡದೆ ಆ ಅಧಿಕಾರಿಗೆ ಹತ್ತು ಸಾವಿರ ಪೌಂಡುಗಳನ್ನು ಕೊಟ್ಟರು.

ಕ್ಯಾವೆಂಡಿಷರು ೦ ವರ್ಷಗಳ ವರೆಗೆ ಬಾಳಿದರು. ಒಂದು ದಿನ ಸಂಜೆ ರಾಯಲ್ ಸೊಸೈಟಿಯಿಂದ ಮನೆಗೆ ಮರಳಿ ಬಂದ ಕೂಡಲೆ, ಒಮ್ಮಿಂದೊಮ್ಮೆ ಅವರು ಹಾಸಿಗೆಯನ್ನು ಹಿಡಿದರು. ಅವರು ಸೇವಕನನ್ನು ಕರೆದು "ನಾನು ಹೇಳುತ್ತಿರುವುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊ. ಇಂದೇ ನಾನು ಪರಲೋಕಕ್ಕೆ ತೆರಳುವವನಿದ್ದೇನೆ. ನಾನು ಪರಲೋಕಕ್ಕೆ ತೆರಳುವವರೆಗೂ ಈ ಸುದ್ದಿಯನ್ನು ಯಾರಿಗೂ ಹೇಳಕೂಡದು" ಎಂದು ಆಜ್ಞೆಯನ್ನು ವಿಧಿಸಿದರು. ಸೇವಕನಿಗೆ ಇದು ಯಾವುದೂ ಅರ್ಥವಾಗದೆ, ಅವನು ಹಾಗೆಯೆ ಸ್ವಲ್ಪ ಹೊತ್ತು ಅಲ್ಲಿ ನಿಂತುಕೊಂಡನು. ಕ್ಯಾವೆಂಡಿಷರು ಅವನನ್ನು ಪುನಃ ಗದರಿಸಿ ಅಲ್ಲಿಂದ ಹೊರಟುಹೋಗಲು ಹೇಳಿದರು. ಅನಂತರ ಅರ್ಧಗಂಟೆಯಲ್ಲಿಯೇ ಅವರು ಪರಲೋಕಕ್ಕೆ ತೆರಳಿದರು. ಸೇವಕನು ಪುನಃ ಬಂದು ನೋಡಿದಾಗ, ಅವರು ಗೋಡೆಯ ಕಡೆಗೆ ಮು ಮಾಡಿ ಶಾಂತವಾಗಿ ಮಲಗಿಬಿಟ್ಟಿದ್ದರು.

ಅವರಲ್ಲಿ ಯಾವ ಪ್ರಿಯವಾದ ಗುಣವಿರದಿದ್ದರೂ ತಿರಸ್ಕರಿಸ ಯೋಗ್ಯವಾದ ಯಾವ ದೋಷವೂ ಇರಲಿಲ್ಲ. ಅವರ ಸ್ವಭಾವದ ನೈತಿಕತೆಗೆ ಎಳ್ಳಷ್ಟೂ ಸ್ಥಾನವಿದ್ದಿಲ್ಲ. ಆದರೆ ಅವರ ಬುದ್ಧಿ ಅ ತೀಕ್ಷ್ಣವಾಗಿತ್ತು. ಅವರಲ್ಲಿ ಬೌದ್ಧಿಕದರ್ಶನದ ಸತ್ತ್ವವು ಅತ ವಾಗಿದ್ದಿತು. ಆಳವಾದ ಜ್ಞಾನದಲ್ಲಿಯೂ, ಸಾಧಿಸಿದ ಕೃತಿ ವಿಸ್ತಾರದಲ್ಲಿಯೂ ಅವರ ಸಮಕಾಲೀನರಲ್ಲಿ ಯಾರೂ ಅವರ ಸರಿಗಟ್ಟುವಂತೆ ಇರಲಿಲ್ಲ. ಬೆಳಕಿಗೆ ಬಂದ ಅವರ ಕೃತಿಗಳು ಉಚ್ಚ ಮಟ್ಟದುವುಗಳಾಗಿದ್ದರೂ ಅವರ ಬೌದ್ಧಿಕಶಕ್ತಿಯ ಬಗ್ಗೆ ಸಮ ಸಮರ್ಪಕವಾದ ಚಿತ್ರವನ್ನು ಕೊಡಲಾರವು. ಅವರು ತಮ್ಮ ಹಿ ಅಸಂಖ್ಯ ವೈಜ್ಞಾನಿಕ ಪ್ರಬಂಧಗಳನ್ನೊಳಗೊಂಡ ಲೇಖನಗಳನ ಬಿಟ್ಟುಹೋದರು. ಈ ಲೇಖನಗಳಿಂದ ಅವರು, ತಮ್ಮ ಕಾಲಕ್ಕಿಂತಲ ವಿಜ್ಞಾನದಲ್ಲಿ ಅತಿ ಮುಂದುವರಿದವರಾಗಿದ್ದರೆಂದು ತಿಳಿದುಬರುತ್ತ ಅವರು ಉಷ್ಣತೆ ಮತ್ತು ವಿದ್ಯುತ್ತುಗಳ ಬಗೆಗೆ ಬರೆದ ಟಿಪ್ಪಣಿಗ ಪೂರ್ಣ ಸಂಶೋಧನೆಗಳಾಗಿರದಿದ್ದರೂ, ಅವುಗಳಲ್ಲಿ ಸಂಶೋಧನೆ ಗುಣಗಳು ಕಂಡುಬರುತ್ತವೆ. ಅವುಗಳ ಸಹಾಯದಿಂದಲೇ ತರುವ ಯವ ಸಂಶೋಧಕರು ಹೊಸ ಶೋಧನೆಗಳನ್ನು ಮಾಡಿದರು.

ಒಟ್ಟಿನಲ್ಲಿ, ಕ್ಯಾವೆಂಡಿಷರು ವಿಜ್ಞಾನಕ್ಷೇತ್ರದಲ್ಲಿ ತಮ್ಮ ಅಪಾ ವಾದ ಸೇವೆಯನ್ನು ಸಲ್ಲಿಸಿದರು. ಭೂಮಿಯ ತೂಕವನ್ನು ಕಂ ಡಿಡಿದರು; ಗಾಳಿಯಲ್ಲಿರುವ ಅವಯವಗಳ ಪ್ರಮಾಣಗಳನ್ನು ಸ್ಥಿ ಪಡಿಸಿದರು; ಉಷ್ಣದ ನಿಯಮಗಳ ಪರಿಮಾಣಸಂಬಂಧವ ಅಧ್ಯಯನದಲ್ಲಿ ತೊಡಗಿ, ಅನೇಕ ಸಂಶೋಧನೆಗಳನ್ನು ಮಾಡಿದ ಮತ್ತು ಕೊನೆಯದಾಗಿ ನೀರು, ಹೈಡ್ರೋಜನ್ ಮತ್ತು ಆಕ್ಸಿಜನ ಒಂದು ಸಂಯುಕ್ತವಾಗಿದೆಯೆಂದೂ, ಇವುಗಳು ನೀರಿನಲ್ಲಿ ೨: ಗಾತ್ರದಲ್ಲಿ ಸಂಯೋಗ ಹೊಂದುತ್ತವೆಯೆಂದೂ ತೋರಿಸಿಕೊಟ್ಟರ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಮಹಾನುಭಾವರು

(ಸಣ್ಣಕತೆ—ಸತ್ಯಕಥೆ)

ಶ್ರೀ. 'ಸಂಗೀತ' ಕೂಡ್ಲಿಗಿ

卐

ಮಾನವತೆ ಎಂದರೆ ಹೃದಯಧರ್ಮ, ಎಲ್ಲ ಬಗೆಯ ಅಭಿಮಾನ-ದುರಭಿಮಾನಗಳನ್ನೂ ಮೀರಿ ನಿಂತಿರುವುದು. ಸಿ. ಐ. ಡಿ. ರಂಗಣ್ಣ, ಗುಂಟೂರಿನ ಆಂಧ್ರಮಹನೀಯರು—ಇಂತಹ ವ್ಯಕ್ತಿಗಳು ಮಾನವರಲ್ಲ; ದೇವತೆಗಳು!

卐

"ಈ ಕರ್ನಾಟಕರೇನೋ ಬಹಳ ಗಲಾಟೆ ಮಾಡುತ್ತಾ ಇದ್ದಾರೆ. ಸುಂದರರಾಯರು ಕರಿಯ ನಿಶಾನಿಯ ಪ್ರದರ್ಶನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರಂತೆ. ಅವರ ಕರಿಯ ನಿಶಾನಿಯ ಸಂಭ್ರಮ ಈಗಲ್ಲ; ನಾಳೆ ಅವರ ಗುಟ್ಟು ರಟ್ಟುಮಾಡಿದರೆ ತೀರಿತದೆ. ಸುದರ್ಶನರಿಗೆ ಆಶ್ರಯ ಕೊಟ್ಟಿರುವ ಸುದ್ದಿಯನ್ನು ಬಯಲಿಗೆ ಹಾಕಿದರೆ ಆಗ—"

ಆಂಧ್ರಮಹಾಸಭೆಯ ಕಾರ್ಯಕಾರಿಣೀ ಸಮಿತಿಯ ಸಮಾವೇಶದಲ್ಲಿ, ಒರ್ವ ಸದಸ್ಯನು ಆವೇಶವಶದಿಂದ ನುಡಿದನು.

ಅಲ್ಲಿಯೆ ಆಲೋಚನಾಪರವಶನಾಗಿ ಕುಳಿತಿದ್ದ ಗುಂಟೂರಿನ ಪ್ರತಿನಿಧಿಯ ಕಿವಿಗೆ ಈ ಮಾತುಗಳು, ಕಾದ ಕಬ್ಬಿಣದ ಕಡಲೆಗಳಂತೆ ತಾಗಿದುವು; ಅವರು ಛಟ್ಟನೆದ್ದು :

"ಏನ್ರೀ ಅದು ನೀವು ನುಡಿಯುತ್ತಿರುವುದು? ಆ ಮಹಾನುಭಾವರು ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಜೀವದ ಹಂಗನ್ನು ತೊರೆದು ಹೆಣಗಾಡುತ್ತಿರುವಾಗ, ನೀವು ಈ ಕ್ಷುಲ್ಲಕ ಪ್ರಾಂತೀಯವಾದದ ಬಗಳದಲ್ಲಿ ಬಿದ್ದು, ಅವರ ದೇಶಾಭಿಮಾನಯುಕ್ತವಾದ ಚಟುವಟಿಕೆಗಳಿಗೆ ಸಹಾಯಮಾಡುವವರ ಗುಟ್ಟನ್ನು ರಟ್ಟುಮಾಡುವಿರಾ? ಛೆ! ಇದು ಎಂದಿಗೂ ತರವಲ್ಲ!" ಎಂದು ಖಡಾಖಂಡಿತವಾಗಿ ನುಡಿದರು.

ಆದರೂ ಆ ಗುಂಟೂರಿನ ಪ್ರತಿನಿಧಿಯ ಮನಸ್ಸಿನಲ್ಲಿ ಸಮಾಧಾನವು ಉಳಿಯಲಿಲ್ಲ. ಸಭೆಯವರ ಅನುಮಾನಕ್ಕೆ ಆಸ್ಪದವೀಯದೆ, ಸಮಯವನ್ನು ನೋಡಿಕೊಂಡು ಅವರು ಸಭಾಮಂಟಪದಿಂದ ಹೊರಬಿದ್ದು ಊರೊಳಗೆ ಬಂದರು. ಸಭೆಯಲ್ಲಿ ಎತ್ತಿದ ಹೆಸರು ತಮಗೆ ಪರಿಚಿತವಾದುದಾಗಿದ್ದಿತು. ನೇರವಾಗಿ ತೇರಿನ ಬಜಾರಿಗೆ ಬಂದು, ಆ ಹೆಸರಿನ ವ್ಯಕ್ತಿಯ ಬಗೆಗೆ ವಿಚಾರಿಸಿದರು. ಹಾಗೆಯೆ ಅವರು ಒಂದು ವೈದ್ಯಶಾಲೆಯ ಮುಂದೆ ಬಂದುನಿಂತರು. ಅದರ ಬಾಗಿಲು ಹಾಕಿದ್ದಿತು. ಅಂದು ಆದಿತ್ಯವಾರವಾದುದರಿಂದ, ವೈದ್ಯರು ಮಧ್ಯಾಹ್ನವೇ ಅಂದು ಕೇಸುಗಳನ್ನು ನೋಡಿಕೊಂಡು ಮನೆಗೆ ಹೋಗಿಬಿಟ್ಟಿದ್ದರು.

ಅಲ್ಲಿಂದ ನೇರವಾಗಿ, ಆ ಮಹಾಶಯರು ಸತ್ಯನಾರಾಯಣ ಪೇಟೆಗೆ ಹೋದರು. ಅವರು ಜಟಕಾದಿಂದಿಳಿಯುತ್ತಿರುವಾಗಲೆ, ವೈದ್ಯರು ತಮ್ಮ ನೌಕರನಿಗೆ ಸೂಚನೆಗಳನ್ನಿತ್ತು ಕಳುಹಲು ಮನೆಯೊಳಗಿಂದ ಬಂದರು.

ಹೊಸಮುಖವನ್ನು ಕಂಡು ಅವರು ಬಂದ ಕಾರಣವನ್ನು ಕೇಳಿದರು.

"ನನ್ನ ಮಿತ್ರನ ಹೆಸರು ಸುಂದರರಾಯರೆಂದು. ಅವರೂ ನಾನೂ ಜೊತೆಯಲ್ಲಿಯೆ ಆರು ತಿಂಗಳು ಜೈಲಿನಲ್ಲಿದ್ದೆವು. ಅವರನ್ನು ಕಾಣಲು ಬಂದಿದ್ದೆ. ಬಜಾರಿನಲ್ಲಿ ವಿಚಾರಿಸಲು, ತಮ್ಮ ವೈದ್ಯಶಾಲೆಯನ್ನು ತೋರಿಸಿದರು. ಅಲ್ಲಿಂದ ಇಲ್ಲಿಗೆ ಬಂದೆ. ಆದರೆ......"

"ದಯೆಮಾಡಿ ಕ್ಷಮಿಸಿ, ನಿಮಗೆ ವೃಥಾ ತೊಂದರೆಯಾಯಿತು. ನನ್ನ ಹೆಸರಿನವರೇ ಇನ್ನೊಬ್ಬರಿರುವರು. ಅವರು. ಕಂಬಳಿಬಜಾರಿನಲ್ಲಿರುವರು. ನನ್ನ ನೌಕರನನ್ನು ಕಳುಹುತ್ತೇನೆ." ಎಂದು "ಲೋ ಹನುಮಾ, ಎಂದೂ ಬಾರದ ನೀನು ಇಂದು ಬಂದದ್ದು ಒಳಿತಾಯ್ತು. ಇವರೊಡನೆ ಹೋಗಿ, ಆ ಸುಂದರರಾಯರ ಮನೆಯನ್ನು ತೋರಿಸು!" ಎಂದರು.

ವೈದ್ಯರಿಗೆ ಕೃತಜ್ಞತೆಗಳನ್ನರ್ಪಿಸಿ, ಅಲ್ಲಿಂದ ಆ ಮಹಾಶಯರು ಹನುಮನೊಡನೆ ಕಂಬಳಿಬಜಾರಿಗೆ ಬಂದರು. ವಿಚಾರಿಸಲಾಗಿ ಆಗಿನ್ನೂ ಮನೆಯವರನ್ನು ಕರೆದುಕೊಂಡು ಸಿನೆಮಾ ನೋಡಲು ಹೋಗಿರುವರೆಂದು ತಿಳಿದುಬಂದಿತು. "ಸಣ್ಣದೀಪ ನೋಡಿ ನಾನು ಹಾಗೆ ಅನುಕೊಂಡೆ" ಎಂದು ಹನುಮನೆಂದ.

ಆ ಮಹಾಶಯರು ಬಹಳ ನಿರಾಶೆಪಟ್ಟರೂ, ಮನಸ್ಸಿನಲ್ಲಿಯ ದುಗುಡವನ್ನು ವೈದ್ಯರ ನೌಕರನೆದುರಿಗೆ ತೋರಗೊಡದೆ, ಅವನಿಗೆ ಧನ್ಯವಾದಗಳನ್ನರ್ಪಿಸಿ, ಚಹಾಕುಡಿಯೆಂದು ಉಪಚರಿಸಿ, ಅವನನ್ನು ಬೀಳ್ಕೊಟ್ಟರು. ಅವನ ಹಿಂದೆಯೆ ಯೋಚನಾಮಗ್ನರಾಗಿ, ತಳಮಳಿಸುವ ಮನಸ್ಸಿನಿಂದ ತೆರಳಿ ಆ ಬಜಾರಿನ ಪಶ್ಚಿಮಾಂತ್ಯದವರೆಗೂ ಬಂದು, ಚೌಪಥದಲ್ಲಿ ನಿಂತರು. "ಸಿನೆಮಾಕ್ಕೆ ಎಂದರೆ ಯಾವ ಸಿನೆಮಾಕ್ಕೆಂದು ತಿಳಿಯಲಿಲ್ಲವಲ್ಲ! ಸರಿ, ಅವರು ತಿರುಗಿ ಬಂದಮೇಲೆ ಕಾಣಬೇಕು. ಅಲ್ಲಿಯವರೆಗೂ ಕಾಯುತ್ತಿರಬೇಕು!" ಎಂದು ನಿರ್ಧರಿಸಿ ತಮ್ಮ ಊಟವನ್ನು ಮುಗಿಸಿಕೊಂಡು, ಆಂಧ್ರ ಮಹಾಸಭಾಮಂಟಪವನ್ನು ಹೊಕ್ಕು, ಅಲ್ಲಿಯ ಕಾರ್ಯಕಲಾಪಗಳನ್ನು ಪರಿಕಿಸುತ್ತಿದ್ದರು.

ಅಲ್ಲಿ ನೆರೆದ ಉತ್ಸಾಹೀ ತರುಣರಲ್ಲಿ ಒರ್ವರು ಕೌಲುಬಜಾರಿನ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರಾಗಿದ್ದರು. ಅವರಲ್ಲಿಗೆ ಸುದರ್ಶನರ ಭಾವಚಿತ್ರವು ಕಳುಹಲ್ಪಟ್ಟಿದ್ದಿತು. ಅವರನ್ನು ಹಿಡಿದುಕೊಟ್ಟವರಿಗೆ ೧೦೦೦ ರೂಪಾಯಿಗಳ ಬಹುಮಾನ ಕೊಡಲ್ಪಡುವುದೆಂದಿದ್ದಿತು. ಆ ಸಭೆಯಲ್ಲಿ ನಡೆದ ಸಂಭಾಷಣೆಯಿಂದ, ಗುಂಟೂರಿನ ಮಹಾಶಯರ ಮನಸ್ಸು ಮತ್ತಿಷ್ಟು ವಿಕಲತೆಯನ್ನು ಪಡೆಯಿತು. ಸಭಿಕರೆಮರಿಗೆ ತಮ್ಮ ವ್ಯಥೆಯನ್ನು ಬಹಿರಂಗಪಡಿಸದೆ, ಅಲ್ಲಿಂದ ಉಚಿತ ಸಂದರ್ಭವನ್ನು ದೊರಕಿಸಿಕೊಂಡು ಸರಿದುಕೊಂಡು, ಸಂಶಯಕ್ಕೆ ಎಡೆಗೊಡದೆ ದಾರಿಯನ್ನು ಹಿಡಿದರು.

ಊರಲ್ಲಿ ಅತ್ತಲಿತ್ತ ಅಲೆದಾಡಿ, ಸಿನೆಮಾ ಬಿಡುವ ಸಮಯಕ್ಕೆ ಸರಿಯಾಗಿ ಪಾರ್ಕಿನಿಂದ ಹೊರಟು, ಸುಂದರರಾಯರ ಮನೆಯನ್ನು ತಲುಪಿದರು. ದೂರದಿಂದಲೇನೇ ಸುಂದರರಾಯರ ಮನೆಯ ಮುಂದೆ ದೊಡ್ಡ ದೀಪವು ಬೆಳಕನ್ನು ಬೀರುತ್ತಿರುವುದನ್ನು ಕಂಡು ಹರ್ಷಿತರಾಗಿ, ತ್ವರಿತಗತಿಯಿಂದ ಅವರ ಮನೆಯನ್ನು ಸೇರಿ "ಸುಂದರರಾಯರೇ" ಎಂದು ಕಾತರಭಾವೋದ್ರಿಕ್ತ ಧ್ವನಿಯಲ್ಲಿ ಕೂಗಿದರು. ಧ್ವನಿಯು ಸ್ವಲ್ಪ ಏರಿತ್ತೇನೋ—ಎಂದು ಅವರಿಗೇನೇ ಎನಿಸಿತು.

ಸ್ವಲ್ಪಹೊತ್ತಿಗೆ ಒರ್ವ ಯುವತಿಯ ಮುಖವು ಮಹಡಿಯ ಮುಂದಣ ಕಟಾಂಜನದ ಮೇಲೆ ಕಾಣಿಸಿಕೊಂಡಿತು.

"ಸುಂದರರಾಯರು ಇದ್ದಾರೇನ್ರಿ?" ಎಂದು ಆ ಮಹಾಶಯರು ಕೇಳಿದರು.

"ಇದ್ದಾರೆ ಬರುತ್ತಾರೆ, ಕುಳಿತುಕೊಳ್ಳಿ! ಹಿತ್ತಲಿಗೆ ಹೋಗಿದ್ದಾರೆ." ಎಂದುತ್ತರ ಬಂದಿತು.

ಸ್ವಲ್ಪ ಸಮಯದ ನಂತರ ಸುಂದರರಾಯರು ಕೆಳಗಿಳಿದು ಬಂದರು.

ಶಿಷ್ಟಾಚಾರದನಂತರ ಸುಂದರರಾಯರು ಆಗಂತುಕರ ಹೆಸರನ್ನು ಕೇಳಬೇಕೆಂದಿರುವುದರೊಳಗೆಯೆ ಅವರು "ಸುಂದರರಾಯರೆ, ನಾನು ಸೂರ್ಯನಾರಾಯಣ! ತಮಗೆ ಜ್ಞಾಪಕವಿದೆಯೊ ಇಲ್ಲವೊ; ನಾನೂ ತಾವೂ ೧೯೩೨ನೆಯ ಸ್ವತಂತ್ರಸಂಗ್ರಾಮದಲ್ಲಿ ತುರಂಗದಲ್ಲಿ ಒಂದೇ ಕೋಣೆಯಲ್ಲಿದ್ದೆವು."

ರಾಯರು ಸ್ವಲ್ಪ ಹೊತ್ತು ಯೋಚನೆಮಾಡಿದರು. ೧೨ ವರುಷಗಳ ಹಿಂದಿನ ಸನ್ನಿವೇಶ. ಅಂದು ತನ್ನೊಡನೆ, ಆರುತಿಂಗಳು ಜೊತೆಯ ಕೈದಿಯಾಗಿದ್ದ ಸೂರ್ಯನಾರಾಯಣಗುಪ್ತರ ನೆನಪನ್ನು ಮಾಡಿಕೊಂಡರು. ಇದೀಗ ತನ್ನೆದುರಿಗೆ ನಿಂತಿದ್ದ ವ್ಯಕ್ತಿಗೂ ಆ ಅಂದಿನ ತನ್ನ ಗೆಳೆಯನಿಗೂ ಬಹಳ ಅಂತರವು ಕಂಡರೂ, ಕಾಲದ ಪರಿಣಾಮವನ್ನು ಲೆಕ್ಕ ಮಾಡಿಕೊಂಡು ನೋಡಿದಾಗ, ರಾಯರಿಗೆ ಸೂರ್ಯನಾರಾಯಣಗುಪ್ತರ ಗುರುತು ಹತ್ತಿತು. ಮಹಾದೇಶಾಭಿಮಾನಿಗಳಾದ ಗುಪ್ತರ ಮೇಲೆ ರಾಯರಿಗೆ ಅತ್ಯಂತ ಆದರವಿದ್ದಿತು. ಒಮ್ಮೆ ಜೈಲಿನಲ್ಲಿ ರಾಜಕೀಯ ಕಾಂಗ್ರೆಸ್ ಕೈದಿಗಳನ್ನು ಸಾಲಾಗಿ ನಿಲ್ಲಿಸಿ, ಅವರ ಎರಡು ಸಾಲುಗಳ ನಡುವೆ ಕ್ರಾಂತಿಕಾರ ಕೈದಿಗಳನ್ನು ನಡೆಸಿಕೊಂಡು ಹೋಗುತ್ತ, ಅವರನ್ನು ರಕ್ತಸುರಿಯುವಂತೆ ಚಾಬೂಕಿನಿಂದ ಹೊಡೆಯುತ್ತ, ಜೈಲಿನ ಅಧಿಕಾರಿಗಳು ನಡೆದಿದ್ದರು. ರಾಜಕೀಯ ಕಾಂಗ್ರೆಸ್ ಕೈದಿಗಳಲ್ಲಿ ಭಯವನ್ನು ಉತ್ಪನ್ನಮಾಡುವುದೇ ಅವರ ಉದ್ದೇಶ. ಒಬ್ಬೊಬ್ಬ ಕೈದಿಯ ಹಿಂದೆ ಒಬ್ಬೊಬ್ಬ ಜೈಲ್ ವಾರ್ಡರ್ ನಿಂತಿದ್ದನು. ಯಾರಾದರೂ ಸಹಾನುಭೂತಿಯನ್ನು ತೋರಿಸಿದರೆ ಅವರನ್ನು ಸಾಯಬಡಿಯುವುದೆಂದು ಆಜ್ಞೆಯಿದ್ದಿತು,

ಈ ದೃಶ್ಯವು ಅತಿದಾರುಣವಾಗಿದ್ದಿತು. ದಾರುಣತೆ ಉಲ್ಬಣಾವಸ್ಥೆಗೇರಿತು. ಸೂರ್ಯನಾರಾಯಣರಿಂದ ಅದನ್ನು ಸಹಿಸಲಾಗಲಿಲ್ಲ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಥಟ್ಟನೆ ಮುಂದಕ್ಕೆ ನುಗ್ಗಿ, ಆ ಕ್ರಾಂತಿಕಾರರಿಗೂ ಆ ಚಾಬೂಕುದಾರಿಗೂ ನಡುವೆ ಧುಮುಕಿದರು. ಆಗ ಅಧಿಕಾರಿಗಳ ಕ್ರೋಧವೆಲ್ಲ ಅವ ಮೇಲೆ ಮುತ್ತಿಗೆ ಹಾಕಿತು; ಆದರೆ ಗುಪ್ತರು ಜುಮ್ಮೆನ್ನಲಿಲ್ಲ ಕೊನೆಗೆ ಪ್ರಜ್ಞೆತಪ್ಪಿ ಬೀಳುತ್ತಿದ್ದರು; ಆಗ ಸುಂದರರಾಯರು ತಡೆಯಲಾರದೆ ಅಲ್ಲಿಗೆ ತೂಗಿಬಿದ್ದು, ಅವರನ್ನು ಹಿಡಿದೆತ್ತಿದ್ದರು. ಎಚ್ಚತ್ತಾ ಇಬ್ಬರೂ ಜೈಲಿನ ಆಸ್ಪತ್ರೆಯಲ್ಲಿದ್ದರು.

ಬಿಡುಗಡೆಯಾದನಂತರ ಒಂದೆರಡು ವರುಷಗಳ ವರೆಗೂ ಇವ ನಡುವೆ ಪತ್ರವ್ಯವಹಾರವಿದ್ದಿತು. ಬರು-ಬರುತ್ತ ಜೀವನಪ್ರವಾಹ ಸೆಳವಿಗೆ ಬಿದ್ದು ಪಾರಸ್ಪರಿಕ ಕ್ಷೇಮ-ಯೋಗಗಳ ವಿಚಾರವು ತಪ್ಪಿ ಹೋಗಿದ್ದಿತು.

"ಬಹುಶಃ ತಮಗೆ ನನ್ನ ಗುರುತು ಸಿಗಲಿಲ್ಲವೇನೊ?" ಎಂದ ಸೂರ್ಯನಾರಾಯಣರು ಕೇಳಿದರು.

"ಛೆ! ಛೆ! ಸಿಗದೇ ಏನ್ರೀ ಗುಪ್ತರವರೆ" ಎಂದು ರಾಯರ ಹನ್ನೆರಡು ವರುಷಗಳ ಅವಾಂತರವನ್ನು ಕೊನೆಗಾಣಿಸಲು ಯತ್ನಿಸಿದರು. ಆದರೂ ಗುಪ್ತರಿಗೆ ರಾಯರ ಮೊದಲಿನ ಸಲುಗೆಯು ಕಾಣಲಿಲ್ಲ. ಮನಸ್ಸಿಗೆ ಸ್ವಲ್ಪ ವ್ಯಥೆಯಾಯಿತು. ಆದರೂ ಅವರು ತಾ ಬಂದ ಕಾರ್ಯದ ಮಹತ್ತ್ವದ ದೃಷ್ಟಿಯಿಂದ ತಮ್ಮ ವೈಯಕ್ತಿ ಮಾನಸಿಕ ವ್ಯವಹಾರದ ವ್ಯಥಾಪೂರ್ಣಪರಿಣಾಮವನ್ನು ಹತ್ತಿಟ್ಟು ಕೊಂಡು ಕೇಳಿದರು:

"ರಾಯರೇ, ಸುದರ್ಶನರು ತಮ್ಮ ಮನೆಯಲ್ಲಿದ್ದಾರೆಯೇ?

ರಾಯರು ಹೌಹಾರಿಹೋದರು. ಏನೆಂದು ಉತ್ತರವನ್ನೀಯಲು ತೋಚಲಿಲ್ಲ. ಆ ಮಧ್ಯರಾತ್ರಿಯಲ್ಲಿ ತಮ್ಮನ್ನು ಕೇಳಿಕೊಂಡು ಬಂದು ದನ್ನು ಕೇಳಿಯೇ ಅವರು ಜಾಗೃತರಾಗಿದ್ದರು. ಬಂದವರಾರೆ ಎಂಬುದನ್ನು ಸಾಧ್ಯವಾದರೆ ತಿಳಿದುಕೊಳ್ಳಲೆಂದೂ ತಮ್ಮ ಸಹ ಧರ್ಮಿಣಿಯನ್ನು ಕಳುಹಿದ್ದರು.

ಸುದರ್ಶನರು ಬ್ರಿಟಿಷ್ ಸರಕಾರವನ್ನು ಪ್ರತಿಭಟಿಸಿ, ಗುಪ್ತ ಗಾಮಿಗಳಾಗಿ ಚಳುವಳಿಯ ಗಂಗೆಗೆ ಭಗೀರಥರಂತೆ ಪಥದರ್ಶನಪಸ

ನೋಡುತ್ತಲಿದ್ದು, ಬಳ್ಳಾರಿಯ ಚಟುವಟಿಕೆಗಳನ್ನು ಸೂತ್ರೀಕರಿಸಲು ಬಂದಾಗ ಅವರಿಗೆ ವಿಷಮಶೀತಜ್ವರವು ಬಂದಿತ್ತು. ಆಗ ಅವರು ಸಿದ್ಧಯ್ಯನವರ ಮನೆಯಲ್ಲಿ ನೆಲಸಿದ್ದರು.

ಬಹಳ ಯೋಚಿಸಿ ಡಾಕ್ಟರ್ ಸಿರಿಪತಿಯವರನ್ನು ಸುಂದರರಾಯರೂ ಸಿದ್ಧಯ್ಯನವರೂ ಭೇಟಿಯಾಗಿ ಸನ್ನಿವೇಶವನ್ನು ವಿವರಿಸಿದ್ದರು. ಡಾಕ್ಟರರು ರೋಗಿಯ ಹೆಸರನ್ನು ಕೇಳಿ ಥಟ್ಟನೆ ಎದ್ದುನಿಂತು ಹೇಳಿದ್ದರು: “ಸ್ವಾಮೀ, ತಾವು ಇಷ್ಟೆಲ್ಲ ದೈನ್ಯವನ್ನು ತೋರಿಸಬಹುದೆ? ಸುದರ್ಶನರ ಹೆಸರು ಮಂತ್ರದಂತಿದೆ. ಅವರು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ನಮ್ಮ ದೇಶದ ಬಿಡುಗಡೆಗೆ ಹೆಣಗಾಡುತ್ತಿರಲು, ನಮ್ಮಂಥ ಸ್ವಾರ್ಥಿಗಳಿಂದ ಅವರ ಸೇವೆಯನ್ನಾದರೂ ಮಾಡಲಾಗದಿದ್ದರೆ, ನಾವು ಬಾಳಿ ವ್ಯರ್ಥ! ನಡೆಯಿರಿ ತಾವು ಮುಂದೆ; ನಾನು ಹಿಂದೆಯೇ ಬರುವೆ ನನ್ನ ಪುಣ್ಯಫಲಿಸಿತು ಇಂದಿಗೆ!” ಎಂದಿದ್ದರು.

ಸುಂದರರಾಯರೂ ಸಿದ್ಧಯ್ಯನವರೂ ದವಾಖಾನೆಯಿಂದ ಹೊರಬರುತ್ತ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡಿದ್ದರು.

ಬರುಬರುತ್ತ ಸುದರ್ಶನರ ಜ್ವರವು ತೀವ್ರಗಾಮಿಯಾಗಿದ್ದಿತು. ಅದು ತನ್ನ ಪೂರ್ಣಾವಧಿಯನ್ನು ಮುಟ್ಟಿತ್ತು. ಡಾಕ್ಟರರು ಬಹಳ ಯೋಚನೆಗೀಡಾಗಿದ್ದರು

ಇದು ಹೀಗಿರಲು, ಓಣಿಯಲ್ಲಿಯ ಜನಕ್ಕೆ ಸಿದ್ಧಯ್ಯನವರ ಮನೆಗೆ ಡಾಕ್ಟರ್ ಸಿರಿಪತಿಯವರು ನಿತ್ಯವೂ ಬರುತ್ತಲಿದ್ದುದರಿಂದ ಶಂಕೆಯು ಉತ್ಪನ್ನವಾಗತೊಡಗಿದ್ದಿತು. ರಾಯರೂ ಸಿದ್ಧಯ್ಯನವರೂ ಯೋಚಿಸಿ, ಡಾಕ್ಟರರನ್ನು ಭೇಟಿಯಾಗಿದ್ದರು “ಅವರನ್ನು ಕದಲಿಸುವಂತೆ ಇಲ್ಲ ಇಲ್ಲರಿ! ಅವಧಿಮೀರಿದೆ. ಉಷ್ಣೋಗ್ರತೆ ಸಹಜಸ್ಥಿತಿಗೆ ಇಳಿದಿಲ್ಲ ಜ್ವರವು ಮರುಕಳಿಸಿದೆ. ಬಹಳ ಅಪಾಯಕರ! ಮತ್ತೆ ಅವರೆದುರಿಗೆ ಎನ್ನಬೇಡಿ. ಜೀವದ್ದೇ ಭಯವಿದೆ!” ಎಂದು ಡಾಕ್ಟರರು ಹೇಳಿದ್ದರು.

ರಾಯರ ಮುಖ ಕಪ್ಪಿಟ್ಟಿದ್ದಿತು. ದೀರ್ಘಾಲೋಚನೆಮಾಡಿ, ದೇವರೇ ಗತಿಯೆಂದು ತಮ್ಮ ನಿರ್ಧಾರವನ್ನು ಡಾಕ್ಟರರಿಗೆ ಹೇಳಿದ್ದರು. ಅನಿವಾರ್ಯ ಸನ್ನಿವೇಶದಲ್ಲಿ ಬೇರೆಯ ಮಾರ್ಗವನ್ನು ಕಾಣದೆ ಡಾಕ್ಟರರು ಒಪ್ಪಿದ್ದರು.

ಆ ರಾತ್ರಿಯೇ ಸುದರ್ಶನರನ್ನು ವಕೀಲ ಸತ್ಯನಾರಾಯಣ ರಾಯರ ಮನೆಗೆ ಸಾಗಿಸಿದ್ದರು. ವಕೀಲರು ಊರಹೊರಗೆ ಸ್ಮಶಾನದ ಪಕ್ಕದಲ್ಲೇ ಇರುವ ಒಂದು ತೋಟದಲ್ಲಿದ್ದರು ಅಲ್ಲಿ ಜನರ ಸಂಚಾರವು ಹಗಲಿನಲ್ಲಿಯೂ ಇರುತ್ತಿರಲಿಲ್ಲ. ಆದುದರಿಂದ, ಯಾವ ವಿಧವಾದ ಭಯವೂ ಇರಲಿಲ್ಲ. ಡಾಕ್ಟರರು ನಿತ್ಯವೂ ಸಾಯಂಕಾಲದಲ್ಲಿ ಅಲ್ಲಿಗೆ ಹೋಗಿಬರುತ್ತಿದ್ದರು. ಸುದರ್ಶನರ ದೈಹಿಕಸ್ಥಿತಿ ಬಹಳ ಶೋಚನೀಯವಾಗಿದ್ದಿತು.

ಒಂದು ದಿನ ರಾತ್ರಿಮಧ್ಯದಲ್ಲಿ ಸುದರ್ಶನರ ನಯನಗಳು ಮೇಲಕ್ಕೆಳೆದುಕೊಂಡೇ ಬಿಟ್ಟಿದ್ದುವು. ಅವರು ಗತಪ್ರಾಣರಾದರೆ, ಮಸಣಕ್ಕೆ—ಅವರ ದೇಹದ ಅಂತ್ಯಸಂಸ್ಕಾರಕ್ಕೆ— ಅದನ್ನು ಒಯ್ದರೆ, ಸ್ಪಷ್ಟವಾಗಿ ತಮ್ಮ ಗುಟ್ಟು ರಟ್ಟಾಗುವುದೆಂಬ ಆ ಶಂಕೆ ಆ ಮೂವರೂ ಗೆಳೆಯರಲ್ಲಿಯೂ ಒಡಮೂಡಿದ್ದಿತು.

ಆದರೂ ದಯಾಮಯನ ದಯೆಯಿಂದ ನಿಧಾನವಾಗಿ ಜ್ವರವ ಎರಡನೆಯ ಅವಧಿಯನ್ನು ಸುರಕ್ಷಿತವಾಗಿ ದಾಟಿಕೊಂಡರು. ಉಷ್ಣೋಗ್ರತೆ ಸಹಜಸ್ಥಿತಿಗೆ ಬಂದಿತು. ಡಾಕ್ಟರರು ದೊಡ್ಡ ನಿಟ್ಟುಸಿರುಬಿಟ್ಟು ಕೈಕಾಲು ಚಾಚಿಕೊಂಡು ತೊಡೆಗಳ ಮೇಲೆ ತಮ್ಮ ಕೈಗಳನ್ನು ಚಪ್ಪರಿಸಿದ್ದರು. ಮಿತ್ರತ್ರಯವನ್ನು ಅಭಿನಂದಿಸಿದ್ದರು ತಾವು ಪಟ್ಟ ಪರಿಶ್ರಮದ ಆಯಾಸವೆಲ್ಲ ಪರಿಹಾರವಾಯಿತು —ಎಂದಿದ್ದರು.

ಆದರೆ ಇಲ್ಲಿಗೇ ಮುಗಿದಿರಲಿಲ್ಲ ಈ ವಿಷಯ. ಡಾಕ್ಟರರು ಆ ನಿರ್ಜನಪ್ರದೇಶದಲ್ಲಿದ್ದ ಸತ್ಯನಾರಾಯಣರ ಮನೆಗೆ ನಿತ್ಯವೂ ಹೋಗಿ ಬರುತ್ತಿದ್ದುದನ್ನು ನೋಡಿ, ಹಾದಿಯಲ್ಲಿರುವ ಊರಂಚಿನಲ್ಲಿಯ ಮನೆಗಳವರಿಗೆ ಅನುಮಾನವು ತಲೆದೋರಿದ್ದಿತು. ಆದುದರಿಂದ ಮತ್ತೊಮ್ಮೆ ದೇವರ ಮೇಲೆ ಭಾರವನ್ನು ಹಾಕಿ, ಅವರನ್ನು ಅಲ್ಲಿಂದ ಸುಂದರರಾಯರ ಮನೆಗೆ ಸೇರಿಸಿದ್ದರು. ಅಲ್ಲಿ ಅವರು ಇರಲಿಕ್ಕೆ ತೊಡಗಿ ೨೫ ದಿನಗಳಾಗಿದ್ದುವು. ಸ್ವಲ್ಪ ಹಾಗೆಯೇ ನಿಧಾನವಾಗಿ ಸುದರ್ಶನರು ಓಡಿಯಾಡುತ್ತಿದ್ದರು. ಸುಂದರರಾಯರೊಡನೆ ಅಡ್ಡಾಡುತ್ತ ಊರೊಳಗಿನ ಖಾದೀಭಂಡಾರ, ಚರಖಾಸಂಘ, ಹರಿಜನಸೇವಕಸಂಘ ಮುಂತಾದುವುಗಳ ಸಂದರ್ಶನಮಾಡಿಕೊಂಡು ಬರುತ್ತಿದ್ದರು.

ಒಮ್ಮೆ ಸುಂದರರಾಯರೂ ಸುದರ್ಶನರವರೂ ಕಲೆತುಹೋಗುತ್ತಿದ್ದರು. ಅವರಿಬ್ಬರೂ ಪೋಲೀಸ್ ಸ್ಟೇಷನಿನ ಮುಂದೆಯೆ ಹಾಯ್ದು ಹೋಗುವ ಅಭ್ಯಾಸವಿಟ್ಟಿದ್ದರು. ಅಂದು ಅವರು ಮನೆಗೆ ಬರುತ್ತಿದ್ದಾಗ ಬೆಂಗಳೂರು ರೋಡಿನಿಂದ ಕಂಬಳಿಬಜಾರಿಗೆಂದು ತಿರುಗಿ, ವತ್ತಿ ಗುಂಡಪ್ಪನವರ ಅಂಗಡಿವಾಟಿನ ಮೇಲೆ, ಹಿಂದಿನಿಂದ ಯಾರೋ “ರಾಯರೇ?” ಎಂದು ಕೂಗಿದ್ದರು. ತಿರುಗಿ ನೋಡಿದರೆ C. I. D. ರಂಗಪ್ಪ, ಸುಂದರರಾಯರು ತಣ್ಣಗಾದರು, ಅಲ್ಲಿಯೇ ನಿಂತುಬಿಟ್ಟರು. ಸುದರ್ಶನರು ಮುಂದಕ್ಕೆ ಹೋಗಿದ್ದರು.

“ರಾಯರೆ, ಅವರು ಸುದರ್ಶನರಲ್ಲವೇನ್ರಿ?” ಎಂದು ಕೇಳಿದ್ದ. ಹೌದೆನ್ನಬೇಕೋ ಅಲ್ಲವೆನ್ನಬೇಕೋ ತೋಚದಂತಾಗಿದ್ದಿತು. ಆದರೂ ಕ್ಷಣಮಾತ್ರ ಯೋಚನೆಮಾಡಿ ರಾಯರು ಧೈರ್ಯಮಾಡಿ ಸತ್ಯವನ್ನೇ ಆಡಿದ್ದರು:

“ಹೌದು, ರಂಗಪ್ಪ!”

“ಅದಕ್ಕೇರಿ ಕೇಳಿದೆ. ನನಗೆ ಅನುಮಾನವಾಯಿತು. ನಮ್ಮಲ್ಲಿಗೆ ಅವರ ಫೋಟೋ ಬಂದಿತ್ತು. ನನಗೆ ಅದನ್ನು ಕೊಟ್ಟಿದ್ದಾರೆ. ಅದನ್ನು ನೋಡಿಕೊಂಡಿದ್ದೆ. ಗುರುತು ಹಚ್ಚಲು ಸಾಧ್ಯವಾಯಿತೋ ಇಲ್ಲವೋ? ನಾನು ಸರಿಯೋ? ಎಂದು ಕೇಳಿದೆ. ಅಷ್ಟೆ ಸ್ವಾಮಿ. ತಾವೇನೂ ಗಾಬರಿಯಾಗಬೇಡಿರಿ, ಅವರನ್ನು ಹಿಡಿದುಕೊಟ್ಟರೆ ನನಗೆ ೧೦೦೦ ರೂಪಾಯಿ ಕೊಡುತ್ತಾರೆ. ನಿಜ. ಆದರೆ ಸ್ವಾಮಿ ನಾನೂ ಮನುಷ್ಯ. ಇವರನ್ನು ಹಿಡಿದುಕೊಟ್ಟರೆ ನನ್ನದೊಂದು ಕುಟುಂಬ ಉದ್ಧಾರವಾದೀತು;

ಆದರೆ ಇವರು ದೇಶದ ಸಹಸ್ರಾರು ಕುಟುಂಬಗಳ ಉದ್ಧಾರಕ್ಕಾಗಿಯೇ ತಮ್ಮ ಪ್ರಾಣದ ಹಂಗನ್ನು ತೊರೆದು ದುಡಿಯುವಾಗ, ನಾನು ಮಾತ್ರ ಅಷ್ಟು ಸ್ವಾರ್ಥಿಯಾಗಲಿ? ನಾನು ಗುರುತು ಹಿಡಿಯಬಲ್ಲವನಾದೆನೆ— ಎಂದು ಕೇಳಿದೆನಷ್ಟೆ! ಹೋಗಿ ಬನ್ನಿ. ನಾನು ಬರ್ತೇನೆ!" ಎಂದು ನುಡಿದು ರಾಯರಿಗೆ ನಮಸ್ಕರಿಸಿ, ಸುದರ್ಶನರಿಗೆ ಅಲ್ಲಿಂದಲೆ ಅವರ ಬೆನ್ನಿಗೇನೇ ಕೈಮುಗಿದು ಹೊರಟುಹೋಗಿದ್ದ.

ರಾಯರ ಕಣ್ಣಲ್ಲಿ ನೀರೂರಿ ಬಂದಿದ್ದುವು. ಗಂಟಲ ಸಿರಗಳು ಉಬ್ಬಿಬಂದಿದ್ದುವು. ಏನೂ ಮಾತನಾಡಲಾರದೆ ಹೋದರು; ಅಲ್ಲಿಯೇ ನಿಂತುಬಿಟ್ಟರು. "ರಂಗಪ್ಪ ಹರಿಜನ! ಸಮಾಜವು ಅವನನ್ನು ಹೊಲೆಯನೆನ್ನುವುದು. ಅವನೆಲ್ಲಿಯ ಹೊಲೆಯ! ಅವನನ್ನು ಹಾಗೆನ್ನು-ವವರೇ ಹೊಲೆಯರು!" ಎಂದುಕೊಂಡರು.

ಅಂದಿನಿಂದ ಅವರಿರ್ವರೂ ಬಜಾರುಗಳಲ್ಲಿ ಹೋಗುತ್ತಿದ್ದಾಗ, ಎಲ್ಲಿಯಾದರೂ ರಂಗಪ್ಪನ ಕಣ್ಣಿಗೆ ಬಿದ್ದರೆ ಆತನು ಶ್ರದ್ಧಾಭರದಿಂದ ತಲೆಬಾಗಿ ನಮಸ್ಕರಿಸುತ್ತಿದ್ದನು. ಇದನ್ನು ಕಂಡು, ವಿಷಯವನ್ನರಿತು ಸುದರ್ಶನರು ರಾಯರಿಗೆ ಹೇಳಿದ್ದರು: "ರಂಗಪ್ಪನು ಮಹಾನುಭಾವ. ಆತನ ದೇಶಭಕ್ತಿಯು ಅನನ್ಯವಾದುದು. ಆದರೆ ಆತನ ಶ್ರದ್ಧೆಯಿಂದ ನನ್ನ ಕಾರ್ಯಕ್ಕೆ ವಿಘ್ನವು ಬರಬಹುದು. ಆತನ ನಮಸ್ಕಾರದಿಂದ ಜನರಲ್ಲಿ ನನ್ನ ಬಗ್ಗೆ ಅನುಮಾನವು ಜಾಗ್ರತವಾದೀತು! ದಯೆಮಾಡಿ ಹಾಗೆ ಮಾಡದಂತೆ ಆತನಿಗೆ ಹೇಳಿರಿ" ಎಂದಿದ್ದರು.

ಅಂದು ರಂಗಪ್ಪನು "ಇವರು ಸುದರ್ಶನರಲ್ಲವೇನ್ರಿ?" ಎಂದು ಕೇಳಿದುದು ಇಂದು ರಾಯರಿಗೆ ನೆನಪಾಯಿತು. ಅಂದು ಅವರು ನಿಜವನ್ನು ಹೇಳಿದ್ದರು. ರಂಗಪ್ಪನು ಸರಕಾರಿಯ ನೌಕರನಾಗಿದ್ದರೂ ಅವನ ದೇಶಾಭಿಮಾನವಿಷ್ಟಿದ್ದಿತೆಂದು ತಿಳಿದಿದ್ದಿಲ್ಲ; ಹೆದರಿದ್ದರು; ಆದರೆ ರಂಗಪ್ಪನ ಭವ್ಯಗುಣವು ಅವರನ್ನು ಕಾಪಾಡಿದ್ದಿತು; ಅವರ ಸತ್ಯಕ್ಕೆ ಮನ್ನಣೆಯನ್ನು ಕೊಟ್ಟಿದ್ದಿತು.

ಇಂದು ಅಂತಹದೇ ಸನ್ನಿವೇಶ ಬಂದಿದೆ. ಆ ಸಮಯದಲ್ಲಿ ತಮ್ಮ ಮನೆಗೆ ಬಂದು ಯಾರೋ ತಮ್ಮನ್ನು ಕೇಳಿದೊಡನೆಯೆ, ರಾಯರು ಅನೇಕ ವಿಚಾರಗಳನ್ನು ವಿದ್ಯುದ್ವೇಗದಲ್ಲಿ ಮಾಡಿದ್ದರು. ರಂಗಪ್ಪ-ನೇನಾದರೂ ತನ್ನ ನಿರ್ಧಾರವನ್ನು ಸಡಿಲಿಸಿಕೊಂಡನೆ? ಅಥವಾ ಯಾರಿಗಾದರೂ ತಿಳಿದುಬಂದು ಪೋಲೀಸರಿಗೆ ವರದಿಯಾಗಿರ ಬಹುದೇ? ತಮ್ಮ ಮನೆಗೆ ಬಂದು ಕರೆದರೆಂದರೆ, ಪೋಲೀಸಿನವರು ತಮ್ಮ ಓಣಿಯ ಎಲ್ಲ ಮಾರ್ಗಗಳ ಮುಖಗಳನ್ನು ರಕ್ಷಿಸಿಕೊಂಡೇ ಬಂದಿರುತ್ತಾರೆ. ಆದುದರಿಂದ ಮನೆಯಿಂದ ಹೊರಟು ಓಣಿಯನ್ನು ದಾಟಿಕೊಂಡು ಹೋಗುವುದು ಯಾವ ಮಾರ್ಗದಿಂದಲೂ ದುಸ್ಸಾಧ್ಯ. ವಿವೇಕಯುಕ್ತವಲ್ಲ....ಸರಿಯೆಂದು ಯೋಚಿಸಿ, ಸ್ವಲ್ಪ ಸಮಯವನ್ನು ಪಡೆಯಲು ನೆವವನ್ನು ಹೇಳಲು ತಮ್ಮ ಪತ್ನಿಯನ್ನು ಕಳುಹಿದ್ದರು. ತಮ್ಮ ಪತ್ನಿಯು ಆಗಂತುಕರಿಗೆ ಹೇಳುವಾಗ, ತಾವು ಸುದರ್ಶನರನ್ನು ತಮ್ಮ ಮಾಳಿಗೆಯಿಂದ ಬೇರೆಡೆಗೆ ಸಾಗಿಸಿದ್ದರು.

ಈಗ ಸೂರ್ಯನಾರಾಯಣಗುಪ್ತರ ಪ್ರಶ್ನೆಗೆ ಉತ್ತರವನ್ನು ಏನೆಂದು ಕೊಡುವುದೆಂಬುದೊಂದು ಸಮಸ್ಯೆಯಾಯಿತು. ಯಾರ ಬಲ್ಲರು? ಅಂದು ದೇಶಕ್ಕಾಗಿ ಹೋರಾಡಿ ಜೈಲಿಗೆ ಹೋದ—ಅಂದು ಅಬ್ಕಾರಿ ಇಜಾರಿಗಳನ್ನು ನಿಷೇಧಿಸಿ ಬ್ರಿಟಿಷ್ ಸರಕಾರದ ಧೋರಣೆ-ಯನ್ನು ಪ್ರತಿಭಟಿಸಿ ವೀರರೆನಿಸಿಕೊಂಡ—ಮಹನೀಯರೆಷ್ಟು ಜನವಿಂದು ಅದೇ ಖಾದಿಯ ಬಟ್ಟೆಗಳ ಹೊದಿಕೆಯಲ್ಲಿ ದೇಶದ್ರೋಹವನ್ನೂ ಸ್ವಾರ್ಥಸಾಧನೆಯನ್ನೂ ಮಾಡುತ್ತಿಲ್ಲ? ಗುಪ್ತರೂ ಅಂತಹವರಲ್ಲಿ ಒರ್ವರಾಗಿದ್ದರೆ....!

ಇಷ್ಟೆಲ್ಲ ಯೋಚಿಸಲು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಿಲ್ಲ. ತಡವಾದರೆ ಅನುಮಾನಕ್ಕೆ ಕಾರಣವಾಗುತ್ತದೆ. ಆದಕ್ಕೆ ಮನೋ-ವೇಗದಲ್ಲಿ ಎಲ್ಲವನ್ನೂ ಯೋಚಿಸಿ ಮತ್ತೊಮ್ಮೆ ಸತ್ಯಕ್ಕೇನೇ ಶರಣು ಹೋದರು. ಆದರೂ ರಾಯರ ಮಾನಸಿಕತುಮುಲವು ಗುಪ್ತರಿಗೆ ಮನೋಗತವಾಯಿತು.

"ಅಹುದು, ನನ್ನಲ್ಲಿಯೇ ಇರುವರು."

"ರಾಯರೇ! ತಕ್ಷಣ ಅವರನ್ನು ಇಲ್ಲಿಂದ ಬೇರೆಡೆಗೆ ಕರೆ-ದೊಯ್ಯಬೇಕು." ಎಂದು ಆ ಸಾಯಂಕಾಲದಿಂದ ನಡೆದ ಸಂಗತಿ-ಯನ್ನೆಲ್ಲ ಅವರು ವಿವರಿಸಿದರು.

ಆದೆಲ್ಲವನ್ನು ಕೇಳಿ ರಾಯರು ಕೃತಜ್ಞತಾಭರಿತ ಹರ್ಷೋನ್ಮಾದ-ಭರದಿಂದ ನ್ಯಮರೆತರು.

"ಕ್ಷಮಿಸಿ, ಗುಪ್ತರೆ! ಇಂತಹ ಸನ್ನಿವೇಶದಲ್ಲಿ ನಾನು ಸ್ವಲ್ಪ ಎಚ್ಚರದಿಂದಲೇ ವ್ಯವಹರಿಸಬೇಕಾಗಿದ್ದುದರಿಂದ, ತಮಗೆ ಇಷ್ಟೆಲ್ಲ ತೊಂದರೆಯಾಯಿತು. ಕ್ಷಮಿಸುವಿರಲ್ಲವೆ?" ಎಂದು ಗುಪ್ತರನ್ನು ಬರಸೆಳೆದು ಅಪ್ಪಿಕೊಂಡರು.

ಗುಪ್ತರು ರಾಯರ ತೋಳತೆಕ್ಕೆಯಿಂದ ಬಿಡಿಸಿಕೊಳ್ಳುತ್ತ ಹೇಳಿ-ದರು: "ರಾಯರೆ, ತಡಮಾಡುವಂತಿಲ್ಲ. ಸುದರ್ಶನರನ್ನು ಬೆಳಗಾ-ಗುವುದರೊಳಗೆ ಈ ಊರಿಂದ ಕಾಲುತೆಗೆಸಬೇಕು.

"ಅವರು ನಾಳೆ ಹಂಪೆಗೆ ಹೋಗುವವರಿದ್ದರು!"

"ಛೆ! ಛೆ! ಅವರು ಹಗಲಾದ ಮೇಲೆ ಹೊರಗೆ ಹೋಗುವು-ದೆಂದಿಗೂ ಸುರಕ್ಷಿತವಲ್ಲ. ಬೆಳಗಿನ ಜಾವದಲ್ಲಿ ಗುಂತಕಲ್ಲ ಮಾರ್ಗ-ವಾಗಿ ಹೋಗಲಿ" "ಆಗಲಿ! ಸುತ್ತಾದರೂ ಚಿಂತಿಸುವಂತಿಲ್ಲ. ಅವರು ರಾಯಚೂರಿನ ಮೇಲೆ ಹಾಯ್ದು ಹೋಗಬೇಕಾಗುವುದು." ಎಂದ ಅಲ್ಲಿಯವರೆಗೂ ನಿಂತೇ ಇದ್ದ ಗುಪ್ತರನ್ನು ಒಳಗೆ ಕರೆದೊಯ್ದು ಕುಳ್ಳಿರಿಸಿಕೊಂಡರು.

ಆಗ ಗುಪ್ತರು "ರಾಯರೆ! ನನ್ನದೊಂದು ಪ್ರಾರ್ಥನೆ."

"ಅದೇನು ಗುಪ್ತರೆ?"

"ಏನೂ ಇಲ್ಲ! ಇಷ್ಟು ದಿನ ಬಾಳಿದುದಕ್ಕೆ ಒಂದು ಸಾರ್ಥ-ಕತೆಯನ್ನು ಮುಟ್ಟಿದಂತಾಗುವುದು. ನನಗೆ ಸುದರ್ಶನರ ದರ್ಶನವನ್ನು ಮಾಡಿಸುವಿರಾ?"

"ಓ! ಬನ್ನಿ. ಅದಕ್ಕೆ ತಾವಿಷ್ಟು ದೈನ್ಯಪಡುವುದೆ? ನೀವು ಕೇಳುವುದಕ್ಕೆ ಮುಂಚೆಯೇ ನಾನೇ ನಿಮ್ಮನ್ನು ಕರೆದುಕೊಂಡು ಹೋಗಬೇಕಾಗಿದ್ದಿತು. ಬನ್ನಿ! ಬನ್ನಿ." ಎಂದೆನ್ನುತ್ತ, ಗುಪ್ತರನ್ನು ಕೈಹಿಡಿದು ಕರೆದುಕೊಂಡು ತಮ್ಮ ಮಹಡಿಯ ಮೇಲಿಂದ ಚಕ್ರವ್ಯೂಹ-ದಂತಿದ್ದ ಹಾದಿಗಳಲ್ಲಿ ಕರೆದೊಯ್ದು, ಆಕಡೆ ಓಣಿಯಲ್ಲಿಯ ಒಂದು ಮನೆಯ ಮಹಡಿಯಲ್ಲಿಯ ಒಂದು ಚಿಕ್ಕ ಕೋಣೆಗೆ ಕರೆದೊಯ್ದರು.

ಹಾದಿಯಲ್ಲಿ ಗುಪ್ತರು. "ರಾಯರೆ, ನೀವು ಅನುಮಾನಿಸಿದ್ದಂತೆ ಪೋಲೀಸಿನವರೇ ಬಂದಿದ್ದರೂ, ಎಂದಿಗೂ ಸುದರ್ಶನರ ಪತ್ತೆ ಹತ್ತು-ತ್ತಿರಲಿಲ್ಲ. ಒಳ್ಳೆಯ ಏಳುಸುತ್ತಿನ ಕೋಟೆಯಂತಿದೆ" ಎಂದರು.

ಕೋಣೆಯ ಬಾಗಿಲಿಗೆ ಬಂದುನಿಂತು ಒಳಗೆ ದೃಷ್ಟಿಯನ್ನು ಸಾರಿದರು. ಕೋಣೆಯ ಎದುರುಗೋಡೆಯ ಬಳಿಯ, ಒಂದು Table Lamp ಇದ್ದ ಒಂದು ಮೇಜಿನ ಮುಂದಿದ್ದ ಕುರ್ಚಿಯ ಮೇಲೆ ಕುಳಿತು, ಯೋಚನಾಮಗ್ನರಾಗಿದ್ದ ಸುದರ್ಶನರ ಪ್ರಜ್ವಲಿಸುವ ಮುಖದ ತೇಜಸ್ಸನ್ನೂ ವಿದ್ಯುಲ್ಲತೆಯಂತಿದ್ದ ದೇದೀಪ್ಯಮಾನವಾದ ಕೃಶದೇಹವನ್ನೂ ಕಂಡು ಗುಪ್ತರಿಗೆ ರೋಮಾಂಚನವಾಯಿತು.

'ಎಂತೆಂತಹ ಮಹಾನುಭಾವರು ಎಷ್ಟೆಷ್ಟು ಕಷ್ಟಬಡುತ್ತಿರು ವರು ಮಾತೃಭೂಮಿಯ ಬಿಡುಗಡೆಗಾಗಿ' ಎಂಬ ಭಾವನಾವೇಶದಿಂದ ಅವರ ಹೃದಯವು ಧಡಧಡಿಸಹತ್ತಿತು. ನಿಂತಲ್ಲಿಯೇ ನೆಲದಮೇಲೆ ಉದ್ದಕ್ಕೂ ಮೈಯೊಡ್ಡಿ ನಮಸ್ಕರಿಸಿದರು.

"ರಾಯರೇ! ನಾನು ಇಂದಿಗೆ ಧನ್ಯನಾದೆ. ಬಳ್ಳಾರಿಯು ನನಗೆ ಪುಣ್ಯಪುರುಷರ ಸಂದರ್ಶನದಾಯಿಯಾದ ಪುಣ್ಯಕ್ಷೇತ್ರ ವಾಯಿತು." ಎಂದು ಹೇಳುವಷ್ಟರೊಳಗೆ ಗುಪ್ತರಿಗೆ ಭಾವನಾ-ಪರವಶತೆಯಿಂದ ಎದೆ ತುಂಬಿಬರಲು, ಮಾತುಗಳಿಗೆಡೆಯಿಲ್ಲದಂತಾ ಯಿತು.

ಅಂದೇ ಬೆಳಗಿನ ಜಾವದಲ್ಲಿ ಸುಂದರರಾಯರು ಮತ್ತು ಸಿದ್ದಯ್ಯನವರು, ಸುದರ್ಶನರನ್ನು ರೈಲಿಗೆ ಬಿಡಲು ಬಂದಿದ್ದಾಗ, ನಿಲ್ದಾಣದಲ್ಲಿ ರಂಗಪ್ಪನು ಅವರಿಗೆ ನಮಸ್ಕರಿಸಿದ. ಸುದರ್ಶನರಿಗೆ ಸಾಷ್ಟಾಂಗ ಪ್ರಣಾಮವನ್ನು ಗೈದು "ಹೋಗಿಬರ್ತೀರಾ! ಸ್ವಾಮೀ? ದೇವರು ತಮ್ಮನ್ನು ರಕ್ಷಿಸಲಿ. ನಮ್ಮ ದೇಶ ಉದ್ಧಾರವಾಗುತ್ತದೆ!" ಎಂದನು. ಸುದರ್ಶನರು ರಂಗಪ್ಪನ ಕೈಯನ್ನು ಹಿಡಿದೆತ್ತಿ "ರಂಗಪ್ಪ, ನಮ್ಮಿಂದ ಏನಾಗುತ್ತದೆ, ನಿಮ್ಮಂತಹ ಪುಣ್ಯಾತ್ಮರ ಉದಾತ್ತ ಭಾವನೆಯಿಂದ, ಉತ್ತಮ ನಡೆವಳಿಯಿಂದಲೇ ನಮಗೆ ಉತ್ಸಾಹವು ದೊರೆಯುವುದು; ದೇಶದ ಏಳ್ಗೆಯಾಗುವುದು ನಿಮ್ಮಂತಹರ ಹಾರಯಿಕೆಯಿಂದ. ಇಂದಿಲ್ಲ ನಾಳೆಯಾದರೂ ನಮ್ಮ ನಾಡು ಸ್ವತಂತ್ರ ವಾಗಿಯೇ ತೀರುತ್ತದೆ." ಎಂದು ಗಾಡಿ ಹತ್ತಿದರು. ಸಿದ್ದಯ್ಯನವರು ಅವರನ್ನು ಗುಂತಕಲ್ಲಿನವರೆಗೂ ಹೋಗಿ ಬಿಟ್ಟುಬರಲು ಹೊರಟರು.

ಗಾಡಿ ಹೊರಟ ಮೇಲೆ ರಾಯರು ಹೊರಗೆ ಬಂದು, ರಂಗಪ್ಪನ ಕೈಯಲ್ಲಿ ಹತ್ತುರೂಪಾಯಿಗಳ ಒಂದು ನೋಟನ್ನು ಇಟ್ಟರು.

"ಛೆ! ರಾಯರೆ! ಇದೇನಿದು ತಾವು ಮಾಡುತ್ತಿರುವುದು?" ಎಂದು ಹಣವನ್ನು ವಾಪಸು ಮಾಡಿದ ರಂಗಪ್ಪನನ್ನು ತಡೆದು ಸುಂದರ ರಾಯರು:

"ರಂಗಪ್ಪ, ನಿನ್ನ ಸೇವೆಗೆ ಬೆಲೆಕಟ್ಟುವ ಯೋಗ್ಯತೆ ನನಗಿಲ್ಲ. ಕೇಳಲಿಲ್ಲವೇ ಸುದರ್ಶನರಾಡಿದ ಮಾತನ್ನು? ಏನೋ, ನನಗೆ ಆದ ಆನಂದ ಮತ್ತು ನಿನ್ನ ಬಗ್ಗೆ ನನ್ನಲ್ಲಿ ಉಂಟಾದ ಕೃತಜ್ಞತೆಯ ಭಾವವನ್ನು ಪ್ರಕಟಿಸುವ ಒಂದು ಅಲ್ಪಸಂಕೇತವಷ್ಟೆ ಇದು!"

"ಅಯ್ಯೊ! ರಾಯರೆ! ತಾವು ನನಗೆ ಕೃತಜ್ಞರೆ? ನನ್ನನ್ನು ಪರಕೀಯನನ್ನಾಗಿ ಭಾವಿಸುವಿರಾ? ಬೇಡ! ಬೇಡರಿ" ಎಂದು ಆ ಹಣವನ್ನು ವಾಪಸುಕೊಟ್ಟು, ಬಂದ ಕಣ್ಣೀರನ್ನೊರಸಿಕೊಳ್ಳುತ್ತ ಆಕಡೆ ಮುಖಮಾಡಿದ.

"ರಂಗಪ್ಪ, ನೀನು ನನ್ನನ್ನು ಅಪಾರ್ಥಮಾಡಿಕೊಂಡೆ. ದಯ-ಮಾಡಿ ತಪ್ಪು ತಿಳಿದುಕೋಬೇಡ. ಹಿಡಿ, ಇದು ನನ್ನ ಅಲ್ಪದ ಕಾಣಿಕೆ. ಅದನ್ನು ನಿನಗೆ ಸಲ್ಲಿಸುವ ಸುಯೋಗವನ್ನು ನನ್ನಿಂದ ಕಸಿದುಕೊಳ್ಳ ಬೇಡ." ಎಂದು ರಂಗಪ್ಪನನ್ನು ಬರಸೆಳೆದು ಆತನ ಕೈಗೆ ಹಣವನ್ನಿತ್ತು ಆರ್ದ್ರನಯನಗಳಿಂದ ಮನೆಗೆ ತೆರಳಿದರು ಸುಂದರರಾಯರು.

ರಂಗಪ್ಪನು ಅವಾಕ್ಕಾಗಿ ಅಲ್ಲಿಯೇ ನಿಂತುಬಿಟ್ಟನು. ಕಣ್ಣೀರು ಧಾರೆ-ಧಾರೆಯಾಗಿ ನಡೆದಿತ್ತು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಈ ಕೆಳಗಿನ ಎಲ್ಲಾ ಪುಸ್ತಕಗಳು

ಸೇಕಡಾ ೨೫% ಕಡಿಮೆ ದರಕ್ಕೆ ಕೊಡುವೆವು

	ಸಾದಾಪ್ರತಿ	ಉತ್ತಮಪ್ರತಿ
ಮನೋರಾಜ್ಯ (ನಾಟಕ)	ರೂ. ೧-೧೨	ರೂ. ೨—೪
ಇವೆತ್ (ಮೊಪಾಸಾನ ಕಾದಂಬರಿ)	೧-೧೨	—
ಪೂರ್ಣಿಮಾ (ಸಂಸಾರ ಚಿತ್ರಗಳು)	೧—೪	೨—೮
ಸ್ವಿಮನ್ನನ ತಂದೆ (ಕತೆಗಳು)	—	೨—೮
ರುಕ್ಮಿಣಿ (ಕಾದಂಬರಿ)	೧—೮	೨—೦
ಮೊಪಾಸನ ಓಲೆಗಳು (ಜೀವನ)	೧—೪	೨—೦
ಮುಡಿಯದ ಹೂ (ಕತೆಗಳು)	೦-೧೨	೧—೪
ಕಲ್ಪನಾ ವಿಲಾಸ (ಕತೆಗಳು)	೦-೧೨	೧—೯
ಪ್ರವಾದಿ (ಗಿಬ್ರಾನರ "ಪ್ರೋಫೆಟ್")	೧—೪	೨—೦
ಆ ರಾತ್ರಿ (ನಾಟಕ)	೧-೧೪	೧—೬
ಗುಣ (ಕಾದಂಬರಿ)	೧—೪	೧-೧೨
ವಾರ್ಷಿಕ ಚಂದಾ (ಸಾಮಾನ್ಯ ಪ್ರತಿ)		ರೂ. ೫—೦—೦
,, (ಉತ್ತಮ ಪ್ರತಿ)		ರೂ. ೬—೦—೦

ಹಡಗಿನಿಂದ ಜರ್ಮನಿಗೆ ಪ್ರಯಾಣ

(ಪರದೇಶದಿಂದ ಬಂದ ಒಂದು ಪತ್ರ)

ಶ್ರೀ. ಎಂ. ಕೆ. ವರಾಹಮೂರ್ತಿ ಬಿ. ಎಸ್‌ಸಿ (ಟೆಕ್), ಎಂ. ಎಸ್‌ಸಿ, ಪಶ್ಚಿಮ ಜರ್ಮನಿ

●

ಭಾರತದ ಮುಂಬಯಿ ಬಂದರದಿಂದ ಪಶ್ಚಿಮಜರ್ಮನಿಯ ಇಂಗಲ್‌ಹಾಯಿಮಿನವರೆಗೆ ಪ್ರವಾಸ. ಅಪರಿಚಿತ ಜನರು, ಅಪರಿಚಿತ ಭಾಷೆ! ಎಂದೂ ಕಾಣದಂತಹ ಚಳಿ; ಎಂದೂ ನೋಡದಿದ್ದಂತಹ ಪ್ರದೇಶ! ಅಳುಕಿದೆಯುವರಾದರೆ, ಒಂದು ಕ್ಷಣವೂ ಅಲ್ಲಿ ನಿಲ್ಲದೆ ಮರಳಿ ಸ್ವದೇಶಕ್ಕೆ ಹೊರಟುಬಿಡಬಹುದು!

●

ತಾಯಿ ರುಕ್ಮಿಣಿಗೆ ವಂದನೆಗಳು.

ಓಲೆ ಬರೆಯದೆ ತುಂಬ ದಿನಗಳಾದುವು ಕ್ಷಮೆ ಇರಲಿ ಇಂದಿಗೆ ಹಿಂದುಸ್ಥಾನವನ್ನು ಬಿಟ್ಟು ಸರಿಯಾಗಿ ಎರಡು ವರುಷಗಳಾದುವು. ಅಂದು ಶನಿವಾರ ಮಧ್ಯಾಹ್ನ ೧೨ ಗಂಟೆ. "ಎಸ್. ಎಸ್. ಆಸ್ಟ್ರೇಲಿಯಾ" ಎಂಬ ಇಟಲಿಯ ಹಡಗು ಹೊರಡಲು ತಯಾರಾಗಿ, ಮುಂಬೈ ಬಂದರದ ಬೆಲಾರ್ಡ್‌ಪೀಯರಿನಲ್ಲಿ ನಿಂತಿದೆ. ಪ್ರವಾಸಿಕರ ಆಪ್ತೇಷ್ಟರು ನೋಡಿ ಇಳಿದು ಹೋದಮೇಲೆ, ಸಾವಕಾಶವಾಗಿ, ಹಡಗನ್ನು ನಿಲ್ಲಿಸಲು ಕಟ್ಟಿದ ಸರಪಣಿಯನ್ನು ಬಿಚ್ಚಿದ್ದಾರೆ. ಹಡಗನ್ನು ಹತ್ತುವುದಕ್ಕಿಂತ ಮುಂಚೆ ನನಗೆ ಒಂದು ಬಗೆಯ ಧೈರ್ಯವಿತ್ತು. ಹಡಗನ್ನು ಹತ್ತಿದ ಮೇಲೆ ಪ್ಲ್ಯಾಟ್‌ಫಾರ್ಮಿನ ಮೇಲೆ ಸಣ್ಣ ಮುಖವನ್ನು ಮಾಡಿ ನಿಂತಿದ್ದ ನಿನ್ನ ಮತ್ತು ತಂದೆಯವರ, ನನ್ನ ಹೆಂಡತಿಯ ಮತ್ತು ಅತ್ತೆ-ಮಾವಂದಿರ ಕಡೆ ನೋಡಿ, ನನಗೆ ವಿಚಿತ್ರವಾದ ದುಃಖದ ಅನುಭವವಾಗಹತ್ತಿತು. ಬೆಳಗಿನಿಂದಲೂ ಅತ್ತು ಸಣ್ಣಗೆ ಮೋರೆಯನ್ನು ಮಾಡಿಕೊಂಡು ನಿಂತಿದ್ದ ಆ ನಿನ್ನ ಮೂರ್ತಿ, ಈಗಲೂ ನನ್ನ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಹಡಗು ಹೊರಡಲು "ಸೀಟಿ" ಕೊಟ್ಟ ಮೇಲೆಯಂತೂ ನನಗೆ ಹೇಳಲಾರದಷ್ಟು ದುಃಖವಾಯಿತು. 'ತಾಯಿ, ತಂದೆ ಹೆಂಡತಿ ಮತ್ತು ಆಪ್ತರನ್ನು—ಅವರಲ್ಲಿಯೂ ನನ್ನ ಭಾರತಮಾತೆಯನ್ನು—ಎರಡು ವರುಷಗಳವರೆಗೆ ಅಗಲಿರಬೇಕಲ್ಲಾ, ಎಂಬ ದುಃಖ ಅತಿಯಾಗ-ಹತ್ತಿತು; ಮತ್ತು ಕಣ್ಣೀರಿನ ಮುಖಾಂತರ ಅದು ಹೊರಬೀಳಹತ್ತಿತು. ಪರದೇಶಕ್ಕೆ ಹೋಗಬೇಕೆಂಬ ಆನಂದ ಹೋಗಿ, ಮರಳಿ ನನ್ನ ದೇಶಕ್ಕೆ ಹೋಗಬೇಕೆಂಬ ಭಾವ ವಿಪರೀತವಾಗಿ ಬೆಳೆಯತೊಡಗಿತು.

ನಿಮ್ಮೆಲ್ಲರ ಅಗಲುವಿಕೆಯ ದುಃಖದಿಂದ ಮೊದಲಿನ ಮೂರು ದಿನ, ಮಾನಸಿಕ ಅಸ್ವಸ್ಥತೆಯುಂಟಾಗಿ ಪ್ರಕೃತಿ ಸರಿಯಾಗಿ ಉಳಿಯಲಿಲ್ಲ. ಹಡಗು ಒಂದೇ ರೀತಿಯಾಗಿ ಮುಂದೆ ಹೋಗತೊಡಗಿತು. ಪ್ರತಿದಿನ ೪೦೦ ಮೈಲುಗಳ ಪ್ರಯಾಣ. ಮುಂದುವರೆದಂತೆಲ್ಲ ಮಾನಸಿಕ ವ್ಯಥೆ ಹೆಚ್ಚಾಗಹತ್ತಿತು. ನಾಲ್ಕನೆಯ ದಿವಸ ಬೆಳಗಿನಲ್ಲಿ ಹಡಗು ಏಡನ್ ಬಂದರದಲ್ಲಿ ನಿಂತಿತು. ನನ್ನ ದುಃಖವು ಏಡನಿನಲ್ಲಿ ಪರಮಾವಧಿ ಮುಟ್ಟಿ, ಮರಳಿ ಹಿಂದುಸ್ಥಾನಕ್ಕೆ ಹೋಗಬೇಕೆಂಬ ವಿಚಾರ ಬಹಳವಾಗಿ ಬರಹತ್ತಿತು. ಒಂದು ಕಡೆ ವಿದ್ಯಾಸಂಪಾದನೆಯ ಸೆಳೆತ; ಒಂದು ಕಡೆ ಮಾತೆಯ ಅಗಲಿಕೆಯ ಸೆಳೆತ. ವಿದ್ಯಾ-ಸಂಪಾದನೆ ಮಾಡಬೇಕೆಂಬ ಆಶೆ ಬಲವಾಗಿ, ನನಗೆ ಒಂದು ಬಗೆಯ ಧೈರ್ಯವನ್ನು ತಂದು ಕೊಡಹತ್ತಿತು. ನಮ್ಮ ಹಡಗು ಸುಮಾರು ೧೨ ಗಂಟೆಯ ಕಾಲ ಏಡನ್ನಿನಲ್ಲಿ ನಿಂತಿತು. ಈ ಅಲ್ಪ ಕಾಲದಲ್ಲಿಯೆ ಏಡನ್ ಬಂದರವನ್ನು ನೋಡಿದೆನು.

ಹಡಗಿನ ಮೇಲೆ ಹಿಂದೀಯರು ಸುಮಾರು ೩೦–೩೫ ಜನರಿದ್ದರು. ಮೊದಲಿನ ಎರಡು ದಿನ ಊಟದ ತೊಂದರೆ ಬಹಳವಾಯಿತು ೩ನೆಯ ದಿವಸ, ತುಂಬ ಹಿಂದೀಯರಿದ್ದುದರಿಂದ 'Chief steward' ನಮ್ಮೆಲ್ಲರಿಗೂ ಹಿಂದೀಯ ಊಟ ಕೊಡುತ್ತೇನೆಂದು ಹೇಳಿ, ಊಟದ ತೊಂದರೆಯು ಇಲ್ಲದಂತೆ ಮಾಡಿದನು. ಕೊನೆಯ ದಿನದ ವರೆಗೆ ಉತ್ತಮವಾದ ಊಟವನ್ನು ಕೊಟ್ಟರು. ನನ್ನ ಕೇಬಿನಿನಲ್ಲಿ ಎಲ್ಲರೂ ಹಿಂದೀಯರು. ಒಬ್ಬರು ಪಂಜಾಬಿ, ಇನ್ನೊಬ್ಬರು ಮರಾಠಿಗರು. ಹಡಗಿನಲ್ಲಿ ಸುಮಾರು ೧೦೦೦ ಜನರಿದ್ದರು. ಬೆಳಗಿನಿಂದ ನಮ್ಮ ದಿನದ ಕಾರ್ಯಕ್ರಮ: ಬೆಳಗಿನ ೭ ಗಂಟೆಗೆ ಹಾಸಿಗೆಯ ಕಾಫಿ (Bed Coffee); ೮ ಗಂಟೆಗೆ ತಿಂಡಿ-ಕಾಫಿ, ಹಣ್ಣು ಇತ್ಯಾದಿ; ೧೦ ಗಂಟೆಗೆ ಸಂಗೀತ. ಹಡಗದಲ್ಲಿ ಈಸಲು (Swim bath) ಅನುಕೂಲತೆಯಿರುವುದು ೧೨ ಗಂಟೆಯವರೆಗೆ ಈಸುವುದು. ಆಮೇಲೆ ೧೨ ಗಂಟೆಗೆ ರುಚಿಕರವಾದ ಊಟ. ನಾಲ್ಕುಗಂಟೆಗೆ ಚಹಾ, ೫ ಗಂಟೆಗೆ ಸಂಗೀತ, ಆಮೇಲೆ ಆಟ (Table tennis ಇತ್ಯಾದಿ). ರಾತ್ರಿಯ ೮ ಗಂಟೆಗೆ ಸಂಜೆಯ ಊಟ. ಆಮೇಲೆ ಒಂದು ರಾತ್ರಿ ಸಿನಿಮಾ ತೋರಿಸಿದರೆ, ಇನ್ನೊಂದು ರಾತ್ರಿ "Ball dance" ಇತ್ಯಾದಿ ಮನೋರಂಜಕ ಕಾರ್ಯಕ್ರಮಗಳಿರುವುವು.

ಮೊದಲನೆಯ ದಿನವೇ ನನಗೆ ಭಾಷೆಯ ತೊಂದರೆ ಎನಿಸಹತ್ತಿತು ನಾನು ಹತ್ತಿದುದು ಇಟಲಿಯ ಹಡಗು. ಎಲ್ಲರೂ ಇಟಲಿಯ ಭಾಷೆ ಮಾತಾಡಹತ್ತಿದ್ದಾರೆ. ಊಟದ ಕಾರ್ಡಿನಲ್ಲಿ ಬರೆದ itemಗಳನ್ನು ತಿಳಿದುಕೊಳ್ಳಲೂ ವಿಪರೀತ ಕಷ್ಟವಾಗಹತ್ತಿತು. ಹಡಗು ಒಂದು ಅಂತರ ರಾಷ್ಟ್ರೀಯ ಚಿಕ್ಕ ಪಟ್ಟಣವಾಗಿತ್ತು. ಹಿಂದೀಯರು, ಜರ್ಮನರು ಆಸ್ಟ್ರೇಲಿಯನ್ನರು, ಇಟಾಲಿಯನ್ನರು, ಫ್ರೆಂಚರು, ಅಮೇರಿಕನರು ಪೇರುಜನರು ಇತ್ಯಾದಿ. ಎಲ್ಲರ ಭಾಷೆ ಬೇರೆ ಬೇರೆ. ದೇಶ ಬೇರೆ ಸಂಸ್ಕೃತಿ ಬೇರೆ. ಎಲ್ಲವೂ ಬೇರೆ; ಆದರೂ ಶಾಂತತೆಯಿಂದ ಎಲ್ಲರೂ ಒಂದೇ ಚಿಕ್ಕ ಪಟ್ಟಣದಲ್ಲಿ ವಾಸಿಸುತ್ತಾರೆ. ಹೀಗೆ ಎಲ್ಲ ದೇಶಗಳ ಜಗತ್ತಿನಲ್ಲಿ ಏಕೆ ಶಾಂತತೆಯಿಂದ ಒಬ್ಬರಿಗೊಬ್ಬರು ವಾಸಿಸಬಾರದೆಂಬ ವಿಚಾರ ಬಂದುಹೋಯಿತು.

ಏಡನ್ ಬಂದರವನ್ನು ಬಿಟ್ಟಾಗ ಸಂಜೆಯ ೮ ಗಂಟೆ. ಕೆಂಪು ಸಮುದ್ರವನ್ನು ಹೊಕ್ಕು ಸುಯೇಜ್ ಕಾಲುವೆಗೆ ಬರಲು ಮೂರು ದಿನಗಳು ಬೇಕಾದುವು. ಸುಯೇಜಕ್ಕೆ ಬಂದಾಗ, ಬೆಳಗಿನ ೬ ಗಂಟೆ. ಉತ್ತರ ದಿಕ್ಕಿನಿಂದ ಹಡಗುಗಳು ಬರತೊಡಗಿದುದರಿಂದ, ನಮ್ಮ ಹಡಗು ಬಹಳ ಹೊತ್ತು ನಿಲ್ಲಬೇಕಾಯಿತು. ಪೋರ್ಟ್‌ಸೈಯದನ್ನು ಮುಟ್ಟಿದಾಗ ರಾತ್ರಿಯಾಗಿತ್ತು. ನಮ್ಮ ಹಡಗು ಅಲ್ಲಿ ೬-೭ ಗಂಟೆಯ ಕಾಲ ನಿಲ್ಲುತ್ತದುದರಿಂದ, ಪಟ್ಟಣದಲ್ಲಿ ಸ್ವಲ್ಪ ತಿರುಗಾಡಿದೆವು. ಸುಯೆಜ್ ಕಾಲುವೆಯನ್ನು ದಾಟಿ ಭೂಮಧ್ಯಸಮುದ್ರವನ್ನು ಹೊಕ್ಕೆವು. ಇಟಲಿಯ ಪಶ್ಚಿಮತೀರದ ಬಂದರವಾದ ನೇಪಲ್ಸನ್ನು ಮುಟ್ಟಲು ನಾಲ್ಕು ದಿನಗಳು ಬೇಕಾದುವು. ಅರಬೀ ಸಮುದ್ರ ಮತ್ತು ಕೆಂಪು ಸಮುದ್ರಗಳು ಬಹಳ ಶಾಂತವಾದರೆ, ಭೂಮಧ್ಯಸಮುದ್ರವು ಬಹಳ ಕ್ಷುಬ್ಧವಾಗಿತ್ತು (Rough) ನೀರಿನ ತೆರೆಗಳು ವಿಪರೀತ ದೊಡ್ಡವಾಗಿದ್ದುವು. ಹಡಗು ಬಹಳೇ ಹೊಯ್ದಾಡಹತ್ತಿತು. ಇದರಿಂದ ಸುಮಾರು, ಹಡಗದಲ್ಲಿದ್ದ ಎಲ್ಲ ಜನರೂ ಸಮುದ್ರ ಜಡ್ಡಿನಿಂದ (Sea sickness) ಒದ್ದಾಡಹತ್ತಿದರು. ಸುದೈವದಿಂದ ನನಗೇನಾಗಲಿಲ್ಲ. "ನೇಪಲ್ಸ್" ಬಂದಾಗ, ಎಲ್ಲರ ಮುಖದಲ್ಲಿಯೂ ಆನಂದವು ತೋರಹತ್ತಿತು. ಸುಮಾರು ರಾತ್ರಿಯ ೯ ಗಂಟೆಯಿಂದ ಬೆಳಗಿನ ೯ ಗಂಟೆಯವರೆಗೆ ಹಡಗು ಹೊರಡಲು ವೇಳೆ ಇದ್ದುದರಿಂದ, ಆ ಪಟ್ಟಣವನ್ನು ನೋಡಲು ಹೋದೆವು. ಬೆಳಗಿನ ೪ ಗಂಟೆಯವರೆಗೆ, ಮಲಗಿದ್ದ ಆ ಪಟ್ಟಣವನ್ನು ನೋಡಿದೆವು.

ಮರುದಿನ ಹಡಗಿನ ಪಯಣ ಮುಂದುವರೆಯಿತು. ಇಟಲಿಯ ಪಶ್ಚಿಮತೀರದ ಇನ್ನೊಂದು ಬಂದರವಾದ ಜಿನೆವಾಕ್ಕೆ ಮರುದಿನ ಬೆಳಗಿನ ೬ ಗಂಟೆಗೆ ಬಂದಿಳಿದೆವು. ಒಟ್ಟು ಮುಂಬಯಿಯಿಂದ ಜಿನೆವಾಕ್ಕೆ ೧೪ ದಿನಗಳು ಬೇಕಾದುವು. ಮುಂದಿನ ಪ್ರಯಾಣ ರೇಲ್ವೆಯಿಂದ. ನಮ್ಮ ಗಾಡಿಯು ರಾತ್ರಿಯ ೯ ಗಂಟೆಗೆ ಇದ್ದುದರಿಂದ, ಬೆಳಗಿನಿಂದ ಸಂಜೆಯವರೆಗೆ ಜಿನೆವಾದಲ್ಲಿ ತಿರುಗಾಡಿದೆವು. ಅಲ್ಲಿಯ ಓಣಿಗಳು, ಬಹಳೇ ಚಿಕ್ಕ ಚಿಕ್ಕ ಸಂದಿಗಳಿದ್ದ ಹಾಗೆ ಇವೆ. ಜನರ ಉಡಿಗೆ-ತೊಡಿಗೆಗಳು ಸಾಧಾರಣವಾಗಿರುವುವು. ಸ್ವಚ್ಛತೆ ಕಡಿಮೆ. ಅಂತೂ ಸಂಜೆಯ ೯ ಗಂಟೆಗೆ ನಮ್ಮ Basel-Frankfurt ಗಾಡಿ ಜಿನೇವಾ ಬಿಟ್ಟಿತು. Milanoಕ್ಕೆ ತಲುಪಿದಾಗ, ಬೆಳಗಿನ ೧ ಗಂಟೆ. ಎಂದರೆ ಬಾಸೆಲಿನ ೬ ಗಂಟೆಗೆ. ಬಾಸೆಲ್ಲಿನಲ್ಲಿ ಗಾಡಿಯನ್ನು ಬದಲಿಸಬೇಕಾಯಿತು. ಜರ್ಮನ್‌ರಾಷ್ಟ್ರದ ಗಡಿಗೆ ಬಂದಾಗ, ಬೆಳಗಿನ ೭ ಗಂಟೆ. ಇಡಿ ರಾತ್ರಿಯೆಲ್ಲಾ ನಿದ್ರೆಯೆ ಇಲ್ಲ. ಎಲ್ಲ ಗಡಿಗಳಲ್ಲಿಯೂ ನಮ್ಮ Passport ಇತ್ಯಾದಿ ಕಾಗದಗಳ ತಪಾಸಣೆ, ಮಾಡುವವರ ಕಾಟ. ಅಂತೂ ಜರ್ಮನ್ ಗಡಿಯಲ್ಲಿಯೂ ತಪಾಸಣೆ ನಡೆದು, ನಮ್ಮ ಗಾಡಿಯು ಮುಂದೆ ಹೊರಟಿತು.

Ind-German ಶಿಷ್ಯವೃತ್ತಿ ಪಡೆದ ವಿದ್ಯಾರ್ಥಿಗಳು ನಾವು ಸುಮಾರು ೨೫ ಜನರು. Frankfurt ಸ್ಟೇಶನಿಗೆ ನಮ್ಮ ಗಾಡಿಯು ತಲುಪಿದಾಗ, ಮಧ್ಯಾಹ್ನ ೧ ಗಂಟೆಯಾಗಿತ್ತು. ಅಂದು ಸೆಪ್ಟೆಂಬರ್ ೧೫ನೆಯ ತಾರೀಖು.

ನಮ್ಮೆಲ್ಲರನ್ನು ಸ್ವಾಗತಿಸಲು ಹಿಂದುಸ್ಥಾನದ ಸರಕಾರದ ದೂತಾವಾಸದಿಂದ ಇಬ್ಬರು ಅಧಿಕಾರಿಗಳು ಬಂದಿದ್ದರು. ನಮ್ಮೆಲ್ಲರನ್ನು ಒಂದು ವಿಶ್ರಾಂತಿಗೃಹಕ್ಕೆ ಕರೆದುಕೊಂಡು ಹೋಗಿ, ನಾವು ಹೋಗಬೇಕಾದ ಊರುಗಳ ಮಾಹಿತಿಯನ್ನು ಮಾಡಿಕೊಟ್ಟು, ಗಾಡಿಯ ಟಿಕೀಟು ಕೊಟ್ಟು ಎಲ್ಲ ವ್ಯವಸ್ಥೆ ಮಾಡಿದರು.

ನಿನಗೆ ಗೊತ್ತಿದ್ದಂತೆ ನಾನು ಹೋಗಬೇಕಾದ ಊರು (Ingelheim) ಇಂಗಲ್‌ಹಾಯಿಮ್. Frankfurtನಿಂದ ಸುಮಾರು ೨ ತಾಸಿನ ಗಾಡಿಯ ದಾರಿ. ಮಾಯಿನ್ಸಿನಲ್ಲಿ ಗಾಡಿಯನ್ನು ಬದಲಿಸಬೇಕಾಯಿತು. ಮಾಯಿನ್ಸಿನಲ್ಲಿ ಇಳಿದು ಗಾಡಿಯನ್ನು ಬದಲಾಯಿಸಬೇಕಾದಾಗಲೇ ನನಗೆ ಭಾಷೆಯ ಕಠಿಣತೆ ತೋರಹತ್ತಿತು. ಅಲ್ಲಿಯ "ಟಿಕೆಟ್ ಕಲೆಕ್ಟರ"ರಿಗೆ ಇಂಗಲ್‌ಹಾಯಿಮಕ್ಕೆ ಹೋಗುವ ಗಾಡಿಯನ್ನು ಕೇಳಬೇಕಾದರೆ ತುಂಬ ಕಷ್ಟವಾಯಿತು. ಹಾಗೂ ಹೀಗೂ "ಟಿಕೆಟ್ ಕಲೆಕ್ಟರನು" ನನ್ನ ಟಿಕೆಟ್ಟನ್ನು ನೋಡಿ, ಸರಿಯಾದ ಗಾಡಿಯಲ್ಲಿ ಕುಳ್ಳಿರಿಸಿದನು.

ಇಂಗಲ್‌ಹಾಯಮಕ್ಕೆ ಬಂದಿಳಿದಾಗ, ಸಂಜೆಯ ೫ ಗಂಟೆ. ಆವಾಗಲೇ ರಾತ್ರಿಯ ೧೨ ಗಂಟೆಯಷ್ಟು ಕತ್ತಲೆಯಾಗಿತ್ತು. ತುಂಬ ಚಳಿ. ಎಲ್ಲಿ ನೋಡಿದಲ್ಲಿ ಬರ್ಫದ (Snow) ಹಾಸಿಗೆ ಹಾಸಿದೆ. ಎಲೆಗಳಿಲ್ಲದ ಗಿಡಗಳು, ಆಕರಾಳ-ವಿಕರಾಳವಾಗಿ ಕಾಣಹತ್ತಿದುವು. ಪ್ಲ್ಯಾಟ್‌ಫಾರ್ಮಿನ ಮೇಲೆ ಸುಮಾರು ೧೦ ನಿಮಿಷ ನಿಂತೆ. ಕೂಲಿಕಾರರನ್ನು ಹುಡುಕಿದೆ. ಯಾರೂ ಇರಲಿಲ್ಲ. ಆಮೇಲೆ ನನ್ನ ಈ ಪರಿಸ್ಥಿತಿಯನ್ನು ನೋಡಿ, ಒಬ್ಬ ಹುಡುಗನು (ಸುಮಾರು ೨೦ ವರುಷದವನು) ಬಂದು ("Guten abend" ಎಂದರೆ Good evening) 'ಗುಟೆನ್ ಅಬೆಂಡ್' ಎಂದು ನುಡಿದು ನಿಂತನು. ಅದಕ್ಕೆ ಉತ್ತರವಾಗಿ ನಾನೂ ಇಂಗ್ಲೀಷಿನಲ್ಲಿ 'ಗುಡ್ ಇವ್ನಿಂಗ್' ಎಂದು ನುಡಿದೆನು. ಆಮೇಲೆ ಅವನು ಜರ್ಮನ್ ಭಾಷೆಯಲ್ಲಿ ಮಾತನ್ನು ಮುಂದುವರೆಸಿದನು. ಅವನು ಏನು ಮಾತಾಡಿದನೆಂಬುದು ನನಗೆ ಎಳ್ಳಷ್ಟು ತಿಳಿಯಲಿಲ್ಲ. ಸುದೈವದಿಂದ ಅವನಿಗೆ ಅಲ್ಪಸ್ವಲ್ಪ ಇಂಗ್ಲಿಷ್ ಬರುತ್ತಿದ್ದುದರಿಂದ, ನನಗೆ ಸಹಾಯಮಾಡಲು ಮುಂದುವರೆದನು. ಇಬ್ಬರೂ ಕೂಡಿ, ನನಗೆ ಇರಲು ವ್ಯವಸ್ಥೆಮಾಡಿದ ವಿಶ್ರಾಂತಿಗೃಹವನ್ನು ತಲುಪಿದೆವು.

ಇಲ್ಲಿಗೆ ನನ್ನ, ಮುಂಬಯಿಯಿಂದ ಇಂಗಲ್‌ಹಾಯಮಕ್ಕೆ ಬಂದ ೧೫ ದಿನಗಳ ಪ್ರವಾಸದ ಮುಕ್ತಾಯವಾಯಿತು.

ಮೊಟ್ಟಮೊದಲಿಗೆ ಬಹಳೇ ತೊಂದರೆ ಎನಿಸಿದ ಭಾಷೆಯ ಕೊರತೆ ಇಂದು ಇಲ್ಲ. ನಾನೀಗ ಎಲ್ಲರ ಸಂಗಡ ಸರಾಗವಾಗಿ ಜರ್ಮನ್ ಭಾಷೆಯಲ್ಲಿ ಮಾತಾಡಬಹುದು. ಜರ್ಮನ್ ಜನರ ಜೀವನವನ್ನು ಅವರ ಭಾಷೆಯಿಂದಲೆ ತಿಳಿದುಕೊಳ್ಳಬಹುದು.

ಇಂಗಲ್‌ಹಾಯಿಮಿನ ವಿಷಯವಾಗಿ ಮುಂದಿನ ಪತ್ರದಲ್ಲಿ ತಿಳಿಸುತ್ತೇನೆ.

ಹಿರಿಯರಿಗೆ ನಮಸ್ಕಾರಗಳು; ಚಿಕ್ಕವರಿಗೆ ಆಶೀರ್ವಾದಗಳು.

ನಿಮ್ಮ ಮಗ

-ಮಧ್ವೇಶ

ಹಮ್ಮೀರ ಮಾತಾ

ಶ್ರೀ. ಜ. ಶ್ರೀ. ದೇಸಾಯಿ ಜರಕುಂಟಿ ಬಿ. ಎ., ಬಿ. ಇಡಿ. ಶಹಾಪುರ

ಚಿತ್ತೂರ ಹತ್ತಿರೊಳೆ ಹಳುವುಗಳ ಕುತ್ತುರಲಿ
ಬೇಡಪಡೆಯೆಬ್ಬಿಸುತಲಿದೆ ಮಿಗಗಳ;
ವೀರ ಮಹರಾಣ ಲಕ್ಷಣನಣುಗ-ಯುವರಾಜ
ಅರಿಸಿಂಹನಟ್ಟುತಿದ್ದನು ಅವುಗಳ. ೧

ಚಿಗರಿ, ಮಿಕ, ಮೊಲ, ಕರಡಿ, ಪೊದೆಯಿಂದೆ ಪೊದೆಗೋಡಿ
ಬಲೆಗೆ ಸಿಲುಕುವುವು ಹೌಹಾರಿ ಚೀರಿ;
ಇರಲಿಂತು ಘೋರಸೂಕರವೊಂದು ಪರಿದೋಡಿ
ಸೆಜ್ಜೆಹೊಲದೊಳಗೆ ನುಗ್ಗಿದುದು ಹೆದರಿ. ೨

ಮಂಚಿಕೆಯ ಮೇಲಿದ್ದು ಹಕ್ಕಿಸೋವಳು ಚೆಲುವೆ,
ಚೆಮ್ಮಾವು ಬಳುಕುವುದು ಗಾಳಿಗೆಂತಂತೆ—
ಬಳುಕುತ್ತೆ ಎರಳೆಗಣ್ಣಿಂದ ಪಡೆಯನು ನೋಡಿ
ಪರಿದು ಬಂದಳು ಚೆಲುವೆ ದೊರೆಯ ಮುಂತೆ. ೩

"ಹೊಡೆದು ತರುವೆನು ಮಿಕವ; ಹೊಲವ ಪುಗದಿರಿ ಒಡೆಯ
ಪೊಕ್ಕೊಡನೆ ಹಾಳಾಗದಿಹುದೆ ನಿಲುವು?
ಅಕ್ಕರೆಯೊಳಾಳುವುದು ಮಕ್ಕಳನು ಯುವರಾಜ!"
ಎಂದೊರೆಯೆ ನಕ್ಕು ಉಸುರಿದನು ಪ್ರಭುವು. ೪

"ಹಕ್ಕಿಸೋವಳೆ ಬಾಲೆ, ನೀ ಬಗೆದೆ ಬರಿಲೀಲೆ!
ಮಿಗವೇನು ನೀನೇನು....ತಂದಂತಿದೆ—
ಅದರಾಯಿತು ಪೋಗು, ನಮಗೇಕೆ ಅಪವಾದ,
ನುಡಿದಂತೆ ನಡೆದು ತೋರೌ ತಳುವದೆ!" ೫

ನಮಿಸಿ ನಡೆದಳು ಅವಳು, ನಗೆಹೂವನರಳಿಸುತ
ಯುವರಾಜ ಹಬ್ಬಿಸಲು ನಗೆಯಲೆಗಳ—
ದಂಟನೆಂಟನು ಕೊಯ್ದು ಚಾಲೆ ಭಾಲೆಯ ಮಾಡಿ
ಒಳಪೊಕ್ಕು ಹೊಯ್ದಿಹಳು ಕಾಳ್ಮಿಗವನು. ೬

ಎಳೆತಂದು ಕೆಡಹಿದಳು ದೊರೆಯ ಸಿರಿಯಡಿಗಳಿಗೆ,
ಬೇಡಪಡೆ ಬೆರಗಾಗಿ ಮೂಗುವಡಲು—
ಅರಿಸಿಂಹನಕ್ಕಜದಿ ಈ ಬೆಡಗಿಯಾಪರಿಗೆ
ಮನಮೆಚ್ಚಿ ಮಣಿಮಾಲೆ ತೆಗೆದೀಯಲು— ೭

ಮಣಿದು ಮರೆಯಾಗಿಹಳು, ಅರಿಸಿಂಹನೈತಂದ
ಶಿಬಿರಕ್ಕೆ ಮೀರಿರಲು ಮಧ್ಯಾಹ್ನವು;
ಹೊಳೆಗಿಳಿಯೆ ಪರಿವಾರ ಮೀಹಕೆಂದಾಬಳಿಕ,
ಹುಲ್ಲಿನಲಿ ಕುದುರೆ ಮೇಯುತಲಿರುವುವು. ೮

ಕವಣೆಗಲ್ಲೊಂದು ಬಲು ಬಿರುಬಿನಿಂ ಬಡಿದು ಹಯ-
ವೊಂದು ಕಾಲ್ಮುರಿದು ಕುಂಟಾಯ್ತು ಬಳಲಿ;
ಭಟರರಸಿ ಹೊಲಗಳಲಿ ಸಿಕ್ಕವರ ಹಿಡಿಯುತಿರೆ
ಆ ಹುಡುಗಿ ಬಂದಿಹಳು ದೊರೆಗಳಲ್ಲಿ. ೯

"ಕ್ಷಮೆಯಿರಲಿ ಎನ್ನರಸ! ತಪ್ಪಾಯ್ತು ಕೈಮೀರಿ!
ಅಪರಾಧಿ ನಾನಿಹೆನು ಬಿಡಿರಿತರರ!"
ಎಂದು ಬೇಡಿದಳವಳು; ದೊರೆ, ಮುನಿಸು ಬೆರಗು ಮೆ-
ಚ್ಚುಗೆವೆರಸಿ ಬಿಡಿಸಿದನು ಆ ಪರುವರ. ೧೦

ಮತ್ತೆ ಪೇಳಿದನವನು ಎಚ್ಚರಿಕೆಮಾತುಗಳ
ಹೋಗಗೊಟ್ಟನು ಹೊಲಕೆ ಬಳಿಕವಳನು;
ಅವಳ ಮೋಹಕಮೂರ್ತಿ ದೇಹಬಲ ಮರುಕಗಳು
ಮನವುಗಲು ಮರೆಯದಿಹ ಯುವರಾಜನು. ೧೧

× × × ×

ಪುರಕೆ ಮರಳಿದ ಬಳಿಕ, ಸರದಾರರೊಡಗೂಡಿ
ಅಂದೆ ಸಂಜೆಗೆ ಪಯಣ ಹೊರಟಿರುವನು;
ಕಂಡಿಹರು ಅವರಾಗ ಕೈಲಿ ಹಗ್ಗವ ಹಿಡಿದು
ಕೊಡಹೊತ್ತ ಹೊಲಕಾವ ಹುಡುಗಿಯನ್ನು. ೧೨

ಅವರಲೊಬ್ಬಗೆ ಚಪಲ ಹುಡುಗಿಯನು ಕೆಣಕಲಿಕೆ;
ಕುದುರೆ ಹಾಯಿಸಿ ಕೆಡಹಲಾಶಿಸಿದನು.
ಅದನು ಅರಿತಳು ಚದುರೆ, ಹಗ್ಗಬೀಸಿದಳಾಗ,
ಕುದುರೆ ಮುಗ್ಗರಿಸಲವನೇ ಬಿದ್ದನು. ೧೩

ಯುವರಾಜ ನಗುತಿರಲು, ನಸುನಗಲು ಸುದತಿಯರು,
ಜೊತೆಯವರು ನಕ್ಕಿಹರು ಬಿದ್ದು ಬಿದ್ದು;
ನಕ್ಕು ಫಕ್ಕನೆ ಸೊಬಗಿ, ನಗೆಯುಕ್ಕಿ ಓಡಿದಳು,
ಅರಸುಗುವರನನು ನೋಡುತ್ತ ಕದ್ದು. ೧೪

ಮನವ ಹಿಡಿದುದು ಕನಸೊ ನನಸೊ ಮುಂಪರವೊ ಅರಿ-
ಸಿಂಹಗರಿದಾಯ್ತು ಸುಖನಿದ್ರೆ ಮುಂದೆ
ಮಣಿಮಾಲೆ ಕೈಗಳಲಿ ಚೆಲುಮೊಗವು ಬಂದೊಂದು
ನುಡಿಸುವುದು ಸಲುಗೆಯಲಿ–ಸೊಗಸಿನಿಂದೆ ೧೫

ವರಿಸ ಬರುವರಸುಗುವರಿಯರಿಗಿದು ವಿರಸವಲೆ
ಇವಳಲ್ಲ ರಾಜಸುತೆ ಒಕ್ಕಲಿತಿಯು!
ಪುರದಿ ಪಂಡಿತರಾಗ ವಂಶವನು ಅರಸಿ ಸಂ-
ಶಯವ ಕಳೆದಾಯ್ತು; ಸರಿ, ಸೊಗದ ಹೊಳೆಯು! ೧೬

× × × ×

'ಹಮ್ಮೀರ ಮಾತೆ' ಹೆಸರಿನಲಿವಳೆ ಭಾರತದ
ಇತಿಹಾಸ ಬೆಳಗಿಹಳು ವಿಖ್ಯಾತಳು—
ವೀರವನಿತೆಯರನಗಣಿತ ಪಡೆದು ಪೊರೆದಿಹಳು
ಭಾರತಾಂಬೆಯು ಲೋಕಪ್ರಖ್ಯಾತಳು! ೧೭

ಹೃದಯದ ಹಂಬಲ

(ನೆನಹುಗಳು)

೧

ಶ್ರೀ. ಬಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ

卐

ಯಾವುದೇ ಸಾಮಾನ್ಯವ್ಯಕ್ತಿಯ ಸಾಮಾನ್ಯ ಅನುಭವಗಳೂ ಸಾಹಿತ್ಯರೂಪವನ್ನು ಪಡೆಯಬಲ್ಲವು; ಕಲ್ಪಿತಸಾಹಿತ್ಯಕ್ಕಿಂತ ಹೆಚ್ಚಿನ ಕುತೂಹಲವನ್ನೂ ಹುಟ್ಟಿಸಬಲ್ಲವು. ಪರ್ಯಾಯವಾಗಿ ಬೋಧೆಯನ್ನೂ ನೀಡಬಲ್ಲವು.

卐

ಸಂಜೆಯ ಸುಯ್ಗಾಳಿ ಬೀಡುತ್ತಿದೆ. ಕೋಣೆಯಲ್ಲಿ ಏಕಾಂತವಾಗಿ ಕುಳಿತು ಪುಸ್ತಕ ಓದುವ ವಿಫಲಪ್ರಯತ್ನ ಮಾಡುತ್ತಿದ್ದೇನೆ. ಆದರೆ ಮೆಲ್ಲಮೆಲ್ಲನೆ ಓಸರಿಸುತ್ತಿದ್ದ ಕತ್ತಲೆಯ ಮಬ್ಬಿನಲ್ಲಿ ಗತಕಾಲದ ಘಟನೆಗಳು ಒಂದೊಂದಾಗಿ ಮೂಡಿ ಬರುತ್ತಲಿವೆ.

'ಸಂಜೆಯ ವೇಳೆ ಏಕಾಕಿಯಾಗಿ ಕೋಣೆಯಲ್ಲೆಂದೂ ಕುಳಿತುಕೊಳ್ಳಬೇಡ, ತಿರುಗಾಡುತ್ತ ಇರು, ಇಲ್ಲದಿದ್ದರೆ ಜೀವನದ ಹಿಂದಿನ ಘಟನೆಗಳೆಲ್ಲಾ ಎದುರು ಬಂದು ಮನಸ್ಸಿಗೆ ನೋವನ್ನುಂಟುಮಾಡುವುವು—' ಎಂದು ಮೊನ್ನೆ ಯಾವುದೋ ಒಂದು ಪತ್ರಿಕೆಯಲ್ಲಿ ಓದಿದ್ದೆ. ಆ ಮಾತೆಷ್ಟು ನಿಜವಾದುದು? ಎಷ್ಟೋ ಬಾರಿ ನಾನು ಹೀಗೆಯೇ ಕುಳಿತಾಗ ಅಂತಹ ಅನುಭವವಾದುದುಂಟು. ಆದರೂ ನನಗೇಕೋ ಅದರಿಂದ ಬೇಸರವಾಗುವುದಿಲ್ಲ ಅಂತಹ ನೆನಹುಗಳು ಪದೇ ಪದೇ ಬರಲೆಂದು ನಾನು ಹಾರಯಿಸುತ್ತೇನೆ. ಏಕೆಂದರೆ, ಹಿಂದಿನ ಜೀವನವನ್ನೊಮ್ಮೆ ವಿಮರ್ಶಕನ ರೀತಿಯಲ್ಲಿ ಪರಿಶೀಲಿಸಿ ಅದರ ಲೋಪ-ದೋಷಗಳನ್ನು ತಿದ್ದಿಕೊಳ್ಳಲು ಅನುವು ದೊರೆತಂತಾಗುವುದು.

'ನನ್ನ ಜೀವನ, ನನ್ನ ಜೀವನ' ಎಂದು ಬಾರಿಬಾರಿ ಹೇಳುವುದು ಕೆಲವರಿಗೆ ಆಶ್ಚರ್ಯವೆನಿಸಬಹುದು; ಅಲ್ಲದೆ ನನ್ನ ಜೀವನವೆಂಬುದು ಇತರರ ದೃಷ್ಟಿಯಲ್ಲಿ ಕ್ಷುಲ್ಲಕವಾಗಿ ತೋರಬಹುದು. ಆದರೆ ಆ ಜೀವನದ ಪ್ರತಿಯೊಂದು ಘಟನೆಗೂ ಸಾಕ್ಷೀಭೂತನಾದ ನನ್ನ ಪಾಲಿಗೆ, ಅದರ ಮಹಿಮೆ—ಮಹತ್ತ್ವಿಕೆ....ಯಾವುದೂ ಕಡಿಮೆಯಾಗದು.

ಸುಮಾರು ೩೦ ವರ್ಷಗಳ ಈ ಅವಧಿಯಲ್ಲಿ ನನ್ನ ಜೀವನವನ್ನು ರೂಪಿಸಿ ಹೋದ ಮೂರು ಮಂದಿ ನಚ್ಚಿನ ಗೆಳೆಯರನ್ನು ನಾನೆಂದೂ ಮರೆಯಲಾರೆ. ನನ್ನ ಹೃದಯಪಾತ್ರವನ್ನು ತಮ್ಮ ಸ್ನೇಹಾಮೃತದಿಂದ ತುಂಬಿ, ನನಗೆ ನವ್ಯಜೀವನವನ್ನು ಇತ್ತವರು ಅವರು. ಆದರೆ ನನ್ನ ದುರ್ದೈವದಿಂದ ಒಬ್ಬೊಬ್ಬರು ಒಂದೊಂದು ವಿಧದಿಂದ ತಪ್ಪಿಹೋದರು. ಪವಿತ್ರಸ್ನೇಹಕ್ಕಾಗಿ ಹಂಬಲಿಸುವುದು ನನಗೆ ತಪ್ಪಲೇ ಇಲ್ಲ.

೧೪ ವರ್ಷಗಳ ಹಿಂದಿನ ಮಾತು. ನಾನಾಗ ಉಡುಪಿಯಲ್ಲಿ ಸಂಸ್ಕೃತವನ್ನು ಅಭ್ಯಾಸಿಸುತ್ತಿದ್ದೆ. ಹಳ್ಳಿಯ ವಾತಾವರಣದಿಂದ ದೂರವಾಗಿ ಪಟ್ಟಣಕ್ಕೆ ಕಾಲಿಟ್ಟೊಡನೆಯೆ ಮನವು ಪೇಚಾಡುತ್ತದೆ. ಯಾರ ಪರಿಚಯವೂ ಇಲ್ಲ. ಯಾರ ಗೆಳೆತನವೂ ಇಲ್ಲ. ನಾನೇ ನಾನಾಗಿ ಏಕಾಂತದಲ್ಲಿ ಕಾಲಕಳೆಯುತ್ತಿದ್ದೆ. ಬಾಲ್ಯದಿಂದಲೇ ಭಾವುಕನಾಗಿದ್ದ ನಾನು, ಸಾಮಾನ್ಯರ ಒಡನಾಟಕ್ಕೆ ಸಿಲುಕುತ್ತಿದ್ದಿಲ್ಲ. ಗೆಳೆತನವೆಂದರೆ ಪವಿತ್ರವಸ್ತುವೆಂಬ ಭಾವನೆ, ಆಗಲೂ ನನ್ನಲ್ಲಿ ನೆಲೆಸಿತ್ತು. ಹೃದಯದ ಕಷ್ಟಗಳನ್ನು ತೋಡಿಕೊಳ್ಳಲು ಒಬ್ಬ ಯೋಗ್ಯ ಸಂಗಾತಿಯು ಬೇಕಾಗಿದ್ದ. ಆದರೆ ಕೇವಲ ಆಟಗಳಲ್ಲೊ, ಸಿನೆಮಾಗಳಲ್ಲೊ ಮಗ್ನರಾಗುವ ಸಹಪಾಠಿಗಳಿಂದ ನನ್ನಾಸೆ ಕೈಗೂಡುವಂತಿರಲಿಲ್ಲ.

ಒಂದು ದಿನ ಎಂದಿನಂತೆ ಸಂಜೆಯ ವೇಳೆ ಅಜ್ಜರಕಾಡಿನಲ್ಲಿ ಒಬ್ಬನೇ ಕುಳಿತು, ನೀಲಾಕಾಶದತ್ತ ಶೂನ್ಯದೃಷ್ಟಿಯಿಂದ ನೋಡುತಿದ್ದೆ. ಮನೆಯ ಪರಿಸ್ಥಿತಿ, ಬಡತನದ ಬೇಗೆ, ನನ್ನ ಶಿಕ್ಷಣಕ್ಕೆ ಎದುರುಬಂದ ಅಡ್ಡಿ-ಆತಂಕಗಳು—ಎಲ್ಲವೂ ಮನಃಪಟಲದಲ್ಲಿ ಮೂಡಿ ಮಾಯವಾಗುತ್ತಿದ್ದುವು. ಆಗಲೇ ಹೈಸ್ಕೂಲಿನ ವಿದ್ಯಾರ್ಥಿಯೊಬ್ಬ ನನ್ನ ಬಳಿ ಬಂದು ಕುಳಿತ. ನಾನವನನ್ನು ಎಷ್ಟೋ ದಿನಗಳಿಂದ ಕಾಣುದ್ದೆನಾದರೂ, ಆತ ನಾರೆಂದಾಗಲಿ—ಎಲ್ಲಿಂದ ಬಂದವನೆಂದಾಗಲಿ—ಕೇಳಲು ಒಂದು ತೆರದ ಸಂಕೋಚ. ಅಲ್ಲದೆ 'ಕೇಳಿ ಆಗಬೇಕಾದುದಾದರೂ ಏನು?' ಎಂಬ ನಿರಾಶೆ ಬೇರೆ ಹೀಗೆ ಪರಿಚಯಕ್ಕವಕಾಶವಿರಲಿಲ್ಲ. ಆದರೆ ಅಂದು ಅವನ ಕಡೆ ದೃಷ್ಟಿಸಿ ನೋಡಿದಾಗ. ಅವನ ಮುಖದ ಮೇಲೆಯೂ ನೋವಿನ ರೇಖೆಯು ಸುಳಿದಾಡುತ್ತಿದ್ದುದು ತೋರಿತು. ಅವನೂ ನನ್ನಂತೆಯೆ ಚಿಂತೆಗೆ ಗುರಿಯಾಗಿರಬಹುದೆಂದು ಭಾವಿಸಿದೆ. ಅಲ್ಲಿಂದ ನಮ್ಮ ಗೆಳೆತನವು ರೂಪುಗೊಂಡಿತು.

ಅವನ ಹೆಸರು ವಾಸುದೇವ. ಹೈಸ್ಕೂಲಿನ ನಾಲ್ಕನೆಯ ಫಾರಂನಲ್ಲಿ ಕಲಿಯುತ್ತಿದ್ದ. ಬಡತನದಿಂದಾಗಿ ಬಹು ಕಷ್ಟಪಟ್ಟು, ವಿದ್ಯಾಭ್ಯಾಸವನ್ನೇ ತನ್ನ ಧ್ಯೇಯವನ್ನಾಗಿರಿಸಿಕೊಂಡು ಅವನು ದಿನಗಳನ್ನು ಕಳೆಯುತ್ತಿದ್ದ. ನಾವಿಬ್ಬರೂ ಹಾರ್ದಿಕಮಿತ್ರರಾದೆವು. ನಿತ್ಯವೂ ಸಂಜೆಯ ವೇಳೆ. ನಾವಿಬ್ಬರು ಮಾತ್ರ ಬೇರೆಯೇ ತಿರುಗಾಡ-ಹೋಗುತ್ತಿದ್ದೆವು. ಎಷ್ಟೋ ವಿಷಯಗಳ ಕುರಿತು ನಾವು ತರ್ಕಿಸುತ್ತಿದ್ದೆವು. ಜೀವನದ ವಿವಿಧಮುಖಗಳನ್ನು ಚರ್ಚಿಸುತ್ತಿದ್ದೆವು. ಕೆಲವೊಮ್ಮೆ ಅಭಿಪ್ರಾಯ ಬೇರಾದರೂ, ನಮ್ಮ ಗೆಳೆತನಕ್ಕೆ ಚ್ಯುತಿ ಬರುತ್ತಿರಲಿಲ್ಲ. ಅವನ ಅಭ್ಯಾಸವೂ ಆಳವಾಗಿತ್ತು. ಕ್ಲಾಸಿನಲ್ಲಿ ನಿಪುಣವಿದ್ಯಾರ್ಥಿಯಾಗಿದ್ದ. ಅವನ ಕೈಬರೆಹವಂತೂ ಬಹು ಮುದ್ದಾಗಿತ್ತು. ಅಷ್ಟು ಚೆನ್ನಾಗಿ ಬರೆಯುವ ಕೈಯನ್ನು ನಾನು ಮತ್ತೆಲ್ಲೂ ನೋಡಲಿಲ್ಲ

ನಮ್ಮ ಜೀವನ ಹೀಗೆಯೇ ಸುಗಮವಾಗಿ ಒಂದು ವರ್ಷದವರೆಗೆ ಸಾಗಿತು. ನಾವಿಬ್ಬರೂ ಒಟ್ಟಿಗೆ ಇರುತ್ತಿದ್ದೆವು. ಶಾಲೆಯ ವೇಳೆಯೊಂದನ್ನುಳಿದು ಯಾವಾಗಲೂ ನಾವು ಒಡನಾಡಿಗಳೇ. ನಮ್ಮ ಸುಖ-ದುಃಖಗಳನ್ನು ಮರೆಮಾಜದೆ ಹೇಳಿಕೊಳ್ಳುತ್ತಿದ್ದೆವು. ಆಗ ನಮ್ಮ ಹೃದಯ ಅದೆಷ್ಟು ಹಗುರವಾಗುತ್ತಿತ್ತು!

ಆಗಲೇ ದೇಶದಲ್ಲೆಲ್ಲಾ 'ಬಿಡ್ಡಿ'ನ ಪ್ರಭಾವ ಹೆಚ್ಚಾಯಿತು ನನ್ನ ಗೆಳೆಯನೂ ಮೆಲ್ಲಮೆಲ್ಲನೆ ಅದಕ್ಕೆ ಮನಸೋತನು. ಕೆಲವು ದಿನಗಳವರೆಗೆ ನನಗದರ ಸುಳಿವೇ ಹತ್ತಲಿಲ್ಲ. ನಿತ್ಯವೂ ಅವನು ನನ್ನೊಡನೆ ಎಂದಿನಂತೆ ಬರುತ್ತಿದ್ದ; ಮನಬಿಚ್ಚಿ ಮಾತಾಡುತ್ತಿದ್ದ. ಆದರೆ ದಿನಗಳೆದಂತೆ ಅವನು ನನ್ನಿಂದ ದೂರವಾಗತೊಡಗಿದ. ಕಾರಣ ತಿಳಿಯದೆ ನಾನು ಚಡಪಡಿಸುತ್ತಿದ್ದೆ. ಅವನನ್ನು ನೇರವಾಗಿ ಕೇಳಲೂ ಧೈರ್ಯವಿಲ್ಲ. ಏನೆಂದು ಕೇಳಲಿ?

'ನೀನೀಗ ಒಂದು ತೆರನಾಗಿದ್ದಿ–' ಎನ್ನಲೆ? 'ನಿನ್ನ ಮನೋ-ಭ್ರಮೆ' ಎಂದು ನಕ್ಕು ಸುಮ್ಮನಾದಾನು. ಆದರೆ ಒಂದು ಮಾತು ಮಾತ್ರ ನಿಜ: ಅವನ ಅಭ್ಯಾಸವೂ ದಿನ ದಿನಕ್ಕೆ ಕ್ಷೀಣಿಸತೊಡಗಿತು. ಯಾವಾಗಲೂ ಏನನ್ನೋ ಚಿಂತಿಸುತ್ತಿದ್ದ. ನನಗೆ ಈ ವಿಚಿತ್ರ. ವರ್ತನೆಯ ರಹಸ್ಯ ತಿಳಿಯಲಿಲ್ಲ.

ಕಟ್ಟ ಕಡೆಗೆ ನಮ್ಮ ಕೋಣೆಯಲ್ಲೇ ಅವನ ಗುಟ್ಟು ಹೊರ ಬಿತ್ತು. ಬಿಡ್ಡಿಗೆ ಕಟ್ಟಲೆಂದು ಅವನು ಪೋಲಿಯೊಬ್ಬನಿಂದ ಮೂರು ರೂಪಾಯಿ ಸಾಲಮಾಡಿದ್ದ. ಅವನು ಮರುದಿನವೇ ನಮ್ಮ ಕೋಣೆಗೆ ಬಂದು ಮನಸ್ವೀ ಜೈದಾಡಿದ. ಗೆಳೆಯನ ಮೋರೆ ಕಪ್ಪಿಟ್ಟಿತು. ಅದುವರೆಗೂ ಗುಟ್ಟಾಗಿ ಇರಿಸಿದ್ದ ಮಾತು ನನಗೆ ತಿಳಿದೇ ಹೋಯಿತು. ಅಲ್ಲದೆ, ಆ ದಿನ ಅವನು ಕಟ್ಟಿದ ಹಣವೂ ಕಳೆದುಹೋಗಿತ್ತು. ಹೀಗೆ ಇಬ್ಬಗೆಯ ನೋವಿನಿಂದ ತಲೆಯೆತ್ತದೆ ಕುಳಿತುಕೊಂಡಿದ್ದ.

ಹಣವನ್ನು ಕೊಟ್ಟ ಆಸಾಮಿ ಹಾಗೆಯೇ ಬಿಡಲಿಲ್ಲ. ಮೂರು ರೂಪಾಯಿಗಳಿಗಾಗಿ ಪುಸ್ತಕಗಳನ್ನೇ ತೆಗೆದೊಯ್ಯುವೆನೆಂದು ಗದರಿಸಿದ. ನನಗೆ ಆ ಅಪಮಾನಜನಕ ದೃಶ್ಯವನ್ನು ಕಂಡು ತುಂಬ ದುಃಖ ವಾಯಿತು. ನನ್ನ ಬಳಿಯಾಗ ಕೇವಲ ೨–೧೨–೦ ಇತ್ತು. ಅದನ್ನೇ ಅವನಿಗೆ ಕೊಟ್ಟು, ಬಂದ ಪೀಡೆಯನ್ನು ತೊಲಗಿಸಿದ್ದಾಯಿತು. ಆದರೆ ಗೆಳೆಯನ ಅಧಃಪತನದಿಂದ ನನ್ನ ಮನಸ್ಸಿಗೆ ಬಲವಾದ ಆಘಾತ-ವಾಯಿತು.

ಈ ಘಟನೆಯಿಂದಾದರೂ ಅವನು ನಾಚಿ ಸುಧಾರಿಸಬಹುದೆಂದು ನಾನು ಕನಸು ಕಾಣುತ್ತಿದ್ದೆ. ಆದರೆ ಕನಸು ಕನಸಾಗಿಯೇ ಉಳಿ-ಯಿತು. ಹಣದ ಆಸೆ ಎಂತಹ ಅನರ್ಥವನ್ನು ತಂದೊಡ್ಡುತ್ತದೆ! ಇಂತಹ ಜೂಜಿನ ವ್ಯವಹಾರಕ್ಕೆ ಮನಸೋತು, ಅವನು ತನ್ನ ಸರ್ವನಾಶಕ್ಕೇ ಸಿದ್ಧನಾದ. ಅಭ್ಯಾಸ ಮೂಲೆಗುಂಪಾಯಿತು. ಇರುಳಿಡೀ ಕುಳಿತು ನಂಬರುಗಳನ್ನಾಲೋಚಿಸುವುದೇ ಅವನ ನಿತ್ಯಕರ್ಮವಾಯಿತು. ಪತ್ರಿಕೆಯೋದುವುದನ್ನು ಬಿಟ್ಟು 'ಕರ್ಲಿ'ಯನ್ನಭ್ಯಸಿಸಲಾರಂಭಿಸಿದ. ಶಾಲೆಯ ಲೆಕ್ಕಗಳನ್ನು ದೂರಗೊಳಿಸಿ 'ಫಿಟ್‌ಫಿಗರ್' ಶೋಧಕ್ಕೆಳಸಿದ. ಇದೆಲ್ಲವೂ ನನಗೆ ತಿಳಿದಿತ್ತು. ನಾನು ಮನಸ್ಸಿಟ್ಟು ಅವನ ಚಲನ ವಲನಗಳನ್ನು ನಿರೀಕ್ಷಿಸುತ್ತಿದ್ದೆ. ಆದರೆ ಬಾಯಿಂದೇನೂ ನುಡಿಯು ತ್ತಿರಲಿಲ್ಲ. ನಮ್ಮ ಹೃದಯಗಳು ನಮಗರಿಯದಂತೆಯೆ ದೂರ ಸರಿಯುತ್ತಿದ್ದುವು. ನಮ್ಮಿಬ್ಬರ ನಡುವೆ ಮೌನದ ಗೋಡೆಯೇ ಅಡ್ಡನಿಂತಿತ್ತು.

ಎಷ್ಟೋ ಬಾರಿ ಅವನಿಗೆ ಉಪದೇಶ ಕೊಟ್ಟು ಅವನನ್ನು ಒಳ್ಳೆಯ ದಾರಿಗೆ ತರಬೇಕೆಂದು ನಾನು ಆಶಿಸಿದೆ. ಗೆಳೆಯನ ಅವನತಿಯನ್ನು ಕಣ್ಣಾರೆ ಕಾಣುತ್ತಿದ್ದು ಸುಮ್ಮನಿರುವುದು ಆತ್ಮದ್ರೋಹವೆಂದೂ ಬಗೆದೆ. ಆದರೆ ನನ್ನ ಗೆಳೆಯನಿಗೆ ಅಂತಹ ಉಪದೇಶದ ಆಗತ್ಯವಿದ್ದಿಲ್ಲ. ಅವನೇನೂ ಹುಂಬನಲ್ಲ ಸುಧಾರಿಸುವ ಯೋಗ ವಿದ್ದರೆ ನನ್ನ ಮುಖ ನೋಡಿಯೇ ಸುಧಾರಿಸಿಕೊಳ್ಳಬಹುದಿತ್ತು. ನನ್ನ ಮುಖದ ಮೇಲೆ ಒಡಮೂಡಿದ ನಿರಾಶಾಮಯ ವೇದನೆಯನ್ನು ಅವನು ಗುರುತಿಸಬಹುದಿತ್ತು. ಆದರೆ ಅವನೆಂದೂ ಅತ್ತ ಲಕ್ಷ್ಯಕೊಡಲಿಲ್ಲ.

ತ್ರೈಮಾಸಿಕ ಪರೀಕ್ಷೆಯ 'Progress record' ಬಂದಿತ್ತು. ಪ್ರತಿಸಲವೂ ಅವನು ತಾನಾಗಿಯೇ ಅದನ್ನು ನನಗೆ ತೋರಿಸುತ್ತಿದ್ದ. ಆದರೆ ಈ ಬಾರಿ ಆ ಸಾಹಸವನ್ನು ಮಾಡಲಿಲ್ಲ. ನಾನು ಬೇಕೆಂತಲೇ ಹೋಗಿ—'ನಿನ್ನ Progress record ನೋಡೋಣ' ಎಂದೆ. ಅವನು ಒಂದು ಕ್ಷಣ ನನ್ನನ್ನೇ ದಿಟ್ಟಿಸಿ ನೋಡಿದ. ಮತ್ತೆ ಮುಖ ಕೆಳಗೆ ಹಾಕಿ ತನ್ನ ಕೆಲಸದಲ್ಲಿ ಮಗ್ನನಾದ.

ನನಗೆ ಸಿಟ್ಟು ತಡೆಯದಾಯಿತು. ಸಣ್ಣ ಸಣ್ಣ ವಿಷಯಕ್ಕಾಗಿಯೂ ಸಿಡಿದೇಳುವ ದುರ್ಗುಣ ಈಗಲೂ ನನ್ನನ್ನು ಬಿಟ್ಟಿಲ್ಲ. ನಾನು ಮರುಮಾತಾಡದೆ, ಅವನ ಪೆಟ್ಟಿಗೆಯ ಬಾಗಿಲನ್ನು ತೆರೆದು 'Progress record' ತೆಗೆದುಕೊಂಡೆ. ಅವನು ಈ ಆಕಸ್ಮಿಕ ಆಕ್ರಮಣವನ್ನು ನಿರೀಕ್ಷಿಸಿರಲಿಲ್ಲ.

ನಾನು ಅವಸರದಿಂದ record ತೆರೆದು ನೋಡಿದೆ. ಲೆಕ್ಕ, ಇಂಗ್ಲಿಷ್, ವಿಜ್ಞಾನ–ಈ ಮೂರು ವಿಷಯಗಳಲ್ಲೂ ಅವನು ಅನುತ್ತೀರ್ಣನಾಗಿದ್ದ. ಲೆಕ್ಕದಲ್ಲಿ ಅತ್ಯುತ್ತಮ ಮಾರ್ಕು ಪಡೆಯುತ್ತಿದ್ದ ಅವನ ಶೋಚನೀಯ ಅವನತಿಗಾಗಿ, ಅಭಿನ್ನಮಿತ್ರನಾದ ನನಗೆ ಹೇಗೆ ಎನಿಸಬಹುದು? ಅವನ ಅಭಿಲಾಷೆಗಳು ಅದೆಷ್ಟು ಉಚ್ಚವಾಗಿದ್ದುವು! ಯಾರನ್ನಾದರೂ ಕಾಡಿ, ಬೇಡಿ ಕಾಲೇಜ್ ಅಭ್ಯಾಸವನ್ನು ಮುಗಿಸಬೇಕೆಂದು ಅವನು ಲೆಕ್ಕಹಾಕಿದ್ದ. ಸ್ಕಾಲರ್‌ಶಿಪ್ ಪಡೆಯಬಹುದೆಂದು ಅವನು ದೃಢನಿರ್ಧಾರ ಮಾಡಿದ್ದ. ಅದೆಲ್ಲಾ; ಉಸುಕಿನ ಮೇಲೆ ಕಟ್ಟಿದ ಮನೆಯಂತೆ ಕುಸಿದುಹೋಯಿತು. ನನ್ನ ಕಣ್ಣೆದುರಿಗೆ ಅವನ ಭೀಕರ ಭವಿಷ್ಯವು ತಾಂಡವವಾಡಿತು. ಏನೂ ಹೇಳದೆ ಅದನ್ನು ಅವನ ಕಡೆಗೆಸೆದು ಹೊರಹೊರಟೆ. ಆದರೆ ಕೋಣೆಯಿಂದ ಹೊರಗೆ ಕಾಲಿಟ್ಟೊಡನೆಯೆ, ತಡೆದಿದ್ದ ಕಣ್ಣೀರು ಕಟ್ಟೊಡೆದು ಹೊರಚಿಮ್ಮಿತು.

ನನ್ನ ಮಿತ್ರನನ್ನು ಈ ದುರ್ಭಾಗ್ಯದಿಂದ ಬಿಡಿಸಿ ಪುನಃ ಒಳ್ಳೆಯ ದಾರಿಗೆ ತರುವ ಪುಣ್ಯಾತ್ಮರಾರಾದರೂ ಇದ್ದಿದ್ದರೆ, ನಾನವರಿಗೆ ಆಜೀವನ ಋಣಿಯಾಗುತ್ತಿದ್ದೆ. ಗೆಳೆಯನ ದುರ್ದಶೆಯನ್ನು ಕಣ್ಣಾರೆ ಕಂಡರೂ, ನಾನು ನಿರುಪಾಯನಾಗಿ ಕುಳಿತಿರಬೇಕಾಯಿತು. ಇಂತಹ ದಾರುಣವೇದನೆಯು ನಮ್ಮ ವೈರಿಗಳಿಗೂ ಉಂಟಾಗಕೂಡದು.

ಅವನು ನನ್ನ ಆತ್ಮೀಯನಾಗಿರದೆ ಇತರರಂತೆ ಸಾಮಾನ್ಯ-ನಾಗಿದ್ದರೆ ನನಗಿಷ್ಟು ದುಃಖವಾಗುತ್ತಿತ್ತೆ? 'ಹತ್ತರೊಡನೆ ಹನ್ನೊಂದು' ಎಂದು ನಾನು ಉದಾಸೀನನಾಗಿರುತ್ತಿದ್ದೆ. ಪ್ರಪಂಚದಲ್ಲಿ ಎಷ್ಟು ಜನ

ಧಃಪತನದ ಮಾರ್ಗದಲ್ಲಿ ಮುನ್ನಡೆಯುವುದಿಲ್ಲ! ಅವರಿಗಾಗಿ ನಾವಿಷ್ಟು ಚಿಂತಿಸುತ್ತೇವೆಯೆ? ಆದರೆ ನನ್ನ ಏಕಮಾತ್ರ ಗೆಳೆಯನಾಗಿ ನ್ನ ಅತ್ಯಂತ ಆತ್ಮೀಯನೆನಿಸಿದ ವಾಸುದೇವನ ದುಃಸ್ಥಿತಿಯನ್ನು ಂಡು ನನ್ನ ಮನಸ್ಸು ತುಂಬಾ ನೊಂದಿತು. ಆದರೆ ಅವನು ಸುಧಾರಿ ಸುವ ಲಕ್ಷಣ ಕಾಣಲಿಲ್ಲ.

ಅವನ ಸಾಲದ ಭಾರ ಹೆಚ್ಚುತ್ತಾ ಹೋಯಿತು. ದೇಹವೂ ನದಿನಕ್ಕೆ ಸೊರಗುತ್ತಿತ್ತು. ಮೊದಲಿನ ಮುಖಕಾಂತಿ ಮಾಯವಾಗಿ ಲುಬಿನ ಹೆಂದರವಾದ. ಥಕ್ಕನೆ ಗುರುತಿಸುವುದೂ ಕಷ್ಟವಾಯಿತು. ಮಾತು-ಮಾತಿಗೆ ಸಿಡಿದೇಳುವ ಸ್ವಭಾವವಾಯಿತು. ಶಾಲೆಗೆ ಹೋಗು ವುದೇ ಕಡಿಮೆಯಾಯಿತು. ಇದೆಲ್ಲವನ್ನೂ ನನ್ನ ದುರ್ಭಾಗ್ಯದ ಕಣ್ಣು ಗಳು ಕಾಣುತ್ತಿದ್ದುವು.

ಆ ದುರ್ದಿನದ ಘಟನೆ ಇನ್ನೂ ನನ್ನ ಮನದಲ್ಲಿ ಅಚ್ಚೊತ್ತಿ ಂತಿದೆ. ಅಂದು ಬೆಳಗಿನಲ್ಲಿ ನಾನು ಕಣ್ಣು ಬಿಟ್ಟಾಗ, ಪಕ್ಕದ ಕೋಣೆ ಯಲ್ಲಿ ಗದ್ದಲವೇ ಗದ್ದಲ. ಪೆಟ್ಟಿಗೆಯಲ್ಲಿಯ ೧೫ ರೂಪಾಯಿಗಳು ಳುವಾಗಿದ್ದುವು. ೧೫ ರೂಪಾಯಿ ದೊಡ್ಡ ಧನರಾಶಿಯಲ್ಲದಿದ್ದರೂ ಡ ವಿದ್ಯಾರ್ಥಿಗಳ ಪಾಲಿಗೆ ಅದೇ ನಿಧಿಯೆನ್ನಬೇಕು.

ಬಿಡ್ಡಿನ ಆರಂಭವಾದಂದಿನಿಂದ ಕಳವು–ಕೊಲೆ–ಸುಲಿಗೆಗಳು ಟ್ಟಿದ್ದರೂ, ನಮ್ಮ ಬಿಡಾರದಲ್ಲಿ ಈ ರೀತಿಯ ಘಟನೆಗಳು ಘಟಿಸ ಬಹುದೆಂದು ಭಾವಿಸಿರಲಿಲ್ಲ. ಇದರ ಹಿಂದೆ ಯಾರ ಕೈವಾಡವಿತ್ತೆಂದು ನಾನು ಬಾಯಿಬಿಟ್ಟು ಹೇಳಬೇಕಿಲ್ಲ. ಸಹಪಾಠಿಗಳ ಗೋಳಾಟ ಡದೇ ಇತ್ತು. ವ್ಯಕ್ತ ಅವ್ಯಕ್ತ ರೀತಿಯಿಂದ ವಾಸುದೇವನನ್ನು ಹಳಿಯುತ್ತಿದ್ದರು. ಪೋಲಿಸರಿಗೆ ಕೊಡಬೇಕೆಂದೂ ನಿರ್ಧಾರವಾಯಿತು. ದರೆ ಈ ಕೃತ್ಯದಿಂದ ಮನೆಯ ಹೆಂಗುಸು-ಮಕ್ಕಳಿಗೆ ವ್ಯರ್ಥದ ಗೊಂದಲೆಯಲ್ಲದೆ ಬೇರೆಯೇನೂ ಲಾಭವಾಗದೆಂದೂ, ಹಣ ಇಷ್ಟರೊಳಗೆ ಕೈಬಿಟ್ಟು ಹೋಗಿರಬಹುದೆಂದೂ ಸುಮ್ಮನಾದರು. ಆದರೆ ಈ ಬೆಂಕಿ ನನ್ನ ಹೃದಯದಲ್ಲಿ ಹೇಗೆ ಹೊತ್ತಿತೆಂಬುದು ದೇವನೊಬ್ಬನಿಗೆ ಮಾತ್ರ ಗೊತ್ತು. ಕದಿಯುವಷ್ಟು ನೀಚಕೃತ್ಯಕ್ಕಿಳಿದ ಮೇಲೆ, ಅವನ ಭವಿಷ್ಯದ ಬಗೆಗೆ ಯಾರಿಗೆ ಆಸೆಯುಳಿದೀತು? ಅದುವರೆಗೆ ನನಗೆ ವನ ಮೇಲಿದ್ದ ಅಲ್ಪಸ್ವಲ್ಪ ಅಭಿಮಾನವೂ ಹಾರಿಹೋಯಿತು. ಳೆತನದ ಬಳ್ಳಿ ಬುಡ ಸಹಿತ ಕಿತ್ತುಹೋಯಿತು.

ಆಮೇಲೆ ವಿಶೇಷವೇನೂ ಘಟಿಸಲಿಲ್ಲ. ಬಿಡ್ಡಿನ ಅಂಟುರೋಗ ವನನ್ನು ಬಿಡಲೇ ಇಲ್ಲ. ಆತ್ಮದ ಕರೆಗೆ ಓಗೊಡದೆ, ವಿವೇಕದ ಡಿಗಳಿಗೆ ಕಿವಿಗೊಡದೆ, ತನ್ನ ಸರ್ವನಾಶವನ್ನು ಕೈಯಾರೆ ಮಾಡಿ ಂಡ. ಸಾಲ ಹೆಚ್ಚುತ್ತ ಹೋಯಿತು. ಸಾಲಿಗರ ಕಾಟ ಸಹಿಸ ಸಾಧ್ಯವಾಯಿತು. ಸಂಬಳ ಕೊಡದುದರಿಂದ ಓದು ಅರ್ಧಕ್ಕೆ ಂತಿತು. ಒಂದು ದಿನ ಯಾರಿಗೂ ಹೇಳದೆ, ಉಡುಪಿಗೆ ಕೊನೆಯ ವಂದನೆಯನ್ನಿತ್ತು ಅವನು ಕಣ್ಮರೆಯಾದ.

ನಾನೀ ಭವಿಷ್ಯವನ್ನು ಮೊದಲೇ ಕಂಡುಕೊಂಡಿದ್ದೆ. ಆದರೇನು? ಡೆದ ಮಡಕೆಯನ್ನು ಪುನಃ ಕೂಡಿಸಲಾಗುತ್ತದೆಯೆ? ಅವನ ವಿಧಿ ನನ್ನತ್ತ ಒಯ್ದಿತೋ ಯಾರು ಬಲ್ಲರು?

ಅವನು ನನ್ನಿಂದ ದೂರವಾಗಿ ಹನ್ನೆರಡು ವರ್ಷಗಳು ಉರುಳಿ ದುವು. ಅಂದಿನಿಂದ ಇದುವರೆಗೂ ಅವನ ಸಮಾಚಾರವಿಲ್ಲ. ಅವನು ಎಲ್ಲಾದರೂ ಎಂತಾದರೂ ಬದುಕಬಹುದು. ಆದರೆ ಅವನ ಏಳಿಗೆ ಯನ್ನೇ ಹೊಂದಿಕೊಂಡಿದ್ದ ಏಕಾಕಿ ತಾಯಿ ಹೇಗೆ ಬದುಕುವಳು? ತಾಯಿಯನ್ನು ಮನೆಯಲ್ಲಿರಿಸಿ ತಾನು ಕಲಿತು ಉದ್ಧಾರ ಹೊಂದು ತ್ತೇನೆಂದು ಬಂದವನು ಹೀಗೆ ಅವಳನ್ನು ನಡುದಾರಿಯಲ್ಲೇ ಬಿಟ್ಟು ಹೋದರೆ ಅವಳು ಜೀವಹಿಡಿಯಬಹುದೇ? ಅವಳ ನೆನಪಾದಾಗಲೆಲ್ಲ ನನ್ನ ಕರುಳು ಹಿಂಡಿದಂತಾಗುವುದು. ಎಲ್ಲಿ ಹೋದರೂ ಮುದಿ-ತಾಯಿಯನ್ನು ಮರೆಯದೆ ತನ್ನ ಕರ್ತವ್ಯವನ್ನು ತೋರಿಸುವ ಹೊಣೆ-ಗಾರಿಕೆ ಅವನದಿತ್ತು. ಯಾರನ್ನು ದೂರಿ ಫಲವೇನು? ಅವಳು ಈ ಹನ್ನೆರಡು ವರ್ಷಗಳವರೆಗೆ ಬದುಕಿದ್ದಾಳೆಯೇ, ಮಗನ ಅಗಲುವಿಕೆ ಯಿಂದ ನವೆನವೆದು ಕರಗಿಹೋದಳೋ—ನಾನರಿಯೆ; ಆದರೆ ಆ ಸಹನಶೀಲ ಮಾತೆಯನ್ನು ಸ್ಮರಿಸಿದಾಗಲೆಲ್ಲ ನನ್ನ ಕಂಗಳು ತುಂಬಿ ಬರುತ್ತವೆ. ಮಗನು ಕಣ್ಮರೆಯಾದ ಸಮಾಚಾರವು ಸಿಡಿಲಿನಂತೆ ಕಿವಿಗೆರಗಿದಾಗ, ಅವಳು ಅದನ್ನು ಹೇಗೆ ಸಹಿಸಿಕೊಂಡಳು? ತನ್ನ ಆಶಾಗೋಪುರವು ಉರುಳುತ್ತಿದ್ದುದನ್ನು ಕಂಡೂ ಹೇಗೆ ಜೀವ ಹಿಡಿದಳು? ಅದೇ ಮಹಾಸಮಸ್ಯೆಯಾಗಿ ನಿಂತಿದೆ.

ಏನೇ ಇರಲಿ, ಹನ್ನೆರಡು ವರ್ಷಗಳ ಹಿಂದಿನ ಅವನ ಸ್ನೇಹ ಇಂದಿಗೂ ನನಗೆ ನೆನಪಾಗುತ್ತದೆ. ಅವನು ನನ್ನನ್ನು ಮರೆತರೂ ನಾನವನನ್ನು ಮರೆಯಲಾರೆ. ನಾವಿಬ್ಬರೂ ಒಟ್ಟಿಗೆ ನಲಿದಾಡಿದ ಆ ಒಂದು–ಒಂದೂವರೆ ವರ್ಷಗಳ ಕಾಲ, ನನ್ನ ಜೀವನದ ರಸ ನಿಮಿಷ ಗಳಾಗಿವೆ. ಅವನೆಲ್ಲೇ ಇರಲಿ, ಅವನಿಗೆ ಶುಭವಾಗಲೆಂದು ಮನಃ ಪೂರ್ವಕವಾಗಿ ಕೋರುವುದು ನನ್ನ ಮುಖ್ಯ ಕರ್ತವ್ಯವೆಂದು ಬಗೆಯು ತ್ತೇನೆ.

× × × ×

೨

ಅದಾಗಿ ಎರಡು ವರ್ಷಗಳು ಸಂದಿದ್ದುವು. ವಾಸುದೇವನ ವಿಯೋಗದಿಂದ ಹೃದಯಕ್ಕುಂಟಾದ ಗಾಯ ಸಂಪೂರ್ಣವಾಗಿ ಮಾಯ್ದಿರಲಿಲ್ಲ. ಆದರೂ ಮನಸ್ಸು ಸ್ವಾಭಾವಿಕವಾಗಿ ಹಿಂದಿನ ನೋವನ್ನು ಮೆಲ್ಲಮೆಲ್ಲನೆ ಮರೆಯುತ್ತದೆ, ನನಗೂ ಆ ಅನುಭವ-ವಾಯಿತು. ಸುಯೋಗ್ಯ ಮಿತ್ರನ ಗೆಳೆತನಕ್ಕಾಗಿ ನಾನು ಹಾತೊರೆಯ ತೊಡಗಿದೆ. ಆದರೆ ಯಾರೂ ನನ್ನ ಹೃದಯವನ್ನು ಸೂರೆಗೊಳ್ಳಲಿಲ್ಲ.

ಪ್ರಕೃತಿಯ ಲೀಲೆ ವಿಚಿತ್ರವಾದುದು. ಸುಖದ ಆಸೆ ತೋರಿಸಿ ದುಃಖದ ಮಡುವಿಗೆ ತಳ್ಳುವುದು ಪ್ರಕೃತಿಯ ನಿಯಮವೆಂಬಂತಿದೆ. ಅಂತೆಯೇ ಗೆಳೆತನಕ್ಕಾಗಿ ಹಂಬಲಿಸಿದ ನನಗೆ ಅಂತಹದೊಂದು ಯೋಗ ತಾನಾಗಿಯೇ ಲಭಿಸಿತು.

ಶ್ರೀನಾಥ ನನ್ನ ಸಹಪಾಠಿ. ನನ್ನ ಕ್ಲಾಸಿನಲ್ಲೇ ಇದ್ದರೂ ಅವನು ನನ್ನ ಅಚ್ಚುಮೆಚ್ಚಿನವನಾಗಿರಲಿಲ್ಲ. ಹಾಗೆಂದು ಅವನಲ್ಲಿ ಅಂತಹ

ದುರ್ಗುಣಗಳೇನೂ ಇದ್ದಿಲ್ಲ. ನೋಡಲೂ ಸೌಮ್ಯಮೂರ್ತಿ. ಇಷ್ಟೆಲ್ಲಾ ಇದ್ದರೂ ಅದುವರೆಗೆ ನಮ್ಮಿರ್ವರಲ್ಲಿ ಆತ್ಮೀಯತೆ ಚಿಸಿದಿರಲಿಲ್ಲ. ಗೆಳೆತನವುಂಟಾಗುವುದಕ್ಕೂ ತಕ್ಕ ಕಾಲವೊದಗಬೇಕು. ಇಲ್ಲದಿದ್ದರೆ ಪ್ರಪಂಚದಲ್ಲಿರುವ ಜನರಲ್ಲೆಲ್ಲಾ ನಮ್ಮ ಗೆಳೆಯರೇ ಕಾಣುವುದಿಲ್ಲ! ಎಷ್ಟೋ ಜನರು ಸುಶೀಲರಾಗಿದ್ದರೂ ಅವರ ಒಡನಾಟ ನಮಗೆ ಹಿತವೆನಿಸುವುದಿಲ್ಲ. ಒಟ್ಟಾರೆ ಗೆಳೆತನದ ಯೋಗ ಒದಗಿಬಂದಿಲ್ಲವೆಂದೇ ನಮ್ಮಿಬ್ಬರ ಹೃದಯಗಳು ಹತ್ತಿರವಾಗಿರಲಿಲ್ಲ.

ಆದರೆ ಒಮ್ಮೆಲೇ ಶ್ರೀನಾಥ ಕಾಹಿಲೆ ಬಿದ್ದ. ಟಾಯಿಫಾಯ್ಡ್ ಎಂದು ಡಾಕ್ಟರರು ಅಭಿಪ್ರಾಯವಿತ್ತರು. ಶ್ರೀನಾಥ ಏಕಾಕಿ. ಮನೆಯವರು ಶ್ರೀಮಂತರಿದ್ದರೂ ಉಡುಪಿಯಲ್ಲೇ ತಂಗಿ ಅವನೊಟ್ಟಿಗೇ ಕಾಲಕಳೆಯುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ಅವನ ಆರಯಿಕೆ ಕ್ರಮವಾಗಿ ಸಾಗುವುದು ಕಷ್ಟವೆನಿಸಿತು. ಈ ಪರಿಸ್ಥಿತಿಯನ್ನು ಅರಿತ ನಾನು ಗೆಳೆಯನ ಆರಯಿಕೆಯ ಪೂರ್ಣಭಾರವನ್ನು ಹೊತ್ತುಕೊಂಡೆ; ರೋಗಿಯ ರಕ್ಷಣೆಯೆಂದರೆ ನನಗೆ ಬಾಲ್ಯದಿಂದಲೂ ಸಂತೋಷದ ಸಂಗತಿ. ರೋಗಿಯೊಡನೆಯೇ ಕುಳಿತಿದ್ದು ಅವನ ಮನಸ್ಸಿನ ಬೇಸರವನ್ನು ಹೋಗಲಾಡಿಸುವುದೆಂದರೆ ನನಗೆ ಬಹು ಹಿಗ್ಗು. ನನ್ನ ಮನದಲ್ಲಿ ಈ ಭಾವನೆ ಬೇರೂರುವಂತೆ ಮಾಡಿದುದು ನನ್ನ ಕಾಹಿಲೆಯೇ—ಎಂದು ಧಾರಾಳವಾಗಿ ಹೇಳಬಹುದು. ಬಾಲ್ಯದ ಹಲವು ವರ್ಷಗಳನ್ನು ರೋಗಿಯಾಗಿಯೇ ಕಳೆದ ನನಗೆ, ಆ ಕಾಲದಲ್ಲಿ ಜೀವವು ಒಡನಾಡಿಗಳ ಸಂಗಕ್ಕಾಗಿ ಎಷ್ಟು ಮಿಡಿಯುತ್ತಿತ್ತೆಂದು ತಿಳಿದಿದೆ. ಈ ಒಂದು ಅಮೂಲ್ಯ ಅನುಭವಕ್ಕಾದರೂ ಕಾಹಿಲೆಗಳಿಗೆ ನಾನು ಋಣಿ, ಹೀಗಾಗಿ ರೋಗಿಗಳ ಆರಯಿಕೆಯನ್ನು ಶಕ್ಯವಿದ್ದಷ್ಟು ಮಾಡಲು ನಾನು ಹೆಣಗಾಡುತ್ತೇನೆ. ಅಲ್ಲದೆ ಆಶಕ್ಯ ಕಂಡಲ್ಲಿ ಸರಸನುಡಿಗಳಿಂದ ಅವರ ಮನೋರಂಜನೆಗೂ ಯತ್ನಿಸುತ್ತೇನೆ.

ಶ್ರೀನಾಥನ ಆರಯಿಕೆ ನನಗೇನೂ ಕಷ್ಟವಾಗಲಿಲ್ಲ. ಅವನು ಶ್ರೀಮಂತನಿದ್ದುದರಿಂದ ಹಣದ ಕೊರತೆಯೂ ಬಾಧಿಸುತ್ತಿರಲಿಲ್ಲ. ಒಂದು ತಿಂಗಳ ಸತತ ಪರಿಶ್ರಮದಿಂದ, ಅವನನ್ನು ಆ ಲೋಕದಿಂದ ಬಲಾತ್ಕಾರವಾಗಿ ಈ ಲೋಕಕ್ಕೆ ತರಲು ಸಾಧ್ಯವಾಯಿತು.

ಶ್ರೀನಾಥ ನವಜೀವನವನ್ನು ಹೊಂದಿದ. ಅಂತೆಯೇ ನನ್ನ ಗೆಳೆಯನಾಗಿ ನನಗೂ ಹೊಸಜೀವನದ ಸವಿಯನ್ನುಣ್ಣಿಸಿದ. ವಾಸುದೇವನ ವಿಯೋಗದಿಂದ ಬರಿದಾದ ಹೃದಯವು, ಶ್ರೀನಾಥನ ಸ್ನೇಹಧಾರೆಯಿಂದ ಮರಳಿ ತುಂಬಿಬಂತು. ನನ್ನ ಮನಸ್ಸು ಮತ್ತೊಮ್ಮೆ ನಲಿದಾಡುವಂತಾಯಿತು.

ಈ ಬಾರಿಯ ನಮ್ಮ ಗೆಳೆತನ ಕೆಡದಂತೆ ನಾನು ತುಂಬಾ ಜಾಗ್ರತೆ ವಹಿಸಿದ್ದೆ. ಸ್ವಲ್ಪವೂ ನಮ್ಮಿಬ್ಬರಲ್ಲಿ ವೈಮನಸ್ಯವುಂಟಾಗದಂತೆ ನೋಡಿಕೊಳ್ಳುತ್ತಿದ್ದೆ. ಅವನ ಮುಖದ ಮೇಲೆ ಯಾವಾಗಲೂ ಮಂದಹಾಸವು ನಲಿದಾಡುತ್ತಿತ್ತು. ಅದೇ ಪ್ರಶಾಂತ, ನಿಷ್ಕಪಟ ಮಂದಹಾಸ. ಅದು ಯಾರನ್ನೂ ಆಕರ್ಷಿಸುತ್ತಿತ್ತು—ಹೀಗಾಗಿ ಎಲ್ಲರೂ ಅವನ ಮುಖಭಾವಕ್ಕೆ ಮನಸೋಲುತ್ತಿದ್ದರು.

ಶ್ರೀನಾಥನ ಗೆಳೆಯರ ತಂಡ ಬಹು ದೊಡ್ಡದು. ಅವನ ಕಾಹಿಲೆಯ ವೇಳೆ ಮೆಲ್ಲನೆ ಅವರೆಲ್ಲ ಜಾರಿಕೊಂಡಿದ್ದರೂ, ಸ್ವಸ್ಥನಾದೊಡನೆಯೇ ಪುನಃ ಒಬ್ಬೊಬ್ಬರಾಗಿ ಬರತೊಡಗಿದರು. ಹೆಚ್ಚಿನವರು ಅವನಿಂದ ಪುಕ್ಕಟೆಯ ಕಾಫಿಗಿಟ್ಟಿಸುವುದಕ್ಕಾಗಿಯೇ ಬರುತ್ತಿದ್ದರು. ಆ ವಿಷಯಗಳಲ್ಲೆಲ್ಲಾ ತುಂಬಾ ಧಾರಾಳಮನಸ್ಸು ಅವನದು. ತನ್ನನ್ನು ವಂಚಿಸುತ್ತಾರೆಂಬ ಭಾವನೆಯೇ ಅವನಿಗುಂಟಾಗದು. ಹೇಗೂ ತಂದೆ ಕಳುಹುತ್ತಿದ್ದ ಹಣ ಸಾಕಷ್ಟು ಇದ್ದೇ ಇದ್ದಿತಲ್ಲ!

ನನಗೆ ಆ ಸ್ವಾರ್ಥೀ ಸಂಗಾತಿಗಳನ್ನು ಕಂಡಾಗಲೆಲ್ಲ ಮೈ ಉರಿಯುತ್ತಿತ್ತು. ಅವರು ಅವನ ಲೆಕ್ಕಕ್ಕೆ ಕಾಫಿ ಕುಡಿದು ಆರ್ಥಿಕ ಹಾನಿಯನ್ನುಂಟು ಮಾಡುತ್ತಾರಲ್ಲ—ಎಂದು ನನಗೇನೂ ವ್ಯಸನವಿಲ್ಲ. ಆದರೆ ಅವರು ಮೆಲ್ಲಮೆಲ್ಲನೆ ಶ್ರೀನಾಥನನ್ನು ತಮ್ಮ ಜಾಲಕ್ಕೆ ಸಿಲುಕಿಸಿ ಅವನ ಪ್ರಗತಿಗೇ ಕಂಟಕರಾಗುತ್ತಿದ್ದಾರಲ್ಲ—ಎಂದು ಮನದಲ್ಲಿ ಮರುಗಿದೆ. ನಿರ್ಮಲವಾಗಿ ಅರಳಿ ನಲಿದಾಡುವ ಹೂ ಹೇಗೆ ಮುಳ್ಳಿನ ಇರಿತಕ್ಕೆ ಗುರಿಯಾಗಬೇಕೆ?

ಇದನ್ನೆಂತಾದರೂ ತಪ್ಪಿಸಬೇಕೆಂದು ನಾನು ಲೆಕ್ಕಹಾಕಿದೆ. ಒಂದು ರೀತಿಯಲ್ಲಿ ಈ ಭಾವನೆಯು ತುಂಬಾ ಸಂಕುಚಿತವೆನಿಸುತ್ತದೆ. ಏಕೆಂದರೆ—'ಗೆಳೆಯನೊಬ್ಬನು ನನ್ನ ಬಳಿಯೇ ಇರಲಿ; ನನ್ನೊಡನೆಯೇ ಮಾತಾಡುತ್ತಿರಲಿ; ಬೇರಾವ ಒಡನಾಟವನ್ನೂ ಬಯಸದಿರಲಿ'—ಎಂಬುದು ಸ್ವಾರ್ಥೀ ಮನೋಭಾವನೆಯಲ್ಲದೆ ಬೇರೇನು? ಆದರೆ ಆತ್ಮೀಯತೆಯ ಕಾವು ಹೆಚ್ಚಿದಂತೆಲ್ಲ ಭಾವುಕ ವ್ಯಕ್ತಿಗಳ ಹೃದಯದಲ್ಲಿ ಈ ಭಾವನೆ ಬೇರೂರುತ್ತದೆ. 'ತನ್ನ ಗೆಳೆಯ ತನ್ನಿಂದ ದೂರವಾದೊಡನೆ ಎಲ್ಲಿ ಕೆಟ್ಟು ಹೋಗುತ್ತಾನೊ, ಮತ್ತೆ ತನ್ನನ್ನೆಲ್ಲಿ ಬಿಟ್ಟೇ ಬಿಡುತ್ತಾನೊ' ಎಂಬ ಶಂಕಿತಮನೋವೃತ್ತಿಯೇ ಈ ತೆರದ ಪ್ರವೃತ್ತಿಗೆ ಮೂಲ ಕಾರಣ. ಅದರಲ್ಲೂ ಮೊದಲೊಮ್ಮೆ ಪೆಟ್ಟುತಿಂದ ನಾನು ಹೆಜ್ಜೆ-ಹೆಜ್ಜೆಗೂ ಹೆದರುವುದು ಸ್ವಾಭಾವಿಕವೇ!

ಕಿಡಿಗೇಡಿಗಳ ಒಡನಾಟವನ್ನು ತಪ್ಪಿಸಲು ನಾನೊಂದು ಯುಕ್ತಿ ಹೂಡಿದೆ. ಶ್ರೀನಾಥನಿಗೆ ಸಾಹಿತ್ಯವೆಂದರೆ ಪಂಚಪ್ರಾಣ. ಕೈಗೆ ಸಿಕ್ಕ ಪುಸ್ತಕವನ್ನು ಓದದೆ ಬಿಡುತ್ತಿದ್ದಿಲ್ಲ; ಆದರೆ ಅವನ ಅಭಿರುಚಿಯೆಲ್ಲಾ 'ಅಜ್ಜಿಕತೆ' ಹಾಗೂ 'ಪತ್ತೇದಾರಿ ಕತೆ'ಗಳ ಮಟ್ಟಿಗೇ ಮಾತ್ರವಿತ್ತು. ಸಾಹಿತ್ಯದ ಕಡೆಗೆ ಅವನ ಒಲವನ್ನು ಹೆಚ್ಚಿಸಲು ನಾನು ತುಂಬಾ ಪ್ರಯತ್ನಿಸಿದೆ. ಪತ್ತೇದಾರಿ ಕತೆಗಳಿಂದ ಅವನ ಮನಸ್ಸನ್ನು ಸೆಳೆದು ಸಾಮಾಜಿಕ ಕಾದಂಬರಿಯೆಡೆಗೊಯ್ದೆ. ಆಧುನಿಕ ಸಾಹಿತಿಗಳ ಉತ್ತಮ ಕೃತಿಗಳನ್ನು ಅವನಿಗೆ ಓದಲುಕೊಟ್ಟೆ. ಹರಟೆಹೊಡೆಯುವ ಅಭ್ಯಾಸವನ್ನು ಬಹುಮಟ್ಟಿಗೆ ತಗ್ಗಿಸಿದೆ. ಹೀಗೆ ಶ್ರೀನಾಥ ಪುನಃ ನನ್ನವನಾಗಿ ಸಾಹಿತ್ಯಾಭ್ಯಾಸದಲ್ಲಿ ಅಭಿರುಚಿಯನ್ನು ತಳೆದ.

ಸಾಹಿತ್ಯಾಭ್ಯಾಸಕ್ಕೊಂದು ನೇರವಾದ ಗುರಿಯಿರಲೆಂದು ಕನ್ನಡ ಸಾಹಿತ್ಯಪರಿಷತ್ತಿನವರು ಜರುಗಿಸುತ್ತಿರುವ 'ಜಾಣ' ಪರೀಕ್ಷೆಯ ಸಿದ್ಧತೆಯನ್ನೂ ಮಾಡಿಸಿದೆ. ಒಂದಲ್ಲ ಒಂದು ವಿಧದಿಂದ ಬಿಡುಸಮಯವನ್ನು ವ್ಯಾಸಂಗದಲ್ಲೇ ಕಳೆಯುವಂತೆ ಅವನಿಗೆ ದಾರಿಯನ್ನು ತೋರಿಸಿದೆ.

ನಾನು ಮೊದಲೇ ಎಂದಂತೆ, ಶ್ರೀನಾಥನೆಂದರೆ ಕಪಟವರಿಯದ ಜೀವಿ ಎಲ್ಲರೂ ತನ್ನ ಶ್ರೇಯೋಭಿಲಾಷಿಗಳೇ—ಎಂದು ಆವನೆಣಿಕೆ. ಕೆಯೇ ತನ್ನಲ್ಲಿ ಸಾಹಿತ್ಯಾನುರಾಗವು ಹೊಸದಾಗಿ ಹುಟ್ಟುವಂತೆ ಾಡಿದ ನನ್ನನ್ನೇ ಆವನು ಹೊಂದಿಕೊಂಡಿದ್ದುದರಲ್ಲಿ ಆಶ್ಚರ್ಯವೇನು?

ನಾಲ್ಕುತಿಂಗಳ ಪರಿಶ್ರಮದ ಬಳಿಕ 'ಜಾಣ' ಪರೀಕ್ಷೆಯೂ ಹೊದಗಿತು. ಪರೀಕ್ಷೆ ಸಮೀಪಿಸಿದಂತೆಲ್ಲ ಆವನು ಕದಲದೆ ನನ್ನ ಯೇ ಇದ್ದುಬಿಡುತ್ತಿದ್ದ. ತುಸು ಸಂಶಯ ಬಂತೆಂದರೆ ನನ್ನೊಡನೆ ಪರಿಹರಿಸಿಕೊಳ್ಳುತ್ತಿದ್ದ. ಆಗ ನನಗೆಷ್ಟು ಹಿಗ್ಗು! ಕ್ಲಾಸಿನಲ್ಲಿ ಸಹಪಾಠಿ, ಹೊರಗೆ ಗೆಳೆಯನೂ ಹೌದು; ಶಿಷ್ಯನೂ ಹೌದು. ನಮ್ಮ ಸಂಬಂಧ ಶಾಶ್ವತವೆಂದು ನಾನಾಗ ಕನಸುಕಾಣುತ್ತಿದ್ದೆ.

ಜಾಣ ಪರೀಕ್ಷೆ ಮುಗಿದು, ಆವನ ಕನ್ನಡ ವ್ಯಾಸಂಗ ಮೂಲೆ ಗುಂಪಾಯಿತು. ಅದೇಕೋ, ಈಗ ಕತೆ-ಕಾದಂಬರಿಗಳನ್ನೋದುವುದರ ಕಡೆಗೂ ಆವನ ಲಕ್ಷ್ಯವಿರುತ್ತಿದ್ದಿಲ್ಲ. ಬಹುಶಃ ಒಂದೇ ಸವನೆ ೬ ತಿಂಗಳ ಕಾಲ ಎಡೆಬಿಡದೆ ಮಾಡಿದ ಅಭ್ಯಾಸದಿಂದ, ಮನಸ್ಸು ಬೇಸತ್ತು ವಿರಾಮವನ್ನು ಬಯಸಿರಬಹುದು.

ಏನೇ ಇರಲಿ. ಅಭ್ಯಾಸ ನಿಂತೊಡನೆಯೆ ಆವನು ಮತ್ತೆ ತನ್ನ ಹಳೆಯ ಗೆಳೆಯರನ್ನು ಕೂಡಿಕೊಂಡ. ನಾನು ಮನದಲ್ಲೇ ಚಡಪಡಿಸಿದೆ ಆದರೆ ಬಾಯಿಬಿಟ್ಟು ಹೇಳುವುದೇನು? ಆವನಿಗಷ್ಟರ ಸ್ವಾತಂತ್ರ್ಯವೂ ಇಲ್ಲವೆ? ಗೆಳೆಯನೆಂದರೆ ನನ್ನ 'ಪಂಜರದ ಗಿಳಿ' ಯಾಗಬೇಕೆಂಬ ದುರ್ಭಾವನೆಯೆ? ಹೀಗಾಗಿ ಸಂಕುಚಿತಭಾವನೆಯನ್ನು ದೂರಸರಿಸಿ ತಾಳ್ಮೆಯನ್ನು ತಂದುಕೊಂಡೆ.

ಆ ಒಡನಾಡಿಗಳೂ ಸಾಮಾನ್ಯರಲ್ಲ. ಕೆಲ ದಿವಸಗಳವರೆಗಾದರೂ ನಾನು ಆವನನ್ನು ಕಸಿದುಕೊಂಡೆನೆಂಬ ಸಿಟ್ಟು ಅವರಿಗೆ ಇದ್ದೇ ಇತ್ತು. ಹೀಗೆ ನಾನವರನ್ನು ಮುಖತಃ ಅಪಮಾನಿಸದಿದ್ದರೂ, ನನ್ನನ್ನು ದ್ವೇಷಿಸಲಾರಂಭಿಸಿದರು. ಅವರ ನಂಜಿನ ನಗೆ, ಕಟಕಿಯ ಮಾತು, ವಿಲಕ್ಷಣವರ್ತನೆಗಳಿಂದ ಅದು ನಿಚ್ಚಳವಾಗುತ್ತಿತ್ತು. ಶ್ರೀನಾಥನ ಎದುರಿಗೇ ನನ್ನನ್ನು ಗೇಲಿಮಾಡಿದರೂ, ಆವನು ಪ್ರತಿಭಟಿಸುತ್ತಿದ್ದಿಲ್ಲ. 'ನನ್ನ ಮನಸ್ಸಿಗೇನೆನಿಸುವುದೊ, ಇದು ಸರಿಯಲ್ಲ'—ಎಂಬ ಭಾವನೆಯು ಆವನಿಗುಂಟಾಗುತ್ತಲೇ ಇರಲಿಲ್ಲ. ಅಷ್ಟು ಸರಳ ಆವನು. ಅದರಿಂದ ಅನುಚಿತಲಾಭ ಪಡೆದು, ಆವನ ಮನಸ್ಸನ್ನು ಕೆಡಿಸಲು ಯತ್ನಿಸುವ ಆ ನರಾಧಮರಿಗೇನೆನ್ನಬೇಕು?

ಅದೊಂದು ಮಧ್ಯಾಹ್ನ. ಆ ಪೋಲಿಹುಡುಗರೊಡನೆ ಸೇರಿ ಶ್ರೀನಾಥ ಹರಟೆ ಹೊಡೆಯುತ್ತಿದ್ದ. ನಾನು ಆ ಕೋಣೆಯ ಹೊರಗೆ ಕುಳಿತಿದ್ದೆ. ಈ ವಿಚಾರ ಶ್ರೀನಾಥನಿಗೆ ತಿಳಿದಿರಲಿಲ್ಲ. ಅವರ ಮಾತು ನನ್ನನ್ನು ಕುರಿತೇ ನಡೆದಿತ್ತು. ಒಬ್ಬೊಬ್ಬರು ಒಂದೊಂದು ವಿಧವಾಗಿ ಹೀಯಾಳಿಸಿದರು. ತನ್ನ ಸರದಿ ಬಂದಾಗ ಶ್ರೀನಾಥ—'ಆವನ ಒತ್ತಾಯಕ್ಕೆ ಕಾವ್ಯಗಳನ್ನೋದಬೇಕಾದರೆ ಸಾಕುಸಾಕಾಯಿತು. ನನಗೆ ಎಳ್ಳಷ್ಟೂ ಇಷ್ಟವಿಲ್ಲ. ಪರೀಕ್ಷೆಗೆ ಹಣಕಟ್ಟಿದ ಮೇಲೆ ಓದದೆ ನಿರ್ವಾಹವಿದೆಯೆ? ಎಂದು ಮುಗಿಯುತ್ತದೊ ಎಂದುಕೊಂಡಿದ್ದೆ. ಅಂತೂ ಪೀಡೆ ತೊಲಗಿತಲ್ಲ! ಇನ್ನು ಪುಸ್ತಕವನ್ನು ಮುಟ್ಟುವುದೇ ಇಲ್ಲ ಬೆಂಕಿಬೀಳಲಿ ಅವಕ್ಕೆ'—ಎಂದ.

ನನ್ನ ಹೃದಯವನ್ನಾರೋ ಚೂರಿಯಿಂದ ತಿವಿದಂತಾಯಿತು. ಶ್ರೀನಾಥನಿಂದ ಇಂತಹ ಆಶಯವನ್ನು ನಾನು ಬಯಸಿರಲಿಲ್ಲ. ಆವನ ಉದ್ಧಾರಕ್ಕಾಗಿ ನಾನು ಮನಃಪೂರ್ವಕವಾಗಿ ಮಾಡಿಸಿದ ಸಾಹಿತ್ಯದ ಅಭ್ಯಾಸವು, ಹೀಗೆ ಗಾಳಿಗೆ ತೂರುವಷ್ಟು ಹಗುರವಾದೀತೆಂದು ನಾನು ಭಾವಿಸಿರಲಿಲ್ಲ. ಆವನಿಗಿದು ರುಚಿಸದಿದ್ದರೆ, ಹಾಗೆ ಸ್ಪಷ್ಟವಾಗಿ ತಿಳಿಸಬಹುದಿತ್ತು. ಆವನಿಚ್ಛೆಗೆ ವಿರುದ್ಧವಾಗಿ ಒಂದು ಹೆಜ್ಜೆಯಿಡಲೂ ನಾನು ಸಿದ್ಧನಿರುತ್ತಿದ್ದಿಲ್ಲ. ಗೆಳೆತನದಲ್ಲಿ ಈ ರೀತಿಯ ಮುಚ್ಚುಮರೆಯೆ? ಆವನ ಈ ಅಭಿಪ್ರಾಯವನ್ನು ಬೇರಾರು ಬಂದು ಹೇಳಿದ್ದರೂ ನಾನು ನಂಬುತ್ತಿದ್ದಿಲ್ಲ. ಆದರೆ ಕಿವಿಯಾರೆ ಕೇಳಿದುದರಿಂದ, ಅನಿವಾರ್ಯವಾಗಿ ಒಪ್ಪಲೇ ಬೇಕಾಯಿತು.

ಶ್ರೀನಾಥನು ಈ ಮಾತನ್ನು ಯಾವ ಅರ್ಥದಲ್ಲಿ ನುಡಿದನೋ ನಾನರಿಯೆ. ಗೆಳೆಯರ ನಡುವೆ ತಮಾಷೆಗೆಂದು ಹೇಳಿರಬಹುದು. ಆದರೆ ಪರೀಕ್ಷೆಯ ಸಿದ್ಧತೆ ನಡೆಸಿ, ಪರೀಕ್ಷೆ ಮುಗಿಸಿದ ಬಳಿಕ ಕಲಿಸಿದವನ ಕುರಿತು ಹೀಗೆ 'ಅಕೃತಜ್ಞ'ನಾಗುವುದು—ಅದೂ ಕೃತಜ್ಞತೆಯ ಕಲ್ಪನೆಯೇ ಇರದ ಕಿಡಿಗೇಡಿಗಳ ಬಳಿಯಲ್ಲಿ ಸಮಂಜಸವೆ? ಅದನ್ನು ಕೇಳಿಯೂ ನಾನು ಮಾತನಾಡದೆ ಬೆಪ್ಪನಂತೆ ಕುಳಿತಿರಬೇಕಾದರೆ ಆಗಿನ ನನ್ನ ಮನಃಸ್ಥಿತಿ ಹೇಗಿರಬಹುದು?

೧೫ ಮಿನಿಟು ಕಳೆದಿರಬಹುದು. ನಾನು ಅಲ್ಲೇ ಕುಳಿತುಕೊಂಡು ನೆಪಕ್ಕೊಂದು ಪುಸ್ತಕವೋದುವುದರಲ್ಲೇ ತಲ್ಲೀನನಾದೆ. ಆದರೆ ನನ್ನ ಧ್ಯಾನವೆಲ್ಲ ಒಳಗಿನ ಮಾತು-ಕತೆಯಕಡೆ ಸಾಗಿತ್ತು! ನನ್ನಲ್ಲಿದ್ದ—ಇಲ್ಲದ—ದೋಷಗಳನ್ನೆಲ್ಲ ಆರೋಪಿಸಿ ಅವರು, ತಮ್ಮ ಹೃದಯಭಾರವನ್ನು ಸಾಕಷ್ಟು ಇಳಿಸಿಕೊಂಡರು. ಆದರೂ ನಾನು ಪಿಟ್ಟೆನ್ನಲಿಲ್ಲ.

ಟೀಕೆ-ಟಿಪ್ಪಣಿಗಳ ಬಳಿಕ ಸಿನೇಮಾಕ್ಕೆ ಹೋಗುವುದೆಂದು ಅವರ ನಿರ್ಧಾರವಾಯಿತು ಕೆಲದಿನಗಳಿಂದ ಶ್ರೀನಾಥನೂ ಆ ಹುಚ್ಚಿಗೆ ಬಲಿಯಾಗಿದ್ದ. ಪ್ರತಿಯೊಂದು ಚಿತ್ರವನ್ನೂ ಎರಡೆರಡು ಬಾರಿ ನೋಡಬೇಕೆಂಬ ಮಿತ್ರರ ಆಗ್ರಹವನ್ನು ಆವನು ಮೀರುವಂತಿರಲಿಲ್ಲ. ಹೀಗೆ ಮೊದಲೆಂದೂ ಇರದ ಹೊಸದೊಂದು (ಸಿನೇಮಾ!) ರೋಗಕ್ಕೆ ಆವನು ಬಲಿಬಿದ್ದಿದ್ದ.

ಅವರ ನಿರ್ಣಯದಂತೆ ಸಿನೆಮಾಕ್ಕೆ ಹೋಗಲು ಮತ್ತೂ ಒಂದು ಗಂಟೆಯ ಅವಧಿಯಿತ್ತು. ಹೊರಡುವ ಮೊದಲು ಸಿಗರೇಟ್ ಸೇವನೆಯಾಗಲೆಂದು, ಸ್ನೇಹಿತನೊಬ್ಬ ಎಲ್ಲರಿಗೂ ಸಿಗರೇಟ್ ಹಂಚಿದ. ಎಲ್ಲರೊಡನೆ ಶ್ರೀನಾಥನೂ ಸರಾಗವಾಗಿ ಸೇದತೊಡಗಿದ. ನನಗೀ ದೃಶ್ಯವನ್ನು ಕಂಡು ಎಷ್ಟು ದುಃಖವಾಗಿರಬಹುದು! ನಾವಿಬ್ಬರೂ ಸಿಗರೇಟ್ ಸೇದುವುದಿಲ್ಲವೆಂದು ಶಪಥ ಮಾಡಿದ್ದೆವು. ಆದರೆ ಇಷ್ಟು ಸುಲಭವಾಗಿ ಅದನ್ನು ಮುರಿದು ಹೀಗೆ ಹೊಗೆಯಾಗಿ ಹಾರಿಸಿಬಿಡುವನೆಂದು ನಾನು ಎಣಿಸಿರಲಿಲ್ಲ.

ಏನೇ ಆಗಲಿ; ಅವನು ಕಿಡಿಗೇಡಿಗಳ ಒಡನಾಟದಿಂದ ದುರ್ಭ್ಯಾಸಗಳಿಗೂ ಬಲಿಬೀಳುತ್ತಿದ್ದಾನೆಂದು ಯೋಚಿಸಿದಾಗಲೇ, ನನ್ನ ತಲೆ ಜೋರಾಗಿ ಕಾಯಹತ್ತಿತು. ನನ್ನನ್ನು ಹೀನಯಿಸಿದುದಕ್ಕಿಂತಲೂ ನಾಲ್ಮಡಿಯಾಗಿ ಅವನ ಈ ಕೃತ್ಯದಿಂದ ಕಡುಕೆನಿಸಿತು. ಹೀಗೆಯೇ ಸುಮ್ಮನೆ ಕುಳಿತರೆ, ವಾಸುದೇವನ ಗತಿಯೇ ಇವನಿಗಾದೀತೆಂದು ಹೆದರಿದೆ. ಮುಂಜಾಗ್ರತೆ ವಹಿಸುವುದೂ ಗೆಳೆಯನ ಕರ್ತವ್ಯವಲ್ಲವೆ?

ಇಷ್ಟೆಲ್ಲಾ ವಿಚಾರಗಳು ಮಿಂಚಿನಂತೆ ನನ್ನ ಮನದಲ್ಲಿ ಮೂಡಿದುವು. ಮರುಕ್ಷಣವೇ ನಾನು ನೇರವಾಗಿ ಕೋಣೆಯನ್ನು ಪ್ರವೇಶಿಸಿದೆ. ಶ್ರೀನಾಥ ಅರೆಸುಟ್ಟ ಸಿಗರೇಟನ್ನು ಕೈಯಲ್ಲಿ ಹಿಡಿದು ಕಲ್ಲಾಗಿ ಕುಳಿತುಬಿಟ್ಟ. ನಾನು ಯಾರೊಡನೆಯೂ ಮಾತಾಡದೆ, ಒಂದರೆಕ್ಷಣ ರುದ್ರಮುಖದಿಂದ ಶ್ರೀನಾಥನನ್ನೇ ದಿಟ್ಟಿಸಿ ನೋಡಿದೆ. ಮತ್ತೆ ಫಟೀರನೆ ಅವನ ಗಲ್ಲಕ್ಕೊಂದು ಏಟುಬಿಗಿದು ಅಲ್ಲಿಂದ ಹೊರಬಿದ್ದೆ.

ಆಗ ನನ್ನ ಮನಸ್ಸು ತುಂಬಾ ಕ್ಷುಬ್ಧವಾಗಿತ್ತು. ಗೆಳೆಯನ ಅಧಃಪತನದ ಕಲ್ಪನೆಯೇ ನನ್ನನ್ನು ವಿಪರೀತ ಅಶಾಂತಿಗೆ ಗುರಿಪಡಿಸಿತ್ತು. ಒಟ್ಟಿಗೆ ಸಿಟ್ಟೂ ವಿಪರೀತ ಬಂದಿತ್ತು. ಎಲ್ಲಿಯೂ ನಿಲ್ಲದೆ ನಾನು ನೇರವಾಗಿ, 'ಅಜ್ಜರ ಕಾಡಿ'ನ ಏಕಾಂತಸ್ಥಳಕ್ಕೆ ಹೋಗಿ ಕುಳಿತೆ. ಕಲಕಿದ ಮನಸ್ಸು ಶಾಂತವಾಗಲೇ ಇಲ್ಲ. 'ನಾನೇಕೆ ಅವನನ್ನು ಹೊಡೆದೆನೋ' ಎಂದು ಪಶ್ಚಾತ್ತಾಪವಾಯಿತು. ಆದರೆ ವಾಸುದೇವನ ಅವನತಿಯನ್ನು ಕಂಡು ಸುಮ್ಮನಿದ್ದುದೇ ಅನ್ಯಾಯವಾಯಿತೆಂದು ಭಾವಿಸಿದ್ದ ನಾನು, ಹೊಡೆತದ ಸತ್ಪರಿಣಾಮವನ್ನು ನಿರೀಕ್ಷಿಸಿದುದೇನೂ ತಪ್ಪಲ್ಲ.

ನನ್ನ ಹೊಡೆತ ತನ್ನ ಪ್ರಭಾವವನ್ನು ಚೆನ್ನಾಗಿಯೇ ಬೀರಿತ್ತು. ಗೆಳೆಯರ ಸಂಘವನ್ನು ಆಗಲೇ ತೊರೆದು ಅವನು ಹೊರಬಿದ್ದಿದ್ದ. ಅಂದವನು ಸಿನೆಮಾಕ್ಕೂ ಹೋಗಲಿಲ್ಲ; ಅಲ್ಲದೆ ಅಂದಿನಿಂದ ಸಿಗರೇಟಿಗೂ ಅವನು ಶರಣುಹೊಡೆದ.

ತಾನು ಮಾಡಿದ ತಪ್ಪು ಅವನಿಗರಿವಾಗಿರಬೇಕು. ಸ್ವಾಭಾವಿಕವಾಗಿ ಅವನು ತುಂಬ ಒಳ್ಳೆಯವನೆ; ಆದರೆ ಗೆಳೆಯರ ತಂಡವು ತನ್ನನ್ನು ಎತ್ತ ಒಯ್ಯುತ್ತಿದೆಯೆಂದು ಯೋಚಿಸುವ ಅವಕಾಶವೇ ಅವನಿಗೊದಗಿರಲಿಲ್ಲ. ತನ್ನ ತಪ್ಪು ತಿಳಿದಾಗ, ಗೆಳೆಯನಾದ ನನ್ನ ವರ್ತನೆಯ ಅರ್ಥವಾದಾಗ, ಪಶ್ಚಾತ್ತಾಪದ ಬೆಂಕಿಯಲ್ಲಿ ಸುಟ್ಟು ಅವನ ಮನಸ್ಸು ಚಿನ್ನದಂತೆ ಶುದ್ಧವಾಯಿತು.

ಆದರೆ ಅವನ ಸ್ವಭಾವದಲ್ಲಿ ಒಂದು ವಿಚಿತ್ರ ಬದಲಾವಣೆಯಾಯಿತು. ಮೊದಲಿನ ಮುಗುಳ್ನಗೆ ಮಾಯವಾಗಿ ಗಂಭೀರ ಮೌನವು ಆವರಿಸಿತು. ಮುಕ್ತಮನಸ್ಸಿನಿಂದ ನಗುತ್ತಿದ್ದವನು ಅಂತರ್ಮುಖಿಯಾದ. ಯಾವಾಗಲೂ ಸಹಪಾಠಿಗಳೊಡನೆ ಸಲುಗೆಯಿಂದ ಮಾತಾಡುವವನು ಏಕಾಕಿಯಾಗಿಯೇ ಕಾಲಕಳೆಯತೊಡಗಿದ.

ಅವನೇನೋ ದುರ್ಮಾರ್ಗದಿಂದ ಒಮ್ಮೆಲೇ ಸತ್ಪಥಕ್ಕೆ ಕಾಲಿಟ್ಟ. ಆದರೀ ಆಕಸ್ಮಿಕ ಬದಲಾವಣೆಯೇ ನನ್ನ ಪಾಲಿಗೆ ಮುಳುವಾಯಿತು. ಮೊದಲಿನ ಸಲುಗೆ ಆ ಘಟನೆಯ ಬಳಿಕ ಇಲ್ಲದಾಯಿತು. ಇಬ್ಬರಲ್ಲಿ ಒಂದು ರೀತಿಯ ಸಂಕೋಚ. ಅವನಂತೂ ನನ್ನನ್ನು ಕಂಡರೆ ಹೆದ... ದೂರ ಸರಿಯುತ್ತಿದ್ದ. ನಾನೇನು ಮಾಡಬಹುದು? ನನಗೂ ಒಂ... ರೀತಿಯ ಸಂಕೋಚವೆನಿಸುತ್ತಿತ್ತು. ಇದೂ ನನ್ನ ಪ್ರಾರಬ್ಧವೆ... ಭಾವಿಸಿ ಮೌನವಾದೆ.

ಮತ್ತೊಂದು ವರ್ಷವೂ ಅವನು ನನ್ನೊಟ್ಟಿಗೆ, ನನ್ನ ತರಗ... ಯಲ್ಲೇ ಇದ್ದ. ಆದರೂ ನನ್ನ ಹೃದಯಕ್ಕೆ ಎಷ್ಟೊಂದು ದೂರವಾಗಿ... ಯಾವ ದುರಭ್ಯಾಸಕ್ಕೂ ಬಲಿಬೀಳದೆ, ಜ್ಞಾನಾರ್ಜನೆಯೇ ಧ್ಯೇಯ... ವೆಂದು ಭಾವಿಸಿ, ಗೆಳೆಯರ ಗೊಂದಲಕ್ಕೆ ಸಿಲುಕದೆ ಏಕಾಕಿಯಾ... ಕಾಲಕಳೆದ. ಆದರೂ ಎಂದಾದರೊಮ್ಮೆ ಅವನ ಮ್ಲಾನಮುಖ... ಅದರಲ್ಲಿ ಅಂಕಿತವಾದ ಘೋರನಿರಾಶೆಯನ್ನೂ ದೃಷ್ಟಿಸಿದಾಗ- 'ಹಾಯ್! ಇದಕ್ಕೆಲ್ಲ ನಾನೇ ಕಾರಣನೆ?' ಎಂದು ನೋವಿ... ನಿಡುಸುಯ್ದಿದ್ದೇನೆ. 'ಏನೇ ಆಗಲಿ, ನನ್ನ ಪಾಲಿಗೆ ಇಲ್ಲವಾ... ಅವನ ಜೀವನವು ಸರಿದಾರಿಯಲ್ಲಿ ಸಾಗುತ್ತಿದೆಯಲ್ಲ– ಅಷ್ಟೇ ಸಾ... ಎಂದು ಸಮಾಧಾನ ತಂದುಕೊಳ್ಳುತ್ತೇನೆ.

ಶಾಲಾಜೀವನವನ್ನು ಮುಗಿಸಿ ಅವನು ತನ್ನೂರಿಗೆ ತೆರ... ಆಗಲುವಾಗಲೂ ನಾವು ಪರಸ್ಪರರು ಮಾತಾಡಲಿಲ್ಲ; ಶು... ಕೋರಲಿಲ್ಲ. ಆದರೆ ನಮ್ಮಿಬ್ಬರಲ್ಲಿ ಯಾರಿಗೂ ಪರಸ್ಪರ ಮ... ವಾಗಲಿ, ದ್ವೇಷವಾಗಲಿ ಇದ್ದಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಮನದಲ್ಲೇ ನಾವು ಒಬ್ಬರಿಗೊಬ್ಬರು ಶುಭ ಕೋರಿದೆವು. ಕಣ್ಣು... ಸಂದೇಶವನ್ನು ಹೊರಸೂಸಿತು. ಮೊದಲಿನ ಸಂಕೋಚ–ಭಯಗ... ಇಲ್ಲೂ ಬಾಯಿಗೆ ಬೀಗಹಾಕಿದ್ದುವು.

ಅವನಿಂದು ನನ್ನಂತೆಯೇ ಅಧ್ಯಾಪಕವೃತ್ತಿಯಿಂದ ಜೀವ... ಸಾಗಿಸುತ್ತಿದ್ದಾನೆಂದು ಕೇಳಿದ್ದೇನೆ. ಆದರೆ ನಮ್ಮಿಬ್ಬರಲ್ಲಿ ಪರಸ್ಪ... ಪತ್ರವ್ಯವಹಾರವಾಗಲಿ, ಭೇಟಿಯಾಗಲಿ, ನಡೆದುದಿಲ್ಲ. ಬಹು... ನಡೆಯುವಂತೆಯೂ ಇಲ್ಲವೇನೋ!

ನಾನಂದು ಅವನ ಗಲ್ಲದ ಮೇಲೆ ಕೊಟ್ಟ ಏಟು, ನನಗೆ ಜೀವ... ವಿಡೀ ಮರವೆಯಾಗದು. ನನ್ನಂತೆಯೇ ಅವನೂ ಮರೆಯುವಂತಿಲ್ಲ. ಆ ಒಂದೇ ಒಂದು ಸಾಧಾರಣ ಏಟು ಅವನ ದುರ್ಗುಣಗಳಿಗೂ ನಮ್ಮಿರ್ವರ ಗೆಳೆತನಕ್ಕೂ ಕೊಡಲಿಯೇಟಾಗಿ ಪರಿಣಮಿಸಿತ್ತು.

ಮೂರನೆಯ ಗೆಳೆಯನ ವಿಷಯವನ್ನು ಇನ್ನೊಮ್ಮೆ ಹೇಳುವೆನು...

× × × ×

ನೆನೆವುದೆನ್ನ ಮನಂ ಬನವಾಸಿ ದೇಶಮಂ

(ಸ್ಥಳ ಪರಿಚಯ)

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಧಾರವಾಡ

●

ಬನವಾಸಿ ಇಂದು ಒಂದು ಕೊಂಪೆಯಾಗಿದ್ದಂತೆ ಕಾಣುತ್ತಿದ್ದರೂ, ಅದರ ಪೌರಾಣಿಕ-ಐತಿಹಾಸಿಕ ಮಹಾತ್ಮ್ಯಗಳು ಸಾಕಷ್ಟು ಇವೆ. ದ್ವಾಪರದ ಶ್ರೀಕೃಷ್ಣನು ಬನವಾಸಿಗೆ ಬಂದುದರ ಕತೆ ಹರಿವಂಶ ಪುರಾಣದಲ್ಲಿದೆ. ಕದಂಬರಿಂದ ಪ್ರಾರಂಭವಾದ ಬನವಾಸಿಯ ಐತಿಹಾಸಿಕ ಮಹತಿ ಹದಿನೇಳನೆಯ ಶತಮಾನದವರೆಗೂ ಮುಂದುವರಿದಿದೆ.

●

ಬನವಾಸಿ ಅಂದು ದೇಶವಾಗಿತ್ತೇನೋ! ಅಥವಾ ಕವಿಹೃದಯ ಅದನ್ನು ಹಾಗೆ ಅಪೇಕ್ಷಿಸಿ ವರ್ಣಿಸಿತ್ತೊ! ಅಥವಾ ಅನೇಕ ಶತಮಾನಗಳ ತರುವಾಯ ಸಂಸ್ಕೃತಿ-ಸೌಂದರ್ಯಗಳ ವ್ಯಾಖ್ಯೆಯಲ್ಲಿಯೂ ವ್ಯತ್ಯಾಸವಾಗುತ್ತದೋ! ಅಂದು ಬನವಾಸಿಯ ಹಿರಿಮೆಯಿಂದ ಪಂಪಕವಿ ಮೋಹಿತನಾಗಿದ್ದರೆ, ಇಂದು ಆ ಪಂಪನ ಹೇಳಿಕೆಯಿಂದ ಬನವಾಸಿಯ ಮೋಹ ಜನರಿಗಾಗಬೇಕಾಗಿದೆ.

ಬನವಾಸಿ ಘಟ್ಟದ ಮೇಲಿನ ಪ್ರದೇಶ; ಶಿರಸಿಯಿಂದ ಹದಿನೈದು ಮೈಲು ಅಂತರದಲ್ಲಿದ್ದರೂ, ತಲುಪಲು ಎರಡು ತಾಸು ಬೇಕು. ಪ್ರವಾಸಿಗಳು ತಲೆಗೆ ಪೆಟ್ಟು ತಿಂದಾದರೂ ಎಡಬಲದ ಸೌಂದರ್ಯವನ್ನು ನೋಡಿ ಸಮಾಧಾನಪಡಲಿ—ಎಂಬುದೇ ಆಡಳಿತ ತಂತ್ರದ ಉದ್ದೇಶವಿರಬೇಕು; ಮೋಟರು ಹೋಗುವ ದಾರಿ ಅಷ್ಟು ಚೆನ್ನಾಗಿದೆ! ಸಂಶಯಾಸ್ಪದ ಗಡಿಪ್ರದೇಶಗಳಲ್ಲಿ, ಜಕ್ಕಣಾಚಾರ್ಯರ ಕಟ್ಟಿಡ ಕನ್ನಡತ್ವವನ್ನು ಸಾರಿ ಹೇಳುವಂತೆ, ಬನವಾಸಿಯು ಕನ್ನಡಶಾಲೆ ಜಕ್ಕಣಾಚಾರ್ಯರ ಕಟ್ಟಿಡ, ಪರಪ್ರಾಂತೀಯರ ನುಂಗಿ ನೀರು ಕುಡಿಯುವ ಮೋಹವನ್ನು ತಡೆಹಿಡಿದು ನಿಲ್ಲಿಸಿವೆ ಸ್ಪರ್ಧೆಯಿಲ್ಲದ ಕನ್ನಡ ಪ್ರಾವೀಣ್ಯ ಬೇಡವೆಂದು, ಜೋಡಿಗೊಂದು ಅರ್ಧಮರ್ಧ ಪ್ರಾಥಮಿಕ ಶಿಕ್ಷಣ ಕೊಡುವ ಉರ್ದುಶಾಲೆಯೂ ಇದೆ: ಬನವಾಸಿಯಲ್ಲಿಯ ಹೊಸ ಪ್ರಯೋಗದ ವೈಶಿಷ್ಟ್ಯವೆಂದರೆ, ಒಕ್ಕಲುತನದ ಶಿಕ್ಷಣ ಕೊಡುವ ಪ್ರಾಥಮಿಕ ಶಾಲೆ. ಅಲ್ಲದೆ ಅನೇಕ ಹುಡುಗಿಯರೂ ಆ ಶಿಕ್ಷಣದ ಸಿದ್ಧಾಂತ.—ಪ್ರಾತ್ಯಕ್ಷಿಕೆಗಳನ್ನು ಯಶಸ್ವಿಯಾಗಿ ಮಾಡಬಲ್ಲವರಾಗಿದ್ದಾರೆ!

ಕನ್ನಡ ಸಂಸ್ಕೃತಿಯ ಹಳೆಯ ಪ್ರತೀಕವಾದ ಗ್ರಾಮದ ಮಹಾಜನರ ಆಡಳಿತತಂತ್ರ ಅಲ್ಲಿಯೂ ಇದೆ:

ಶಿರಸಿಯಿಂದ ಹೊರಟ ಬಸ್ಸು ಬನವಾಸಿಗೆ ತಲುಪಿ ನೇರವಾಗಿ ಮಧುಕೇಶ್ವರ ದೇವಾಲಯದ ಎದುರಿಗೇ ಹೋಗಿ ನಿಲ್ಲುತ್ತದೆ. ಬಂದ ಅತಿಥಿಗಳನ್ನು ಸ್ವಾಗತಿಸಲು ಸಿದ್ಧರಾಗಿರುವ ನಾಡಿಗರ ತಿರುಕಪ್ಪನವರ ಮನೆಯೂ ಅದರ ಎದುರಿಗೇ! 'ನಾಡಿನ ಉತ್ಸವದಲ್ಲಿ ಬ್ರಾಹ್ಮಣ, ಜೈನ, ಮಹಮ್ಮದೀಯರೆಂಬ ಭೇದಭಾವ ಸಲ್ಲದು' ಎಂಬುದಕ್ಕೆ ಸಾಕ್ಷಿಯಾಗಿ ಶ್ರೀ ಕಾಝಿಯವರು, ಉಚ್ಚ ಶಿಕ್ಷಣ ಪಡೆಯುತ್ತಿದ್ದರೂ ವಿನಯದಿಂದ ಸಹಕಾರ ನೀಡುವ ಶ್ರೀ. ಮುಳಗುಂದರು, ಅಲ್ಲಿಯೇ ಹಾಜರು! ಬನವಾಸಿಯ ಯುವಕರ ಅಪರಿಮಿತ ಉತ್ಸಾಹ, ಮತ್ತೆ ಆ ನಾಡಿಗೆ ವೈಭವವನ್ನು ತರುವುದೆಂಬ ಆಶೆ ಯಾರಲ್ಲಾದರೂ ಚಿಗಿಸುವಂತಿದೆ!

ಬನವಾಸಿ ಒಂದು ಕಾಲದಲ್ಲಿ ಕದಂಬರ ರಾಜಧಾನಿ! ಪಲ್ಲವ ರಾಜನ ಕೂಡ ಕಾದಾಡಿ, ಹಟದಿಂದ ಮಯೂರವರ್ಮನು ಕಟ್ಟಿದ ರಾಜ್ಯವದು! ರಾಜಧಾನಿಯ ಕುರುಹಾಗಿ ಸದ್ಯ ಅಲ್ಲಿ ಕಾಣುವುದೆಂದರೆ ಕೋಟೆಯ ಗೋಡೆಯೊಂದೇ! ಜನ ಅಲ್ಲಿಂದ ಕಲ್ಲುಗಳನ್ನು ಕಿತ್ತುಕೊಂಡು ಹೋಗುತ್ತಿರುವುದರಿಂದ, ಏರಿಳಿತಗಳು ಬಹಳ! ಕೋಟೆಯ ಆಚೆಯ ಪಕ್ಕದಲ್ಲಿಯೇ ಪಾತ್ರ ತುಂಬಿ ಹರಿಯುವ ವರದಾನದಿ! ಮಳೆಗಾಲದಲ್ಲಿ ಚಿಕ್ಕ ದೋಣಿಗಳನ್ನೂ ಅಲ್ಲಿ ಬಿಡುವುದುಂಟು. ನದಿಯ ದಂಡೆಯಲ್ಲಿಯೇ ಆದಿಬನವಾಸಿ! ಎಂದರೆ ಅಲ್ಲಿ ವಿಶೇಷವಾದುದು ಏನೂ ಇಲ್ಲ: ಮಧುಕೇಶ್ವರ ದೇವಸ್ಥಾನದ ಹಳೆಯ ಕಟ್ಟಡ; ಹೊಸದರಂತೆಯೇ ಕಟ್ಟಿದ್ದು, ಆದರೆ ಚಿಕ್ಕದು. ಮತ್ತೆ ಅದರ ಪಕ್ಕದಲ್ಲಿಯೇ ಒಡಮೂಡಿದ ದುರ್ಗಾದೇವಿಯ ದೇವಾಲಯವೊಂದು! ಹಳೆಯ ಬನವಾಸಿಗೂ ಹೊಸ ಬನವಾಸಿಗೂ ಬಹಳ ಅಂತರವಿಲ್ಲ ಇರುವ ಜನವಸತಿಯೆಲ್ಲ ಹೊಸ ಬನವಾಸಿಯಲ್ಲಿಯೇ! ಸನಾತನಿಗಳಿಗೂ, ಹೊಸ ಕಾಲದ ಯುವಕರಿಗೂ ಇರುವ ಅಲ್ಪಸ್ವಲ್ಪ ಮತಭೇದವನ್ನು ಬಿಟ್ಟರೆ, ಇಲ್ಲಿಯ ಜನ ಮಾತ್ರ ತುಂಬ ಒಳ್ಳೆಯವರು!

ಬನವಾಸಿಯಲ್ಲಿ ಮುಖ್ಯವಾಗಿ ನೋಡತಕ್ಕಂತಹದೆಂದರೆ ಜಕ್ಕಣಾಚಾರ್ಯರ ಕಟ್ಟಿದ, ಶ್ರೀ ಮಧುಕೇಶ್ವರ ದೇವಸ್ಥಾನ! ದೇವಸ್ಥಾನವು ತುಂಬಿ ವಿಶಾಲವಾಗಿದೆ. ದೇವಾಲಯದ ಎದುರೇ ಧ್ವಜಸ್ತಂಭ, ದೀಪಸ್ತಂಭ! ಅಲ್ಲಿಂದ ನೇರವಾಗಿ ನೋಡಿದರೆ ದೇವರ

ಮೂರ್ತಿ ಕಣ್ಣಿಗೆ ಬೀಳುವಂತೆ ಕಟ್ಟಿನ ಕಟ್ಟಿದ. ಮಧುಕೇಶ್ವರನ ದೇವಸ್ಥಾನದಲ್ಲಿ ಒಳಹೋಗಬೇಕಾದರೆ, ಸುತ್ತಲಿನ ಕಲ್ಲುಮಾಳಿಗೆಯ ಆವರಣ, ಮತ್ತೆ ಅದರ ಒಳಗಿನದು—ಇವೆರಡನ್ನೂ ದಾಟಿಹೋಗಬೇಕಾಗುತ್ತದೆ. ಸಭೆ-ಸಮ್ಮೇಲನಗಳು ಜರುಗುವದು ಈ ಹೊರ ಆವರಣದಲ್ಲಿಯೇ! ಮಧುಕೇಶ್ವರನ ಮೂರ್ತಿ ತುಂಬ ದೊಡ್ಡದಾಗಿದೆ: ನೂರೂ ಹೊತ್ತು ಪೂಜೆ, ಆರತಿ ದೇವರಿಗೆ ಸಲ್ಲಲೇಬೇಕಾದುದು! ಒಂದೊಂದು ಹೊತ್ತಿನ ಪೂಜೆ ಒಬ್ಬೊಬ್ಬರಿಗೆ! ಬೆಳಗ್ಗೆ ಪೂಜೆಮಾಡುವವರ ಅಡ್ಡ ಹೆಸರು 'ಪ್ರಾತಃಕಾಲ' ಎಂದೇ ಬಿದ್ದುದನ್ನು ಅಲ್ಲಿ ಕಾಣಬಹುದು. ವಿಶೇಷವಾದ ಹಬ್ಬ-ಹರಿದಿನಗಳಂದು ಮಧುಕೇಶ್ವರನ ಉತ್ಸವಮೂರ್ತಿಯ ಉತ್ಸವ-ಮೆರವಣಿಗೆಗಳೂ ಆಗುವವು. ಮಧುದೈತ್ಯನ ಭವ್ಯವಾದ ಮುಖವಾಡವೂ ದೇವಸ್ಥಾನದಲ್ಲಿದೆ. ಎಲ್ಲ ಪ್ರಾಚೀನ ದೇವಸ್ಥಾನಗಳಲ್ಲಿಯೂ, ಪೂಜೆಗಾಗಿ ಭೂಮಿಯನ್ನು ಉಂಬಳಿಯಾಗಿ ಕೊಟ್ಟು, ಹಾಗೆ ಶಿಲಾಲೇಖನವನ್ನೂ ನೆಟ್ಟಿರುವಂತೆ ಈ ದೇವಸ್ಥಾನದಲ್ಲಿಯೂ ಇದೆ.

ದೇವಸ್ಥಾನದ ಮುಖ್ಯಕಟ್ಟಡದ ಸುತ್ತಲಿನ ಪ್ರಾಕಾರ ತುಂಬ ವಿಸ್ತಾರವಾಗಿದೆ. ಅನೇಕ ಅಂಕಣಗಳು ಅದರಲ್ಲಿದ್ದು ಪ್ರತಿಯೊಂದು ಅಂಕಣದಲ್ಲಿಯೂ, ಒಂದೊಂದು ಮೂರ್ತಿ ಕೆತ್ತಲ್ಪಟ್ಟಿದೆ. ಅಷ್ಟದಿಕ್ಪಾಲಕರು, ದಶಾವತಾರಗಳು, ಸೂರ್ಯ, ಚಂದ್ರ, ಗಣಪತಿ ಮತ್ತೆ ಅವರೊಡನೆ ದೇವತೆಗಳ ವಿಗ್ರಹಗಳು ಕೆತ್ತಲ್ಪಟ್ಟಿವೆ. ಈ ದೇವತೆಗಳಲ್ಲಿ ಅರ್ಧ ಗಣಪತಿಯೊಂದಿದೆ. ಅಲ್ಲಿ ನಂದಾದೀಪದ ಸೇವೆಯೂ ಸಲ್ಲುತ್ತದೆ. ಒಳ್ಳೇ ಸತ್ಯವಂತನಂತೆ ಗಣಪತಿ ಒಡಮೂಡಿದ ಮೂರ್ತಿ ಆ ಗಣಪತಿಯೆಂದು ಹೇಳಿದರೂ ಅರ್ಧಭಾಗ ಕೊರೆದಂತೆ ಸ್ಪಷ್ಟವಾಗಿ ಕಾಣುತ್ತದೆ.

ಜಕ್ಕಣಾಚಾರ್ಯರಿಗೂ ಅವರ ಮಗನಿಗೂ ಮತಭೇದವಾಗಿ ಜಕ್ಕಣಾಚಾರ್ಯರು ಪರಾಜಿತರಾಗಿ, ತಮ್ಮ ಕೈ ಕಡಿದುಕೊಟ್ಟರೆಂದು ಹೇಳುವ ದಂತಕಥೆಗೆ ಆಧಾರವಾಗಿ ಒಂದು ಗುರುತನ್ನೂ, ಇಲ್ಲಿ ಮಧುಕೇಶ್ವರ ದೇವಸ್ಥಾನದ ಮೇಲ್ಗಡೆಗೆ ತೋರಿಸುತ್ತಾರೆ. ಮೇಲಿನ ಶಿಖರದ ಮೇಲೆ ಏರಿಹೋಗಲು ಮೆಟ್ಟಲುಗಳೂ ಇವೆ. ಶಿಖರ ಬಹು ವಿಸ್ತಾರವಾಗಿದೆ. ಸುತ್ತು ಪ್ರಾಕಾರದಲ್ಲಿ ಕೊರೆದ ಮೂರ್ತಿಗಳಲ್ಲದೆ, ಧರ್ಮಶಾಲೆಯಂತೆ ಪಡಸಾಲೆಗಳೂ ಇವೆ. ಪಾಕಗೃಹ, ಯಾಗಶಾಲೆ ಇವೆಲ್ಲ ಬೇರೆ ಬೇರೆ. ಯಾಗಶಾಲೆಯಲ್ಲಿ ದಸರೆಯ ದಿನ ಪೂರ್ಣಾಹುತಿಯ ಯಜ್ಞವೂ ನಡೆಯುತ್ತದೆ. ಈ ದೇವಸ್ಥಾನದ ಪ್ರಾಕಾರದಲ್ಲಿ ಒಳಹೊರಗೆ ಒಟ್ಟು ಕೂಡಿ ೯೯೯ ಈಶ್ವರಲಿಂಗಗಳಿವೆಯಂತೆ. ಇನ್ನೊಂದೇ ಆಗಿದ್ದರೆ, ವಾರಣಾಸಿಯ ಮಹತ್ತ್ವ ಅದಕ್ಕೆ ಬರುತ್ತಿತ್ತಂತೆ! ಆದರೂ 'ದಕ್ಷಿಣಕಾಶಿ' ಎಂದೇನೋ ಅದಕ್ಕೆ ಹೇಳುತ್ತಾರೆ.

ಮಧುಕೇಶ್ವರನ ದೇವಸ್ಥಾನಕ್ಕೆ ಹೊಂದಿಕೊಂಡು ಅಷ್ಟೇ ವಿಶಾಲವಾಗಿ ಪಾರ್ವತೀದೇವಿಯ ದೇವಾಲಯವಿದೆ. ಅಮ್ಮನವರ ದೇವಾಲಯವೆಂದು ಅದಕ್ಕೆ ಹೇಳುವರು. ಅಲ್ಲಿಯೂ ಪೂಜೆ ಆರತಿ ಮಧುಕೇಶ್ವರನಿಗೆ ನಡೆದಂತೆ ಯಥಾಸಾಂಗವಾಗಿ ನಡೆಯುವುವು. ಇಲ್ಲಿಯ ಗರ್ಭಗುಡಿಯ ಪಕ್ಕದ ಕೋಣೆಯಲ್ಲಿ, ಒಂದು ಬಹು ಪುರಾತನಕಾಲದ ಮಂಚವಿದೆ; ಅದು ಅರ್ಧಮರ್ಧ ಮುರಿದು ಹೋಗಿದ್ದರೂ ಅದರಲ್ಲಿಯ ಕೆತ್ತನೆಯ ಕೆಲಸ ನೋಡುವಂತಹದು. ಅದರ ಎದುರುಗಡೆಯಲ್ಲಿ ಒಂದು ಎತ್ತರವಾದ ಕಲ್ಲಿನ ಮಂಚವಿದೆ. ಅದರಲ್ಲಿಯ ಮೂರು ಅಂತಸ್ತುಗಳಲ್ಲಿ ಸ್ವರ್ಗ, ಮರ್ತ್ಯ, ಪಾತಾಳಲೋಕವನ್ನು ಕಲ್ಲಿನಲ್ಲಿಯೇ ಕೊರೆದು ತೋರಿಸಲಾಗಿದೆ!

ಪ್ರಾಕಾರದಲ್ಲಿ ಇನ್ನೊಂದು ಮನಸೆಳೆಯುವ ನೋಡತಕ್ಕ ವಸ್ತುವೆಂದರೆ ಕಲ್ಲಿನ ಮಂಚ. ಇದನ್ನು ಒಳಗಿಟ್ಟೇ ಹೊರಗಿನ ಗೋಡೆಗಳನ್ನು ಕಟ್ಟಿದಂತೆ ಕಾಣುತ್ತದೆ; ಕಲ್ಲಿನ ಮಂಚದ ಮೇಲೆ ಬರೆಹವೂ ಇದೆ. ಸ್ವಾದಿಯ ರಾಜನು ಕಾಣ್ಕೆಯಾಗಿ ಕೊಟ್ಟಿದ್ದ ಉಲ್ಲೇಖವೂ ಅದರ ಮೇಲಿದೆ. ಮಂಚಕ್ಕೆ ಕಲ್ಲಿನ ಮೇಲುಹಾಸಿಗೆ ಬೇರೆ ಇದೆ. ಮೇಲಿನ ಕೆಳಗಿನ ಹಾಸಿಗೆಗಳನ್ನು ಒಂದೊಂದೇ ಕಲ್ಲಿನಲ್ಲಿ ಕೊರೆಯಲಾಗಿದೆ. ಮೇಲುಹಾಸಿಗೆಯ ಕೆತ್ತನೆಯ ಕೆಲಸ ತುಂಬ ನಯವಾಗಿದೆ; ನಯವಾದ ಬಟ್ಟೆಯ ಮೇಲೆ ರೇಶಿಮೆಯಲ್ಲಿ ಬಿಡಿಸಿದಂತೆ, ಎರಡೂ ಹಾಸಿಗೆಗಳ ಸುತ್ತಲೂ ಅಂದವಾಗಿ ಕೊರೆದ ಹೂಬಳ್ಳಿ ಇದೆ. ಮತ್ತೆ ಮಧ್ಯದಲ್ಲಿ ಮೇಲುಹಾಸಿಗೆಗೆ ಪದ್ಮ! ಮೇಲುಹಾಸಿಗೆಯನ್ನು ಎತ್ತಿ ಹಿಡಿದಿರುವ ನಾಲ್ಕೂ ಕಂಬಗಳು ಚಿತ್ರವಿಚಿತ್ರವಾಗಿ ಕೊರೆಯಲ್ಪಟ್ಟಿವೆ. ಈ ಕಂಬಗಳ ಮಧ್ಯದಲ್ಲಿ ನಾಲ್ಕೂ ಬದಿಗೆ ಅದೇ ಕಲ್ಲಿನಲ್ಲಿಯೇ ಆನೆ-ಸಿಂಹಗಳನ್ನು ಕೊರೆಯಲಾಗಿದೆ. ಕೆಳಹಾಸಿಗೆಯ ತಳದಲ್ಲಿ ಕಮಲವನ್ನು ಕಲ್ಲಿನಲ್ಲಿ ಅರಳಿಸಲಾಗಿದೆ. ಮಂಚದ ಕೆಳಗಿನ ನಾಲ್ಕು ಕಾಲುಗಳಲ್ಲಿಯೂ ಕೆತ್ತನೆಯ ಕೆಲಸ ಬಹಳ ನಯವಾಗಿದೆ. ಶತಮಾನಗಳುರುಳಿದ್ದರೂ, ಕಲ್ಲಿನ ಮಂಚ ಅಚ್ಚಳಿಯದಂತೆ ಇದೆ.

ಬನವಾಸಿಯಲ್ಲಿ ಇನ್ನೊಂದು ನೋಡುವಂತಹ ವಸ್ತುವೆಂದರೆ, ಮಧುಕೇಶ್ವರನ ರಥ! ಯುಗಾದಿಗೆ ರಥೋತ್ಸವವಂತೆ. ಇರುವ ಮೂರು ರಥಗಳಲ್ಲಿ, ಒಂದು ತೀರ ದೊಡ್ಡದಾಗಿದೆ. ಒಂದು ಬಾರಿ ಅದು ಉರುಳಿದರೆ ಆ ದಾರಿಯ ಕೊನೆಗೇ ಹೋಗಿ ಬಿಡುವುದಂತೆ. ಅದಕ್ಕೆ ಏಳು ಅಂತಸ್ತುಗಳು. ಮೇಲೆ ವಿದ್ಯುತ್ತಿನ ತಂತಿಗಳ ಭಯವೇ ಬನವಾಸಿಯಲ್ಲಿ ಇಲ್ಲದ್ದರಿಂದ, ಮೇಲೆ ಯಾವ ಎತ್ತರಕ್ಕೆ ಬೇಕಾದರೂ ರಥವು ಏರಬಹುದು. ವರುಷಕ್ಕೊಂದು ಬಾರಿ ಬಣ್ಣಹಚ್ಚಿ ಅಲ್ಪ ದುರುಸ್ತಿ ಮಾಡಲೂ ಒಂದು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಹಣ ಅದಕ್ಕೆ ಬೇಕಂತೆ! ಅಲ್ಲದೆ ಇದರ ಜೊತೆಗೆ ಇನ್ನೂ ಎರಡು ರಥಗಳಿವೆ. ಒಂದು ಹೂವಿನ ರಥ, ಇನ್ನೊಂದು ಉರುಳುವ ರಥ. ದೊಡ್ಡ ರಥಕ್ಕೆ ಹೋಲಿಸಿದಾಗ ಅದು ಹೂವಿನ ರಥವೇ; ಆದರೆ ಅದೂ ಕೂಡ ಬಹಳ ದೊಡ್ಡದಾಗಿದೆ. ಮಧುಕೇಶ್ವರನ ದೊಡ್ಡ ರಥವನ್ನು ಎಳೆಯುವವರು ಹರಿಜನ ಭಕ್ತರೇ ಎಂಬುದನ್ನೂ ನಾವಿಲ್ಲಿ ಕಾಣಬಹುದು. ಬನವಾಸಿಯ ಸುತ್ತು ಸ್ಥಳಮಹಾತ್ಮೆಯುಳ್ಳ ಚಿಕ್ಕ ಹಳ್ಳಿಗಳೂ ಇವೆ. ಆದರೆ ಶಿಕ್ಷಣದ ಅಭಾವದಿಂದ, ಪ್ರವಾಸದ ಅನನುಕೂಲತೆಯಿಂದ, ಅಲ್ಲಿರುವ ನೈಸರ್ಗಿಕ ಸಂಪತ್ತಿನ ಉಪಯೋಗವನ್ನು ಮಾಡಿಕೊಳ್ಳುವುದು ಅಸಾಧ್ಯವಾಗಿದೆ; ಏಕೀಕೃತ ಕರ್ನಾಟಕದಲ್ಲಿ ಮತ್ತೆ 'ನೆನವುದೆನ್ನ ಮನಂ ಬನವಾಸಿ ದೇಶಮಂ,' ಎಂದು ಹೇಳುವ ಸುದಿನಗಳು ಬರುವುವೆಂದು ಆಶಿಸೋಣ!

ಅರ್ನೆಸ್ಟ್ ಹೆಮಿಂಗ್ವೆ

(ವ್ಯಕ್ತಿ ಮತ್ತು ಸಾಹಿತ್ಯ)

ಶ್ರೀ. ಜಿ. ಎಸ್. ಮುತಕರ, ಎಮ್. ಎ., ಬಿ. ಟಿ.
ನಾಸಿಕ

ಈ ಸಲದ ಸಾಹಿತ್ಯಿಕ ನೋಬಲ್ ಬಹುಮಾನವನ್ನು ಪಡೆದ ಅಮೇರಿಕದ ಸುಪ್ರಸಿದ್ಧ ಕಾದಂಬರಿಕಾರನಿವನು. ಕೀರ್ತಿಯೂ ಹಣವೂ ಈತನ ಸುತ್ತು ಪ್ರದಕ್ಷಿಣೆ ಹಾಕುತ್ತಲಿವೆ.

▲

ಈ ವರ್ಷದ ಒಂದು ಲಕ್ಷ ಅರವತ್ತೆರಡು ಸಾವಿರ ಐದು ನೂರು ಡಾಲರುಗಳ **ನೊಬಲ್** ಪಾರಿತೋಷಕವು, ಅಮೇರಿಕೆಯ ಸುಪ್ರಸಿದ್ಧ ಕಾದಂಬರಿಕಾರನಾದ ಶ್ರೀ. ಅರ್ನೆಸ್ಟ್ ಹೆಮಿಂಗ್ವೆ ಇವನಿಗೆ ದೊರಕಿರುವುದು. ಇದಕ್ಕಿಂತ ಮೊದಲು ಅಮೇರಿಕೆಯ, **ಸಿಂಕ್ಲೆ ಅರ್ ಲುಯಿ,** ಯುಜಿನ್ **ಓನೀಲ್**, ಪರ್ಲ್‌ಬಕ್, ಮತ್ತು ವಿಲಿಯಮ್ ಫಾಕನರ್ ಎಂಬ ನಾಲ್ಕು ಜನ ಲೇಖಕರಿಗೆ ಈ ಪಾರಿತೋಷಕವು ಸಿಕ್ಕಿತ್ತು. ಶ್ರೀ. ಸಿಂಕ್ಲೆ ಅರ್ ಲುಯಿ ಅವರಿಗೆ ಈ ಪಾರಿತೋಷಕವು ೧೯೩೦ ರಲ್ಲಿ ಸಿಕ್ಕಿತ್ತು. ಆಗ **ಅವರು ಮಾಡಿದ** ಭಾಷಣದಲ್ಲಿ ಉಲ್ಲೇಖಿತರಾದ ಉದಯೋನ್ಮುಖ ಲೇಖಕರಲ್ಲಿ, ಅರ್ನೆಸ್ಟ್ ಹೆಮಿಂಗ್ವೆಯ ಹೆಸರು ಇದ್ದಿತು. ಈತನು ೨೫ ವರ್ಷಗಳಿಂದಲೂ ಬರೆಯುತ್ತ ಬಂದಿರುವನು. ಇವನಿಗೆ ನೊಬಲ್ ಪಾರಿತೋಷಕವು ಸಿಗಬಹುದೆಂದು, ತಜ್ಞ ಸಮೀಕ್ಷಕರು ಎಷ್ಟೋ ಸಾರೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದರು; ಆದರೆ ಪ್ರತಿಯೊಂದು ಸಲಕ್ಕೂ ಯಾವುದಾದರೊಂದು ವಿಘ್ನವು ನಡುವೆ ಬರುತ್ತಲಿತ್ತು. ಹೋದ ಸಾರೆಯೆ ಈ ಲೇಖಕನಿಗೆ ಈ ಪಾರಿತೋಷಕವು ಸಿಗಬಹುದಾಗಿತ್ತು; ಆದರೆ ಚರ್ಚಿಲರಿಗೆ ಅದು ಸಿಕ್ಕಿತು ಈ ಸಾರೆ ಯಾವರೂ ಇವನಿಗೆ ಒಬ್ಬ ರಶಿಯನ್ ಲೇಖಕನು ಪ್ರತಿಸ್ಪರ್ಧಿಯಾಗಿ ಇದ್ದನು. ಆದರೂ ಕೂಡ ಇವನಿಗೆ ಈ ವರ್ಷ ವಿಜಯಶ್ರೀಯು ಮಾಲೆಯನ್ನು ಹಾಕಿರುವಳು

ಶ್ರೀ. **ಹೆಮಿಂಗ್ವೆಯ** ಜನ್ಮ ೧೮೯೮ರ ಜೂಲೈ ತಿಂಗಳಿನ ೨೧ ನೆಯ ತಾರೀಖಿನ **ದಿನ, ಅಮೇರಿಕೆಯಲ್ಲಿಯ ಓಕ್‌ಪಾರ್ಕ** (ಇಲಿನಾಯಿಸ್) ನಲ್ಲಿ ಆಯಿತು. ಇವನ ಶಿಕ್ಷಣವು ಯುರೋಪದಲ್ಲಿ ಆಗಿರುವುದು. ಇವನ ವಾಸ್ತವ್ಯವು ಎಷ್ಟೋ ವರ್ಷ ಪ್ಯಾರಿಸಿನಲ್ಲಿ ಇತ್ತು. ಮೊದಲಿನ ಮಹಾಯುದ್ಧದಲ್ಲಿ ಇವನು ಅಮೇರಿಕನ್ ಸೈನ್ಯದಲ್ಲಿ ಸೇರಲು ಪ್ರಯತ್ನಿಸಿದನು. ಆದರೆ ದೃಷ್ಟಿಮಾಂದ್ಯದ ಮೂಲಕ ಇವನಿಗೆ ಸೈನಿಕನೆಂದು ಸೇರಲು ಸಾಧ್ಯವಾಗಲಿಲ್ಲ. ಆದುದರಿಂದ ಇವನು ರೆಡ್‌ಕ್ರಾಸ್ ಪಥಕದಲ್ಲಿ ಸೇರಿದನು. ಇಟಾಲಿಯನ್ ಯುದ್ಧಭೂಮಿಯಲ್ಲಿ ಇವನು ಈ ಪಥಕದಲ್ಲಿ ಕೆಲಸವನ್ನು ಮಾಡುತ್ತಲಿದ್ದಾಗ, ಇವನಿಗೆ ಪ್ರತ್ಯಕ್ಷಯುದ್ಧದ ಅನುಭವವು ಸಿಕ್ಕಿತು. ಈ ಅನುಭವದ ಮೇಲೆ ಇವನು "Farewell to Arms" ಎಂಬ ಸುಪ್ರಸಿದ್ಧ ಕಾದಂಬರಿಯನ್ನು ಬರೆದನು.

ಹೆಮಿಂಗ್ವೆಯು ಆರು ಫೂಟು ಎತ್ತರನಿದ್ದು, ಭವ್ಯ ಮತ್ತು ದಷ್ಟವಾದ ಆಕಾರವುಳ್ಳವನಿರುವನು. ಗರಡಿಮನೆಯ ಕೆಂಪುಮಣ್ಣಿನಲ್ಲಿ ಕುಸ್ತಿಯನ್ನು ಆಡುವ ಅಭಿರುಚಿಯು. ಹೆಮಿಂಗ್ವೆಗೆ ಬಹಳ ವರ್ಷದಿಂದಲೂ ಇರುವುದು ಇವನ ಕೂಡ ಹಸ್ತಾಂದೋಲನವನ್ನು ಮಾಡುವುದೆಂದರೆ ಒಂದು ದುಷ್ಕರ ಸಂಗತಿಯೇ ಸರಿ ಇವನ ಭವ್ಯವಾದ ಕೈಯಲ್ಲಿ ಎರಡನೆಯವರ ಕೈ ಸಿಕ್ಕಿತೆಂದರೆ, ಅದನ್ನು ಬಿಡಿಸಿಕೊಳ್ಳುವುದು ತುಂಬ ಕಠಿನಕಾರ್ಯವೇ ಆಗಿರುವುದು.

ಇವನ ತಂದೆಯು ಡಾಕ್ಟರನಿದ್ದನು; ಆದರೆ ಬಾಲ್ಯದಲ್ಲಿ ಇವನಿಗೆ ಗುರಿಹೊಡೆಯುವಿಕೆಯ ಮತ್ತು ಮೀನುಗಾರಿಕೆಯ ಶಿಕ್ಷಣವು ಕೊಡಲ್ಪಟ್ಟಿತು. ಯಾಕೆಂದರೆ, ಇವನಿಗೆ ಅಭ್ಯಾಸಕ್ಕಿಂತ ಆಟ-ಪಾಟಗಳಲ್ಲಿ ಆಸಕ್ತಿಯು ಬಹಳವಿದ್ದಿತು ಶಾಲೆಯ ಜೀವನದಲ್ಲಿ ಇವನು 'ಕ್ರೀಡಾಪಟು' ಎಂದು ಪ್ರಸಿದ್ಧನಿದ್ದನು. ಇಷ್ಟೇ ಏಕೆ? ಈಗಲಾದರೂ ಇವನ ಜೀವನದಲ್ಲಿ ಅದಕ್ಕೆ ಮೊದಲಿನ ಸ್ಥಾನವು ಇರುವುದು; ಲೇಖನಕ್ಕೆ ಎರಡನೆಯ ಸ್ಥಾನವು ಇರುವುದು.

ಹೆಮಿಂಗ್ವೆಯ ನಿವಾಸಕ್ಕೆ ಹೋದೆವೆಂದರೆ, ನಮಗೆ ಅಲ್ಲಿ ಅವನ ಆಯುಷ್ಯಗಳಲ್ಲಿಯ ಅನೇಕ ಸಂಗತಿಗಳ ಪರಿಚಯವು ಆಗುವುದು. ಸುಶೋಭಿತವಾದ ದಿವಾನ್‌ಖಾನೆಯಲ್ಲಿರುವ ಮನೋರಮವಾದ ಫ್ರೆಂಚ್ ತೈಲಚಿತ್ರಗಳು ಪ್ಯಾರಿಸಿನಲ್ಲಿಯ ಇವನ ವಾಸ್ತವ್ಯದ ನೆನಪನ್ನು ತಂದುಕೊಡುವುವು. ಸ್ಪೇನಿನಲ್ಲಿಯ ಇವನ ಸಾಹಸದ ನೆನಪನ್ನು ತಂದುಕೊಡುವ ಚಿತ್ರಗಳಾದರೂ ಅಲ್ಲಿ ಇರುವವು. ಬೇಟೆಗಾಗಿ ಆಫ್ರಿಕೆಯಲ್ಲಿ ಪ್ರವಾಸ ಮಾಡುತ್ತಿರುವಾಗ, ಇವನು ಕೊಂದ ಅನೇಕ ಪ್ರಾಣಿಗಳ ಮುಖಗಳು, (ಮಸಾಲೆಯಿಂದ ತುಂಬಿದುವು) ಅಲ್ಲಿ ಕಂಗೊಳಿಸುವುವು

ಜಗತ್ತಿನಲ್ಲಿಯ ಮೂವರು ಮೊದಲಿನ ದರ್ಜೆಯ ಉತ್ಕೃಷ್ಟ ಇಂಗ್ಲಿಷ್ ಗದ್ಯಲೇಖಕರಲ್ಲಿ (Prose Artist) ಹೆಮಿಂಗ್ವೆಯ ಹೆಸರು ಇರುವುದು. ಜೋಸೆಫ್ ಕಾನ್‌ರಾಡ್, ಮತ್ತು ಡಬ್ಲ್ಯು, ಎಚ್. ಹಡಸನ್ ಇವರು ಇನ್ನಿಬ್ಬರು. "Hemingway is the gratest writer since shakespeare" ಎಂದು ಒಬ್ಬ ಟೀಕಾಕಾರನು ನುಡಿದಿರುವನು. "ನಿರಾಶಾವಾದಿ ಕವಿ, ವಿಧ್ವಂಸಕ ಚಿತ್ರವನ್ನು ಚಿತ್ರಿಸುವ

ಚಿತ್ರಕಾರ, ಅನರ್ಘವ ಕತೆಗಳನ್ನು ಹೇಳುವ ನಿಸರ್ಗದ ಇತಿಹಾಸಕಾರ " ಎಂದು ಕೆಲವರು ಹೆಮಿಂಗ್ವೆಯನ್ನು ದೂಷಿಸಿರುವರು.

ಇವನ ಸಾಹಿತ್ಯವನ್ನು ಓದಿದ ಮೇಲೆ, ನಮ್ಮ ಮನಸ್ಸಿನ ಮೇಲೆ ಇವನ ಭಾಷೆಯ, ವೃತ್ತಿಯ ಮತ್ತು ಅನುಭವದ ಮುದ್ರೆಯು ಮೂಡುವುದು. ಅನೇಕ ತರುಣ ಅಮೇರಿಕನ್ ಲೇಖಕರ ಮೇಲೆ, ಇವನ ಶೈಲಿಯ ಪಡಿನೆಳಲು ಬಿದ್ದಿರುವುದು.

ಹೆಮಿಂಗ್ವೆಗಿಂತಲೂ ಮೊದಲು ನೋಬಲ್ ಪಾರಿತೋಷಕವನ್ನು ಪಡೆದ ವಿಲಿಯಮ್ ಫಾಕನರನ ವಾಙ್ಮಯಶೈಲಿಯಲ್ಲಿ ಮತ್ತು ಹೆಮಿಂಗ್ವೆಯ ವಾಙ್ಮಯಶೈಲಿಯಲ್ಲಿ ಅನೇಕ ಸ್ಥಳದಲ್ಲಿ ಸಾಮ್ಯಗಳಿರುವುವು. ಫಾಕನರನಾದರೂ ತನ್ನ ಪ್ರಾದೇಶಿಕ ಕಾದಂಬರಿಗಳಲ್ಲಿ, ಹಿಂಸೆಯ, ಮೃತ್ಯುವಿನ, ಮನುಷ್ಯಜೀವನದಲ್ಲಿಯ ಸ್ವೈರಪ್ರವೃತ್ತಿಯ ರೊಮಾಂಚಕಾರಕ ವರ್ಣನೆಯನ್ನು ಮಾಡಿರುವನು. ಹೆಮಿಂಗ್ವೆಯಾದರೂ ಇದೇ ಪ್ರಕಾರದ ವರ್ಣನೆಯನ್ನು ಮಾಡಿರುವನು. ಆದರೆ ಇವರಿರ್ವರಲ್ಲಿ ಒಂದು ಭೇದವಿರುವುದು. ಅದು ಯಾವುದೆಂದರೆ : ವಿಲಿಯಮ್ ಫಾಕನರನ ವರ್ಣನೆಯಲ್ಲಿ ಹದಿನೈದು–ಇಪ್ಪತ್ತು ಸಾಲು ಓದಿದರೂ

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕಥನ ಸಂಗ್ರಹ) ಶ್ರೀ. ಭುಜೇಂದ್ರ ಮಹಿಷವಾಡಿ	೧– ೮–೦
ಬಾಳ-ಬಂಡಿ (ಕಥನಸಂಗ್ರಹ) ಶ್ರೀ. ಬಾಳ. ಬಿ. ಉಪಾಧ್ಯೆ	೧–೮–೦
ಮೂಲ ಶಿಕ್ಷಣದ ಸೌಲಭ್ಯಮಾಪಣ ಶ್ರೀ. ಮಿರ್ಜಿ ಅಣ್ಣಾರಾಯ	೦–೧೨–೦
ಭರತೇಶನ ನಾಲ್ಕು ಚಿತ್ರಗಳು ಶ್ರೀ. ಮಿರ್ಜಿ ಅಣ್ಣಾರಾಯ	೧– ೪–೦
ಶ್ರೀ ಶಾಂತಿಸಾಗರ	೦– ೪–೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು.

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

ವಾಕ್ಯಗಳು ಮುಗಿದಂತೆ ಎನಿಸುವುದಿಲ್ಲ; ಅಷ್ಟೇ ಏಕೆ, ಪೂರ್ಣವಿರಾಮದ ಹೆಸರಾದರೂ ಇರುವುದಿಲ್ಲ. ಆದುದರಿಂದ ಆ ಶೈಲಿಯು ವಾಚಕರಿಗೆ ಕಠಿಣವಾಗಿ ತೋರುವುದು; ಆದರೆ ಹೆಮಿಂಗ್ವೆಯ ಶೈಲಿಯು ಅದಕ್ಕೆ ವಿರುದ್ಧ ಇರುವುದು. ಇವನ ಶೈಲಿಯಲ್ಲಿ ವರ್ಣಿಸುವ ವಸ್ತುಗಳ ನಮಗೆ ಒಮ್ಮೆಲೇ ತಿಳಿಯತೊಡಗುವುವು. ಇವನು ಮೊದಲಿನ ಕಾಲದಲ್ಲಿ ವೃತ್ತಪತ್ರಕಾರನಿದ್ದನು; ಅಷ್ಟೇ ಏಕೆ, ಯುದ್ಧದ ವಾರ್ತೆಯನ್ನು ಬರೆಯುವುದರಲ್ಲಿ ಯಶಸ್ಸನ್ನು ಗಳಿಸಿದ್ದನು. ಕಡಿಮೆ-ಕಡಿಮೆಯಾದ ಶಬ್ದಗಳಲ್ಲಿ ಹೆಚ್ಚಿಗೆ ಹೆಚ್ಚು ಆಶಯವನ್ನು ಸತ್ತ್ವಯುಕ್ತವಾಗಿ ವ್ಯಕ್ತ ಮಾಡುವ ಕೌಶಲ್ಯವು ಇವನಲ್ಲಿರುವುದು.

" ರಾಬರ್ಟ್ ಕ್ರೂಹನನು ಒಂದು ಕಾಲದಲ್ಲಿ ಪ್ರಿನ್ಸಟನ್ನಿನಲ್ಲಿಯ ಮಿಡಲ್‌ವೇಟ್ ಚಾಂಪಿಯನನಿದ್ದನು—ಆ ವೃದ್ಧನು ಒಬ್ಬನೇ ಮೀನ ಗಳನ್ನು ಹಿಡಿಯಲು ತಿರುಗುತ್ತಲಿದ್ದನು. ೮೪ ದಿನಗಳು ಕಳೆದುವು ಆದರೂ ಅವನಿಗೆ ಇನ್ನೂ ಮೀನು ಸಿಕ್ಕಿದ್ದಿಲ್ಲ. " ಮೇಲಿನ ಎರಡು ವಾಕ್ಯಗಳು ಅನುಕ್ರಮವಾಗಿ 'The sun also rises' ಮತ್ತು 'The old Man and the sea' ಎಂಬ ಕಾದಂಬರಿಗಳ ಮೊದಲಿನ ವಾಕ್ಯಗಳಿರುವುವು. ಕಳೆದ ೩೫ ವರ್ಷಗಳಲ್ಲಿಯ ಹೆಮಿಂಗ್ವೆಯ ವಾಙ್ಮಯೀನ ಸ್ವರೂಪದ ಯಥಾರ್ಥಪ್ರತಿಬಿಂಬವು, ನಮಗೆ ಈ ಎರಡು ವಾಕ್ಯಗಳಲ್ಲಿ ಕಂಡುಬರುವುದು. "The sun also rises" ದಿಂದ ಹೆಮಿಂಗ್ವೆಯು ತನ್ನ ಸಾಹಸೀ ಜೀವನ ವಿಷಯಕ ಲೇಖನವನ್ನು ಆರಂಭಿಸಿರುವನು. ಆರಂಭಕಾಲದಲ್ಲಿ ಆಟ, ಮುಷ್ಟಿಯುದ್ಧ, ಬೇಟೆ ಮೊದಲಾದ ವಿಷಯಗಳ ಮೇಲೆ ಘಟನಾಪ್ರಧಾನ ಮತ್ತು ಗತಿಪ್ರಧಾನವಾದ ಕಾದಂಬರಿಗಳನ್ನು ಬರೆದಿರುವನು. ಆಮೇಲೆ ಅವನು "Farewell to Arms" "For whom the bill tolls" ಮತ್ತು "Across The River and into the seas" ಎಂಬ ಯುದ್ಧದ ಪಾರ್ಶ್ವಭೂಮಿಯುಳ್ಳ ಕಾದಂಬರಿಗಳನ್ನು ಬರೆದಿರುವನು. "For whom the bill tolls"ನಲ್ಲಿ ಸ್ಪೇನದಲ್ಲಿಯ ಅಂತಃಕಲಹದ ಚಿತ್ರವು ಇರುವುದು. ಈ ಕಾದಂಬರಿಯು ಆ ಕಾಲದ ಅಮೇರಿಕೆಯ ವಾಚಕರಿಗೆ ಹುಚ್ಚುಹಿಡಿಸಿತು. ಈ ಕಾದಂಬರಿಯಲ್ಲಿ ಹೆಮಿಂಗ್ವೆಯು ತನ್ನ ಪ್ರತಿಷ್ಠೆಯನ್ನು ಚಿರಸ್ಥಾಯಿಯನ್ನಾಗಿ ಮಾಡಿರುವನು. ಈ ಕಾದಂಬರಿಯ ನಾಯಕನ ಚಿತ್ರಣವು ಬಹು ಹೃದಯಂಗಮವಾಗಿರುವುದು. ಈ ಕಾದಂಬರಿಯ ಚಿತ್ರಣಕ್ಕಾಗಿ ಹಾಲಿವುಡ್ಡಿನ ದಿಗ್ದರ್ಶಕರು, ಹೆಮಿಂಗ್ವೆಗೆ ೫೦,೦೦೦ ಪೌಂಡುಗಳನ್ನು ಕೊಟ್ಟಿರುವರು "ಸ್ನೋಜ್ ಆಫ್ ಕಿಲಿಮಾಂಜಾರೂ" ಎಂಬ ಆಫ್ರಿಕೆಯಲ್ಲಿಯ ಲಘುಕಥೆಯ ಚಿತ್ರಣಕ್ಕಾಗಿ ಇವನಿಗೆ ೪೦,೦೦೦ ಪೌಂಡುಗಳು ಸಿಕ್ಕಿರುವುವು. ಇಂದಿನವರೆಗೆ ಇಷ್ಟು ದೊಡ್ಡ ಮೊತ್ತದ ಹಣವು ಯಾವ ಲೇಖಕನಿಗೂ ಸಿಕ್ಕಿಲ್ಲ. ಇವನು ಬರೆದ "Across The River and into the seas" ಎಂಬ ಪುಸ್ತಕವನ್ನು ವಿಮರ್ಶಕರು ಬಹು ಕಟುವಾಗಿ ಟೀಕಿಸಿರುವರು. "ಹೆಮಿಂಗ್ವೆಯ ಪ್ರತಿಭೆಯು ಅಸ್ತವಾಯಿತು" "ಇವನ ವಾಙ್ಮಯೀನ ಜೀವನವು ಮುಗಿದಂತೆ ಆಯಿತು" ಎಂದು ಕೆಲವರು ನುಡಿದಿರುವರು. ಆದರೆ ಮೊನ್ನೆ ಮೊನ್ನೆ ಜನವರಿಯಲ್ಲಿ

ಆಫ್ರಿಕೆಯಲ್ಲಿಯ **ಮಚಿಸನ್ ಧಬಧಬೆಯ** ಹತ್ತಿರಿನ ವಿಮಾನದ ಅಪಘಾತದಿಂದ **ಪಾರಾಗಿ** ಹೇಗೆ ಜೀವಂತ ಉಳಿದನೋ, ಹಾಗೆಯೇ ವಾಙ್ಮಯೀನ **ಅಪಮೃತ್ಯುವಿನಿಂದಾದರೂ** ಇವನು ಪಾರಾಗಿರುವನು. ಆಫ್ರಿಕೆಯ **ನಿಬಿಡ ಅರಣ್ಯದಲ್ಲಿ** ಯಾವ ಧೈರ್ಯದಿಂದ ಇವನು ಸಿಂಹ ವನ್ನು **ತನ್ನ ಮೈಮೇಲೆ ತೆಗೆದುಕೊಂಡು ಕೊಂದು** ಹಾಕಿದನೊ, ಹಾಗೆಯೆ **ಪ್ರತಿಯೊಂದು** ಮೃತ್ಯುವಿನ ಕೂಡ— ವಾಙ್ಮಯೀನ ಅಥವಾ ಪ್ರತ್ಯಕ್ಷ ಮೃತ್ಯು —ಹೊಡೆದಾಡಿರುವನು.

೧೯೫೩ ರಲ್ಲಿ ಹೆಮಿಂಗ್ವೆಗೆ ಆಫ್ರಿಕೆಗೆ ಹೋಗುವ ಮನಸ್ಸಾಯಿತು. ಇವನ ಹತ್ತಿರ ಹಣವಿದ್ದಿಲ್ಲ. “Old man and the Sea” ಎಂಬ ಅತಿಚಿಕ್ಕ ಆದರೆ ಅಪ್ರತಿಮವಾದ ಕಾದಂಬರಿಯನ್ನು ಬರೆದು, ಆದಕ್ಕೆ ಬಂದ ಹಣದಿಂದ ಆಫ್ರಿಕೆಗೆ ಹೋದನು. ಈ ಕಾದಂಬರಿಯನ್ನು ಬರೆಯಲು ಇವನು ಬಹಳ ಪರಿಶ್ರಮವನ್ನು ತೆಗೆದುಕೊಂಡಿರುವನು. ಈ ಕಾದಂಬರಿಯನ್ನು ಬರೆಯುವುದಾದ ಮೇಲೆ, ಇವನದನ್ನು ೭೦ ಸಾರೆ ಓದಿ, ಅದನ್ನು ಸುಧಾರಿಸಿರುವನು. ಈ ರೀತಿಯಾಗಿ ತನ್ನ ಸ್ವಂತದ ದೃಷ್ಟಿಯಿಂದ ಪೂರ್ಣ ಸಮಾಧಾನಕಾರಕವಾಗಿ ಮತ್ತು ನಿರ್ದೋಷವನ್ನಾಗಿ ಮಾಡುವ ಇವನ ಉಪಕ್ರಮವು ಉತ್ತಮವಾದುದು ಇರುವುದು. ಇವನ ಮತ್ತೆ ನಾಲ್ಕು ಕಾದಂಬರಿಗಳು ಬರೆದು ಮುಗಿದುವು ಇರುವವು. ಇವನು ಅವುಗಳನ್ನು ಸುರಕ್ಷಿತತೆಗಾಗಿ ಹವಾನಾ ನಡುಗಡ್ಡೆಯಲ್ಲಿಯ ಬ್ಯಾಂಕಿನ ಸೆಫ್ಟಿವಾಲ್ಟನಲ್ಲಿಟ್ಟಿರುವನು. ಅವುಗಳನ್ನು ಇವನು ಈಗ ಎರಡು ಸಾರೆ ಓದಿ ಸುಧಾರಿಸಿರುವನು. ಆದರೂ ಅವುಗಳ ಮೇಲೆ ಇನ್ನೂ ಎಷ್ಟೋ ಸಲ ಕೈಯಾಡಿಸಬೇಕಾಗಿರುವುದೆಂದು ಇವನು ಹೇಳುತ್ತಿರುವನು.

“Old man and the sea” ಕಾದಂಬರಿಗೆ ಮೊದಲು ಪುಲಿಟ್ಝರ (Pulitzer) ಪಾರಿತೋಷಕವು ಸಿಕ್ಕಿರುವುದು. ಈ ಕಾದಂಬರಿಯ ಕಥೆಯು ಹೀಗೆ ಇರುವುದು: ಒರ್ವ ವೃದ್ಧ ಜಾಲಗಾರನು ಮೂರು ದಿನದ ಪ್ರಯತ್ನದಿಂದ ಒಂದು ದೊಡ್ಡ ಮೀನನ್ನು ಹಿಡಿದನು! ಆದರೆ ಆ ಮೀನನ್ನು ದಂಡೆಗೆ ತರುವ ಅವನ ಪ್ರಯತ್ನವು ಅಯಶಸ್ವಿ ಹೇಗೆ ಆಯಿತು, ಹಿಡಿದ ಮೀನನ್ನು ದೊಡ್ಡ ಶಾರ್ಕ ಮೀನು ಹೇಗೆ ಗಪ್ಪುಮಾಡಿತು— ಮೊದಲಾದುದು ಇರುವುದು. ಹೆಮಿಂಗ್ವೆಯು ಈ ಕತೆಯನ್ನು ಅತಿಶಯ ಕೋಮಲ ಮತ್ತು ಭಾವನಾಮಯವಾದ ಪದ್ಧತಿಯಿಂದ ಬರೆದಿರುವನು. ಯಾವಾಗಲೂ ಸಾಹಸ, ರಕ್ತಪಾತ, ಮತ್ತು ಸ್ವೈರವರ್ತನದ ಕತೆಯನ್ನು ಬರೆಯುವ ಹೆಮಿಂಗ್ವೆ ಭಾವನೆಯಿಂದ ತುಂಬಿದ ಈ ಕತೆಯನ್ನು ಬರೆದಿರುವನೆಂಬುದರಲ್ಲಿ ಅನೇಕರಿಗೆ ಆಶ್ಚರ್ಯವಾಯಿತು. ಪ್ರಥಿತಯಶ ಟೀಕಾಕಾರರು ಇವನ ಈ ಹೊಸ ಕೃತಿಯ ಗೌರವವನ್ನೂ ಮತ್ತು ಆದರ ಮೇಲೆ ಸ್ತುತಿಸುಮನಗಳ ವರ್ಷಣೆಯನ್ನೂ ಮಾಡಿದರು. ಈ ಕಾದಂಬರಿಯಲ್ಲಿ ಹೆಮಿಂಗ್ವೆಯ ‘ನಿಸರ್ಗ ಮತ್ತು ಮಾನವ’ ಇವರಲ್ಲಿ ಅನಾದಿಕಾಲದಿಂದ ನ.) ಬಂದ ಬಡಿದಾಟದ ಸುಂದರ ಚಿತ್ರಣವನ್ನು ಮಾಡಿಸಿರುವನು.

ಶ್ರೀ. ಹೆಮಿಂಗ್ವೆಯು ಸಾಹಿತ್ಯ ಪ್ರಪಂಚದಲ್ಲಿ ಒಂದು ಹೊಸ ಯುಗವನ್ನು ನಿರ್ಮಿಸಿರುವನು. ೧೯೨೩ ರಲ್ಲಿ “Three stories and ten persons” ಎಂಬ ಹೆಸರಿನ ಪುಸ್ತಕವನ್ನು ಪ್ರಸಿದ್ಧ ಮಾಡಿ ತನ್ನ ವಾಙ್ಮಯೀನ ಜೀವನವನ್ನು ಆರಂಭಿಸಿದನು. ಆರಂಭದಲ್ಲಿ ಹೆಮಿಂಗ್ವೆಯು ಕೆಲವು ದಿನ “Kansas city star” ಎಂಬ ವೃತ್ತಪತ್ರಿಕೆಯ ಬಾತಮಿದಾರನೆಂದು ಕೆಲಸ ಮಾಡಿದನು. ತನ್ನ ವಿಲಕ್ಷಣವಾದ ಕರ್ತೃತ್ವದಿಂದ ಮತ್ತು ಅಸಮಾನ್ಯವಾದ ಶೈಲಿಯಿಂದ ಅವನು ಈಗ ಸರ್ವಶ್ರೇಷ್ಠ ಕಥಾಕಾರನಾಗಿರುವನು. “The Killers” “The undefeated” “The snows of Kilimanjaro” ಮೊದಲಾದ ಇವನ ಕಥೆಗಳು ತುಂಬ ಪ್ರಸಿದ್ಧವಾಗಿರುವವು. ಇವನ ಅನುಕರಣವನ್ನು ಪ್ರಥಿತ ಯಶದ ಸಾಹಿತ್ಯಿಕರೂ ಉದಯೋನ್ಮುಖ ಲೇಖಕರೂ ಮಾಡುತ್ತಲಿರುವರು.

ಸರ್ವಸಾಮಾನ್ಯ ಜನರ ಸುಖ-ದುಃಖಗಳನ್ನು ವರ್ಣಿಸಿ ಅವರ ಜೀವನದಲ್ಲಿ ಏಕರೂಪಿಯಾಗಿ, ಅವರ ಚಿತ್ರಣಗಳನ್ನು ತನ್ನ ಸಾಹಿತ್ಯದಲ್ಲಿ ಪ್ರಾಮಾಣಿಕವಾಗಿ ಮಾಡುವುದೆ ಹೆಮಿಂಗ್ವೆಯ ಉದ್ದೇಶವಾಗಿರುವುದು. ಅವನು ಎಲ್ಲ ರೀತಿಯ ಜನರಲ್ಲಿ ಕೂಡಿಕೊಳ್ಳುವಂತವನಿರುವನು “I was lucky enough to associate with older people when I was younger and with younger people now that I am old” ಎಂದು ಅವನು ಒಮ್ಮೆ ಉದ್ಗಾರವನ್ನು ತೆಗೆದಿರುವನು.

ಇವನ ಕುಟುಂಬ-ಪರಿವಾರವು ಬಹಳ ದೊಡ್ಡದಿರುವುದು. ಇವನು ಒಟ್ಟು ನಾಲ್ಕು ಲಗ್ನಗಳನ್ನು ಮಾಡಿಕೊಂಡಿರುವನು. ಮೊದಲಿನ ಮೂರು ಲಗ್ನಗಳೊಳಗಿಂದ ಮುಕ್ತನಾದ ಮೇಲೆ, ೧೯೪೬ ರಲ್ಲಿ ಮೇರಿವೆಲ್ ಎಂಬ ವೃತ್ತಪತ್ರ ವ್ಯವಸಾಯದಲ್ಲಿಯ ಸ್ತ್ರೀಯ ಕೂಡ ನಾಲ್ಕನೆಯ ಲಗ್ನವನ್ನು ಮಾಡಿಕೊಂಡಿರುವನು. ಇವನಿಗೆ ಮೂವರು ಮಕ್ಕಳು ಮತ್ತು ಐವಾರು ಜನ ಬೇರೆ ಆಪ್ತರು ಇರುವರು. ಇವಲ್ಲದೆ ೧೫–೨೦ ನಾಯಿಗಳು, ಐವತ್ತು ಅರುವತ್ತು ಬೆಕ್ಕುಗಳು, ಮೂರು ನಾಲ್ಕು ಆಕಳುಗಳು, ನೂರಾರು ಪಾರಿವಾಳಗಳು—ಇವೇ ಮೊದಲಾದ ಪರಿವಾರವು ಇವನದಿರುವುದು. ಇವನ ಮನೆಯಲ್ಲಿ ಜನರು ಹೋಗುಬರುವಿಕೆಯೂ ಬಹಳವಾಗಿರುವುದು.

ತಿದಿಯೊತ್ತಿದುಸಿರು !!!

ಶ್ರೀ. ಸದಾಶಿವ, ಮೈಸೂರು

(ಸಣ್ಣ ಕತೆ)

ಇದೂ ಒಂದು ಜೀವನದ ಚಿತ್ರ. ಸಂಸ್ಕಾರರಹಿತವಾದ ತಾರುಣ್ಯಕ್ಕೆ ಯುಕ್ತಾಯುಕ್ತ ಜ್ಞಾನವೇ ಉಳಿಯದು. ಕೃಷ್ಣ ಶಾರದೆಗೆ ನಿಜವಾದ ಅಣ್ಣನಾಗಿದ್ದರೆ ಹೀಗಾಗುತ್ತಿದ್ದಿತೆ? ಅಣ್ಣನಾಗದಿದ್ದರೇನು, ಹೀಗವನು ಮಾಡುವುದು ಮನುಷ್ಯತ್ವವೇ?

ಘಂಟೆ ಹನ್ನೆರಡಾಗಿದ್ದರೂ ಅಡಿಗೆಮನೆಗೆ ಬೆಳಕು ಬಿದ್ದಿರಲಿಲ್ಲ....ಕತ್ತಲು....ಕತ್ತಲು....

ಗೌರಮ್ಮನ ಮನಸ್ಸಿಗೂ ಆವರಿಸಿತ್ತು ಕತ್ತಲು....ಕತ್ತಲು....

ಹೊರಗಿನ ವಾತಾವರಣಕ್ಕೂ ಬಳಿದಂತಿತ್ತು ಕತ್ತಲು.... ಕತ್ತಲು....

ಬೆಳ್ಮಿಗಿಲು ಮಿಡಿದು ಸಿಡಿಲೆರಗಿದ್ದರೂ ಅಚ್ಚರಿಯಾಗುತ್ತಿರಲಿಲ್ಲ ಅವರಿಗೆ....

ಒಲೆಯ ಮುಂದೆ ಕುಳಿತು ಒಂದೇ ಸಮನೆ ಕಣ್ಣೀರು ಮಿಡಿಯುತ್ತಿದ್ದ ಆಕೆಯ ಮುಖಕ್ಕೆ, ಘಳಿಗೆಯೊಂದರಲ್ಲಿ ಹತ್ತುವರುಷದ ಮುಪ್ಪನ್ನು ಸವರಿದಂತಿತ್ತು — ಆ ವಾರ್ತೆ ಕೇಳಿ. ಒಲೆಯ ಮೇಲಿದ್ದ ಅನ್ನದ ನೀರು ಕುದಿದು, ಚೆಲ್ಲಿ, ಇಂಗಿ, ಅನ್ನ ಅರಳಿ, ತಳ ಹಿಡಿದು ಸುಯ್‍ಗುಟ್ಟಿ, ವಾಸನೆ ಬರುತ್ತಿದ್ದರೂ, ಚಿತ್ರಸಮಾಧಿಹೊಂದಿದ್ದ ಗೌರಮ್ಮನಿಗೆ ಅದರ ಪ್ರಜ್ಞೆಯೇ ಇದ್ದಂತಿರಲಿಲ್ಲ. ಒಲೆಯೊಳಗೆ ಉರಿಯುತ್ತಿದ್ದ ಉರಿ, ಕೊಂಚಕೊಂಚವಾಗಿಯೇ ಸೌದೆಯನ್ನು ನುಂಗಿ ಕೆಂಡಕಾರುತ್ತ ಗೌರಮ್ಮನ ಕಾಲಬಳಿಯೆ ಇದ್ದ ಕೊಳ್ಳಿಯ ಮತ್ತೊಂದು ತುದಿಯನ್ನು ಸುಡುತ್ತಿದ್ದರೂ, ಗೌರಮ್ಮ ಮಂಕಾಗಿಯೇ ಕುಳಿತಿದ್ದರು ಅರಿವಿಲ್ಲದೆ — ಯಂತ್ರದಂತೆ.

ಎಲ್ಲವೂ ಮಂಕುಮಂಕು.... ಮನಸ್ಸು ಮಂಕು.... ಮನೆ ಮಂಕು.... ಹೊರಗೆ ಮಂಕು....

ಯೋಚಿಸಲು ತ್ರಾಣವೇ ಇಲ್ಲ.... ಎಲ್ಲವೂ ಮಂಕು ಮಂಕು....

ಅವರ ಕಣ್ಣೋಲಿ ಒಲೆಯ ಮೇಲಿದ್ದ ತೆಂಗಿನ ಚಿಪ್ಪಿನತ್ತ ನಾಟಿತ್ತು. ನಾಟಿತ್ತು ಅಷ್ಟೆ.... ನೋಟವನ್ನು ಅನುಭವಿಸುತ್ತಿರಲಿಲ್ಲ.... ಎಲ್ಲ ಖಾಲಿ ಖಾಲಿ....

ಮಿದುಳೇ ಇಲ್ಲದಂತೆ........ ಬರೀ ಚಿಪ್ಪು ಚಿಪ್ಪು.

ಕಣ್ಣು ಕೆಂಪಾಗಿತ್ತು........ಊದಿಕೊಂಡಿತ್ತು.

ಎದುರಿಗಿದ್ದ ಜ್ವಾಲೆ, ವಯಸ್ಸಾಗಿದ್ದರೂ ಬತ್ತದೆ, ಮಕ್ಕಳ ಕೆನ್ನೆಯಂತೆ ಗುಂಡು-ಗುಂಡಾಗಿರದಿದ್ದರೂ ಪುಷ್ಟಿಯಾಗಿದ್ದ ಕಪೋಲದ ಮೇಲೆ, ಕಣ್ಣೀರ ಚಿನ್ನದ ಕಾಲುವೆಯನ್ನು ಸ್ಪಷ್ಟಗೊಳಿಸಿತ್ತು........

ಹದಿನೇಳು ವರುಷಗಳ ಹಿಂದೊಮ್ಮೆ ಇದೇ ರೀತಿ ಕಣ್ಣೀರು ಹರಿಸಿದ್ದರು. ಕಣ್ಣೀರು ಸುರಿಸಿಯೇ ಒಪ್ಪಿಗೆಯನ್ನು ಪಡೆದಿದ್ದರು ಪತಿಯಿಂದ. ಹಾಗೆ ಪತಿ ತನ್ನ ಹಿರಿಯ ಆಸೆಗೆ ಒಪ್ಪಿಗೆಯ 'ಹೂಂ'ಕಾರ ನುಡಿದ ಘಳಿಗೆಯಲ್ಲಿ, ಸಂತಸದ ಪರಿನಲ್ಲಿ ಮತ್ತಷ್ಟು ಅತ್ತಿದ್ದರು. ಆಗ ಪತಿಯೇ ಬಂದು ತಮ್ಮ ಪಂಚೆಯ ತುದಿಯಿಂದ ಕಣ್ಣೊರೆಸಿದ್ದರು........

ಇಲ್ಲ........ ಇಂದು ಆ ಕಣ್ಣೀರ ಒರತೆ ಬತ್ತುವಂತಿಲ್ಲ........ ಕೆನ್ನೆಯ ಮೇಲಿನ ಕಾಲುವೆ ಅಳಿಸುವಂತಿಲ್ಲ........ ಉಳಿದ ಬದುಕಿನುದ್ದಕ್ಕೂ ಕಣ್ಣೀರು........

ಕಣ್ಣೀರು....ಕಣ್ಣೀರು.... ಬದುಕಿನುದ್ದಕ್ಕೂ ಮಿಡಿಯ ಬೇಕು ಕಣ್ಣೀರು........

ಅವರ ಕಿವಿಗೆ ಕಾದ ಸೀಸದಂತೆ ಹೊಕ್ಕ ಸುದ್ದಿಯೊಂದು ಹೃದಯದಂತರಾಳಕ್ಕೂ ಇಳಿದು ಭಾರಿಯ ಪೆಟ್ಟನ್ನು ಇಟ್ಟಿತ್ತು........ ಅಯ್ಯೋ........ಭಾರಿ ಪೆಟ್ಟು........

"ಹಾವಿಗೆ ಹಾಲೆರೆದಂತಾಯಿತು ....ಥೂ....ನುಗ........"

ಹೊರಗೆ ಹಜಾರದಲ್ಲಿ, ತನ್ನ ಪತಿಯ ತಮ್ಮ ಭೀಮು ಬೊಬ್ಬೆಯಿಟ್ಟನು. ಗೌರಮ್ಮನ ಕಿವಿಗೆ ಬೇಡ-ಬೇಡವೆಂದರೂ ಬೀಳುತ್ತಿತ್ತು.... ಚಿತ್ರಸಮಾಧಿಗೆ ಭಂಗ ಬಂದಂತಾಗುತ್ತಿತ್ತು........

"ಹೋಗಲಿ.... ಕೂಗಬೇಡ ಭೀಮು.... ಅಕ್ಕಪಕ್ಕದವರು ಏನೆಂದುಕೊಂಡಾರು........"

ಅದೇ ಪತಿ— ಸೌಮ್ಯದ, ಶಾಂತಿಯ ಮಡುವಿನಂತಿದ್ದ ಆ ಪತಿಯ ಗಂಭೀರವಾಣಿಯೂ ಕಿವಿಗೆ ಬಿತ್ತು— ಹೃದಯದಾಳದಲ್ಲಿ ಧ್ವನಿಸೈಯುತ್ತ....

ಹಾವಿಗೆರೆದ ಹಾಲು— ಹಾಲೆರೆದ ಹಾವು!

ಹಾವೆಂದು ಸಾಕಿದರೆ ಅವನನ್ನು?........ಅಥವಾ ತಾವು ನೀಡುತ್ತಿದ್ದ ಹಾಲು ಹಾವಿಗೆಂದು ತಿಳಿದಿದ್ದರೆ?........

ಹದಿನೇಳು ವರುಷಗಳ ಹಿಂದೆ ಅವನನ್ನು ಮನೆಗೆ ತಂದು ಹಾಲು ಕುಡಿಸಿದಾಗ, ಮುಂದೊಮ್ಮೆ ಅವನೊಬ್ಬ ವಿಷಕಾರುವ ಕರ್ಕೋಟಕವಾಗುತ್ತಾನೆಂದು ಕಲ್ಪಿಸಿಕೊಂಡಿದ್ದರೆ?........

ಕರ್ಕೋಟಕ— ವಿಷಕಾರುವ ಸರ್ಪ!

ಕಿಟ್ಟಿ— ಕರ್ಕೋಟಕ.......

ಹದಿನೇಳು ವರುಷಗಳ ಹಿಂದೆ.......

ಆಗಲೂ ಹೀಗೆಯೇ ಮಳೆ ಜಡಿಯುತ್ತಿತ್ತು.......ಜರ ಜಿರೋ.... ಜರ ಜಿರೋ....

ಹದಿನೇಳು ವರುಷಗಳ ಹಿಂದೆ.......

ಮನೆಯೂ ಸೋರುತ್ತಿತ್ತು....... **ಟಿಕ್ ಟೊಪ್**.... **ಟಿಕ್ ಟೊಪ್**....**ಟಿಕ್ ಟೊಪ್**....

ಹದಿನೇಳು ವರುಷಗಳ ಹಿಂದೆ.......

ತಾನೂ ಅತ್ತಿದ್ದಳು— ಗೊಳೊ ಎಂದು ಅತ್ತಿದ್ದಳು— ನಂಜುಂಡಯ್ಯ ತಂದ ಸುದ್ದಿ ಕೇಳಿ.......

ಅಂದು—

ಒಬ್ಬಳೇ ಇದ್ದ ದೂರದ ಸಂಬಂಧಿ, ಕೂಸು ಹೆರುವ ಅವಸರದಲ್ಲಿ ತನ್ನ ಪ್ರಾಣ ತೆತ್ತಿದ್ದಳು ಹಳ್ಳಿಯೊಂದರಲ್ಲಿ.......

ವರ್ತಮಾನ ಕೇಳಿದ ಗೌರಮ್ಮ ತಲೆ ಚಚ್ಚಿಕೊಂಡು ಅತ್ತಿದ್ದಳು....

ರಾಮರಾಯರು ಬಂದು ಪತ್ನಿಯ ಕೈಹಿಡಿದೆತ್ತಿ ಕೂರಿಸಿ ಕಣ್ಣೊರೆಸಿದ್ದರು....

ನಂಜುಂಡಯ್ಯ ಅಳುತ್ತಲೇ, ಬದುಕಿರುವ ಕೂಸಿನ ಬಗೆಗೆ ಚಿಂತಿಸಿದ್ದ— ಇಬ್ಬರ ಮುಂದೆ....

ಗೌರಮ್ಮ ಹಿಂದು ಮುಂದೆ ನೋಡದೆ ಒಪ್ಪಿಬಿಟ್ಟರು....

ಹೊಟ್ಟೆಯ ಕರುಳನ್ನು ತುಂಡುಮಾಡುವ ಭಾಗ್ಯ ತನ್ನದಾಗಿರದಿದ್ದುದರಿಂದ, ಅವಳಿಗೆ ಆ ಚಪಲ ನೆತ್ತಿಗೇರಿತ್ತು....

ರಾಯರು ಯೋಚಿಸುವುದಾಗಿ ನುಡಿದರು....

ಕಣ್ಣೀರು....ಕಣ್ಣೀರು....

ರಾಯರು ಆಕೆಯ ಕಣ್ಣಿನಿಂದ ನೀರು ಹರಿಸಲು ಸಿದ್ಧರಿರಲಿಲ್ಲ — ಎಂತಲೇ 'ಹೂಂ—' ಎಂದಿದ್ದರು....

ಗೌರಮ್ಮನ ಹೃದಯದಲ್ಲಿ ದುಃಖ-ಸಂತೋಷಗಳ ಮೇಳ ಹಾಡಿತ್ತು....

ಗೌರಮ್ಮನ ತೊಡೆಯೇರಿದ ಮಗು ಅತ್ತಿತ್ತು.... ಭಣ ಭಣ ವಾಗಿದ್ದ ಮನೆಯಲ್ಲಿ— ಹೊರಗೆ ಮಳೆಯ ಸದ್ದಿನೊಂದಿಗೆ ಒಳಗೆ ತೊಟ್ಟಿಕ್ಕುತ್ತಿದ್ದ ಮಳೆಯ ನೀರಿನ ತಪಟೆಯ 'ಟಿಕ್ ಟೊಪ್' ಧ್ವನಿಯೊಂದಿಗೆ ಸ್ಪರ್ಧೆ ಹೂಡಿತ್ತು ಕೃಷ್ಣನ ಅಳು....

ಅಳು-ನಗು....

ಹಳೆಯ ಮನೆಯನ್ನು ಬಿಡಲು ಅಳು— ಹೊಸಮನೆಗೆ ಕಾಲಿಡಲು ನಗು....

ಅಳುವಿನೊಂದಿಗೆ ನಗು ಬೆರೆತು, ಹೊಸ ಮನೆಯ ಗೋಡೆಯೊಂದಿಗೆ ಕುಶಲವನ್ನು ಕೇಳಿದುವು ...

ಕೃಷ್ಣ ಮಗುಚಿದ್ದ.... ಕೃಷ್ಣ ಅಂಬೆಗಾಲಿಕ್ಕುತ್ತಿದ್ದ.... ಎದ್ದು ನಡೆದಿರಲಿಲ್ಲ ಅಷ್ಟೆ....

ಗೌರಮ್ಮನ ಗರ್ಭದಲ್ಲಿ ಮೊಳಕೆ ಚಿಗುರಿತು.... ಕುಡಿಯೊಡೆಯಿತು....

ನೋವು ಕಳೆದ ನಗು....

'ಶಾರದೆ'— ಅತ್ತಳು ಮನೆಯ ಸೂರು ಹಾರುವಂತೆ....

ಗೌರಮ್ಮನ ಕಪೋಲಕ್ಕೆ ಹೊಡೆಯುತ್ತ ಶಾರದೆಯನ್ನು ನೋಡಿದ ಕೃಷ್ಣ ಕಣ್ಣರಳಿಸುತ್ತ....

"ಕೃಷ್ಣ ಕಾಲಿಟ್ಟ ದಿನ ಅಂಥದ್ದು.... **ಹೇಳದರೆ ಬೇಡ**ವೆಂದಿದ್ದಿರಿ...."

ಗೌರಮ್ಮ ಪತಿಯ ಮುಖ ನೋಡಿದರು

ನಕ್ಕು ಸಂತೋಷ ಸೂಚಿಸಿದರು ರಾಯರು.

ಅದು ಅಂದಿನ ಮಾತು.. .

ಕುಳಿತ ಗೌರಮ್ಮ ,ಕಾಲಿನವರೆಗೂ ಬಂದಿದ್ದ ಉರಿಯನ್ನು ಅತ್ತ ತಳ್ಳಿದರು.......

ಮಗಳಿಗಿಂತಲೂ ಮಿಗಿಲಾಗಿ ಸಾಕಿದ್ದರು ಕೃಷ್ಣನನ್ನು— ತಾಯಿ ಸತ್ತ ಮಗುವೆಂದು. ತಂದೆಯನ್ನು ಕಾಣದ ಕೂಸದು.......

ತಾಯಿ ಸತ್ತ ಮಗು—ತಂದೆಯನ್ನು ಕಾಣದ ಕೂಸು....ಕೃಷ್ಣ ಕಿಟ್ಟಿ....

"ಎಷ್ಟು ಪೆದ್ದನೊ ನೀನು ?"

ಪೆದ್ದು ಪೆದ್ದು ಕಿಟ್ಟಿ.......

"ನಿಮ್ಮ ಎಷ್ಟು ಪೆದ್ದಾನಮ್ಮ ಕಿಟ್ಟಿ ?...."

ಗೌರಮ್ಮನಿಗೆ ದುಃಖದ ನಡುವೆ ಅಚ್ಚರಿಯು ಕೂಡ....ಪೆದ್ದ ಕಿಟ್ಟಿ—ಏನು ಮಾಡಿಬಿಟ್ಟ ?....

ನಡೆದ ಘಟನೆ ಹೃದಯದಲ್ಲಿ ಮುಳ್ಳುಚುಚ್ಚುತ್ತಿತ್ತು.......

"ಮುಟ್ಠಾಳ ಎಲ್ಲಿ ಹೋದ ನೋಡಿಕೊಂಡು ಬರ್ತೀನಿ......."

ಭೀಮಣ್ಣ ಕರ್ಕಶವಾಗಿ ಹೇಳುತ್ತಿದ್ದುದು ಗೌರಮ್ಮನ ಕಿವಿಗೂ ಬೀಳದಿರಲಿಲ್ಲ.

"ಭೀಮು.......ಸಿಕ್ಕಿದರೆ ಅಲ್ಲೇ ರಂಪ ಮಾಡಬೇಡ....ಕರೆದು ಕೊಂಡು ಬಾ...."

"ಕರೆದುಕೊಂಡು ಬರೋದೆ?.......**ಅವನು ಹುಟ್ಟಲಿಲ್ಲಾನಿಸಿ** ಬಿಡ್ತೀನಿ...."

"ಥೂ.......ಹಾಗೆಲ್ಲ ನುಡಿಯಬಾರದು.......**ಅವನು ಮನೆಗೆ** ಬರಲಿ...."

ಅಯ್ಯೊ ! ತನ್ನ ಪತಿ ಎಂಥ **ದಯಾಮಯ ?— ಅವರ** ದನಿಯೇ ಅದನ್ನು ಸಾರಿ ಹೇಳುತ್ತಿಲ್ಲವೆ ?.......

"ದೇವರೆ, ಎಂಥ ಶಿಕ್ಷೆ ವಿಧಿಸಿದೆಯಪ್ಪ ನಮಗೆ....ಯಾವ ತಪ್ಪಿಗೆ ಪ್ರಾಯಶ್ಚಿತ್ತ...."

ಗೊಳೋ ಎಂದು ಮತ್ತಷ್ಟು ಅತ್ತರು ಗೌರಮ್ಮ....ಅಳುವಿನಲ್ಲೂ ಮನೆಯ ಗೌರವದ ಬಗೆಗೂ ಯೋಚನೆಯಾಗದಿರಲಿಲ್ಲ.... 'ಅವರಿನ್ನು ಈ ಊರಲ್ಲಿ ಹೇಗೆ ಮುಖವೆತ್ತಿ ಓಡಿಯಾಡಿಯಾರು ?....ಭಗವಂತಾ, ಸುಖವಾಗಿರೋದನ್ನ ಕಂಡು ನಿನಗೆ ಸಹಿಸಲಿಲ್ಲವೆ ?....' ಗೌರಮ್ಮನ ಹೃದಯದಾಳದಲ್ಲ ಪುಟವೆದ್ದ ಪ್ರಶ್ನೆ ಕಂಬನಿಯಾಗಿ ಉರುಳಿತು.......

ತನ್ನ ಕೃಷ್ಣ —ಕರ್ಕೋಟಕ.......?

ಪೆದ್ದು ಕೃಷ್ಣ....... "ಹಾವಿಗೆರೆದ ಹಾಲು........!"

ಥೂ ಥೂ ಥೂ........

x x x x x

ರಾಯರು, ಭೀಮು ಹೋದ ಹಾದಿಯನ್ನೇ ದೃಷ್ಟಿಸುತ್ತಿದ್ದರು....ಮಳೆಯಲ್ಲೇ ನೆನೆಯುತ್ತ ಹೋಗುತ್ತಿದ್ದ ಭೀಮು ಸ್ವಲ್ಪ ಸ್ವಲ್ಪವಾಗಿ ಮರೆಯಾದನು....ಅಲ್ಲೊಬ್ಬರು ಇಲ್ಲೊಬ್ಬರು ಬರಿಯ ತಲೆಯಲ್ಲಿ, ಕೆಲರು ಛತ್ರಿ ಹಿಡಿದು, ಮತ್ತೆ ಹಲವರು ಟಾವೆಲು ಹೊದೆದುಕೊಂಡು ಜಿಗಿ-ಜಿಗಿಯುತ್ತ ಓಡಾಡುತಿದ್ದರು—ಮಳೆಯಲ್ಲೇ....

ಜಿರ ಜಿರಿ....ಜಿರ ಜಿರಿ....

ರಾಯರು ರಸ್ತೆಯನ್ನೇ ನೋಡುತ್ತಿದ್ದರು....ರಸ್ತೆಯನ್ನೇ....

ಏಕೆ ಹೀಗಾಯಿತು ?....ಏಕೆ ಹೀಗಾಯಿತು ?....ಏಕೆ ?....

ಅವನ ವರ್ತನೆಯ ಕಾರಣಕ್ಕಾಗಿ ಏನೇನೋ ಕಲ್ಪಿಸಿಕೊಂಡರು; ಆದರೆ ಅವರ ಕಲ್ಪನೆಯ ವಿಸ್ತರಣ ವಿಶಾಲವಾಯಿತೇ ವಿನಾ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ....

ಕಲ್ಪನೆಯು ಸಾಗರವಿಂಗಿ ನಿಂತ ನೆಲದ ಪರಿವೆ ಬಂದಿತು.... ಆದರೆ....

ಯೋಚಿಸುವ ಮಿದುಳೂ ಮಣ್ಣಾಗಿ ಕುಳಿತಿತ್ತು....ಮಣ್ಣು.... ಮಣ್ಣು....

ಒಮ್ಮೆ ತಲೆ ಕೊಡವಿಕೊಂಡು ಒಳಗೆ ಬಂದು, ಆರಾಮು ಖುರ್ಚಿಯಲ್ಲಿ ಒರಗಿದರು....ಎಷ್ಟು ಬೇಡವೆಂದರೂ ಕಂಡೂ ಕಾಣದಂತೆ ಅವರ ಕಣ್ಣಿನಂಚಿನಲ್ಲಿ ಬೆಳ್ಳಿಯ ಗೆರೆ ಮೂಡಿತು....ಕಣ್ಣು ಮಂಜಾಯಿತು....ಮಂಜು....ಮಂಜು....

ಮೊದಲು ಬೇಡವೆಂದಿದ್ದರೂ—ಕೃಷ್ಣ ಮನೆಗೆ ಕಾಲಿಟ್ಟು ಅತ್ತಾಗ ಅವರ ಹೃದಯದಲ್ಲಿ 'ಜುಳ್' ಎಂದಿತ್ತು....ಅಂತೆಯೇ ತಮ್ಮ ಮೌಢ್ಯಕ್ಕೆ ನಾಚಿಕೆಯಾಯಿತು, ಹೇಸಿಗೆಯಾಯಿತು.... ತಮ್ಮನ್ನು ತಾವೇ ಹಳಿದುಕೊಂಡಿದ್ದರು....ಮುಗ್ಧರಾಗಿ, ಮಗುವಿನ ಮುಂದೆ ನಿಂತು, ಅದು ನಕ್ಕಾಗ, ಅದರ ಪುಟ್ಟ ಕೈ ಹಿಡಿದು ಹೇಳಿಯೂ ಇದ್ದರು....

"ಏ....ಕಳ್ಳ....ಎಂಥ ತಪ್ಪು ಮಾಡಿದ್ದೆ ನಾನು ?....ಅಲ್ವಾ.... ಈ ಪುಟ್ಟ ಮರೀನ ಬೇಡ ಎಂದಿದ್ದೆ ಅಲ್ವಾ....ಹೊಡಿಯೋ.... ಹೂ...."—ಎಂದು ಅದರ ಕೈಯಿಂದ ತಮ್ಮ ಕೆನ್ನೆಗೆ ಹೊಡಿಸಿಕೊಂಡಿದ್ದರು....

ಕೃಷ್ಣ !

"ಹಾವಿಗೆ ಹಾಲೆರೆದಂತಾಯಿತು....ಸೂ....ಮಗ...."

ಥೂ....ಥೂ........

ಮಗು ಬೆಳೆಯಿತು....ಮಿದುಳು ಬೆಳೆಯಲಿಲ್ಲ....ಮೊಂಡು ಮೊಂಡು....ಬೆಳೆದ ಕೃಷ್ಣ ಮೊದ್ದು ಮೊದ್ದು....

ರಾಯರ ಕಣ್ಣಲ್ಲಿ ಗೆರೆಯಾಗಿದ್ದ ನೀರು ಹನಿಯಾಗಿ ಉರುಳಿತು....

ಅಂದು ಸೀ ತಿನ್ನಿಸಿ ಸ್ಕೂಲಿಗೆ ಸೇರಿಸಿದರು.—ಭವಿಷ್ಯತ್ತನ್ನು ಆದರಿಸಿ....

ಕಲ್ಪನೆಯು ಕುಡಿ ಕರಡಾಯಿತು....ಕೃಷ್ಣ ಕಲಿಯಲಿಲ್ಲ....

ಪೆದ್ದು....ಪೆದ್ದು ಕೃಷ್ಣ....

"ಅಪ್ಪಾ....ಕೃಷ್ಣ ಪೆದ್ದಂತೆ...."

"ಹಾಗೆಲ್ಲ ಅನ್ನಬಾರದು ಶಾರೀ...."

ವರುಷಗಳು ಕಂಡೂ ಕಾಣದಂತೆ ಮರೆಯಾದುವು.

ಒಮ್ಮೆ ಲಾಂಟಾನ ಕಡ್ಡಿಯಿಂದಲೂ ಏಟು ಬಿತ್ತು....ಅದೇ ಮೊದಲು, ಅದೇ ಕೊನೆ....ರಾಯರ ಕರುಳು ಕಿವುಚಿದಂತಾಯಿತು.. ಕಣ್ಣಿನಲ್ಲಿ ಹನಿ ಮೂಡಿತು....ಅಂದಿನಿಂದ ಅವನಿಗಾಗಿ ಅವರು ಕೋ ಹಿಡಿಯಲಿಲ್ಲ....

ಪೆದ್ದಾದ ಕಿಟ್ಟನನ್ನು ನೋಡಿ ಗಂಡ-ಹೆಂಡಿರಿಬ್ಬರಿಗೂ ಮರುಕವಾಗಿತ್ತು....

ಕುಳಿತಲ್ಲಿಯೇ ಕುಳಿತು ಬಿಡುವನು, ನಿಂತಲ್ಲೇ ನಿಲ್ಲುವನು ನೂರು ಬಾರಿಗೊಮ್ಮೆ ಉತ್ತರಿಸುವನು, ಏನೋ ಮಾಡುವನು.....

ತನ್ನ ಕಣ್ಣೆದಿರು ಇದೆಲ್ಲ ನೋಡಬೇಕಾಯಿತಲ್ಲ—ಎಂದು ಗೌರಮ್ಮ ಕೋಡಿ ಹರಿಸುವರು....

ರಾಯರು ಮೌನವಾಗಿ ಮರುಗುವರು....

ಊರಿಗೆಲ್ಲ ಕೃಷ್ಣ—'ಪೆದ್ದು ಕೃಷ್ಣ'

ನಿರುಪಯೋಗಿ ಜೀವ....

ಮಮತೆಯ ಅನ್ನ........'ಹಾವಿಗೆ ಹಾಲೆರೆದಂತಾಯಿತು.. ಸೂ....ಮಗ....'

ಆರಾಮು ಖುರ್ಚಿಯಲ್ಲಿ ಕುಳಿತಿದ್ದ ರಾಯರಿಗೆ ಮುಂದಿನದನ್ನು ಯೋಚಿಸಲು ಆಗಲಿಲ್ಲ........

ಪೆದ್ದು ಕಿಟ್ಟ ಏನು ಮಾಡಿದ ?....ಥೂ ಯೋಚಿಸಲೂ ಬೇಸರ ಪಡಿಸುವ ಘಟನೆ....

ತಮ್ಮ ಮಾನ-ಮರ್ಯಾದೆಗಳ ಬುಡವನ್ನೇ ಅಗೆದನೆ ?

ಹಾಲೆರೆದು ಸಾಕಿದ ಹೃದಯಗಳಿಗೇ ಹೆಡೆಯೆತ್ತಿ ಅಪ್ಪಳಿಸಿದನೆ

"ಹಾವಿಗೆ ಹಾಲೆರೆದಂತಾಯಿತು....ಸೂ....ಮಗ...."

ಮೈ ನಡುಗಿತು.

ತಡೆಯಲಾರದಾದರು....

ಕತ್ತನ್ನು ಹೊರಳಿಸಿ ಕೂಗಿದರು—

"ಶಾರದಾ!"

"........ರೂಮಿನಲ್ಲಿದ್ದಾಳೆ...."

—ಗೌರಮ್ಮ ಅಡಿಗೆಮನೆಯಿಂದ ಉಸುರಿದಳು—ಸೋತ ದನಿಯಲ್ಲಿ....

x x x x x

ಕೋಣೆಯೊಳಗೆ ಕತ್ತಲೆಯ ಮೂಲೆಯೊಂದರಲ್ಲಿ ಮುದುರಿ ಕುಳಿತಿದ್ದಳು ಶಾರದೆ—ಬೆಚ್ಚಿಬಿದ್ದ ಹುಲ್ಲೆಯಂತೆ. ಚಳಿ ಏರಿಬಂದು ಮೈ ನಡುಗುತಿತ್ತು....ನೂರು ಪ್ರಶ್ನೆಗಳ ಮಳೆಗರೆದಿತ್ತು ಮನದಲ್ಲಿ- ಜಿರ ಜಿರಿ....ಜಿರ ಜಿರಿ....

ಹೊರಗೂ ಸುರಿಯುತ್ತಿತ್ತು ಸ್ವಾತಿಮಳೆ— ಜಿರ ಜಿರಿ....ಜಿರಿ....

ಮೇಲೆ— ಹಂಚಿನ ಮೇಲೆ ಬಡಿಯುತ್ತಿತ್ತು ಮಳೆ— ಪಟ್ಟ ಪಟ, ಪಟ್ಟಪಟ, ಪಟ್ಟಪಟ....

ಮೌನದ ಕಂಬನಿ ಮೂಕವಾಗಿ ಉರುಳುತ್ತಿತ್ತು— ಕೆಂಪಾದ ಕೆನ್ನೆಯ ಮೇಲೆ ಒಂದೇ ಸಮನೆ....

ಪ್ರಶ್ನೆ....ಪ್ರಶ್ನೆ....ಪ್ರಶ್ನೆ....

ನೂರು ನೂರು ಪ್ರಶ್ನೆಗಳ ತಾಕಲಾಟ ನಡೆದಿತ್ತು ಮಿದುಳಲ್ಲಿ....

ಕಿಟ್ಟಣ್ಣ !

ತಾನು ಈ ಲೋಕದಲ್ಲಿ ಕಣ್ಣುಬಿಟ್ಟ ದಿನದಿಂದ, ಈ ಹದಿನೈದು ವರುಷಗಳವರೆಗೂ ತನ್ನಣ್ಣನಾಗಿದ್ದ ಕಿಟ್ಟಣ್ಣ ! !

ಅಣ್ಣಾ....ಃ....ಅಣ್ಣಾ ! ! !

" ಹಾವಿಗೆ ಹಾಲೆರೆದಂತಾಯಿತು....ಸೂ....ಮ...."

ಥೂ....ಥೂ ...ಕಿವಿ ಮುಚ್ಚಿಕೊಂಡಳು....ಸಹಿಸಲಸದಳವಾಯಿತು.

ಕಿಟ್ಟಣ್ಣ—ಹಾವು....???

ತಾನು ಬೆಳೆದು, ಅರಿವು ಬಂದಾಗಿನ ನೆನಪು....

ಕಿಟ್ಟಣ್ಣ ನೂರು ಬಾರಿ ತನಗೆ ಕುದುರೆಯಾಗಿದ್ದನಲ್ಲವೆ?.... ನೂರು ನೂರು ಬಾರಿ ?

ಆಳುಗುಳಿಯಾಟವಾಡುವಾಗ ...

ಶಾರದೆ ಮುಖ ಮುಚ್ಚಿಕೊಂಡು ಅತ್ತಳು....ಸೆರಗೆಲ್ಲ ಮುದ್ದೆಯಾಗಿತ್ತು....

'ಪೆದ್ದ ಕೃಷ್ಣ'.... 'ಏ ಹೋಗೇ....ನನ್ನ ಕಿಟ್ಟಣ್ಣ ಪೆದ್ದನಲ್ಲ'.... 'ಇನ್ನೇನು ಜಾಣನೇನು....'.... 'ಅಲ್ಲವೇನೋ ?'.... 'ಹಿ ಹಿ ಹಿ ಹಿ ಹಿ' ....ಗೆಳತಿಯರು ಛೇಡಿಸಿದಾಗ.... 'ಹೆ ಹೆ ಹೆ ಹೆ ಹೆ'—ಅವಳೂ ಜಾಳಿಸಿದ್ದಳು........

" ನಾನೂ ಬರ್ಲೇನೆ ? "

ಎಲ್ಲರಿಗೂ ಮೊದಲು ಕಿಟ್ಟಣ್ಣ—ಪಗಡೆಯಾಟಕ್ಕೆ, ಕವಡೆಯಾಟಕ್ಕೆ, ದಬ್ಬೆಪಿಲ್ಲಿಯಾಟಕ್ಕೆ.... ಹದಿನೈದು ವರುಷದ ಕಿಟ್ಟಣ್ಣ— ಎಲ್ಲರಿಗೂ ಮೊದಲು....

" ಥೂ ಹೆಣಗ "

ಒಡನಾಡಿಗಳು ಎಷ್ಟು ಬಾರಿ ಅನ್ನಲಿಲ್ಲ ?

" ಏಯ್....ಕಿಟ್ಟಣ್ಣನಿಗೆ ಹಾಗೆಲ್ಲ ಹೇಳ್ಬೇಡ್ರೇ...."

ಆದರೂ ಪಾಪ, ಸೋಲು ಅವನದೇ....ಕೈ ಕಾಯಿಸಿಕೊಳ್ಳುವವನೂ ಅವನೇ....

ರಪ್ ರಪ್....ಛಟೀರ್ ಛಟೀರ್....

" ಏಯ್, ಜೋರಾಗಿ ಹೊಡೀ ಬೇಡ್ರೇ...."

" ಕಿಟ್ಟಣ್ಣ....ಕೈ ಊದಿಕೊಂಡ್ತೆ ?...."

ಬಟ್ಟೆಯೊಗೆಯಲು ಕಾಲುವೆಗೆ ಹೋಗುವಾಗಲೂ.... 'ನಾ ಬರ್ಲಾ'....

ತಾನು ಬಟ್ಟೆಯೊಗೆಯುತ್ತಿದ್ದರೆ, ಅವನು ನೀರಿನಿಂದ ಗುಂಡುಕಲ್ಲನ್ನಾರಿಸುವನು....ಹದಿನೈದು ವರುಷದ ಹುಡುಗ....

" ಥೂ ಹೆಣಗ...."

" ಏಯ್....ಹಾಗನ್ಬೇಡ್ರೇ...."

ಶಾರದಾ ಮೂಗಿನಲ್ಲಿಳಿಯುತ್ತಿದ್ದ ಸಿಂಬಳವನ್ನು ಎಡಗೈಯಿಂದ ತೆಗೆದು ಗೋಡೆಗೊರಸಿದಳು....ಮೂಗಿನ ಹೊಳ್ಳೆಗಳೂ ಕೆಂಪು-ಕೆಂಪಾಗಿದ್ದುವು....

" ಯಾಕೆ ಶಾರೀ....ಇಸ್ಕೂಲಿಗೆ ಹೋಗೋಲ್ವಾ...."

ಅದೊಂದು ದಿನ ತಾನು ಸ್ಕೂಲಿಗೆ ಹೊರಟು ಮತ್ತೆ ಹೋಗದೆ ನಿಂತಾಗ....

ಗಬಕ್ಕನೆ ಒಳಗೋಡಿದಳು....

" ಥೂ ಮುಟ್ಟೇಡ್ವೋ...."

" ಶಾರೀ....ಹಾಗೆಲ್ಲ ಆಡಬಾರದಮ್ಮಾ...."

" ಹೌದಮ್ಮಾ...." ....ತಂದೆ ಅಂದರು....

" ನೋಡ್ತಾಯ್ರ ಕಿಟ್ಟಣ್ಣ, ಅವರೆಲ್ಲ ಹ್ಯಾಗಂತಾರೆ !...."

ಒಂದು ದಿನ ಅವನೇ ಕೇಳಿದ... "ಹೌದ ಶಾರೀ....ನಾನು ನಿಮ್ಮಮ್ಮನ ಮಗ ಅಲ್ಲಾಂತೆ ? ".... " ಹೌದಾ "—ಆಚ್ಚರಿಗೊಂಡಳು ತಾನೇ....ನಂಬದೇ ತಾಯಿಗೂ ಕೇಳಿದಳು.... " ಹೌದಂತೆ ಕಣೋ ಕಿಟ್ಟಣ್ಣ !"........ " ಹಾಗಾ " ನೂರುನೋಡುತ್ತ ನುಡಿದನು....

" ಏಯ್ ಮುಟ್ಟೇಡ್ವೋ...."

" ಯಾಕೆ ?...."

ಮುಖ ಕೆಂಪು ಮಾಡಿಕೊಂಡು ಓಡಿದ್ದಳು—ರೂಮಿನೊಳಗೆ

" ಅಮ್ಮ....ಎಷ್ಟು ಪೆದ್ದಾಮ್ಮ ಕಿಟ್ಟಣ್ಣ....! "

" ನೀನೂ ಪೆದ್ದಿ...."

ತಾನು ಕುಳಿತ ತಾವೇ ತನ್ನನ್ನು ನುಂಗುವಂತೆ ಭಾಸವಾಗುತ್ತಿತ್ತು....ನುಂಗಬಾರದೆ?....ಸುರುಳಿಯಾಗಿದ್ದ ಹಾಸಿಗೆ ಕೆಂಡವಾಗಿ ಕಂಡಿತ್ತು....ಸುಡಬಾರದೆ? ಅಯ್ಯೋ........

ಅಯ್ಯೋ ಕಿಟ್ಟಣ್ಣಾ....

ಕಿಟ್ಟಣ್ಣ—ಹಾವು....

" ಹಾವಿಗೆ ಹಾಲೆರೆದಂತಾಯಿತು....ಸೂ....ಮಗ...."

ಬಿಕ್ಕಿ ಬಿಕ್ಕಿ ಅತ್ತಳು—ಮುಖ ಮುಚ್ಚಿಕೊಂಡು ಅತ್ತಳು....

x x x x x

" ಅಯ್ಯೋ ಅಮ್ಮಾ!"

ಕಿಟ್ಟನೆ ಕಿರುಚಿದಳು ಶಾರದ, ಕತ್ತಲೆಯೇ ಬೆದರಿ ಓಡುವಂತೆ—

" ಶಾರೀ....ಏನಾಯ್ತೆ ?.... ಏನಾಯ್ತೆ ? "— ಧಿಗ್ಗನೆದ್ದು ಓಡಿಹೋದರು. ತಾಯಿ....

" ಆಂ....ಯಾರು ? ....ಯಾರು ? ....ಏನು ಶಾರೀ...."— ಕನಸಿನಿಂದೆಚ್ಚತ್ತ ರಾಯರು ತಡವರಿಸಿಕೊಂಡೇ ಎದ್ಬೋಡಿದರು ರೂಮಿಗೆ....

"ಏನು....ಏನದು ಗಲಾಟೆ?....ಅಣ್ಣಾ....ಅಣ್ಣಾ...." ಸಂಜೆಯ

ಗಾಡಿಯಲ್ಲಿ ಹಳ್ಳಿಯಿಂದ ಬಂದು ಪ್ರಜ್ಞೆತಪ್ಪಿ ನಿದ್ದೆ ಮಾಡುತ್ತಿದ್ದ ಭೀಮು ಎಚ್ಚತ್ತು, ಏನೂ ತೋಚದೆ ಓಡಿಹೋದನು ರೂಮಿಗೆ....

"ಶಾರೀ....ಶಾರೀ....ಅಯ್ಯೋ ಮಗು ನಡುಗುತ್ತಿದೆ; ದೀಪ ಹಚ್ಚೀಂದ್ರೆ ಬೇಗ.... ಅಯ್ಯೋ ತಾಯೀ...."

ಕತ್ತಲಲ್ಲೇ ಮಗಳ ಮೈದಡವಿ, ತೊಡೆಯ ಮೇಲೆಳೆದುಕೊಂಡು ಮತ್ತಷ್ಟು ತಬ್ಬಿಕೊಂಡರು ತಾಯಿ.

ರಾಯರು ನಡುಗುವ ಕೈಯಲ್ಲೇ ಕಡ್ಡಿಗೀರಿ ದೀಪ ಹಚ್ಚಿದರು.... ತೊಡೆ ಗಡಗಡನೆ ನಡುಗುತ್ತಿತ್ತು....ಗಡಗಡನೆ....

ಮಂದ ಬೆಳಕಿನಲ್ಲೇ, ರಾಯರೂ ಭೀಮಣ್ಣನೂ ಬಗ್ಗಿನೋಡಿದರು.

ಶಾರದೆಯ ಮೈ ನಡುಗುತ್ತಿತ್ತು ಥರಥರನೆ.... ಸೀರೆ ಅಸ್ತವ್ಯಸ್ತವಾಗಿತ್ತು.... ತಾಯಿ ಕೂಡಲೇ ಸೀರೆಯನ್ನು ಸರಿಮಾಡಿ, ಮತ್ತಷ್ಟು ಬಿಗಿಯಾಗಿ ತಬ್ಬಿಕೊಂಡು ಅಳುತ್ತಿದರು— ಏನೆಂಬುದೇ ಅರಿವಾಗದೆ....

ಹನ್ನೆರಡು ಗಂಟೆಯ ರಾತ್ರಿಯಲ್ಲಿ ಕತ್ತಲೆ ಹೆಪ್ಪುಗಟ್ಟಿತ್ತು ... ಮಳೆ ಸುರಿಯುತ್ತಿತ್ತು....

"ಫಿಟ್ಸ್ ಇರಬೇಕು.... ಕಬ್ಬಿಣ ಕೊಡು ಕೈಯಲ್ಲಿ" ಎಂದರು ರಾಯರು ಭೀಮು ಬೀಗದ ಕೈಯನ್ನು ಕೊಟ್ಟನು....

"ಕನಸು ಕಂಡಿರಬೇಕು...." ಎಂದನು ಭೀಮು ಅವರಿಗೆ ಧೈರ್ಯ ತಂದುಕೊಡುತ್ತ.

"ಶಾರೀ....ಶಾರೀ.... ಸ್ವಲ್ಪ ನೀರು ತನ್ನೀಂದ್ರೆ" ಎಂದು ಜೋರಾಗಿ ಅತ್ತರು ಗೌರಮ್ಮ.

ನಡುಕ ಕೊಂಚಕೊಂಚವಾಗಿ ಕಮ್ಮಿಯಾಗಿ ಪೂರ್ಣ ನಿಂತಿತು.... ಮುಖದ ಮೇಲೆ ಮೂಡಿದ ಬೆವರ ಹನಿಯನ್ನು ತಮ್ಮ ಸೆರಗಿನಿಂದ ಒರಸಿದರು— ಗೌರಮ್ಮ.

ಕೊಂಚ ಎಲ್ಲರಿಗೂ ಸಮಾಧಾನವಾಯಿತು. ತಾಯಿಗೆ ಧೈರ್ಯ ಬಂದಿತು.

'ನಾನು ನೋಡ್ಕೊಳ್ತೀನಿ....ನೀವು ಹೋಗಿ...." ಎಂದಳು ಆಕೆ....

"ಹೌದು ಭೀಮು ಹೋಗು.....ಮಲಗು..... ಸಾಕಾಗಿ ಬಂದಿದ್ದೀ...." ಎಂದರು ರಾಯರು. ಒಂದು ನಿಮಿಷ ಅಲ್ಲೇ ನಿಂತು ಅನಂತರ ಹಜಾರಕ್ಕೆ ಹೋದನು ಭೀಮು

ಸ್ವಲ್ಪಹೊತ್ತು ರಾಯರು ಅಲ್ಲೇ ಇದ್ದರು; ಪತ್ನಿ ಇಲ್ಲೇ ಮಲಗುವೆನೆಂದು ಹೇಳಿದ ನಂತರ ತಾವೆದ್ದು ತಮ್ಮ ಕೋಣೆಗೆ ಹೋದರು.

"ಶಾರೀ....ಶಾರೀ...."

ಹಣೆಯ ಮೇಲೆ ಹರಡಿದ್ದ ಮುಂಗುರುಳನ್ನು ಬದಿಗೆ ತಳ್ಳುತ್ತ ತಾಯಿ ನುಡಿದರು ಮಗಳಿಗೆ.

ಮೆಲ್ಲನೆ ಕಣ್ಣುಬಿಟ್ಟು ಸುತ್ತ ನೋಡಿದಳು ಶಾರದೆ.... ಮಂದಬೆಳಕಿನಲ್ಲಿ ತಾಯಿ ಪಕ್ಕದಲ್ಲಿರುವುದು ಕಂಡಿತು.

"ಅಯ್ಯೋ ಅಮ್ಮಾ..." ಪುನಃ ಕೂಗಿ ತಾಯಿಯನ್ನು ತಬ್ಬಿಕೊಂಡಳು— ಬೆದರಿದ ಕೋಳಿಮರಿ ತಾಯಿಯ ರೆಕ್ಕೆಯಡಿ ಬ... ಕೊಳ್ಳುವಂತೆ.

"ಏನು ತಾಯಿ?...............ಶಾರೀ....ಶಾರೀ...."

"ಊಂ"

"ಹೆದರ್ದಿಯಾ?...."

ಹೆಚ್ಚುಹೆಚ್ಚಾಗಿ ತನ್ನ ಇರುವಿಕೆಯ ಪ್ರಜ್ಞೆ ಬಂದಿತು ಅ...

"ಅಮ್ಮಾ... ನಾನೆಲ್ಲಿದ್ದೀನಿ...."

"ಇಲ್ಲೇ ಇದ್ದಿ.... ಇಲ್ಲೇ ಮಗು . . ನಿನ್ನ ಹಾಸಿಗೆಯಲ್ಲೇ

ಪೂರ್ಣ ತನ್ನಿರವು ತಿಳಿಯಿತು....

ಅಯ್ಯೋ.... ಎಂಥ ಅನುಭವ....

"ಅಮ್ಮ.... ಅಮ್ಮ...."

ತಾಯಿಯನ್ನು ತಬ್ಬಿಕೊಂಡು ಅತ್ತಳು.... ಏನೂ ಅರ್ಥವಾ... ತಾಯಿ ಮತ್ತಷ್ಟು ಬಿಗಿಯಾಗಿ ಮಗಳನ್ನು ತಬ್ಬಿಕೊಂಡು ಕೇಳಿದ...

"ಶಾರೀ.... ಏನಮ್ಮ.... ಏನಾಯ್ತು ತಾಯಿ.... ಅದೆಲ್ಲ ... ಕನಸು, ಇನ್ನೇನಿಲ್ಲ.... ಸುಮ್ಮನಿರು ಮಗು...."

ಕನಸು?.... ಕೆಟ್ಟ ಕನಸು??.... ಇನ್ನೇನಲ್ಲ ಅದು???

ಅಲ್ಲ ಅಲ್ಲ ಅಲ್ಲ.... ಕನಸಲ್ಲ.... ಅಯ್ಯೋ ಅಮ್ಮ ... ಕನಸಲ್ಲ....

ರಾತ್ರಿ ಸುಮಾರು ಹನ್ನೆರಡರ ವೇಳೆ....

ಥಟ್ಟನೆ ಎಚ್ಚೆತ್ತಾಗ....

"ಅಮ್ಮ.... ಅಮ್ಮ...."

"ಥೂ.... ಏನು ಶಾರೀ.... ಚಿಕ್ಕಮಕ್ಕಳಂತೆ ಅತ್ತೀಯಲ್ಲ..

ಊಹುಂ.... ಅಮ್ಮ ಅದು ಕನಸಲ್ಲ.... ಥೂ.... ಥೂ.... ಥೂ..

ಥಟ್ಟನೆ ಎಚ್ಚೆತ್ತಾಗ....

ಮೈಯೆಲ್ಲ ಬಿಗು ಬಿಗು....

ರಕ್ತ ಝಲ್ಲೆಂದಿತ್ತು ಅಂಗಾಂಗಗಳಲ್ಲಿ....

ಅಯ್ಯೋ....ತನ್ನ ಮುಖದ ನೇರಕ್ಕೇ ಬಿಸಿಯುಸಿರು—ಯೊತ್ತಿದಂತೆ....

"ಅಯ್ಯೋ ಅಮ್ಮ"—ಎಂದು ಕಿರಿಚಿದುದು ಮಾತ್ರ ನೆನ... ಮುಂದಿನದೊಂದೂ ಅವಳಿಗರಿವಿಲ್ಲ.... ಕಣ್ಣುಬಿಟ್ಟಾಗ ತಾಯಿ... ಮುಖ....

"ಅಮ್ಮ, ನನಗೇಕೋ ದಿಗಿಲಾಗುತ್ತಮ್ಮ...."

"ಏನೂ ಇಲ್ಲ ಶಾರೀ.... ಮಲಕ್ಕೋಮ್ಮ.... ನಾನಿದ್ದೀ... ಹೋಗ್ಲಿ ಅವರನ್ನ ಕೂಗಲೆ?...."

"ಬೇಡಮ್ಮ... .ಬೇಡ...."

ಅಯ್ಯೋ ...ಅದು ಕನಸಂತೆ.... ಊಹುಂ.... ಅಲ್ಲ ಅಲ್ಲ....

"ಅಮ್ಮ, ಬಾಯಾರಿಕೆ...."

ತಾಯಿ ಎದ್ದು ನೀರು ಕೊಟ್ಟರು—ದೀಪ ದೊಡ್ಡದು ಮಾ...

ಶಾರದೆ ದೀಪದ ಬೆಳಕಿನಲ್ಲಿ ತಾಯಿಯ ಮುಖ ನೋಡಿ

ಓ ತಾಯೀ ೀ ೀ.....!

ಅಯ್ಯೋ ಅದು ಕನಸಲ್ಲ....ಅಮ್ಮ ಅದು ಕನಸಲ್ಲ....ಹೇಳಲಿ? ಹೇಳಲಿ?.....ತುಯ್ಲಾಟ ಮನದಾಳದಲ್ಲಿ....ಹೂಂ.....ಹೂಂ.....

ತಾಯಿಯ ಕೈ ಹಿಡಿದು ಬುಳುಬುಳನೆ ಅತ್ತಳು.

" ಏನು ಶಾರೀ ಇಷ್ಟು ದೊಡ್ಡವಳಾಗಿ......"

" ಅಮ್ಮ......"

"........"

" ಅಮ್ಮ....ಅಮ್ಮ....ಆಗ ..."

" .... "

" .... "

" ಅಂ ! .....ಅಯ್ಯೋ ನನ್ನ ಕಂದ....."

ಬೆಟ್ಟವೇ ತಲೆಯ ಮೇಲೆ ಕುಸಿದಂತೆ ಅಳಹತ್ತಿದರು.....

" ಅಮ್ಮ ಅಳಬೇಡಮ್ಮ..... "

ತಾನು ಹೇಳಿದುದೇ ತಪ್ಪಾಗಿ ತೋರಿ ಬೇಡಿದಳು—ಶಾರದ.

" ಇಲ್ಲ ತಾಯೀ.....ಇಲ್ಲ....ಅಯ್ಯೋ.... "

ಇಲ್ಲವೆಂದವರು ಮತ್ತೆ ಅತ್ತರು.

ಬೆನ್ನ ಹಿಂದೆ ಏನೋ ಸದ್ದಾದಂತಾಗಿ ತಿರುಗಿ ನೋಡಿದರು.... ರಾಯರು ನಿಂತಿದ್ದರು— ಕಲ್ಲಿನಲ್ಲಿ ಕಡೆದ ವಿಗ್ರಹದಂತೆ— ಮೌನದ ಮೂರ್ತಿಯಾಗಿ....

ತಡೆಯಲಾರದೆ ಗೌರಮ್ಮ ಮತ್ತಷ್ಟು ಜೋರಾಗಿ ಅತ್ತರು ....

ಶಾರದೆ ತಂದೆಯನ್ನು ನೋಡಿ ದುಃಖ ತಾಳಲಾರದೆ ಮುಖ ಮುಚ್ಚಿಕೊಂಡು ಅತ್ತಳು

....

ಕತ್ತಲನ್ನು ಕತ್ತರಿಸಿತು ಹುಂಜದ ಕೂಗೊಂದು—ದೂರದ ಹಿತ್ತಲಿನಿಂದ......

ರಾಮರಾಯರಿಗೂ, ಗೌರಮ್ಮನಿಗೂ ಅದು ಕತ್ತಲಿನ ಪ್ರಾರಂಭವೆನ್ನುವಂತಿತ್ತು.

ಶಾರದೆ ಆಗತಾನೇ ಸ್ವಲ್ಪ ಕಣ್ಣು ಮುಚ್ಚಿದ್ದಳು ಅತ್ತು ಅತ್ತು.

x x x x x

ಏಳು, ಎಂಟು, ಒಂಬತ್ತು, ಹತ್ತು, ಹನ್ನೊಂದು......

ಗಂಟೆ ಬಡಿಯಿತು ಹನ್ನೆರಡು.....

" ಎಲ್ಲಿ ಹೋದನು ? "

ರಾಯರಿಗೆ ಅಚ್ಚರಿಯಾಗಿತ್ತು...ಅಚ್ಚರಿಯ ನಡುನಡುವೆ ಅನುಮಾನ ತಲೆಯೆತ್ತುತ್ತಿತ್ತು....ಥೂ....ಥೂ....ಇರಲಾರದು ...ಮತ್ತೆಲ್ಲಿಯವನು ?.... ಇರಬೇಕು.... ಉಹುಂ ... ಉಹುಂ.... "ಇರಬಹುದಾ ಗೌರ........" "ಅಯ್ಯೊ ! ಅವನು ಹಾಗೆ ಮಾಡಬಹುದೆ ?.... "

ಇಬ್ಬರೂ ನಂಬಲಿಲ್ಲ....ಆದರೆ ಘಳಿಗೆ ಘಳಿಗೆ ಉರುಳುವಾಗಲೇ ಅನುಮಾನ ಖಚಿತವಾಗತೊಡಗಿತು....ಇದ್ದರೂ ಇರಬಹುದು....

ಅಣ್ಣನ ಕಣ್ಣಲ್ಲಿ ನೀರನ್ನು ಕಂಡ ಭೀಮಣ್ಣನ ಹೃದಯದಲ್ಲಿ ನೂರು ಚೇಳುಗಳು ಕುಟುಕಿದಂತಾಯಿತು....

" ಅಣ್ಣಾ ...ಏನಣ್ಣಾ.... "

ಹೇಳಬಾರದು, ಹೇಳಬಾರದು ಎಂದು ಎಷ್ಟು ತಡೆಹಿಡಿಯಲು ಯತ್ನಿಸಿದರೂ ನಾಲಗೆ ಮನದ ಯೋಚನೆಗೂ ಮುಂದಾಗಿ ನಿಂತು ಹೊರಳಿಬಿಟ್ಟಿತು....

" ಹಾಂ !....ನಿಜವೇ ? "

ಕೆಂಡ ತುಳಿದವರಂತೆ ಕುಣಿದಾಡಿದ ಭೀಮು....

" ಅಯ್ಯೋ .... ಹಾವಿಗೆ ಹಾಲೆರೆದಂತಾಯಿತು .... ಸೂ.... ಮಗ...."

ಒಳಗೆ ರೂಮಿನಲ್ಲಿ ಮಲಗಿದ್ದ ಶಾರದೆಯ ಕಿವಿಗೂ ಬಿತ್ತು....

ಕಿಟ್ಟಣ್ಣಾ....ಹಾವು....ಹಾವು !

" ಹೋಗಲಿ.... ಕೂಗಬೇಡ.... ಅಕ್ಕಪಕ್ಕದವರೇನೆಂದುಕೊಂಡಾರು...."

ಅಯ್ಯೋ....ಅಪ್ಪಾ....

" ಮುಂಡ್ವಾಳ....ಎಲ್ಲಿ ಹೋದ ನೋಡಿಕೊಂಡು ಬರ್‍ತೀನಿ.. . "

ಭೀಮು ಕರ್ಕಶವಾಗಿ ನುಡಿಯುತ್ತಿದ್ದುದೂ ಅವಳ ಕಿವಿಗೆ ಬೀಳದಿರಲಿಲ್ಲ....

" ಭೀಮು.....ಸಿಕ್ಕಿದರೆ ಅಲ್ಲೇ ರಂಪ ಮಾಡಬೇಡ.. .."

" ಕರೆದುಕೊಂಡು ಬರೋದೆ ?....ಅವನು ಹುಟ್ಟಿಲ್ಲಾ ಅನಿಸಿಬಿಡ್ತೀನಿ...."

"ಥೂ....ಹಾಗೆಲ್ಲ ಅನ್ನಬಾರದು....ಅವನು ಮನೆಗೆ ಬರಲಿ...."

ಶಾರದೆ ಮುಖ ಮುಚ್ಚಿಕೊಂಡು ಮತ್ತೆ ಮತ್ತೆ ಅತ್ತಳು.

" ಹಾವಿಗೆ ಹಾಲೆರೆದಂತಾಯಿತು....ಸೂ... ಮಗ.... "

ಜನರ ಗುಜುಗುಜು ಸದ್ದು ಕೇಳಿ ಸಮಾಧಿಸ್ಥಿತಿಯಲ್ಲಿದ್ದ ಮೂವರಿಗೂ ಹೊಡೆದೆಬ್ಬಿಸಿದಂತಾಯಿತು. ರಾಯರು ಆರಾಮ ಕುರ್ಚಿಯಿಂದ ಸರ್ರನೆ ಎದ್ದರು. ಅಡಿಗೆಮನೆಯಿಂದ ಗೌರಮ್ಮ ಓಡಿ ಬಂದರು. ಭೀಮು ಕಿಟ್ಟನ ಜುಟ್ಟನ್ನು ಹಿಡಿದು ದರದರನೆ ಒಳಗೆಳೆದುಕೊಂಡು ಬಂದು, ರಾಯರ ಕಾಲೆದುರು ಕೆಡವಿ ಒದ್ದನು....ರಾಯರು ಕಣ್ಮುಚ್ಚಿದರು.....

ಹೊರಗಿದ್ದ ಜನ ಮೆಲ್ಲಮೆಲ್ಲನೆ ಒಳಗೆ ಬಂದರು—ಒಬ್ಬೊಬ್ಬರಾಗಿ.

" ಏನು ಕದ್ದ ?"— ಒಬ್ಬ ಕೇಳಿದ.

" ನೋಡ್ರಿ ಪೆದ್ದಾಂತೀವಲ್ಲ "—ಇನ್ನೊಬ್ಬ ಆಶ್ಚರ್ಯಪಟ್ಟ.

" ರಾಯ್ರ ಮನೆ ಅನ್ನ ಸ್ವಾಮೀ ಅದು "— ಮತ್ತೊಬ್ಬ ರಾಯರ ಮೇಲಿನ ಅಭಿಮಾನದಿಂದ ನುಡಿದ.

" ಹೋಗ್ರೋ, ಎಲ್ರೂ ಹೊರಕ್ಕೆ...."—ಘರ್ಜಿಸಿದ ಭೀಮು ಕೋಪದ ಆವೇಶದಲ್ಲಿ....

ದೂರದಲಿಚ್ಛೆಯಿಲ್ಲದಿದ್ದರೂ ತೆರಳಿದರು ನೆರೆದಿದ್ದವರು. ಭೀಮು ಬಾಗಿಲ ಚಿಲಕ ಸಿಕ್ಕಿಸಿ, ತೊಲೆಯ ಮೇಲಿದ್ದ ಬಾರುಕೋಲನ್ನು ತೆಗೆದುಕೊಂಡು ಒಂದೇ ಸಮನೆ ಬಿಗಿಯಲುಪಕ್ರಮಿಸಿದ.... ಆವೇಶ ಬಂದವನಂತೆ.

(೨೪೩ನೆಯ ಪುಟದಡಿಯಲ್ಲಿ)

ಸಾಹಿತ್ಯಲೋಕ

'ವಿಹಂಗಮ'

●

ಸಂಸ್ಕೃತಿ ಮತ್ತು ಸರಕಾರ

ಸ್ವಾತಂತ್ರ್ಯದ ನಂತರ ನಮ್ಮ ಕೇಂದ್ರ ಮತ್ತು ರಾಜ್ಯಸರಕಾರಗಳು ಕೆಲಮಟ್ಟಿಗೆ ನಾಡಿನ ಸಂಸ್ಕೃತಿಯ ಕಡೆಗೆ ಲಕ್ಷ್ಯವನ್ನು ಪೂರಯಿಸುತ್ತಿರುವುದು ಸಮಾಧಾನದ ವಿಷಯ. ಸಂಸ್ಕೃತಿಯ ಪ್ರಚಾರಸಾಧನಗಳೂ ಪ್ರತೀಕಗಳೂ ಆದ ಲಲಿತಕಲೆಗಳು ನಮ್ಮ ನಾಡಿನಲ್ಲಿ ಬೆಳೆದದ್ದು ರಾಜಾಶ್ರಯದಲ್ಲಿ ಅಥವಾ ವೈಭವವುಳ್ಳ ಅನೇಕರು ನೀಡಿದ ಪ್ರೋತ್ಸಾಹದ ಫಲವಾಗಿ. ಇಂದು ಪ್ರಜೆಗಳೇ ರಾಜರಾದಾಗ, ಪ್ರಜಾಪ್ರಭುತ್ವದಲ್ಲಿ, ಪ್ರಜೆಗಳ ಪ್ರತಿನಿಧಿಯಾದ ಸರಕಾರವು ಈ ಬಗೆಯಲ್ಲಿ ಯೋಚನೆಯನ್ನು ಮಾಡುತ್ತಿರುವುದರಲ್ಲಿ, ಹೊಸ ಹೊಸ ಯೋಜನೆಗಳನ್ನು ಪುರಸ್ಕರಿಸುತ್ತಿರುವುದರಲ್ಲಿ, ಒಂದು ಬಗೆಯ ಐತಿಹಾಸಿಕ ಸಮರ್ಪಕತೆಯಲ್ಲದೆ ವ್ಯಾವಹಾರಿಕ ಪ್ರಯೋಜನವೂ ಇದೆ. ಪರಕೀಯರ ಆಳ್ವಿಕೆಯಲ್ಲಿ ನೂರೈವತ್ತು ವರ್ಷಗಳ ಕಾಲಾವಧಿಯಲ್ಲಿ ಯಾವ ಬಗೆಯ ಪ್ರೋತ್ಸಾಹ ಇಲ್ಲದಿದ್ದರೂ, ತಮ್ಮ ಅಂತಃಶಕ್ತಿಯಿಂದಲೆ ಉಳಿಕೊಂಡಿದ್ದ ಕಲೆಗಳು, ಇಂದು ಒಂದು ದೃಷ್ಟಿಯಿಂದ ಉಜ್ವಲವಾದ ಭವಿತವ್ಯವನ್ನು ಮುನ್ನೋಡಬಹುದಾದ ಸನ್ನಿವೇಶ ಒದಗಿದೆ. ಸನ್ನಿವೇಶ ಒದಗಿದೆ—ಯೋಜನೆಗಳು ಮುಂದೆ ಬರುತ್ತಿವೆ. ಆದರೆ ಒದಗಿದ ಸನ್ನಿವೇಶವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡ ಹೊರತು, ಆದರಂತೆ ಯೋಜನೆಗಳನ್ನು ಉಪಯುಕ್ತವಾಗಬಹುದಾದ ರೀತಿಯಲ್ಲಿ ರೂಪಿಸಿದ ಹೊರತು ಅವುಗಳಿಂದ ಹೊರಡಬೇಕಾದ ಫಲಶ್ರುತಿ ಹೊರಡದಿರಬಹುದು. ಕೊಡಮಾಡುವವರ ಜೊತೆಗೆ ಕೊಳ್ಳುವವರ ಮೇಲೆಯೂ ಒಂದು ವಿಧದ ಹೊಸತಾದ ಹೊಣೆಗಾರಿಕೆ ಬಂದಿದೆ.

ಹೊಸ ಹೊಸ ಯೋಜನೆಗಳು ಹೊರಬರುತ್ತಿವೆ. ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಶಿಲ್ಪ ಮುಂತಾದ ಕೆಲವು ಲಲಿತಕಲೆಗಳ ಅಭಿವೃದ್ಧಿಗಾಗಿ 'ಅಕಾದಮಿ'ಗಳು ಕೇಂದ್ರ ಸರಕಾರದಿಂದ ಸ್ಥಾಪಿಸಲ್ಪಟ್ಟಿವೆ. ಈ 'ಅಕಾದಮಿ'ಗಳಂತಹ ರಾಷ್ಟ್ರೀಯ ಸಂಸ್ಥೆಗಳ ಅಗತ್ಯ-ಮಹತ್ತ್ವಗಳನ್ನು ಕುರಿತು ಬೇರೆಯಾಗಿ ಹೇಳಬೇಕಿಲ್ಲ. ಆದರೆ ಇಂತಹ ಹಿರಿಯವಾದ ಸಂಸ್ಥೆಗಳನ್ನು ಇಂಗ್ಲಿಷ್ ಶಬ್ದದ ಅಪಭ್ರಷ್ಟ ಸ್ವರೂಪವಾದ 'ಅಕಾದಮಿ' ಎಂಬ ಪ್ರಯೋಗದಿಂದ ಹೆಸರಿಸುವ ಅಗತ್ಯ ಮಾತ್ರ ಅರ್ಥವಾಗಲಾರದ್ದು. ಅದಕ್ಕೆ ಪ್ರತಿಯಾದ, ಸರಿಯಾದ ಅರ್ಥಸೂಚಕವಾದ ಶಬ್ದ ಹಿಂದಿಯಲ್ಲಾಗಲಿ, ಸಂಸ್ಕೃತದಲ್ಲಾಗಲಿ ಸಿಕ್ಕಲಿಲ್ಲವೆ? ಇಂತಹ ಸಂಸ್ಥೆ ತೀರ ಹೊಸದಾಗಿ ಏರ್ಪಟ್ಟಿದ್ದರಿಂದ, ತೀರ ಹೊಸದಾದ ಹೆಸರೊಂದು ಇರಲಿ—ಎಂದಿರಬಹುದೆ? ಇಂತಹ ನಾವೀನ್ಯವೆ ಕಾರಣವಾಗಿದ್ದರೆ, ಇನ್ನೂ ಒಂದು ಹೆಜ್ಜೆ ಮುಂದುವರಿಯಬಹುದಿತ್ತೆಂದು ಕಾಣುತ್ತದೆ. ಸಂಗೀತ ಅಕಾದಮಿಯನ್ನು 'ಮ್ಯೂಕಾದಮಿ', ಸಾಹಿತ್ಯ ಅಕಾದಮಿಯನ್ನು 'ಲಿಟ್ ಕಾದಮಿ', ನಾಟಕ ಅಕಾದಮಿಯನ್ನು 'ಡ್ರಾಂ ಕಾದಮಿ' ಎಂದು ಮುಂತಾಗಿ ನಾಮಕರಣ ಮಾಡಿದ್ದರೆ, ಇನ್ನೂ ಹೊಸದಾದ ಪ್ರಯೋಗಗಳನ್ನು ಪ್ರಚಾರದಲ್ಲಿ ತಂದ ಶ್ರೇಯಸ್ಸನ್ನೂ ಪಡೆಯಬಹುದಾಗಿತ್ತು. ಆದರೆ ಹೆಸರಿನಲ್ಲೇನಿದೆ? ಯಾವುದಾದರೂ ಸರಿ, ನಡೆಯಬೇಕಾದ ಕೆಲಸ ಸರಿಯಾಗಿ ನಡೆಯುವಂತಾದರೆ ಸಂಸ್ಥೆಯ ಹೆಸರು ಏನಿದ್ದರೂ ಆಯಿತು. ಆಯಾ ಸಾಹಿತ್ಯಗಳಲ್ಲಿಯ ಉತ್ತಮವೆಂದು ನಿರ್ಣಯಿಸಲ್ಪಟ್ಟ ಕೃತಿಗಳಿಗೆ ಬಹುಮಾನಗಳನ್ನು ಕೊಡುವುದು, ಅಂತರ ಪ್ರಾಂತೀಯ ಸಾಹಿತ್ಯ ಕೃತಿಗಳ ಪರಿಚಯವನ್ನು ಮಾಡಿಕೊಡುವುದು, ಕೃತಿ-ಕರ್ತೃಗಳಿಬ್ಬರಿಗೂ ಅಗತ್ಯವಾದ ಉತ್ತೇಜನವನ್ನು ಒದಗಿಸುವ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡತೊಡಗಿವೆ ಈ ಸಂಸ್ಥೆಗಳು. ಇದು ಸ್ವಾಗತಾರ್ಹ.

ಸಾಹಿತ್ಯ ಮತ್ತು ಪ್ರಚಾರ

ಆಗಲೆ ಬರೆದು ಪ್ರಕಟವಾಗಿದ್ದ ಕೃತಿಗಳಿಗೆ ಬಹುಮಾನಗಳ ಮೂಲಕ ಕೊಡಮಾಡಿದ ಉತ್ತೇಜನದ ಜೊತೆಗೆ, ಹೊಸತಾಗಿ ಬರೆಯಲಿದ್ದ ಅಥವಾ ಬರೆಯಬೇಕಾಗಿದ್ದ ಕೃತಿಗಳಿಗೂ ಅನೇಕ ಬಗೆಯ ಆಕರ್ಷಣೆಗಳನ್ನು ನೀಡಲಾಗುತ್ತಿದೆ. ಉದಾ:— ಪಂಚವಾರ್ಷಿಕ ಯೋಜನೆಗಳ ಮೂಲತತ್ತ್ವಗಳನ್ನು ಆಧರಿಸಿಕೊಂಡು ಒಳ್ಳೆಯವಾದ ನಾಟಕಗಳನ್ನು ಬರೆದರೆ, ಆ ನಾಟಕಗಳನ್ನು ಸರಕಾರವೇ ಪ್ರಕಟಿಸಿ ಅಂಥ ನಾಟಕಗಳನ್ನು ಅಲ್ಲಲ್ಲಿ ಆಡಿತೋರಿಸುವ ಏರ್ಪಾಡುಗಳನ್ನು ತಾನೇ ಮಾಡಬೇಕು— ಎನ್ನುವ ಯೋಜನೆಗಳೂ ನಡೆದಿವೆ. ಒಂದು ದೃಷ್ಟಿಯಿಂದ ಇದು ಉತ್ತೇಜನ ಹೌದು— ಹೊಸದಾಗಿ ಬರೆಯಬೇಕು ಎನ್ನುವವರಿಗೆ. ಆದರೆ ಇಲ್ಲಿ ಒಂದು ತತ್ತ್ವದ ಪ್ರಶ್ನೆ ಅಡಕವಾಗಿದೆ. ಇಂತಹದೇ ಒಂದು ವಿಚಾರಸರಣಿಯನ್ನು ಎತ್ತಿ ತೋರಿಸಬೇಕೆಂದು ಸರಕಾರ ಸಾಹಿತ್ಯಿಕರಿಗೆ ಆದೇಶ

ಕೊಡಬಹುದೆ? ಸಾಹಿತ್ಯದ ದೃಷ್ಟಿಯಿಂದ ಇಂತಹ ಆದೇಶ ಸರಿಯಾದದ್ದೇ? ಅಲ್ಲದೆ ಒಳಗಿನಿಂದ ಸ್ಫೂರ್ತಿಯಾಗಿ ಬಂದಿರದ ಒಂದು ವಿಚಾರಸರಣಿಯನ್ನು, ಸಾಹಿತಿ ಎತ್ತಿಕೊಂಡು ಒಳ್ಳೆಯವಾದ ಕೃತಿಗಳನ್ನು ನಿರ್ಮಿಸಬಲ್ಲನೆ? 'ನಿರ್ಮಿಸಬಹುದು' ಎಂಬ ಮಾತನ್ನು ವಾದಕ್ಕಾಗಿ ನಾವು ಒಪ್ಪಿದರೂ, ಅದರಲ್ಲಿಯ ಸತ್ತ್ವ ಎಷ್ಟರಮಟ್ಟಿಗೆ ಪ್ರಚಾರ, ಎಷ್ಟರ ಮಟ್ಟಿಗೆ ನಿಜವಾದ ಸಾಹಿತ್ಯ ಎಂಬುದು ವಿವಾದಾಸ್ಪದ ವಿಷಯ. ಇಂದಿನ ಪರಿಸ್ಥಿತಿಯಲ್ಲಿ ಒಂದು ವಿಚಾರಸರಣಿ ಸರಿಯಾದದ್ದಾಗಿರಬಹುದು. ಉಪಯುಕ್ತವೂ ಆಗಿರಬಹುದು. ಆದರೆ ಕೊನೆಯವರೆಗೂ ಅದು ಒಂದು ಗ್ರಾಹ್ಯವಾದ ಅಥವಾ ಉಪಯುಕ್ತವಾದ ವಿಚಾರಸರಣಿಯಾಗಿಯೆ ಉಳಿಯಬಲ್ಲದು ಎಂಬ ಭರವಸೆಯನ್ನು ಯಾರು ಹೇಳಬೇಕು? ಇಂತಹ ಭರವಸೆ ಬೇಕಿಲ್ಲ ಎಂದು ಈ ಯೋಜನೆಗಳ ಪುರಸ್ಕರ್ತರು ಹೇಳಬಹುದಾದರೆ 'ಸಾಹಿತ್ಯ ಸಾಮಯಿಕವಾದರೆ ಸಾಕು' ಎಂಬ ಮಾತನ್ನು ಒಪ್ಪಬೇಕಾಗುತ್ತದೆ ಸರಕಾರದಿಂದ ಒಂದಿಲ್ಲೊಂದು ಬಗೆಯಲ್ಲಿ ಪುರಸ್ಕಾರವನ್ನು ಪಡೆಯಬಹುದಾದ ಕೃತಿಗಳು, ಒಂದಿಲ್ಲೊಂದು ರೀತಿಯಲ್ಲಿ ಸಮಕಾಲೀನ ಸರಕಾರದ ಧೋರಣೆಗಳನ್ನು ವಿಚಾರಸರಣಿಗಳನ್ನು ಸಮರ್ಥಿಸಬೇಕಾಗಬಹುದು ಎಂಬ ಸಂಶಯಕ್ಕೆ ಇಲ್ಲಿ ಆಸ್ಪದವಿಲ್ಲದಿಲ್ಲ. ಇಂತಹ ಸಂಶಯಗಳಿಗೆ ಆಸ್ಪದವಿಲ್ಲದಿರುವುದು ಸಾಹಿತ್ಯದ ದೃಷ್ಟಿಯಿಂದ ಕ್ಷೇಮ ಅಂತೆಯೆ ಸರಕಾರದಿಂದ ಸಿಕ್ಕಬಹುದಾದ ಉತ್ತೇಜನ-ಪುರಸ್ಕಾರಗಳ ಬಗೆಯಲ್ಲಿ ನಿಜವಾದ ಸಾಹಿತ್ಯಭಕ್ತ ಸಾಶಂಕನಾಗಿರುವುದು ಅನಿವಾರ್ಯವಾಗಿದೆ. ಸ್ಟಾಲಿನ್ ಅವಾರ್ಡಿನಂತಹ ಅನೇಕ ರಾಷ್ಟ್ರೀಯ ಬಹುಮಾನಗಳನ್ನು ಪಡೆದು ಹೊರಬರುತ್ತಿದ್ದ ಇತ್ತೀಚಿನ ರಷ್ಯಾದೇಶದ ಕೃತಿಗಳನ್ನು ನೋಡಿದರೆ, ಪುರಸ್ಕಾರಗಳ ಪರಿಣಾಮ ಕೊನೆಯಲ್ಲಿ ಯಾವುದು?— ಎಂಬುದನ್ನು ಕಾಣಬಹುದು. ಆದರೆ ಕೊಡಮಾಡಿದವರು ತಮ್ಮ ಹೊಣೆಯನ್ನು, ನಿರ್ಹೇತುಕ ಸಾಹಿತ್ಯ ಪ್ರೀತಿಯನ್ನೂ, ಕೊಳ್ಳುವವರು ತಮ್ಮ ಆಂತರಿಕ ಪ್ರಾಮಾಣಿಕತೆಯನ್ನೂ ಕಾಯ್ದುಕೊಂಡು ಮುಂದುವರೆದರೆ, ರಷ್ಯಾದಲ್ಲಿ ನಡೆದದ್ದು ನಮ್ಮಲ್ಲಿ ನಡೆಯಬೇಕಿಲ್ಲ ಎಂದೂ ಆಶೆ ತಾಳಬಹುದಾಗಿದೆ. ಅದಕ್ಕೆಂದೇ ನಾವು ಮೊದಲಿಗೆ ಸೂಚಿಸಿದ್ದು— ಈ ಸನ್ನಿವೇಶ ತುಂಬ ಹೊಣೆಗಾರಿಕೆಯದು ಎಂದು.

ರಾಷ್ಟ್ರೀಯ ನಾಟ್ಯ ಮಹೋತ್ಸವ

ನಾಟಕಗಳ ಬರೆವಣಿಗೆ ಹಾಗೂ ಪ್ರಯೋಗಗಳ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇತ್ತೀಚಿಗೆ ವಿಶೇಷವಾದ ಆಸ್ಥೆಯನ್ನು ತಳೆದ ಹಾಗೆ ಕಾಣುತ್ತದೆ. ಉತ್ತಮವೆಂದು ಪರಿಗಣಿಸಲ್ಪಟ್ಟ ನಾಟಕಗಳಿಗೆ ಮುಂಬಯಿ ಸರಕಾರದವರು ಪ್ರತಿವರ್ಷವೂ ಯೋಗ್ಯ ಬಹುಮಾನಗಳನ್ನು ಕೊಡುವುದಾಗಿ ಸಾರಿದ್ದಾರೆ. ಕೆಲವೊಂದು ಕೇಂದ್ರಗಳಲ್ಲಿ ನಾಟಕಗಳನ್ನು ಆಡಿತೋರಿಸಲು ಅನುಕೂಲವಾಗುವಂತೆ ನಾಟಕಗೃಹಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನೂ ಘೋಷಿಸಿದ್ದಾರೆ. ಸಂಗೀತ ಮತ್ತು ನಾಟಕ ಅಕಾದೆಮಿಯ ಪರವಾಗಿ ದಿಲ್ಲಿಯ ನಾಟ್ಯಸಂಘವು ಏರ್ಪಡಿಸಿದ ರಾಷ್ಟ್ರೀಯ ನಾಟ್ಯಮಹೋತ್ಸವವು ರಾಜಧಾನಿಯಲ್ಲಿ ಇದೀಗ ನಡೆದಿದೆ. ಮಹೋತ್ಸವದ ಮೊದಲನೆಯ ನಾಟಕವಾಗಿ ಕಾಳಿದಾಸನ ಶಾಕುಂತಲವನ್ನು ಮೂಲ ಸಂಸ್ಕೃತದಲ್ಲಿಯೇ ಇದೇ ನವಂಬರ್ ೨೬ನೆಯ ದಿನಾಂಕ ಆಡಿತೋರಿಸಲಾಯಿತು. ದೇಶದ ವಿವಿಧಭಾಷಾಭಾಗಗಳಿಂದ ಆಯ್ಕೆಹೊಂದಿ ಪ್ರಾತಿನಿಧಿಕವಾಗಿ ಬಂದ ನಾಟಕಗಳನ್ನು ಈ ಕೇಂದ್ರ ಉತ್ಸವದಲ್ಲಿ ಅಭಿನಯಿಸಲಾಗುತ್ತದೆ. ಈ ದೃಷ್ಟಿಯಿಂದ ಈ ನಾಟ್ಯಮಹೋತ್ಸವಕ್ಕೆ ಒಂದು ವಿಶಿಷ್ಟವಾದ ಮಹತ್ತ್ವವಿದೆ. ಮೊದಲನೆಯದಾಗಿ, ಯಾರಿಂದಲೂ ಯಾವ ಬಗೆಯ ಪ್ರೋತ್ಸಾಹವಿಲ್ಲದೆ ಕುಗ್ಗುತ್ತಿದ್ದ ರಂಗಭೂಮಿಗೆ ಒಂದು ಪ್ರಬಲವಾದ ಆಶ್ರಯ, ಇಂತಹ ಉತ್ಸವದಿಂದಾಗಿ ದೊರೆತಂತಾಗಿದೆ. ಕೇಂದ್ರ ಉತ್ಸವದಲ್ಲಿ ಭಾಗವಹಿಸಬೇಕಾದಾಗ ಸ್ವಾಭಾವಿಕವಾಗಿಯೆ ಸ್ಪರ್ಧಾಬುದ್ಧಿ ಬೆಳೆಯಲು ಅನುಕೂಲವಾಗು

(೨೮೧ನೆಯ ಪುಟದಿಂದ ಬಂದುದು)

ರಪ್ ರಪ್.... ಛಟೀರ್.... ರಪ್ ರಪ್....

ರಾಯರಿಗೆ ತಡೆಯದಾಯಿತು.

"ಭೀಮು.... ಏನು ಹುಚ್ಚು ಹಿಡಿದಿದೆಯೇನು ನಿನಗೆ?.... ಸುಮ್ಮನಿರು ಸಾಕು...." ಎನ್ನುತ್ತ ಅವನ ತೋಳನ್ನು ಹಿಡಿದೆಳೆಯಲು ಯತ್ನಿಸಿದರು.

ಗೌರಮ್ಮನ ಕರುಳು ಕತ್ತರಿಸಿ ಬಂದಂತಾಗಿತ್ತು— ನಿಸ್ಸಹಾಯಕರಾಗಿ ಕಣ್ಣಲ್ಲಿ ನೀರು ಸುರಿಸಿದರು.

ಆವೇಶ ಬಂದ ಭೀಮು ಜಡಿಯುತ್ತಲೇ ಇದ್ದ—

ರಪ್ ರಪ್.... ಛಟೀರ್. . ರಪ್ ರಪ್....

ರಾಯರಿಗೆ ಕಣ್ಣು ಕತ್ತಲಾದಂತಾಯ್ತು.... ಗೌರಮ್ಮನನ್ನು ಎಳೆದುಕೊಂಡು ರೂಮಿಗೆ ಹೋದರು....

ಹೊಡೆದು ಹೊಡೆದು ತನ್ನ ಕೈಯೇ ನೋತನಂತರ, ಹೊಡೆಯುವುದನ್ನು ನಿಲ್ಲಿಸಿ, ಬಾರುಕೋಲೆಸೆದು, ಬಚ್ಚಲ ಮನೆಯಕಡೆ ಹೊರಟ ಭೀಮು....

ಶಾರದಾ ತನ್ನ ರೂಮಿನಿಂದ ಬಗ್ಗಿನೋಡಿ ಹೊರಗೆ ಬಂದಳು.

ಸ್ಮೃತಿ ತಪ್ಪಿ ಬಿದ್ದಿದ್ದನು ಕೃಷ್ಣ— ಸಮಸ್ಯೆಯ ಗಂಟಿನಂತೆ.... ತನ್ನ ಕಿಟ್ಟಣ್ಣ.... ಪೆದ್ದು ಕಿಟ್ಟಿ... "ಹಾವಿಗೆ ಹಾಲೆರೆದಂತಾಯಿತು...."

"ಅಯ್ಯೋ ಕಿಟ್ಟಿ.... ಎಷ್ಟು ಬಾಸುಂಡೆ ಬಂದಿವೆಯಪ್ಪಾ.... ಎಷ್ಟು ನೋವಾಯಿತಪ್ಪಾ ನಿನಗೆ...." —ಮೌನಗಂಬನಿ ಮಿಡಿಯುತ್ತ ಅವನ ಮೈದಡವಿದಳು!

ಹೊರಗೆ ಸ್ವಾತೀ ಮಳೆ ಜಡಿಯುತ್ತಲೇ ಇತ್ತು.... ಜಿರ ಜಿರಿ.... ಜಿರ ಜಿರಿ....

ತ್ತದೆ. ನಾಟಕಗಳ ಅಭಿನಯದ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತಲೆದೋರಲು ಅವಕಾಶ ಉಂಟಾಗುತ್ತದೆ. ಎರಡನೆಯದಾಗಿ, ಭಾರತದ ವಿವಿಧ ಭಾಗಗಳಲ್ಲಿ ನಾಟಕಗಳ ವಿಷಯದಲ್ಲಿ ನಡೆದ ಪ್ರಯೋಗಗಳ ಸ್ವರೂಪ-ವೈಶಿಷ್ಟ್ಯಗಳು ಎಂಥವು ಒಬ್ಬರಿಂದ ಇನ್ನೊಬ್ಬರು ಕಲಿತುಕೊಳ್ಳಬೇಕಾದದ್ದು ಏನು— ಎಂಬುದನ್ನು ತಿಳಿಯಲು ಇಂಥ ಕೇಂದ್ರ ಉತ್ಸವದಿಂದ ಅನುಕೂಲವಾಗುತ್ತದೆ. ಒಂದೇ ರಂಗಭೂಮಿಯ ಮೇಲೆ ಭಾರತದಲ್ಲಿಯ ವಿವಿಧ ಭಾಷೆಗಳಲ್ಲಿಯ ನಾಟ್ಯಪ್ರಕಾರಗಳು ಅಭಿನಯಿಸಲ್ಪಡುತ್ತಿರುವುದು ಇದೇ ಮೊದಲ ಸಲ ಎಂಬ ಐತಿಹಾಸಿಕ ಮಹತ್ತ್ವವೂ ಈ ಉತ್ಸವಕ್ಕಿದೆ. ಮೂರನೆಯದಾಗಿ, ಹೊಸ ಹೊಸದಾಗಿ, ಪ್ರಗತಿಪರ ವಿಚಾರಗಳನ್ನೊಳಗೊಂಡ ನಾಟಕಗಳ ನಿರ್ಮಾಣಕ್ಕೂ ಇದರಿಂದ ಒಂದು ಅನುಕೂಲ ಸನ್ನಿವೇಶ ಒದಗುತ್ತದೆ. ತನ್ನ ಒಂದು ನಾಟಕ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಬೇಕು—ಎಂಬ ಆಶೆಯನ್ನು ನಾಟಕಕಾರ ತಳೆಯಬೇಕಾದಾಗ, ಆತನ ನಾಟಕದಲ್ಲಿಯ ಜೀವನ ಸನ್ನಿವೇಶ–ದೃಷ್ಟಿಗಳು ಇಡಿ ನಾಡಿಗೆ ಅನ್ವಯಿಸುವಂತಹವು, ಒಂದಿಲ್ಲೊಂದು ದೃಷ್ಟಿಯಿಂದ ನಾಡಿನ ಮುನ್ನಡೆಗೆ ಉಪಯುಕ್ತವಾಗುವಂತಹವು ಆಗಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾಟಕಗಳನ್ನು ಬರೆಯಬೇಕಾಗುತ್ತದೆ. ಇದುವರೆಗೆ ತನ್ನ ಸುತ್ತಲಿನ ಪ್ರೇಕ್ಷಕರಿಗಾಗಿ ಮಾತ್ರ ಬರೆಯಲ್ಪಡುತ್ತಿದ್ದ ನಾಟಕ, ಇಂದು ಹೆಚ್ಚು ವಿಶಾಲವಾದ, ವಿವಿಧವಾದ ಪ್ರೇಕ್ಷಕವೃಂದಕ್ಕಾಗಿ ಬರೆಯಲ್ಪಡಬೇಕಾದದಾಗ ಅಗತ್ಯ ಉಂಟಾಗುತ್ತದೆ. ಈ ಮಾತುಗಳನ್ನು ನಾವು ಗಮನಿಸಿದರೆ, ಕೇಂದ್ರ ನಾಟ್ಯಮಹೋತ್ಸವದ ಮಹತ್ತ್ವವನ್ನಲ್ಲದೆ ಆ ಮಹೋತ್ಸವದಲ್ಲಿ ನಮ್ಮನ್ನು ಪ್ರತಿನಿಧಿಸಬೇಕಾದ ನಾಟಕವನ್ನು ಆಯ್ಕೆ ಮಾಡುವುದರ ಮಹತ್ತ್ವವನ್ನೂ ನಾವು ತಿಳಿಯಬಹುದಾಗಿದೆ.

ಧಾರವಾಡದ ಪ್ರಾದೇಶಿಕ ನಾಟ್ಯೋತ್ಸವ

ಮೇಲ್ಕಾಣಿಸಿದ ಕೇಂದ್ರ ನಾಟ್ಯಮಹೋತ್ಸವದ ಅಂಗವಾಗಿ, ಉತ್ತರ ಕರ್ನಾಟಕದ ಒಂದು ನಾಟಕವನ್ನು ಆಯ್ಕೆ ಮಾಡುವುದರ ಸಲುವಾಗಿ, ಧಾರವಾಡದಲ್ಲಿ ಇದೇ ನವಂಬರ್ ೮ರಿಂದ ೧೫ರ ವರೆಗೆ ಪ್ರಾದೇಶಿಕ ನಾಟ್ಯೋತ್ಸವದ ಏರ್ಪಾಡು ನಡೆಯಿತು. ಮರಾಠಿಯಂತೆ ಈ ಸಲ ಕನ್ನಡಕ್ಕೆ ಎರಡು ನಾಟಕಗಳನ್ನು ಅಭಿನಯಿಸುವ ಅವಕಾಶ ದೊರೆಯಿತು. ಈ ಎರಡೂ ಭಾಷಾಪ್ರದೇಶಗಳು ಬೇರೆ ಬೇರೆ ರಾಜ್ಯ-ಸರಕಾರಗಳ ಆಡಳಿತಕ್ಕೆ ಒಳಪಟ್ಟುವು ಎಂಬುದಕ್ಕಾಗಿ ಈ ಏರ್ಪಾಡು ಅಗತ್ಯವಾಯಿತೆ? ಅಥವಾ 'ಉತ್ತರ ಕರ್ನಾಟಕ ಬೇರೆ, ಮೈಸೂರು ಕರ್ನಾಟಕ ಬೇರೆ' ಎಂಬ ಸೂಚನೆ ಇದರಲ್ಲಿ ಇದ್ದಿತೆ? ಏನೇ ಆದರೂ ಬೆಂಗಳೂರಲ್ಲಿ ಒಂದು ಧಾರವಾಡದಲ್ಲಿ ಒಂದು—ಹೀಗೆ ಎರಡು ಕನ್ನಡ ಪ್ರಾದೇಶಿಕ ನಾಟ್ಯೋತ್ಸವಗಳು ನಡೆದುವು. ಬೆಂಗಳೂರಿನಲ್ಲಿ ನಡೆದ ಉತ್ಸವದಲ್ಲಿ 'ಪರ್ವತವಾಣಿ' ಯವರ 'ಬಹದ್ದೂರ್ ಗಂಡ' ಎಂಬ ನಾಟಕ ಅತ್ಯುತ್ತಮವೆಂದು ನಿರ್ಣಯವಾದಂತೆ ವರದಿಯಾಗಿದೆ. ಧಾರವಾಡದ ಉತ್ಸವದಲ್ಲಿ ದಿವಂಗತ ಗರುಡ ಸದಾಶಿವ ರಾಯರ 'ಉಗ್ರಕಲ್ಯಾಣ' ಎಂಬ ನಾಟಕಕ್ಕೆ ಅಗ್ರಪಟ್ಟ ದೊರಕಿದೆ.

ಧಾರವಾಡದ ಉತ್ಸವದಲ್ಲಿ ಹತ್ತು ನಾಟ್ಯಸಂಘಗಳು ಭಾಗವಹಿಸಿದ್ದುವು. ಶ್ರೀರಂಗರ 'ಶೋಕಚಕ್ರ', ಮುದ್ದಣ ಕವಿಯ 'ರತ್ನಾವತೀ ಕಲ್ಯಾಣ' (ಯಕ್ಷಗಾನ) ಲ. ಜೆ. ಬೇಂದ್ರೆಯವರ 'ಭಾಗ್ಯಶ್ರೀ ... ಹಿರಣ್ಣಯ್ಯನವರ 'ದೇವದಾಸಿ', ಪುರಿಯವರ 'ಉಷಾಸ್ವಯಂವರ ... ಕಂದಗಲ್ ಅವರ 'ವರಪ್ರದಾನ', ಪುಟ್ಟಪ್ಪನವರ 'ರಕ್ತಾಕ್ಷಿ ... 'ದಕ್ಷಬ್ರಹ್ಮ' ಎಂಬ ದೊಡ್ಡಾಟ, ಗರುಡ ಸದಾಶಿವರಾಯರ 'ಉಗ್ರಕಲ್ಯಾಣ' ಮತ್ತು ಹುಯಿಲಗೋಳ ನಾರಾಯಣರಾಯರ 'ಪತಿತೋದ್ಧಾರ' ಎಂಬ ನಾಟಕಗಳು, ಅದೇ ಕ್ರಮದಲ್ಲಿ ಅಭಿನಯಿಸಲ್ಪಟ್ಟುವು. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ... ಪಾವಟೆಯವರು ಮತ್ತು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾ ... ಶ್ರೀ. ಗೋಕಾಕರು ಕೇಂದ್ರದಿಂದ ನಿಯೋಜಿತರಾದ ನಿರ್ಣಾಯಕರಾಗಿದ್ದರು. ನಿರ್ಣಾಯಕರಿಬ್ಬರೂ ಮೇಧಾವಿಗಳು, ಅನುಭವಸ್ಥರು ... ಪರದೇಶಪ್ರವಾಸ ಮಾಡಿದವರು, ಇಂಗ್ಲಂಡಿನಂತಹ ದೇಶಗಳಲ್ಲಿ ... ನಾಟಕಪ್ರಯೋಗಗಳನ್ನು ನೋಡಿದವರು. ಅಲ್ಲದೆ ಅವರ ನಿರ್ಣಯವೆ ಕೊನೆಯದು. ಆದುದರಿಂದ ಅವರ ನಿರ್ಣಯವನ್ನು ವಿಮರ್ಶಿಸಬೇಕಿಲ್ಲ. ಅದರಿಂದ ಪ್ರಯೋಜನವೂ ಇಲ್ಲ. ಆದರೂ ಹತ್ತೂ ನಾಟಕ ಪ್ರಯೋಗಗಳನ್ನು ಆಸ್ಥೆಯಿಂದ, ಜಾಗೃತ ವಿಮರ್ಶಾಬುದ್ಧಿಯಿಂ ... ನೋಡಿದ ಅನೇಕರು ಎರಡು ಮಾತುಗಳನ್ನು ಹೇಳುತ್ತಿದ್ದಾರೆ; ... ಎರಡು ಮಾತುಗಳಲ್ಲಿ ತಥ್ಯಾಂಶವಿದೆಯಾದುದರಿಂದ ಅವನ್ನು ಎ ... ಹೇಳುವುದು ಅಗತ್ಯವಿದೆ. ಮೊದಲನೆಯದಾಗಿ "ಈ ಆಯ್ಕೆಯಾ ... ನಾಟಕ 'ಉಗ್ರಕಲ್ಯಾಣ'ವು ಇಂದಿನ ಕನ್ನಡನಾಟಕದ ಪ್ರತಿನಿ ... ಯಾಗುವ ಯೋಗ್ಯತೆಯುಳ್ಳದ್ದಲ್ಲ" ಎನ್ನುವುದು. ಕಳೆದ ೨೫ ವರ್ಷ ... ಗಳಲ್ಲಿ ಬರೆವಣಿಗೆಯ ದೃಷ್ಟಿಯಿಂದ ಮತ್ತು ತಂತ್ರಪ್ರಯೋಗ ... ದೃಷ್ಟಿಯಿಂದ ಕನ್ನಡ ನಾಟಕ ಬೇಕಾದಷ್ಟು ಪ್ರಗತಿಯನ್ನು ಸಾಧಿಸಿದೆ. ಈ ಪ್ರಗತಿಯನ್ನು ಉಗ್ರಕಲ್ಯಾಣ ನಾಟಕವು ಸಂಕೇತಿಸಲಾರದು—ಎಂಬುದನ್ನು ಯಾರೂ ಒಪ್ಪಬಹುದಾಗಿದೆ. ದಿಲ್ಲಿಯಲ್ಲಿ ಈ ನಾಟಕ ... ಪ್ರಯೋಗವನ್ನು ನೋಡಿ ಇತರ ಪ್ರಾಂತಗಳ ಪ್ರತಿನಿಧಿಗಳು 'ಕನ್ನಡ ... ನಾಟಕದ ಪ್ರಗತಿ ಇಷ್ಟೇ ಮಾತ್ರವೇ?' ಎಂದು ಕೇಳಬಹುದಾಗಿದೆ. ಎರಡನೆಯದಾಗಿ, ಈ ನಾಟಕದಲ್ಲಿ 'ಉತ್ತರ ಕರ್ನಾಟಕದ್ದು' ಎನ್ನುವ ಯಾವ ವೈಶಿಷ್ಟ್ಯವಿದೆ? ಬರೆವಣಿಗೆ, ವಿಚಾರ, ಪ್ರಯೋಗ ... ಯಾವ ದೃಷ್ಟಿಯಿಂದ ವಿಚಾರಿಸಿದರೂ ಇದು ನಮ್ಮದು, ಇನ್ನೊ ... ರಿಂದ ಬೇರೆಯಾದದ್ದು—ಎಂದು ಹೇಳುವುದು ಕಷ್ಟ. ಇದಕ್ಕೆ ಕಾರಣವೆಂದರೆ ನಾಟಕದ ಕತೆ ಕೃತ್ರಿಮ; ನಮ್ಮಲ್ಲಿಯದಲ್ಲ; 'ಶಾಲಾ ... ಪಹಾಡ' ಎಂಬ ಬಂಗಾಲೀ ಕಥೆಯ ಮರಾಠೀ ಅನುವಾದದ ಕನ್ನ ... ನಾಟಕಾವತಾರ'— ಎಂದೂ ಹೇಳಲಾಗುತ್ತಿದೆ. ಅದು ಹೇಗಿದ್ದರೂ ... ಚಿತ್ರಿಸಿದ ಸನ್ನಿವೇಶ ಎಷ್ಟರ ಮಟ್ಟಿಗೆ ಸಂಭಾವ್ಯ? ವಿಚಾರಸರ ... ಎಷ್ಟರ ಮಟ್ಟಿಗೆ ಗ್ರಾಹ್ಯ? ಜಾತ್ಯತೀತ ರಾಜ್ಯಪದ್ಧತಿಯಲ್ಲಿ ಜಾತಿ ... ಯತೆಯ ವಿಚಾರಗಳನ್ನು ಎತ್ತಿ ತೋರಿಸುವ ಸನ್ನಿವೇಶ ಎಷ್ಟ ... ಮಟ್ಟಿಗೆ ಪ್ರೇಕ್ಷಣೀಯ? 'ಮದುವೆಯ ಮೂಲಕ ಬಾಂಧವ್ಯವನ್ನ ... ಸಾರುತ್ತಿದೆ' ಎಂದು ಹೇಳಿದರೂ, ಮದುವೆಯ ನಂತರ ದೇವಸ್ಥಾನದ ...

ಪ್ರಾಯೋಜಕತೆಯ ಕೊಲೆ ನಡೆಯುತ್ತದೆ ಎನ್ನುವುದು ಮುಖ್ಯ. ಇದು ಯಾವ ಕಾಲದ ನಾಟಕ? ಕೊನೆಯ ದಿನ ಸಮಾರೋಪದಲ್ಲಿ ಕಾರ್ಯದರ್ಶಿಗಳು ಒಂದು ಮಾತನ್ನು ಹೇಳಿದರು: " ಗರುಡ ಸದಾಶಿವ ರಾಯರಿಗೆ ಈ ನಾಟಕವನ್ನು ದಿಲ್ಲಿಯಲ್ಲಿ ಆಡಬೇಕೆಂದು ತೀವ್ರ ಅಭಿಲಾಷೆ ಇತ್ತು. ಅವರ ಅಭಿಲಾಷೆ ಅವರ ನಂತರವಾದರೂ ಸಫಲವಾಯಿತು; ಇದು ಒಂದು ಸುಯೋಗ " ಎಂದು. ಹಿರಿಯರೊಬ್ಬರ ವಾಸನಾಬಲ ಕಿರಿಯರ ಪ್ರಾಣಬಲವನ್ನೂ ಮೀರಿಸಬಹುದು— ಎಂದು ಹೇಳಬಹುದೆ?

ನಾಟ್ಯವ್ಯವಸಾಯಿ ಮತ್ತು ನಾಟ್ಯವಿಲಾಸಿ

ನಾರವಾಡ ನಾಟ್ಯೋತ್ಸವದಲ್ಲಿ ನಾಟ್ಯವ್ಯವಸಾಯಿಗಳಿಗೆ ಎಂದರೆ ಕಂಪನಿ ನಾಟಕದವರಿಗೆ ಸರಿಯಾದ ಅವಕಾಶವಾಗಲಿ ಪ್ರಾತಿನಿಧ್ಯವಾಗಲಿ ದೊರಕಲಿಲ್ಲ ಎಂದು ಹೇಳಲಾಗುತ್ತಿದೆ. ಪ್ರಾದೇಶಿಕ ಉತ್ಸವದ ಏರ್ಪಾಡಿಗಾಗಿ ಕೇಂದ್ರದಿಂದ ಯಾವ ಧನಸಹಾಯವೂ ಸಿಕ್ಕದೆ ಇದ್ದುದರಿಂದ, ಉತ್ಸವದಲ್ಲಿ ಭಾಗವಹಿಸಬೇಕೆಂಬ ನಾಟ್ಯಸಂಘಗಳು ತಮ್ಮ ವೆಚ್ಚವನ್ನು ತಾವೇ ವಹಿಸಿಕೊಂಡು ಬಂದು ನಾಟಕಗಳನ್ನು ಪ್ರದರ್ಶಿಸಬೇಕಾಯಿತು. ಈ ವೆಚ್ಚವನ್ನು ವಹಿಸಲಾಗದ್ದಕ್ಕಾಗಿ ಕೆಲವು ಕಂಪನಿಗಳಿಗೆ ಬರಲಾಗಲಿಲ್ಲ: ಸರಿ. ಆದರೆ ತಪ್ಪು ಯಾರದು? ಸಾಧ್ಯವಿದ್ದ ಧನಸಹಾಯವನ್ನು ಕೇಂದ್ರದವರು ಕೊಡಬೇಕು — ಎನ್ನುವ ಮಾತು ನಿಜವಿದ್ದರೂ, ಕಂಪನಿಯವರಲ್ಲಿ ಕಲಾಭಿಮಾನವಿದ್ದರೆ ಅಥವಾ ತಮ್ಮ ಕಲಾಪ್ರದರ್ಶನದ ಬಗೆಯಲ್ಲಿ ಪೂರ್ತಿಯಾದ ಆತ್ಮವಿಶ್ವಾಸವಿದ್ದರೆ, ವೆಚ್ಚವನ್ನು ವಹಿಸಿಕೊಂಡು ಮುಂದೆ ಬಂದು ಪ್ರಶಸ್ತಿಯನ್ನು ಪಡೆಯಬಹುದಾಗಿತ್ತು. ಎಂದೂ ಹೇಳಬೇಕಾಗಿದೆ. 'ಮಕ್ಕಳ ಮೊಮ್ಮಕ್ಕಳ ಪರಿವಾರ ದೊಡ್ಡದಾದ್ದರಿಂದ ತನಗೆ ಕಾಶೀ ಯಾತ್ರೆಯನ್ನು ಮಾಡಲಾಗಲಿಲ್ಲ' ಎನ್ನುವ ಮುತ್ತಜ್ಜನ ಕೊರಗಿನಂತಿದೆ ಈ ವ್ಯವಸಾಯಿಗಳ ತಕರಾರು. ಕಂಪನಿಯವರ ಅನ್ಯ ಆಡಂಬರಗಳಿಲ್ಲದೆ ಉತ್ತಮವಾದ ನಾಟಕಗಳನ್ನು ಉತ್ತಮವಾದ ರೀತಿಯಲ್ಲಿ ಅಭಿನಯಿಸುವುದು ಸಾಧ್ಯವಿದೆಯೆಂಬುದನ್ನು ನಾಟ್ಯವಿಲಾಸಿಗಳು ಎಲ್ಲೆಡೆಯಲ್ಲಿಯೂ ತೋರಿಸಿಕೊಟ್ಟಿದ್ದಾರೆ. ಅದರಿಂದಾಗಿಯೆ 'ಕಂಪನಿಯ ನಾಟಕಗಳ ಮತ್ತು ನಾಟಕ ಕಂಪನಿಗಳ ಕಾಲ ಮುಗಿಯಿತು!' ಎಂದು ಹೇಳಬಹುದಾಗಿದೆ. ಹೀಗಿರದಿದ್ದರೆ 'ಕಂಪನಿಯ ನಾಟಕ' ಎನ್ನುವ ಮಾತು ಒಂದು ಬಗೆಯ ಅಪಹೇಳನವನ್ನು ಸೂಚಿಸಬೇಕಿರಲಿಲ್ಲ. ಆದರೆ ಅಂತಹ ಸೂಚನೆ ಆ ಮಾತಿನಲ್ಲಿ ಸ್ವಾಭಾವಿಕವಾಗಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಇದಕ್ಕೆ ಕಾರಣವೇನು? ವ್ಯವಸಾಯಿಗಳು ಹೊಸಕಾಲಕ್ಕೆ ಹೊಂದಿಕೊಳ್ಳಲಿಲ್ಲ. ಕಾಲಕ್ಕೆ ತಕ್ಕಂತೆ ನಾಟಕಗಳ ವಿಷಯ ಮತ್ತು ಅದನ್ನು ನಿರೂಪಿಸುವ ರೀತಿಗಳಲ್ಲಿ ಬದಲಾಗಬೇಕಾದದ್ದು ಅನಿವಾರ್ಯ. ಆ ಎರಡೂ ಬಗೆಯಲ್ಲಿ ವ್ಯವಸಾಯಿಗಳು ಹಿಂದುಳಿದರು. ಕೆಲವೊಂದು ಸಲ ಹೊಸ ಸನ್ನಿವೇಶಗಳನ್ನೆತ್ತಿಕೊಂಡು ನಾಟಕಗಳನ್ನು ಅವರು ಕಟ್ಟಿದ್ದರೂ, ಅವರ ಪ್ರಯೋಗದ ರೀತಿ ಹಳೆಯದು. ಅಭಿನಯದ ಪದ್ಧತಿ ಸ್ವಾಭಾವಿಕತೆಯಿಂದ ದೂರವಾದದ್ದು. ಒಂದು ಕಾಲಕ್ಕೆ ಅದೆಲ್ಲ ಸರಿಹೋಯಿತು. ಯಶಸ್ಸು ಸಿಕ್ಕಿತು. ಆದರೆ ಒಂದು ಕಾಲಕ್ಕೆ ಯಶಸ್ವಿಯಾಯಿತೆಂದ ಮಾತ್ರಕ್ಕೆ ಇಂದಿಗೂ ಯಶಸ್ವಿಯಾಗಲೇಬೇಕೆಂದು ಯಾರು ಹೇಳಿಯಾರು? ನಾಟಕ ಲೋಕಚರಿತ. ಲೋಕಚರಿತ ಬದಲಾದ ಹಾಗೆ ಅದು ಬದಲಾಗಬೇಕು. ನೋಡುವವರ ಮನಸ್ಸನ್ನು ಮುಟ್ಟಬೇಕಾದಾಗ ಅಭಿನಯ-ಪ್ರಯೋಗಗಳು ಬದಲಾಗಬೇಕು. ವ್ಯವಸಾಯಿಗಳು ಇಂತಹ ಬದಲಾವಣೆಗಳನ್ನು ಮಾಡಿಕೊಳ್ಳಲಿಲ್ಲ. ಮಾಡಿಕೊಳ್ಳಲಿಲ್ಲ ಎನ್ನುವುದಕ್ಕಿಂತ ಮಾಡಿಕೊಳ್ಳಬೇಕಿಲ್ಲ ಎಂಬ ಧ್ವನಿ ಅಲ್ಲಲ್ಲಿ ಕೇಳಬರುತ್ತಿದೆ. 'ಕಂಪನಿಯವರು ಆಡಿದ್ದೇ ನಾಟಕ; ವಿಲಾಸಿಗಳು ಮಾಡಿದ್ದು ಹುಡುಗಾಟ!' ಎಂಬ ಸೂಚನೆಯೂ ಇದೆ. ನಾಟ್ಯವಿಲಾಸಿಗಳು ನಿಜವಾದ ಕಲಾಭಿಮಾನಿಗಳೊ, ವ್ಯವಸಾಯಿಗಳು ನಿಜವಾದ ಕಲಾಭಿಮಾನಿಗಳೊ?— ಎಂಬ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. 'ನಾಟ್ಯವ್ಯವಸಾಯಿಗಳು ತಮ್ಮ ಜೀವನವನ್ನೇ ಕಲೆಗೆ ಅರ್ಪಿಸಿದವರು' ಎಂಬ ಮಾತನ್ನು ಹೇಳಿದರೆ, 'ಹೊಟ್ಟೆಪಾಡಿಗಾಗಿ ಆ ಕಲೆಯನ್ನು ಆಶ್ರಯಿಸಿದವರು ಅವರು' ಎಂದೂ ಹೇಳುವವರಿದ್ದಾರೆ. 'ನಾಟಕಕಲೆಯಲ್ಲಿಯ ಆಸಕ್ತಿಗಾಗಿ ತನ್ನ ಮತ್ತು ಇತರರ ಸಂತೋಷಕ್ಕಾಗಿ ನಾಟ್ಯವಿಲಾಸಿ ತೊಡಗುತ್ತಾನೆ' ಎಂದು ಹೇಳಿದರೆ, ಇದಕ್ಕೆ ಪ್ರತಿಯಾಗಿ 'ಆತನಿಗೆ ಅಗತ್ಯವಾದ ವ್ಯವಧಾನ-ಪರಿಶ್ರಮಗಳು ಸಾಲವು' ಎಂದೂ ಹೇಳಬೇಕಾಗುತ್ತದೆ. ಇದಲ್ಲವೂ ನಿಜ. ಆದರೆ ನಾಟ್ಯವಿಲಾಸಿ ಹೊಸ ನಾಟಕಗಳನ್ನು ಎತ್ತಿಕೊಂಡು ಹೊಸ ಅಭಿನಯ, ರಂಗಪ್ರಯೋಗಗಳನ್ನು ಮಾಡಿ ಸ್ವಾಭಾವಿಕತೆಯ ದಾರಿಯಲ್ಲಿ ಮುಂದುವರಿಯುವ ಪ್ರಯತ್ನದಲ್ಲಿದ್ದಾನೆ. ಆದುದರಿಂದ ಆತನ ಪ್ರಯತ್ನ ಕಾಲೋಚಿತವಾದದ್ದು, ಜನಸಮ್ಮತವಾದದ್ದು —ಎಂಬ ಮಾತನ್ನು ಒಪ್ಪಬೇಕಾಗುತ್ತದೆ. ಕನ್ನಡ ನಾಟಕಗಳ ಮತ್ತು ನಾಟಕಕಲೆಯ ಯೋಗ್ಯತೆಯನ್ನು ನಾಟ್ಯವಿಲಾಸಿಗಳ ಮುಖಾಂತರ ಅಳೆಯಬೇಕಾಯಿತು ಎಂಬ ದುರ್ಬುದ್ಧಿ ದುಃಖಕ್ಕೆ ನಿಜವಾಗಿಯೂ ಅವಕಾಶವಿಲ್ಲ. ತಮ್ಮ ಪ್ರಯೋಗಗಳ ರೀತಿ-ನೀತಿಗಳನ್ನು ಬದಲಾಯಿಸಿಕೊಂಡ ಹೊರತು ಕಂಪನಿಗಳಿಗೆ ಯಾವ ಉಜ್ವಲಭವಿಷ್ಯವೂ ಇಲ್ಲ— ಎಂಬುದನ್ನು ಕಂಪನಿಗಳೇ ತೋರಿಸಿಕೊಡುತ್ತಿವೆ. ಈ ಬಗೆಯಲ್ಲಿ ಯಾರಿಂದಲಾದರೂ ಮಾರ್ಗದರ್ಶನ ಸಾಧ್ಯವಿದ್ದರೆ, ಅದು ನಾಟ್ಯವಿಲಾಸಿಗಳಿಂದಲೇ ಎಂಬುದನ್ನು ನಾವಿಂದು ಮನಗಾಣಬೇಕಾಗಿದೆ. ಇನ್ನೂ ಒಂದು ಮಾತು ಧಾರವಾಡದ ನಾಟ್ಯೋತ್ಸವದಲ್ಲಿ ಆಯ್ಕೆಹೊಂದಿದ ನಾಟಕ 'ಉಗ್ರಕಲ್ಯಾಣ' 'ಕಂಪನಿ ನಾಟಕ': ಅದನ್ನು ಆಡಿತೋರಿಸಿದವರು ಕಂಪನಿ ನಟರು; ಅದನ್ನು ಅಭಿನಯಿಸಿದ ರೀತಿ ಕಂಪನಿಗಳ ರೀತಿ. ನಾಟಕಕ್ಕೆ ನೇರವಾಗಿ ಸಂಬಂಧಿಸಿರದ ಪ್ರೇಕ್ಷಕರ ಕಣ್ಸೆಳೆಯಲು ಒಂದು ಸಾಧನಮಾತ್ರವಾಗಿ ಬಂದ ಪ್ರಾರಂಭದ ನೃತ್ಯವೊಂದೇ ಈ ಮಾತಿಗೆ ಸಾಕ್ಷಿ. ಎಂದಮೇಲೆ ಕಂಪನಿ ನಾಟಕಕ್ಕಾಗಲಿ, ನಾಟಕಕಂಪನಿಗಾಗಲಿ ಸರಿಯಾದ ಅವಕಾಶ ಪ್ರಾತಿನಿಧ್ಯ ಸಿಕ್ಕಲಿಲ್ಲ ಎಂಬ ಮಾತು ಎಲ್ಲಿ ಉಳಿಯಿತು?

ಓದಿದರೆ ರಸಪೂರ್ಣ ಕಥೆಗಳು, ಆಡಿದರೆ ಮನೋಹರ ನಾಟಕಗಳು!

ಶ್ರೀ 'ಆನಂದ ಕಂದರು' (ಬೆಟಗೇರಿ ಕೃಷ್ಣಶರ್ಮ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಆಕರ್ಷಕ ಸಂಭಾಷಣೆಗೆ, ತಿಳಿಯಾದ ನಗೆಯ ಬುಗ್ಗೆಗೆ, ಮನಮೆಚ್ಚುವ ಪಾತ್ರನಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ, 'ಚೆಂದ ಹೃದಯ'.

— ಪುಸ್ತಕ ಪ್ರಪಂಚ (ಸಪ್ಟಂಬರ್ ೧೯೫೪)

ಕ್ರೌ. ೮. ೧೬೦ ಪುಟಗಳು ಬೆಲೆ ೧—೪—೦

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ.

Printed by S. G. Kulkarni at the Sadhana Press, Dharwar. and pulished for the Proprietors Jayanti publications, by S. D. Dharmatti, at the Jayanti Office, Dharwar.